ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೧೫

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣಂ

(ಸಂಸ್ಕೃತದಲ್ಲಿ ಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ತೃತೀಯಖಂಡ— ಮೂರನೆಯ ಭಾಗ

ಅನುವಾದಕ:

ಸಂಕೀಘಟ್ಟಂ ವೆಂಕಟಾಚಾರ್ಯ,
ಆಸ್ಥಾನ ಮಹಾವಿದ್ವಾನ್.

ಮೈಸೂರು
ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್
೧೯೪೫

ಅ ವ ತ ರ ಣಿ ಕೆ

ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣದ ಮೂರನೆಯ ಖಂಡದಲ್ಲಿ ಇದು ತೃತೀಯ ಸಂಪುಟ ಈ ಸಂಪುಟದೊಡನೆ ಈ ಗ್ರಂಥದ ಅನುವಾದವು ಮುಗಿದಿದೆ. ಇದಕ್ಕೆ ಪೂರ್ವಭಾಗವಾದ ವಿಷ್ಣುಮಹಾಪುರಾಣದಲ್ಲಿ ವಿಷ್ಣುವಿನ ದೇವಾಧಿಪತ್ಯವನ್ನು ನಿರ್ಣಯಿಸಿ ಅಂತಹ ಪರಮಾತ್ಮನ ಅನುಗ್ರಹಕ್ಕೆ ಸಾಧಕಗಳಾದ ಪೂಜಾವಿಧಿಗಳನ್ನು (ಉತ್ತರಭಾಗರೂಪವಾದ) ಈ ಮಹಾಪುರಾಣದಲ್ಲಿ ಸಮಸ್ತ ಪರಿಕರಗಳೊಡನೆ ನಿರೂಪಿಸಿದ್ದಾರೆ ಗ್ರಂಥಕಾರರು ಉದ್ದೇಶಕ್ಕೆ ತಕ್ಕಂತೆ ಎಲ್ಲಾ ಕಲೆ, ವಿಜ್ಞಾನ, ಶಿಲ್ಪಶಾಸ್ತ್ರಜ್ಞಾನಗಳನ್ನೂ ಒಂದೊಂದು ರೀತಿಯಲ್ಲಿ ಪರಮಾತ್ಮನ ಪೂಜೆಯಲ್ಲಿ ವಿನಿಯೋಗಿಸಿದ್ದಾರೆ. ಹಿಂದಿನ ಸಂಪುಟಗಳ ಅವತರಣಿಕೆಯಲ್ಲಿ ಯಥಾಶಕ್ತಿ ಈ ವಿಚಾರಗಳನ್ನು ನಿರೂಪಿಸಿದ್ದೇನೆ. ಈ ಸಂಪುಟವು ಮುನ್ನೂರ ಮೂವತ್ತೈದನೆಯ ಅಧ್ಯಾಯದಿಂದ ಮುಂದುವರಿದಿದೆ. ಇಲ್ಲಿ ಹಂಸಗೀತೆಯೆಂಬ ಪ್ರಕರಣಕ್ಕೆ ಸೇರಿದ ಪ್ರಾಯಶ್ಚಿತ್ತಾದಿಗಳು ನಿರೂಪಿಸಲ್ಪಟ್ಟಿವೆ. ಇವುಗಳಲ್ಲಿ ಅನೇಕ ವಿಷಯಗಳು ವಿಸ್ತಾರವಾಗಿಯೂ ಸಂಗ್ರಹವಾಗಿಯೂ ಹಿಂದೆ ಬಂದಿವೆ. ಆದರೂ ಹಂಸರೂಪಿಯಾದ ಪರಮಾತ್ಮನ ಉಪದೇಶದಿಂದ ಹಿಂದೆ ಹೇಳಿರುವ ವಿಷಯಗಳ ಸ್ಥಿರೀಕರಣದಲ್ಲಿ ಇದಕ್ಕೆ ತಾತ್ಪರ್ಯವನ್ನು ಊಹಿಸಬೇಕು. ಮತ್ತು ಈ ಸಂಪುಟದಲ್ಲಿ ರಾಜಧರ್ಮ ನಿರೂಪಣಕ್ರಮದಲ್ಲಿ ನ್ಯಾಯಾಸ್ಥಾನಗಳ ಸ್ಥಾಪನೆ. ಸಾಕ್ಷಿಗಳ ವಿಚಾರಣೆಯಲ್ಲಿ ಅನುಸರಿಸಬೇಕಾದ ಕ್ರಮ, ಸಾಕ್ಷ್ಯಧರ್ಮ, ಅಪರಾಧಿಗಳನ್ನು ನಿರ್ಣಯಿಸುವ ಉಪಾಯಗಳು, ಸಿವಿಲ್, ಮತ್ತು ಕ್ರಿಮಿನಲ್ ವ್ಯವಹಾರಗಳಲ್ಲಿ ತಪ್ಪಿತಸ್ಥನನ್ನು ಕಂಡುಹಿಡಿಯಲು ಮಾಡಬಹುದಾದ ದಿವ್ಯ ಶೋಧನೆಯೆಂಬ ಧಾರ್ಮಿಕಪ್ರಮಾಣ ಇವೆಲ್ಲವನ್ನೂ ವಿಸ್ತಾರವಾಗಿ ನಿರೂಪಿಸಲಾಗಿದೆ. ಮತ್ತು ಈಗಿನ ರಾಜಕೀಯದಲ್ಲಿ ಹೊಸಹೊಸ ದೃಷ್ಟಿಯಿಂದ ಪ್ರಚಾರಕ್ಕೆ ಬಂದಿರುವ ಮತ್ತು ಬರಲು ಸಿದ್ಧವಾಗಿರುವ ಸಾಮೂಹಿಕ ಯೋಜನಾಕ್ರಮ ಮತ್ತು ಕಾರ್ಮಿಕರ ಯೋಗಕ್ಷೇಮ ಇವುಗಳು ಈ ಸಂಪುಟದ ೩೩೩ ಮತ್ತು ೩೩೪ ನೇಯ ಅಧ್ಯಾಯಗಳಲ್ಲಿ ಸ್ವಲ್ಪ ಸಂಗ್ರಹವಾಗಿ ಹೇಳಲ್ಪಟ್ಟಿವೆ. ಇದರಿಂದ ಹಿಂದಿನ ಕಾಲದಲ್ಲಿಯೂ ಜನತೆಯ ಅಭ್ಯುದಯಕ್ಕಾಗಿ ಇಂತಹ ವಿಧಾನಗಳು ಇದ್ದುವೆಂದೂ ತೋರಿಬರುತ್ತಿದೆ. ಈಗ ಪ್ರಚಾರದಲ್ಲಿರುವ ವ್ಯಾಪಾರ, ವ್ಯವಸಾಯ, ಸುಂಕ, ಆದಾಯದ ತೆರಿಗೆ, ಕೊನೆಗೆ ದೊಡ್ಡಿಯ ರಾಸುಗಳಿಗೆ ವಸೂಲ್ಮಾಡಬಹುದಾದ ಜುಲ್ಮಾನೆ, ಈ ಎಲ್ಲಾ ವಿಷಯಗಳಲ್ಲಿಯೂ ಧಾರ್ಮಿಕ ಕ್ರಮದಿಂದ ಸಂಪಾದಿಸಬಹುದಾದ ರಾಜಕೀಯ ವರಮಾನವನ್ನೂ ನಿರೂಪಿಸಿರುತ್ತಾರೆ. ಇದಕ್ಕೆಲ್ಲಾ ಅಧರ್ಮ ಮೂಲಕವಾದ ಆರ್ಥಿಕ ವ್ಯವಹಾರವನ್ನು ತಪ್ಪಿಸುವುದರಲ್ಲಿ ತಾತ್ಪರ್ಯ.

ಹಂಸಗೀತೆಯ ಕೊನೆಯಲ್ಲಿರುವ ಕೆಲವು ಸಣ್ಣಸಣ್ಣ ಉಪಾಖ್ಯಾನದಿಂದ ನಾರಾಯಣನ ಪರಮೋತ್ಕರ್ಷವನ್ನು ನಿರೂಪಿಸಿ ಅವನ ಸರ್ವವ್ಯಾಪಕತ್ವಕ್ಕೆ ಲಿಂಗಸ್ಫೋಟನೃಸಿಹ್ಮದರ್ಶನವನ್ನೂ ಉದಾಹರಿಸುತ್ತಾರೆ. ನಿಷ್ಕಾಮದಿಂದಾಗಲಿ ಕಾಮನಾದೃಷ್ಟಿಯಿಂದಾಗಲಿ ವಾಸುದೇವನನ್ನು ಸೇವಿಸುವವರಿಗೆ ಅವರವರ ಇಷ್ಟಕ್ಕೆ ತಕ್ಕಂತೆ ಫಲಪ್ರಾಪ್ತಿಯುಂಟಾಗುತ್ತದೆ ಎಂಬ ವಿಷಯವನ್ನು ಬಹು ವಿಸ್ತಾರವಾಗಿ ೩೪೧ ನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ

ಈ ಗ್ರಂಥದ ಕೊನೆಯ ಹತ್ತಾರು ಅಧ್ಯಾಯಗಳಲ್ಲಿ ಬಹು ಅಶುದ್ಧವಾದ ಪಾಠಗಳಿವೆ. ಮುದ್ರಣ ದೋಷದಿಂದಾದ ಅಶುದ್ಧಿಗಳನ್ನೂ ಕೆಲವು ಕಡೆಗಳಲ್ಲಿ ಸರಿಮಾಡಿಕೊಂಡು ಅನುವಾದ ಬರೆಯಲಾಗಿದೆ. ತಿದ್ದಲು ಸಾಧ್ಯವಿಲ್ಲದ ಸ್ಥಳದಲ್ಲಿ ಪ್ರಕರಣಕ್ಕೆ ತಕ್ಕಂತೆ ಊಹಿಸಿ ಅರ್ಥ ಬರೆಯಲಾಗಿದೆ. ಇದರಲ್ಲಿಯೂ ಪ್ರಮಾದ ಉಂಟಾಗಿದ್ದಲ್ಲಿ ಶುದ್ಧವಾದ ಪಾಠವನ್ನು ಹೊಂದಿರುವ ಪಾಠಕ ಮಹನೀಯರು ಕ್ಷಮೆಯಿಂದ ಸರಿಪಡಿಸಿಕೊಂಡು ಇದರ ಪ್ರಯೋಜನವನ್ನು ಹೊಂದಬೇಕೆಂದು ಪ್ರಾಜ್ಞರಲ್ಲಿ ನನ್ನ ಪ್ರಾರ್ಥನೆ.

ಇಂತಹ ಅಮೂಲ್ಯ ಗ್ರಂಥರತ್ನಗಳನ್ನು ಸರ್ವಜನ ಸುಗಮವಾದ ದೇಶ ಭಾಷೆಯ ಅನುವಾದದಿಂದ ಪರಿಷ್ಕರಿಸಿ ಜನಜೀವನಕ್ಕೆ ತಕ್ಕ ಸದ್ಧರ್ಮ ಬುದ್ಧಿಯನ್ನು ಎಲ್ಲರಲ್ಲಿಯೂ ಹರಡುತ್ತಲೂ, ಸ್ವಾನುಷ್ಠಾನದಿಂದ ಸಫಲಗೊಳಿಸುತ್ತಲೂ ಇರುವ ಧಾರ್ಮಿಕಾಗ್ರೇಸರರಾದ ಪ್ರಭುವರ್ಯ **ಶ್ರೀ ಜಯ ಚಾಮರಾಜ ಒಡೆಯರ್ ಬಹದ್ದೂರ್** ಜಿ. ಸಿ. ಬಿ., ಜಿ. ಸಿ. ಎಸ್. ಐ., ರವರಿಗೂ, ರಾಜಕುಟುಂಬಕ್ಕೂ, ರಾಜ ಕುಮಾರಿಯರಿಗೂ, ರಾಜ ಕುಮಾರರಾದ ಶ್ರೀಕಂಠದತ್ತ ನೃಸಿಹ್ಮರಾಜ ಒಡೆಯರ್‌ರವರಿಗೂ ಸರ್ವಾತ್ಮಕನಾದ ನಾರಾಯಣನು ಆಯುರಾರೋಗ್ಯ ಐಶ್ವರ್ಯಾದಿ ಸಮಸ್ತ ಸಮೃದ್ಧಿಗಳನ್ನು ಅನುಗ್ರಹಿಸಿ ಕಾಪಾಡುತ್ತಿರಲೆಂದು ಶ್ರೀ ಶ್ರೀಕಂಠದತ್ತ ನೃಸಿಹ್ಮರಾಜ ಒಡೆಯರವರ ವರ್ಷ ವರ್ಧಂತಿಯ ಈ ಶುಭದಿನದಲ್ಲಿ ಭಕ್ತಿನಮ್ರನಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀಮಾನ್ ಶ್ರೀ ಜಯಚಾಮರಾಜನೃಪತಿಃ ಕರ್ಣಾಟಸಿಹ್ಮಾಸನೆ
ಯಾವಚ್ಚಂದ್ರದಿವಾಕರಂ ವಿಜಯತಾಂ ಸದ್ಧರ್ಮಕಲ್ಪದ್ರುಮಃ |
ಯಸ್ಯಾಯಂದಯಯಾ ಸಮೇಧಿತ ಮಹಾಶಾಖೋಪಶಾಖಃ ಸತಾಂ
ಪ್ರೀತ್ಯೈಭಾತಿ ಪುರಾಣನಿರ್ಜರತರುಃ ಸದ್ಧರ್ಮಪುಷ್ಪೋಜ್ವಲಃ ||

ವಿಜಯನಾಮ ಸಂ|| ಫಾಲ್ಗುಣ ಶುಕ್ಲ
ಸಪ್ತಮಿ ಗುರುವಾರ
11—3—1954.

ಅನುವಾದಕ,
ಸಂಕೇಘಟ್ಟಂ ವೆಂಕಟಾಚಾರ್ಯ,
ಆಸ್ಥಾನ ಮಹಾವಿದ್ವಾನ್.

ವಿಷಯಾನುಕ್ರಮಣಿಕೆ

ಮೂರನೆಯ ಖಂಡ

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ಮೂವತ್ತೈದನೆಯ ಅಧ್ಯಾಯ—		
	ಹಂಸಗೀತೆಯ ರಹಸ್ಯಪ್ರಾಯಶ್ಚಿತ್ತವರ್ಣನ.	1- 4
ಇನ್ನೂರ ಮೂವತ್ತಾರನೆಯ ಅಧ್ಯಾಯ—		
	ಕೃಚ್ಛ್ರಸಾಂತಪನಾದಿ ಪ್ರಾಯಶ್ಚಿತ್ತವರ್ಣನ.	5- 8
ಇನ್ನೂರ ಮೂವತ್ತೇಳನೆಯ ಅಧ್ಯಾಯ—		
	ಕರ್ಮಫಲ ವಿಪಾಕವಿವರಣ.	9–24
ಇನ್ನೂರ ಮೂವತ್ತೆಂಟನೆಯ ಅಧ್ಯಾಯ—		
	ಅರಿಷ್ಟಯೋಗವರ್ಣನ.	25–31
ಇನ್ನೂರ ಮೂವತ್ತೊಂಭತ್ತನೆಯ ಅಧ್ಯಾಯ—		
	ಜ್ಞಾನವರ್ಣನ.	32–33
ಇನ್ನೂರ ನಲವತ್ತನೆಯ ಅಧ್ಯಾಯ—		
	ಪಾಪನಿದರ್ಶನವರ್ಣನ.	34–35
ಇನ್ನೂರ ನಲವತ್ತೊಂದನೆಯ ಅಧ್ಯಾಯ—		
	ಕಾಮುಕೃತ್ಯವರ್ಣನ.	36–37
ಇನ್ನೂರ ನಲವತ್ತೆರಡನೆಯ ಅಧ್ಯಾಯ—		
	ಪ್ರಹರ್ಷದೋಷವರ್ಣನ.	38–39
ಇನ್ನೂರ ನಲವತ್ತಮೂರನೆಯ ಅಧ್ಯಾಯ—		
	ಮಾನದೋಷವರ್ಣನ.	40–41
ಇನ್ನೂರ ನಲವತ್ತನಾಲ್ಕನೆಯ ಅಧ್ಯಾಯ—		
	ಮದದೋಷವರ್ಣನ.	42–43

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ನಲವತ್ತೈದನೆಯ ಅಧ್ಯಾಯ—	ಲೋಭದೋಷವರ್ಣನ	44–45
ಇನ್ನೂರ ನಲವತ್ತಾರನೆಯ ಅಧ್ಯಾಯ—	ಕ್ರೋಧದೋಷವರ್ಣನ.	46–47
ಇನ್ನೂರ ನಲವತ್ತೇಳನೆಯ ಅಧ್ಯಾಯ—	ನಾಸ್ತಿಕ್ಯದೋಷವರ್ಣನ.	48–49
ಇನ್ನೂರ ನಲವತ್ತೆಂಟನೆಯ ಅಧ್ಯಾಯ—	ಅಹಂಕಾರದೋಷವರ್ಣನ.	50-51
ಇನ್ನೂರ ನಲವತ್ತೊಂಭತ್ತನೆಯ ಅಧ್ಯಾಯ—	ಶೌಚವರ್ಣನ.	52–53
ಇನ್ನೂರ ಐವತ್ತನೆಯ ಅಧ್ಯಾಯ—	ಅನಾಚಾರದೋಷವರ್ಣನ.	54–55
ಇನ್ನೂರ ಐವತ್ತೊಂದನೆಯ ಅಧ್ಯಾಯ—	ಅನೃತದೋಷವರ್ಣನ.	56–62
ಇನ್ನೂರ ಐವತ್ತೆರಡನೆಯ ಅಧ್ಯಾಯ—	ಹಿಂಸಾದೋಷವರ್ಣನ.	63–69
ಇನ್ನೂರ ಐವತ್ತಮೂರನೆಯ ಅಧ್ಯಾಯ—	ಪಾಪಕರ್ಮಗಳ ನಿರೂಪಣ.	70–78
ಇನ್ನೂರ ಐವತ್ತನಾಲ್ಕನೆಯ ಅಧ್ಯಾಯ—	ಜ್ಞಾನವರ್ಣನ.	79-81
ಇನ್ನೂರ ಐವತ್ತೈದನೆಯ ಅಧ್ಯಾಯ—	ಧರ್ಮಪ್ರಶಂಸಾವರ್ಣನ.	82–84
ಇನ್ನೂರ ಐವತ್ತಾರನೆಯ ಅಧ್ಯಾಯ—	ಗುರುಶುಶ್ರೂಷಾ ಪ್ರಶಂಸಾವರ್ಣನ.	85–86

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ಐವತ್ತೇಳನೆಯ ಅಧ್ಯಾಯ—		
	ಸ್ವಾಧ್ಯಾಯ ಪ್ರಶಂಸಾ ವರ್ಣನ.	87–88
ಇನ್ನೂರ ಐವತ್ತೆಂಟನೆಯ ಅಧ್ಯಾಯ—		
	ಬ್ರಹ್ಮಚರ್ಯ ಪ್ರಶಂಸಾ ವರ್ಣನ.	89–90
ಇನ್ನೂರ ಐವತ್ತೊಂಭತ್ತನೆಯ ಅಧ್ಯಾಯ—		
	ಸಂತಾನ ಪ್ರಶಂಸಾ ವರ್ಣನ	91–92
ಇನ್ನೂರ ಅರವತ್ತನೆಯ ಅಧಾಯ—		
	ಕೀರ್ತಿ ಪ್ರಶಂಸಾ ವರ್ಣನ	93–94
ಇನ್ನೂರ ಅರವತ್ತೊಂದನೆಯ ಅಧ್ಯಾಯ—		
	ಯಶಃಪ್ರಶಂಸಾ ವರ್ಣನ.	95–96
ಇನ್ನೂರ ಅರವತ್ತೆರಡನೆಯ ಅಧ್ಯಾಯ—		
	ಯಜ್ಞ ಪ್ರಶಂಸಾ ವರ್ಣನ.	97–98
ಇನ್ನೂರ ಅರತ್ತೆಮೂರನೆಯ ಅಧ್ಯಾಯ—		
	ಶೀಲ ಪ್ರಶಂಸಾ ವರ್ಣನ.	99–100
ಇನ್ನೂರ ಅರವತ್ತನಾಲ್ಕನೆಯ ಅಧ್ಯಾಯ—		
	ದಮ ಪ್ರಶಂಸಾ ವರ್ಣನ	101–102
ಇನ್ನೂರ ಅರವತ್ತೈದನೆಯ ಅಧ್ಯಾಯ—		
	ಸತ್ಯ ಪ್ರಶಂಸಾ ವರ್ಣನ.	103–106
ಇನ್ನೂರ ಅರವತ್ತಾರನೆಯ ಅಧ್ಯಾಯ—		
	ತಪಃ ಪ್ರಶಂಸಾ ವರ್ಣನ.	107–111
ಇನ್ನೂರ ಅರವವತ್ತೇಳನೆಯ ಅಧ್ಯಾಯ—		
	ಶೂರಗುಣ ವರ್ಣನ.	112–119
ಇನ್ನೂರ ಅರವತ್ತೆಂಟನೆಯ ಅಧ್ಯಾಯ—		
	ಹಿಂಸಾದೋಷ ವರ್ಣನ.	120–124

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ಅರವತ್ತೊಂಭತ್ತನೆಯ ಅಧ್ಯಾಯ—		
	ಕ್ಷಮಾಗುಣವರ್ಣನ.	125-126
ಇನ್ನೂರ ಎಪ್ಪತ್ತನೆಯ ಅಧ್ಯಾಯ—		
	ಕೃತಜ್ಞತಾಗುಣನಿರೂಪಣ.	127-131
ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯ—		
	ಆಚಾರವರ್ಣನ.	132-133
ಇನ್ನೂರ ಎಪ್ಪತ್ತೆರಡನೆಯ ಅಧ್ಯಾಯ—		
	ಶೌಚವರ್ಣನ.	134-
ಇನ್ನೂರ ಎಪ್ಪತ್ತಮೂರನೆಯ ಅಧ್ಯಾಯ—		
	ತೀರ್ಥಫಲವರ್ಣನ.	135-139
ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ—		
	ಉಪವಾಸಫಲವರ್ಣನ.	140-143
ಇನ್ನೂರ ಎಪ್ಪತ್ತೈದನೆಯ ಅಧ್ಯಾಯ—		
	ಮನಶ್ಶೌಚನಿರೂಪಣ.	144-147
ಇನ್ನೂರ ಎಪ್ಪತ್ತಾರನೆಯ ಅಧ್ಯಾಯ—		
	ಶ್ರದ್ಧಾಫಲವರ್ಣನ.	148-149
ಇನ್ನೂರ ಎಪ್ಪತ್ತೇಳನೆಯ ಅಧ್ಯಾಯ—		
	ಸ್ನಾನವರ್ಣನ.	150-154
ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯ—		
	ಜಪ್ಯವರ್ಣನ.	155-157
ಇನ್ನೂರ ಎಪ್ಪತ್ತೊಂಭತ್ತನೆಯ ಅಧ್ಯಾಯ—		
	ಅಂತರ್ಜಲದಲ್ಲಿ ಜಪ್ಯವರ್ಣನ.	158-159
ಇನ್ನೂರ ಎಂಭತ್ತನೆಯ ಅಧ್ಯಾಯ—		
	ಪ್ರಾಣಾಯಾಮವರ್ಣನ.	160-162

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ಎಂಭತ್ತೊಂದನೆಯ ಅಧ್ಯಾಯ—		
	ಪ್ರತ್ಯಾಹಾರವರ್ಣನ.	163–166
ಇನ್ನೂರ ಎಂಭತ್ತೆರಡನೆಯ ಅಧ್ಯಾಯ—		
	ಧಾರಣಾವರ್ಣನ.	167–170
ಇನ್ನೂರ ಎಂಭತ್ತಮೂರನೆಯ ಅಧ್ಯಾಯ—		
	ಧ್ಯಾನವರ್ಣನ.	171–174
ಇನ್ನೂರ ಎಂಭತ್ತನಾಲ್ಕನೆಯ ಅಧ್ಯಾಯ—		
	ಸಮಾಧಿ ವರ್ಣನ.	175–178
ಇನ್ನೂರ ಎಂಭತ್ತೈದನೆಯ ಅಧ್ಯಾಯ—		
	ವ್ಯವಸಾಯವರ್ಣನ.	179–180
ಇನ್ನೂರ ಎಂಭತ್ತಾರನೆಯ ಅಧ್ಯಾಯ—		
	ಸಂಕಲ್ಪವರ್ಣನ.	181–182
ಇನ್ನೂರ ಎಂಭತ್ತೇಳನೆಯ ಅಧ್ಯಾಯ—		
	ಹೋಮವಿಧಿವರ್ಣನ.	183–186
ಇನ್ನೂರ ಎಂಭತ್ತೆಂಟನೆಯ ಅಧ್ಯಾಯ—		
	ಪಿತೃಪೂಜಾವಿಧಾನ.	187-196
ಇನ್ನೂರ ಎಂಭತ್ತೊಂಭತ್ತನೆಯ ಅಧ್ಯಾಯ –		
	ಅತಿಥಿಪೂಜೆ.	197–201
ಇನ್ನೂರ ತೊಂಭತ್ತನೆಯ ಅಧ್ಯಾಯ—		
	ಬ್ರಾಹ್ಮಣಶುಶ್ರೂಷೆ.	202–204
ಇನ್ನೂರ ತೊಂಭತ್ತೊಂದನೆಯ ಅಧ್ಯಾಯ—		
	ಗೋಶುಶ್ರೂಷೆ.	205–211
ಇನ್ನೂರ ತೊಂಭತ್ತೆರಡನೆಯ ಅಧ್ಯಾಯ—		
	ದಯಾವರ್ಣನ.	212–215

ಅಧ್ಯಾಯ	ವಿಷಯ	ಪುಟಸಂಖ್ಯೆ
ಇನ್ನೂರ ತೊಂಭತ್ತಮೂರನೆಯ ಅಧ್ಯಾಯ—		
	ದಾಕ್ಷಿಣ್ಯವರ್ಣನ.	216–218
ಇನ್ನೂರ ತೊಂಭತ್ತನಾಲ್ಕನೆಯ ಅಧ್ಯಾಯ—		
	ಪ್ರಿಯಂವದಪ್ರಶಂಸಾ.	219–220
ಇನ್ನೂರ ತೊಂಭತ್ತೈದನೆಯ ಅಧ್ಯಾಯ—		
	ಉತ್ಥಾನಪ್ರಶಂಸೆ.	221–222
ಇನ್ನೂರ ತೊಂಭತ್ತಾರನೆಯ ಅಧ್ಯಾಯ—		
	ಜಲಾಶಯನಿರ್ಮಾಣ.	223–227
ಇನ್ನೂರ ತೊಂಭತ್ತೇಳನೆಯ ಅಧ್ಯಾಯ—		
	ವೃಕ್ಷಾರೋಪಣಫಲನಿರೂಪಣ.	228–234
ಇನ್ನೂರ ತೊಂಭತ್ತೆಂಟನೆಯ ಅಧ್ಯಾಯ—		
	ಪ್ರಪಾಪ್ರಶಂಸಾ.	235–241
ಇನ್ನೂರ ತೊಂಭತ್ತೊಂಭತ್ತನೆಯ ಅಧ್ಯಾಯ—		
	ಧನವಿಚಾರ.	242–246
ಮುನ್ನೂರನೆಯ ಅಧ್ಯಾಯ—		
	ದಾನಪ್ರಶಂಸೆ.	247–254
ಮುನ್ನೂರ ಒಂದನೆಯ ಅಧ್ಯಾಯ—		
	ಪ್ರತಿಗ್ರಹಪ್ರಶಂಸೆ.	255–263
ಮುನ್ನೂರ ಎರಡನೆಯ ಅಧ್ಯಾಯ—		
	ಅಭಯದಾನಪ್ರಶಂಸೆ.	264–270
ಮುನ್ನೂರ ಮೂರನೆಯ ಅಧ್ಯಾಯ—		
	ವಿದ್ಯಾದಾನಫಲನಿರೂಪಣ.	271–274
ಮುನ್ನೂರ ನಾಲ್ಕನೆಯ ಅಧ್ಯಾಯ—		
	ಕನ್ಯಾದಾನಫಲನಿರೂಪಣ.	275–278

ಅಧ್ಯಾಯ	ವಿಷಯ	ಪುಟಸಂಖ್ಯೆ
ಮುನ್ನೂರ ಐದನೆಯ ಅಧ್ಯಾಯ—		
	ಭೂಮಿದಾನವರ್ಣನೆ.	279-288
ಮುನ್ನೂರ ಆರನೆಯ ಅಧ್ಯಾಯ—		
	ಗೋದಾನಫಲನಿರೂಪಣ.	289-304
ಮುನ್ನೂರ ಏಳನೆಯ ಅಧ್ಯಾಯ—		
	ಘೃತಧೇನುಕಲ್ಪವರ್ಣನೆ.	305 308
ಮುನ್ನೂರ ಎಂಟನೆಯ ಅಧ್ಯಾಯ—		
	ತಿಲಧೇನುದಾನವಿಧಿವರ್ಣನ.	309-312
ಮುನ್ನೂರ ಒಂಭತ್ತನೆಯ ಅಧ್ಯಾಯ—		
	ಜಲಧೇನುವರ್ಣನ.	313-316
ಮುನ್ನೂರ ಹತ್ತನೆಯ ಅಧ್ಯಾಯ—		
	ಸುವರ್ಣದಾನನಿರೂಪಣ.	317-323
ಮುನ್ನೂರ ಹನ್ನೊಂದನೆಯ ಅಧ್ಯಾಯ—		
	ಅನೇಕ ವಸ್ತುದಾನಪ್ರಶಂಸಾವರ್ಣನ.	324-329
ಮುನ್ನೂರ ಹನ್ನೆರಡನೆಯ ಅಧ್ಯಾಯ—		
	ವಾಹನದಾನವಿಧಿವರ್ಣನ.	330-333
ಮುನ್ನೂರ ಹದಿಮೂರನೆಯ ಅಧ್ಯಾಯ—		
	ವಸ್ತ್ರದಾನಪ್ರಶಂಸಾವರ್ಣನ.	334-337
ಮುನ್ನೂರ ಹದಿನಾಲ್ಕನೆಯ ಅಧ್ಯಾಯ—		
	ಧಾನ್ಯದಾನಪ್ರಶಂಸಾ.	338-341
ಮುನ್ನೂರ ಹದಿನೈದನೆಯ ಅಧ್ಯಾಯ —		
	ಅನ್ನದಾನಪ್ರಶಂಸಾ.	342-345
ಮುನ್ನೂರ ಹದಿನಾರನೆಯ ಅಧ್ಯಾಯ—		
	ಪಾತ್ರವಿಶೇಷದಲ್ಲಿ ದಾನವಿಶೇಷವರ್ಣನ.	346-351

ಅಧ್ಯಾಯ	ವಿಷಯ	ಪುಟಸಂಖ್ಯೆ
ಮುನ್ನೂರ ಹದಿನೇಳನೆಯ ಅಧ್ಯಾಯ—		
	ಕಾಲಯೋಗದಲ್ಲಿ ದಾನವಿಧಿವರ್ಣನ.	352–358
ಮುನ್ನೂರ ಹದಿನೆಂಟನೆಯ ಅಧ್ಯಾಯ—		
	ನಕ್ಷತ್ರಸತ್ರವಿಧಾನ.	359–365
ಮುನ್ನೂರ ಹತ್ತೊಂಭತ್ತನೆಯ ಅಧ್ಯಾಯ—		
	ದ್ವಾದಶೀ ಪೌರ್ಣಮಾಸೀದಾನಫಲನಿರೂಪಣ.	366–374
ಮುನ್ನೂರ ಇಪ್ಪತ್ತನೆಯ ಅಧ್ಯಾಯ—		
	ಉಪವಾಸವಿಧಿವರ್ಣನ.	375–385
ಮುನ್ನೂರ ಇಪ್ಪತ್ತೊಂದನೆಯ ಅಧ್ಯಾಯ—		
	ಲೋಕವಿಭಾಗವರ್ಣನ.	386–389
ಮುನ್ನೂರ ಇಪ್ಪತ್ತೆರಡನೆಯ ಅಧ್ಯಾಯ—		
	ಸ್ತ್ರೀಧರ್ಮನಿರೂಪಣ.	390–395
ಮುನ್ನೂರ ಇಪ್ಪತ್ತಮೂರನೆಯ ಅಧ್ಯಾಯ—		
	ರಾಜಧರ್ಮನಿರೂಪಣ.	396–404
ಮುನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ—		
	ರಾಜಧರ್ಮದಲ್ಲಿ ವ್ಯವಹಾರನಿರೂಪಣ.	405–414
ಮುನ್ನೂರ ಇಪ್ಪತ್ತೈದನೆಯ ಅಧ್ಯಾಯ—		
	ರಾಜಧರ್ಮದಲ್ಲಿ ಭೋಗಲಕ್ಷಣವರ್ಣನ.	415–417
ಮುನ್ನೂರ ಇಪ್ಪತ್ತಾರನೆಯ ಅಧ್ಯಾಯ—		
	ರಾಜಧರ್ಮದಲ್ಲಿ ಲೇಖ್ಯಲಕ್ಷಣವರ್ಣನ.	418–423
ಮುನ್ನೂರ ಇಪ್ಪತ್ತೇಳನೆಯ ಅಧ್ಯಾಯ—		
	ರಾಜಧರ್ಮದಲ್ಲಿ ಸಾಕ್ಷಿನಿರ್ಣಯ.	424–431
ಮುನ್ನೂರ ಇಪ್ಪತೆಂಟನೆಯ ಅಧ್ಯಾಯ—		
	ರಾಜಧರ್ಮದಲ್ಲಿ ದಿವ್ಯಪ್ರಮಾಣನಿರೂಪಣ	432–447

ಅಧ್ಯಾಯ	ವಿಷಯ	ಪುಟಸಂಖ್ಯೆ
ಮುನ್ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ—		
	ವಿವಾಹಧರ್ಮನಿರೂಪಣ.	448-454
ಮುನ್ನೂರ ಮೂವತ್ತನೆಯ ಅಧ್ಯಾಯ—		
	ದಾಯವಿಭಾಗವರ್ಣನ.	455-465
ಮುನ್ನೂರ ಮೂವತ್ತೊಂದನೆಯ ಅಧ್ಯಾಯ—		
	ಋಣದಾನವರ್ಣನ.	466-472
ಮುನ್ನೂರ ಮೂವತ್ತೆರಡನೆಯ ಅಧ್ಯಾಯ—		
	ನಿಕ್ಷೇಪರಕ್ಷಣಾವರ್ಣನ.	473-474
ಮುನ್ನೂರ ಮೂವತ್ತಮೂರನೆಯ ಅಧ್ಯಾಯ—		
	ಸಂಭೂಯಸಮುತ್ಥಾನದೇಯಾದೇಯವರ್ಣನ.	475-477
ಮುನ್ನೂರ ಮೂವತ್ತನಾಲ್ಕನೆಯ ಅಧ್ಯಾಯ—		
	ಸ್ವಾಮಿಭೃತ್ಯನಿರ್ಣಯವರ್ಣನ.	478-484
ಮುನ್ನೂರ ಮೂವತ್ತೈದನೆಯ ಅಧ್ಯಾಯ—		
	ಕ್ರಯವಿಕ್ರಯನಿರ್ಣಯ.	485-488
ಮುನ್ನೂರ ಮೂವತ್ತಾರನೆಯ ಅಧ್ಯಾಯ—		
	ಶ್ರೇಣೀವಿಭಾಗವರ್ಣನ.	489-491
ಮುನ್ನೂರ ಮೂವತ್ತೇಳನೆಯ ಅಧ್ಯಾಯ—		
	ಸಸ್ಯಹಾನಿದಂಡವರ್ಣನ.	492-495
ಮುನ್ನೂರ ಮೂವತ್ತೆಂಟನೆಯ ಅಧ್ಯಾಯ—		
	ದಂಡಾನುಶಾಸನವರ್ಣನ.	496-503
ಮುನ್ನೂರ ಮೂವತ್ತೊಂಭತ್ತನೆಯ ಅಧ್ಯಾಯ—		
	ವಾನಪ್ರಸ್ಥಧರ್ಮನಿರೂಪಣ.	504-506
ಮುನ್ನೂರ ನಲವತ್ತನೆಯ ಅಧ್ಯಾಯ—		
	ಯತಿಧರ್ಮವರ್ಣನ.	507-517

ಅಧ್ಯಾಯ	ವಿಷಯ	ಪುಟಸಂಖ್ಯೆ
ಮುನ್ನೂರ ನಲವತ್ತೊಂದನೆಯ ಅಧ್ಯಾಯ—	ಭಗವದ್ವಿಷಯದಾನಧರ್ಮನಿರೂಪಣ.	518–574
ಮುನ್ನೂರ ನಲವತ್ತೆರಡನೆಯ ಅಧ್ಯಾಯ—	ಹಂಸವಿಶ್ವರೂಪದರ್ಶನ.	575–581
ಮುನ್ನೂರ ನಲವತ್ತಮೂರನೆಯ ಅಧ್ಯಾಯ—	ಸುಮುಖೋಪಾಖ್ಯಾನ.	582–588
ಮುನ್ನೂರ ನಲವತ್ತನಾಲ್ಕನೆಯ ಅಧ್ಯಾಯ—	ಕಶ್ಯಪ ಕೃತಸ್ತೋತ್ರ ವರ್ಣನ.	589–594
ಮುನ್ನೂರ ನಲವತ್ತೈದನೆಯ ಅಧ್ಯಾಯ—	ಭೂವಿವರಗತ ರಾಜರಕ್ಷಾ ವರ್ಣನ.	595–598
ಮುನ್ನೂರ ನಲವತ್ತಾರನೆಯ ಅಧ್ಯಾಯ—	ಗರುಡಸ್ತೋತ್ರ.	599–610
ಮುನ್ನೂರ ನಲವತ್ತೇಳನೆಯ ಅಧ್ಯಾಯ—	ವಾಸುದೇವ ಸ್ತೋತ್ರ ನಿರೂಪಣ.	611–613
ಮುನ್ನೂರ ನಲವತ್ತೆಂಟನೆಯ ಅಧ್ಯಾಯ—	ವಸೂಪಾಖ್ಯಾನ.	614–616
ಮುನ್ನೂರ ನಲವತ್ತೊಂಭತ್ತನೆಯ ಅಧ್ಯಾಯ—	ನಾರದಮಹರ್ಷಿಯ ಶ್ವೇತದ್ವೀಪಗಮನ ವರ್ಣನ	617–629
ಮುನ್ನೂರ ಐವತ್ತನೆಯ ಅಧ್ಯಾಯ—	ಶ್ವೇತದ್ವೀಪದಲ್ಲಿ ನಾರದಸ್ತೋತ್ರವರ್ಣನ.	630–634
ಮುನ್ನೂರ ಐವತ್ತೊಂದನೆಯ ಅಧ್ಯಾಯ—	ವಿಶ್ವರೂಪಾಖ್ಯಾನ.	635–652
ಮುನ್ನೂರ ಐವತ್ತೆರಡನೆಯ ಅಧ್ಯಾಯ—	ನಾರಾಯಣ ಪೂಜಾಪ್ರಕಾರ ವರ್ಣನ.	653

ಅಧ್ಯಾಯ	ವಿಷಯ	ಪುಟಸಂಖ್ಯೆ
ಮುನ್ನೂರ ಐವತ್ತಮೂರನೆಯ ಅಧ್ಯಾಯ—		
	ನಾರದ ಪ್ರಸಾದ ವರ್ಣನ.	654–656
ಮುನ್ನೂರ ಐವತ್ತನಾಲ್ಕನೆಯ ಅಧ್ಯಾಯ—		
	ಲಿಂಗಸ್ಫೋಟ ನರಸಿಹ್ಮದರ್ಶನ ವರ್ಣನ.	657–662
ಮುನ್ನೂರ ಐವತ್ತೈದನೆಯ ಅಧ್ಯಾಯ—		
	ಶ್ರೀ ನರಸಿಹ್ಮಸ್ತೋತ್ರ ವರ್ಣನ.	663–670

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚತ್ರಿಂಶದಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಇತ್ಯೇತದೇನಸಾಮುಕ್ತಂ ಪ್ರಾಯಶ್ಚಿತ್ತಂ ಯಥಾವಿಧಿ ।
ಅತ ಊರ್ಧ್ವಂ ರಹಸ್ಯಾನಾಂ ಪ್ರಾಯಶ್ಚಿತ್ತಂ ನಿಬೋಧತ ॥ ೧ ॥

ಸವ್ಯಾಹೃತೀಕಾಃ ಪ್ರಣವಾಃ ಪ್ರಾಣಾಯಾಮಾಸ್ತು ಷೋಡಶ ।
ಅಪಿಭ್ರೂಣಹನಂ ಮಾಸಾತ್ಪುನನ್ತ್ಯಹರಹಃ ಕೃತಾಃ ॥ ೨ ॥

ಕೌತ್ಸಂ ಜಪ್ತ್ವಾಪ ಇತ್ಯೇತದ್ವಾಸಿಷ್ಠಂ ಚ ತ್ರ್ಯೃಚಂಪ್ರತಿ ।
ಮಾಹಿತ್ರಂ ಶುದ್ಧವತ್ಯಶ್ಚ ಸುರಾಪೋಽಪಿ ವಿಶುದ್ಧ್ಯತಿ ॥ ೩ ॥

ಇನ್ನೂರ ಮೂವತ್ತೈದನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಈ ರೀತಿ ಪ್ರಕಟವಾದ ಪಾಪಗಳಿಗೆ ಯಥಾವಿಧಿಯಾದ ಪ್ರಾಯಶ್ಚಿತ್ತವನ್ನು ಹೇಳಿ ಆಯಿತು. ಇನ್ನು ಮುಂದೆ ರಹಸ್ಯವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ ಕೇಳಿರಿ. ಪ್ರಣವವ್ಯಾಹೃತಿ ಗಳಿಂದ ಕೂಡಿದ ಹದಿನಾರು ಪ್ರಾಣಾಯಾಮಗಳನ್ನು ನಿತ್ಯವೂ ಮಾಡಿದಲ್ಲಿ ಒಂದು ತಿಂಗಳಲ್ಲಿ ಭ್ರೂಣ ಹತ್ಯೆ ಮಾಡಿದವನೂ ಶುದ್ಧನಾಗುತ್ತಾನೆ. ಅಜಃ ಎಂಬ ಕೌತ್ಸಮಂತ್ರವನ್ನೂ ವಾಸಿಷ್ಠವೆಂಬ ಮೂರು ಋಕ್ಕುಗಳನ್ನೂ, ಮಾಹಿತ್ರವನ್ನೂ ಶುದ್ಧಿವತ್ಯಃ ಎಂಬ ಋಕ್ಕನ್ನೂ

ಕೃಷ್ಣಸ್ತ್ವಸ್ಯ ವಾಮೀಯಂ ಶಿವಸಂಕಲ್ಪಮೇವ ಚ ।
ಉಪಹೃತ್ಯ ಸುವರ್ಣಂತು ಕ್ಷಣಾದ್ಭವತಿ ನಿರ್ಮಲಃ ॥ ೪ ॥

ಹವಿಷ್ಮನ್ತೀಯಮಭ್ಯಸ್ಯ ನತಮಂಹ ಇತೀತಿ ಚ ।
ಜಪ್ತ್ವಾ ತು ಪೌರುಷಂ ಸೂಕ್ತಂ ಮುಚ್ಯತೇ ಗುರುತಲ್ಪಗಃ ॥ ೫ ॥

ಏನಸಾಂ ಸ್ಥೂಲಸೂಕ್ಷ್ಮಾಣಾಂ ಚಿಕೀರ್ಷನ್ನಪನೋದನಂ ।
ಅವೇತ್ಯೃಚಂ ಜಪೇದಬ್ದಂ ಯತ್ಕಿಂಚೇದಮಿತೀತಿ ಚ ॥ ೬ ॥

ಪ್ರತಿಗೃಹ್ಯಾಪ್ರತಿಗ್ರಾಹ್ಯಂ ಭುಕ್ತ್ವಾ ಚಾನ್ನಂ ವಿಗರ್ಹಿತಂ ।
ಜಪಂಸ್ತರತ್ಸಮಂದೀಯಂ ಪೂಯತೇ ಮಾನವಸ್ತ್ರ್ಯಹಾತ್ ॥ ೭

ಸೋಮಾರೌದ್ರಂತು ಬಹ್ವೇನಾ ಮಾಸಮಭ್ಯಸ್ಯ ಶುದ್ಧ್ಯತಿ ।
ಸ್ರವಂತ್ಯಾ ಮಾಚರನ್ ಸ್ನಾನಂ ಆರ್ಯಮ್ಣಾಮಿತಿ ಚ ತ್ರ್ಯೃಚಂ ॥ ೮ ॥

ಜಪಿಸಿದಲ್ಲಿ ಸುರಾಪಾನಮಾಡಿದವನೂ ಶುದ್ಧನಾಗುತ್ತಾನೆ. ಅಸ್ಯವಾಮೀಯ ಸೂಕ್ತವನ್ನೂ ಶಿವಸಂಕಲ್ಪವನ್ನೂ ಒಂದಾವರ್ತಿ ಜಪಿಸಿದರೂ ಸಹ ಸುವರ್ಣಸ್ತೇಯ ಪಾಪದಿಂದ ಮುಕ್ತನಾಗಿ ಕ್ಷಣಮಾತ್ರದಲ್ಲಿ ಶುದ್ಧನಾಗುತ್ತಾನೆ.

೫–೮. ಗುರುತಲ್ಪಗಮನಮಾಡಿದವನು ಹವಿಷ್ಮನ್ತೀಯ, ನತಮಂಹ, ಈ ಋಕ್ಕುಗಳನ್ನೂ ಪುರುಷಸೂಕ್ತವನ್ನೂ ಜಪಿಸಿದಲ್ಲಿ ಪಾಪದಿಂದ ಮುಕ್ತನಾಗುತ್ತಾನೆ. ಸೂಕ್ಷ್ಮವಾಗಿಯೂ, ಸ್ಥೂಲವಾಗಿಯೂ ಆಗಿರಬಹುದಾದ ಇತರ ಪಾಪಗಳನ್ನು ಹೋಗಲಾಡಿಸಿಕೊಳ್ಳಲು ಇಚ್ಛೆಯುಳ್ಳವನು ಅವ ಎಂಬ ಋಕ್ಕನ್ನೂ ಯತ್ಕಿಂಚೇದಂ ಎಂಬ ಋಕ್ಕನ್ನೂ ಒಂದುವರ್ಷಪೂರ್ತಿ ಜಪಿಸಬೇಕು. ದುಷ್ಟವಾದ ಪರಿಗ್ರಹ ಮಾಡಿದವನೂ ನಿಂದಿತವಾದ ಅನ್ನವನ್ನು ಭೋಜನಮಾಡಿದವನೂ, ಸಹ ತರತ್ಸಮಂದೀಯವೆಂಬ ಋಕ್ಕನ್ನು ಮೂರುದಿನ ಜಪಿಸಿದಲ್ಲಿ ಪಾಪದಿಂದ ಮುಕ್ತನಾಗುತ್ತಾನೆ ಸೋಮಾರೌದ್ರಂ, ಬಹ್ವೇನಾ ಎಂಬ ಋಕ್ಕುಗಳನ್ನು ಒಂದು ತಿಂಗಳು ಜಪಿಸಿದಲ್ಲಿಯೂ ಶುದ್ಧನಾಗುತ್ತಾನೆ ಪಾಪಮಾಡಿದವನಿಗೆ ಪ್ರಾಯಶಃ, ಆರ್ಯಮ್ಣಾಂ, ಎಂಬ ಮೂರು ಋಕ್ಕುಗಳನ್ನೂ, ಇಂದ್ರಂ, ಎಂಬ ಋಕ್ಕಿನೊಡನೆ ಏಳು ಋಕ್ಕುಗಳನ್ನೂ ಆರು ತಿಂಗಳಕಾಲ ನದಿಯಲ್ಲಿಸ್ನಾನಮಾಡಿ ಜಪಿಸಿದಲ್ಲಿ ಪಾಪಮೋಕ್ಷವುಂಟಾಗುತ್ತದೆ.

ಅಬ್ಧಾರ್ಥಮಿಂದ್ರಮಿತ್ಯೇತದೇನಸ್ವೀ ಸಪ್ತಕಂ ಜಪೇತ್ |
ಅಪ್ರಶಸ್ತಂ ತು ಕೃತ್ವಾಪ್ಸು ಮಾಸಮಾಸೀತ ಭೈಕ್ಷ್ಯಭುಕ್ ॥ ೯ ॥

ಮಂತ್ರೈಃ ಶಾಕಲಹೋಮೀಯೈರಬ್ದಂ ಹುತ್ವಾ ಘೃತಂ ದ್ವಿಜಃ |
ಸುಗುರ್ವಪ್ಯಪಹನ್ತ್ಯೇನೋ ಜಪ್ತ್ವಾ ವಾ ನಮ ಇತ್ಯೃಚಂ ॥ ೧೦ ॥

ಉಪಪಾತಕಸಂಯುಕ್ತೋಽನುಗಚ್ಛೇದ್ಗಾಃ ಸಮಾಹಿತಃ |
ಅಭ್ಯಸ್ಯಾಬ್ದಂ ಪಾವಮಾನೀಃ ಭೈಕ್ಷ್ಯಾಹಾರೋ ವಿಶುದ್ಧ್ಯತಿ ॥ ೧೧ ॥

ಅರಣ್ಯೇವಾ ತ್ರಿರಭ್ಯಸ್ಯ ಪ್ರಯತೋ ವೇದಸಂಹಿತಾಂ |
ಮುಚ್ಯತೇ ಪಾತಕೈಃ ಸರ್ವೈಃ ಪರಾಕೈಃ ಶೋಧಿತಃ ತ್ರಿಭಿಃ ॥ ೧೨ ॥

ತ್ರ್ಯಹಂ ತೂಪವಸೇದ್ಯಸ್ತು ತ್ರಿರಹ್ನೋಽಭ್ಯುಪಯನ್ನಪಃ |
ಮುಚ್ಯತೇ ಪಾತಕೈಃ ಸರ್ವೈಃ ತ್ರಿರ್ಜಪಿತ್ವಾಘಮರ್ಷಣಂ ॥ ೧೩ ॥

೯–೧೩. ಜಲದಲ್ಲಿ ದುಷ್ಟಕರ್ಮವನ್ನಾಚರಿಸಿದವನು ಒಂದು ತಿಂಗಳು ವರಿವಿಗೂ ಭಿಕ್ಷಾಚರ್ಯದಿಂದಿರಬೇಕು. ಶಾಕಲಹೋಮೀಯ ಮಂತ್ರಗಳಿಂದ ಒಂದು ವರ್ಷ ಆಜ್ಯಾಹುತಿಮಾಡಿದ ಅಥವಾ ನಮಃ ಎಂಬ ಋಕ್ಕನ್ನು ಜಪಿಸಿದ ಬ್ರಾಹ್ಮಣನು ಬಹುದೊಡ್ಡ ಪಾಪವನ್ನೂ ಹೋಗಲಾಡಿಸಿಕೊಳ್ಳುತ್ತಾನೆ. ಉಪಪಾತಕಮಾಡಿದವನು ಜಿತೇನ್ದ್ರಿಯನಾಗಿದ್ದು ಗೋಸೇವೆಯನ್ನು ಮಾಡಬೇಕು. ಒಂದು ವರ್ಷ ಪವಮಾನ ಸೂಕ್ತಗಳನ್ನು ಜಪಿಸಿ ಭಿಕ್ಷಾಚರ್ಯದಿಂದಿದ್ದಲ್ಲಿ ಶುದ್ಧನಾಗುತ್ತಾನೆ. ಅಥವಾ ಶುದನಾಗಿದ್ದು ಅರಣ್ಯದಲ್ಲಿ ವೇದಸಂಹಿತೆಯನ್ನು ಮೂರಾವರ್ತಿ ಜಪಿಸಿ, ಮೂರು ಪರಾಕಳಿಂದ ಶೋಧಿತನಾಗಿ ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. ಅಥವಾ ಮೂರುದಿನ ಉಪವಾಸವಿದ್ದು ಹಗಲಿನಲ್ಲಿ ಮೂರಾವರ್ತಿ ನದಿಯಲ್ಲಿ ಸ್ನಾನಮಾಡಿ ಅಘಮರ್ಷಣವನ್ನು ಮೂರಾವರ್ತಿ ಜಪಿಸಿದಲ್ಲಿಯೂ ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. ಅಥವಾ ಶುದ್ಧನಾಗಿದ್ದು ಋಕ್ಸಂಹಿತೆಯನ್ನಾಗಲಿ, ಯಜುಸ್ಸಂಹಿತೆಯನ್ನಾಗಲಿ, ಸರಹಸ್ಯಸಾಮವನ್ನಾಗಲಿ ಮೂರು ಬಾರಿ ಜಪಿಸಿದಲ್ಲಿ ಸರ್ವಪಾಪ

ಋಕ್ಸಂಹಿತಾಂ ತ್ರಿರಭ್ಯಸ್ಯ ಯಜುಷಾಂ ವಾ ಸಮಾಹಿತಃ
ಸಾಮ್ನಾಂ ವಾ ಸರಹಸ್ಯಾನಾಂ ಸರ್ವಪಾಪೈಃ ಪ್ರಮುಚ್ಯತೇ ॥ ೧೪ ॥

ಯದ್ವಾಚಕಂ ತಸ್ಯ ಪರಸ್ಯ ಪುಂಸೋ
ಯಸ್ಮಿನ್ನಿಬದ್ಧಂ ಭುವನಂ ಸಮಗ್ರಂ ।
ಜಪನ್ ತಮೋಂಕಾರಮತನ್ದ್ರಿತಾತ್ಮಾ
ಪಾಪಾನಿ ಶೀಘ್ರಂ ಪ್ರಜಹಾತಿ ಮರ್ತ್ಯಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ರಹಸ್ಯಪ್ರಾಯಶ್ಚಿತ್ತವರ್ಣನೋ
ನಾಮ ಪಂಚತ್ರಿಂಶದಧಿಕದ್ವಿಶತತಮೋಽಧ್ಯಾಯಃ

ಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಯಾವುದು ಪರಮಾತ್ಮನಿಗೆ ವಾಚಕವಾಗಿರುವುದೋ ಎಲ್ಲಿ ಸಮಸ್ತ ಪ್ರಪಂಚವೂ ಘಟಿತವಾಗಿರುವುದೋ ಅಂತಹ ಪ್ರಣವವನ್ನು ಜಪಿಸುವ ಬ್ರಾಹ್ಮನು ಎಲ್ಲಾ ಪಾಪಗಳನ್ನೂ ಹೋಗಲಾಡಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಯ ರಹಸ್ಯ ಪ್ರಾಯಶ್ಚಿತ್ತವರ್ಣನವೆಂಬ
ಇನ್ನೂರ ಮೂವತ್ತೈದನೆಯ ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಟ್‌ತ್ರಿಂಶದಧಿಕದ್ವಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ಕರ್ಮಾಣಿ ಶ್ರೋತುಮಿಚ್ಛಾಮೋ ಯೈಃ ಪಾಪಂ ವಿಪ್ರಣಶ್ಯತಿ ।
ಪ್ರಾಪ್ನೋತ್ಯಭ್ಯುದಯಂ ಚೈವ ಪುರುಷಃ ಪಕ್ಷಿಸತ್ತಮ || ೧ ||

|| ಹಂಸ ಉವಾಚ ||

ತ್ರ್ಯಹಂ ಪ್ರಾತಃ ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಂ ।
ತ್ರ್ಯಹಂ ಪರಂ ಚ ನಾಶ್ನೀಯಾತ್ಪ್ರಾಜಾಪತ್ಯಂ ಚರನ್ ದ್ವಿಜಃ || ೨ ||

ಗೋಮೂತ್ರಂ ಗೋಮಯಂ ಕ್ಷೀರಂ ದಧಿ ಸರ್ಪಿಃ ಕುಶೋದಕಂ ।
ಏಕರಾತ್ರೋಪವಾಸಶ್ಚ ಕೃಚ್ಛ್ರಂ ಸಾಂತಪನಂ ಸ್ಮೃತಂ || ೩ ||

ಇನ್ನೂರ ಮೂವತ್ತಾರನೆಯ ಅಧ್ಯಾಯ.

೧-೪. ಋಷಿಗಳು ಪ್ರಶ್ನೆಮಾಡುತ್ತಾರೆ—ಯಾವ ಕರ್ಮಗಳಿಂದ ಪಾಪಗಳು ನಾಶವಾಗುವುವೋ ಅಭ್ಯುದಯವನ್ನೂ ಹೊಂದಬಹುದೋ ಆ ಕರ್ಮಗಳನ್ನು ಕೇಳಿ ತಿಳಿಯಲು ಆಶಿಸುತ್ತೇವೆ. ಹಂಸವು ಹೇಳುತ್ತದೆ. ಪ್ರಾಜಾಪತ್ಯವೆಂಬ ಕೃಚ್ಛ್ರವನ್ನು ಆಚರಿಸುವ ಬ್ರಾಹ್ಮಣನು ಮೊದಲನೆಯ ಮೂರು ದಿನದಲ್ಲಿ ಪ್ರಾತಃಕಾಲ ಮಾತ್ರ ಅನಂತರ ಮೂರು ದಿನಗಳು ಸಾಯಂಕಾಲ ಮಾತ್ರ ಭೋಜನ ಮಾಡಬೇಕು. ಅನಂತರ ಮೂರುದಿನ ಯಾರನ್ನೂ ಯಾಚಿಸದೆ ತಾನಾಗಿ ಒದಗಿದ ಆಹಾರವನ್ನು ಸೇವಿಸಬೇಕು. ಕೊನೆಯ ಮೂರುದಿನದಲ್ಲಿ ಊಟಮಾಡಲೇಬಾರದು. ಒಂದು ದಿನ ಉಪವಾಸಮಾಡಿ ಗೋಮೂತ್ರ, ಗೋಮಯ, ಕ್ಷೀರ, ಮೊಸರು, ತುಪ್ಪ

ಏಕೈಕಂ ಗ್ರಾಸಮಶ್ನೀಯಾತ್ ತ್ರ್ಯಹಾಣಿ ತ್ರೀಣಿ ಪೂರ್ವವತ್ ।
ತ್ರ್ಯಹಂ ಚೋಪವಸೇದನ್ತ್ಯಮತಿಕೃಚ್ಛ್ರಂ ಚರನ್ ದ್ವಿಜಃ ॥ ೪ ॥

ತಪ್ತಕೃಚ್ಛ್ರಂ ಚರನ್ವಿಪ್ರೋ ದಧಿಕ್ಷೀರ ಘೃತಾನಿಲಾನ್ ।
ಪ್ರತಿತ್ರ್ಯಹಂ ಪಿಬೇದುಷ್ಣಂ ಸಕೃತ್ಸ್ನಾಯೀ ಸಮಾಹಿತಃ ॥ ೫ ॥

ಯತಾತ್ಮನೋಽಪ್ರಮತ್ತಸ್ಯ ದ್ವಾದಶಾಹಮಭೋಜನಂ ।
ಪರಾಕೋ ನಾಮ ಕೃಚ್ಛ್ರೋಽಯಂ ಸರ್ವಪಾಪಾಪನೋದನಃ ॥ ೬ ॥

ಯಥಾಕಥಂಚಿತ್ಪಿಂಡಾನಾಂ ತಿಸ್ರೋಽಶೀತೀಃ ಸಮಾಹಿತಃ ।
ಮಾಸೇನಾಶ್ನನ್ ಹವಿಷ್ಯಸ್ಯ ಚಂದ್ರಸ್ಯೈತಿ ಸಲೋಕತಾಂ ॥ ೭ ॥

ಮಹಾವ್ಯಾಹೃತಿಭಿಃ ಹೋಮಃ ಕರ್ತವ್ಯಃ ಸ್ವಯಮನ್ವಹಂ ।
ಅಹಿಂಸಾಸತ್ಯಮಕ್ರೋಧಮಾರ್ಜವಂ ಚ ಸಮಾಚರೇತ್ ॥ ೮ ॥

ದಕ ಘೃತಗಳೆಂಬ ಪಂಚಗವ್ಯಪ್ರಾಶನವು ಸಾಂತಪನಕೃಚ್ಛ್ರವೆನಿಸುತ್ತದೆ. ಅತಿಕೃಚ್ಛ್ರವನ್ನು ಆಚರಿಸುವ ಬ್ರಾಹ್ಮಣನು ಮೂರುದಿನ ಒಂದೊಂದೇ ಗ್ರಾಸವನ್ನು ಭುಂಜಿಸಬೇಕು. ಅನಂತರ ಮೂರುದಿನ ಮೊದಲಿನಂತೆ ಪ್ರಾತಃಸಾಯಂಕಾಲ ಮಾತ್ರ. ಕೊನೆಯ ಮೂರುದಿನ ಉಪವಾಸವಿರಬೇಕು.

೫–೧೧. ತಪ್ತಕೃಚ್ಛ್ರವನ್ನು ಆಚರಿಸುವ ಬ್ರಾಹ್ಮಣನು ಮೊಸರು, ಹಾಲು, ಆಜ್ಯ, ವಾಯು ಇವುಗಳಲ್ಲಿ ಮೊದಲನೆಯ ಮೂರನ್ನೂ ಉಷ್ಣಮಾಡಿ ಮೂರು ಮೂರು ದಿನಗಳು ಸೇವಿಸಿ ಕೊನೆಯ ಮೂರು ದಿನದಲ್ಲಿ ವಾಯುಭಕ್ಷ(ಉಪವಾಸಿ)ನಾಗಿರಬೇಕು. ಒಂದೇ ಸಲ ಸ್ನಾನಮಾಡುತ್ತಾ ಜಿತೇಂದ್ರಿಯನಾಗಿಯೂ ಇರಬೇಕು. ಜಾಗರೂಕನಾಗಿ ಈ ಹನ್ನೆರಡು ದಿನಗಳಲ್ಲಿಯೂ ಭೋಜನಮಾಡದೇ ಇದ್ದು ನಡೆಸುವ ಕೃಚ್ಛ್ರಕ್ಕೆ ಪರಾಕವೆಂದು ಹೆಸರು. ಇದು ಸರ್ವಪಾಪಗಳಿಗೂ ನಾಶಕವಾಗುತ್ತದೆ. ಯಾವುದಾದರೊಂದು ಕಾಲದಲ್ಲಿ ಪಿಂಡರೂಪಗಳಾದ ಇನ್ನೂರನಲವತ್ತು ಹವಿಷ್ಯ ಗ್ರಾಸಗಳನ್ನು ಒಂದು ತಿಂಗಳಲ್ಲಿ ಸೇವಿಸಿ ಜಿತೇಂದ್ರಿಯನಾಗಿದ್ದಲ್ಲಿ ಅವನು ಚಂದ್ರನ ಸಾಲೋಕ್ಯವನ್ನೇ ಹೊಂದುತ್ತಾನೆ. ಮಹಾವ್ಯಾಹೃತಿ

ತ್ರಿರಹ್ನಿ ತ್ರಿರ್ನಿಶಾಯಾಂ ಚ ಸವಾಸಾ ಜಲಮಾವಿಶೇತ್ ।
ಸ್ತ್ರೀಶೂದ್ರಪತಿತಾಂಶ್ಚೈವ ನಾಭಿಭಾಷೇತ ಕರ್ಹಿಚಿತ್ ॥ ೯ ॥

ಸ್ಥಾನಾಸನಾಭ್ಯಾಂ ವಿಹರೇದಶಕ್ತೋಽಧಃಶಯೀತ ವಾ ।
ಬ್ರಹ್ಮಚಾರೀ ವ್ರತೀ ಚ ಸ್ಯಾದ್ಗುರುದೇವದ್ವಿಜಾರ್ಚಕಃ ॥ ೧೦ ॥

ಸಾವಿತ್ರೀಂ ಚ ಜಪೇನ್ನಿತ್ಯಂ ಪವಿತ್ರಾಣಿ ಚ ಶಕ್ತಿತಃ ।
ಸರ್ವೇಷ್ವೇವ ವ್ರತೇಷ್ವೇವಂ ಪ್ರಾಯಶ್ಚಿತ್ತಾರ್ಥಮಾದಿತಃ ॥ ೧೧ ॥

ಕೃತ್ವಾ ಪಾಪಂ ಹಿ ಸಂತಪ್ಯ ತಸ್ಮಾತ್ಪಾಪಾತ್ಪ್ರಮುಚ್ಯತೇ ।
ನೈನಂ ಕುರ್ಯಾಂ ಪುನರಿತಿ ನಿವೃತ್ತ್ಯಾ ಪೂಯತೇ ತು ಸಃ ॥ ೧೨ ॥

ಖ್ಯಾಪನೇನಾನುತಾಪೇನ ತಪಸಾಧ್ಯಯನೇನ ಚ ।
ಪಾಪಕೃನ್ಮುಚ್ಯತೇ ಪಾಪಾತ್ತಥಾ ದಾನೇನ ಚಾಪರಃ ॥ ೧೩ ॥

ಗಳಿಂದ ನಿತ್ಯವೂ ತಾನೇ ಹೋಮಮಾಡಬೇಕು. ಅಹಿಂಸಾ, ಸತ್ಯ, ಅಕ್ರೋಧ, ಆರ್ಜವ ಇವನ್ನು ಹೊಂದಿ ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಮೂರು ಮೂರು ಬಾರಿ ಸ್ನಾನಮಾಡುತ್ತಾ ಸ್ತ್ರೀಶೂದ್ರಪತಿತಾದಿಗಳೊಡನೆ ಮಾತನಾಡದೇ ಉಚಿತವಾದ ಆಸನ ಸ್ಥಿತ್ಯಾದಿಗಳಿಂದ ಕೂಡಿರಬೇಕು. ಅಶಕ್ತನಾಗಿದ್ದಲ್ಲಿ ನೆಲದಮೇಲೆಯೇ ಮಲಗಬೇಕು. ಬ್ರಹ್ಮಚರ್ಯವ್ರತಹೊಂದಿ ಗುರುದೇವಬ್ರಾಹ್ಮಣಾದಿಪೂಜಾಪರನಾಗಿಯೂ ಇರಬೇಕು. ಗಾಯತ್ರಿಯನ್ನು ನಿತ್ಯವೂ ಯತಾಶಕ್ತಿ ಜಪಿಸುತ್ತಿರಬೇಕು. ಪ್ರಾಯಶ್ಚಿತ್ತಾರ್ಥವಾಗಿ ಮಾಡುವ ಎಲ್ಲಾ ವ್ರತಗಳಿಗೂ ಈ ವಿಧಾನವು ಮೊದಲು ಮಾಡತಕ್ಕದ್ದು.

೧೨-೧೩. ಪಾಪಮಾಡಿದವನು ಅನಂತರ ತಾನುಮಾಡಿದುದು ತಪ್ಪೆಂದು ತಿಳಿದು ಪಶ್ಚಾತ್ತಾಪಪಟ್ಟರೂ ಸಹ ಅವನು ಪಾಪದಿಂದ ಮುಕ್ತನಾಗುತ್ತಾನೆ. ಇಂತಹ ಪಾಪವನ್ನು ಪುನಃ ನಾನುಮಾಡುವುದಿಲ್ಲವೆಂದು ನಿವೃತ್ತಿಹೊಂದಿದರೂ ಅದು ಅವನ ಪವಿತ್ರತೆಗೆ ಕಾರಣವಾಗುತ್ತದೆ. ಕೆಲವು ಪಾಪಗಳು ಪ್ರಕಟಿಸುವುದರಿಂದೂ, ಪಶ್ಚಾತ್ತಾಪದಿಂದಲೂ, ತಪಸ್ಸಿನಿಂದಲೂ, ಅಧ್ಯಯನದಿಂದಲೂ, ಕೆಲವು ಪಾಪಗಳು ದಾನದಿಂದಲೂ ಶಾಂತಿಹೊಂದುತ್ತವೆ. ಯಾವ ಪ್ರಾಯಶ್ಚಿತ್ತಕರ್ಮವನ್ನು ಮಾಡಿದರೂ

ಯಸ್ಮಿನ್ ಕರ್ಮಣ್ಯಪಿ ಕೃತೇ ಮನಸಃ ಸ್ಯಾದಲಾಘವಂ ।
ತಸ್ಮಿಂಸ್ತಾವತ್ತಪಃ ಕುರ್ಯಾದ್ಯಾವತ್ತುಷ್ಟಿಕರಂ ಭವೇತ್ ॥ ೧೪ ॥

ಪಾಪಸ್ಯನಾಶಸ್ತಪಸಾಹಿವಿಧೇಯೋ
ಧರ್ಮಸ್ಯ ವೃದ್ಧಿಸ್ತಪಸಾ ವಿಧೇಯಾ ।
ಪಾಪಪ್ರಣಾಶೇ ತ್ವಥ ಧರ್ಮವೃದ್ಧ್ಯಾ
ಕಾಮಾಃ ಸಮೃಧ್ಯಂತಿ ನರಸ್ಯ ವಿಪ್ರಾಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಕೃಚ್ಛ್ರಸಾಂತಪನಾದಿ
ಪ್ರಾಯಶ್ಚಿತ್ತವರ್ಣನೋ ನಾಮ
ಷಟ್ತ್ರಿಂಶದಧಿಕದ್ವಿಶತತಮೋಽಧ್ಯಾಯಃ

ಮನಸ್ಸಿಗೆ ಉಲ್ಲಾಸವುಂಟಾಗುವುದಿಲ್ಲವೋ ಅಂತಹ ಕರ್ಮಗಳ ವಿಷಯದಲ್ಲಿ ಮನಸ್ಸಿಗೆ ತುಷ್ಟಿಯುಂಟಾಗುವವರೆಗೂ ತಪಸ್ಸನ್ನು ಮಾಡಿಯೇ ಮಾಡಬೇಕು. ಪಾಪನಾಶವನ್ನು ತಪಸ್ಸಿನಿಂದಲೇ ಸಂಪಾದಿಸಬೇಕು. ಧರ್ಮದ ವೃದ್ಧಿಯೂ ತಪಸ್ಸಿನಿಂದಲೇ ಆಗಬೇಕು. ಪಾಪನಾಶಉಂಟಾಗಿ ಧರ್ಮವೂ ವೃದ್ಧಿಹೊಂದಿದಲ್ಲಿ ಮನುಷ್ಯನ ಎಲ್ಲಾ ಮನೋರಥಗಳೂ ಸಿದ್ಧಿಸುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯ ಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಹಂಸಗೀತೆಯ ಕೃಚ್ಛ್ರಸಾಂತಪನಾದಿಪ್ರಾಯಶ್ಚಿತ್ತ
ವರ್ಣನವೆಂಬ ಇನ್ನೂರಮೂವತ್ತಾರನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತತ್ರಿಂಶದಧಿಕದ್ವಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಕರ್ಮಣಾ ಕೇನ ಪುರುಷಃ ಕಿಮಾಪ್ನೋತಿ ಮಹಾಮತೇ ।
ಏತಂ ನಸ್ಸಂಶಯಂ ಛಿನ್ಧಿ ದ್ವಿಜಾನಾಂ ದ್ವಿಜಸತ್ತಮ ॥ ೧ ॥

॥ ಹಂಸ ಉವಾಚ ॥

ದಾನೇನ ಭೋಗೀ ಭವತಿ ತಪಸಾ ವಿಂದತೇ ಮಹಃ ।
ವೃದ್ಧೋಪಸೇವಯಾ ವಿಪ್ರಾಃ ಪ್ರಾಜ್ಞೋ ಭವತಿ ಮಾನವಃ ॥ ೨ ॥

ಯಜ್ಞೇನ ಲೋಕಾನಾಪ್ನೋತಿ ಪಾಪನಾಶಂ ಹುತೇನ ಚ ।
ಜಪ್ಯೇನ ಕಾಮಾನಾಪ್ನೋತಿ ಸತ್ಯೇನ ಚ ಪರಾಂಗತಿಂ ॥ ೩ ॥

ಇನ್ನೂರ ಮೂವತ್ತೇಳನೆಯ ಅಧ್ಯಾಯ

೧–೪. ಋಷಿಗಳು ಪ್ರಶ್ನೆಮಾಡುತ್ತಾರೆ:—ಪುರುಷನಿಗೆ ಯಾವ ಯಾವ ಕರ್ಮಾಚರಣೆಯಿಂದ ಯಾವ ಯಾವ ಫಲವುಂಟಾಗುತ್ತದೆ. ಜ್ಞಾನಿಯಾದ ನೀನು ಬ್ರಾಹ್ಮಣರಾದ ನಮ್ಮ ಈ ಸಂಶಯವನ್ನು ಹೋಗಲಾಡಿಸಬೇಕು ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಮನುಷ್ಯನು ದಾನದಿಂದ ಭೋಗಿಯಾಗುತ್ತಾನೆ. ತಪಸ್ಸಿನಿಂದ ತೇಜಶ್ಶಾಲಿಯಾಗುತ್ತಾನೆ. ವೃದ್ಧರ ಸೇವೆಯಿಂದ ಪ್ರಾಜ್ಞನಾಗುತ್ತಾನೆ. ಯಜ್ಞದಿಂದ ಅನೇಕ ಲೋಕಗಳನ್ನು ಹೊಂದುತ್ತಾನೆ ಹೋಮದಿಂದ ಪಾಪನಾಶ ಹೊಂದುತ್ತಾನೆ. ಜಪದಿಂದ ಇಷ್ಟವೃದ್ಧಿಯನ್ನು ಹೊಂದುತ್ತಾನೆ. ಸತ್ಯಸೇವೆಯಿಂದ

ಸ್ನಾನೇನ ಶುದ್ಧಿಮಾಪ್ನೋತಿ ಪ್ರಾಣಯಾಮಾದ್ವಿಶೇಷತಃ ।
ಧ್ಯಾನೇನ ಧಾರಣಾಭಿಶ್ಚ ಪದಮಾಪ್ನೋತ್ಯನುತ್ತಮಂ ॥ ೪ ॥

ದಮೇನ ಸರ್ವಮಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ ।
ಶೌಚೇನ ದೇವಾಃ ಪ್ರೀಯನ್ತೇ ಪ್ರೀಯನ್ತೆ ಚೋಪವಾಸತಃ ॥ ೫ ॥

ಉಪವಾಸಪ್ರಶಸ್ತಾನಾಂ ಕಾಮಾವಾಪ್ತಿರ್ಧ್ರುವಂ ಭವೇತ್ ।
ದದಾತಿ ವಿಪುಲಾನ್ ಭೋಗಾನ್ ಸಂಗ್ರಾಮೇಷ್ವಪಲಾಯಿನಾಂ ॥ ೬ ॥

ಮಧುಮಾಂಸನಿವೃತ್ತೋಽಪಿ ಪರಂ ಸೌಖ್ಯಮುಪಾಶ್ನುತೇ ।
ಅಹಿಂಸಯಾ ತ್ವರೋಗೀ ಸ್ಯಾದ್ದೀರ್ಘಾಯುಶ್ಚಾಪ್ಯಹಿಂಸಯಾ ॥ ೭ ॥

ರೂಪಲಾವಣ್ಯಸೌಭಾಗ್ಯ ಧನಧಾನ್ಯಯುತಃ ಸದಾ ।
ತೀರ್ಥಾನುಸರಣಾದ್ವಿಪ್ರಾಃ ಪಾಪನಾಶಮವಾಪ್ನುಯಾತ್ ॥ ೮ ॥

ಉತ್ತಮಗತಿಯನ್ನು ಹೊಂದುತ್ತಾನೆ. ಸ್ನಾನದಿಂದ ಶುದ್ಧಿಯನ್ನೂ ಪ್ರಾಣಾಯಾಮ ದಿಂದ ವಿಶೇಷ ಶುದ್ಧಿಯನ್ನೂ ಹೊಂದುತ್ತಾನೆ. ಧ್ಯಾನಧಾರಣಾದಿಗಳಿಂದ ಉತ್ತಮ ವಾದ ಸ್ಥಾನವನ್ನು ಹೊಂದುತ್ತಾನೆ.

೫–೭. ಬಹ್ಯೇಂದ್ರಿಯನಿಗ್ರಹದಿಂದ ಮನಸ್ಸಿಗೆ ಇಷ್ಟವಾದ ಎಲ್ಲವನ್ನೂ ಹೊಂದುತ್ತಾನೆ. ಶೌಚದಿಂದಲೂ, ಉಪವಾಸದಿಂದಲೂ ದೇವತೆಗಳು ಪ್ರೀತಿ ಹೊಂದುತ್ತಾರೆ. ಉಪವಾಸದಿಂದ ಬಳಲಿದವರಿಗೆ ಇಷ್ಟಪ್ರಾಪ್ತಿಯು ಆಗಿಯೇ ಆಗುತ್ತದೆ. ಯುದ್ಧದಲ್ಲಿ ಹಿಂದಿರುಗದೆ ಇರುವವರಿಗೆ ಹೆಚ್ಚಾದ ಭೋಗಗಳುಂಟಾ ಗುತ್ತವೆ. ಮಧುಮಾಂಸಗಳಿಂದ ನಿವೃತ್ತಿಹೊಂದಿದವನು ಹೆಚ್ಚಾಗಿ ಸೌಖ್ಯ ಹೊಂದುತ್ತಾನೆ. ಅಹಿಂಸೆಯಿಂದ ಅರೋಗಿಯಾಗಿಯೂ ದೀರ್ಘಾಯುಶ್ಶಾಲಿ ಯಾಗಿಯೂ ಆಗುತ್ತಾನೆ. ರೂಪ, ಲಾವಣ್ಯ, ಸೌಭಾಗ್ಯ, ಧನ, ಧಾನ್ಯಾದಿ ಗಳಿಂದಲೂ ಯಾವಾಗಲೂ ಪೂರ್ಣನಾಗುತ್ತಾನೆ.

೮–೧೩. ತೀರ್ಥಗಳಸೇವೆಯಿಂದ ಪಾಪನಾಶಹೊಂದುತ್ತಾನೆ. ಸರ್ವಪಾಪ ನಾಶಹೊಂದಿ ಇಷ್ಟಗಳಾದ ಯಾವಲೋಕವನ್ನಾದರೂ ಹೊಂದುತ್ತಾನೆ. ಆಶ್ರಯ

ಸರ್ವಕಲ್ಮಷಹೀನಶ್ಚ ಯಾನ್ ಲೋಕಾನ್ಮನಸೇಚ್ಛತಿ ।
ಪ್ರತಿಶ್ರಯಪ್ರದಾನೇನ ಸ್ಥಾನಮಾಪ್ನೋತ್ಯನುತ್ತಮಂ ॥ ೯ ॥

ಪೂಜ್ಯಪೂಜಯಿತಾ ವಿಪ್ರಾ ಯಶಸಾ ಯುಜ್ಯತೇ ನರಃ ।
ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ॥ ೧೦ ॥

ಸಮಂ ಕೃತ್ವಾ ವಿವರ್ಧನ್ತೇ ಕೀರ್ತಿರಾಯುರ್ಯಶೋ ಬಲಂ ॥ ೧೧ ॥

ಋತುಕಾಲಾದೃತೇ ಭಾರ್ಯಾಂ ತಥೈವ ಪರಿವರ್ಜಯೇತ್ ।
ಸರ್ವಕಾಮಾನವಾಪ್ನೋತಿ ಬ್ರಹ್ಮಲೋಕಂ ಚ ಗಚ್ಛತಿ ॥ ೧೨ ॥

ಉಭೌ ಕಾಲೌ ತು ಭುಂಜಾನಸ್ತ್ವನ್ತರಾ ಪರಿವರ್ಜಯೇತ್ ।
ಪಾನೀಯಮಪಿ ವಿಪ್ರೇಂದ್ರಾ ಬ್ರಹ್ಮಲೋಕಂ ಪ್ರಪದ್ಯತೇ ॥ ೧೩ ॥

ಅನ್ನೈನ್ನೈವ ವಿಧಾನೇನ ದೇಶಕಾಲಾಶನೋ ನರಃ ।
ಸರ್ವಾನ್ ಕಾಮಾನವಾಪ್ನೋತಿ ಗತಿಮಾಪ್ನೋತ್ಯಭೀಪ್ಸಿತಾಂ ॥ ೧೪ ॥

ದಾನದಿಂದ ಉತ್ತಮಸ್ಥಾನ ಹೊಂದುತ್ತಾರೆ ಪೂಜ್ಯರ ಪೂಜೆಯಿಂದ ಯಶಸ್ಸನ್ನು ಹೊಂದುತ್ತಾನೆ. ವಂದನ ಸ್ವಭಾವದಿಂದ ಕೂಡಿ ನಿತ್ಯವೂ ವೃದ್ಧಸೇವೆಯಲ್ಲಿ ನಿರತನಾಗಿರುವವನಿಗೆ ಕೀರ್ತಿ ಆಯುಸ್ಸು, ಯಶಸ್ಸು, ಬಲ ಇವೆಲ್ಲವೂ ಸಮವಾಗಿ ವೃದ್ಧಿ ಹೊಂದುತ್ತವೆ. ಋತುಕಾಲಹೊರತು ಇತರ ಕಾಲಗಳಲ್ಲಿ ಭಾರ್ಯಾಗಮನವನ್ನೂ ತ್ಯಜಿಸಬೇಕು. ಇದರಿಂದ ಎಲ್ಲಾ ಮನೋರಥಸಿದ್ಧಿಯೂ ಬ್ರಹ್ಮಲೋಕಪ್ರಾಪ್ತಿಯೂ ಉಂಟಾಗುತ್ತದೆ. ಪ್ರಾತಃ ಸಾಯಂ ಎಂಬ ಎರಡು ಕಾಲದಲ್ಲಿಯೇ ಭುಂಜಿಸಬೇಕು ಮಧ್ಯದಲ್ಲಿ ಭೋಜನವನ್ನಾಗಲಿ, ಜಲಪಾನವನ್ನಾಗಲಿ ಮಾಡಬಾರದು ಇದರಿಂದ ಬ್ರಹ್ಮಲೋಕಪ್ರಾಪ್ತಿಯೂ ಉಂಟಾಗುತ್ತದೆ.

೧೪-೧೫ ಈ ವಿಧಾನದಿಂದ ದೇಶಕಾಲಗಳಿಗೆ ತಕ್ಕಂತೆ ಆಹಾರ ಸೇವಿಸುವವನು ಎಲ್ಲಾ ಮನೋರಥಗಳನ್ನೂ ಹೊಂದಿ ಅಭಿಮತಗತಿಯನ್ನೂ ಹೊಂದುತ್ತಾನೆ. ಹಾಗೆಯೇ ಭೋಜನಕಾಲದಲ್ಲಿ ಮೌನವನ್ನು ಆಚರಿಸುವವನಿಗೆ

ತಥಾ ಭೋಜನಕಾಲೇ ತು ಮೌನಂ ಯಸ್ತು ಸಮಾಚರೇತ್ ।
ಉಪವಾಸಫಲಂ ತಸ್ಯ ಪ್ರತ್ಯಹಂ ಭೋಜನೇ ಸ್ಮೃತಂ ॥ ೧೫ ॥

ಸರ್ವಾನ್ ಕಾಮಾನವಾಪ್ನೋತಿ ಮೌನೀ ನಕ್ತಾಶನಃ ಸಕೃತ್ ।
ನಾಪ್ನೋತಿ ನಾರಕಂ ದುಃಖಂ ನಿತ್ಯಸ್ನಾಯೀ ನರೋಬಹಿಃ ॥ ೧೬ ॥

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಶ್ರಾನ್ತಾಯಾದೃಷ್ಟಪೂರ್ವಾಯ ತಸ್ಯ ಪುಣ್ಯಫಲಂ ಮಹತ್ ॥ ೧೭ ॥

ಪಾದ್ಯಮಾಸನಮೇವಾಥ ದೀಪಮನ್ನಂ ಪ್ರತಿಶ್ರಯಂ ।
ದದ್ಯಾದತಿಥಿಪೂಜಾರ್ಥಂ ಯಜ್ಞಾಃ ಪಂಚ ಸುದಕ್ಷಿಣಾಃ ॥ ೧೮ ॥

ಚಕ್ಷುರ್ದದ್ಯಾನ್ಮನೋದದ್ಯಾದ್ವಾಚಂ ದದ್ಯಾಚ್ಚ ಸೂನೃತಾಂ ।
ಅನುವ್ರಜೇದುಪಾಸೀತ ಯಜ್ಞಾಃ ಪಂಚ ಸುದಕ್ಷಿಣಾಃ ॥ ೧೯ ॥

ಸ್ಥಂಡಿಲೇಷು ಶಯಾನಾನಾಂ ಗೃಹಾಣಿ ಶಯನಾನಿ ಚ ।
ಚೀರವಲ್ಕಲಸಂವೀತವಾಸಾಂಸ್ಯಾಭರಣಾನಿ ಚ ॥ ೨೦ ॥

ಉಪವಾಸದ ಫಲವೇ ಉಂಟಾಗುತ್ತದೆ. ನಿತ್ಯವೂ ಈ ಮೌನವು ಭೋಜನಕಾಲದಲ್ಲಿ ವಿಹಿತವಾಗಿದೆ. ರಾತ್ರಿಯಲ್ಲಿ ಒಂದುಬಾರಿ ಮಾತ್ರ ಮೌನದಿಂದ ಭುಂಜಿಸುವವನು ಎಲ್ಲಾ ಇಷ್ಟಸಿದ್ಧಿಗಳನ್ನೂ ಹೊಂದುತ್ತಾನೆ. ನಿತ್ಯವೂ ಹೊರಗೇ ಸ್ನಾನಮಾಡುವವನು ನರಕದುಃಖಕ್ಕೆ ಭಾಗಿಯಾಗುವುದಿಲ್ಲ. ಯಾವನು ಮಾರ್ಗಸ್ಥನಾಗಿ ಬಳಲಿರುವ ಅಪರಿಚಿತನಿಗೆ ಸಂತೋಷವುಂಟಾಗುವಂತೆ ಅನ್ನದಾನಮಾಡುತ್ತಾನೆಯೋ ಅವನಿಗೆ ಪುಣ್ಯಫಲವು ಅಪರಿಮಿತವಾಗಿ ಉಂಟಾಗುತ್ತದೆ. ಅತಿಥಿಪೂಜೆಗಾಗಿ ಪಾದ್ಯ, ಆಸನ, ದೀಪ, ಅನ್ನ, ವಿಶ್ರಾಂತಿಗೆ ಅರ್ಹವಾದ ಸ್ಥಲ, ಅಥವಾ ವಸ್ತ್ರಾದಿಗಳು, ಇವುಗಳನ್ನು ಕೊಡಬೇಕು ಇವು ಒಳ್ಳೆಯ ದಕ್ಷಿಣೆಯೊಡಗೂಡಿದ ಪಂಚಯಜ್ಞಗಳೇ ಆಗುತ್ತವೆ. ಮತ್ತು ಅತಿಥಿಯ ವಿಷಯದಲ್ಲಿ ಸ್ನೇಹಪೂರ್ವಕವಾದ ದರ್ಶನ, ಒಳ್ಳೆಯ ಹಿತಕರವಾದ ಮನಸ್ಸು, ಸತ್ಯವಾಗಿಯೂ ಪ್ರಿಯವಾಗಿಯೂ ಇರುವ ವಾಣಿ, ಅನುಗಮನ, ಸೇವಾ ಈ ಐದೂ ಸುದಕ್ಷಿಣೆಯುಳ್ಳ ಪಂಚಯಜ್ಞಗಳೇ ಆಗುತ್ತವೆ.

೨೦-೨೪. ಸ್ಥಂಡಿಲದಲ್ಲಿ ಮಲಗಿ ನಿಯಮಪರನಾಗಿ ನಾರುಮಡಿಯನ್ನು ಧರಿಸಿರುವವರಿಗೆ ಗೃಹ ಮತ್ತು ಶಯನಾದಿಗಳನ್ನೂ ಆಭರಣವನ್ನೂ ಯೋಗಪದನಾದ

ವಾಹನಾಸನಯಾನಾನಿ ಯೋಗಾತ್ಮನಿ ತಪೋಧನೇ ।
ಅಗ್ನೀನುಪಶಯಾನಸ್ಯ ರಾಜಪೌರುಷಮುಚ್ಯತೇ ॥ ೨೧ ॥

ರಸಾನಾಂ ಪ್ರತಿಸಂಹಾರೇ ಸೌಭಾಗ್ಯಮಧಿಗಚ್ಛತಿ ।
ಆಮಿಷಪ್ರತಿಸಂಹಾರೇ ಸರ್ವಾನ್ ಕಾಮಾನವಾಪ್ನುಯಾತ್ ॥ ೨೨ ॥

ಅವಾಕ್ ಶಿರಾಸ್ತು ಯೋಲಂಬೇತ್ತೋಯವಾಸಂ ಚ ಯೋವಸೇತ್ ।
ಸತತಂ ಚೈಕಶಾಯೀ ಚ ಲಭತೇ ಚೇಪ್ಸಿತಾಂ ಗತಿಂ ॥ ೨೩ ॥

ವೀರಾಸನಂ ವೀರಶಯ್ಯಾಂ ವೀರಸ್ಥಾನಮುಪಾಸತಃ ।
ಅಕ್ಷಯಾಸ್ತಸ್ಯ ವೈಲೋಕಾಃ ಸರ್ವಕಾಮಪ್ರದಾಃ ಸ್ಮೃತಾಃ ॥ ೨೪ ॥

ಧನಂ ಭವತಿ ದಾನೇನ ಮೌನೇನಾಜ್ಞಾಂ ಪ್ರಯಚ್ಛತಿ ।
ಉಪಭೋಗಾಂಶ್ಚ ತಪಸಾ ಬ್ರಹ್ಮಚರ್ಯೇಣ ಜೀವಿತಂ ॥ ೨೫ ॥

ತಪಸ್ವಿಗೆ ಯೋಗಕ್ಕೆ ತಕ್ಕ ವಾಹನ, ಆಸನ ಇತ್ಯಾದಿಗಳನ್ನೂ ದಾನಮಾಡಿ ತಪಸ್ವಿಗಳ ಅಗ್ನಿಯ ಸಮೀಪದಲ್ಲಿಯೇ ಶುಶ್ರೂಷೆಗಾಗಿ ಮಲಗುವವನಿಗೆ ರಾಜನಂತಹ ಪರಾಕ್ರಮವುಂಟಾಗುತ್ತದೆ. ಮಧುರಾದಿ ರಸಗಳನ್ನು ನಿರೋಧಮಾಡಿ ಜಯಿಸಿದವನು ಸೌಭಾಗ್ಯಹೊಂದುತ್ತಾನೆ. ಮಾಂಸವನ್ನು ನಿರೋಧಿಸಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ. ತಲೆಯನ್ನು ಕೆಳಗೆಮಾಡಿಕೊಂಡು ಜೋಲಾಡುವಂತಹ ತಪಸ್ಸನ್ನೂ ನೀರಿನೊಳಗೇ ವಾಸಮಾಡುವ ತಪಸ್ಸನ್ನೂ ಯಾವನು ಮಾಡುತ್ತಾನೆಯೋ ಯಾವಾಗಲೂ ಬ್ರಹ್ಮಚರ್ಯದಿಂದ ಒಬ್ಬನಾಗಿಯೇ ಮಲಗುತ್ತಾನೆಯೋ ಅವನೂ ಸಹ ಇಷ್ಟವಾದ ಗತಿಯನ್ನು ಹೊಂದುತ್ತಾನೆ. ವೀರಾಸನವನ್ನೂ, ವೀರಶಯನವನ್ನೂ, ವೀರಸ್ಥಾನವನ್ನೂ ಯಾವನು ಸೇವಿಸುತ್ತಾನೆಯೋ ಅವನಿಗೆ ಎಲ್ಲಾ ಲೋಕಗಳೂ ಅಕ್ಷಯಗಳಾಗಿಯೂ ಸರ್ವಫಲ ಪ್ರದವಾಗಿಯೂ ಆಗುತ್ತವೆ.

೨೫-೨೬. ವಿಹಿತವಾದ ದಾನದಿಂದ ಧನವುಂಟಾಗುತ್ತದೆ. ಮೌನವು ಆಜ್ಞಾಶಕ್ತಿಯನ್ನುಂಟುಮಾಡುತ್ತದೆ. ತಪಸ್ಸಿನಿಂದ ಬಹುವಿಧಗಳಾದ ಭೋಗಸಾಮಗ್ರಿಗಳೂ ಬ್ರಹ್ಮಚರ್ಯದಿಂದ ಒಳ್ಳೆಯ ಜೀವಿತವೂ ಉಂಟಾಗುತ್ತವೆ.

ರೂಪಸೌಭಾಗ್ಯೈಶ್ವರ್ಯಮಾರೋಗ್ಯಮಹಿಂಸಾ ಫಲಮಶ್ನುತೇ ।
ಫಲಂ ಫಲಾಶಿನಾಂ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ಫಲಂ ॥ ೨೬ ॥

ಪುಷ್ಪಾಶಿನಾಂ ತಥೈಶ್ವರ್ಯಂ ಧನಂ ಶಾಕಾಶಿನಾಂ ಮಹತ್ ।
ಪಯೋಭಕ್ಷ್ಯಾದಿವಂ ಯಾಂತಿ ಅಬ್ಭಕ್ಷ್ಯಾಶ್ಚಾಮಿತಾಂ ಗತಿಂ ॥ ೨೭ ॥

ದಂತೋಲೂಖಲಿಕೋ ವಿಪ್ರೋ ಯಶ್ಚಾಪ್ಯುಂಛೇನ ಜೀವತಿ ।
ಕಾಪೋತೀಂ ಚಾಶ್ರಿತೋ ವೃತ್ತಿಂ ಯಥೇಷ್ಟಾಂಗತಿಮಾಪ್ನುಯಾತ್ ॥ ೨೮ ॥

ಪ್ರಾಯೋಪವೇಶನಾದ್ರಾಜ್ಯಂ ಸರ್ವತ್ರ ಫಲಮಶ್ನುತೇ ।
ಸ್ವರ್ಗಂ ಸತ್ಯೇನ ಲಭತೇ ದೀಕ್ಷಯಾ ಕುಲಮುತ್ತಮಂ ॥ ೨೯ ॥

ಗವಾಢ್ಯಾಃ ಶಾಕದೀಕ್ಷಾಯಾಃ ಸ್ವರ್ಗಗಾಮಿ ತೃಣಾಶನಃ ॥ ೩೦ ॥

ತ್ರ್ಯಹಸ್ತ್ರಿಷವಣಂ ಸ್ನಾತ್ವಾ ವಾಯುಂ ಪೀತ್ವಾ ಕ್ರತುಂ ಲಭೇತ್ ।
ಯಜ್ಞಯಾಜೀ ತಥಾಪ್ನೋತಿ ಯಾನ್ ಲೋಕಾನ್ಮನಸೇಚ್ಛತಿ ॥ ೩೧ ॥

ಅಹಿಂಸೆಯು ರೂಪ ಐಶ್ವರ್ಯ ಆರೋಗ್ಯ ಇವನ್ನು ಉಂಟುಮಾಡುತ್ತದೆ. ಫಲಾಶನದಿಂದ ವ್ರತವನ್ನು ಹೊಂದಿದವರಿಗೆ ರಾಜ್ಯಲಾಭವೇ ಫಲವಾಗಿಯೂ, ಪರ್ಣಾಶನರಿಗೆ ಸ್ವರ್ಗವೇ ಫಲವಾಗಿಯೂ, ಪುಷ್ಪಾಶನರಿಗೆ ಐಶ್ವರ್ಯವೂ, ಶಾಕಾಶನರಿಗೆ ಹೆಚ್ಚಾದ ಧನಲಾಭವೂ ಉಂಟಾಗುತ್ತವೆ. ಕ್ಷೀರಪಾನದಿಂದಲೇ ತಪಸ್ವಿಗಳಾಗಿದ್ದವರು ಸ್ವರ್ಗವನ್ನು ಹೊಂದುತ್ತಾರೆ. ಜಲಮಾತ್ರಭಕ್ಷಣೆಯಿಂದಿದ್ದವರು ಅಪರಿಚಿತವಾದ ಉತ್ತಮಗತಿಯನ್ನು ಹೊಂದುತ್ತಾರೆ. ಹಲ್ಲುಗಳಿಂದಲೇ ಭಕ್ಷಿಸುವ ವಿರಕ್ತಜಾತಿಯ ಬ್ರಾಹ್ಮಣನೂ ಉಂಛವೃತ್ತಿಯುಳ್ಳ ಬ್ರಾಹ್ಮಣನೂ, ಪಕ್ಷಿಯಂತೆ ಸಿಕ್ಕಿದ ಆಹಾರದಿಂದ ಜೀವಿಸುವ ಕಪೋತವೃತ್ತಿಯುಳ್ಳ ಬ್ರಾಹ್ಮಣನೂ ಸಹ ಇಷ್ಟವಾದ ಗತಿಗಳನ್ನು ಹೊಂದುತ್ತಾರೆ.

೨೯-೩೧. ಪ್ರಾಯೋಪವೇಶನದಿಂದ ಎಲ್ಲಾ ವಿಧದಲ್ಲಿಯೂ ರಾಜ್ಯಲಾಭವೇ ಉಂಟಾಗುತ್ತದೆ. ಸತ್ಯದಿಂದ ಸ್ವರ್ಗಲಾಭವೂ ದೀಕ್ಷಾನಿಯಮದಿಂದ ಉತ್ತಮಕುಲವೂ ಲಭಿಸುತ್ತದೆ. ಹಸುಗಳನ್ನು ರಕ್ಷಿಸಿ ಗವ್ಯದಿಂದಲೇ ವ್ರತಮಾಡಿದವರು ಶಾಕದೀಕ್ಷಾಫಲವನ್ನೂ ತೃಣಾಶನದಿಂದಿದ್ದವನು ಸ್ವರ್ಗಫಲವನ್ನೂ ಹೊಂದುತ್ತಾರೆ. ಮೂರು ದಿನಗಳು ಮೂರು ಹೊತ್ತೂ ಸ್ನಾನಮಾಡಿ ವಾಯುಭಕ್ಷನಾಗಿದ್ದವನು

ಉಪವಾಸಂ ಚ ದೀಕ್ಷಾಂ ಚಾಪ್ಯಭಿಷೇಕಂ ಚ ವೈ ದ್ವಿಜಾಃ ।
ಕೃತ್ವಾ ದ್ವಾದಶವರ್ಷಾಣಿ ವೀರಸ್ಥಾನಾದ್ವಿಶಿಷ್ಯತೇ || ೩೨ ||

ಅಧೀತ್ಯ ಸರ್ವಾನ್ ವೇದಾನ್ವೈ ಸರ್ವದುಃಖೈರ್ವಿಮುಚ್ಯತೇ ।
ಮಾನಸಂ ಹಿ ಧನಂ ಧರ್ಮಃ ಸ್ವರ್ಗಲೋಕಮವಾಪ್ನುಯಾತ್ || ೩೩ ||

ಯೇನ ಪ್ರೀಣಾತಿ ಪಿತರಂ ತೇನ ಪ್ರೀತಃ ಪ್ರಜಾಪತಿಃ ।
ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ || ೩೪ ||

ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ಬ್ರಹ್ಮಪೂಜಿತಂ ।
ಸರ್ವೇ ತಸ್ಯಾದೃತಾ ಧರ್ಮಾ ಯಸ್ಯೈತೇ ತ್ರಯ ಆದೃತಾಃ || ೩೫ ||

ಅನಾದೃತಾಸ್ತು ತಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ ।
ಗುರು ಶುಶ್ರೂಷಯಾ ವಿದ್ಯಾ ನಿತ್ಯಂ ಶ್ರಾದ್ಧೇಷು ಸನ್ತತಿಃ || ೩೬ ||

ನಿತ್ಯಸ್ನಾಯೀ ಭವೇದ್ವೃಕ್ಷಃ ಸಂಧ್ಯೇ ತು ದ್ವೇ ಜಪನ್ಸದಾ ।
ದ್ವಿಜಶುಶ್ರೂಷಯಾ ರಾಜ್ಯಂ ದ್ವಿಜತ್ವಂ ವಾಪಿ ಪುಷ್ಕಲಂ || ೩೭ ||

ಯಜ್ಞಲಾಭವನ್ನೇ ಹೊಂದುತ್ತಾನೆ. ಅಂತಹ ಯಜ್ಞಯಜನದಿಂದ ಮನಸ್ಸಿಗೆ ಇಷ್ಟವಾದ ಲೋಕಗಳನ್ನೇ ಹೊಂದುತ್ತಾನೆ. ಉಪವಾಸ, ದೀಕ್ಷಾ, ಅಭಿಷೇಕಾದಿಗಳನ್ನು ಹನ್ನೆರಡು ವರ್ಷ ಮಾಡಿದಲ್ಲಿ ವೀರಸ್ಥಾನಕ್ಕಿಂತಲೂ ಮಿಗಿಲಾದ ಸ್ಥಾನ ಹೊಂದುತ್ತಾನೆ. ಸಕಲವೇದಗಳನ್ನೂ ಅಧ್ಯಯನಮಾಡಿದವನು ಸರ್ವದುಃಖಗಳಿಂದಲೂ ಮೋಕ್ಷಹೊಂದುತ್ತಾನೆ ಧರ್ಮವೆಂಬುದು ಮನಸ್ಸಿನ ಧನ ಇದರಿಂದ ಸ್ವರ್ಗಲೋಕವೇ ಉಂಟಾಗುತ್ತದೆ. ಯಾವ ಕೆಲಸದಿಂದ ತಂದೆಯನ್ನು ಪ್ರೀತಿಗೊಳಿಸುತ್ತಾನೆಯೋ ಆಕಾರ್ಯದಿಂದ ಚತುರ್ಮುಖನೇ ಪ್ರೀತಿಹೊಂದುತ್ತಾನೆ. ಯಾವ ಕಾರ್ಯವು ತಾಯಿಗೆ ಪ್ರೀತಿಕರವೋ ಅಂತಹ ಕಾರ್ಯದಿಂದ ಸರ್ವಮಾತೆಯಾದ ಭೂದೇವಿಯೇ ಸಂತುಷ್ಟಳಾಗುತ್ತಾಳೆ.

೩೫–೪೦. ಉಪಾಧ್ಯಾಯನಿಗೆ ಪ್ರೀತಿಕರವಾದ ಕಾರ್ಯದಿಂದ ಪರಬ್ರಹ್ಮವೇ ಪ್ರೀತಿಸಡುತ್ತದೆ. ಈ ಮೂರು ಧರ್ಮಗಳನ್ನೂ ಯಾರು ಪ್ರೀತಿಸಿ ನಡೆಸುತ್ತಾರೆಯೋ ಅವರಿಗೆ ಸರ್ವಧರ್ಮಗಳೂ ಪ್ರೀತಿಯಿಂದ ನಲಿಯುತ್ತವೆ. ಯಾರು ಈ ಧರ್ಮಗಳನ್ನು ಅನಾದರಿಸುತ್ತಾರೆಯೋ ಅವರಿಗೆ ಸರ್ವಧರ್ಮಗಳೂ ನಿಷ್ಫಲಗಳೇ ಆಗು

ದೇವಶುಶ್ರೂಷಯಾ ಕಾಮಾನ್ಯಥೇಷ್ಟಾನ್ಪ್ರಾಪ್ನುಯಾನ್ನರಃ ।
ಸಾಂತ್ವದಃ ಸರ್ವಭೂತಾನಾಂ ಸರ್ವಶೋಕೈಃ ಪ್ರಮುಚ್ಯತೇ ॥ ೩೮ ॥

ಕೇಶಶ್ಮಶ್ರೂನ್ ವಾರಯತಃ ತ್ವಗ್ರ್ಯಾ ಭವತಿ ಸಂತತಿಃ ।
ಗಂಧಮಾಲ್ಯಾನ್ನಿವೃತ್ತ್ಯಾ ತು ಕೀರ್ತಿರ್ಭವತಿಪುಷ್ಕಲಾ ॥ ೩೯ ॥

ಪರಿಚರ್ಯಾರತಃ ಸಮ್ಯಕ್ ನ ರೋಗೈರಭಿಭೂಯತೇ ।
ಗೋಲೋಕಮಾಪ್ನೋತಿ ತಥಾ ಗವಾಂ ಚ ಪರಿಚರ್ಯಯಾ ॥ ೪೦ ॥

ದೇವಮಾಲ್ಯಾಪನಯನಾತ್ ಪಾದಶೌಚಾದ್ದ್ವಿಜಸ್ಯ ತು ।
ಶ್ರಾಂತಸಂವಾಹನಾದ್ವಿಪ್ರಾಃ ಸುಖಮತ್ಯಂತಮಶ್ನುತೇ ॥ ೪೧ ॥

ಆಗುತ್ತವೆ. ಗುರುಶುಶ್ರೂಷೆಯಿಂದ ವಿದ್ಯಾಭಿವೃದ್ಧಿಯೂ, ನಿತ್ಯವೂ ಶ್ರಾದ್ಧಾಚರಣೆಯಿಂದ ಸಂತತಿಸಮೃದ್ಧಿಯೂ ಆಗುತ್ತವೆ. ನಿತ್ಯವೂ ಸ್ನಾನಾದಿಗಳನ್ನು ಮಾಡಿ ಸಂಧ್ಯಾದ್ವಯದಲ್ಲಿಯೂ ಜಪಪರಾಯಣನಾಗಿರುವವನು ದಕ್ಷನಾಗುತ್ತಾನೆ ಬ್ರಾಹ್ಮಣಶುಶ್ರೂಷೆಯಿಂದ ರಾಜ್ಯವೂ ಪುಷ್ಕಲವಾದ ದ್ವಿಜತ್ವವೂ ಉಂಟಾಗುತ್ತದೆ. ದೇವತೆಗಳಶುಶ್ರೂಷೆಯಿಂದ ಯಥೇಷ್ಟಮನೋರಥಗಳನ್ನೂ ಹೊಂದುತ್ತಾನೆ. ಸರ್ವಪ್ರಾಣಿಗಳಲ್ಲಿಯೂ ಸಾಮವೃತ್ತಿಯಲ್ಲಿರುವವನು ಸರ್ವಶೋಕಗಳಿಂದಲೂ ಮುಕ್ತನಾಗುತ್ತಾನೆ. ಗಡ್ಡಮೀಸೆಗಳನ್ನು ಕ್ಷೌರಾದಿಗಳಿಂದ ತಡೆಯುವವನಿಗೆ ಉತ್ತಮವಾದ ಸಂತತಿಯುಂಟಾಗುತ್ತದೆ. ಗಂಧಪುಷ್ಪಾದಿ ಭೋಗ್ಯವಸ್ತುನಿವೃತ್ತಿಯಿಂದ ಸಮೃದ್ಧವಾದ ಕೀರ್ತಿಯುಂಟಾಗುತ್ತದೆ. ಪೂಜ್ಯರ ಪರಿಚರ್ಯೆಯಲ್ಲಿರುವವನಿಗೆ ರೋಗಗಳಿಂದ ಪರಾಭವವುಂಟಾಗುವುದಿಲ್ಲ. ಗೋಸೇವೆಯಿಂದ ಗೋಲೋಕವನ್ನು ಹೊಂದುತ್ತಾನೆ.

೪೧–೪೫. ದೇವತೆಗಳಿಗೆ ಅರ್ಪಿಸಿದ ನಿರ್ಮಾಲ್ಯವನ್ನು ತೆಗೆಯುವ ಸೇವೆಯಿಂದಲೂ, ಬ್ರಾಹ್ಮಣನ ಪಾದಗಳನ್ನು ತೊಳೆಯುವುದರಿಂದಲೂ ಬಳಲಿದವನ

ಜಲೇ ಸಪ್ತಸಹಸ್ರಾಣಿ ಏಕಾದಶ ಹುತಾಶನೇ ।
ಭೃಗುಪ್ರಪಾತೇ ಚ ದಶ ಸಂಗ್ರಾಮೇ ವಿಂಶತಿಸ್ತಥಾ ॥ ೪೨ ॥

ನರೋ ವರ್ಷಸಹಸ್ರಾಣಿ ತನುಂ ತ್ಯಕ್ತ್ವಾ ತು ಮೋದತೇ ।
ಅನಾಶಕೇ ತು ಧರ್ಮಜ್ಞಾಃ ಪರಿಸಂಖ್ಯಾ ನ ವಿದ್ಯತೇ ॥ ೪೩ ॥

ಮೇರೌ ಸಾಧಯತೇ ರಾಜ್ಯಂ ಯಥೇಷ್ಟಂ ಭುವಿ ಜಾಯತೇ ।
ಮಹಾಪ್ರಸ್ಥಾನಮಾವಿಶ್ಯ ಯಥೇಷ್ಟಾಂ ಗತಿಮಾಪ್ನುಯಾತ್ ॥ ೪೪ ॥

ವಹ್ನಿಪ್ರವೇಶೇ ನಿಯತಮಭೀಷ್ಟಂ ಲೋಕಮಶ್ನುತೇ ।
ವಾರುಣಂ ಲೋಕಮಾಪ್ನೋತಿ ತ್ಯಕ್ತ್ವಾಂಭಸಿ ತನುಂ ನರಃ ॥ ೪೫ ॥

ಪಾದಸಂವಾಹನಾದಿಗಳಿಂದಲೂ ಮನುಷ್ಯನು ಬಹು ಸುಖಿಯಾಗುತ್ತಾನೆ. [1]ದೇಹ ತ್ಯಾಗಮಾಡುವವನು ಜಲದಲ್ಲಿ ತ್ಯಜಿಸಿದಲ್ಲಿ ಏಳುಸಾವಿರ ವರ್ಷಗಳೂ ಅಗ್ನಿಯಲ್ಲಿ ತ್ಯಜಿಸಿದಲ್ಲಿ ಹನ್ನೊಂದುಸಾವಿರ ವರ್ಷಗಳೂ, ಪರ್ವತಪ್ರಾಂತದಿಂದ ಬಿದ್ದು ತ್ಯಜಿಸಿದಲ್ಲಿ ಇಪ್ಪತ್ತುಸಾವಿರ ವರ್ಷಗಳೂ ಸುಖಕರವಾದ ಲೋಕದಲ್ಲಿ ಸೇರುತ್ತಾನೆ. ಯಾವುದೊಂದು ನಾಶಕನಿಮಿತ್ತವೂ ಇಲ್ಲದೆ ದೇಹವನ್ನು ತ್ಯಜಿಸಿದಲ್ಲಿ ಅವನ ಸುಖಕ್ಕೆ ಪರಿಮಿತಿಯೇ ಇಲ್ಲ ಮೇರುಪರ್ವತದಲ್ಲಿ ದೇಹತ್ಯಾಗಮಾಡಿದವನು ರಾಜ್ಯವನ್ನು ಸಾಧಿಸುತ್ತಾನೆ. ತನ್ನ ಇಷ್ಟದಂತೆ ಭೂಮಿಯಲ್ಲಿಯೂ ಹುಟ್ಟುತ್ತಾನೆ. [2]ಮಹಾ ಪ್ರಸ್ಥಾನವೆಂಬ ವಿಧಾನವನ್ನು ಪ್ರವೇಶಿಸಿದವನು ತನಗೆ ಇಷ್ಟವಾದ ಗತಿಯನ್ನು ಹೊಂದುತ್ತಾನೆ. ನೀರಿನಲ್ಲಿ ದೇಹತ್ಯಾಗಮಾಡಿದವನು ವರುಣಲೋಕವನ್ನು ಹೊಂದುತ್ತಾನೆ.

1 ಇದು ಅನುಷ್ಠಾನಾಸಮರ್ಥಸ್ಯ ವಾನಪ್ರಸ್ಥಸ್ಯ ಜೀರ್ಯತಃ । ಭೃಗ್ವಗ್ನಿಜಲಸಂಪಾತೈಃ ಮರಣಂ ಪ್ರವಿಧೀಯತೇ ॥ ಎಂಬ ಶಾಸ್ತ್ರಕ್ಕೆ ತಕ್ಕ ಅಧಿಕಾರಿ ವಿಶೇಷಸವಿಷಯಕ. ಇತರರಿಗೆ ಅನ್ವಯಿಸ ತಕ್ಕದ್ದಲ್ಲ ಅನ್ಯಥಾ ಆತ್ಮಹತ್ಯಾದೋಷಕ್ಕೆ ಅವಕಾಶ ಉಂಟಾಗುತ್ತದೆ.—ಮುಂದೆ ಗ್ರಂಥಕಾರರೇ ಇದನ್ನು ಹೇಳುತ್ತಾರೆ.

2 ಮಹಾಪ್ರಸ್ಥಾನವೆಂದರೆ ತಾನಾಗಿಯೇ ಚಿತಿಯನ್ನು ಸ್ಥಾಪಿಸಿಕೊಂಡು ಶರಭಂಗಾದಿಗಳಂತೆ ದೇಹತ್ಯಾಗ ಮಾಡುವಿಕೆ.

ಅನಾರ್ತೋ ವ್ಯಾಧಿರಹಿತೋ ನತ್ಯಜೇದಾತ್ಮನಸ್ತನುಂ ।
ಅಸುರ್ಯಾನಾಮ ತೇ ಲೋಕಾ ಅಂಧೇನ ತಮಸಾ ವೃತಾಃ ॥
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥ ೪೬ ॥

ಅನಿಷ್ಟೈರಾತ್ಮನೋ ಜ್ಞಾತ್ವಾ ಮೃತ್ಯುಕಾಲಮುಪಸ್ಥಿತಂ ।
ವ್ಯಾಧಿತೋ ಭಿಷಜಾ ತ್ಯಕ್ತಃ ಪೂರ್ಣೇ ಚಾಯುಷಿ ವಾಸಕೇ ॥ ೪೭ ॥

ಯಥಾಗಮಾನುಸಾರೇಣ ಸಂತ್ಯಜೇದಾತ್ಮನಸ್ತನುಂ ।
ತಸ್ಮಿನ್ ಕಾಲೇ ತನುತ್ಯಾಗಾದ್ಯಥೋಕ್ತಂ ಫಲಮಶ್ನುಯಾತ್ ॥ ೪೮ ॥

ಆಯುಷಸ್ತು ಪರಂ ವೃಷ್ಟಂ ಮರಣಂ ಬ್ರಾಹ್ಮಣದ್ವಯೋಃ ।
ಕ್ಷತ್ರಿಯಸ್ಯ ತು ಸಂಗ್ರಾಮೆ ಮೃತೇ ಭರ್ತರಿ ಯೋಷಿತಃ ॥ ೪೯ ॥

ಬ್ರಾಹ್ಮಣಾರ್ಥೇ ಗವಾರ್ಥೇ ವಾ ಯಸ್ತ್ಯಜೇದಾತ್ಮನಸ್ತನುಂ ।
ಆತ್ಮಾನಂ ಯೂಪಮುತ್ಸೃಜ್ಯ ಸ ಯಜ್ಞೋಽನನ್ತದಕ್ಷಿಣಃ ॥ ೫೦ ॥

೪೬-೫೦. ಆರ್ತಿ ಮತ್ತು ವ್ಯಾಧಿ ಇಲ್ಲದಿರುವಾಗ ತನ್ನ ದೇಹವನ್ನು ತಾನೇ ತ್ಯಜಿಸಕೂಡದು. ಯಾರು ಅಂತಹ ಕಾರಣಗಳಿಲ್ಲದೆ ಆತ್ಮಘಾತಿಗಳಾಗುತ್ತಾರೆಯೋ ಅಂತಹ ಪಾತಕಿಗಳು ಮೃತಿಹೊಂದಿದ ಮೇಲೆ ಕೇವಲ ಅಂಧಕಾರಮಯವಾದ ಅಸುರ್ಯಾ ಎಂಬ ತಮೋಲೋಕಗಳಿಗೆ ಹೋಗಿಸೇರುತ್ತಾರೆ. ಅನಿಷ್ಟವಾದ ಕೆಲವು ಅಪಶಕುನಗಳಿಂದ ತನಗೆ ಮರಣಕಾಲ ಸನ್ನಿಹಿತವೆಂದು ತಿಳಿದು ಮಹಾವ್ಯಾಧಿಯಿಂದ ಕೂಡಿದ್ದು ವೈದ್ಯನಿಂದಲೂ ನಿರ್ವಾಹವಿಲ್ಲವೆ ಆಯುಸ್ಸು ಪೂರ್ಣವೆಂದು ತಿಳಿದಿದ್ದಲ್ಲಿ ಹಿಂದೆ ಹೇಳಿರುವ ನಿಯಮದಂತೆ ದೇಹವನ್ನು ಬಿಡಬಹುದಾಗುತ್ತದೆ. ಹಾಗೆ ದೇಹತ್ಯಾಗಮಾಡುವವನಿಗೆ ಹಿಂದೆ ಹೇಳಿರುವ ಫಲವೂ ಲಭಿಸುತ್ತದೆ. ಆಯಸ್ಸಿಗೆ ಕೊನೆ ಎಂಬುದೇ ಮರಣ ಅದು ಬ್ರಾಹ್ಮಣನಿಗೆ ಆರ್ತಿ ಮತ್ತು ಮಹಾವ್ಯಾಧಿ, ಕ್ಷತ್ರಿಯನಿಗೆ ಯುದ್ಧ, ಸ್ತ್ರೀಯಾದವಳಿಗೆ ಪತಿಯ ಮರಣ ಇವುಗಳಿಂದ ಉಂಟಾಗುತ್ತದೆ. ಬ್ರಾಹ್ಮಣನಿಗಾಗಿಯೂ, ಗೋವಿಗಾಗಿಯೂ ಯಾವನು ಪ್ರಾಣತ್ಯಾಗ ಮಾಡುತ್ತಾನೆಯೋ ಅಂತಹವನು ಯೂಪ ಸಂಬಂಧವಿಲ್ಲದ ಅಪರಿಮಿತದಕ್ಷಿಣೆಯುಳ್ಳ ಆತ್ಮಯಜ್ಞವನ್ನೇ ಮಾಡಿದಂತಾಗುತ್ತದೆ.

೫೧-೫೮. ಯಾವನು ಕಾಡಿನಲ್ಲಿದ್ದುಕೊಂಡು ಜಿಂಕೆಗಳ ಗೊರಸಿನಿಂದ ಕೆದರಿ ಎರಚಲ್ಪಟ್ಟ ಹುಲ್ಲಿನಲ್ಲೇ ಭಕ್ಷಿಸುತ್ತಾ ಮೃಗಗಳೊಡನೆಯೇ ಇರುತ್ತಾನೆಯೋ ಅವನು

ಶಷ್ಪಂ ಮೃಗಖುರೋತ್ಕೃಷ್ಟಂ ಯೋ ಮೃಗೈಃ ಸಹ ಸೇವತೇ ।
ದೀಕ್ಷಿತೋ ವೈ ಮುದಾಯುಕ್ತಃ ಸಗಚ್ಛೇತ್ಯಮರಾವತೀಂ ॥ ೫೧ ॥

ಶೈವಲಂ ಶೀರ್ಣಪರ್ಣಂ ವಾ ತದ್ವ್ರತಂ ಯೋ ನಿಷೇವತೇ ।
ಶಾನ್ತೋಯೋ ಮನಸಾ ನಿತ್ಯಂ ಸಗಚ್ಛೇತ್ಪರಮಾಂ ಗತಿಂ ॥ ೫೨ ॥

ವಾಯುಭಕ್ಷ್ಯೋಮ್ಬುಭಕ್ಷ್ಯೋ ವಾ ಫಲಮೂಲಾಶನೋಪಿ ವಾ ।
ಯಕ್ಷೇಶೈಶ್ವರ್ಯಮಾದಾಯ ಮೋದತೇಽಪ್ಸರಸಾಂ ಗಣೈಃ ॥ ೫೩ ॥

ಅಗ್ನಿಯೋಗವಹೋಗ್ರೀಷ್ಮೇ ವಿಧಿದೃಷ್ಟೇನ ಕರ್ಮಣಾ ।
ತೀರ್ತ್ವಾ ದ್ವಾದಶವರ್ಷಾಣಿ ರಾಜಾ ಭವತಿ ಪಾರ್ಥಿವಃ ॥ ೫೪ ॥

ಆಹಾರನಿಯಮಂ ಕೃತ್ವಾ ಮುನಿರ್ದ್ವಾದಶವಾರ್ಷಿಕಂ ।
ವ್ರತಂ ಸಂಸಾಧ್ಯ ಕಾಲೇ ತು ರಾಜಾ ಭವತಿ ಪಾರ್ಥಿವಃ ॥ ೫೫ ॥

ಸ್ಥಂಡಿಲೇ ಶುದ್ಧಮಾಕಾಶಂ ಪರಿಗೃಹ್ಯ ಸಮನ್ತತಃ ।
ಪ್ರವಿಶ್ಯ ಚ ಮುದಾ ಯುಕ್ತೋ ದೀಕ್ಷಾಂ ದ್ವಾದಶವಾರ್ಷಿಕೀಂ ॥ ೫೬ ॥

ಸಂತುಷ್ಟನಾದ ಯಜ್ಞದೀಕ್ಷಿತನಂತೆ ಅಮರಾವತಿಯನ್ನೇ ಹೊಂದುತ್ತಾನೆ. ಯಾವನು ಗೆಡ್ಡೆಗೆಣಸು ಮತ್ತು ಒಣಗಿದ ಎಲೆಗಳಿಂದಲೇ ವ್ರತವನ್ನು ನೆರವೇರಿಸುತ್ತಾನೆಯೋ, ಯಾವಾಗಲೂ ಮನಶ್ಶಾಂತಿಯನ್ನೂ ಹೊಂದಿರುವನೋ ಅವನೂ ಉತ್ತಮವಾದ ಗತಿಯನ್ನೇ ಹೊಂದುತ್ತಾನೆ. ವಾಯುಭಕ್ಷನಾಗಿ ಅಥವಾ ಜಲಭಕ್ಷನಾಗಿ ಅಥವಾ ಗೆಡ್ಡೆಗೆಣಸುಗಳಿಂದ ಜೀವಿಸಿ ವ್ರತವನ್ನಾಚರಿಸುವವನು ಕುಬೇರನ ಐಶ್ವರ್ಯಹೊಂದಿ ಅಪ್ಸರೆಯರೊಡಗೂಡಿ ಸಂತೋಷಿಸುತ್ತಾನೆ. ಯಾವನು ವಿಧಿವಿಹಿತಕ್ರಮದಿಂದ ಗ್ರೀಷ್ಮಋತುವಿನಲ್ಲಿ ಅಗ್ನಿಸಂಬಂಧಹೊಂದಿ ತಪಸ್ಸನ್ನೂ ಸಹಿಸುವನೋ ಅವನು ಹನ್ನೆರಡುವರ್ಷ ಹಾಗೆಯೇ ಕಳೆದಲ್ಲಿ ಸರ್ವಪೃಥಿವೀ ಪತಿಯಾಗಿ ದೊರೆಯಾಗುತ್ತಾನೆ. ಮುನಿವೃತ್ತಿಯಿಂದ ಆಹಾರನಿಯಮಹೊಂದಿ ಹನ್ನೆರಡುವರ್ಷಕಾಲ ವ್ರತವನ್ನು ಸಾಧಿಸಿದವನೂ ದೊರೆಯಾಗುತ್ತಾನೆ. ಯಾವನು ಎಲ್ಲಾ ಕಡೆಯಲ್ಲೂ ಶುದ್ಧವಾದ ಆಕಾಶಹೊಂದಿರುವ ಸ್ಥಂಡಿಲದಲ್ಲಿ ಪ್ರವೇಶಿಸಿ ಹನ್ನೆರಡು ವರ್ಷಕಾಲ ದೀಕ್ಷಾನಿಯಮ ಹೊಂದುತ್ತಾನೆಯೋ ಅವನಿಗೆ ಸ್ಥಂಡಿಲ ವ್ರತದ ಫಲವಾಗಿ ಯಾನಗಳು, ಶಯನಗಳು

ಸ್ಥಂಡಿಲಸ್ಥ ಫಲಾನ್ಯಾಹುರ್ಯಾನಾನಿ ಶಯನಾನಿ ಚ ।
ಗೃಹಾಣಿ ಶಯನಾರ್ಹಾಣಿ ಚಂದ್ರಶುಭ್ರಾಣಿ ಬ್ರಾಹ್ಮಣಃ ॥ ೫೭ ॥

ಆತ್ಮಾನಮುಪಜೀವನ್ ಯೋ ನಿಯತೋ ನಿಯತಾಶನಃ ।
ದೇಹಂ ಚಾನಶನೇ ತ್ಯಕ್ತ್ವಾ ಸ ಸ್ವರ್ಗಂ ಸಮುಪಾಶ್ನುತೇ ॥ ೫೮ ॥

ಆತ್ಮಾನಮುಪಜೀವನ್ಯೋ ದೀಕ್ಷಾಂ ದ್ವಾದಶವಾರ್ಷಿಕೀಂ ।
ಅಶ್ಮನಾ ಚರಣೌ ಹತ್ವಾ ಗುಹ್ಯಕೇಷು ಚ ಮೋದತೇ ॥ ೫೯ ॥

ಸಾಧಯಿತ್ವಾ ತ್ಮನಾತ್ಮಾನಂ ನಿರ್ದ್ವಂದ್ವೋ ನಿಷ್ಪರಿಗ್ರಹಃ ।
ಚೀರ್ತ್ವಾ ದ್ವಾದಶವರ್ಷಾಣಿ ದೀಕ್ಷಾಮೇಕಾಂ ಮನೋಗತಾಂ ।
ಸ್ವರ್ಗಲೋಕಮವಾಪ್ನೋತಿ ದೇವೈಶ್ಚ ಸಹ ಮೋದತೇ ॥ ೬೦ ॥

ಆತ್ಮಾನಮುಪಜೀವನ್ಯೋ ದೀಕ್ಷಾಂ ದ್ವಾದಶವಾರ್ಷಿಕೀಂ ।
ಹುತ್ವಾಗ್ನೌ ದೇಹಮುತ್ಸೃಜ್ಯ ವಹ್ನಿಲೋಕೇ ಮಹೀಯತೇ ॥ ೬೧ ॥

ಶಯನಕ್ಕೆ ಅರ್ಹವಾದ ಧವಲಗೃಹಗಳು ಇವೆಲ್ಲವೂ ಉಂಟಾಗುತ್ತವೆ. ಯಾವನು ಆತ್ಮೋದ್ಧಾರಕ್ಕಾಗಿ ನಿಯತಾಹಾರನಾಗಿ ಜಿತೇಂದ್ರಿಯತೆಯಿಂದ ಈ ವ್ರತದಲ್ಲಿದ್ದು ಕೊನೆಯಲ್ಲಿ ಅನಶನವ್ರತದಿಂದ ದೇಹವನ್ನು ಬಿಡುತ್ತಾನೆಯೋ ಅವನೂ ಸ್ವರ್ಗವನ್ನು ಹೊಂದುತ್ತಾನೆ.

೫೯-೬೧. ಯಾವನು ಆತ್ಮೋಜ್ಜೀವನಕ್ಕಾಗಿ ಹನ್ನೆರಡುವರ್ಷ ದೀಕ್ಷಾ ನಿಯಮಹೊಂದಿ ಕಲ್ಲಿನಿಂದ ಪಾದಗಳನ್ನು ಜಜ್ಜಿಕೊಂಡು ದೇಹತ್ಯಾಗ ಮಾಡುತ್ತಾನೆಯೋ ಅವನು ಗುಹ್ಯಲೋಕದಲ್ಲಿ ಸುಖಿಸುತ್ತಾನೆ. ಯಾವನು ತನ್ನ ಮನೋವೃತ್ತಿಯಿಂದಲೇ ಆತ್ಮಸಂಸ್ಕಾರಹೊಂದಿ ಶೀತೋಷ್ಣಾದಿ ದ್ವಂದ್ವಗಳನ್ನು ಜಯಿಸಿ ಪರಿಗ್ರಹಾದಿನಿರಪೇಕ್ಷನಾಗಿ ಹನ್ನೆರಡು ವರ್ಷಗಳನ್ನು ತನಗೆ ತೋರಿದ ದೀಕ್ಷಾನಿಯಮದಿಂದ ಕಳೆಯುತ್ತಾನೆಯೋ ಅವನು ಸ್ವರ್ಗಲೋಕಹೊಂದಿ ದೇವತೆಗಳೊಡನೆ ಸುಖಿಸುತ್ತಾನೆ. ಯಾವನು ಆತ್ಮೋಜ್ಜೀವನಕ್ಕಾಗಿ ಹನ್ನೆರಡುವರ್ಷ ದೀಕ್ಷೆಯನ್ನು ಹೊಂದಿ ಅಗ್ನಿಯಲ್ಲಿ ದೇಹವನ್ನು ಹೋಮಮಾಡುತ್ತಾನೆಯೋ ಅವನು ಅಗ್ನಿಲೋಕ ಹೊಂದಿ ಸುಖಿಸುತ್ತಾನೆ. ಯಾವ ಬ್ರಾಹ್ಮಣನು ಶಾಸ್ತ್ರಾನುಸಾರದೀಕ್ಷೆ

ಯಸ್ತು ವಿಪ್ರೋ ಯಥಾನ್ಯಾಯಂ ದೀಕ್ಷಿತೋ ನಿಯತೇಂದ್ರಿಯಃ ।
ಆತ್ಮನ್ಯಾತ್ಮಾನಮಾದಾಯ ನಿರ್ದ್ವಂದ್ವೋ ಧರ್ಮಲಾಲಸಃ ॥ ೬೨ ॥

ಚೀರ್ತ್ವಾ ದ್ವಾದಶವರ್ಷಾಣಿ ದೀಕ್ಷಾಮೇತಾಂ ಮನೋಗತಾಂ ।
ಅರಣೀಸಹಿಸಃ ಸ್ಕಂದೇ ಬದ್ಧ್ವಾ ಗಚ್ಛತ್ಯನಾವೃತಂ ॥ ೬೩ ॥

ವೀರಾಧ್ವಾನಮನಾನೀತ್ವಾ ವೀರಾಸನರತಸ್ಸದಾ ।
ವೀರಾಸ್ಥಾಯೀ ಚ ಸತತಂ ಸ ವೀರಗತಿಮಾಪ್ನುಯಾತ್ ॥ ೬೪ ॥

ಧೀರಲೋಕಗತೋ ವೀರೋ ವೀರಯೋಗವಹಃ ಸದಾ ।
ಸತ್ವಸ್ಥಃ ಸರ್ವಮುತ್ಸೃಜ್ಯ ದೀಕ್ಷಿತೋ ನಿಯತಃ ಶುಚಿಃ ।
ಶಕ್ರಲೋಗತಃ ಶ್ರೀಮಾನ್ಮೋದತೇ ದಿವಿ ದೇವವತ್ ॥ ೬೫ ॥

ಉಪವಾಸವ್ರತೈರ್ದಾಂತಾ ಅಹಿಂಸಾಸತ್ಯವಾದಿನಃ ।
ಸಂಸಿದ್ಧಾಃ ಪ್ರೇತ್ಯ ಗಂಧರ್ವೈಃ ಸಹ ಮೋದಂತ್ಯನಾಮಯಾಃ ॥ ೬೬ ॥

ಹೊಂದಿ ಜಿತೇಂದ್ರಿಯನಾಗಿ ಮನಸ್ಸನ್ನು ಆತ್ಮಾಭಿಮುಖವನ್ನಾಗಿ ಮಾಡಿ ಶೀತೋಷ್ಣಾದಿಗಳನ್ನು ಜಯಿಸಿ ಧರ್ಮದಲ್ಲಿಯೇ ಆಸಕ್ತನಾಗಿದ್ದು ಹನ್ನೆರಡುವರ್ಷ ಪರ್ಯಂತ ವ್ರತದಿಂದಿದ್ದು ಮನೋವೃತ್ತಿಗೆ ತಕ್ಕ ದೀಕ್ಷೆಹೊಂದಿ ಅರಣಿಯನ್ನು ಕುತ್ತಿಗೆಯಲ್ಲಿ ಕಟ್ಟಿಕೊಂಡು ನಿರಾವರಣ ಪ್ರದೇಶದಲ್ಲಿ ವೀರರಮಾರ್ಗವನ್ನನುಸರಿಸಿ ವೀರಾಸನವನ್ನೂ ಹೊಂದಿ ವೀರಸ್ಥಿತಿಯಲ್ಲಿಯೇ ದೇಹತ್ಯಾಗ ಮಾಡುತ್ತಾನೆಯೋ ಅವನು ವೀರಲೋಕವನ್ನೇ ಹೊಂದುತ್ತಾನೆ. ಈ ರೀತಿಯಾದ ವೀರಯೋಗವುಳ್ಳವನು ಯಾವಾಗಲೂ ಧೀರರ ಲೋಕದಲ್ಲೇ ಇರುತ್ತಾನೆ.

೬೫-೬೬ ಕೇವಲ ಸತ್ವಗುಣದಲ್ಲಿಯೇ ನಿರತನಾಗಿ ಲೌಕಿಕವಾದ ಎಲ್ಲಾ ವ್ಯಾಪಾರಗಳನ್ನೂ ಬಿಟ್ಟು ದೀಕ್ಷಾನಿಯಮದಿಂದ ಶುಚಿಯಾಗಿರುವವನು ಇಂದ್ರಲೋಕಹೊಂದಿ ದೇವತೆಗಳಂತೆಯೇ ಸುಖಿಯಾಗಿರುತ್ತಾನೆ. ಇಂದ್ರಿಯ ನಿಗ್ರಹದಿಂದಲೂ ಉಪವಾಸವ್ರತದಿಂದಲೂ ಕೂಡಿ, ಸತ್ಯವಾದಿಗಳಾಗಿಯೂ ಅಹಿಂಸಾ

ಮಂಡೂಕಯೋಗಶಯನಾಃ ಯಥಾಸ್ಥಾನಂ ಯಥಾವಿಧಿ ।
ದೀಕ್ಷಾಂ ಚರತಿ ಧರ್ಮಾತ್ಮಾ ಸ ನಾಗೈಃ ಸಹ ಮೋದತೇ ॥ ೬೭ ॥

ಆರ್ದ್ರವಾಸಾಸ್ತು ಶಿಶಿರೇ ವ್ರತಂ ವಹತಿ ಯೋ ನರಃ ।
ದ್ವಾದಶಾಬ್ದಾನಿ ನಿಯತಂ ರಾಜಾ ಭವತಿ ಪಾರ್ಥಿವಃ ॥ ೬೮ ॥

ವರ್ಷರಾತ್ರೇ ತಥಾ ಯಶ್ಚ ಭವತ್ಯಾಕಾಶಸಾಧಕಃ ।
ಅನಪಸ್ತೀರ್ಥಶಾಯೀ ಚ ರಾಜಾ ಭವತಿ ಪಾರ್ಥಿವಃ ॥ ೬೯ ॥

ತ್ಯಕ್ತ್ವಾ ವನಗತಃ ಪ್ರಾಣಾನ್ ಸಪ್ತಪೂರ್ವಾಂಸ್ತಥಾಪರಾನ್ ।
ನರಾಂಸ್ತಾರಯಿತಾ ದುಃಖಾದಾತ್ಮಾನಂ ಚ ವಿಶೇಷತಃ ॥ ೭೦ ॥

ಯೇನ ಯೇನ ಶರೀರೇಣ ಯದ್ಯತ್ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥ ೭೧ ॥

ಪರರಾಗಿಯೂ ಇರುವವರು ತಮ್ಮ ವ್ರತದಿಂದಲೇ ಸಿದ್ಧೋಪಾಯರಾಗಿ ದೇಹತ್ಯಾಗ ಮಾಡಿದನಂತರ ಗಂಧರ್ವರೊಡನೆ ಆರೋಗಿಗಳಾಗಿ ಸುಖಿಸುತ್ತಾರೆ. ಕಪ್ಪೆಗಳಂತೆ ಸ್ಥಿತಿಯನ್ನೂ ಶಯನಾದಿ ಗಳನ್ನೂ ಹೊಂದಿ ಯಥಾವಿಧಿಯಾಗಿ ದೀಕ್ಷೆಹೊಂದಿದವರು ನಾಗಲೋಕದಲ್ಲಿ ಸುಖಿಸುತ್ತಾರೆ ಯಾವನು ಶಿಶಿರಋತುವಿನಲ್ಲಿ ಒದ್ದೆಯುವಸ್ತ್ರವನ್ನೇ ಉಟ್ಟು ತೀಕ್ಷ್ಣವಾದ ವ್ರತಹೊಂದಿ ಹನ್ನೆರಡುವರ್ಷಪರ್ಯಂತ ನಡೆಸುತ್ತಾನೆಯೋ ಅವನು ರಾಜನೇ ಆಗುತ್ತಾನೆ. ಹಾಗೆಯೇ ವರ್ಷಾಕಾಲದ ರಾತ್ರಿಯಲ್ಲಿ ದಿಗಂಬರ ನಾಗಿ ಮಳೆಯನ್ನನುಭವಿಸುತ್ತಾ ತೀರ್ಥಪಾನವೂ ಇಲ್ಲದೆ ನೀರಿನಿಂದ ಕೂಡಿದ ಶಯನವನ್ನೇ ಹೊಂದುತ್ತಾನೆಯೋ ಅವನೂ ಸಹ ತನ್ನ ತೀವ್ರಸಾಧನೆಗೆ ತಕ್ಕಂತೆ ರಾಜನೇ ಆಗುತ್ತಾನೆ.

೭೦-೭೭. ವಾನಪ್ರಸ್ಥಾದಿವಿಧಿಯಿಂದ ವನವನ್ನು ಹೊಂದಿ ಅಲ್ಲಿ ಪ್ರಾಣ ತ್ಯಾಗಮಾಡಿದವನು ತನ್ನ ಹಿಂದಿನ ಮತ್ತು ಮುಂದಿನ ಏಳೇಳು ಜನರನ್ನೂ ಉದ್ಧಾರಮಾಡಿ ತನ್ನನ್ನೂ ಸಹ ವಿಶೇಷರೀತಿಯಲ್ಲಿ ದುಃಖದಿಂದ ರಕ್ಷಿಸಿಕೊಳ್ಳು ತ್ತಾನೆ. ಯಾವಯಾವ ಶರೀರದಿಂದ ಯಾವಯಾವ ಕರ್ಮವನ್ನು ಮಾಡುತ್ತಾ

ಯಸ್ಯಾಂ ಯಸ್ಯಾಮವಸ್ಥಾಯಾಂ ಯತ್ಕರೋತಿ ಶುಭಾಶುಭಂ ।
ತಸ್ಯಾಂ ತಸ್ಯಾಮವಸ್ಥಾಯಾಂ ತತ್ತತ್ಫಲಮುಪಾಶ್ನುತೇ ॥ ೨೨ ॥

ನರೇಣ ಹಿ ಕೃತಂ ಕರ್ಮ ಸದಾ ಪಂಚೇಂದ್ರಿಯೈರಿಹ ।
ತೇ ಹ್ಯಸ್ಯ ಸಾಕ್ಷಿಣೋ ನಿತ್ಯಂ ಷಷ್ಠ ಆತ್ಮಾ ತಥೈವ ಚ ॥ ೨೩ ॥

ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಂ ।
ಏವ ಮೇತತ್ಕೃತಂ ಕರ್ಮ ಕರ್ತಾರಮನುವಿಂದತಿ ॥ ೨೪ ॥

ಅವಶ್ಯಂ ಹಿ ಕೃತಂ ಕರ್ಮ ಭೋಕ್ತವ್ಯಂ ದ್ವಿಜಪುಂಗವಾಃ ।
ಸುಕೃತಂ ದುಷ್ಕೃತಂ ವಾಪಿ ತಸ್ಮಾತ್ಸುಕೃತಮಾಚರೇತ್ ॥ ೨೫ ॥

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಂ ॥ ೨೬ ॥

ನೆಯೋ ಆಯಾಯ ಶರೀರದಲ್ಲಿಯೋ ಅದಕ್ಕೆ ತಕ್ಕ ಫಲವನ್ನೂ ಹೊಂದುತ್ತಾನೆ. ಯಾವಯಾವ ಅವಸ್ಥೆಗಳಲ್ಲಿ ಯಾವ ಶುಭಾಶುಭ ಕಾರ್ಯವನ್ನು ಮಾಡುತ್ತಾನೆಯೋ ಆಯಾಯ ಅವಸ್ಥೆಯಲ್ಲಿ ಅದರ ಫಲವನ್ನು ಹೊಂದುತ್ತಾನೆ. ಮನುಷ್ಯನು ಐದು ಇಂದ್ರಿಯಗಳಿಂದ ಕೂಡಿ ಯಾವಯಾವ ಕೆಲಸವನ್ನು ಮಾಡುತ್ತಾನೆಯೋ ಆ ಇಂದ್ರಿಯಗಳೇ ಇದಕ್ಕೆ ಸಾಕ್ಷಿಗಳಾಗುತ್ತವೆ. ಆತ್ಮನೂ ಆರನೆಯವನಾಗುತ್ತಾನೆ. ನೂರಾರು ಹಸುಗಳಿರುವ ಗುಂಪಿನಲ್ಲಿಯೂ ಕರುವು ತನ್ನ ತಾಯಿಯನ್ನೇ ಹೇಗೆ ಹೊಂದುತ್ತದೆಯೋ ಹಾಗೆಯೇ ಶುಭಾಶುಭ ಕರ್ಮಫಲಗಳೂ ಕರ್ತೃವನ್ನೇ ಹೊಂದು ತ್ತವೆ. ತಾನು ಮಾಡಿದ ಕರ್ಮಗಳ ಶುಭಾಶುಭ ಫಲಗಳನ್ನು ತಾನು ಅವಶ್ಯ ಅನುಭವಿಸಲೇಬೇಕು. ಆದುದರಿಂದ ಸುಖಕ್ಕೆ ಕಾರಣವಾದ ಸುಕೃತವನ್ನೇ ಆಚರಿಸಬೇಕು. ವೃಕ್ಷಗಳ ಪುಷ್ಪಫಲಗಳು ಯಾರಿಂದಲೂ ಪ್ರೇರಿಸಲ್ಪಡದೆ ತಕ್ಕ ಕಾಲದಲ್ಲಿ ಹೇಗೆ ಅಭಿವ್ಯಕ್ತಿ ಹೊಂದುವುವೋ ಹಾಗೆಯೇ ಹಿಂದೆ ಮಾಡಿದ ಕರ್ಮವೂ ತನ್ನ ಕಾಲಕ್ಕೆ ತಕ್ಕಂತೆ ಫಲೋನ್ಮುಖವಾಗುತ್ತದೆ. ಶಾಸ್ತ್ರವಿಧಿಯನ್ನು ಬಿಟ್ಟು ಮಂತ್ರಗಳ ವಿಷಯದಲ್ಲಿ ವ್ಯರ್ಥವಾದ ಅಭಿನಿವೇಶವು ಎಷ್ಟು ಅನರ್ಥಕಾರಿಯೋ ಅಸತ್ಯವಾದ

ಯನ್ಮಂತ್ರೇ ಭವತಿ ವೃಥಾ ಭಿಯುಜ್ಯಮಾನೇ ।
ಯತ್ಸತ್ಯೇ ಭವತಿ ವೃಥಾಭಿಪೂಯಮಾನೇ ॥
ಯಚ್ಚಾಗ್ನೌ ಭವತಿ ವೃಥಾಭಿಹೂಯಮಾನೇ ।
ತತ್ಸರ್ವಂ ಭವತಿ ವೃಥಾಭಿಧೀಯಮಾನೇ ॥ ೭೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಕರ್ಮಫಲವಿಪಾಕೋ ನಾಮ
ಸಪ್ತತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಪವಿತ್ರತೆಯನ್ನು ತೋರ್ಪಡಿಸಿಕೊಳ್ಳುವವನಿಗೆ ಸತ್ಯದ ವಿಷಯದಲ್ಲಿ ಪ್ರಯತ್ನವು ಹೇಗೆ ವ್ಯರ್ಥವೋ ಅಗ್ನಿಯಲ್ಲಿ ಮಾಡುವ ಅಶಾಸ್ತ್ರೀಯ ಹೋಮವು ಎಷ್ಟು ಅನರ್ಥ ಕಾರಿಯೋ ಹಾಗೆಯೇ ಅಸತ್ಯಭಾಷಣವೂ ಸಹ ಅಷ್ಟು ಅನರ್ಥಕಾರಿಯಾಗುತ್ತದೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಗಳ ಕರ್ಮಫಲಪಾಕವೆಂಬ ಇನ್ನೂರ
ಮೂವತ್ತೇಳನೆಯ ಅಧ್ಯಾಯ ಮುಗಿದಿದೆ

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಷ್ಟತ್ರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ದೃಷ್ಟ್ವಾರಿಷ್ಟಸ್ಯ ಭವತಾ ದೇಹತ್ಯಾಗಃ ಪ್ರಕೀರ್ತಿತಃ ।
ತಸ್ಮಾದಸ್ಮಾಕಮಾಚಕ್ಷ್ವ ತ್ವರಿಷ್ಟಾನಿ ಮಹಾಮತೇ ॥ ೧ ॥

|| ಹಂಸ ಉವಾಚ ||

ಪ್ರವೃತ್ತೇರ್ವಿಕೃತಿರ್ನ್ರಾಣಾಂ ಬುದ್ಧೀಂದ್ರಿಯಶರೀರಜಾ ।
ಅಕಸ್ಮಾದ್ದೃಶ್ಯತೇ ಯೇಷಾಂ ತೇಷಾಂ ಮರಣಮಾದಿಶೇತ್ ॥ ೨ ॥

ಏತತ್ಸಮಾಸಾತ್ಕಥಿತಂ ವಿಸ್ತರೋಽಯಮತಃ ಪರಂ ।
ಸೂಕ್ಷ್ಮಾರಿಷ್ಟಾವಬೋಧಾರ್ಥಂ ತಥಾ ಸ್ಪಷ್ಟಾರ್ಥಮೇವ ಚ ॥ ೩ ॥

ಇನ್ನೂರ ಮೂತ್ತೆಂಟನೆಯ ಅಧ್ಯಾಯ.

೧–೩. ಋಷಿಗಳು ಪ್ರಶ್ನೆಮಾಡುತ್ತಾರೆ :—ಅರಿಷ್ಟರೂಪಗಳಾದ ಅಪಶಕುನಗಳನ್ನು ನೋಡಿದಲ್ಲಿ ಅವನು ದೇಹತ್ಯಾಗಮಾಡಬಹುದೆಂದು ತಾವು ಹೇಳಿದಿರಿ ಅಂತಹ ಅರಿಷ್ಟಗಳಾವುವು ಎಂಬುದನ್ನು ಪಂಡಿತರಾದ ತಾವೇ ಅಪ್ಪಣೆ ಕೊಡಿಸಬೇಕು. ಹಂಸವು ಹೇಳುತ್ತದೆ—ಮನುಷ್ಯರಿಗೆ ಬುದ್ಧಿ, ಇಂದ್ರಿಯಗಳು, ಶರೀರ ಇವುಗಳ ಮೂಲಕ ಉಂಟಾಗುವ ಸ್ವಾಭಾವಿಕವಾದ ಪ್ರವೃತ್ತಿಗೆ ಉಂಟಾಗುವ ವಿಕಾರವು ಆಕಸ್ಮಿಕವಾಗಿ ಕಂಡುಬಂದಲ್ಲಿ ಅಂತಹವರಿಗೆ ಮರಣವುಂಟಾಗುವುದೆಂದು ಹೇಳಬೇಕು. ಇದೇ ಸಂಗ್ರಹವಾದ ಅರಿಷ್ಟದ ಸ್ವರೂಪ, ಮುಂದಿನ ವಿಚಾರವೆಲ್ಲವೂ ಅದರ ವಿಸ್ತಾರಸ್ವರೂಪ ಈ ವಿಸ್ತಾರವೂ ಅರಿಷ್ಟಗಳ ಸೂಕ್ಷ್ಮಸ್ವರೂಪದ ತಿಳುವಳಿಗೂ ಸ್ಪಷ್ಟವಾದ ತಿಳುವಳಿಕೆಗೂ ಸಾಧಕವಾಗುತ್ತದೆ.

ನ ತು ಕರ್ಮಣಿ ಯೋ ವ್ಯಭ್ರೇ ಪ್ರಭಾಕರ್ಮನಿಶಾಭೃತಃ ।
ಛಾಯೆಂ ಚಂದ್ರಾರ್ಕಯೋರ್ವಾಪಿ ತಯೋಶ್ಚ ಗಮನಂ ತಥಾ ॥ ೪ ॥

ದೇವಮಾರ್ಗೇ ಪ್ರಭಾ ವಹ್ನೇಃ ಧ್ರುವಂ ತಾರಾಮರುಂಧತೀಂ ।
ಪಶ್ಯತ್ಯದೃಷ್ಟಾಮನ್ಯೈರ್ವಾ ಮೃತ್ಯುಃ ಸ್ಯಾತ್ತಸ್ಯ ವತ್ಸರಾತ್ ॥ ೫ ॥

ಸಪ್ರಭಾನಾಮಥಾನ್ಯೇಷಾಂ ಪ್ರಭಾಂ ಯಸ್ತು ನ ಪಶ್ಯತಿ ।
ತಸ್ಯ ಚೈಕಾದಶೇ ಮಾಸೇ ಮರಣಂ ಪರಿಕೀರ್ತಿತಂ ॥ ೬ ॥

ಸುವರ್ಣಂ ರಜತಂ ಮೂತ್ರ ಪುರೀಷಂ ವಮತೇ ನಿಶಿ ।
ಸ್ವಪ್ನೇ ಸ ಮಾಸೇ ದಶಮೇ ಪ್ರಯಾತಿ ಯಮಮಂದಿರಂ ॥ ೭ ॥

ರಕ್ಷಃಪ್ರೇತಪಿಶಾಚಾನಾಂ ಯಕ್ಷಾಣಾಮಪಿ ದರ್ಶನಾತ್ ।
ಅತೀನ್ದ್ರಿಯಾಣಾಮನ್ಯೇಷಾಂ ನವಮೇ ಮರಣಂ ಧ್ರುವಂ ॥ ೮ ॥

ದೌರ್ಬಲ್ಯಂ ಜಾಯತೇ ಯಸ್ಯ ಬಹುಸಂಪನ್ನಭೋಜಿನಃ ।
ಅನಶ್ನತೋಽಪಿ ಪೀನತ್ವಮಷ್ಟಮೇ ಸ್ಯಾತ್ಸಮೃತ್ಯುಭಾಕ್ ॥ ೯ ॥

೪-೯. ಸ್ವಾಭಾವಿಕವಾದ ವ್ಯಾಪಾರ ಹೊರತಾಗಿ ಆಕಾಶ ಕಾಣದಿರುವ ಸ್ಥಳದಲ್ಲಿ ಚಂದ್ರನ ಸಭೆಯನ್ನಾಗಲಿ ಚಂದ್ರಸೂರ್ಯರ ಪ್ರತಿಬಿಂಬವನ್ನಾಗಲಿ, ಅವರ ಗಮನವನ್ನಾಗಲಿ, ಆಕಾಶಮಾರ್ಗದಲ್ಲಿ ಅಗ್ನಿಯ ಪ್ರಭೆಯನ್ನಾಗಲಿ, ಧ್ರುವನಕ್ಷತ್ರವನ್ನಾಗಲಿ, ಅರುಂಧತೀನಕ್ಷತ್ರವನ್ನಾಗಲಿ, ಇತರರಿಂದ ನೋಡಲು ಸಾಧ್ಯವಾಗದಿರುವ ಯಾವ ತೇಜಸ್ಸನ್ನಾಗಲಿ ಯಾವನು ನೋಡುತ್ತಾನೆಯೋ ಅವನಿಗೆ ಆ ವರ್ಷದೊಳಗೇ ಮರಣ ಉಂಟಾಗುತ್ತದೆ. ಪ್ರಭೆಯೊಡನೆ ಕೂಡಿರುವ ಗ್ರಹನಕ್ಷತ್ರಾದಿಗಳ ಪ್ರಭೆಯನ್ನು ಯಾವನು ನೋಡುವುದಿಲ್ಲವೋ ಅವನಿಗೂ ಹನ್ನೊಂದು ತಿಂಗಳೊಳಗೇ ಮರಣ ಉಂಟಾಗುವುದು ಯಾವನು ರಾತ್ರಿಯಲ್ಲಿ ಸ್ವಪ್ನದಲ್ಲಿ ಚಿನ್ನ, ಬೆಳ್ಳಿ, ಮೂತ್ರ ಪುರೀಷಗಳನ್ನು ಕಕ್ಕುತ್ತಾನೆಯೋ ಅವನು ಹತ್ತು ತಿಂಗಳಲ್ಲಿ ಮೃತ್ಯುವನ್ನು ಹೊಂದುತ್ತಾನೆ. ರಾಕ್ಷಸರು, ಪ್ರೇತಪಿಶಾಚಾದಿಗಳು ಯಕ್ಷರು ಇತರ ಅತೀನ್ದ್ರಿಯ ವಸ್ತುಗಳು ಇವನ್ನು ನೋಡಿದ್ದಾದರೆ ಒಂಭತ್ತನೆಯ ತಿಂಗಳಲ್ಲಿ ನಿಯತವಾಗಿಯೂ ಮರಣ ಉಂಟಾಗುತ್ತದೆ. ಸಮೃದ್ಧವಾದ ಭೋಜನವನ್ನು ತೃಪ್ತಿಯುಂಟಾಗುವಂತೆ ಮಾಡುತ್ತಿದ್ದರೂ ಯಾವನಿಗೆ ದೌರ್ಬಲ್ಯವೇ ಹೆಚ್ಚಾಗಿ ಉಂಟಾಗಿರುತ್ತದೆಯೋ, ಊಟಮಾಡದಿದ್ದರೂ ಸ್ಥೂಲತ್ವವೇ ಉಂಟಾಗುತ್ತಿರುತ್ತದೆಯೋ ಅವನಿಗೆ ಎಂಟನೆಯ ತಿಂಗಳಲ್ಲಿಯೇ ಮೃತ್ಯು ಉಂಟಾಗುತ್ತದೆ.

ಪದಂ ಚಾಸಕಲಂ ಯಸ್ಯ ಖಂಡಂ ವಿಕೃತಮೇವ ವಾ ।
ಪಾಂಸುಕರ್ದಮಯೋರ್ದೃಶ್ಯೇತ್ಸಪ್ತಮೇ ಮಾಸಿ ಮೃತ್ಯುಭಾಕ್ ॥ ೧೦ ॥

ಕ್ರವ್ಯಾದಾಃ ಪಕ್ಷಿಣೋ ಯಸ್ಯ ಮೂರ್ಧ್ನಿ ಲೀಯಂತಿ ವೈ ದ್ವಿಜಾಃ ।
ಕಾಕಶ್ಯೇನಾದಯಸ್ತಸ್ಯ ಷಷ್ಠೇ ಮರಣಮಾದಿಶೇತ್ ॥ ೧೧ ॥

ಯಸ್ಯ ಗೋಮಯಚೂರ್ಣಾಭಂ ಶರೀರಾನ್ಮೃಜ್ಯತೇ ರಜಃ ।
ಸ್ವದೇಹಚ್ಛಾಯವಿಕೃತಿಃ ಪಂಚಮೇ ಸತು ಮೃತ್ಯುಭಾಕ್ ॥ ೧೨ ॥

ಅನಭ್ರೇ ವಿದ್ಯುತಂ ದೃಷ್ಟ್ವಾ ಚತುರ್ಥೇ ಮ್ರಿಯತೇ ಧ್ರುವಂ ॥ ೧೩ ॥

ಶಕ್ರಚಾಪಂ ಜಲೇ ದೃಷ್ಟ್ವಾ ಗಗನಂ ವಾ ದ್ವಿಜೋತ್ತಮಾಃ ।
ಅವಿದ್ಯಮಾನಂ ಧರ್ಮಜ್ಞಾಸ್ತ್ರಿತೀಯೇ ಮ್ರಿಯತೇ ಧ್ರುವಂ ॥ ೧೪ ॥

ಅವಘಟ್ಟನಂ ನೇತ್ರಸ್ಯ ವಿನಾ ರೋಗಂ ಯದಾ ಭವೇತ್ ।
ಏಕಸ್ಯ ಯದಿ ವಾ ದೃಶ್ಯೇತ್ಸ್ಥಾನಭ್ರಂಶೋ ವಿಧೀಯತೇ ॥ ೧೫ ॥

೧೦-೧೫. ಪಾದದ ಎಲ್ಲಾ ಭಾಗವಾಗಲಿ ವಿಕಾರಹೊಂದಿದ ಒಂದು ಖಂಡವಾಗಲಿ ಧೂಳಿ ಮತ್ತು ಕೆಸರಿನಿಂದ ಕೂಡಿರುವಂತೆಯೇ ಕಂಡುಬಂದಲ್ಲಿ ಅದು ಏಳನೇ ತಿಂಗಳಲ್ಲಿಯೇ ಮೃತ್ಯುಪ್ರದವಾಗುತ್ತದೆ. ಮಾಂಸಾಹಾರಿಗಳಾದ ಕಾಗೆ, ಗಿಡಗ, ಗೃಧ್ರಾದಿ ಪಕ್ಷಿಗಳು ತಲೆಯ ಮೇಲೆ ಬಂದು ಅಡಗಿಕೊಂಡಲ್ಲಿ ಅವನಿಗೆ ಆರು ತಿಂಗಳಲ್ಲಿಯೇ ಮರಣ ಉಂಟಾಗುತ್ತದೆ ಯಾವನಿಗೆ ಶರೀರದ ಮೇಲೆ ಸಗಣಿಯ ಪುಡಿಯಂತಿರುವ ಧೂಳಿಯು ಉಜ್ಜುವಾಗ ಕಂಡುಬರುತ್ತದೆಯೋ, ತನ್ನ ದೇಹಚ್ಛಾಯೆಯಲ್ಲಿಯೂ ವಿಕಾರ ಕಾಣಬರುತ್ತದೆಯೋ ಅವನು ಐದನೆಯ ತಿಂಗಳಿನಲ್ಲಿಯೇ ಮೃತ್ಯುವಶನಾಗುತ್ತಾನೆ. ಆಕಾಶವು ಕಾಣಿಸದ ಸ್ಥಳದಲ್ಲಿ ಮಿಂಚನ್ನು ನೋಡಿದ್ದಾದರೆ ಅವನು ನಾಲ್ಕನೆಯ ತಿಂಗಳಲ್ಲಿಯೇ ಮೃತನಾಗುತ್ತಾನೆ. ನೀರಿನಲ್ಲಿ ಇಂದ್ರಚಾಪವನ್ನಾಗಲಿ. ಆಕಾಶವನ್ನಾಗಲಿ ನೋಡಿದಲ್ಲಿಯೂ, ಇಲ್ಲದಿರುವ ಇಂದ್ರಚಾಪವನ್ನು ಗಗನದಲ್ಲಿ ನೋಡಿದಲ್ಲಿಯೂ, ಮೂರನೆಯ ತಿಂಗಳಲ್ಲಿಯೇ ಮೃತಿಹೊಂದುತ್ತಾನೆ. ಯಾವ ರೋಗವೂ ಇಲ್ಲದಿರುವಾಗ ನೇತ್ರಗಳಲ್ಲಿ ಹೆಚ್ಚಾದ ಅದುರುವಿಕೆಯುಂಟಾದರೂ, ಒಂದೇ ಕಣ್ಣಿನಲ್ಲಿ ಕಂಡುಬಂದರೂ ಅದು ಸ್ಥಾನ

ಮಾಸೇನ ವಿಕೃತಾ ನಾಸಾ ವಕ್ರಾ ಚ ಮರಣಪ್ರದಾ ॥ ೧೬ ॥
ಅರ್ಧಮಾಸೇನ ದುರ್ಗಂಧಪ್ರಭವಂ ಸ್ವಶರೀರತಃ ।

ಪರಚಕ್ಷುಷಿ ಯಶ್ಛಾಯಾಮಾತ್ಮನಸ್ತು ನ ಪಶ್ಯತಿ ।
ಸಪಶ್ಯತಿ ಮಹಾಭಾಗಾ ದ್ವಾದಶಾಹೇನ ವೈಯಮಂ ॥ ೧೭ ॥

ನಿರ್ವಾಣದೀಪಗಂಧಂತು ಯಸ್ತು ನಾಘ್ರಾತಿ ಮಾನವಃ ।
ಸಪ್ತಾಹೇನ ತು ಧರ್ಮಜ್ಞಾಃ ಪಶ್ಯತ್ಯರ್ಕಸುತಂ ಧ್ರುವಂ ॥ ೧೮ ॥

ಸದ್ಯಃ ಸ್ನಾತಾನುಲಿಪ್ತಸ್ಯ ಹೃತ್ಪಾದಶಿರಸಾಂ ಭವೇತ್ ।
ಕ್ಷಿಪ್ರಂ ಸಂಶೋಷಣಾಂ ತಸ್ಯತ್ರ್ಯಹಾನ್ಮರಣಮಾದಿಶೇತ್ ॥ ೧೯ ॥

ಗಂಡಯೋಸ್ತಿಲಕಾನ್ರಕ್ತಾನ್ವರ್ಣವೈಕೃತಮೇವ ಚ ।
ಅಹೋರಾತ್ರೇಣ ಮರಣಂ ಪುರುಷಸ್ಯ ಸಮಾದಿಶೇತ್ ॥ ೨೦ ॥

ಭ್ರಂಶವುಂಟುಮಾಡುತ್ತದೆ. ಮೂಗು ರೋಗಾದಿಗಳಿಲ್ಲದಿರುವಾಗ ವಕ್ರವಾದರೂ, ವಿಕಾರಹೊಂದಿದರೂ ಒಂದೇ ತಿಂಗಳಲ್ಲಿ ಮರಣಪ್ರದವಾಗುತ್ತದೆ.

೧೭–೨೦. ಯಾವನ ಶರೀರದಲ್ಲಿ ದುರ್ಗಂಧವು ಆಕಸ್ಮಿಕವಾಗಿ ಉಂಟಾಗುತ್ತದೆಯೋ ಅವನಿಗೆ ಅರ್ಧ ತಿಂಗಳಲ್ಲಿಯೇ ಮರಣವುಂಟಾಗುತ್ತದೆ. ಯಾವನಿಗೆ ಮತ್ತೊಬ್ಬರ ಕಣ್ಣಿನಲ್ಲಿ ತನ್ನ ಪ್ರತಿಬಿಂಬವು (ಬೊಂಬೆ) ಕಾಣುವುದಿಲ್ಲವೋ ಅವನು ಹನ್ನೆರಡು ದಿನಗಳಲ್ಲಿಯೇ ಯಮನನ್ನು ನೋಡುತ್ತಾನೆ. ದೀಪವು ಆರಿಹೋದ ಮೇಲೆ ಅದರ ಕುಡಿಯಿಂದ ಉಂಟಾಗುವ ಗಂಧವು ಯಾವನಿಗೆ ತಿಳಿದುಬರುವುದೇ ಇಲ್ಲವೋ ಅವನು ಏಳು ದಿನಗಳಲ್ಲಿಯೇ ಯಮನನ್ನು ನೋಡುತ್ತಾನೆ. ಯಾವನಿಗೆ ಸ್ನಾನಮಾಡಿ ಅನುಲೇಪನಾದಿಗಳನ್ನು ಹೊಂದಿದ ಮೇಲೆಯೂ ಹೃದಯ, ಪಾದ, ಶಿರಸ್ಸುಗಳಲ್ಲಿ ತತ್ಕ್ಷಣದಲ್ಲಿಯೇ ಶೋಷಣೆಯು ಕಂಡುಬಂದಲ್ಲಿ ಅವನಿಗೆ ಮೂರು ದಿನಗಳಲ್ಲಿಯೇ ಮರಣ ಉಂಟಾಗುತ್ತದೆ. ಯಾವನಿಗೆ ಕಪೋಲಪ್ರದೇಶಗಳಲ್ಲಿ ಕೆಂಪಾದ ತಿಲಕಗಳೂ, ವರ್ಣವಿಕಾರವೂ ಉಂಟಾಗುತ್ತದೆಯೋ ಅವನಿಗೆ ಒಂದು ದಿನದಲ್ಲಿಯೇ ಮರಣ ಉಂಟಾಗುತ್ತದೆ.

ಅಂಗುಲಿಭ್ಯಾಂತು ಪಿಹಿತೆ ಶ್ರೋತ್ರೇ ತು ನ ಶೃಣೋತಿ ಯಃ　　|| ೨೦ ||

ಶಬ್ದಂ ನ ಪಶ್ಯೇತ್ತು ಮುಖಂ ನಿರ್ಮಲೇ ದರ್ಪಣೇ ತಥಾ |
ಪಶ್ಯೇಚ್ಛ ಪುರುಷಾನ್ ಪ್ರಾಪ್ತಾನ್ ಸದ್ಯೋ ಮರಣಮಾದಿಶೇತ್ || ೨೨ ||

ಮೂರ್ಧಧೂಮವಿನಾಶೇ ತು ಜಲಾದ್ರ್ರಾದ್ವಾ ತದುದ್ಭವೇತ್ |
ನಾಸಾ ಭಂಗೇನ ಧರ್ಮಜ್ಞಾ ದ್ಯಹ್ವಾನ್ಮರಣಮಾದಿಶೇತ್　　|| ೨೩ ||

ಸ್ಪರ್ಶವೃಷ್ಟಿರಸಘ್ರಾಣ ಶಬ್ದಚೇಷ್ಟಾವಿಪರ್ಯಯಃ |
ದೃಶ್ಯತೇ ತು ಮುಮೂರ್ಷೂಣಾಂ ಸ್ವಸ್ಥಾತುರಶರೀರಿಣಾಂ　　|| ೨೪ ||

ಶ್ಲಕ್ಷ್ಣಂ ಖಗಂ ವರಂ ಲಕ್ಷ್ಯ ಶೀತೋಷ್ಣಸ್ಯ ವಿಪರ್ಯಯಃ |
ಅಕಸ್ಮಾದ್ವೇತ್ತಿ ಯೋ ದೇಹೀ ದುರ್ಲಭಂ ತಸ್ಯ ಜೀವಿತಂ　　|| ೨೫ ||

ತೋಯವನ್ಮೇದಿನೀಂ ತೋಯಂ ಮೇದಿನೀಮಿವ ಪಶ್ಯತಿ |
ಅತೀಂದ್ರಿಯಂ ನಿರೀಕ್ಷೇತ ನ ವೀಕ್ಷೇತ ಕರಸ್ಥಿತಂ　　|| ೨೬ ||

೨೧–೨೫. ಬೆರಳುಗಳಿಂದ ಕಿವಿಯನ್ನು ಮುಚ್ಚಿಕೊಂಡಲ್ಲಿ ಯಾವನಿಗೆ ಶಬ್ದವು ಕೇಳಿಬರುವುದೇ ಇಲ್ಲವೋ ನಿರ್ಮಲವಾದ ಕನ್ನಡಿಯಲ್ಲಿಯೂ ತನ್ನ ಮುಖವನ್ನು ಯಾವನು ನೋಡುವುದಿಲ್ಲವೋ, ಮನುಷ್ಯರು ಸಮೀಪಕ್ಕೆ ಬರುತ್ತಿರುವುದನ್ನೇ ನೋಡುತ್ತಾನೆಯೋ ಅವನಿಗೆ ಆಗಲೇ ಮರಣ ಉಂಟಾಗುತ್ತದೆ. ತಲೆಯಲ್ಲಿ ಶಾಖವು ನಾಶಹೊಂದಿದರೂ ಅಥವಾ ನೀರಿನಿಂದ ತೊಯ್ದ ತಲೆಯಿಂದ ಶಾಖವು ಉದ್ಭವಿಸಿದರೂ ಮೂಗು ವಕ್ರವಾದಲ್ಲಿಯೂ ಅವನಿಗೆ ಮರಣ ಉಂಟಾಗುತ್ತದೆ. ಸ್ಪರ್ಶ, ರೂಪ, ರಸ, ಗಂಧ, ಶಬ್ದ ಇವುಗಳಲ್ಲಿ ಆಯಾಯ ಇಂದ್ರಿಯಕಾರ್ಯವು ವ್ಯತ್ಯಸ್ತವಾಗಿ ಕಂಡುಬಂದರೂ, ರೋಗದಿಂದಲಾಗಲಿ, ಸ್ವಸ್ಥತೆ ಇದ್ದಾಗಲಿ ನುಣುಪಾಗಿಯೂ, ವ್ಯತ್ಯಸ್ತವಾಗಿಯೂ, ಇರುವ ವಸ್ತುಗಳಲ್ಲಿಯೂ, ಶೀತೋಷ್ಣಗಳಲ್ಲಿಯೂ ವ್ಯತ್ಯಾಸ ಕಂಡುಬಂದಲ್ಲಿಯೂ ಅವನು ಬದುಕುವುದು ಕಷ್ಟ

೨೬–೩೦. ಭೂಮಿಯನ್ನು ಜಲದಂತೆ ತಿಳಿಯುವವನೂ, ಜಲವನ್ನು ಭೂಮಿಯಂತೆ ತಿಳಿಯುವವನೂ, ಅತೀಂದ್ರಿಯ ವಸ್ತುಗಳನ್ನು ನೋಡುವವನೂ, ಕೈಯಲ್ಲಿರುವ ವಸ್ತುವನ್ನೂ ನೋಡದಿರುವವನೂ ಭೂಮಿಯಂತೆ ಆಕಾಶವನ್ನೂ,

ಪೃಥಿವೀಮಿವಚಾಕಾಶಂ ಚಾಕಾಶಮಿವ ಮೇದಿನೀಂ ।
ಆಕಾಶಮಿವ ಚಾತ್ಮಾನಂ ಪೂರ್ಣಮಿಂದುಮಥಾತಿಥೌ ॥ ೨೭ ॥

ಶುಕ್ಲಕೃಷ್ಣವಿಪರ್ಯಾಸಂ ಸ್ಥೂಲಸೂಕ್ಷ್ಮವಿಪರ್ಯಯಂ ।
ವಿಪರ್ಯಾಸಂ ಸದಸತಾಂ ದೃಶ್ಯತೇ ಜೀವಿತಕ್ಷಯೇ ॥ ೨೮ ॥

ಷಣ್ಣಾಂ ರಸಾನಾಂ ಪರ್ಯಾಸ ಇಷ್ಟಾನಿಷ್ಟವಿಪರ್ಯಯಃ ।
ಸರ್ವಥಾಗ್ರಹಣಂ ಪಶ್ಯನ್ನಿಗ್ರಹಾತೀನ್ದ್ರಿಯಗ್ರಹಃ ॥ ೨೯ ॥

ಅಭಕ್ಷ್ಯಲೌಲ್ಯಮತ್ಯರ್ಥಂ ಮರಣಾಯೋಪಜಾಯತೇ ।
ಶೋಭನಾಶೋಭನಶ್ರೇಯಗ್ರಹಣೇ ತು ವಿಪರ್ಯಯಃ ॥ ೩೦ ॥

ಇಷ್ಟೈರನಿಷ್ಟೈಃ ಸಂಯೋಗೋಽನಿಷ್ಟೈರಿಷ್ಟಸಮಾಗಮಃ ।
ಭಯಧೈರ್ಯವಿಪರ್ಯಾಸೋ ಜಾಯತೇ ಪ್ರಾಣಸಂಶಯೇ ॥ ೩೧ ॥

ಆಕಾಶದಂತೆ ಭೂಮಿಯನ್ನೂ, ಆಕಾಶದಂತೆ ಆತ್ಮನನ್ನೂ ನೋಡುವವನೂ ಪೂರ್ಣಿಮೆ ಇಲ್ಲದಿರುವ ಬೇರೆ ತಿಥಿಯಲ್ಲಿ ಪೂರ್ಣಚಂದ್ರನನ್ನು ನೋಡುವವನೂ ಬಿಳುಪು, ಕಪ್ಪುಬಣ್ಣಗಳಿಗೂ, ಸ್ಥೂಲ ಸೂಕ್ಷ್ಮವಸ್ತುಗಳಿಗೂ ವ್ಯತ್ಯಸ್ತಬುದ್ಧಿ ಹೊಂದಿರುವವನೂ ಒಳ್ಳೆಯ ಮತ್ತು ಕೆಟ್ಟವಸ್ತುಗಳಲ್ಲಿ ವ್ಯತ್ಯಸ್ತಬುದ್ಧಿಯುಳ್ಳವನೂ ಸಹ ಮರಣಕ್ಕೆ ಗುರಿಯಾಗುತ್ತಾನೆ. ಷಡ್ರಸಗಳಲ್ಲಿ ವಿಪರೀತಬುದ್ಧಿ, ಇಷ್ಟಾನಿಷ್ಟಗಳಲ್ಲಿ ವ್ಯತ್ಯಸ್ತಬುದ್ಧಿ, ತಿಳುವಳಿಕೆ ಇಲ್ಲದೆಯೇ ಇರುವಿಕೆ, ಅತೀಂದ್ರಿಯವಸ್ತುಗಳ ದರ್ಶನವನ್ನು ತಡೆಯಲಾಗದ ಸ್ಥಿತಿ, ಅಭಕ್ಷ್ಯದಲ್ಲಿಯೇ ಅತ್ಯಂತ ಆಸೆ, ಇವೆಲ್ಲವೂ ಮರಣಕ್ಕಾಗಿಯೇ ಉಂಟಾಗುತ್ತವೆ. ಒಳ್ಳೆಯ ಮತ್ತು ಕೆಟ್ಟ ವಾಸನೆಗಳ ತಿಳುವಳಿಕೆಯಲ್ಲಿ ವ್ಯತ್ಯಸ್ತವಾದ ಸ್ಥಿತಿಯೂ ಮರಣಕ್ಕೆ ಸೂಚಕ.

೩೧-೩೪. ಪ್ರಾಣಸಂಶಯವುಂಟಾದ ಕಾಲದಲ್ಲಿ ಇಷ್ಟಾನಿಷ್ಟವಸ್ತುಗಳ ಸಮಾಗಮದಲ್ಲಿ ವೈಪರೀತ್ಯವೂ ಭಯಧೈರ್ಯ ಮೊದಲಾದ ಧರ್ಮಗಳಲ್ಲಿ ವ್ಯತ್ಯಾಸವೂ ತೋರಿಬರುತ್ತದೆ. ಹೀಗೆಯೇ ಅತಿದೀರ್ಘವಾದ ವಸ್ತುವು ಅತಿ

ಅತಿದೀರ್ಘೋಽತಿಹ್ರಸ್ವೋ ವಾ ಸತತಮುಷ್ಣೋಽತಿಶೀತಲಃ ।
ಉಚ್ಛ್ವಾಸಃ ಪ್ರಾಣಸಂತ್ಯಾಗೇ ಗತಸೂನಾಂ ಪ್ರಜಾಯತೇ ॥ ೩೨ ॥

ಅನಾಹತಾನಾಂ ಶಬ್ದಃ ಸ್ಯಾದಾಹತಾನಾಮಶಬ್ದತಾ ।
ಆಹತಾನಾಮಶಬ್ದತ್ವಂ ಮುಮೂರ್ಷೂಣಾಂ ನೃಣಾಂ ಗೃಹೇ ॥ ೩೩ ॥

ಉದಕ್ಪ್ರವೃತ್ತೇ ದಿವಸಸ್ಯ ನಾಥೇ
ಪುಣ್ಯೇ ದಿನೇ ಮೋಹವಿವರ್ಜಿತಸ್ಯ ।
ನಾರಾಯಣೇ ಚೇತಸಿ ಸಂಸ್ಥಿತೇ ವಾ
ಮೃತ್ಯುರ್ಭವೇತ್ಪುಣ್ಯವತೋ ದ್ವಿಜೇಂದ್ರಾಃ ॥ ೩೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಋಷೀನ್ಪ್ರತಿ ಅರಿಷ್ಟಯೋಗ ವರ್ಣನೋನಾಮಾಷ್ಟತ್ರಿಂಶದಧಿಕದ್ವಿಶತತಮೋಽಧ್ಯಾಯಃ

ಹ್ರಸ್ವವಾಗಿಯೂ ಪ್ರಕಾಶವಿರುವ ಸ್ಥಳದಲ್ಲಿ ಅಂಧಕಾರವೂ, ತಾಪವಿರುವ ಸ್ಥಳದಲ್ಲಿ ಶೈತ್ಯವೂ ಪ್ರಾಣತ್ಯಾಗ ಕಾಲದಲ್ಲಿ ತೋರಿಬರುತ್ತದೆ. ಭೇರ್‍ಯಾದಿಗಳಲ್ಲಿ ತಾಡನವಿಲ್ಲದಿದ್ದರೂ ಶಬ್ದವಾಗುವಂತೆಯೂ, ತಾಡನವಿದ್ದರೂ ಶಬ್ದವಿಲ್ಲದಂತೆಯೂ ಮರಣೋನ್ಮುಖನಾದವನಿಗೆ ಮನೆಯಲ್ಲಿಯೇ ಕಂಡುಬರುತ್ತದೆ. ಸೂರ್ಯನು ಉತ್ತರಾಯಣದಲ್ಲಿರುವಾಗ ಪುಣ್ಯಕರವಾದ ದಿನದಲ್ಲಿ ಅಜ್ಞಾನವಿಲ್ಲದಿರುವಾಗ ಅಥವಾ ನಾರಾಯಣನ ಧ್ಯಾನವಿರುವ ಯಾವ ಕಾಲದಲ್ಲಾಗಲಿ ಉಂಟಾಗುವ ಮರಣವು ಪುಣ್ಯಶಾಲಿಯಾದವನಿಗೆ ಮಾತ್ರ ಲಭಿಸುತ್ತದೆ

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದ ಹಂಸಗೀತೆಯಲ್ಲಿ ಋಷಿಗಳನ್ನು ಕುರಿತು ಹೇಳಲ್ಪಟ್ಟ ಅರಿಷ್ಟಯೋಗವರ್ಣನವೆಂಬ ಇನ್ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕೋನಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ಕೇದೋಷಾಃ ಪಾಪಶಮನಾಃ ಮನುಷ್ಯಾಣಾಂ ವಿನಾಶಕಾಃ |
ಕೇಗುಣಾಶ್ಚ ಮಹಾದೇವ ನಿತ್ಯಮಭ್ಯುದಯಾತ್ಮಕಾಃ || ೧ ||

|| ಹಂಸ ಉವಾಚ ||

ಸರ್ವೇಷಾಮೇವದೋಷಾಣಾಂ ಮಜ್ಞಾನಂ ಪರಮಂ ಮತಂ |
ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ || ೨ ||

ಕಾಮಃ ಕ್ರೋಧಸ್ತಥಾ ಲೋಭೋ ಹರ್ಷೋಮಾನಃ ಸದೈವ ಚ |
ಅಜ್ಞಾನೇನಾವೃತಂ ಜಂತುಂ ನಿವಿಶನ್ತೇ ದ್ವಿಜೋತ್ತಮಾಃ || ೩ ||

ಇನ್ನೂರ ಮೂವತ್ತೊಂಭತ್ತನೆಯ ಅಧ್ಯಾಯ.

೧-೪. ಋಷಿಗಳು ಪ್ರಶ್ನೆಮಾಡುತ್ತಾರೆ:—ಮನುಷ್ಯರ ಸ್ವರೂಪಕ್ಕೆ ನಾಶಕಗಳಾದ ದೋಷಗಳಾವುವು. ಇವನ ಅಭ್ಯುದಯಕ್ಕೆ ಸಾಧಕಗಳಾದ ಗುಣಗಳಾದರೂ ಯಾವುವು ಹಂಸವು ಹೇಳುತ್ತದೆ—ಎಲ್ಲಾ ದೋಷಗಳಿಗಿಂತಲೂ ಅಜ್ಞಾನವೇ ಮುಖ್ಯವಾದ ದೋಷ. ಇಂತಹ ಅಜ್ಞಾನದಿಂದಲೇ ಅಜ್ಞನಾಗಿ ಶಾಸ್ತ್ರೋಕ್ತವಾದ ಧರ್ಮಾಧರ್ಮಗಳಲ್ಲಿ ಶ್ರದ್ಧೆ ಇಲ್ಲದೆ ಸಂಶಯಹೊಂದಿ ನಷ್ಟನಾಗುತ್ತಾನೆ ಅಜ್ಞಾನದಿಂದ ಕೂಡಿದ ಪ್ರಾಣಿಯನ್ನು ಕಾಮ, ಕ್ರೋಧ, ಲೋಭ, ಹರ್ಷ, ಅಹಂಕಾರ ಇವುಗಳು ಯಾವಾಗಲೂ ಆವರಿಸಿಯೇ ಇರುತ್ತವೆ ಈ ಅಜ್ಞಾನದಿಂದಲೇ

ಅಜ್ಞಾನಾದೇವ ಪಾಪಾನಿ ವಿಚಿನೋತ್ಯವಿಚಕ್ಷಣಃ ।
ಅಜ್ಞಾನಾದುತ್ಪಥಂ ಗತ್ವಾ ನರಕಂ ಪ್ರತಿಪದ್ಯತೇ ॥ ೪ ॥

ಅಜ್ಞಾನೇನಾವೃತೋ ಜಂತುಃ ಶುಭೇ ಮಾರ್ಗೇ ನ ತಿಷ್ಠತಿ ।
ಅಜ್ಞಾನಶಮನೇ ಯತ್ನಃ ತತಃ ಕಾರ್ಯೋ ವಿಜಾನತಾ ॥ ೫ ॥

ಶಾಸ್ತ್ರಾನ್ವವೇಕ್ಷಣಂ ತಸ್ಯ ವೃದ್ಧಸೇವಾ ತಥೈವ ಚ ।
ತಥಾ ಚ ಗುರುಶುಶ್ರೂಷಾ ತ್ವಜ್ಞಾನಶಮನೀ ಮತಾ ॥ ೬ ॥

ಲೋಕದ್ವಯೇ ನಾಸ್ತಿ ಮಹಾನುಭಾವಾ
ಅಜ್ಞಾನತುಲ್ಯಃ ಪುರುಷಸ್ಯ ಶತ್ರುಃ ।
ಅತೋ ಹಿ ಲೋಕದ್ವಿತಯಂ ಸುಖಾರ್ಥೀ
ಜ್ಞಾನೇ ತು ಕುರ್ಯಾತ್ಪುರುಷಃ ಪ್ರಯತ್ನಂ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಜ್ಞಾನವರ್ಣನೋ ನಾಮ ಏಕೋನಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ವಿವೇಕವಿಲ್ಲದ ಮನುಷ್ಯನು ಪಾಪಗಳನ್ನು ಸಂಗ್ರಹಿಸಿಕೊಳ್ಳುತ್ತಾನೆ. ಅಜ್ಞಾನದಿಂದಲೇ ದುರ್ಮಾರ್ಗಗಾಮಿಯಾಗಿ ನರಕವನ್ನೂ ಹೊಂದುತ್ತಾನೆ.

೫-೭ ಅಜ್ಞಾನದಿಂದ ಆವರಿಸಲ್ಪಟ್ಟ ಪ್ರಾಣಿಯು ಶುಭಕರವಾದ ಮಾರ್ಗದಲ್ಲಿರುವುದೇ ಇಲ್ಲ. ಆದುದರಿಂದ ವಿವೇಕಿಯಾದ ಮನುಷ್ಯನು ಇಂತಹ ಅಜ್ಞಾನವನ್ನು ಶಮನಮಾಡಲು ತಕ್ಕ ಪ್ರಯತ್ನವನ್ನು ಹೊಂದಿಯೇ ಹೊಂದಬೇಕು ಮೊದಲು ಸಚ್ಛಾಸ್ತ್ರಗಳಲ್ಲಿ ಪರಿಶ್ರಮಹೊಂದಿ ಆಗಾಗ ತತ್ವಾರ್ಥಗಳನ್ನು ಅನುಸಂಧಾನಮಾಡಿಕೊಂಡಿರುವಿಕೆ, ಜ್ಞಾನವೃದ್ಧರಸೇವೆ, ಗುರುಶುಶ್ರೂಷಾ ಇವುಗಳು ತಮೋಗುಣೋದ್ರೇಕದಿಂದುಂಟಾಗುವ ಅಜ್ಞಾನಕ್ಕೆ ಶಮನವಾಗುತ್ತವೆ. ಅಜ್ಞಾನಕ್ಕೆ ಸಮಾನವಾದ ಶತ್ರುವು ಲೋಕದ್ವಯದಲ್ಲಿಯೂ ಇಲ್ಲ. ಆದುದರಿಂದ ಇಹಪರ ಲೋಕಗಳಲ್ಲಿ ಸುಖವನ್ನು ಬಯಸುವವನು ಜ್ಞಾನಾರ್ಜನೆಯಲ್ಲಿ ಹೆಚ್ಚಾಗಿ ಪ್ರಯತ್ನಪಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರ ಸಂವಾದದಲ್ಲಿ ಹಂಸಗೀತೆಯ ಜ್ಞಾನವರ್ಣನವೆಂಬ
ಇನ್ನೂರ ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಪಾಪೇನ ಸರ್ವದುಃಖಾನಾಂ ನರೋ ಭವತಿ ಭಾಜನಂ ।
ಪಾಪೇನ ನರಕಂ ಯಾತಿ ದ್ವೇಷ್ಯಶ್ಚೈಹ ತಥಾ ಭವೇತ್ || ೧ ||

ನರಃ ಪಾಪಸಮಾಚಾರಃ ಪಾಪಾದಪಿ ವಿನಶ್ಯತಿ ।
ಪಾಪಮೇಕಂ ಪರಂ ದುಃಖಂ ಸರ್ವೇಷಾಂ ದ್ವಿಜಪುಂಗವಾಃ || ೨ ||

ಕೃತಪುಣ್ಯೋಽಪಿ ಯಃ ಪಾಪಂ ಕರೋತಿ ಪುರುಷಃ ಕ್ವಚಿತ್ ।
ಸ್ವರ್ಗೇಽಪಿ ನ ಸುಖಂ ತಸ್ಯ ತದ್ಭಯಾದುಪಜಾಯತೇ || ೩ ||

ಸ ಏಕಃ ಪುರುಷೋ ಲೋಕೇ ಯಸ್ಯ ಪಾಪಂ ನ ವಿದ್ಯತೇ ।
ದೀನಾನ್ಧಕೃಪಣಾನಾಥಾಸ್ತಥಾ ಚ ಪರಮಾರ್ಭಕಾಃ || ೪ ||

ಇನ್ನೂರ ನಲವತ್ತನೆಯ ಅಧ್ಯಾಯ.

೧-೬. ಹಂಸವು ಹೇಳುತ್ತದೆ:—ಮನುಷ್ಯನು ಎಲ್ಲಾ ದುಃಖಗಳಿಗೂ ಭಾಗಿಯಾಗುವುದು ಪಾಪದಿಂದಲೇ, ನರಕಕ್ಕೆ ಸೇರುವುದೂ ಪಾಪದಿಂದಲೇ, ಈ ಲೋಕದಲ್ಲಿ ದ್ವೇಷಕ್ಕೆ ಗುರಿಯಾಗುವುದೂ ಪಾಪದಿಂದಲೇ. ಮೇಲೆಮೇಲೆ ಪಾಪವನ್ನೇ ಆಚರಿಸುವ ನರನು ದುಃಖ ಉಂಟಾಗುವುದಕ್ಕೆ ಮುಂಚೆ ಆ ಪಾಪಕರ್ಮದಿಂದಲೇ ನಾಶವನ್ನೂ ಹೊಂದುತ್ತಾನೆ. ಪಾಪವೆಂಬುದು ಒಂದಿದ್ದರೂ ಅದು ಎಲ್ಲರಿಗೂ ಬಹು ದುಃಖಕರ. ಪುಣ್ಯಶಾಲಿಯಾದ ಪುರುಷನೂ ಸಹ ಅಲ್ಪಸ್ವಲ್ಪ ಪಾಪವನ್ನು ಎಲ್ಲಿಯೋ

ತಿರ್ಯಗ್ಯೋನಿಗತಾಶ್ಚಾನ್ಯೇ ನರಕೇಷು ತಥಾಪರೇ ।
ಸ್ಥಾವರಾಸು ಚ ಯೋನೀಷು ತಿರ್ಯಗ್ಯೋನಿಷು ಚಾಪ್ಯಥ ॥ ೫ ॥

ವ್ಯಾಧಿಬಂಧವಧಕ್ಲೇಶತಾಡನಾನ್ಯಪ್ಯನೇಕಶಃ ।
ನರಃ ಪ್ರಾಪ್ನೋತಿ ಧರ್ಮಜ್ಞಸ್ತಥಾ ಪಾಪೇನ ಕರ್ಮಣಾ ॥ ೬ ॥

ಯೇ ಪಾಪಹೀನಾಃ ಪುರುಷಾಃ
ಪ್ರಧಾನಾಃ ತೇಷಾಂ ನ ದುಃಖಂ ಭವತೀಹ ಕಿಂಚಿತ್ ।
ತಸ್ಮಾತ್ಪ್ರಯತ್ನೇನ ವಿವರ್ಜನೀಯಂ ।
ಪಾಪಂ ಬುಧೈಃ ಪುಣ್ಯಚಯಶ್ಚ ಕಾರ್ಯಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಮುನೀನ್ಪ್ರತಿ
ಪಾಪನಿದರ್ಶನವರ್ಣನೋ ನಾಮ
ಚತ್ವಾರಿಂಶದುತ್ತರದ್ವಿಶತತಮೋಧ್ಯಾಯಃ

ಮಾಡಿದರೂ ಆ ಪಾಪಲೇಶದ ಭಯದಿಂದ ಪುಣ್ಯಫಲವಾದ ಸ್ವರ್ಗದಲ್ಲಿಯೂ ಅವನಿಗೆ ಸುಖವುಂಟಾಗುವುದಿಲ್ಲ. [1]ಯಾವನಿಗೆ ಪಾಪವೇ ಇಲ್ಲದಿರುವುದೋ ಅವನೇ ಲೋಕದಲ್ಲಿ ಪ್ರಧಾನನಾದ ಪುರುಷ. ಈ ಪಾಪದಿಂದಲೇ ದೈನ್ಯ, ಕಾರ್ಪಣ್ಯ, ನಿರ್ಗತಿಕತ್ವ, ಶಿಶುತ್ವ, ಪಶುಪಕ್ಷ್ಯಾದಿಗರ್ಭಪ್ರಾಪ್ತಿ, ನರಕಗಮನ, ವೃಕ್ಷಾದಿ ಸ್ವರೂಪ, ವ್ಯಾಧಿ. ಬಂಧನ, ವಧ, ಕ್ಲೇಶ, ತಾಡನ, ಇತ್ಯಾದಿ ಅನರ್ಥಗಳನ್ನೂ ಹೊಂದುತ್ತಾನೆ.

೭. ಪಾಪವಿಲ್ಲದ ಪ್ರಧಾನಪುರುಷರಿಗೆ ಈ ಲೋಕದಲ್ಲಿಯೂ ಯಾವ ದುಃಖವೂ ಉಂಟಾಗುವುದಿಲ್ಲ. ಆದುದರಿಂದ ವಿವೇಕಿಗಳು ಪಾಪಕರ್ಮವನ್ನೂ ಬಹುಮಟ್ಟಿಗೂ ತ್ಯಜಿಸಬೇಕು. ಪುಣ್ಯಕಾರ್ಯವನ್ನೂ ಹೆಚ್ಚಾಗಿ ಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಋಷಿಗಳನ್ನು ಕುರಿತು ಉಂಟಾದ ಹಂಸಗೀತೆಯಲ್ಲಿ
ಪಾಪನಿದರ್ಶನ ವರ್ಣನವೆಂಬ ಇನ್ನೂರ ನಲವತ್ತನೆಯ
ಅಧ್ಯಾಯ ಮುಗಿದಿದೆ.

---

1 ಈ ವಾಕ್ಯಕ್ಕೆ ಪಾಪವಿಲ್ಲದವನು ಲೋಕದಲ್ಲಿ ಪರಪುರುಷನೊಬ್ಬನೇ ಎಂದೂ ಅರ್ಥ ವಾಗುತ್ತದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಕಾಮಾನುಸಾರೀ ಪುರುಷಃ ಕಾಮಾದನುವಿನಶ್ಯತಿ ।
ಯಸ್ತು ಕೇವಲಕಾಮಾತ್ಮಾ ಸೋಽಚಿರಾದ್ಭ್ರಶ್ಯತೇ ಶ್ರಿಯಃ || ೧ ||

ಕಾಮಾನುಸಾರೀ ಧರ್ಮಾರ್ಥೇ ನ ತಿಷ್ಠತಿ ಚಿರಂ ನರಃ ।
ತಸ್ಮಾತ್ಕಾಮಂ ನ ಸೇವೇತ ನರೋ ಧರ್ಮಾರ್ಥವರ್ಜಿತಂ || ೨ ||

ಕ್ಷಯೋ ಧರ್ಮಾರ್ಥಯೋಃ ಕಾಮೇ ಧ್ರುವಂ ಭವತಿ ಸೇವಿತೇ ।
ಕಾಮಾಂಧೋ ನ ವಿಜಾನಾತಿ ಕರ್ತವ್ಯಂ ಕಿಂಚಿದೇವ ತು || ೩ ||

ಪರದಾರೇ ತ್ವಗಮ್ಯೇ ವಾ ಪ್ರಪಾತಂ ನಾವಬುಧ್ಯತೇ ।
ಧ್ರುವಂ ಪ್ರಾಣವಿಯೋಗೇಽಪಿ ಕ್ರೀಡಾಮಿತ್ಯೇವ ಮನ್ಯತೇ || ೪ ||

ಇನ್ನೂರ ನಲವತ್ತೊಂದನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಕಾಮವೆಂಬ ಪುರುಷಾರ್ಥವನ್ನೇ ಅನುಸರಿಸುವವನು ಆ ಕಾಮದೊಡನೆಯೇ ತಾನೂ ನಾಶಹೊಂದುತ್ತಾನೆ ಕೇವಲ ಕಾಮಾರ್ಥಿಯಾದವನು ಸಂಪತ್ತಿನಿಂದಲೂ ಭ್ರಂಶಹೊಂದುತ್ತಾನೆ. ಇಂತಹ ಕಾಮಾನುಸಾರಿಯು ಧರ್ಮಾರ್ಥಗಳೆಂಬ ಪುರುಷಾರ್ಥಗಳಲ್ಲಿ ನಿಲ್ಲುವುದೇ ಇಲ್ಲ. ಆದುದರಿಂದ ಧರ್ಮಾರ್ಥಗಳಿಲ್ಲದ ಕೇವಲ ಕಾಮವನ್ನು ಯಾವ ಮನುಷ್ಯನೂ ಸೇವಿಸಬಾರದು ಕಾಮಸೇವನೆಯು ಹೆಚ್ಚಾದ ಹಾಗೆಲ್ಲಾ ಧರ್ಮಾರ್ಥಗಳು ಕ್ಷಯಿಸುತ್ತವೆ. ಕಾಮಾಂಧನಾದವನು ಯಾವ ಕರ್ತವ್ಯವನ್ನೂ ತಿಳಿಯುವುದೇ ಇಲ್ಲ. ಪರಸ್ತ್ರೀಯಲ್ಲಿಯೂ, ಅಗಮ್ಯಸ್ಥಲದಲ್ಲಿಯೂ ತನಗೆ ಉಂಟಾಗುವ ಪತನವನ್ನು ತಿಳಿಯುವುದೇ ಇಲ್ಲ. ಪ್ರಾಣನಾಶವಾಗುತ್ತಿದ್ದರೂ ಅದನ್ನು ಕ್ರೀಡೆ ಎಂದೇ ತಿಳಿಯುತ್ತಾನೆ.

ಯಸ್ತು ಕೇವಲಕಾಮಾತ್ಮಾ ಧರ್ಮಾರ್ಥಪರಿವರ್ಜಿತಃ ।
ಕಾಮಮಾಸೇವತೇ ನಿತ್ಯಂ ವಿಜ್ಞೇಯಃ ಪುರುಷಾಧಮಃ ॥ ೫ ॥

ಧರ್ಮೇ ಕ್ಷೀಣೇ ತಥೈವಾರ್ಥೇ ಕಾಮಮಾಸೇವಿತೇ ದ್ವಿಜಾಃ ।
ಧ್ರುವಂ ನರಕಪಾತಃ ಸ್ಯಾನ್ನಾತ್ರಕಾರ್ಯಾ ವಿಚಾರಣಾ ॥ ೬ ॥

ಧರ್ಮಾರ್ಥಯೋರ್ಯುಕ್ತಂ ಪುರುಷಸ್ತು ಕಾಮಂ
ಸಂಸೇವಮಾನೋ ಹಿ ನಜಾತು ಕಾಮ್ಯಃ ।
ವಿಯೋಗಮಾಪ್ನೋತಿ ತತಸ್ತು ವಿದ್ವಾನ್
ಧರ್ಮಾರ್ಥಯೋಃ ಕ್ತಂ ಸತತಂ ನಿಷೇವೇತ್ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಯಾಂಮುನೀನ್‌ಪ್ರತಿ
ಕಾಮಕೃತ್ಯವರ್ಣನಂ
ನಾಮೈಕಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫–೭. ಯಾವನು ಕೇವಲ ಕಾಮಪರನಾಗಿ ಧರ್ಮಾರ್ಥರಹಿತವಾದ ಕೇವಲ ಕಾಮವನ್ನೇ ಸೇವಿಸುತ್ತಾನೆಯೋ ಅವನು ಪುರುಷಾಧಮನೆಂದೇ ತಿಳಿಯಬೇಕು. ಧರ್ಮವು ಕ್ಷಯಹೊಂದಿದ ಮೇಲೆ ಅರ್ಥವನ್ನೇ ವಿಶೇಷವಾಗಿ ಸೇವಿಸಿದರೂ ಅವನಿಗೆ ನರಕಪಾತವು ನಿಶ್ಚಿತ. ಈ ವಿಷಯದಲ್ಲಿ ವಿಚಾರಮಾಡಬೇಕಾದುದಿಲ್ಲ. ಧರ್ಮಾರ್ಥಗಳೊಡನೆ ಕಾಮವನ್ನೂ ಇಚ್ಛೆಬಂದಂತೆ ಸೇವಿಸುವವನು ಕಾಮದಿಂದ ಬಿಡುಗಡೆ ಹೊಂದುವುದೂ ಇಲ್ಲ. ಆದುದರಿಂದ ವಿವೇಕಿಯಾದವನು ಧರ್ಮಾರ್ಥಗಳೊಡನೆ ವಿರೋಧವಿಲ್ಲದ ಕಾಮವನ್ನೇ ಯಾವಾಗಲೂ ಸೇವಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಯಲ್ಲಿ ಮುನಿಗಳನ್ನು ಕುರಿತು
ಹೇಳಲ್ಪಟ್ಟ ಕಾಮಕೃತ್ಯವರ್ಣನವೆಂಬ
ಇನ್ನೂರ ನಲವತ್ತೊಂದನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ನಾತ್ಯರ್ಥಹರ್ಷಃ ಕಾರ್ಯಸ್ತು ಕದಾಚಿದಪಿ ಪಂಡಿತೈಃ ।
ಅತ್ಯರ್ಥಹೃಷ್ಟಃ ಪುರುಷಃ ಕಾರ್ಯಂ ವೇತ್ತಿ ನ ಕಿಂಚನ ॥ ೧ ॥

ಸಂಪದಂ ಚಂಚಲಾಂ ಪ್ರಾಪ್ಯ ಹರ್ಷಂ ಪ್ರಾಜ್ಞೋ ವಿವರ್ಜಯೇತ್ ।
ದೃಷ್ಟಾ ಹಿ ಬಹವೋ ನಷ್ಟಾ ಲೋಕೇ ಸಂಪತ್ಪ್ರಲಂಬಿತಾಃ ॥ ೨ ॥

ಸಂಪತ್ತೌ ವಾ ವಿಪತ್ತೌ ವಾ ಸ್ವಭಾವಂ ನ ತ್ಯಜೇದ್ಬುಧಃ ।
ಚಂಚಲಾಃ ಸಂಪದಃ ಸರ್ವಾಃ ಸ್ವಭಾವಾದೇವ ವೈ ದ್ವಿಜಾಃ ॥ ೩ ॥

ಕಸ್ತಾಸಾಂ ವಿಶ್ವಸೇತ್ಪ್ರಾಜ್ಞೋ ವೇಶ್ಯಾಸ್ತ್ರೀಣಾಂ ಯಥಾ ತಥಾ ।
ಸಂಸರ್ಗಾನ್ಮೋಹಮಾಪ್ನೋತಿ ತಾಸಾಂ ಪ್ರಾಪ್ನೋತಿ ಮಾನವಃ ॥ ೪ ॥

ಇನ್ನೂರ ನಲವತ್ತೆರಡನೆಯ ಅಧ್ಯಾಯ

೧-೪. ಹಂಸವು ಹೇಳುತ್ತದೆ :— ಪಂಡಿತರಾದವರು ಯಾವಾಗಲೂ ಹೆಚ್ಚಾಗಿ ಹರ್ಷಹೊಂದಬಾರದು. ಹೆಚ್ಚಾಗಿ ಹರ್ಷಹೊಂದಿದವನು ಮಾಡಬೇಕಾದ ಯಾವ ಕಾರ್ಯವನ್ನೂ ತಿಳಿಯುವುದೇ ಇಲ್ಲ. ಚಂಚಲವಾದ ಸಂಪತ್ತನ್ನು ಹೊಂದಿದವನು ಅದರಿಂದುಂಟಾದ ಹರ್ಷವನ್ನು ಬುದ್ಧಿಶಾಲಿಯಾದವನು ತ್ಯಜಿಸಬೇಕು. ಸಂಪತ್ತನ್ನೇ ಅವಲಂಭಿಸಿ ಎಚ್ಚಾಗಿ ಹರ್ಷಹೊಂದಿದ ಅನೇಕರು ನಷ್ಟರಾಗಿರುವುದನ್ನು ನಾವು ನೋಡಿದ್ದೇವೆ. ಆದುದರಿಂದ ಸಂಪತ್ಕಾಲದಲ್ಲಿಯೂ, ವಿಪತ್ಕಾಲದಲ್ಲಿಯೂ, ಜ್ಞಾನಿ ಯಾದವನು ಸ್ವಸ್ವಭಾವವನ್ನು ಯಾವಾಗಲೂ ಬಿಡಬಾರದು. ಸಂಪತ್ತುಗಳು ಸ್ವಭಾವದಿಂದಲೇ ಅತಿ ಚಂಚಲಗಳು. ವೇಶ್ಯೆಯಂತಿರುವ ಇಂತಹ ಸಂಪತ್ತುಗಳಲ್ಲಿ ಯಾರು ತಾನೆ ವಿಶ್ವಾಸವಿಡಬಹುದು. ಇವುಗಳ ಸಂಸರ್ಗಮಾತ್ರದಿಂದಲೇ ಮನುಷ್ಯನು ವಿವೇಕವನ್ನು ಕಳೆದುಕೊಂಡು ಮೋಹಗೊಳ್ಳುತ್ತಾನೆ.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಹಿ ಜೀವಿತಂ ॥ ೫ ॥

ನ ಪ್ರಜ್ಞಾ ಧನಲಾಭಾಯ ನ ಜಾಡ್ಯಮಸಮೃದ್ಧಯೇ ।
ಲೋಕಪರ್ಯಾಯವೃತ್ತಾನ್ತಂ ಪ್ರಾಜ್ಞೋ ಜಾನಾತಿ ನೇತರಃ ॥ ೬ ॥

ಪ್ರಾಜ್ಞಸ್ತು ಸಮ್ಯಕ್ಪಲಾಂ ವಿದಿತ್ವಾ
ತಾಂ ಪ್ರಾಪ್ಯ ಹರ್ಷಂ ಪರಿವರ್ಜಯೇತ ।
ಸಂಪದ್ವಿನಾಶೇ ನ ಚ ದುಃಖವಿಷಾ-
ಯಾದ್ಯದ್ಭಾವಿ ತದ್ಭಾವಿ ನ ತಸ್ಯ ನಾಶಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಪ್ರಹರ್ಷದೋಷವರ್ಣನೋ ನಾಮ ದ್ವಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫-೭. ಧನಧಾನ್ಯಾದಿಸಮೃದ್ಧಿಗಳೆಲ್ಲವೂ ಒಂದಾನೊಂದು ಕಾಲದಲ್ಲಿ ನಾಶ ಹೊಂದಿಯೇ ಹೊಂದಬೇಕು ಬಹಳ ಅಭಿವೃದ್ಧಿಹೊಂದಿದ ಯಾವುದಾದರೂ ಕೊನೆಗೆ ಪತನಹೊಂದಿಯೇ ಹೊಂದಬೇಕು. ಇಷ್ಟವಸ್ತುಗಳ ಸಂಯೋಗವು ಕೊನೆಯಲ್ಲಿ ವಿಶ್ಲೇಷ ಹೊಂದಿಯೇ ಹೊಂದಬೇಕು. ಜೀವಿತಕ್ಕೂ ಮರಣವೇ ಕೊನೆಯ ದಶೆಯಲ್ಲವೇ, ಆದುದರಿಂದ ಪ್ರಜ್ಞೆಯು ಧನಸಮೃದ್ಧಿಗೂ ಕಾರಣವಲ್ಲ ಅಪ್ರಜ್ಞೆಯು ಅಸಮೃದ್ಧಿಗೂ ಕಾರಣವಲ್ಲ. ಲೋಕದಲ್ಲಿರುವ ಪ್ರಾಣಿಗಳಲ್ಲಿ ಇವುಗಳಿಗಿರುವ ಕಾರ್ಯಾಕಾರಣಭಾವ ವೈಷಮ್ಯವನ್ನು ಬುದ್ಧಿವಂತನೇ ತಿಳಿಯುತ್ತಾನೆ ಇತರನಿಗೆ ಇದು ಗೋಚರವಲ್ಲ. ಆದುದರಿಂದ ಪ್ರಾಜ್ಞನಾದವನು ಸಂಪತ್ತಿನ ಅಸ್ಥಿರತೆಯನ್ನು ತಿಳಿದು ಅದರಿಂದ ಹರ್ಷಹೊಂದಬಾರದು. ಸಂಪತ್ತು ನಷ್ಟವಾದರೂ ಮನುಷ್ಯನು ದುಃಖಿಯಾಗಲಾರನು. ಕರ್ಮಾನುಗುಣವಾದ ಮುಂದಿನ ಸುಖದುಃಖಗಳು ಅನಿವಾರ್ಯವಾದುದರಿಂದ ಅದಕ್ಕೆ ನಾಶವೇ ಇಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯ ಪ್ರಹರ್ಷದೋಷವರ್ಣನವೆಂಬ ಇನ್ನೂರ ನಲವತ್ತೆರಡನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಮಾನಂ ವಿವರ್ಜಿತಂ ಸದ್ಭಿರ್ವರ್ಜನೀಯಂ ಸದಾ ಬುಧೈಃ ।
ಮಾನೇನ ನಷ್ಟಾ ಬಹವೋ ರಾಜಾನಃ ಸಪರಿಚ್ಛದಾಃ ॥ ೧ ॥

ಬ್ರಾಹ್ಮಣ್ಯಾಚ್ಚ ಪರಿಭ್ರಷ್ಟಾ ಬ್ರಾಹ್ಮಣಾ ಬಹವೋ ದ್ವಿಜಾಃ ।
ಸರ್ವದೋಷಾಸ್ಪದಂ ಮಾನಂ ಲೋಕದ್ವಯವಿಘಾತಕಂ ॥ ೨ ॥

ಯುಕ್ತಾಯುಕ್ತಂ ನ ಜಾನಾತಿ ಮಾನೇನ ಪುರುಷಾಧಮಃ ।
ಮಾನಗ್ರಸ್ತೋ ನರೋ ಲೋಕೇ ಗುರೂನಪ್ಯವಮನ್ಯತೇ ॥ ೩ ॥

ಕರೋತ್ಯಕಾರ್ಯಂ ಪುರುಷೋ ಮಾನೇನ ಚ ತಥಾ ಧ್ರುವಂ ।
ಮಾನಗ್ರಾಹಗೃಹೀತಸ್ಯ ನಾಸ್ತಿ ಮೋಕ್ಷಃ ಕಥಂ ಚನ ॥ ೪ ॥

ಇನ್ನೂರ ನಲವತ್ತಮೂರನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ :—ಅಹಂಕಾರವೆಂಬುದು ಬಹುಮಟ್ಟಿಗೂ ಸಿಂದ್ಯವಾದುದು. ಸತ್ಪುರುಷರಾದ ಜ್ಞಾನಿಗಳು ಅದನ್ನು ತ್ಯಜಿಸಲೇಬೇಕು. ಈ ಅಹಂಕಾರದಿಂದಲೇ ಅನೇಕ ರಾಜರೂ ತಮ್ಮ ಪರಿಜನರೊಡನೆ ನಾಶ ಹೊಂದಿದರು. ಅನೇಕ ಬ್ರಾಹ್ಮಣರೂ, ಬ್ರಾಹ್ಮಣ್ಯದಿಂದ ಭ್ರಷ್ಟರಾದರು. ಎಲ್ಲಾ ದೋಷಗಳಿಗೂ ಆಕರದಂತಿರುವ ಈ ಅಹಂಕಾರವು ಲೋಕದ್ವಯಕ್ಕೂ ನಾಶಕವಾಗುತ್ತದೆ. ಇಂತಹ ಮಾನದಿಂದ ಕೂಡಿದ ಪುರುಷಾಧಮನು ಯುಕ್ತಾಯುಕ್ತಗಳನ್ನೇ ತಿಳಿಯುವುದಿಲ್ಲ. ಇಂತಹವನು ಲೋಕದಲ್ಲಿ ಗುರುಗಳನ್ನೂ ತಿರಸ್ಕಾರ ಬುದ್ಧಿಯಿಂದ ನೋಡುತ್ತಾನೆ. ಇಂತಹ ಅಹಂಕಾರಿಯೂ ಅನೇಕ ಅಕಾರ್ಯಗಳನ್ನೂ ಮಾಡಿಯೇ

ಕಾಮಃ ಕ್ರೋಧಶ್ಚ ಲೋಭಶ್ಚ ಸರ್ವಜಂತುವಿನಾಶಕಾಃ ।
ಮಾನಗ್ರಸ್ತಂ ತು ಪುರುಷಮಾವಿಶಂತಿ ದ್ವಿಜೋತ್ತಮಾಃ ॥ ೫ ॥

ಮಾನಾಭಿಭೂತಶ್ಚ ತಥಾ ನರಕಂ ಪ್ರತಿಪದ್ಯತೇ ।
ಅಪ್ರತಿಷ್ಠಂ ನರಶ್ರೇಷ್ಠಾಸ್ತಸ್ಮಾತ್ತಂ ಪರಿವರ್ಜಯೇತ್ ॥ ೬ ॥

ಶತ್ರುರ್ನಮಾನೇನ ಸಮೋಽಸ್ತಿ ಪುಂಸೋ
ಮಾನೇನ ನಾಶಂ ವ್ರಜತೀಹ ಜಂತುಃ ।
ಮಾನೋಹಿ ತಸ್ಮಾತ್ಪರಿವರ್ಜನೀಯೋ
ಬುಧೈಸ್ತು ನಿತ್ಯಂ ನರಕಸ್ಯ ಮಾರ್ಗಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಮಾನದೋಷವರ್ಣನೋ ನಾಮ ತ್ರಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಮಾಡುತ್ತಾನೆ. ಈ ಮಾನವೆಂಬ ಮೊಸಳೆಯಿಂದ ಆಕ್ರಾಂತನಾದವನಿಗೆ ಯಾವ ವಿಧದಲ್ಲಿಯೂ ಮೋಕ್ಷವಿಲ್ಲ. ಸರ್ವಪ್ರಾಣಿನಾಶಕಗಳಾದ ಕಾಮ, ಕ್ರೋಧ, ಲೋಭಗಳು ಇಂತಹ ಅಹಂಕಾರಿಯನ್ನು ಆಶ್ರಯಿಸಿ ನೆಲಸುತ್ತವೆ.

೬–೭. ಈ ಅಹಂಕಾರದಿಂದ ಆವರಿಸಲ್ಪಟ್ಟವನು ನರಕವನ್ನೇ ಹೊಂದುತ್ತಾನೆ. ಮನುಷ್ಯನ ಉತ್ಕರ್ಷಕ್ಕೆ ವಿರೋಧಿಯಾದ ಈ ಅಹಂಕಾರವನ್ನು ತ್ಯಜಿಸಲೇಬೇಕು. ಈ ಅಹಂಕಾರಕ್ಕೆ ಸಮಾನವಾದ ಶತ್ರುವು ಮನುಷ್ಯನಿಗೆ ಬೇರೊಂದಿಲ್ಲ. ಇದರಿಂದ ಅನೇಕ ಪ್ರಾಣಿಗಳು ನಾಶಹೊಂದುತ್ತವೆ. ಪಂಡಿತರಾದವರು ನರಕದ ಬಾಗಿಲಿನಂತಿರುವ ಈ ಅಹಂಕಾರವನ್ನು ತ್ಯಜಿಸಿ ಯಾವಾಗಲೂ ದೂರದಲ್ಲಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರಸಂವಾದದಲ್ಲಿ ಹಂಸಗೀತೆಯ ಮಾನದೋಷವರ್ಣನವೆಂಬ ಇನ್ನೂರ ನಲವತ್ತಮೂರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುಶ್ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಮದೋ ವಿವರ್ಜಿತಃ ಸದ್ಭಿರ್ವರ್ಜನೀಯಃ ಪ್ರಯತ್ನತಃ ।
ಮದೇ ತು ಬಹವೋ ದೋಷಾ ಲೋಕದ್ವಯವಿಘಾತಕಾಃ ॥ ೧ ॥

ಮತ್ತಃ ಕಾರ್ಯಂ ನ ಜಾನಾತಿ ಗುರೂನಪ್ಯವಮನ್ಯತೇ ।
ಮತ್ತಸ್ಯ ನರಕದ್ವಾರಂ ನಿತ್ಯಂ ವಿಪ್ರಾಸ್ತ್ವಪಾವೃತಂ ॥ ೨ ॥

ಮತ್ತೋ ಭಯಂ ನ ಜಾನಾತಿ ಮರಣೇಪ್ಯತಿಕುತ್ಸಿತೇ ।
ಮತ್ತೋ ಮೋಹಸಮಾಪನ್ನೋ ನ ವಿಜಾನಾತಿ ಕಿಂಚನ ॥ ೩ ॥

ಇನ್ನೂರ ನಲವತ್ತನಾಲ್ಕನೆಯ ಅಧ್ಯಾಯ.

ಹಂಸವು ಹೇಳುತ್ತದೆ:—ಮದವೂ ನಿಂದ್ಯವಾದ್ದು. ಅದನ್ನೂ ಸತ್ಪುರುಷರು ಪ್ರಯತ್ನಪೂರ್ವಕವಾಗಿ ಬಿಡಬೇಕು. ಮದದಲ್ಲಿಯೂ ಲೋಕದ್ವಯ ವಿಘಾತಕಗಳಾದ ಬಹುದೋಷಗಳಿವೆ. ಮತ್ತನು ಯಾವ ಕಾರ್ಯವನ್ನೂ ವಿವೇಚನೆಯಿಂದ ತಿಳಿಯುವುದಿಲ್ಲ. ಗುರುಗಳನ್ನೂ ತಿರಸ್ಕರಿಸುತ್ತಾನೆ. ಮತ್ತನಾದವನಿಗೆ ನಿತ್ಯವೂ ನರಕದ ಬಾಗಿಲು ತೆರೆದೇ ಇರುತ್ತದೆ. ನಿಂದ್ಯವಾದ ಮರಣ ಪ್ರಸಂಗವಿದ್ದರೂ ಮತ್ತನಿಗೆ ಭಯವುಂಟಾಗುವುದಿಲ್ಲ. ಅಜ್ಞಾನದಿಂದ ಕೂಡಿದ ಮತ್ತನು ಏನನ್ನೂ ತಿಳಿಯುವುದೇ ಇಲ್ಲ. ಎಲ್ಲಾ ಮದಗಳಿಗಿಂತಲೂ ಮದ್ಯಸೇವನೆಯಿಂದುಂಟಾದ

ಮದಾನಾಮಪಿ ಸರ್ವೇಷಾಂ ಜ್ಞೇಯಃ ಪಾನಮದೋಽಧಮಃ ।
ತೇನಾಭಿಭೂತಃ ಪುರುಷೋ ನ ಮೃತಾದತಿರಿಚ್ಯತೇ || ೪ ||

ಅಜ್ಞಾನತುಲ್ಯಂ ನಹಿ ದೋಷಮಸ್ತಿ
ಹೇತುಶ್ಚ ತಸ್ಯೇಹ ಪರೋ ಮದಃ ಸ್ಯಾತ್ ।
ತಸ್ಮಾತ್ಪ್ರಯತ್ನೇನ ಮದಸ್ಯ ಹೇತು-
ರ್ನರೇಣ ಪಾನಂ ಪರಿವರ್ಜನೀಯಂ || ೫ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಮುನೀನ್ಪ್ರತಿ
ಮದದೋಷವರ್ಣನೋ ನಾಮ
ಚತುಶ್ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಮದವು ಬಹು ನಿಂದ್ಯವಾದ್ದು. ಅದರಿಂದ ಆವರಿಸಲ್ಪಟ್ಟ ಮನುಷ್ಯನು ಮೃತನಂತೆಯೇ ಆಗುತ್ತಾನೆ ಅಜ್ಞಾನಕ್ಕೆ ಸಮಾನವಾದ ಮತ್ತೊಂದು ದೋಷವಿಲ್ಲ. ಅದಕ್ಕೂ ಸಹ ಮದವೇ ಮುಖ್ಯವಾದ ಕಾರಣ. ಆದುದರಿಂದ ಮದಕ್ಕೆ ಕಾರಣವಾದ ಮದ್ಯಪಾನವನ್ನು ಪ್ರಯತ್ನದಿಂದಲೂ ತ್ಯಜಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಹಂಸಗೀತೆಯ ಮದದೋಷವರ್ಣನವೆಂಬ
ಇನ್ನೂರ ನಲವತ್ತನಾಲ್ಕನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಲುಬ್ಧೋ ದೋಷಾನ್ನ ಜಾನಾತಿ ಲುಬ್ಧಃ ಪಾಪಂ ನ ಬುಧ್ಯತೇ ।
ನರೋ ಲೋಭಸಮಾವಿಷ್ಟೋ ವಶಮೇತಿ ತಥಾಪರಾಂ ॥ ೧ ॥

ಜೀರ್ಯಂತಿ ಜೀರ್ಯತಃ ಕೇಶಾ ನಖಾಃ ಜೀರ್ಯಂತಿ ಜೀರ್ಯತಃ ।
ಜೀರ್ಯಂತಿ ಜೀರ್ಯತೋ ದಂತಾಃ ತೃಷ್ಣೈಕಾ ನ ಜೀರ್ಯತೇ ॥ ೨ ॥

ತೃಷ್ಣಾ ಖನಿರಗಾಧೇಯಮಪೂರ್ವಾ ದ್ವಿಜಪುಂಗವಾಃ ।
ಪೂರ್ಯಮಾಣಾಪಿ ಸತತಂ ಖನ್ಯತೇಽಭ್ಯಧಿಕಂ ತಯಾ ॥ ೩ ॥

ನ ತಾಂ ಪೂರಯಿತುಂ ಶಕ್ತಃ ಕದಾಚಿದಪಿ ಕಶ್ಚನ ।
ನ ತಾಂ ಪೂರಯಿತುಂ ಶಕ್ತಾಃ ಸರ್ವೇ ಸಂತೋಷಮಾಶ್ರಿತಾಃ ॥ ೪ ॥

ಇನ್ನೂರ ನಲವತ್ತೈದನೆಯ ಅಧ್ಯಾಯ.

೧–೪. ಹಂಸವು ಹೇಳುತ್ತವೆ:—ಲೋಭ ಉಳ್ಳವನು ಯಾವ ದೋಷಗಳನ್ನೂ ತಿಳಿಯುವುದಿಲ್ಲ; ಪಾಪವನ್ನೂ ತಿಳಿಯುವುದಿಲ್ಲ. ಲೋಭದಿಂದ ಕೂಡಿದ ಮನುಷ್ಯನು ವಿಪತ್ತಿಗೂ ಗುರಿಯಾಗುತ್ತಾನೆ. ವೃದ್ಧಾಪ್ಯ ಹೊಂದಿದವನಿಗೆ ಕೂದಲುಗಳೂ ನರೆಯುತ್ತವೆ. ಉಗುರುಗಳೂ ಜೀರ್ಣವಾಗುತ್ತವೆ. ಹಲ್ಲುಗಳೂ ಶಿಥಿಲವಾಗುತ್ತವೆ. ಆಶೆಯು ಮಾತ್ರ ನೆರೆಯುವುದಿಲ್ಲ (ಶಿಥಿಲವಾಗುವುದಿಲ್ಲ). ಎಲೈ ಬ್ರಾಹ್ಮಣರೇ, ಆಶೆ ಎಂಬ ಈ ವಿಲಕ್ಷಣವಾದ ಗಣಿಯು ಬಹಳ ಆಳವಾದದ್ದು ಇದು ಯಾವಾಗಲೂ ತುಂಬಲ್ಪಡುತ್ತಿದ್ದರೂ ಅಂತಹ ಪೂರಕ ವಸ್ತುಗಳಿಂದಲೇ ಪುನಃ ಪುನಃ ಆಳವೇ ಆಗುತ್ತದೆ. ಯಾವನೂ ಅದನ್ನು ಪೂರ್ತಿಗೊಳಿಸಲಾರನು. ಸಂತುಷ್ಟರಾಗಿರುವ ಅನೇಕರೂ ಅದನ್ನು ಪೂರ್ತಿಗೊಳಿಸಲಾರರು.

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ಪರ್ಯಾಪ್ತಮಿತಿ ಮತ್ವಾ ಶಮಂ ವ್ರಜೇತ್ ॥ ೫ ॥

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಕೋ ರೋಗಃ ತಾಂ ತೃಷ್ಣಾಂ ತ್ಯಜತಃ ಸುಖಂ ॥ ೬ ॥

ಲುಬ್ಧಸ್ಯ ಬಂಧುರ್ನಸುತೋ ಗುರುರ್ವಾ
ಲುಬ್ಧಸ್ಯ ಲೋಕಾ ನ ಚ ಲೋಕಯಾತ್ರಾ ।
ಲುಬ್ಧಸ್ಯ ದೋಷಾಃ ಸಕಲಾಃ ಪ್ರದಿಷ್ಟಾಃ
ಲೋಕದ್ವಯೋ ದುಃಖಕರಾಃ ಸುರೌಘಾಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಲೋಭದೋಷವರ್ಣನೋ ನಾಮ
ಪಂಚಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫-೭. ಪ್ರಪಂಚದಲ್ಲಿ ಭತ್ತ, ಗೋಧಿ ಮೊದಲಾದ ಧಾನ್ಯಗಳೆಷ್ಟಿರುವುವೋ, ಸುವರ್ಣ, ಪಶು, ಸ್ತ್ರೀಗಳು ಮೊದಲಾದ ಭೋಗ್ಯವಸ್ತುಗಳೆಷ್ಟಿರುವುವೋ ಅವೆಲ್ಲವೂ ಲುಬ್ಧನಾದ ಒಬ್ಬನ ಪೂರ್ತಿಗೂ ಸಾಕಾಗುವುದಿಲ್ಲವೆಂಬುದನ್ನು ತಿಳಿದು ಮನಶ್ಶಾಂತಿಯನ್ನೇ ಹೊಂದಬೇಕು. ಆಶೆಯೆಂಬ ಯಾವ ರೋಗವು ದುರ್ಬುದ್ಧಿಗಳಿಂದ ತ್ಯಜಿಸಲು ಸಾಧ್ಯವೇ ಇಲ್ಲವೋ, ವೃದ್ಧಾಪ್ಯ ಉಂಟಾದರೂ ಶಿಥಿಲವಾಗುವುದೇ ಇಲ್ಲವೋ, ಪ್ರಾಣಾಂತಕವಾದ ರೋಗವಾಗಿಯೇ ಪರಿಣಮಿಸುವುದೋ, ಅಂತಹ ಆಶೆಯನ್ನು ತ್ಯಜಿಸಿದವನಿಗೇ ಪ್ರಪಂಚದಲ್ಲಿ ಸುಖ. ಲೋಭಿಯಾದವನಿಗೆ ಮಗನೂ ಬಂಧವಲ್ಲ, ಗುರುವೂ ಗುರುವಲ್ಲ. ಅವನಿಗೆ ಲೋಕವೂ ಇಲ್ಲ. ಲೋಕಯಾತ್ರೆಯೂ ಇಲ್ಲ. ಲುಬ್ಧನ ದೋಷಗಳನ್ನೆಲ್ಲಾ ಹೇಳಿ ಆಗಿದೆ. ಅವನಿಗೆ ಎರಡು ಲೋಕಗಳಲ್ಲಿಯೂ ದೇವತೆಗಳು ದುಃಖಪ್ರದರಾಗಿಯೇ ಆಗುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಹಂಸಗೀತೆಯಲ್ಲಿ
ಮುನಿಗಳಿಗೆ ಉಪದಿಷ್ಟವಾದ ಲೋಭದೋಷವರ್ಣನವೆಂಬ
ಇನ್ನೂರ ನಲವತ್ತೈದನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಟ್‌ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಕ್ರೋಧ ಏಕಃ ಪರಃ ಶತ್ರುಃ ಕ್ರೋಧ ಏಕೋ ವಿನಾಶಕೃತ್ ।
ಕ್ರೋಧಾಭಿಭೂತಃ ಪುರುಷಸ್ತ್ವಾತ್ಮಾನಮಪಿ ಘಾತಯೇತ್ || ೧ ||

ಅರ್ಥಾನರ್ಥೌ ನ ಜಾನಾತಿ ಕಾರ್ಯಾಕಾರ್ಯೇ ತಥೈವ ಚ ।
ನರಃ ಕ್ರೋಧಸಮಾವಿಷ್ಟೋ ನಾನ್ಯಂ ಮಿತ್ರಮಪಿ ದ್ವಿಜಾನ್ || ೨ ||

ಗುರೂನಾಕ್ಷಿಪತಿ ಕ್ರೋಧಾನ್ನೈನಂ ಹಿ ನಮತೇ ಜನಃ ।
ಅನರ್ಥೈಸ್ಸಹ ಸಂಸರ್ಗಃ ತಸ್ಮಾತ್ಕ್ರೋಧಂ ವಿವರ್ಜಯೇತ್ || ೩ ||

ಕ್ರೋಧೋ ಮೂಲಮನರ್ಥಾನಾಂ ದ್ವಾರಂ ಹಿ ನರಕಸ್ಯ ಚ ।
ಆಪದಾಮಾಸ್ಪದಂ ಘೋರಂ ತಂ ಪ್ರಯತ್ನೇನ ವರ್ಜಯೇತ್ || ೪ ||

ಇನ್ನೂರ ನಲವತ್ತಾರನೆಯ ಅಧ್ಯಾಯವು.

೧-೪. ಹಂಸವು ಹೇಳುತ್ತದೆ:—ಕ್ರೋಧವೆಂಬುದು ಮುಖ್ಯವಾದ ಶತ್ರು ಮತ್ತು ವಿನಾಶಕಾರಿ, ಕ್ರೋಧಗ್ರಸ್ತನಾದ ಮನುಷ್ಯನು ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತಾನೆ. ಕ್ರೋಧ ಹೊಂದಿದವನು ಪ್ರಯೋಜನಾ ಪ್ರಯೋಜನಗಳನ್ನೂ ಕಾರ್ಯಾಕಾರ್ಯಗಳನ್ನೂ ತಿಳಿಯುವುದೇ ಇಲ್ಲ. ಹಾಗೆಯೇ ಮಿತ್ರನನ್ನಾಗಲಿ ಬ್ರಾಹ್ಮಣನನ್ನಾಗಲಿ, ಗುರುಜನಗಳನ್ನಾಗಲಿ ತಿರಸ್ಕರಿಸಿ ನಡೆಯುತ್ತಾನೆ. ಕ್ರೋಧವುಳ್ಳವನನ್ನು ಜನರು ಪೂಜ್ಯತಾಬುದ್ಧಿಯಿಂದ ನಮಸ್ಕರಿಸುವುದೂ ಇಲ್ಲ. ಕ್ರೋಧದಿಂದ ಅನರ್ಥಸಂಬಂಧವೂ ಹೆಚ್ಚು ಆದ್ದರಿಂದ ಈ ಕ್ರೋಧವನ್ನೂ ತ್ಯಜಿಸಲೇಬೇಕು. ಇದು ಅನರ್ಥಕ್ಕೆ ಕಾರಣವೆಂಬುದು ಮಾತ್ರವಲ್ಲ. ನರಕಕ್ಕೇ ದ್ವಾರವಾಗುತ್ತದೆ. ಎಲ್ಲಾ ವಿಪತ್ತಿಗೂ ಭಯಂಕರವಾದ ಸ್ಥಾನ ಆದುದರಿಂದ ಕ್ರೋಧವನ್ನು ಪ್ರಯತ್ನದಿಂದ ತ್ಯಜಿಸಬೇಕು.

ಕ್ರೋಧೇನ ವಿಜಿತೋಯಸ್ತು ಕಥಮನ್ಯಂ ಸ ಜೇಷ್ಯತಿ ।
ಕ್ರೋಧೇ ಜಿತೇ ಜಿತಂ ವಿದ್ಧಿ ತ್ರೈಲೋಕ್ಯಂ ಸ ಚರಾಚರಂ || ೫ ||

ಅನರ್ಥಕಾರಿಣಂ ಕ್ರೋಧಂ ಯದಾ ತೇಜಸ್ವಿತಾ ಮತಾ ।
ಕ್ರೋಧೇ ದೋಷಮತಃ ಕೃತ್ವಾ ಜಿತಃ ಕ್ರೋಧೋ ಮಹಾತ್ಮಭಿಃ || ೬ ||

ಯಜ್ಞಾಶ್ಚ ದಾನಾನಿ ತಪಃ ಪವಿತ್ರಂ
ತೀರ್ಥೋಪಸೇವಾ ಚ ತಥೈವ ವೇದಾಃ ।
ಕ್ರೋಧಾಭಿಭೂತಸ್ಯ ಭವಂತಿ ಮಿಥ್ಯಾ
ನರಸ್ಯ ತಸ್ಮಾತ್ಪರಿವರ್ಜಯೇತ್ತಂ || ೭ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿಹಂಸಗೀತಾಸು
ಕ್ರೋಧದೋಷವರ್ಣನೋ ನಾಮ
ಷಟ್ ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫-೭. ಕ್ರೋಧದಿಂದ ಪರಾಭವ ಹೊಂದಿದ ಮನುಷ್ಯನು ಇತರರನ್ನು ಹೇಗೆ ಜಯಿಸಿಯಾನು. ಕ್ರೋಧವನ್ನು ಜಯಿಸಿದ್ದೇ ಆದರೆ ಅವನಿಂದ ಚರಾಚರಗಳಿಂದ ಕೂಡಿದ ಮೂರು ಲೋಕಗಳೂ ಜಯಿಸಲ್ಪಡಬಹುದು. ಅನರ್ಥಕಾರಕವಾದ ಈ ಕ್ರೋಧವನ್ನು ಜಯಿಸಿಯೇ ತೇಜಸ್ವಿಯಾಗಬೇಕು ಆದುದರಿಂದಲೇ ಇಂತಹ ದೋಷಗಳನ್ನು ಕ್ರೋಧದಲ್ಲಿ ತಿಳಿದು ಇದನ್ನು ಜಯಿಸಿಯೇ ಮಹಾತ್ಮರು ತೇಜಸ್ವಿಗಳಾದರು. ಕ್ರೋಧದಿಂದ ಆವರಿಸಲ್ಪಟ್ಟವನಿಗೆ ಯಜ್ಞ, ದಾನ, ಪವಿತ್ರವಾದ ತಪಸ್ಸು, ತೀರ್ಥಸೇವೆ ವೇದಾಧ್ಯಯನ ಎಲ್ಲವೂ ವ್ಯರ್ಥವೇ ಆಗುತ್ತವೆ. ಆದುದರಿಂದ ಕ್ರೋಧವನ್ನು ತ್ಯಜಿಸಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಋಷಿಗಳಿಗಾಗಿ ಉಪದೇಶಿಸಲ್ಪಟ್ಟ ಹಂಸಗೀತೆಯ ಕ್ರೋಧ ದೋಷವರ್ಣನವೆಂಬ ಇನ್ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಸಪ್ತಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಸರ್ವೇಷಾಮೇವ ಪಾಪಾನಾಂ ನಾಸ್ತಿಕ್ಯಂ ಪಾತಕಂ ಪರಂ |
ನಾಸ್ತಿಕ್ಯಾದ್ಧಿ ಪರಂ ನಾಸ್ತಿ ಕಿಂಚಿತ್ಪಾಪಂ ದ್ವಿಜೋತ್ತಮಾಃ || ೧ ||

ಅಕಾರ್ಯಮಿತಿ ಕಾರ್ಯಾಣಿ ಕೃತ್ವಾ ಕಾರ್ಯವಶಾನ್ನರಃ |
ಪಶ್ಚಾತ್ತಾಪೇನ ಸಂಯುಕ್ತಃ ಕ್ಷಿಪ್ರಂ ಪಾಪಂ ವ್ಯಪೋಹತಿ || ೨ ||

ಕಾರ್ಯಬುದ್ಧ್ಯಾತ್ವಕಾರ್ಯಾಣಿ ಯಃ ಕರೋತಿ ನರಾಧಮಃ |
ಕಥಂ ನಿವರ್ತನಂ ತೇಭ್ಯೋ ಜಾಯತೇ ತಸ್ಯ ವೈ ದ್ವಿಜಾಃ || ೩ ||

ನಾಸ್ತಿಕ್ಯಸ್ಯ ತಥಾ ಮೂಲಂ ತ್ವಸಚ್ಛಾಸ್ತ್ರಾವಗಾಹನಂ |
ತಸ್ಮಾತ್ಸರ್ವಪ್ರಯತ್ನೇನ ತದ್ವಿವರ್ಜ್ಯಂ ವಿಜಾನತಾ || ೪ ||

ಇನ್ನೂರ ನಲವತ್ತೇಳನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ಎಲ್ಲಾ ಪಾಪಕ್ಕಿಂತಲೂ ನಾಸ್ತಿಕತನವು ಮೇಲಾದ ಪಾಪ, ನಾಸ್ತಿಕ್ಯಕ್ಕಿಂತಲೂ ಮೇಲಾದ ಪಾಪವೊಂದಿಲ್ಲ. ವಿವೇಚನೆಯಿಂದ ಕೆಲಸಮಾಡುವ ಯಾವ ಮನುಷ್ಯನು ತನ್ನ ಕಾರ್ಯಗಳ ತ್ವರೆಯಲ್ಲಿ ಮಾಡಿದ ಅಕಾರ್ಯವನ್ನು ಅನಂತರ ವಿವೇಚನಾ ದೃಷ್ಟಿಯಿಂದ ಅಕಾರ್ಯವೆಂದು ತಿಳಿದು ಅದಕ್ಕಾಗಿ ಪಶ್ಚಾತ್ತಾಪ ಹೊಂದುತ್ತಾನೆಯೋ ಅವನು ಜಾಗ್ರತೆಯಾಗಿಯೇ ಅಂತಹ ಅಕಾರ್ಯಾಚರಣೆಯಿಂದುಂಟಾದ ಪಾಪವನ್ನು ಹೋಗಲಾಡಿಸಿಕೊಳ್ಳುತ್ತಾನೆ. ಯಾವ ನರಾಧಮನು ಅಕಾರ್ಯವೆಂದು ತಿಳಿದೂ ಮಾಡುತ್ತಾನೆಯೋ ಅಂತಹವನಿಗೆ ಆ ಪಾಪದಿಂದ ಬಿಡುಗಡೆಯು ಹೇಗೆ ತಾನೆ ಆಗಬಹುದು. ಇಂತಹ ನಾಸ್ತಿಕ್ಯಕ್ಕೆ ಮೂಲಕಾರಣವು ಅಸಚ್ಛಾಸ್ತ್ರಗಳ ಅನುಸಂಧಾನ ಅಥವಾ ಅಭ್ಯಾಸ ಆದುದರಿಂದ ನಾಸ್ತಿಕ್ಯಕ್ಕೆ ಮೂಲಕಾರಣವಾದ ದುಶ್ಶಾಸ್ತ್ರಾಧ್ಯಯನವನ್ನೂ ತ್ಯಜಿಸಬೇಕು.

ಸರ್ವೋ ಹಿ ಮಾನವೋ ಲೋಕೇ ಪರಲೋಕನಿಬಂಧನಃ ।
ತತ್ರಾಪಿ ನಿರಪೇಕ್ಷಸ್ಯ ಕಿನ್ನು ಲೋಕೇ ನಿಬಂಧನಂ ॥ ೫ ॥

ಯೇ ತು ವೈ ನಾಸ್ತಿಕಾ ಲೋಕೇ ನರಾಃ ಲೋಕಂ ಪ್ರತಿ ದ್ವಿಜಾಃ ।
ನರಕೇ ತೇ ಹಿ ಪಚ್ಯಂತೇ ಬಹುಕಾಲಂ ನ ಸಂಶಯಃ ೬ ॥

ನಾಸ್ತಿಕ್ಯಮೇಕಂ ಪುರುಷಸ್ಯ ಲೋಕೇ
ವಿನಾಶನಂ ವಿಪ್ರವರಾಃ ಪ್ರದಿಷ್ಟಂ ।
ತಸ್ಮಾತ್ಪ್ರಯತ್ನೇನ ವಿವರ್ಜನೀಯೋ
ನಾಸ್ತಿಕ್ಯಭಾವಃ ಸುಖಮಿಪ್ಸಮಾನೈಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ನಾಸ್ತಿಕ್ಯದೋಷವರ್ಣನೋ ನಾಮ
ಸಪ್ತಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫-೭. ಲೋಕದಲ್ಲಿರುವ ಎಲ್ಲಾ ವಿಧವಾದ ಮಾನವ ವ್ಯವಹಾರವೂ ಪರಲೋಕ ಪ್ರಾಪ್ತಿಗೆ ತಕ್ಕ ಸಾಧನಾಚರಣರೂಪವೇ ಆಗಿದೆ. ನಾಸ್ತಿಕ್ಯದಿಂದ ಪರಲೋಕವನ್ನೇ ಒಪ್ಪದಿರುವವನಿಗೆ ಮನುಷ್ಯಲೋಕದ ವ್ಯವಹಾರದಿಂದ ಪ್ರಯೋಜನವೇ ಇಲ್ಲ. ಲೋಕದಲ್ಲಿ ಯಾವ ಮನುಷ್ಯರು ಲೋಕಾಂತರವನ್ನು ಒಪ್ಪದೆ ನಾಸ್ತಿಕ ವೃತ್ತಿಯಿಂದಿರುತ್ತಾರೆಯೋ ಅವರು ಕ್ಷುದ್ರವಾದ ಐಹಿಕಸುಖವನ್ನೇ ಪ್ರಯೋಜನವನ್ನಾಗಿ ನಂಬಿ ಅದರ ಫಲವಾಗಿ ಬಹುಕಾಲ ನರಕದಲ್ಲಿಯೇ ಸಂತಾಪಹೊಂದುತ್ತಾರೆ. ಲೋಕದಲ್ಲಿ ನಾಸ್ತಿಕ್ಯವೆಂಬುದೇ ಮುಖ್ಯವಾದ ವಿನಾಶಕಾರಕ. ಆದುದರಿಂದ ಸುಖವನ್ನು ಅಪೇಕ್ಷಿಸುವವರು ಇಂತಹ ನಾಸ್ತಿಕತೆಯನ್ನು ತ್ಯಜಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯ ಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳನ್ನು ಕುರಿತು ಉಪದಿಷ್ಟವಾದ ಹಂಸಗೀತೆಯಲ್ಲಿ
ನಾಸ್ತಿಕ್ಯದೋಷವರ್ಣನವೆಂಬ ಇನ್ನೂರನಲವತ್ತೇಳನೆಯ
ಅಧ್ಯಾಯವು ಮುಗಿದುದು.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಷ್ಟಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಅಹಂಕಾರಾತ್ಪರಂ ನಾಸ್ತಿ ಲೋಕೇ ಕಿಂಚಿದ್ವಿನಾಶಕಂ ।
ಅಹಂಕಾರೇಣ ಭೂಪಾಲಾಃ ಶತಶೋ ನಿಧನಂ ಗತಾಃ || ೧ ||

ಅಹಂಕೃತಾಸ್ತಥಾ ನಷ್ಟಾಃ ಬ್ರಾಹ್ಮಣಾಶ್ಚ ಸಹಸ್ರಶಃ ।
ಮಾನ್ಯಾಮಾನ್ಯಾನ್ನಜಾನಂತಿ ಕಾರ್ಯಾಕಾರ್ಯಂ ತ್ವಹಂಕೃತಾಃ || ೨ ||

ಅಹಂಕೃತಸ್ತಥಾ ಲೋಕೇ ನ ವಿದ್ಯಾಮಧಿಗಚ್ಛತಿ ।
ವಿಪನ್ನಕಾರ್ಯಶ್ಚ ತಥಾ ನ ಪ್ರಾಜ್ಞಾನ್ಪರಿಪೃಚ್ಛತಿ || ೩ ||

ನ ಶೃಣೋತಿ ತಥಾನ್ಯೇಷಾಂ ದರ್ಪಪೂರ್ಣೋಽವಿಚಕ್ಷಣಃ ।
ಪಾತಾದನ್ಯನ್ನಭೈಷಜ್ಯಂ ದರ್ಪಾನ್ನಾಸ್ತೀಹ ಕೀರ್ತನಂ || ೪ ||

ಇನ್ನೂರ ನಲವತ್ತೆಂಟನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:— ಅಹಂಕಾರಕ್ಕಿಂತ ಹೆಚ್ಚಾದ ನಾಶಕವು ಲೋಕದಲ್ಲಿ ಬೇರೊಂದಿಲ್ಲ. ಅಹಂಕಾರದಿಂದ ನೂರಾರು ರಾಜರು ನಾಶಹೊಂದಿದರು. ಸಹಸ್ರಾರು ಜನ ಬ್ರಾಹ್ಮಣರು ಅಹಂಕಾರ ಹೊಂದಿ ನಷ್ಟರಾದರು. ಅಹಂಕಾರಿಗಳು ಪೂಜ್ಯಾಪೂಜ್ಯರನ್ನೂ, ಕಾರ್ಯಾಕಾರ್ಯವನ್ನೂ ತಿಳಿಯುವುದಿಲ್ಲ. ಅಂತಹವರು ಲೋಕದಲ್ಲಿ ವಿದ್ಯೆಯನ್ನೂ ಹೊಂದುವುದಿಲ್ಲ. ಕಾರ್ಯನಾಶಹೊಂದಿದರೂ ಸಹ ಪ್ರಾಜ್ಞರನ್ನು ಕೇಳುವುದಿಲ್ಲ. ದರ್ಪದಿಂದ ಅಜ್ಞಾನಿಗಳಾಗಿ ಇತರರ ಮಾತನ್ನು ಕೇಳುವುದೂ ಇಲ್ಲ. ಇಂತಹ ದರ್ಪಕ್ಕೆ ನರಕಪಾತವೊಂದೇ ಔಷಧ ಬೇರೊಂದಿಲ್ಲ.

ಬಲಾಧಿಕೈಸ್ತಥಾ ವೀರ್ಯೈಃ ಗುರುಭಿಶ್ಚ ತಥೈವ ಚ ।
ಮರಣೇ ಸನ್ನಿಕೃಷ್ಟೇಽಪಿ ಮರಣಸ್ಯ ವಿಚಕ್ಷಣಃ ॥ ೫ ॥

ಹೇತುಭೂತಾನಿ ಕರ್ಮಾಣಿ ನಿಂದಿತಾನಿ ನಿಷೇವತೇ ।
ಸ್ಥಿತೇ ಸ್ಥಿತಾಂಸ್ತಥಾ ಪ್ರಾಜ್ಞಾನ್ ಭಾಷಮಾಣಾನ್ವಿನಿಂದತಿ ॥ ೬ ॥

ಅಹಂಕೃತಾನಾಂ ನರಕೇ ಪ್ರದಿಷ್ಟಾ
ಗತಿರ್ಧ್ರುವಂ ಲೋಕವಿನಿಂದಿತಾನಾಂ ।
ಪ್ರಾಜ್ಞೇನ ತಸ್ಮಾತ್ಪರಿವರ್ಜನೀಯೋ
ದರ್ಪೋ ವಿನಾಶೈಕಕರಃ ಸದೈವ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯವಜ್ರಸಂವಾದೇ ಹಂಸಗೀತಾಸು ಅಹಂಕಾರದೋಷವರ್ಣನೋ ನಾಮಾಷ್ಟಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

೫-೭. ಹೆಚ್ಚು ಬಲವುಳ್ಳವರಿಂದಾಗಲಿ, ಗುರುಗಳಿಂದಾಗಲಿ ನಿಗ್ರಹಹೊಂದಿ ಮರಣಕ್ಕೆ ಸಿದ್ಧನಾಗಿರುವಾಗಲೂ ಸಹ ಬುದ್ಧಿವಂತನಂತೆ ನಟಿಸಿ ತನ್ನ ಮರಣಕ್ಕೇ ಕಾರಣಗಳಾದ ನಿಂದಿತಕರ್ಮಗಳನ್ನೇ ಮಾಡುತ್ತಾನೆ. ವ್ಯವಸ್ಥಿತಕ್ರಮದಲ್ಲಿ ಸತ್ಯಮಾರ್ಗದಲ್ಲಿದ್ದು ಮಾತನಾಡುವ ಪ್ರಾಜ್ಞರನ್ನೂ ನಿಂದಿಸುತ್ತಾನೆ. ಜನಗಳ ನಿಂದೆಗೆ ಅರ್ಹರಾದ ಅಹಂಕಾರಿಗಳಿಗೆ ನರಕವೇ ಗತಿ ಎಂಬುದು ಶಾಸ್ತ್ರಸಿದ್ಧ. ಆದುದರಿಂದ ವಿನಾಶಕಾರಿಯಾದ ಅಹಂಕಾರವನ್ನು ಪ್ರಾಜ್ಞರು ತ್ಯಜಿಸಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯವಜ್ರಸಂವಾದದಲ್ಲಿ ಹಂಸಗೀತೆಯ ಅಹಂಕಾರ ದೋಷವರ್ಣನವೆಂಬ ಇನ್ನೂರ ನಲವತ್ತೆಂಟನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ದತ್ತಂ ಯಚ್ಛೌಚಹೀನೇನ ನ ತದ್ಗೃಹ್ಣಂತಿ ದೇವತಾಃ ।
ಬುಭುಕ್ಷವಶ್ಚ ಧರ್ಮಜ್ಞಾಃ ಶುಚಿಕಾಮಾಶ್ಚ ದೇವತಾಃ ॥ ೧ ॥

ಯಕ್ಷೈಶ್ಚ ರಾಕ್ಷಸೈಶ್ಚೈವ ಪಿಶಾಚೈಶ್ಚ ನಿಶಾಚರೈಃ ।
ಡಾಕಿನೀಭಿಶ್ಚ ಧರ್ಮಜ್ಞಾಃ ಶೌಚಹೀನೋಽಭಿಭೂಯತೇ ॥ ೨ ॥

ಶೌಚಹೀನಮಥಾಭ್ಯೇತಿ ಸ್ವಯಂ ನಿಂದತಿ ಕಂ ದ್ವಿಜಾಃ ।
ವ್ಯಾಧಿಹೀನೋಹ್ಯಶೌಚಶ್ಚ ಸರ್ವೈರೇವಾಭಿಭೂಯತೇ ॥ ೩ ॥

ವರ್ಧಂತೇ ಚ ತಥಾನರ್ಥಾಃ ಸಮರ್ಥಾಶ್ಚ ವ್ರಜಂತಿ ಚ ।
ಶೌಚಹೀನಸ್ಯ ರಿಪವೋ ಯಾಂತಿ ವೃದ್ಧಿಂ ಪರಾಂ ದ್ವಿಜಾಃ ॥ ೪ ॥

ಇನ್ನೂರ ನಲವತ್ತೊಂಭತ್ತನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ: -ಶೌಚವಿಲ್ಲದವನು ಮಾಡಿದ ದಾನವನ್ನು ದೇವತೆಗಳು ಸ್ವೀಕರಿಸುವುದೇ ಇಲ್ಲ. ದೇವತೆಗಳು ಯಾವಾಗಲೂ ಗುಣದೋಷಗಳನ್ನು ತಿಳಿಯಲು ಇಚ್ಛೆಯುಳ್ಳವರಾಗಿಯೂ, ಧರ್ಮಜ್ಞರಾಗಿಯೂ ಶುಚಿಯನ್ನು ಅಪೇಕ್ಷಿಸತಕ್ಕವರಾಗಿಯೂ ಇರುತ್ತಾರೆ. ಶೌಚವಿಲ್ಲದವನನ್ನು ಯಕ್ಷರಾಕ್ಷಸರೂ, ಪಿಶಾಚ, ನಿಶಾಚರ ಪ್ರಾಣಿಗಳು. ಡಾಕಿನೀ ಮುಂತಾದವರೂ ಸಹ ತಿರಸ್ಕರಿಸುತ್ತಾರೆ. ಶೌಚಹೀನನಾಗಿ ಬಂದು ತಿರಸ್ಕರಿಸಲ್ಪಟ್ಟವನು ತಾನೇ ಅಪರಾಧಿಯಾಗಿ ಯಾರನ್ನು ತಾನೇ ನಿಂದಿಸಿಯಾನು ವ್ಯಾಧಿಪೀಡಿತನೂ, ಶೌಚವಿಲ್ಲದವನೂ ಸಹ ಎಲ್ಲರಿಂದಲೂ ತಿರಸ್ಕರಿಸಲ್ಪಡುತ್ತಾನೆ. ಅನರ್ಥಗಳೂ ಹೆಚ್ಚುತ್ತವೆ. ಸಮರ್ಥರಾದ ಸಹಕಾರಿಗಳೂ ಬಿಟ್ಟು ಹೊರಟುಹೋಗುತ್ತಾರೆ. ಶೌಚವಿಲ್ಲದವನಿಗೆ ಶತ್ರುಗಳು ಹೆಚ್ಚಾಗಿ ವೃದ್ಧಿಹೊಂದುತ್ತಾರೆ.

ಸ್ತ್ರೀಶೌಚಮರ್ಥಶೌಚಂ ಚ ವಾಕ್ಶೌಚಮಪಿ ಚದ್ವಿಜಾಃ ।
ಏತಾನಿಯಸ್ಯ ಶೌಚಾನಿ ಸ ಶುಚಿಃ ಪರಿಕೀರ್ತಿತಃ ॥ ೫ ॥

ಯೋಽರ್ಥೇ ಶುಚಿಃ ಸ ಹಿ ಶುಚಿಃ ನ ಮೃದ್ವಾರಿಶುಚಿಃ ಶುಚಿಃ ।
ತತಶ್ಚಾಪ್ಯಧಿಕಂ ಶೌಚಮಹಿಂಸಾಪರಿಕೀರ್ತಿತಾ ॥ ೬ ॥

ಶೌಚೇನ ಹೀನಾ ನರಕಂ ವ್ರಜಂತಿ
ಶೌಚೇನ ಹೀನಾ ವಿಭಜನ್ತ್ಯನರ್ಥಾನ್ ।
ಶೌಚೇನ ಹೀನಾಶ್ಚ ಭವಂತಿ ನಿಂದ್ಯಾ-
ಸ್ತಸ್ಮಾದಶೌಚಂ ಪರಿವರ್ಜನೀಯಂ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಶೌಚವರ್ಣನೋ
ನಾಮೈಕೋನಪಂಚಾಶದುತ್ತರದ್ವಿಶತತಮೋಽಧ್ಯಾಯಃ

೫-೭. ಸ್ತ್ರೀಶೌಚ, (ಶುಚಿಯಾದ ಸ್ತ್ರೀಸಂಬಂಧ) ಅರ್ಥಶೌಚ, (ಶುಚಿಯಾದ ಅರ್ಥಸಂಬಂಧ) ವಾಕ್ಶೌಚ, (ಅಸತ್ಯಾದಿ ಸಂಬಂಧವಿಲ್ಲದ ವಾಕ್ಶುದ್ಧಿ) ಈ ಮೂರು ಶೌಚಗಳೂ ಯಾವನಿಗೆ ಇರುತ್ತವೆಯೋ ಅವನು ಶುಚಿ ಎನಿಸುತ್ತಾನೆ. ಅರ್ಥಶೌಚ ಉಳ್ಳವನೇ ಮುಖ್ಯವಾದ ಶುಚಿಯುಳ್ಳವನು ಕೇವಲ ಮೃತ್ತಿಕೋದಕದಿಂದ ಶುಚಿಯಾಗಿರುವವನು ಶುಚಿಯಲ್ಲ. ಅಹಿಂಸಾ ಎಂಬ ಶೌಚವು ಅದಕ್ಕಿಂತಲೂ ಮೇಲಾದದ್ದು. ಈ ವಿಧವಾದ ಶೌಚವಿಲ್ಲದವರು ನರಕಭಾಗಿಗಳಾಗುತ್ತಾರೆ. ಅನರ್ಥಗಳನ್ನೂ ಹೊಂದುತ್ತಾರೆ. ನಿಂದ್ಯರೂ ಆಗುತ್ತಾರೆ. ಆದುದರಿಂದ ಅಶುಚಿತ್ವವನ್ನು ಸರ್ವಥಾ ತ್ಯಜಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಹಂಸಗೀತೆಯಲ್ಲಿ ಉಪದೇಶಿಸಲ್ಪಟ್ಟ
ಶೌಚವರ್ಣನವೆಂಬ ಇನ್ನೂರ ನಲವತ್ತೊಂಭತ್ತನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಆಚಾರಹೀನಾಃ ಪುರುಷಾಃ ಭವನ್ತ್ಯಲ್ಪಾಯುಷೋ ದ್ವಿಜಾಃ ।
ಆಚಾರಹೀನಶ್ಚ ತಥಾ ರಾಕ್ಷಸೈರಭಿಭೂಯತೇ ॥ ೧ ॥

ಯಕ್ಷೈಃ ಪಿಶಾಚೈರ್ಗಂಧರ್ವೈಸ್ತಥಾಚಾನ್ಯೈರ್ನಿಶಾಚರೈಃ ।
ಡಾಕಿನೀಭಿಃ ಸುರಾಣಾಂ ಚ ತಥಾ ಪಾರ್ಷಗಣಾಃ ಪೃಥಕ್ ॥ ೨ ॥

ದತ್ತಮಾಚಾರಹೀನೇನ ನ ಪ್ರತೀಚ್ಛಂತಿ ದೇವತಾಃ ।
ಪಿತರಶ್ಚ ಮಹಾಭಾಗಾ ಋಷಯಶ್ಚ ತಪೋಧನಾಃ ॥ ೩ ॥

ಇನ್ನೂರ ಐವತ್ತನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ:—ಆಚಾರಹೀನರಾದ ಮನುಷ್ಯರು ಅಲ್ಪಾಯುಸ್ಸುಗಳಾಗುತ್ತಾರೆ ರಾಕ್ಷಸರಿಂದಲೂ ಪರಾಭವ ಹೊಂದುತ್ತಾರೆ. ಯಕ್ಷ, ಪಿಶಾಚ, ಗಂಧರ್ವ ಇತರ ನಿಶಾಚಾರಿಗಳು, ಡಾಕಿನಿಗಳು ದೇವತೆಗಳ ಪರಿಜನರು ಎಲ್ಲರೂ ಇವನನ್ನು ತಿರಸ್ಕರಿಸುತ್ತಾರೆ. ಆಚಾರಹೀನನಿಂದ ಕೊಡಲ್ಪಟ್ಟ ಹವ್ಯ ಕವ್ಯಾದಿಗಳನ್ನು ದೇವತೆಗಳೂ ಸ್ವೀಕರಿಸುವುದಿಲ್ಲ. ಪಿತೃಗಳು, ಋಷಿಗಳು, ತಪಸ್ವಿಗಳು ಯಾರೂ ಸ್ವೀಕರಿಸುವುದಿಲ್ಲ. ಮನುಷ್ಯನು ಎಲ್ಲಾ ಲಕ್ಷಣಗಳನ್ನೂ ಹೊಂದಿದ್ದರೂ ಆಚಾರಹೀನನಾಗಿದ್ದಲ್ಲಿ ಅವನು ವಿದ್ಯೆಯನ್ನೂ ಹೊಂದುವುದಿಲ್ಲ. ಯಾವ ಇತ

ಸರ್ವಲಕ್ಷಣಯುಕ್ತೋಽಪಿ ನರಸ್ತ್ವಚಾರವರ್ಜಿತಃ ।
ನ ಪ್ರಾಪ್ನೋತಿ ತಥಾ ವಿದ್ಯಾಂ ನ ಚ ಕಿಂಚಿದಭೀಪ್ಸಿತಂ ।
ಆಚಾರಹೀನಃ ಪುರುಷೋ ನರಕಂ ಪ್ರತಿಪದ್ಯತೇ ॥ ೪ ॥

ಆಚಾರಹೀನಂ ನಪುನಂತಿವೇದಾಃ
ಯದ್ಯಪ್ಯಧೀತಾಃ ಸಹ ಷಡ್ಭಿರಂಗೈಃ ।
ಆಚಾರಹೀನೇನ ತು ಧರ್ಮಕಾರ್ಯಂ
ಕೃತಂ ಹಿ ಸರ್ವಂ ಭವತೀಹ ಮಿಥ್ಯಾ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸ್ವನಾಚಾರ
ದೋಷವರ್ಣನೋ ನಾಮ
ಪಂಚಾಶದುತ್ತರದ್ವಿಶತತಮೋಽಧ್ಯಾಯಃ

ವನ್ನೂ ಹೊಂದುವುದಿಲ್ಲ. ಈ ಆಚಾರಹೀನತೆಯಿಂದ ನರಕವನ್ನೂ ಹೊಂದುತ್ತಾನೆ. ಷಡಂಗಗಳೊಡನೆ ಅಧ್ಯಯನಮಾಡಿದ್ದರೂ ಅಂತಹ ವೇದಗಳು ಆಚಾರಹೀನನನ್ನು ಪವಿತ್ರಗೊಳಿಸಲಾರವು. ಇಂತಹವನು ಮಾಡಿದ ಧರ್ಮಕಾರ್ಯಗಳೂ ವ್ಯರ್ಥವಾಗುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದೇಶಿಸಲ್ಪಟ್ಟ ಹಂಸಗೀತೆಯಲ್ಲಿ
ಅನಾಚಾರದೋಷವರ್ಣನವೆಂಬ ಇನ್ನೂರ ಐವತ್ತನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಅನೃತಂ ವರ್ಜಯೇನ್ನಿತ್ಯಮನೃತಂ ಪಾತಕಂ ಪರಂ ।
ಅನೃತಾದ್ಧಿ ಪರಂ ನಾಸ್ತಿ ದ್ವಾರಂ ನಾಶನಮಾತ್ಮನಃ ॥ ೧ ॥

ಸರ್ವೇ. ನಿಬದ್ಧಾ ವಾಚ್ಯಾರ್ಥಾ ವಾಙ್ಮೂಲಾ ವಾಗ್ವಿನಿಸ್ಸೃತಾಃ ।
ತಸ್ಮಾನ್ನಸ್ತೇನಯೇದ್ವಾಚಂ ಯ ಇಚ್ಛೇದ್ಧಿತಮಾತ್ಮನಃ ॥ ೨ ॥

ಅನೃತಂ ನ ಕ್ವಚಿದ್ವಾಚ್ಯಂ ತಥಾ ಸಾಕ್ಷ್ಯೇ ವಿಶೇಷತಃ ।
ಅನೃತಂ ಹಿ ವದನ್ ಸಾಕ್ಷ್ಯೇ ಪಿತೃಭಿಃ ಸಹ ಮಜ್ಜತಿ ॥ ೩ ॥

ಇನ್ನೂರ ಐವತ್ತೊಂದನೆಯ ಅಧ್ಯಾಯ

೧-೪. ಹಂಸವು ಹೇಳುತ್ತದೆ:—ಅನೃತಭಾಷಣವು ದೊಡ್ಡ ಪಾತಕ. ಅದನ್ನು ಯಾವಾಗಲೂ ತ್ಯಜಿಸಿಯೇ ಇರಬೇಕು. ಅನೃತಭಾಷಣಕ್ಕಿಂತಲೂ ಆತ್ಮನಾಶಕ ವಾದ ಬೇರೆ ದ್ವಾರವೇ ಇಲ್ಲ. ಎಲ್ಲಾ ಅರ್ಥಗಳೂ ವಾಕ್ಕಿನಲ್ಲಿಯೇ ಸಂಬಂಧಿಸಿವೆ ಅವುಗಳ ಪ್ರಕಾಶನವೂ ವಾಙ್ಮೂಲ, ವಾಕ್ಕಿನಿಂದಲೇ ಹೊರಹೊರಡಬೇಕು. ಆದುದರಿಂದ ತನ್ನ ಆತ್ಮಕ್ಕೆ ಹಿತವನ್ನು ಬಯಸುವವನು ಅನೃತಭಾಷಣದಿಂದ ವಾಕ್ಕನ್ನು ಅರ್ಥದಿಂದ ಅಪಹರಿಸಬಾರದು ಅನೃತವನ್ನು ಯಾವಾಗಲೂ ನುಡಿಯಬಾರದು. ಸಾಕ್ಷ್ಯಪ್ರಸಂಗದಲ್ಲಿ ವಿಶೇಷವಾಗಿಯೂ ನುಡಿಯಬಾರದು. ಸಾಕ್ಷ್ಯದಲ್ಲಿ ಅನೃತವಾಡಿದವನು. ಪಿತೃಗಳೊಡನೆ ನರಕದಲ್ಲಿ ಮುಳುಗುತ್ತಾನೆ. ಪಶುವಿಷಯದಲ್ಲಿ ಉಂಟಾದ ಅನೃತವು ಐದುಮಂದಿಯನ್ನು ನಾಶಪಡಿಸಿದಂತಾಗುತ್ತದೆ. ಗೋವಿಷಯದಲ್ಲಿ ಅಂತಹ ಅನೃತವು ಹತ್ತು ಮಂದಿಗಳನ್ನು ನಾಶಪಡಿಸಿದಂತಾಗುತ್ತದೆ. ಕುದುರೆಯ ವಿಷಯ

ಪಂಚ ಪಶ್ವನೃತೇ ಹಂತಿ ದಶ ಹಂತಿ ಗವಾನೃತೇ ।
ಶತಮಶ್ವಾನೃತೇ ಹಂತಿ ಸಹಸ್ರಂ ಪುರುಷಾನೃತೇ ॥ ೪ ॥

ಹನ್ತಿ ಜಾತಾನಜಾತಾಂಶ್ಚ ಹಿರಣ್ಯಾರ್ಥೇಽನೃತಂ ವದನ್ ।
ಸರ್ವಂ ಭೂಮ್ಯನೃತಂ ಹಂತಿ ಮಾಸ್ಮಭೂಮ್ಯನೃತಂ ವದೇತ್ ॥ ೫ ॥

ಅಪ್ಸು ಭೂಮಿವದಿತ್ಯಾಹುಃ ಸ್ತ್ರೀಣಾಂ ಭೋಗೇ ಚ ಮೈಥುನೇ ।
ಅಬ್ಜೇಷು ಚೈವ ರತ್ನೇಷು ಸರ್ವೇಷ್ವಶ್ಮಮಯೇಷು ಚ ॥ ೬ ॥

ಏತಾನ್ ದೋಷಾನವೇಕ್ಷ್ಯೈವ ಸರ್ವಾನನೃತಭಾಷಣೇ ।
ಯಥಾಶ್ರುತಂ ಯಥಾದೃಷ್ಟಂ ಸರ್ವಮೇವಾಂಜಸಾ ವದೇತ್ ॥ ೭ ॥

ನಗ್ನೋ ಮುಂಡಃ ಕಪಾಲೀ ಚ ಭಿಕ್ಷಾರ್ಥೀ ಕ್ಷುತ್ಪಿಪಾಸಿತಃ ।
ಅಂಧಃ ಶತ್ರುಗೃಹಂ ಗಚ್ಛೇನ್ನಸಾಕ್ಷ್ಯಮನೃತಂ ವದೇತ್ ॥ ೮ ॥

ದಲ್ಲಿ ನೂರು ಜನರಿಗೆ ಅಪಘಾತವುಂಟಾದಂತಾಗುತ್ತದೆ. ಮನುಷ್ಯರ ವಿಷಯದಲ್ಲಿ ಸಹಸ್ರಮಂದಿಗೆ ಅಪಘಾತವಾಗುತ್ತದೆ. ಹಿರಣ್ಯದ ವಿಷಯದಲ್ಲಿ ಅನೃತವಾಡಿದವನು ಹುಟ್ಟಿರುವ ಮತ್ತು ಮುಂದೆ ಹುಟ್ಟುವವರನ್ನೂ ನಾಶಮಾಡುತ್ತಾನೆ. ಭೂಮಿಯ ವಿಷಯದಲ್ಲಿ ಆಡಿದ ಅನೃತವು ಸರ್ವನಾಶಕವಾಗುತ್ತದೆ. ಆದುದರಿಂದ ಭೂಮಿಯ ವಿಷಯದಲ್ಲಿ ಯಾವಾಗಲೂ ಅನೃತವಾಡಬಾರದು.

೬-೧೦. ಜಲದ ವಿಷಯದಲ್ಲಿ ಭೂಮಿಯ ವಿಷಯದಂತೆಯೇ ಅನೃತವು ದುಷ್ಫಲವನ್ನುಂಟುಮಾಡುತ್ತದೆ ಎಂದು ಹೇಳುತ್ತಾರೆ. ಸ್ತ್ರೀಯರ ಭೋಗವಿಷಯದಲ್ಲಿಯೂ, ಮೈಥುನ ವಿಷಯದಲ್ಲಿಯೂ, ಜಲಜವಾದ ವಸ್ತುಗಳ ವಿಷಯದಲ್ಲಿಯೂ, ರತ್ನ ಶಿಲಾಮಯವಸ್ತು ಇವುಗಳ ವಿಷಯದಲ್ಲಿಯೂ ಮೇಲಿನಂತೆ ದುಷ್ಫಲವು ಸಮಾನವಾಗುತ್ತದೆ. ಆದುದರಿಂದ ಅನೃತಭಾಷಣ ವಿಷಯದಲ್ಲಿ ಈ ದೋಷಗಳನ್ನೆಲ್ಲಾ ವಿಚಾರಮಾಡಿ ಹೇಗೆ ಕೇಳಿದ್ದಾನೆಯೋ ಹೇಗೆ ನೋಡಿದ್ದಾನೆಯೋ ಅದಕ್ಕೆ ತಕ್ಕಂತೆ ಸತ್ಯವಾಗಿಯೇ ನುಡಿಯಬೇಕು ಶಾಸ್ತ್ರವಿರುದ್ಧವಾದ ನಗ್ನತೆ, ಮುಂಡತನ, ಕಪಾಲೀತ್ವ, ಹಸಿವಿನಿಂದ ಭಿಕ್ಷುಕನಾಗುವಿಕೆ, ಅಂಧತನ, ಶತ್ರುಗೃಹಗಮನ, ಇವಕ್ಕಿಂತಲೂ ಅನೃತಸಾಕ್ಷ್ಯವು ಬಹುಮಟ್ಟಿಗೂ ದೋಷವಾಗುತ್ತದೆ. ಆದ್ದರಿಂದ ಅನೃತಸಾಕ್ಷ್ಯವನ್ನು ಯಾವಾಗಲೂ ಹೇಳಬಾರದು. ಅನೃತಸಾಕ್ಷ್ಯ ಹೇಳುವವನಿಗೆ

ಸಾಕ್ಷ್ಯೇಽನೃತಂ ವದನ್ ಪಾಶೈರ್ಬಧ್ಯತೇ ವಾರುಣೈರ್ಭೃಶಂ ।
ನಿವಿಶಂತೇ ತಮೋಜಾತೀಸ್ತಸ್ಮಾತ್ಸಾಕ್ಷ್ಯೇ ವದೇದೃತಂ ॥ ೯ ॥

ಯನ್ಮಯೋಗದಿತಂ ಪಾಪಂ ಕೂಟಸಾಕ್ಷ್ಯೇ ದ್ವಿಜೇನ ತು ।
ತತೋಧಿಕಮವಾಪ್ನೋತಿ ಸದ್ಯೋ ಮಿಥ್ಯಾಭಿಶಂಸನೇ ॥ ೧೦ ॥

ಯಥಾ ಕ್ರೋಧಾದ್ಭಯಾಲ್ಲೋಭಾದಜ್ಞಾನಾದ್ವಾ ದ್ವಿಜೋತ್ತಮಾಃ ।
ಯೋ ನೃತಂ ಭಾಷತೇ ಸದ್ಭ್ಯಃ ಸ ಯಾತಿ ನರಕಂ ಧ್ರುವಂ ॥ ೧೧ ॥

ಅವಾಕ್ಶಿರಾಸ್ತಮಸ್ಯಂಧೇ ಕಿಲ್ಬಿಷೀ ನರಕೇ ಪತೇತ್ ।
ಯಃ ಪ್ರಶ್ನಂ ವಿತಥಂ ಬ್ರೂಯಾತ್ಪೃಷ್ಟಃ ಸದ್ಧರ್ಮನಿಶ್ಚಯೇ ॥ ೧೨ ॥

ಅಂಧೋಮತ್ಸ್ಯಾನಿವಾಶ್ನಾತಿ ನಿರಪೇಕ್ಷಂ ಸ ಕಂಟಕಾನ್ ।
ಯೋ ಭಾಷತೇಽರ್ಥವೈಕಲ್ಯಮಪ್ರತ್ಯಕ್ಷಂ ಸಭಾಂಗತಃ ॥ ೧೩ ॥

ವಾರುಣಪಾಶದಿಂದ ಬಂಧನವೇ ಉಂಟಾಗುತ್ತದೆ. ತಮೋಮಯವಾದ ಲೋಕವನ್ನೇ ಪ್ರವೇಶಿಸುತ್ತಾನೆ. ಆದುದರಿಂದ ಸಾಕ್ಷ್ಯದಲ್ಲಿ ಸತ್ಯವನ್ನೇ ನುಡಿಯಬೇಕು. ಬ್ರಾಹ್ಮಣನು ಕಪಟಸಾಕ್ಷ್ಯನುಡಿದಲ್ಲಿ ಯಾವ ದೋಷವನ್ನು ನಾನು ಹಿಂದೆ ಹೇಳಿರುವೆನೋ ಸುಳ್ಳುಸಾಕ್ಷ್ಯ ನುಡಿದವನಿಗೆ ಅದಕ್ಕಿಂತಲೂ ಹೆಚ್ಚಾದ ಪಾಪವೇ ಉಂಟಾಗುತ್ತದೆ.

೧೧-೧೩. ಯಾವನು ಕ್ರೋಧ, ಲೋಭ, ಭಯ, ಅಜ್ಞಾನಾದಿಗಳಿಂದಾಗಲಿ ಸತ್ಪುರುಷರಲ್ಲಿ ಅನೃತವನ್ನು ಹೇಳುತ್ತಾನೆಯೋ ಅವನು ನರಕಕ್ಕೇ ಹೋಗುತ್ತಾನೆ. ಯಾವನು ಸದ್ಧರ್ಮನಿಶ್ಚಯಕ್ಕಾಗಿ ಮತ್ತೊಬ್ಬನಿಂದ ಪ್ರಶ್ನಿಸಲ್ಪಟ್ಟು ನಿಶ್ಚಯವನ್ನು ಹೇಳದೆ ಅನೃತವನ್ನೇ ಹೇಳುತ್ತಾನೆಯೋ ಅಂತಹ ಪಾಪಿಯು ಅಂಧತಮಸ್ಸೆಂಬ ನರಕದಲ್ಲಿ ತಲೆಕೆಳಕಾಗಿ ಬೀಳುತ್ತಾನೆ. ಯಾವನು ಸಭೆಯಲ್ಲಿ ಸಭ್ಯರ ಎದುರಿಗೆ ಅಪ್ರತ್ಯಕ್ಷ ವಿಷಯದಲ್ಲಿ ಅಸತ್ಯಭಾಷಣಮಾಡುತ್ತಾನೆಯೋ ಅಂತಹವನು ಕುರುಡನು ಮತ್ಸ್ಯಗಳನ್ನು ತಿನ್ನುವಂತೆ ಮುಳ್ಳುಗಳನ್ನು ತಿನ್ನುವ ಜನ್ಮದಲ್ಲಿ ಹುಟ್ಟುತ್ತಾನೆ.

ಕೂಟಕರ್ಮತುಲಾಮಾನೇ ರಸಾನಾಂ ಭೇದನೇ ತಥಾ ।
ವಿಶ್ವಾಸನ್ಯಾಸಹರಣೇ ರಹಸ್ಯಸಮಭೇದನೇ ॥ ೧೪ ॥

ವೃತಿಂ ಕಲ್ಪಯತೇ ಯಶ್ಚ ಮಧುಮಾಂಸೇನ ಪಾತಕಂ ।
ದ್ವಿಜಸ್ಯ ಸುರಯಾ ವಾಪಿ ಲೋಭೇನ ಚ ವಿಶೇಷತಃ ॥ ೧೫ ॥

ಗೋಬ್ರಾಹ್ಮಣವಧೇ ವಾಪಿ ಗುರುಪಿತೃವಧೇ ತಥಾ ।
ವಯಸ್ಯದಾರಗಮನೇ ಗುರುದಾರಪ್ರದರ್ಶನೇ ॥ ೧೬ ॥

ವ್ಯುತ್ಪಾದನೇ ಚ ಶಸ್ತ್ರಾಣಾಂ ಶಸ್ತ್ರೋತ್ಸಾದೇ ತಥೈವ ಚ ।
ಭರ್ತೃಪಿಂಡಾಪಹರಣೇ ಸಂಗ್ರಾಮಾಚ್ಚ ಪಲಾಯನೇ ॥ ೧೭ ॥

ಶರಣಾಗತಸಂತ್ಯಾಗೇ ಗಚ್ಛತಶ್ಚ ದಿವಾ ಸ್ತ್ರಿಯಂ ।
ಪ್ರೇಷ್ಯಾಂ ಚ ಗಚ್ಛತಃ ಪಾಪಂ ರಾಜದ್ರೋಹೇ ತಥೈವ ಚ ॥ ೧೮ ॥

ಪಙ್ಕ್ತ್ಯಾಂ ವಿಷಮದಾತುಶ್ಚ ಶ್ರಾದ್ಧಂ ಮಿತ್ರಸ್ಯ ಯತ್ತಥಾ ।
ಶುಲ್ಕೇನ ದದತಃ ಕನ್ಯಾಂ ಕೇಶವಿಕ್ರಯಿಕಸ್ಯ ಚ ॥ ೧೯ ॥

೧೪–೨೧. ಕಪಟವ್ಯಾಪಾರದಿಂದ ತೂಕ ಮೊದಲಾದ ಅಳತೆಯಲ್ಲಿ ದ್ರೋಹ ಮಾಡಿದಲ್ಲಿ, ರಸಪದಾರ್ಥಗಳಲ್ಲಿ, ಭೇದಭಾವನೆ ತೋರಿದಲ್ಲಿ ವಿಶ್ವಾಸದಿಂದ ತನ್ನಲ್ಲಿಟ್ಟ ನ್ಯಾಸವನ್ನು ಅಪಹರಿಸಿದಲ್ಲಿ ರಹಸ್ಯವನ್ನು ಬಯಲುಮಾಡಿದಲ್ಲಿ, ಮಧುಮಾಂಸಾದಿಗಳಿಂದ ಕೊಲೆ ಮಾಡಿದಲ್ಲಿ, ಬ್ರಾಹ್ಮಣನಿಗೆ ಸುರಪಾನಮಾಡಿಸಿ ಅಥವಾ ಆಶೆಗೋಸಿ ಭ್ರಂಶವುಂಟುಮಾಡಿದರೂ, ಗೋಬ್ರಾಹ್ಮಣವಧ ಮತ್ತು ಗುರುಪಿತೃ ಇವರ ವಧದಲ್ಲಿಯೂ, ಮಿತ್ರನ ಪತ್ನಿಯ ಗಮನದಲ್ಲಿಯೂ, ಗುರುಪತ್ನಿಯನ್ನು ಮತ್ತೊಬ್ಬನಿಗೆ ತೋರಿಸಿ ಅಥವಾ ತಾನಾಗಿ ನೋಡಿದಲ್ಲಿಯೂ, ಹೊಸದಾದ ಶಸ್ತ್ರಗಳ ನಿರ್ಮಾಣ ಮತ್ತು ಇರುವ ಶಸ್ತ್ರಗಳ ನಾಶ ಇವುಗಳಿಂದಲೂ, ಸ್ವಾಮಿಯಾಗಿರುವವನ ಜೀವನವನ್ನು ಅಪಹರಿಸುವಿಕೆಯಿಂದಲೂ, ಯುದ್ಧದಲ್ಲಿ ಪಲಾಯನಮಾಡುವುದರಿಂದಲೂ, ಶರಣಾಗತಪರಿತ್ಯಾಗದಿಂದಲೂ, ಹಗಲಿನಲ್ಲಿ ಮಾಡಿದ ಸ್ತ್ರೀಗಮನದಿಂದಲೂ, ದಾಸಿಯ ಗಮನದಿಂದಲೂ, ರಾಜದ್ರೋಹದಿಂದಲೂ, ಪಂಕ್ತಿಯಲ್ಲಿ ಬಡಿಸುವಾಗ ವೈಷಮ್ಯ ತೋರುವುದರಿಂದಲೂ, ಮಿತ್ರನನ್ನು ಶ್ರಾದ್ಧಕ್ಕೆ ಉಪಯೋಗಿಸುವುದರಿಂದಲೂ, ಶುಲ್ಕ

ವಿಪ್ರಸ್ಯ ಪಾತಕಂ ಯಚ್ಚ ಪ್ರಾಣಿನಾಂ ವಿಕ್ರಯೇ ಭವೇತ್ ।
ಆಮಶ್ರಾದ್ಧಭುಜಃ ಪಾಪಮಯಾಜ್ಯಸ್ಯ ಚ ಯಾಜನೇ ॥ ೨೦ ॥

ಮಿಥ್ಯಾರಾಜ್ಯಸ್ಯ ಕರಣೇ ಪರದ್ರವ್ಯಾಪಹಾರಿಣಃ ।
ಸರ್ವಾಣ್ಯೇತಾನಿ ಪಾಪಾನಿ ದ್ವಿಜಃ ಸಭ್ಯಃ ಸಮಾಪ್ನುಯಾತ್ ॥ ೨೧ ॥

ಯದ್ಯನ್ಯಥಾವದೇತ್ತಸ್ಮಾದ್ಧರ್ಮ್ಯಂ ಸಭ್ಯಃ ಸದಾ ವದೇತ್ ।
ಏತದೇವ ತಥಾ ಪಾಪಂ ವಿಜ್ಞೇಯಂ ಕೂಟಸಾಕ್ಷಿಣಾಂ ॥ ೨೨ ॥

ಕೂಟಕರ್ಮಾತು ನರಕಂ ಪಿತೃಭಿಃ ಸಹ ಮಜ್ಜತಿ ।
ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ॥ ೨೩ ॥

ತತೋ ದಶಗುಣಂ ಪಾಪಂ ಸಭ್ಯೋ ಮಿಥ್ಯಾಭಿಭಾಷಣೇ ।
ರಾಗದ್ವೇಷಪ್ರವೃತ್ತಸ್ತು ವ್ಯವಹಾರೇಽಪಿ ಪಾರ್ಥಿವಃ ॥ ೨೪ ॥

ತೆಗೆದುಕೊಂಡು ಕನ್ಯಾದಾನ ಮಾಡುವುದರಿಂದಲೂ, ಕೇಶಗಳನ್ನು ವಿಕ್ರಯಿಸುವುದರಿಂದಲೂ, ಬ್ರಾಹ್ಮಣನಾದವನು ಪ್ರಾಣಿಗಳನ್ನು ವಿಕ್ರಯ ಮಾಡಿದಲ್ಲಿಯೂ, ಆಮಶ್ರಾದ್ಧ ಭೋಜನದಲ್ಲಿಯೂ, ಅಯಾಜ್ಯಯಾಜನದಲ್ಲಿಯೂ, ಅಸತ್ಯತೆಯಿಂದ ರಾಜ್ಯಭಾರಮಾಡುವಿಕೆಯಿಂದಲೂ, ಪರದ್ರವ್ಯಾಪಹಾರದಿಂದಲೂ, ಸಹ ಯಾವ ಯಾವ ಪಾಪಗಳು ಹೇಳಲ್ಪಟ್ಟಿವೆಯೋ ಆ ಪಾಪಗಳನ್ನೆಲ್ಲಾ ಸಭೆಯಲ್ಲಿ ಅಸತ್ಯವಾಡಿದ ಸಭ್ಯನು ಹೊಂದುತ್ತಾನೆ.

೨೨–೨೪. ಅನ್ಯಥಾ ಭಾಷಣಮಾಡುವ ಸಭ್ಯನಿಗೆ ಮೇಲೆ ಹೇಳಿರುವ ಪಾಪಗಳು ಅನಿವಾರ್ಯವಾದುದರಿಂದ ಸಭ್ಯನಾಗಿರುವವನು ಯಾವಾಗಲೂ ಧರ್ಮಕ್ಕೆ ವಿರೋಧವಿಲ್ಲದ ಸತ್ಯವನ್ನೇ ನುಡಿಯಬೇಕು ವಂಚನೆಗಾಗಿ ಸುಳ್ಳು ಸಾಕ್ಷ್ಯಹೇಳುವವರಿಗೂ ಇದೇ ಪಾಪವೇ ಉಂಟಾಗುತ್ತದೆ. ಇಂತಹ ಕಪಟವ್ಯಾಪಾರಿಯು ತನ್ನ ಪಿತೃಗಳೊಡನೆ ನರಕದಲ್ಲಿ ಹನ್ನೊಂದುಸಾವಿರ ವರ್ಷಪರ್ಯಂತ ಮುಳುಗುತ್ತಾನೆ ಸುಳ್ಳು ಹೇಳಿದ ಸಭ್ಯನೂ ಇವರ ಹತ್ತರಷ್ಟು ಕಾಲ ನರಕಹೊಂದುತ್ತಾನೆ. ಯಾವ ರಾಜನು ವ್ಯವಹಾರಮಾರ್ಗದಲ್ಲಿಯೂ, ರಾಗ ದ್ವೇಷಾದಿಗಳಿಂದ ಸತ್ಯಮಾರ್ಗವನ್ನು ಬಿಟ್ಟು ನಡೆಯುತ್ತಾನೆಯೋ, ಅವನೂ ಸಹ ಇದಕ್ಕೆ ಹತ್ತರಷ್ಟು ಕಾಲ ನರಕವಾಸಿ

ತತೋ ದಶಗುಣಂ ಕಾಲಂ ನರಕೇ ವಸತಿ ಧ್ರುವಂ ।
ಉಕ್ತೇ ವಚಸಿ ಧರ್ಮ್ಯೇ ತು ಸದ್ಯಃ ಪಾಪಾತ್ಪ್ರಮುಚ್ಯತೇ ॥೨೫॥

ರಾಜಾ ನರಕಮಾಪ್ನೋತಿ ಸತ್ಯವಾಕ್ಯಂ ವಿಲಂಘಯನ್ ।
ಶೂದ್ರವಿಟ್‌ಕ್ಷತ್ರವಿಪ್ರಾಣಾಂ ಯತ್ರೋಕ್ತೇ ಪ್ರಾಪ್ನುಯಾದ್ವಧಃ ॥ ೨೬ ॥

ತತ್ರ ವಕ್ತವ್ಯಮನೃತಂ ತದ್ಧಿ ಸತ್ಯಾದ್ವಿಶಿಷ್ಯತೇ ।
ವಾಗ್ದೈವತ್ಯೈಶ್ಚ ಚರುಭಿರ್ಯಜನ್ಯೈಶ್ಚ ಸರಸ್ವತೀಂ ॥ ೨೭ ॥

ಕೂಶ್ಮಾಂಡೈರ್ವಾಪಿ ಜುಹುಯಾದ್ಘೃತಮಗ್ನೌ ಯಥಾವಿಧಿ ।
ಉದುತ್ಯೃಚೇ ವಾ ವಾರುಣ್ಯೇ ಋಚಾ ವಾಗ್ದೈವತೇನ ವಾ ॥ ೨೮ ॥

ಅನೃತಸ್ಯ ವಶಸ್ತಸ್ಯ ಕುರ್ವಾಣೋ ನಿಷ್ಕೃತಿಂ ಪರಾಂ ।
ಬಹವಃ ಸುಖಮೇಧಂತೇ ಯಸ್ಮಿನ್ ವಿಪ್ರಾ ನಿಪಾತಿತೇ ।
ವಾಚ್ಯಂ ತಸ್ಯವಧೇ ಪ್ರಾಪ್ತೇ ಯಥಾಭೂತಮಿತಿ ಶ್ರುತಿಃ ॥ ೨೯ ॥

ಪಾಗುತ್ತಾನೆ. ಧರ್ಮಕ್ಕೆ ತಕ್ಕಂತೆ ವ್ಯವಹರಿಸಿದಲ್ಲಿ ಒಡನೆಯೇ ಅವನೂ ಸಪ ಪಾಪಮೋಕ್ಷ ಹೊಂದುತ್ತಾನೆ. ಸತ್ಯವಚನವನ್ನು ಉಲ್ಲಂಘಿಸಿದ ದೊರೆಗೆ ನರಕವೇ ಉಂಟಾಗುತ್ತದೆ.

೨೬-೩೦. ಯಾವ ಸಂದರ್ಭದಲ್ಲಿ ಸತ್ಯವನ್ನೇ ಹೇಳಿದಲ್ಲಿ ಶೂದ್ರ, ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಇವರೆಲ್ಲರಿಗೂ ವಧವೇ ಉಂಟಾಗಬಹುದೋ ಅಂತಹ ಸಮಯದಲ್ಲಿ ಅನೃತವನ್ನು ಹೇಳಲೇಬೇಕು. ಅದು ಸತ್ಯಕ್ಕಿಂತಲೂ ಉತ್ತಮವಾದ್ದು. ಇಂತಹ ಸಂದರ್ಭದಲ್ಲಿ ಅನೃತಕ್ಕೆ ಅಧೀನನಾದವನು ಅದಕ್ಕೆ ಪ್ರಾಯಶ್ಚಿತ್ತರೂಪವಾಗಿ ವಾಗ್ದೇವತಾಕವಾದ ಚರುಗಳಿಂದಲೂ ಸರಸ್ವತೀಯಾಗದಿಂದಲೂ ಅಥವಾ ಕೂಶ್ಮಾಂಡಮಂತ್ರಗಳಿಂದ ಯಥಾವಿಧಿಯಾಗಿ ಅಗ್ನಿಯಲ್ಲಿ ಹೋಮಮಾಡಬೇಕು. ಉದ್ಯುತ್ಯಮೆಂಬ ಋಕ್ಕಿನಿಂದಲಾಗಲಿ, ವಾರುಣಋಕ್ಕಿನಿಂದಾಗಲಿ, ವಾಗ್ದೇವತಾಋಕ್ಕಿನಿಂದಾಗಲಿ ಹೋಮಿಸಬಹುದು. ಯಾವನೊಬ್ಬನ ನಾಶ ಉಂಟಾದಲ್ಲಿ ಅನೇಕ ಬ್ರಾಹ್ಮಣರು ಸುಖಹೊಂದುವರೋ ಅಂತಹವನ ವಧ ವಿಷಯದಲ್ಲಿ ಅನೃತವನ್ನು

ನ ನರ್ಮಯುಕ್ತಂ ವಚನಂ ಹಿನಸ್ತಿ
ನ ಸ್ತ್ರೀಷು ವಿಪ್ರಾ ನ ವಿವಾಹಕಾಲೇ ।
ಪ್ರಾಣಾತ್ಯಯೇ ಸರ್ವಧನಾಪಹಾರೇ
ಪಂಚಾನೃತಾನ್ಯಾಹುರಪಾತಕಾನಿ ॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಅನೃತದೋಷವರ್ಣನೋ
ನಾಮೈಕಪಂಚಾದಶದುತ್ತರದ್ವಿಶತತಮೋಽಧ್ಯಾಯಃ

ಹೇಳಬಹುದೆಂತಲೂ ಶ್ರುತಿ ಇದೆ. ಪರಿಹಾಸಕಾಲದ ಅನೃತಭಾಷಣವೂ, ಸ್ತ್ರೀವಿಷಯವಾದ ಅನೃತವೂ ವಿವಾಹಕಾಲದ ಅನೃತವೂ, ಪ್ರಾಣಹಾನಿಯುಂಟಾಗುವಾಗ ಹೇಳುವ ಅನೃತವೂ, ಸರ್ವಧನನಾಶವುಂಟಾಗುವಾಗ ಹೇಳುವ ಅನೃತವೂ ಒಟ್ಟು ಈ ಐದು ಬಗೆಯ ಅನೃತಗಳು ಪಾಪಕರವಲ್ಲಾ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಋಷಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಅನೃತ
ದೋಷವರ್ಣನವೆಂಬ ಇನ್ನೂರ ಐವತ್ತೊಂದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದ್ವಿಪಂಚಾಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಸರ್ವೇಷಾಮೇವ ಪಾಪಾನಾಂ ಹಿಂಸಾ ಪರಮಿಹೋಚ್ಯತೇ ।
ಹಿಂಸಾ ಬಲಮಸಾಧೂನಾಂ ಹಿಂಸಾ ಲೋಕದ್ವಯಾಪಹಾ || ೧ ||

ಅಪಿ ಕೀಟಃ ಪತಂಗೋ ವಾ ನ ಹನ್ತವ್ಯಃ ಕಥಂಚನ ।
ಮಹದ್ದುಃಖಮವಾಪ್ನೋತಿ ಪುರುಷಃ ಪ್ರಾಣಿನಾಶನಾತ್ || ೨ ||

ಆತತಾಯಿನಮಾಯಾಂತಂ ಪುರುಷಂ ಯದಿ ವಾ ಪಶುಂ ।
ಉಪಾಯಹೀನಸ್ತಂ ಹತ್ವಾ ನ ತು ಪಾಪೇನ ಬಧ್ಯತೇ || ೩ ||

ಗುರುಂ ವಾ ಬಾಲವೃದ್ಧೌ ವಾ ಮಾನ್ಯಂ ವಾಪ್ಯಥವಾ ಜನಂ ।
ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ || ೪ ||

ಇನ್ನೂರ ಐವತ್ತೆರಡನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ:—ಇಹಲೋಕದಲ್ಲಿ ಎಲ್ಲಾ ಪಾಪಗಳಿಗಿಂತಲೂ ಹಿಂಸೆಯೇ ಮೇಲಾದ ಪಾಪ. ಅಸತ್ಪುರುಷರಿಗೆ ಹಿಂಸೆಯೇ ಒಂದು ಬಲ. ಈ ಹಿಂಸೆಯು ಲೋಕದ್ವಯಕ್ಕೂ ನಾಶಕ. ಹುಳುವನ್ನಾಗಲಿ ಪಕ್ಷಿಯನ್ನಾಗಲಿ ಕೊಲ್ಲಬಾರದು ಪ್ರಾಣಿಗಳನ್ನು ಕೊಲ್ಲುವುದರಿಂದ ಮನುಷ್ಯನು ಹೆಚ್ಚಾದ ದುಃಖವನ್ನು ಹೊಂದುತ್ತಾನೆ. ಇತರರ ವಧದಲ್ಲಿ ಪ್ರಯತ್ನವುಳ್ಳ ಮನುಷ್ಯನನ್ನಾಗಲಿ ಪಶುವನ್ನಾಗಲಿ ಯಾವ ಮಾರ್ಗವೂ ಇಲ್ಲದೆ ಸಿಕ್ಕಿಬಿದ್ದವನು ಕೊಲ್ಲಬಹುದು ಅದರಿಂದ ಕೊಂದವನಿಗೆ ಪಾಪವಿಲ್ಲ. ತನ್ನ ವಧಪ್ರಯತ್ನಕ್ಕಾಗಿ ಎದುರಿಗೆ ಬಂದವನು ಗುರುವಾಗಿರಲಿ, ಬಾಲವೃದ್ಧರಾಗಿರಲಿ, ಮಾನ್ಯಪುರುಷನೇ ಆಗಿರಲಿ ಅಂತಹವರನ್ನು ಯಾವ ವಿಚಾರವೂ ಇಲ್ಲದೆ ಕೊಲ್ಲಬಹುದು. ಇಂತಹ ಆತತಾಯಿಯು ವೇದಾಂತಿ

ಆತತಾಯಿನಮಾಯಾಂತಮಪಿ ವೇದಾಂತಗಂ ರಣೇ ।
ಜಿಘಾಂಸಂತಂ ಜಿಘಾಂಸೀಯಾತ್ ತೇನ ಪಾಪಂ ನ ವಿದ್ಯತೇ ॥ ೫ ॥

ರಣೇ ಪ್ರಹಾರಾಭಿಹತೇ ಶತ್ರೌ ನೈವಾಸ್ತಿ ಪಾತಕಂ ।
ಜಿತ್ವಾ ಗೃಹೀತೇ ನಿಹತೇ ತಸ್ಮಿನ್ನೇವಾಸ್ತಿ ಪಾತಕಂ ॥ ೬ ॥

ರಣೇ ಜಿತಂ ತು ಯಃ ಶಕ್ತಃ ಪಶ್ಚಾತ್ಘಾತಯತೇ ನರಃ ।
ಸ ಯಾತಿ ನರಕಂ ಘೋರಂ ಬಹೂನ್ಯಬ್ದಶತಾನಿ ಚ ॥ ೭ ॥

ಮುಕ್ತಶ್ಚ ನಾರಕಾದ್ದುಃಖಾದ್ಬಹೂನ್ಯಬ್ದಶತಾನಿ ತು ।
ಆಮಗರ್ಭೇಷು ಪಚ್ಯಂತೇ ಯೇ ನರಾ ನರಘಾತಕಾಃ ॥ ೮ ॥

ಯಾವಂತಿ ಪಶುರೋಮಾಣಿ ತಾವತ್ಕೃತ್ವೇಹ ಮಾರಣಂ ।
ವೃಥಾ ಪಶುಘ್ನಃ ಪ್ರಾಪ್ನೋತಿ ಪ್ರೇತ್ಯ ಚೇಹ ಚ ನಿಷ್ಕೃತಿಂ ॥ ೯ ॥

ಅಪಿ ಕೀಟಂ ನರೋ ಹತ್ವಾ ಭಿತ್ವಾ ತೃಣಮಥಾಪಿ ವಾ ।
ನರಕಂ ಯಾತಿ ಧರ್ಮಜ್ಞಃ ಪುರುಷಃ ಸ್ವೇನ ಕರ್ಮಣಾ ॥ ೧೦ ॥

ನಾಗಿದ್ದರೂ ಯುದ್ಧದಲ್ಲಿ ತನ್ನನ್ನು ಕೊಲ್ಲಲು ಪ್ರಯತ್ನಿಸಿದಲ್ಲಿ ತಾನು ಅವನನ್ನು ಕೊಲ್ಲಬಹುದು. ಇದರಿಂದ ಅವನಿಗೆ ಯಾವ ಪಾಪವೂ ಇಲ್ಲ.

೬-೧೦. ಯುದ್ಧದಲ್ಲಿ ಶತ್ರುವಾದವನು ಪ್ರಹಾರದಿಂದ ಕೊಲ್ಲಲ್ಪಟ್ಟಲ್ಲಿ ಆ ಹಿಂಸೆಯು ಪಾಪವಲ್ಲ. ಯುದ್ಧದಲ್ಲಿ ಜಯಿಸಿ ಸೆರೆಹಿಡಿದವನನ್ನು ಕೊಂದಲ್ಲಿ ಆ ಹಿಂಸೆಯು ಕೊಂದವನಿಗೆ ಪಾತಕವೇ ಆಗುತ್ತದೆ. ಯುದ್ಧದಲ್ಲಿ ಪರಾಜಿತನಾದವನನ್ನು ಅನಂತರ ಶಕ್ತನಾಗಿದ್ದ ವಿಜಯಶಾಲಿಯು ಕೊಂದದ್ದೇ ಆದರೆ ಅವನು ನೂರಾರು ವರ್ಷಕಾಲ ಘೋರವಾದ ನರಕವನ್ನು ಹೊಂದುತ್ತಾನೆ. ನರಕದಿಂದ ಮುಕ್ತನಾದ ನಂತರವೂ ಅಂತಹ ನರಘಾತಕರು ಆಮಗರ್ಭವೆಂಬ ನರಕಗಳಲ್ಲಿ ಪಾಕಲ್ಪಡುತ್ತಾರೆ. ವ್ಯರ್ಥವಾಗಿ ಪಶ್ವಾದಿಪ್ರಾಣಿಗಳನ್ನು ಕೊಲ್ಲುವವನು ಪಶುಗಳಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ಪಶುಗಳನ್ನು ಕೊಂದು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನೇ ಹೊಂದುತ್ತಾನೆ. ಮನುಷ್ಯನು ವ್ಯರ್ಥವಾಗಿ ಒಂದು ಕೀಟವನ್ನಾಗಲಿ, ಹುಲ್ಲನ್ನಾಗಲಿ, ಛೇದಿಸಿದಲ್ಲಿಯೂ ಈ ಪಾಪ ಕರ್ಮದಿಂದ ನರಕ ಹೊಂದುತ್ತಾನೆ.

ಸ್ತ್ರೀಹಿಂಸಾ ಧನಹಿಂಸಾ ಚ ಪ್ರಾಣಿಹಿಂಸಾ ಚ ದಾರುಣಾ ।
ಹಿಂಸಾ ಚ ತ್ರಿವಿಧಾ ಪ್ರೋಕ್ತಾ ವರ್ಜಿತಾ ಪಂಡಿತೈರ್ನರೈಃ ॥ ೧೧ ॥

ಅಹಿಂಸಕಸ್ತು ಯತ್ನೇನ ವರ್ಜಯೇತ್ತು ಪರಸ್ತ್ರಿಯಂ ।
ವಿಜನೇಽಪಿ ತಥಾ ನ್ಯಸ್ತಂ ಪರದ್ರವ್ಯಂ ಪ್ರಯತ್ನತಃ ॥ ೧೨ ॥

ಅತೋ ವೈ ನೈವ ಕರ್ತವ್ಯಾ ಪ್ರಾಣಿಹಿಂಸಾ ಭಯಾವಹಾ ।
ವಿಯೋಜ್ಯ ಪ್ರಾಣಿನಂ ಪ್ರಾಣೈಃ ತಥೈಕಮಪಿ ನಿರ್ಘೃಣಃ ॥ ೧೩ ॥

ನರಕಾದ್ಧಿ ವಿನಿರ್ಮುಕ್ತಃ ನ ಕಿಂಚಿತ್ಸುಖಮೇಧತೇ ।
ಯಾಂ ರಾತ್ರಿಮಧಿವಿನ್ನಾ ಸ್ತ್ರೀ ಯಾಂ ಚೈವಾಕ್ಷಪರಾಜಿತಾ ॥ ೧೪ ॥

ಯಾಂ ಚ ರಾಜ್ಯಚ್ಯುತೋ ರಾತ್ರಿಂ ಯಾಂ ಚ ಸರ್ವಸ್ವವಿಚ್ಯುತಃ ।
ಇಷ್ಟಬಂಧುವಿಯುಕ್ತಶ್ಚ ಯಾಂ ರಾತ್ರಿಂ ದುಃಖಮಶ್ನುತೇ ॥ ೧೫ ॥

೧೧-೧೬. ಸ್ತ್ರೀಹಿಂಸಾ, ಧನಹಿಂಸಾ, ಘೋರವಾದ ಪ್ರಾಣಿಹಿಂಸಾ ಈ ಮೂರು ವಿಧವಾದ ಹಿಂಸೆಗಳೂ ಪಂಡಿತರಿಂದ ತ್ಯಜಿಸಲ್ಪಟ್ಟಿವೆ. ಹಿಂಸೆಯಲ್ಲಿ ಅಭಿರುಚಿ ಇಲ್ಲದವನು ಪರಸ್ತ್ರೀಯನ್ನು ಪ್ರಯತ್ನಪೂರ್ವಕವಾಗಿಯೂ ತ್ಯಜಿಸಬೇಕು ಹಾಗೆಯೇ ನಿರ್ಜನಪ್ರದೇಶದಲ್ಲಿಟ್ಟ ಪರದ್ರವ್ಯವನ್ನೂ ಸಹ ಪ್ರಯತ್ನಪೂರ್ವಕವಾಗಿ ತ್ಯಜಿಸಬೇಕು. ಭಯಂಕರವಾದ ಪ್ರಾಣಿಹಿಂಸಾ ವಿಷಯದಲ್ಲಿ ಇದಕ್ಕಿಂತಲೂ ಹೆಚ್ಚಾಗಿ ವೈಮುಖ್ಯ ಹೊಂದಿರಬೇಕು. ಯಾವನು ನಿರ್ಘೃಣನಾಗಿ ಯಾವುದಾದ ರೊಂದು ಪ್ರಾಣಿಗೆ ಪ್ರಾಣವಿಯೋಗವನ್ನುಂಟುಮಾಡಿದರೂ ನರಕಹೊಂದುತ್ತಾನೆ. ನರಕದಿಂದ ಮುಕ್ತನಾದ ಮೇಲೆಯೂ ಎಲ್ಲಿಯೂ ಸುಖಹೊಂದುವುದಿಲ್ಲ. ಧಾರ್ಮಿಕ ಪತಿಯಿಂದ ವಿಯೋಗ ಹೊಂದಿದ ಹಿರಿಯ ಹೆಂಡತಿಯು ರಾತ್ರಿಯಲ್ಲಿ ಎಷ್ಟು ದುಃಖ ಪಡುತ್ತಾಳೆಯೋ ರಾಜ್ಯವನ್ನು ಕಳೆದುಕೊಂಡವನು ಆ ರಾತ್ರಿ ಎಷ್ಟು ದುಃಖ ಪಡುತ್ತಾನೆಯೋ, ತನ್ನ ಸರ್ವಸ್ವವನ್ನೂ ಕಳೆದುಕೊಂಡವನು ರಾತ್ರಿಯಲ್ಲಿ ಎಷ್ಟು ದುಃಖಪಡುತ್ತಾನೆಯೋ ಇಷ್ಟನಾದ ಬಂಧುವಿನವಿಯೋಗದಿಂದ ರಾತ್ರಿಯಲ್ಲಿ ಎಷ್ಟು

ವ್ಯವಹಾರೇ ಜಿತಶ್ಚೈವ ಯದ್ದುಃಖಂ ಕೂಟಸಾಕ್ಷಿಭಿಃ ।
ತತ್ಸರ್ವಂ ದುಃಖಮಾಪ್ನೋತಿ ಹತ್ವೈಕಮಪಿ ತು ದ್ವಿಜಾಃ ॥ ೧೬ ॥

ನಾಸ್ತಿ ಪಾಪತರಂ ಲೋಕೇ ಮನುಷ್ಯಾ ಮಾಂಸಭೋಜಿನಃ ।
ಬಹಿರ್ಮಾಂಸಂ ತೃಣಾತ್ಕಾಷ್ಠಾದುಪಲಾದ್ವಾಪಿ ಜಾಯತೇ ॥ ೧೭ ॥

ಘೋರಾತ್ಪ್ರಾಣಿವಧಾಜ್ಜಾತಂ ಪುರುಷಃ ಪರಿವರ್ಜಯೇತ್ ।
ಯದಿಚೇತ್ಖಾದಕೋ ನ ಸ್ಯಾನ್ನಭವೇದ್ಘಾತಕಸ್ತಥಾ ॥ ೧೮ ॥

ಏತಸ್ಮಾತ್ಕಾರಣನ್ನಿಂದ್ಯೋ ಘಾತಕಾದಪಿ ಖಾದಕಃ ।
ಯಾವತಾಂ ಪ್ರಾಣಿನಾಂ ಯೇನ ಮಾಂಸಂ ಭುಕ್ತಂ ಭವೇದಿಹ ॥ ೧೯ ॥

ತಾ ಏವ ತೇನ ತಾವತ್ಯೋ ಗಂತವ್ಯಾ ಯೋನಯೋ ಧ್ರುವಂ ।
ಯೇಷಾಂ ತು ಪ್ರಾಣಿನಾಂ ಭುಕ್ತಂ ತೇನ ಮಾಂಸಂ ದ್ವಿಜೋತ್ತಮಾಃ ॥

ದುಃಖಹೊಂದುತ್ತಾನೆಯೋ ಕಪಟ ಸಾಕ್ಷ್ಯಗಳಿಂದ ವ್ಯವಹಾರದಲ್ಲಿ ಪರಾಜಯ ಹೊಂದಿದವನು ಎಷ್ಟು ದುಃಖಪಡುತ್ತಾನೆಯೋ, ಒಂದು ಪ್ರಾಣಿಯನ್ನು ಕೊಂದವನೂ ಸಹ ಅಷ್ಟು ದುಃಖವನ್ನು ಹೊಂದುತ್ತಾನೆ.

೧೭-೨೦. ಮನುಷ್ಯರಿಗೆ ಮಾಂಸಭೋಜನಕ್ಕಿಂತಲೂ, ಉತ್ಕೃಷ್ಟವಾದ ಬೇರೆ ಪಾಪವಿಲ್ಲ. ಹೊರಗಿರುವ ತೃಣಕಾಷ್ಠಾದಿಗಳಿಂದಲೂ, ಭೋಗ್ಯವಸ್ತುವು ಲಭಿಸುವಾಗ ಘೋರವಾದ ಪ್ರಾಣಿವಧದಿಂದುಂಟಾದ ಮಾಂಸವನ್ನು ಮನುಷ್ಯನು ವರ್ಜಿಸಲೇಬೇಕು. ಮನುಷ್ಯನು ಮಾಂಸಭಕ್ಷಕನಾಗದಿದ್ದಲ್ಲಿ ಅವನು ಘಾತಕನೂ ಆಗುವುದಿಲ್ಲ. ಆದುದರಿಂದ ಘಾತಕನಿಗಿಂತಲೂ, ಖಾದಕನೇ ಹೆಚ್ಚಾಗಿ ನಿಂದ್ಯನಾಗುತ್ತಾನೆ. ಮನುಷ್ಯನು ಎಷ್ಟು ಪ್ರಾಣಿಗಳ ಮಾಂಸವನ್ನು ಇಲ್ಲಿ ಭುಂಜಿಸುತ್ತಾನೆಯೋ ಅಂತಹ ಪ್ರಾಣಿಗಳ ಆಯಾಯ ಜನ್ಮಗಳನ್ನು ಮಾಂಸಭೋಜಿಯು ಹೊಂದಿಯೇ ಹೊಂದಬೇಕು. ಯಾವ ಯಾವ ಪ್ರಾಣಿಗಳ ಮಾಂಸವನ್ನು ಭಕ್ಷಿಸು ತಿನ್ನುತ್ತಾನೆಯೋ ಆಯಾಯ ಪ್ರಾಣಿಗಳು ಪ್ರತಿಜನ್ಮದಲ್ಲಿಯೂ ಭಕ್ಷಕನ ಮಾಂಸವನ್ನು ತಿನ್ನಬೇಕಾಗುತ್ತದೆ.

ಭೋಕ್ತವ್ಯಂ ತಸ್ಯ ತೈರ್ಮಾಂಸಂ ಧ್ರುವಂ ಜನ್ಮನಿ ಜನ್ಮನಿ ।
ಮಾಂ ಸ ಭಕ್ಷಯಿತಾಮುತ್ರ ಯಸ್ಯ ಮಾಂಸಮಿಹಾದ್ಮ್ಯಹಂ ॥ ೨೧ ॥

ಏತನ್ಮಾಂಸಸ್ಯ ಮಾಂಸತ್ವಂ ಪ್ರವದಂತಿ ಮನೀಷಿಣಃ ।
ಸಮುತ್ಪತ್ತಿಂ ಚ ಮಾಂಸಸ್ಯ ವಧಬಂಧೌ ಚ ದೇಹಿನಾಂ ॥ ೨೨ ॥

ಪ್ರಸಮೀಕ್ಷ್ಯ ನಿವರ್ತೇತ ಸರ್ವಮಾಂಸಸ್ಯ ಭಕ್ಷಣಾತ್ ।
ಅನುಮಂತಾ ವಿಶಸಿತಾ ನಿಹಂತಾ ಕ್ರಯವಿಕ್ರಯೀ ॥ ೨೩ ॥

ಸಂಸ್ಕರ್ತಾ ಚೋಪಹರ್ತಾ ಚ ಖಾದಕಾಶ್ಚ ವಿಘಾತಕಾಃ ।
ಸ್ವಮಾಂಸಂ ಪರಮಾಂಸೇನ ಯೋವರ್ಧಯಿತುಮಿಚ್ಛತಿ ॥ ೨೪ ॥

ನ ಪಾಪಕೃತ್ತಮೋ ಲೋಕೇ ತಸ್ಮಾದನ್ಯೋ ಹಿ ವಿದ್ಯತೇ ।
ಅಸಂಸ್ಕೃತಾನ್ಪಶೂನ್ ಮಂತ್ರೈಃ ನಾದ್ಯಾದ್ವಿಪ್ರಃ ಕಥಂಚನ ॥ ೨೫ ॥

೨೧-೨೫. ಮಾಂಸವೆಂಬ ಪದದ ಅವಯವಾರ್ಥವನ್ನೂ ಸಹ ಪಂಡಿತರು ಹೀಗೆ ಹೇಳುತ್ತಾರೆ. ಯಾವ ಪ್ರಾಣಿಯ ಮಾಂಸವನ್ನು ಈಗ ನಾನು ತಿನ್ನುತ್ತೇನೆಯೋ ಅವನೇ ನನ್ನ ಮಾಂಸವನ್ನು ಪರಲೋಕದಲ್ಲಿ ತಿನ್ನುತ್ತಾನೆ. ಮಾಂಸದ ಉತ್ಪತ್ತಿಯನ್ನೂ ಅದಕ್ಕೆ ಕಾರಣವಾದ ಪ್ರಾಣಿಗಳ ವಧೆ, ಬಂಧನ ಇವುಗಳನ್ನೂ ಚೆನ್ನಾಗಿ ವಿಚಾರಮಾಡಿ ಎಲ್ಲಾ ಮಾಂಸದ ಭಕ್ಷಣದಿಂದಲೂ ನಿವೃತ್ತಿ ಹೊಂದಬೇಕು. ಪ್ರಾಣಿವಧಕ್ಕೆ ಅನುಮತಿ ಕೊಡುವವನು, ಸುಲಿಯುವವನು, ಕೊಲ್ಲುವವನು, ಕ್ರಯವಿಕ್ರಯಮಾಡುವವನು. ಅದನ್ನು ಸಂಸ್ಕರಿಸುವವನು, ತಂದುಕೊಡುವವನು, ತಿನ್ನುವವನೂ ಎಲ್ಲರೂ ಘಾತಕರೇ ಆಗುತ್ತಾರೆ. ತನ್ನ ಮಾಂಸವನ್ನು ಇತರರ ಮಾಂಸಗಳಿಂದ ಅಭಿವೃದ್ಧಿಗೊಳಿಸಲು ಯಾವನು ಇಚ್ಛೆಪಡುತ್ತಾನೆಯೋ ಅವನಿಗಿಂತಲೂ ಪರಮಪಾಪಿಯಾದವನು ಲೋಕದಲ್ಲಿ ಬೇರೊಬ್ಬನಿಲ್ಲ. ಮಾಂಸಭಕ್ಷಣದ ಪ್ರಸಂಗ ಉಂಟಾದಾಗಲೂ ಮಂತ್ರಗಳಿಂದ ಸಂಸ್ಕರಿಸಲ್ಪಡದ ಪಶುಗಳ ಮಾಂಸವನ್ನು ಬ್ರಾಹ್ಮಣನಾದವನು ಯಾವಾಗಲೂ, ತಿನ್ನಬಾರದು. ಪ್ರಾಚೀನವಿಧಿಯಂತೆ ಮಂತ್ರ

ಮಂತ್ರೈಸ್ತು ಸಂಸ್ಕೃತಾನದ್ಯಾಚ್ಚಾಪ್ಯಶ್ನತಂ ವಿಧಿಮಾಸ್ಥಿತಃ ।
ಯಾ ವೇದವಿಹಿತಾ ಹಿಂಸಾ ನ ಸಾ ಹಿಂಸಾ ಮತಾ ಯತಃ ॥ ೨೬ ॥

ಓಷಧ್ಯಃ ಪಶವೋ ವೃಕ್ಷಾಸ್ತಿರ್ಯಞ್ಚಃ ಪಕ್ಷಿಣಸ್ತಥಾ ।
ಯಜ್ಞಾರ್ಥಂ ನಿಧನಂ ಪ್ರಾಪ್ತಾ ಪ್ರಾಪ್ನುವನ್ತ್ಯುಚ್ಛ್ರಿ[1]ತಾಃ ಪುನಃ ॥ ೨೭ ॥

ಮಧುಪರ್ಕೇ ಚ ಯಜ್ಞೇ ಚ ಪಿತೃದೈವತಕರ್ಮಣಿ ।
ಅತ್ರೈವ ಪಶವೋ ಹಿಂಸ್ಯಾ ನಾನ್ಯತ್ರೇತಿ ಕದಾಚನ ॥ ೨೮ ॥

ಏಷ್ವರ್ಥೇಷು ಪಶೂನ್ಹಂತಿ ವೇದತತ್ತ್ವಾರ್ಥವಿದ್ದ್ವಿಜಾಃ ।
ಆತ್ಮಾನಂ ಚ ಪಶೂಂಶ್ಚೈವ ಗಮಯನ್ತ್ಯುತ್ತಮಾಂ ಗತಿಂ ॥ ೨೯ ॥

ಯಜ್ಞಾರ್ಥಂ ಪಶವಃ ಸೃಷ್ಟಾಃ ಪೂರ್ವಮೇವ ಸ್ವಯಂಭುವಾ ।
ಯಜ್ಞಾಶ್ಚ ಭೂತ್ಯೈ ಸರ್ವಸ್ಯ ತಸ್ಮಾದ್ಯಜ್ಞೇ ವಧೋಽವಧಃ ॥ ೩೦ ॥

ಗಳಿಂದ ಸಂಸ್ಕರಿಸಿಯೇ ಭಕ್ಷಿಸಬೇಕು. ವೇದಗಳಿಂದ ಯಾವ ಹಿಂಸೆಯು ವಿಹಿತವಾಗಿದೆಯೋ ಅದು ಹಿಂಸೆಯೇ ಅಲ್ಲ.

೨೭–೩೧. ಓಷಧಿಗಳು, ಪಶುಗಳು, ವೃಕ್ಷಗಳು, ತಿರ್ಯಕ್ಪ್ರಾಣಿಗಳು, ಪಕ್ಷಿಗಳು ವಧವನ್ನು ಹೊಂದಿದ್ದೇ ಆದರೆ ಅವು ಪುನಃ ಉನ್ನತವಾದ ಗತಿಯನ್ನೇ ಹೊಂದುತ್ತವೆ. ಇಂತಹ ಪಶುಹಿಂಸೆಯನ್ನೂ ಸಹ ಮಧುಪರ್ಕದಲ್ಲಿಯೂ, ಯಜ್ಞದಲ್ಲಿಯೂ, ಪೈತೃಕಕರ್ಮದಲ್ಲಿಯೂ ಮಾಡಬಹುದು. ಇತರ ಯಾವ ಸಂದರ್ಭದಲ್ಲಿಯೂ ಮಾಡಕೂಡದು. ಸೃಷ್ಟಿಕಾಲದಲ್ಲಿಯೇ ಚತುರ್ಮುಖನಿಂದ ಯಜ್ಞಕ್ಕಾಗಿಯೇ ಸೃಷ್ಟಿಸಲ್ಪಟ್ಟ ಈ ಪಶುಗಳನ್ನು ವೇದತತ್ವಾರ್ಥವನ್ನು ತಿಳಿದ ಬ್ರಾಹ್ಮಣೋತ್ತಮರು ಮೇಲೆ ಹೇಳಿದ ಮೂರು ಸಂದರ್ಭಗಳಲ್ಲಿಯೇ ಕೊಲ್ಲುತ್ತಾರೆ. ಇದು ತಮಗೂ ಆ ಪಶುಗಳಿಗೂ ಉತ್ತಮಗತಿ ಪ್ರಾಪ್ತಿಗೇ ಸಾಧಕವಾಗುತ್ತದೆ. ಇಂತಹ ಯಜ್ಞಗಳನ್ನೂ ಪ್ರಾಣಿಗಳಿಂದಲೇ ಎಲ್ಲರೂ ಮಾಡಬೇಕು ಆದುದರಿಂದ ಯಜ್ಞದಲ್ಲಿ ಮಾಡಲಾದ ಪ್ರಾಣಿವಧವು ವಧವೇ ಅಲ್ಲ. ನಿಷ್ಕಾರಣವಾಗಿ ಕೇವಲ ಭೋಗ್ಯ ಬುದ್ಧಿಯಿಂದ

---

1 ಇಲ್ಲಿ ಉಚ್ಛ್ರಿತಿಂ ಪುನಃ ಎಂದು ಪಾಠವಿರಬೇಕು.

ವೃಥಾ ತು ಮಾಂಸಂ ಪುರುಷಃ ಸಮಶ್ನ
ನ್ಪ್ರಯಾತಿ ವಿಪ್ರಾ ನರಕಂ ಸುಘೋರಂ ।
ನಿಬರ್ಹಣಂ ಗರ್ಹಿತಮೇವ ಜಂತೋಃ
ಮಾಂಸಂ ಚ ತಸ್ಮಾತ್ಪರಿವರ್ಜನೀಯಂ ॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಹಿಂಸಾದೋಷವರ್ಣನೋ ನಾಮ ದ್ವಿಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಮಾಂಸವನ್ನು ತಿನ್ನುವ ಪುರುಷನು ಘೋರವಾದ ನರಕವನ್ನೇ ಹೊಂದುತಾನೆ. ಪ್ರಾಣಿಯವಧವೂ ನಿಂದಿತವೇ ಆದುದರಿಂದ ಮಾಂಸವನ್ನು ವರ್ಜಿಸಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಿಂಸಾದೋಷವರ್ಣನವೆಂಬ ಇನ್ನೂರ ಐವತ್ತೆರಡನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಿಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಬ್ರೂಹ್ಯಸ್ಮಾಕಂ ದ್ವಿಜಶ್ರೇಷ್ಠ ನರಃ ಪಾಪೇನ ಕರ್ಮಣಾ ।
ಕಿಂ ಕಿಮಾಪ್ನೋತಿ ಧರ್ಮಜ್ಞ ವಿಹಗೇಂದ್ರ ಮಹಾಮತೇ ॥ ೧ ॥

॥ ಹಂಸ ಉವಾಚ ॥

ಪಾಪಂ ಕೃತ್ವಾ ನರೋ ವಿಪ್ರಾಃ ನರಕಂ ಪ್ರತಿಪದ್ಯತೇ ।
ನರಕಾಚ್ಚ ವಿನಿರ್ಮುಕ್ತಸ್ತಿರ್ಯಗ್ಯೋನೌ ತಥಾ ವ್ರಜೇತ್ ॥ ೨ ॥

ಶರೀರಜೈಃ ಕರ್ಮದೋಷೈಃ ಯಾತಿ ಸ್ಥಾವರತಾಂ ನರಃ ।
ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಂ ॥ ೩ ॥

ಇನ್ನೂರ ಐವತ್ತಮೂರನೆಯ ಅಧ್ಯಾಯ.

೧-೪. ಋಷಿಗಳು ಪ್ರಶ್ನೆ ಮಾಡುತ್ತಾರೆ:— ಎಲೈ ಪಕ್ಷಿಶ್ರೇಷ್ಠನೇ ಮನುಷ್ಯನು ತಾನುಮಾಡಿದ ಪಾಪಕರ್ಮದಿಂದ ಏನೇನು ಫಲವನ್ನು ಹೊಂದುತ್ತಾನೆ ಎಂಬುದನ್ನು ಅಭಿಜ್ಞನಾದ ನೀನೇ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಎಲೈ ಬ್ರಾಹ್ಮಣೋತ್ತಮರೇ ಪಾಪಮಾಡಿದ ಮನುಷ್ಯನು ಮೊದಲು ಪಾಪಾನ ಗುಣವಾದ ನರಕಕ್ಕೆ ಹೋಗುತ್ತಾನೆ. ನರಕದಿಂದಲೂ ಮುಕ್ತನಾದಮೇಲೆ ತಿರ್ಯ ಕ್ಪ್ರಾಣಿಗಳ ಜನ್ಮವನ್ನು ಹೊಂದುತ್ತಾನೆ. ಮನುಷ್ಯನು ಶಾರೀರವಾದ ದೋಷಗಳಿಗೆ ಫಲವಾಗಿ (ವೃಕ್ಷಾದಿ) ಸ್ಥಾವರ ಜನ್ಮವನ್ನು ಹೊಂದುತ್ತಾನೆ. ವಾಗ್ದೋಷದಿಂದ ಪಕ್ಷಿ, ಮೃಗ ಇವುಗಳ ಜನ್ಮಹೊಂದುತ್ತಾನೆ. ಮಾನಸವಾದ ದೋಷಗಳಿಂದ

ಕರ್ಮಜಾ ಗತಯೋ ನೃಣಾಮುತ್ತಮಾಧಮಮಧ್ಯಮಾಃ ।
ತ್ರಿವಿಧಾಸ್ತು ವಿನಿರ್ದಿಷ್ಟಾ ದಶಲಕ್ಷಣಲಕ್ಷಿತಾಃ ॥ ೪ ॥

ಪರದ್ರವ್ಯೇಷ್ವಭಿಧ್ಯಾನಂ ಮನಸಾ ದುಷ್ಟಚಿಂತನಂ ।
ವಿತಥಾಭಿನಿವೇಶಶ್ಚ ತ್ರಿವಿಧಂ ಕರ್ಮಮಾನಸಂ ॥ ೫ ॥

ಪಾರುಷ್ಯಮನೃತಂ ಚೈವ ಪೈಶುನ್ಯಂ ಚೈವ ಸರ್ವಶಃ ।
ಅನಿಬದ್ಧಪ್ರಲಾಪಶ್ಚ ವಾಙ್ಮಯಂ ಸ್ಯಾಚ್ಚತುರ್ವಿಧಂ ॥ ೬ ॥

ಅದತ್ತಾನಾಮುಪಾದಾನಂ ಹಿಂಸಾ ಚೈವಾವಿಧಾನತಃ ।
ಪರದಾರೋಪಸೇವಾ ಚ ಶಾರೀರಂ ತ್ರಿವಿಧಂ ಸ್ಮೃತಂ ॥ ೭ ॥

ಏಕಸ್ಮಿನ್ನಪ್ಯತೋ ವಿಪ್ರಾಃ ಸೇವತೇ ದಶಲಕ್ಷಣಂ ।
ಅಧರ್ಮಾತ್ಪ್ರಾಪ್ಯ ಮಾನುಷ್ಯಂ ಯದಾ ಭವತಿ ದುಃಖಿತಃ ॥ ೮ ॥

ಅನ್ತ್ಯಜಾತಿಯಲ್ಲಿ ಜನಿಸುತ್ತಾನೆ. ಮನುಷ್ಯರಿಗೆ ಕರ್ಮಗಳಿಂದುಂಟಾಗುವ ಗತಿಗಳು ಉತ್ತಮ, ಅಧಮ, ಮಧ್ಯಮಗಳೆಂದು ಮೂರು ವಿಧವಾಗಿವೆ. ಇವೂ ಹತ್ತು ಲಕ್ಷಣಗಳಿಂದ ಕೂಡಿವೆ.

೫-೮. ಯಾವಾಗಲೂ ಪರದ್ರವ್ಯದ ಅನುಸಂಧಾನ, ಮನಸ್ಸಿನಲ್ಲಿ ಕೆಟ್ಟ ವಿಷಯವನ್ನೇ ಚಿಂತಿಸುವುದು. ವ್ಯರ್ಥವಾದ ಅಭಿನಿವೇಶ, ಈ ಮೂರೂ ಮಾನಸ ವ್ಯಾಪಾರದ ದೋಷಗಳು, ನಿಷ್ಠುರೋಕ್ತಿ, ಅನೃತಭಾಷಣ ಎಲ್ಲರಲ್ಲಿಯೂ ಪಿಶುನತೆ, ಬುಡವಿಲ್ಲದ ಭಾಷಣ, ಈ ನಾಲ್ಕೂ ವಾಕ್ಕಿನ ದೋಷಗಳು, ಮತ್ತೊಬ್ಬರ ವಸ್ತುವನ್ನು ಅವರು ಕೊಡದಿದ್ದರೂ ಸ್ವೀಕರಿಸುವಿಕೆ ವಿಧಿಬಾಹಿರವಾದ ಹಿಂಸೆ, ಪರವನಿತಾಸೇವನೆ, ಈ ಮೂರೂ ಶಾರೀರವಾದ ದೋಷಗಳು ಅಧರ್ಮದಿಂದ ಮನುಷ್ಯನಾಗಿ ಹುಟ್ಟಿ ದುಃಖಿಸುತ್ತಿರುವವನಿಗೆ ಇವುಗಳಲ್ಲಿ ಒಂದೊಂದೂ ಹತ್ತು ಬಗೆಯಾಗುತ್ತದೆ.

ಇಹ ದುಶ್ಚರಿತೈಃ ಕೇಚಿತ್ಕೇಚಿತ್ಪೂರ್ವಕೃತೈಸ್ತಥಾ ।
ಪ್ರಾಪ್ನುವಂತಿ ದುರಾತ್ಮಾನೋ ನರಾ ರೂಪವಿಪರ್ಯಯಂ ॥ ೯ ॥

ಬ್ರಹ್ಮಹಾ ಕ್ಷಯರೋಗೀ ಸ್ಯಾದ್ದುಶ್ಚರ್ಮಾ ಗುರುತಲ್ಪಗಃ ।
ಶ್ಯಾವದಂತಃ ಸುರಾಪಶ್ಚ ಕುನಖೀ ಕನಕಾಪಹಃ ॥ ೧೦ ॥

ವಸ್ತ್ರಾಪಹಾರಕಃ ಶ್ವಿತ್ರೀ ಪಙ್ಗುರಶ್ವಾಪಹಾರಕಃ ।
ಪಙ್ಗುರೇವ ತಥಾ ಜ್ಞೇಯಂ ಸರ್ವಯಾನಾಪಹಾರಕಃ ॥ ೧೧ ॥

ಅಂಧಶ್ಚ ಜಾಯತೇ ಲೋಕೇ ಗಾಂ ಹೃತ್ವಾ ಮಾನವಾಧಮಃ ।
ಧಾನ್ಯಚೌರೋಽತಿರಿಕ್ತಾಙ್ಗೋ ಮೂಕೋ ವಾಗಪಹಾರಕಃ ॥ ೧೨ ॥

ಗುರುಸ್ವಾಮಿದ್ವಿಜಾನ್ ಕ್ರೋಶನ್ ವೇದನಿಂದಾಂ ತಥೈವ ಚ ।
ಶ್ರುತ್ವಾ ಭವತಿ ದುರ್ಬುದ್ಧಿರ್ಬಧಿರೋ ಮಾನವಾಧಮಃ ॥ ೧೩ ॥

ನಿತ್ಯಾಮಯಾವೀ ಭವತಿ ತಥಾ ಚಾನ್ನಾಪಹಾರಕಃ ।
ವಿಯೋಜ್ಯೈಕಮಪಿ ಪ್ರಾಣೈಃ ಪ್ರಾಣಿನಂ ವ್ಯಾಧಿತಸ್ತಥಾ ॥ ೧೪ ॥

೯–೧೪. ಇಂತಹ ದುರಾತ್ಮರಾದ ಪಾಪಿಗಳಲ್ಲಿ ಕೆಲವರು ಈ ಜನ್ಮದ ದುಷ್ಕರ್ಮಗಳಿಂದಲೂ ದೇಹವಿಕಾರವನ್ನು ಹೊಂದುತ್ತಾರೆ. ಬ್ರಹ್ಮಹತ್ಯೆ ಮಾಡಿದವನು ಕ್ಷಯರೋಗಿಯಾಗುತ್ತಾನೆ. ಗುರುತಲ್ಪಗಾಮಿಯಾದವನು ಕುಷ್ಠವೇ ಮೊದಲಾದ ಚರ್ಮರೋಗವನ್ನು ಹೊಂದುತ್ತಾನೆ. ಸುರಾಪಾಯಿಯು ಹುಳುಕು ಹಲ್ಲಿನವನಾಗುತ್ತಾನೆ ಸ್ವರ್ಣಾಪಹಾರಿಯು ನಖರೋಗಹೊಂದುತ್ತಾನೆ. ವಸ್ತ್ರಾಪಹಾರಿಯು ತೊನ್ನಿನಿಂದ ಕೂಡಿಯೂ ಅಶ್ವಾಪಹಾರಿಯು ಕುಂಟನಾಗಿಯೂ ಆಗುತ್ತಾರೆ ಎಲ್ಲಾವಿಧವಾದ ಯಾನಾಪಹಾರಿಯು ಕುಂಟನೇ ಆಗುತ್ತಾನೆ. ಗೋವನ್ನು ಅಪಹರಿಸಿದವನು ಅಂಧನಾಗುತ್ತಾನೆ. ಧಾನ್ಯಾಪಹಾರಿಯು ಹೆಚ್ಚು ಅವಯವದಿಂದ ಕೂಡಿಯೂ, ವಾಕ್ಕನ್ನು ಅಪಹರಿಸಿದವನು ಮೂಗನಾಗಿಯೂ ಆಗುತ್ತಾರೆ. ಇತರರಿಂದ ಮಾಡಲ್ಪಡುವ ವೇದನಿಂದೆಯನ್ನು ಕೇಳಿ ದುರ್ಬುದ್ಧಿ ಹೊಂದಿ ಯಾವನು ಗುರು, ಸ್ವಾಮಿ, ಬ್ರಾಹ್ಮಣರು ಇವರನ್ನು ದ್ವೇಷಿಸುತ್ತಾನೆಯೋ ಅವನು ಕಿವುಡನಾಗುತ್ತಾನೆ. ಮತ್ತೊಬ್ಬನ ಅನ್ನವನ್ನು ಅಪಹರಿಸಿದವನು ನಿತ್ಯರೋಗಿಯಾಗುತ್ತಾನೆ. ಒಂದು ಪ್ರಾಣಿಗೆ ಪ್ರಾಣವಿಯೋಗ ಉಂಟುಮಾಡಿದರೂ ವ್ಯಾಧಿಗ್ರಸ್ತನಾಗುತ್ತಾನೆ.

ವಸ್ತ್ರಭೋಜ್ಯಾಪಹರ್ತಾರೌ ತಥಾ ನಗ್ನಬುಭುಕ್ಷಿತಾ ।
ಅಗ್ನಿಮಾಂದ್ಯಾಭಿಭೂತಶ್ಚ ತಥಾ ಭವತಿ ದುರ್ಮತಿಃ ॥ ೧೫ ॥

ಜುಹೋತಿ ಯೋ ದ್ವಿಜಶ್ರೇಷ್ಠಾ ಅಸಮಿದ್ಧೇ ಹುತಾಶನೆ ।
ರತ್ನಾಪಹಾರೀ ಭವತಿ ತಥಾ ಕುಷ್ಠೀ ನರಾಧಮಃ ॥ ೧೬ ॥

ಪಿಶುನಃ ಪೂತಿನಾಸಶ್ಚ ಪೂತಿವಕ್ತ್ರಶ್ಚ ಸೂಚಕಃ ।
ಷಂಡಶ್ಚ ಜಾಯತೇ ಲೋಕೇ ದಾರಾತಿಕ್ರಮಕಾರಕಃ ॥ ೧೭ ॥

ಪರಪುಂಸಿ ಪ್ರದಾತಾವಾ ತಸ್ಯಾ ಭಾರ್ಯಾ ತಥಾ ಭವೇತ್ ।
ಕುಷ್ಠೀ ಭವತಿ ಧರ್ಮಜ್ಞಾಸ್ತ್ವಪಹೃತ್ಯ ತಥಾ ಸ್ತ್ರಿಯಂ ॥ ೧೮ ॥

ಲಿಂಗವ್ಯಾಧಿಮವಾಪ್ನೋತಿ ವಿಯೋನೌ ಮೈಥುನಂ ಗತಃ ।
ಗಾಂ ಚ ಗತ್ವಾ ದ್ವಿಜಶ್ರೇಷ್ಠಾ ಲಿಂಗನಾಶಮವಾಪ್ನುಯಾತ್ ॥ ೧೯ ॥

೧೫-೯. ವಸ್ತ್ರ ಮತ್ತು ಭೋಜ್ಯ ವಸ್ತುಗಳನ್ನು ಅಪಹರಿಸುವವರು ನಗ್ನರಾಗಿಯೂ, ಹಸಿವಿನಿಂದ ತೊಳಲುವವರಾಗಿಯೂ ಆಗುತ್ತಾರೆ. ಯಾವನು ಚನ್ನಾಗಿ ಜ್ವಲಿಸದಿರುವ ಅಗ್ನಿಯಲ್ಲಿ ಹೋಮ ಮಾಡುತ್ತಾನೆಯೋ ಅವನು ಅಗ್ನಿಮಾಂದ್ಯರೋಗದಿಂದ ದುಃಖಪಡುತ್ತಾನೆ. ರತ್ನಗಳನ್ನು ಅಪಹರಿಸಿದವನು ಹೀನನಾದ ಕುಷ್ಠರೋಗಿಯಾಗುತ್ತಾನೆ. ಪೈಶುನ್ಯವೃತ್ತಿಯುಳ್ಳವನು ದುರ್ಗಂಧವಾದ ಮೂಗುಳ್ಳವನಾಗಿಯೂ, ಪತ್ತೆದಾರಿ ಕಾರ್ಯದಲ್ಲಿರುವವನು ದುರ್ಗಂದ ಮುಖವುಳ್ಳವನಾಗಿಯೂ ಆಗುತ್ತಾನೆ. ಲೋಕದಲ್ಲಿ ಹೆಂಡತಿಯನ್ನು ಅತಿಕ್ರಮಿಸಿನಡೆಯುವವನು ನಪುಂಸಕನಾಗುತ್ತಾನೆ. ಪರಪುರುಷನಲ್ಲಿ ಸಂಗಮಪ್ರಯತ್ನ ನಡೆಸಿದವನು ಅವನಿಗೇ ಪತ್ನಿಯಾಗಿ ಹುಟ್ಟುತ್ತಾನೆ ಪರಸ್ತ್ರೀಯನ್ನು ಅಪಹರಿಸಿದವನು ಕುಷ್ಠಿಯಾಗುತ್ತಾನೆ. ಯೋನಿಇಲ್ಲದೆಡೆಯಲ್ಲಿ ಮೈಥುನಮಾಡಿದವನು ಲಿಂಗವ್ಯಾಧಿಹೊಂದುತ್ತಾನೆ ಗೋವಿನಲ್ಲಿ ಪ್ರವೇಶಿಸಿದವನು ಲಿಂಗನಾಶಹೊಂದುತ್ತಾನೆ ಪೂಜ್ಯರನ್ನು ಅವಮಾನಿಸಿದವನು ಪಟ್ಟೆತಲೆಯುಳ್ಳವನಾಗುತ್ತಾನೆ. ಪೂಜ್ಯರನ್ನು ಹೊಡೆದವನು ಕೈಇಲ್ಲದವನಾಗುತ್ತಾನೆ

ಪೂಜ್ಯಾವಮಾನಾತ್ ಖಲ್ವಾಟೋ ಪೂಜ್ಯತಾಡಯಿತಾ ಕುಣಿಃ ।
ಮಾರ್ಗಾರ್ಹಾಯ ಚ ಯೋ ಮಾರ್ಗಂ ನ ಪ್ರಯಚ್ಛತಿ ದುರ್ಮತಿಃ ॥ ೨೦ ॥

ಖಂಜೋ ಭವತಿ ದುರ್ಬುದ್ಧಿರಾಸನಾರ್ಹಸ್ಯ ಚಾಸನಮ್ ।
ದುರ್ನಾಮಾ ಸಂಯುತೋ ನಿತ್ಯಂ ಮತ್ಸರೀ ಜಾಯತೇ ಶಠಃ ॥ ೨೧ ॥

ದೀಪಹರ್ತಾ ಭವತ್ಯಂಧಃ ಕಾಣೋ ನಿರ್ವಾಪಕೋ ಭವೇತ್ ।
ದೈವದತ್ತೇನ ಜ್ಞಾನೇನ ಕೃತ್ವಾ ಕರ್ಮ ಸುದುರ್ಮತಿಃ ।
ಜಾಯತೇ ಬುದ್ಬುದಾಕ್ಷೋ ವಾ ನೇತ್ರರೋಗಯುತೋಽಥವಾ ॥ ೨೨ ॥

ದೃಷ್ಟ್ವಾ ತು ಪರಸ್ತ್ರಿಯಂ ನಗ್ನಾಂ ನರೋ ದುಷ್ಟೇನ ಚಕ್ಷುಷಾ ।
ಜಾತ್ಯಂಧತಾಮವಾಪ್ನೋತಿ ಪರಲೋಕೇ ನ ಸಂಶಯಃ ॥ ೨೩ ॥

ವರ್ಣಾಧಿಕಸ್ಯ ಜೀವಿತ್ವಾ ವರ್ಣಹೀನೇನ ಕರ್ಮಣಾ ।
ತಸ್ಯೈವ ಯೋನಿಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೨೪ ॥

೨೦–೨೩. ಮಾರ್ಗವನ್ನು ಬಿಟ್ಟು ಕೊಡಲು ಅರ್ಹನಾದ ಉತ್ತಮನಿಗೆ ಯಾವ ದುರ್ಬುದ್ಧಿಯು ಮಾರ್ಗವನ್ನು ಬಿಟ್ಟುಕೊಡುವದಿಲ್ಲವೋ ಅವನು ಕುಂಟನಾಗುತ್ತಾನೆ. ಆಸನಾದಿಗಳಿಂದ ಸತ್ಕರಿಸತಕ್ಕವನಿಗೆ ಆಸನಾದಿಗಳನ್ನು ಕೊಡದಿರುವವನು ರಕ್ತಹೀರುವ ದೊಡ್ಡ ಜಿಗಣೆಯಾಗುತ್ತಾನೆ. ಬಂಧನದಲ್ಲಿಯೂ ಇರುತ್ತಾನೆ. ಮತ್ಸರವುಳ್ಳವನು ಮೂರ್ಖನಾಗುತ್ತಾನೆ. ದೀಪವನ್ನು ಅಪಹರಿಸಿದವನು ಅಂಧನಾಗಿಯೂ ಆರಿಸಿದವನು ಕಣ್ಣಿದ್ದರೂ ದರ್ಶನಶಕ್ತಿ ಇಲ್ಲದವನಾಗಿಯೂ ಆಗುತ್ತಾನೆ. ಶಾಸ್ತ್ರವಿಹಿತವಾದ ಕ್ರಮವನ್ನು ಬಿಟ್ಟು ಕೇವಲ ದೈವಿಕವಾದ ತನ್ನ ಜ್ಞಾನದಿಂದಲೇ ಕಾರ್ಯವನ್ನು ನಡೆಸುವ ದುರ್ಬುದ್ಧಿಯು ಗುಳ್ಳೆಯಂತಿರುವ ವಿಕಾರವಾದ ಕಣ್ಣುಗಳುಳ್ಳವನಾಗಿ ಅಥವಾ ನೇತ್ರರೋಗ ಪೀಡಿತನಾಗಿ ಆಗುತ್ತಾನೆ. ಮನುಷ್ಯನು ಯಾವನೇ ಆಗಲಿ ಬೆತ್ತಲೆಯಾಗಿರುವ ಪರಸ್ತ್ರೀಯನ್ನು ದುಷ್ಟವಾದ ನೋಟದಿಂದ ನೋಡಿದಲ್ಲಿ ಅವನು ಪರಲೋಕದಲ್ಲಿಯೂ ಹುಟ್ಟುಕುರುಡನೇ ಆಗುತ್ತಾನೆ.

೨೪–೨೮. ಉತ್ತಮ ವರ್ಣದವನು ಹೀನವರ್ಣದವನ ಕರ್ಮದಿಂದ ಜೀವಿಸಿದ್ದೇ ಆದರೆ ಅವನು ಹೀನವರ್ಣದಲ್ಲೇ ಜನಿಸುತ್ತಾನೆ. ಇದರಲ್ಲಿ ಸಂದೇಹವಿಲ್ಲ

ತಥೈವಾಧಿಕವರ್ಣಸ್ಯ ಯದಿ ಜೀವತಿ ಕರ್ಮಣಾ ।
ಹೀನವರ್ಣಸ್ತಥಾ ಲೋಕೇ ಭವತ್ಯನ್ಧಃ ಸದುರ್ಮತಿಃ ॥ ೨೩ ॥

ಯಸ್ಯಾನ್ನೇನೋದರಸ್ಥೇನ ಮೃತ್ಯುಮೇತಿ ದ್ವಿಜಃ ಕ್ವಚಿತ್ ।
ತಸ್ಯೈವ ಯೋನಿಮಾಪ್ನೋತಿ ಸ್ವಕೃತೇನಾಽಪಿ ಕರ್ಮಣಾ ॥ ೨೬ ॥

ಆಮಶ್ರಾದ್ಧಂ ತಥಾ ಭುಕ್ತ್ವಾ ವಿರೂಪೋ ಜಾಯತೇ ನರಃ ।
ವಿರೂಪ ಏವ ಭವತಿ ತಥಾವಿಕ್ರೇಯವಿಕ್ರಯಾತ್ ॥ ೨೭ ॥

ವಿನಾಪರಾಧೇನ ತಥಾ ಕೃತ್ವಾ ಪತ್ನ್ಯಧಿವೇದನಂ ।
ಪರಾಜಯಮವಾಪ್ನೋತಿ ವ್ಯವಹಾರೇ ತಥಾ ರಣೆ ॥ ೨೮ ॥

ಮೂಲಕರ್ಮ ತಥಾ ಕೃತ್ವಾ ವಶೀಕರಣಕಾರಣಾತ್ ।
ದ್ವೇಷ್ಯೋ ಭವತಿ ಲೋಕೇಽಸ್ಮಿನ್ ಜಗತೋನಾತ್ರ ಸಂಶಯಃ ॥ ೨೯ ॥

ಅವಕೀರ್ಣೀ ಚ ಭವತಿ ಲಿಂಗವ್ಯಾಧಿಸಮನ್ವಿತಃ ।
ಪರಿವೇತ್ತಾ ತಥಾ ಲೋಕೆ ಸರ್ವವ್ಯಾಧಿಸಮನ್ವಿತಃ ॥ ೩೦ ॥

ಹಾಗೆಯೇ ಅಪಕೃಷ್ಟ ವರ್ಣದವನು ಉತ್ತಮವರ್ಣದ ಕರ್ಮಗಳಿಂದ ಜೀವಿಸಿದ್ದೇ ಆದರೆ ಆ ದುರ್ಬುದ್ಧಿಯು ಕುರುಡನೇ ಆಗುತ್ತಾನೆ. ಬ್ರಾಹ್ಮಣನಾದವನು ಪರಾನ್ನದಿಂದ ಜೀವಿಸುವಾಗ ಯಾವನ ಅನ್ನವು ಹೊಟ್ಟೆಯಲ್ಲಿರುವಾಗ ಮೃತನಾಗುವನೋ ಅವನು ಅನ್ನದಾತೃವಿನ ವರ್ಣದಲ್ಲಿಯೇ ತನ್ನ ಕರ್ಮದಲ್ಲಿ ನಿರತನಾಗಿದ್ದರೂ ಜನಿಸುತ್ತಾನೆ. ಆಮಶ್ರಾದ್ಧವನ್ನು ಭುಂಜಿಸಿದವನು ಕುರೂಪಿಯಾಗುತ್ತಾನೆ. ಹಾಗೆಯೇ ವಿಕ್ರಯಾನರ್ಹವಸ್ತುಗಳನ್ನು ವಿಕ್ರಯಿಸಿದವನೂ ಕುರೂಪಿಯೇ ಆಗುತ್ತಾನೆ. ಯಾವ ಅಪರಾಧವೂ ಇಲ್ಲದಿದ್ದರೂ ಪತ್ನಿಗೆ ವ್ಯಥೆಯನ್ನುಂಟುಮಾಡಿದವನು ವ್ಯವಹಾರದಲ್ಲಿಯೂ ಯುದ್ಧದಲ್ಲಿಯೂ ಪರಾಜಯವನ್ನೇ ಹೊಂದುತ್ತಾನೆ.

೨೯-೩೩. ವಶೀಕರಣಕ್ಕಾಗಿ ಮಾಟಕೂಟಗಳನ್ನು ಮಾಡಿದವನು ಜಗತ್ತಿನ ಎಲ್ಲಾ ಪ್ರಜೆಗಳಿಗೂ ದ್ವೇಷ್ಯನಾಗುತ್ತಾನೆ. ಬ್ರಹ್ಮಚರ್ಯಾದಿ ವ್ರತಲೋಪ ಹೊಂದಿದವನು ಲಿಂಗವ್ಯಾಧಿಯನ್ನು ಹೊಂದುತ್ತಾನೆ. ಅಣ್ಣನು ಮದುವೆಯಾಗದಿರುವಾಗ ವಿವಾಹಹೊಂದಿದ ತಮ್ಮನು ಎಲ್ಲಾ ವ್ಯಾಧಿಗಳಿಗೂ ಆಶ್ರಯನಾಗುತ್ತಾನೆ. ಯಾಗಾ

ಅಯಾಜ್ಯಯಾಜಕಃ ಪಾಪೋ ಜಾಯತೇ ವರ್ಣಸಂಕರಃ ।
ವೇದವಿಕ್ರಯಕೋ ಮೂರ್ಖಃ ಕಿತವಶ್ಚೈವ ಜಾಯತೇ ॥ ೩೦ ॥

ವಿದ್ಯಾನರ್ಥಶ್ಚ ಭವತಿ ತಥಾವಿಕ್ರೇಯವಿಕ್ರಯಾ ।
ಏಕಃ ಸ್ವಾದ್ವಶನೋ ಲೋಕೇ ಜಾಯತೇ ಪರತರ್ಷಕಃ ॥ ೩೧ ॥

ಪರಿವ್ರಾಟ್ ಕಾಮವೃತ್ತಸ್ತು ನಿತ್ಯಂ ಭವತಿ ದುಃಖಿತಃ ।
ಹಿಂಸಾರತಸ್ತಥಾಲ್ಪಾಯುರ್ಯಸ್ತು ಮಾಂಸಾಶನೋ ನರಃ ॥ ೩೩ ॥

ನಾಸ್ತಿಕಸ್ತು ದರಿದ್ರಃ ಸ್ಯಾತ್ಸರ್ವಭೋಗವಿವರ್ಜಿತಃ ।
ಅತಿಮಾನಪ್ರವೃತ್ತಸ್ತು ಜಾಯತೇ ಕುತ್ಸಿತೇ ಕುಲೇ ॥ ೩೪ ॥

ಶ್ವಪಾಕಪುಕ್ಕಸಾದೀನಾಂ ಕುತ್ಸಿತಾನಾಮಚೇತಸಾಂ ।
ಕುಲೇಷು ತೇಷು ಜಾಯಂತೇ ಗುರುವೃದ್ಧಾವಚಾಯಕಾಃ ॥ ೩೫ ॥

ಪರೋದ್ವೇಗರತಿರ್ನಿತ್ಯಂ ಬಹುಬಾಧಶ್ಚ ಜಾಯತೇ ।
ಪ್ರಕೀರ್ಣಮೈಥುನೋ ಜಂತುಃ ಕ್ಲೀಬೋ ಭವತಿ ವೈ ದ್ವಿಜಾಃ ॥ ೩೬ ॥

ಸರ್ಪನಿಂದ ಯಾಗವಾಡಿಸಿದವನು ವರ್ಣಸಾಂಕರ್ಯಹೊಂದುತ್ತಾನೆ. ವೇದವನ್ನು ವಿಕ್ರಯಿಸಿದವನು ಮೂರ್ಖನೂ ವಂಚಕನೂ ಆಗುತ್ತಾನೆ. ಅವಿಕ್ರೇಯ ವಸ್ತುಗಳನ್ನು ವಿಕ್ರಯಿಸಿದವನು ವ್ಯರ್ಥವಿದ್ಯೆಯುಳ್ಳವನಾಗುತ್ತಾನೆ. ಸ್ವಾದುವಾದ ಅನ್ನಾದಿಗಳನ್ನು ಒಬ್ಬನೇ ಭುಂಜಿಸಿದವನು ಇತರರಿಗೆ ವ್ಯಥಾದ.ಯಕನಾಗುತ್ತಾನೆ ಸನ್ಯಾಸಿಯಾದವನು ಸ್ವೇಚ್ಛಾಚಾರಿಯಾದಲ್ಲಿ ನಿತ್ಯದುಃಖಿಯಾಗುತ್ತಾನೆ. ಹಿಂಸಾಭಿಲಾಷಿಯಾದವನೂ ಮಾಂಸಭಕ್ಷಕನೂ ಸಹ ಅಲ್ಪಾಯುಸ್ಸುಳ್ಳವನಾಗುತ್ತಾನೆ.

೩೪–೩೯. ನಾಸ್ತಿಕನಾದವನು ದರಿದ್ರನಾಗಿಯೂ ಸರ್ವಭೋಗರಹಿತನಾಗಿಯೂ ಆಗುತ್ತಾನೆ. ಬಹಳ ಅಹಂಕಾರದಲ್ಲಿ ನಡೆದವನು ದುರ್ವಂಶದಲ್ಲಿ ಹುಟ್ಟುತ್ತಾನೆ. ಗುರು ಮತ್ತು ವೃದ್ಧರನ್ನು ಅವಹೇಳನ ಮಾಡಿದವರು ಶ್ವಪಾಕ, ಬೇಡ ಮುಂತಾದ ಬುದ್ಧಿಹೀನರ ಕುತ್ಸಿತ ವಂಶಗಳಲ್ಲಿ ಜನಿಸುತ್ತಾರೆ. ಮತ್ತೊಬ್ಬರನ್ನು ದುಃಖಪಡಿಸುವುದೇ ಮುಖ್ಯಕೆಲಸವಾಗಿರುವ ದುರ್ಜನನು ಬಹುವಿಧವಾದ ಸಂಕಟಗಳಿಗೀಡಾಗುತ್ತಾನೆ. ಹೆಚ್ಚಾಗಿ ಮೈಥುನವನ್ನು ಸೇವಿಸಿದ ಯಾವ ಪ್ರಾಣಿಯಾದರೂ ನಪುಂಸಕತ್ವವನ್ನು ಹೊಂದುತ್ತದೆ. ಪಾಪಕರವಾದ ನಡತೆಯುಳ್ಳವನು

ನರಃ ಪಾಪಸಮಾಚಾರೋ ಮೃತ್ಯುಮಭ್ಯೇತಿ ಕುತ್ಸಿತಂ ।
ಶ್ವಭ್ರೇತು ಮರಣಂ ಲೋಕೆ ವಿಷೈಃ ಸ್ಥಾವರಜಂಗಮೈಃ ॥ ೩೭ ॥

ದಂಷ್ಟ್ರಿಭ್ಯಶ್ಚ ನಖಿಭ್ಯಶ್ಚ ಚಂಡಾಲಾದ್ಬ್ರಾಹ್ಮಣಾತ್ತಥಾ ।
ಗೃಹಾವಪತನಾಚ್ಚೈವ ದ್ರುಮಾಶ್ವಪತಿತೈಸ್ತಥಾ ॥ ೩೮ ॥

ನೌಭಂಗಾದಗ್ನಿದಾಹಾಚ್ಚ ತಥೋದ್ಬಂಧನಕರ್ಮಣಾ ।
ಗೋಭ್ಯಶ್ಚ ಮರಣಂ ಲೋಕೆ ವಿಜ್ಞೇಯಂ ಪಾಪಕರ್ಮಣಃ ॥ ೩೯ ॥

ವಿಷಾಮನ್ಯತಮಂ ಮೃತ್ಯುಮಾಸಾದ್ಯ ನರಕಂ ವ್ರಜೇತ್ ।
ನ ವಾಪಿ ತೈಶ್ಚ ಯುಜ್ಯನ್ತೆ ಯೇ ನರಾಃ ಶುಭಕಾರಿಣಃ ॥ ೪೦ ॥

ತಾಡಿತಾ ತಾಡ್ಯತೇ ಲೋಕೇ ಬದ್ಧಾ ನ್ವೈ ಬಧ್ಯತೇ ತಥಾ ।
ಹನ್ತಾ ವಧಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೪೧ ॥

ಯದ್ಯತ್ಪರಸ್ಯಾಚರತಿ ತತ್ತದಸ್ಯೋಪಜಾಯತೇ ॥ ೪೨ ॥

ನಿಂದಿತವಾದ ಮರಣವನ್ನು ಹೊಂದುತ್ತಾನೆ. ಅಂತಹ ನಿಂದಿತವಾದ ಮರಣಗಳೂ ಸಹ ಹಳ್ಳದಲ್ಲಿ ಬಿದ್ದು ಅಥವಾ ವಿಷದಿಂದ ಮರ ಪರ್ವತ ಮುಂತಾದುವುಗಳಿಂದ, ವ್ಯಾಘ್ರಗಳಿಂದ, ವರಾಹಾದಿಗಳಿಂದ ಚಂಡಾಲನಿಂದ, ಬ್ರಾಹ್ಮಣಶಾಪದಿಂದ, ಮನೆಯಲ್ಲಿಯೇ ಮಗುಚಿಬೀಳುವುದರಿಂದ ಮರ, ಕುದುರೆ ಇತ್ಯಾದಿಗಳಿಂದ ಕೆಳಗೆ ಬೀಳುವುದರಿಂದ, ದೋಣಿಯು ಒಡೆಯುವುದರಿಂದ, ಬೆಂಕಿಯ ದಾಹದಿಂದ, ನೇಣುಹಾಕಿಕೊಳ್ಳುವುದರಿಂದ, ಗೋವಿನಿಂದ ಈ ರೀತಿ ಪಾಪಕರ್ಮಕ್ಕೆ ತಕ್ಕಂತೆ ಇರುತ್ತವೆ ಎಂದು ತಿಳಿಯಬೇಕು.

೪೦– ೫. ಇವುಗಳಲ್ಲಿ ಯಾವುದಾದರೊಂದು ರೀತಿಯಲ್ಲಿ ಮರಣಹೊಂದಿ ನರಕಕ್ಕೆ ಹೋಗುತ್ತಾನೆ. ಪಾಪಮಾರ್ಗವನ್ನು ಬಿಟ್ಟು ಶುಭಕರವಾದ ವೃತ್ತಿಯುಳ್ಳವರು ಇಂತಹ ಮರಣಕ್ಕೆ ತುತ್ತಾಗಿ ನರಕಹೊಂದುವುದಿಲ್ಲ. ಲೋಕದಲ್ಲಿ ಮತ್ತೊಬ್ಬನನ್ನು ಅನ್ಯಾಯದಿಂದ ಹೊಡೆದವನು ತಾನೂ ಅಂತಹ ಏಟಿಗೆ ಭಾಗಿಯಾಗುತ್ತಾನೆ. ಬಂಧನ ಮಾಡಿದವನು ಬಂಧನಕ್ಕೂ, ವಧಮಾಡಿದವನು ವಧಕ್ಕೂ ಭಾಗಿಯಾಗುತ್ತಾನೆ. ಈ ವಿಚಾರದಲ್ಲಿ ಸಂದೇಹವಿಲ್ಲ. ಮತ್ತೊಬ್ಬನಿಗೆ ಯಾವಯಾವ ತೊಂದರೆ ಕೊಡುತ್ತಾನೆಯೋ ತಾನೂ ಆಯಾಯ ತೊಂದರೆಗೆ ಈಡಾಗುತ್ತಾನೆ. ಯಾವ

ಪ್ರಾಪ್ನೋತಿ ಯಾದೃಶೀಂ ಬಾಧಾಂ ಯತ್ಕರ್ಮಣಿ ಕೃತೇಪರಃ ।
ತಸ್ಯಾಪಿ ತಾದೃಶೀ ಬಾಧಾ ಜ್ಞೇಯಾ ಜನ್ಮನಿ ಜನ್ಮನಿ ॥ ೪೩ ॥

ತಸ್ಮಾತ್ಸರ್ವಪ್ರಯತ್ನೇನ ಪಾಪಬಾಧಾಂ ವಿವರ್ಜಯೇತ್ ।
ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚಾಪ್ಯವಧಾರ್ಯತಾಂ ।
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥ ೪೪ ॥

ಪರೋಪತಾಪಕ್ರಿಯಯಾ ನ ಕಾರ್ಯಂ
ಧನಾರ್ಜನಂ ದೋಷಸಮೂಹಕಾರಿ ।
ಪರೋಪತಾಪಪ್ರಭವೋ ಹಿ ದೋಷಃ
ಶಕ್ಯೋ ನ ಹಂತುಂ ವಿಬುಧಾಲಯೇಽಪಿ ॥ ೪೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪಾಪಕರ್ಮ
ಫಲನಿರೂಪಣೋ ನಾಮ
ತ್ರಿಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಕಾರ್ಯಮಾಡಿದಲ್ಲಿ ಮತ್ತೊಬ್ಬನಿಗೆ ಎಂತಹ ತೊಂದರೆಯಾಗುತ್ತದೆಯೋ ತನಗೂ ಅಂತಹ ತೊಂದರೆಯು ಜನ್ಮಜನ್ಮದಲ್ಲಿಯೂ ತಪ್ಪಿದ್ದಲ್ಲ. ಆದುದರಿಂದ ಸರ್ವಪ್ರಯತ್ನದಿಂದಲೂ ಪಾಪಕರವಾದ ಪರಹಿಂಸೆಯನ್ನು ತ್ಯಜಿಸಬೇಕು. ಧರ್ಮದ ರಹಸ್ಯ ತತ್ತ್ವವನ್ನು ಹೇಳುತ್ತೇನೆ ಕೇಳಿರಿ. ಕೇಳಿಯೂ ನಿಶ್ಚಯಹೊಂದಿ ದೃಢಪಡಿಸಿಕೊಳ್ಳಿರಿ. ತನಗೆ ಯಾವಯಾವದು ಪ್ರತಿಕೂಲವೆಂದು (ಅಹಿತವೆಂದು) ತಿಳಿಯಬರುತ್ತದೆಯೋ ಅದನ್ನು ಇತರರ ವಿಷಯದಲ್ಲಿ ಮಾಡಬಾರದು. ಮತ್ತೊಬ್ಬರಿಗೆ ತೊಂದರೆಕೊಟ್ಟು ಧನಾರ್ಜನೆ ಮಾಡಬಾರದು ಅದು ಸರ್ವದೋಷಕ್ಕೂ ಆಕರ. ಮತ್ತೊಬ್ಬರಿಗೆ ತೊಂದರೆ ಕೊಟ್ಟು ತಾನು ಹೊಂದಿದ ದೋಷವನ್ನು ಸ್ವರ್ಗಲೋಕದಲ್ಲಿಯೂ ಹೋಗಲಾಡಿಸಿಕೊಳ್ಳಲು ಸಾಧ್ಯವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸ
ಗೀತೆಯಲ್ಲಿ ಪಾಪಕರ್ಮ ಫಲನಿರೂಪಣವೆಂಬ
ಇನ್ನೂರ ಐವತ್ತಮೂರನೆಯ ಅಧ್ಯಾಯ ಮುಗಿದಿದೆ

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತುಷ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಜ್ಞಾನಂ ಸುಖಾವಹಂ ಲೋಕೇ ಜ್ಞಾನಂ ಚಕ್ಷುಃ ಪರಂ ಮತಂ |
ಜ್ಞಾನಾದ್ಧರ್ಮಮವಾಪ್ನೋತಿ ಜ್ಞಾನಾದರ್ಥಂ ಚ ಮಾನವಃ || ೧ ||

ಜ್ಞಾನಾತ್ಕಾಮಮವಾಪ್ನೋತಿ ಜ್ಞಾನಾನ್ಮೋಕ್ಷಂ ಚ ಗಚ್ಛತಿ |
ತಸ್ಮಾತ್ಸರ್ವಪ್ರಯತ್ನೇನ ಜ್ಞಾನೇ ಯತ್ನಂ ಸಮಾಚರೇತ್ || ೨ ||

ಜ್ಞಾನೇನ ಸರ್ವಮಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ |
ಜ್ಞಾನೈಕಹೇತುಶ್ಚ ತಥಾ ನಿತ್ಯಂ ಶಾಸ್ತ್ರಾನ್ವವೇಕ್ಷಣಂ || ೩ ||

ಇನ್ನೂರ ಐವತ್ತನಾಲ್ಕನೆಯ ಅಧ್ಯಾಯ.

೧-೩ ಹಂಸವು ಹೇಳುತ್ತದೆ:—ಲೋಕದಲ್ಲಿ ಜ್ಞಾನವು ಸುಖಕರವಾದ್ದು. ಜ್ಞಾನವೇ ಮಿಗಿಲಾದ ಕಣ್ಣು. ಜ್ಞಾನದಿಂದಲೇ ಮನುಷ್ಯನು ಧರ್ಮ ಅರ್ಥ ಕಾಮ ಗಳೆಂಬ ಇಹಲೋಕದ ಪುರುಷಾರ್ಥಗಳನ್ನೂ ಮೋಕ್ಷವನ್ನೂ ಸಹ ಹೊಂದುತ್ತಾನೆ. ಆದುದರಿಂದ ಸರ್ವಪ್ರಯತ್ನದಿಂದಲೂ ಜ್ಞಾನಾರ್ಜನೆಯಲ್ಲಿ ನಿರತನಾಗಬೇಕು. ಮನಸ್ಸಿಗೆ ಅಭಿಮತವಾದುದನ್ನೆಲ್ಲಾ ಜ್ಞಾನದಿಂದಲೇ ಹೊಂದುತ್ತಾನೆ. ಅಂತಹ ಜ್ಞಾನಕ್ಕೆ ಕಾರಣವಾದುದು. ಮುಖ್ಯವಾಗಿ ಶಾಸ್ತ್ರಾರ್ಥ ಪರಿಶೀಲನೆ. (ಶಾಸ್ತ್ರದಿಂದ ಪರಾವರ ತತ್ತ್ವವಿವೇಕವನ್ನೂ, ಪರದೇವತಾಸ್ವರೂಪವನ್ನೂ, ಬಂಧಮೋಕ್ಷಾದಿ

ಆಚಾರ್ಯಗುರುಶುಶ್ರೂಷಾ ವೃದ್ಧಾನಾಂ ಚೈವ ಸೇವನಂ ।
ಅನಾಲಸ್ಯಮಕಾರ್ಪಣ್ಯಂ ದಿವಾ ನಿದ್ರಾವಿವರ್ಜನಂ ॥ ೪ ॥

ಜ್ಞಾನಮೇಷಪರೋ ಬಂಧುಃ ಜ್ಞಾನಂ ಮಾರ್ಗಸ್ಯ ದೇಶಿಕಂ ।
ಸಂಸಾರಬಂಧನಕ್ಲೇಶಾಂಸ್ತಥಾ ಜ್ಞಾನೇನ ಮುಂಚತಿ ॥ ೫ ॥

ಜ್ಞಾನೇನ ಪುರುಷೋ ವೇತ್ತಿ ಜ್ಞಾನಾದ್ವೈರಾಗ್ಯಮೃಚ್ಛತಿ ।
ಜ್ಞಾನೇನ ತದವಾಪ್ನೋತಿ ಯದ್ಗತ್ವಾ ನಾನುಶೋಚತಿ ॥ ೬ ॥

ಏತದ್ವಿದಿತ್ವಾ ಪುರುಷೇಣ ಕಾರ್ಯಂ
ಜ್ಞಾನೇ ಸದಾ ಯತ್ನಮದೀನಸತ್ವಾಃ ।

ಸ್ವರೂಪಗಳನ್ನೂ, ಸ್ವಾಧಿಕಾರಾನುಗುಣವಾದ ಮೋಕ್ಷೋಪಾಯನಿರ್ಧಾರಣವನ್ನೂ ಹೊಂದಿ ಆಚಾರ್ಯೋಪದೇಶಲಬ್ಧವಾದ ಇಂತಹ ಜ್ಞಾನದಿಂದ ಸ್ವರೂಪಾನುಗುಣವಾದಭಕ್ತಿಪ್ರಪತ್ತ್ಯಾದಿ ಉಪಾಯಗಳಲ್ಲಿ ಆಸಕ್ತನಾಗಿ ಸಾಮಾನ್ಯ ಧರ್ಮಗಳಿಂದಲೂ ಆತ್ಮಶುದ್ಧಿಯಿಂದಲೂ ಕೂಡಿ ವರ್ಣಾಶ್ರಮೋಚಿತವಾದ ಕರ್ಮಗಳನ್ನು ಪರಮಾತ್ಮಪ್ರೀತಿಗಾಗಿ ಆಚರಿಸುತ್ತಾ ಪಾಪಕರವಾದ ಕರ್ಮಗಳಿಂದ ಸರ್ವಾತ್ಮನಾ ಪರಾಙ್ಮುಖನಾಗಿ, ಆತ್ಮರತಿಯಾಗಿ ಶ್ಲೋ॥ ಯನ್ಮುಹೂರ್ತಂಕ್ಷಣಂ ವಾಪಿ ವಾಸುದೇವೋ ನಚಿಂತ್ಯತೇ ಸಾಹಾನಿಸ್ತನ್ಮಹಚ್ಛಿದ್ರಂ ಸಾಭ್ರಾಂತಿಃ ಸಾಚವಿಕ್ರಿಯಾ ಇತ್ಯಾದಿ ವೇದಾಂತಾರ್ಥಾನುಸಂಧಾನದಿಂದ ಶಾಂತನಾಗಿ ಇಹಲೋಕದ ಕಾಲವನ್ನು ಕಳೆಯಬೇಕೆಂದು ತಾತ್ಪರ್ಯ. ಆಚಾರ್ಯ, ಗುರು ಇವರ ಸೇವೆ, ಜ್ಞಾನವೃದ್ಧರಸೇವೆ, ಅಲಸನಾಗಿಲ್ಲದಿರುವಿಕೆ, ಅಧೀನತೆ, ಹಗಲಿನಲ್ಲಿ ನಿದ್ರೆಯಿಲ್ಲದಿರುವಿಕೆ ಇತ್ಯಾದಿಗಳೂ ಸಹಕಾರಿಗಳಾಗಿ ಜ್ಞಾನದ ದಾರ್ಢ್ಯಕ್ಕೂ, ಅಭಿವೃದ್ಧಿಗೂ, ಕಾರಣಗಳಾಗುತ್ತವೆ. ಜ್ಞಾನವೇ ಚೇತನನಿಗೆ ಮುಖ್ಯವಾದ ಬಂಧು ಮತ್ತು ಸನ್ಮಾರ್ಗಕ್ಕೂ ಉಪದೇಶಕ, ಇಂತಹ ಜ್ಞಾನದಿಂದಲೇ ಸಂಸಾರಿಯು ತನ್ನ ಸಂಸಾರಬಂಧದಿಂದಲೂ ಅದಕ್ಕೆ ಕಾರಣವಾದ ಕ್ಲೇಶದಿಂದಲೂ ಮುಕ್ತನಾಗುತ್ತಾನೆ. ಇಂತಹ ಜ್ಞಾನದಿಂದಲೇ ಪುರುಷನು ಆತ್ಮಸತ್ತೆಯನ್ನೂ ಹೊಂದುತ್ತಾನೆ. ವೈರಾಗ್ಯವನ್ನೂ ಹೊಂದುತ್ತಾನೆ.

ಜ್ಞಾನಂ ಸಮಾಸಾದ್ಯ ಮಹಾನುಭಾವಾ
ವಿಮುಕ್ತದುಃಖಾಃ ಸುಖಿನೋ ಭವನ್ತಿ　　|| ೭ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಜ್ಞಾನವರ್ಣನೋ ನಾಮ
ಚತುಷ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಈ ವಿಚಾರವನ್ನು ಸರಿಯಾಗಿ ತಿಳಿದು ಜ್ಞಾನಸಂಪಾದಿಸಲು ಯಾವಾಗಲೂ ಪ್ರಯತ್ನಿಸುತ್ತಿರಬೇಕು. ಜ್ಞಾನವನ್ನು ಹೊಂದಿದ ಮಹಾಮಹಿಮರು ದುಃಖವೆಲ್ಲವನ್ನೂ ತ್ಯಜಿಸಿ ಸುಖಿಗಳಾಗುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಜ್ಞಾನವರ್ಣನವೆಂಬ ಇನ್ನೂರ ಐವತ್ತನಾಲ್ಕನೆಯ
ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಪಂಚಪಂಚಾಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಧರ್ಮೋ ಯತ್ನಃ ಸದಾ ಕಾರ್ಯೋ ಧರ್ಮಏಕಃ ಸುಖಾವಹಃ |
ಧರ್ಮೇಣ ಪಾಲ್ಯತೇ ಸರ್ವಂ ತ್ರೈಲೋಕ್ಯಂ ಸಚರಾಚರಂ || ೧ ||

ಧಾರಣಾದ್ಧರ್ಮ ಇತ್ಯಾಹುರ್ಧರ್ಮೋ ಧಾರಯತಿ ಪ್ರಜಾಃ |
ಧರ್ಮೇ ಸಂಸೇವಿತೇ ಕಾಮಾನ್ ಪ್ರಾಪ್ನೋತಿ ಮನಸೇಪ್ಸಿತಾನ್ || ೨ ||

ಧರ್ಮೇಣಾರ್ಥಂ ತಥಾ ಲೋಕೆ ಪ್ರಾಪ್ನೋತಿ ಮನಸೇಪ್ಸಿತಂ |
ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ || ೩ ||

ಇನ್ನೂರ ಐವತ್ತೈದನೆಯ ಅಧ್ಯಾಯ.

೧-೮. ಹಂಸವು ಹೇಳುತ್ತದೆ :—ಧರ್ಮದಲ್ಲಿ ಯಾವಾಗಲೂ ಪ್ರಯತ್ನಿಸುತ್ತಿರಬೇಕು. ಧರ್ಮವೇ ಪ್ರಪಂಚದಲ್ಲಿ ಸುಖಕರವಾದದ್ದು. ಚರಾಚರಸಹಿತವಾದ ಮೂರು ಲೋಕವೂ. ಧರ್ಮದಿಂದಲೇ ರಕ್ಷಿಸಲ್ಪಟ್ಟಿದೆ. ಎಲ್ಲವನ್ನೂ ಧರಿಸಲು ಸಾಧನವಾಗಿರುವುದರಿಂದ ಇದಕ್ಕೆ ಧರ್ಮವೆಂದು ಹೆಸರು ಬಂದಿದೆ. ಎಲ್ಲಾ ಪ್ರಜೆಗಳನ್ನೂ ಧರ್ಮವೇ ಧರಿಸಿದೆ. ಧರ್ಮವನ್ನು ಸೇವಿಸಿದಲ್ಲಿ ತನಗೆ ಇಷ್ಟವಾದ

ವಿಮುಖಾ ಬಾಂಧವಾ ಯಾಂತಿ ಧರ್ಮಸ್ತ್ವೇಕೋಽನುಗಚ್ಛತಿ ।
ಏಕಸ್ಮಿನ್ನಪ್ಯತಿಕ್ರಾಂತೇ ದಿನೇ ಧರ್ಮವಿವರ್ಜಿತೇ ॥ ೪ ॥

ದಸ್ಯುಭಿರ್ಮುಷಿತಸ್ಯೇವ ಯುಕ್ತಮಾಕ್ರಂದಿತುಂ ಚಿರಂ ।
ಬಲಾದೇವ ಚರೇದ್ಧರ್ಮಮನಿತ್ಯಂ ಜೀವಿತಂ ಯತಃ ॥ ೫ ॥

ನಾಸ್ತಿ ಧರ್ಮವಿಹೀನಸ್ಯ ಸುಖಮಣ್ವಪಿ ವೈ ದ್ವಿಜಾಃ ।
ಧರ್ಮೇಣ ದೇವೈರ್ದೇವತ್ವಮೃಷಿತ್ವಮೃಷಿಭಿಸ್ತಥಾ ॥ ೬ ॥

ಪ್ರಾಪ್ತಂ ಧರ್ಮೇಣ ಸಕಲಂ ಬ್ರಹ್ಮಣಾ ಚ ಕೃತಂ ಜಗತ್ ।
ಯೇನ ಸರ್ವಮಿದಂ ಸೃಷ್ಟಂ ಸ ವೈ ಧರ್ಮೇ ಹರಿಃ ಸ್ಥಿತಃ ॥ ೭ ॥

ಕಾಮವನ್ನೂ, ಅರ್ಥವನ್ನೂ ಹೊಂದುತ್ತಾನೆ. ಮೃತವಾದ ಮೇಲೆ ಕಟ್ಟಿಗೆ, ಮಣ್ಣು ಇವಕ್ಕೆ ಸದೃಶವಾದ ದೇಹವನ್ನು ಬಿಟ್ಟು ಬಂಧುಗಳೆಲ್ಲರೂ ವಿಮುಖರಾಗಿ ಹೊರಟು ಹೋಗುತ್ತಾರೆ. ಧರ್ಮವೊಂದೇ ಆ ಚೇತನನನ್ನು ಅನುಸರಿಸುತ್ತದೆ. ಮನುಷ್ಯನಾದವನು ತನಗೆ ವಿಹಿತವಾದ ಧರ್ಮಾಚರಣೆ ಇಲ್ಲದಿರುವ ಒಂದು ದಿನ ಅತಿಕ್ರಾಂತವಾದರೂ ಅಂತಹ ಧರ್ಮಲೋಪದಿಂದ ಕಳ್ಳರಿಂದ ತಾನೇ ಅಪಹರಿಸಲ್ಪಟ್ಟಂತೆ ಭಾವಿಸಿ ಬಹುಕಾಲ ರೋದನಮಾಡುವುದೂ ಉಚಿತವೇ ಆಗುತ್ತದೆ. ಮನುಷ್ಯ ಜೀವನವು ಅನಿತ್ಯವಾದುದರಿಂದ ಹಠಾತ್ಕಾರದಿಂದಲೂ ಧರ್ಮವನ್ನು ಆಚರಿಸಲೇ ಬೇಕು. ಧರ್ಮವಿಲ್ಲದವನಿಗೆ ಎಳ್ಳಷ್ಟೂ ಸುಖವಿಲ್ಲ. ದೇವತೆಗಳು ಧರ್ಮದಿಂದಲೇ ದೇವತ್ವವನ್ನೂ ಋಷಿಗಳು ಋಷಿತ್ವವನ್ನೂ ಹೊಂದಿದ್ದಾರೆ. ಚತುರ್ಮುಖನಿಂದ ಉಂಟಾದ ಜಗತ್ತೂ ಧರ್ಮದಿಂದಲೇ. ಯಾವ ಹರಿಯಿಂದ ಚತುರ್ಮುಖನ ಮೂಲಕ ಈ ಜಗತ್ತೆಲ್ಲವೂ ಸೃಷ್ಟಿಸಲ್ಪಟ್ಟಿತೋ ಅಂತಹ ಹರಿಯೂ ಧರ್ಮದಲ್ಲಿದ್ದೇ ಸೃಷ್ಟಿಸಿದ್ದಾನೆ. ಆಚರಿಸಿದ ಧರ್ಮಕ್ಕೆ ಎಂದಿಗೂ ನಾಶವಿಲ್ಲ. ಆದುದರಿಂದ ಪುರುಷನು

ಕೃತಸ್ಯ ಧರ್ಮಸ್ಯ ನ ಚಾಸ್ತಿ ನಾಶಃ
ತಸ್ಮಾತ್ತು ಧರ್ಮಃ ಪುರುಷೇಣ ಕಾರ್ಯಃ ।
ಧರ್ಮೇ ಕೃತೇ ನಾಸ್ತಿ ಭಯಂ ನರಾಣಾಂ
ಲೋಕೇ ಪರೇ ಚೇಹ ತಥಾ ದ್ವಿಜೇಂದ್ರಾಃ ॥ ೮ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಧರ್ಮಪ್ರಶಂಸಾವರ್ಣನೋ ನಾಮ
ಪಂಚಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಧರ್ಮವನ್ನು ಸಂಪಾದಿಸಲೇಬೇಕು. ಇಂತಹ ಧರ್ಮವೊಂದಿದ್ದಲ್ಲಿ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಭಯವೆಂಬುದೇ ಇಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಧರ್ಮಪ್ರಶಂಸಾವರ್ಣನವೆಂಬ ಇನ್ನೂರ ಐವತ್ತೈದನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷಟ್‌ಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಜ್ಞಾತವ್ಯಾ ಗುರುಶುಶ್ರೂಷಾ ಪರಮಂ ಧರ್ಮಕಾರಣಂ ।
ಗುರುಶುಶ್ರೂಷಯಾ ವಿದ್ಯಾಂ ನರಃ ಸಮಧಿಗಚ್ಛತಿ ॥ ೧ ॥

ವಿದ್ಯಯಾ ತದವಾಪ್ನೋತಿ ಯತ್ರ ಗತ್ವಾ ನ ಶೋಚತಿ ।
ಸುವರ್ಣಪುಷ್ಪಾಂ ಪೃಥಿವೀಂ ವಿಚಿನ್ವಂತಿ ನರಾಸ್ತ್ರಯಃ ॥ ೨ ॥

ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಂ ।
ಸರ್ವಧರ್ಮವಿಹೀನೋಽಪಿ ಗುರುಶುಶ್ರೂಷಣೇ ರತಃ ॥ ೩ ॥

ಸ್ವರ್ಗಲೋಕಮವಾಪ್ನೋತಿ ಪುರುಷೋಽಪಿ ಸುದಾರುಣಃ ।
ಮಾತರಂ ಪಿತರಂ ವಾಪಿ ಜ್ಯೇಷ್ಠಂ ಭ್ರಾತರಮೇವ ಚ ॥ ೪ ॥

ಇನ್ನೂರ ಐವತ್ತಾರನೆಯ ಅಧ್ಯಾಯ.

೧-೭. ಹಂಸವು ಹೇಳುತ್ತದೆ—ಧರ್ಮಕ್ಕೆ ಮುಖ್ಯವಾದ ಕಾರಣ ಗುರುಶುಶ್ರೂಷಾ. ಇದನ್ನೂ ಚೆನ್ನಾಗಿ ತಿಳಿದು ಆಚರಿಸಬೇಕು. ಈ ಗುರುಶುಶ್ರೂಷೆಯಿಂದಲೇ ಮನುಷ್ಯನು ವಿದ್ಯೆಯನ್ನು ಹೊಂದುತ್ತಾನೆ. ವಿದ್ಯೆಯಿಂದಲೇ ದುಃಖರಹಿತವಾದ ಶಾಶ್ವತಸ್ಥಾನವನ್ನೂ ಹೊಂದುತ್ತಾನೆ. ಸುವರ್ಣವೆಂಬ ಹೂವುಗಳಿಂದ ಕೂಡಿದ ಭೂಮಿಯನ್ನು ಮೂರು ವಿಧವಾದ ಜನರೇ ಗಳಿಸತಕ್ಕವರು. ಶೂರ, ವಿದ್ಯಾವಂತ, ಸೇವಾನಿಪುಣ, ಗುರುಶುಶ್ರೂಷೆಯಲ್ಲಿ ನಿರತನಾಗಿರುವವನು ಸರ್ವಧರ್ಮಶೂನ್ಯನಾಗಿದ್ದರೂ ಅತಿ ಕ್ರೂರನಾಗಿದ್ದರೂ ಅವನು ಸ್ವರ್ಗಲೋಕ ಹೊಂದ

ಗುರುಂ ವಿದ್ಯಾಪ್ರದಂ ವಾಪಿ ಯಸ್ತು ಶುಶ್ರೂಷತೇ ನರಃ ।
ಸ್ವರ್ಗಲೋಕಮವಾಪ್ನೋತಿ ಯಾವದಿಂದ್ರಾಶ್ಚತುರ್ದಶ ॥ ೫ ॥

ಯದೇವ ಪುಣ್ಯಮಾಪ್ನೋತಿ ಗುರುಶುಶ್ರೂಷಯಾ ದ್ವಿಜಃ ।
ದ್ವಿಜಶುಶ್ರೂಷಯಾ ಶೂದ್ರಸ್ತದೇವ ಫಲಮಶ್ನುತೇ ॥ ೬ ॥

ಪ್ರಾಪ್ನೋತಿ ಪುಣ್ಯಂ ಪರಮಂ ಚ ಸಾಧ್ವೀ
ಶುಶ್ರೂಷತೇ ಯಾ ಪತಿಮಪ್ರಮತ್ತಾ ।
ಶುಶ್ರೂಷಯಾ ಭೂಮಿಪತೇಃ ಪ್ರಜಾನಾಂ
ಪುಣ್ಯಂ ಪ್ರದಿಷ್ಟಂ ಪರಮಂ ನೃಲೋಕೇ ॥ ೭ ॥

**ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಗುರುಶುಶ್ರೂಷಾ
ಪ್ರಶಂಸಾವರ್ಣನೋ ನಾಮ
ಷಟ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ**

ತ್ತಾನೆ. ತಾಯಿ, ತಂದೆ, ಜ್ಯೇಷ್ಠಭ್ರಾತಾ, ಗುರು, ವಿದ್ಯಾಗುರು, ಇವರನ್ನು ಯಾವನು ಸೇವಿಸುತ್ತಾನೆಯೋ ಆವನು ಹದಿನಾಲ್ಕು ಇಂದ್ರರಿರುವ ಪರ್ಯಂತವೂ ಸ್ವರ್ಗವಾಸಿಯಾಗುತ್ತಾನೆ. ದ್ವಿಜನಾದವನು ಗುರುಶುಶ್ರೂಷೆಯಿಂದ ಯಾವ ಪುಣ್ಯವನ್ನು ಹೊಂದುತ್ತಾನೆಯೋ ಅಂತಹ ಫಲವನ್ನೇ ದ್ವಿಜರ ಶುಶ್ರೂಷೆಯಿಂದ ಶೂದ್ರನೂ ಹೊಂದುತ್ತಾನೆ ಯಾವ ಪತಿವ್ರತೆಯು ಸಾವಧಾನಳಾಗಿದ್ದು ಪತಿಯನ್ನು ಸೇವಿಸುತ್ತಾಳೆಯೋ ಅವಳೂ ಉತ್ತಮವಾದ ಪುಣ್ಯವನ್ನು ಹೊಂದುತ್ತಾಳೆ. ಹಾಗೆಯೇ ರಾಜನ ಶುಶ್ರೂಷೆಯಿಂದಲೂ ಪ್ರಜೆಗಳು ಭೂಲೋಕದಲ್ಲಿ ಹೆಚ್ಚಾದ ಪುಣ್ಯವನ್ನು ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಗುರು
ಶುಶ್ರೂಷಾಪ್ರಶಂಸಾವರ್ಣನವೆಂಬ ಇನ್ನೂರ ಐವತ್ತಾರನೆಯ
ಅಧ್ಯಾಯ ಮುಗಿದುದು

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಸಪ್ತಪಂಚಾಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಸ್ವಾಧ್ಯಾಯಸೇವಾ ಕರ್ತವ್ಯಾ ನಿತ್ಯಮೇವ ವಿಜಾನತಾ ।
ಸ್ವಾಧ್ಯಾಯೇನ ತದಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ || ೧ ||

ಪಯಸಾ ಮಧುನಾ ದಧ್ನಾ ಮಾಂಸೇನ ಚ ಯಥಾಕ್ರಮಂ ।
ಋಚೋ ಯಜೂಂಷಿ ಸಾಮಾನಿ ತಥೈವಾಥರ್ವಣಂ ಪಠೇತ್ || ೨ ||

ಪಿತ್ರ್ಯಾಣಾಂ ತರ್ಪಣಂ ಕುರ್ಯಾದ್ವೇದಾಙ್ಗೇನ ಚ ಸರ್ಪಿಷಾ ।
ಉಪವೇದಾನಪಿ ಪಠಂಸ್ತರ್ಪಯತ್ಯೋದನೇನ ತಾನ್ || ೩ ||

ವಿದ್ಯಾಸ್ಥಾನಾನಿ ಸರ್ವಾಣಿ ಸ್ತ್ರೈ[1]ರೇಯೇಣ ತಥಾ ನರಃ ।
ಸಾಂಖ್ಯಯೋಗಂ ಪಾಂಚರಾತ್ರಂ ತಥಾ ಪಾಶುಪತಂ ಪಠನ್ || ೪ ||

ಇನ್ನೂರ ಐವತ್ತೇಳನೆಯ ಅಧ್ಯಾಯ.

೧–೭. ಹಂಸವು ಹೇಳುತ್ತದೆ:—ವಿವೇಕಿಯಾದವನು ನಿತ್ಯವೂ ಅಧ್ಯಯನವೆಂಬ ಸೇವೆಯನ್ನು ನಡೆಸುತ್ತಿರಬೇಕು. ತನಗೆ ಅಭಿಮತವಾದ ಎಲ್ಲವನ್ನೂ ಅಧ್ಯಯನದಿಂದ ಹೊಂದುತ್ತಾನೆ. ಯಾವನು ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವವೇದ ಇವುಗಳನ್ನು ನಿತ್ಯವೂ ಪಠಿಸುತ್ತಾನೆಯೋ ಅವನು ಹಾಲು, ಜೇನು, ಮೊಸರು ಮಾಂಸ ಇವುಗಳಿಂದ ಯಥಾಕ್ರಮವಾಗಿ ಪಿತೃಗಳ ತರ್ಪಣವನ್ನೇ ಮಾಡಿದಂತಾಗುತ್ತದೆ. ವೇದಾಙ್ಗ ಮತ್ತು ಉಪವೇದಗಳನ್ನು ಪಠಿಸಿದರೂ, ಆಜ್ಯದಿಂದಲೂ ಅನ್ನದಿಂದಲೂ ಪಿತೃಗಳನ್ನು ತೃಪ್ತಿಪಡಿಸಿದಂತಾಗುತ್ತದೆ. ಎಲ್ಲಾ ವಿದ್ಯಾಸ್ಥಾನಗಳನ್ನು ಬಿಟ್ಟರೂ, ಸಾಂಖ್ಯಯೋಗ, ಪಾಂಚರಾತ್ರ, ಪಾಶುಪತ

1 ಇಲ್ಲಿ ಮೈರೇಯಣ ಎಂದು ಪಾಠವಿರಬೇಕೆಂದು ತೋರುತ್ತದೆ.

ಕ್ಷೀರೇಣ ಮಧುಮಿಶ್ರೇಣ ಪಿತೄಂಸ್ತರ್ಪಯತೇ ತಥಾ ।
ವಾಕೋವಾಕ್ಯಂ ಪುರಾಣಂಚ ನಾರಾಶಂಸ್ಯೋಽಥಗಾಥಿಕಾಃ ॥ ೫ ॥

ಸ್ತೋತ್ರಾಣಿ ಚ ಪಠನ್ನಿತ್ಯಂ ದಧ್ನಾ ಚ ಮಧುನಾ ತಥಾ ।
ತಸ್ಮಾತ್ಸರ್ವಪ್ರಯತ್ನೇನ ದ್ವಿಜಃ ಸ್ವಾಧ್ಯಾಯಮಾಚರೇತ್ ॥ ೬ ॥

ಸ್ವಾಧ್ಯಾಯ ಏವೇಹ ತಪಃ ಪವಿತ್ರಂ
ಸ್ವಾಧ್ಯಾಯ ಏವೇಹ ತಥೈವ ಯಜ್ಞಃ ।
ಸ್ವಾಧ್ಯಾಯವಾನೇವ ನರಃ ಪ್ರಯಾತಿ
ತ್ರಿವಿಷ್ಟಪಂ ಮೋಕ್ಷಮಥಾಪ್ಯಭೀಷ್ಟಂ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಸ್ವಾಧ್ಯಾಯಪ್ರಶಂಸಾವರ್ಣನೋ ನಾಮ
ಸಪ್ತಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಇವನ್ನು ಪಠಿಸುವವನು ಮೈರೇಯವೆಂಬ ಆಸವವಿಶೇಷದಿಂದಲೂ, ಕ್ಷೀರದಿಂದಲೂ, ಮಧುಮಿಶ್ರವಾದ ಕ್ಷೀರದಿಂದಲೂ ಪಿತೃಗಳನ್ನು ತೃಪ್ತಿಪಡಿಸುತ್ತಾನೆ. ವಾಕೋವಾಕ್ಯ, ಪುರಾಣ, ನರಾಶಂಸಗಾಥಾವಿಶೇಷ ಸ್ತೋತ್ರ ಇವನ್ನು ಪಠಿಸುವವನೂ ಸಹ ಮೊಸರು, ಮಧು ಇವುಗಳಿಂದ ಪಿತೃಗಳನ್ನು ತೃಪ್ತಿಪಡಿಸಿದಂತಾಗುತ್ತದೆ. ಆದುದರಿಂದ ದ್ವಿಜನಾದವನು ಸರ್ವಪ್ರಯತ್ನದಿಂದಲೂ ಅಧ್ಯಯನವನ್ನು ಮಾಡಲೇಬೇಕು. ಅಧ್ಯಯನವೇ ಇಹಲೋಕದ ಪವಿತ್ರ ತಪಸ್ಸು. ಅಧ್ಯಯನವೇ ಯಜ್ಞ. ಅಧ್ಯಯನ ಮಾಡುವವನೇ ತನಗೆ ಇಷ್ಟವಾದ ಸ್ವರ್ಗವನ್ನಾಗಲೀ ಮೋಕ್ಷವನ್ನಾಗಲಿ ಹೊಂದತಕ್ಕವನು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಸ್ವಾಧ್ಯಾಯಪ್ರಶಂಸಾವರ್ಣನವೆಂಬ ಇನ್ನೂರ ಐವತ್ತೇಳನೆಯ
ಅಧ್ಯಾಯವು ಮುಗಿದುದು.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಷ್ಟಪಂಚಾಶದುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಬ್ರಹ್ಮಚರ್ಯೇಣಾಭಿಸಂಯುಕ್ತೋ ದ್ವಿಜಃ ಸ್ವರ್ಗಮುಪಾಶ್ನುತೇ |
ಬ್ರಹ್ಮಚರ್ಯಂ ಪರಂಧಾಮ ಬ್ರಹ್ಮಚರ್ಯಂ ಪರಂ ತಪಃ || ೧ ||

ಬ್ರಹ್ಮಚರ್ಯಂ ಪರಂ ಯಜ್ಞೋ ಬ್ರಹ್ಮಚರ್ಯಂ ಪರಂ ಯಶಃ |
ಬ್ರಹ್ಮಚರ್ಯೇಣ ಸಂಯುಕ್ತಃ ಸರ್ವಾನ್ಕಾಮಾನವಾಪ್ನುಯಾತ್ || ೨ ||

ಅದೈವಂ ದೈವತಂ ಕುರ್ಯಾದ್ದೈವತಂ ಚಾಪ್ಯದೈವತಂ |
ಕುರ್ಯಾಲ್ಲೋಕಾಂಸ್ತಥೈವಾನ್ಯಾನ್ ಬ್ರಹ್ಮಚರ್ಯೇಣ ಮಾನವಃ || ೩ ||

ಕೃತಾನಪಿ ತಥಾ ಪೂರ್ವಾನ್ ಕ್ಷಿಪ್ರಮೇವ ಪ್ರಣಾಶಯೇತ್ |
ಯಥಾಭೀಷ್ಟಮವಾಪ್ನೋತಿ ಬ್ರಹ್ಮಚರ್ಯೇಣ ಮಾನವಃ || ೪ ||

ಇನ್ನೂರ ಐವತ್ತೆಂಟನೆಯ ಅಧ್ಯಾಯ.

ಹಂಸವು ಹೇಳುತ್ತದೆ :— ಬ್ರಹ್ಮಚರ್ಯದಲ್ಲಿಯೇ ನಿರತನಾದ ದ್ವಿಜನು ಸ್ವರ್ಗಗಾಮಿಯಾಗುತ್ತಾನೆ. ಬ್ರಹ್ಮಚರ್ಯವೇ ಉತ್ತಮವಾದ ತಪಸ್ಸಿಗೂ ಕಾರಣ. ಬ್ರಹ್ಮಚರ್ಯವೇ ಉತ್ಕೃಷ್ಟವಾದ ಯಶಸ್ಸಿಗೂ ಕಾರಣ. ಬ್ರಹ್ಮಚರ್ಯ ಹೊಂದಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ. ಬ್ರಹ್ಮಚರ್ಯದಿಂದ ಕೂಡಿದ ಮನುಷ್ಯನು ದೇವತೆ ಇಲ್ಲದ ಸ್ಥಳವನ್ನು ದೇವತೆಯಿಂದ ಕೂಡಿದುದನ್ನಾಗಿಯೂ ಅಥವಾ ದೇವತೆಯಾಗದಿರುವುದನ್ನು ದೇವತೆಯನ್ನಾಗಿಯೂ, ದೇವತೆಯನ್ನೂ ದೇವತೆಯಾಗದಿರುವುದನ್ನೂ, ಒಂದು ಬಗೆಯ ಲೋಕವನ್ನು ಮತ್ತೊಂದು ಬಗೆಯ ಲೋಕವನ್ನಾಯೂ ಮಾಡಬಲ್ಲನು. ಮೊದಲೇ ನಿರ್ಮಿತವಾಗಿರುವ ಸಿದ್ಧವಸ್ತುಗಳನ್ನೂ ಶೀಘ್ರದಲ್ಲಿಯೇ ನಾಶಮಾಡಲೂ ಬಲ್ಲನು. ಇಂತಹ ಬ್ರಹ್ಮಚರ್ಯ

ಪ್ರಜಾಪತೀನಾಂ ಯಾ ಶಕ್ತಿಃ ಪ್ರಜಾಃ ಕರ್ತುಂ ದ್ವಿಜೋತ್ತಮಾಃ ।
ಸಾ ಜ್ಞೇಯಾ ಬ್ರಹ್ಮಚರ್ಯೇಣ ಋಷೀಣಾಮಪಿ ಚ ದ್ವಿಜಾಃ ॥ ೫ ॥

ಅನೇಕಾನಿ ಸಹಸ್ರಾಣಿ ಕುಮಾರಬ್ರಹ್ಮಚಾರಿಣಾಂ ।
ದಿವಂ ಗತಾನಿ ವಿಪ್ರಾಣಾಮಕೃತ್ವಾ ಕುಲಸಂತತಿಂ ॥ ೬ ॥

ಯೋ ಬ್ರಹ್ಮಚರ್ಯಾನ್ನ ಪರಿಚ್ಯುತಃ
ಸ್ಯಾತ್ಪುತ್ರೇಣ ಹೀನೋಽಪಿ ದಿವಂ ಸ ಯಾತಿ ।
ಪರಿಚ್ಯುತಾ ಯೇ ತನಯೈರ್ವಿಹೀ-
ನಾಸ್ತೇಷಾಂ ನ ಲೋಕೇಷು ಗತಿಃ ಪ್ರದಿಷ್ಟಾ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಯಾಂಮುನೀನ್ ಪ್ರತಿ
ಬ್ರಹ್ಮಚರ್ಯಪ್ರಶಂಸಾ ವರ್ಣನಂ ನಾಮಾಷ್ಟ
ಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಹೊಂದಿರುವವನು ತನ್ನ ಮನಸ್ಸಿಗೆ ತಕ್ಕ ಯಾವ ಸಿದ್ಧಿಯನ್ನಾದರೂ ಹೊಂದಬಲ್ಲನು ಜಗತ್ತನ್ನು ಸೃಷ್ಟಿಮಾಡುವ ವಿಷಯದಲ್ಲಿ ಪ್ರಜಾಪತಿಗಳಿಗೆ ಯಾವ ಶಕ್ತಿ ಇತ್ತೋ ಅದೆಲ್ಲವೂ ಅವರ ಬ್ರಹ್ಮಚರ್ಯದಿಂದಲೇ ಉಂಟಾದುದೆಂದು ತಿಳಿಯಬೇಕು ಅನೇಕ ಸಹಸ್ರ ಬ್ರಹ್ಮಚಾರಿಗಳು ತಾವು ಕೌಮಾರಾವಸ್ಥೆಯಲ್ಲಿಯೇ ಇದ್ದು (ವಿವಾಹ ಹೊಂದದೆ) ಬ್ರಾಹ್ಮಣರ ವಂಶಾಭಿವೃದ್ಧಿಯನ್ನೂ ಉಂಟುಮಾಡದೇ ಸ್ವರ್ಗವನ್ನು ಹೊಂದಿದರು. ಬ್ರಹ್ಮಚರ್ಯವ್ರತಕ್ಕೆ ಲೋಪವಿಲ್ಲದೆ ಅದರಲ್ಲಿಯೇ ನಿಷ್ಠೆಹೊಂದಿದವನು ಪುತ್ರಹೀನನಾದರೂ ಅವನು ಸ್ವರ್ಗವನ್ನು ಹೊಂದುತ್ತಾನೆ. ಬ್ರಹ್ಮಚರ್ಯದಿಂದಲೂ ಭ್ರಷ್ಟರಾಗಿ ಪುತ್ರರನ್ನೂ ಹೊಂದದಿರುವವರಿಗೆ ಯಾವ ಲೋಕದಲ್ಲಿಯೂ ಗತಿಯು ಹೇಳಲ್ಪಟ್ಟಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯಲ್ಲಿ ಬ್ರಹ್ಮಚರ್ಯಪ್ರಶಂಸಾವರ್ಣನವೆಂಬ ಇನ್ನೂರ ಐವತ್ತೆಂಟನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಬ್ರಹ್ಮಚರ್ಯಾಚ್ಚ್ಯುತೋ ಯಸ್ತು ನರಃ ಸನ್ತಾನವರ್ಜಿತಃ ।
ಸುತಪ್ತತಪಸೋಽಪ್ಯಸ್ಯ ಗತಿರ್ಲೋಕೇ ನ ವಿದ್ಯತೇ ॥ ೧ ॥

ಪುತ್ರೇಣ ಲೋಕಾನ್ ಜಯತಿ ಪೌತ್ರೇಣಾನನ್ತ್ಯಮಶ್ನುತೇ ।
ತಥಾ ಪುತ್ರಸ್ಯಪೌತ್ರೇಣ ಬ್ರಧ್ನಸ್ಯಾಪ್ನೋತಿ ವಿಷ್ಟಪಂ ॥ ೨ ॥

ನಾಕಲೋಕಮವಾಪ್ನೋತಿ ದುಹಿತ್ರಾ ದ್ವಿಜಸತ್ತಮಾಃ ।
ದೌಹಿತ್ರೇಣ ತಥಾ ಲೋಕಾನ್ ನರೋ ಯಾತಿ ಪ್ರಜಾಪತೇಃ ॥ ೩ ॥

ಪುನ್ನಾಮ್ನೋ ನರಕಾದ್ಯಸ್ಮಾತ್ಪಿತರಂ ತ್ರಾಯತೇ ಸುತಃ ।
ತಸ್ಮಾತ್ಪುತ್ರ ಇತಿ ಪ್ರೋಕ್ತಃ ಸ್ವಯಮೇವ ಸ್ವಯಂಭುವಾ ॥ ೪ ॥

ಇನ್ನೂರ ಐವತ್ತೊಂಭತ್ತನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಯಾವನು ಬ್ರಹ್ಮಚರ್ಯದಿಂದ ಭ್ರಷ್ಟನಾಗುತ್ತಾನೆಯೋ ಅವನು ಸಂತಾನವಿಲ್ಲದವನಾಗುತ್ತಾನೆ. ಅವನು ಎಂತಹ ತಪಸ್ಸನ್ನು ಮಾಡಿದರೂ ಅವನಿಗೆ ಲೋಕದಲ್ಲಿ ಯಾವ ಗತಿಯೂ ಇಲ್ಲ. ಪುತ್ರರಿಂದ ಲೋಕಗಳನ್ನು ಜಯಿಸುತ್ತಾನೆ. ಪೌತ್ರರಿಂದ ಅದು ಅನಂತವಾಗುತ್ತದೆ. ಪುತ್ರನಿಗೂ ಪೌತ್ರನಾದಲ್ಲಿ ಅಂತಹವನು ಸೂರ್ಯಲೋಕ ಹೊಂದುತ್ತಾನೆ. ಮಗಳಿಂದ ಸ್ವರ್ಗಲೋಕ ಹೊಂದುತ್ತಾನೆ. ದೌಹಿತ್ರನಿಂದ ಮನುಷ್ಯನು ಚತುರ್ಮುಖಲೋಕ ಹೊಂದುತ್ತಾನೆ ಪುತ್ರನಾದವನು ಪುಂ ಎಂಬ ನರಕದಿಂದ ತನ್ನ ಪಿತೃವನ್ನು ರಕ್ಷಿಸುತ್ತಾನಾದ್ದರಿಂದ ಅವನನ್ನು ಪುತ್ರ ಎಂದು ಸ್ವಯಂಭೂದೇವನೇ ಕರೆದಿದ್ದಾನೆ.

ಪುತ್ರದೌಹಿತ್ರಯೋರ್ಲೋಕೇ ವಿಶೇಷೋ ನೋಪಪದ್ಯತೇ ।
ದೌಹಿತ್ರೋಽಪಿ ಹ್ಯಮುತ್ರೈನಂ ಸಂತಾರಯತಿ ಪೌತ್ರವತ್ ॥ ೫ ॥

ತಸ್ಮಾಚ್ಛೇತ್ತಾ ಕುಲಸ್ಯ ಸ್ಯಾತ್ಸಯಾತಿ ನರಕಂ ಧ್ರುವಂ ।
ಪುತ್ರಪೌತ್ರೈಃ ಪರಿವೃತೋ ನಾಕಲೋಕೇ ಮಹೀಯತೇ ॥ ೬ ॥

ಸನ್ತಾನವಾನೇವ ನರಸ್ತು ಕೀರ್ತ್ಯಾ
ಯುಕ್ತಸ್ತಥಾಸ್ಯಾತ್ಪರಯಾ ದ್ವಿಜೇನ್ದ್ರಾಃ ।
ಕೀರ್ತ್ಯಾ ಯುತಃ ಸ್ವರ್ಗಮಥ ಪ್ರಯಾತಿ
ಸನ್ತಾನವಾನ್ಯಃ ಪುರುಷಃ ಪ್ರಧಾನಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಸನ್ತಾನಪ್ರಶಂಸಾವರ್ಣನೋ
ನಾಮೈಕೋನಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಪುತ್ರನಿಗೂ. ದೌಹಿತ್ರನಿಗೂ ಯಾವ ತಾರತಮ್ಯವೂ ಇಲ್ಲ. ದೌಹಿತ್ರನೂ ಸಹ ಇವನನ್ನು ಪೌತ್ರನಂತೆಯೇ ಲೋಕಾನ್ತರಕ್ಕೆ ಒಯ್ಯುತ್ತಾನೆ. ಆದುದರಿಂದ ಬ್ರಹ್ಮಚರ್ಯಹಾನಿಯಿಂದ ಸನ್ತಾನಹೊಂದದೆ ಕುಲಕ್ಕೆ ಚ್ಛೇದಕನಾದವನು ನರಕವನ್ನೇ ಹೊಂದುತ್ತಾನೆ ಪುತ್ರಪೌತ್ರರಿಂದ ಕೂಡಿದವನು ಸ್ವರ್ಗಸುಖಕ್ಕೆ ಭಾಗಿಯಾಗಿ ಗೌರವಿಸಲ್ಪಡುತ್ತಾನೆ. ಸಂತಾನ ಹೊಂದಿದವನೇ ಲೋಕದಲ್ಲಿ ಒಳ್ಳೆಯ ಕೀರ್ತಿಯನ್ನು ಹೊಂದುತ್ತಾನೆ. ಕೀರ್ತಿಯಿಂದ ಕೂಡಿದವನು ಸ್ವರ್ಗವನ್ನು ಹೊಂದಿ ಪ್ರಧಾನಪುರುಷನೂ ಆಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದ ಹಂಸಗೀತೆಯ ಸಂತಾನಪ್ರಶಂಸನಾವರ್ಣನವೆಂಬ
ಇನ್ನೂರ ಐವತ್ತೊಂಭನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಕೀರ್ತಿಪ್ರಧಾನಃ ಪುರುಷಃ ಚಿರಂ ಸ್ವರ್ಗೇ ಮಹೀಯತೇ ।
ಕೀರ್ತಿಃ ಶರೀರಂ ನಿರ್ದಿಷ್ಟಾ ಮೃತಸ್ಯಾಪಿ ಶರೀರಿಣಃ || ೧ ||

ಕೀರ್ತಿಯುಕ್ತಂ ನ ಜಾನಾತಿ ಪರತ್ರೇಹ ಚ ಮಾನವಃ ।
ಕೀರ್ತಿಯುಕ್ತಾ ಭವನ್ತೀಹ ಶ್ರೇಯಸೋ ಭಾಜನಂ ಪರಂ || ೨ ||

ದಿವಂ ಸ್ಪೃಶತಿ ಭೂಮಿಂ ಚ ಶಬ್ದಃ ಪುಣ್ಯಸ್ಯ ಕರ್ಮಣಃ ।
ಯಾವತ್ಸ ಶಬ್ದೋ ಭವತಿ ತಾವತ್ಪುರುಷ ಉಚ್ಯತೇ || ೩ ||

ತಾವದೇವ ತಥಾ ಲೋಕಾನ್ಸರ್ವಾನ್ಕಾಮದುಘೋಽಕ್ಷಯಾನ್ ।
ಪುರುಷಃ ಸಮುಪಾಶ್ನಾತಿ ದಿವಿ ಚೇಹ ಚ ಶಾಶ್ವತಂ || ೪ ||

ಇನ್ನೂರ ಅರವತ್ತನೆಯ ಅಧ್ಯಾಯ.

೧-೭ ಹಂಸವು ಹೇಳುತ್ತದೆ:—ಹೆಚ್ಚಾದ ಕೀರ್ತಿಶಾಲಿಯು ಸ್ವರ್ಗದಲ್ಲಿ ಬಹುಕಾಲ ಸುಖಿಯಾಗಿರುತ್ತಾನೆ. ಮೃತಿಹೊಂದಿದ ಮನುಷ್ಯನಿಗೂ ಕೀರ್ತಿಯೇ ಮುಖ್ಯವಾದ ಶರೀರ ಕೀರ್ತಿಶಾಲಿಯಾದವನು ಪರಲೋಕದಲ್ಲಿಯೂ ಈ ಲೋಕದಲ್ಲಿಯೂ ಸಹ ಸಾಮಾನ್ಯಮನುಷ್ಯನಿಗೆ ಗೋಚರನಾಗುವುದಿಲ್ಲ. ಆದರೆ ಕೀರ್ತಿವಂತರಾದವರು ಇಹ ಲೋಕದಲ್ಲಿಯೂ ಅನೇಕ ಶ್ರೇಯಸ್ಸಿಗೆ ಭಾಗಿಗಳಾಗುತ್ತಾರೆ. ಯಾವನು ಮಾಡಿದ ಪುಣ್ಯಕರ್ಮದಿಂದ ಉಂಟಾದ ಒಳ್ಳೆಯ ಶಬ್ದವು ಭೂಮಿಯನ್ನೂ ಅಂತರಿಕ್ಷವನ್ನೂ ವ್ಯಾಪಿಸಿಕೊಂಡು ಎಷ್ಟುಕಾಲವಿರುತ್ತದೆಯೋ ಅಲ್ಲಿಯವರಿಗೂ ಅವನು ಪುರುಷನೆಂದು ಹೇಳಲ್ಪಡುತ್ತಾನೆ. ಅಲ್ಲಿಯವರಿಗೂ ಅವನಿಗೆ ಎಲ್ಲಾ

ಯಸ್ಯಾಕೀರ್ತಿರ್ಮನುಷ್ಯಸ್ಯ ನರಕಂ ಸತು ಗಚ್ಛತಿ ।
ಯಾವಲ್ಲೋಕೇಷು ಧರ್ಮಜ್ಞಾಸ್ತಸ್ಯ ಕೀರ್ತಿಸ್ತು ಗೀಯತೇ ॥ ೫ ॥

ತಾವತ್ಸಮಶ್ನುತೇ ಸ್ವರ್ಗೇ ದೇವಭೋಗಾನನುತ್ತಮಾನ್ ।
ಕೀರ್ತಿಃ ಪುಣ್ಯಾ ಪುಣ್ಯಲೋಕೇ ನೈವ ಪಾಪಂ ಪ್ರಯಚ್ಛತಿ ।
ಕೀರ್ತ್ಯಮಾನಾ ಮನುಷ್ಯಸ್ಯ ತಸ್ಮಾತ್ಪುಣ್ಯಂ ಸಮಾಚರೇತ್ ॥ ೬ ॥

ಯೇ ಕೀರ್ತಿಯುಕ್ತಾಃ ಪುರುಷಪ್ರಧಾನಾಸ್ತೇ
ನಾಕಪೃಷ್ಠಂ ಸುಚಿರಂ ಪ್ರಯಾನ್ತಿ ।
ಅಕೀರ್ತಿಯುಕ್ತಾ ನರಕಂ ವ್ರಜನ್ತಿ
ಕೀರ್ತಿಃ ಪ್ರಧಾನಾ ಪುರುಷಸ್ಯ ತಸ್ಮಾತ್ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರ ಸಂವಾದೇ ಹಂಸಗೀತಾಸು ಕೀರ್ತಿಪ್ರಶಂಸಾವರ್ಣನೋ ನಾಮ ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಲೋಕಗಳೂ ಇಷ್ಟಾರ್ಥಪ್ರದಗಳಾಗುತ್ತವೆ. ಈ ರೀತೀ ಸುಖರೂಪಗಳಾದ ಇಹ ಪರಗಳೆರಡನ್ನೂ ಅವನು ಅನುಭವಿಸುತ್ತಾನೆ. ಯಾವನಿಗೆ ಇಂತಹ ಒಳ್ಳೆಯ ಶಬ್ದಕ್ಕೆ ಕಾರಣವಾದ ಕೀರ್ತಿ ಇರುವುದಿಲ್ಲವೋ ಅವನು ನರಕವನ್ನೇ ಹೊಂದುತ್ತಾನೆ. ಎಷ್ಟುಕಾಲಪರ್ಯಂತ ಕೀರ್ತಿವಂತನ ಕೀರ್ತಿಯು ಹೊಗಳಲ್ಪಡುತ್ತಿರುವುದೋ ಅಷ್ಟು ಕಾಲ ಅವನು ಸ್ವರ್ಗದಲ್ಲಿ ಅನುಪಮವಾದ ದೇವ ಭೋಗಗಳನ್ನು ಅನುಭವಿಸುತ್ತಾನೆ. ಪುಣ್ಯಕರವಾದ ಇಂತಹ ಕೀರ್ತಿಯು ಹೊಗಳಲ್ಪಟ್ಟಲ್ಲಿ ಸ್ವರ್ಗವೇ ಮೊದಲಾದ ಪುಣ್ಯಲೋಕಗಳಲ್ಲಿ ಪಾಪವನ್ನು ಎಂದಿಗೂ ಉಂಟುಮಾಡುವುದೇ ಇಲ್ಲ. ಆದುದರಿಂದ ಇಂತಹ ಸ್ವರ್ಗಸುಖಕ್ಕೆ ತಕ್ಕಂತೆ ಪುಣ್ಯಶಾಲಿಯಾಗಿರಬೇಕು. ಕೀರ್ತಿಪ್ರಧಾನರಾದವರು ಸ್ವರ್ಗದಲ್ಲಿ ಬಹುಕಾಲ ಸುಖಿಗಳಾಗಿ ನಿಲ್ಲುತ್ತಾರೆ. ಅಕೀರ್ತಿವಂತರು ನರಕ ಭಾಗಿಗಳಾಗುತ್ತಾರೆ. ಆದ್ದರಿಂದ ಪುರುಷನಿಗೆ ಕೀರ್ತಿಯೇ ಅತ್ಯಂತ ಪ್ರಧಾನ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯ ಕೀರ್ತಿಪ್ರಶಂಸಾ ವರ್ಣನವೆಂಬ ಇನ್ನೂರ ಅರವತ್ತನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಯಶಸಾ ಸಂಯುತೋ ಜನ್ತುಃ ಶ್ರೇಯಸೋ ಭಾಜನಂ ಭವೇತ್ ।
ಯಶಸಾ ಸಂಯುತೋ ಜನ್ತುಃ ತ್ರಿದಿವಂ ಪ್ರತಿಪದ್ಯತೇ ॥ ೧ ॥

ಯಶಸಾ ಸಂಯುತೋ ಜನ್ತುಃ ಸಂಪದಾಮೇತಿ ಪಾತ್ರತಾಂ ।
ಯಶಸಾ ಸಂಯುತೋ ಜನ್ತುಃ ಸರ್ವಕಾಮಾನುಪಾಶ್ನುತೇ ॥ ೨ ॥

ಸ ಏಕಃ ಪುರುಷೋ ಲೋಕೇ ಯಶಸಾ ಯೋ ಹಿ ಸಂಯುತಃ ।
ಯೇಷಾಂ ಸಾಧು ಸಮಾವಾಸಂ ಗೀಯತೇ ಸುಮಹದ್ಯಶಃ ॥ ೩ ॥

ತೇಷಾಂ ಯಶಸ್ತಥಾ ಪುಣ್ಯಂ ನಾಕಪೃಷ್ಠೇಪಿ ಗೀಯತೇ ।
ದೇವತಾ ಯಂ ವಿಜಾನನ್ತಿ ತಸ್ಯ ನಾಕೇ ಗತಿರ್ಧ್ರುವಾ ॥ ೪ ॥

ಇನ್ನೂರ ಅರವತ್ತೊಂದನೆಯ ಅಧ್ಯಾಯ.

೧-೭. ಹಂಸವು ಹೇಳುತ್ತದೆ :—ಯಶಸ್ಸಿನಿಂದ ಕೂಡಿದ ಚೇತನವಸ್ತುವು ಶ್ರೇಯಸ್ಸಿಗೆ ಪಾತ್ರವಾಗುತ್ತದೆ. ಯಶಸ್ಸಿನಿಂದ ಕೂಡಿದ ಪ್ರಾಣಿಯೇ ಸ್ವರ್ಗವನ್ನು ಹೊಂದುತ್ತದೆ. ಯಶಸ್ಸಿನಿಂದ ಕೂಡಿದ ಪ್ರಾಣಿಯೇ ಐಶ್ವರ್ಯಕ್ಕೆ ಪಾತ್ರವಾಗುತ್ತದೆ. ಯಶಸ್ಸಿನಿಂದ ಕೂಡಿದ ಪ್ರಾಣಿಯೇ ಎಲ್ಲಾ ಮನೋರಥಗಳನ್ನೂ ಸಫಲಗೊಳಿಸುತ್ತದೆ ಯಾವನು ಯಶಸ್ಸಿನಿಂದ ಕೂಡಿರುತ್ತಾನೆಯೋ ಅವನೊಬ್ಬನೇ ಲೋಕದಲ್ಲಿ ಪುರುಷ ನೆನಿಸುತ್ತಾನೆ. ಯಾರ ಯಶಸ್ಸು ಏಕರೂಪವಾಗಿ ಗಾನಮಾಡಲ್ಪಡುತ್ತದೆಯೋ ಅಂತಹ ವರ ಯಶಸ್ಸೂ ಅದಕ್ಕೆ ಕಾರಣವಾದ ಪುಣ್ಯವೂ ಸ್ವರ್ಗಲೋಕದವರಿಗೂ ಗಾನಮಾಡಲ್ಪಡುತ್ತದೆ. ಪುಣ್ಯವಶದಿಂದ ಯಾವನು ದೇವತೆಗಳ ಜ್ಞಾನಕ್ಕೆ ವಿಷಯ

ಕೀರ್ತ್ಯಮಾನಂ ತಥಾ ಸದ್ಭಿರ್ಯಃ ಶೃಣೋತಿಯಶಃ ಸ್ವಕಂ ।
ಸುಖಮಾಪ್ನೋತಿ ಧರ್ಮಜ್ಞಾಃ ಸ್ವರ್ಗಾದಪಿ ಪರಂ ನರಃ ॥ ೫ ॥

ಯಶಃ ಶೋಭಾಮನುಷ್ಯಸ್ಯ ಪರಮಂ ತಸ್ಯ ಮಂಡನಂ ।
ಯಶಸಾ ವರ್ಜಿತಸ್ಯೇಹ ಮಂಡನಂ ಲಾಂಛನಂ ಪರಂ ॥ ೬ ॥

ಯಶಃ ಪ್ರಧಾನಂ ಪುರುಷಸ್ಯ ಲೋಕೇ
ಯಶಃ ಪ್ರಧಾನಾಸ್ತ್ರಿದಿವಂ ಪ್ರಯಾನ್ತಿ ।
ಲೋಕದ್ವಯೇ ಚಾಪಿ ಯಶೋನ್ವಿತಾನಾಂ
ಭವನ್ತಿ ಕಾಮಾ ಮನಸಾತ್ವಭೀಷ್ಟಾಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಯಶಃಪ್ರಶಂಸಾ ವರ್ಣನೋ ನಾಮೈಕ ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ನಾಗುತ್ತಾನೆಯೋ ಅವನಿಗೆ ಸ್ವರ್ಗಗಮನವು ನಿಶ್ಚಿತ. ಯಾವನು ಸತ್ಪುರುಷರು ಹೊಗಳುತ್ತಿರುವ ತನ್ನ ಯಶಸ್ಸನ್ನು ಕೇಳುತ್ತಿರುತ್ತಾನೆಯೋ ಅವನು ಸ್ವರ್ಗಕ್ಕಿಂತಲೂ ಹೆಚ್ಚಾದ ಸುಖವನ್ನು ಇಲ್ಲಿಯೇ ಅನುಭವಿಸುತ್ತಾನೆ. ಯಶಸ್ಸೇ ಮನುಷ್ಯನಿಗೆ ಮುಖ್ಯವಾದ ಶೋಭಾ. ಅದೇ ಅಲಂಕಾರ. ಅಂತಹ ಯಶಸ್ಸಿಲ್ಲದಿರುವವನಿಗೆ ತನ್ನ ಹೆಸರು ಕೇವಲ ಸಂಕೇತ. ಲೋಕದಲ್ಲಿ ಮನುಷ್ಯನಿಗೆ ಯಶಸ್ಸೇ ಪ್ರಧಾನ. ಅಂತಹ ಯಶಸ್ಸುಳ್ಳವರು ಸ್ವರ್ಗಹೊಂದುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಯಶಃಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಯಜ್ಞೇನ ದೇವಾ ಜೀವಂತಿ ಯಜ್ಞೇನ ಪಿತರಸ್ತಥಾ ।
ದೇವಾಧೀನಾಃ ಪ್ರಜಾಃ ಸರ್ವಾ ಯಜ್ಞಾಧೀನಾಶ್ಚ ದೇವತಾಃ ॥ ೧ ॥

ಯಜ್ಞೋ ಹಿ ಭಗವಾನ್ ವಿಷ್ಣುಃ ಯತ್ರ ಸರ್ವಂ ಪ್ರತಿಷ್ಠಿತಂ ।
ಯಜ್ಞಾರ್ಥಂ ಪಶವಃ ಸೃಷ್ಟಾ ದೇವಾಸ್ತ್ವೋಷಧಯಸ್ತಥಾ ॥ ೨ ॥

ಯಜ್ಞಾರ್ಥಂ ಪುರುಷಾಃ ಸೃಷ್ಟಾಃ ಸ್ವಯಮೇವ ಸ್ವಯಂಭುವಾ ।
ಯಜ್ಞಶ್ಚ ಭೂತ್ಯೈ ಸರ್ವಸ್ಯ ತಸ್ಮಾದ್ಯಜ್ಞಪರೋ ಭವೇತ್ ॥ ೩ ॥

ಇನ್ನೂರ ಅರವತ್ತೆರಡನೆಯ ಅಧ್ಯಾಯ.

೧-೭. ಹಂಸವು ಹೇಳುತ್ತದೆ-ಯಜ್ಞದಿಂದ ದೇವತೆಗಳೂ, ಪಿತೃಗಳೂ ತೃಪ್ತಿಯಿಂದ ಜೀವಿಸುತ್ತಾರೆ. ಎಲ್ಲಾ ಪ್ರಜೆಗಳೂ ದೇವತೆಗಳಿಗೆಅಧೀನವಾಗಿವೆ. ದೇವತೆಗಳು ಯಜ್ಞಕ್ಕೆ ಅಧೀನರಾಗಿದ್ದಾರೆ ಯಜ್ಞವೆಂಬುದು ಸರ್ವಾಶ್ರಯನಾಗಿಯೂ ಪೂಜ್ಯನಾಗಿಯೂ ಇರುವ ವಿಷ್ಣುವಿನ ಸ್ವರೂಪ. ಯಜ್ಞಕ್ಕಾಗಿಯೇ ಪಶುಗಳನ್ನೂ ದೇವತೆಗಳನ್ನೂ ಭತ್ತವೇ ಮೊದಲಾದ ಓಷಧಿವಿಶೇಷಗಳನ್ನೂ ಕರ್ತೃಗಳಾದ ಪುರುಷರನ್ನೂ ಸ್ವಯಂಭುದೇವನು ತಾನೇ ಸೃಷ್ಟಿಮಾಡಿದ್ದಾನೆ. ಯಜ್ಞವು ಎಲ್ಲರಿಗೂ ಸಮೃದ್ಧಿಗೆ ಕಾರಣ. ಆದುದರಿಂದ ಮನುಷ್ಯನು ಯಜ್ಞಪರನಾಗಬೇಕು. ಯಜ್ಞಮಾಡಿ

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ಧನಂ ಯದ್ಯಜ್ಞಶೀಲಾನಾಂ ದೇವಸ್ವಂ ತದ್ವಿದುರ್ಬುಧಾಃ ॥ ೪ ॥

ಓಷಧೀನಾಂ ಪಶೂನಾಂ ಚ ಯಜ್ಞ ಏವ ಪರಾಯಣಂ ।
ಸಯೂಥ್ಯಾಶ್ಚ ಸಕುಲ್ಯಾಶ್ಚ ನಾಕಪೃಷ್ಠೇ ಮಹೀಯತೇ ॥ ೫ ॥

ಪಶುಸ್ತು ಪ್ರೋಕ್ಷಿತೋ ಯಜ್ಞೇ ತಥೈವೌಷಧಯೋ ದ್ವಿಜಾಃ ।
ಯಜ್ಞೋಪಯುಕ್ತಾ ಮೋದಂತೇ ತ್ರಿದಿವೇ ನಾತ್ರ ಸಂಶಯಃ ॥ ೬ ॥

ಯಜ್ಞೇನ ಸಮ್ಯಕ್ಪುರುಷಸ್ತು ನಾಕೇ
ಸಂಪೂಜ್ಯ ಮಾನಸ್ತ್ರಿದಶೈರ್ಮಹಾತ್ಮಾ ।
ಸ ಪ್ರಾಪ್ನೋತಿ ಸೌಖ್ಯಾನಿ ಮಹಾನುಭಾವಾ-
ಸ್ತಸ್ಮಾತ್ಪ್ರಯತ್ನೇನ ಯಜೇತ ಯಜ್ಞೈಃ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಯಜ್ಞಪ್ರಶಂಸಾವರ್ಣನೋ ನಾಮ
ದ್ವಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಆದರಿಂದ ಉಳಿದ ಅನ್ನಾದಿಗಳನ್ನು ಭುಂಜಿಸುವವರು ಸರ್ವ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಯಜ್ಞಶೀಲರಲ್ಲಿರುವ ಧನವೂ ಸಹ ದೇವಸ್ವವೆನಿಸುತ್ತದೆ. ಓಷಧಿಗಳಿಗೂ ಪಶುಗಳಿಗೂ ಸಹ ಯಜ್ಞನಿಷ್ಪಾದನವೇ ಮುಖ್ಯವಾದ ಪ್ರಯೋಜನ. ಹೀಗೆ ಯಜ್ಞಮಾಡಿದವನ ಸ್ವಜನರೂ ಸ್ವಕುಲದವರೂ ಸಹ ಸ್ವರ್ಗದಲ್ಲಿ ಪೂಜ್ಯರಾಗುತ್ತಾರೆ. ಯಜ್ಞದ ಉಪಯೋಗಕ್ಕಾಗಿ ಯಜ್ಞದಲ್ಲಿ ಪ್ರೋಕ್ಷಣಾದಿಗಳಿಂದ ಸಂಸ್ಕರಿಸಲ್ಪಟ್ಟ ಪಶುವೂ ಓಷಧ್ಯಾದಿಗಳೂ ಸಹ ಸ್ವರ್ಗವಾಸಿಗಳಾಗಿ ಸುಖಿಸುತ್ತವೆ. ಇದರಲ್ಲಿ ಸಂಶಯವಿಲ್ಲ. ಲೋಕದಲ್ಲಿ ಯಜ್ಞದಿಂದ ದೇವತೆಗಳನ್ನು ತೃಪ್ತಿಪಡಿಸಿದವನು ಸ್ವರ್ಗವನ್ನು ಹೊಂದಿ ದೇವತೆಗಳಿಂದಲೂ ಪೂಜಿಸಲ್ಪಡುತ್ತಾ ಉತ್ತಮವಾದ ಸ್ವರ್ಗಸೌಖ್ಯಹೊಂದುತ್ತಾನೆ. ಆದುದರಿಂದ ಮನುಷ್ಯನು ಪ್ರಯತ್ನಪಟ್ಟು ಯಜ್ಞಗಳನ್ನು ಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗಾಗಿ ಉಪದೇಶಿಸಲ್ಪಟ್ಟ ಹಂಸಗೀತೆಯಲ್ಲಿ
ಯಜ್ಞಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತೆರಡನೆಯ
ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ತ್ರಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಶೀಲಂ ಪ್ರಧಾನಂ ಲೋಕೇಽಸ್ಮಿಂಸ್ತಸ್ಮಿನ್ ಸರ್ವಂ ಪ್ರತಿಷ್ಠಿತಂ ।
ಶೀಲೇನ ಸರ್ವಮಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ || ೧ ||

ಕ್ರಿಯಾಃ ಶೀಲವಿಹೀನಸ್ಯ ಭವಂತಿ ವಿಫಲಾಃ ಕೃತಾಃ ।
ತಸ್ಮಾಚ್ಛೀಲವತಾ ಭಾವ್ಯಂ ಪುರುಷೇಣ ವಿಜಾನತಾ || ೨ ||

ಶೀಲೇನ ದೇವರಾಟ್ಛಕ್ರಃ ಸುರೈಶ್ವರ್ಯಮವಾಪ್ತವಾನ್ ।
ಶೀಲೇನ ಧರ್ಮರಾಜೋಽಪಿ ಧರ್ಮರಾಜತ್ವಮಾಪ್ತವಾನ್ || ೩ ||

ಇನ್ನೂರ ಅರವತ್ತಮೂರನೆಯ ಅಧ್ಯಾಯ

೧-೩. ಹಂಸವು ಹೇಳುತ್ತದೆ:—ಲೋಕದಲ್ಲಿ ಮನುಷ್ಯನಿಗೆ ಶೀಲವು (ಸದ್ವೃತ್ತಿ) ಮುಖ್ಯ ಅದರಲ್ಲಿಯೇ ಎಲ್ಲಾ ಇಷ್ಟಾರ್ಥಗಳೂ ಅಡಗಿವೆ. ತನಗೆ ಅಭಿಮತವಾದುದೆಲ್ಲವನ್ನೂ ಶೀಲದಿಂದ ಹೊಂದುತ್ತಾನೆ. ಶೀಲವಿಲ್ಲದವನಿಗೆ ಮಾಡಿದ ಕ್ರಿಯೆಗಳೆಲ್ಲವೂ ವ್ಯರ್ಥವಾಗುತ್ತವೆ. ಆದುದರಿಂದ ವಿವೇಕಿಯಾದ ಮನುಷ್ಯನು ಶೀಲಹೊಂದಿರಬೇಕು. ಶೀಲದಿಂದ ದೇವರಾಜನಾದ ಇಂದ್ರನು ದೇವೈಶ್ವರ್ಯವನ್ನು ಹೊಂದಿದನು ಧರ್ಮರಾಜನೂ ಶೀಲದಿಂದಲೇ ಧರ್ಮರಾಜನಾದನು.

ಶೀಲೇನ ವರುಣೋ ದೇವೋ ರಾಜರಾಜತ್ವಮಾಪ್ತವಾನ್ ।
ಶೀಲೇನ ಚ ಕುಬೇರೋಽಪಿ ಧನಾಧ್ಯಕ್ಷತ್ವಮಾಪ್ತವಾನ್ ॥ ೪ ॥

ಶೀಲೇನ ಸುಖಮಾಪ್ನೋತಿ ಸ್ವರ್ಗಂ ಚ ಮನುಜೋತ್ತಮಃ ।
ಶೀಲೇನ ತದವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥ ೫ ॥

ಶೀಲಂ ಸಮಾಸಾದ್ಯ ಸಮಸ್ತಕಾಮಾನ್
ಪ್ರಾಪ್ನೋತಿ ಮುಖ್ಯಾನ್ಪುರುಷಃ ಪ್ರಧಾನಃ ।
ತಸ್ಮಾತ್ಪ್ರಯತ್ನೇನ ನರೇಣ ಶೀಲಂ
ಸಮರ್ಜನೀಯಂ ಸುಖದಂ ಸದೈವ ॥ ೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಶೀಲಪ್ರಶಂಸಾ
ವರ್ಣನೋ ನಾಮ ತ್ರಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ವರುಣನೂ ಸಹ ಶೀಲದಿಂದಲೇ ರಾಜರಾಜತ್ವವನ್ನು ಹೊಂದಿದನು. ಕುಬೇರನೂ ಸಹ ಶೀಲದಿಂದಲೇ ಧನಾಧ್ಯಕ್ಷನಾದನು. ಶೀಲದಿಂದ ಈ ಲೋಕದ ಸುಖವನ್ನೂ ಸ್ವರ್ಗವನ್ನೂ ಮನುಷ್ಯನು ಹೊಂದುತ್ತಾನೆ. ಶೀಲದಿಂದಲೇ ದುಃಖಾತೀತವಾದ ಸ್ಥಾನವನ್ನೂ ಹೊಂದುತ್ತಾನೆ ಶೀಲವಂತನಾದ ಮನುಷ್ಯನು ಮುಖ್ಯವಾದ ಎಲ್ಲಾ ಇಷ್ಟಾರ್ಥಗಳನ್ನೂ ಹೊಂದಿ ಪ್ರಧಾನ ಪುರುಷನೂ ಆಗುತ್ತಾನೆ. ಆದುದರಿಂದ ಮನುಷ್ಯನು ಸುಖಕರವಾದ ಶೀಲವನ್ನು ಪ್ರಯತ್ನದಿಂದ ಸಂಪಾದಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಶೀಲಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತಮೂರನೆಯ
ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುಃಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ದಮೇನ ಯುಕ್ತಃ ಪುರುಷಃ ಸರ್ವಾನ್ಕಾಮಾನವಾಪ್ನುಯಾತ್ ।
ತಸ್ಮಾತ್ಸರ್ವಪ್ರಯತ್ನೇನ ದಮಃ ಕಾರ್ಯೋ ವಿಜಾನತಾ ॥ ೧ ॥

ಇಂದ್ರಿಯಾಣಾಂ ಜಯೋ ಲೋಕೇ ದಮ ಇತ್ಯಭಿಧೀಯತೇ ।
ನಾದಾನ್ತಸ್ಯ ಕ್ರಿಯಾಃ ಕಾಶ್ಚಿದ್ಭವಂತೀಹ ದ್ವಿಜೋತ್ತಮಾಃ ॥ ೨ ॥

ನಾದಾಂತಃ ಸಿದ್ಧಿಮಾಪ್ನೋತಿ ನಾದಾಂತೋ ಗತಿಮೀಪ್ಸಿತಾಂ ।
ನಾದಾಂತಃ ಶ್ರಿಯಮಾಪ್ನೋತಿ ನಾದಾಂತಃ ಕಿಂಚಿದೇವ ತು ॥ ೩ ॥

ಪಂಚೇಂದ್ರಿಯಸ್ಯ ಮರ್ತ್ಯಸ್ಯ ಯದ್ಯೇಕಂ ಛಿದ್ರಮಿಂದ್ರಿಯಂ ।
ತತೋಽಸ್ಯ ಕ್ಷರತಿ ಪ್ರಜ್ಞಾ ದೃತೇಃ ಪಾತ್ರಾದಿವೋದಕಂ ॥ ೪ ॥

ಇನ್ನೂರ ಅರವತ್ತನಾಲ್ಕನೆಯ ಅಧ್ಯಾಯವು.

೧-೭. ಹಂಸವು ಹೇಳುತ್ತದೆ:—ದಮದಿಂದ ಕೂಡಿದ ಮನುಷ್ಯನು ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾನೆ. ಆದುದರಿಂದ ಸರ್ವಪ್ರಯತ್ನದಿಂದಲೂ ದಮವನ್ನು ಹೊಂದಬೇಕು. ಇಂದ್ರಿಯನಿಗ್ರಹಕ್ಕೆ ದಮವೆಂದು ಹೆಸರು. ಈ ವಿಧವಾದ ದಮವಿಲ್ಲದಿರುವವನಿಗೆ ಯಾವ ಕ್ರಿಯಾಕಲಾಪವೂ ಇಲ್ಲ. ದಮವಿಲ್ಲದಿರುವವನು ಯಾವಸಿದ್ಧಿಯನ್ನೂ ಹೊಂದಲಾರನು ಹಾಗೆಯೇ ಇಷ್ಟವಾದ ಯಾವ ಆಮುಷ್ಮಿಕಗತಿಯನ್ನೂ ಹೊಂದಲಾರನು ಐಶ್ವರ್ಯವನ್ನೂ ಇತರ ಕಿಂಚಿತ್ಪದಾರ್ಥವನ್ನು ಸಹ ಹೊಂದಲಾರನು. ಪಂಚೇಂದ್ರಿಯಗಳುಳ್ಳ ಮನುಷ್ಯನಿಗೆ ಒಂದು ಇಂದ್ರಿಯವು ಛಿದ್ರವಾಗಿದ್ದಷ್ಟೇ ಆದರೆ ಅವನ ಪ್ರಜ್ಞೆ ಎಲ್ಲವೂ ಛಿದ್ರವಾದ ಚರ್ಮದ ಚೀಲದಿಂದ ಕೆಳಭಾಗದಲ್ಲಿ ನೀರು ಸೋರಿಹೋಗುವಂತೆ ಸೋರಿಹೋಗುತ್ತದೆ.

ಪುರುಷಾರ್ಥಂ ಪರಿತ್ಯಜ್ಯ ಸ್ವಾರ್ಥೇ ಚ ಸತತೋತ್ಥಿತಃ ।
ಇಂದ್ರಿಯಾಣಾಂ ಬುಧಸ್ತೇಷಾಂ ಕಃ ಸ್ವಾರ್ಥೇ ಪ್ರಯತೇನ್ನರಃ ॥ ೫ ॥

ಇಂದ್ರಿಯಾಣಾಂ ಪ್ರಸಂಗೇನ ಗತಿಂ ಗಚ್ಛತಿ ದಾರುಣಾಂ ।
ವಿಜಿತ್ಯ ತಾನ್ಯೇವ ನರಃ ಸರ್ವಾನ್ಕಾಮಾನವಾಪ್ನುಯಾತ್ ॥ ೬ ॥

ದಾಂತಃ ಪುಮಾನ್ನಾಕಮನುಪ್ರಯಾತಿ
ದಾಂತಃ ಪುಮಾನ್ ಮೋಕ್ಷಪಥಂ ಪ್ರಯಾತಿ ।
ದಾಂತಸ್ಯ ದುಃಖಂ ನ ಹಿಕಿಂಚಿದಸ್ತಿ
ದಾಂತಃ ಸಮಾಪ್ನೋತ್ಯಖಿಲಾನ್ಹಿ ಕಾಮಾನ್ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದಮಪ್ರಶಂಸಾ
ವರ್ಣನೋ ನಾಮ
ಚತುಃಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಪುರುಷಾರ್ಥವನ್ನೂ ಬಿಟ್ಟು ಸ್ವಾರ್ಥದಲ್ಲಿಯೇ ಯಾವಾಗಲೂ ನಿರತನಾದ ಮನುಷ್ಯನು ಅಂತಹ ಇಂದ್ರಿಯಗಳಿಗೆ ಯಾವ ಮುಖ್ಯ ಪ್ರಯೋಜನವನ್ನು ತಾನೆ ಉಂಟುಮಾಡಲಾದೀತು. ಇಂದ್ರಿಯಗಳ ಅತಿಪ್ರಸಂಗದಿಂದ ಪುರುಷನಿಗೆ ಭಯಂಕರವಾದ ಗತಿಯೇ ಉಂಟಾಗುತ್ತದೆ. ಅವುಗಳನ್ನೇ ಜಯಿಸಿದವನು ಎಲ್ಲಾ ಪುರುಷಾರ್ಥಗಳನ್ನೂ ಹೊಂದುತ್ತಾನೆ. ಇಂದ್ರಿಯ ಜಯವುಳ್ಳವನೇ ಸ್ವರ್ಗಕ್ಕೂ ಯೋಗ್ಯನಾಗುತ್ತಾನೆ ಅವನೇ ಮೋಕ್ಷಕ್ಕೂ ಅರ್ಹನಾಗುತ್ತಾನೆ. ಅವನಿಗೆ ಯಾವದುಃಖವೂ ಉಂಟಾಗುದಿಲ್ಲ ಎಲ್ಲಾ ಮನೋರಥಗಳನ್ನೂ ಸಫಲಗೊಳಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ದಮ
ಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತನಾಲ್ಕನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸತ್ಯಮೇವ ಪರಂ ಬ್ರಹ್ಮ ಸತ್ಯಮೇವ ಪರಂ ತಪಃ ।
ಸತ್ಯಮೇವ ಪರೋ ಯಜ್ಞಃ ಸತ್ಯಮೇವ ಪರಂ ಶ್ರುತಂ ॥ ೧ ॥

ಸತ್ಯಂ ದೇವೇಷು ಜಾಗರ್ತಿ ಮುಕ್ತಿಃ ಸತ್ಯತರೋಃ ಫಲಂ ।
ತಪೋ ಯಶಶ್ಚ ಪುಣ್ಯಂ ಚ ಪಿತೃದೇವರ್ಷಿಪೂಜನಂ ॥ ೨ ॥

ಆದ್ಯೋ ವಿಧಿಶ್ಚ ವಿದ್ಯಾ ಚ ಸರ್ವಂ ಸತ್ಯೇ ಪ್ರತಿಷ್ಠಿತಂ ।
ಸತ್ಯಂ ಯಜ್ಞಾಸ್ತಥಾ ದೇವಾ ಮಂತ್ರಾ ದೇವೀ ಸರಸ್ವತೀ ॥ ೩ ॥

ಇನ್ನೂರ ಅರವತ್ತೈದನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ:—ಸತ್ಯವೇ ಪರಬ್ರಹ್ಮಸ್ವರೂಪ ಸತ್ಯವೇ ಉತ್ತಮವಾದ ತಪಸ್ಸು. ಸತ್ಯವೇ ಉತ್ತಮವಾದ ಯಜ್ಞ, ಸತ್ಯವೇ ಶಾಸ್ತ್ರಜನ್ಯವಾದ ಜ್ಞಾನರೂಪ. ಸತ್ಯವು ದೇವತೆಗಳ ಅನುಗ್ರಹಕ್ಕೆ ಸಾಧಕವಾದ ವಸ್ತು. ಮುಕ್ತಿ ಎಂಬ ಪುರುಷಾರ್ಥವೂ ಸತ್ಯವೆಂಬ ವೃಕ್ಷದ ಫಲ. ತಪಸ್ಸು, ಯಶಸ್ಸು, ಪುಣ್ಯ, ದೇವ, ಋಷಿ, ಪಿತೃ ಇವರ ಪೂಜೆ. ಉಪನಯವೇ ಮೊದಲಾದ ಪ್ರಥಮ ಕರ್ಮ. ವಿದ್ಯೆ ಇವೆಲ್ಲವೂ ಸತ್ಯದಲ್ಲಿಯೇ ಅಡಗಿವೆ. ಯಜ್ಞಗಳು ಅದರಲ್ಲಿ ಪೂಜನೀಯರಾದ ದೇವತೆಗಳು, ಅಲ್ಲಿ ಉಪಯುಕ್ತವಾಗುವ ಮಂತ್ರಗಳು, ಅವಕ್ಕೆ ಆಶ್ರಯವಾದ

ವ್ರತಚರ್ಯಾ ತಥಾ ಸತ್ಯಮೋಙ್ಕಾರಃ ಸತ್ಯಮೇವ ಚ ।
ಸತ್ಯೇನ ವಾಯುರಭ್ಯೇತಿ ಸತ್ಯೇನಾಭಾಸತೇ ರವಿಃ ॥ ೪ ॥

ಸತ್ಯೇನ ಚಾಗ್ನಿರ್ದಹತಿ ಸ್ವರ್ಗಂ ಸತ್ಯೇನ ಗಚ್ಛತಿ ।
ಸತ್ಯೇನಚಾಪಃ ಕ್ಷಿಪತಿ ಪರ್ಜನ್ಯಃ ಪೃಥಿವೀತಲೇ । ೫ ॥

[1]ಪಾರಣಂ ಸರ್ವವೇದಾನಾಂ ಸರ್ವತೀರ್ಥಾವಗಾಹನಂ ।
ಸತ್ಯಂ ಚ ವದತೋ ಲೋಕೇ ಸಮಂ ಸ್ಯಾತಾಂ ನವಾಸಮಂ ॥ ೬ ॥

ಅಶ್ವಮೇಧಸಹಸ್ರಂ ತು ಸತ್ಯಂ ಚ ತುಲಯಾ ಧೃತಂ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥ ೭ ॥

ಸತ್ಯೇನ ದೇವಾಃ ಪ್ರೀಯಂತೇ ಪಿತರೋ ಬ್ರಾಹ್ಮಣಸ್ತಥಾ ।
ಸತ್ಯಮಾಹುಃ ಪರಂ ಧರ್ಮಂ ತಸ್ಮಾತ್ಸತ್ಯಂ ನ ಲೋಪಯೇತ್ ॥ ೮ ॥

ಸರಸ್ವತೀದೇವಿ, ಬ್ರಹ್ಮಚರ್ಯಾದಿವ್ರತಚರ್ಯೆ, ಇವೆಲ್ಲವೂ ಸತ್ಯಸ್ವರೂಪಗಳೇ. ಓಂಕಾರವೂ ಸತ್ಯಸ್ವರೂಪ, ಸತ್ಯದಿಂದಲೇ ವಾಯುವಿನ ಆಗಮನ. ಸತ್ಯದಿಂದಲೇ ಸೂರ್ಯನ ಪ್ರಕಾಶ.

೫–೮. ಸತ್ಯದಿಂದಲೇ ಅಗ್ನಿಯೂ ದಹಿಸುವ ಶಕ್ತಿಹೊಂದಿದ್ದಾನೆ. ಸ್ವರ್ಗವೂ ಸತ್ಯದಿಂದಲೇ ಲಭಿಸುತ್ತದೆ. ಮೇಘವು ಭೂಮಿಯಲ್ಲಿ ಮಳೆಗರೆಯುವುದೂ ಸತ್ಯದಿಂದಲೇ, ಸರ್ವವೇದಗಳನ್ನೂ ಅಧ್ಯಯನದಿಂದ ಧರಿಸುವುದೂ, ಎಲ್ಲಾ ತೀರ್ಥಗಳಲ್ಲಿ ಪ್ರವೇಶವೂ ಸಹ ಲೋಕದಲ್ಲಿ ಸತ್ಯವಾದಿಯಾಗಿರುವವನಿಗೆ ಸಮವಾಗಿಯೋ, ಅಸಮವಾಗಿಯೋ ಫಲಕೊಡುತ್ತವೆ. ಸಹಸ್ರಾಶ್ವಮೇಧವೂ, ಸತ್ಯವೂ ಸಮವೆಂದು ತೂಕಮಾಡಿ ನಿರ್ಣಯಿಸಲಾಗಿದೆ. ಆದರಲ್ಲಿಯೂ ಅಶ್ವಮೇಧ ಸಹಸ್ರಕ್ಕಿಂತಲೂ ಸತ್ಯವೇ ಹೆಚ್ಚೆಂದು ಹೇಳಬಹುದು. ಸತ್ಯದಿಂದ ದೇವತೆಗಳು ಸಂತೋಷ ಹೊಂದುತ್ತಾರೆ. ಹಾಗೆಯೇ ಪಿತೃಗಳೂ, ಬ್ರಾಹ್ಮಣರೂ ಸಂತುಷ್ಟರಾಗುತ್ತಾರೆ. ಸತ್ಯವೇ ಉತ್ತಮವಾದ ಮೊದಲನೆಯ ಧರ್ಮ ಆದುದರಿಂದ ಯಾವ ಕಾಲದಲ್ಲಿಯೂ ಸತ್ಯಕ್ಕೆ ಲೋಪತರಬಾರದು.

---

೧ ಇಲ್ಲಿ ಧಾರಣ ಎಂದಿರಬೇಕೆಂದು ತೋರುತ್ತದೆ.

ಮುನಯಃ ಸತ್ಯನಿರತಾಃ ಸತ್ಯಸ್ಥಾಸ್ತ್ರಿದಶೋತ್ತಮಾಃ ।
ಸ್ವರ್ಗೇ ಸತ್ಯಪರಾ ನಿತ್ಯಂ ಮೋದಂತೇ ದೇವತಾ ಇವ ॥ ೯ ॥

ಅಪ್ಸರೋಗಣಸಂಕೀರ್ಣೈರ್ವಿಮಾನೈರುಪಯಾಂತಿ ಚ ।
ವಕ್ತವ್ಯಂ ಹಿ ಸದಾ ಸತ್ಯಂ ನ ಸತ್ಯಾದ್ವಿದ್ಯತೇ ಪರಂ ॥ ೧೦ ॥

ಅಗಾಧೇ ವಿಮಲೇ ಶುದ್ಧೇ ಸತ್ಯತೋಯೇ ಶುಚಿಹ್ರದೇ ।
ಸ್ನಾತವ್ಯಂ ಮಾನಸೇ ತೀರ್ಥೇ ಸ್ನಾನಂ ತತ್ಪರಮಂ ಸ್ಮೃತಂ ॥ ೧೧ ॥

ಆತ್ಮಾರ್ಥೇ ವಾ ಪರಾರ್ಥೇ ವಾ ಪುತ್ರಾರ್ಥೇ ವಾ ರಿಪೋಃ ಕೃತೇ ।
ಯೇಽನೃತಂ ನಾಭಿಭಾಷಂತೇ ತೇ ನರಾಃ ಸ್ವರ್ಗಗಾಮಿನಃ ॥ ೧೨ ॥

ಯದ್ಭೂತಹಿತಮತ್ಯಂತಂ ತತ್ಸತ್ಯಮಿತಿ ಧಾರಣಾ ।
ಹಿತಂ ಸ್ಯಾದ್ಯೇನ ಭೂತಾನಾಂ ತತ್ತದ್ವಾಚ್ಯಂ ವಿಜಾನತಾ ॥ ೧೩ ॥

೯-೧೨. ಋಷಿಗಳೂ, ಸತ್ಯದಲ್ಲಿಯೇ ನಿಷ್ಠೆಯುಳ್ಳವರು. ದೇವತೋತ್ತಮರೂ ಸತ್ಯದಲ್ಲಿಯೇ ಸ್ಥಿರವಾಗಿರತಕ್ಕವರು. ಆದುದರಿಂದ ಯಾವಾಗಲೂ ಸತ್ಯನಿಷ್ಠೆಯುಳ್ಳವರು ಸ್ವರ್ಗದಲ್ಲಿ ದೇವತೆಗಳಂತೆಯೇ ಸಂತುಷ್ಟರಾಗಿರುತ್ತಾರೆ. ಅಪ್ಸರೆಯರೊಡನೆ ವಿಮಾನಗಳಲ್ಲಿಯೂ ಸಂಚರಿಸುತ್ತಾರೆ. ಸತ್ಯಕ್ಕಿಂತಲೂ ಉತ್ತಮವಾದ ಧರ್ಮ ಒಂದಿಲ್ಲ. ಆದ್ದರಿಂದ ಯಾವಾಗಲೂ ಸತ್ಯವಾದಿಯಾಗಿಯೇ ಇರಬೇಕು. ಆಳವಾಗಿಯೂ, ಶುಚಿಯಾಗಿಯೂ, ಶುದ್ಧವಾದ ಹಳ್ಳವನ್ನಾಶ್ರಯಿಸಿಯೂ, ಸತ್ಯವೆಂಬ ಜಲದಿಂದ ತುಂಬಿಯೂ, ಇರುವ ಮನಸ್ಸೆಂಬ ಮಾನಸಸರೋವರದಲ್ಲಿ ಸ್ನಾನಮಾಡಬೇಕು. ಅದೇ ಉತ್ತಮವಾದ ಸ್ನಾನ, ತನಗಾಗಲಿ, ಮತ್ತೊಬ್ಬರಿಗಾಗಲಿ, ಮಗನಿಗೋಸ್ಕರವಾಗಲಿ, ಶತ್ರುವಿಗೋಸ್ಕರವಾಗಲಿ ಯಾರು ಏಕರೂಪದಿಂದ ಅನೃತ ಹೇಳದೆ ಸತ್ಯಪರರಾಗಿರುತ್ತಾರೆಯೋ ಅವರೇ ಸ್ವರ್ಗಸುಖಕ್ಕೆ ಭಾಗಿಯಾಗುತ್ತಾರೆ.

೧೩-೧೫. ಯಾವ ಕಾರ್ಯವು ಬಹುಮಟ್ಟಿಗೂ ಪ್ರಾಣಿಹಿತದಲ್ಲಿ ಪರ್ಯವಸಾನಗೊಳ್ಳುತ್ತದೆಯೋ ಅದೇ ಸತ್ಯಶಬ್ದದ ಅರ್ಥವೆಂದು ತಿಳಿಯಬೇಕು. ಯಾವ ವಾಕ್ಕಿನಿಂದ ಭೂತಹಿತ ಉಂಟಾಗುತ್ತದೆಯೋ ಅಂತಹ ಮಾತನ್ನೇ ವಿವೇಕಿಯಾದವನು

ಆದಿತ್ಯಚಂದ್ರಾವನಿಲಾನಲೌಚ ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ।
ಅಹಶ್ಚರಾತ್ರಿಶ್ಚ ಉಭೇ ಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ ||

ನ ಸಾ ಸಭಾ ಯತ್ರ ನ ಸನ್ತಿ ವೃದ್ಧಾಃ
ವೃದ್ಧಾ ನತೇ ಯೇ ನ ವದಂತಿ ಧರ್ಮಂ ।
ನಾಸೌ ಧರ್ಮೋ ಯತ್ರ ನೋ
ಸತ್ಯಮಸ್ತಿ ನ ತತ್ಸತ್ಯಂ ಯಚ್ಛಲೇನಾನುವಿದ್ಧಂ || ೧೫ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ಸತ್ಯಪ್ರಶಂಸಾವರ್ಣನೋನಾಮ
ಪಂಚಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಆಡಬೇಕು. ಮನುಷ್ಯನು ಮಾಡುವ ಎಲ್ಲಾ ವ್ಯಾಪಾರಕ್ಕೂ ಸೂರ್ಯಚಂದ್ರರು, ವಾಯ್ವಗ್ನಿಗಳು, ಆಕಾಶ, ಭೂಮಿ, ಜಲ, ಹೃದಯ, ಯಮ, ಅಹೋರಾತ್ರಿಗಳು, ಪೂರ್ವಾಪರ ಸಂಧ್ಯಾಕಾಲಗಳು, ಧರ್ಮಪುರುಷ ಇವರೆಲ್ಲರೂ ಸಾಕ್ಷಿಯಾಗುತ್ತಾರೆ. ವೃದ್ಧರಿಲ್ಲದ ಸಮುದಾಯವು ಸಭೆಯೇ ಅಲ್ಲ. ಧರ್ಮವನ್ನು ತಿಳಿಸದಿರುವವರು ವೃದ್ಧರೂ ಅಲ್ಲ. ಸತ್ಯದಿಂದ ದೂರವಾದುದು ಧರ್ಮವೂ ಅಲ್ಲ. ಮೋಸದಿಂದ ನಡೆದ ಕೃತ್ಯವು ಸತ್ಯವೂ ಅಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಸತ್ಯ
ಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತೈದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಟ್‌ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ತಪಸೋ ಹಿ ಪರಂ ನಾಸ್ತಿ ತಪಸಾ ವಿನ್ದತೇ ಮಹತ್ ।
ಪ್ರಜಾಪತೀನಾಂ ಯಾ ಶಕ್ತಿಃ ಪ್ರಜಾಃ ಕರ್ತುಂ ದ್ವಿಜೋತ್ತಮಾಃ || ೧ ||

ತಪಸಾ ಸಂಪ್ರದಾನೇನ ಋಷೀಣಾಂ ಜ್ಞಾನಮೇವ ಚ ।
ಬಹವೋ ದಿವಿ ಮೋದಂತೆ ಪ್ರಸಾದಾತ್ತಪಸೋ ಜನಾಃ || ೨ ||

ತಪಸಾ ಪ್ರಾಪ್ಯತೇ ಸ್ವರ್ಗಃ ತಪಸಾ ಪ್ರಾಪ್ಯತೇ ಯಶಃ
ಆಯುಃಪ್ರಕರ್ಷಂ ಭೋಗಾಂಸ್ತು ತಪಸಾ ವಿಂದತೇ ಮಹತ್ || ೩ ||

ಇನ್ನೂರ ಅರವತ್ತಾರನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ :—ತಪಸ್ಸಿಗಿಂತಲೂ ಉತ್ತಮವಾದ ಸಾಧನ ಬೇರೆ ಇಲ್ಲ. ತಪಸ್ಸಿನಿಂದ ಮಹಾ ಫಲವನ್ನೇ ಹೊಂದುತ್ತಾನೆ. ಪ್ರಜಾಪತಿಗಳಿಗೆ ಪ್ರಜೆಗಳನ್ನು ಸೃಷ್ಟಿಮಾಡುವ ವಿಷಯದಲ್ಲಿ ಯಾವ ಶಕ್ತಿಯುಂಟಾಯಿತೋ ಋಷಿಗಳಿಗೆ ವಿದ್ಯಾಪ್ರದಾನ ವಿಷಯದಲ್ಲಿ ಯಾವ ಜ್ಞಾನವುಂಟಾಯಿತೋ ಅದೆಲ್ಲವೂ ತಪಸ್ಸಿನಿಂದಲೇ ಉಂಟಾದದ್ದು. ತಪಸ್ಸಿನ ಅನುಗ್ರಹದಿಂದಲೇ ಬಹು ಜನಗಳು ಸ್ವರ್ಗದಲ್ಲಿ ಸಂತೋಷಹೊಂದುತ್ತಿದ್ದಾರೆ. ತಪಸ್ಸಿನಿಂದಲೇ ಸ್ವರ್ಗವುಂಟಾಗುತ್ತದೆ. ತಪಸ್ಸಿನಿಂದಲೇ ಯಶಸ್ಸೂ ಉಂಟಾಗುತ್ತದೆ. ಆಯುಸ್ಸಿನ ಉತ್ಕರ್ಷವನ್ನೂ ಭೋಗ

ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಸೌಭಾಗ್ಯಂ ರೂಪಮುತ್ತಮಂ ।
ತಪಸಾ ಪ್ರಾಪ್ಯತೇ ಸರ್ವಂ ಯತ್ಕಿಂಚಿನ್ಮನಸೇಪ್ಸಿತಂ ॥ ೪ ॥

ರಸಾಯನಾನಿ ಮನ್ತ್ರಾಶ್ಚ ವಿದ್ಯಾಸ್ತ್ವೌಷಧಯಸ್ತಥಾ ।
ನಾತಪ್ತತಪಸಸ್ಸಿದ್ಧಿಂ ಪ್ರಯಾಂತಿ ದ್ವಿಜಪುಂಗವಾಃ ॥ ೫ ॥

ಯತ್ಕಾರ್ಯಂ ಕಿಂಚಿದಾಸ್ಥಾಯ ಪುರುಷೈಸ್ತಪ್ಯತೇ ತಪಃ ।
ಸರ್ವಂ ತಸ್ಮಾದವಾಪ್ನೋತಿ ಪರತ್ರೇಹ ಚ ಮಾನವಃ ॥ ೬ ॥

ಬ್ರಹ್ಮಹಾ ಚ ಸುರಾಪಶ್ಚ ಸ್ತೇನಶ್ಚ ಗುರುತಲ್ಪಗಃ ।
ತಪಸಾ ಮುಚ್ಯತೇ ಜಂತುಃ ಸರ್ವತಶ್ಚಾಪಿ ಮುಚ್ಯತೇ ॥ ೭ ॥

ತಪಸ್ಯೈವ ಸುತಪ್ತೇನ ಮೋಕ್ಷಮಾಪ್ನೋತಿ ಮಾನವಃ ।
ಶಕ್ರವೈವಸ್ವತಾವನ್ಭೋಪಧನಾಧಿಪ ಹುತಾಶನೈಃ ॥ ೮ ॥

ಸ್ಥಾನಂ ಮಹತ್ತರಂ ಪ್ರಾಪ್ತಂ ತಥಾ ರುದ್ರಾರ್ಕರಾತ್ರಿಪೈಃ ।
ನ ಚಾಸ್ತಿ ತತ್ಸುಖಂ ಲೋಕೇ ಯದ್ವಿನಾ ತಪಸಾ ಭವೇತ್ ॥ ೯ ॥

ಗಳನ್ನೂ ಸಹ ತಪಸ್ಸಿನಿಂದಲೇ ಹೊಂದುತ್ತಾರೆ. ಜ್ಞಾನ, ವಿಜ್ಞಾನ, ಆಸ್ತಿಕತೆ, ಸೌಭಾಗ್ಯ, ಸುರೂಪ, ಇವೂ ಇಷ್ಟವಾದ ಇತರ ಫಲಗಳೂ ಸಹ ತಪಸ್ಸಿನಿಂದಲೇ ಉಂಟಾಗುತ್ತವೆ. ರಸಾಯನಗಳೆಂಬ ಸಿದ್ಧೌಷಧಿಗಳು, ಮಂತ್ರಗಳು, ವಿದ್ಯೆಗಳು, ಓಷಧಿಗಳು, ಇವೆಲ್ಲವೂ ತಪಸ್ಸಿಲ್ಲದವನಿಗೆ ಸಿದ್ಧಿಕಾರಿಗಳಾಗುವುದಿಲ್ಲ.

೬–೧೦. ಯಾವ ಕಾರ್ಯವನ್ನು ಅಪೇಕ್ಷಿಸಿ ಮನುಷ್ಯರು ತಪಸ್ಸನ್ನು ಹೊಂದುತ್ತಾರೆಯೋ ಅಂತಹ ಕಾರ್ಯಸಿದ್ಧಿಯನ್ನು ಆ ತಪಸ್ಸಿನಿಂದಲೇ ಇಹ ಲೋಕದಲ್ಲಾಗಲಿ ಅವರು ಹೊಂದುತ್ತಾರೆ. ಬ್ರಹ್ಮಹತ್ಯಾಕಾರಿಯೂ, ಸುರಾಪಾನ ಮಾಡಿದವನೂ, ಚೋರನೂ, ಗುರುತಲ್ಪಗಮನಮಾಡಿದವನೂ, ಸಹ ಈ ದೋಷಗಳಿಂದಲೂ ಇತರ ದೋಷಗಳಿಂದಲೂ ಸಹ ತಪಸ್ಸಿನಿಂದಲೇ ಬಿಡುಗಡೆ ಹೊಂದುತ್ತಾನೆ ಒಳ್ಳೆಯ ಇಂತಹ ತಪಸ್ಸಿನಿಂದಲೇ ಮೋಕ್ಷವನ್ನೂ ಹೊಂದುತ್ತಾನೆ. ಇಂದ್ರ, ಯಮ, ವರುಣ, ಕುಬೇರ, ಅಗ್ನಿ, ರುದ್ರ, ಸೂರ್ಯ, ಚಂದ್ರ ಇವರೂ ಸಹ ತಪಸ್ಸಿನಿಂದಲೇ ಉತ್ತಮವಾದ ಸ್ಥಾನವನ್ನು ಹೊಂದಿರುತ್ತಾರೆ. ತಪಸ್ಸಿನ ಸಂಬಂಧವಿಲ್ಲದ ಯಾವ ವಸ್ತುವೂ ಲೋಕದಲ್ಲಿ ಸುಖಕರವಲ್ಲ ಎಲ್ಲಾ ಸುಖಗಳೂ

ತಪಸ್ಯೈವ ಸುಖಂ ಸರ್ವಮಿತಿ ಧರ್ಮವಿದೋ ವಿದುಃ ।
ಅಷ್ಟಾಶೀತಿಸಹಸ್ರಾಣಾಂ ಮುನೀನಾಮೂರ್ಧ್ವರೇತಸಾಂ ॥ ೧೦ ॥

ತಪಸಾ ದಿವಿಮೋದಂತೇ ತ್ರಿದಶೈಃ ಸಹಿತಾ ದ್ವಿಜಾಃ ।
ಪುರುಷಸ್ತು ಸಮಾರಂಭಾನ್ನಿಷ್ಫಲಾನ್ವೀಕ್ಷ್ಯ ಚಾತ್ಮನಃ ॥ ೧೧ ॥

ತಪಃ ಕುರ್ಯಾತ್ಪ್ರಯತ್ನೇನ ನಹ್ಯನುಪ್ತಂ ಪ್ರರೋಹತಿ ।
ಕೀಟಾಃ ಪತಂಗಾಃ ಪಶವೋ ವಯಾಂಸಿ ಚ ತಥಾ ದ್ವಿಜಾಃ ॥ ೧೨ ॥

ಸ್ಥಾವರಾಣಿ ಚ ಭೂತಾನಿ ದಿವಂ ಯಾಂತಿ ತಪೋಬಲಾತ್ ।
ಯದ್ದುಸ್ತರಂ ಯದ್ದುರಾಪಂ ಯದ್ದುರ್ಗಂ ಯಚ್ಚ ದುಷ್ಕರಂ ॥ ೧೩ ॥

ಸರ್ವಂ ತತ್ತಪಸಾ ಸಾಧ್ಯಂ ತಪೋ ಹಿ ದುರತಿಕ್ರಮಃ ।
ಯಸ್ಮಿನ್ಕರ್ಮಣ್ಯಪಿ ಕೃತೇ ಮನಸಃ ಸ್ಯಾದಲಾಘವಂ ॥ ೧೪ ॥

ತಪಸ್ಸಿನಿಂದಲೇ ಉಂಟಾಗುತ್ತವೆ ಎಂದು ಧರ್ಮಜ್ಞರು ಹೇಳುತ್ತಾರೆ. ಎಂಭತ್ತೆಂಟು ಸಾವಿರಸಂಖ್ಯೆಯುಳ್ಳ ತೇಜಸ್ವಿಗಳಾದ ಮುನಿಗಳೂ ತಪಸ್ಸಿನಿಂದಲೇ ದೇವತೆಗಳೊಡನೆ ಸ್ವರ್ಗದಲ್ಲಿ ಸುಖಿಗಳಾಗಿರುತ್ತಾರೆ.

೧೧–೧೫. ಪುರುಷನು ತನ್ನ ಪ್ರಯತ್ನಗಳು ವಿಫಲವಾಗಿರುವುದನ್ನು ತಿಳಿದು ಅಂತಹ ಪ್ರಯತ್ನಗಳು ಫಲಪರ್ಯವಸಾನಹೊಂದಲು ತಪಸ್ಸನ್ನೇ ಪ್ರಯತ್ನದಿಂದ ಮಾಡಬೇಕು. ನೆಡದೇ ಇರುವ ಬೀಜದಲ್ಲಿ ಮೊಳಕೆ ಹೊರಡುವುದಿಲ್ಲವಷ್ಟೆ, ಕ್ರಿಮಿಗಳು ರೆಕ್ಕೆಗಳಿರುವ ಹುಳುಗಳು, ಪಶುಗಳು, ಪಕ್ಷಿಗಳು ಇತರ ಪ್ರಾಣಿಗಳು ಸ್ಥಿರವಾದ ವೃಕ್ಷಾದಿಗಳು ಇವುಗಳೂ ಸಹ ತಪೋಬಲದಿಂದ ಸ್ವರ್ಗವನ್ನು ಸೇರುತ್ತವೆ. ದಾಟುವುದಕ್ಕೂ, ಹೊಂದುವುದಕ್ಕೂ, ಗಮಿಸುವುದಕ್ಕೂ, ಮಾಡುವುದಕ್ಕೂ ಸಹ ಯಾವುದು ಸಾಧ್ಯವಾಗುವುದೇ ಇಲ್ಲವೋ ಅವೆಲ್ಲವೂ ತಪಸ್ಸಿನಿಂದ ಸಾಧ್ಯವಾಗುತ್ತವೆ. ತಪಸ್ಸೆಂಬುದು ಎಲ್ಲಕ್ಕೂ ಅಮೋಘವಾದ ಸಾಧನ. ಯಾವ ಕೆಲಸವನ್ನು ಮಾಡಿದಲ್ಲಿ ಮನಸ್ಸು ಕಲ್ಮಷಗೊಂಡು ಕಲಕಿಹೋಗುವುದೋ ಅಂತಹ ಕಾರ್ಯದ ವಿಷಯದಲ್ಲಿಯೂ ಮನಸ್ಸಿಗೆ ತುಷ್ಟಿಯುಂಟಾಗುವವರಿಗೂ ತಪಸ್ಸನ್ನೇ ಮಾಡುತ್ತಿರಬೇಕು.

ತಸ್ಮಿಂಸ್ತಾವತ್ತಪಃ ಕುರ್ಯಾದ್ಯಾವತ್ತುಷ್ಟಿಕರಂ ಭವೇತ್ ।
ಯತ್ಕಿಂಚಿದೇನಃ ಕುರ್ವಂತಿ ಮನೋವಾಕ್ಕರ್ಮಭಿರ್ಜನಾಃ ॥ ೧೫ ॥

ತತ್ಸರ್ವಂ ವಿನುದಂತ್ಯಾಶು ತಪಸ್ಯೈವ ತಪೋಧನಾಃ ।
ತಪಸ್ಯೈವ ವಿಶುದ್ಧಸ್ಯ ಬ್ರಾಹ್ಮಣಸ್ಯ ದಿವೌಕಸಃ ॥ ೧೬ ॥

ಸತ್ಯಾಚ್ಚ ಪ್ರತಿಗೃಹ್ಣಂತಿ ಕಾಮಾನ್ಸಂವರ್ಧಯಂತಿ ಚ ।
ಬ್ರಹ್ಮಾ ಪ್ರಜೇಶ್ವರೋ ದೇವೋ ಮಹಾದೇವಸ್ತಥಾ ದ್ವಿಜಾಃ ॥ ೧೭ ॥

ನಿತ್ಯಮೇವ ತಪಸ್ಯಂತಿ ತಪಃ ಪರಮದುಸ್ತರಂ ।
ಯಸ್ಯೇದಂ ಭುವನಂ ಸರ್ವಂ ಯಶ್ಚ ಸರ್ವಮಯೋಽಚ್ಯುತಃ ॥ ೧೮ ॥

ಯಶ್ಚ ಧಾತಾ ಜಯತ್ಯಸ್ಮಿನ್ಸ ವಿಷ್ಣುಃ ಪರಮೇಶ್ವರಃ ।
ನಿತ್ಯಮೇವ ಮಹಾಭಾಗಾಸ್ತಪಶ್ಚರತಿ ದುಶ್ಚರಂ ॥ ೧೯ ॥

ಜನಗಳು ಮನೋವಾಕ್ಕಾಯಕರ್ಮಗಳಿಂದ ಯಾವುದೊಂದು ಪಾಪವನ್ನು ಮಾಡಿದಾಗ್ಯೂ ಆ ಪಾಪಗಳೆಲ್ಲವನ್ನೂ ಮಹಾತಪಸ್ವಿಗಳು ತಪಸ್ಸಿನಿಂದಲೇ ಹೋಲಾಡಿಸಿಕೊಳ್ಳುತ್ತಾರೆ.

೧೬–೨೦. ತಪಸ್ಸಿನಿಂದಲೇ ಶುದ್ಧನಾಗಿರುವ ಬ್ರಾಹ್ಮಣನಿಂದ ದೇವತೆಗಳು ಹವಿಸ್ಸನ್ನು ಸತ್ಯದಿಂದ ಸ್ವೀಕರಿಸುತ್ತಾರೆ ಅವನ ಅಭೀಷ್ಟವನ್ನೂ ಅಭಿವೃದ್ಧಿಪಡಿಸುತ್ತಾರೆ. ಪ್ರಜಾಧಿಪತಿಯಾದ; ಬ್ರಹ್ಮನೂ, ದೇವತೆಯಾದ ರುದ್ರನೂ ಸಹ ನಿತ್ಯವೂ ತಪಸ್ಸಿನಲ್ಲಿಯೇ ಆಸಕ್ತರಾಗಿರುತ್ತಾರೆ. ತಪಸ್ಸನ್ನು ಹೊಂದುವುದು ಬಹು ಕಷ್ಟ. ಈ ಪ್ರಪಂ[1]ಚವೆಲ್ಲವೂ ಯಾವನಿಗೆ ನಿಯಾಮ್ಯವರ್ಗದಲ್ಲಿ ಸೇರಿರುವುದೋ ಅಂತಹ ಯಾವ ಅಚ್ಯುತನು ಸರ್ವಮ[2]ಯನಾಗಿಯೂ ಆಗಿರುತ್ತಾನೆಯೋ, ಯಾವನು ಸೃಷ್ಟಿಕರ್ತನಾಗಿಯೂ ಜಗತ್ತಿನಲ್ಲಿರುವನೋ ಅವನೇ ಪರಮಪ್ರಭುವಾದ ವಿಷ್ಣುವು, ಅವನೂ ಸಹ ನಿತ್ಯವೂ ದುಶ್ಚರವಾದ ತಪಸ್ಸನ್ನು ಮಾಡುತ್ತಲೇ ಇರುತ್ತಾನೆ.

---

1. ಇದರಿಂದ ಜಗತ್ತಿಗೆ ಅಚ್ಯುತನು ನಿಮಿತ್ತಕಾರಣನೆಂದು ಹೇಳಿದಂತಾಗುತ್ತದೆ.

2. ಇದರಿಂದ ನಿಮಿತ್ತತ್ವಮಾತ್ರವೇ ಅಲ್ಲದೆ ಉಪಾದಾನಕಾರಣನೂ ಆಗಿದ್ದಾನೆಂದು ಹೇಳಿದಂತಾಗುತ್ತದ.

ಭಗವಾನ್ ವಾಸುದೇವಸ್ತು ತಪಃ ಪರಮಿಹೋಚ್ಯತೇ ।
ಅಷ್ಟೌ ದೇವಗಣಾನ್ ಲೋಕೇ ಪ್ರಾಪ್ನೋತಿ ತಪಸಾ ನರಃ ॥ ೨೦ ॥

ತ್ರೈಲೋಕ್ಯಕರಣಸ್ಯಾಪಿ ಶಕ್ತಶ್ಚ ತಪಸಾ ಭವೇತ್ ।
ದಿವ್ಯಾನಾಂ ಚ ತಥಾಸ್ತ್ರಾಣಾಂ ಶಕ್ತೋ ಭವತಿ ಧಾರಣಾತ್ ॥ ೨೧ ॥

ಲೋಕೇ ಸುರಾಣಾಂ ಭುವಿವಾ ದ್ವಿಜೇಂದ್ರಾ
ನ ವಿದ್ಯತೇ ತತ್ಪುರುಷಸ್ಯ ಕಿಂಚಿತ್ ।
ತಪಃ ಪ್ರಕರ್ಷೇಣ ಪರೇಣ ಲಬ್ಧಿರ್ನ-
ವಿದ್ಯತೇ ಯಸ್ಯ ಮಹಾನುಭಾವಾಃ ॥ ೨೨ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ತಪಃಪ್ರಶಂಸಾವರ್ಣನೋ
ನಾಮ ಷಟ್ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಮಹಾಮಹಿಮನಾದ ವಾಸುದೇವನ ಸ್ವರೂಪವೇ ಉತ್ಕೃಷ್ಟವಾದ ತಪಸ್ಸು, ತಪಸ್ಸಿನಲ್ಲಿರುವ ಮನುಷ್ಯನು ಎಂಟು ದೇವಗಣಗಳನ್ನೂ ಹೊಂದುತ್ತಾನೆ.

೨೧-೨೨. ಮೂರು ಲೋಕವನ್ನೂ ನಿರ್ಮಿಸುವ ಶಕ್ತಿಯನ್ನು ತಪಸ್ಸಿನಿಂದಲೇ ಹೊಂದಲು ಸಮರ್ಥನಾದಾನು. ದಿವ್ಯಾಸ್ತ್ರಗಳ ಧಾರಣಶಕ್ತಿಯನ್ನೂ ತಪಸ್ಸಿನಿಂದಲೇ ಹೊಂದಿಯಾನು. ಉತ್ತಮವಾದ ತಪೋಬಲದಿಂದ ಯಾವುದನ್ನು ಹೊಂದಲು ಸಾಧ್ಯವಿಲ್ಲವೋ ಅಂತಹ ಪುರುಷಾರ್ಥವು ಸ್ವರ್ಗದಲ್ಲಿಯೂ, ಭೂಮಿಯಲ್ಲಿಯೂ ಸಹ ಯಾವುದೂ ಇಲ್ಲ. ಲೋಕದ್ವಯದಲ್ಲಿಯೂ ಅಪೇಕ್ಷಿಸಬಹುದಾದ ಇಷ್ಟಾರ್ಥಗಳೆಲ್ಲವೂ ತಪೋಬಲದಿಂದಲೇ ಸಾಧ್ಯವಾಗುತ್ತವೆ ಎಂದು ತಾತ್ಪರ್ಯ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ತಪಃಪ್ರಶಂಸಾವರ್ಣನವೆಂಬ ಇನ್ನೂರ ಅರವತ್ತಾರನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತಷಷ್ಟ್ಯುತ್ತರದ್ವಿಶತತಮೋಧ್ಯಾಯಃ ॥

॥ ಹಂಸ ಉವಾಚ ॥

ವಶೇ ಜಗದಿದಂ ಪ್ರಾಹುಃ ಶೂರಬಾಹುಷು ಲಂಬಿತೇ ।
ಶೂರಾಣಾಮಥ ಸರ್ವೇಷಾಂ ಶೌರ್ಯಮೇವ ವಿಶಿಷ್ಯತೇ । ॥ ೧ ॥

ಬ್ರಾಹ್ಮಣಾರ್ಥೇ ಗವಾರ್ಥೇ ವಾ ಸ್ವಾಮ್ಯರ್ಥೇ ಮಿತ್ರಕಾರಣೇ ।
ಆಹೃತೌ ಯೇ ಪ್ರಪದ್ಯಂತೇ ನಾಕಪೃಷ್ಠಂ ವ್ರಜಂತಿ ತೇ ॥ ೨ ॥

ಧನಾಪಹಾರೇ ಸಂಪ್ರಾಪ್ತೇ ಸಂಪ್ರಾಪ್ತೇ ದಾರವಿಪ್ಲವೇ ।
ಆತ್ಮನಶ್ಚ ಪರಿತ್ರಾಣೇ ಯುಧ್ಯಮಾನೋ ದಿವಂ ವ್ರಜೇತ್ ॥ ೩ ॥

ಇನ್ನೂರ ಅರವತ್ತೇಳನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ಈ ಜಗತ್ತೆಲ್ಲವೂ ಶೂರರ ಬಾಹುವನ್ನೇ ಆಶ್ರಯಿಸಿಕೊಂಡಿದೆ ಶೂರರಲ್ಲೆಲ್ಲಾ ಆಯಾಯ ಶೌರ್ಯದ ಉತ್ಕರ್ಷವೇ ಅವರವರ ಮಾನ್ಯತೆಗೆ ಕಾರಣವಾಗುತ್ತದೆ. ಬ್ರಾಹ್ಮಣನಿಗಾಗಿಯಾಗಲಿ, ಗೋವಿಗಾಗಿಯಾಗಲಿ, ಸ್ವಾಮಿಕಾರ್ಯಕ್ಕಾಗಲಿ, ಮಿತ್ರನ ಕಾರ್ಯಕ್ಕಾಗಲಿ ಉಂಟಾದ ಯುದ್ಧದಲ್ಲಿ ಯಾರು ಮಡಿಯುತ್ತಾರೆಯೋ ಅವರು ಸ್ವರ್ಗವನ್ನೇ ಹೊಂದುತ್ತಾರೆ. ತನಗೆ ಧನಾಪಹಾರವಾಗಲಿ, ಪತ್ನಿಯ ಅಪಹರಣಗಳಿಂದ ವಿಶ್ಲೇಷವಾಗಲಿ, ಆತ್ಮ

ಕ್ಷತ್ರವಿಟ್ಶೂದ್ರವಿಪ್ರಾಣಾಂ ಯುದ್ಧಮೇವ ಪರಾಯಣಂ ।
ಆತ್ಮನಶ್ಚ ಪರಿತ್ರಾಣೇ ಸಂಪ್ರಾಪ್ತೇ ದೇಶವಿಪ್ಲವೇ ॥ ೪ ॥

ದಾರನಾಶೇ ತು ಸಂಪ್ರಾಪ್ತೇ ದಕ್ಷಿಣಾನಾಂ ಚ ಸಂಕರೇ ।
ವಿಪ್ರಸ್ತು ಶಸ್ತ್ರಂ ಗೃಹ್ಣೀಯಾತ್ಸಂಕರೇ ಚಾಪ್ಯುಪಸ್ಥಿತೇ ॥ ೫ ॥

ವೃತ್ತಿಂ ತು ಕಲ್ಪಯೇದ್ವಿಪ್ರಃ ಕ್ಷತ್ರಧರ್ಮೇಣ ವಾ ನವಾ ।
ಸಂಗ್ರಾಮಾನ್ನನಿವರ್ತೇತ ತಸ್ಯ ಧರ್ಮಂ ಹಿತಂ ತದಾ ॥ ೬ ॥

ಏಕಪುತ್ರಂ ತೃಣಮುಖಂ ತವಾಸ್ಮೀತಿ ಚ ವಾದಿನಂ ।
ಸ್ತ್ರೀಬಾಲರಕ್ಷಕಂ ಭೀರುಂ ಪಲಾಯನಪರಾಯಣಂ ॥ ೭ ॥

ವ್ಯಾಯುಧಂ ವ್ಯಸನಸ್ಥಂ ಚ ಪರೇಣ ಸಹ ಸಂಗತಂ ।
ಧುರ್ಯಂ ಚ ಧುರ್ಯವಾಹಂ ಚ ಯುದ್ಧಪ್ರೇಕ್ಷಕಮೇವ ಚ ॥ ೮ ॥

ನ ಹಸ್ತವ್ಯಾ ದ್ವಿಜಶ್ರೇಷ್ಠಾ ಯುದ್ಧಧರ್ಮಂ ವಿಜಾನತಾ ॥
ಯುದ್ಧಂ ನ ಕುರ್ಯಾದ್ಯಾನಸ್ಥಃ ಪುರುಷೇಣ ಪದಾತಿನಾ ॥ ೯ ॥

ರಕ್ಷಣಕ್ಕಾಗಲಿ ಯುದ್ಧಮಾಡಿ ಮಡಿದವನು ಸ್ವರ್ಗವನ್ನು ಹೊಂದುತ್ತಾನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೂ ಈ ರೀತಿಯಾದ ಯುದ್ಧವು ವಿಹಿತ. ದೇಶವಿಪ್ಲವ, ಪತ್ನೀನಾಶ, ದಕ್ಷಿಣಾಸಾಂಕರ್ಯ ಇತ್ಯಾದಿಗಳುಂಟಾದಲ್ಲಿ ಆತ್ಮರಕ್ಷಣೆಗಾಗಿ ಬ್ರಾಹ್ಮಣನೂ ಶಸ್ತ್ರಗ್ರಹಣಮಾಡಬೇಕು.

೬–೧೦. ಹೀಗೆ ಶಸ್ತ್ರಗ್ರಹಣವನ್ನು ಮಾಡಿದ ಬ್ರಾಹ್ಮಣನು ಕ್ಷತ್ರಿಯ ವೃತ್ತಿಯಿಂದಲೇ ಜೀವನ ಹೊಂದಲಿ ಬಿಡಲಿ, ಆದರೆ ಶಸ್ತ್ರಗ್ರಹಣದಿಂದ ಯುದ್ಧಕ್ಕಾಗಿ ಹೊರಟವನು ಯುದ್ಧದಿಂದ ಪರಾಙ್ಮುಖನಾಗಬಾರದು. ಇದು ಅವನಿಗೆ ಹಿತಕರವಾದ ಧರ್ಮ. ತಂದೆಗೆ ಒಬ್ಬನೇ ಆದ ಮಗನನ್ನೂ, ಬಾಯಿಯಲ್ಲಿ ಹುಲ್ಲನ್ನು ಕಚ್ಚಿಕೊಂಡು ನಾನು ನಿನ್ನಲ್ಲಿ ಶರಣಾಗತನಾಗಿದ್ದೇನೆ ಎಂದು ಹೇಳುವವನನ್ನೂ ಕೊಲ್ಲಕೂಡದು. ಹಾಗೆಯೇ ಸ್ತ್ರೀಯರಿಗೂ, ಬಾಲಕರಿಗೂ ರಕ್ಷಣೆ ಕೊಡುತ್ತಿರುವವನ, ಅಂಜಿಕೆಯುಳ್ಳವನ, ಯುದ್ಧದಿಂದ ಓಡುವವನ, ನಿರಾಯುಧನ, ವ್ಯಸನಶಾಲಿಯ, ಮತ್ತೊಬ್ಬನೊಡನೆ ಹೆಣಗುತ್ತಿರುವವನ, ರಥ ಮತ್ತು ರಥವಾಹನಗಳ, ಮತ್ತು ಯುದ್ಧಪ್ರೇಕ್ಷಕನ ವಧವು ಧರ್ಮಯುದ್ಧವನ್ನು ತಿಳಿದವನಿಗೆ ಉಚಿತವಲ್ಲ ಕೇವಲ ಪದಾತಿಯಾಗಿರುವವನೊಡನೆ ಯಾನಸ್ಥನಾಗಿ ಯುದ್ಧಮಾಡಬಾರದು. ತನಗೆ ಸಮನಾಗಿಯೋ

ಸಮೇನ ಯುದ್ಧಮಾಕಾಙ್ಕ್ಷಂಸ್ತಥೈವಾಭ್ಯಧಿಕೇನ ವಾ ।
ನರಃ ಪ್ರಾಪ್ನೋತಿ ನರಕಂ ಹೀನಹಾ ತದ್ಧತೋಪಿ ವಾ ॥ ೧೦ ॥

ಅವರ್ಮಯಿತ್ವಾ ಯೋ ವಾಹಂ ಚಾತ್ಮಾನಂ ವರ್ಮಯೇನ್ನರಃ ।
ಸ ಶೀಘ್ರಂ ನರಕಂ ಯಾತಿ ಸುಕೃತೇನಾಪಿ ಕರ್ಮಣಾ ॥ ೧೧ ॥

ಕಥಿತೋ ಯುದ್ಧಧರ್ಮೋಯಂ ಫಲಂ ಚಾತೋ ನಿಬೋಧತ ।
ಧರ್ಮಲಾಭೋಽರ್ಥಲಾಭಶ್ಚ ಯಶೋ ಲಾಭಶ್ಚ ತಸ್ಯ ವೈ ॥ ೧೨ ॥

ಯಃ ಶೂರೋ ಯುಧ್ಯತೇ ಯುದ್ಧೇ ವಿಮೃದ್ನನ್ ಪರವಾಹಿನೀಂ ।
ತಸ್ಯ ಧರ್ಮಾರ್ಥಕಾಮಾಶ್ಚ ಯಜ್ಞಾಶ್ಚೈವಾಪ್ತದಕ್ಷಿಣಾಃ ॥ ೧೩ ॥

ಅಗ್ನಿಷ್ಟೋಮಾದಿಭಿರ್ಯಜ್ಞೈಃ ಇಷ್ಟ್ವಾ ವಿಪುಲದಕ್ಷಿಣೈಃ ।
ನ ತತ್ಫಲಮವಾಪ್ನೋತಿ ಸಂಗ್ರಾಮೇ ಯದವಾಪ್ಯತೇ ॥ ೧೪ ॥

ಅಥವಾ ಅಧೀನನಾಗಿಯೋ ಇರುವವನೊಡನೆ ಯುದ್ಧವನ್ನು ಅಪೇಕ್ಷಿಸಬೇಕು. ಹೀನನನ್ನು ಕೊಲ್ಲುವವನೂ, ಹೀನನಿಂದ ಕೊಲ್ಲಲ್ಪಟ್ಟವನೂ ಸಹ ನರಕ ಹೊಂದುತ್ತಾನೆ.

೧೧-೧೪. ಯಾವನು ತನ್ನ ಕುದುರೆಗೆ ಕವಚದಿಂದ ರಕ್ಷಣೆಕೊಡದೆ ತಾನು ಮಾತ್ರ ಕವಚದಿಂದ ರಕ್ಷಣೆಹೊಂದುತ್ತಾನೆಯೋ ಅವನು ಪುಣ್ಯಶಾಲಿಯಾಗಿದ್ದರೂ ನರಕವನ್ನೇ ಶೀಘ್ರವಾಗಿ ಹೊಂದುತ್ತಾನೆ. ಯುದ್ಧಧರ್ಮವನ್ನು ಈ ರೀತಿ ಹೇಳಿರುತ್ತೇನೆ ಇನ್ನು ಮುಂದೆ ಇದರ ಫಲವನ್ನು ಕೇಳಿರಿ. ಯುದ್ಧಮಾಡುವವನಿಗೆ ಧರ್ಮಲಾಭ, ಅರ್ಥಲಾಭ, ಯಶಸ್ಸಿನಲಾಭ ಇವು ಮುಖ್ಯವಾದ ಫಲಗಳು. ಯಾವ ಶೂರನು ಯುದ್ಧದಲ್ಲಿ ಶತ್ರುಸೈನ್ಯವನ್ನು ಮರ್ದನಮಾಡುತ್ತಾ ಯುದ್ಧ ಮಾಡುತ್ತಾನೆಯೋ ಅವನಿಗೆ ಧರ್ಮಾರ್ಥಕಾಮಗಳೂ, ದಕ್ಷಿಣೆಯಿಂದ ಕೂಡಿದ ಮಹಾಯಜ್ಞಗಳೂ, ಅದರಿಂದಲೇ ಲಭಿಸುತ್ತವೆ. ಇಂತಹ ಯುದ್ಧದಿಂದ ಹೊಂದುವ ಫಲವನ್ನು ಅಪರಿಮಿತ ದಕ್ಷಿಣೆಯೊಡಗೂಡಿದ ಅನೇಕ ಅಗ್ನಿಷ್ಟೋಮಾದಿ ಯಜ್ಞಗಳನ್ನು ಮಾಡಿದರೂ ಅವುಗಳಿಂದ ಹೊಂದಲು ಸಾಧ್ಯವಿಲ್ಲ

ಅಸೃಗ್ಯದಾಸ್ಯ ಗಾತ್ರೇಭ್ಯೋ ವಿನಿರ್ಯಾತಿ ರಣಾಜಿರೇ ।
ತೇನೈವ ಸಾರ್ಧಂ ನಿರ್ಯಾತಿ ತಸ್ಯ ಪಾಪಂ ಶರೀರತಃ ॥ ೧೫ ॥

ಸಹತೇ ಚ ಪರಂ ಕ್ಲೇಶಂ ಪ್ರಹಾರಾಣಾಂ ಚ ರೋಪಣೇ ।
ಯೋದ್ಧಾರಃ ಸಮವಾಪ್ನೋತಿ ತಪೋನಾಸ್ತ್ಯಧಿಕಂ ತತಃ ॥ ೧೬ ॥

ಯಸ್ಯ ಯುದ್ಧೇ ಪ್ರಹಾರಾ ಯೇ ಕಿಂಚಿತ್ಸ್ಯಾದ್ದೈವಯೋಗತಃ ।
ಯುಧ್ಯಮಾನಸ್ಯ ಧರ್ಮಜ್ಞಾಃ ಸೋಽಪಿ ನಾಕೇ ಮಹೀಯತೇ ॥ ೧೭ ॥

ರಣೇ ಯಥಾಧಿಕವಧಂ ಕೃತ್ವಾ ಫಲಮುಪಾಶ್ನುತೇ ।
ಪರಂ ಹ್ಯಭಿಮುಖಂ ಹತ್ವಾ ತದ್ಯಾನಂ ಯೋಽಧಿರೋಹತಿ ॥ ೧೮ ॥

ವಿಷ್ಣುಕ್ರಾಂತಂ ಸ ಜಯತಿ ಚೈವಂ ಯುಧ್ಯನ್ರಣಾಜಿರೇ ।
ಯಸ್ತು ಸೇನಾಪತಿಂ ಹತ್ವಾ ತದ್ಯಾನಮಧಿರೋಹತಿ ॥ ೧೯ ॥

ಅಶ್ವಮೇಧಾನವಾಪ್ನೋತಿ ಚತುರಸ್ತೇನ ಕರ್ಮಣಾ ।
ಯಾವಂತಿ ತಸ್ಯ ಶಸ್ತ್ರಾಣಿ ಭಿನ್ದಂತಿ ತ್ವಚಮಾಹವೇ ॥ ೨೦ ॥

೧೫-೧೯. ಯುದ್ಧಭೂಮಿಯಲ್ಲಿ ಯೋಧನಾಗಿರುವವನ ಶರೀರದಿಂದ ರಕ್ತವು ಹೊರಗೆ ಹೊರಡುವಾಗ ಆ ರಕ್ತದೊಡನೆ ಪಾಪವೂ ಸಹ ಶರೀರದಿಂದ ಹೊರಗೆ ಹೊರಡುತ್ತದೆ. ಶತ್ರುಗಳ ಆಯುಧ ಪ್ರಹಾರದಿಂದ ಎಷ್ಟು ಕ್ಲೇಶವನ್ನು ಯೋಧನಾದವನು ಸಹಿಸುತ್ತಾನೆಯೋ ಆಗ ಅವನಿಗೆ ಅದಕ್ಕಿಂತಲೂ ಬೇರೆಯಾದ ತಪಸ್ಸೇ ಇಲ್ಲ. ಯಾವ ಯೋಧನಿಗೆ ಯುದ್ಧಮಾಡುತ್ತಿರುವಾಗ ದೈವಯೋಗದಿಂದ ಅಲ್ಪವಾದ ಆಯುಧಪ್ರಹಾರವೇ ಉಂಟಾಗುವುದೋ ಅವನೂ ಸಹ ಸ್ವರ್ಗವಾಸಿಯೇ ಆಗುತ್ತಾನೆ. ಹೆಚ್ಚಾಗಿ ಶತ್ರುವಧವನ್ನು ಮಾಡಿದ ಯೋಧನಿಗೂ ಇದು ಸಮ. ಇದೇ ರೀತಿ ಸ್ವರ್ಗವನ್ನು ಜಯಿಸುತ್ತಾನೆ. ಯಾವನು ಸೇನಾಪತಿಯನ್ನು ಕೊಂದು ಅವನ ಯಾನವನ್ನು ಆಕ್ರಮಿಸುತ್ತಾನೆಯೋ ಅಂತಹ ಚತುರನು ತನ್ನ ಸಾಹಸಕಾರ್ಯ ದಿಂದ ಅಶ್ವಮೇಧವನ್ನೇ ಹೊಂದುತ್ತಾನೆ.

೨೦-೨೪. ಯುದ್ಧದಲ್ಲಿ ಎಷ್ಟು ಶಸ್ತ್ರಗಳು ಅವನ ಚರ್ಮವನ್ನು ಭೇದಿಸು ತ್ತವೆಯೋ ಅಷ್ಟು ಸಂಖ್ಯೆಯುಳ್ಳ ಇಷ್ಟವಾದ ಅಕ್ಷಯ ಲೋಕಗಳನ್ನೇ ಅವನು

ಇಲ್ಲಿ ಕಿಂಚಿತ್ಸ್ಯಾತ್ ಎಂದು ಪಾಠವಿರಬೇಕು.

ತಾವತೋ ಲಭತೇ ಲೋಕಾನ್ ಸರ್ವಕಾಮದುಘಾಕ್ಷಯಾನ್ ।
ಯತ್ರ ಯತ್ರ ಹತಃ ಶೂರಃ ಶತ್ರುಭಿರ್ವಿನಿಪಾತಿತಃ ॥ ೨೦ ॥

ಅಕ್ಷಯಾನ್ ಲಭತೇ ಲೋಕಾನ್ ನಿರ್ವೃತಿಂ ದೀನತಾಂ ವಿನಾ ।
ಸ್ವಾಮಿನಾ ಸುಕೃತಮಾದತ್ತೇ ಹತಾನಾಂ ವಿಪಲಾಯಿನಾಂ ॥ ೨೨ ॥

ಸ್ವಾಮಿನೋ ದುಷ್ಕೃತಂ ಸರ್ವಂ ತದಾ ಚ ಪ್ರತಿಪದ್ಯತೇ ।
ಪಲಾಯಮಾನಃ ಪುರುಷಃ ತಥಾ ಪ್ರಾಪ್ನೋತಿ ವೈ ದ್ವಿಜಾಃ ॥ ೨೩ ॥

ಪದೇಪದೇ ದುರಾಚಾರೋ ಗೋವಧಸ್ಯ ಫಲಂ ನರಃ ।
ಜೀವನ್ ಲಕ್ಷ್ಮೀಂ ಸಮಾಪ್ನೋತಿ ಮೃತಶ್ಚ ತ್ರಿದಿವಂ ನರಃ ॥ ೨೪ ॥

ಯಶಸ್ತ್ವೋಭಯಥಾ ವಿಪ್ರಾ ನಾಸ್ತಿ ಯುದ್ಧೇ ನಿರರ್ಥತಾ ।
ಪರಾನಭಿಮುಖಃ ಶೂರೋ ಯಾವದ್ವ್ರಜತಿ ವೈ ದ್ವಿಜಾಃ ॥ ೨೫ ॥

ಹೊಂದುತ್ತಾನೆ. ಶೂರನಾದವನು ಎಲ್ಲಿ ಎಲ್ಲಿ ಶತ್ರುಗಳಿಂದ ಕೆಡಹಲ್ಪಟ್ಟು ಮೃತಿ ಹೊಂದುತ್ತಾನೆಯೋ ಅಲ್ಲಲ್ಲೇ ಅವನು ಯಾವ ದೈನ್ಯವೂ ಇಲ್ಲದೆ ಅಕ್ಷಯವಾದ ಲೋಕಗಳನ್ನೂ, ಸುಖವನ್ನೂ ಹೊಂದುತ್ತಾನೆ. ಯುದ್ಧದಲ್ಲಿ ಓಡಿಹೋಗಿ ಮೃತನಾಗುವವನ ಸುಕೃತವೆಲ್ಲವೂ ಸ್ವಾಮಿಯನ್ನು ಸೇರುತ್ತದೆ. ಸ್ವಾಮಿಯ ಪಾಪವೆಲ್ಲವೂ ಓಡಿಹೋಗುವವನನ್ನು ಸೇರುತ್ತದೆ. ಪದೇ ಪದೇ ಇಂತಹ ದುರಾಚಾರಶಾಲಿಯು ಗೋವಧದ ಫಲವನ್ನು ಹೊಂದುತಾನೆ. ಯುದ್ಧದಲ್ಲಿ ಬದುಕಿದವನು ಜಯಶಾಲಿಯಾಗಿ ಸಂಪತ್ತಿಗೆ ಭಾಗಿಯಾಗುತ್ತಾನೆ. ಸತ್ತವನು ಸ್ವರ್ಗಕ್ಕೆ ಸೇರುತ್ತಾನೆ.

೨೫–೨೮. ಉಭಯಪಕ್ಷದಲ್ಲಿಯೂ ಯಶಸ್ಸು ಸಮಾನ. ಆದ್ದರಿಂದ ಯುದ್ಧ ವ್ಯಾಪಾರದಲ್ಲಿ ನಿರರ್ಥಕತ್ವವೇ ಇಲ್ಲ. ಶೂರನಾದವನು ಶತ್ರುವಿಗೆ ಅಭಿಮುಖನಾಗಿಯೇ ಎಷ್ಟೆಷ್ಟು ಆಕ್ರಮಿಸುತ್ತಾನೆಯೋ ಅವನಿಗೆ ಹೆಜ್ಜೆಹೆಜ್ಜೆಗೂ ಕ್ರಮವಾದ ಯಜ್ಞಫಲವೇ ಉಂಟಾಗುತ್ತದೆ. ಮತ್ತೊಬ್ಬರಿಂದ ತನಗೆ ತೊಂದರೆಯುಂಟಾಗದಿರುವಾಗ ತಾನೂ

ಪದೇಪದೇ ಯಜ್ಞಫಲಮಾನುಪೂರ್ವ್ಯಾತ್ಸಮಾಪ್ನುಯಾತ್ ।
ಅಭಗ್ನಶ್ಚ ಪರಂ ಹನ್ಯಾದ್ಭಗ್ನಂ ಚ ಪರಿರಕ್ಷತಿ ॥ ೨೬ ॥

ಪಲಾಯಂತೇ ಸ್ಥಿತೋ ಯಸ್ಮಿನ್ಸಯಾತಿ ಪರಮಾಂ ಗತಿಂ ॥
ಊರ್ಧ್ವಂ ತಿರ್ಯಕ್ಚ ಯಶ್ಚಾರ್ವಾಕ್ ಪ್ರಾಣಾನ್ಸಂತ್ಯಜ್ಯ ಯುಧ್ಯತಿ ॥ ೨೭ ॥

ಹತಾಸುಶ್ಚ ಪತೇದ್ಯುದ್ಧೇ ಸ ಸ್ವರ್ಗಾನ್ನನಿವರ್ತತೇ ॥
ಯಸ್ಯ ಯುದ್ಧೇ ಪ್ರವಿಷ್ಟಸ್ಯ ದೇಹಃ ಚಿಹ್ನೈ ಕೃತಃ ಪರೈಃ ॥ ೨೮ ॥

ಆತ್ಮಾನಂ ಯೂಪಮುತ್ಸೃಜ್ಯ ಸ ಯಜ್ಞೋಽನಂತದಕ್ಷಿಣಃ ।
ನಾಶೌಚ ಭಾಜಃ ತಸ್ಯಸ್ಯುರ್ಬಾಂಧವಾ ದ್ವಿಜಸತ್ತಮಾಃ ॥ ೨೯ ॥

ಶ್ರಾದ್ಧಂ ಚೈವಾಗ್ನಿಸಂಸ್ಕಾರಸ್ತಥೈವಾಪ್ಯುದಕ್ರಿಯಾ ।
ಮೃತಸ್ಯ ನೋಪಯುಜ್ಯಂತೇ ಸಂಗ್ರಾಮೇಽಬಿಮುಖಸ್ಯ ತು ॥ ೩೦ ॥

ಮತ್ತೊಬ್ಬನನ್ನು ಕೊಲ್ಲಬೇಕು ಅಥವಾ ತೊಂದರೆ ಹೊಂದಿರುವ ತನ್ನವರನ್ನು ರಕ್ಷಿಸಬೇಕು. ಎಲ್ಲರೂ ಓಡುತ್ತಿರುವ ಭಯಂಕರ ಸ್ಥಳದಲ್ಲಿಯೂ ಯಾವನು ಧೈರ್ಯದಿಂದ ನಿಲ್ಲುತ್ತಾನೆಯೋ ಅವನೇ ಉತ್ತಮಗತಿಯನ್ನು ಹೊಂದತಕ್ಕವನು. ಮೇಲೆ ಮತ್ತು ಪಕ್ಕಗಳು, ಹಿಂಭಾಗದ ಈ ಎಲ್ಲಾ ಕಡೆಗಳಲ್ಲಿಯೂ ಜವವನ್ನು ಪ್ರಸರಿಸಿ ಯಾವನು ಯುದ್ಧ ಮಾಡುತ್ತಾನೆಯೋ, ಮತ್ತು ಯುದ್ಧದಲ್ಲಿಯೇ ಮತ್ತೊಬ್ಬನಿಂದ ಹತನಾಗಿ ಕೆಳಗೆ ಬೀಳುತ್ತಾನೆಯೋ ಅವನು ಸ್ವರ್ಗದಿಂದ ಹಿಂದೆ ತಿರುವುದೇ ಇಲ್ಲ. ಯುದ್ಧದಲ್ಲಿ ಪ್ರವೇಶಿಸಿದ ಯಾವನ ದೇಹವು ಶತ್ರುಗಳ ಪ್ರಹಾರದಿಂದ ನಾನಾವಿಧವಾದ ಚಿಹ್ನೆಯಿಂದ ಕೂಡಿರುತ್ತದೆಯೋ ಅವನು ಯೂಪವಿಲ್ಲದಿರುವ ಅನಂತ ದಕ್ಷಿಣೆಯ ಆತ್ಮಯಜ್ಞವನ್ನೇ ಹೊಂದುತ್ತಾನೆ.

೨೯-೩೨. ಇಂತಹ ವೀರನು ಮಡಿದಲ್ಲಿ ಬಂಧುಗಳಿಗೆ ಆಶೌಚವಿಲ್ಲ. ಶ್ರಾದ್ಧ, ಅಗ್ನಿಸಂಸ್ಕಾರ, ಉದಕದಾನಕ್ರಿಯಾ ಇವುಗಳೂ ಇರುವುದಿಲ್ಲ. ಇವನಿಗೆ ಇವೆಲ್ಲವೂ ಉಪಯೋಗಕರವೇ ಅಲ್ಲ. ಬಂಧುಗಳು ಮಾತ್ರ ಇವನ್ನು ತಮ್ಮ ಋಣಪರಿಹಾರಕ್ಕಾಗಿ ಆತ್ಮತೃಪ್ತಿಗಾಗಿ ಮಾಡುತ್ತಾರೆ. ಯುದ್ಧಭೂಮಿಯಲ್ಲಿ ಯಾವನ ದೇಹವು, ಬಾಣ, ಶಕ್ತಿ, ಯಷ್ಟಿ, ತೋಮರ ಮುಂತಾದ ಆಯುಧಗಳಿಂದ

ಕ್ರಿಯಂತೇ ತಸ್ಯ ಧರ್ಮಜ್ಞಾ ಅನ್ಯಥಾರ್ಥಂ ಸ್ವಬಂಧುಭಿಃ ।
ಯಸ್ಯ ಚಿಹ್ನೀಕೃತಂ ಗಾತ್ರಂ ಶರಶಕ್ತ್ಯೃಷ್ಟಿತೋಮರೈಃ ॥ ೩೧ ॥

ದೇವಕನ್ಯಾಸ್ತು ತಂ ವೀರಂ ರಮಯಂತೇ ರಮಂತಿ ಚ ।
ವರಾಪ್ಸರಃಸಹಸ್ರಾಣಿ ಶೂರಮಾಯೋಧನೇ ಹತಂ ॥ ೩೨ ॥

ತ್ವರಿತಾಸ್ತ್ವಭಿಧಾವಂತಿ ಮಮ ಭರ್ತಾ ಮಮೇತಿ ಚ ।
ಹತಸ್ಯಾಭಿಮುಖಸ್ಯಾಜೌ ಪತಿತಸ್ಯಾನಿವರ್ತಿನಃ ॥ ೩೩ ॥

ಹ್ರಿಯತೇ ಯತ್ಪರೈರ್ದ್ರವ್ಯಂ ನರಮೇಧಫಲಂ ತು ತತ್ ।
ಶಕ್ಯಂತ್ವಿಹ ಸಮೃದ್ಧೈಸ್ತು ಯಷ್ಟುಂ ಕ್ರತುಶತೈರ್ನರೈಃ ॥ ೩೪ ॥

ಆತ್ಮದೇಹಂ ತು ಸಂಗ್ರಾಮೇ ತ್ಯಕ್ತುಂ ವಿಪ್ರಾಃ ಸುದುಷ್ಕರಂ ।
ಯಾಂ ಯಜ್ಞಸಂಘೈಸ್ತಪಸಾ ಚ ವಿಪ್ರಾಃ
ಸ್ವರ್ಗೈಷಿಣಃ ಸತ್ವಚಯೈಃ ಪ್ರಯಾಂತಿ ।
ಕ್ಷಣೇನ ತಾಮೇವ ಗತಿಂ ಪ್ರಯಾಂತಿ
ಮಹಾಹವೇ ಸ್ವಾಂ ತನುಮುತ್ಸೃಜಂತಃ ॥ ೩೫ ॥

ಚಿಹ್ನಿತವಾಗುತ್ತದೆಯೋ ಅಂತಹ ವೀರನನ್ನು ದೇವಕನ್ಯೆಯರು ಸಂತೋಷ ಪಡಿಸುತ್ತಾರೆ. ತಾವೂ ಸಂತೋಷಹೊಂದುತ್ತಾರೆ. ಯುದ್ಧದಲ್ಲಿ ಹತನಾದ ಇಂತಹ ಶೂರನನ್ನು ಪ್ರಶಸ್ತರಾದ ಸಾವಿರಾರು ಅಪ್ಸರೆಯರು, ಇವನು ನನ್ನ ಪತಿ, ನನ್ನ ಪತಿ ಎಂದು ತ್ವರೆಯಿಂದ ಓಡಿಬರುತ್ತಾರೆ

೩೩–೩೬. ಯುದ್ಧದಲ್ಲಿ ಅಭಿಮುಖನಾಗಿ ಬಂದು ಯಾವನು ಹತನಾಗುತ್ತಾನೆಯೋ ಅಂತಹವನ ದ್ರವ್ಯವು ಶತ್ರುಗಳಿಂದ ಅಪಹರಿಸಲ್ಪಟ್ಟಲ್ಲಿ ಅದು ನರಮೇಧಕ್ಕೆ ಸಮಾನವಾದ ಫಲವಾಗುತ್ತದೆ. ಮನುಷ್ಯರಾದವರು ಅರ್ಥಸಮೃದ್ಧಿಯಿಂದ ಕೂಡಿದ ನೂರಾರು ಯಾಗವನ್ನು ಮಾಡಲು ಸಮರ್ಥರಾಗಬಹುದು. ಆದರೆ ಯುದ್ಧದಲ್ಲಿ ತನ್ನ ದೇಹವನ್ನೇ ತ್ಯಜಿಸುವುದು ಬಹಳ ದುಷ್ಕರ. ಸ್ವರ್ಗಾಕಾಂಕ್ಷಿಗಳಾದ ಬ್ರಾಹ್ಮಣರು ಸತ್ವಗುಣಸಮೃದ್ಧಿಯಿಂದ ಯಜ್ಞಗಳನ್ನೂ ತಪಸ್ಸನ್ನೂ ಮಾಡಿ ಯಾವಗತಿಯನ್ನು ಹೊಂದುತ್ತಾರೆಯೋ ಅಂತಹಗತಿಯನ್ನು ಯುದ್ಧದಲ್ಲಿ ದೇಹವನ್ನು ಬಿಟ್ಟವರು

ಸರ್ವೇ ಚ ದೇವಾಃ ಸಹಷಡ್ಭಿರಂಗೈಃ
ಸಾಂಖ್ಯಂ ಚ ಯೋಗಂ ಚವನೆ ಚ ವಾಸಃ ।
ಏತಾನ್ ಗುಣನೇಕ ಏವಾತಿಶೇತಾಂ
ಸಂಗ್ರಾಮಮಧ್ಯಾವಮ್ನ್ಸ್ವತನುಂ ತ್ಯಜೇದ್ಯಃ ॥ ೩೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಶೂರಗುಣವರ್ಣನೋನಾಮ
ಸಪ್ತಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕ್ಷಣಮಾತ್ರದಲ್ಲಿ ಹೊಂದುತ್ತಾರೆ. ಪೂಜೆಯಿಂದ ಪ್ರಸನ್ನರಾದ ದೇವತೆಗಳು ಷಡಂಗವೇದಗಳು, ಸಾಂಖ್ಯಯೋಗಾದಿಶಾಸ್ತ್ರಗಳು, ವನವಾಸ ಇವು ಉತ್ತಮ ಗತಿಗಳಿಗೆ ಸಾಧಕಗಳಾಗುತ್ತವೆ. ಯುದ್ಧದಲ್ಲಿ ದೇಹವನ್ನು ಬಿಟ್ಟವನು ತನ್ನ ದೇಹತ್ಯಾಗವೆಂಬ ಇಂತಹ, ಸಾಧನಗಳೆಲ್ಲಕ್ಕಿಂತಲೂ ಉತ್ತಮವಾದ ಉಪಾಯದಿಂದ ಒಳ್ಳೆಯ ಗತಿಯನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಯ ಶೂರಗುಣವರ್ಣನವೆಂಬ
ಇನ್ನೂರ ಅರವತ್ತೇಳನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಅಹಿಂಸಾ ಸರ್ವಧರ್ಮಾಣಾಂ ಧರ್ಮಃ ಪರ ಇಹೋಚ್ಯತೇ ।
ಅಹಿಂಸಯಾ ತದಾಪ್ನೋತಿ ಯತ್ಕಿಂಚಿನ್ಮನಸೇಪ್ಸಿತಂ ॥ ೧ ॥

ಸ್ತ್ರೀಹಿಂಸಾ ಧನಹಿಂಸಾ ಚ ಪ್ರಾಣಿಹಿಂಸಾ ತಥೈವ ಚ ।
ತ್ರಿವಿಧಾಂ ವರ್ಜಯನ್ ಹಿಂಸಾಂ ಬ್ರಹ್ಮಲೋಕಂ ಪ್ರಪದ್ಯತೇ ॥ ೨ ॥

ದಾಕ್ಷಿಣ್ಯಂ ರೂಪಲಾವಣ್ಯಂ ಸೌಭಾಗ್ಯಮಪಿ ಚೋತ್ತಮಂ ।
ಧನಂ ಧಾನ್ಯಮಥಾರೋಗ್ಯಂ ಧರ್ಮಂ ವಿದ್ಯಾಂ ತಥಾ ಸ್ತ್ರಿಯಃ ॥ ೩ ॥

ಇನ್ನೂರ ಅರವತ್ತೆಂಟನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ಎಲ್ಲಾ ಧರ್ಮಗಳಲ್ಲಿಯೂ ಅಹಿಂಸಾ ಎಂಬ ಧರ್ಮವು ಉತ್ತಮವೆಂದು ಹೇಳಲ್ಪಟ್ಟಿದೆ. ಅಹಿಂಸಾ ಧರ್ಮದಿಂದ ಮನಸ್ಸಿಗೆ ಇಷ್ಟವಾದುದೆಲ್ಲವನ್ನೂ ಹೊಂದುತ್ತಾನೆ. ಸ್ತ್ರೀಹಿಂಸಾ, ಧನಹಿಂಸಾ, ಪ್ರಾಣಿಹಿಂಸಾ ಎಂಬ ಮೂರು ವಿಧವಾದ ಹಿಂಸೆಯನ್ನು ತ್ಯಜಿಸಿದವನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಇದು ಮಾತ್ರವೇ ಅಲ್ಲದೆ, ಇಹಲೋಕದಲ್ಲಿ ಆದರಿಸಲ್ಪಡುವ ದಾಕ್ಷಿಣ್ಯ, ರೂಪ, ಲಾವಣ್ಯ, ಉತ್ತಮವಾದ ಸೌಭಾಗ್ಯ, ಧನ, ಧಾನ್ಯ, ಆರೋಗ್ಯ, ಧರ್ಮ,

ರಾಜ್ಯಂ ಭೋಗಾಂಶ್ಚ ವಿಪುಲಾನ್ ಬ್ರಾಹ್ಮಣ್ಯಮಪಿ ಚೇಪ್ಸಿತಂ ।
ಅಷ್ಟೌ ಚೈವ ಗುಣಾನ್ಪಾಪಿ ದೀರ್ಘಂ ಜೀವಿತಮೇವ ಚ ॥ ೪ ॥

ಅಹಿಂಸಕಾಃ ಪ್ರಪದ್ಯಂತೇ ಯದನ್ಯದಪಿ ದುರ್ಲಭಂ ।
ಅಹಿಂಸಕಸ್ತಥಾ ಜಂತುರ್ಮಾಂಸವರ್ಜಯಿತಾ ಭವೇತ್ ॥ ೫ ॥

ಮಾಸಿಮಾಸ್ಯಶ್ವಮೇಧೇನ ಯೋ ಯಜೇತ ಶತಂ ಸಮಾಃ ।
ಮಾಂಸಾನಿ ನ ಚ ಖಾದೇದ್ಯಃ ಸಮಂ ವಾಸ್ಯಾನ್ನವಾಸಮಂ ॥ ೬ ॥

ಸದಾ ಯಜತಿ ಸತ್ರೇಣ ಸದಾ ದಾನಂ ಪ್ರಯಚ್ಛತಿ ।
ಸದಾ ತಪಸ್ವೀ ಭವತಿ ಮಧುಮಾಂಸಸ್ಯ ವರ್ಜನಾತ್ ॥ ೭ ॥

ಸರ್ವವೇದಾ ನ ತತ್ಕುರ್ಯುಃ ಸರ್ವದಾನಾನಿ ಚೈವ ಹಿ ।
ಯೋ ಮಾಂಸರಸಮಾಸ್ವಾದ್ಯ ಸರ್ವಮಾಂಸಾನಿ ವರ್ಜಯೇತ್ ॥ ೮ ॥

ವಿದ್ಯೆ, ಸ್ತ್ರೀಯರು, ರಾಜ್ಯ, ಭೋಗಸಾಧನಗಳು, ಬ್ರಹ್ಮತೇಜಸ್ಸು, ಎಂಟು ವಿಧವಾದ ಆತ್ಮಗುಣಗಳು ದೀರ್ಘವಾದ ಆಯುಸ್ಸು ಇವನ್ನೂ ಹೊಂದುತ್ತಾನೆ.

೫–೮. ಹಿಂಸಕ ಸ್ವಭಾವವಿಲ್ಲದವರು ದುರ್ಲಭವಾದ ಇಷ್ಟವನ್ನೂ ಹೊಂದುತ್ತಾರೆ. ಹಾಗೆಯೇ ಹಿಂಸಾಸ್ವಭಾವವಿಲ್ಲದವರು ಮಾಂಸವನ್ನು ತ್ಯಜಿಸುತ್ತಾರೆ. ನೂರುವರ್ಷಗಳವರಿಗೂ ಪ್ರತಿಮಾಸದಲ್ಲಿಯೂ, ಅಶ್ವಮೇಧಮಾಡಿದವನೂ ಸಹ ಮಾಂಸವನ್ನು ವರ್ಜಿಸಿರುವವನೊಡನೆ ಸಮನಾಗುವನೋ ಇಲ್ಲವೋ ಹೇಳಲಾಗುವುದಿಲ್ಲ. ಮಧುಮಾಂಸಾದಿಗಳನ್ನು ತ್ಯಜಿಸಿದವನು ಯಾವಾಗಲೂ ಸತ್ರಯಾಗ ಮಾಡುವವನಂತೆಯೂ, ಯಾವಾಗಲೂ ದಾನಮಾಡುವವನಂತೆಯೂ, ಯಾವಾಗಲೂ ತಪಸ್ಸುಮಾಡುವವನಂತೆಯೂ ಪ್ರಭಾವಶಾಲಿಯಾಗುತ್ತಾನೆ. ಯಾವನು ಒಂದಾವರ್ತಿ ಮಾಂಸದ ರುಚಿಯನ್ನು ಅನುಭವಿಸಿಯೂ, ಸರ್ವಮಾಂಸವನ್ನೂ ವರ್ಜಿಸುತ್ತಾನೆಯೋ ಅವನಿಗೆ ಅದರಿಂದ ಉಂಟಾಗುವ ಅತಿಶಯವು ಸರ್ವವೇದಗಳಿಂದಲೂ, ಸರ್ವದಾನಗಳಿಂದಲೂ ಸಹ ಉಂಟಾಗುವುದಿಲ್ಲ. ಏತಕ್ಕೆಂದರೆ ಮಾಂಸದ ರಸವನ್ನು ತಿಳಿದವನಿಗೆ ಅದರ ಪರಿತ್ಯಾಗವು ಬಹಳ ದುಷ್ಕರ.

ದುಷ್ಕರಂ ಹಿ ರಸಜ್ಞೇನ ಮಾಂಸಸ್ಯ ಪರಿವರ್ಜನಂ ।
ಚತುರ್ವ್ರತಮಿದಂ ಶ್ರೇಷ್ಠಂ ಪ್ರಾಣಿನಾಂ ಮೃತ್ಯುಭೀರುಣಾಂ ॥ ೯ ॥

ತದಾ ಭವತಿ ಲೋಕೇಽಸ್ಮಿನ್ ಪ್ರಾಣಿನಾಂ ಜೀವಿತೈಷಿಣಾಂ ।
ವಿಶ್ವಾಸ್ಯಶ್ಚೋಪಗಮ್ಯಶ್ಚ ನ ಹಿ ಹಿಂಸಾರುಚಿರ್ಯಥಾ ॥ ೧೦ ॥

ಪ್ರಾಣಾ ಯಥಾತ್ಮನೋಽಭೀಷ್ಟಾ ಭೂತಾನಾಮಪಿ ತೇ ತಥಾ ।
ಆತ್ಮೌಪಮ್ಯೇನ ಗಂತವ್ಯಮಾತ್ಮವಿದ್ಭಿರ್ಮಹಾತ್ಮಭಿಃ ॥ ೧೧ ॥

ಅಹಿಂಸಾ ಪರಮೋ ಧರ್ಮಃ ಸತ್ಯಮೇವ ದ್ವಿಜೋತ್ತಮಾಃ ।
ಲೋಭಾದ್ವಾ ಮೋಹತೋ ವಾಪಿ ಯೋ ಮಾಂಸಾನ್ಯತ್ತಿ ಮಾನವಃ ॥ ೧೨ ॥

ನಿರ್ಘೃಣಃ ಸ ತು ಮಂತವ್ಯಃ ಸರ್ವಧರ್ಮವಿವರ್ಜಿತಃ ।
ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ॥ ೧೩ ॥

ಉದ್ವಿಗ್ನವಾಸೇ ವಸತಿ ಯತ್ರಯತ್ರಾಭಿಜಾಯತೇ ।
ಧನೇನ ಕ್ರಯಿಕೋ ಹಂತಿ ಉಪಭೋಗೇನ ಖಾದಕಃ ॥ ೧೪ ॥

೯-೧೩. ಮೃತ್ಯುವಿನಿಂದ ಭಯಹೊಂದಿರುವ ಪ್ರಾಣಿಗಳಿಗೆಲ್ಲಾ ಈ ನಾಲ್ಕು ವ್ರತಗಳು ಬಹಳ ಶ್ರೇಷ್ಠ. ಇವನ್ನು ಹೊಂದಿದ್ದೇ ಆದರೆ ಆಗ ಜೀವಿತದಲ್ಲಿ ಆಸೆಯುಳ್ಳ ಪ್ರಾಣಿಗಳಿಗೆ ವಿಶ್ವಸಾರ್ಹನಾಗಿಯೂ, ಸಮೀಪ ಹೊಂದಲು ಅರ್ಹನಾಗಿಯೂ, ಹಿಂಸಾರುಚಿ ಇಲ್ಲದವನೂ ಆಗುತ್ತಾನೆ. ತನ್ನ ಪ್ರಾಣಗಳು ತನಗೆ ಇಷ್ಟವಾಗಿರುವಂತೆ ಎಲ್ಲಾ ಪ್ರಾಣಿಗಳಿಗೂ ಪ್ರಾಣಗಳು ಇಷ್ಟವಾಗಿರುತ್ತವೆ. ಆದ್ದರಿಂದ ಎಲ್ಲರಲ್ಲಿಯೂ ತನ್ನ ಸಾಮ್ಯಭಾವನೆಯು ಮಹಾತ್ಮರಿಗೆ ಉಚಿತ, ಆದ್ದರಿಂದ ವಿಶ್ವಾಸ್ಯತೆ, ಅಭಿಗಮ್ಯತೆ, ಅಹಿಂಸಕತ್ವ ಎಲ್ಲರಲ್ಲಿಯೂ ಆತ್ಮಸಾಮ್ಯಭಾವನೆ ಈ ನಾಲ್ಕನ್ನೂ ವ್ರತದಂತೆ ಆಚರಿಸಬೇಕು. ಅಹಿಂಸಾ, ಸತ್ಯ ಇವು ಮುಖ್ಯವಾದ ಧರ್ಮಗಳು. ಯಾವ ಮನುಷ್ಯನು ಆಸೆಯಿಂದಾಗಲಿ, ಅಜ್ಞಾನದಿಂದಾಗಲಿ ಮಾಂಸವನ್ನು ಭಕ್ಷಿಸುತ್ತಾನೆಯೋ ಅವನು ನಿರ್ಘೃಣನೆಂದೂ, ಸರ್ವಧರ್ಮಬಾಹ್ಯನೆಂದೂ ತಿಳಿಯಬೇಕು. ತನ್ನ ಮಾಂಸವನ್ನು ಪರರ ಮಾಂಸದಿಂದ ಯಾವನು ಪುಷ್ಟಿಗೊಳಿಸಲು ಆಶಿಸುತ್ತಾನೆಯೋ ಅವನು ಮುಂದೆ ಯಾವ ಯಾವ ಜನ್ಮದಲ್ಲಿ ಹುಟ್ಟಿದರೂ ದುಃಖಾಕರದಲ್ಲಿಯೇ ನಿಲ್ಲುತ್ತಾನೆ.

೧೪-೧೮. ಪ್ರಾಣಿವಧವು ಮೂರು ವಿಧವಾಗಿರುತ್ತದೆ. ಆಹಾರಕ್ಕಾಗಿ ಇತರರಿಗೆ ಮಾರುವವನು ಧನದಿಂದ ಮಾಂಸವನ್ನು ಕೊಂಡುಕೊಂಡಲ್ಲಿ ತನ್ನ ಧನ

ಘಾತಕೋ ವಧಬಂಧಾಭ್ಯಾಮಿತ್ಯೇಷ ತ್ರಿವಿಧೋ ವಧಃ ।
ಭಕ್ಷಯಿತ್ವಾ ತು ಯೋ ಮಾಂಸಂ ಪಶ್ಚಾದಪಿ ನಿವರ್ತತೇ ॥ ೧೫ ॥

ತಸ್ಯಾಪಿ ಸುಮಹಾನ್ ಧರ್ಮೋ ಯಃ ಪಾಪಾದ್ವಿನಿವರ್ತತೇ ।
ರಾಕ್ಷಸೈರ್ವಾ ಪಿಶಾಚೈರ್ವಾ ಡಾಕಿನೀಭಿರ್ನಿಶಾಚರೈಃ ॥ ೧೬ ॥

ತಥಾನ್ಯೈರ್ನಾಭಿಭೂಯೇತ ಯೋ ಮಾಂಸಂ ಪರಿವರ್ಜಯೇತ್ ।
ಖೇ ಚರಾಶ್ಚಾವಗಚ್ಛಂತಿ ಜೀವತೋಽಸ್ಯ ಮೃತಸ್ಯ ವಾ ॥ ೧೭ ॥

ಪೃಷ್ಠತೋ ದ್ವಿಜಶಾರ್ದೂಲ ಯೋ ಮಾಂಸಂ ಪರಿವರ್ಜಯೇತ್ ।
ತಥಾನ್ಯೈರ್ನಾಭಿಭೂಯೇತ ಯೋ ಮಾಂಸಂ ಪರಿವರ್ಜಯೇತ್ ॥ ೧೮ ॥

ಚಿತಾಧೂಮಸ್ಯ ಗಂಧೇಽಪಿ ಮೃತಸ್ಯಾಪಿ ನಿಶಾಚರಾಃ ।
ಕ್ರವ್ಯಾದಾ ವಿಪ್ರಣಶ್ಯಂತಿ ಯೋ ಮಾಂಸಂ ಪರಿವರ್ಜಯೇತ್ ॥ ೧೯ ॥

ಶಸ್ತ್ರಾಗ್ನಿನೃಪಚೋರೇಭ್ಯೋ ಸಲಿಲಾಚ್ಚ ತಥಾ ವಿಷಾತ್ ।
ಭಯಂ ನ ವಿದ್ಯತೇ ತಸ್ಯ ತಥಾನ್ಯದಪಿ ಕಿಂಚನ ॥ ೨೦ ॥

ದಿಂದ ವಧಕ್ಕೆ ಕಾರಣನಾಗುತ್ತಾನೆ. ಅಂದರೆ ತನಗೆ ಧನಲಾಭವೆಂಬ ಫಲಕ್ಕಾಗಿ ವಧಕ್ಕೆ ಅವಕಾಶಕೊಟ್ಟಂತಾಗುತ್ತದೆಯಾದ್ದರಿಂದ ಇದು ಧನಕ್ಕಾಗಿ ಮಾಡುವ ವಧ. ಮಾಂಸವನ್ನು ತಿನ್ನತಕ್ಕವನು ತನ್ನ ಉಪಭೋಗವೆಂಬ ಫಲಕ್ಕಾಗಿ ವಧದಲ್ಲಿ ಕಾರಣನಾಗುತ್ತಾನೆ. ವಧ ಮತ್ತು ಬಂಧಾದಿಗಳಿಂದ ಕೊಲ್ಲತಕ್ಕವನು ಪ್ರತ್ಯಕ್ಷವಾಗಿಯೇ ವಧಕ್ಕೆ ಕಾರಣನಾಗುತ್ತಾನೆ. ಈ ಮೂವರೂ ಘಾತಕರೇ ಆಗುತ್ತಾರೆ. ಯಾವನು ಮಾಂಸವನ್ನು ಉಪಭೋಗಿಸುತ್ತಿದ್ದು ಅನಂತರ ನಿವೃತ್ತಿಹೊಂದುತ್ತಾನೆಯೋ ಅವನೂ ಸಹ ಪಾಪಕಾರ್ಯದಿಂದ ನಿವೃತ್ತನಾಗುತ್ತಾನೆಯಾದ್ದರಿಂದ ಅವನಿಗೆ ದೊಡ್ಡದೊಂದು ಧರ್ಮಲಾಭವಾದಂತೆಯೇ. ಯಾವನು ಮಾಂಸವನ್ನು ವರ್ಜಿಸುತ್ತಾನೆಯೋ ಅವನು ರಾಕ್ಷಸರ ಮತ್ತು ಪಿಶಾಚಿಗಳ ಡಾಕಿನ್ಯಾದಿ ನಿಶಾಚರರ ಮತ್ತು ಇತರರ ಪರಿಭವಕ್ಕೆ ವಿಷಯನಾಗುವುದಿಲ್ಲ. ಮತ್ತು ಬದುಕಿರುವಾಗಲೂ ಅಥವಾ ಸತ್ತಮೇಲೆಯೂ ಸಹ ಖೇಚರಪ್ರಾಣಿಗಳೂ ಇವನ ಹಿಂದೆಯೇ ಇದ್ದು ಈ ಧರ್ಮವನ್ನು ಗಮನಿಸುತ್ತವೆ. ಹಾಗೆಯೇ ಇತರರಿಂದಲೂ ಇವನು ತಿರಸ್ಕೃತನಾಗುವುದಿಲ್ಲ.

೧೯–೨೩. ಹೀಗೆ ಮಾಂಸವರ್ಜನವ್ರತದಿಂದ ಶುದ್ಧನಾದವನು ಮೃತಿಹೊಂದಿದಾಗಲೂ ಚಿತಿಯ ಮೇಲಿರುವ ಅವನ ದೇಹದ ಮಾಂಸದಲ್ಲಿ ಆಶೆಯಿಂದ ಬಂದ

ಸ ತಾನ್ ಲೋಕಾನ್ಪ್ರಪದ್ಯೇತ ಯೇ ಲೋಕಾ ಮಾಂಸವರ್ಜಿನಾಂ ।
ಸ ದಂಡೀ ಸ ಚ ವಿಕ್ರಾಂತಃ ಸ ಯಜ್ವಾ ಸ ತಪಸ್ಯತಿ ॥ ೨೧ ॥

ಸ ಸರ್ವಲೋಕಾನಾಪ್ನೋತಿ ಯೋ ಮಾಂಸಂ ಪರಿವರ್ಜಯೇತ್ ।
ನ ತಸ್ಯ ದುರ್ಲಭಂ ಕಿಂಚಿತ್ತಥಾ ಲೋಕದ್ವಯೇ ಭವೇತ್ ॥ ೨೨ ॥

ವರಶಾಪಸಮರ್ಥಶ್ಚ ತಥಾ ಸ್ಯಾನ್ಮಾಂಸವರ್ಜಕಃ ।
ವಿಮಾನಮಾರುಹ್ಯ ಶಶಾಂಕತುಲ್ಯಂ
ದೇವಾಂಗನಾಭಿಃ ಸಹಿತೋ ನೃವೀರಃ ।
ಸುಖಾನಿ ಭುಕ್ತ್ವಾ ಸುಚಿರಂ ಹಿ ನಾಕೇ
ಲೋಕಾನವಾಪ್ನೋತಿ ಪಿತಾಮಹಸ್ಯ ॥ ೨೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಹಿಂಸಾದೋಷವರ್ಣನೋ
ನಾಮಾಷ್ಟಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

ಪಿಶಾಚರರೂ ಸಹ ಧೂಮಗಂಧಮಾತ್ರದಿಂದ ನಾಶಹೊಂದುತ್ತಾರೆ ಅಂತಹವನಿಗೆ ಶಸ್ತ್ರ, ಅಗ್ನಿ, ರಾಜ, ಚೋರ ಇವರಿಂದಲೂ, ನೀರಿನಿಂದಲೂ, ವಿಷದಿಂದಲೂ ಇತರ ವಿಧದಿಂದಲೂ ಯಾವ ಭಯವೂ ಉಂಟಾಗುವುದಿಲ್ಲ. ಮಾಂಸತ್ಯಾಗದಿಂದ ಶುದ್ಧರಾದವರ ಲೋಕವನ್ನೇ ಅವನು ಹೊಂದುತ್ತಾನೆ ಅವನೇ ಸನ್ಯಾಸಿ, ಅವನೇ ಶೂರ, ಅವನೇ ಯಾಜಕ, ಅವನೇ ತಪಸ್ವೀ, ಅವನೇ ಮಾಂಸತ್ಯಾಗದಿಂದ ಸರ್ವ ಲೋಕಗಳನ್ನೂ ಹೊಂದತಕ್ಕವನು. ಅವನಿಗೆ ಲೋಕದ್ವಯದಲ್ಲಿ ಯಾವುದೂ ದುರ್ಲಭವಾಗುವುದಿಲ್ಲ. ವರ ಮತ್ತು ಶಾಪಪ್ರದಾನಸಮರ್ಥನೂ ಆಗುತ್ತಾನೆ ಅಪ್ಸರೆಯರೊಡನೆ ಚಂದ್ರನಂತೆ ಶುಭ್ರವಾಗಿರುವ ವಿಮಾನವನ್ನು ಹತ್ತಿ ಅಂತಹ ವೀರನು ಸ್ವರ್ಗದಲ್ಲಿಯೂ ಬಹುಕಾಲ ಸುಖಗಳನ್ನು ಅನುಭವಿಸಿ ಬ್ರಹ್ಮಲೋಕವನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಹಂಸಗೀತೆಯ ಹಿಂಸಾದೋಷವರ್ಣನವೆಂಬ
ಇನ್ನೂರ ಅರವತ್ತೆಂಟನೆಯ ಅಧ್ಯಾಯವು ಮುಗಿದಿದೆ

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಕ್ಷಮಾ ಧರ್ಮಃ ಕ್ಷಮಾ ಸತ್ಯಂ ಕ್ಷಮಾ ಶೌಚಂ ಕ್ಷಮಾ ಬಲಂ ।
ಕ್ಷಮಾ ಯಜ್ಞಾಃ ಕ್ಷಮಾ ದಾನಂ ಕ್ಷಮಾ ಚ ಪರಮಂ ತಪಃ ॥ ೧ ॥

ಆಕೃಷ್ಟಃ ತಾಡಿತೋ ವಾಪಿ ಪರೇಷಾಂ ಯಸ್ತಿತಿಕ್ಷತೇ ।
ತಸ್ಮಾತ್ಸುಕೃತಮಾದತ್ತೇ ದುಷ್ಕೃತಂ ಚ ಪ್ರಯಚ್ಛತಿ ॥ ೨ ॥

ಯಃ ಕ್ಷಮಾವಾನ್ ಸ ಧರ್ಮಾತ್ಮಾ ಕ್ಷಮಯೈವ ದ್ವಿಜೋತ್ತಮಾಃ ।
ಆಕ್ರೋಷ್ಟಾರಂ ನಿರ್ದಹತಿ ಸ್ವರ್ಗಲೋಕಂ ಚ ಗಚ್ಛತಿ ॥ ೩ ॥

ಏಕಃ ಕ್ಷಮಾವತಾಂ ದೋಷೋ ದ್ವಿತೀಯೋ ನೋಪಲಭ್ಯತೇ ।
ಯದೇನಂ ಕ್ಷಮಯಾ ಯುಕ್ತಂ ತ್ವಶಕ್ತಂ ಮನ್ಯತೇ ಜನಃ ॥ ೪ ॥

ಇನ್ನೂರ ಅರವತ್ತೊಂಭತ್ತನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ:—ಕ್ಷಮೆಯೇ ಧರ್ಮ, ಕ್ಷಮೆಯೇ ಸತ್ಯ, ಕ್ಷಮೆಯೇ ಶೌಚ, ಕ್ಷಮೆಯೇ ಬಲ, ಕ್ಷಮೆಯೇ ಯಜ್ಞಗಳು, ಕ್ಷಮೆಯೇ ದಾನ, ಕ್ಷಮೆಯೇ ಉತ್ತಮ ತಪಸ್ಸು. ಯಾವನು ಮತ್ತೊಬ್ಬನಿಂದ ಸೆಳೆಯಲ್ಪಟ್ಟರೂ, ಹೊಡೆಯಲ್ಪಟ್ಟರೂ ಸಹ ಸಹಿಸಿಕೊಂಡು ಸುಮ್ಮನಿರುತ್ತಾನೆಯೋ ಅವನು ಹಿಂಸಕನ ಪುಣ್ಯವನ್ನೆಲ್ಲಾ ಆಕರ್ಷಿಸುತ್ತಾನೆ. ತನ್ನ ಪಾಪವನ್ನು ಅವನಿಗೆ ಕೊಡುತ್ತಾನೆ. ಯಾವನು ಕ್ಷಮಾಶಾಲಿಯೋ, ಅವನೇ ಧರ್ಮಾತ್ಮನು. ಕ್ಷಮೆಯಿಂದಲೇ ಆಕ್ರೋಶಿಸುವ ಹಿಂಸಕನನ್ನು ದಹಿಸುತ್ತಾನೆ ತಾನೂ ಸ್ವರ್ಗ ಹೊಂದುತ್ತಾನೆ. ಕ್ಷಮೆಯುಳ್ಳವನಿಗೆ ಒಂದೇ ಒಂದು ದೋಷ ಮತ್ತೊಂದಿಲ್ಲ ಸಾಮಾನ್ಯ ಜನರು ಇವನನ್ನು ಅಶಕ್ತನೆಂದು ತಿಳಿಯುತ್ತಾರೆ.

ವಿಜ್ಞೇಯಃ ಸೋಽಪಿ ದೋಷೋಽಸ್ಯ ದ್ವಿಜೇಂದ್ರಾಃ ಸುಮಹಾನ್ ಗುಣಃ ।
ತಸ್ಮಾತ್ಪುಣ್ಯಸಮಾದಾನಾತ್ ದುಷ್ಕೃತಸ್ಯ ಸಮರ್ಪಣಾತ್ ॥ ೫ ॥

ಮೃತಃ ಕ್ಷಮಾವಾನ್ಪುರುಷೋ ಬ್ರಹ್ಮಲೋಕಂ ಪ್ರಪದ್ಯತೇ ।
ವಿಮಾನೇನಾರ್ಕವರ್ಣೇನ ಹಂಸಯುಕ್ತೇನ ಭಾಸ್ವತಾ ॥ ೬ ॥

ಪ್ರಾಪ್ನೋತಿ ಕಾಮಾನ್ದಿವಿಚೇಹ ಮುಖ್ಯಾನ್
ಸಂವತ್ಸರಾಣಾಂ ನಿಯುತಾನಿ ವಿಪ್ರಾಃ ।
ಸರ್ವಂಸಹಃ ಕ್ಷಾಂತಿಪರೋ ಮನುಷ್ಯಸ್ತ್ವತಃ
ಕ್ಷಮಾವಾನ್ ಸತತಂ ನರಃ ಸ್ಯಾತ್ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಕ್ಷಮಾಗುಣವರ್ಣನೋ ನಾಮೈಕೋನಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

೫-೭. ಎಲೈ ಬ್ರಾಹ್ಮಣೋತ್ತಮರೇ, ಕ್ಷಮಾಶೀಲನ ಈ ದೋಷವೂ ಸಹ ಮಹಾಗುಣವೆಂದೇ ತಿಳಿಯಬೇಕು. ಏತಕ್ಕೆಂದರೆ ಇವನು ತನ್ನ ಪಾಪವನ್ನು ಕೊಟ್ಟು ಅವನಿಂದ ಪುಣ್ಯವನ್ನು ತೆಗೆದುಕೊಳ್ಳುತ್ತಾನೆ. ಇಂತಹ ಕ್ಷಮಾಶಾಲಿಯು ಮೃತನಾಗಿ ಬ್ರಹ್ಮಲೋಕವನ್ನೂ ಹೊಂದುತ್ತಾನೆ. ಇವನ ಪ್ರಯಾಣಕ್ಕೆ ಸೂರ್ಯನಂತೆ ಜ್ವಲಿಸುವ ಹಂಸಗಳಿಂದ ಕೂಡಿದ ವಿಮಾನವು ಲಭಿಸುತ್ತದೆ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಸಹ ಅನೇಕ ವರ್ಷಸಹಸ್ರಪರ್ಯಂತವೂ ಎಲ್ಲಾ ಭೋಗಗಳನ್ನೂ ಅನುಭವಿಸುತ್ತಾನೆ. ಕ್ಷಮೆಯಲ್ಲಿ ನಿರತನಾದವನು ಎಲ್ಲವನ್ನೂ ಸಹಿಸುತ್ತಾನೆ. ಕಾಮಕ್ರೋಧಪರಾಧೀನನಾಗುವುದಿಲ್ಲ. ಆದ್ದರಿಂದ ಮನುಷ್ಯನು ಯಾವಾಗಲೂ ಕ್ಷಮಾಶೀಲನಾಗಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯ ಕ್ಷಮಾಗುಣವರ್ಣನವೆಂಬ ಇನ್ನೂರ ಅರವತ್ತೊಂಭತ್ತನೆಯ ಅಧ್ಯಾಯ ಮುಗಿದುದು.

|| ಓಂ ||

||¦ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಆನೃಶಂಸ್ಯಂ ಪರೋಧರ್ಮಃ ಲೋಕೇಽಸ್ಮಿನ್ ದ್ವಿಜಸತ್ತಮಾಃ ।
ತಸ್ಮಾದಾತ್ಮವತಾ ಭಾವ್ಯಂ ಕೃತಜ್ಞೇನ ನರೇಣ ತು || ೧ ||

ಬ್ರಹ್ಮಘ್ನೇ ಚ ಸುರಾಪೇ ಚ ಚೌರೇ ಭಗ್ನವ್ರತೇ ತಥಾ ।
ನಿಷ್ಕೃತಿರ್ವಿಹಿತಾ ರಾ[1]ಜನ್ ಕೃತಘ್ನೇ ನಾಸ್ತಿ ನಿಷ್ಕೃತಿಃ || ೨ ||

ನರಕಾನ್ನವಿಮುಚ್ಯಂತೇ ಯೇ ಕೃತಘ್ನಾ ನರಾಧಮಾಃ ।
ಆಭೂತಸಂಪ್ಲವಂ ಘೋರಾ ನಾತ್ರ ಕಾರ್ಯಾ ವಿಚಾರಣಾ || ೩ ||

ಇನ್ನೂರ ಎಪ್ಪತ್ತನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ಘಾತಕಸ್ವಭಾವವನ್ನು ಬಿಟ್ಟು, ಕೃತಜ್ಞತೆಯಿಂದಲೂ, ಆತ್ಮಗುಣಗಳಿಂದಲೂ ಕೂಡಿ ಇಹಲೋಕದಲ್ಲಿ ಮನುಷ್ಯನಾದವನು ಬದುಕಬೇಕು ಇದೊಂದು ಮುಖ್ಯವಾದ ಧರ್ಮ. ಬ್ರಹ್ಮಹತ್ಯೆಮಾಡಿದವನಿಗೂ, ಸುರಾಪಾನಮಾಡಿದವನಿಗೂ, ಚೋರನಿಗೂ, ವ್ರತಭಂಗ ಹೊಂದಿದವನಿಗೂ ಸಹ ಶಾಸ್ತ್ರದಲ್ಲಿ ಪ್ರಾಯಶ್ಚಿತ್ತ ಉಂಟು. ಕೃತಘ್ನನಿಗೆ ಮಾತ್ರ ಪ್ರಾಯಶ್ಚಿತ್ತವೇ ಇಲ್ಲ. ಕೃತಘ್ನರಾದ ನರಾಧಮರಿಗೆ ನರಕದಿಂದ ಮೋಕ್ಷವೇ ಇಲ್ಲ. ಪ್ರಳಯಪರ್ಯಂತವಾಗಿಯೂ ಘೋರವಾದ ನರಕಯಾತನೆಯೇ ಇರುತ್ತದೆ. ಇದರಲ್ಲಿ ಸಂದೇಹವಿಲ್ಲ.

---

1 ಇಲ್ಲಿ ರಾಜನ್ ಎಂಬ ಸಂಬುದ್ಧಿಯು ಪ್ರಕೃತಾನುಚಿತ. ಶಾಸ್ತ್ರೇ ಎಂಬ ಪಾಠವಿರಬೇಕು.

ತಿರ್ಯ್ಯಗ್ಯೋನೌ ಹಿಜಾಯಂತೇ ದುಃಖಾವಾಸಂ ವಸಂತಿ ಚ ।
ಲಭಂತೇ ನ ಕ್ವಚಿತ್ರಾಣಂ ತಥಾ ಪ್ರಾಪ್ತೇ ಭಯೇ ನರಾಃ ॥ ೪ ॥

ಏತಾವಾನೇವ ಪುರುಷಃ ಕೃತಂ ಯಸ್ಮಿನ್ನನಶ್ಯತಿ ।
ಕೃತಜ್ಞಃ ಸ್ವರ್ಗಮಾಪ್ನೋತಿ ಕೃತಘ್ನೋ ವಿಂದತೇ ಮಹತ್ ॥ ೫ ॥

ಪ್ರಭುಂ ವಾ ಯದಿ ವಾ ಭೃತ್ಯಂ ವಿಪ್ರಂ ಗುರುಮಥಾಪಿ ವಾ ।
ಆಪನ್ನಂ ನ ತ್ಯಜೇದ್ಯಸ್ತು ಸ ತು ನಾಕೇ ಮಹೀಯತೇ ॥ ೬ ॥

ಸಮೃದ್ಧಂ ಯಸ್ತು ಸಂಸೇವ್ಯ ದರಿದ್ರಂ ಯೋ ವಿಮುಂಚತಿ ।
ಸ ನೃಶಂಸತಮೋ ಲೋಕೇ ನರೋ ನರಕಭಾಜನಂ ॥ ೭ ॥

ನ ತ್ಯಜೇತ ನರೋ ಭೃತ್ಯಂ ಸ್ವಗೇಹೇ ಗತಯೌವನಂ ।
ಅಸಮರ್ಥಂ ತು ವಾರ್ಧಕ್ಯೇ ತ್ಯಕ್ತ್ವಾ ನರಕಮಾಪ್ನುಯಾತ್ ॥ ೮ ॥

ಕುಂಜರಂ ತುರಗಂ ವೃದ್ಧಂ ಧೇನುಂ ದಾಂತಮಥಾಪಿ ವಾ ।
ಯಸ್ತ್ಯಜೇತ್ಸುದುರ್ಬುದ್ಧಿರ್ನರಕಂ ಪ್ರತಿಪದ್ಯತೇ ॥ ೯ ॥

ಪುನಃ ಅವರು ತಿರ್ಯಗ್ಜಾತಿಯಲ್ಲಿಯೂ ಹುಟ್ಟುತ್ತಾರೆ. ದುಃಖದಿಂದ ಕೂಡಿಯೇ ಜೀವಿಸುತ್ತಾರೆ ಮಹಾಭಯ ಉಂಟಾದರೂ ಸಹ ಅವರಿಗೆ ಯಾರಿಂದಲೂ ರಕ್ಷಣೆಯು ಲಭಿಸುವುದಿಲ್ಲ.

೫-೧೦. ಯಾವನಲ್ಲಿ ಮಾಡಿದ ಉಪಕಾರವು ನಾಶಹೊಂದುವುದಿಲ್ಲವೋ ಇಷ್ಟು ಮಾತ್ರದಿಂದಲೇ ಅವನು ಪುರುಷನೆನಿಸಿಕೊಳ್ಳುತ್ತಾನೆ. ಇಂತಹ ಕೃತಜ್ಞನು ಸ್ವರ್ಗವನ್ನೂ, ಇತರ ಮಹಾಫಲಗಳನ್ನೂ ಹೊಂದುತ್ತಾನೆ. ಯಾವನು ವಿಪತ್ತಿಗೆ ಗುರಿಯಾಗಿರುವ ಪ್ರಭು, ಭೃತ್ಯ, ಬ್ರಾಹ್ಮಣ, ಗುರು ಇವರನ್ನು ತ್ಯಜಿಸದೇ ಇರುತ್ತಾನೆಯೋ ಅವನು ಸ್ವರ್ಗದಲ್ಲಿಯೂ ಪೂಜ್ಯನಾಗಿರುತ್ತಾನೆ. ಯಾವನು ಧನಿಕನನ್ನೇ ಸೇವಿಸುತ್ತಾ ದೀನನಾದ ದರಿದ್ರನನ್ನು ತ್ಯಜಿಸುತ್ತಾನೆಯೋ ಅಂತಹ ಮಹಾನೀಚನು ನರಕವನ್ನೇ ಹೊಂದುತ್ತಾನೆ. ಮುದಿಯಾದ ಆನೆ, ಕುದುರೆ. ಎತ್ತು, ಹಸು, ಶಾಂತನಾದ ಮನುಷ್ಯ ಇವರನ್ನು ತ್ಯಜಿಸಿದರೂ ಅಂತಹ ದುರ್ಬುದ್ಧಿಯು ನರಕವನ್ನು ಹೊಂದುತ್ತಾನೆ. ಯಾರು ಕಟ್ಟಿರುವ ಹಸುವನ್ನು

ನಾದ್ರಿಯಂತೇ ಪಶೂನ್ ಬದ್ಧಾನ್ ಯವಸೇನೋದಕೇನ ವಾ ।
ಯಥಾವತ್ ದ್ವಿಜಶಾರ್ದೂಲಾಃ ತೇ ನರಾ ನಿರಯಂಗಮಾಃ ॥ ೧೦ ॥

ಅಚಿಕಿತ್ಸ್ಯೇನ ರೋಗೇಣ ಗೃಹೀತಂ ಸ್ವಗೃಹೇ ಪಶುಂ ।
ಚಿಕಿತ್ಸ್ಯಂ ನ ತ್ಯಜೇದೇನಂ ಯಾವಜ್ಜೀವಂ ದ್ವಿಜೋತ್ತಮಾಃ ॥ ೧೧ ॥

ತಸ್ಯ ತ್ಯಾಗಾದವಾಪ್ನೋತಿ ಮಾನವೋ ನರಕಂ ಧ್ರುವಂ ।
ಸಮೃದ್ಧಂ ಸ್ವಾಮಿನಂ ಯಸ್ತು ಸೇವಿತ್ವಾ ಪುರುಷಾಧಮಃ ।
ಅಸಮೃದ್ಧಂ ತ್ಯಜೇತ್ಪಶ್ಚಾತ್ ಧ್ರುವಂ ನರಕಮೃಚ್ಛತಿ ॥ ೧೨ ॥

ಯೋ ನರಃ ಕ್ಲೇಶಮಾಪ್ನೋತಿ ಹೀನಾರ್ಥಸ್ವಾಮಿಸೇವನಾತ್ ।
ತತ್ತಪೋಽಸ್ಯ ವಿನಿರ್ದಿಷ್ಟಂ ಬ್ರಹ್ಮಲೋಕಾಯ ವೈ ದ್ವಿಜಾಃ ॥ ೧೩ ॥

ಕೃತಜ್ಞಃ ಪುರುಷೋ ಲೋಕೇ ಕೃತಜ್ಞಃ ಸರ್ವಭಾಕ್ತಥಾ ।
ಕೃತಜ್ಞಃ ಸರ್ವಮಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ ॥ ೧೪ ॥

ಹುಲ್ಲುನೀರು ಇವುಗಳಿಂದ ಸರಿಯಾಗಿ ಉಪಚರಿಸುವುದಿಲ್ಲವೋ ಅವರೂ ಸಹ ನರಕಕ್ಕೇ ಹೋಗತಕ್ಕವರು.

೧೧–೧೪ ಮನೆಯಲ್ಲಿರುವ ಹಸುವು ಚಿಕಿತ್ಸೆಗೆ ಅನರ್ಹವಾದ ರೋಗದಿಂದ ಕೂಡಿದ್ದರೂ ಸಹ ಅದು ಬದುಕಿರುವವರೆಗೂ ಚಿಕಿತ್ಸೆಮಾಡದೆ ಬಿಡಬಾರದು. ಹಾಗೆ ತ್ಯಜಿಸಿದಲ್ಲಿ ಮನುಷ್ಯನು ನರಕವನ್ನೇ ಹೊಂದುತ್ತಾನೆ. ಸ್ವಾಮಿಯು ಸಮೃದ್ಧಿ ಹೊಂದಿರುವಾಗ ಅವನನ್ನು ಸೇವಿಸಿ ಅವನು ದರಿದ್ರನಾದಾಗ ಯಾವನು ತ್ಯಜಿಸುತ್ತಾನೆಯೋ ಅಂತಹ ಸೇವಕಾಧಮನೂ ಸಹ ನರಕವನ್ನೇ ಹೊಂದುತ್ತಾನೆ. ದರಿದ್ರನಾದ ಸ್ವಾಮಿಯನ್ನು ಸೇವಿಸಿ ಯಾವನು ಕ್ಲೇಶಪಡುತ್ತಾನೆಯೋ ಅಂತಹವನ ಕ್ಲೇಶವೂ ತಪಸ್ಸೇ ಆಗುತ್ತದೆ. ಅದು ಬ್ರಹ್ಮಲೋಕಪ್ರಾಪ್ತಿಗೂ ಕಾರಣವಾಗುತ್ತದೆ. ಲೋಕದಲ್ಲಿ ಕೃತಜ್ಞನೇ ಪುರುಷನೆನಿಸುತ್ತಾನೆ ಅವನೇ ಎಲ್ಲಾ ಇಷ್ಟಾರ್ಥಗಳಿಗೂ ಭಾಗಿಯಾಗುತ್ತಾನೆ. ಮನಸ್ಸಿಗೆ ಅಭಿಮತವಾದ ಎಲ್ಲವನ್ನೂ ಹೊಂದುತ್ತಾನೆ.

ಮಾತರಂ ಪಿತರಂ ಪುತ್ರಂ ಯಾಜ್ಯಮೃತ್ವಿಜಮೇವ ಚ ।
ಸ್ವಾಮಿನಂ ಚ ಗುರುಂ ಭೃತ್ಯಂ ಬಾಂಧವಂ ಪಶುಮೇವ ಚ ॥ ೧೫ ॥

ಭಾರ್ಯಾಂ ವಾಪಿ ದ್ವಿಜಶ್ರೇಷ್ಠಾ ನ ತ್ಯಜೇನ್ಮನಸಾ ಕ್ವಚಿತ್ ।
ಏಷಾಂ ತು ಪತತಿ ತ್ಯಾಗೇ ಧ್ರುವಂ ನರಕಮೃಚ್ಛತಿ ॥ ೧೬ ॥

ನ ತ್ಯಜೇತ ತಥೈವಾಗ್ನಿಂ ನಾಗ್ನಿಮುತ್ಸಾದಯೇತ್ತಥಾ ।
ದೇವತಾರ್ಚಾಂ ತಥಾ ವಿಪ್ರಾಸ್ತ್ಯಕ್ತ್ವಾ ನರಕಮೃಚ್ಛತಿ ॥ ೧೭ ॥

ಛಾಯಾಯಾಂ ಯಸ್ಯ ವಿಶ್ರಾಂತೋ ನರಸ್ತಸ್ಯ ತ್ವಾಪದಪಸ್ಯ ತು ।
ತಸ್ಮಾತ್ಪತ್ರಂ ನ ಹಿಂಸೇತ ಕೃತಜ್ಞತ್ವಮನುಸ್ಮರನ್ ॥ ೧೮ ॥

ಕೃತಜ್ಞೋ ಭೂತಿಮಾಪ್ನೋತಿ ಕೃತಜ್ಞಶ್ಚ ತಥಾ ಯಶಃ ।
ಕೃತಜ್ಞೋ ನಾಕಮಾಪ್ನೋತಿ ಬ್ರಹ್ಮಲೋಕಮಥಾಪಿ ವಾ ॥ ೧೯ ॥

೧೫–೧೮. ತಾಯಿ, ತಂದೆ, ಮಗ, ಯಾಗಮಾಡಿಸುವ ಪುರೋಹಿತ, ಋತ್ವಿಕ್, ಸ್ವಾಮಿ, ಗುರು, ಭೃತ್ಯರು, ಬಂಧುಗಳು, ಹಸು, ಭಾರ್ಯೆ ಇವರನ್ನು ಮಾನಸವಾಗಿಯೂ ತ್ಯಜಿಸಬಾರದು. ಇವರನ್ನು ತ್ಯಾಗಮಾಡಿದಲ್ಲಿ ಅವನು ಪತಿತನಾಗುತ್ತಾನೆ. ನರಕವನ್ನೂ ಹೊಂದುತ್ತಾನೆ. ಹಾಗೆಯೇ ಅಗ್ನಿಯನ್ನೂ ಬಿಡಬಾರದು. ನಾಶಮಾಡಲೂಬಾರದು. ದೇವತಾರ್ಚನೆಯನ್ನು ತ್ಯಜಿಸಿದವನೂ ನರಕ ಹೊಂದುತ್ತಾನೆ. ಯಾವ ಮರದ ಕೆಳಗೆ ನೆರಳಿನಲ್ಲಿ ತಾನು ವಿಶ್ರಾಂತಿ ಹೊಂದುತ್ತಾನೆಯೋ ಆ ಮರದ ಎಲೆಗಳನ್ನು ನಾಶಮಾಡಿ ಹಿಂಸಿಸಬಾರದು. ಇದು ಕೃತಜ್ಞತೆಯ ಸ್ಮರಣೆಯ ಫಲ.

೧೯–೨೨. ಕೃತಜ್ಞನಾದವನು ಐಶ್ವರ್ಯವನ್ನೂ ಯಶಸ್ಸನ್ನೂ ಹೊಂದುತ್ತಾನೆ. ದೇಹವನ್ನು ಬಿಟ್ಟಮೇಲೆ ಸ್ವರ್ಗವನ್ನೂ, ಬ್ರಹ್ಮಲೋಕವನ್ನೂ ಸಹ ಹೊಂದುತ್ತಾನೆ. ಮಹಾತ್ಮರಾದ ಕೃತಜ್ಞರಿಂದಲೇ ಈ ಭೂಮಿಯೂ ಧರಿಸಲ್ಪಟ್ಟಿದೆ. ಕೃತಜ್ಞನಾದವನು ಯಜ್ಞಶೀಲನಾಗಿಯೂ, ತಪಸ್ವಿಯಾಗಿಯೂ, ದಾನಶೀಲನಾಗಿಯೂ, ಶೂ

ಕೃತಜ್ಞೈರ್ವಸುಧಾ ಸರ್ವಾ ಧಾರ್ಯತೇ ಸುಮಹಾತ್ಮಭಿಃ || ೨೦ ||
ಕೃತಜ್ಞ ಏವ ಯಜತೇ ಕೃತಜ್ಞಸ್ತಪ್ಯತೇ ತಪಃ ।

ಯಜ್ವಾ ದಾತಾ ತಥಾ ಶೂರಃ ಕೃತಜ್ಞಶ್ಚ ತಥಾ ಭವೇತ್ ।
ಕೃತಜ್ಞಸ್ತ್ಯಜತೇ ಪ್ರಾಣಾನ್ಮಿತ್ರಕಾರ್ಯೇ ತಥಾ ಧ್ರುವಂ || ೨೧ ||

ಯೋ ಬ್ರಹ್ಮಲೋಕಸ್ತಪಸಾ ನ ಶಕ್ಯಃ
ಪ್ರಾಪ್ತುಂ ದ್ವಿಜೇಂದ್ರಾ ಮಹತಃ ಸುಕೃಚ್ಛ್ರಾತ್ ।
ತಂ ಬ್ರಹ್ಮಲೋಕಂ ಹಿ ನರಃ ಕೃತಜ್ಞಃ
ಪ್ರಾಪ್ನೋತಿ ಶೀಘ್ರಂ ನ ಹಿ ಸಂಶಯೋತ್ರ || ೨೨ ||

**ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಕೃತಜ್ಞತಾಗುಣನಿರೂಪಣೋ
ನಾಮ ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ**

ನಾಗಿಯೂ ಸಹ ಆಗುತ್ತಾನೆ. ಇಂತಹ ಕೃತಜ್ಞನು ಮಿತ್ರಕಾರ್ಯಕ್ಕಾಗಿ ಪ್ರಾಣಗಳನ್ನು ಒಪ್ಪಿಸುತ್ತಾನೆ. ಯಾವ ಬ್ರಹ್ಮಲೋಕವು ಇತರರಿಂದ ತಪಸ್ಸಿನಿಂದಲೂ ಬಹು ಕ್ಲೇಶದಿಂದಲೂ ಸಹ ಹೊಂದಲು ಶಕ್ಯವಲ್ಲವೋ ಅಂತಹ ಬ್ರಹ್ಮಲೋಕವನ್ನೂ ಸಹ ಕೃತಜ್ಞನಾದವನು ಶೀಘ್ರವಾಗಿ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಹಂಸಗೀತೆಯ ಕೃತಜ್ಞತಾಗುಣನಿರೂಪಣವೆಂಬ
ಇನ್ನೂರ ಎಪ್ಪತ್ತನೆಯ ಅಧ್ಯಾಯ ಮುಗಿದುದು

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕಸಪ್ತತ್ಯಧಿಕ ದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಆಚಾರಃ ಸ್ವರ್ಗಜನನ ಆಚಾರಃ ಕೀರ್ತಿವರ್ಧನಃ ।
ಆಚಾರಶ್ಚ ತಥಾ ಯುಷ್ಯೋ ಧನ್ಯೋ ಲೋಕಸುಖಾವಹಃ ॥ ೧ ॥

ಸರ್ವಲಕ್ಷಣಹಿನೋಽಪಿ ಸ ಸದಾಚಾರವಾನ್ನರಃ ।
ಸರ್ವಲಕ್ಷಣಲಕ್ಷಣ್ಯೈಃ ವಿಜ್ಞೇಯಃ ಪುರುಷೋ ವರಃ ॥ ೨ ॥

ಆಚಾರಸ್ತ್ರಿವಿಧೋಲೋಕೇ ಸೇವಿತವ್ಯೋ ವಿಚಕ್ಷಣೈಃ ।
ಶ್ರುತಿಸ್ಮೃತ್ಯುದಿತಶ್ಚೈವ ಸದಾಚಾರಸ್ತಥಾಪರಃ ।
ಆಚಾರಪ್ರಭವಂ ಸೌಖ್ಯಂ ಧನಂ ಚ ದ್ವಿಜಸತ್ತಮಾಃ ॥ ೩ ॥

ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯ.

೧-೪ ಹಂಸವು ಹೇಳುತ್ತದೆ:—ಆಚಾರವು ಸ್ವರ್ಗಪ್ರಾಪ್ತಿಗೆ ಸಾಧನ ಆಚಾರವೇ ಯಶಸ್ಸಿನ ವೃದ್ಧಿಗೂ ಕಾರಣ, ಲೋಕಸುಖಕರವಾದ ಈ ಆಚಾರವು ಆಯುಷ್ಯಕ್ಕೂ ಧನಪ್ರಾಪ್ತಿಗೂ ಕಾರಣವಾಗುತ್ತದೆ. ಸದಾಚಾರವುಳ್ಳ ಮನುಷ್ಯನು ಸರ್ವಲಕ್ಷಣಶೂನ್ಯನಾಗಿದ್ದರೂ ಎಲ್ಲಾ ಲಕ್ಷಣಗಳಿಂದ ಕೂಡಿದ ಪುರುಷಶ್ರೇಷ್ಠನೆಂದೇ ತಿಳಿಯಬೇಕು. ಮನುಷ್ಯರಿಂದ ಸೇವಿಸಲ್ಪಡಬೇಕಾದ ಆಚಾರಗಳು ಲೋಕದಲ್ಲಿ ಮೂರು ವಿಧವಾಗಿರುತ್ತವೆ. ಕೆಲವು ಶ್ರುತಿವಿಹಿತ, ಕೆಲವು ವೇದಾರ್ಥಪ್ರಕಾಶಕವಾದ ಮನ್ವಾದಿಸ್ಮೃತಿವಿಹಿತ, ಕೆಲವು ಮಹಾತ್ಮರ ಆಚರಣೆ ಮಾತ್ರದಿಂದ ಸಿದ್ಧ, ಇಂತಹ ಆಚಾರಸೇವನೆಯಿಂದ ಸೌಖ್ಯವೂ ಇಹಲೋಕದಲ್ಲಿ ಧನಾದಿ ಸಂಪತ್ತುಗಳೂ

ಆಚಾರಯುಕ್ತಸ್ತ್ರಿದಿವಂ ಪ್ರಯಾತಿ
ಆಚಾರವಾನೇವ ಭವತ್ಯರೋಗಃ ।
ಆಚಾರವಾನೇವ ಚಿರಂ ತು
ಜೀವೇದಾಚಾರವಾನೇವ ಭುನಕ್ತಿ ಲಕ್ಷ್ಮೀಂ ॥ ೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಆಚಾರವರ್ಣನೋ
ನಾಮೈಕಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

ಉಂಟಾಗುತ್ತವೆ. ಆಚಾರವಂತನೇ ಸ್ವರ್ಗವಾಸಿಯಾಗುತ್ತಾನೆ. ಅವನೇ ಅರೋಗಿಯಾಗಿಯೂ ಬದುಕುತ್ತಾನೆ. ಆಚಾರವಂತನೇ ಬಹುಕಾಲ ಜೀವಿಸುತ್ತಾನೆ ಮತ್ತು ಸಂಪತ್ತನ್ನೂ ಅನುಭವಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಆಚಾರವರ್ಣನವೆಂಬ ಇನ್ನೂರ ಎಪ್ಪತ್ತೊಂದನೆಯ
ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದ್ವಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಶೌಚಂ ದೇವಾಃ ಪ್ರಶಂಸಂತಿ ಶೌಚಂ ಬ್ರಹ್ಮರ್ಷಯಸ್ತಥಾ ।
ಶೌಚಯುಕ್ತೇನ ಯದ್ದತ್ತಂ ತದಶ್ನಂತಿ ದಿವೌಕಸಃ || ೧ ||

ಸರ್ವೇಷಾಮೇವ ಧರ್ಮಾಣಾಂ ಶೌಚಂ ವಾ ಫಲಭಾಗ್ಭವೇತ್ ।
ಶೌಚವಾನೇವ ಪುರುಷೋ ಯಥೇಷ್ಟಾಂಗತಿಮಾಪ್ನುಯಾತ್ || ೨ ||

ಶರೀರ ಶೌಚಂ ಜಲಮೃದ್ಭಿರುಕ್ತಮ-
ಲೋಭಶೌಚಂ ತು ಮನಃ ಪ್ರಮಾರ್ಷ್ಟಿ ।
ಮನೋವಿಶುದ್ಧಂ ಪುರುಷಸ್ಯ ಯಸ್ಯ
ಸ ಲೋಕಮಾಪ್ನೋತಿ ಪಿತಾಮಹಸ್ಯ || ೩ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಶೌಚವರ್ಣನೋ ನಾಮ ದ್ವಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

ಇನ್ನೂರ ಎಪ್ಪತ್ತೆರಡನೆಯ ಅಧ್ಯಾಯ.

೧–೩. ಹಂಸವು ಹೇಳುತ್ತದೆ:—ಶೌಚವನ್ನು ದೇವತೆಗಳೂ, ಬ್ರಹ್ಮರ್ಷಿಗಳೂ ಪ್ರಶಂಸೆಮಾಡುತ್ತಾರೆ. ಶೌಚದಿಂದ ಕೂಡಿದವನು ಕೊಟ್ಟ ಹವಿಸ್ಸೇ ಮೊದಲಾದುವನ್ನು ದೇವತೆಗಳು ಸಂತೋಷದಿಂದ ಭಕ್ಷಿಸುತ್ತಾರೆ. ಮನುಷ್ಯನಿಗೆ ಹೇಳಿರುವ ಎಲ್ಲಾ ಧರ್ಮಗಳಲ್ಲಿಯೂ ಶೌಚವೆಂಬುದು ಬಹುಮಟ್ಟಿಗೂ ಇಷ್ಟಫಲಕ್ಕೆ ಸಾಧಕವಾಗುತ್ತದೆ. ಶರೀರ ಶೌಚವು ಜಲ, ಮೃತ್ತಿಕೆ ಇವುಗಳಿಂದ ಹೇಳಲ್ಪಟ್ಟಿದೆ. ಕ್ರೋಧ ಲೋಭಾದಿಗಳ ನಾಶದಿಂದ ಮನಸ್ಸು ಶುಚಿಯಾಗುತ್ತದೆ. ಶುದ್ಧವಾದ ಮನಸ್ಸನ್ನು ಹೊಂದಿರುವವನು ಬ್ರಹ್ಮಲೋಕವನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಶೌಚವರ್ಣನವೆಂಬ ಇನ್ನೂರ ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ತೀರ್ಥಾನುಸರಣಂ ಶೌಚಂ ತೀರ್ಥಾನುಸರಣಂ ತಪಃ ।
ತೀರ್ಥಾಂಭೋಭಿರ್ನರಾಃ ಪೂತಾ ಯಾಂತಿ ನಾಕಮಸಂಶಯಂ ॥ ೧ ॥

ತೀರ್ಥಾನುಸರಣಂ ಪುಣ್ಯಂ ಚಾಧ್ವನಾ ಪ್ರಾಪ್ನುಯಾನ್ನರಃ ।
ಅಧ್ವನಾ ಕ್ಷೀಣಪಾಪಸ್ತು ತ್ರಿದಿವಂ ಪ್ರತಿಪದ್ಯತೇ ॥ ೨ ॥

ಪಾಪ್ಮನಾಂ ಪಾಪಶಮನಂ ವಿಧತ್ತೇ ತಪಸಾ ವಿನಾ ।
ವಿಪಾಪ್ಮನಾ ತಥಾ ತುಲ್ಯಂ ವಿಧತ್ತೇ ಯತ್ಪ್ರಕೀರ್ತಿತಂ ॥ ೩ ॥

ಇನ್ನೂರ ಎಪ್ಪತ್ತಮೂರನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :— ಪುಣ್ಯತೀರ್ಥಗಳ ಸೇವನೆಯೇ ಶೌಚ ಅದೇ ತಪಸ್ಸು. ತೀರ್ಥೋದಕದಿಂದ ಶುದ್ಧಿಹೊಂದಿದ ಮನುಷ್ಯರು ನಿಯತ ವಾಗಿಯೂ ಸ್ವರ್ಗವನ್ನು ಸೇರುತ್ತಾರೆ. ತೀರ್ಥಸೇವೆ ಎಂಬುದೊಂದು ಪುಣ್ಯಕರವಾದ ಮಾರ್ಗ. ಈ ಮಾರ್ಗದಿಂದ ಪಾಪಕ್ಷಯಹೊಂದಿದವನು ಸುಖದಿಂದ ಸ್ವರ್ಗ ಹೊಂದುತ್ತಾನೆ. ಪಾಪಗಳನ್ನು ನಾಶಪಡಿಸುವ ತಪಸ್ಸನ್ನು ಮಾಡದೆಯೇ ಈ ತೀರ್ಥಸೇವನೆಯು ಎಲ್ಲಾ ಪಾಪಗಳನ್ನೂ ಹೋಗಲಾಡಿಸಿ ನಿಷ್ಪಾಪನೊಡನೆ ಸಾಮ್ಯ ವನ್ನುಂಟುಮಾಡುತ್ತದೆ. ಪಾಪಶಾಂತಿಗೋಸ್ಕರ ಮಾಡಬಹುದಾದ ಯಜ್ಞಗಳು

ಬಹೂಪಕರಣಾ ಯಜ್ಞಾ ನಾನಾಸಂಭಾರವಿಸ್ತರಾಃ ।
ನತೇ ಶಕ್ಯಾ ದರಿದ್ರೇಣ ಪ್ರಾಪ್ತುಂ ಧರ್ಮಭೃತಾಂ ವರಾಃ ॥ ೪ ॥

ದರಿದ್ರೈರನ್ಯಥಾ ಪ್ರಾಪ್ತುಂ ಶಕ್ಯಂ ಯಜ್ಞಫಲಂ ದ್ವಿಜಾಃ ।
ತೀರ್ಥಾನುಸರಣಂ ಕೃತ್ವಾ ತಸ್ಮಾತ್ತೀರ್ಥಪರೋ ಭವೇತ್ ॥ ೫ ॥

ಯಸ್ಯ ಹಸ್ತೌ ಚ ಪಾದೌ ಚ ಮನಶ್ಚೈವ ಸುಸಂಯತಂ ।
ವಿದ್ಯಾ ತಪಶ್ಚ ಕೀರ್ತಿಶ್ಚ ಸ ತೀರ್ಥಫಲಮಶ್ನುತೇ ॥ ೬ ॥

ಪಾಪಾನಾಂ ಪಾಪಶಮನಂ ಧರ್ಮವೃದ್ಧಿಸ್ತಥಾ ಸತಾಂ ।
ವಿಜ್ಞೇಯಂ ಸೇವಿತಂ ತೀರ್ಥಂ ತಸ್ಮಾತ್ತೀರ್ಥಪರೋ ಭವೇತ್ ॥ ೭ ॥

ಯೇ ಸಾಗ್ನಯೋ ಧನೋಪೇತಾಸ್ತೀರ್ಥಾನುಸರಣೇ ರತಾಃ ।
ತೇಷಾಂ ಯಜ್ಞಫಲಾವಾಪ್ತಿರ್ವಿನಾಪಿ ಧನಸಂಚಯೈಃ ॥ ೮ ॥

ಅನೇಕ ಉಪಕರಣಗಳಿಂದ ಕೂಡಿ ಅನೇಕ ವಸ್ತುಗಳ ಸಂಗ್ರಹಣೆಯಿಂದ ವಿಸ್ತಾರವಾಗಿವೆ. ಅಂತಹ ಯಜ್ಞಾದಿಗಳನ್ನು ದರಿದ್ರರಾದವರು ಹೊಂದಲು ಸಾಧ್ಯವೇ ಇಲ್ಲ.

೫-೯. ದರಿದ್ರರಾದವರು ಅಂತಹ ಯಜ್ಞಫಲವಾದ ಪಾಪಕ್ಷಯವನ್ನು ಬೇರೆ ರೀತಿಯಿಂದ ಹೊಂದಲು ಸಾಧ್ಯವಿಲ್ಲವಾದುದರಿಂದ ತೀರ್ಥಾನುಸರಣವನ್ನೇ ಆಶ್ರಯಿಸಿ ಆ ಫಲವನ್ನು ಹೊಂದಬೇಕು. ಯಾವನ ಹಸ್ತಪಾದಗಳೂ, ಮನಸ್ಸೂ ಸಹ ಸಂಯಮದಿಂದ ಕೂಡಿವೆಯೋ ವಿದ್ಯಾ, ತಪಸ್ಸು, ಕೀರ್ತಿ ಇವನ್ನೂ ಹೊಂದಿರುವ ಅಂತಹವನೇ ತೀರ್ಥಸೇವಾಫಲವನ್ನು ಹೊಂದುತ್ತಾನೆ. (ಅಧರ್ಮಮಾರ್ಗದಲ್ಲಿದ್ದು ಕಾಮಚಾರಿಯಾದವನಿಗೆ ತೀರ್ಥಯಾತ್ರೆಯಿಂದಲೂ ಫಲವಿಲ್ಲವೆಂದು ತಾತ್ಪರ್ಯ.) ಪಾಪಿಗಳಾಗಿರುವವರಿಗೆ ಪಾಪಶಮನಕ್ಕೂ, ಸತ್ಪುರುಷರಿಗೆ ಭಗವತ್ಪ್ರಸಾದವೆಂಬ ಧರ್ಮದ ಅಭಿವೃದ್ಧಿಗೂ ಈ ತೀರ್ಥಸೇವೆಯೇ ಕಾರಣವಾಗುತ್ತದೆ. ಆದ್ದರಿಂದ ಸಂಯಮದಿಂದ ತೀರ್ಥಯಾತ್ರಾಪರನಾಗಬೇಕು. ಯಾವ ಧನಿಕರಾದವರು ಅಗ್ನಿಯೊಡಗೂಡಿ ತೀರ್ಥಸೇವೆಯಲ್ಲಿಯೇ ಆಸಕ್ತರಾಗುವರೋ ಅಂತಹವರು ವಿಧಿ

ಸರ್ವೇಷಾಮೇವವರ್ಣಾನಾಂ ಸರ್ವಾಶ್ರಮನಿವಾಸಿನಾಂ ।
ತೀರ್ಥಂ ಫಲಪ್ರದಂ ಜ್ಞೇಯಂ ನಾತ್ರ ಕಾರ್ಯಾ ವಿಚಾರಣಾ ॥ ೯ ॥

ಕಾರ್ಯಾಂತರೇಣ ಯೋ ಗತ್ವಾ ಸ್ನಾನಂ ತೀರ್ಥೇ ಸಮಾಚರೇತ್ ।
ತೀರ್ಥಯಾತ್ರಾಫಲಂ ತಸ್ಯ ನಾಸ್ತಿ ಸ್ನಾನಫಲಂ ತತಃ ॥ ೧೦ ॥

ಅಧ್ವನಾಂ ಕ್ಲೇಶ ದುಃಖೇನ ತೀರ್ಥಯಾತ್ರಾಫಲಂ ಭವೇತ್ ।
ತೀರ್ಥಾನುಸರಣಂ ಪದ್ಭ್ಯಾಂ ತಪಃ ಪರಮಿಹೋಚ್ಯತೇ ॥ ೧೧ ॥

ತದೇವ ಕೃತ್ವಾ ಯಾನೇನ ಸ್ನಾನಮಾತ್ರಫಲಂ ಲಭೇತ್ ।
ಯಸ್ಯಾನ್ಯೇ ಕುರ್ವತೇ ಶಕ್ತ್ಯಾ ತೀರ್ಥಯಾತ್ರಾಂ ತಥಾ ನರಃ ॥ ೧೨ ॥

ಯಾನಾಸನಾಭ್ಯಾಂ ಚ ತಥಾ ಫಲಂ ತಸ್ಯ ಚತುರ್ಗುಣಂ ।
ತೀರ್ಥಾನುಸರಣಂ ಕೃತ್ವಾ ಕ್ಷೇತ್ರಭುಗ್ವಿಜಿತೇಂದ್ರಿಯಃ ॥ ೧೩ ॥

ಇಲ್ಲದೆಯೇ ಯಜ್ಞರ ಫಲವನ್ನು ಹೊಂದುತ್ತಾರೆ. ಎಲ್ಲಾ ವರ್ಣದವರಿಗೂ, ಎಲ್ಲಾ ಆಶ್ರಮದವರಿಗೂ ಸಹ ತೀರ್ಥಯಾತ್ರೆಯು ಫಲಪ್ರದವೇ ಆಗುತ್ತದೆ. ಇದರಲ್ಲಿ ವಿಚಾರಮಾಡಬೇಕಾದುದಿಲ್ಲ.

೧೦-೧೩. ಯಾವನು ಇತರ ಕಾರ್ಯನಿಮಿತ್ತವಾಗಿ ತೀರ್ಥಸಾನ್ನಿಧ್ಯಕ್ಕೆ ಹೋಗಿ ಸ್ನಾನಾದಿಗಳನ್ನೂ ಮಾಡುತ್ತಾನೆಯೋ ಅವನಿಗೆ ತೀರ್ಥಯಾತ್ರೆಯ ಫಲವು ಲಭಿಸುವುದಿಲ್ಲ. ಸ್ನಾನಫಲಮಾತ್ರವೇ, ಯಾವನು ತೀರ್ಥಯಾತ್ರೆಗಾಗಿಯೇ ಹೊರಟು ಪಾದಚಾರಿಯಾಗಿಯೇ ಕ್ಲೇಶಪಟ್ಟು ಸಾಧಿಸುತ್ತಾನೆಯೋ ಅವನಿಗೆ ತೀರ್ಥಯಾತ್ರಾಫಲವು ಲಭಿಸುತ್ತದೆ. ಪಾದಚಾರಿಯಾಗಿಯೇ ತೀರ್ಥಾನುಸರಣ ಮಾಡಿದಲ್ಲಿ ಅದೂ ಒಂದು ಉತ್ಕೃಷ್ಟವಾದ ತಪಸ್ಸೆಂದು ಹೇಳಲಾಗಿದೆ. ಯಾನದಿಂದ ತೀರ್ಥಸೇವೆ ಮಾಡಿದಲ್ಲಿ ಸ್ನಾನಫಲಮಾತ್ರವೇ ಲಭಿಸುತ್ತದೆ. ತೀರ್ಥಯಾತ್ರೆಗಾಗಿಯೇ ಹೊರಟಿರುವವನನ್ನು ಇತರರು ಯಥಾಶಕ್ತಿ ಯಾನಾಸನಾದಿಗಳಿಂದ ಉಪಚರಿಸಿದಲ್ಲಿ ಹಾಗೆ ಸತ್ಕರಿಸಿದವರಿಗೆ ಚತುರ್ಗುಣವಾದ ಫಲವು ಲಭಿಸುತ್ತದೆ. ತೀರ್ಥಯಾತ್ರೆಯನ್ನು ಮಾಡಿ ಸ್ವದಾರರತನಾಗಿ ಜಿತೇಂದ್ರಿಯನಾಗಿದ್ದಲ್ಲಿ ಅಂತಹವನು ತೀರ್ಥಯಾತ್ರೆಯ ಹತ್ತರಷ್ಟು ಫಲಹೊಂದಿ ಸುಖಿಯಾಗುತ್ತಾನೆ.

ಫಲಂ ಪ್ರಾಪ್ನೋತಿ ವಿಪ್ರೇಂದ್ರಾಸ್ತೀರ್ಥಾದ್ದಶಗುಣಂ ಭವೇತ್ ।
ಛತ್ರೋಪಾನಹಹೀನಸ್ತು ತಥಾ ಶತಗುಣಂ ಲಭೇತ್ ॥ ೧೪ ॥

ಛತ್ರೋಪಾನಹಹೀನಸ್ತು ಭೈಕ್ಷ್ಯಾಶೀ ವಿಜಿತೇಂದ್ರಿಯಃ ।
ಮಹಾಪಾತಕಜೈರ್ಘೋರೈಃ ಕ್ಷಿಪ್ರಂ ಪಾಪೈರ್ವಿಮುಚ್ಯತೇ । ೧೫ ॥

ನ ಭೈಕ್ಷ್ಯಂ ಪರಪಾಕಂ ತು ನ ಚ ಭೈಕ್ಷ್ಯಂ ಪರಿಗ್ರಹಃ ।
ಸೋಮಪಾನಸಮಂ ಭೈಕ್ಷ್ಯಂ ತಸ್ಮಾದ್ಭೈಕ್ಷ್ಯಂ ಸಮಾಚರೇತ್ ॥ ೧೬ ॥

ಲೋಕೇಽಸ್ಮಿನ್ ದ್ವಿವಿಧಸ್ತೀರ್ಥಃ ಸ್ವಚ್ಛಂದೋಽನಿಂದಿತಸ್ತಥಾ ।
ಪುಷ್ಕರಾದ್ಯಾಸ್ತು ಯೇ ತೀರ್ಥಾಃ ಸ್ವಪ್ರಭಾವಮಹತ್ತರಾಃ ॥ ೧೭ ॥

ತೇಷಾಂ ತೀರ್ಥಪ್ರಭಾವೇಣ ಕೃತಃ ಪೂರ್ವೈಃ ಪ್ರತಿಗ್ರಹಃ ।
ಕಣ್ವಾಶ್ರಮಾದ್ಯಾ ಯೇ ತೀರ್ಥಾಃ ಕಣ್ವಾದೀನಾಂ ಪ್ರಭಾವತಃ ॥ ೧೮ ॥

ಪುಣ್ಯಾಸ್ತೇ ಕಥಿತಾ ಲೋಕೇ ಪಾಪಘ್ನಾಃ ಪುಣ್ಯವೃದ್ಧಿದಾಃ ।
ದ್ವಿಪ್ರಕಾರಸ್ಯ ತೀರ್ಥಸ್ಯ ಸೇವಾ ಜ್ಞೇಯಾ ಮಹಾಫಲಾ ॥ ೧೯ ॥

೧೪–೧೭. ಛತ್ರಿ, ಪಾದುಕೆ ಇವೂ ಇಲ್ಲದೆ ಪಾದಚಾರಿಯಾಗಿ ತೀರ್ಥಸೇವೆ ಮಾಡಿದವನಿಗೆ ಫಲವು ನೂರರಷ್ಟು ಹೆಚ್ಚಾಗಿ ಲಭಿಸುತ್ತದೆ ಛತ್ರಿ ಪಾದುಕೆಗಳೂ ಇಲ್ಲದೆ ಭಿಕ್ಷಾಶನದಿಂದಿದ್ದು ಜಿತೇಂದ್ರಿಯನಾಗಿ ತೀರ್ಥಸೇವೆಯನ್ನು ಮಾಡಿದಲ್ಲಿ ಘೋರವಾದ ಮಹಾಪಾತಕಗಳಿಂದಲೂ ಜಾಗ್ರತೆಯಾಗಿಯೇ ಬಿಡುಗಡೆಯುಂಟಾಗುತ್ತದೆ. ಭಿಕ್ಷೆಯು ಪರಪಾಕದೋಷದೂಷಿತವಲ್ಲ. ದಾನವೂ ಅಲ್ಲ. ಸೋಮಪಾನದಂತೆ ಪರಿಶುದ್ಧವಾದ್ದು. ಆದ್ದರಿಂದ ಭೈಕ್ಷಾಚರಣವನ್ನೇ ಮಾಡಬೇಕು ಲೋಕದಲ್ಲಿ ತೀರ್ಥಗಳು ಸ್ವಚ್ಛಂದ ಅನಿಂದಿತ ಎಂದು ಎರಡು ವಿಧವಾಗಿರುತ್ತವೆ. ಪುಷ್ಕರಾದಿ ತೀರ್ಥಗಳು ತಾನಾಗಿಯೇ ಮಹಾಪ್ರಭಾವಶಾಲಿಗಳಾಗಿವೆ.

೧೮–೨೦. ಅಂತಹ ತೀರ್ಥಗಳ ಪ್ರಭಾವಾತಿಶಯದಿಂದಲೇ ಹಿಂದಿನಿಂದ ಮಹಾತ್ಮರು ಅದನ್ನು ಆದರಿಸಿದ್ದಾರೆ. ಕಣ್ವಾಶ್ರಮಾದಿ ತೀರ್ಥಗಳು ಕಣ್ವರ ಪ್ರಭಾವದಿಂದಲೇ ಉತ್ಕರ್ಷ ಹೊಂದಿದುವು. ಇವೆಲ್ಲವೂ ಪಾಪನಾಶಕಗಳಾಗಿಯೂ, ಪುಣ್ಯವೃದ್ಧಿಪ್ರದಗಳಾಗಿಯೂ ಲೋಕದಲ್ಲಿ ಪ್ರಸಿದ್ಧಿಹೊಂದಿವೆ. ಈ ಎರಡು ವಿಧವಾದ ತೀರ್ಥಗಳ ಸೇವೆಯೂ, ಮಹಾಫಲಪ್ರದಗಳೆಂದೇ ತಿಳಿಯಬೇಕು ತೀರ್ಥಸೇವೆ

ಯೇ ತೀರ್ಥಸೇವಾನಿರತಾ ದ್ವಿಜೇಂ
ದ್ರಾಸ್ತೇ ಪಾಪಹೀನಾ ದಿವಮಾಪ್ನುವಂತಿ ।
ತತ್ರೋಷ್ಯ ಕಾಲಂ ಸುಚಿರಂ ಸುಖಾಂತೇ
ಮಾನುಷ್ಯಲೋಕೇ ಸುಖಮಾಪ್ನುವಂತಿ || ೨೦ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ತೀರ್ಥಫಲವ
ರ್ಣನೋ ನಾಮ ತ್ರಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಯಲ್ಲಿ ನಿರತರಾದ ದ್ವಿಜರು ಪಾಪನಾಶಹೊಂದಿ ಸ್ವರ್ಗಭಾಗಿಗಳಾಗುತ್ತಾರೆ. ಅಲ್ಲಿ ಬಹುಕಾಲ ಸುಖದಿಂದಿದ್ದು ಕೊನೆಯಲ್ಲಿ ಮನುಷ್ಯರಾಗಿ ಹುಟ್ಟಿ ಈ ಲೋಕದಲ್ಲಿಯೂ ಸುಖಿಗಳಾಗಿಯೇ ಇರುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಯಲ್ಲಿ ತೀರ್ಥಫಲವರ್ಣನವೆಂಬ
ಇನ್ನೂರ ಎಪ್ಪತ್ತಮೂರನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತುಃಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಬಹೂಪಕರಣಾ ಯಜ್ಞಾ ನಾನಾಸಂಭಾರವಿಸ್ತರಾಃ |
ನ ತೇ ಶಕ್ಯಾ ದರಿದ್ರೇಣ ಪ್ರಾಪ್ತುಂ ಧರ್ಮಭೃತಾಂ ವರಾಃ || ೧ ||

ದರಿದ್ರೈರಪ್ಯಥಾವಾಪ್ತುಂ ಶಕ್ಯಂ ಯಜ್ಞಫಲಂ ದ್ವಿಜಾಃ |
ಸದೋಪವಾಸನಿರತೈಸ್ತಸ್ಮಾದುಪವಸೇನ್ನರಃ || ೨ ||

ಯಾವನ್ಮಾಸೋಪವಾಸಂ ತು ತಾವತ್ತಪ ಇಹೋಚ್ಯತೇ |
ಅನಾಶಕಮತ ಊರ್ಧ್ವಂ ದ್ವಿಜಾತೀನಾಂ ಪ್ರಕೀರ್ತಿತಂ || ೩ ||

ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಯಜ್ಞಗಳು ನಾನಾವಿಧವಾದ ಉಪಕರಣ ಗಳಿಂದ ಕೂಡಿವೆ. ಅನೇಕ ಪದಾರ್ಥಗಳ ಸಂಗ್ರಹದಿಂದ ವಿಸ್ತಾರ ಹೊಂದಿವೆ. ಅಂತಹ ಯಜ್ಞಗಳನ್ನು ದರಿದ್ರರಾದವರು ಸಾಧಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ದರಿದ್ರರೂ ಸಹ ಸದಾ ಉಪವಾಸವ್ರತದಲ್ಲಿ ನಿರತರಾಗಿದ್ದಲ್ಲಿ ಅಂತಹ ಯಜ್ಞಫಲವನ್ನೂ ಹೊಂದಲು ಸಾಧ್ಯವಾಗುತ್ತದೆ. ಒಂದು ತಿಂಗಳ ವರೆವಿಗೂ ಮಾಡಬಹುದಾದ ಉಪವಾಸವು ತಪಸ್ಸೆಂದು ಹೇಳಲ್ಪಡುತ್ತದೆ. ಅದಕ್ಕಿಂತ ಹೆಚ್ಚಾಗಿ ದ್ವಿಜರಾದವರು ಉಪವಾಸಮಾಡಲು ಸಾಧ್ಯವಿಲ್ಲ. ಶೂದ್ರನಾದವನು ಹಗಲಿನ ಆರನೆಯ ಭಾಗದಲ್ಲಿ ಊಟಮಾಡಿದ್ದೇ ಆದರೆ ಅದೇ ಅವನಿಗೆ ಉತ್ಕೃಷ್ಟ

ಷಷ್ಠಕಾಲಾಶನಂ ಶೂದ್ರೇ ತಪಃ ಪರಮಿಹೋಚ್ಯತೇ ।
ವರ್ಣಸಂಕರಜಾತೀನಾಂ ದಿನಮೇಕಂ ಪ್ರಕೀರ್ತಿತಂ ॥ ೪ ॥

ಷಷ್ಠಕಾಲಾತ್ಪರಂ ಶೂದ್ರಃ ತಪಃ ಕುರ್ಯಾದ್ಯದಾ ಕ್ವಚಿತ್ ।
ರಾಷ್ಟ್ರೇ ಹಾನಿಸ್ತದಾ ಜ್ಞೇಯಾ ರಾಜ್ಞಶ್ಚೋಪದ್ರವೋ ಮಹಾನ್ ॥ ೫ ॥

ಶೂದ್ರಸ್ತು ಷಷ್ಠಕಾಲಾಶೀ ಯಾವಚ್ಛಕ್ತ್ಯಾ ತಪಶ್ಚರೇತ್ ।
ಮಾಸೋಪವಾಸಾದರ್ವಾಗ್ವಾ ತಥಾ ಶಕ್ತ್ಯಾ ದ್ವಿಜಶ್ಚರೇತ್ ॥ ೬ ॥

ನಾಸ್ತಿ ಗಂಗಾಸಮಂ ತೀರ್ಥಂ ನಾಸ್ತಿ ಕೃಷ್ಣಸಮಾಗತಿಃ ।
ಗಾಯತ್ರೀ ಸದೃಶಂ ಜಪ್ಯಂ ಹೋಮಂ ವ್ಯಾಹೃತಿಭಿಸ್ಸಮಂ ॥ ೭ ॥

ಅಂತರ್ಜಲೇ ತಥಾವಾಪ್ತಿಃ ಪಾಪಘ್ನಮಘಮರ್ಷಣಾತ್ ।
ಅಹಿಂಸಾಸದೃಶಂ ಪುಣ್ಯಂ ದಾನಾತ್ಸವನನಂ ಪರಂ ॥ ೮ ॥

ವಾದ ತಪಸ್ಸೆನಿಸುತ್ತದೆ. ವರ್ಣಸಂಕರಜಾತಿಯವರಿಗೆ ಒಂದೇದಿನ ಉಪವಾಸವು ವಿಹಿತವಾಗಿದೆ.

೫-೮. ಶೂದ್ರನಾದವನು ದಿನದ ಆರನೇ ಭಾಗಕ್ಕಿಂತಲೂ ಹೆಚ್ಚಾಗಿ ಉಪವಾಸದಲ್ಲಿದ್ದು ತಪಸ್ಸನ್ನು ಮಾಡಿದ್ದೇ ಆದರೆ ಅದರಿಂದ ರಾಷ್ಟ್ರಕ್ಕೆ ಹಾನಿಯೂ ರಾಜನಿಗೆ ಹೆಚ್ಚಾದ ಉಪದ್ರವವೂ ಉಂಟಾಗುತ್ತದೆ. ಆದ್ದರಿಂದ ಶೂದ್ರನು ದಿನದ ಆರನೆಯ ಭಾಗದಲ್ಲಿ ಊಟಮಾಡುತ್ತಾ ಯಥಾ ಶಕ್ತಿಯಾಗಿ ತಪಸ್ಸನ್ನು ಮಾಡಬೇಕು. ದ್ವಿಜನಾದವನೂ ಸಹ ಮಾಸೋಪವಾಸಕ್ಕಿಂತ ಕಡಿಮೆಯಾದ ಉಪವಾಸಾದಿಗಳಿಂದಲೇ ಯಥಾಶಕ್ತಿ ತಪಸ್ಸನ್ನು ಮಾಡಬೇಕು ಗಂಗೆಗೆ ಸಮವಾದ ತೀರ್ಥವು ಹೇಗೆ ಬೇರೊಂದಿಲ್ಲವೋ, ಕೃಷ್ಣನಿಗೆ ಸಮಾನವಾದ ಮತ್ತೊಂದು ಗಮ್ಯಸ್ಥಾನವು ಹೇಗೆ ಇಲ್ಲವೋ, ಗಾಯಿತ್ರಿಗೆ ಸಮಾನವಾದ ಮತ್ತೊಂದು ಜಪ್ಯಮಂತ್ರವು ಹೇಗೆ ಇಲ್ಲವೋ, ವ್ಯಾಹೃತಿ ಸಹಿತವಾದ ಹೋಮಕ್ಕೆ ಸಮವಾದ ಹೋಮವು ಹೇಗೆ ಇಲ್ಲವೋ, ನೀರಿನ ಮಧ್ಯದಲ್ಲಿ ಮಾಡುವ ಅಘಮರ್ಷಣ ಮಂತ್ರಕ್ಕಿಂತಲೂ ಪಾಪನಾಶಕವಾದುದು ಹೇಗೆ ಮತ್ತೊಂದಿಲ್ಲವೋ, ಅಹಿಂಸೆಗಿಂತಲೂ ಪುಣ್ಯಕರವಾದುದು ಹೇಗೆ ಮತ್ತೊಂದಿಲ್ಲವೋ ದಾನಕ್ಕಿಂತಲೂ ವಶೀಕರಣೋಪಾಯವು ಹೇಗೆ ಮತ್ತೊಂದಿಲ್ಲವೋ, ಹಾಗೆಯೇ ಉಪವಾಸಕ್ಕಿಂತಲೂ ಬೇರೆಯಾದ ತಪಸ್ಸೊಂದಿಲ್ಲ.

ಏವಮೇವ ದ್ವಿಜಾ ನಾಸ್ತಿ ತಪೋಽನಾನಶನಾತ್ಪರಂ ।
ಉಪವಾಸೈಃ ಪ್ರತಪ್ತಾನಾಂ ದೀರ್ಘಂ ಸುಖಮನಂತರಂ ॥ ೯ ॥

ಉಪವಾಸತಪಃ ಶೀಲಾಃ ನಾಕಲೋಕಮುಪಾಗತಾಃ ।
ಮೋದಂತೇ ತ್ರಿದಶೈಃ ಸಾರ್ಧಂ ಯಥಾ ದೇವಗಣಸ್ತಥಾ ॥ ೧೦ ॥

ಪಾಪಾನಾಂ ಪಾಪಶಮನಂ ಸತಾಮೀಪ್ಸಿತಕಾಮದಂ ।
ಉಪವಾಸೋ ವಿನಿರ್ದಿಷ್ಟೋ ವಿಶೇಷಾದ್ದೇವತಾಶ್ರಯಃ ॥ ೧೧ ॥

ಉಪವಾಸಪ್ರಸಕ್ತಾನಾಂ ಪ್ರಸಾದಸುಮುಖಾಃ ಸುರಾಃ ।
ಯಥೇಚ್ಛಮಪಿ ಜಾಯಂತೇ ನಾತ್ರ ಕಾರ್ಯಾ ವಿಚಾರಣಾ ॥ ೧೨ ॥

ವಾಸುದೇವಮಥಾಶ್ರಿತ್ಯ ನರಃ ಸಮ್ಯಗುಪೋಷಿತಃ ।
ಅನಂತಂಫಲಮಾಪ್ನೋತಿ ತ್ವನಂತಃ ಸಂಯುತೋ ಹರಿಃ ॥ ೧೩ ॥

ವಾಸುದೇವಮಥಾಶ್ರಿತ್ಯ ಬ್ರಾಹ್ಮಣೈರ್ಯೈರುಪೋಷಿತಂ ।
ತೇಽದ್ಯಾಪಿ ನ ನಿವರ್ತಂತೇ ಸಮುದ್ರೇಭ್ಯ ಇವಾಪಗಾಃ ॥ ೧೪ ॥

೯–೧೩. ಉಪವಾಸದಿಂದ ಸಂತಪ್ತರಾದವರಿಗೆ ಅನಂತರ ದೀರ್ಘವಾದ ಸುಖವು ಕಾದುನಿಂತಿದೆ. ಉಪವಾಸವೆಂಬ ತಪಸ್ಸನ್ನು ಮಾಡಿದವರು ಸ್ವರ್ಗಸುಖವನ್ನೇ ಹೊಂದಿದರು. ದೇವತಾಸಮೂಹದಂತೆ ಅವರೆಲ್ಲರೂ ದೇವತೆಗಳೊಡನೆ ಸಂತೋಷಪಡುತ್ತಿದ್ದಾರೆ. ಉಪವಾಸವ್ರತವೆಂಬುದು ಪಾಪಮಾಡಿದವರಿಗೆ ಪಾಪಶಮನಕ್ಕೂ ನಿಷ್ಪಾಪರಾದ ಸತ್ಪುರುಷರಿಗೆ ಇಷ್ಟಸಿದ್ಧಿಗೂ ಕಾರಣವಾಗುತ್ತದೆ ದೇವತಾವಿಶೇಷಪ್ರೀತ್ಯರ್ಥವಾದ ಉಪವಾಸವಂತೂ ವಿಶೇಷರೀತಿಗೆ ಸೇರಿದ್ದು. ಉಪವಾಸಶೀಲರಾದ ಸಾತ್ತ್ವಿಕರಿಗೆ ದೇವತೆಗಳು ಯಾವಾಗಲೂ ಅನುಗ್ರಹೋನ್ಮುಖರಾಗಿಯೇ ಇರುತ್ತಾರೆ. ಇಚ್ಛಾನುಸಾರಿಯಾದ ಜನ್ಮವನ್ನೂ ಅವರು ಹೊಂದಬಹುದು. ಇದರಲ್ಲಿ ಸಂದೇಹವಿಲ್ಲ. ವಾಸುದೇವನ ಪ್ರೀತಿಯನ್ನೇ ಮುಖ್ಯಗುರಿಯನ್ನಾಗಿ ಭಾವಿಸಿ ಯಥಾವಿಧಿಯಾಗಿ ಉಪವಾಸಮಾಡಿದವನಿಗೆ ಅನನ್ತವಾದ ಫಲವೇ ಉಂಟಾಗುತ್ತದೆ. ಅನಂತರೂಪಿಯಾದ ಹರಿಯೇ ಅವನಿಗೆ ಅಧೀನನಾಗುತ್ತಾನೆ.

೧೪–೧೫. ವಾಸುದೇವನ ಪ್ರೀತಿಯನ್ನೇ ಮುಖ್ಯ ಗುರಿಯಾಗಿ ಭಾವಿಸಿ ಯಾವ ಬ್ರಾಹ್ಮಣರು ಉಪವಾಸಮಾಡುತ್ತಾರೆಯೋ ಅವರು ಅಕ್ಷಯವಾದ ಸ್ಥಾನ

ಉಪೋಷಿತಾ ಯೇ ವಿಧಿವನ್ಮನುಷ್ಯಾಸ್ತೇ
ನಾಕಮಾಸಾದ್ಯ ಸುರೋಪಮಾನಾಃ |
ದೇವಾಂಗನಾಭಿಃ ಸಹಿತಾ ಮನುಷ್ಯಾ
ಭವಂತಿ ಲೋಕೇ ಗತಸರ್ವದುಃಖಾಃ || ೧೫ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸೂಪವಾಸಫಲ
ವರ್ಣನೋ ನಾಮ
ಚತುಃಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ವನ್ನು ಹೊಂದಿ ಸಮುದ್ರಕ್ಕೆ ಸೇರಿದ ನದಿಗಳಂತೆ ಹಿಂತಿರುಗುವುದೇ ಇಲ್ಲ. ಈ ರೀತಿ ಉಪವಾಸವ್ರತಹೊಂದಿದ ಮನುಷ್ಯರು ಸ್ವರ್ಗವನ್ನು ಸೇರಿ ದೇವತೆಗಳಂತೆಯೇ ದೇವಸ್ತ್ರೀಗಳೊಡನೆ ವಿಹರಿಸುತ್ತಾ ಯಾವ ದುಃಖವೂ ಇಲ್ಲದಂತೆ ಸುಖಿಸುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಉಪವಾಸಫಲವರ್ಣನವೆಂಬ ಇನ್ನೂರ ಎಪ್ಪತ್ತನಾಲ್ಕನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಮನಃಸಮಾಧಿಸಂಯುಕ್ತಸ್ತೀರ್ಥಾನುಸರಣಾತ್ಫಲಂ ।
ಪ್ರಾಪ್ನೋತಿ ಸುಮಹದ್ವಿಪ್ರಾಃ ತಥಾ ಸಮ್ಯಗುಪೋಷಿತಃ ॥ ೧ ॥

ಸರ್ವ ಏವ ಮನುಷ್ಯಸ್ಯ ಸರ್ವ ಕರ್ಮಸು ಸಾಧಕಂ ।
ಮನಸಾ ತು ವಿಶುದ್ಧೇನ ಯದ್ಯದಾಚರತೇ ನರಃ ॥ ೨ ॥

ತತ್ತದ್ಬಹುಫಲಂ ತಸ್ಯ ಪ್ರೇತ್ಯ ಚೇಹ ಚ ಜಾಯತೇ ।
ಮನೋ ಹಿ ಪರಮಂ ಭೂತಂ ತಚ್ಛ್ಯಾಚೇ ಪ್ರಯತೇತ್ಸದಾ ॥ ೩ ॥

ಇನ್ನೂರ ಎಪ್ಪತ್ತೈದನೆಯ ಅಧ್ಯಾಯ

೧-೪. ಹಂಸವು ಹೇಳುತ್ತದೆ:— ತೀರ್ಥಯಾತ್ರೆಯಿಂದ ಫಲವನ್ನು ಅಪೇಕ್ಷಿಸುವವರು ಮುಖ್ಯವಾಗಿ ಮನೋನಿಗ್ರಹವನ್ನು ಹೊಂದಿರಬೇಕು. ಅಂತಹವರೂ ಉಪವಾಸವ್ರತ ಉಳ್ಳವರೂ ಸಹ ಸರಿಯಾದ ಮಹಾಫಲವನ್ನೇ ಹೊಂದುತ್ತಾರೆ. ಸರ್ವಕರ್ಮಗಳಲ್ಲಿಯೂ ಶಮದಮಾದಿ ಇತರ ಸಾಧನಗಳಿಂದ ಕೂಡಿ ಆಚರಿಸುವಾಗ ವಿಶುದ್ಧವಾದ ಮನಸ್ಸನ್ನು ಹೊಂದಿ ಅಂತಹ ಕರ್ಮಗಳನ್ನು ಆಚರಿಸಿದಲ್ಲಿ ವಿಹಿತವಾದ ಆಯಾಯ ಫಲವನ್ನು ಲೋಕದ್ವಯದಲ್ಲಿಯೂ ಮನುಷ್ಯನು ಹೊಂದುತ್ತಾನೆ.

ಮನಃಶೌಚಯುತೋ ಜಂತುಃ ನರಕಂ ನ ಪ್ರಪದ್ಯತೇ ।
ನಾಕಲೋಕಮವಾಪ್ನೋತಿ ತ್ವಥವಾ ಪರಮಂ ಪದಂ ॥ ೪ ॥

ಗುಣೈಸ್ತು ಸಹ ಯೋ ವಾಸೋ ಗತದೋಷಸ್ಯ ಮಾನದಾಃ ।
ಉಪವಾಸಸ್ಸ ವಿಜ್ಞೇಯೋ ನ ಶರೀರಸ್ಯ ಶೋಷಣಂ ॥ ೫ ॥

ನಿರ್ಮಲೇ ಸುಮುಖೇ ಶುದ್ಧೇ ಸತ್ಯಕೂಲೇ ಮಹಾಹ್ರದೇ ।
ಸ್ನಾತವ್ಯಂ ಮಾನಸೇ ತೀರ್ಥೇ ತದ್ಧಿ ತೀರ್ಥಮನುತ್ತಮಂ ॥ ೬ ॥

ಅತ್ರಾಪ್ಯುದಾಹರಂತೀಮಂ ಶ್ಲೋಕಂ ಪೌರಾಣಮುಚ್ಯತಾಃ ।
ಯಮೋ ವೈವಸ್ವತೋ ದೇವೋ ಯಸ್ತವೈಷ ಹೃದಿಸ್ಥಿತಃ ॥ ೭ ॥

ಮನಸ್ಸೇ ಮುಖ್ಯವಾದ ಸಾಧನವಾದುದರಿಂದ ಅದನ್ನು ಶುದ್ಧವಾಗಿಡಲು ಸರ್ವರೂ ಪ್ರಯತ್ನಿಸಬೇಕು. ಮನಶ್ಶುದ್ಧಿಯುಳ್ಳ ಪ್ರಾಣಿಯು ಎಂದಿಗೂ ನರಕಭಾಗಿಯಾಗುವು ದಿಲ್ಲ. ಪುಣ್ಯತಾರತಮ್ಯಕ್ಕೆ ತಕ್ಕಂತೆ ಸ್ವರ್ಗವನ್ನಾಗಲಿ, ಪರಮಪದವನ್ನೇ ಆಗಲಿ ಹೊಂದುತ್ತಾನೆ.

೫-೮. ಯಾವ ದೋಷವೂ ಇಲ್ಲದೆ ಹಿಂದೆ ಹೇಳಿರುವ ಅಹಿಂಸಾದಿಗುಣ ಗಳಿಂದ ಕೂಡಿರುವಿಕೆಯೇ ಮುಖ್ಯವಾದ ಉಪವಾಸವೆಂದು ತಿಳಿಯಬೇಕು. ಶರೀರ ಶೋಷಣೆಮಾತ್ರವೇ ಉಪವಾಸವಲ್ಲ. ನಿರ್ಮಲವಾಗಿಯೂ ಸುಖಕರವಾದ ಅವತರಣಮಾರ್ಗವುಳ್ಳದ್ದಾಗಿಯೂ, ಶುದ್ಧವಾಗಿಯೂ, ಸತ್ಯವೆಂಬ ದಡವುಳ್ಳ ದ್ದಾಗಿಯೂ ಇರುವ ಶುದ್ಧಮನಸ್ಸೆಂಬ ಮಾನಸಸರೋವರದ ತೀರ್ಥದಲ್ಲಿ ಸ್ನಾನ ಮಾಡಬೇಕು. ಇದೇ ಉತ್ತಮವಾದ ತೀರ್ಥ. ಈ ವಿಷಯದಲ್ಲಿ ಈ ಪೌರಾಣಿಕ ಶ್ಲೋಕವನ್ನೂ ಪ್ರಾಜ್ಞರು ಉದಾಹರಿಸಿರುತ್ತಾರೆ. ವೈವಸ್ವತನಾದ ಯಮದೇವನೇ ಯಾವಾಗಲೂ ನಿನ್ನ ಹೃದಯದಲ್ಲಿ ಸನ್ನಿಹಿತನಾಗಿದ್ದಾನೆ. ಅವನೊಡನೆ ನಿನಗೆ ವಿವಾದವಿಲ್ಲದೆ ಸಾಮಂಜಸ್ಯ ಉಂಟಾದಲ್ಲಿ ಪಾಪನಾಶವೇ ಮೊದಲಾದ ಫಲಗಳ ಗಾಗಿ ಗಂಗೆಗೂ ಹೋಗಬೇಡ, ಕುರುಕ್ಷೇತ್ರಾದಿ ಪುಣ್ಯಸ್ಥಾನಗಳಿಗೂ ಹೋಗಬೇಡ (ಇಲ್ಲಿ ಗಂಗಾದಿಗಮನನಿಷೇಧದಲ್ಲಿ ತಾತ್ಪರ್ಯವಿಲ್ಲ. ಮನಸ್ಸಮ್ಯಮವೆಂಬ ಯಮ

ಆತ್ಮನಶ್ಚಾವಿವಾದಶ್ಚೇನ್ನಾಗಂಗಾಂ ಮಾ ಕುರೂನ್ಗಮಃ ।
ಮನೋ ಲಾಘವದಂ ಕರ್ಮ ಸತತಂ ತು ಸಮಾಚರೇತ್ ।
ಸರ್ವಾಣಿ ತಸ್ಯ ಪುಣ್ಯಾನಿ ಭವನ್ತ್ಯಭ್ಯಧಿಕಾನಿ ತು ॥ ೮ ॥

ಮನಃಶೌಚಸಮಾಯುಕ್ತೋ ಯಾನಿ ಮರ್ತ್ಯೋ ನಿಷೇವತೇ ।
ಮನ ಏವ ಮನುಷ್ಯಸ್ಯ ಪೂರ್ವರೂಪಾಣಿ ಶಂಸತಿ ॥ ೯ ॥

ಮನ ಏವ ವಿಜಾನಾತಿ ಕರ್ಮಣೋ ಗುರುಲಾಘವಂ ।
ಸತ್ಯಂ ಶೌಚಂ ದಮಃ ಶೌಚಂ ಶೌಚಂ ಶಾರೀರಮೇವ ಚ ॥ ೧೦ ॥

ಸರ್ವಾಣಿ ತಸ್ಯ ಶೌಚಾನಿ ಯಸ್ಯ ಶುದ್ಧಂ ಮನಃ ಸದಾ ।
ಮನಃಶುದ್ಧಿವಿಹೀನಸ್ಯ ಸರ್ವೇ ಶೌಚಾ ನಿರರ್ಥಕಾಃ ॥ ೧೧ ॥

ನ ತು ಸಾ ಕೃತ್ರಿಮಾ ಶಕ್ಯಾ ಕರ್ತುಂ ನಾಸ್ತಿಕ್ಯವರ್ಜಿತೈಃ ।
ಯಸ್ಯದೋಷಪರಿತ್ಯಕ್ತಂ ಗುಣಾಧೀನಂ ಸದಾ ಮನಃ ॥ ೧೨ ॥

ಸಿಗೆ ಅಧೀನನಾಗಿರಬೇಕೆಂಬುದರಲ್ಲಿ ತಾತ್ಪರ್ಯ.) ಯಾವಾಗಲೂ ಮನಸ್ಸಿಗೆ ಹಿತವಾಗಿರುವ ಕಾರ್ಯವನ್ನೇ ಮಾಡಬೇಕು. ಅಂತಹವನಿಗೆ ಎಲ್ಲಾ ಕಾರ್ಯಗಳೂ ಪುಣ್ಯಪ್ರದವಾಗಿಯೂ, ಅಧಿಕಫಲಪ್ರದಗಳಾಗಿಯೂ ಆಗುತ್ತವೆ.

೯-೧೩. ಶುಚಿಯಾದ ಮನಸ್ಸಿನಿಂದ ಕೂಡಿ ಯಾವ ಯಾವ ಕಾರ್ಯಗಳನ್ನು ಮಾಡುತ್ತಾನೆಯೋ ಅವೆಲ್ಲವೂ ಅವನಿಗೆ ಈ ರೀತಿಯಾಗಿಯೇ ಫಲಿಸುತ್ತವೆ. ಮನಸ್ಸಿನ ಶುದ್ಧಿಯೇ ಮನುಷ್ಯನ ಪೂರ್ವಪುಣ್ಯಗಳಿಗೆ ಸೂಚಕವಾಗುತ್ತದೆ. ಆಯಾಯ ಕಾರ್ಯಗಳ ಗೌರವಲಾಘವಗಳನ್ನೂ ಶುದ್ಧವಾದ ಮನಸ್ಸೇ ಅರಿಯುತ್ತದೆ. ಯಾವನಿಗೆ ಮನಸ್ಸು ಸರ್ವದಾ ಶುದ್ಧವಾಗಿರುತ್ತದೆಯೋ ಅವನಿಗೆ ಸತ್ಯವೆಂಬ ಶೌಚವೂ, ದಮವೆಂಬ ಶೌಚವೂ, ಶಾರೀರವಾದ ಶೌಚವೂ ಸಿದ್ಧಿಸಿದಂತೆಯೇ ಆಗುತ್ತವೆ. ಮನಶ್ಶುದ್ಧಿ ಇಲ್ಲದಿರುವವನಿಗೆ ಇತರ ಶೌಚಗಳಿದ್ದರೂ ಅವು ವ್ಯರ್ಥವಾಗುತ್ತವೆ. ಧಾರ್ಮಿಕ ಸ್ವಭಾವವಿರುವವರು ಕೃತ್ರಿಮವಾದ ಮನಶ್ಶೌಚವನ್ನು ಹೊಂದಿರಲು ಸಾಧ್ಯವೇ ಇಲ್ಲ. ಯಾವನ ಮನಸ್ಸು ದೋಷಗಳಿಂದ ದೂರವಾಗಿ ಸದ್ಗುಣಗಳಿಗೆ ಆಶ್ರಯವಾಗಿರುತ್ತದೆಯೋ ಅವನೇ ಅನೇಕ ಯಜ್ಞಯಾಜ

ಸ ಏವ ಯಜತೇ ಯಜ್ಞೈಃ ಸ ಏಕಸ್ತಪ್ಯತೇ ತಪಃ ।
ಸ ಏಕಃ ಸರ್ವಮಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ ।
ತಸ್ಮಾದ್ಧಿ ಸರ್ವಶೌಚಾನಾಂ ಮನಃ ಶೌಚಂ ಪರಂಸ್ಮೃತಂ　　॥ ೧೩ ॥

ಆತ್ಮಾ ನದೀ ಪುಣ್ಯತಟಾ ಸುತೀರ್ಥಾ
ಸತ್ಯೋದಕಾ ಧೃತಿಕೂಲಾ ದಯೋರ್ಮಿಃ ।
ಯಸ್ಯಾಂ ಸ್ನಾತಃ ಪೂಯತೇ ಪುಣ್ಯಕರ್ಮಾ
ತೀರ್ಥಂಹ್ಯಾತ್ಮಾ ನಿತ್ಯಸಂಭೋಗ ಏವ　　॥ ೧೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಮನಃಶೌಚ ನಿರೂಪಣೋನಾಮ ಪಂಚಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಯಾಗಿಯೂ ಅವನೇ ತಪಸ್ವಿಯಾಗಿಯೂ ಆಗುತ್ತಾನೆ. ಅವನೊಬ್ಬನು ಮಾತ್ರ ಅಭಿಮತವಾದ ಎಲ್ಲಾ ಫಲಗಳನ್ನೂ ಹೊಂದಲು ಸಮರ್ಥನಾಗುತ್ತಾನೆ. ಆದುದ ರಿಂದ ಎಲ್ಲಾ ಶೌಚಗಳಿಗಿಂತಲೂ ಮನಃಶೌಚವೆಂಬುದು ಬಹಳ ಮೇಲಾದ್ದು.

೧೪. ಸತ್ಯವೆಂಬ ಜಲದಿಂದಲೂ, ಧೈರ್ಯವೆಂಬ ತೀರದಿಂದಲೂ, ದಯೆ ಎಂಬ ಅಲೆಗಳಿಂದಲೂ, ಕೂಡಿರುವ ಆತ್ಮವೆಂಬ ನದಿಯು ಪರಿಶುದ್ಧವಾದ ತೀರ್ಥ. ಈ ತೀರ್ಥದಲ್ಲಿ ಸ್ನಾನಮಾಡಿದ ಪುಣ್ಯಕರ್ಮನು ಪರಿಶುದ್ಧನಾಗುತ್ತಾನೆ. ಇಂತಹ ಆತ್ಮವಸ್ತುವು ಸರ್ವಸೇವ್ಯವಾದ ವಸ್ತು. ನಿತ್ಯಾನುಭವಕ್ಕೆ ಅರ್ಹವಾದವಸ್ತು. (ಸತ್ಯ, ಧೃತಿ, ದಯಾದಿಗಳಿಂದ ಕೂಡಿ ಆತ್ಮಯಾಥಾತ್ಮ್ಯಜ್ಞಾನ ಹೊಂದಿದವನು ಪುಣ್ಯಶಾಲಿ. ಆದುದರಿಂದ ಅಂತಹ ಆತ್ಮಾನುಭವ ಹೊಂದಲು ವಿವೇಕಿಗಳು ತ್ವರೆಪಡಬೇಕೆಂದು ತಾತ್ಪರ್ಯ.)

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಮನಃಶೌಚನಿರೂಪಣವೆಂಬ ಇನ್ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಟ್‌ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಶ್ರದ್ಧಾನ್ವಿತೇನ ಮನಸಾ ಯದ್ಯತ್ಕಿಂಚಿತ್ಸಮಾಚರೇತ್ ।
ತತ್ತದ್ಬಹುಫಲಂ ತಸ್ಯ ಜಾಯತೇ ಲೋಕಯೋರ್ದ್ವಯೋಃ || ೧ ||

ಶ್ರದ್ಧಾಮಯೋಽಯಂ ಪುರುಷಃ ಯೋಯಚ್ಛ್ರದ್ಧಃ ಸ ಏವಸಃ ।
ದೇವಶ್ರದ್ಧಾ ನರಾ ದೇವಾಃ ಕಥಿತಾ ದೇವಯಾಜಿನಃ || ೨ ||

ಪಿತೃಶ್ರದ್ಧಾಶ್ಚ ಪಿತರೋ ದೈತ್ಯೇಶ್ರದ್ಧಾ ದಿತೇ ಸುತಾಃ ।
ಪಾಪಶ್ರದ್ಧಾಸ್ತಥಾ ಪಾಪಾ ವಿಜ್ಞೇಯಾ ನರಕಂಗಮಾಃ || ೩ ||

ಇನ್ನೂರ ಎಪ್ಪತ್ತಾರನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಶಾಸ್ತ್ರವಿಹಿತವಾದ ಕಾರ್ಯಗಳನ್ನು ಮಾಡುವವನು ಶ್ರದ್ಧೆಯಿಂದ ಕೂಡಿ ಯಾವ ಯಾವ ಕಾರ್ಯವನ್ನು ಮಾಡುತ್ತಾನೆಯೋ ಅವನಿಗೆ ಆಯಾಯ ಕಾರ್ಯಗಳು ಲೋಕದ್ವಯದಲ್ಲಿಯೂ ಹೆಚ್ಚಾಗಿ ಫಲಪ್ರದ ವಾಗುತ್ತವೆ. ಪುರುಷನು ಶ್ರದ್ಧಾಮಯ, ಇವನು ಯಾವ ದೇವತಾ ವಿಷಯದಲ್ಲಿ ಶ್ರದ್ಧೆಯಿಂದ ಪೂಜಾದಿ ಕಾರ್ಯಗಳನ್ನು ಮಾಡುತ್ತಾಯೋ ಆಗ ಆ ದೇವತೆಯ ಅನುಗ್ರಹಕ್ಕೆ ಪಾತ್ರನಾಗಿ ತನ್ಮಯನೇ ಆಗುತ್ತಾನೆ. (ತತ್ಪ್ರಚುರನೆಂದು ತಾತ್ಪರ್ಯ) ದೇವತೆಗಳಲ್ಲಿ ಶ್ರದ್ಧೆಯುಳ್ಳ ಮನುಷ್ಯರು ಅವರ ಅನುಗ್ರಹದಿಂದ ತತ್ಪರರಾಗಿ ದೇವತಾ ಮಯರಾಗುತ್ತಾರೆ. ಇವರೇ ದೇವಯಾಜಿಗಳೆನಿಸುತ್ತಾರೆ. ಪಿತೃದೇವತೆಗಳಲ್ಲಿ ಶ್ರದ್ಧೆಯುಳ್ಳವರು ಅವರ ಅನುಗ್ರಹಾತಿಶಯದಿಂದ ಪಿತೃರೂಪರಾಗಿಯೂ ದೈತ್ಯ ಶ್ರದ್ಧೆಯುಳ್ಳವರು ದೈತ್ಯಮಯರಾಗಿಯೂ ಆಗುತ್ತಾರೆ. ಪಾಪಶ್ರದ್ಧೆಯುಳ್ಳವರೂ ಪಾಪಿಗಳಾಗಿ ನರಕಭಾಗಿಗಳಾಗುತ್ತಾರೆ. ಆದುದರಿಂದ ಧರ್ಮಜ್ಞನಾಗಿ

ತಸ್ಮಾಚ್ಛ್ರದ್ಧಾಂ ಸಮಾಸ್ಥಾಯ ಧರ್ಮಂ ಧರ್ಮಿ ಸಮಾಚರೇತ್ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ।
ಆಸ್ತಿಕ್ಯಭಾವಮಾಸ್ಥಾಯ ನರಃ ಶ್ರದ್ಧಾಸಮನ್ವಿತಃ ॥ ೪ ॥

ನಿತ್ಯಂ ಪುಣ್ಯಾನಿ ಕುರ್ವೀತ ಪಾಪಾನಿ ಪರಿವರ್ಜಯೇತ್ ।
ಪುಣ್ಯಂ ಬಹುಫಲಂ ತಸ್ಯ ಶ್ರದ್ಧಾಮಾಸ್ಥಾಯ ಯತ್ಕೃತಂ ॥ ೫ ॥

ಶ್ರದ್ಧಾ ಪವಿತ್ರಂ ಪರಮಂ ಹಿ ಲೋಕೇ
ಶ್ರದ್ಧಾ ಶರೀರಂ ಪುರುಷಸ್ಯ ಚೋಕ್ತಂ ।
ಶ್ರದ್ಧಾಂ ಸಮಾಸ್ಥಾಯ ನರಶ್ಚ ಕೃತ್ವಾ
ಪುಣ್ಯಾನಿ ಪುಣ್ಯಾಂ ಗತಿಮಾಪ್ನುವಂತಿ ॥ ೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಶ್ರದ್ಧಾಫಲವರ್ಣನೋ ನಾಮ ಷಟ್ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಧರ್ಮಾನುಷ್ಠಾನಮಾಡುವನು ಶ್ರದ್ಧೆಯಿಂದ ಕೂಡಿಯೇ ಆಯಾಯ ಧರ್ಮಗಳನ್ನೂ ಆಚರಿಸಬೇಕು. ಧರ್ಮಕ್ಕೆ ಅನೇಕದ್ವಾರ (ಮಾರ್ಗ) ಗಳುಂಟು ಆದರೂ ಧಾರ್ಮಿಕನ ಕ್ರಿಯೆಗಳು ವಿಫಲವಾಗುವುದೇ ಇಲ್ಲ.

೪-೬. ಮನುಷ್ಯನಾದವನು ಆಸ್ತಿಕ್ಯಬುದ್ಧಿಹೊಂದಿ ಶ್ರದ್ಧೆಯಿಂದ ಕೂಡಿ ಪುಣ್ಯಕರವಾದ ಕಾರ್ಯದಲ್ಲಿ ಯಾವಾಗಲೂ ನಿರತನಾಗಿರಬೇಕು. ಪಾಪಕರವಾದ ಕಾರ್ಯಗಳಿಂದ ದೂರವಿರಬೇಕು. ಶ್ರದ್ಧೆಯಿಂದ ಮಾಡಿದ ಪುಣ್ಯಕಾರ್ಯವು ಮಹಾ ಫಲವುಳ್ಳದ್ದಾಗುತ್ತದೆ. ಲೋಕದಲ್ಲಿ ಶ್ರದ್ಧೆಯೇ ಪುರುಷನ ಶರೀರ. ಮನುಷ್ಯರು ಶ್ರದ್ಧೆಯಿಂದ ಪುಣ್ಯಕರವಾದ ಕಾರ್ಯಗಳನ್ನು ಮಾಡಿ ಪುಣ್ಯಕರವಾದ ಗತಿಯನ್ನೇ ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯ ಶ್ರದ್ಧಾಫಲವರ್ಣನವೆಂಬ ಇನ್ನೂರ ಎಪ್ಪತ್ತಾರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ನಿತ್ಯಂ ನೈಮಿತ್ತಿಕಂ ಕಾಮ್ಯಂ ಕ್ರಿಯಾಙ್ಗಂ ಮಲಕರ್ಷಣಂ ।
ಕ್ರಿಯಾ ಸ್ನಾನಂ ತಥಾ ಷಷ್ಠಂ ಷೋಢಾ ಸ್ನಾನಂ ಪ್ರಕೀರ್ತಿತಂ ॥ ೧ ॥

ನಿತ್ಯನೈಮಿತ್ತಿಕೌ ಕಾರ್ಯೌ ಉಷ್ಣೋದಕಪರೋದಕೈಃ ।
ತೃತೀಯಂ ಚ ಪರಸ್ನಾನಂ ಯದುಕ್ತಂ ಮಲಕರ್ಷಣಂ ॥ ೨ ॥

ಪಂಚಪಿಂಡಾನ್ಸಮುದ್ಧೃತ್ಯ ಸ್ನಾತವ್ಯಂ ಪರವಾರಿಣಿ ।
ಅತೋಽನ್ಯಥಾ ನರಃ ಸ್ನಾತೋ ದುಷ್ಕೃತಾಂಶೇನ ಲಿಪ್ಯತೇ ॥ ೩ ॥

ಇನ್ನೂರ ಎಪ್ಪತ್ತೇಳನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :— ನಿತ್ಯ, ನೈಮಿತ್ತಿಕ, ಕಾಮ್ಯ, ಕ್ರಿಯಾಙ್ಗ, ಮಲಕರ್ಷಣ, ಕ್ರಿಯಾಸ್ನಾನ ಎಂದು ಸ್ನಾನವು ಆರು ವಿಧವಾಗಿರುತ್ತದೆ ಇವುಗಳಲ್ಲಿ ನಿತ್ಯನೈಮಿತ್ತಿಕಸ್ನಾನಗಳನ್ನು ಉಷ್ಣೋದಕದಿಂದಲಾಗಲಿ, ಇತರ ಉದಕದಿಂದಾಗಲಿ ಮಾಡಬಹುದು. ಮೂರನೆಯ ಮತ್ತು ಮಲಕರ್ಷಣವೆಂಬ ಸ್ನಾನವನ್ನೂ ಸಹ ಹಾಗೆಯೇ ಮಾಡಬಹುದು. ಕೊನೆಯದಾದ ಕ್ರಿಯಾ ಸ್ನಾನವನ್ನು ಹೊರಗಿನ ಜಲದಲ್ಲಿಯೇ ನೀರಿನಿಂದ ಐದು ಮಣ್ಣಿನ ಉಂಡೆಗಳನ್ನು ಹೊರಕ್ಕೆ ತೆಗೆದುಹಾಕಿ ಮಾಡಬೇಕು. ಇದನ್ನು ಬಿಟ್ಟು ಬೇರೆ ವಿಧವಾಗಿ ಸ್ನಾನಮಾಡಿದವನು ಪಾಪಾಂಶದಿಂದ ಸಂಬಂಧ ಹೊಂದುತ್ತಾನೆ. ಸ್ನಾನಮಾಡಿದರೂ ದೇಹಶೌಚಮಾತ್ರ ಹೊಂದು

ಸ್ನಾತಃ ಶುದ್ಧಿಮವಾಪ್ನೋತಿ ನ ತುಸ್ನಾನಫಲಂ ನರಃ ।
ಉದ್ಧೃತ್ಯಪಂಚಪಿಂಡಾನಿ ಸ್ನಾತೋಽಪಿ ಪರವಾರಿಣಾ ॥ ೪ ॥

ವಹ್ನಿತಪ್ತಾಂಬುನಾ ಸ್ನಾತೋ ನಾಪ್ನೋತಿ ಸ್ನಾನಜಂಫಲಂ ।
ಸ್ನಾತಃ ಶುದ್ಧಿಮವಾಪ್ನೋತಿ ಕರ್ಮಣ್ಯಶ್ಚೈವ ಜಾಯತೇ ॥ ೫ ॥

ತಸ್ಮಾತ್ಪುಣ್ಯೇಷು ತೀರ್ಥೇಷು ಸಾಗರೇಷು ಸರಸ್ಸು ಚ ।
ಸರಿತ್ಸ್ವಪಿ ಚ ದಿವ್ಯಾಸು ತಥಾ ಪ್ರಸ್ರವಣೇಷ್ವಪಿ ॥ ೬ ॥

ಧರ್ಮಾರ್ಥಮಾಚರೇತ್ಸ್ನಾನಂ ತೇನ ನಾಕೇ ಮಹೀಯತೇ ।
ತೋಯಾಲಾಭೇ ತಥಾಲಸ್ಯೇ ನಿತ್ಯನೈಮಿತ್ತಿಕಾವುಭೌ ॥ ೭ ॥

ಮಲಾಪಕರ್ಷಣಂ ಸ್ನಾನಂ ತೃತೀಯಂ ಚ ಸಮಾಚರೇತ್ ।
ಶುದ್ಧಿಮಾತ್ರಮವಾಪ್ನೋತಿ ತಪ್ತೋದಕಪರೋದಕೈಃ ॥ ೮ ॥

ಸ್ರವಂತಿರಾತ್ರೌ ಛಿದ್ರಾಣಿ ಸುಪ್ತಸ್ಯ ಪುರುಷಸ್ಯ ತು ।
ತಸ್ಮಾತ್ಕಲ್ಯಮಥೋತ್ಥಾಯ ಸ್ನಾನಂ ನಿತ್ಯಂ ಸಮಾಚರೇತ್ ॥ ೯ ॥

ತ್ತಾನೆಯೇ ಹೊರತು ಆವನಿಗೆ ಯಾವ ಸ್ನಾನಫಲವೂ ಇಲ್ಲ. ಪಂಚಪಿಂಡಗಳ ಉದ್ಧರಣಪೂರ್ವಕವಾಗಿ ಹೊರಗಿನ ಜಲದಲ್ಲಿ ಸ್ನಾನಮಾಡಿದವನು ಬಿಸಿನೀರಿನಲ್ಲಿ ಪುನಃಸ್ನಾನಮಾಡಿದ್ದೇ ಆದರೆ ಅವನಿಗೆ ಯಾವ ಸ್ನಾನಫಲವೂ ಉಂಟಾಗುವುದಿಲ್ಲ.

೫–೯. ಸ್ನಾನಮಾಡಿದವನು ಪರಿಶುದ್ಧನಾಗುತ್ತಾನೆ. ಕರ್ಮಾಚರಣೆಗೆ ಅರ್ಹನೂ ಆಗುತ್ತಾನೆ. ಆದ್ದರಿಂದ ಪುಣ್ಯತೀರ್ಥಗಳಲ್ಲಾಗಲಿ, ಸಮುದ್ರಗಳಲ್ಲಿಯಾಗಲಿ, ಸರೋವರಗಳಲ್ಲಾಗಲಿ, ದಿವ್ಯನದಿಗಳಲ್ಲಾಗಲಿ, ಗಿರಿಝರಿಗಳಲ್ಲಾಗಲಿ, ಧರ್ಮಸಂಗ್ರಹಕ್ಕಾಗಿ ಸ್ನಾನ ಮಾಡಬೇಕು. ಇದರಿಂದ ಸ್ವರ್ಗಸುಖಪ್ರಾಪ್ತಿಯೂ ಉಂಟಾಗುತ್ತದೆ. ಸರಿಯಾದ ಜಲವು ಸಿಕ್ಕದಿದ್ದಲ್ಲಿ ಅಥವಾ ದೇಹಾಲಸ್ಯವಿದ್ದಲ್ಲಿ ನಿತ್ಯನೈಮಿತ್ತಿಕ ಸ್ನಾನಗಳನ್ನೂ, ಮೂರನೆಯ ಸ್ನಾನವನ್ನೂ, ಮಲಾಪಕರ್ಷಣ ಸ್ನಾನವನ್ನೂ ಸಹ ಬಿಸಿನೀರಿನಿಂದಲಾಗಲಿ, ಕೂಪೋದಕದಿಂದಾಗಲಿ ಮಾಡಬಹುದು. ಇದರಿಂದ ಕರ್ಮಾನುಷ್ಠಾನಕ್ಕೆ ತಕ್ಕ ಶುದ್ಧಿಮಾತ್ರವೇ ಉಂಟಾಗುತ್ತದೆ. ರಾತ್ರಿಯಲ್ಲಿ ಮಲಗಿದ ಮನುಷ್ಯನಿಗೆ ದೇಹದ ಛಿದ್ರಗಳಿಂದ ಮಲವು ಸ್ರವಿಸುತ್ತದೆ. ಆದುದರಿಂದ ಬೆಳಿಗ್ಗೆ ಮುಂಚಿತವಾಗಿಯೇ ಎದ್ದು ನಿತ್ಯವೂ ಸ್ನಾನಮಾಡಲೇಬೇಕು ಸ್ನಾನವಿಲ್ಲದೆಯಾವ ಕ್ರಿಯೆಯನ್ನು ಮಾಡಿದರೂ ಅದು ವಿಫಲವಾಗುತ್ತದೆ.

ಕ್ರಿಯಾನೈಷ್ಫಲ್ಯಮಾಪ್ನೋತಿ ಸ್ನಾನಹೀನಃ ಸಮಾಚರನ್ ।
ಯಥಾಕಥಂಚಿತ್ಕುರ್ವೀತ ಸ್ನಾನಂ ನಿತ್ಯಮತೋ ಬುಧಃ ॥ ೧೦ ॥

ಸ್ನಾತಸ್ತು ತರ್ಪಣಂ ಕೃತ್ವಾ ದೇವಾನಾಂ ಪಿತೃಭಿಃ ಸಹ ।
ಸ್ನಾತೋ ಭವತಿ ಧರ್ಮಾತ್ಮಾ ನಾನ್ಯಥಾ ಸ್ನಾತ ಉಚ್ಯತೇ ॥ ೧೧ ॥

ಸೂತಕೇ ಮೃತಕೇ ಸ್ನಾತೋ ನ ಕುರ್ಯಾತ್ತರ್ಪಣಕ್ರಿಯಾಂ ।
ಮೃತಕೇ ತರ್ಪಣಂ ಕುರ್ಯಾನ್ಮೃತಸ್ಯೈಕಸ್ಯ ಪಂಡಿತಃ ॥ ೧೨ ॥

ಸ್ನಾತಃ ಶೌಚಮವಾಪ್ನೋತಿ ಸ್ನಾನಂ ತುಷ್ಟಿಕರಂ ಪರಂ ।
ಬಾಹ್ಯಮಾಭ್ಯಂತರಂ ದೋಷಂ ಸ್ನಾನೇನ ಪ್ರಣುದತ್ಯಪಿ ॥ ೧೩ ॥

ದುಃಸ್ವಪ್ನಶಮನಂ ಸ್ನಾನಂ ಚಾಮಂಗಲ್ಯಪ್ರಣಾಶನಂ ।
ಮಂಗಲ್ಯಜನನಂ ಮುಖ್ಯಂ ಮನಃಶೌಚಕರಂ ಪರಂ ॥ ೧೪ ॥

ನಾಪ್ನೋತಿ ನಾರಕಂ ದುಃಖಂ ನಿತ್ಯಸ್ನಾಯೀ ನರೋತ್ತಮಃ ।
ವಹ್ನಿವೃದ್ಧಿಕರಂ ಸ್ನಾನಂ ಸ್ನಾನಂ ಸೌಭಾಗ್ಯವರ್ಧನಂ ॥ ೧೫ ॥

೧೦–೧೪. ಆದುದರಿಂದ ಪಂಡಿತನಾದವನು ಹೇಗಾದರೂ ಒಂದು ಕ್ರಮದಲ್ಲಿ ನಿತ್ಯವೂ ಸ್ನಾನಮಾಡಬೇಕು. ಸ್ನಾನಮಾಡಿದವನು ಅದಕ್ಕೆ ಅಂಗವಾಗಿ ದೇವ ಪಿತೃತರ್ಪಣವನ್ನು ಮಾಡಬೇಕು. ಹೀಗೆ ಮಾಡಿದಲ್ಲಿಯೇ ಅವನು ಸ್ನಾನಮಾಡಿದಂತಾಗುತ್ತದೆ. ಇಲ್ಲದಿದ್ದರೆ ಅವನು ಸ್ನಾತನಾಗುವುದೇ ಇಲ್ಲ. ಸೂತಕದಲ್ಲಿಯೂ ಮೃತಾಶೌಚದಲ್ಲಿಯೂ ಸ್ನಾನಮಾಡಿದಾಗ ತರ್ಪಣವನ್ನು ಮಾಡಕೂಡದು. ಮೃತಸ್ನಾನದಲ್ಲಿ ಮಾತ್ರ ಮೃತನನ್ನು ಮಾತ್ರ ಉದ್ದೇಶಿಸಿ ತರ್ಪಣಮಾಡಬೇಕು. ಸ್ನಾನ ಶೌಚಕರ, ಮತ್ತು ಮನಸ್ಸಿಗೂ ಹರ್ಷಕರ. ಬಾಹ್ಯವಾದ ಮತ್ತು ಅಭ್ಯಂತರವಾದ ಎಲ್ಲಾ ದೋಷಗಳನ್ನೂ ಸ್ನಾನಮಾಡಿದವನು ಹೋಗಲಾಡಿಸಿಕೊಳ್ಳುತ್ತಾನೆ. ಸ್ನಾನದಿಂದ ದುಃಸ್ವಪ್ನಗಳೂ ಶಾಂತವಾಗುತ್ತವೆ. ಅಮಂಗಲವೂ ನೀಗುತ್ತದೆ. ಮಂಗಲಪ್ರದವೂ ಮನಸ್ಸಿಗೆ ಶುಚಿಕರವೂ ಆಗಿರುತ್ತದೆ. ಸ್ನಾನವನ್ನು ನಿತ್ಯವೂ ಮಾಡುವವನು ನರಕದುಃಖಕ್ಕೆ ಭಾಗಿಯಾಗುವುದಿಲ್ಲ.

೧೫–೨೦ ಸ್ನಾನವು ಅಗ್ನಿವೃದ್ಧಿಗೆ ಕಾರಣ. ಮತ್ತು ಸೌಭಾಗ್ಯಾಭಿವೃದ್ಧಿಗೂ ಕಾರಣ ದೌರ್ಭಾಗ್ಯಕ್ಕೆ ನಾಶಕ. ಮತ್ತು ಪಾಪನಾಶಕ. ಸ್ನಾನಮಾಡಿದ ಮನುಷ್ಯನೇ

ಅಲಕ್ಷ್ಮ್ಯಾಃ ಶಮನಂ ಸ್ನಾನಂ ಸ್ನಾನಂ ದುರಿತನಾಶನಂ ।
ಸ್ನಾತಃ ಕ್ರಿಯಾಸಮರ್ಥಶ್ಚ ತಥಾ ಭವತಿ ಮಾನವಃ ॥ ೧೬ ॥

ಶಿರಸಾ ತು ವಿನಾಸ್ನಾತೋ ನ ಸ್ನಾತಃ ಪರಿಕೀರ್ತಿತಃ ।
ಕಲ್ಯೇಽಸಮರ್ಥಃ ಸ್ನಾನೇ ತು ಪ್ರಾಪ್ತೇ ಭೋಜನಕರ್ಮಣಿ ॥ ೧೭ ॥

ಧ್ರುವಂ ಸಮಾಚರೇತ್ಸ್ನಾನಂ ಸ್ವರ್ಗಮಾರ್ಗಪ್ರದರ್ಶಕಂ ।
ಶಿರಃಸ್ನಾತಸ್ತು ಕುರ್ವೀತ ದಿವ್ಯಂ ಪಿತ್ರ್ಯಂ ದ್ವಿಜೋತ್ತಮಾಃ ॥ ೧೮ ॥

ದಿವ್ಯಪಿತ್ರ್ಯಾಣಿ ಕರ್ಮಾಣಿ ನಾಸ್ನಾತಸ್ತು ಸಮಾಚರೇತ್ ।
ವಿನಾಪಿ ತೀರ್ಥಸಲಿಲಾದ್ದೈವೇ ಪೈತ್ರೇ ಚ ಕರ್ಮಣಿ ॥ ೧೯ ॥

ಸದಾ ಸಮಾಚರೇತ್ಸ್ನಾನಂ ದೇಹಶುದ್ಧಿಕರಂ ಪರಂ ।
ಸ್ನಾನಾದೇವ ಪರಂ ಪುಣ್ಯಂ ತೀರ್ಥಸ್ನಾತಃ ಸಮಶ್ನುತೇ ॥ ೨೦ ॥

ಭೂಮಿಷ್ಠಂತೂದ್ಧೃತಾತ್ಪುಣ್ಯಂ ತಸ್ಮಾತ್ಪ್ರಸ್ರವಣೋದಕಂ ।
ತಸ್ಮಾಚ್ಚ ನೈರ್ಝರಂ ತೋಯಂ ನೈರ್ಝರಾದಪಿ ಸಾರಸಂ ॥ ೨೧ ॥

ಶಾಸ್ತ್ರೀಯ ಕ್ರಿಯೆಯಲ್ಲಿ ಸಮರ್ಥನಾಗುತ್ತಾನೆ. ಶಿರಃಸ್ನಾನವಿಲ್ಲದೆ ಕೇವಲ ಕಂಠ ಮಾತ್ರದ ಸ್ನಾನವು ಸ್ನಾನವೇ ಅಲ್ಲ. ಪ್ರಾತಃಕಾಲದಲ್ಲಿ ಸ್ನಾನಮಾಡಲು ಅಸಮರ್ಥ ನಾಗಿದ್ದಲ್ಲಿ ಭೋಜನಕಾಲಬಂದಾಗಲಾದರೂ ಸ್ನಾನಮಾಡಬೇಕು. ಸ್ನಾನವು ಸ್ವರ್ಗಮಾರ್ಗದ ದೀಪ. ದೇವಕಾರ್ಯವನ್ನಾಗಲಿ, ಪಿತೃಕಾರ್ಯವನ್ನಾಗಲಿ ಶಿರಃ ಸ್ನಾನಮಾಡಿಯೇ ಆಚರಿಸಬೇಕು. ಈ ಕರ್ಮಗಳನ್ನು ಸ್ನಾನಮಾಡದೆ ಮಾಡ ಬಾರದು ತೀರ್ಥಜಲವಿಲ್ಲದಿದ್ದರೂ ದೇವಪಿತೃಕರ್ಮಗಳಲ್ಲಿ ದೇಹಶುದ್ಧಿಕರವಾದ ಸ್ನಾನವನ್ನು ಬೇರೆ ಜಲದಲ್ಲಾಗಲಿ ಮಾಡಿಯೇ ಮಾಡಬೇಕು. ತೀರ್ಥದಲ್ಲಿ ಸ್ನಾನ ಮಾಡಿದವನು ಆ ಸ್ನಾನಮಾತ್ರದಿಂದಲೇ ಹೆಚ್ಚಾದ ಪುಣ್ಯವನ್ನು ಗಳಿಸುತ್ತಾನೆ.

೨೧–೨೩. ಉದ್ಧೃತೋದಕಕ್ಕಿಂತಲೂ ಸ್ವಾಭಾವಿಕವಾಗಿ ಭೂಮಿಯಲ್ಲೇ ಇರುವ ಜಲವು ಶ್ರೇಷ್ಠ. ಅದಕ್ಕಿಂತಲೂ ಹರಿಯುವ ನೀರು. ಅದಕ್ಕಿಂತಲೂ ಗಿರಿಝರಿಯ ನೀರು. ಅದಕ್ಕಿಂತಲೂ ಸರೋವರದ ನೀರು. ಅದಕ್ಕಿಂತಲೂ ನದಿಯ

ಸಾರಸಾದಪಿ ನಾದೇಯಂ ತಸ್ಮಾತ್ಸಾಧುಪರಿಗ್ರಹಂ ।
ಸರ್ವೇಭ್ಯಶ್ಚ ತಥಾ ಪುಣ್ಯಂ ಕಥಿತಂ ಜಾಹ್ನವೀಜಲಂ ॥ ೨೨ ॥

ಗಂಗಾಪ್ಲುತಾಂಗಾ ದಿವಿದೇವಭೋಗಾ
ನ್ಭುಕ್ತ್ವಾ ಚಿರಂ ಪ್ರಾಪ್ಯ ಮನುಷ್ಯಭಾವಂ ।
ಭವಂತಿ ಲೋಕೇ ಸುಖಿನಃ ಸಮೃದ್ಧಾ
ಯಶೋನ್ವಿತಾ ಧರ್ಮಪರಾ ವಿದುಃಖಾಃ ॥ ೨೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸ್ನಾನವರ್ಣನೋ ನಾಮ ಸಪ್ತಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ನೀರು. ಅದಕ್ಕಿಂತಲೂ ಸತ್ಪುರುಷರು ಸ್ನಾನಾದಿಗಳಿಂದ ಪರಿಗ್ರಹಿಸಿದ ನೀರು ಉತ್ಕೃಷ್ಟವಾಗುತ್ತದೆ. ಎಲ್ಲಾ ಜಲಕ್ಕಿಂತಲೂ ಗಂಗಾಜಲವು ಪುಣ್ಯಕರವಾದದ್ದು ಗಂಗೆಯಲ್ಲಿ ಸ್ನಾನಮಾಡಿದವರು ಸ್ವರ್ಗದಲ್ಲಿ ಬಹುಕಾಲ ದೇವಭೋಗಗಳನ್ನು ಅನುಭವಿಸಿ ನಂತರ ಮನುಷ್ಯರಾಗಿ ಉದ್ಭವಿಸಿ ಸುಖಿಗಳಾಗಿಯೂ ಧನಧಾನ್ಯಸಮೃದ್ಧರಾಗಿಯೂ, ಯಶಸ್ವಿಗಳಾಗಿಯೂ ಧಾರ್ಮಿಕರಾಗಿಯೂ ನಿರ್ದುಃಖರಾಗಿಯೂ ಬಾಳುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಸ್ನಾನ ವರ್ಣನವೆಂಬ ಇನ್ನೂರ ಎಪ್ಪತ್ತೇಳನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಜಪ್ಯಂ ಸಿದ್ಧಿಕರಂ ಲೋಕೇ ದ್ವಿಜಾನಾಂ ಪರಿಕೀರ್ತಿತಂ ।
ಜಪ್ಯೇನ ಸಿದ್ಧಿಮಾಪ್ನೋತಿ ವಿಶೇಷೇಣ ದ್ವಿಜೋತ್ತಮಾಃ ॥ ೧ ॥

ಜಪ್ಯೇನೈವ ತು ಸಂಸಿಧ್ಯೇ ದ್ಬ್ರಾಹ್ಮಣೋ ನಾತ್ರ ಸಂಶಯಃ ।
ಕುರ್ಯಾದನ್ಯಂ ನವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥ ೨ ॥

ದಾರ್ವಾಸನೇ ಸುಖಾಸೀನಸ್ತ್ವಥವಾಪಿ ಕುಶಾಸನೇ ।
ಜಪ್ಯಂ ಸಮಾಹಿತಃ ಕುರ್ಯಾದಥವಾಪಿ ಸಮುತ್ಥಿತಃ ॥ ೩ ॥

ಪೂರ್ವೋತ್ತರಾಶಾಭಿಮುಖಃ ಸೂರ್ಯಸ್ಯಾಭಿಮುಖೋಽಥವಾ ।
ದರ್ಭಪಾಣಿಃ ದ್ವಿಜಶ್ರೇಷ್ಠ ಜ್ಞಾತ್ವಾ ಧರ್ಮಸ್ಯ ನಿಶ್ಚಯಂ ॥ ೪ ॥

ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯ.

೧-೪ ಹಂಸವು ಹೇಳುತ್ತದೆ—ಜಪವು ಲೋಕದಲ್ಲಿ ದ್ವಿಜರಿಗೆ ಬಹು ಮಟ್ಟಿಗೂ ಸಿದ್ಧಿಕರವಾದ್ದು. ಜಪವು ಎಲ್ಲಾ ಸಾಧನಗಳಿಗಿಂತಲೂ ವಿಶೇಷವಾದ ಸಿದ್ಧಿಗೆ ಕಾರಣವಾಗುತ್ತದೆ. ಬ್ರಾಹ್ಮಣನಾದವನು ಜಪಮಾತ್ರದಿಂದಲೇ ಇತರ ಕಾರ್ಯಗಳನ್ನು ಮಾಡಲಿ, ಬಿಡಲಿ ಸಿದ್ಧಿಯನ್ನು ಹೊಂದಿಯೇ ಹೊಂದುತ್ತಾನೆ ಎಂದು ಮೈತ್ರಾಯಣೀಯ ಬ್ರಾಹ್ಮಣದಲ್ಲಿ ಹೇಳಿದೆ. ಮರದ ಆಸನದಲ್ಲಿಯಾಗಲೀ ಅಥವಾ ದರ್ಭಾಸನದಲ್ಲಿಯಾಗಲಿ ಸುಖವಾಗಿ ಕುಳಿತು ಅಥವಾ ನಿಂತು ಏಕಮನಸ್ಕತೆಯಿಂದ ಜಪವನ್ನು ಮಾಡಬೇಕು. ಪೂರ್ವ ಅಥವಾ ಉತ್ತರ ದಿಕ್ಕಿಗೆ ಅಭಿಮುಖನಾಗಿರಬೇಕು. ಧರ್ಮದ ಸ್ವರೂಪವನ್ನರಿತು ದರ್ಭಪಾಣಿಯಾಗಿರಬೇಕು

ಋಷಿಂ ಮಂತ್ರಸ್ಯ ವಿಜ್ಞಾಯ ಛಂದೋ ದೈವತಮೇವ ಚ ।
ವಿನಿಯೋಗಂ ಜಪಂ ಕುರ್ಯಾದ್ಧ್ಯಾಯನ್ವೈ ಮಂತ್ರದೇವತಾಂ ॥ ೫ ॥

ನಾತಿದ್ರುತೇನ ಕರ್ತವ್ಯಂ ನ ಚೈವಾತಿವಿಲಂಬಿತಂ ।
ವರ್ಣಾನುಚ್ಚಾರಯೇತ್ಸರ್ವಾನ್ ಜಪ್ಯಕಾಲೇ ದ್ವಿಜೋತ್ತಮಾಃ ॥ ೬ ॥

ಮಂತ್ರಮಾವರ್ತಯೇದ್ವಿದ್ವಾನ್ಯಥಾಶಕ್ತಿ ಹ್ಯತಂದ್ರಿತಃ ।
ಸ್ವಾಧ್ಯಾಯಸ್ತು ಭವತ್ಯುಚ್ಚೈಃ ಉಪಾಂಶುರ್ಜಪ್ಯ ಉಚ್ಯತೇ ॥ ೭ ॥

ಮನಸಾ ತು ತಥಾ ಜಪ್ಯಂ ತಸ್ಮಾದ್ಬಹುಫಲಂ ಸ್ಮೃತಂ ।
ಅಕ್ಷಸೂತ್ರಸ್ತು ಕರ್ತವ್ಯೋ ರುದ್ರಾಕ್ಷೈರ್ದ್ವಿಜಸತ್ತಮಾಃ ॥ ೮ ॥

ಪದ್ಮಾಕ್ಷೈರ್ವಾ ಮಹಾಭಾಗಾಸ್ತ್ವಥವಾ ಪುತ್ರಜೀವಕೈಃ ।
ಮುಕ್ತಾಫಲೈರ್ವಿದ್ರುಮೇಣ ರುಕ್ಮೇಣ ಸ್ಫಟಿಕೇನ ವಾ ॥ ೯ ॥

ಕುಶಾಗುಣೇನ ವಾ ವಿಪ್ರಾಃ ಸಮ್ಯಗ್ಗ್ರಂಥಿಮತಾ ಸತಾ ।
ಗಣನಂ ವಾ ತಥಾ ಕುರ್ಯಾತ್ಸಂಯಗಂಗುಲಿಪರ್ವಭಿಃ ॥ ೧೦ ॥

೫-೮. ಆಯಾಯ ಮಂತ್ರದ ಋಷಿ, ಛಂದಸ್ಸು ದೇವತೆ ಇವನ್ನು ಸರಿಯಾಗಿ ತಿಳಿದು ಮಂತ್ರದೇವತೆಯನ್ನು ಧ್ಯಾನಮಾಡುತ್ತಾ ವಿನಿಯೋಗಕ್ಕೆ ತಕ್ಕಂತೆ ಜಪಿಸ ಬೇಕು. ಮಂತ್ರವನ್ನು ಜಪಿಸುವಾಗ ಬಹಳ ವೇಗದಿಂದಾಗಲಿ ಬಹಳ ವಿಲಂಬ ದಿಂದಾಗಲಿ ಜಪಿಸಬಾರದು. ಜಪಕಾಲದಲ್ಲಿ ಎಲ್ಲಾ ವರ್ಣಗಳನ್ನೂ ಉಚ್ಚರಿಸಬೇಕು. ಮಂತ್ರವನ್ನು ಈ ರೀತಿ ಯಥಾಶಕ್ತಿ ಆವರ್ತಿಮಾಡಬೇಕು. ಗಟ್ಟಿಯಾಗಿ ಉಚ್ಚರಿಸು ವಿಕೆಯು ಸ್ವಾಧ್ಯಾಯ (ಅಧ್ಯಯನ) ವೆಂದೂ ಮೆಲ್ಲಗೆ ಉಚ್ಚರಿಸುವಿಕೆಯು ಜಪ ವೆಂದೂ ಹೇಳಲ್ಪಡುತ್ತದೆ ಮನಸ್ಸಿನಿಂದಲೇ ಮಾಡುವ ಜಪವು ಹೆಚ್ಚು ಫಲಪ್ರದ ವೆಂದು ಹೇಳಲ್ಪಟ್ಟಿದೆ. ಜಪಕ್ಕಾಗಿ ರುದ್ರಾಕ್ಷಗಳಿಂದಾಗಲಿ, ಪದ್ಮಾಕ್ಷಗಳಿಂದಾಗಲಿ, ಪುತ್ರಜೀವಿಮಣಿಗಳಿಂದಾಗಲಿ ಜಪಮಾಲೆಯನ್ನು ಮಾಡಿಕೊಳ್ಳಬೇಕು.

೯-೧೫. ಮುತ್ತುಗಳಿಂದಾಗಲಿ, ಹವಳಗಳಿಂದಾಗಲಿ, ಚಿನ್ನದಿಂದಾಗಲಿ. ಸ್ಫಟಿಕಮಣಿಗಳಿಂದಾಗಲಿ, ಜಪಮಾಲೆಯನ್ನು ಮಾಡಬಹುದು. ದರ್ಭೆಯ ತಂತು ಗಳಿಂದ ಸರಿಯಾಗಿ ಗ್ರಂಥಿಗಳನ್ನು ಮಾಡಿಕೊಂಡಾದರೂ, ಬೆರಳುಗಳ ಗಿಣ್ಣು ಗಳಿಂದಾಗಲಿ ಚನ್ನಾಗಿ ಗಣನೆಮಾಡಬೇಕು. ಈ ವಿಧಾನದಿಂದ ಜಪಮಾಡಿ ಮಂತ್ರ ದೇವತೆಯನ್ನು ಆರಾಧಿಸಿದಲ್ಲಿ ಮನಸ್ಸಿಗೆ ಅಭಿಮತವಾದುದೆಲ್ಲಾ ಆ ದೇವತಾನು

ಏವಂ ಕೃತ್ವಾ ದ್ವಿಜಾ ಜಪ್ಯಮವಶ್ಯಂ ಮನ್ತ್ರದೇವತಾಂ ।
ಆರಾಧ್ಯ ತು ತದಾಪ್ನೋತಿ ಯದ್ಯದ್ವಾಂಛತಿ ಚೇತಸಾ ॥ ೧೧ ॥

ಜಪ್ಯೇನ ಸಿದ್ಧಿಮಾಸಾದ್ಯ ಬ್ರಹ್ಮಲೋಕಮವಾಪ್ನುಯಾತ್ ।
ಜಪ್ಯೇನ ಮುಚ್ಯತೇ ಪಾಪಾಜ್ಜಪ್ಯೇನ ತ್ರಿದಿವಂ ವ್ರಜೇತ್ ॥ ೧೨ ॥

ಜಪ್ಯೇನ ಮೋಕ್ಷಮಾಪ್ನೋತಿ ತಸ್ಮಾಜ್ಜಪ್ಯಪರೋ ಭವೇತ್ ।
ಅಕಾಮಕಾಮಂ ಜಪ್ಯೇನ ಧ್ರುವಂ ಮೋಕ್ಷಮವಾಪ್ನುಯಾತ್ ॥ ೧೩ ॥

ಕಾಮಕಾಮಸ್ತದಾಪ್ನೋತಿ ಯಂ ಕಾಮಂ ಮನಸೇಚ್ಛತಿ ।
ಸಂಸಿದ್ಧಾ ಋಷಯಃ ಸರ್ವೇ ಜಪ್ಯೇನೈವ ದ್ವಿಜೋತ್ತಮಾಃ ॥ ೧೪ ॥

ಜಪ್ಯಂ ಪವಿತ್ರಂ ಪರಮಂ ದ್ವಿಜನಾಂ
ಜಪ್ಯೇನ ಪಾಪಂ ಸಕಲಂ ಜಹಾತಿ ।
ಜಪ್ಯೇನ ಲೋಕಾನ್ ಲಭತೇತ್ಯಭೀಷ್ಟಾನ್
ಜಪ್ಯೇನ ಮೋಕ್ಷಂ ಲಭತೇ ದ್ವಿಜಾತಿಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ಜಪ್ಯವರ್ಣನೋ
ನಾಮಾಷ್ಟಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

ಗ್ರಹದಿಂದ ಸಿದ್ಧಿಪುತ್ತದೆ. ಜಪದಿಂದ ಸಿದ್ಧಿಹೊಂದಿದವನು ಬ್ರಹ್ಮಲೋಕವನ್ನೂ ಹೊಂದುತ್ತಾನೆ. ಪಾಪನಾಶ ಹೊಂದಿ ಸ್ವರ್ಗವನ್ನೂ ಸೇರುತ್ತಾನೆ. ಮೋಕ್ಷವನ್ನೂ ಹೊಂದುತ್ತಾನೆ. ಆದುದರಿಂದ ಜಪಪರನಾಗಿರಬೇಕು. ಯಾವ ಫಲೇಚ್ಛೆಯೂ ಇಲ್ಲದೆ ಜಪಮಾಡಿದಲ್ಲಿ ಮೋಕ್ಷವನ್ನು ಹೊಂದುತ್ತಾನೆ ಫಲೇಚ್ಛೆ ಇದ್ದಲ್ಲಿ ಅಭಿಮತವಾದ ಫಲವನ್ನು ಹೊಂದುತ್ತಾನೆ. ಋಷಿಗಳೆಲ್ಲರೂ ಜಪದಿಂದಲೇ ಸಿದ್ಧಿ ಹೊಂದಿದರು. ದ್ವಿಜರಿಗೆ ಜಪವು ಪವಿತ್ರವೂ, ಉತ್ತಮವೂ ಆದ ಸಾಧನ. ಈ ಜಪದಿಂದ ಎಲ್ಲಾ ಪಾಪಗಳನ್ನೂ ಹೋಗಲಾಡಿಸಿಕೊಳ್ಳುತ್ತಾರೆ. ಇಷ್ಟವಾದ ಲೋಕಗಳನ್ನೂ, ಮೋಕ್ಷವನ್ನೂ ಸಹ ದ್ವಿಜನಾದವನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಜಪ್ಯವರ್ಣನವೆಂಬ ಇನ್ನೂರ ಎಪ್ಪತ್ತೆಂಟನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕೋನಾಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಕೃತ್ವಾ ಜಲನಿಮಗ್ನಸ್ತು ಮಂತ್ರಜಾಪಂ ದ್ವಿಜೋತ್ತಮಾಃ ।
ಫಲಮಕ್ಷಯಮಾಪ್ನೋತಿ ಮುಚ್ಯತೇ ಸರ್ವಕಿಲ್ಬಿಷೈಃ || ೧ ||

ಮನ್ತ್ರಮನ್ತರ್ಜಲೇ ಜಪ್ಯಂ ಧ್ಯಾಯತಾ ಮನ್ತ್ರದೇವತಾಂ ।
ನರಂ ಮೋಚಯತೇ ಪಾಪಾನ್ಮಹಾಪಾತಕಜಾದಪಿ || ೨ ||

ಅಂತರ್ಜಲೇನಾಥ ವಿಧೂತಪಾಪಾ
ದ್ವಿಜಾಸ್ತುನಾಕಂ ಧ್ರುವಮೇವ ಯಾಂತಿ ।

ಇನ್ನೂರ ಎಪ್ಪತ್ತೊಂಭತ್ತನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ನೀರಿನಲ್ಲಿ ಮುಳುಗಿಕೊಂಡು ಮಂತ್ರ ಜಪವನ್ನು ಮಾಡಿದ್ದೇ ಆದರೆ ಅಕ್ಷಯವಾದ ಫಲವೂ, ಸರ್ವಪಾಪ ಮೋಕ್ಷವೂ ಉಂಟಾಗುತ್ತದೆ. ಮಂತ್ರದೇವತೆಯನ್ನು ಧ್ಯಾನಮಾಡುತ್ತಾ ಜಲದಲ್ಲಿ ಮುಳುಗಿ ಮಂತ್ರವನ್ನು ಜಪಿಸಬೇಕು. ಇದು ಮನುಷ್ಯನನ್ನು ಮಹಾಪಾತಕದಿಂದುಂಟಾದ ಪಾಪದಿಂದಲೂ ಬಿಡುಗಡೆ ಮಾಡುತ್ತದೆ. ಜಲಮಧ್ಯದಲ್ಲಿ ಜಪಿಸುವ ದ್ವಿಜರು ಸರ್ವಪಾಪಮೋಕ್ಷರೂಪವಾಗಿ ಸ್ವರ್ಗವನ್ನು ಹೊಂದಿಯೇ ಹೊಂದುತ್ತಾರೆ ಆದುದ

ಜಲೇ ನಿಮಗ್ನೇನ ತತಸ್ತು ಯತ್ನಾನ್ಮನ್ತ್ರಸ್ಯ
ಜಾಪಃ ಪುರುಷೇಣ ಕಾರ್ಯಃ || ೩ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಅಂತರ್ಜಲೇಜಪ್ಯ
ವರ್ಣನೋ ನಾಮೈಕೋನಾಶೀತ್ಯಧಿಕದ್ವಿಶತತಮೋಧ್ಯಾಯಃ

ರಿಂದ ಜಪಮಾಡುವವರು ಪ್ರಯತ್ನಪೂರ್ವಕವಾಗಿಯೂ ಜಲಮಧ್ಯದಲ್ಲಿ ಮುಳುಗಿ ಜಪಮಾಡಲು ಸಿದ್ಧರಾಗಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಅಂತರ್ಜಲದಲ್ಲಿ
ಜಪ್ಯವರ್ಣನವೆಂಬ ಇನ್ನೂರ ಎಪ್ಪತ್ತೊಂಭತ್ತನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ರೇಚಕಂ ಪೂರಕಂ ಚೈವ ಕುಂಭಕಂ ಚ ತಥಾ ದ್ವಿಜಾಃ |
ಏಕಸ್ತ್ರ್ಯವಸ್ಥೋ ವಿಜ್ಞೇಯಃ ಪ್ರಾಣಾಯಾಮೋ ಮಹಾಫಲಃ || ೧ ||

ಆದದಾನಸ್ತು ಯಃ ಶ್ವಾಸಂ ಮನ್ತ್ರಾಧ್ಯಯನಮಾಚರೇತ್ |
ಮನಸಾ ಬ್ರಾಹ್ಮಣಶ್ರೇಷ್ಠಾ ರೇಚಕಂ ತತ್ಪ್ರಕೀರ್ತಿತಂ || ೨ ||

ಶ್ವಾಸಸಂಧಾರಣಂ ಕುರ್ವನ್ ಆದದಾನೋ ನಚ ತ್ಯಜೇತ್ |
ಪೂರಕಂ ತದ್ವಿನಿರ್ದಿಷ್ಟಂ ಸರ್ವಕಲ್ಮಷನಾಶನಂ || ೩ ||

ಇನ್ನೂರ ಎಂಭತ್ತನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ—ಪ್ರಾಣಯಾಮವು ರೇಚಕ, ಪೂರಕ, ಕುಂಭಕಗಳೆಂಬ ಮೂರು ಅವಸ್ಥೆಗಳುಳ್ಳದ್ದು. ಇದು ಮಹಾಫಲಪ್ರದ. ಶ್ವಾಸವನ್ನು ಹೊರಗಿನಿಂದ ತೆಗೆದುಕೊಳ್ಳುತ್ತಾ ಮನಸ್ಸಿನಿಂದಲೇ ಮಂತ್ರಾಧ್ಯಯನ ಮಾಡಿದಲ್ಲಿ ಇದು ರೇಚಕವೆನಿಸುತ್ತದೆ. ಶ್ವಾಸವನ್ನು ಧರಿಸುತ್ತಾ ಹೊರಗಿನಿಂದ ತೆಗೆದುಕೊಳ್ಳುತ್ತಾ ಹೊರಗೆ ಬಿಡದಿರುವ ಸ್ಥಿತಿಯು ಪೂರಕವೆನಿಸುತ್ತದೆ. ಇದು ಸರ್ವಪಾಪನಾಶಕ ಈ ಪ್ರಾಣಾಯಾಮವನ್ನು ಮಂತ್ರದ ದೇವತಾಧ್ಯಾನರೂಪದಲ್ಲಿ ಆಚರಿಸಬೇಕು

ಮಂತ್ರಸ್ಯ ದೇವತಾಧ್ಯಾನಂ ಪ್ರಾಣಾಯಾಮಂ ತಥಾ ಚರೇತ್ ।
ಪ್ರಾಣಾಯಾಮಾತ್ಪರಂ ನಾಸ್ತಿ ದ್ವಿಜಾತೀನಾಂ ತಥಾ ತಪಃ ॥ ೪ ॥

ನಿರೋಧಾಜ್ಜಾಯತೇ ವಾಯುಸ್ತಸ್ಮಾದಗ್ನಿಃ ಪ್ರಜಾಯತೇ ।
ತತಸ್ತು ಸಲಿಲಂ ದೇಹಂ ಪೂಯತೆ ತೈಸ್ತ್ರಿಭಿರ್ನರಃ ॥ ೫ ॥

ಆಕೇಶಾಗ್ರಂ ನಖಾಗ್ರಂ ಸ್ವಂ ತಪ್ಯತೆ ಪರಮಂ ತಪಃ ।
ಯಸ್ತು ಕುರ್ಯಾದ್ದ್ವಿಜಶ್ರೇಷ್ಠಃ ಪ್ರಾಣಾಯಾಮಮತಂದ್ರಿತಃ ॥ ೬ ॥

ನ ತತ್ಪುಣ್ಯಮವಾಪ್ನೋತಿ ತೀರ್ಥಾನುಸರಣಾದ್ದ್ವಿಜಾಃ ।
ನ ಯಜ್ಞೇನ ತಥಾ ಕೃತ್ಸ್ನಃ ಪ್ರಾಣಾಯಾಮಾದ್ಯದಾಪ್ನುಯಾತ್ ॥ ೭ ॥

ಪ್ರಾಣಾಯಾಮಪರಾ ವಿಪ್ರಾಃ ಸರ್ವೇ ನಿರ್ಧೂತಕಲ್ಮಷಾಃ ।
ತ್ರಿದಿವಂ ಪ್ರತಿಪದ್ಯಂತೇ ಮೋಕ್ಷಂ ವಾ ಮನಸೇಪ್ಸಿತಂ ॥ ೮ ॥

ದ್ವಿಜಾತಿಗಳಿಗೆ ಪ್ರಾಣಾಯಾಮಕ್ಕಿಂತಲೂ ಉತ್ತಮವಾದ ತಪಸ್ಸು ಬೇರೊಂದಿಲ್ಲ. ಶ್ವಾಸನಿರೋಧದಿಂದ ವಾಯುವು ಉಂಟಾಗುತ್ತದೆ. ಅದರಿಂದ ಅಗ್ನಿಯು ಹುಟ್ಟುತ್ತದೆ. ಅನಂತರ ಜಲವೂ ಹುಟ್ಟುತ್ತದೆ. ಈ ಮೂರರಿಂದಲೂ ಮನುಷ್ಯನು ಶುದ್ಧಿಹೊಂದುತ್ತಾನೆ.

೬-೧೦. ತನ್ನ ನಖಾಗ್ರ ಮೊದಲುಗೊಂಡು ಕೇಶಾಗ್ರದವರಿಗೂ ಅವನು ಒಳ್ಳೆಯ ತಪಸ್ಸನ್ನೇ ಮಾಡಿದಂತಾಗುತ್ತದೆ. ಯಾವನು ಇಂತಹ ಪ್ರಾಣಾಯಾಮವನ್ನು ಜಾಗರೂಕತೆಯಿಂದ ಆಚರಿಸುತ್ತಾನೆಯೋ ಅವನು ತೀರ್ಥಯಾತ್ರೆಯಿಂದಲೂ ಸಾಧ್ಯವಲ್ಲದ ಉತ್ಕೃಷ್ಟವಾದ ಪುಣ್ಯವನ್ನೇ ಹೊಂದುತ್ತಾನೆ. ಪ್ರಾಣಾಯಾಮದಿಂದ ಹೊಂದಬಹುದಾದ ಉತ್ತಮ ಫಲವನ್ನು ಯಜ್ಞಗಳಿಂದಲೂ ಹೊಂದಲು ಸಾಧ್ಯವಿಲ್ಲ. ಪ್ರಾಣಾಯಾಮನಿರತರಾದ ಬ್ರಾಹ್ಮಣರು ನಿಷ್ಪಾಪರಾಗಿ ಸ್ವರ್ಗವನ್ನು ಸೇರುತ್ತಾರೆ. ಅಥವಾ ಮನೋರಥಕ್ಕೆ ತಕ್ಕಂತೆ ಮೋಕ್ಷವನ್ನೂ ಹೊಂದುತ್ತಾರೆ. ಪ್ರಾಣಾಯಾಮದಿಂದ ಮಹಾಪಾತಕಗಳೂ ಘೋರವಾದ ಇತರ ಪಾಪಗಳೂ ನಾಶಹೊಂದುತ್ತವೆ.

ಪ್ರಾಣಾಯಾಮೇನ ನಶ್ಯಂತಿ ಮಹಾಪಾತಕಜಾನ್ಯಪಿ ।
ಘೋರಾಣ್ಯೇನಾಂಸಿ ಧರ್ಮಜ್ಞಾಃ ಪ್ರಾಣಾಯಾಮಮತಶ್ಚರೇತ್ ॥ ೯ ॥

ಏತತ್ತಪಸ್ತತ್ಪರಮಂ ದ್ವಿಜಾನಾಂ
ಪಾಪಾಪಹಂ ಪುಣ್ಯವಿವೃದ್ಧಿಕಾರಿ ।
ಮೋಕ್ಷಪ್ರದಂ ವಾ ಪುರುಷೋತ್ತಮಾನಾಂ
ತಸ್ಮಾತ್ಪ್ರಯತ್ನೇನ ಸಮಾಚರೇತ್ತತ್ ॥ ೧೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪ್ರಾಣಾಯಾಮ
ವರ್ಣನೋ ನಾಮಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಆದುದರಿಂದ ಪ್ರಾಣಾಯಾಮವನ್ನು ಆಚರಿಸಬೇಕು. ಈ ಪ್ರಾಣಾಯಾಮವೇ ದ್ವಿಜರಿಗೆ ಪರಮಪವಿತ್ರವಾದ ಹಾಗೂ ಪಾಪನಾಶಕನಾದ ಮತ್ತೂ ಪುಣ್ಯವರ್ಧಕವಾದ ಮಹಾತಪಸ್ಸು. ಮೋಕ್ಷಪ್ರದವೂ ಆಗುತ್ತದೆ. ಆದುದರಿಂದ ಪುರುಷಶ್ರೇಷ್ಠರು ಪ್ರಯತ್ನದಿಂದಲೂ ಈ ಪ್ರಾಣಾಯಾಮವನ್ನು ಆಚರಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯ ಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದೇಶಿಸಲ್ಪಟ್ಟ ಹಂಸಗೀತೆಯಲ್ಲಿ
ಪ್ರಾಣಾಯಾಮವರ್ಣನವೆಂಬ ಇನ್ನೂರ ಎಂಭತ್ತನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕಾಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ವಿಷಯೇಭ್ಯಃ ಪ್ರವೃತ್ತಸ್ಯ ಚೇತಸೋ ವಿನಿವರ್ತನಂ ।
ಪ್ರತ್ಯಾಹಾರಂ ವಿನಿರ್ದಿಷ್ಟಂ ಪರಮಂ ತತ್ತಪಃ ಸ್ಮೃತಂ || ೧ ||

ಅತ್ಯಂತಚಂಚಲಂ ಚಿತ್ತಂ ತಸ್ಯ ಸಂಯಮನಂ ದ್ವಿಜಾಃ ।
ಪ್ರತ್ಯಾಹಾರೇಣ ಕರ್ತವ್ಯಂ ಪುರುಷೇಣ ವಿಪಶ್ಚಿತಾ || ೨ ||

ಪ್ರತ್ಯಾಹೃತ್ಯ ನರಶ್ಚೇತಃ ಕಾಮೇಭ್ಯೋ ದ್ವಿಜಸತ್ತಮಾಃ ।
ಕಾಮಾನಾಂ ಭಾಜನಂ ಲೋಕೇ ಮೋಕ್ಷಸ್ಯ ಚ ತಥಾ ಭವೇತ್ || ೩ ||

ಇನ್ನೂರ ಎಂಭತ್ತೊಂದನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ವಿಷಯಗಳಲ್ಲಿ ಪ್ರವರ್ತಿಸಿದ ಮನಸ್ಸನ್ನು ಅವುಗಳ ದೆಸೆಯಿಂದ ಹಿಂದೆ ತಿರಿಗಿಸುವಿಕೆಯೇ ಪ್ರತ್ಯಾಹಾರವೆನಿಸುತ್ತದೆ. ಇದು ಉತ್ತಮವಾದ ತಪಸ್ಸೆಂದು ಹೇಳಲ್ಪಟ್ಟಿದೆ. ಮನಸ್ಸು ಅತ್ಯಂತ ಚಂಚಲವಾದದ್ದು ಬುದ್ಧಿಶಾಲಿಯಾದ ಮನುಷ್ಯನು ಪ್ರತ್ಯಾಹಾರದಿಂದ ಅದನ್ನು ನಿಗ್ರಹಿಸಿ ಸ್ವಾಧೀನ ಮಾಡಿಕೊಳ್ಳಬೇಕು. ಮನುಷ್ಯನಾದವನು ಶಬ್ದಾದಿ ಕಾಮ್ಯವಸ್ತುಗಳ ದೆಸೆಯಿಂದ ಮನಸ್ಸನ್ನು ಆಕರ್ಷಿಸಿ ಸಂಯಮನಶೀಲನಾಗಿದ್ದಲ್ಲಿ ಲೋಕದಲ್ಲಿರುವಾಗ ಎಲ್ಲಾ ಕಾಮ್ಯವಸ್ತುಗಳನ್ನೂ ಸುಖದಿಂದ ಅನುಭವಿಸುತ್ತಾನೆ. ಮೋಕ್ಷಕ್ಕೂ ಭಾಗಿಯಾಗುತ್ತಾನೆ. ಯಾವ ಮನುಷ್ಯನು ಶಬ್ದಾದಿ ಕಾಮ್ಯವಸ್ತುಗಳನ್ನೆಲ್ಲಾ ಬಿಟ್ಟು ನಿಸ್ಪೃಹ

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸುಶಾಂತಿಮಧಿಗಚ್ಛತಿ ॥ ೪ ॥

ಪ್ರತ್ಯಾಹಾರಂ ಯಥಾ ಕುರ್ಯಾತ್ಕಾಮೇಭ್ಯಶ್ಚೇತಸೋ ನರಃ ।
ಯಥಾಕಾಮಮವಾಪ್ನೋತಿ ಮೋಕ್ಷೋಪಾಯಂ ಚ ವಿಂದತಿ ॥ ೫ ॥

ಚಂಚಲಂ ಹಿ ಮನೋ ವಿಪ್ರಾಃ ಪ್ರಮಾಥಿ ಬಲವದ್ದೃಢಂ ।
ತಸ್ಯ ಯತ್ನಂ ಸಮಾಸ್ಥಾಯ ಕರ್ತವ್ಯೋ ನಿಗ್ರಹೋ ಬುಧೈಃ ॥ ೬ ॥

ಯಾವನ್ನ ಚೇತ ಆಯಾತಿ ವೈರಾಗ್ಯಂ ಪರಮಂ ನರಃ ।
ತಾವನ್ನ ಶಕ್ತೋ ಭವತಿ ಪ್ರತ್ಯಾಹಾರಸ್ಯ ವೈ ದ್ವಿಜಾಃ ॥ ೭ ॥

ಜನ್ಮಮೃತ್ಯುಜರಾವ್ಯಾಧಿದುಃಖಶೋಕಾರ್ದಿತಂ ಜಗತ್ ।
ಪಶ್ಯನ್ ಖಿನ್ನಸ್ತದಾ ವಿಪ್ರಾ ವೈರಾಗ್ಯಾತ್ಸಿದ್ಧಿಮಾಪ್ನುಯಾತ್ ॥ ೮ ॥

ನಾಗಿಯೂ, ನಿರಹಂಕಾರನಾಗಿಯೂ ವರ್ತಿಸುತ್ತಾನೆಯೋ ಅವನೇ ಶಾಂತಿ ಎಂಬ ಮನಸ್ಸುಖಕ್ಕೆ ಭಾಗಿಯಾಗತಕ್ಕವನು

೫-೮. ವಿಷಯಗಳಿಂದ ಮನಸ್ಸಿನ ಪ್ರತ್ಯಾಹರಣವನ್ನು ಹೇಗೆ ಮಾಡುತ್ತಾನೆಯೋ ಹಾಗೆ ಹಾಗೆ ತನಗೆ ಇಷ್ಟವಾದ ವಿಷಯಗಳನ್ನು ಹೊಂದುತ್ತಾನೆ. ಮೋಕ್ಷೋಪಾಯಕ್ಕೂ ಭಾಗಿಯಾಗುತ್ತಾನೆ. ಬಲವತ್ತಾಗಿಯೂ, ದೃಢವಾಗಿಯೂ ಇರುವ ಮನಸ್ಸು ಅತಿಚಂಚಲ. ವೃಥಾದಾಯಿ, ಅಂತಹ ಮನಸ್ಸನ್ನು ನಿಗ್ರಹಿಸುವವನು ಪ್ರಯತ್ನಶಾಲಿಯಾಗಿಯೂ, ಪಂಡಿತನಾಗಿಯೂ ಇರಬೇಕು. ಮನಸ್ಸನ್ನು ನಿಗ್ರಹಿಸಿ ವೈರಾಗ್ಯವನ್ನು ಎಷ್ಟುಕಾಲ ಹೊಂದುವುದಿಲ್ಲವೋ ಅಲ್ಲಿಯವರಿಗೂ ಪ್ರತ್ಯಾಹಾರಕ್ಕೆ ಇವನು ಶಕ್ತನಾಗುವುದೇ ಇಲ್ಲ. ಜನ್ಮ, ಮೃತ್ಯು, ಜರೆ, ವ್ಯಾಧಿ ಇವುಗಳ ದುಃಖದಿಂದ ಕೂಡಿ ತೊಳಲುತ್ತಿರುವ ಜಗತ್ತನ್ನು ನೋಡುತ್ತಾ ದುಃಖಿತನಾಗಿ ಇಂತಹ ದುಃಖದ ಮೂಲೋಚ್ಛೇದಕ್ಕಾಗಿ ವೈರಾಗ್ಯಹೊಂದಿ ಸಿದ್ಧಿಗೆ ಅಭಿಮುಖನಾಗಬೇಕು.

ಅನಿತ್ಯತಾಂ ತಥಾ ಪಶ್ಯನ್ ಜಗತೋಽಸ್ಯ ಪುನಃ ಪುನಃ ।
ವೈರಾಗ್ಯಭಾವಮಾಸ್ಥಾಯ ತತಃ ಸಿದ್ಧಿಮವಾಪ್ನುಯಾತ್ ॥ ೯ ॥

ದೇವತಾನಾಮೃಷೀಣಾಂ ಚ ರಾಜ್ಞಾಂ ಭೂತಗಣಸ್ಯ ಚ ।
ದೃಷ್ಟ್ವಾ ಕ್ಷಯಂ ಮಹಾಭಾಗಾ ವಿರಕ್ತೋ ವಿಪ್ರಮುಚ್ಯತೇ ॥ ೧೦ ॥

ಗರ್ಭವಾಸೇ ಮಹದ್ದುಃಖಂ ನರಕೇ ಚ ಪುನಃ ಪುನಃ ।
ತಿರ್ಯಗ್ಯೋನೌ ಚ ಮಾನುಷ್ಯೇ ತಿರ್ಯಕ್ತ್ವಾನ್ಮೋ ವಿಮುಚ್ಯತೇ ॥ ೧೧ ॥

ದಿವಸೇ ದಿವಸೇ ಖಿನ್ನೋ ಪರಾನ್ನೇಷು ಚ ಯೋ ದ್ವಿಜಾಃ ।
ವೈರಾಗ್ಯಮಾಪ್ನೋತಿ ತಥಾ ಖಿನ್ನೋ ಮೂತ್ರಪುರೀಷಯೋಃ ॥ ೧೨ ॥

ದುಃಖಾನಾಂ ತು ಪ್ರತೀಘಾತೇ ಸುಖಮಿತ್ಯೇವ ಭಾವಿತೇ ।
ದುಃಖೇಭ್ಯಃ ಸ್ವಲ್ಪಕಾಲೇನ ಯಃ ಖಿನ್ನಃ ಸ ವಿರಜ್ಯತೇ ॥ ೧೩ ॥

೯-೧೨. ಜಗತ್ತಿನ ಅನಿತ್ಯತ್ವವನ್ನು ಪುನಃ ಪುನಃ ಅನುಸಂಧಾನಮಾಡುತ್ತಾ ವಿರಕ್ತಿಹೊಂದಬೇಕು. ಇಂತಹ ವೈರಾಗ್ಯವು ದೃಢವಾಗುತ್ತಾ ಬಂದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ. ದೇವತೆಗಳಿಗೂ, ಋಷಿಗಳಿಗೂ, ರಾಜರಿಗೂ, ಇತರ ಪ್ರಾಣಿಗಳಿಗೂ ಉಂಟಾಗುತ್ತಿರುವ ಕ್ಷಯವನ್ನು ನೋಡಿ ಎಲ್ಲವೂ ಅಸ್ಥಿರವೆಂಬ ಭಾವನೆಯಿಂದ ವಿರಕ್ತಿಹೊಂದಿ ಈ ಬಂಧದಿಂದ ಮುಕ್ತನಾಗಬೇಕು. ಗರ್ಭವಾಸವೂ ಮಹಾ ದುಃಖಕರ, ಪುನಃ ಪುನಃ ನರಕಪಾತವೂ ದುಃಖಕರ. ತಿರ್ಯಗ್ಜನ್ಮದಲ್ಲಿಯೂ, ಮನುಷ್ಯಜನ್ಮದಲ್ಲಿಯೂ ಈ ದುಃಖವು ತಪ್ಪಿದ್ದಲ್ಲ. ಇದರಿಂದ ಮುಕ್ತಿಹೊಂದ ಬೇಕಾದಲ್ಲಿ ವೈರಾಗ್ಯವೇ ಮುಖ್ಯಸಾಧನ. ಪ್ರತಿದಿನದಲ್ಲಿಯೂ ದುಃಖದರ್ಶನದಿಂದ ಖಿನ್ನನಾಗಿಯೂ, ಪರಾನ್ನ ಭೋಜನಾದಿಗಳಲ್ಲಿ ಜುಗುಪ್ಸೆಹೊಂದಿಯೂ, ಮೂತ್ರ ಪುರೀಷಾದಿ ದರ್ಶನಾದಿಗಳಿಂದ ದೇಹದಲ್ಲಿ ಹೇಯತಾಬುದ್ಧಿಯಿಂದಲೂ ವೈರಾಗ್ಯ ಹೊಂದಬೇಕು.

೧೩-೧೫. ದುಃಖಗಳೆಲ್ಲವೂ ನಾಶಹೊಂದಿದ ಮೇಲೆ ಸುಖವೆಂದೇ ಭಾವನೆ ಉಂಟಾದಲ್ಲಿ ಮನಃಖೇದದಿಂದ ಕೂಡಿದವನು ಸ್ವಲ್ಪ ಕಾಲದಲ್ಲಿಯೇ ದುಃಖದಿಂದ ಬಿಡುಗಡೆ ಹೊಂದಿ ವಿರಕ್ತನೇ ಆಗುತ್ತಾನೆ. ಈ ರೀತಿ ವಿರಕ್ತಿ ಹೊಂದಿದವನು

ವಿರಾಗಮಾಸ್ಥಾಯ ತತಃ ಪ್ರತ್ಯಾಹಾರಮತಂದ್ರಿತಃ |
ಕಾಮೇಭ್ಯಶ್ಚೇತಸಃ ಕುರ್ಯಾತ್ತೇನ ಸರ್ವಂ ಸಮಶ್ನುತೇ ||೧೪||

ಆಪೂರ್ಯಮಾಣಮಚಲಪ್ರತಿಷ್ಠಂ |
ಸಮುದ್ರಮಾಪಃ ಪ್ರವಿಶಂತಿ ಯದ್ವತ್ |
ತದ್ವತ್ಕಾಮಾ ಯಂಪ್ರವಿಶಂತಿ ಸರ್ವೇ ಸ
ಶಾಂತಿಮಾಪ್ನೋತಿ ನ ಕಾಮಕಾಮೀ ||೧೫||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು |ಪ್ರತ್ಯಾಹಾರ ವರ್ಣನೋ ನಾಮೈಕಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಜಾಗರೂಕತೆಯಿಂದಿದ್ದು ಪ್ರತ್ಯಾಹಾರವನ್ನು ಆಚರಿಸಿ ವಿಷಯಗಳಿಂದ ಮನಸ್ಸನ್ನು ತಡೆದದ್ದೇ ಆದರೆ ಅವನು ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾನೆ. ತುಂಬಿ ತುಳುಕುತ್ತಾ ಅಚಂಚಲಸ್ಥಿಯುಳ್ಳ ಸಮುದ್ರವನ್ನು ನದಿಯ ಜಲಗಳು ಹೇಗೆ ಪ್ರವೇಶಿಸುತ್ತವೆಯೋ ಹಾಗೆಯೇ ಗಂಭೀರಚಿತ್ತನಾದ ಯಾವ ಮನುಷ್ಯನನ್ನು ವಿಷಯಗಳು ಪ್ರವೇಶಿಸುತ್ತವೆಯೋ ಅವನೇ ಶಾಂತಿಯನ್ನು ಹೊಂದತಕ್ಕವನು. ಕಾಮಾತುರನಾದವನು ಇದಕ್ಕೆ ಅರ್ಹನಲ್ಲ. ನದೀ ಜಲಗಳ ಪ್ರವೇಶವಿದ್ದರೂ ಹೇಗೆ ಸಮುದ್ರವು ಕ್ಷೋಭಹೊಂದದೆ ಗಂಭೀರವಾಗಿರುತ್ತದೆಯೋ ಹಾಗೆಯೇ ವಿಷಯ ಸಂಸರ್ಗದಿಂದ ಕ್ಷೋಭ ಉಂಟಾಗದೆ ಗಂಭೀರವಾದ ಸ್ಥಿತಿಯುಂಟಾದಲ್ಲಿ ಅವನೇ ಶಾಂತಿಸುಖಕ್ಕೆ ಭಾಗಿಯಾಗುತ್ತಾನೆ. ಕ್ಷೋಭಹೊಂದಿದವನು ಇಂತಹ ಶಾಂತಿಗೆ ಅರ್ಹನಾಗುವುದಿಲ್ಲವೆಂದು ತಾತ್ಪರ್ಯ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಪ್ರತ್ಯಾಹಾರವರ್ಣನವೆಂಬ ಇನ್ನೂರ ಎಂಭತ್ತೊಂದನೆಯ
ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದ್ವ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಏಕತ್ರ ಸಮವಸ್ಥಾನಂ ಬಾಹ್ಯೇ ದ್ರವ್ಯೇ ತು ಚೇತಸಃ ।
ಧಾರಣಾ ಸಾ ವಿನಿರ್ದಿಷ್ಟಾ ಮನಸೋ ಬಂಧಕಾರಿಕಾ || ೧ ||

ಸಾ ಕಾರ್ಯಾ ದೇವತಾರ್ಚಾಯಾಂ ಯತ್ರಾಸ್ಯ ಸ್ಯಾತ್ ಸ್ಥಿರಾ ಮತಿಃ ।
ಏಕತ್ರ ಲಬ್ಧ್ವಾ ಲಕ್ಷ್ಯಂ ತು ಮನಸಶ್ಚಂಚಲಸ್ಯ ತು || ೨ ||

ಕಾರ್ಯಾನ್ನಿವಾರಣಂ ಯಸ್ಮಾನ್ಮನೋಽನುಗ್ರಹಕಾರಣಾತ್ ।
ಅಥವಾ ಲಕ್ಷ್ಯಬಂಧಂತು ಭುವಿಕಾರ್ಯಂ ವಿಜಾನತಾ || ೩ ||

ಇನ್ನೂರ ಎಂಭತ್ತೆರಡನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:— ಬಾಹ್ಯವಸ್ತುಗಳಲ್ಲಿ ಮನಸ್ಸನ್ನು ಒಂದೇ ಕಡೆಯಲ್ಲಿ ಸ್ಥಿರವಾಗಿ ನಿಲ್ಲಿಸುವಿಕೆಯೇ ಧಾರಣಾ, ಎಂದು ಹೇಳಲ್ಪಡುತ್ತದೆ. ಇದು ವಿಷಯಾಂತರಗಳಿಂದ ಮನಸ್ಸನ್ನು ಒಂದು ಕಡೆಯಲ್ಲಿಯೇ ಬಂಧಿಸುವ ವ್ಯಾಪಾರ. ಈ ಧಾರಣೆಯನ್ನು ತನ್ನ ಮನಸ್ಸು ಸ್ಥಿರವಾಗಿ ನಿಲ್ಲುವ ದೇವತಾವಿಗ್ರಹದಲ್ಲಿ ಮಾಡಬೇಕು. ಚಂಚಲವಾದ ಮನಸ್ಸು ಒಂದು ಕಡೆಯಲ್ಲಿ ಸ್ಥಿರವಾದ ಲಕ್ಷ್ಯವನ್ನು ಹೊಂದಿ ಇತರ ವಿಷಯಗಳ ನಿವಾರಣೆಯುಂಟಾದಲ್ಲಿ ಇದು ಮನಸ್ಸಿಗೇ ಒಂದು ಅನುಗ್ರಹ ಅಥವಾ ಮೊದಲು ಭೂಮಿಯಲ್ಲಿಯೇ ಲಕ್ಷ್ಯಬಂಧವನ್ನು ಮಾಡಬೇಕು.

ಲಬ್ಧಲಕ್ಷಸ್ತು ಭೂಯೋಗೇ ಮಹೀಯೋಗಂ ಸಮುತ್ಸೃಜೇತ್ ।
ಲಬ್ಧಲಕ್ಷ್ಯೋ ನರಃ ಕುರ್ಯಾನ್ನರಾಸ್ತೇಜಸಿ ಸತ್ತಮಾಃ ॥ ೪ ॥

ಸಮುತ್ಸೃಜ್ಯ ತತೋ ವಾಯೌ ತತೋ ನಭಸಿ ಕಾರಯೇತ್ ।
ಕ್ರಮಶಸ್ತ್ವೇವಮಾರುಹ್ಯ ಲಕ್ಷ್ಯಂ ಲಕ್ಷ್ಯತಯಾ ನರಃ ॥ ೫ ॥

ಬಾಹ್ಯೇಷು ಧಾರಣಾಂ ಕೃತ್ವಾ ಮನಸಃ ಸಿದ್ಧಿಮಶ್ನುತೇ ।
ಮನಸಶ್ಚಂಚಲಸ್ಯಾಸ್ಯ ಯಾವದ್ಬಂಧನಧಾರಣಾ ॥ ೬ ॥

ತಾವದ್ಧ್ಯಾನಮಥಾರೂಢಂ ನ ಶಕ್ಯಂ ಕೇನ ಚಿದ್ದ್ವಿಜಾಃ ।
ಧಾರಣಾಂ ನಿಶ್ಚಲಾಂ ಪ್ರಾಪ್ಯ ತತೋ ಧ್ಯಾನಮವಾಪ್ನುಯಾತ್ ॥ ೭ ॥

ಶರೀರಂ ವಿಜಹಾತ್ಯೇನಂ ಯತ್ರ ಬದ್ಧಾ ತು ಧಾರಣಾ ।
ಪ್ರಾಪ್ನೋತಿ ತನ್ಮಯೀಭಾವಂ ನಾತ್ರ ಕಾರ್ಯಾ ವಿಚಾರಣಾ ॥ ೮ ॥

ಅದು ಸ್ಥಿರವಾದ ನಂತರ ಅದನ್ನು ತ್ಯಜಿಸಬೇಕು. ಹೀಗೆ ಲಕ್ಷ್ಯವನ್ನು ಸ್ಥಿರಗೊಳಿಸುವ ಅಭ್ಯಾಸಹೊಂದಿದವನು ಅನಂತರ ತೇಜಸ್ಸಿನಲ್ಲಿ ಲಕ್ಷ್ಯಬಂಧಮಾಡಬೇಕು.

೫-೮. ಅನಂತರ ತೇಜಸ್ಸನ್ನು ಬಿಟ್ಟು ವಾಯುವಿನಲ್ಲಿಯೂ, ಅನಂತರ ಆಕಾಶದಲ್ಲಿಯೂ ಲಕ್ಷ್ಯಬಂಧ ಮಾಡಬೇಕು. ಈ ರೀತಿ ಕ್ರಮಕ್ರಮವಾಗಿ ಬಾಹ್ಯ ವಸ್ತುಗಳಲ್ಲಿ ಲಕ್ಷ್ಯಬಂಧವನ್ನು ಸ್ಥಿರಗೊಳಿಸಿದಲ್ಲಿ ಧಾರಣಾಭ್ಯಾಸದಿಂದ ಮನಸ್ಸು ಸಿದ್ಧಿ ಹೊಂದುತ್ತದೆ. ಚಂಚಲವಾದ ಮನಸ್ಸಿಗೆ ಧಾರಣೆಯೆಂಬ ಬಂಧನವು ಎಷ್ಟು ಎಷ್ಟು ಹೆಚ್ಚಾಗುತ್ತಾ ಬರುತ್ತದೆಯೋ ಅಷ್ಟಷ್ಟು ಧ್ಯಾನಾರೂಢವಾದ ಮನಸ್ಸು ಸ್ಥಿರಗೊಳ್ಳುತ್ತದೆ. ಯಾರಿಂದಲೂ ಅದನ್ನು ಅಲ್ಲಾಡಿಸಲು ಸಾಧ್ಯವಾಗುವುದಿಲ್ಲ. ಧಾರಣೆಯು ಸ್ಥಿರವಾದಮೇಲೆ ಧ್ಯಾನವನ್ನು ಹೊಂದುತ್ತಾನೆ. ಯಾವ ವಿಷಯದಲ್ಲಿ ಧಾರಣೆಯು ಸ್ಥಿರವಾಗಿ ನಿಲ್ಲುವುದೋ ಆಗ ಇವನಿಗೆ ಶರೀರಸಂಬಂಧವೇ ಇಲ್ಲವಂತಾಗಿ ಧ್ಯೇಯ ವಸ್ತುವಿನೊಡನೆ ತನ್ಮಯೀಭಾವವೇ ಉಂಟಾಗುತ್ತದೆ. ಇದರಲ್ಲಿ ವಿಚಾರ ಮಾಡಬೇಕಾದ್ದಿಲ್ಲ

ಸಂಪ್ರಾಪ್ಯ ಧಾರಣಾಂ ಮುಕ್ತ್ವಾ ಶರೀರಂ ಮನುಜೋತ್ತಮಃ ।
ಕಾಲಾನ್ಮೋಕ್ಷಮವಾಪ್ನೋತಿ ಧ್ಯಾನಾಚ್ಛೀಘ್ರಮಿತಿಸ್ಥಿತಿಃ ॥ ೯ ॥

ಪ್ರಾಪ್ತಸ್ತು ಯನ್ಮಯೀಭಾವಂ ಧಾರಣಾಸ್ಥಃ ಪುಮಾಂಸ್ತತಃ ।
ಸ ಯದಾ ಪುರುಷಂ ಯಾತಿ ತದಾ ಸ ಪ್ರತಿಪದ್ಯತೇ ॥ ೧೦ ॥

ಧ್ರುವಂ ಮೋಕ್ಷಮವಾಪ್ನೋತಿ ಧಾರಣಾಂ ಪ್ರಾಪ್ಯ ಮಾನವಃ ।
ಕಿಂತು ಕಾಲೇನ ಮಹತಾ ಧ್ಯಾನಾಚ್ಛೀಘ್ರಮಿತಿ ಸ್ಥಿತಿಃ ॥ ೧೧ ॥

ಸರ್ವಲೋಕೇ ತಥಾ ಜ್ಞೇಯಾ ಬಾಹ್ಯದ್ರವ್ಯವಿನಾಶನಾಃ ।
ತೇಷಾಂ ತು ಧಾರಣಾ ಕಾರ್ಯಾ ಮನೋಗ್ರಹಣಕಾರಣಂ ॥ ೧೨ ॥

ಸಂಪ್ರಾಪ್ಯ ಮನಸೋ ಬಂಧಂ ನಿಶ್ಚಲಂ ಪುರುಷೋತ್ತಮಃ ।
ಧಾರಣಾಯೋಗತಸ್ತಸ್ಮಾದ್ಧ್ರುವಂ ಮೋಕ್ಷಮುಪಾಶ್ನುತೇ ॥ ೧೩ ॥

೯-೧೪. ಧಾರಣೆಯನ್ನು ಸ್ಥಿರಗೊಳಿಸಿಕೊಂಡು ಶರೀರ ತ್ಯಾಗದಿಂದ ಮಹಾಪುರುಷನಾದವನು ಕಾಲವಿಲಂಬದಿಂದ ಮೋಕ್ಷಹೊಂದುತ್ತಾನೆ. ಧ್ಯಾನಹೊಂದಿದವನು ಶೀಘ್ರವಾಗಿಯೇ ಮುಕ್ತಿಹೊಂದುತ್ತಾನೆ. ಎಂಬುದು ವಸ್ತುಸ್ಥಿತಿ. ಧಾರಣೆಯಲ್ಲಿ ನಿರತನಾದ ಮನುಷ್ಯನು ತನ್ಮಯೀಭಾವಹೊಂದಿ ಪುರುಷನನ್ನೇ ಲಕ್ಷೀಕರಿಸುತ್ತಾನೆ. ಅಂತಹ ಆತ್ಮಾವಲೋಕನವೆಂಬ ಪುರುಷಪ್ರಾಪ್ತಿಯಿಂದ ಮೋಕ್ಷಹೊಂದಿಯೇ ಹೊಂದುತ್ತಾನೆ. ಆದರೆ ಇದು ಕಾಲವಿಲಂಬದಿಂದ ಆಗುತಕ್ಕದ್ದು ಧ್ಯಾನಹೊಂದಿದವನು ಮಾತ್ರ ಧ್ಯೇಯದ ತನ್ಮಯೀ ಭಾವದಿಂದ ಶೀಘ್ರವಾಗಿಯೇ ಮುಕ್ತನಾಗುತ್ತಾನೆ. ಎಲ್ಲಾ ಲೋಕಗಳಲ್ಲಿಯೂ ಇರುವ ಬಾಹ್ಯವಸ್ತುಗಳಲ್ಲಿ ಲಕ್ಷ್ಯಬಂಧಮಾಡುತ್ತಾ ಅದನ್ನು ಕ್ರಮವಾಗಿ ತ್ಯಜಿಸಿ ನಾಶಪಡಿಸಬೇಕು. ಅವುಗಳ ವಿಷಯದಲ್ಲಿ ಮನಸ್ಸಿನ ನಿಗ್ರಹಕ್ಕಾಗಿ ಧಾರಣೆಯನ್ನು ಮಾಡಬೇಕು. ಮನಸ್ಸಿಗೆ ಬಂಧಕವಾದ ಈ ನಿಶ್ಚಲಧಾರಣೆಯನ್ನು ಮಹಾಪುರುಷನಾದವನು ಆಚರಿಸಿದಲ್ಲಿ ಈ ಧಾರಣೆಯಿಂದಲೇ ಮೋಕ್ಷವನ್ನು ನಿಯತವಾಗಿಯೂ ಹೊಂದುತ್ತಾನೆ. ಯಾವ ಪರಮಾತ್ಮನ ಸ್ವರೂಪವೇ ಮುಂತಾದ ಧ್ಯೇಯವಸ್ತುಗಳು ಇವನ ಹೃದಯದಲ್ಲಿ

ಯದಸ್ಯ ನಿತ್ಯಂ ಹೃದಿ ಸಂಸ್ಥಿತಂ
ಸ್ಯಾತ್ತತ್ಪ್ರತ್ಯೇವಾಸ್ಯ ಹಿ ಮೃತ್ಯುಕಾಲೇ ।
ಯದ್ಭಾವಯತ್ಯೇವ ಹಿ ಮೃತ್ಯುಕಾಲೇ
ಭವತ್ಯವಶ್ಯಂ ಸ ಹಿ ತನ್ಮಯಸ್ತು ॥ ೧೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಧಾರಣಾವರ್ಣನೋ
ನಾಮದ್ವ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ

ಧಾರಣೆಯಿಂದ ಸ್ಥಿರವಾಗಿ ನಿಲ್ಲುತ್ತವೆಯೋ ಅಂತಹ ವಸ್ತುಗಳೇ ಮೃತ್ಯುಕಾಲದಲ್ಲಿಯೂ ಅನುವರ್ತಿಸುತ್ತವೆ. ಭಾವನಾರೂಪದಿಂದ ಅನುವೃತ್ತವಾಗುವ ಆ ವಸ್ತುಗಳೇ ಇವನನ್ನು ತನ್ಮಯನನ್ನಾಗಿ ಮಾಡುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಧಾರಣಾ
ವರ್ಣನವೆಂಬ ಇನ್ನೂರ ಎಂಭತ್ತೆರಡನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರ್ಯಶೀತ್ಯುತ್ತರದ್ವಿಶತತಮೋऽಧ್ಯಾಯಃ ॥

॥ ಹಂಸ ಉವಾಚ ॥

ದ್ರವ್ಯೇ ತು ಧಾರಣಾ ಬಾಹ್ಯೇ ಧಾರಣಾ ಪರಿಕೀರ್ತಿತಾ ।
ಸೈವ ಚೇತಸಿ ನಿರ್ದಿಷ್ಟಾ ಧ್ಯಾನೇತಿ ಮನುಜೋತ್ತಮಾಃ ॥ ೧ ॥

ಅಧೋಮುಖಂ ಹೃತ್ಕಮಲೇ ಕರ್ಣಿಕಾಯಾಂ ದ್ವಿಜೋತ್ತಮಾಃ ।
ಧ್ಯಾನಂ ಸೂರ್ಯಸ್ಯ ಕುರ್ವೀತ ತೇಜೋರಾಶೇರ್ವಿಚಕ್ಷಣಃ ॥ ೨ ॥

ರವಿಮಧ್ಯೇಸ್ಥಿತಃ ಸೋಮೋ ಸೋಮಮಧ್ಯೇ ಹುತಾಶನಃ ।
ತೋಜೋಮಧ್ಯೇ ಸ್ಥಿತಂ ಸತ್ತ್ವಂ ತೇಜಸೋऽಪ್ಯತಿ ತೈಜಸಂ ॥ ೩ ॥

ಇನ್ನೂರ ಎಂಭತ್ತಮೂರನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ :—ಬಾಹ್ಯಪದಾರ್ಥವಿಷಯಕವಾದ ಮನೋನಿಬಂಧನವೇ ಧಾರಣೆ ಎನಿಸುತ್ತದೆ ಅದೇ ನಿಬಂಧನೆಯೇ ಮನೋಗತವಾದ ಆಂತರ ವಸ್ತುಗಳ ವಿಷಯದಲ್ಲಿ ಧ್ಯಾನವೆನಿಸುತ್ತದೆ. ಹೃದಯ ಕಮಲದಲ್ಲಿ ಅಧೋಮುಖವಾಗಿರುವ ಅದರ ಕರ್ಣಿಕೆಯಲ್ಲಿ ತೇಜೋಮಯನಾದ ಸೂರ್ಯನನ್ನು ಧ್ಯಾನಿಸಬೇಕು. ಆ ಸೂರ್ಯನ ಮಧ್ಯದಲ್ಲಿ ಚಂದ್ರನಿರುವನು. ಅವನ ಮಧ್ಯದಲ್ಲಿ ಅಗ್ನಿ ಇರುವನು. ಆ ಅಗ್ನಿತೇಜಸ್ಸಿನ ಮಧ್ಯದಲ್ಲಿ ತೇಜಸ್ಸಿಗಿಂತಲೂ ಬಹು ಪ್ರಕಾಶವುಳ್ಳ ಸತ್ತ್ವಗುಣವೂ ಆ ಸತ್ತ್ವಗುಣದ ಮಧ್ಯದಲ್ಲಿ ಪೂಜ್ಯನೂ ಪರಮಾತ್ಮನೂ ಆದ

ತನ್ಮಧ್ಯೇ ಭಗವಾನ್ ವಿಷ್ಣುಃ ಪರಮಾತ್ಮಾ ಸನಾತನಃ ।
ಅಚ್ಯುತಃ ಪುರುಷೋ ನಿತ್ಯಂ ಸರ್ವವ್ಯಾಪೀ ಮಹೇಶ್ವರಃ ॥ ೪ ॥

ಸೂಕ್ಷ್ಮಾತಿಸೂಕ್ಷ್ಮಂ ತಂ ಪಶ್ಯೇತ್ತೇಜೋಮೂರ್ತಿಂ ದುರಾಸದಂ ।
ಧ್ಯಾನಯೋಗೇನ ತಂ ದೃಷ್ಟ್ವಾ ಸಿದ್ಧಿಮಾಪ್ನೋತಿ ಮಾನವಃ ॥ ೫ ॥

ಸ್ವಸ್ತಿಕಂ ಸರ್ವತೋಭದ್ರಂ ಪರ್ಯಂಕಂ ಕಮಲಾಸನಂ ।
ತೇಷಾಮೇಕತಮಂ ಬದ್ಧ್ವಾ ಯೋಗಾಸನಮತಂದ್ರಿತಃ ॥ ೬ ॥

ಊರುಮೂಲೇ ತಥಾನೀಯ ತಿರ್ಯಗ್ಗೌ ಚ ತಥಾ ಕರೌ ।
ಕೃತ್ವೋತ್ತಾನೌ ದ್ವಿಜಶ್ರೇಷ್ಠಾ ವಾಮಸ್ಯೋಪರಿ ದಕ್ಷಿಣಂ ॥ ೭ ॥

ಕಿಂಚಿದಾಕುಂಚಿತಾಂಗುಷ್ಠೌ ಕರ್ತವ್ಯೌ ಚ ತಥಾ ಕರೌ ।
ತೇನ ಚೋನ್ನಾಮ್ಯ ವಿತತಂ ಕೃತ್ವಾ ಬಾಹೂಪರಿಶ್ಲಥೌ ॥ ೮ ॥

ಪೃಷ್ಠಕಾಂ ಯೋಜಯೇತ್ಸ್ಕಂಧೇ ದೇಹಮುನ್ನಾಮಯೇತ್ಸುಧೀಃ ।
ನಿಷ್ಕಂಪಾಂ ಸುದೃಢಾಂ ಗ್ರೀವಾಂ ಶಿರಃ ಕಾರ್ಯಂ ಸಮಂ ತದಾ ॥ ೯ ॥

ವಿಷ್ಣುವಿರುವನು. ಅವನು ಅಚ್ಯುತ ಸ್ವಭಾವದವನು. ಸರ್ವವ್ಯಾಪಿಯಾದ ಪರಮೇಶ್ವರನು.

೫-೯. ಅತಿ ಸೂಕ್ಷ್ಮನಾಗಿಯೂ, ತೇಜೋಮೂರ್ತಿಯಾಗಿಯೂ ದುರ್ಲಭನಾಗಿಯೂ ಇರುವ ಆ ಪರಮಾತ್ಮನನ್ನು ಧ್ಯಾನದಿಂದ ಸಾಕ್ಷಾತ್ಕರಿಸಬೇಕು ಇವರಿಂದ ಸಿದ್ಧಿಹೊಂದುತ್ತಾನೆ. ಸ್ವಸ್ತಿಕ, ಸರ್ವತೋಭದ್ರ, ಪರ್ಯಂಕ, ಪದ್ಮಾಸನ ಇವುಗಳಲ್ಲಿ ಯಾವುದಾದರೊಂದು ಯೋಗಾಸನವನ್ನು ಸ್ವೀಕರಿಸಿ ತೊಡೆಗಳ ಬುಡದಲ್ಲಿ ಅಡ್ಡಡ್ಡಲಾಗಿ ಕೈಗಳನ್ನು ಜೋಡಿಸಿ ಎಡಗೈಯಿನ ಮೇಲೆ ಬಲಗೈಯನ್ನು ಮೇಲ್ಮುಖವಾಗಿಟ್ಟು ಅಂಗುಷ್ಠವನ್ನು ಸ್ವಲ್ಪ ಸಂಕೋಚಹೊಂದಿಸಿಯೂ ಕೈಗಳನ್ನು ಇಟ್ಟುಕೊಳ್ಳಬೇಕು, ಋಜುವಾದ ದೇಹದಿಂದಲೂ ಶಿಥಿಲವಾದ ಬಾಹುಗಳಿಂದಲೂ ಕೂಡಿ ಭುಜಗಳ ಹಿಂಭಾಗವೂ ಬೆನ್ನೂ ಒಂದೇ ಸಮನಾಗಿ ಋಜುವಾಗಿರುವಂತೆಯೂ ಮಾಡಿ ದೇಹವನ್ನು ಎತ್ತರಿಸಿಕೊಂಡು ನಿಶ್ಚಲವಾದ ಕಂಠವನ್ನೂ ಸಮವಾದ ಶಿರಸ್ಸನ್ನೂ ಧರಿಸಬೇಕು.

ಸಂಪಶ್ಯನ್ನಾಸಿಕಾಗ್ರಂ ಸ್ವಂ ದಿಶಶ್ಚಾನವ ಲೋಕಯನ್ ।
ಕಿಂಚಿನ್ನಿಮೀಲ್ಯನಯನೇ ಸರ್ವಂ ಬಾಹ್ಯಂ ಸಮುತ್ಸೃಜೇತ್ ।
ಬಾಹ್ಯಂ ಸರ್ವಂ ಪರಿತ್ಯಜ್ಯ ಪರಮಾತ್ಮಾನಮಾತ್ಮನಾ ॥ ೧೦ ॥

ಹೃತ್ಪದ್ಮಂ ಕರ್ಣಿಕಾ ಮಧ್ಯೇ ತೇಜಸ್ತೇಜಸಿ ಚಾರ್ಪಿತಂ ।
ದೃಷ್ಟ್ವಾ ತು ಪುರುಷಮೀಶಾನಂ ಸರ್ವಬಂಧೈಃ ಪ್ರಮುಚ್ಯತೇ ॥ ೧೧ ॥

ಪ್ರತ್ಯಾಹಾರೇಣ ಮನಸಃ ಕೃತ್ವಾ ನಿಯಮನಂ ಪುರಾ ।
ಧಾರಣಾಲ್ಲಬ್ಧಲಕ್ಷಸ್ತು ಧ್ಯಾನಮಾರೋಹತೇ ನರಃ ॥ ೧೨ ॥

ಇಂದ್ರಿಯಾಣಾಂ ಜಯಂ ಕೃತ್ವಾ ಮನಃ ಸಂಯಮ್ಯ ಚಾಪ್ಯಥ ।
ವಿಜಿತ್ಯ ಚ ತಥಾ ವಾಯುಂ ಧ್ಯಾನಮಾರೋಹತೇ ನರಃ ।
ಧ್ಯಾನಾರೂಢಸ್ತದಾಪ್ನೋತಿ ಯತ್ರ ಗತ್ವಾ ನ ಶೋಚತಿ ॥ ೧೩ ॥

೧೦-೧೪ ದಿಕ್ಕುಗಳಾವುದನ್ನೂ ನೋಡದೆ ತನ್ನ ಮೂಗಿನ ಅಗ್ರಭಾಗದಲ್ಲಿಯೇ ದೃಷ್ಟಿಯನ್ನಿಟ್ಟು, ಸ್ವಲ್ಪ ಮಟ್ಟಿಗೆ ಕಣ್ಣುಗಳನ್ನೂ ಮುಚ್ಚಿ ಬಾಹ್ಯವಸ್ತುಗಳನ್ನು ತ್ಯಜಿಸಬೇಕು. ಬಾಹ್ಯವಾದ ಎಲ್ಲಾ ವಸ್ತುಗಳನ್ನೂ ತ್ಯಜಿಸಿ ಹೃದಯಕಮಲದ ಕರ್ಣಿಕಾ ಮಧ್ಯದಲ್ಲಿ ತೇಜೋರೂಪವಾದ ಸತ್ತ್ವದಲ್ಲಿ ಅಡಗಿರುವ ತೇಜೋಮಯನಾದ ಪರಮಾತ್ಮನನ್ನು ಧ್ಯಾನಾರೂಢವಾದ ಮನಸ್ಸಿನಿಂದ ಸಾಕ್ಷಾತ್ಕರಿಸಿದವನು ಸರ್ವವಿಧ ಸಂಸಾರ ಬಂಧಗಳಿಂದಲೂ ಮುಕ್ತನಾಗುತ್ತಾನೆ. ಮೊದಲು ಪ್ರತ್ಯಾಹಾರದಿಂದ ಮನಸ್ಸನ್ನು ಸ್ವಾಧೀನಮಾಡಿಕೊಂಡು ಧಾರಣೆಯಿಂದ ಸ್ಥಿರವಾದ ಲಕ್ಷ್ಯಬಂಧ ಹೊಂದಿದ ಮೇಲೆ ಧ್ಯಾನಕ್ಕೆ ಅರ್ಹನಾಗುತ್ತಾನೆ ಹಾಗೆಯೇ ಇಂದ್ರಿಯಗಳ ಜಯದಿಂದಲೂ, ಮನಸ್ಸಿನ ಸಂಯಮದಿಂದಲೂ, ವಾಯುವನ್ನು ಜಯಿಸಿಯೂ, ಧ್ಯಾನದೆಶೆಗೆ ಏರುತ್ತಾನೆ. ಧ್ಯಾನಾರೂಢನಾದವನು ದುಃಖರಹಿತವಾದ ಸ್ಥಾನವನ್ನು ಹೊಂದುತ್ತಾನೆ. ಬೆಳಗಿನ ಝಾಮದಲ್ಲಿಯಾಗಲಿ, ಪ್ರದೋಷಕಾಲದಲ್ಲಿಯಾಗಲಿ ಧ್ಯಾನಹೊಂದಲು ಪ್ರಯತ್ನಿಸಬೇಕು. ಧ್ಯಾನದಿಂದ ಪರಮಾತ್ಮನನ್ನು ಸಾಕ್ಷಾತ್ಕರಿಸಿ

ನಿಶಾವಸಾನೇ ಚ ತಥಾ ಪ್ರದೋಷೇ
ಧ್ಯಾನೇನ ಯತ್ನಃ ಪುರುಷೇಣ ಕಾರ್ಯಃ ।
ಧ್ಯಾನೇನ ದೃಷ್ಟ್ವಾ ಪುರುಷಂ ಪರಂ
ತು ವಿಮುಕ್ತದೇಹಃ ಸಕಲತ್ವಮೇತಿ || ೧೪ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಧ್ಯಾನವರ್ಣನೋ
ನಾಮ ತ್ರ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ

ದವನು ದೇಹಬಂಧವನ್ನು ಬಿಟ್ಟು ಸ್ವರೂಪಾವಿರ್ಭಾವದಿಂದ ಪರಮಾತ್ಮನಂತೆ ಸರ್ವವ್ಯಾಪಕನೇ ಆಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದೇಶಿಸಲ್ಪಟ್ಟ ಹಂಸಗೀತೆಯಲ್ಲಿ
ಧ್ಯಾನವರ್ಣನವೆಂಬ ಇನ್ನೂರ ಎಂಭತ್ತಮೂರನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತುರಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಅಥ ಧ್ಯಾನಮುಪಾರೂಢೋ ಸಮಾಧಿಂ ಮನಸೋ ಲಭೇತ್ |
ನ ಕಿಂಚಿಚ್ಚಿಂತಯೇತ್ಪಶ್ಚಾತ್ಸಮಾಧಿಂ ಪ್ರಾಪ್ಯ ಮಾನವಃ || ೧ ||

ಶಬ್ದಸ್ಪರ್ಶರಸೈರ್ಹೀನಂ ಗಂಧರೂಪ ವಿವರ್ಜಿತಂ |
ತಂ ಪರಂ ಪುರುಷಂ ವಿದ್ಯಾದ್ಯತ್ರ ಗತ್ವಾ ನ ಶೋಚತಿ || ೨ ||

ಶೂನ್ಯಂ ಧ್ಯಾನಂ ಪರಂ ವಿಪ್ರಾಃ ಸಮಾಧಿರಿತಿಕೀರ್ತ್ಯತೇ |
ತಂ ತು ಪ್ರಾಪ್ಯ ನರೈಶ್ಚಾನ್ಯೈಃ ನಾಭಿಭೂಯೇತ ಕರ್ಹಿಚಿತ್ || ೩ ||

ಸಮಾಧಿತಃ ಪರಂ ನಾಸ್ತಿ ಸುಖಂ ಕಿಂಚಿಜ್ಜಗತ್ತ್ರಯೇ |
ಸಮಾಧಿಸ್ಥಶ್ಚ ದುಃಖೇನ ಗುರುಣಾಪಿ ನ ಚಾಲ್ಯತೇ || ೪ ||

ಇನ್ನೂರ ಎಂಭತ್ತನಾಲ್ಕನೆಯ ಅಧ್ಯಾಯ.

೧–೪ ಹಂಸವು ಹೇಳುತ್ತದೆ :—ಧ್ಯಾನಾರೂಢನಾದವನು ಅನಂತರ ಮನಸ್ಸಮಾಧಿಗೆ ಭಾಗಿಯಾಗುತ್ತಾನೆ. ಈ ಸಮಾಧಿಯನ್ನು ಹೊಂದಿದವನು ಅನಂತರ ಯಾವುದನ್ನೂ ಚಿಂತಿಸುವ ಸಂಭವವಿಲ್ಲ. ಪ್ರಾಕೃತವಾದ ಶಬ್ದಸ್ಪರ್ಶಗಂಧಾದಿ ರಹಿತನಾದ ಪರಮಪುರುಷನನ್ನು ಸಮಾಧಿಯಲ್ಲಿ ಸಾಕ್ಷಾತ್ಕರಿಸಿ ದುಃಖದಿಂದ ನಿರ್ಮುಕ್ತನಾಗುತ್ತಾನೆ. ಶಬ್ದಸ್ಪರ್ಶಾದಿಗಳಿಂದ ಶೂನ್ಯವಾದ ಧ್ಯಾನವೇ ಸಮಾಧಿ ಎನಿಸುತ್ತದೆ. ಅಂತಹ ಸಮಾಧಿಯನ್ನು ಹೊಂದಿದವರಿಗೆ ಯಾವುದರಿಂದಲೂ ಪರಾಭವವಿಲ್ಲ. ಸಮಾಧಿಗಿಂತಲೂ ಸುಖಕರವಾದುದು ಜಗತ್ತಿನಲ್ಲಿ ಬೇರೊಂದಿಲ್ಲ. ಸಮಾಧಿಯಲ್ಲಿ ನಿರತನಾಗಿರುವವನು ಎಂತಹ ಮಹಾದುಃಖದಿಂದಲೂ ಚಲಿಸಲ್ಪಡುವುದಿಲ್ಲ.

ಶಂಖಾನಿ ಶತಶಸ್ತ್ವಸ್ಯ ವಾದ್ಯಂತೇ ಯದಿ ಕರ್ಣಯೋಃ ।
ಭೇರ್ಯಶ್ಚ ಯದಿ ಹನ್ಯಂತೇ ಶಬ್ದಂ ಬಾಹ್ಯಂ ನ ವಿಂದತಿ ॥ ೫ ॥

ತಥಾ ಪ್ರಹಾರಾಭಿಹತೋ ವಹ್ನಿದಗ್ಧತನುಸ್ತಥಾ ।
ಶೀತೇ ಸ್ಥಿತೋಽತಿಘೋರೇಽಪಿ ಸ್ಪರ್ಶಂ ಬಾಹ್ಯಂ ನ ವಿಂದತಿ ॥ ೬ ॥

ಜಯೇ ಗಂಧೇ ರಸೇ ಬಾಹ್ಯೇ ತಾದೃಶಸ್ಯ ತು ಕಾ ಕಥಾ ।
ವೃಷ್ಟ್ವಾ ಯ ಆತ್ಮನಾತ್ಮಾನಂ ಸಮಾಧಿಂ ಲಭತೇ ಪುನಃ ॥ ೭ ॥

ತೃಷ್ಣಾ ವಾಥ ಬುಭುಕ್ಷಾ ವಾ ನ ತಂ ಧಾವತಿ ಕರ್ಹಿಚಿತ್ ।
ಅಪಿಸಂತ್ಯಜತಸ್ತೃಷ್ಣಾಮಭುಂಜಾನಸ್ಯ ಪಶ್ಯತಃ ॥ ೮ ॥

ಏಕಮೇವ ಸುನಿರ್ವೇದಂ ವಿಜಾನಾತಿ ನರೋತ್ತಮಃ ।
ಸಮಾಧಿತಃ ಸಮುತ್ಥಾನಂ ತೇನ ತಪ್ಯತಸೌ ಭೃಶಂ ॥ ೯ ॥

೫-೧೦. ಇಂತಹ ಸಮಾಧಿಯಲ್ಲಿ ನಿರತನಾಗಿರುವವನ ಕಿವಿಗಳಲ್ಲಿ ನೂರಾರು ಶಂಖಗಳನ್ನು ಧ್ವನಿಮಾಡಿದರೂ ಭೇರಿಗಳನ್ನು ಬಾರಿಸಿದರೂ ಇವುಗಳ ಬಾಹ್ಯ ಶಬ್ದಗಳ ಅರಿವೇ ಇವನಿಗೆ ಉಂಟಾಗುವುದಿಲ್ಲ ಹಾಗೆಯೇ ಪ್ರಹಾರಾದಿಗಳನ್ನು ಹೊಂದಿದರೂ ಅಗ್ನಿಯಿಂದ ಶರೀರವು ಸುಟ್ಟುಹೋದರೂ ಬಹುಮಟ್ಟಿನ ದುಃಸಹವಾದ ಶೈತ್ಯದಲ್ಲಿದ್ದರೂ ಬಾಹ್ಯವಾದ ಈ ಸ್ಪರ್ಶಗಳ ಅರಿವೇ ಇವನಿಗೆ ಉಂಟಾಗುವುದಿಲ್ಲ. ವಿಜಯಾದಿಗಳಿಂದಲೂ ಬಾಹ್ಯವಾದ ಗಂಧರಸಗಳಿಂದಲೂ ಉಂಟಾಗುವ ವಿಕಾರಕ್ಕೆ ಅವಕಾಶವೇ ಇಲ್ಲವೆಂಬುದನ್ನು ಹೇಳಬೇಕಾದ್ದಿಲ್ಲ. ಸಮಾಧಿನಿರತವಾದ ಮನಸ್ಸಿನಿಂದ ಯಾವನು ಆತ್ಮಸಾಕ್ಷಾತ್ಕಾರಹೊಂದಿ ಪುನಃ ಸಮಾಧಿಯಲ್ಲಿ ನಿರತನಾಗುತ್ತಾನೆಯೋ ಅವನಿಗೆ ಹಸಿವೇ ಆಗಲಿ ಬಾಯಾರಿಕೆಯೇ ಆಗಲಿ ಉಂಟಾಗುವುದೇ ಇಲ್ಲ. ಬಾಯಾರಿಕೆಯನ್ನೂ ಭೋಜನವನ್ನೂ ಸಹ ತ್ಯಜಿಸಿ ಆತ್ಮಜ್ಞಾನವನ್ನು ಹೊಂದಿದವನು ಆತ್ಮವೆಂಬ ಒಂದೇ ವಸ್ತುವಿನಿಂದ ತೃಪ್ತನಾಗಿ ಇತರ ವಸ್ತುಗಳಲ್ಲಿ ನಿರ್ವೇದ

ನ ಸ್ವರ್ಗೇ ನ ಚ ಪಾತಾಲೇ ಮಾನುಷ್ಯೇ ಚ ನ ತತ್ಸುಖಂ ।
ಸಮಾಧಿಂ ನಿಶ್ಚಲಂ ಪ್ರಾಪ್ಯ ಯತ್ಸುಖಂ ವಿಂದತೇ ನರಃ ॥ ೧೦ ॥

ಸಮಾಧಿಂ ಪುರುಷಃ ಪ್ರಾಪ್ಯ ತ್ಯಕ್ತ್ವಾ ದೇಹನಿಬಂಧನಂ ।
ವ್ಯಾಪ್ನೋತಿ ಸಕಲಾನ್ ಲೋಕಾಂಸ್ತ್ರೈಲೋಕ್ಯಂ ಸಚರಾಚರಂ ॥ ೧೧ ॥

ತಚ್ಚ ವ್ಯಾಪ್ನೋತಿ ಪುರುಷಸ್ತ್ರೈಲೋಕ್ಯಾದಪಿ ಯದ್ಬಹಿಃ ।
ಅನಂತತ್ವಮವಾಪ್ನೋತಿ ಸಮಾಧಿಂ ಪ್ರಾಪ್ಯ ಮಾನವಃ ॥ ೧೨ ॥

ಜನ್ಮಮೃತ್ಯುಜರಾವ್ಯಾಧಿಶೋಕದುಃಖವಿವರ್ಜಿತಃ ।
ಸರ್ವಗಃ ಸರ್ವಸಂಹಾರೀ ಸರ್ವೇಂದ್ರಿಯಗುಣಾತ್ಮಕಂ ॥ ೧೩ ॥

ಸರ್ವತ್ರ ಸರ್ವದಾ ವಿಪ್ರಾಃ ಸ ತಸ್ಯಾಂ ನಾತ್ರ ಸಂಶಯಃ ।
ಪುರುಷತ್ವಮಥಾಭ್ಯೇತಿ ಸರ್ವಶಕ್ತಿತ್ವಮೇತಿ ಚ ॥ ೧೪ ॥

ಸಂಯಮ್ಯ ಚೇತಃ ಖಲುಧಾರಣಾಸು
ಧ್ಯಾನಂ ಸಮಾರುಹ್ಯ ತತಸ್ತು ಪಶ್ಚಾತ್ ।

ಹೊಂದುತ್ತಾನೆ. ಸಮಾಧಿಸುಖದಿಂದ ಬಹಿರ್ಮುಖನಾದಾಗ ಬಹುಮಟ್ಟಿಗೂ ದುಃಖ ಪಡುತ್ತಾನೆ. ನಿಶ್ಚಲವಾದ ಸಮಾಧಿಯಿಂದ ಯಾವ ಸುಖವನ್ನು ಮನುಷ್ಯನು ಹೊಂದುತ್ತಾನೆಯೋ ಅಂತಹ ಸುಖವನ್ನು ಸ್ವರ್ಗದಲ್ಲಿಯಾಗಲಿ ಪಾತಾಳಲೋಕದಲ್ಲಿಯಾಗಲಿ ಮನುಷ್ಯಲೋಕದಲ್ಲಿಯಾಗಲಿ ಎಲ್ಲೂ ಹೊಂದಲು ಸಾಧ್ಯವಿಲ್ಲ.

೧೧-೧೫. ಸಮಾಧಿಯನ್ನು ಹೊಂದಿದ ಮನುಷ್ಯನು ದೇಹಸಂಬಂಧವನ್ನು ನೀಗಿ ಸಚರಾಚರವಾದ ಮೂರು ಲೋಕಗಳನ್ನೂ ವ್ಯಾಪಿಸುವನು. ಮೂರುಲೋಕಗಳಿಂದ ಹೊರಗಿರುವ ಇತರ ಭಾಗವನ್ನೂ ವ್ಯಾಪಿಸಬಲ್ಲನು ಜನ್ಮ, ಜರಾ, ವ್ಯಾಧಿ ಮೊದಲಾದ ಸಕಲದುಃಖಗಳಿಂದಲೂ ದೂರನಾಗಿ ಅನಂತ ಅನಂತಸ್ವರೂಪನಾಗುತ್ತಾನೆ. ಸರ್ವಗಾಮಿಯಾಗಿಯೂ, ಸರ್ವಸಂಹಾರಿಯಾಗಿಯೂ, ಸರ್ವೇಂದ್ರಿಯ ಗುಣಗಳುಳ್ಳವನಾಗಿಯೂ ಸರ್ವಕಾಲದಲ್ಲಿಯೂ ಸರ್ವವ್ಯಾಪಕನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ. ಸರ್ವಶಕ್ತನಾಗಿ ಪರಮಾತ್ಮನ ಸಾಮ್ಯವನ್ನೇ ಹೊಂದುತ್ತಾನೆ.

ಸಮಾಧಿಮಾಸ್ಥಾಯ ಪರೇಣ ಪುಂಸಾ
ತುಲ್ಯತ್ವಮಾಯಾತಿ ಮಹಾನುಭಾವಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸಮಾಧಿ ವರ್ಣನೋನಾಮ ಚತುರಶೀತ್ಯುತ್ತರದ್ವಿಶತತಮೋಽಧ್ಯಾಯಃ

ಧಾರಣಾಕಾಲದಲ್ಲಿ ಮನಸ್ಸನ್ನು ನಿಗ್ರಹಿಸಿ ಅನಂತರ ಧ್ಯಾನಾರೂಢನಾಗಿ ಸಮಾಧಿಯನ್ನು ಹೊಂದಿದ ಮಹಾಪುರುಷನು ಪರಮಾತ್ಮನೊಡನೆ ಸಾಮ್ಯವನ್ನೇ ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಸಮಾಧಿವರ್ಣನವೆಂಬ ಇನ್ನೂರ ಎಂಭತ್ತನಾಲ್ಕನೆಯ ಅಧ್ಯಾಯ ಮುಗಿದುದು

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಪಂಚಾಶೀತ್ಯುತ್ತರದ್ವಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ಸ್ಥಾನಸ್ಯ ಮಹತಃ ಪ್ರಾಪ್ತೌ ಯನ್ಮೂಲಂ ದ್ವಿಜಸತ್ತಮ |
ತದಸ್ಮಾಕಂ ಸಮಾಚಕ್ಷ್ವ ಸರ್ವಂ ಪ್ರತ್ಯಕ್ಷಲಕ್ಷಣಂ || ೧ ||

|| ಹಂಸ ಉವಾಚ ||

ಪ್ರಾಪ್ನುವಂತಿ ನರಾಃ ಸರ್ವೇ ವ್ಯವಸಾಯಪುರಃಸರಾಃ |
ವ್ಯವಸಾಯದ್ವಿತೀಯಾನಾಂ ನಾಸ್ತಿ ಲೋಕೇ ಸುದುರ್ಲಭಂ || ೨ ||

ವ್ಯವಸಾಯಃ ಪರೋ ಬಂಧುಃ ಸಹಾಯಸ್ತದನಂತರಂ |
ತೇನ ಯುಕ್ತಃ ಪುಮಾನ್ ಸಮ್ಯಕ್ಪ್ರಾಪ್ನೋತೀತಿ ವಿನಿಶ್ಚಿತಮ್ || ೩ ||

ಇನ್ನೂರ ಎಂಭತ್ತೈದನೆಯ ಅಧ್ಯಾಯ.

೧–೩. ಋಷಿಗಳು ಪ್ರಶ್ನೆಮಾಡುತ್ತಾರೆ:—ಎಲೈ ಪಕ್ಷಿಶ್ರೇಷ್ಠನೇ, ಉತ್ತಮವಾದ ಸ್ಥಾನವನ್ನು ಹೊಂದಲು ಯಾವುದು ಮೂಲಕಾರಣವೆನಿಸುತ್ತದೆಯೋ ಅಂತಹ ಕಾರಣವನ್ನು ಪ್ರತ್ಯಕ್ಷವಾಗಿ ನಮಗೆ ತಿಳಿಯಪಡಿಸಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಪ್ರಯತ್ನಶಾಲಿಗಳಾದ ಎಲ್ಲ ಮನುಷ್ಯರೂ ಉತ್ತಮಸ್ಥಾನವನ್ನು ಹೊಂದುತ್ತಾರೆ ವ್ಯವಸಾಯಶಾಲಿಗಳಿಗೆ ದುರ್ಲಭವಾದ್ದು ಲೋಕದಲ್ಲಿ ಯಾವುದೂ ಇಲ್ಲ. ವ್ಯವಸಾಯವೇ ಮುಖ್ಯವಾದ ಬಂಧು, ಸಹಾಯಸಂಪತ್ತು ಅನಂತರ, ಇವುಗಳಿಂದ ಕೂಡಿದ ಮನುಷ್ಯನು ಉತ್ತಮಸ್ಥಾನವನ್ನು ಹೊಂದುತ್ತಾನೆಂಬುದು ನಿಶ್ಚಿತವಾದ ವಿಷಯ.

ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚ ಋಷಿಸತ್ತಮಾಃ ।
ಭಾಜನಂ ತು ಸದಾ ಜ್ಞೇಯೋ ನರಸ್ತು ವ್ಯವಸಾಯವಾನ್ ॥ ೪ ॥

ವ್ಯವಸಾಯವಿಹೀನಾನಾಂ ಸ್ವಲ್ಪೋಽಪ್ಯರ್ಥೋಽತಿದುರ್ಲಭಃ ।
ವ್ಯವಸಾಯವಿಹೀನಾನಾಮಲಸಾನಾಂ ದುರಾತ್ಮನಾಂ ॥ ೫ ॥

ಕರಪ್ರಾಪ್ತೋಽಪಿ ಸಹಸಾ ಕ್ಷಿಪ್ರಮರ್ಥೋ ವಿನಶ್ಯತಿ ।
ವ್ಯವಸಾಯವಿಹೀನಸ್ತು ಸ್ಥಾಣುನಾ ನಾತಿರಿಚ್ಯತೇ ॥ ೬ ॥

ತಸ್ಮಾನ್ನರಾ ಯೇ ವ್ಯವಸಾಯಯು-
ಕ್ತಾಸ್ತೇ ಕಾಮಭಾಜಃ ಕಥಿತಾಸ್ತು ಲೋಕೇ ॥
ತೇಷಾಮಯಂ ಚೈವ ಪರಶ್ಚ ಲೋಕಃ
ಸ್ತೇಷಾಂ ತಥಾ ಮೋಕ್ಷಪಥೋ ನ ದೂರೇ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವ್ಯವಸಾಯ
ವರ್ಣನೋ ನಾಮ
ಪಂಚಾಶೀತ್ಯುತ್ತರದ್ವಿಶತತಮೋಽಧ್ಯಾಯಃ

೪-೫. ಸರ್ವದಾ ವ್ಯವಸಾಯಶಾಲಿಯಾದ ಮನುಷ್ಯನೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಭಾಗಿಯಾಗತಕ್ಕವನು, ವ್ಯವಸಾಯ ಹೀನರಿಗೆ ಅಲ್ಪವಸ್ತುವೂ ದುರ್ಲಭವಾಗುತ್ತದೆ. ಮತ್ತು ಆಲಸ್ಯದಿಂದಲೂ, ದೌರಾತ್ಮ್ಯದಿಂದಲೂ ಕೂಡಿದ ಇಂತಹವರಿಗೆ ಕೈಗೆ ಬಂದು ಒದಗಿದ್ದ ಇಷ್ಟಾರ್ಥವೂ ಜಾಗ್ರತೆಯಾಗಿ ನಾಶಹೊಂದುತ್ತದೆ ಇಂತಹ ನಿರ್ವ್ಯಾಪಾರಿಯು ಕೇವಲ ಮೋಟು ಮರಕ್ಕೆ ಸಮಾನ. ಆದುದರಿಂದ ಲೋಕದಲ್ಲಿ ವ್ಯವಸಾಯಶಾಲಿಗಳಾದ ಮನುಷ್ಯರೇ ಇಷ್ಟಾರ್ಥಹೊಂದಲು ಅರ್ಹರಾಗುತ್ತಾರೆ. ಅಂತಹವರಿಗೇ ಇಹಲೋಕ ಮತ್ತು ಪರಲೋಕ ಇವು ಸುಖಕಾರಿಗಳಾಗುತ್ತವೆ. ಮೋಕ್ಷಮಾರ್ಗವೂ ದೂರವಾಗುವುದಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ವ್ಯವಸಾಯವರ್ಣನವೆಂಬ ಇನ್ನೂರ ಎಂಭತ್ತೈದನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷಡಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸರ್ವಕರ್ಮಪ್ರಧಾನಸ್ಯ ವ್ಯವಸಾಯಸ್ಯ ಮಾನದಾಃ ।
ಮೂಲಮೇಕಂ ವಿನಿರ್ದಿಷ್ಟಂ ಸಂಕಲ್ಪೋ ನಾತ್ರಸಂಶಯಃ ॥ ೧ ॥

ಸಂಕಲ್ಪಮೂಲಃ ಕಾಮೋ ವೈ ಜ್ಞಾನಂ ಸಂಕಲ್ಪಬಂಧನಂ ।
ಸಂಕಲ್ಪಬಂಧನಾ ವೇದಾಃ ಧರ್ಮಃ ಸಂಕಲ್ಪಬಂಧನಃ ॥ ೨ ॥

ಸಂಕಲ್ಪಬಂಧನಶ್ಚಾರ್ಥೋ ಮೋಕ್ಷಃ ಸಂಕಲ್ಪಬಂಧನಃ ।
ಸಂಕಲ್ಪಬಂಧನಂ ಸರ್ವಂ ಜಗದೇತಚ್ಚರಾಚರಂ ॥ ೩ ॥

ಇನ್ನೂರ ಎಂಭತ್ತಾರನೆಯ ಅಧ್ಯಾಯ.

ಹಂಸವು ಹೇಳುತ್ತದೆ:—ಎಲ್ಲಾ ಕಾರ್ಯಗಳಿಗೂ ಮುಖ್ಯವಾಗಿ ಬೇಕಾಗುವ ವ್ಯವಸಾಯಕ್ಕೆ ಸಂಕಲ್ಪ ಒಂದೇ ಮೂಲಕಾರಣವಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಇಷ್ಟಾರ್ಥವಿಷಯಕವಾದ ಅರಿವೂ, ಅಭಿಲಾಷೆಯೂ, ಸಂಕಲ್ಪಮೂಲಕ, ವೇದಗಳೂ ವೇದೋಕ್ತಧರ್ಮಗಳೂ ಸಂಕಲ್ಪಮೂಲಕ, ಪುರುಷಾರ್ಥಗಳಿಗೂ, ಮೋಕ್ಷಕ್ಕೂ ಸಹ ಸಂಕಲ್ಪವೇ ಮೂಲಕಾರಣ, ಚರಾಚರವಾದ ಜಗತ್ತೆಲ್ಲವೂ, ಪರಮಾತ್ಮನ ಸಂಕಲ್ಪ ಮೂಲಕ, ಬುದ್ಧಿಶಾಲಿಯಾದ ಯಾವನು ಮೊದಲು ಕಾರ್ಯದ ಗುಣಾಗುಣಗಳನ್ನು ಮನಸ್ಸಿನಿಂದಲೇ ನಿಶ್ಚಯಿಸಿ ಅನಂತರ ಆ ಕಾರ್ಯದಲ್ಲಿ ತನ್ನ ವ್ಯವಸಾಯವನ್ನು ಯೋಜಿಸುತ್ತಾನೆಯೋ ಅವನೇ ಪಂಡಿತನೆಂದು ತಿಳಿಯಬೇಕು. ಮನಸ್ಸಿನಿಂದ ನಿಶ್ಚಯಿಸಲ್ಪಡದೆ ಇರುವ ಯಾವ ಕಾರ್ಯವನ್ನಾದರೂ ಯಾವನೂ ಸಾಧಿಸಲು

ಅಪೌ ನಿಶ್ಚಿತ್ಯ ಯತ್ಕರ್ಮ ಮನಸಾ ಬುದ್ಧಿಮಾನ್ನರಃ ।
ಯುನಕ್ತಿ ವ್ಯವಸಾಯೇನ ಪಶ್ಚಾತ್ ಜ್ಞೇಯಃ ಸಪಂಡಿತಃ ॥ ೪ ॥

ಯಾವಂತೋ ನಿಶ್ಚಿತಾಸ್ತ್ವರ್ಥಾ ಮನಸಾ ಕೇನ ಚಿತ್ಕ್ವಚಿತ್ ।
ತಾವನ್ನ ಶಕ್ಯತೇ ಕರ್ತುಂ ಸಂಕಲ್ಪೋತಃ ಪರೋ ಮತಃ ॥ ೫ ॥

ಸಂಕಲ್ಪಿತಾನಾಂ ಮನಸಾ ತು ಪೂರ್ವಂ
ಸಿದ್ಧಿಃ ಪ್ರದಿಷ್ಟಾ ವ್ಯವಸಾಯಯುಕ್ತಾ ।
ಕಾರ್ಯಾಣಿ ಸರ್ವಾಣಿ ತತಸ್ತು ಲೋಕೆ
ಸಂಕಲ್ಪಮೂಲಾನಿ ವದಂತಿ ಸಂತಃ ॥ ೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸಂಕಲ್ಪನಿರ್ವಚ
ನೋ ನಾಮ ಷಡಶೀತ್ಯುತ್ತರದ್ವಿಶತತಮೋಽಧ್ಯಾಯಃ

ಸಾಧ್ಯವಿಲ್ಲ. ಆದುದರಿಂದ ನಿಶ್ಚಯರೂಪವಾದ ಈ ಸಂಕಲ್ಪವು ಮುಖ್ಯವಾದ ಕಾರಣ. ಮನಸ್ಸಿನಿಂದ ಮೊದಲು ನಿಶ್ಚಿತವಾದ ಕಾರ್ಯವು ವ್ಯವಸಾಯದಿಂದ ಕೂಡಿದಲ್ಲಿ ಅದು ಸಿದ್ಧಿಸುತ್ತದೆ. ಆದುದರಿಂದ ಲೋಕವಲ್ಲಿ ಎಲ್ಲಾ ಕಾರ್ಯಗಳನ್ನೂ ಸಂಕಲ್ಪಮೂಲಗಳೆಂದು ಸತ್ಪುರುಷರು ವ್ಯವಹರಿಸುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗಾಗಿ ಉಪದಿಷ್ಟವಾದ ಹಂಸಗೀತೆಯಲ್ಲಿ
ಸಂಕಲ್ಪನಿರ್ವಚನವೆಂಬ ಇನ್ನೂರ ಎಂಭತ್ತಾರನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತಾಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ನೈಃಶ್ರೇಯಸಪದಾವಾಪ್ತ್ಯೈ ಪ್ರತ್ಯಾಹಾರಸ್ತ್ವಯೋದಿತಃ ।
ಧಾರಣಾಧ್ಯಾನಯೋಗಶ್ಚ ಸಮಾಧಿರಪಿಚೋತ್ತಮಾ ॥ ೧ ॥

ಭೂಯ ಏವ ತಮಾಚಕ್ಷ್ವ ನೃಣಾಂ ಸಂಸಾರಸಾರಿಣಾಂ ।
ಹಿತಾರ್ಥಮುತ್ತಮಂ ಮಾರ್ಗಂ ಲೋಕದ್ವಯಸುಖಾವಹಂ ॥ ೨ ॥

॥ ಹಂಸ ಉವಾಚ ॥

ಅಗ್ನಿರ್ಮುಖಂ ದೇವತಾನಾಂ ಸರ್ವಭೂತಪರಾಯಣಂ ।
ತಸ್ಯ ಶುಶ್ರೂಷಣಾದೇವ ಸರ್ವಾನ್ ಕಾಮಾನ್ ಸಮಶ್ನುತೆ ॥ ೩ ॥

ಇನ್ನೂರ ಎಂಭತ್ತೇಳನೆಯ ಅಧ್ಯಾಯ.

೧–೨. ಋಷಿಗಳು ಪ್ರಶ್ನೆಮಾಡುತ್ತಾರೆ :—ಆತ್ಮಪ್ರಾಪ್ತಿ ಎಂಬ ಪದವಿಯ ಪ್ರಾಪ್ತಿಗಾಗಿ ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿಗಳೆಂಬಸಾಧನಗಳು ನಿನ್ನಿಂದ ಹೇಳಲ್ಪಟ್ಟುವು. ಸಂಸಾರದಲ್ಲಿ ಪ್ರವಾಹದಂತೆ ತಿರುಗುತ್ತಿರುವ ಮನುಷ್ಯರ ಹಿತಕ್ಕೆ ಮತ್ತು ಲೋಕದ್ವಯದ ಸುಖಕ್ಕೂ, ಸಾಧಕವಾದ ಮಾರ್ಗವನ್ನು ಪುನಃ ವಿಸ್ತಾರವಾಗಿ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ.

೩–೭. ಸರ್ವಪ್ರಾಣಿಗಳಿಗೂ ಆಶ್ರಯವಾದ ಅಗ್ನಿಯೇ ದೇವತೆಗಳ ಮುಖಸ್ಥಾನೀಯ, ಆ ಅಗ್ನಿಯ ಶುಶ್ರೂಷೆಯಿಂದ ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ

ಸಾ ಮೂರ್ತಿಃ ಪರಮಾ ವಿಷ್ಣೋಸ್ತದ್ದತ್ತಂ ಪ್ರಾಪ್ನುತೇ ರವಿಃ ।
ಸೂರ್ಯಾದ್ವೃಷ್ಟಿಸ್ತತಸ್ತ್ವನ್ನಮನ್ನಾತ್ಪ್ರಭವತೇ ಜಗತ್ ॥ ೪ ॥

ಅಧಃ ಪ್ರವರ್ಷಿಣೋ ದೇವಾ ಭೌಮಾಸ್ತೂರ್ಧ್ವಂ ಪ್ರವರ್ಷಿಣಃ ।
ಊರ್ಧ್ವಪ್ರವರ್ಷಣಂ ಮುಖ್ಯಂ ಭೌಮಂ ದತ್ತಂ ಹುತಾಶನೇ ॥ ೫ ॥

ಓಙ್ಕಾರಂ ಪೂರ್ವಮುದ್ದಿಶ್ಯ ಯಾಂ ಯಾಂ ವಿಪ್ರಸ್ತು ದೇವತಾಂ ।
ಹವಿರ್ಜುಹೋತಿ ಸಾ ತಸ್ಯ ಪ್ರೀತಾ ಭವತಿ ನಿತ್ಯದಾ ॥ ೬ ॥

ವಹ್ನಿದತ್ತೇನ ಹವಿಷಾ ತೃಪ್ತಿಮಾಯಾಂತಿ ದೇವತಾಃ ।
ತಾಃ ತೃಪ್ತಾಸ್ತರ್ಪಯಂತ್ಯೇನಂ ನರಂ ಕಾಮಸಮೃದ್ಧಿಭಿಃ ॥ ೭ ॥

ಸೂರ್ಯೇ ಹೋಮಃ ಪರಃ ಪುಣ್ಯಸ್ತೇನ ಸ್ವರ್ಗೇ ಮಹೀಯತೇ ।
ತಸ್ಮಾದಷ್ಟಗುಣಂ ಪುಣ್ಯಮಿಧ್ಮಭಿಃ ಪ್ರಾಪ್ನುಯಾದ್ಧುತೇ ॥ ೮ ॥

ಆ ಅಗ್ನಿಯು ಉತ್ಕೃಷ್ಟವಾದ ವಿಷ್ಣುವಿನ ಮೂರ್ತಿ. ಆ ಅಗ್ನಿಯಿಂದ ಕೊಡಲ್ಪಟ್ಟ ತೇಜಸ್ಸನ್ನೇ ಸೂರ್ಯನು ಸ್ವೀಕರಿಸುತ್ತಾನೆ. ಅಂತಹ ಸೂರ್ಯನಿಂದ ವೃಷ್ಟಿಯೂ, ವೃಷ್ಟಿಯಿಂದ ಅನ್ನಸಮೃದ್ಧಿಯೂ, ಅನ್ನದಿಂದ ಈ ಜಗತ್ತೂ ಉಂಟಾಗುತ್ತವೆ. ದೇವತೆಗಳು ಕೆಳಮುಖವಾಗಿ ವೃಷ್ಟಿಮಾಡತಕ್ಕವರು, ಭೂಮಿಯಲ್ಲಿರುವವರು ಊರ್ಧ್ವಮುಖವಾಗಿ (ಯಜ್ಞಯಾಗಾದಿದ್ವಾರಾ) ವೃಷ್ಟಿಮಾಡತಕ್ಕವರು. ಅಗ್ನಿಯಲ್ಲಿ ದತ್ತವಾದ ಆಹುತ್ಯಾದಿಗಳೇ ಊರ್ಧ್ವಪ್ರವರ್ಷಣವೆಂಬ ಮುಖ್ಯ ಸಾಧನವಾಗುತ್ತದೆ. ಬ್ರಾಹ್ಮಣನಾದವನು ಪ್ರಣವಪೂರ್ವಕವಾಗಿ ಯಾವ ಯಾವ ದೇವತೆಯನ್ನು ಉದ್ದೇಶಿಸಿ ಹವಿಸ್ಸನ್ನು ದಾನಮಾಡುತ್ತಾನೆಯೋ ಆಯಾಯ ದೇವತೆಯು ಅವನ ವಿಷಯದಲ್ಲಿ ಯಾವಾಗಲೂ ಪ್ರೀತಿಯಿಂದ ಕೂಡಿರುತ್ತದೆ. ಮುಖಸ್ಥಾನೀಯನಾದ ಅಗ್ನಿಯಲ್ಲಿ ಕೊಟ್ಟ ಹವಿಸ್ಸಿನಿಂದ ದೇವತೆಗಳು ತೃಪ್ತಿಹೊಂದುತ್ತಾರೆ. ತೃಪ್ತರಾದ ಆ ದೇವತೆಗಳು ಇವನನ್ನು ಇಷ್ಟಪ್ರದಾನದಿಂದ ತೃಪ್ತಿಪಡಿಸುತ್ತಾರೆ.

೮-೧೧. ಸೂರ್ಯನಲ್ಲಿ ಹೋಮವು ಬಹು ಪುಣ್ಯಕರ. ಇದರಿಂದ ಸ್ವರ್ಗವನ್ನು ಹೊಂದುತ್ತಾನೆ. ಸಮಿತ್ತುಗಳಿಂದ ಹೋಮಮಾಡಿದಲ್ಲಿ ಅದಕ್ಕಿಂತಲೂ ಹತ್ತರಷ್ಟು, ಸಸ್ಯಗಳಿಂದ ಹೋಮಿಸಿದಲ್ಲಿ ಅದಕ್ಕಿಂತಲೂ ಹತ್ತರಷ್ಟು, ಛತ್ತದಿಂದ

ತಸ್ಮಾದ್ದಶಗುಣಂ ಶಸ್ತೈಃ ವ್ರೀಹಿಭಿರ್ದ್ವಿಗುಣಂ ತತಃ ।
ತಾವದೇವತಥಾ ಪುಣ್ಯಂ ಹೋಮೋ ಸಿದ್ಧಾರ್ಥಕೈಃ ಸ್ಮೃತಂ ॥ ೯ ॥

ಯವೈಶ್ಚತುರ್ಗುಣಂ ತಸ್ಮಾತ್ತಿಲೈರ್ದಶಗುಣಂ ತತಃ ।
ತಾವದೇವ ಫಲಂ ಜ್ಞೇಯಂ ಬಿಲ್ವೈರ್ದಶಗುಣಂ ತತಃ ॥ ೧೦ ॥

ಪದ್ಮೈಶ್ಚ ತಾವದೇವೋಕ್ತಂ ದಧ್ನಾ ಕ್ಷೀರೇಣ ಚ ದ್ವಿಜಾಃ ।
ಪರಮಾನ್ನೇನ ಧರ್ಮಜ್ಞಾ ಘೃತೇನಾಷ್ಟಗುಣಂ ತತಃ ॥ ೧೧ ॥

ಮಂತ್ರೇಣೋಙ್ಕಾರಪೂತೇನ ಸ್ವಾಹಾಂತೇನ ವಿಚಕ್ಷಣಃ ।
ಸ್ವಾಹಾವಸಾನಂ ಜುಹುಯಾತ್ ಧ್ಯಾಯನ್ವೈ ಮಂತ್ರದೇವತಾಂ ॥ ೧೨ ॥

ಯಯಾಕ್ಷಙ್ಗುಲಿಪರ್ವಾಣಿ ಪೂರ್ಯನ್ತೇ ತಾವದಾಹುತಿಃ ।
ಅಂಗುಷ್ಠಮಾತ್ರಂ ಸ್ಥೌಲ್ಯೇನ ವಿತಸ್ತಿಶ್ಚೇದ್ಮ ಇಷ್ಯತೇ ॥ ೧೩ ॥

ದುಃಸ್ವಪ್ನೇ ಚ ದುರಿಷ್ಟೇ ಚ ದುರ್ನಿಮಿತ್ತೇ ತಥೈವ ಚ ।
ನಾಸ್ತಿ ಹೋಮಸಮಂ ತ್ರಾಣಂ ತಥಾ ಪಾಪವಿನಾಶನಂ ॥ ೧೪ ॥

ಮಾಡಿದಲ್ಲಿ ದ್ವಿಗುಣ, ಬಿಳಿಯ ಸಾಸವೆಯಿಂದ ಮಾಡಿದಲ್ಲಿಯೂ ಅದೇ ರೀತಿ, ಯವಗಳಿಂದ ಹೋಮಿಸಿದಲ್ಲಿ ನಾಲ್ಕರಷ್ಟು ಎಳ್ಳಿನಿಂದ ಮಾಡಿದಲ್ಲಿ ಹತ್ತರಷ್ಟು, ಬಿಲ್ವಗಳಿಂದ ಮಾಡಿದಲ್ಲಿಯೂ, ಅದೇ ರೀತಿ ಪದ್ಮ ಮತ್ತು ದಧಿ, ಕ್ಷೀರ ಇವುಗಳಿಂದ ಮಾಡಿದಲ್ಲಿ ಹತ್ತರಷ್ಟು. ಪರಮಾನ್ನ ಆಜ್ಯ ಇವುಗಳಿಂದ ಮಾಡಿದಲ್ಲಿ ಎಂಟರಷ್ಟು ಫಲಪ್ರದವಾಗುತ್ತದೆ.

೧೨-೧೪ ಓಂಕಾರದಿಂದ ಪವಿತ್ರವಾದ ಸ್ವಾಹಾಂತವಾದ ಮಂತ್ರದಿಂದ ಸ್ವಾಹಾಶಬ್ದವನ್ನು ಹೇಳಿದ ಅನಂತರ ಮಂತ್ರದೇವತೆಯನ್ನು ಧ್ಯಾನಮಾಡುತ್ತಾ ಹೋಮಮಾಡಬೇಕು. ಆಹುತಿಯು ಅಂಗುಷ್ಠಮಾತ್ರದಷ್ಟು ದಪ್ಪನಾಗಿಯೂ, ಬೆರಳುಗಳ ಗಿಣ್ಣುಗಳು ಪೂರ್ತಿಯಾಗುವಷ್ಟು ಪರಿಮಾಣವುಳ್ಳದ್ದಾಗಿಯೂ ಇರಬೇಕು ದುಃಸ್ವಪ್ನ ಮತ್ತು ದುರ್ನಿಮಿತ್ತಗಳುಂಟಾದಾಗಲೂ, ಯಾವುದಾದರೂ ಅನಿಷ್ಟ ಉಂಟಾದಾಗಲೂ, ಅವುಗಳಿಗೆ ಮೂಲವಾದ ಪಾಪವನ್ನು ನಾಶಮಾಡುವ ವಿಷಯದಲ್ಲಿ ಹೋಮಕ್ಕೆ ಸಮವಾದ ರಕ್ಷಕವು ಮತ್ತೊಂದಿಲ್ಲ ಹೋಮದಿಂದ ಮನುಷ್ಯನಿಗೆ

ಹೋಮೇನ ಪಾಪಂ ಪುರುಷೋ ಜಹಾತಿ
ಹೋಮೇನ ನಾಕಂ ಚ ತಥಾ ಪ್ರಯಾತಿ ।
ಹೋಮಸ್ತು ಲೋಕೇ ದುರಿತಂ ಸಮಗ್ರಂ
ವಿನಾಶಯತ್ಯೇವ ನ ಸಂಶಯೋಽತ್ರ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಹೋಮವಿಧಿ ವರ್ಣನೋ ನಾಮ ಸಪ್ತಾಶೀತ್ಯುತ್ತರ ದ್ವಿಶತತಮೋಽಧ್ಯಾಯಃ

ಪಾಪನಾಶವೂ, ಸ್ವರ್ಗಪ್ರಾಪ್ತಿಯೂ ಉಂಟಾಗುತ್ತದೆ. ಎಲ್ಲಾ ವಿಧವಾದ ದುಷ್ಫಲಗಳನ್ನೂ ಹೋಮವು ನಾಶಮಾಡುತ್ತದೆ. ಇದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಹೋಮವಿಧಿವರ್ಣನವೆಂಬ ಇನ್ನೂರ ಎಂಭತ್ತೇಳನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

ಅಷ್ಟಾಶೀತ್ಯುತ್ತರದ್ವಿಶತತಮೋಽಧ್ಯಾಯಃ

|| ಹಂಸ ಉವಾಚ ||

ದೇವಾಧೀನಾಃ ಪ್ರಜಾಃ ಸರ್ವಾಃ ದೇವಾಯತ್ತಮಿದಂ ಜಗತ್ ।
ಸುಖದುಃಖೇ ಮನುಷ್ಯಾಣಾಂ ದೇವಾಯತ್ತೇ ತಥೈವ ಚ || ೧ ||

ದೈವೈರ್ವಿಹಿತಮಶ್ನಂತಿ ಮನುಷ್ಯಾಸ್ತು ಶುಭಾಶುಭಂ ।
ತಸ್ಮಾತ್ಸರ್ವಪ್ರಯತ್ನೇನ ದೇವಪೂಜಾಪರೋ ಭವೇತ್ || ೨ ||

ದೇವಾಶ್ಚ ಭಕ್ತ್ಯಾ ತುಷ್ಯಂತಿ ಶ್ರದ್ಧಯಾ ಪರಯಾ ತಥಾ ।
ಪೂಜಿತಾಃ ಶುಚಿನಾ ಚೈವ ದೇವಾಸ್ತುಷ್ಯಂತಿ ನಾನ್ಯಥಾ || ೩ ||

ಇನ್ನೂರ ಎಂಭತ್ತೆಂಟನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಪ್ರಜೆಗಳೆಲ್ಲರೂ ದೇವತೆಗಳಿಗೆ ಅಧೀನರು. ಜಗತ್ತೆಲ್ಲವೂ ದೇವತೆಗಳಿಗೆ ಅಧೀನವಾಗಿದೆ ಮನುಷ್ಯನಿಗೆ ಉಂಟಾಗುವ ಸುಖ ದುಃಖಗಳೂ ದೇವತೆಗಳಿಗೆ ಅಧೀನವಾಗಿವೆ. ದೇವತೆಗಳು ಕೊಟ್ಟ ಸುಖದುಃಖ ಗಳನ್ನೇ ಮನುಷ್ಯರು ಅನುಭವಿಸುತ್ತಾರೆ. ಆದುದರಿಂದ ಸರ್ವಪ್ರಯತ್ನಮಾಡಿಯೂ ದೇವತೆಗಳ ಪೂಜೆಯಲ್ಲಿ ಆಸಕ್ತನಾಗಬೇಕು. ದೇವತೆಗಳೂ ಸಹ ಭಕ್ತಿಯಿಂದಲೂ

ದೇವಶುಶ್ರೂಷಯಾ ಸ್ವರ್ಗೋ ದೇವಶುಶ್ರೂಷಯಾ ಸುಖಂ ।
ದೇವಶುಶ್ರೂಷಯಾ ರಾಜ್ಯಂ ಮೋಕ್ಷಂಚಾಪ್ಯಥವಾಪ್ಯತೇ ॥ ೪ ॥

ದೇವತಾಃ ಕಾಮಯಂತೀಹ ತಥಾ ಭಕ್ತಂ ಜನಂ ಸದಾ ।
ಭಕ್ತಾನುಕಂಪಿನೋ ದೇವಾಃ ಪರತ್ರೇಹ ತಥಾ ಧ್ರುವಂ ॥ ೫ ॥

ತ್ರಾಣಂ ಕುರ್ವಂತಿ ಭಕ್ತಸ್ಯ ಧ್ರುವಂ ದೇವಾ ದ್ವಿಜೋತ್ತಮಾಃ ।
ದೇವತೋಪ್ರಸಾದವಾಪ್ನೋತಿ ಯಾನ್ಕಾಮಾನ್ಮನಸೇಚ್ಛತಿ ॥ ೬ ॥

ಜಾತಪ್ರಭೃತಿ ಯಂ ದೇವಂ ಭಕ್ತ್ಯಾ ನಿತ್ಯಮಥಾರ್ಚಯೇತ್ ।
ಅಂತಕಾಲೇ ತು ಸಂಪ್ರಾಪ್ತೇ ಸೋಪಿ ತ್ರಾತಾ ಭವೇದ್ಧ್ರುವಂ ॥ ೭ ॥

ಕಿಂವಾ ಪಾಪವಿಹೀನಸ್ಯ ಕ್ಷಿಪ್ರಂ ತುಷ್ಯಂತಿ ದೇವತಾಃ ।
ತಸ್ಮಾತ್ಪಾಪಂ ನ ಕರ್ತವ್ಯಂ ನರೇಣ ತ್ರಿದಶಾಶ್ರಯಾತ್ ॥ ೮ ॥

ಹೆಚ್ಚಾದ ಶ್ರದ್ಧೆಯಿಂದಲೂ ಸಂತುಷ್ಟರಾಗುತ್ತಾರೆ. ಶುಚಿಯಾಗಿದ್ದು ಪೂಜಿಸಿದಲ್ಲಿ ಸಂತುಷ್ಟರಾಗುವರೇ ಹೊರತು ಬೇರೆ ಉಪಾಯವಿಲ್ಲ. ಸ್ವರ್ಗ ಇಹಲೋಕದ ಸುಖ ರಾಜ್ಯ ಮೋಕ್ಷ ಇವೆಲ್ಲವೂ ದೇವತೆಗಳ ಶುಶ್ರೂಷೆಯಿಂದಲೇ ಲಭಿಸುತ್ತವೆ.

೫-೮. ದೇವತೆಗಳೂ ಸಹ ಭಕ್ತರಾದ ಜನರನ್ನು ಯಾವಾಗಲೂ ಅಪೇಕ್ಷಿಸುತ್ತಾರೆ. ದೇವತೆಗಳು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸಹ ಭಕ್ತರಲ್ಲಿ ಸ್ವಾಭಾವಿಕವಾಗಿ ದಯಾಶಾಲಿಗಳು ಆದುದರಿಂದ ಭಕ್ತರನ್ನು ಅವರು ರಕ್ಷಿಸಿಯೇ ರಕ್ಷಿಸುತ್ತಾರೆ. ದೇವತೆಗಳ ಸಂತೋಷದಿಂದ ಆಶ್ರಯಿಸಿದ ಭಕ್ತನೂ ಇಷ್ಟಸಿದ್ಧಿಯನ್ನು ಹೊಂದುತ್ತಾನೆ ತಾನು ಹುಟ್ಟಿದ ಮೊದಲುಗೊಂಡು ಯಾವ ದೇವತೆಯನ್ನು ಭಕ್ತಿಯಿಂದ ಪೂಜಿಸುತ್ತಾನೆಯೋ ಆ ದೇವತೆಯೇ ಅವನ ಅಂತ್ಯಕಾಲದಲ್ಲಿ ಅವನಿಗೆ ರಕ್ಷಣೆಯನ್ನು ಕೊಟ್ಟೇಕೊಡುತ್ತದೆ. ಪಾಪವಿಲ್ಲದೆ ಶುದ್ಧನಾಗಿರುವವನ ವಿಷಯದಲ್ಲಿ ದೇವತೆಗಳು ಕ್ಷಿಪ್ರದಲ್ಲಿಯೇ ಪ್ರಸನ್ನರಾಗುತ್ತಾರೆ ಆದುದರಿಂದ ದೇವತಾಶ್ರಯ

ದೇವಾಶ್ರಿತಾನಾಂ ಪಾಪಾನಾಂ ಕ್ಷಿಪ್ರಂ ಪಾಪಂ ವಿನಶ್ಯತಿ ।
ನತ್ವೇವ ಪಾತಕಂ ಕರ್ಮ ವೃಥಾ ತೇಷಾಂ ಪ್ರಜಾಯತೇ || ೯ ||

ತಥಾ ಬಹುಫಲಂ ಲೋಕೇ ಕಥಿತಂ ತ್ರಿದಶಾಶ್ರಯಂ ।
ಸರ್ವಾನ್ ಸಮರ್ಚಯೇದ್ದೇವಾನೇಕಂ ವಾ ದೇವಮಾಶ್ರಯೇತ್ || ೧೦ ||

ದೇವಾರ್ಚಾಂ ಶ್ರದ್ಧಯಾ ಕೃತ್ವಾ ಧ್ರುವಂ ತಲ್ಲೋಕಮಾಪ್ನುಯಾತ್ ।
ಕೃತ್ವಾ ದೇವಗೃಹಂ ವಿಪ್ರಾ ನರಸ್ತಲ್ಲೋಕಮಾಪ್ನುಯಾತ್ || ೧೧ ||

ಪರಮಾಣೂನಿ ಯಾವಂತಿ ಭವಂತಿ ಸುರವೇಶ್ಮನಃ ।
ತಾವತೋಽಬ್ದಾನವಾಪ್ನೋತಿ ತಲ್ಲೋಕಾನ್ನಾತ್ರ ಸಂಶಯಃ || ೧೨ ||

ಯಾವದ್ದ್ವಾರಂ ಕರೋತೀಹ ದೇವವೇಶ್ಮ ಸುಧಾಸಿತಂ ।
ಜನ್ಮಾಂತರಾಣಿ ತಾವಂತಿ ಯಶಸಾ ಸ ವಿರಾಜತೇ || ೧೩ ||

ದಿಂದ ಇಷ್ಟ ಫಲವನ್ನು ಅಪೇಕ್ಷಿಸುವವನು ಪಾಪಮಾಡಬಾರದು. ಹಿಂದಿನ ಪಾಪಗಳು ಅಲ್ಪಸ್ವಲ್ಪವಿದ್ದರೂ ದೇವತೆಯನ್ನು ಆಶ್ರಯಿಸಿದನಂತರ ಆ ಪಾಪಗಳೂ ಜಾಗ್ರತೆಯಾಗಿ ನಾಶಹೊಂದುತ್ತವೆ. ಅಂತಹವರಿಗೆ ದೇವತಾಶ್ರಯದಿಂದ ವ್ಯರ್ಥವಾದ ಪಾಪಗಳು ಮುಂದೆ ಉಂಟಾಗುವುದಿಲ್ಲ.

೧೦-೧೪. ಹಾಗೂ ದೇವತಾಶ್ರಯವು ಅನೇಕ ಫಲಗಳಿಗೂ ಕಾರಣವಾಗುತ್ತದೆ. ಎಲ್ಲಾ ದೇವತೆಗಳನ್ನಾಗಲಿ ಅಭಿಮತವಾದ ಒಂದೇ ದೇವತೆಯನ್ನಾಗಲಿ ಪೂಜಿಸಬಹುದು. ಶ್ರದ್ಧೆಯಿಂದ ದೇವತಾ ಪೂಜೆಯನ್ನು ಮಾಡಿದವನು ಆ ದೇವತೆಯ ಲೋಕವನ್ನು ಹೊಂದಿಯೇ ಹೊಂದುತ್ತಾನೆ. ದೇವಗೃಹವನ್ನು ನಿರ್ಮಿಸಿದವನೂ ಸಹ ಆ ದೇವತೆಯ ಲೋಕವನ್ನು ಹೊಂದುತ್ತಾನೆ. ಅಂತಹ ದೇವಗೃಹದಲ್ಲಿ ಎಷ್ಟು ಪರಮಾಣುಗಳಿರುವುವೋ ಅಷ್ಟು ಸಂಖ್ಯೆಯ ವರ್ಷಪರ್ಯಂತವೂ ಆ ದೇವತೆಯ ಲೋಕದಲ್ಲಿಯೇ ವಾಸಿಸುತ್ತಾನೆ. ದೇವಾಲಯದಲ್ಲಿ ಎಷ್ಟು ಬಾಗಿಲುಗಳನ್ನು ಸುಣ್ಣಾವೇ ಮೊದಲಾದುವುಗಳಿಂದ ಅಲಂಕರಿಸುತ್ತಾನೆಯೋ ಅಷ್ಟು ಜನ್ಮಗಳಲ್ಲಿಯೂ ಅವನು ಯಶಸ್ವಿಯಾಗಿ ಬದುಕುತ್ತಾನೆ. ದೇವಗೃಹದ ಧ್ವಜವನ್ನು ನಿರ್ಮಿಸಿದ್ದೇ

ಪ್ರತಿಪಾದ್ಯ ತಥಾ ಭಕ್ತ್ಯಾ ಧ್ವಜಂ ತ್ರಿದಶವೇಶ್ಮನಿ ।
ನಿರ್ದಹತ್ಯಾಶು ಪಾಪಾನಿ ಮಹಾಪಾತಕಜಾನ್ಯಪಿ ॥ ೧೪ ॥

ಚಿತ್ರಕರ್ಮ ತಥಾ ಕೃತ್ವಾ ಗಂಧರ್ವೈಸ್ಸಹ ಮೋದತೇ ।
ದೇವಮಾಲ್ಯಾಪನಯನಾದ್ಗೋದಾನಫಲಮಾಪ್ನುಯಾತ್ ॥ ೧೫ ॥

ಪಾಪೈರ್ವಿಮುಚ್ಯತೇ ಸರ್ವೈಃ ಪ್ರೋಕ್ಷಣಾದ್ದೇವವೇಶ್ಮನಃ ।
ಸಮ್ಮಾರ್ಜನಾತ್ತಥಾ ಪಾಪಂ ವ್ಯಪೋಹತಿ ನ ಸಂಶಯಃ ॥ ೧೬ ॥

ಕಾಮಾನಭೀಷ್ಟಾನಾಪ್ನೋತಿ ದೇವವೇಶ್ಮೋಪಲೇಪನಾತ್ ।
ಸುಧಾರೇಖಾನ್ವಿತಂ ಕೃತ್ವಾ ಮರ್ಯಾದಾಂ ನಾತಿವರ್ತತೇ ॥ ೧೭ ॥

ವರ್ಣಕೈಶ್ಚಿತ್ರಿತಂ ಕೃತ್ವಾ ಸೌಭಾಗ್ಯಂ ಮಹದಾಪ್ನುಯಾತ್ ।
ಗಂಧರ್ವತ್ವಮವಾಪ್ನೋತಿ ಗಂಧೈರಭ್ಯುಕ್ಷ್ಯ ಮಾನವಃ ॥ ೧೮ ॥

ಪುಷ್ಪೈರ್ವಿಕಿರಣಂ ಕೃತ್ವಾ ರೂಪವಾನಭಿಜಾಯತೇ ।
ಅಭ್ಯಜ್ಯ ದೇವಪ್ರತಿಮಾಂ ಸರ್ವದುಃಖೈರ್ವಿಮುಚ್ಯತೇ ॥ ೧೯ ॥

ಅವರೆ ಮಹಾಪಾತಕವೇ ಮೊದಲಾದ ಎಲ್ಲಾ ಪಾಪಗಳನ್ನೂ ಹೋಗಲಾಡಿಸಿ ಕೊಳ್ಳುತ್ತಾನೆ.

೧೫-೧೯. ದೇವಗೃಹದಲ್ಲಿ ಚಿತ್ರಕಾರ್ಯಮಾಡಿದವನು ಗಂಧರ್ವರೊಡನೆ ಸಂತೋಷಿಸುತ್ತಾನೆ. ದೇವತೆಯ ನಿರ್ಮಾಲ್ಯಾಪನಯನದಿಂದ ಗೋದಾನ ಫಲವುಂಟಾಗುತ್ತದೆ. ದೇವಗೃಹವನ್ನು ತೊಳೆದಲ್ಲಿ ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. ಸಾರಿಸುವುದರಿಂದಲೂ ಪಾಪನಾಶವು ಲಭಿಸುತ್ತದೆ. ಗಾರೆ ಮೊದಲಾದವುಗಳಿಂದ ಬಳಿದು ಚೆನ್ನಾಗಿ ಮಾಡಿದಲ್ಲಿ ಬಹುವಿಧವಾದ ಇಷ್ಟದ್ಧಿಗಳುಂಟಾಗುತ್ತವೆ. ಸುಣ್ಣದಿಂದ ಪಟ್ಟಿಗಳನ್ನು ಬರೆದು ಅಲಂಕರಿಸಿದಲ್ಲಿ ಮರ್ಯಾದೆಯೊಡನೆ ಬದುಕುತ್ತಾನೆ. ಬಣ್ಣಗಳಿಂದ ಚಿತ್ರಿಸಿದಲ್ಲಿ ಸೌಭಾಗ್ಯಶಾಲಿಯಾಗುತ್ತಾನೆ ಗಂಧೋದಕದಿಂದ ಸೇಚನಮಾಡಿದಲ್ಲಿ ಗಂಧರ್ವನಾಗಿ ಬದುಕುತ್ತಾನೆ. ಪುಷ್ಪಗಳಿಂದ ಹರವಿ ಸೇವಿಸಿದಲ್ಲಿ ರೂಪವಂತನಾಗಿ ಹುಟ್ಟುತ್ತಾನೆ. ಅಭ್ಯಂಗದಿಂದ ದೇವತಾಪ್ರತಿಯನ್ನು ಸೇವಿಸಿದಲ್ಲಿ ಸರ್ವದುಃಖಗಳಿಂದಲೂ ಮುಕ್ತನಾಗುತ್ತಾನೆ.

ವಿರೂಕ್ಷಯಿತ್ವಾ ತಾಮೇವ ಪಾಪೇಭ್ಯೋ ವಿಪ್ರಮುಚ್ಯತೇ ।
ಓಷಧೀಭಿಸ್ತಥಾ ಸ್ನಾಪ್ಯ ನಾಸತ್ಯೈಸ್ಸಹ ಮೋದತೇ ॥ ೨೦ ॥

ಲೋಕೇ ಪ್ರಜಾಪತೇರ್ಯಾತಿ ವೇದ್ಯೈ ಸಂಸ್ನಾಪ್ಯದೇವತಾಂ ।
ಪುಷ್ಪೋದಕೇನ ಸ್ನಪನಾತ್ಸೌಭಾಗ್ಯಂ ಮಹದಶ್ನುತೇ ॥ ೨೧ ॥

ಫಲೋದಕೇನ ಸಂಸ್ನಾಪ್ಯ ಸಫಲಾಂ ವಿಂದತೇ ಕ್ರಿಯಾಂ ।
ನಾಗವಲ್ಲೀ ಜಲೈಃ ಸ್ನಾಪ್ಯ ನಾಗಲೋಕಂ ಸ ಗಚ್ಛತಿ ॥ ೨೨ ॥

ರತ್ನೋದಕೇನ ಸ್ನಪನಾದ್ಧಾನದಂ ಲೋಕಮಾಪ್ನುಯಾತ್ ।
ಗಂಧೋದಕೇನ ಮುಖ್ಯೇನ ಗಂಧರ್ವೈಃ ಸಹ ಮೋದತೇ ॥ ೨೩ ॥

ತೀರ್ಥೋದಕೇನ ಪುಣ್ಯೇನ ಸ್ವರ್ಗಲೋಕಮವಾಪ್ನುಯಾತ್ ।
ತಥಾನುಲಿಪ್ಯ ಗಂಧೈಶ್ಚ ಶಕ್ರಲೋಕೇ ಮಹೀಯತೇ ॥ ೨೪ ॥

೨೦–೨೩. ದೇವತೆಯ ವಿಗ್ರಹಕ್ಕೆ ಅಲಂಕಾರಾದಿಗಳಿಂದ ಸೌಂದರ್ಯ ಉಂಟುಮಾಡಿದಲ್ಲಿ ಪಾಪಗಳಿಂದ ಮುಕ್ತನಾಗುತ್ತಾನೆ. ಓಷಧಿಗಳಿಂದ ಸ್ನಪನ ಮಾಡಿದಲ್ಲಿ ಅಶ್ವಿನೀದೇವತೆಗಳೊಡನೆ ಸುಖಿಸುತ್ತಾನೆ. ವೇದಮಂತ್ರಗಳಿಂದ ಸ್ನಪನ ಮಾಡಿದಲ್ಲಿ ಬ್ರಹ್ಮಲೋಕವನ್ನು ಹೊಂದುತ್ತಾನೆ. ಪುಷ್ಪೋದಕದಿಂದ ಸ್ನಪನ ಮಾಡಿದಲ್ಲಿ ಹೆಚ್ಚು ಸೌಭಾಗ್ಯಶಾಲಿಯಾಗುತ್ತಾನೆ. ಫಲೋದಕದಿಂದ ಸ್ನಪನ ಮಾಡಿದಲ್ಲಿ ಇವನ ವ್ಯಾಪಾರಗಳೆಲ್ಲವೂ ಸಫಲವಾಗುತ್ತದೆ. ನಾಗವಲ್ಲಿಯ ತೀರ್ಥದಿಂದ ಸ್ನಾನಮಾಡಿಸಿದವನು ನಾಗಲೋಕವನ್ನು ಹೊಂದುತ್ತಾನೆ. ರತ್ನತೀರ್ಥದಿಂದ ಸ್ನಾನಮಾಡಿಸಿದವನು ಕುಬೇರನ ಲೋಕವನ್ನು ಹೊಂದುತ್ತಾನೆ. ಗಂಧೋದಕದಿಂದ ಮುಖದ ಪ್ರದೇಶದಲ್ಲಿ ಸ್ನಪನಮಾಡಿಸಿದವನು ಗಂಧರ್ವರೊಡನೆ ಸುಖಿಸುತ್ತಾನೆ.

೨೪–೨೮. ಪುಣ್ಯಕರವಾದ ತೀರ್ಥಜಲದಿಂದ ಸ್ನಪನಮಾಡಿಸಿದಲ್ಲಿ ಸ್ವರ್ಗಲೋಕಪ್ರಾಪ್ತಿಯೂ, ಗಂಧಾನುಲೇಪನದಿಂದ ಇಂದ್ರಲೋಕಪ್ರಾಪ್ತಿಯೂ, ಆಗುತ್ತದೆ ಆಭರಣಗಳನ್ನು ದಾನಮಾಡಿದಲ್ಲಿ ಮತ್ತು ರಾಜಚಿಹ್ನೆಗಳನ್ನು ದಾನಮಾಡಿದಲ್ಲಿ ಭೂಮಿಗೆ ಧೊರೆಯಾಗಿ ಹುಟ್ಟುತ್ತಾನೆ. ವಸ್ತ್ರದಾನ ಮಾಡಿದಲ್ಲಿ ಸುವೇಷಉಳ್ಳವ

ವಿಭೂಷಣಪ್ರದಾನೇನ ರಾಜಾ ಭವತಿ ಭೂತಲೇ ।
ರಾಜಲಿಂಗಪ್ರದಾನೇನ ರಾಜಾ ಭವತಿ ಹಿ ಕ್ಷಿತೌ ॥ ೨೫ ॥

ವಸ್ತ್ರದಾನೇನ ಲೋಕೇಽಸ್ಮಿನ್ಸುವೇಶಸ್ತ್ವಭಿಜಾಯತೇ ।
ದೇವೇ ಮಾಲ್ಯಪ್ರದಾನೇನ ಪರಾಂ ಲಕ್ಷ್ಮೀಂ ಸಮಶ್ನುತೇ ॥ ೨೬ ॥

ಧೂಪಪ್ರದಾನೇನ ತಥಾ ಗತಿಮಗ್ರ್ಯಾಮವಾಪ್ನುಯಾತ್ ।
ದೀಪದಾನೇನ ಚಕ್ಷುಷ್ಮಾನ್ ಪ್ರಕಾಶಶ್ಚೈವ ಜಾಯತೇ ॥ ೨೭ ॥

ಊರ್ಧ್ವಾಂ ಗತಿಮವಾಪ್ನೋತಿ ಸರ್ವತ್ರ ಚ ತಥಾಗ್ರ್ಯತಾಂ ।
ದೇವತಾಭ್ಯಸ್ತಥಾ ವಿಪ್ರ ನಿವೇದ್ಯಾನ್ನಮತಂದ್ರಿತಃ ॥ ೨೮ ॥

ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ಪರಿತೋಷಮಥಾಯಾತಿ ದೇವತಾ ಬಲಿಕರ್ಮಣಾ ॥ ೨೯ ॥

ತಾಸ್ತುಷ್ಟಾಃ ತರ್ಪಯನ್ತ್ಯೇನಂ ಸರ್ವಕಾಮಸಮೃದ್ಧಿಭಿಃ ।
ಹೃದ್ಯಪಾನಪ್ರದಾನೇನ ತೃಪ್ತಿಮಾಪ್ನೋತಿ ಶಾಶ್ವತೀಂ ॥ ೩೦ ॥

ದೇವತಾನಾಂ ನಮಸ್ಕಾರಾತ್ಕಿಂಚಿತ್ಪಾಪಂ ಪ್ರಣಶ್ಯತಿ ।
ತಥೈವಾಭ್ಯಧಿಕಂ ಪಾಪಂ ಪ್ರಣಿಪಾತೇನ ನಶ್ಯತಿ ॥ ೩೧ ॥

ನಾಗುತ್ತಾನೆ. ಹೂಮಾಲಿಕೆಗಳ ಅರ್ಪಣದಿಂದ ಹೆಚ್ಚಾದ ಸಂಪತ್ತನ್ನು ಹೊಂದು ತ್ತಾನೆ. ಧೂಪಪ್ರಧಾನದಿಂದ ಉತ್ತಮಗತಿಯನ್ನು ಹೊಂದುತ್ತಾನೆ. ದೀಪಪ್ರದಾನ ದಿಂದ ನೇತ್ರಪಾಟವವುಳ್ಳವನಾಗಿಯೂ, ತೇಜಸ್ವಿಯಾಗಿಯೂ ಆಗುತ್ತಾನೆ. ಉನ್ನತ ಗತಿಯನ್ನೂ, ಗಣ್ಯತೆಯನ್ನು ಹೊಂದುತ್ತಾನೆ. ಅನ್ನವೇ ಮೊದಲಾದುವನ್ನು ದೇವತೆಗಳಿಗೆ ನಿವೇದಿಸಿದಲ್ಲಿ ಸರ್ವಸಮೃದ್ಧವಾದ ಯಜ್ಞದ ಫಲವನ್ನೇ ಹೊಂದುತ್ತಾನೆ.

೨೯–೩೫. ದೇವತೆಗಳು ಪೂಜಾದಿಕರ್ಮಗಳಿಂದ ಸಂತೋಷಹೊಂದುತ್ತಾರೆ. ಸಂತುಷ್ಟರಾದ ಅವರು ಪೂಜಕನನ್ನು ಸರ್ವವಿಧವಾದ ಇಷ್ಟಾರ್ಥಗಳಿಂದಲೂ ತೃಪ್ತಿ ಪಡಿಸುತ್ತಾರೆ. ದೇವತೆಗಳಿಗೆ ಒಳ್ಳೆಯ ಪಾನಪ್ರದಾನದಿಂದ ದಾತೃವಿಗೆ ಶಾಶ್ವತವಾದ ತೃಪ್ತಿಯುಂಟಾಗುತ್ತದೆ. ದೇವತೆಗಳ ನಮಸ್ಕಾರದಿಂದ ಸ್ವಲ್ಪಮಟ್ಟಿಗೆ ಪಾಪನಾಶವೂ

ತತೋಽಪ್ಯಭ್ಯಧಿಕಂ ಕಿಂಚಿತ್ಕೃತ್ವಾ ದೇವೇ ಪ್ರದಕ್ಷಿಣಾಂ ।
ಸ್ತುತಿಕ್ರಿಯಾ ದೇವತಾನಾಂ ಸರ್ವಕಾಮಫಲಪ್ರದಾ ॥ ೩೨ ॥

ಗೀತೇನ ದೇವತಾಸ್ತೋಷಮುಪಯಾಂತಿ ದ್ವಿಜೋತ್ತಮಾಃ ।
ತಥಾ ವಾದ್ಯೇನ ನೃತ್ಯೇನ ಪುರುಷಸ್ಯ ವಿಶೇಷತಃ ॥ ೩೩ ॥

ನೃತ್ತಂ ಗೀತಂ ತಥಾ ವಾದ್ಯಂ ಸ್ವಯಮಾಚರತೇ ದ್ವಿಜಾಃ ।
ದೇವಸಾಲೋಕ್ಯಮಾಪ್ನೋತಿ ಪುರುಷಸ್ಯ ವಿಪಶ್ಚಿತಃ ॥ ೩೪ ॥

ವಾಚನಾದಿತಿಹಾಸಾನಾಂ ಪಾಪನೋಕ್ಷಮವಾಪ್ನುಯಾತ್ ।
ಮೂಲ್ಯೇನ ಕಾರಯೇದ್ಗೀತಂ ಗಂಧರ್ವತ್ವಮಥಾಪ್ನುಯಾತ್ ॥ ೩೫ ॥

ವಾದ್ಯಂ ದತ್ವಾಥ ಧರ್ಮಜ್ಞಾಃ ವಸೂನಾಂ ಲೋಕಮಶ್ನುತೇ ।
ನೃತ್ತೇನ ಲೋಕಮಾಪ್ನೋತಿ ಶಂಕರಸ್ಯ ಮಹಾತ್ಮನಃ ॥ ೩೬ ॥

ಇತಿಹಾಸಪ್ರದಾನೇನ ಬುದ್ಧಿಮಾನ್ ಜಾಯತೇ ನರಃ ।
ಆಹುತಿಂ ದೇವಮುದ್ದಿಶ್ಯ ಯೋ ದದಾತಿ ಹುತಾಶನೇ ॥ ೩೭ ॥

ಹೆಚ್ಚಾದ ಸೇವೆಯಿಂದ ಹೆಚ್ಚಾದ ಪಾಪವೂ ಅದಕ್ಕಿಂತಲೂ ಹೆಚ್ಚಾದ ಪಾಪವು ಪ್ರದಕ್ಷಿಣೆಯಿಂದಲೂ ನಾಶಹೊಂದುತ್ತದೆ. ದೇವತೆಗಳ ಸ್ತೋತ್ರವು ಸರ್ವಮನೋರಥಸಿದ್ಧಿಗೂ ಕಾರಣವಾಗುತ್ತದೆ. ದೇವತೆಗಳು ಗಾನದಿಂದ ತುಷ್ಟರಾಗುತ್ತಾರೆ. ಪುರುಷನ ನೃತ್ಯವಾದ್ಯಾದಿಗಳಿಂದ ವಿಶೇಷವಾದ ತೃಪ್ತಿಹೊಂದುತ್ತಾರೆ. ಪಂಡಿತನಾದ ಪುರುಷನು ನೃತ್ಯಗೀತವಾದ್ಯಾದಿಗಳನ್ನು ತಾನಾಗಿ ದೇವತಾಪ್ರೀತಿಗಾಗಿ ಮಾಡಿದಲ್ಲಿ ಅವನು ಆದೇವತೆಯ ಸಾಲೋಕ್ಯವನ್ನೇ ಹೊಂದುತ್ತಾನೆ. ಇತಿಹಾಸಾದಿಪಠನದಿಂದಲೂ ಪಾಪನಾಶಹೊಂದುತ್ತಾನೆ. ಮೂಲ್ಯವನ್ನು ಕೊಟ್ಟು ಮತ್ತೊಬ್ಬನಿಂದ ಗಾನಮಾಡಿಸಿದವನೂ ಗಂಧರ್ವನಾಗಿ ಜನಿಸುತ್ತಾನೆ.

೩೬-೪೨. ವಾದ್ಯಪ್ರದಾನದಿಂದ ಪೂಜಿಸಿದವನು ಪಶುಗಳ ಲೋಕವನ್ನೂ, ನೃತ್ತದಿಂದ ಪೂಜಿಸಿದವನು ಮಹಾತ್ಮನಾದ ಶಂಕರನ ಲೋಕವನ್ನೂ ಹೊಂದುತ್ತಾನೆ. ಇತಿಹಾಸದಿಂದ ಪೂಜಿಸಿದವನು ಬುದ್ಧಿವಂತನಾಗುತ್ತಾನೆ. ಯಾವ ದೇವತೆಯನ್ನು ಉದ್ದೇಶಿಸಿ ಅಗ್ನಿಯಲ್ಲಿ ಆಹುತಿ ಕೊಡುತ್ತಾನೆಯೋ ಆ ದೇವತೆಯೇ ತೃಪ್ತಿಹೊಂದಿದಾತೃವನ್ನೂ ಇಷ್ಟಾರ್ಥಪ್ರದಾನದಿಂದ ತೃಪ್ತಿಪಡಿಸುತ್ತದೆ. ದೇವತೆಯನ್ನು

ಸ ದೇವಸ್ತರ್ಪಯತ್ಯೇನಂ ಕಾಮೈರ್ವಾ ತೇನ ತರ್ಪಿತಃ ।
ದೇವಮುದ್ದಿಶ್ಯ ವಿಪ್ರಾಣಾಂ ಯೋ ದದಾತೀಹ ಭೋಜನಂ ॥ ೩೮ ॥

ಸ ದೇವಃ ಪ್ರೀತಿಮಾನಸ್ಯ ಕಾಮಾನಿಷ್ಟಾನ್ ಪ್ರಯಚ್ಛತಿ ।
ದೇವಮುದ್ದಿಶ್ಯ ಯತ್ಕಿಂಚಿದ್ಬ್ರಾಹ್ಮಣೇಭ್ಯಃ ಪ್ರದೀಯತೇ ॥ ೩೯ ॥

ತದೇವ ಪ್ರಾಪ್ಯತೇ ಲೋಕೇ ಪ್ರಸನ್ನೇ ತ್ರಿದಶೇ ಬಹು ।
ಯಾನಂ ಶಯ್ಯಾಸನಂ ಛತ್ರಂ ಪಾದುಕೇ ಚಾಪ್ಯುಪಾನಹೌ ॥ ೪೦ ॥

ವಾಹನಂ ಗಾಂ ಚ ಧರ್ಮಜ್ಞಾಸ್ತ್ರಿದಶೇಭ್ಯೋ ದದಾತಿ ಯಃ ।
ಏಕೈಕಸ್ಮಾದವಾಪ್ನೋತಿ ವಹ್ನಿಷ್ಟೋಮಫಲಂ ನರಃ ॥ ೪೧ ॥

ದತ್ವಾ ಫಲಾನಿ ದೇವೇಭ್ಯಃ ಸಫಲಾಂ ವಿಂದತೇ ಕ್ರಿಯಾಂ ।
ನಿವೇದ್ಯ ಸಸ್ಯಾನಿ ತಥಾ ಗತಿಮಾಪ್ನೋತ್ಯನುತ್ತಮಾಂ ॥ ೪೨ ॥

ನೈತಿ ದೇವಸ್ತಥಾ ಪ್ರೀತಿಂ ದಾನೈಃ ನೃತ್ಯೈಸ್ತಥಾಫಲೈಃ ।
ಪ್ರೀತಿಮೇತಿ ಯಥಾವಿಪ್ರಾಃ ಸ್ವಾಶ್ರಿತಾನಾಂ ತು ಪೂಜನೈಃ ॥ ೪೩ ॥

ಉದ್ದೇಶಿಸಿ ಯಾವನು ಬ್ರಾಹ್ಮಣರಿಗೆ ಭೋಜನಮಾಡಿಸುತ್ತಾನೆಯೋ ಅವನು ಆ ದೇವತೆಯ ಪ್ರೀತಿಯಿಂದ ಎಲ್ಲಾ ಇಷ್ಟಗಳಿಗೂ ಭಾಗಿಯಾಗುತ್ತಾನೆ. ದೇವತೆಯನ್ನುದ್ದೇಶಿಸಿ ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಿದರೂ ಆ ದೇವತೆಯು ಅನುಗ್ರಹದಿಂದ ಲೋಕಾಂತರದಲ್ಲಿ ಆ ವಸ್ತುಗಳನ್ನೇ ಹೆಚ್ಚಾಗಿ ಹೊಂದುತ್ತಾನೆ. ಯಾವನು ದೇವತೆಗಳಿಗೆ ಯಾನ, ಶಯ್ಯೆ, ಛತ್ರ, ಪಾದುಕೆ, ಪಾದರಕ್ಷೆ, ವಾಹನ, ಗೋವು ಇತ್ಯಾದಿಗಳನ್ನು ದಾನಮಾಡುತ್ತಾನೆಯೋ ಅವನು ಒಂದೊಂದರಿಂದಲೇ ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ದೇವತೆಗಳಿಗೆ ಫಲಪ್ರದಾನದಿಂದ ತಾನೂ ಸಫಲ ವ್ಯಾಪಾರನಾಗುತ್ತಾನೆ ಸಸ್ಯವನ್ನು ನಿವೇದಿಸಿದಲ್ಲಿ ಉತ್ತಮವಾದ ಗತಿಯನ್ನೇ ಹೊಂದುತ್ತಾನೆ.

೪೩–೪೭. ದೇವತೆಯು ಪ್ರೀತಿ ಹೊಂದಬೇಕಾದಲ್ಲಿ ಆ ದೇವತಾಶ್ರಯಿಗಳಾದ ಭಾಗವತರನ್ನು ಪೂಜಿಸಬೇಕು. ಇಂತಹ ಪ್ರೀತಿಯನ್ನು ದಾನಗಳಿಂದಲೂ, ನೃತ್ಯ

ದೇವತಾ ನೈವ ತುಷ್ಯಂತಿ ದಾನೇನ ಬಹುಧಾ ದ್ವಿಜಾಃ ।
ಯಥಾ ಭಕ್ತ್ಯಾತು ತುಷ್ಯಂತಿ ತಸ್ಮಾದ್ಭಕ್ತಿಂ ಸಮಾಶ್ರಯೇತ್ ॥ ೪೪ ॥

ಘೃತಪೂರ್ಣಾನಿ ಪಾತ್ರಾಣಿ ದತ್ವಾ ಶ್ರಾದ್ಧೇ ತಥಾ ನರಃ ।
ದೀರ್ಘಂ ಜೀವಿತಮಾಪ್ನೋತಿ ನ ರೋಗೈಶ್ಚಾಭಿಭೂಯತೇ ॥ ೪೫ ॥

ಮಧುಪೂರ್ಣಾನಿ ಪಾತ್ರಾಣಿ ದತ್ವಾ ಸೌಭಾಗ್ಯಮಾಪ್ನುಯಾತ್ ।
ಯಥಾ ಕಥಂ ಚಿತ್ಪಾತ್ರಾಣಾಂ ದಾನಾದ್ಭವತಿ ಸತ್ತಮಃ ॥ ೪೬ ॥

ಪಾತ್ರಂ ತು ಸರ್ವಕಾಮಾನಾಂ ನಾತ್ರ ಕಾರ್ಯಾ ವಿಚಾರಣಾ ।
ಪುಷ್ಪವೃಕ್ಷಪ್ರದಾನೇನ ಗೃಹಮಾಪ್ನೋತಿ ಮಾನವಃ ॥ ೪೭ ॥

ಫಲವೃಕ್ಷಪ್ರದಾನೇನ ಗ್ರಾಮಸ್ಯಾಧಿಪತಿರ್ಭವೇತ್ ।
ಗೃಹಪ್ರದಾನಾದ್ಭವತಿ ಖೇಟಕಾಧಿಪತಿಸ್ತಥಾ ॥ ೪೮ ॥

ಗೃಹಂ ಶಯ್ಯಾಸನೋಪೇತಂ ಯಾನವಾಹನಸಂಯುತಂ ।
ಧನಧಾನ್ಯಯುತಂ ಸ್ಫೀತಂ ದಾಸೀದಾಸಸಮಾಕುಲಂ ॥ ೪೯ ॥

ಗಳಿಂದಲೂ, ಫಲಗಳಿಂದಲೂ ಸಹ ದೇವತೆಯು ಹೊಂದುವುದಿಲ್ಲ. ಭಕ್ತಿಯಿಂದ ದೇವತೆಗಳು ತುಷ್ಟಿಹೊಂದುವಂತೆ ಅನೇಕ ದಾನಗಳಿಂದಲೂ ತುಷ್ಟಿಹೊಂದುವುದಿಲ್ಲ. ಆದ್ದರಿಂದ ಭಕ್ತಿಯನ್ನು ಹೊಂದಿಯೇ ದೇವತೆಯ ಪ್ರೀತಿಯನ್ನು ಸಂಪಾದಿಸಬೇಕು. ಮನುಷ್ಯನು ಆಜ್ಯಪೂರ್ಣವಾದ ಪಾತ್ರೆಗಳನ್ನು ಶ್ರಾದ್ಧದಲ್ಲಿ ದಾನಮಾಡಿದಲ್ಲಿ ದೀರ್ಘವಾದ ಆಯಸ್ಸನ್ನು ಹೊಂದುತ್ತಾನೆ. ರೋಗಾದಿಗಳಿಂದ ಪೀಡಿಸಲ್ಪಡುವುದೂ ಇಲ್ಲ. ಜೇನಿನಿಂದ ತುಂಬಿದ ಪಾತ್ರೆಗಳನ್ನು ದಾನಮಾಡಿದಲ್ಲಿ ಸೌಭಾಗ್ಯಶಾಲಿಯಾಗುತ್ತಾನೆ. ಹೇಗಾದರೂ ಪಾತ್ರಗಳನ್ನು ದಾನಮಾಡಿದರೂ ಸತ್ಪುರುಷನಾಗುತ್ತಾನೆ. ಎಲ್ಲಾ ಮನೋರಥಗಳಿಗೂ ಪಾತ್ರನಾಗುತ್ತಾನೆ. ಇದರಲ್ಲಿ ಸಂದೇಹವಿಲ್ಲ. ಹೂವಿನಗಿಡಗಳನ್ನು ದಾನಮಾಡಿದಲ್ಲಿ ಮನೆಯನ್ನು ಹೊಂದುತ್ತಾನೆ.

೪೮–೫೩. ಫಲವೃಕ್ಷವನ್ನು ದಾನಮಾಡುವುದರಿಂದ ಗ್ರಾಮಕ್ಕೆ ಅಧಿಪತಿಯಾಗುತ್ತಾನೆ. ಗೃಹದಾನಮಾಡುವುದರಿಂದ ಸಣ್ಣಗ್ರಾಮಕ್ಕೆ ಅಧಿಪತಿಯಾಗುತ್ತಾನೆ. ಶ್ರಾದ್ಧಕರ್ಮದಲ್ಲಿ, ಶಯನಾಸನಾದಿಗಳು, ಯಾನವಾಹನಾದಿಗಳು, ಧನಧಾನ್ಯಗಳು, ದಾಸೀದಾಸರು ಇತ್ಯಾದಿ ಪರಿಕರಗಳಿಂದ ಕೂಡಿದ ಗೃಹವನ್ನು ರಮ್ಯವಾಗಿ ಸಜ್ಜು

ಸರ್ವಕಾಮಯುತಂ ರಮ್ಯಂ ಪ್ರದಾಯ ಶ್ರಾದ್ಧಕರ್ಮಣಿ ।
ಸ್ವರ್ಗಲೋಕಾತ್ಪರಿಭ್ರಷ್ಟೋ ರಾಜಾ ಭವತಿ ಪಾರ್ಥಿವಃ ॥ ೫೦ ॥

ಪಿತೄನುದ್ದಿಶ್ಯ ಯದ್ದಾನಂ ಕಿಂಚಿದೇವ ಪ್ರಯಚ್ಛತಿ ।
ತಸ್ಯಾಭ್ಯಧಿಕಮಾಪ್ನೋತಿ ಪುಣ್ಯಂ ತೇಷಾಂ ಪ್ರಸಾದತಃ ॥ ೫೧ ॥

ತಸ್ಮಾಚ್ಛ್ರಾದ್ಧಾನಿ ಕಾರ್ಯಾಣಿ ತೀರ್ಥೇಷ್ವಾಯತನೇಷು ಚ ।
ದಾನಾನಿ ಚೈವ ದೇಯಾನಿ ಪಿತೄನುದ್ದಿಶ್ಯ ಶಕ್ತಿತಃ ॥ ೫೨ ॥
ಶ್ರಾದ್ಧೇಷು ಪುಷ್ಟಿಂ ಮನುಜಾ ಲಭಂತೇ

ಶ್ರಾದ್ಧೇನ ವಿಪ್ರಾಸ್ತ್ರಿದಿವೇ ಚ ವಾಸಃ ।
ಶ್ರಾದ್ಧಂ ಪ್ರಯತ್ನೇನ ತತಶ್ಚ ಕುರ್ಯಾ-
ತ್ಸ್ವಕಲ್ಪಸೂತ್ರಾಭಿಹಿತಂ ಯಥಾವತ್ ॥ ೫೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪಿತೃಪೂಜಾವಿ-
ಧಾನಂ ನಾಮಾಷ್ಟಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಗೊಳಿಸಿ ದಾನಮಾಡಿದ್ದೇ ಆದರೆ ಅಂತಹ ದಾನಿಯು ಸ್ವರ್ಗವನ್ನು ಹೊಂದಿ ಅಲ್ಲಿ ಸುಖಿಸಿದನಂತರ ಭೂಮಿಯಲ್ಲಿ ಜನ್ಮವೆತ್ತಿದರೂ ಕ್ಷತ್ರಿಯನಾಗಿ ರಾಜನಾಗಿ ಬದುಕುತ್ತಾನೆ. ಪಿತೃಗಳನ್ನುದ್ದೇಶಿಸಿ ಮಾಡಿದ ಅಲ್ಪಾಲ್ಪ ದಾನವೂ ಸಹ ಅವರ ಅನುಗ್ರಹದಿಂದ ಅತ್ಯಧಿಕವಾಗಿಯೂ ಪುಣ್ಯಕರವಾಗಿಯೂ ಆಗುತ್ತದೆ. ಆದುದರಿಂದ ತೀರ್ಥಗಳಲ್ಲಿಯೂ, ದೇವತಾಲಯಗಳಲ್ಲಿಯೂ ಸಹ ಪಿತೃಗಳನ್ನುದ್ದೇಶಿಸಿ ಯಥಾಶಕ್ತಿ ದಾನಾದಿಗಳನ್ನು ಮಾಡಬೇಕು. ಇಂತಹ ಶ್ರಾದ್ಧಾಚರಣೆಯಿಂದ ಮನುಷ್ಯರು ಪುಷ್ಟಿ ಹೊಂದುತ್ತಾರೆ. ಸ್ವರ್ಗವಾಸಿಗಳೂ ಆಗುತ್ತಾರೆ. ಆದುದರಿಂದ ತಮ್ಮತಮ್ಮ ಕಲ್ಪ ಸೂತ್ರಾನುಗುಣವಾಗಿ ಶಾದ್ಧವನ್ನು ಪ್ರಯತ್ನಪೂರ್ವಕವಾಗಿ ಮಾಡಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಪಿತೃಪೂಜಾವಿಧಾನವೆಂಬ ಇನ್ನೂರ ಎಂಭತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನನವತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಶೂದ್ರಾಣಾಂ ದೈವತಂ ವೈಶ್ಯಾ ವೈಶ್ಯಾನಾಂ ಕ್ಷತ್ರಿಯಾಸ್ತಥಾ ।
ಬ್ರಾಹ್ಮಣಾಃ ಕ್ಷತ್ರಿಯಾಣಾಂ ಚ ತೇಷಾಮಪಿ ಹುತಾಶನಃ ॥ ೧ ॥

ಗುರುದೇವೋ ಬ್ರಹ್ಮಚಾರೀ ನಾರ್ಯಶ್ಚ ಪತಿದೇವತಾಃ ।
ಗೃಹಸ್ಥೋಽತಿಥಿದೈವತ್ಯಸ್ತಸ್ಮಾತ್ತಂ ಪೂಜಯೇತ್ಸದಾ ॥ ೨ ॥

ವೈಶ್ವದೇವಂ ಗೃಹೇ ಕೃತ್ವಾ ಸಾಯಂಪ್ರಾತಃ ಸಮಾಹಿತಃ ।
ಪಿಂಡನಿರ್ವಪಣಂ ಕೃತ್ವಾ ಭಿಕ್ಷಾಂ ದತ್ವಾ ತು ಭಿಕ್ಷವೇ ॥ ೩ ॥

ಇನ್ನೂರ ಎಂಭತ್ತೊಂಭತ್ತನೆಯ ಅಧ್ಯಾಯ.

೧—೫. ಹಂಸವು ಹೇಳುತ್ತದೆ:—ಶೂದ್ರರಿಗೆ ವೈಶ್ಯರು ದೇವತೆಯಂತೆ ಪೂಜ್ಯರು. ವೈಶ್ಯರಿಗೆ ಕ್ಷತ್ರಿಯರು, ಕ್ಷತ್ರಿಯರಿಗೆ ಬ್ರಾಹ್ಮಣರು ಪೂಜನೀಯರು. ಬ್ರಾಹ್ಮಣರಿಗೆ ಅಗ್ನಿದೇವನು ಪೂಜನೀಯನು. ಬ್ರಹ್ಮಚಾರಿಗೆ ಗುರುವೇ ದೇವರು. ಸ್ತ್ರೀಯರಿಗೆ ಪತಿಯೇ ದೇವರು. ಗೃಹಸ್ಥನಿಗೆ ಅತಿಥಿಯೇ ದೇವರು. ಆದ್ದರಿಂದ ಅತಿಥಿಯನ್ನು ಗೃಹಸ್ಥನು ಪೂಜಿಸಬೇಕು. ಗೃಹಸ್ಥನಾದವನು ಮನೆಯಲ್ಲಿ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಯಥಾವಿಧಿಯಾಗಿ ವೈಶ್ವದೇವವನ್ನು ನೆರವೇರಿಸಿ ಬಲಿಹರಣಮಾಡಿ ಭಿಕ್ಷುಗಳಿಗೆ ಆದರದಿಂದ ಭಿಕ್ಷೆಯನ್ನೂ ನೀಡಿ ಸತ್ಕರಿಸಿದಲ್ಲಿ ಗೋದಾನಮಾಡಿದ ಫಲವನ್ನೇ ಹೊಂದುತ್ತಾನೆ. ನಾಯಿಗಳಿಗೂ, ಶ್ವಪಚರಿಗೂ,

ಸತ್ಕೃತ್ಯ ಭಿಕ್ಷಾದಾನೇನ ಗೋದಾನಫಲಮಾಪ್ನುಯಾತ್ ।
ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ಭುವಿ ॥ ೪ ॥

ಗೃಹಸ್ಥಮುಪಜೀವಂತಿ ಪ್ರಜಾ ಸ್ಥಾವರಜಂಗಮಾಃ ।
ಗೃಹಸ್ಥಃ ಪೋಷಣಂ ಕುರ್ಯಾನ್ಮೃತಾನಾಂ ಜೀವತಾಮಪಿ ॥ ೫ ॥

ಪೋಷಣಾನ್ನಿತ್ಯಮೇವೇಹ ತೇನ ಸ್ವರ್ಗೇ ಮಹೀಯತೇ ।
ಕೀಟಃ ಪತಂಗಃ ಪತಿತಃ ಶತ್ರವೋ ದ್ವಿಜಪುಂಗವಾಃ ॥ ೬ ॥

ಗೃಹಿಣಾ ನಾವಮನ್ತವ್ಯಾಃ ವೈಶ್ವದೇವೇಹ್ಯುಪಸ್ಥಿತೇ ।
ಅತಿಥಿಂ ಪೂಜಯೇದ್ಯತ್ನಾದ್ಗೃಹಸ್ಥೋ ಗೃಹಮಾಗತಂ ॥ ೭ ॥

ಉತ್ಥಾಯಾಸ್ಯವ್ರಜನ್ ಪೂರ್ವೇ ಗೋದಾನಫಲಮಾಪ್ನುಯಾತ್ ।
ಆಸನಂ ಚ ತಥಾ ದತ್ವಾ ಸ್ಥಾನಲಾಭಂ ನರೋತ್ತಮಃ ॥ ೮ ॥

ಪಕ್ಷಿಗಳಿಗೂ ಭೂಮಿಯ ಮೇಲೆ ಬಲಿಹರಣಮಾಡಬೇಕು. ಸ್ಥಿರಚರವಾದ ಎಲ್ಲಾ ಪ್ರಾಣಿಗಳೂ ಗೃಹಸ್ಥನನ್ನೇ ಆಶ್ರಯಿಸಿಕೊಂಡು ಬದುಕುತ್ತವೆ. ಆದುದರಿಂದ ಗೃಹಸ್ಥನಾದವನು ಮೃತರಿಗೂ, ಬದುಕಿರುವವರಿಗೂ ಒಂದೊಂದು ರೀತಿಯಲ್ಲಿ ಪೋಷಕನಾಗಿರಬೇಕು. ಇಂತಹ ಪೋಷಣದಿಂದ ಈ ಲೋಕದಲ್ಲಿಯೂ, ಸ್ವರ್ಗ ಲೋಕವಲ್ಲಿಯೂ ಮಾನ್ಯನಾಗುತ್ತಾನೆ.

೬–೧೦. ವೈಶ್ವದೇವವು ಸನ್ನಿಹಿತವಾದಾಗ ಗೃಹಸ್ಥನಾದವನು ಕ್ರಿಮಿ, ಪಕ್ಷಿ, ಪತಿತ, ಶತ್ರು ಇವರನ್ನೂ ಸಹ ತಿರಸ್ಕರಿಸಬಾರದು. ಮನೆಗೆ ಬಂದ ಅತಿಥಿಯನ್ನು ಗೃಹಸ್ಥನಾದವನು ಪ್ರಯತ್ನದಿಂದಲೂ ಪೂಜಿಸಬೇಕು. ಎದ್ದೊಡನೆಯೇ ಅವನೊಡನೆ ಮಾರ್ಗದರ್ಶಿಯಾಗಿ ಮುಂದೆ ಬಂದು ಸತ್ಕರಿಸಿದಲ್ಲಿ ಗೋದಾನಫಲವೇ ಉಂಟಾಗುತ್ತದೆ. ಸರಿಯಾದ ಸ್ಥಾನದಲ್ಲಿ ಆಸನವನ್ನು ಕೊಟ್ಟು ಕುಶಲಪ್ರಶ್ನೆ ಮಾಡಿದವನು ಬುದ್ಧಿವಂತನಾಗಿ ಜನಿಸುತ್ತಾನೆ. ಅವನ ಪಾದಪ್ರಕ್ಷಾಳನದಿಂದಲೂ

ಕೃತ್ವಾ ಚ ಕುಶಲಪ್ರಶ್ನಂ ಬುದ್ಧಿಮಾನ್ ಜಾಯತೇ ನರಃ ।
ಪಾದಶೌಚೇನ ತಸ್ಯಾಥ ಶ್ರಾನ್ತಸಂವಾಹನೇನ ಚ ॥ ೯ ॥

ವೀಜನಾಚ್ಚಾಮರೇಣಾಪಿ ತಾಲವೃಂತೇನ ವೀಜನಾತ್ ।
ಪಾದಾಭ್ಯಂಗಪ್ರದಾನೇನ ದೀಪದಾನೇನವಾಪ್ಯಥ ॥ ೧೦ ॥

ರಾತ್ರೌ ಶಯನದಾನೇನ ತಥಾ ಸಂವಾಹನೇನ ಚ ।
ಏಕೈಕಸ್ಮಾದವಾಪ್ನೋತಿ ಗೋದಾನಫಲಮುತ್ತಮಂ ॥ ೧೧ ॥

ಉಪಾಸ್ಯೈನಂ ಕಥಾಭಿಶ್ಚ ಯಶಸಾ ಯೋಗಮಾಪ್ನುಯಾತ್ ।
ಸಂಶ್ರಾವ್ಯ ಚೇತಿಹಾಸಾನಿ ತಥೈನಂ ಚ ತದಿಚ್ಛಯಾ ॥ ೧೨ ॥

ನಾಕಲೋಕಮವಾಪ್ನೋತಿ ಗೀತನೃತ್ಯೋತ್ಸವಾದಿಭಿಃ ।
ಪೂಜಯಿತ್ವಾ ತಥಾಪ್ನೋತಿ ಗಂಧರ್ವತ್ವಮಸಂಶಯಂ ॥ ೧೩ ॥

ಪ್ರತಿಶ್ರಯಪ್ರದಾನೇನ ಸರ್ವಾನ್ಕಾಮಾನ್ ಸಮಶ್ನುತೇ ।
ಮೃದಂ ಚ ದಂತಕಾಷ್ಠಂ ಚ ದತ್ವಾ ಶೌಚೋದಕಂ ತಥಾ ॥ ೧೪ ॥

ದಣಿದಿರುವ ಆ ಅತಿಥಿಯ ಪಾದಗಳನ್ನು ಒತ್ತುವುದರಿಂದಲೂ, ಚಾಮರ, ಬೀಸಣಿಗೆ ಇವುಗಳಿಂದ ಬೀಸುವುದರಿಂದಲೂ, ಪಾದಗಳಿಗೆ ಎಣ್ಣೆಯೊತ್ತಿ ಉಷ್ಣೋದಕದಿಂದ ಅಭ್ಯಂಗಮಾಡಿಸುವುದರಿಂದಲೂ, ದೀಪದಾನ, ರಾತ್ರಿಯಲ್ಲಿ ಶಯನದಾನ, ಕಾಲೊತ್ತುವಿಕೆ ಇತ್ಯಾದಿಗಳಿಂದಲೂ ಸತ್ಕರಿಸಬೇಕು. ಅತಿಥಿಗಳಿಗಾಗಿ ಮಾಡಿದ ಈ ಸೇವೆಯಲ್ಲಿ ಒಂದೊಂದಕ್ಕೂ ಗೋದಾನಫಲವೇ ಉಂಟಾಗುತ್ತದೆ.

೧೨-೧೫. ಕಥೆ ಮೊದಲಾದುವುಗಳಿಂದ ಅತಿಥಿಯನ್ನು ಸೇವಿಸಿ ಸಂತೋಷಪಡಿಸಿದವನು ಯಶಸ್ವಿಯಾಗಿ ಬದುಕುತ್ತಾನೆ. ಅವನ ಇಚ್ಛೆಯಿಂದ ಇತಿಹಾಸಾದಿಗಳನ್ನು ಶ್ರವಣಮಾಡಿಸಿದಲ್ಲಿ ಸ್ವರ್ಗಲೋಕವನ್ನು ಹೊಂದುತ್ತಾನೆ. ನೃತ್ಯಗೀತಾದಿಗಳಿಂದ ಪೂಜಿಸಿದಲ್ಲಿ ಗಂಧರ್ವತ್ವವನ್ನೇ ಹೊಂದುತ್ತಾನೆ. ಇತರ ಉಪಕರಣಗಳನ್ನು ದಾನಮಾಡಿದವನು ಎಲ್ಲಾ ಮನೋರಥಗಳನ್ನೂ ಸಫಲಗೊಳಿಸಿಕೊಳ್ಳುತ್ತಾನೆ. ಮೃತ್ತು ಶೌಚೋದಕ, ದಂತಕಾಷ್ಠ ಮುಂತಾದುವನ್ನು ಆಯಾಯಕಾಲದಲ್ಲಿ

ಕಾಲೇ ಯಥಾಸುಖಂ ದತ್ವಾ ಸೌಭಾಗ್ಯಂ ಮಹದಾಪ್ನುಯಾತ್ ।
ಪ್ರತಾಪ್ಯಚ್ಚೈನಂ ಶೀತಾರ್ತಂ ಸರ್ವತ್ರ ಸುಖಮಶ್ನುತೇ ॥ ೧೫ ॥

ಅಭ್ಯಂಗಪೂರ್ವಕಂ ದತ್ವಾ ತಸ್ಯ ಸ್ನಾನಮತಂದ್ರಿತಃ ।
ಆರೋಗ್ಯರೂಪಲಾವಣ್ಯ ಧನಧಾನ್ಯಮುಪಾಶ್ನುತೇ ॥ ೧೬ ॥

ದತ್ವಾ ಸಕಲಮುಖ್ಯಾನಿ ಸ್ನಾನಾನಿ ದ್ವಿಜಸತ್ತಮಾಃ ।
ನಾಸತ್ಯಲೋಕಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೧೭ ॥

ಸುಗಂಧೀನಿ ತಥಾ ದತ್ವಾ ಗಂಧರ್ವೈಸ್ಸಹ ಮೋದತೇ ।
ಕಂಕಣಸ್ಯ ಪ್ರದಾನೇನ ಸೌಭಾಗ್ಯಂ ಮಹದಶ್ನುತೇ ॥ ೧೮ ॥

ಅತಿಥಿಸ್ನಾಪನಾತ್ಪುಣ್ಯಂ ದಶಗೋದಾನಜಂ ಭವೇತ್ ।
ಕಿಮಿಚ್ಛಕೇನ ಸಂಯೋಜ್ಯ ವಾಜಪೇಯಫಲಂ ಲಭೇತ್ ॥ ೧೯ ॥

ಸಂತೋಷದಿಂದ ಪ್ರದಾನಮಾಡಿದವನು ಹೆಚ್ಚಾಗಿ ಸೌಭಾಗ್ಯ ಹೊಂದುತ್ತಾನೆ. ಶೀತದಿಂದ ದುಃಖಗೊಂಡ ಅತಿಥಿಯನ್ನು ಅಗ್ನಿಷ್ಟಿಗೆ ಮುಂತಾದುವುಗಳಿಂದ ಕಾಯಿಸಿ ಶೀತವನ್ನು ಹೋಗಲಾಡಿಸಿ ಸಂತೋಷಪಡಿಸಿದಲ್ಲಿ ಆವನು ಎಲ್ಲಾ ಕಡೆಯಲ್ಲಿಯೂ ಸುಖಿಯಾಗುತ್ತಾನೆ.

೧೬–೨೧. ಅತಿಥಿಯಾಗಿ ಬಂದವನಿಗೆ ಅಭ್ಯಂಗಪೂರ್ವಕವಾಗಿ ಸ್ನಾನ ಮಾಡಿಸಿದವನು ಆರೋಗ್ಯ, ರೂಪ, ಲಾವಣ್ಯ, ಧನ, ಧಾನ್ಯ ಮುಂತಾದ ಅಭೀಷ್ಟ ಗಳನ್ನೆಲ್ಲಾ ಹೊಂದುತ್ತಾನೆ. ಮುಖ್ಯವಾದ ಎಲ್ಲಾ ಸ್ನಾನಗಳನ್ನೂ ದಾನಮಾಡಿ ದಲ್ಲಿ ಅಶ್ವಿನೀದೇವತೆಗಳಲೋಕವನ್ನೇ ಹೊಂದುತ್ತಾನೆ. ಸುಗಂಧಿವಸ್ತುಗಳನ್ನು ದಾನ ಮಾಡಿದಲ್ಲಿ ಗಂಧರ್ವರೊಡನೆ ಸುಖಿಸುತ್ತಾನೆ. ಕಂಕಣವನ್ನು ದಾನಮಾಡಿದವನು ಸೌಭಾಗ್ಯಶಾಲಿಯಾಗುತ್ತಾನೆ. ಅತಿಥಿಗೆ ಸ್ನಾನಮಾಡಿಸುವುದರಿಂದ ಹತ್ತುಗೋ ದಾನದ ಫಲವುಂಟು ಏನುಬೇಕು ಎಂದು ಕೇಳಿ ಕೊಡುವ ಧಾರ್ಮಿಕನೊಡನೆ ಅತಿಥಿಗೆ ಸಂಬಂಧ ಉಂಟುಮಾಡಿದಲ್ಲಿ ವಾಜಪೇಯಯಾಗದ ಫಲವೇ ಲಭಿಸುತ್ತದೆ. ಅತಿಥಿಗೆ ಇಷ್ಟವಾದ ವಸ್ತುವನ್ನು ದಾನಮಾಡಿದಲ್ಲಿ ಆ ವಸ್ತುವು ದಾತೃವಿನಲ್ಲಿ ಅಕ್ಷಯವಾಗುತ್ತದೆ. ಆದುದರಿಂದ ಮನುಷ್ಯನು ಸರ್ವಶಕ್ತಿಯಿಂದಲೂ ಅತಿಥಿಯನ್ನು

ಸ್ವೇಪ್ಸಿತಂ ಚ ಪ್ರದಾಯಾಸ್ಯ ತದೇವಾಕ್ಷಯಮಶ್ನುತೇ ।
ಸರ್ವಶಕ್ತ್ಯಾ ನರಸ್ತಸ್ಮಾದತಿಥಿಂ ಪೂಜಯೇತ್ಸದಾ ॥ ೨೦ ॥

ತೃಪ್ತೋಽತಿಥಿರ್ಯತ್ಪುರುಷಸ್ಯ ಕಿಂಚಿ-
ದ್ವಿಚಿನ್ತಯತ್ಯೇವ ಮಹಾನುಭಾವಃ ।
ತತ್ಸರ್ವಮಾಪ್ನೋತ್ಯಚಿರೇಣ ತಸ್ಮಾ-
ತ್ಪೂಜ್ಯೋಽತಿಥಿರ್ಧರ್ಮಪರೇಣ ನಿತ್ಯಂ ॥ ೨೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಅತಿಥಿಪೂಜಾ ನಾಮ್ನ್ಯೇಕೋನನವತ್ಯಧಿಕದ್ವಿಶತತಮೋಽಧ್ಯಾಯಃ

ಪೂಜಿಸಬೇಕು. ಸಂತುಷ್ಟನಾದ ಅತಿಥಿಯು ಸತ್ಕಾರಮಾಡಿದವನ ವಿಷಯದಲ್ಲಿ ಶುಭವನ್ನು ಕೋರಿಯೇ ಕೋರುತ್ತಾನೆ. ಅಂತಹ ಶುಭವನ್ನು ಸತ್ಕಾರಮಾಡಿದವನು ಹೊಂದಿಯೇ ಹೊಂದುತ್ತಾನೆ. ಆದ್ದರಿಂದ ಧರ್ಮಪರನಾದ ಮನುಷ್ಯನು ಯಾವಾಗಲೂ ಅತಿಥಿಯನ್ನು ಪೂಜಿಸುತ್ತಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಅತಿಥಿಪೂಜೆಯೆಂಬ ಇನ್ನೂರ ಎಂಭತ್ತೊಂಭತ್ತನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ನವತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಬ್ರಾಹ್ಮಣಾ ದೈವತಂ ಭೂಮೌ ಬ್ರಾಹ್ಮಣಾ ದಿವಿ ದೈವತಂ ।
ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಭೂತಂ ಕಿಂಚಿಜ್ಜಗತ್ತ್ರಯೇ ॥ ೧ ॥

ಅದೈವಂ ದೈವತಂ ಕುರ್ಯುಃ ಕುರ್ಯುರ್ದೈವಮದೈವತಂ ।
ಬ್ರಾಹ್ಮಣಾ ಹಿ ಮಹಾಭಾಗಾ ಪೂಜ್ಯಂತೇ ಸತತಂ ದ್ವಿಜಾಃ ॥ ೨ ॥

ಬ್ರಾಹ್ಮಣೇಭ್ಯಃ ಸಮುತ್ಪನ್ನಾ ದೇವಾಃ ಪೂರ್ವಮಿತಿ ಶ್ರುತಿಃ ।
ಬ್ರಾಹ್ಮಣೇಭ್ಯೋ ಜಗತ್ಸರ್ವಂ ತಸ್ಮಾತ್ಪೂಜ್ಯತಮಾಃ ಸದಾ ॥ ೩ ॥

ಇನ್ನೂರ ತೊಂಭತ್ತನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ :—ಭೂಮಿಯಲ್ಲಿ ಬ್ರಾಹ್ಮಣರೇ ದೇವತಾ ಸ್ವರೂಪರು, ಸ್ವರ್ಗದಲ್ಲಿಯೂ, ಅವರೇ ದೇವತೆಗಳು, ಅವರಿಗಿಂತಲೂ ಹೆಚ್ಚಾದ ಪೂಜ್ಯವಸ್ತುವು ಮೂರು ಲೋಕದಲ್ಲಿಯೂ ಇಲ್ಲ. ಮಹಾಮಹಿಮರಾದ ಬ್ರಾಹ್ಮಣರು ಅದೇವತೆಯನ್ನೂ ದೇವತೆಯನ್ನಾಗಿ ಮಾಡುತ್ತಾರೆ. ದೇವತೆಯನ್ನೂ ದೇವತೆಯಲ್ಲದುದನ್ನಾಗಿಯೂ ಮಾಡುತ್ತಾರೆ. ಆದುದರಿಂದ ಅವರು ತಮ್ಮ ಮಹಿಮೆಯಿಂದ ತಾವು ಯಾವಾಗಲೂ ಪೂಜ್ಯರೇ ಆಗಿರುತ್ತಾರೆ. ದೇವತೆಗಳೂ ಸಹ ಪೂರ್ವದಲ್ಲಿ ಬ್ರಾಹ್ಮಣರಿಂದಲೇ ಉತ್ಪನ್ನರಾದವರೆಂದೂ ಕೇಳಿದ್ದೇವೆ.

ಏಷಾಮಶ್ನಂತಿ ವಕ್ತ್ರೇಣ ದೇವತಾಃ ಪಿತರಸ್ತಥಾ ।
ಋಷಯಶ್ಚ ಮಹಾಭಾಗಾಃ ಕಿಂಭೂತಮಧಿಕಂ ತತಃ ॥ ४ ॥

ಯದೇವ ಮನುಜೋ ಭಕ್ತ್ಯಾ ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ತದೇವಾಪ್ನೋತಿ ಧರ್ಮಜ್ಞಾ ಬಹುಜನ್ಮನಿ ಜನ್ಮನಿ ॥ ೫ ॥

ತಾಲವೃಂತಾನಿಲೇನೈವಂ ಶ್ರಾಂತಸಂವಾಹನೇನ ಚ ।
ಉನ್ಮಾರ್ಜನೇನ ಗಾತ್ರಾಣಾಂ ತಥಾಭ್ಯಂಜನಕರ್ಮಣಾ ॥ ೬ ॥

ಪಾದಶೌಚಪ್ರದಾನೇನ ಪಾದಯೋಃ ಶೌಚನೇನ ಚ ।
ಪರಿಚರ್ಯಯಾ ಯಥಾಕಾಮಮೇಕೇನೈವ ದ್ವಿಜೋತ್ತಮಾಃ ॥ ೭ ॥

ಅಗ್ನಿಷ್ಟೋಮಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ।
ಬ್ರಾಹ್ಮಣಾಜ್ಞಾಂ ಶುಭಾಂ ಕೃತ್ವಾ ನಾಕಲೋಕೇ ಮಹೀಯತೇ ॥ ೮ ॥

ಜಗತ್ತೆಲ್ಲವೂ ಬ್ರಾಹ್ಮಣರಿಗೆ ಸೇರಿದುದು. ಆದುದರಿಂದ ಅವರು ಯಾವಾಗಲೂ ಪೂಜ್ಯತಮರು ಈ ಬ್ರಾಹ್ಮಣರ ಮುಖವೆಂಬ ದ್ವಾರದಿಂದಲೇ ದೇವತೆಗಳೂ, ಪಿತೃಗಳೂ ಭುಂಜಿಸುತ್ತಾರೆ. ಋಷಿಗಳೂ ಹಾಗೆಯೇ ಭುಂಜಿಸುತ್ತಾರೆ. ಇವರಿಗಿಂತಲೂ ಉತ್ತಮವಾದ ವಸ್ತುವು ಮತ್ತಾವುದಿದೆ. ಮನುಷ್ಯನಾದವನು ಭಕ್ತಿಯಿಂದ ಯಾವ ವಸ್ತುವನ್ನು ಬ್ರಾಹ್ಮಣರಿಗೆ ದಾನಮಾಡುತ್ತಾನೆಯೋ ಆ ವಸ್ತುವನ್ನು ಅನೇಕ ಜನ್ಮಗಳವರೆಗೂ ಅವನು ಹೆಚ್ಚುಹೆಚ್ಚಾಗಿ ಹೊಂದುತ್ತಾನೆ.

೬–೯ ಬ್ರಾಹ್ಮಣರಿಗೆ ಬೀಸಣಿಗೆಯಿಂದ ಬೀಸಿಯೂ, ದಣಿದಿರುವವನ ವೈಯೊತ್ತುವಿಕೆಯಿಂದಲೂ, ಅವಯವಗಳನ್ನು ಮಾರ್ಜನಮಾಡುವುದರಿಂದಲೂ, ಅಭ್ಯಂಗನದಿಂದಲೂ, ಪಾದೋದಕಪ್ರದಾನದಿಂದಲೂ, ಪಾದಕ್ಷಾಲನದಿಂದಲೂ, ಅವನ ಇಚ್ಛೆಗೆ ತಕ್ಕಂತೆ ಪರಿಚರ್ಯೆಯಿಂದಲೂ ಸಹ ಒಂದೊಂದರಿಂದಲೇ ಅಗ್ನಿಷ್ಟೋಮಫಲವೂ ಸ್ವರ್ಗಲೋಕಪ್ರಾಪ್ತಿಯೂ ಉಂಟಾಗುತ್ತದೆ. ಬ್ರಾಹ್ಮಣಾಜ್ಞೆಯನ್ನು ಪಾಲಿಸಿದವನು ಸ್ವರ್ಗದಲ್ಲಿಯೂ ಪೂಜ್ಯನಾಗುತ್ತಾನೆ. ಶುಶ್ರೂಷಾದಿಗಳಿಂದ

ಯದ್ಬ್ರಾಹ್ಮಣಾಸ್ತುಷ್ಟತಮಾ ವದಂತಿ
ತದ್ದೇವತಾಃ ಪ್ರತ್ಯಭಿನಂದಯಂತಿ ।
ತುಷ್ಟೇಷು ತುಷ್ಟಾಃ ಸತತಂ ಭವಂತಿ
ಪ್ರತ್ಯಕ್ಷದೇವೇಷು ಪರೋಕ್ಷದೇವಾಃ ॥ ೯ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಬ್ರಾಹ್ಮಣಶುಶ್ರೂಷಾಣಾಮ ನವತ್ಯಧಿಕದ್ವಿಶತತಮೋಽಧ್ಯಾಯಃ

ಸಂತುಷ್ಟರಾದ ಬ್ರಾಹ್ಮಣರು ಎಂತಹ ಶುಭವನ್ನು ಉಚ್ಚರಿಸುತ್ತಾರೆಯೋ ಅದನ್ನೇ ದೇವತೆಗಳೂ ಅಭಿನಂದಿಸುತ್ತಾರೆ. ಪ್ರತ್ಯಕ್ಷ ದೇವತೆಗಳಾದ ಬ್ರಾಹ್ಮಣರು ಸಂತುಷ್ಟರಾದಲ್ಲಿ ಪರೋಕ್ಷದೇವತೆಗಳೂ ಯಾವಾಗಲೂ ಸಂತುಷ್ಟರೇ ಆಗಿರುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಬ್ರಾಹ್ಮಣ ಶುಶ್ರೂಷೆಯೆಂಬ ಇನ್ನೂರ ತೊಂಭತ್ತನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕನವತ್ಯಧಿಕದ್ವಿಶತತಮೋಧ್ಯಾಯಃ ||

|| ಹಂಸ ಉವಾಚ ||

ಗಾವಃ ಪವಿತ್ರಾ ಮಂಗಲ್ಯಾ ಗೋಷು ಲೋಕಾಃ ಪ್ರತಿಷ್ಠಿತಾಃ |
ಯಥಾ ದೇವಾ ಯಥಾ ವೇದಾ ಬ್ರಾಹ್ಮಣಾಶ್ಚ ತಥಾ ದ್ವಿಜಾಃ || ೧ ||

ತಥಾ ಗಾವೋ ವಿನಿರ್ದಿಷ್ಟಾಃ ಸರ್ವಲೋಕಸುಖಾವಹಾಃ |
ಏಕೈಕಂ ಬ್ರಾಹ್ಮಣಂ ಜ್ಞೇಯಂ ತಯೋರ್ಯಜ್ಞಃ ಪ್ರತಿಷ್ಠಿತಃ || ೨ ||

ವಿಪ್ರೇಷು ಮಂತ್ರಾಃ ತಿಷ್ಠಂತಿ ಗೋಷು ಸಂತಿಷ್ಠತೇ ಹವಿಃ |
ಗವಾಂ ದಾನಂ ದ್ವಿಜಶ್ರೇಷ್ಠಾ ದುಷ್ಕೃತಾನ್ಯಪಕರ್ಷತಿ || ೩ ||

ಇನ್ನೂರ ತೊಂಭತ್ತೊಂದನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಗೋವುಗಳು ಪವಿತ್ರವಾದ ವಸ್ತುಗಳು, ಮಂಗಲಪ್ರದಗಳು, ಲೋಕಗಳೆಲ್ಲವೂ ಅವುಗಳಿಂದಲೇ ನಿಂತಿವೆ. ದೇವತೆಗಳೂ, ವೇದಗಳೂ, ಬ್ರಾಹ್ಮಣರೂ, ಹೇಗೆ ಲೋಕಸುಖಪ್ರದರೋ ಹಾಗೆಯೇ ಗೋವುಗಳೂ ಸುಖಪ್ರದಗಳೆಂದು ಹೇಳಲ್ಪಟ್ಟಿವೆ ಮಂತ್ರಗಳೆಲ್ಲವೂ ಬ್ರಾಹ್ಮಣರಲ್ಲಿವೆ. ಹವಿಸ್ಸೆಲ್ಲವೂ ಗೋವುಗಳಲ್ಲಿವೆ. ಇವೆರಡರಿಂದಲೇ ಯಜ್ಞವು ಶಾಶ್ವತವಾಗಿ ನಿಂತಿದೆ. ಆದುದರಿಂದ ಗೋಬ್ರಾಹ್ಮಣರಿಬ್ಬರೂ ಬ್ರಾಹ್ಮಣ ಸ್ವರೂಪರೆಂದೇ ತಿಳಿಯಬೇಕು. ಗೋವುಗಳ ದಾನವು ಸಮಸ್ತ ಪಾಪಗಳಿಗೂ ನಾಶಕವಾಗುತ್ತದೆ. ಗೋಮೂತ್ರ,

ಗೋಮೂತ್ರಂ ಗೋಮಯಂ ಕ್ಷೀರಂ ದಧಿಸರ್ಪಿಶ್ಚ ಪಂಚಮಂ ।
ಪವಿತ್ರಮೇತನ್ನಿರ್ದಿಷ್ಟಂ ನರಾಣಾಂ ಶೋಧನಂ ಪರಂ ॥ ೪ ॥

ಮಂಗಲ್ಯಾಶ್ಚ ಪವಿತ್ರಾಶ್ಚ ರಕ್ಷೋಘ್ನಾ ರೋಚನಾಸ್ತಥಾ ।
ತಾಸಾಂ ಶೃಂಗೋದಕಂ ವಿಪ್ರಾ ಜಾಹ್ನವೀಸಲಿಲೋಪಮಂ ॥ ೫ ॥

ಗವಾಂ ಕಂಡೂಯನಾನ್ಮರ್ತ್ಯಃ ಸರ್ವಂ ಪಾಪಂ ವ್ಯಪೋಹತಿ ।
ತಾಸಾಂ ಗ್ರಾಸಪ್ರದಾನೇನ ಮಹತ್ಪುಣ್ಯಮವಾಪ್ನುಯಾತ್ ॥ ೬ ॥

ತಾಸಾಂ ಚ ಪ್ರಚರಂ ಕೃತ್ವಾ ತಥೈವ ಸಲಿಲಾಶಯಂ ।
ಸ್ವರ್ಗಲೋಕಮವಾಪ್ನೋತಿ ಬಹೂನ್ಯಬ್ದಗಣಾನಿ ತು ॥ ೭ ॥

ತಾಸಾಂ ಪ್ರಚಾರಭೂಮಿಂ ತು ಕೃತ್ವಾ ಪ್ರಾಪ್ನೋತಿ ಮಾನವಃ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯಸಂಶಯಂ ॥ ೮ ॥

ಗೋಮಯ, ಹಾಲು, ಮೊಸರು, ತುಪ್ಪ ಈ ಐದೂ ಪರಮಪವಿತ್ರವೆಂದೂ ಮನುಷ್ಯಮಾತ್ರಕ್ಕೂ ಶೋಧಕವೆಂದೂ ಹೇಳಲ್ಪಟ್ಟಿದೆ.

೫-೮. ಗೋವುಗಳು ಮಂಗಲಪ್ರದಗಳೆಂದೂ, ರಕ್ಷೋನಾಶಕಗಳೆಂದೂ, ತೃಪ್ತಿಕರಗಳೆಂದೂ ಹೇಳಲ್ಪಟ್ಟಿವೆ. ಗೋವುಗಳ ಕೊಂಬುಗಳ ತೀರ್ಥವು ಗಂಗಾತೀರ್ಥಕ್ಕೆ ಸಮಾನವಾದ್ದು. ಗೋವುಗಳನ್ನು ತುರಿಸುವುದರಿಂದ ಮನುಷ್ಯನಿಗೆ ಸರ್ವಪಾಪನಿವೃತ್ತಿಯುಂಟಾಗುತ್ತದೆ. ಅವುಗಳಿಗೆ ಗ್ರಾಸವನ್ನು ಕೊಟ್ಟಲ್ಲಿ ಹೆಚ್ಚಾದ ಪುಣ್ಯವೂ ಲಭಿಸುತ್ತದೆ. ಅವುಗಳನ್ನು ಮೇಯಿಸಿಯೂ, ಜಲಾಶಯದಲ್ಲಿ ನೀರು ಕುಡಿಸಿಯೂ ಸೇವಿಸಿದಲ್ಲಿ ಬಹುವರ್ಷಪರ್ಯಂತವೂ ಸ್ವರ್ಗಲೋಕದಲ್ಲಿ ಸುಖದಿಂದ ಜೀವಿಸುತ್ತಾರೆ. ಗೋವುಗಳು ಮೇಯುವುದಕ್ಕೆ ತಕ್ಕ ಭೂಮಿಯನ್ನು ಏರ್ಪಡಿಸಿದವನು ಅಶ್ವಮೇಧವೆಂಬ ಯಜ್ಞದ ಫಲವನ್ನೆಲ್ಲಾ ನಿಸ್ಸಂಶಯವಾಗಿ ಹೊಂದುತ್ತಾನೆ. ಗೋವುಗಳಿಗೆ ವಾಸಸ್ಥಾನವನ್ನು ಏರ್ಪಡಿಸಿದವನು ನಗರಾಧಿಪತಿಯಾಗುತ್ತಾನೆ.

ತಾಸಾಮಾವಸಥಂ ಕೃತ್ವಾ ನಗರಾಧಿಪತಿರ್ಭವೇತ್ ।
ತಥಾ ಲವಣದಾನೇನ ಸೌಭಾಗ್ಯಂ ಮಹದಶ್ನುತೇ ॥ ೯ ॥

ಆತುರಾಂ ಪಂಕಲಗ್ನಾಂ ವಾ ಚೌರವ್ಯಾಘ್ರಭಯಾರ್ದಿತಾಂ ।
ಮೋಕ್ಷಯಿತ್ವಾ ದ್ವಿಜಶ್ರೇಷ್ಠಾಸ್ತ್ವಶ್ವಮೇಧಫಲಂ ಲಭೇತ್ ॥ ೧೦ ॥

ತಾಸಾಮೌಷಧದಾನೇನ ವಿರೋಗಸ್ತ್ವಭಿಜಾಯತೇ ।
ವಿಪ್ರಮೋಚ್ಯ ಭಯೇಭ್ಯಶ್ಚ ನ ಭಯಂ ವಿಂದತೇ ಕ್ವಚಿತ್ ॥ ೧೧ ॥

ಕ್ರೀತ್ವಾ ಚಂಡಾಲಹಸ್ತಾಚ್ಚ ಗೋಮೇಧಸ್ಯ ಫಲಂ ಲಭೇತ್ ।
ಗೋಪಕಸ್ತ್ವಸ್ಯ ಚಾನ್ಯಸ್ಯ ಕ್ರೀತ್ವಾ ಹಸ್ತಾತ್ತಥೈವ ಚ ॥ ೧೨ ॥

ಕೃತ್ವಾ ಶೀತಾತಪತ್ರಾಣಂ ತಾಸಾಂ ಸ್ವರ್ಗಮವಾಪ್ನುಯಾತ್ ।
ಉತ್ಥಿತಾಸೂತ್ಥಿತಸ್ತಿಷ್ಠೇದ್ವಿಷ್ಟಿತಾಸು ಚ ವಿಷ್ಟಿತಃ ॥ ೧೩ ॥

೯–೧೨. ಗೋವುಗಳಿಗೆ ಲವಣ (ಉಪ್ಪು) ವನ್ನು ದಾನಮಾಡಿ ಸಂತೋಷಪಡಿಸಿದಲ್ಲಿ ಹೆಚ್ಚಾದ ಸೌಭಾಗ್ಯ ಉಂಟಾಗುತ್ತದೆ. ವ್ಯಾಧಿಗ್ರಸ್ತವಾಗಿಯೋ ಕೆಸರಿನಲ್ಲಿ ಸಿಕ್ಕಿಯೋ, ಕಳ್ಳರಿಂದ ಅಥವಾ ಹುಲಿ ಮೊದಲಾದ ಹಿಂಸಕಪ್ರಾಣಿಗಳಿಂದ ಪೀಡಿತವಾಗಿಯೋ ಇರುವ ಗೋವನ್ನು ಆ ದುಃಖದಿಂದ ಬಿಡಿಸಿದಲ್ಲಿ ಅವನು ಅಶ್ವಮೇಧದ ಫಲಕ್ಕೆ ಭಾಗಿಯಾಗುತ್ತಾನೆ. ಅವುಗಳಿಗೆ ಔಷಧಾದಿಗಳನ್ನು ಕೊಟ್ಟು ಸೇವಿಸಿದವನು ತಾನೂ ಅರೋಗನಾಗಿ ಬದುಕುತ್ತಾನೆ. ಭಯದಿಂದ ಬಿಡಿಸಿದವನು ತಾನೂ ಎಲ್ಲೂ ಭಯಹೊಂದದೆ ನಿರ್ಭಯನಾಗಿ ಬದುಕುತ್ತಾನೆ. ಚಂಡಾಲನಿಂದ ಗೋವನ್ನು ಕ್ರಯಕ್ಕೆ ಕೊಂಡು ರಕ್ಷಿಸಿದವನು ಗೋಮೇಧದ ಫಲವನ್ನೇ ಹೊಂದುತ್ತಾನೆ. ಮತ್ತೊಬ್ಬನಿಂದ ಕೊಂಡು ಕೊಂಡು ರಕ್ಷಿಸುವವನೂ ಸಹ ಇದೇ ಫಲವನ್ನು ಹೊಂದುತ್ತಾನೆ. ಗಾಳಿ ಬಿಸಿಲುಗಳಿಂದ ಗೋವುಗಳಿಗೆ ರಕ್ಷಣೆಯುಂಟುಮಾಡಿದವನೂ ಸ್ವರ್ಗವನ್ನು ಹೊಂದುತ್ತಾನೆ.

೧೩–೧೮. ಗೋವುಗಳು ಮೇಲಕ್ಕೆ ಎದ್ದಲ್ಲಿ ತಾನೂ ಏಳಬೇಕು. ಮಲಗಿದಲ್ಲಿ ಮಲಗಬೇಕು. ಮೇಯುವಾಗ ತಾನೂ ಊಟಮಾಡಬೇಕು. ನೀರನ್ನು ಕುಡಿದಲ್ಲಿ

ಭುಕ್ತವತ್ಸು ತು ಚಾಶ್ನೀಯಾಜ್ಜಲೇ ಪೀತೇ ಪಿಬೇತ್ತು ಚ ।
ಗೋಮೂತ್ರೇಣಾಚರೇತ್ಸ್ನಾನಂ ಗೋಪುರೀಷಾತ್ತಥಾಯವೈಃ ॥ ೧೪ ॥

ಶರೀರಯಾತ್ರಾಂ ಕುರ್ವೀತ ಗೋರಸೈರಥವಾ ದ್ವಿಜಾಃ ।
ಏತದ್ಧಿ ಗೋವ್ರತಂ ಮಾಸಾತ್ಸರ್ವಕಲ್ಮಷನಾಶನಂ ॥ ೧೫ ॥

ಏಕಾಂ ಗಾಂ ಧಾರಯೇನ್ಮಾಸಂ ದದ್ಯಾತ್ತಸ್ಯೈಸ್ತಥಾ ಯವಾನ್ ।
ಗೋಮಯೋತ್ಥಾನ್ ಸಮಶ್ನೀಯಾನ್ಮಾಸಮೇಕಮತಃ ಶುಚಿಃ ॥ ೧೬ ॥

ಮಾಸಾಂತೇ ತಾಂ ತಥಾ ಧೇನುಂ ದದ್ಯಾದ್ವಿಪ್ರಾಯ ಭಕ್ತಿಮಾನ್ ।
ವ್ರತಮೇತತ್ಸಮುದ್ದಿಷ್ಟಂ ಸರ್ವಕಲ್ಮಷನಾಶನಂ ॥ ೧೭ ॥

ರಾಜಸೂಯಾಶ್ವಮೇಧಾಭ್ಯಾಂ ವ್ರತಮೇತತ್ತಥಾಧಿಕಂ ।
ವ್ರತೇನಾನೇನ ಚೀರ್ಣೇನ ಕಾಮಾನಿಷ್ಟಾನವಾಪ್ನುಯಾತ್ ॥ ೧೮ ॥

ತಾನೂ ಜಲಪಾನಮಾಡಬೇಕು ಗೋಮೂತ್ರದಿಂದ ಸ್ನಾನಮಾಡುತ್ತಾ ಗೋವಿನ ಸಗಣಿಯಿಂದ ಬಿದ್ದ ಯವಗಳಿಂದಲೇ ದೇಹಯಾತ್ರೆ ನಡೆಸಬೇಕು ಅಥವಾ ಹಾಲಿನಿಂದಲಾಗಲಿ ದೇಹಯಾತ್ರೆ ನಡೆಸಬಹುದು. ಈ ಗೋವ್ರತವನ್ನು ಒಂದು ತಿಂಗಳು ನಡೆಸಿದಲ್ಲಿ ಸರ್ವಪಾಪಗಳೂ ನಾಶವಾಗುತ್ತವೆ. ಒಂದು ಗೋವನ್ನು ಒಂದು ತಿಂಗಳವರಿಗೂ ಯವಗಳಿಂದ ಪೋಷಿಸಿ ಗೋಮಯದಿಂದ ಬಿದ್ದ ಯವ ಗಳನ್ನು ಆ ತಿಂಗಳು ಪೂರ್ತಿಯಾಗಿ ಭಕ್ಷಿಸುತ್ತಿದ್ದಲ್ಲಿ ಶುಚಿಯಾಗುತ್ತಾನೆ. ಮಾಸದ ಕೊನೆಯಲ್ಲಿ ಆ ಗೋವನ್ನು ಭಕ್ತಿಪೂರ್ವಕವಾಗಿ ಬ್ರಾಹ್ಮಣನಿಗೆ ದಾನಮಾಡಬೇಕು. ಈ ವ್ರತವು ಸರ್ವಪಾಪನಾಶಕವಾದ್ದು. ರಾಜಸೂಯಾಶ್ವಮೇಧಯಾಗಗಳಿಗಿಂತಲೂ ಈ ವ್ರತವು ಅಧಿಕವಾದ್ದು. ಈ ವ್ರತವನ್ನಾಚರಿಸಿದವನಿಗೆ ಸರ್ವವಿಧವಾದ ಇಷ್ಟ ಗಳೂ ಸಿದ್ಧಿಸುತ್ತವೆ.

ವಿಮಾನೇನಾರ್ಕವರ್ಣೇನ ಬ್ರಹ್ಮಲೋಕಂ ಚ ಗಚ್ಛತಿ ।
ವಿನಾಪಿ ಗೋಪ್ರದಾನೇನ ವ್ರತಮೇತನ್ಮಹಾಫಲಂ ॥ ೧೯ ॥

ತ್ರಿರಾತ್ರಂ ಸಪ್ತರಾತ್ರಂ ವಾ ಶಕ್ತಿಂ ಜ್ಞಾತ್ವಾ ತಥಾ ಸ್ವಕಾಂ ।
ಗವಾಂ ನಿಹಾರನಿರ್ಮುಕ್ತೈಃ ವೃತ್ತಿಂ ಕೃತ್ವಾ ತಥಾ ಯವೈಃ ॥ ೨೦ ॥

ಪಾಪಮೋಕ್ಷಮವಾಪ್ನೋತಿ ಪುಣ್ಯಂ ಚ ಮಹದಶ್ನುತೇ ।
ರಜಶ್ಚ ಗೋಖುರೋದ್ಧೂತಂ ಸರ್ವಕಲ್ಮಷನಾಶನಂ ॥ ೨೧ ॥

ಯಾದೃಶಾತ್ತಾದೃಶಾದ್ದೇಶಾನ್ನಾತ್ರ ಕಾರ್ಯಾ ವಿಚಾರಣಾ ।
ಮಙ್ಗಲ್ಯಂ ಚ ಪವಿತ್ರಂ ಚ ತದಲಕ್ಷ್ಮೀವಿನಾಶನಂ ॥ ೨೨ ॥

ಗವಾಂ ಹಿ ಪರಿವಾಸೇನ ಭೂಮಿಃ ಶುದ್ಧಿಮವಾಪ್ನುಯಾತ್ ।
ತದ್ಧಿ ಶುದ್ಧಂ ತದಾ ವೇಶ್ಮ ಯತ್ರ ತಿಷ್ಠಂತಿ ಧೇನವಃ ॥ ೨೩ ॥

೧೯–೨೩. ಸೂರ್ಯನಂತೆ ಜ್ವಲಿಸುವ ವಿಮಾನದಿಂದ ಬ್ರಹ್ಮಲೋಕವನ್ನೂ ಹೊಂದುತ್ತಾನೆ. ಗೋವಿನ ದಾನಮಾಡದಿದ್ದರೂ ಈ ವ್ರತವನ್ನಾಚರಿಸಿದಲ್ಲಿ ಮಹಾ ಫಲವುಂಟಾಗುತ್ತದೆ. ಮೂರು ರಾತ್ರಿಯಾಗಲಿ, ಏಳು ರಾತ್ರಿಯಾಗಲಿ, ತನ್ನ ಶಕ್ತಿಯನ್ನು ತಿಳಿದು ಅದಕ್ಕೆ ಅನುಗುಣವಾಗಿ ಗೋವುಗಳ ಭುಕ್ತಶಿಷ್ಟವಾದ ಯವಗಳಿಂದ ಜೀವಿಸಿ ವ್ರತವನ್ನಾಚರಿಸಿದಲ್ಲಿ ಪಾಪಮೋಕ್ಷವನ್ನೂ, ಹೆಚ್ಚಾದ ಪುಣ್ಯಲಾಭವನ್ನೂ ಹೊಂದುತ್ತಾನೆ. ಗೋವಿನ ಗೊರಸಿನಿಂದ ಎದ್ದ ಧೂಳಿಯು ಅದು ಎಂತಹುದಾದರೂ ಸರಿ ಸಮಸ್ತ ಪಾಪಗಳಿಗೂ ನಾಶವಾಗುತ್ತದೆ. ಇದರಲ್ಲಿ ವಿಚಾರಮಾಡಬೇಕಾದ್ದಿಲ್ಲ. ಈ ಧೂಳಿಯು ಮಂಗಲಕರ, ಅಶುಭನಾಶಕ, ಗೋವುಗಳು ಸೇವಿಸಿದ ಭೂಮಿಯು ಶುದ್ಧವಾಗಿರುತ್ತದೆ. ಯಾವ ಮನೆಯಲ್ಲಿ ಗೋವುಗಳಿರುವುವೋ ಆ ಮನೆಯೂ ಸಹ ಗೋವುಗಳಿರುವಾಗ ಶುದ್ಧವೆಂದು ತಿಳಿಯಬೇಕು.

ತಾಸಾನ್ನಿಶ್ವಾಸವಾತೇನ ಪರಂ ನೀರಾಜನಂ ಭವೇತ್ ।

ತಾಸಾಂ ಸಂಸ್ಪರ್ಶನಂ ಪುಣ್ಯಂ ದುಃಸ್ವಪ್ನಾಘವಿನಾಶನಂ || ೨೪ ||

ಗ್ರೀವಾಮಸ್ತಕಸನ್ಧೌ ತು ತಾಸಾಂ ಗಙ್ಗಾ ಪ್ರತಿಷ್ಠಿತಾ ।
ಸರ್ವದೇವಮಯಾಗಾವಃ ಸರ್ವತೀರ್ಥಮಯಾಸ್ತಥಾ || ೨೫ ||

ತಾಸಾಂ ಲೋಮಾನಿ ಪುಣ್ಯಾನಿ ಪವಿತ್ರಾಣಿ ತಥಾ ದ್ವಿಜಾಃ ।
ಗೋಮಯೇನೋಪಲಿಪ್ತಂ ತು ಶುಚಿ ಸ್ಥಾನಂ ಪ್ರಕೀರ್ತಿತಂ || ೨೬ ||

ಅಗ್ನ್ಯಗಾರಸುರಾಗಾರಾನ್ಗೋಮಯೇನೋಪಲೇಪಯೇತ್ ।
ಗೋಮಯೇ ತು ಸದಾ ಲಕ್ಷ್ಮೀಃ ಸ್ವಪನೇವ ವ್ಯವಸ್ಥಿತಾ || ೨೭ ||

ಗೋಮೂತ್ರೇ ಚ ತಥಾ ಗಙ್ಗಾ ದಧಿಕ್ಷೀರಘೃತೇಷು ಚ ।
ಸದಾ ವ್ಯವಸ್ಥಿತಂ ಸೋಮಂ ರೋಚನಾಯಾಂ ಸರಸ್ವತೀ || ೨೮ ||

೨೪-೨೭. ಗೋವುಗಳ ನಿಶ್ವಾಸದ ಗಾಳಿಯು ಉತ್ತಮವಾದ ನೀರಾಜನ, (ಪಾಪನಾಶನದಿಂದ ಸ್ವರೂಪಕ್ಕೆ ಪ್ರಕಾಶಕವೆಂದು ತಾತ್ಪರ್ಯ.) ಅವುಗಳ ಸ್ಪರ್ಶವೂ ಪುಣ್ಯಕರ, ದುಃಸ್ವಪ್ನಕ್ಕೆ ಕಾರಣವಾದ ಪಾಪಗಳಿಗೆಲ್ಲಾ ನಾಶಕ, ಅವುಗಳ ಕತ್ತು ಮತ್ತು ತಲೆಯ ಸಂಧಿಯಲ್ಲಿ ಗಂಗೆಯು ಪ್ರತಿಷ್ಠಿತವಾಗಿದೆ. ಗೋವುಗಳು ಸರ್ವ ದೇವತಾ ಸ್ವರೂಪಗಳು ಹಾಗೂ ಸರ್ವತೀರ್ಥಸ್ವರೂಪಗಳು, ಅವುಗಳ ರೋಮಗಳೂ ಸಹ ಪುಣ್ಯಕರಗಳು ಮತ್ತು ಪವಿತ್ರಗಳು. ಗೋಮಯದಿಂದ ಸಾರಿಸಿದ ಪ್ರದೇಶವು ಪರಿಶುದ್ಧವೆಂದು ಹೇಳಲ್ಪಟ್ಟಿದೆ. ಅಗ್ನಿಗೃಹ ದೇವತಾಗೃಹ ಇವನ್ನು ಗೋಮಯ ದಿಂದಲೇ ಸಾರಿಸಬೇಕು. ಈ ಗೋಮಯದಲ್ಲಿ ಸರ್ವಕಾಲದಲ್ಲಿಯೂ ಲಕ್ಷ್ಮಿಯು ವಾಸಿಸುತ್ತಾಳೆ.

೨೮-೩೦. ಗೋಮೂತ್ರದಲ್ಲಿ ಗಂಗೆಯೂ, ಮೊಸರು, ಹಾಲು, ತುಪ್ಪ ಇವುಗಳಲ್ಲಿ ಸೋಮವೂ, ಗೋರೋಚನದಲ್ಲಿ ಸರಸ್ವತಿಯೂ ಯಾವಾಗಲೂ ಸನ್ನಿಹಿತ ರಾಗಿರುವರು. ಯಜ್ಞರೂಪಿಯೆಂದು ಹೇಳಲ್ಪಟ್ಟಿರುವ ವಿಷ್ಣುವೂ ಗೋವುಗಳಲ್ಲಿ

ವಿಷ್ಣುರ್ಯಜ್ಞಃ ಸಮಾಖ್ಯಾತಃ ಸ ಚ ಗೋಷು ಪ್ರತಿಷ್ಠಿತಃ ।
ತಸ್ಮಾದ್ಗಾವೋ ವಿನಿರ್ದಿಷ್ಟಾ ವಿಷ್ಣುರೇವ ಪುರಾತನೈಃ ॥ ೨೯ ॥

ಪೂಜ್ಯಾಸ್ತಾಸ್ತು ನಮಸ್ಕಾರ್ಯಾಃ ಕೀರ್ತನೀಯಾಶ್ಚ ತಾಸ್ತಥಾ ।
ತಾಸಾಮಾಹಾರದಾನಂ ಚ ಕಾರ್ಯಂ ಶುಶ್ರೂಷಣಂ ತಥಾ ॥ ೩೦ ॥

ಶುಶ್ರೂಷಣೇನೇಹ ಗವಾಂ ದ್ವಿಜೇಂದ್ರಾಃ
ಪ್ರಾಪ್ನೋತಿ ಲೋಕಾನಮಲಾನ್ವಿಶೋಕಾನ್ ।
ತಸ್ಮಾತ್ಪ್ರಯತ್ನೇನ ಗವಾಂ ಹಿ ಕಾರ್ಯಂ
ಶುಶೂಷಣಂ ಧರ್ಮಪರೈರ್ಮನುಷ್ಯೈಃ ॥ ೩೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಗೋಶುಶ್ರೂಷಾ
ನಾಮೈಕನವತ್ಯಧಿಕದ್ವಿಶತತಮೋಽಧ್ಯಾಯಃ

ಸ್ಥಿತಿಹೊಂದಿರುವನು. ಆದುದರಿಂದ ವಿಷ್ಣುವಿನ ಅಖಂಡಸ್ವರೂಪವೇ ಗೋವುಗಳೆಂದು ಪ್ರಾಚೀನರು ಹೇಳಿರುವರು. ಆದುದರಿಂದ ಗೋವುಗಳನ್ನು ಯಾವಾಗಲೂ ಪೂಜಿಸಬೇಕು, ನಮಸ್ಕರಿಸಬೇಕು, ಸ್ತುತಿಮಾಡಲೂಬೇಕು. ಅವುಗಳಿಗೆ ಆಹಾರದಾನವನ್ನೂ, ಶುಶ್ರೂಷೆಯನ್ನೂ ಮಾಡುತ್ತಿರಬೇಕು. ಗೋವುಗಳ ಶುಶ್ರೂಷೆಯಿಂದ ವಿಶುದ್ಧವಾಗಿಯೂ, ವಿಶೋಕವಾಗಿಯೂ ಇರುವ ಉತ್ತಮಲೋಕವನ್ನು ಹೊಂದುತ್ತಾನೆ. ಆದುದರಿಂದ ಧಾರ್ಮಿಕನಾದ ಮನುಷ್ಯನು ಗೋಶುಶ್ರೂಷೆಯನ್ನು ಪ್ರಯತ್ನದಿಂದ ಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಗೋಶುಶ್ರೂಷೆ
ಎಂಬ ಇನ್ನೂರ ತೊಂಭತ್ತೊಂದನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಿನವತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಯೋ ದಯಾವಾನ್ಸ ಪುರುಷೋ ನಿರ್ಘೃಣೋ ರಾಕ್ಷಸೋ ಮತಃ ।
ರಾಕ್ಷಸಾನಾಮಪಿ ಘೃಣಾ ವಿದ್ಯತೇ ದ್ವಿಜಸತ್ತಮಾಃ ॥ ೧ ॥

ನಿರ್ಘೃಣಾಃ ಪ್ರತಿಪದ್ಯಂತೇ ಘೋರಂ ನರಕಮಂಜಸಾ ।
ವಧಬಂಧಪರಿಕ್ಲೇಶಾನ್ಮಾನುಷ್ಯೇಽಥ ಲಭಂತಿ ತೇ ॥ ೨ ॥

ಇನ್ನೂರ ತೊಂಭತ್ತೆರಡನೆಯ ಅಧ್ಯಾಯ.

೧–೨. ಹಂಸವು ಹೇಳುತ್ತದೆ— ಎಲೈ ವಿಪ್ರೋತ್ತಮರೇ, ಯಾವನು ದಯೆಯಿಂದ ಕೂಡಿರುವನೋ ಅವನೇ ಪುರುಷನೆನಿಸಿಕೊಳ್ಳುವನು. ದಯೆಯಿಲ್ಲದವನು ರಾಕ್ಷಸನೆಂದು ಕರೆಯಲ್ಪಡುವನು. ರಾಕ್ಷಸರಿಗೂ ಸಹ ದಯೆಯಿರುವುದು. ದಯಾರಹಿತರಾದವರು ಭಯಂಕರವಾದ ನರಕವನ್ನು ಹೊಂದುವರು. ಅವರುಗಳು ವಧಬಂಧಾದಿ ಕಷ್ಟಗಳಿಂದ ಕೂಡಿ ಮನುಷ್ಯಜನ್ಮವನ್ನು ಪಡೆದು, ರೋಗಾದಿಗಳಿಂದ ಪೀಡಿತರಾಗಿ ದುಃಖದಿಂದ ದೀನರಾಗಿಯೂ ದರಿದ್ರರಾಗಿಯೂ ಆಗುವರು.

ವ್ಯಾಧ್ಯಾರ್ತಾ ದುಃಖಿತಾ ದೀನಾ ದರಿದ್ರಾಶ್ಚ ಭವಂತಿ ತೇ ।
ದಯಾನ್ವಿತಾ ವಿರಾಜಂತೇ ನಾಕಮಾಸಾದ್ಯ ಮಾನವಾಃ ॥ ೩ ॥

ತಸ್ಮಾದ್ದಯಾವತಾ ಭಾವ್ಯಂ ತೃಣೇಷ್ವಪಿ ವಿಪಶ್ಚಿತಾ ।
ತೃಣಾನ್ಯಪಿ ಸಜೀವಾನಿ ತೇಷಾಂ ಕುರ್ಯಾನ್ನ ಪೀಡನಂ ॥ ೪ ॥

ಕೀಟೇ ಪತಂಗೇ ಚ ಪಶೌ ದಯಾ ಕಾರ್ಯಾ ತಥಾ ಮೃಗೇ ।
ವರ್ಣೋತ್ತಮೇ ವರ್ಣಹೀನೇ ಪತಿತೇ ವರ್ಣಸಂಕರೇ ॥ ೫ ॥

ಸರ್ವತ್ರೈವ ದಯಾ ಕಾರ್ಯಾ ಸರ್ವಕಾಮಫಲಪ್ರದಾ ।
ವ್ರತಾನಾಮಪಿ ಸರ್ವೇಷಾಂ ಶ್ರೇಷ್ಠಮೇಕಂ ದಯಾವ್ರತಂ ॥ ೬ ॥

ದುಃಖಾರ್ತಂ ಪ್ರಾಣಿನಂ ಕಿಂಚಿದ್ದುಃಖಾನ್ಮೋಕ್ಷಯತೇ ದ್ವಿಜಾಃ ।
ವಹ್ನಿಷ್ಟೋಮಫಲಂ ಪ್ರೋಕ್ತಂ ನಾತ್ರ ಕಾರ್ಯಾ ವಿಚಾರಣಾ ॥ ೭ ॥

೩–೪. ಯಾರು ದಯೆಯಿಂದ ಇಲ್ಲಿ ಇರುವರೋ ಅವರು ಸ್ವರ್ಗಲೋಕವನ್ನು ಹೊಂದಿ ಪ್ರಕಾಶಿಸುವರು. ಆದುದರಿಂದ ತೃಣವೇ (ಹುಲ್ಲು) ಮೊದಲಾದವುಗಳಲ್ಲಿಯೂ ದಯೆಯಿಂದ ವರ್ತಿಸಬೇಕು. ಹುಲ್ಲುಗಳಿಗೂ ಸಹ ಜೀವವಿರುವುದರಿಂದ ಅವುಗಳಿಗೂ ತೊಂದರೆ ಕೊಡಬಾರದು.

೫–೬. ಹುಳು, ಪಕ್ಷಿಗಳು, ಹಸುಗಳು ಮತ್ತು ಪ್ರಾಣಿಗಳು ಇವೆಲ್ಲವುಗಳಲ್ಲಿಯೂ ದಯೆತೋರಬೇಕು. ಹಾಗೆಯೇ ಉತ್ತಮವರ್ಣದವರಲ್ಲೂ, ವರ್ಣಹೀನರಲ್ಲೂ, ಪತಿತರಲ್ಲೂ, ವರ್ಣಸಾಂಕರ್ಯಪಡೆದವರಲ್ಲಿಯೂ ಸಹ ಸರ್ವ ಇಷ್ಟಾರ್ಥಸಿದ್ಧಿಗಳನ್ನೂ ಕೊಡುವ ದಯಾಗುಣದಿಂದ ನಡೆದುಕೊಳ್ಳಬೇಕು. ವ್ರತಗಳಲ್ಲಿ ದಯಾವ್ರತವೆಂಬುದೇ ಬಹಳ ಉತ್ಕೃಷ್ಟವಾದುದು.

೭–೮. ವಿಪ್ರರೇ, ದುಃಖಕ್ಕೆ ಸಿಲುಕಿರುವ ಪ್ರಾಣಿಯನ್ನು ಯಾರು ಆ ದುಃಖದಿಂದ ಬಿಡುಗಡೆ ಮಾಡಿಸುವರೋ ಅವರಿಗೆ ನಿಶ್ಚಯವಾಗಿಯೂ ಅಗ್ನಿಷ್ಟೋಮಯಾಗ ಮಾಡಿದ ಫಲವು ದೊರೆಯುವುದು. ಈ ವಿಷಯದಲ್ಲಿ ವಿಚಾರಣೆಮಾಡಬೇಕಾಗಿಲ್ಲ.

ಪರಿಚರ್ಯಾಂ ತಥಾ ಕೃತ್ವಾ ಸಾಸ್ತ್ರ್ಯೇತ್ಪ್ರಾಣಿನೋ ದ್ವಿಜಾಃ ।
ಬ್ರಹ್ಮಲೋಕಮವಾಪ್ನೋತಿ ದಯಾರ್ವಾತೇನ ಕರ್ಮಣಾ ॥ ೮ ॥

ಶ್ಲೇಷ್ಮಮೂತ್ರಪುರೀಷಾಣಾಂ ವ್ಯಾಧಿತಸ್ಯ ಜುಗುಪ್ಸಕಃ ।
ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೆ ॥ ೯ ॥

ಮೃತಸ್ಯ ವಾಹ್ಯನಾಥಸ್ಯ ನ ಜುಗುಪ್ಸಂತಿ ಯೇ ನರಾಃ ।
ಕುರ್ವಂತಿ ಚೈವ ಸಂಸ್ಕಾರಾನ್ ತೇ ನರಾಃ ಸ್ವರ್ಗಗಾಮಿನಃ ॥ ೧೦ ॥

ಅಗ್ನಿದಾಹಾಜ್ಜಲಾಚ್ಛಸ್ತ್ರಾತ್ತಥಾನ್ಯಸ್ಮಾದುಪದ್ರವಾತ್ ।
ಪ್ರಾಣಿನೋ ಮೋಕ್ಷಣಂ ಕೃತ್ವಾ ಸ್ವರ್ಗಲೋಕೇ ಮಹೀಯತೇ ॥ ೧೧ ॥

ಬಂಧನಾತ್ಪ್ರಾಣಿನಃ ಕೃತ್ವಾ ಮೋಕ್ಷಣಂ ಚ ತಥಾ ದ್ವಿಜಾಃ ।
ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ॥ ೧೨ ॥

ಯಾವನು ದಯೆಯಿಂದ ಪ್ರಾಣಿಗಳ ಸೇವೆಮಾಡಿ ಸತ್ಕರಿಸುವನೋ ಅವನು ಉತ್ತಮವಾದ ಬ್ರಹ್ಮಲೋಕವನ್ನು ಸೇರುವನು (ಪಡೆಯುವನು).

೯–೧೦. ಶ್ಲೇಷ್ಮಮೂತ್ರಪುರೀಷಾದಿಗಳಿಂದ ಕೂಡಿದ ರೋಗದಿಂದ ನರಳುತ್ತಿರುವವನನ್ನು ನೋಡಿ ಜುಗುಪ್ಸೆ (ಬೇಜಾರು) ಪಡದೆ ಯಾರು ಸೇವೆಮಾಡುವರೋ ಅವರು ಬೇಡಿದ ಇಷ್ಟಾರ್ಥಗಳನ್ನು ಕೊಡುವ ಯಜ್ಞದ ಫಲವನ್ನು ಪಡೆಯುವರು. ಯಾರು ಸತ್ತವರಿಗೆ ಅಥವಾ ಗತಿಯಿಲ್ಲದವರಿಗೆ ಜುಗುಪ್ಸೆಗೊಳ್ಳದೆ ಅಂತ್ಯಸಂಸ್ಕಾರಾದಿಗಳನ್ನು ಮಾಡುವರೋ ಅವರು ಸ್ವರ್ಗಲೋಕವನ್ನು ಹೊಂದಿದವರಾಗಿ ಸುಖಿಸುವರು.

೧೧–೧೨. ಬೆಂಕಿಯ ಜ್ವಾಲೆಯಿಂದಲೂ, ನೀರಿನಿಂದಲೂ, ಶಸ್ತ್ರಾದಿ ಆಯುಧಗಳಿಂದಲೂ, ಹಾಗೆಯೇ ಇತರ ವಿಧವಾದ ತೊಂದರೆಗಳಿಂದಲೂ ಪ್ರಾಣಿಗಳನ್ನು ಕಷ್ಟದಿಂದ ನಿವಾರಣೆ ಮಾಡಿದಲ್ಲಿ, ಅವರು ದೇವಲೋಕದಲ್ಲಿ ಕೀರ್ತಿಶಾಲಿಗಳಾಗಿ ಬಾಳುವರು. ಬಂಧನಾದಿಗಳಿಂದ ಪ್ರಾಣಿಗಳನ್ನು ಬಿಡುಗಡೆ ಮಾಡಿದರೆ ಅವರು ಎಲ್ಲ ಇಷ್ಟಾರ್ಥಗಳನ್ನೂ ಕೊಡುವ ಯಾಗಮಾಡಿದ ಫಲವನ್ನು ಹೊಂದುವರು.

ಯಸ್ಮಾದ್ಧಿ ಪ್ರಾಣಿನಂ ದುಃಖಾತ್ಪುರುಷೋ ಮೋಕ್ಷಯೇತ್ಕ್ವಚಿತ್ ।
ನ ತದ್ದುಃಖಮವಾಪ್ನೋತಿ ಯತ್ರ ಯತ್ರಾಭಿಜಾಯತೇ ॥ ೧೩ ॥

ಸರ್ವಭೂತೇಷು ಯೋ ದಾನಂ ಚೈಕಸತ್ತ್ವೇ ಚ ಯಾ ದಯಾ ।
ಸರ್ವಸತ್ತ್ವಪ್ರದಾನಾದ್ಧಿ ದಯಾ ಜ್ಞೇಯಾ ಮಹಾಫಲಾ ॥ ೧೪ ॥

ದಯಾನ್ವಿತಾನಾಂ ತ್ರಿದಶೇಂದ್ರಲೋಕಾ
ದಯಾನ್ವಿತಾನಾಂ ಚ ಪಿತಾಮಹಸ್ಯ ।
ದಯಾನ್ವಿತಾನಾಂ ಚ ಸಮಸ್ತಕಾಮಾ
ಲೋಕದ್ವಯೇ ವಿಪ್ರವರಾ ಪ್ರದಿಷ್ಟಾಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ದಯಾವರ್ಣನೋ ನಾಮ ದ್ವಿನವತ್ಯಧಿಕದ್ವಿಶತತಮೋಽಧ್ಯಾಯಃ

೧೩-೧೪. ದಯೆಯುಳ್ಳವರು ಪ್ರಾಣಿಗಳನ್ನು ಎಂತಹದುಃಖದಿಂದ ಮುಕ್ತರನ್ನಾಗಿ ಮಾಡುತ್ತಾರೆಯೋ ಅವರು ಎಲ್ಲಿ ಹುಟ್ಟಿದರೂ ಅಂತಹ ದುಃಖವನ್ನೇ ಪುನಃ ಕಾಣದಂತಾಗುವರು. ಎಲ್ಲ ಭೂತಗಳಲ್ಲಿಯೂ ಮಾಡಿದ ದಾನಫಲವು, ಕೇವಲ ಒಂದು ಪ್ರಾಣಿಮಾತ್ರದಲ್ಲಿ ತೋರಿದ ದಯೆಯಿಂದ ಲಭಿಸುವುದು. ಏಕೆಂದರೆ ದಯೆಯೆಂಬುದು ಸರ್ವಪ್ರಾಣಿಗಳಿಗೂ ಮುಖ್ಯವಾದದ್ದು.

೧೫. ಬ್ರಾಹ್ಮಣೋತ್ತಮರೇ, ದಯಾವಂತರಿಗೆ ಇಂದ್ರಲೋಕವೂ, ಬ್ರಹ್ಮಲೋಕವೂ ಪ್ರಾಪ್ತವಾಗುವುದು. ಮತ್ತು ದಯಾಶಾಲಿಗೆ ಇಹಪರಗಳೆರಡರಲ್ಲಿಯೂ ಅವರು ಬೇಡಿದ ಇಷ್ಟಾರ್ಥಗಳು ದೊರೆಯುವುವು ಎಂದು ಹೇಳಿದೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರಸಂವಾದರೂಪವಾದ ಹಂಸಗೀತೆಯ ದಯಾವರ್ಣನವೆಂಬ ಇನ್ನೂರ ತೊಂಭತ್ತೆರಡನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಿನವತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ದಾಕ್ಷಿಣ್ಯಂ ಪರಮಂ ಲೋಕೇ ನೃಣಾಂ ಸಂವನನಂ ಪರಂ ।
ದಾಕ್ಷಿಣ್ಯಯುಕ್ತಸ್ಯ ತಥಾ ಪರೇಷಾಂ ಪ್ರಿಯಕಾರಿತಾ ॥ ೧ ॥

ಪ್ರಿಯಾಣ್ಯಾಚರತೇ ಯಸ್ತು ಪರೇಷಾಂ ಮನುಜೋತ್ತಮಃ ।
ಸಮಾಪ್ನೋತಿ ಪ್ರಿಯಣ್ಯೇವ ಲೋಕಯೋರುಭಯೋರ್ದ್ವಿಜಾಃ ॥ ೨ ॥

ಇನ್ನೂರ ತೊಂಭತ್ತಮೂರನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ :—ಧಾರಾಳವಾಗಿ ಕೊಡುವಿಕೆಯು (ಅಥವಾ ಸರಳಸ್ವಭಾವವು) ಲೋಕದಲ್ಲಿರುವ ಸಕಲಮಾನವರನ್ನೂ ವಶಮಾಡಿಕೊಳ್ಳಲು ಸಾಧನವಾಗುವುದು: ದಾಕ್ಷಿಣ್ಯದಿಂದ ಕೂಡಿಕೊಂಡವನು ಇತರರಿಗೆ ಪ್ರೀತಿಯನ್ನುಂಟುಮಾಡಲು ಸಮರ್ಥನು. ಯಾವನು ಇತರರಿಗೆ ಪ್ರಿಯವನ್ನೇ ಮಾಡುತ್ತಿರುವನೋ ಆತನೇ ಮನುಷ್ಯರಲ್ಲಿ ಉತ್ತಮನೆನಿಸುವನು. ಎಲೈ ಬ್ರಾಹ್ಮಣರೇ, ಆವನು ಇಹಪರಗಳಲ್ಲಿಯೂ ಪ್ರಿಯವಾದವುಗಳನ್ನೇ ಹೊಂದುತ್ತಾನೆ.

ಪ್ರತ್ಯಕ್ಷಂ ಚ ಪರೋಕ್ಷಂ ಚ ಪರೇಷಾಮಾಚರೇತ್ಪ್ರಿಯಂ ।
ಪ್ರಿಯೇಣ ವಿಪ್ರಿಯಂ ಹಂತಿ ಪ್ರಿಯೇಣ ಪ್ರಿಯಮಾಪ್ನುಯಾತ್ ॥ ೩ ॥

ಮೃದುನಾ ದಾರುಣಂ ಹಂತಿ ಮೃದುನಾ ಹಂತಿ ಮಾರ್ದವಂ ।
ಸರ್ವಂ ಹಿ ಮೃದುನಾ ಹಂತಿ ತಸ್ಮಾತ್ತೀಕ್ಷ್ಣತರೋ ಮೃದುಃ ॥ ೪ ॥

ಮೃದೋರಿಹ ವದಾನ್ಯಸ್ಯ ದೇವಾ ನಿಘ್ನಂತಿ ಶಾತ್ರವಾನ್ ।
ಅಭಿಚಾರಃ ಸ ಶತ್ರೂಣಾಂ ನರಸ್ಯ ಮೃದುತಾ ತಥಾ ॥ ೫ ॥

ನರೇಣ ಮೃದುನಾ ದಗ್ಧಾ ಮಾರ್ದವೇನಾಭಿತಸ್ತು ಯೇ ।
ನ ಪ್ರರೋಹಂತಿ ತೇ ವಿಪ್ರಾ ಬೀಜಾ ದಗ್ಧಾ ಯಥಾ ತಥಾ ॥ ೬ ॥

ದಾಕ್ಷಿಣ್ಯಮೇಕಂ ಸುಭಗತ್ವಹೇತು-
ರ್ದಾಕ್ಷಿಣ್ಯಮೇಕಂ ತ್ರಿದಿವಸ್ಯ ಹೇತುಃ ।

---

೩. ೪. ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ, ಇತರರಿಗೆ ಪ್ರಿಯವಾದುದನ್ನೇ ಮಾಡಬೇಕು. ಪ್ರೀತಿಕಾರ್ಯದಿಂದ ದ್ವೇಷವು ನಾಶವಾಗುವುದು. ಅದರಿಂದ ಪ್ರಿಯವಾದುದನ್ನೇ ಹೊಂದುವನು. ಮಾರ್ದವ (ಸಾಧುಸ್ವಭಾವ) ದಿಂದ ಕಠಿಣವಾದುದನ್ನೂ, ಸುಲಭವಾದುದನ್ನೂ ನಾಶಮಾಡುತ್ತಾನೆ (ವಶಪಡಿಸಿಕೊಳ್ಳುತ್ತಾನೆ) ಎಲ್ಲವನ್ನೂ ಮಾರ್ದವದಿಂದಲೇ ನಾಶಮಾಡುವುದರಿಂದ ಮಾರ್ದವ ಗುಣವು ಮಹತ್ತರವಾದುದು.

೫-೬. ಈ ಲೋಕದಲ್ಲಿ ದಾನಶೀಲನಾಗಿ ಮೃದುವಾಗಿರುವವನ ಶತ್ರುಗಳನ್ನೂ ದೇವತೆಗಳು ನಿವಾರಣೆಮಾಡುವರು. ಮನುಷ್ಯನ ಮಾರ್ದವವೇ ಅವನ ಶತ್ರುಗಳಿಗೆ ಅಭಿಚಾರವ್ಯಾಪಾರದಂತೆ ನಾಶಕವಾಗುತ್ತದೆ. ಮಾರ್ದವಗುಣದಿಂದ ಕಟ್ಟಲ್ಪಟ್ಟ ಶತ್ರುಗಳು ಸುಟ್ಟ ಬೀಜಗಳಂತೆ ಯಾವಾಗಲೂ ತಲೆ ಎತ್ತುವುದೇ ಇಲ್ಲ.

ದಾಕ್ಷಿಣ್ಯಮಾಸ್ಥಾಯ ಜಯೇದರಾತೀ-
ನ್ದಾಕ್ಷಿಣ್ಯಯುಕ್ತಸ್ತು ಸದಾ ಭವೇಚ್ಚ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದಾಕ್ಷಿಣ್ಯವರ್ಣನೋ ನಾಮ ತ್ರಿನವತ್ಯಧಿಕದ್ವಿಶತತಮೋಽಧ್ಯಾಯಃ

---

೭. ದಾಕ್ಷಿಣ್ಯವೊಂದೇ ಐಶ್ವರ್ಯಕ್ಕೆ ಕಾರಣವು. ದಾಕ್ಷಿಣ್ಯವೊಂದೇ ಸ್ವರ್ಗಕ್ಕೆ ಸಾಧನವು. ದಾಕ್ಷಿಣ್ಯಗುಣವನ್ನು ಸಂಪಾದಿಸಿ ಶತ್ರುಗಳನ್ನು ಜಯಿಸಬೇಕು. ಯಾವಾಗಲೂ ದಾಕ್ಷಿಣ್ಯಭರಿತನಾಗಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ದಾಕ್ಷಿಣ್ಯವರ್ಣನವೆಂಬ ಇನ್ನೂರ ತೊಂಭತ್ತಮೂರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುರ್ನವತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸಂರೋಹತೀಷುಣಾವಿದ್ಧಂ ವನಂ ಪರಶುನಾ ಹತಂ ।
ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್ಕೃತಂ ॥ ೧ ॥

ಮಿತ್ರಾಣಿ ಯಾಂತಿ ಶತ್ರುತ್ವಂ ನರಸ್ಯಾಪ್ರಿಯವಾದಿನಃ ।
ಅನರ್ಥಾಃ ಸ್ವಯಮಾಯಾಂತಿ ಮೃತೋ ನರಕಮೃಚ್ಛತಿ ॥ ೨ ॥

ತಸ್ಮಾದ್ಭಾವ್ಯಂ ಮನುಷ್ಯೇಣ ಸ್ಮಿತಪೂರ್ವಾಭಿಭಾಷಿಣಾ ।
ಪ್ರತ್ಯಕ್ಷಂ ಚ ಪರೋಕ್ಷಂ ಚ ಸರ್ವೇಷಾಂ ಪ್ರಿಯಭಾಷಿಣಾಂ ॥ ೩ ॥

ಮಿತ್ರತಾಂ ಯಾಂತಿ ರಿಪವೋ ನರಾಣಾಂ ಪ್ರಿಯಭಾಷಿಣಾಂ ।
ರಕ್ಷಾಂಸ್ಯಪಿ ನಿಗೃಹ್ಯಂತೇ ಪುರುಷೈಃ ಸಾಂತ್ವವಾದಿಭಿಃ ॥ ೪ ॥

ಇನ್ನೂರ ತೊಂಭತ್ತನಾಲ್ಕನೆಯ ಅಧ್ಯಾಯ.

೧–೨. ಬಾಣದಿಂದ ಹೊಡೆಯಲ್ಪಟ್ಟದ್ದೂ, ಕೊಡಲಿಯಿಂದ ಕಡಿಯಲ್ಪಟ್ಟದ್ದೂ ಆದ ಕಾಡು ಪುನಃ ಬೆಳೆಯುತ್ತದೆ. ಆದರೆ ಹೇಯವೂ, ಕಠಿಣವೂ ಆದ ಮಾತಿನಿಂದ ಉಂಟಾದುದು ಮತ್ತೆ ಅಭಿವೃದ್ಧಿಗೊಳ್ಳಲಾರದು. ಕಠಿಣೋಕ್ತಿಯಾಡುವವನ ಮಿತ್ರರು (ಸ್ನೇಹಿತರುಗಳು) ಶತ್ರುಗಳಾಗುವರು. ತೊಂದರೆಗಳು ತಾವಾಗಿಯೇ ಬಂದು ಸೇರುವುವು. ಅವನು ಸತ್ತಮೇಲೆ ನರಕವನ್ನು ಹೊಂದುವನು.

೩–೪. ಆದುದರಿಂದ ಯಾವಾಗಲೂ ಮನುಷ್ಯನು ಸಂತೋಷದಿಂದ ಹಸನ್ಮುಖನಾಗಿಯೇ ಮಾತನಾಡಬೇಕು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಪ್ರಿಯ

ಪ್ರಿಯವಾಕ್ಯಾತ್ಪರಂ ಲೋಕೇ ನಾಸ್ತಿ ಸಂವನನಂ ಪರಂ ।
ಪ್ರಿಯೋ ಭವತಿ ಲೋಕಾನಾಂ ಪ್ರಿಯವಾದೀ ತಥಾ ನರಃ ॥ ೫ ॥

ಪ್ರಿಯಂವದಾನಾಂ ಸಕಲಂ ಜಗದೇತತ್ಸ್ಥಿತಂ ವಶೇ ।
ಪ್ರಿಯಂವದಾನಾಂ ಶತ್ರುತ್ವೇ ನಾಸ್ತಿ ಕಶ್ಚಿಜ್ಜಗತ್ತ್ರಯೇ ॥ ೬ ॥

ಪ್ರಿಯಂವದಾಃ ಸೌಖ್ಯಮಿಹಾಪ್ನುವಂತಿ
ಪ್ರಿಯಂವದಾ ನಾಕಮಥ ಪ್ರಯಾಂತಿ ।
ಪ್ರಿಯಂವದಾಃ ಸರ್ವಮಥಾಪ್ನುವಂತಿ
ಪ್ರಿಯಂವದಃ ಸ್ಯಾದತ ಏವ ನಿತ್ಯಂ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪ್ರಿಯಂವದಪ್ರಶಂಸಾನಾಮ ಚತುರ್ನವತ್ಯಧಿಕದ್ವಿಶತತಮೋಽಧ್ಯಾಯಃ

ಹಾಗಿ ಮಾತನಾಡುವವರಿಗೆ ಶತ್ರುಗಳೂ ಸ್ನೇಹಿತರಾಗುವರು. ಸಮಾಧಾನವಾಗಿ ಮಾತನಾಡುವವರಿಂದ ರಾಕ್ಷಸರೂ ಸಹ ನಿಗ್ರಹಿಸಲ್ಪಡುತ್ತಾರೆ.

೫-೬. ಎಲ್ಲರನ್ನೂ ವಶಮಾಡಿಕೊಳ್ಳುವುದರಲ್ಲಿ ಪ್ರಿಯವಾದ ಮಾತನ್ನು ಬಿಟ್ಟರೆ ಬೇರೆ ಸಾಧನವಿಲ್ಲ. ಪ್ರಿಯವಾಗಿ ಮಾತನಾಡುವವನು ಜಗತ್ತಿಗೇ ಪ್ರೀತಿ ಪಾತ್ರನಾಗುತ್ತಾನೆ. ಪ್ರಿಯವಾದಿಗಳಿಗೆ ಸಕಲಪ್ರಪಂಚವೂ ಅಧೀನವಾಗಿರುತ್ತದೆ. ಪ್ರಿಯವಾಗಿ ಮಾತನಾಡುವವರಿಗೆ ಮೂರು ಲೋಕಗಳಲ್ಲಿಯೂ ಶತ್ರುವಾಗಿರುವುದು ಇಲ್ಲವೇ ಇಲ್ಲ.

೭. ಪ್ರಿಯವಾದಿಗಳು ಈ ಲೋಕದಲ್ಲಿ ಸುಖವನ್ನು ಹೊಂದುವುದಲ್ಲದೆ ಮುಂದೆ ಸ್ವರ್ಗಸುಖವನ್ನೂ ಅನುಭವಿಸುತ್ತಾರೆ. ಅಂತಹವರು ಸರ್ವಸುಖವನ್ನೂ ಅನುಭವಿಸುತ್ತಾರೆ. ಆದುದರಿಂದ ಯಾವಾಗಲೂ ಪ್ರಿಯವಾದಿಯಾಗಿಯೇ ಇರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಹಂಸಗೀತೆಯಲ್ಲಿ ಪ್ರಿಯಂವದಪ್ರಶಂಸಾ ಎಂಬ ಇನ್ನೂರ ತೊಂಭತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಪಂಚನವತ್ಯಧಿಕದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಅಲಸಾನಾಂ ಮನುಷ್ಯಾಣಾಂ ಸದಾ ದುಃಖಂ ದರಿದ್ರತಾ |
ಆಲಸ್ಯಂ ಪಾತಕಂ ಲೋಕೇ ಆಲಸ್ಯಂ ಭೂತಿನಾಶನಂ || ೧ ||

ನಾಧಿಗಚ್ಛಂತಿ ಭೋಕ್ತವ್ಯಮಲಸಾ ಯೇ ನರಾಧಮಾಃ |
ಅಲಸಾನಾಂ ಮನುಷ್ಯಾಣಾಂ ಪ್ರಾಪ್ತೋಽಪ್ಯರ್ಥೋ ವಿನಶ್ಯತಿ || ೨ ||

ತಸ್ಮಾನ್ನಿತ್ಯಂ ಮನುಷ್ಯೇಣ ದಾಕ್ಷ್ಯಂ ಕಾರ್ಯಂ ವಿಜಾನತಾ |
ದಕ್ಷಃ ಸರ್ವಮವಾಪ್ನೋತಿ ಯತ್ಕಿಂಚಿನ್ಮನಸೇಚ್ಛತಿ || ೩ ||

ಇನ್ನೂರ ತೊಂಭತ್ತೈದನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ—ಆಲಸ್ಯದಿಂದ ಕೂಡಿದ ಮನುಷ್ಯರಿಗೆ ಯಾವಾಗಲೂ ದುಃಖವೂ ಬಡತನವೂ ಉಂಟಾಗುತ್ತದೆ. ಆದುದರಿಂದ ಆಲಸ್ಯವು ಪಾತಕವು ಮತ್ತು ಆಲಸ್ಯವು ಐಶ್ವರ್ಯವನ್ನು ನಾಶಮಾಡುತ್ತದೆ ಆಲಸ್ಯವುಳ್ಳ ನೀಚಜನರು ಸುಖಾದಿಭೋಗಗಳನ್ನು ಹೊಂದುವುದಿಲ್ಲವು. ಆಲಸ್ಯವುಳ್ಳವರಿಗೆ ಲಭಿಸಿದ ದ್ರವ್ಯವೂ ಸಹ ನಾಶವಾಗುತ್ತದೆ.

೩-೪. ಆದುದರಿಂದ ಜ್ಞಾನವುಳ್ಳ ಮನುಷ್ಯನು ಯಾವಾಗಲೂ ದಕ್ಷತೆಯನ್ನು (ಉತ್ಸಾಹ) ಹೊಂದಿರಬೇಕು. ಸಮರ್ಥನಾದವನು ಮನಸ್ಸಿನಲ್ಲಿ ಏನನ್ನು ಬಯಸುತ್ತಾನೋ ಅವೆಲ್ಲವನ್ನೂ ಹೊಂದುವನು. ಎಲೈ ಬ್ರಾಹ್ಮಣೋತ್ತಮರೇ,

ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ದ್ವಿಜಸತ್ತಮಾಃ ।
ಭಾಜನಂ ಸರ್ವಕಾಲೇಷು ದಕ್ಷ ಏವ ಸದಾ ನರಃ ॥ ೪ ॥

ಆಕೃಷ್ಯ ದಕ್ಷಃ ಕೇಶೇಷು ವಿಮುಖಾಮಪಿ ಚ ಶ್ರಿಯಂ ।
ಸ್ವೀಕರೋತಿ ಮಹಾಭಾಗಾ ದಕ್ಷೇ ಸರ್ವಂ ಪ್ರತಿಷ್ಠಿತಂ ॥ ೫ ॥

ಉತ್ಥಾನಧೀರಃ ಪುರುಷೋ ವಾಗ್ಮೀರಾನಧಿತಿಷ್ಠತಿ ।
ಉತ್ಥಾನಧೀರಂ ವಾಗ್ಮೀರಾ ರಮಯಂತ ಉಪಾಸತೇ ॥ ೬ ॥

ಉತ್ಥಾನವಾನೇವ ದಿವಂ ಪ್ರಯಾತಿ
ಉತ್ಥಾನವಾನೇವ ಪರಂ ಪದಂ ಚ ।
ಉತ್ಥಾನವಾನೇವ ನರೋ ಜಯೀ ಸ್ಯಾ-
ತ್ತಸ್ಮಾತ್ಸದೋತ್ಥಾನಪರೇಣ ಭಾವ್ಯಂ ॥ ೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀಸ್ತುತಿ ಹಂಸಗೀತಾಸು ಉತ್ಥಾನಪ್ರಶಂಸಾ
ನಾಮ ಪಂಚನವತ್ಯಧಿಕದ್ವಿಶತತಮೋಽಧ್ಯಾಯಃ

ಧರ್ಮಾರ್ಥಕಾಮಮೋಕ್ಷಗಳಲ್ಲಿ ಯಾವಾಗಲೂ ಉತ್ಸಾಹಿಯಾದವನೇ ಅರ್ಹನಾಗಿರುತ್ತಾನೆ. ದಕ್ಷನಾದ ಆತನು ವಿಮುಖಳಾಗಿದ್ದರೂ, ಲಕ್ಷ್ಮಿಯನ್ನು ಕೂದಲು ಹಿಡಿದೆಳೆದು ಸ್ವಾಧೀನಪಡಿಸಿಕೊಳ್ಳುತ್ತಾನೆ. ಉತ್ಸಾಹಿಯಾದ ಪುರುಷನಲ್ಲಿ ಸರ್ವವೂ ಸ್ಥಿರವಾಗಿ ಸೇರಿರುತ್ತದೆ.

೬-೭. ಉತ್ಸಾಹಿಗಳಲ್ಲಿ ಶ್ರೇಷ್ಠನಾದವನು ಮಾತು ಬಲ್ಲವರನ್ನೂ (ವಾಗ್ಮಿ) ಸ್ವಾಧೀನಪಡಿಸಿಕೊಳ್ಳುತ್ತಾನೆ ದಕ್ಷರಾದ ಅಂತಹವರನ್ನು ಯಾವಾಗಲೂ ವಾಚಾಳಿಗಳು ಸಂತೋಷಪಡಿಸುತ್ತಾ ಸೇವಿಸುತ್ತಿರುತ್ತಾರೆ. ಉತ್ಸಾಹಿಯಾದವನೇ ಸ್ವರ್ಗವನ್ನು ಹೊಂದುವನು. ಆತನೇ ಉತ್ಕೃಷ್ಟಸ್ಥಾನವನ್ನೂ ಪಡೆಯುವನು. ಪೌರುಷವುಳ್ಳವನೇ ಯಾವಾಗಲೂ ವಿಜಯವನ್ನು ಸಂಪಾದಿಸುತ್ತಾನೆ. ಆದುದರಿಂದ ಯಾವಾಗಲೂ ಪೌರುಷವನ್ನೇ ಹೊಂದಿರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಉತ್ಥಾನಪ್ರಶಂಸೆಯೆಂಬ ಇನ್ನೂರ ತೊಂಭತ್ತೈದನೆಯ ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷಣ್ಣವತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಬಹಿರ್ವೇದಿತ್ವಮಾಚಕ್ಷ್ವ ಪುಣ್ಯಾನಸ್ಮಾಕಮಚ್ಯುತ ।
ತ್ವಯಾ ಹಿ ಜ್ಞಾನದಾನೇನ ಭೂಯ ಏವ ಸ್ಮ ವರ್ಧಿತಾಃ ॥ ೧ ॥

॥ ಹಂಸ ಉವಾಚ ॥

ಪಾನೀಯಮೇತತ್ಸಕಲಂ ತ್ರೈಲೋಕ್ಯಂ ಸಚರಾಚರಂ ।
ವಿಕಾರಃ ಸಲಿಲಸ್ಯೇದಂ ಸ್ಥಾವರಂ ಜಂಗಮಂ ತಥಾ ॥ ೨ ॥

ಪಾನೀಯೇನ ವಿನಾ ವೃತ್ತಿರ್ಲೋಕೇ ನಾಸ್ತೀಹ ಕರ್ಹಿಚಿತ್ ।
ಕ್ರಿಮಿಕೀಟಪತಂಗಾನಾಂ ಜಲಮೇವ ಪರಾಯಣಂ ॥ ೩ ॥

ಇನ್ನೂರ ತೊಂಭತ್ತಾರನೆಯ ಅಧ್ಯಾಯ.

೧. ಋಷಿಗಳು ಹೇಳುತ್ತಾರೆ:—ಎಲೈ ಅಚ್ಯುತನೇ, ಯಜ್ಞಯಾಗಾದಿಗಳಿಗಿಂತ ಹೊರಗಿನ ಪುಣ್ಯಸಾಧನಗಳನ್ನು ನಮಗೆ ಹೇಳು. ನಿನ್ನ ಜ್ಞಾನದಾನದಿಂದ ನಾವು ಇನ್ನೂ ಹೆಚ್ಚಾಗಿ ತಿಳಿವಳಿಕೆಯುಳ್ಳವರಾಗಿ ಅಭಿವೃದ್ಧಿಹೊಂದುತ್ತೇವೆ.

೨-೩. ಚರಾಚರಗಳಿಂದ ಕೂಡಿದ ಈ ಸಮಸ್ತಲೋಕವೂ ನೀರಿನದೇ ಆಗಿರುವುದು. ಚಲಿಸದೇ ಇರುವ ಗಿಡ ಮರ ಮೊದಲಾದ ಸ್ಥಾವರವೂ, ಪಶು ಪಕ್ಷ್ಯಾದಿ ಚಲಿಸುವ ಜಂಗಮವೂ ಸಹ ನೀರಿನ ವಿಕಾರವೇ ಆಗಿರುವುದು. ನೀರನ್ನು

ಯತ್ರೋದಕಂ ತತ್ರ ಸುರಾಃ ಸರ್ವ ಏವ ಪ್ರತಿಷ್ಠಿತಾಃ ।
ಯತ್ರೋದಕಂ ತತ್ರ ತಥಾ ಋಷಯಶ್ಚ ಮಹಾವ್ರತಾಃ ॥ ೪ ॥

ದುರ್ಲಭಂ ತಚ್ಚ ಲೋಕಾನಾಂ ಪರಲೋಕೇ ದ್ವಿಜೋತ್ತಮಾಃ ।
ಉದಕೇನ ವಿನಾ ವೃತ್ತಿರ್ನಾಸ್ತಿ ಲೋಕದ್ವಯೇ ಸದಾ ॥ ೫ ॥

ತದಾ ಜಲಾಶಯಾಃ ಕಾರ್ಯಾಃ ಪುರುಷೇಣ ವಿಪಶ್ಚಿತಾ ।
ಅಗ್ನಿಷ್ಟೋಮಸಮಾಃ ಕೂಪಾಸ್ತ್ವಶ್ವಮೇಧಸಮಂ ಸರಃ ॥ ೬ ॥

ಕೂಪಃ ಪ್ರವೃತ್ತಪಾನೀಯಸ್ತ್ವರ್ಧಂ ಹರತಿ ದುಷ್ಕೃತಂ ।
ಕೂಪಕೃತ್ಸ್ವರ್ಗಮಾಸಾದ್ಯ ದೇವಭೋಗಾನ್ಸಮಶ್ನುತೇ ॥ ೭ ॥

ತತ್ರಾಪಿ ಭೋಗವೈಕಲ್ಯಂ ಸ್ಥಾನಾಭ್ಯಾಸಾಚ್ಚ ಕೀರ್ತಿತಂ ।
ದಶಕೂಪ ಸಮಾ ವಾಪೀ ತಥಾ ಚ ಪರಿಕೀರ್ತಿತಾ ॥ ೮ ॥

ಹೊರತು ಪ್ರಪಂಚದಲ್ಲಿ ಎಲ್ಲಿಯೂ ಕೆಲಸಕಾರ್ಯಗಳು ಇಲ್ಲವು. ಕ್ರಿಮಿಕೀಟಪತಂಗ ಮೊದಲಾದವುಗಳಿಗೂ ನೀರೇ ಮುಖ್ಯವಾದ ಆಶ್ರಯವು.

೪-೭. ಎಲ್ಲಿ ನೀರಿನ ಆಶ್ರಯವಿದೆಯೋ ಅಲ್ಲಿ ಸರ್ವದೇವತೆಗಳೂ ನೆಲೆಸಿರುತ್ತಾರೆ. ಹಾಗೆಯೇ ತಪಸ್ವಿಗಳಾದ ಋಷಿಗಳೂ ಸಹ ನೀರಿನ ಹತ್ತಿರದಲ್ಲಿಯೇ ವಾಸಮಾಡುವರು. ಎಲೈ ಬ್ರಾಹ್ಮಣೋತ್ತಮರೇ, ಜನರಿಗೆ ಅದು ಪರಲೋಕದಲ್ಲಿ ಸಿಗುವುದು ಕಷ್ಟ. ಇಹಪರಗಳಲ್ಲಿ ಯಾವಾಗಲೂ ನೀರಿಲ್ಲದೆ ಕೆಲಸಕಾರ್ಯಗಳು ನಡೆಯುವುದಿಲ್ಲ. ಆದುದರಿಂದ ಜ್ಞಾನಿಯಾದವನು ನೀರಿರುವ ಸ್ಥಳವನ್ನು ನಿರ್ಮಿಸಬೇಕು. ಬಾವಿಗಳನ್ನು ತೋಡಿಸುವುದು. ಅಗ್ನಿಷ್ಟೋಮಯಾಗಕ್ಕೆ ಸಮವಾದುದು. ಸರೋವರ ನಿರ್ಮಾಣವು ಅಶ್ವಮೇಧಯಾಗಕ್ಕೆ ಸಮವಾದುದು. ನೀರಿನಿಂದ ಕೂಡಿದ ಬಾವಿಯು ಮನುಷ್ಯನ ಅರ್ಧಪಾಪವನ್ನು ಹೋಗಲಾಡಿಸುವುದು. ಬಾವಿಯನ್ನು ತೋಡಿಸಿದ್ದರಿಂದ ಅವನು ಸ್ವರ್ಗವನ್ನು ಹೊಂದಿ ದೇವಸುಖವನ್ನು ಹೊಂದುತ್ತಾನೆ.

೮-೯. ಅಲ್ಲಿ (ಸ್ವರ್ಗ) ಯೂ ಸ್ಥಾನಕಾಲಗಳಿಂದ ಸುಖತಾರತಮ್ಯವು ಹೇಳಲ್ಪಟ್ಟಿದೆ. ಹತ್ತು ಭಾವಿಗಳಿಗೆ ಒಂದು ಇಳಿಯುವ ಕಲ್ಯಾಣಿಯು (ಚಿಕ್ಕಸರೋವರ) ಸಮವೆಂದು ಹೇಳಿದೆ. ಸರೋವರವನ್ನು ನಿರ್ಮಿಸಿದವನು ವರುಣಲೋಕವನ್ನು

ಕೃತ್ವಾ ತಡಾಗಂ ಚ ತಥಾ ವಾರುಣಂ ಲೋಕಮಶ್ನುತೇ ।
ದಶವರ್ಷಸಹಸ್ರಾಣಿ ನಲ್ವಮಾತ್ರಂ ದ್ವಿಜೋತ್ತಮಾಃ ॥ ೯ ॥

ತತ್ರಾಪಿ ಪುಣ್ಯಮಾಪ್ನೋತಿ ಸ್ಥಾನತ್ಯಾಗಾತ್ತಥಾ ಬಹು ।
ಗವಾಂ ಪ್ರಚಾರೇ ತತ್ಕೃತ್ವಾ ಗೋಲೋಕಂ ಪ್ರಾಪ್ನುಯಾದ್ಧ್ರುವಂ॥ ೧೦ ॥

ಶಕ್ರಲೋಕಮವಾಪ್ನೋತಿ ತಡಾಗಕರಣಾತ್ಪಥಿ ।
ಮರೌ ತಡಾಗೇ ಪಾನೀಯಂ ಯಸ್ಯ ತಿಷ್ಠತಿ ವೈ ದ್ವಿಜಾಃ ॥ ೧೧ ॥

ವಿಮಾನೇನಾರ್ಕವರ್ಣೇನ ಬ್ರಹ್ಮಲೋಕಂ ಸ ಗಚ್ಛತಿ ।
ಪ್ರಾವೃಟ್ಕಾಲೇ ತು ಪಾನೀಯಂ ತಡಾಗೇ ಯಸ್ಯ ತಿಷ್ಠತಿ ॥ ೧೨ ॥

ಅಗ್ನಿಷ್ಟೋಮಫಲಂ ತಸ್ಯ ಪುರುಷಸ್ಯ ಪ್ರಕೀರ್ತಿತಂ ।
ದ್ವಾದಶಾಹೇ ಫಲಂ ತಸ್ಯ ಶರತ್ಕಾಲೇ ತು ಯಸ್ಯ ವೈ ॥ ೧೩ ॥

ಗೋಸವಸ್ಯ ತು ಹೇಮಂತೇ ಫಲಂ ಪ್ರಾಪ್ನೋತಿ ಮಾನವಃ ।
ಪೌಂಡರೀಕಫಲಂ ತಸ್ಯ ಶಿಶಿರೇ ಯಸ್ಯ ತಿಷ್ಠತಿ ॥ ೧೪ ॥

ಪಡೆಯುತ್ತಾನೆ. ಬ್ರಾಹ್ಮಣಶ್ರೇಷ್ಠರೇ, ಅವನು ಹತ್ತುಸಾವಿರ ವರ್ಷಗಳವರೆಗೆ ನಾನೂರ ಹಸ್ತಪರಿಮಿತಿಯುಳ್ಳ ವರುಣನ ದೇಶದಲ್ಲಿ ವಾಸಿಸುವನು.

೧೦-೧೧. ಅಲ್ಲಿಯೂ ಸಹ ಬೇರೆ ಬೇರೆ ಪ್ರದೇಶಗಳಲ್ಲಿ ಪುಣ್ಯಾತಿಶಯಗಳನ್ನು ಹೊಂದುವನು. ಗೋವುಗಳು ಸಂಚರಿಸುವ ಪ್ರದೇಶದಲ್ಲಿ ಸರೋವರವನ್ನು ನಿರ್ಮಿಸಿದವನು ಗೋಲೋಕವನ್ನು ಹೊಂದುವನು ದಾರಿಯಲ್ಲಿ ಕೆರೆಯನ್ನು ತೋಡಿಸಿದವನು ಇಂದ್ರಲೋಕಕ್ಕೆ ಹೋಗಿ ಸೇರುವನು. ಮರುಭೂಮಿಯಲ್ಲಿ ನೀರಿನಿಂದ ತುಂಬಿದ ಕೆರೆಯನ್ನು ತೋಡಿಸಿದವನು ಮರಣಾನಂತರ, ಸೂರ್ಯಪ್ರಭೆಯಂತೆ ಹೊಳೆಯುತ್ತಿರುವ ವಿಮಾನದಿಂದ ಬ್ರಹ್ಮಲೋಕವನ್ನು ಸೇರುತ್ತಾನೆ

೧೨-೧೫. ಯಾವನು ತೋಡಿಸಿರುವ ಭಾವಿಯಲ್ಲಿ ಮಳೆಗಾಲದಲ್ಲಿಯೂ ನೀರು ಇರುತ್ತದೆಯೋ, ಅವನಿಗೆ ಅಗ್ನಿಷ್ಟೋಮಯಾಗದ ಫಲವು ಬರುವುದೆಂದು ಹೇಳಲ್ಪಟ್ಟಿದೆ. ಶರತ್ಕಾಲದಲ್ಲಿ ನೀರಿರುವುದಾದರೆ ದ್ವಾದಶಾಹವೆಂಬ ಯಾಗದ ಫಲವನ್ನು ಹೊಂದುವನು. ಹೇಮಂತಋತುವಿನಲ್ಲಿಯೂ ನೀರಿದ್ದರೆ ಆತನಿಗೆ

ವಾಜಪೇಯಫಲಂ ತಸ್ಯ ವಸಂತೇ ಯತ್ರ ಚ ದ್ವಿಜಾಃ ।
ಅಶ್ವಮೇಧಫಲಂ ತಸ್ಯ ನಿದಾಘೇ ಯಸ್ಯ ತಿಷ್ಠತಿ ॥ ೧೫ ॥

ಸಸ್ಯಾನಾಂ ಸೇಚನಾರ್ಥಾಯ ನದೀವಾಹೇ ತಥಾ ಕೃತೇ ।
ಅನ್ನದಃ ಪ್ರಾಣದಶ್ಚೈವ ತ್ರಾಣದಶ್ಚ ತಥಾ ಭವೇತ್ ॥ ೧೬ ॥

ಭಗೀರಥಸ್ಯ ಲೋಕಾಂಸ್ತಾನ್ಸಮವಾಪ್ನೋತ್ಯಸಂಶಯಂ ।
ಪಾನೀಯಶೋಧನಂ ಕೃತ್ವಾ ಪ್ರದೇಶೇ ದೇವನಿರ್ಮಿತೇ ॥ ೧೭ ॥

ಪುರುಷಃ ಫಲಮಾಪ್ನೋತಿ ದಶಗೋದಾನಜಂ ದ್ವಿಜಾಃ ।
ದಾನಪಾಷಾಣರಹಿತಂ ಸುಖಸೇವ್ಯಂ ಜಲಾಶಯಂ ॥ ೧೮ ॥

ಪುರಾಣಂ ಮಾನವಃ ಕೃತ್ವಾ ನಾಕಲೋಕೇ ಮಹೀಯತೇ ।
ಪ್ರಣಾಲಕಾನಾಂ ಕರಣಾತ್ತೃಪ್ತಿಮಾಪ್ನೋತ್ಯನುತ್ತಮಾಂ ॥ ೧೯ ॥

ಮಹತ್ಪುಣ್ಯಮವಾಪ್ನೋತಿ ತಥಾ ಕೃತ್ವಾಮಲಂ ಜಲಂ ।
ತೃಷ್ಣಾಪನೋದನಂ ಕೃತ್ವಾ ಚೈಕಸ್ಯಾಪೀಹ ದೇಹಿನಃ ॥ ೨೦ ॥

ಗೋಸವಯಾಗದಫಲವೂ, ಶಿಶಿರಋತುವಿನಲ್ಲಿ ನೀರಿರುವ ಕೆರೆಯನ್ನು ತೋಡಿಸಿದರೆ ವಾಜಪೇಯಯಾಗದಫಲವೂ, ಬೇಸಿಗೆಯಲ್ಲಿ ನೀರಿರುವುದಾದರೆ ಅಶ್ವಮೇಧಯಾಗದ ಫಲವೂ ಆತನಿಗೆ ಹೇಳಿದೆ.

೧೬-೧೯. ಪೈರು ಮುಂತಾದವುಗಳಿಗೋಸ್ಕರ ಕಾಲುವೆಗಳನ್ನು ನಿರ್ಮಾಣ ಮಾಡಿಸಿದರೆ, ಆಗ ಅವನು ಅನ್ನದಾತೃವೂ, ಪ್ರಾಣದಾತನೂ, ಬಲದಾನಿಯೂ ಆಗುವನು. ಮರಣಾನಂತರ ನಿಜವಾಗಿಯೂ ಭಗೀರಥನ ಪುಣ್ಯಲೋಕವನ್ನು ಹೊಂದುವನು. ದೇವತೆಗಳಿಂದ ನಿರ್ಮಿಸಲ್ಪಟ್ಟ ಕೆರೆ ಮುಂತಾದವುಗಳಲ್ಲಿ ಕೊಳಕಾದ ನೀರನ್ನು ಯಾರು ಶುದ್ಧಿಗೊಳಿಸುವರೋ ಅಂಥವರು ಹತ್ತುಗೋದಾನ ಮಾಡಿದ ಫಲವನ್ನು ಪಡೆಯುವರು. ಹಳೆಯ ಜಲಾಶಯಗಳಿಗೆ ಮೆಟ್ಟಿಲುಗಳನ್ನು ಕಟ್ಟಿಸಿ ಸುಖವಾಗಿ ಪ್ರವೇಶಿಸುವಂತೆ ಮಾಡಿದರೆ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುವನು. ಕಾಲುವೆಗಳನ್ನು ತೋಡಿಸಿದರೆ ಅತ್ಯಂತ ಸುಖವನ್ನು ಹೊಂದುವನು.

೨೦-೨೧. ನೀರನ್ನು ಶುದ್ಧಿಗೊಳಿಸುತ್ತಾನೆಯೋ ಅವನೂ ಪುಣ್ಯಶಾಲಿಯಾಗುತ್ತಾನೆ. ಒಬ್ಬನಿಗಾದರೂ ಬಾಯಾರಿಕೆಯನ್ನು ಯಾವನು ಹೋಗಲಾಡಿಸುವನೋ ಆತನು ಅಧಿಕಪುಣ್ಯವನ್ನು ಗಳಿಸಿ ಸ್ವರ್ಗದಲ್ಲಿ ಸುಖಿಸುವನು. ಬುದ್ಧಿವಂತನಾದವನು

ಮಹತ್ಫಲಮವಾಪ್ನೋತಿ ನಾಕಲೋಕೇ ಚ ಮೋದತೇ ।
ಸ್ವಬಾಹುಖಾತಂ ಯಃ ಕುರ್ಯಾತ್ತಡಾಗಂ ಮತಿಮಾನ್ನರಃ ॥ ೨೧ ॥
ಸಲ್ಭಾತ್ಫಲಮವಾಪ್ನೋತಿ ರಾಜಸೂಯಾಶ್ವಮೇಧಯೋಃ ।
ನದೀಸ್ನಾನಮವಾಪ್ನೋತಿ ಸ್ನಾನಸೇತುರ್ಜಲಾಶಯೇ ॥ ೨೨ ॥
ಬಹುಖಾತೇ ತತಃ (ನರಃ) ಸ್ನಾತೋ ಗಂಗಾಸ್ನಾನಮವಾಪ್ನುಯಾತ್ ।
ಸರಸ್ತು ಪುಣ್ಯಂ ಯಃ ಕುರ್ಯಾತ್ಕಿಂಚಿತ್ತಸ್ಯ ಜಲಾಶಯೇ ।
ಪುಣ್ಯಾಂಶಭಾಗೀ ಭವತಿ ಯಸ್ಯ ತದ್ಧಿ ಜಲಾಶಯಂ ॥ ೨೩ ॥

ಪ್ರಾಪ್ನೋತಿ ತೃಪ್ತಿಂ ಪರಮಾಂ ಮನುಷ್ಯೋ
ಲೋಕಾಂಸ್ತಥಾಗ್ರ್ಯಾನ್ಸಲಿಲಾಧಿಪಸ್ಯ ।
ಜಲಾಶಯೇಽಲ್ಪೇಽಪಿ ಕೃತೇ ದ್ವಿಜೇಂದ್ರಾ-
ಸ್ತಸ್ಮಾತ್ತು ಕಾರ್ಯಂ ಸಲಿಲಂ ನೃಲೋಕೇ ॥ ೨೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಜಲಾಶಯ
ನಿರ್ಮಾಣೋ ನಾಮಷಣ್ಣವತ್ಯಧಿಕದ್ವಿಶತತಮೋಽಧ್ಯಾಯಃ

ತನ್ನ ತೋಳಿನ ಸಾಮರ್ಥ್ಯದಿಂದ ಕೆರೆಯನ್ನು ನಿರ್ಮಿಸಿದರೆ ಅವನಿಗೆ ರಾಜಸೂಯಾಶ್ವಮೇಧಯಾಗಗಳ ನಾನೂರರಷ್ಟು ಫಲವು ಲಭಿಸುವುದು. ಕೆರೆಯಲ್ಲಿ ಸ್ನಾನಕ್ಕೆ ಯೋಗ್ಯವಾದ ಸ್ನಾನಘಟ್ಟವನ್ನು ಮಾಡಿಸಿದರೆ ಸಕಲ ಪುಣ್ಯನದಿಗಳಲ್ಲಿ ಸ್ನಾನ ಮಾಡಿದ ಫಲವು ಪ್ರಾಪ್ತವಾಗುವುದು. ಅನೇಕ ಜಲಾಶಯಗಳಲ್ಲಿ ಸ್ನಾನಮಾಡಿದವನು ಗಂಗಾಸ್ನಾನದ ಫಲವನ್ನು ಪಡೆಯುವನು ಚಿಕ್ಕಸರೋವರವನ್ನು ಮಾಡಿದವನೂ ಸಹ ಅದಕ್ಕನುಗುಣವಾದ ಪುಣ್ಯಭಾಗವನ್ನು ಪಡೆಯುತ್ತಾನೆ. ಮತ್ತು ಸ್ನಾನ ಮಾಡಿದವನ ಪುಣ್ಯಾಂಶಕ್ಕೂ ಭಾಗಿಯಾಗುತ್ತಾನೆ.

೨೪. ಎಲೈ ಬ್ರಾಹ್ಮಣೋತ್ತಮರೇ, ಈ ರೀತಿ ಭಾವಿ, ಕೆರೆ ಮುಂತಾದವುಗಳನ್ನು ಮಾಡಿದವನು ಅಧಿಕಸುಖವನ್ನು ಹೊಂದುವುದಲ್ಲದೆ ವರುಣನ ಶ್ರೇಷ್ಠ ಲೋಕಗಳನ್ನೂ ಪಡೆಯುತ್ತಾನೆ ಆದುದರಿಂದ ಮಾನುಷಲೋಕದಲ್ಲಿ ನೀರಿನ ವಸತಿಯನ್ನು ಸರ್ವರೂ ಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಜಲಾಶಯನಿರ್ಮಾಣವೆಂಬ ಇನ್ನೂರ ತೊಂಭತ್ತಾರನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತನವತ್ಯಧಿಕದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ವೃಕ್ಷಸಂರೋಪಣಾನ್ಮರ್ತ್ಯೋ ಮಹತ್ಫಲಮುಪಾಶ್ನುತೇ ।
ಗುಲ್ಮವಲ್ಲೀಲತಾನಾಂ ಚ ರೋಪಣಾತ್ಪುರುಷೋ ದ್ವಿಜಾಃ ॥ ೧ ॥

ಪ್ರತ್ಯೇಕಂ ಫಲಮಾಪ್ನೋತಿ ಗೋದಾನೇ ಯತ್ಪ್ರಕೀರ್ತಿತಂ ।
ಅಗ್ನಿಷ್ಟೋಮಮವಾಪ್ನೋ ಪುಷ್ಪವೃಕ್ಷಸ್ಯ ರೋಪಣಾತ್ ॥ ೨ ॥

ಪೌಂಡರೀಕಮವಾಪ್ನೋತಿ ಫಲವೃಕ್ಷಸ್ಯ ರೋಪಣಾತ್ ।
ಆರಾಮಮಪಿ ಯಃ ಕುರ್ಯಾತ್ಪರೇಷಾಂ ನಾಮಕಾರಣಾತ್ ॥ ೩ ॥

ಇನ್ನೂರ ತೊಂಭತ್ತೇಳನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ:—ಎಲೈ ಬ್ರಾಹ್ಮಣರಿರಾ, ಮರವನ್ನು ನೆಡುವುದರಿಂದ ಮನುಷ್ಯನು ಅಧಿಕಫಲವನ್ನು ಪಡೆಯುತ್ತಾನೆ. ಪೊದೆಗಳನ್ನೂ, ಲತೆ ಬಳ್ಳಿಗಳನ್ನೂ ನೆಡುವುದರಿಂದ ಗೋದಾನದಲ್ಲಿ ಹೇಳಲ್ಪಟ್ಟ ಆಯಾ ಫಲಗಳನ್ನು ಹೊಂದುತ್ತಾನೆ. ಹೂಬಿಡುವ ಮರವನ್ನು ನೆಡುವುದರಿಂದ ಅಗ್ನಿಷ್ಟೋಮಫಲವೂ, ಹಣ್ಣಿನ ಮರದಿಂದ ಪೌಂಡರೀಕಯಾಗದ ಫಲವೂ ಲಭಿಸುವುವು. ಇನ್ನೊಬ್ಬರ ಹೆಸರಿನಲ್ಲಿ ಹೂವಿನ ತೋಟವನ್ನು ಮಾಡಿದವನೂ, ಹಾಗೆಯೇ ತರಕಾರಿ ತೋಟ

ತಥಾ ಹರಿತಕಾರ್ಥಂ ಚ ಸೋಽಗ್ನಿಷ್ಟೋಮಫಲಂ ಲಭೇತ್ ।
ಪುಷ್ಪಾರಾಮಂ ನರಃ ಕೃತ್ವಾ ದೇವತಾರ್ಥಂ ಮನೋಹರಂ ॥ ೪ ॥

ದೇವೋದ್ಯಾನೇಷು ಸರ್ವೇಷು ನಂದನಾದಿಷು ಮೋದತೇ ।
ಯಥಾಕಾಮಂ ವಿಹಾರೀ ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೫ ॥

ಫಲಾರಾಮಂ ತತಃ ಕೃತ್ವಾ ವಿಂದತ್ಯಭ್ಯಧಿಕಂ ಫಲಂ ।
ಕೃತ್ವಾ ದ್ರುಮಶತಾರಾಮಂ ಸೋಽಶ್ವಮೇಧಫಲಂ ಲಭೇತ್ ॥ ೬ ॥

ಫಲಂ ದಶಶತಾರಾಮೇ ಲಕ್ಷಾರಾಮೇ ಚ ಕಲ್ಪಯೇತ್ ।
ಚಂಪಕಂ ಮಲ್ಲಿಕಾಂ ಜಾತೀಂ ಶ್ರೇಷ್ಠಾಃ ಪುಷ್ಪಕರಾ ಮತಾಃ ॥ ೭ ॥

ಅನ್ಯೋಽಧಿಕಮವಾಪ್ನೋತಿ ದತ್ತ್ವೈತಾನ್ನಾತ್ರ ಸಂಶಯಃ ।
ಗುಲ್ಮೇಷು ಕಥಿತೌ ಶ್ರೇಷ್ಠೌ ತಥೋಭೌ ಭವ್ಯದಾಡಿಮೌ ॥ ೮ ॥

ವನ್ನು ಮಾಡಿದವನೂ ಅಗ್ನಿಷ್ಟೋಮದ ಫಲವನ್ನು ಹೊಂದುವರು. ದೇವತಾಪೂಜೆಗೋಸ್ಕರ ಮನೋಹರವಾದ ಹೂದೋಟವನ್ನು ಮಾಡುವವನು ಕೊನೆಗೆ ನಂದನಾದಿ ದೇವತೋದ್ಯಾನಗಳಲ್ಲಿ ವಿಹರಿಸುವುದಲ್ಲದೆ, ಅಲ್ಲಿ ಅವನು ಸ್ವೇಚ್ಛಾನುಸಾರಿಯಾಗಿ ವಿಹರಿಸುತ್ತಾ ಸುಖಪಡುವನೆಂಬುದರಲ್ಲಿ ಸಂದೇಹವಿಲ್ಲ

೬-೭. ಹಣ್ಣಿನ ತೋಟವನ್ನು ಮಾಡುವುದರಿಂದ ಹೆಚ್ಚು ಫಲವನ್ನು ಹೊಂದುತ್ತಾನೆ. ನೂರು ವೃಕ್ಷಗಳಿಂದ ಕೂಡಿದ ತೋಟಮಾಡುವುದರಿಂದ ಅಶ್ವಮೇಧ ಯಾಗದ ಫಲವನ್ನು ಹೊಂದುತ್ತಾನೆ. ಹೀಗೆಯೇ ಸಾವಿರ ಮತ್ತು ಲಕ್ಷ ಸಂಖ್ಯೆಗಳುಳ್ಳ ತೋಟನಿರ್ಮಾಣದಿಂದ ಅದರ ಹತ್ತು ಮತ್ತು ಅಧಿಕಫಲವನ್ನು ಹೊಂದುತ್ತಾನೆ. ಸಂಪಿಗೆ, ಮಲ್ಲಿಗೆ, ಜಾಜೀ ಮುಂತಾದವುಗಳಿಂದ ಕೂಡಿರುವ ಉದ್ಯಾನವು ಉತ್ತಮವಾದುದು. ಇಂತಹ ಶ್ರೇಷ್ಠ ಗಿಡಮರಗಳನ್ನು ತೋಟಗಳಲ್ಲಿ ನೆಡಿಸಿ ದಾನ ಮಾಡುವುದರಿಂದಲೂ ಮಹತ್ಫಲವನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

೮-೧೦. ಮುಳ್ಳುಪೊದೆಗಳಿಂದ ಕೂಡಿದ ಫಲವೃಕ್ಷಗಳಲ್ಲಿ ಭವ್ಯ ಮತ್ತು ದಾಡಿಂಬವೇ ಶ್ರೇಷ್ಠವಾದವುಗಳು. ಆಲ ಮತ್ತು ಅಶ್ವತ್ಥ ಇವನ್ನು ಮಾರ್ಗದಲ್ಲಿ ಬೆಳೆಸುವುದು ಉತ್ತಮ. ನಾರಂಗದ (ಕಿತ್ತಳೇಹಣ್ಣು) ದಾನದಿಂದ

ಪಥಿ ಶ್ರೇಷ್ಠತಮೌ ವಿಪ್ರ ವಟಾಶ್ವತ್ಥೌ ಪ್ರಕೀರ್ತಿತೌ ।
ನಾರಂಗದಾನಾದ್ಭವತಿ ನರೋ ರೂಪಸಮನ್ವಿತಃ ॥ ೯ ॥

ಬೀಜಪೂರಕದಾನೇನ ಸೌಭಾಗ್ಯಂ ಮಹದಾಪ್ನುಯಾತ್ ।
ದತ್ವಾ ಪಾಲೇವತಾಮ್ರೌ ತು ತೃಪ್ತಿಮಾಪ್ನೋತ್ಯನುತ್ತಮಾಂ ॥ ೧೦ ॥

ಆಮ್ರಾಕ್ಷೋಟಪ್ರದಾನೇನ ಸರ್ವಕಾಮಾನವಾಪ್ನುಯಾತ್ ।
ಲಕ್ಷಾರಾಮಂ ತು ಯಃ ಕುರ್ಯಾದಾಮ್ರಾಣಾಮಿಹ ಮಾನವಃ ॥ ೧೧ ॥

ದೇವೋದ್ಯಾನೇಷು ರಮ್ಯೇಷು ಕ್ರೀಡತ್ಯಮರಸನ್ನಿಭಃ ।
ಅಪ್ಸರೋಭಿಃ ಪರಿವೃತೋ ನ ಚ ತಸ್ಮಾನ್ನಿವರ್ತತೇ ॥ ೧೨ ॥

ಏಕೋಽಪಿ ರೋಪಿತೋ ವೃಕ್ಷಃ ಪುತ್ರಕಾರ್ಯಕರೋ ಭವೇತ್ ।
ದೇವಾನ್ಪ್ರಸೂನೈಃ ಪ್ರೀಣಾತಿ ಛಾಯಯಾ ಚಾತಿಥೀಂಸ್ತಥಾ ॥ ೧೩ ॥

ಫಲೈರ್ಮನುಷ್ಯಾನ್ಪ್ರೀಣಾತಿ ನಾರಕ್ಯಂ ನಾಸ್ತಿ ಪಾದಪೇ ।
ಅಪಿ ಪುಷ್ಪಫಲೈರ್ಹೀನೇ ದ್ರುಮೇ ಪಾಂಥಸ್ಯ ವಿಶ್ರಮಃ ॥ ೧೪ ॥

ಮನುಷ್ಯನು ರೂಪವಂತನಾಗುವನು ಕಿತ್ತಳೆಹಣ್ಣಿನ ದಾನದಿಂದ ಹೆಚ್ಚು ಸೌಂದರ್ಯವನ್ನು ಪಡೆಯುವನು. ಪಾಲೇವತ ಮತ್ತು ಮಾವು ಇವುಗಳ ದಾನದಿಂದ ಆನಂದವನ್ನು ಹೊಂದುವನು.

೧೧-೧೨. ಮಾವು ಮತ್ತು ಬೆಟ್ಟನಗೋನು ಮರಗಳನ್ನು ನೆಡುವುದರಿಂದ ಮತ್ತು ದಾನಮಾಡುವುದರಿಂದ ಸಕಲೇಚ್ಛೆಗಳನ್ನೂ ಪಡೆಯುತ್ತಾನೆ. ಈ ಲೋಕದಲ್ಲಿ ಯಾವಾತನು ಲಕ್ಷಸಂಖ್ಯಾಕವಾದ ಮಾವಿನ ತೋಟಗಳನ್ನು ಮಾಡುತ್ತಾನೋ ಆತನು ಸ್ವರ್ಗದಲ್ಲಿ ದೇವತಾಸಮಾನನಾಗಿ ಸುಂದರವಾದ ಉದ್ಯಾನಗಳಲ್ಲಿ ಅಪ್ಸರ ಸ್ತ್ರೀಯರಿಂದೊಡಗೂಡಿ ವಿಹರಿಸುವನು ಮತ್ತೆಲ್ಲಿಗೂ ಹೋಗುವುದಿಲ್ಲ.

೧೩-೧೪. ಒಂದು ಮರವನ್ನು ನೆಡುವುದರಿಂದ, ಪುತ್ರನಿಂದ ಆಗುವ ಕಾರ್ಯವು ನೆರವೇರಿದಂತಾಗುವುದು. ಅದು ಹೇಗೆಂದರೆ ಮರವು ಹೂವಿನಿಂದ ದೇವತೆಗಳನ್ನೂ, ಹಣ್ಣುಗಳಿಂದ ಮನುಷ್ಯರನ್ನೂ, ಸಂತೋಷಗೊಳಿಸುವುದು ಒಂದು ಒಳ್ಳೇ ಮರವಿದ್ದಲ್ಲಿ ದುಃಖವೆಂಬುದೇ ಇರುವುದಿಲ್ಲ. ಒಂದು ವೇಳೆ ಪುಷ್ಪಫಲವಿಲ್ಲ

ಛಾಯಾಯಾಂ ಸ್ತೋಕಕಾಲೇನ ಬಹುಪುಣ್ಯಂ ಪ್ರಯಚ್ಛತಿ ।
ದೇವೇ ವರ್ಷತಿ ಯದ್ವೃಕ್ಷಾತ್ಪತ್ರೇಭ್ಯಃ ಪ್ರವತೇ ಜಲಂ ॥ ೧೫ ॥

ತೇನ ತೃಪ್ತಿಮವಾಪ್ನೋತಿ ಪರಲೋಕಗತೋ ಧ್ರುವಂ ।
ತೇನ ನಾಕಮವಾಪ್ನೋತಿ ವೃಕ್ಷರೋಪಯಿತಾ ನರಃ ॥ ೧೬ ॥

ಸೇಚನಾದಪಿ ವೃಕ್ಷಸ್ಯ ರೋಪಿತಸ್ಯ ಪರೇಣ ತು ।
ಮಹತ್ಫಲಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೧೭ ॥

ವೃಕ್ಷಾಯುರ್ವೇದವಿಧಿನಾ ವ್ಯಾಧಿತಂ ತು ಯಥಾಕ್ರಮಂ ।
ನೀರುಜಂ ಮಾನವಃ ಕೃತ್ವಾ ಸ್ವರ್ಗಲೋಕಮವಾಪ್ನುಯಾತ್ ॥ ೧೮ ॥

ಶೀತವಾತಾತಪಕ್ಲೇಶಂ ತಥಾ ಚ್ಛೇದನಭೇದನೇ ।
ಸಹಂತೇ ಪರಮಂ ವೃಕ್ಷಾಸ್ತದ್ಧಿ ತೇಷಾಂ ಮಹತ್ತಪಃ ॥ ೧೯ ॥

ದಿದ್ದರೂ ಆ ಮರವು ಪ್ರಯಾಣಿಕನಿಗೆ ವಿಶ್ರಾಂತಿಸ್ಥಾನವಾಗುತ್ತದೆ. ಸ್ವಲ್ಪ ಕಾಲದಲ್ಲಿಯೇ ತನ್ನ ನೆರಳಿನಿಂದ ಉಪಕಾರಮಾಡಿ ಅಧಿಕಪುಣ್ಯವನ್ನು ಕೊಡುತ್ತದೆ. ಮಳೆಬೀಳುತ್ತಿರುವಾಗ ಯಾವ ಮರದ ಎಲೆಗಳಿಂದ ನೀರು ಕೆಳಗೆ ಸುರಿಯುತ್ತದೆಯೋ ಆದರಿಂದ ಆ ಮರನೆಟ್ಟವನು ಪರಲೋಕದಲ್ಲಿ ನಿಶ್ಚಯವಾಗಿಯೂ ತೃಪ್ತಿಯನ್ನು ಪಡೆಯುತ್ತಾನೆ. ವೃಕ್ಷವನ್ನು ಬೆಳೆಸಿದ ಅವನು ಸ್ವರ್ಗವನ್ನು ಹೊಂದುತ್ತಾನೆ.

೧೭-೧೮. ಇತರರಿಂದ ನೆಡಲ್ಪಟ್ಟ ಮರಕ್ಕೆ ಯಾರು ನೀರನ್ನಾದರೂ ಹಾಕುತ್ತಾರೋ ಅವರೂ ಸಹ ಅಧಿಕಫಲವನ್ನು ಪಡೆಯುವರು. ಈ ವಿಷಯವನ್ನು ಚರ್ಚಿಸಬೇಕಾಗಿಲ್ಲ. ಗಿಡಮರಗಳ ಆಯುರ್ವೇದ ಜ್ಞಾನದಿಂದ ರೋಗಿಗಳಾದ ಮರಗಳನ್ನು ಕ್ರಮವರಿತು ಗುಣಪಡಿಸುವವನು ಸ್ವರ್ಗಲೋಕವನ್ನು ಪಡೆಯುವನು.

೧೯-೨೦. ಶೀತ, ಗಾಳಿ, ಬಿಸಿಲು ಇವುಗಳ ಕಷ್ಟವನ್ನೂ, ಹಾಗೆಯೇ ಕಡಿಯುವುದು, ಸೀಳುವುದು ಇವುಗಳನ್ನೂ ಮರಗಳು ಸಹಿಸುತ್ತವೆ. ಇದು ಅವುಗಳ

ಪತ್ರಪುಷ್ಪಫಲೈರ್ನಿತ್ಯಂ ಛಾಯಯಾ ಚೈವ ಶಾಖಿನಃ
ಪರೇಷಾಮುಪಯುಜ್ಯಂತೇ ತದ್ಧಿ ತೇಷಾಂ ಮಹತ್ತಪಃ || ೨೦ ||

ತೇಷಾಂ ಸದಾ ದಯಾ ಕಾರ್ಯಾ ಭಕ್ತಿಃ ಕಾರ್ಯಾ ತಥೈವ ಚ |
ಯಸ್ತೇಷಾಂ ಭಕ್ತಿಮಾನ್ನಿತ್ಯಂ ತಸ್ಯ ಸಾ ವನದೇವತಾ || ೨೧ ||

ತೋಷಮಾಯಾತಿ ಪರಮಂ ತಥಾ ಕಾಮಾನ್ಪ್ರಯಚ್ಛತಿ |
ವಾನಸ್ಪತ್ಯಂ ತಥಾ ಲೋಕಂ ದೇಹಭೇದೇ ಸಮಶ್ನುತೇ || ೨೨ ||

ವಾನಸ್ಪತ್ಯೇ ಶುಭೇ ಲೋಕೇ ಸರ್ವೇಷಾಮೇವ ಶಾಖಿನಾಂ |
ಶರೀರವತ್ಪ್ರತಿಷ್ಠಂತಿ ದೇವತಾ ನಾತ್ರ ಸಂಶಯಃ || ೨೩ ||

ಯಾಃ ಪ್ರೋಕ್ತಾಸ್ತ್ವಭಿಮಾನಿನ್ಯಃ ಪರಾಂ ಶೋಭಾಮುಪಾಸ್ಥಿತಾಃ |
ಯಾಮ್ಯಲೋಕೇ ತಥಾ ಲೋಕಂ ವಾನಸ್ಪತ್ಯಂ ಪ್ರಕೀರ್ತಿತಂ || ೨೪ ||

ಮಹತ್ತಾದ ತಪಸ್ಸು. ಮರಗಳು ತಮ್ಮ ಎಲೆ, ಹೂವು, ಹಣ್ಣುಗಳಿಂದಲೂ, ನೆರಳಿನಿಂದಲೂ ನಿತ್ಯವೂ ಇತರರಿಗೆ ಉಪಕಾರವನ್ನು ಮಾಡುತ್ತವೆ. ಇವೂ ಸಹ ಮರಗಳಿಗೆ ಮಹತ್ತರವಾದ ತಪಸ್ಸಾಗಿರುವುದು.

೨೧–೨೨. ಅವುಗಳ ವಿಷಯದಲ್ಲಿ ಯಾವಾಗಲೂ ದಯೆಯನ್ನೂ, ಭಕ್ತಿಯನ್ನೂ ಇಡಬೇಕು. ಯಾವಾತನು ಮರಗಳ ವಿಷಯದಲ್ಲಿ ಭಕ್ತಿವಂತನಾಗಿರುವನೋ ಅವನಲ್ಲಿ ಆ ವನದೇವತೆಯು ಪ್ರೀತಳಾಗುತ್ತಾಳೆ ಮತ್ತು ಅವನ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ. ಕೊನೆಗೆ ಅವನು ವನಸ್ಪತಿ ಸಂಬಂಧವಾದ ಲೋಕವನ್ನೂ ಹೊಂದುವನು.

೨೩–೨೪. ವನಸ್ಪತಿ ಸಂಬಂಧವಾದ, ಮಂಗಳಕರವಾದ ಆ ಲೋಕದಲ್ಲಿ ಎಲ್ಲಾ ಮರಗಳಿಗೂ ದೇವತೆಯಾದವುಗಳು ಶರೀರವನ್ನು ಧರಿಸುತ್ತವೆ. ಇದರಲ್ಲಿ ಸಂದೇಹವಿಲ್ಲ. ಯಾವ ಮರಕ್ಕೆ ಯಾವುದು ಅಭಿಮಾನದೇವತೆಯೋ ಅದು ಅಲ್ಲಿ ಬಹಳ ಪ್ರಕಾಶದಿಂದ ಶೋಭಿಸುತ್ತದೆ. ಯಮದೇವತಾಕವಾದ ಲೋಕದಲ್ಲಿಯೇ ವನಸ್ಪತಿಸಂಬಂಧವಾದ ಲೋಕವಿದೆಯೆಂದು ಹೇಳಿದೆ.

ಯಮಲೋಕಮುಪಾಸಂತೇ ಸರ್ವಾಸ್ತಾ ದ್ರುಮದೇವತಾಃ ।
ದ್ರುಮರೋಪಯಿತಾರಂ ಚ ಪರಲೋಕಮುಪಾಗತಂ ॥ ೨೫ ॥

ದಿವ್ಯೇನ ಗೀತನೃತ್ಯೇನ ರಮಯಂತ ಉಪಾಸತೇ ।
ರೋಪಿತಸ್ಯ ದ್ರುಮಸ್ಯೇಹ ಯಥಾ ಭವತಿ ದೇವತಾ ॥ ೨೬ ॥

ಯಾಮ್ಯೇ ತು ಫಲದಾ ಲೋಕೇ ತಥಾ ಲೋಕೇ ತು ವಾರುಣೇ ।
ದೇವತಾ ಸ್ಯಾನ್ಮಹಾಭಾಗಾಃ ಕೃತೇ ಪುಣ್ಯೇ ಜಲಾಶಯೇ ॥ ೨೭ ॥

ಕೃತೇ ಶಾಸ್ತ್ರೇ ತಥಾ ಸಮ್ಯಗ್ಬ್ರಹ್ಮಲೋಕೇ ತಥಾ ದ್ವಿಜಾಃ ।
ಕ್ಷಿಪ್ರಮೇವ ಮಹಾಭಾಗಾ ಜಾಯಂತೇ ಶಾಸ್ತ್ರದೇವತಾಃ ॥ ೨೮ ॥

ಶಾಸ್ತ್ರಂ ಜಲಾಶಯಂ ವೃಕ್ಷಂ ಸುರವೇಶ್ಮ ತಥೈವ ಚ ।
ಮೃತಸ್ಯಾಪಿ ಮನುಷ್ಯಸ್ಯ ಶರೀರಮಿಹ ಕೀರ್ತಿತಂ ॥ ೨೯ ॥

ಕೀರ್ತ್ಯತೇ ಯೇನ ಚಾನ್ಯೇನ ಮಾನವಃ ಸ್ವರ್ಗಮಾಪ್ನುಯಾತ್ ।
ತತ್ತತ್ಕಾರ್ಯಂ ಮನುಷ್ಯೇಣ ಸ್ವರ್ಗಮಕ್ಷಯ್ಯಮಿಚ್ಛತಾ ॥ ೩೦ ॥

೨೫–೨೭ ಎಲ್ಲಾ ಮರಗಳ ಅಭಿಮಾನದೇವತೆಗಳೂ ಯಮಲೋಕವನ್ನೇ ಹೊಂದಿರುತ್ತವೆ. ಮರಗಳನ್ನು ಬೆಳೆಸಿ ಮರಣಾನಂತರ ಪರಲೋಕವನ್ನು ಹೊಂದಿದ ಮನುಷ್ಯನನ್ನು ಉತ್ತಮವಾದ ಸಂಗೀತ ನರ್ತನಾದಿಗಳಿಂದ ಸಂತೋಷಪಡಿಸುತ್ತಾ ಸೇವಿಸುತ್ತವೆ. ತಾನು ಬೆಳೆಸಿದ ಮರಕ್ಕೆ ಯಾವದು ಅಭಿಮಾನದೇವತೆಯೋ ಅದು ಯಮಲೋಕದಲ್ಲಿ ಫಲದಾಯಕವಾಗುತ್ತದೆ. ಪೂಜ್ಯರೇ ಮರಗಿಡಗಳಿಗೋಸ್ಕರ ನೀರಿನವಸತಿಯನ್ನು ಕಲ್ಪಿಸಿದರೆ ವರುಣಲೋಕವಲ್ಲಿ ಆಯಾಯ ಅಭಿಮಾನ ದೇವತೆಯು ಫಲದಾಯಕವಾಗುತ್ತದೆ.

೨೮–೩೦. ಮರಗಿಡಗಳ ಶಾಸ್ತ್ರವನ್ನು ರಚಿಸಿದರೆ, ಅಂತಹವರು ಬ್ರಹ್ಮ ಲೋಕದಲ್ಲಿ ಶಾಸ್ತ್ರದೇವತೆಗಳಾಗಿ ವಿರಾಜಿಸುತ್ತಾರೆ. ವನಸ್ಪತಿ ಶಾಸ್ತ್ರರಚನೆಯೂ, ನೀರಿನ ವಸತಿಯೂ, ಮರವೂ, ದೇವಾಲಯವೂ, ಮನುಷ್ಯನ ಮರಣಾನಂತರ ಶರೀರವೆಂದು ಹೇಳಲ್ಪಟ್ಟಿದೆ. ಹೀಗೆಯೇ ಇನ್ನೂ ಯಾವುದುಹಿತಕರವೆಂದು ಹೇಳ ಲ್ಪಟ್ಟಿದೆಯೋ ಅವೆಲ್ಲವನ್ನೂ ಸ್ವರ್ಗವನ್ನು ಬಯಸುವ ಮನುಷ್ಯನು ಮಾಡಿದರೆ ಸ್ವರ್ಗಸುಖವನ್ನು ಹೊಂದುವನು.

ಪುತ್ರಾಃ ಪ್ರದಿಷ್ಟಾಃ ಪುರುಷಸ್ಯ ವೃಕ್ಷಾಃ
ಸ್ವಯಂಕೃತಾಸ್ತೇಷು ನರೇಣ ಭಾವ್ಯಂ ।
ಸ್ನೇಹೇನ ನಿತ್ಯಂ ಪುರುಷಂ ಮೃತಂತೇ
ಕಾಮೈಸ್ತು ದಿವ್ಯೈಃ ಪರಿತರ್ಪಯಂತಿ ॥ ೩೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಸ್ತುತಿ ಹಂಸಗೀತಾಸು ವೃಕ್ಷಾರೋಪಣ
ಫಲನಿರೂಪಣೋ ನಾಮ ಸಪ್ತನವತ್ಯಧಿಕ
ದ್ವಿಶತತಮೋಽಧ್ಯಾಯಃ

೩೧ ಮನುಷ್ಯನಿಗೆ ತಾನು ನೆಟ್ಟಿರುವ ಮರಗಿಡಗಳೇ ಮಕ್ಕಳೆಂದು ಹೇಳಿದೆ. ಅವುಗಳನ್ನು ಮನುಷ್ಯನು ತನ್ನದೆಂದೇ ಭಾವಿಸಬೇಕು. ಆ ಮರಗಿಡಗಳು ಕೊನೆಗೆ ಸ್ನೇಹದಿಂದ ಅವನಿಗೆ ಉತ್ತಮವಾದ ಕಾಮಭೋಗಗಳಿಂದ ತೃಪ್ತಿಯನ್ನುಂಟು ಮಾಡುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದ ಹಂಸಗೀತೆಯಲ್ಲಿ ವೃಕ್ಷಾರೋಪಣಫಲನಿರೂಪಣವೆಂಬ
ಇನ್ನೂರ ತೊಂಭತ್ತೇಳನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಷ್ಟನವತ್ಯುತ್ತರದ್ವಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಜಲೇನ ನಾಶಮಾಯಾತಿ ಯತ್ರ ಸಮ್ಯಗ್ದ್ವಿಜೋತ್ತಮಾಃ ।
ಜಲೌಘವಾರಣಾರ್ಥಾಯ ತತ್ರ ಸೇತುಂ ಕರೋತಿ ಯಃ || ೧ ||

ಭೂಮಿದಾನೇ ತು ಯೇ ಲೋಕಾಃ ಸ ತಾನ್ಪ್ರಾಪ್ನೋತಿ ಶಾಶ್ವತಾನ್ ।
ಮಾರ್ಗಸೇತುಂ ಸುಖಂ ಕೃತ್ವಾ ವಹ್ನಿಷ್ಟೋಮಫಲಂ ಲಭೇತ್ || ೨ ||

ಜಲಪ್ರತರಣೇ ಸೇತುಂ ಯಃ ಕರೋತಿ ನರೋತ್ತಮಃ ।
ಸ ತೀರ್ಣಃ ಸುಖದುಃಖೇಭ್ಯಃ ಸ್ವರ್ಗಲೋಕಂ ಪ್ರಪದ್ಯತೇ || ೩ ||

ಇನ್ನೂರ ತೊಂಭತ್ತೆಂಟನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ:—ಎಲೈ ಬ್ರಾಹ್ಮಶ್ರೇಷ್ಠರೇ, ಎಲ್ಲಿ ನೀರಿನಿಂದ ಸಂಪೂರ್ಣ ಹಾನಿಯುಂಟಾಗುತ್ತದೆಯೋ ಅಲ್ಲಿ ಆ ನೀರಿನ ಪ್ರವಾಹವನ್ನು ತಡೆಯುವುದಕ್ಕೋಸ್ಕರ ಸೇತುವೆಯನ್ನು ಯಾರು ನಿರ್ಮಿಸುತ್ತಾರೋ ಅವರು ಭೂಮಿದಾನದಿಂದ ಯಾವ ಲೋಕವು ಪ್ರಾಪ್ತವಾಗುವುದೋ ಅವುಗಳನ್ನು ಪಡೆಯುವರು. ದಾರಿಯಲ್ಲಿ ಸುಖವಾಗಿ ತಿರುಗಾಡುವುದಕ್ಕೆ ಸೇತುವೆಯನ್ನು ಮಾಡಿಸಿದರೆ ಅಗ್ನಿಷ್ಟೋಮಯಾಗದ ಫಲವು ದೊರೆಯುವುದು.

೩-೪. ನೀರನ್ನು (ಪ್ರವಾಹವನ್ನು) ದಾಟುವುದಕ್ಕೋಸ್ಕರ ಯಾವ ಮಾನವೋತ್ತಮನು ಸೇತುವೆಯನ್ನು ಕಟ್ಟಿಸುವನೋ ಆತನು ಸುಖದುಃಖಗಳನ್ನು

ಪ್ರಪಾಂ ಪಥಿ ತಥಾ ಕೃತ್ವಾ ನಾಕಲೋಕೇ ಮಹೀಯತೇ ।
ಪ್ರಪಾಸ್ಥಾನಂ ಶುಭಂ ಕೃತ್ವಾ ಸ್ಥಾನಮಾಪ್ನೋತಿ ಶಾಶ್ವತಂ ॥ ೪ ॥

ತಸ್ಯ ಸ್ಥಾನಾತ್ತಥಾ ತ್ಯಾಗಾತ್ಫಲವೃದ್ಧಿಃ ಪ್ರಕೀರ್ತಿತಾ ।
ತಸ್ಯೋಪಲೇಪನಂ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೫ ॥

ದತ್ವಾ ರಜ್ಜುಮುಪಾಂ ಸ್ಥಾನೇ ಗೋದೋ ಭವತಿ ಮಾನವಃ ।
ವಾರಿಧಾನೀಂ ತಥಾ ದತ್ವಾ ತದೇವ ಫಲಮಾಪ್ನುಯಾತ್ ॥ ೬ ॥

ಕುಂಭಪ್ರದಾನಾದ್ಭವತಿ ಸದಾ ಪೂರ್ಣಮನೋರಥಃ ।
ಪ್ರಪಾಯಾಂ ಚ ತಥಾ ಕೃತ್ವಾ ಪುರುಷಂ ಪರಿಚಾರಕಂ ॥ ೭ ॥

ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ವರ್ಧಮಾನಾನಿ ಯೋ ದದ್ಯಾತ್ಪ್ರಪಾಯಾಂ ದ್ವಿಜಸತ್ತಮಾಃ ॥ ೮ ॥

ತೊರೆದವನಾಗಿ ಸ್ವರ್ಗಲೋಕವನ್ನು ಹೊಂದುತ್ತಾನೆ. ಹಾಗೆಯೇ ದಾರಿಯಲ್ಲಿ ಅರವಟ್ಟಿಗೆಯನ್ನು ಇಟ್ಟವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಆ ಅರವಟ್ಟಿಗೆಯ ನೆಲವನ್ನು ಚೆನ್ನಾಗಿಟ್ಟಲ್ಲಿ ಶಾಶ್ವತಪದವಿಯನ್ನು ಹೊಂದುತ್ತಾನೆ. ಅರವಟ್ಟಿಗೋಸ್ಕರ ಸ್ಥಳವನ್ನು ದಾನಮಾಡುವುದರಿಂದಲೂ ಉತ್ತಮಫಲವು ಬರುವುದೆಂದು ಹೇಳಲ್ಪಟ್ಟಿದೆ. ಆ ಸ್ಥಳವನ್ನು ಗುಡಿಸಿ ಸಾರಿಸಿದರೆ ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ.

೬-೯. ಮನುಜನು ನೀರಿರುವ ಸ್ಥಳದಲ್ಲಿ ನೀರನ್ನು ಎತ್ತುವ ಸೌಕರ್ಯಕ್ಕಾಗಿ ಸೇದುವ ಹಗ್ಗವನ್ನು ದಾನಮಾಡುವುದರಿಂದ ಗೋದಾನಫಲವನ್ನು ಹೊಂದುತ್ತಾನೆ. ನೀರಿನ ಹೂಜಿಯನ್ನು ದಾನಮಾಡಿದರೆ ಅದೇ ಫಲ ಸಿಗುತ್ತದೆ ಕೊಡವನ್ನು ದಾನಮಾಡುವುದರಿಂದ ಸಂಪೂರ್ಣಮನೋರಥವುಳ್ಳವನಾಗುತ್ತಾನೆ. ಹಾಗೆಯೇ ಅರವಟ್ಟಿಗೆಯಲ್ಲಿ ನೀರು ಕೊಡುವುದಕ್ಕೆ ಒಬ್ಬ ಪರಿಚಾರಕನನ್ನು ನೇಮಿಸುವುದರಿಂದ ಎಲ್ಲಾ ಇಷ್ಟಗಳನ್ನೂ ನೆರವೇರಿಸುವ ಯಜ್ಞದ ಫಲವನ್ನು ಅನುಭವಿಸುವನು ಬ್ರಾಹ್ಮಣೋತ್ತಮರೇ ಅರವಟ್ಟಿಗೆಗೆ ಬೇಕಾದ ಬಾಂಡ್ಲಿ ಮೊದಲಾದ ಪಾತ್ರೆಗಳನ್ನು

ತ್ರಿವಿಧಾಂ ವೃದ್ಧಿಮಾಪ್ನೋತಿ ತೇಜಸಾ ಯಶಸಾ ಶ್ರಿಯಾ ।
ಲವಣಸ್ಯ ಪ್ರದಾನೇನ ರಸಾನಾಪ್ನೋತಿ ಶಾಶ್ವತಾನ್ ॥ ೯ ॥

ತತ್ರ ಹರಿತದಾನೇನ ಗವಾಂ ಲೋಕಮವಾಪ್ನುಯಾತ್ ।
ಫಲಪ್ರದಾನೇನ ತಥಾ ವಗ್ನಿಷ್ಟೋಮಫಲಂ ಲಭೇತ್ ॥ ೧೦ ॥

ಸಕ್ತೂನಾಂ ಚ ಪ್ರದಾನೇನ ಗೋಸವಸ್ಯ ಫಲಂ ನರಃ ।
ಗೋರಸಾನಾಂ ಪ್ರದಾನೇನ ಗವಾಂ ಲೋಕಮವಾಪ್ನುಯಾತ್ ॥ ೧೧ ॥

ಶಯ್ಯಾಶ್ಚ ವಿವಿಧಾಃ ಕೃತ್ವಾ ಪ್ರಪಾಯಾಮಾಸನಾನಿ ಚ ।
ಸ್ವರ್ಗಲೋಕಮವಾಪ್ನೋತಿ ಮಾನುಷ್ಯೇ ಸ್ಥಾನಮೇವ ಚ ॥ ೧೨ ॥

ಕೃತ್ವಾ ನಿವಾತಂ ಶರಣಂ ಪ್ರಪಾಸ್ಥಾನೇ ಮನೋಹರಂ ।
ಸ್ವಾರಕ್ಷಂ ಲೋಕಮಾಪ್ನೋತಿ ವಸೂನಾಂ ನಾತ್ರ ಸಂಶಯಃ ॥ ೧೩ ॥

ದಾನಮಾಡುವುದರಿಂದ ತೇಜಸ್ಸು, ಯಶಸ್ಸು, ಸಂಪತ್ತು ಈ ಮೂರರ ವೃದ್ಧಿಯನ್ನು ಪಡೆಯುವನು. ಉಪ್ಪನ್ನು ಇಲ್ಲಿ ದಾನಮಾಡುವುದರಿಂದ ಶಾಶ್ವತವಾದ ರಸಗಳನ್ನು ಪಡೆಯುತ್ತಾನೆ.

೧೦-೧೧. ಅರವಟ್ಟಿಗೆಯಲ್ಲಿ ನೆಲ್ಲಿಯಕಾಯನ್ನು ದಾನಮಾಡುವುದರಿಂದ ಗೋಲೋಕವನ್ನು ಪಡೆಯುವನು. ಹಣ್ಣುಗಳ ದಾನದಿಂದ ಅಗ್ನಿಷ್ಟೋಮಫಲವು ಲಭಿಸುವುದು. ಹುರಿಹಿಟ್ಟು ಮುಂತಾದವುಗಳನ್ನು ದಾನಮಾಡುವುದರಿಂದ ಮನುಷ್ಯನು ಗೋಸವಯಾಗದ ಫಲವನ್ನು ಪಡೆಯುತ್ತಾನೆ. ಮಜ್ಜಿಗೆ ಮೊದಲಾದವುಗಳನ್ನು ಇಲ್ಲಿ ದಾನಮಾಡುವುದರಿಂದ ಗೋಲೋಕವು ಸಿಗುವುದು.

೧೨-೧೩. ಅರವಟ್ಟಿಗೆಯಲ್ಲಿ ಅನೇಕ ವಿಧವಾದ ಹಾಸಿಗೆಗಳನ್ನೂ, ಆಸನಗಳನ್ನೂ ಏರ್ಪಡಿಸುವುದರಿಂದ ಸುಖಾದಿಗಳನ್ನು ಪಡೆದು ಸ್ವರ್ಗದಲ್ಲಿ ಸುಖವಾಗಿರಬಹುದು. ಅರವಟ್ಟಿಗೆ ಇರುವ ಕಡೆ ಸುಂದರವಾದ ಹೆಚ್ಚುಗಾಳಿ ಬಾರದ ಮನೆಯನ್ನು ಕಟ್ಟಿಸುವಿಕೆಯಿಂದ ವಸುಗಳ ಸ್ವಾರಕ್ಷಲೋಕವನ್ನು ಪಡೆಯುತ್ತಾನೆ ಇದರಲ್ಲಿ ಯಾವ ಸಂಶಯವೂ ಇಲ್ಲ.

ತತ್ರ ವಹ್ನಿಂ ತಥಾ ಕೃತ್ವಾ ಶೀತತ್ರಾಣಾಯ ಮಾನವಾಃ ।
ಕಾಯಾಗ್ನಿದೀಪ್ತಿಂ ಪ್ರಾಕಾಶ್ಯಂ ಸೌಭಾಗ್ಯಂ ಚ ತಥಾಪ್ನುಯಾತ್ ॥ ೧೪ ॥

ಇಂಧನಾನಾಂ ಪ್ರದಾನೇನ ರಿಪುಭಿರ್ನಾಭಿಭೂಯತೇ ।
ತತ್ರಾಪಿ ಯೋಗ್ಯಭಾಂಡಾನಾಂ ದಾನಾತ್ಸ್ವರ್ಗಮವಾಪ್ನುಯಾತ್ ॥ ೧೫ ॥

ಚಂದ್ರಲೋಕಮವಾಪ್ನೋತಿ ಸ್ಥಾಪನಾತ್ತು ಹಿನಸ್ಯ ತು ।
ಶರ್ಕರಾಲೋಷ್ಟಪಾಷಾಣಕಂಟಕಾಶ್ಚ ತಥಾ ನರಃ ॥ ೧೬ ॥

ಮಾರ್ಗಾದಪಾಸ್ಯ ಯತ್ನೇನ ಗೋದಾನಫಲಮಾಪ್ನುಯಾತ್
ಶ್ರಾಂತಸಂವಾಹನಂ ಕೃತ್ವಾ ತದೇವ ಫಲಮುಚ್ಯತೇ ॥ ೧೭ ॥

ವೀಜಯಿತ್ವಾ ಪರಿಶ್ರಾಂತಂ ತಾಲವೃಂತೇನ ಮಾನವಃ ।
ಸ್ಕಂಧೇನ ಶ್ರಾಂತಮೂಢ್ವಾಪಿ ವಾಜಪೇಯಫಲಂ ಲಭೇತ್ ॥ ೧೮ ॥

ವಾಹನೇನಾಥ ಯಾನೇನ ಸ್ವೇನ ಶ್ರಾಂತಂ ತಥಾ ನಯನ್ ।
ಸಾಧ್ಯಾನಾಂ ಲೋಕಮಾಸಾದ್ಯ ದೇವಭೋಗಾನುಪಾಶ್ನುತೇ ॥ ೧೯ ॥

೧೪-೧೭. ಅಲ್ಲಿ ಅಗ್ನಿಯನ್ನು ಛಳಿನಿವಾರಣೆಗಾಗಿ ಇಡಿಸುವುದರಿಂದ ಮನುಷ್ಯರು ಶರೀರಕಾಂತಿಯನ್ನೂ, ತೇಜಸ್ಸನ್ನೂ, ಸೌಭಾಗ್ಯವನ್ನೂ ಪಡೆಯುತ್ತಾರೆ. ಅಲ್ಲಿ ಸೌದೆಯನ್ನು ಒದಗಿಸಿಕೊಡುವುದರಿಂದ ಶತ್ರುಗಳು ನಾಶವಾಗುತ್ತಾರೆ ಮತ್ತು ಅಲ್ಲಿಗೆ ಯೋಗ್ಯವಾದ ಪಾತ್ರೆಗಳನ್ನು ದಾನಮಾಡುವುದರಿಂದ ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಮಂಜಿನ ಗೆಡ್ಡೆಯನ್ನು ದಾನಮಾಡುವುದರಿಂದ ಚಂದ್ರಲೋಕ ಪ್ರಾಪ್ತಿಯಾಗುವುದು ದಾರಿಯಲ್ಲಿ ಅಡಚಣೆಯಾಗಿರುವ ಕಲ್ಲು, ಮಣ್ಣು, ಮುಳ್ಳು ಇವುಗಳನ್ನು ತೆಗಿಸಿ ಸರಿಮಾಡಿದರೆ ಗೋದಾನಫಲವು ಸಿಗುವುದು ಹಾಗೆಯೇ ಬಳಲಿ ಬಂದವನ ಕಾಲುಗಳನ್ನು ಒತ್ತಿ ಶ್ರಮಪರಿಹಾರಮಾಡುವುದರಿಂದ ಗೋದಾನ ಫಲವು ಲಭಿಸುವುದು.

೧೮-೨೦. ಅಧಿಕ ಆಯಾಸಗೊಂಡವನನ್ನು ಬೀಸಣಿಗೆಯಿಂದ ಬೀಸಿಯೂ, ನಡೆಯಲಾರದೆ ಬಳಲಿದವನನ್ನು ಹೆಗಲ ಮೇಲೆ ಕೂರಿಸಿಕೊಂಡು ಹೋಗುವುದರಿಂದಲೂ ಸಹ ಮನುಷ್ಯನು ವಾಜಪೇಯಯಾಗದ ಫಲವನ್ನು ಪಡೆಯುವನು. ಹಾಗೆಯೇ ವಾಹನಾದಿಗಳಿಂದಲಾಗಲಿ, ಗಾಡಿಯಿಂದಲಾಗಲಿ, ಬಳಲಿದವನನ್ನು

ಶ್ರಾಂತಸ್ಯ ಭೋಜನಂ ದತ್ವಾ ಕಾಮಾನಾಪ್ನೋತಿ ಶಾಶ್ವತಾನ್ ।
ಶ್ರಾಂತಸ್ತು ತರ್ಷಿತಸ್ತೋಯೈಸ್ತೃಪ್ತಿಮಾಪ್ನೋತಿ ಮಾನವಃ ॥ ೨೦ ॥

ಉಪಾನಹಾಭ್ಯಾಂ ಛತ್ರೇಣ ಶ್ರಾಂತಂ ಸಂಯೋಜ್ಯ ಮಾನವಃ ।
ಸ್ವಾಭ್ಯಾಂ ವಿಷಮದೇಶೇಷು ಕ್ಷಣಾದ್ಬಹುಫಲಂ ಲಭೇತ್ ॥ ೨೧ ॥

ಭಾರಶ್ರಾಂತಾತ್ತಥಾ ಭಾರಂ ಗೃಹೀತ್ವಾ ವಹತೇ ಚ ಯಃ ।
ಕರ್ಮಣಾ ತೇನ ವಿಪ್ರೇಂದ್ರಾಃ ಸ್ವರ್ಗಲೋಕಮುಪಾಶ್ನುತೇ ॥ ೨೨ ॥

ಮೂಲ್ಯೇನ ವಾಹಯಿತ್ವಾಪಿ ಪರಭಾರಂ ವಿಚಕ್ಷಣಃ ।
ತಸ್ಯ ಮೂಲ್ಯಸ್ಯ ದಾನೇನ ಫಲಂ ದಶಗುಣಂ ಭವೇತ್ ॥ ೨೩ ॥

ರಕ್ಷಣಂ ಪಥಿ ಯಃ ಕುರ್ಯಾತ್ಪಾಂಥಾನಾಂ ಮಾನವೋತ್ತಮಃ ।
ಪ್ರಾಪ್ತಾದ್ವೃತ್ತಿಮಯಾತ್ ಘೋರಾದ್ರುದ್ರಲೋಕೇ ಮಹೀಯತೇ ॥

ಸಾಗಿಸಿದರೆ ಅವರಿಗೆ ಸಾಧ್ಯರ ಲೋಕವು ದೊರೆತು ದಿವ್ಯಭೋಗವನ್ನನುಭವಿಸುವರು. ಹಸಿದು ತೊಂದರೆಗೊಂಡವರಿಗೆ ಅನ್ನವನ್ನು ಕೊಡುವುದರಿಂದ ಶಾಶ್ವತಸುಖವನ್ನು ಹೊಂದುತ್ತಾನೆ. ಬಾಯಾರಿಕೆಯಾದವನಿಗೆ ನೀರಿನಿಂದ ತೃಪ್ತಿಪಡಿಸಿದರೆ ಶಾಶ್ವತ ತೃಪ್ತಿದೊರಕುವುದು.

೨೧-೨೨. ನಡೆಯಲಾಗದ ಪ್ರದೇಶಗಳಲ್ಲಿ ನಡೆಯಲು ಅನುಕೂಲಿಸುವಂತೆ ತನ್ನ ಪಾದರಕ್ಷೆಯನ್ನೂ, ಛತ್ರಿ (ಕೊಡೆ) ಯನ್ನೂ ದಾನಮಾಡಿದರೆ ದಾನ ಮಾಡಿದವರಿಗೆ ಕೂಡಲೇ ಬಹುಫಲಗಳನ್ನು ಪಡೆಯುವ ಶಕ್ತಿಬರುವುದು. ದ್ವಿಜರೇ ಭಾರವನ್ನು ಹೊತ್ತು ಕಷ್ಟಪಡುತ್ತಿರುವವನ ಭಾರವನ್ನು ತಾನು ಹೊತ್ತು ಸಹಾಯ ಮಾಡಿದರೆ ಈ ಕಾರ್ಯದಿಂದ ಸ್ವರ್ಗಲೋಕವು ಸಿಗುವುದು.

೨೩-೨೪. ಬುದ್ಧಿವಂತನಾದವನು ಇನ್ನೊಬ್ಬರ ಹೊರೆಯನ್ನು ತಾನು ಕೂಲಿ ಕೊಟ್ಟು ಹೊರಿಸುವುದರಿಂದಲೂ, ಅದರ ಮೂಲ್ಯ (ಕೂಲಿ) ವನ್ನು ಕೊಡುವುದರಿಂದಲೂ ಅದಕ್ಕೆ ಹತ್ತರಷ್ಟು ಅಧಿಕವಾದ ಫಲವನ್ನು ಪಡೆಯುವನು. ಯಾವನು ದಾರಿಯಲ್ಲಿ ಪ್ರಯಾಣಿಕರಿಗೆ ಉಂಟಾದ ಘೋರವಿಪತ್ತಿನಿಂದ ರಕ್ಷಣೆಯನ್ನುಂಟು ಮಾಡುವನೋ ಅವನು ರುದ್ರಲೋಕದಲ್ಲಿ ಪೂಜಿಸಲ್ಪಡುವನು.

ನದೀತೀರೇಷು ಸಂತಾರ್ಯ ಪಾಂಥಾನ್ಪಥಿ ತಥಾ ನರಃ |
ಶೀಘ್ರಂ ತರತಿ ದುರ್ಗಾಣಿ ಕ್ಷುರಧಾರಾಂಶ್ಚ ಪರ್ವತಾನ್ || ೨೫ ||

ಸದಾ ಶೌಚಂ ತಥಾ ನಾವಂ ಯಃ ಕರೋತಿ ನದೀತಟೇ |
ಅಶ್ವಮೇಧಫಲಂ ತೇನ ನರಃ ಪ್ರಾಪ್ನೋತಿ ಕರ್ಮಣಾ || ೨೬ ||

ಸಭಾಸ್ಥಾನಾನಿ ರಮ್ಯಾಣಿ ಯಃ ಕರೋತಿ ವಿಚಕ್ಷಣಃ |
ಉದ್ಯಾನಾನಿ ವಿಚಿತ್ರಾಣಿ ಶಕ್ರಲೋಕೇ ಮಹೀಯತೇ || ೨೭ ||

ಪ್ರೇಕ್ಷಣೀಯ ಪ್ರದಾನೇನ ಸ್ಮೃತಿಂ ಮೇಧಾಂ ಚ ವಿಂದತಿ |
ಪಾಂಥಾನಾಂ ಹಿ ದಯಾ ಕಾರ್ಯಾ ಕರ್ಮಣಾ ಯೇನ ಕೇನಚಿತ್ || ೨೮ ||

ಕೃಪಾಸ್ಥಾನಂ ಪರಂ ಪಾಂಥಃ ಸ್ವಗೃಹಾದ್ಯೋ ವಿನಿಸ್ಸೃತಃ |
ಲಿಂಗೀ ಚಾಪ್ಯಥವಾ ವರ್ಣೀ ಪಾಂಥಂ ಪ್ರತಿ ವಿಚಕ್ಷಣೈಃ |
ಉಪೇಕ್ಷಾ ನೈವ ಕರ್ತವ್ಯಾ ಪಾಂಥಾಃ ಪೂಜ್ಯಾಸ್ತು ಸರ್ವಶಃ || ೨೯ ||

೨೫–೨೭. ನದಿಯ ದಡದಲ್ಲಿದ್ದುಕೊಂಡು ಮಾರ್ಗದಲ್ಲಿ ಪ್ರಯಾಣಿಕರನ್ನು ನದಿಯ ಮೇಲೆ ಸುಖವಾಗಿ ದಾಟಿಸಿದವರಿಗೆ, ದಾಟಲಾರದ ದುರ್ಗಗಳನ್ನೂ, ಕತ್ತಿಯ ಅಲುಗನ್ನೂ, ಪರ್ವತಗಳನ್ನೂ, ಸುಖವಾಗಿ ದಾಟುವಂತೆ ಆಗುವುದು. ನದೀ ತೀರದಲ್ಲಿ ಯಾರು ಶೌಚಕ್ರಿಯೆಗೆಸಹಾಯ ಮಾಡುವರೋ, ಮತ್ತು ದೋಣಿಯನ್ನು ಇಡಿಸುವರೋ ಅವರು ಅಶ್ವಮೇಧಯಾಗದ ಫಲವನ್ನು ಪಡೆಯುವರು. ನಿಪುಣನಾದವನು ರಮ್ಯವಾದ ಸಭಾಮಂಟಪಗಳನ್ನೂ, ತೋಟಗಳನ್ನೂ, ನಿರ್ಮಾಣ ಮಾಡುವುದರಿಂದ ಇಂದ್ರಲೋಕದಲ್ಲಿ ಪೂಜಿಸಲ್ಪಡುವನು.

೨೮–೨೯ ಸುಂದರವಾದ ವಸ್ತುವಿನ ಪ್ರದಾನದಿಂದ ಸ್ಮೃತಿಯನ್ನೂ, ಬುದ್ಧಿಯನ್ನೂ ಪಡೆಯುತ್ತಾನೆ. ಯಾವ ಕಾರಣದಿಂದಲೇ ಆಗಲಿ ಪ್ರಯಾಣೀಕರಿಗೆ ದಯೆತೋರಿ ಸಹಾಯಮಾಡಬೇಕು. ಯಾವನು ತನ್ನ ಮನೆಯಿಂದ ಹೊರಟನೋ ಆ ಪ್ರಯಾಣಿಕನು ದಯೆಗೆ ಯೋಗ್ಯನು. ಆ ಪ್ರಯಾಣಿಕನು ಸಂನ್ಯಾಸಿಯಾಗಲೀ, ಅಥವಾ ಬ್ರಹ್ಮಚಾರಿಯಾಗಲೀ, ಬುದ್ಧಿವಂತನಾದವನು ಅಂಥವನನ್ನು ಉದಾಸೀನವಾಗಿ ಬಿಡಬಾರದು. ಎಲ್ಲಾ ರೀತಿಯಿಂದಲೂ ಪ್ರಯಾಣಿಕರು ಪೂಜ್ಯರು.

ಪಾಂಥಸ್ಯ ಪೂಜಾಂ ಪುರುಷಸ್ತು ಕೃತ್ವಾ
ಸ್ಥಾನಂ ಸಮಾಸಾದ್ಯ ಪುರಂದರಸ್ಯ ।
ಪ್ರಾಪ್ನೋತಿ ಪುಣ್ಯಾನ್ ದಿವಿ ದೇವಭೋಗಾ-
ನ್ಪಾಂಥಾಸ್ತತಃ ಪೂಜ್ಯತಮಾ ನೃಲೋಕೇ ॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪ್ರಪಾಪ್ರಶಂಸಾ
ನಾಮಾಷ್ಟನವತ್ಯಧಿಕದ್ವಿಶತತಮೋಽಧ್ಯಾಯಃ

---

೩೦ ಈ ರೀತಿಯಾಗಿ ಪ್ರಯಾಣಿಕರ ಸೇವೆಯನ್ನು ಮಾಡಿ ಮನುಷ್ಯನು ಇಂದ್ರನ ಸ್ಥಾನವನ್ನು ಪಡೆದು ಸ್ವರ್ಗಲೋಕದಲ್ಲಿ ಪ್ರಶಸ್ತ ದೇವಭೋಗವನ್ನು ಹೊಂದುವನು. ಆದುದರಿಂದ ಮಾನವಲೋಕದಲ್ಲಿ ಪ್ರಯಾಣಿಕರು ಪೂಜೆಗೆ ಯೋಗ್ಯರು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಪ್ರಪಾಪ್ರಶಂಸೆಯೆಂಬ ಇನ್ನೂರ ತೊಂಭತ್ತೆಂಟನೆಯ
ಅಧ್ಯಾಯ ಮುಗಿದುದು

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ನವನವತ್ಯುತ್ತರದ್ವಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಚತುರ್ಧಾ ಸರ್ವಪುಣ್ಯಾನಾಂ ಫಲಮುಕ್ತಂ ಮನೀಷಿಭಿಃ ।
ಕೃತಾನಿ ವಿಧಿಹೀನಾನಿ ವಂಚನಾರ್ಥಂ ಪರಸ್ಯ ವಾ ॥ ೧ ॥

ಕ್ರೋಧಲೋಭಾಭಿಭೂತೇನ ತಾಮಸಾನಿ ವಿನಿರ್ದಿಶೇತ್ ।
ಕೃತಾನಿ ಪರಮಾನೇನ ರಾಜಸಾನಿ ಭವಂತಿ ತು ॥ ೨ ॥

ಸಾತ್ತ್ವಿಕಾನಿ ಭವಂತೀಹ ಶ್ರದ್ಧಯಾ ಪರಯಾ ದ್ವಿಜಾಃ ।
ಗುಣಾಂತರಾಣಿ ವಿಜ್ಞಾಯ ವಿಧಿತಾಮಂ ಕೃತಾನಿ ತು ॥ ೩ ॥

ಇನ್ನೂರ ತೊಂಭತ್ತೊಂಭತ್ತನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ :— ಎಲ್ಲಾ ಪುಣ್ಯಗಳ ಫಲವು ಪ್ರಾಜ್ಞರಿಂದ ನಾಲ್ಕು ರೀತಿಯಾಗಿ ಹೇಳಲ್ಪಟ್ಟಿದೆ. ಕ್ರಮವನ್ನು ಅರಿಯದೆ ಅಥವಾ ಮಿತಿಮೀರಿ ವಂಚಿಸುವುದಕ್ಕೋಸ್ಕರ ಕೋಪ, ಮತ್ತು ಆಸೆ ಇವುಗಳಿಂದ ಕೂಡಿದ ಮಾನವನಿಂದ ಮಾಡಲ್ಪಟ್ಟವುಗಳು ತಾಮಸವೆಂದು ತಿಳಿಯಬೇಕು. ಇನ್ನೊಬ್ಬರನ್ನು ಹೀಯಾಳಿಸಿ ಅಭಿಮಾನದಿಂದ ಮಾಡುವವುಗಳು ರಾಜಸವೆನಿಸುವುದು ಎಲೈ ಬ್ರಾಹ್ಮಣರೇ, ಅಧಿಕ ಶ್ರದ್ಧೆಯಿಂದ ಮಾಡಿದ ಕರ್ಮಗಳ ಫಲಗಳು ಸಾತ್ವಿಕವೆನಿಸುವುವು. ಗುಣಾಗುಣಗಳನ್ನು ತಿಳಿದು ಕರ್ತವ್ಯೇಚ್ಛೆಯಿಂದ ಯಥಾವಿಧಿಯಾಗಿ ಮಾಡುವವುಗಳು ಅಂತಹವು.

ತಾಮಸಾನಾಂ ಫಲಂ ಭುಂಕ್ತೇ ತಿರ್ಯಕ್ತ್ವೇ ಮಾನವಃ ಸದಾ ।
ವರ್ಣಸಂಕರಭಾವೇನ ವಾರ್ಧಕ್ಯೇ ಯದಿ ವಾ ಪುನಃ ॥ ೪ ॥

ಬಾಲ್ಯೇ ವಾ ದಾಸಭಾವೇ ವಾ ನಾತ್ರ ಕಾರ್ಯಾ ವಿಚಾರಣಾ ।
ಅತೋಽನ್ಯಥಾ ತು ಮಾನುಷ್ಯೇ ರಾಜಸಾನಾಂ ಫಲಂ ಲಭೇತ್ ॥ ೫ ॥

ಸಾತ್ತ್ವಿಕಾನಾಂ ಫಲಂ ಭುಙ್ಕ್ತೇ ದೇವತ್ವೇ ನಾತ್ರ ಸಂಶಯಃ ।
ಗುಣೋತ್ತರಕೃತಾನಾಂ ಚ ಫಲಂ ಮೋಕ್ಷ ಉದಾಹೃತಃ ॥ ೬ ॥

ಕರ್ಮಣಾಂ ಧನಸಾಧ್ಯಾನಾಂ ಧನಂ ಚ ತ್ರಿವಿಧಂ ಸ್ಮೃತಂ ।
ಕೃಷ್ಣಶ್ಚ ಶಬಲಶ್ಚೈವ ಶುಕ್ಲಶ್ಚ ದ್ವಿಜಸತ್ತಮಾಃ ॥ ೭ ॥

ತ್ರಿವಿಧಸ್ಯ ಫಲಂ ತಸ್ಯ ತ್ರಿವಿಧಂ ಪರಿಕೀರ್ತಿತಂ ।
ಕೃಷ್ಣೇನ ಯತ್ಕೃತಂ ಕಿಂಚಿತ್ತಿರ್ಯಕ್ತ್ವೇ ತದ್ಧಿ ಭುಜ್ಯತೇ ॥ ೮ ॥

೪-೬. ಮನುಷ್ಯನು ಯಾವಾಗಲೂ ತಾಮಸಕರ್ಮಗಳ ಫಲವನ್ನು ಕ್ರಿಮಿ ಕೀಟಾದಿತಿರ್ಯಕ್ ಜನ್ಮದಲ್ಲಿ ಅನುಭವಿಸುತ್ತಾನೆ. ಅಥವಾ ಜಾತಿಭೇದವಿಲ್ಲದೆಯೂ ಮುದುಕತನದಲ್ಲಾಗಲೀ, ಬಾಲ್ಯದಲ್ಲಾಗಲೀ, ಆ ಫಲವನ್ನು ಅನುಭವಿಸುತ್ತಾನೆ. ಈ ವಿಷಯದಲ್ಲಿ ವಿಚಾರಣೆ ಮಾಡಬೇಕಾಗಿಲ್ಲ. ಎರಡನೇದಾದ ರಾಜಸಕರ್ಮಗಳ ಫಲವನ್ನು ಮನುಷ್ಯಜನ್ಮದಲ್ಲಿ ಅನುಭವಿಸುತ್ತಾನೆ ಸಾತ್ತ್ವಿಕಕಾರ್ಯದ ಫಲವನ್ನು ದೇವಭಾವವನ್ನು ಹೊಂದಿ ಅನುಭವಿಸುವನು. ಇದರಲ್ಲಿ ಯಾವ ಸಂಶಯವೂ ಇಲ್ಲ. ಗುಣಾಗುಣಗಳನ್ನರಿತು ಕಾರ್ಯಮಾಡುವುದರಿಂದ ಮೋಕ್ಷಫಲವು ಹೇಳಲ್ಪಟ್ಟಿದೆ.

೭. ಯಾವ ಕಾರ್ಯವನ್ನಾದರೂ ಧನಸಹಾಯದಿಂದ ಮಾಡಬೇಕಾದುದ ೆಂದರೆ ಆ ಧನವು ಮೂರು ವಿಧವಾಗಿ ಹೇಳಲ್ಪಟ್ಟಿದೆ. ಬ್ರಾಹ್ಮಣರೇ ಆ ಭೇದಗಳು ಕೃಷ್ಣ, ಶಬಲ, ಶುಕ್ಲ ಎಂದು ಮೂರು ವಿಧವಾಗಿ ಕರೆಯಲ್ಪಡುವುದು.

೮-೯ ಆ ಮೂರುವಿಧ ಧನಗಳ ಫಲವೂ, ಮೂರು ವಿಧವಾಗಿ ಹೇಳಲ್ಪಟ್ಟಿದೆ. ಕೃಷ್ಣರೂಪವಾದ ಧನದಿಂದ ಯಾವುದು ಸ್ವಲ್ಪ ಉಂಟುಮಾಡಲ್ಪಟ್ಟಿದೆಯೋ ಅದು ತಿರ್ಯಗ್ಜನ್ಮದಲ್ಲಿ ಅನುಭವಿಸಲ್ಪಡುತ್ತದೆ. ಯಾವುದು ತನ್ನ ಸ್ವಂತ ಕಾರ್ಯದಿಂದ

ವರ್ಣಾನಾಂ ಹಿ ಧನಂ ಶುಕ್ಲಮಾರ್ಜಿತಂ ಯತ್ಸ್ವಕರ್ಮಣಾ ।
ಶಬಲಂ ತು ಸಮುದ್ದಿಷ್ಟಂ ತಥಾನಂತರಕರ್ಮಣಾ ॥ ೯ ॥

ವರ್ಣೋತ್ತಮಸ್ಯ ಹೀನಸ್ಯ ಕರ್ಮಣಾ ಕೃಷ್ಣಮುಚ್ಯತೇ ।
ತಥಾಪಿ ಶುಕ್ಲಂ ವಕ್ಷ್ಯಾಮಿ ವರ್ಣಾನಾಂ ತು ದ್ವಿಜೋತ್ತಮಾಃ ॥ ೧೦ ॥

ಪ್ರತಿಗ್ರಹೇಣ ಯಲ್ಲಬ್ಧಂ ಯಾಜ್ಯತಃ ಶಿಷ್ಯತಸ್ತಥಾ ।
ಗುಣಾನ್ವಿತೇಭ್ಯೋ ವಿಪ್ರಸ್ಯ ಶುಕ್ಲಂ ತ್ರಿವಿಧಂ ಧನಂ ॥ ೧೧ ॥

ಯುದ್ಧೋಪಲಬ್ಧಂ ಕಾರಂ ಚ ದಂಡಾಚ್ಚ ವ್ಯವಹಾರತಃ ।
ಕ್ಷತ್ರಿಯಸ್ಯ ಧನಂ ಶುಕ್ಲಂ ತ್ರಿವಿಧಂ ಪರಿಕೀರ್ತಿತಂ ॥ ೧೨ ॥

ಕೃಷಿವಾಣಿಜ್ಯಗೋರಕ್ಷಾಃ ಕೃತ್ವಾ ಶುಕ್ಲಂ ತಥಾ ವಿಶಃ ।
ದ್ವಿಜಶುಶ್ರೂಷಯಾ ಲಬ್ಧಂ ಶುಕ್ಲಂ ಶೂದ್ರಸ್ಯ ಕೀರ್ತಿತಂ ॥ ೧೩ ॥

ಸಂಪಾದಿಸಲ್ಪಟ್ಟಿದೆಯೋ ಅದು ಎಲ್ಲಾ ವರ್ಣದವರಿಗೂ ಶುಕ್ಲವೆನಿಸುತ್ತದೆ. ಇತರ ವಿಧವಾದ ಕಾರ್ಯದಿಂದ ಸಂಪಾದಿಸಲ್ಪಟ್ಟದ್ದು ಶಬಲವೆನಿಸಿಕೊಳ್ಳುತ್ತದೆ ಉತ್ತಮ ಜಾತಿಯವನಿಂದ ಹೀನಕಾರ್ಯದಿಂದ ಸಂಪಾದಿಸಲ್ಪಟ್ಟದ್ದು ಕೃಷ್ಣವೆಂದು ಕರೆಯಲ್ಪಡುತ್ತದೆ.

೧೦–೧೩. ಎಲೈ ಬ್ರಾಹ್ಮಣೋತ್ತಮರೇ, ಈಗ ವರ್ಣಾಶ್ರಮಗಳಿಗೆ ಉಚಿತವಾದ ಶುಕ್ಲಧನವನ್ನು ಕುರಿತು ವಿವರಿಸುತ್ತೇನೆ. ಬ್ರಾಹ್ಮಣನಿಗೆ, ಗುಣವಂತನಾದವನು ಕೊಟ್ಟ ದಾನದಿಂದ ಲಬ್ಧವಾದದ್ದು, ಯಾಗಮಾಡಿಸಿ ಬಂದದ್ದು, ಶಿಷ್ಯನಿಗೆ ಪಾಠಹೇಳಿ ಸಂಪಾದಿಸಿದುದು. ಶುಕ್ಲವೆಂಬ ಧನವೂ ಈ ರೀತಿ ಮೂರು ವಿಧವಾಗಿ ಹೇಳಿದೆ. ಹಾಗೆಯೇ, ಯುದ್ಧದಿಂದ ಲಬ್ಧವಾದದ್ದು, ಶಿಕ್ಷೆಮಾಡುವುದರಿಂದ (ಜುಲ್ಮಾನೆ) ಬಂದದ್ದು, ವ್ಯವಹಾರಾದಿಗಳಿಂದ ಪಡೆದಿದ್ದು ಈ ಮೂರೂ ಕ್ಷತ್ರಿಯರಿಗೆ ಶುಕ್ಲಧನವು. ಕೃಷಿ, ವ್ಯಾಪಾರ, ಗೋರಕ್ಷಣೆ ಈ ಮೂರು ವಿಧವಾದ ರೀತಿಯಿಂದ ಸಂಪಾದಿಸಿದ ದ್ರವ್ಯವು ವೈಶ್ಯರಿಗೆ ಶುಕ್ಲಧನವು ಬ್ರಾಹ್ಮಣರ ಸೇವೆಯಿಂದ ಪಡೆದ ದ್ರವ್ಯವು ಶೂದ್ರರಿಗೆ ಶುಕ್ಲಧನವಾಗಿರುವುದು.

ನ ಕಥಂಚನ ಕುರ್ವೀತ ಬ್ರಾಹ್ಮಣಃ ಕರ್ಮ ವಾರ್ಷಲಂ ।
ವೃಷಲಃ ಕರ್ಮ ವಾ ಬ್ರಾಹ್ಮಂ ಪತನೀಯೋ ತರೇತರಂ ॥ ೧೪ ॥

ಉತ್ಕೃಷ್ಟಂ ಚಾಪಕೃಷ್ಟಂ ಚ ತಯೋಃ ಕರ್ಮ ನ ವಿದ್ಯತೇ ।
ಮಧ್ಯಮೇ ಕರ್ಮಣೀ ಹಿತ್ವಾ ಸರ್ವಸಾಧಾರಣೇ ಹಿತೇ ॥ ೧೫ ॥

ಸರ್ವೇಷಾಮೇವ ವರ್ಣಾನಾಂ ವಕ್ಷ್ಯಾಮಿ ವಿವಿಧಂ ಧನಂ ।
ಪಾರ್ಶ್ವಿಕದ್ಯೂತಚೌರ್ಯಾರ್ತ್ತಿ ಪ್ರತಿರೂಪಕಸಾಹಸೈಃ ॥ ೧೬ ॥

ವ್ಯಾಜೇನೋಪಾರ್ಜಿತಂ ಯತ್ತತ್ಸರ್ವೇಷಾಂ ಕೃಷ್ಣಮುಚ್ಯತೇ ।
ಶಿಲ್ಪಾನುವೃತ್ತ್ಯಾ ಯತ್ಪ್ರಾಪ್ತಂ ಕುಸೀದೇನ ತಥಾ ಧನಂ ॥ ೧೭ ॥

ಕೃತೋಪಕಾರಾದಾಪ್ತಂ ಚ ಶಬಲಂ ಸಮುದಾಹೃತಂ ।
ಕ್ರಮಾಗತಂ ಪ್ರೀತಿದಾಯಂ ಪ್ರಾಪ್ತಂ ಚ ಸಹ ಭಾರ್ಯಯಾ ॥ ೧೮ ॥

ಅವಿಶೇಷೇಣ ಸರ್ವೇಷಾಂ ಧನಂ ಶುಕ್ಲಮುದಾಹೃತಂ ।
ಶುಕ್ಲೇನ ವಿತ್ತೇನ ಕೃತಂ ಪುಣ್ಯಂ ಬಹುಫಲಂ ಭವೇತ್ ॥ ೧೯ ॥

೧೪-೧೫. ಯಾವಾಗಲೂ ಬ್ರಾಹ್ಮಣನಾದವನು ಶೂದ್ರನ ಕಾರ್ಯವನ್ನು ಮಾಡಬಾರದು. ಶೂದ್ರನು ಬ್ರಾಹ್ಮಣಕರ್ಮವನ್ನೂ ಮಾಡಬಾರದು. ಹೀಗೆ ವಿಪರೀತಾಚರಣೆಯಿಂದ ಅಧೋಗತಿಪ್ರಾಪ್ತವಾಗುವುದು (ಆ ಎರಡು ವರ್ಣದವರಿಗೂ ಹಿತಕರವಾಗಿ ಸಾಧಾರಣವಾದ ಮಧ್ಯಮವರ್ಣದವರ ಕಾರ್ಯವನ್ನು ಬಿಟ್ಟು ಇನ್ನು ಉತ್ತಮವಾದುದಾಗಲೀ, ನೀಚವಾದುದಾಗಲೀ ಇಲ್ಲ.)

೧೬-೧೯. (ಎಲ್ಲಾ ವರ್ಣದವರ ವಿಧವಿಧವಾದ ಧನವಿಭಾಗಗಳನ್ನು ಹೇಳುತ್ತೇನೆ) ಹಿಂದಿನಿಂದಲೂ, ಜೂಜಿನಿಂದಲೂ, ಕಳ್ಳತನದಿಂದಲೂ, ನಟನೆಯಿಂದಲೂ, ಮೋಸದಿಂದಲೂ ಯಾವುದು ಸಂಪಾದಿಸಲ್ಪಟ್ಟಿದೆಯೋ ಅದು ಕೃಷ್ಣವೆಂದು ಹೇಳಲ್ಪಟ್ಟಿದೆ. ಶಿಲ್ಪಿಕೆಲಸದಿಂದ ಬಂದದ್ದು. ಬಡ್ಡಿಯಿಂದ ಹೊಂದಿದ್ದೂ, ಉಪಕಾರ ಮಾಡಿ ಪ್ರತಿಫಲ ಪಡೆದಿದ್ದೂ ಶಬಲವೆಂದು ಕರೆಯಲ್ಪಟ್ಟಿದೆ. ಕ್ರಮವಾಗಿ ತನ್ನ ಪಾಲಿಗೆ ಬಂದದ್ದು, ಹೆಂಡತಿ ಮೂಲಕ ಬಂದದ್ದೂ ಸಮವಾಗಿ ಎಲ್ಲರಿಗೂ ಶುಕ್ಲ ಧನವೆಂದು ಹೇಳಲ್ಪಟ್ಟಿದೆ. ಶುಕ್ಲದ್ರವ್ಯದಿಂದ ಸಂಪಾದಿಸಿದ ಪುಣ್ಯವು ಅಧಿಕ ಫಲಕಾರಿಯಾದದ್ದು ಎಂದು ಹೇಳಿದೆ.

ನ್ಯಾಯಾಗತೇನಾಥ ಧನೇನ ವಿದ್ವಾ
ನ್ಪುಣ್ಯಾನಿ ಕೃತ್ವಾ ದಿವಿ ದೇವಭೋಗಾನ್ ।
ಚಿರಂ ಸಮಶ್ನಾತಿ ಮಹಾನುಭಾವೋ
ನ್ಯಾಯೇನ ತಸ್ಮಾದ್ಧನಮರ್ಜನೀಯಂ ॥ ೨೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಧನವಿಚಾರೋ
ನಾಮ ನವನವತ್ಯುತ್ತರದ್ವಿಶತತಮೋಽಧ್ಯಾಯಃ

---

೨೦. ನ್ಯಾಯದಿಂದ ಸಂಪಾದಿಸಿರುವ ದ್ರವ್ಯದಿಂದ ವಿದ್ವಾಂಸನು, ಪುಣ್ಯ ಕರ್ಮಗಳನ್ನು ಮಾಡಿ, ಆ ಪುಣ್ಯಗಳಿಂದ ಸ್ವರ್ಗದಲ್ಲಿ ದೇವಭೋಗಗಳನ್ನು ಬಹು ಕಾಲ ಅನುಭವಿಸುತ್ತಾನೆ. ಆದುದರಿಂದ ನ್ಯಾಯಮಾರ್ಗದಿಂದಲೇ ಹಣವನ್ನು ಸಂಪಾದಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಧನವಿಚಾರ
ವೆಂಬ ಇನ್ನೂರ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ದಾನಂ ದೇವಾಃ ಪ್ರಶಂಸಂತಿ ಮನುಷ್ಯಾಶ್ಚ ತಥಾ ದ್ವಿಜಃ |
ದಾನೇನ ಕಾಮಾನಾಪ್ನೋತಿ ಯಾನ್ಕಾಂಕ್ಷಿನ್ಮನಸೇಚ್ಛತಿ || ೧ ||

ಅದತ್ತದಾನಾನ್ಕೃಪಣಾನ್ ದೃಷ್ಟ್ವೇಹ ಪರತಂತ್ರಕಾನ್ |
ಪಾರತ್ರಿಕಂ ಧನಂ ಕುರ್ಯಾದ್ದಾನಂ ವಿಪ್ರೇಷು ಮಾನವಃ || ೨ ||

ಅಮನುಷ್ಯೇ ಸಮಂ ದಾನಂ ಗೋಷು ಜ್ಞೇಯಂ ಮಹಾಫಲಂ |
ದ್ವಿಗುಣಂ ಚ ತದೇವೋಕ್ತಂ ತಥಾ ವೈ ವರ್ಣಸಂಕರೇ || ೩ ||

ಮುನ್ನೂರನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ :— ದಾನವನ್ನು ದೇವತೆಗಳೂ, ಮನುಷ್ಯರೂ ಪ್ರಶಂಸಿಸುತ್ತಾರೆ. ಬ್ರಾಹ್ಮಣನು ಮನಸ್ಸಿನಲ್ಲಿ ಬಯಸುವ ಇಷ್ಟಾರ್ಥಗಳನ್ನು ದಾನದಿಂದ ಪಡೆಯುತ್ತಾನೆ. ದಾನವನ್ನು ಮಾಡದಿರುವವರು ಲೋಭಿಗಳಾಗಿಯೂ, ಇನ್ನೊಬ್ಬರ ಅಧೀನದಲ್ಲಿರುವವರಾಗಿಯೂ ಆಗುವರು. ಆದುದರಿಂದ ಅಂತಹವರನ್ನು ನೋಡಿ ಮಾನವನು ಧನವನ್ನು ಬ್ರಾಹ್ಮಣರಿಗಾಗಿ ದಾನಮಾಡಬೇಕು.

೩-೭. ಮನುಷ್ಯನಲ್ಲದವನಲ್ಲಿಯೂ ದಾನಮಾಡಬೇಕೆಂದು ಹೇಳಿದೆ. ಗೋವುಗಳಿಗೆ ಕೊಟ್ಟದ್ದು ಮಹಾಫಲದಾಯಕವಾಗುತ್ತದೆ. ಮತ್ತು ಸಂಕರಜಾತಿ

ಶೂದ್ರೇ ಚತುರ್ಗುಣಂ ಪ್ರೋಕ್ತಂ ವಿಶಿ ಚಾಷ್ಟಗುಣಂ ಭವೇತ್ ।
ಕ್ಷತ್ರಿಯೇ ಷೋಡಶಗುಣಂ ಬ್ರಹ್ಮಬಂಧೌ ತದೇವ ತು ॥ ೪ ॥

ದ್ವಾತ್ರಿಂಶತಾ ಸ್ಮೃತಂ ದಾನಂ ವೇದಾಧ್ಯಯನತತ್ಪರೇ ।
ಶತಧಾ ತದ್ವಿಶಿಷ್ಟಂ ತು ಸ್ಪ್ರಾಧೀತೇ ಲಕ್ಷಸಮ್ಮಿತಂ ॥ ೫ ॥

ಅನಂತಂ ಚ ತದೇವೋಕ್ತಂ ಬ್ರಾಹ್ಮಣೇ ವೇದಪಾರಗೇ ।
ಆತ್ಮನಸ್ತು ಭವೇತ್ಪಾತ್ರಂ ನಾನ್ಯಸ್ಯ ತು ಪುರೋಹಿತಃ ॥ ೬ ॥

ಪುರೋಹಿತೇ ತು ಸ್ವಂ ದತ್ತಂ ದಾನಮಕ್ಷಯಮುಚ್ಯತೇ ।
ಯಾಜಕೇ ಋತ್ವಿಜೇ ಚೈವ ಗುರಾವಪಿ ಚ ಮಾನವಃ ॥ ೭ ॥

ವರ್ಣಾಪೇಕ್ಷಾ ನ ಕರ್ತವ್ಯಾ ಮಾತರಂ ಪಿತರಂ ಪ್ರತಿ ।
ಮಾತೃಷ್ವಸಾಂ ಸ್ವಸಾಂ ಚೈವ ತಥೈವ ಚ ಪಿತೃಷ್ವಸಾಂ ॥ ೮ ॥

ಯವನಿಗೆ ದಾನಮಾಡಿದರೆ ಎರಡರಷ್ಟು ಹೆಚ್ಚು ಪುಣ್ಯಬರುತ್ತದೆ. ಶೂದ್ರನಲ್ಲಿ ದಾನಮಾಡುವುದರಿಂದ ನಾಲ್ಕರಷ್ಟೂ, ವೈಶ್ಯನಲ್ಲಿ ಎಂಟರಷ್ಟೂ, ಕ್ಷತ್ರಿಯನಲ್ಲಿ ದಾನದಿಂದ ಹದಿನಾರಷ್ಟೂ ಫಲವು ಹೇಳಿದೆ. ಬ್ರಾಹ್ಮಣನಿಗೆ ಕೊಡುವುದರಿಂದ ಮೂವತ್ತೆರಡರಷ್ಟೂ, ವೇದಾಧ್ಯಯನ ಸಂಪನ್ನನಿಗೆ ದಾನಮಾಡಿದರೆ ನೂರರಷ್ಟೂ. ಜ್ಞಾತಿಯಾದ ಬ್ರಾಹ್ಮಣನಿಗೆ ದಾನಮಾಡಿದರೆ ಲಕ್ಷದಷ್ಟೂ ಫಲವು ಲಭಿಸುತ್ತದೆ. ವೇದನಿಷ್ಣಾತನಾದ ಬ್ರಾಹ್ಮಣನಿಗೆ ದಾನಮಾಡಿದರೆ ಅನಂತಫಲವು ದೊರಕುವುದು. ತನಗೆ ಪುರೋಹಿತನೇ ಉತ್ತಮದಾನಪಾತ್ರನು. ಪುರೋಹಿತನಿಗೆ ದ್ರವ್ಯದಾನ ಮಾಡಿದರೆ ಅಕ್ಷಯಪುಣ್ಯಫಲವು ಲಭಿಸುವುದು. ಹಾಗೆಯೇ ಯಾಗಮಾಡಿಸು ವವನಿಗೂ, ಕರ್ಮಮಾಡಿಸುವ ಶ್ರೋತ್ರಿಯನಿಗೂ, ಗುರುವಿಗೂ ದಾನಮಾಡಿ ಅಕ್ಷಯ ಪುಣ್ಯವನ್ನು ಗಳಿಸಬೇಕು

೮-೯. ತಾಯಿಯಲ್ಲಿಯೂ, ತಂದೆಯಲ್ಲಿಯೂ, ತಾಯಿಯ ಸಹೋದರಿ ಯಲ್ಲೂ, ತಂದೆಯ ಸಹೋದರಿಯರಲ್ಲೂ, ತಾಯಿಯ ತಾಯಿಯಲ್ಲೂ,

ಮಾತಾಮಹೀಂ ಭಾಗಿನೇಯೀಂ ಭಾಗಿನೇಯಂ ತಥೈವ ಚ ।
ದೌಹಿತ್ರಂ ಪಿತೃಪತಿಂ ಚೈವ ತೇಷು ದತ್ತಮಥಾಕ್ಷಯಂ　　॥ ೯ ॥

ಶ್ರೀಭ್ರಷ್ಟೇ ಯತ್ತಥಾ ದತ್ತಂ ತದಪ್ಯಕ್ಷಯಮುಚ್ಯತೇ ।
ಸ್ಥಾನಭ್ರಷ್ಟಸ್ಯ ಯಃ ಕುರ್ಯಾದ್ಭೂಯಸ್ತತ್ರೋಪಣಂ ನರಃ　　॥ ೧೦ ॥

ನಾಕಲೋಕಮವಾಪ್ನೋತಿ ಚಿರಂ ತೇನೇಹ ಕರ್ಮಣಾ ।
ಭೂಪಾಲಂ ಯಶ್ಚ್ಯುತಂ ರಾಜ್ಯಾತ್ಸ್ವರಾಜ್ಯೇ ಸ್ಥಾಪಯೇತ್ಪುನಃ　　॥ ೧೧ ॥

ಸ ಯಾತಿ ಶಕ್ರಸಾಲೋಕ್ಯಂ ಯಾವಚ್ಛಕ್ರಾಶ್ಚತುರ್ದಶ ।
ತತೋ ಮಾನುಷ್ಯಮಾಸಾದ್ಯ ರಾಜಾ ಭವತಿ ಧಾರ್ಮಿಕಃ　　॥ ೧೨ ॥

ತಸ್ಮಾದ್ದಾನಂ ಶ್ರೀವಿಹೀನೇ ದಾತವ್ಯಂ ಭೂತಿಮಿಚ್ಛತಾ ।
ಶ್ರೀವಿಹೀನೇಷು ಯದ್ದತ್ತಂ ತದನಂತಂ ಪ್ರಕೀರ್ತಿತಂ　　॥ ೧೩ ॥

ಕಾಲೇ ಪಾತ್ರೇ ತಥಾ ದೇಶೇ ಧನಂ ನ್ಯಾಯಾಗತಂ ತಥಾ ।
ಯದ್ದತ್ತಂ ಬ್ರಾಹ್ಮಣಶ್ರೇಷ್ಠಾಸ್ತದನಂತಂ ಪ್ರಕೀರ್ತಿತಂ　　॥ ೧೪ ॥

ಸೊಸೆಯಲ್ಲಿಯೂ, ಸೋದರಳಿಯನಲ್ಲಿಯೂ, ಮೊಮ್ಮಗನಲ್ಲಿಯೂ, ಅಳಿಯ ನಲ್ಲಿಯೂ, ದಾನಮಾಡಿದ್ದು ಅನಂತ ಫಲವನ್ನು ಕೊಡುತ್ತದೆ. ಇವರ ವಿಷಯದಲ್ಲಿ ಯಾವ ವಿಧವಾದ ಪ್ರತ್ಯಪೇಕ್ಷೆಯನ್ನೂ ಹೊಂದಬಾರದು. ಐಶ್ವರ್ಯವನ್ನು ಕಳೆದುಕೊಂಡವನಿಗೆ ದಾನಮಾಡುವುದರಿಂದ ಅಕ್ಷಯಫಲ ಲಭಿಸುವುದು.

೧೦–೧೨. ಯಾವನು ಸ್ಥಾನಭ್ರಷ್ಟನಾದವನನ್ನು ಪುನಃ ಅದೇ ಸ್ಥಾನದಲ್ಲಿ ಏರಿಸುವನೋ, ಅವನು ತನ್ನ ಆ ಕರ್ಮದಿಂದ ಸ್ವರ್ಗಲೋಕವನ್ನು ಹೊಂದುತ್ತಾನೆ. ರಾಜ್ಯವನ್ನು ಕಳೆದುಕೊಂಡ ರಾಜನನ್ನು ಸ್ವರಾಜ್ಯದಲ್ಲಿ ಪುನಃ ಸ್ಥಾಪನೆಮಾಡಿದರೆ ಆತನು ಇಂದ್ರಲೋಕವನ್ನು ಹೊಂದಿ ಬಹುಕಾಲವಿದ್ದು ಅನಂತರ ಮನುಷ್ಯ ಲೋಕವನ್ನು ಹೊಂದಿ ಧಾರ್ಮಿಕನಾದ ರಾಜನಾಗುತ್ತಾನೆ.

೧೩–೧೪. ಆದುದರಿಂದ ಐಶ್ವರ್ಯಾಭಿಲಾಷಿಗಳು ದ್ರವ್ಯಹೀನನಿಗೆ ದಾನ ಮಾಡಬೇಕು. ದರಿದ್ರರಿಗೆ ದಾನಮಾಡಿದುದು ಅನಂತಫಲದಾಯಕವಾಗುವುದು. ಎಲೈ ಬ್ರಾಹ್ಮಣರೇ, ನ್ಯಾಯದಿಂದ ಸಂಪಾದಿಸಿದ ದ್ರವ್ಯವನ್ನು ದೇಶಕಾಲವನ್ನು ನೋಡಿ ಯೋಗ್ಯರಿಗೆ ದಾನಮಾಡುವುದರಿಂದ ಅನಂತಫಲ ಉಂಟಾಗುತ್ತದೆ.

ದ್ವಾದಶೀಷು ತು ಯದ್ದತ್ತಂ ಶುಕ್ಲಾಸು ತು ವಿಶೇಷತಃ ।
ಶ್ರವಣೇನ ತು ಯುಕ್ತಾಸು ತತ್ರಾಪಿ ದ್ವಿಜಸತ್ತಮಾಃ ॥ ೧೫ ॥

ವಿಶೇಷಾದ್ಬುಧಯುಕ್ತಾಸು ಪಕ್ಷಾಂತೇಷು ಚ ಯತ್ತಥಾ ।
ತೃತೀಯಾಸು ತು ಶುಕ್ಲಾಸು ಸರ್ವಾಸು ಚ ವಿಶೇಷತಃ ॥ ೧೬ ॥

ವೈಶಾಖಶುಕ್ಲಪಕ್ಷೇ ತು ವಿಶೇಷೇಣ ಚ ಮಾನದಾಃ ।
ಆಷಾಢೇ ಕಾರ್ತಿಕೇ ಚೈವ ಫಾಲ್ಗುನೇ ಚ ವಿಶೇಷತಃ ॥ ೧೭ ॥

ತಿಸ್ರಸ್ತ್ವೇತಾಃ ಪೌರ್ಣಮಾಸ್ಯೋ ದಾನೇ ವಿಪ್ರಾ ಮಹಾಫಲಾಃ ।
ವ್ಯತೀಪಾತೇಷು ಯದ್ದತ್ತಂ ಜನ್ಮರ್ಕ್ಷೇ ತು ದ್ವಿಜೋತ್ತಮಾಃ ॥ ೧೮ ॥

ಗ್ರಹಸಂಕ್ರಮಕಾಲೇ ತು ತ್ಯಾಗೇ ಚ ಮಿಥುನಸ್ಯ ತು ।
ರವೇರ್ಮಹಾಫಲಂ ದತ್ತಂ ತೇಭ್ಯೋಽಪಿ ಸ್ಯಾನ್ಮಹಾಫಲಂ ॥ ೧೯ ॥

ಯದಾ ಪ್ರವಿಶತೇ ಭಾನುರ್ಮಕರಂ ದ್ವಿಜಸತ್ತಮಾಃ ।
ಆಷಾಢೇಽಶ್ವಯುಜೇ ಪೌಷೇ ಚೈತ್ರೇ ಶುಕ್ಲೇ ತಥೈವ ಚ ॥ ೨೦ ॥

೧೫-೧೯. ದ್ವಿಜೋತ್ತಮರೇ, ಶುಕ್ಲಪಕ್ಷದ ದ್ವಾದಶೀತಿಥಿಗಳು ದಾನಕ್ಕೆ ಯೋಗ್ಯಕಾಲವು. ಅದರಲ್ಲಿಯೂ ಶ್ರವಣನಕ್ಷತ್ರಸೇರಿದ್ದರೆ ಮತ್ತೂ ಪ್ರಶಸ್ತವಾದದ್ದು ಬುಧವಾರದಿಂದ ಕೂಡಿದ್ದಲ್ಲಿ ಮತ್ತೂ ಪ್ರಶಸ್ತ ಪಕ್ಷಾಂತಗಳೂ ಉತ್ತಮವಾಗಿವೆ. ಶುಕ್ಲಪಕ್ಷದ ಎಲ್ಲಾ ತೃತೀಯಾ ತಿಥಿಗಳೂ, ಯೋಗ್ಯವಾದವು ಅದರಲ್ಲಿಯೂ ವೈಶಾಖ ಶುದ್ಧ ತೃತೀಯಾ ತಿಥಿಯು ಯೋಗ್ಯವಾದದ್ದಾಗಿರುವುದು. ಆಷಾಢ, ಕಾರ್ತಿಕ, ಫಾಲ್ಗುನಮಾಸಗಳು ದಾನಕ್ಕೆ ಯೋಗ್ಯಮಾಸಗಳು. ಅದರಲ್ಲಿಯೂ ಈ ಮೂರು ಮಾಸಗಳ ಹುಣ್ಣಿಮೆಯು ಉತ್ತಮದಿನಗಳಾದುದರಿಂದ ಈ ದಿನಗಳಲ್ಲಿ ದಾನಮಾಡುವುದರಿಂದ ಮಹತ್ಫಲವುಂಟಾಗುವುದು. ವ್ಯತೀಪಾತದಲ್ಲಿಯೂ, ಜನ್ಮನಕ್ಷತ್ರದಲ್ಲಿಯೂ, ಸಂಕ್ರಮಣ ಕಾಲದಲ್ಲಿಯೂ, ಸೂರ್ಯನು ಮಿಥುನಮಾಸವನ್ನು ಬಿಟ್ಟು ಕರ್ಕಾಟಕಕ್ಕೆ ಬರುವಾಗಲೂ ಮಾಡುವ ದಾನವು ಮಹತ್ತಾದ ಫಲವನ್ನು ಕೊಡುತ್ತದೆ.

೨೦-೨೨. ಎಲೈ ದ್ವಿಜೋತ್ತಮರಿರಾ, ಸೂರ್ಯನು ಯಾವಾಗ ಮಕರರಾಶಿಯನ್ನು ಪ್ರವೇಶಿಸುವನೋ ಆದಿನ, ಮತ್ತು ಆಷಾಢ, ಆಶ್ವಯುಜ, ಪುಷ್ಯ, ಚೈತ್ರ

ದ್ವಾದಶೀಪ್ರಭೃತಿ ಪ್ರೋಕ್ತಂ ಪುಣ್ಯಂ ದಿನಚತುಷ್ಟಯಂ ।
ಮಿಥುನಂ ಚ ತಥಾ ಕನ್ಯಾ ಧನ್ವಿನಂ ಮೀನಮೇವ ಚ ॥ ೨೦ ॥

ಪ್ರವಿಷ್ಟೇ ಭಾಸ್ಕರೇ ಪುಣ್ಯಂ ಪ್ರತ್ಯೇಕಂ ಕಥಿತಂ ದ್ವಿಜಾಃ ।
ಷಡಶೀತಿಮುಖಂ ನಾಮ ದಾನೇ ದಿನಚತುಷ್ಟಯಂ ॥ ೨೧ ॥

ಅಚ್ಛಿನ್ನನಾಡ್ಯಾಂ ಯದ್ದತ್ತಂ ಪುತ್ರೇ ಜಾತೇ ದ್ವಿಜೋತ್ತಮಾಃ ।
ಸಂಸ್ಕಾರೇಷು ಚ ಪುತ್ರಸ್ಯ ತದಕ್ಷಯ್ಯಂ ಪ್ರಕೀರ್ತಿತಂ ॥ ೨೩ ॥

ಚಂದ್ರೇ ವಾ ಯದಿ ವಾ ಸೂರ್ಯೇ ದೃಷ್ಟೇ ರಾಹೌ ಮಹಾಗ್ರಹೇ ।
ಅಕ್ಷಯಂ ಕಥಿತಂ ದತ್ತಂ ತತ್ರಾಪ್ಯೇಕೇ ವಿಶೇಷತಃ ॥ ೨೪ ॥

ಪುಷ್ಕರೇಷು ಪ್ರಯಾಗೇ ಚ ಪ್ರಭಾಸೇ ನೈಮಿಷೇ ತಥಾ ।
ಧರ್ಮಾರಣ್ಯೇ ಗಯಾಯಾಂ ಚ ತಥೈವಾಮರಕಂಟಕೇ ॥ ೨೫ ॥

ಗಂಗಾದ್ವಾರೇ ಕುಶಾವರ್ತೇ ಬಿಲ್ವಕೇ ನೀಲಪರ್ವತೇ ।
ತಥಾ ಕನಖಲೇ ತೀರ್ಥೇ ಶಾಲಿಗ್ರಾಮೇ ತಥೈವ ಚ ॥ ೨೬ ॥

ಈ ನಾಲ್ಕುಮಾಸಗಳ ಶುಕ್ಲದ್ವಾದಶೀ ಆರಂಭಿಸಿ ನಾಲ್ಕು ದಿನಗಳು ಪ್ರಶಸ್ತವೆಂದು ಹೇಳಲ್ಪಟ್ಟಿವೆ. ಹಾಗೆಯೇ ಮಿಥುನ, ಕನ್ಯಾ, ಧನುಸ್ಸು, ಮೀನ ಈ ನಾಲ್ಕು ಮಾಸಗಳಲ್ಲಿ ಸೂರ್ಯನು ಪ್ರವೇಶಿಸಲಾಗಿ ಪ್ರತ್ಯೇಕವಾಗಿ ನಾಲ್ಕು ನಾಲ್ಕು ದಿನಗಳು ಷಡಶೀತಿ ಮುಖವೆಂದು ಹೇಳಲ್ಪಡುತ್ತವೆ. ಈ ನಾಲ್ಕು ದಿನಗಳೂ ಅತಿ ಪ್ರಶಸ್ತವಾದವು.

೨೩—೨೪. ಎಲೈ ದ್ವಿಜರೇ, ಮಗನು ಹುಟ್ಟಿದಾಗ ಹೊಕ್ಕಳು ಕುಡಿಯನ್ನು ಛೇದಿಸುವುದಕ್ಕೆ ಮುಂಚೆಯೂ, ಪುತ್ರಸಂಸ್ಕಾರ ಸಮಯದಲ್ಲಿಯೂ ದಾನಮಾಡಿದ್ದು ಅಕ್ಷಯವಾದ ಫಲವನ್ನು ಕೊಡುತ್ತದೆ. ಚಂದ್ರ, ಸೂರ್ಯರ ಗ್ರಹಣಕಾಲದಲ್ಲಿ ದಾನಮಾಡಿದರೆ ಅಕ್ಷಯಪುಣ್ಯ ಲಭಿಸುವುದು. ಅದರಲ್ಲಿ ಸ್ವಲ್ಪ ತಾರತಮ್ಯವಿದೆ

೨೫—೨೯. ಪುಷ್ಕರ, ಪ್ರಯಾಗ, ಪ್ರಭಾಸ, ನೈಮಿಷ, ಧರ್ಮಾರಣ್ಯ, ಗಯೆ, ಅಮರಕಂಟಕ, ಗಂಗಾದ್ವಾರ, ಕುಶಾವರ್ತ, ಬಿಲ್ವಕ, ನೀಲಪರ್ವತ, ಕನಖಲತೀರ್ಥ, ಶಾಲಿಗ್ರಾಮ, ಕಾಶೀ, ಸರಸ್ವತೀ, ಗಂಗಾಸಾಗರಸಂಗಮಸ್ಥಳ,

ನಾರಾಯಣ್ಯಾಂ ಸರಸ್ವತ್ಯಾಂ ಗಂಗಾಸಾಗರ ಸಂಗಮೇ ।
ಸಿಂಧುಸಾಗರಸಂಧೌ ಚ ತ್ರಿತಕೂಪೇ ತಥಾನಘಾಃ ॥ ೨೭ ॥

ಪ್ಲಕ್ಷಪ್ರಸ್ರವಣೇ ಪುಣ್ಯೇ ಚಮಸೋನ್ಮಜ್ಜನೇ ತಥಾ ।
ಮಹಾಲಯೇಽಥ ಕೇದಾರೇ ಭೃಗುತುಂಗೇ ತಥೈವ ಚ ॥ ೨೮ ॥

ಮಾನಸೇ ಚ ತಥಾ ಪುಣ್ಯೇ ತಥೈವೋತ್ತರಮಾನಸೇ ।
ಏತೇಷ್ವನ್ಯೇಷು ಚ ತಥಾ ದಧಿತೀರ್ಥೇಷು ಯದ್ಭವೇತ್ ॥ ೨೯ ॥

ನಿಮ್ನಗಾನಾಂ ಚ ತೀರೇಷು ಜ್ಞೇಯಂ ಬಹುಫಲಂ ಹಿ ತತ್ ।
ದೀನಾಂಧಕೃಪಣಾನಾಥವಾಗ್ವಿಹೀನೇಷು ಯತ್ತಥಾ ॥ ೩೦ ॥

ವಿಕಲೇಷು ತಥಾನ್ಯೇಷು ಜಡವಾಮನಪಂಗುಷು ।
ರೋಗಾರ್ತೇಷು ಚ ಯದತ್ತಂ ತತ್ಸ್ಯಾದ್ಬಹುಫಲಂ ಧನಂ ॥ ೩೧ ॥

ಯದ್ದತ್ತಂ ಧರ್ಮಸಾಹಾಯ್ಯೇ ಕ್ರಿಯಮಾಣೇ ತಥಾ ಕ್ರತೌ ।
ವಿವಾಹಕರಣಾರ್ಥಾಯ ತದಕ್ಷಯ್ಯಂ ಪ್ರಕೀರ್ತಿತಂ ॥ ೩೨ ॥

ಸಿಂಧುಸಮುದ್ರಸಂಗಮಸ್ಥಳ, ತ್ರಿತಕೂಪ, ಪ್ಲಕ್ಷಪ್ರಸ್ರವಣ, ಪುಣ್ಯಕರವಾದ ಚಮಸೋನ್ಮಜ್ಜನಗಳು. ಮಹಾಲಯ, ಕೇದಾರ, ಭೃಗುತುಂಗ, ಮಾನಸಸರೋವರ, ಉತ್ತರಮಾನಸ, ಈ ಸ್ಥಳಗಳಲ್ಲಿ ಶುಭಕಾಲಗಳಲ್ಲಿ ದಾನಮಾಡುವುದರಿಂದಲೂ, ಹೀಗೆಯೇ ಇತರ ಪುಣ್ಯಕ್ಷೇತ್ರಗಳಲ್ಲಿಯೂ, ನದೀತೀರಗಳಲ್ಲಿಯೂ ದಾನಮಾಡುವುದರಿಂದ ಅಧಿಕಪುಣ್ಯವು ಲಭಿಸುತ್ತದೆ.

೩೦–೩೧. ದೀನರೂ, ಕುರುಡರೂ, ಲೋಭ್ಯರೂ, ಅನಾಥರೂ, ಮೂಕರೂ. ಅಂಗವಿಕಲರೂ, ಜಡರೂ. ಕುಳ್ಳರೂ, ಕುಂಟರೂ. ರೋಗಪೀಡಿತರೂ ಆದ ಜನಗಳಲ್ಲಿ ದಾನಮಾಡುವುದರಿಂದ ಬಹುಫಲವು ಲಭಿಸುವುದೆಂದು ಹೇಳಲ್ಪಟ್ಟಿದೆ.

೩೨–೩೪. ಧರ್ಮಾದಿಕಾರ್ಯಗಳಿಗಾಗಿಯೂ, ಯಾಗಗಳಿಗಾಗಿಯೂ, ವಿವಾಹಮಾಡುವವರಿಗೂ ಸಹ ದಾನಮಾಡಿದ್ದೇ ಆದರೆ ಅಕ್ಷಯವಾದ ಫಲವು

ಯತ್ಪ್ರಾಪ್ತೇನ ತು ವಿತ್ತೇನ ನರಃ ಸ್ಯಾದುತ್ಸವೇ ಸುಖೀ ।
ಉತ್ಸವಾನಾಂ ಸ ಭಾಗೀ ಸ್ಯಾದ್ಯತ್ರ ತತ್ರಾಭಿಜಾಯತೇ ॥ ೩೩ ॥

ಯದ್ಧತ್ತೇನ ಚ ವಿತ್ತೇನ ವ್ಯಸನಾದುತ್ತರೇತ್ಪರಃ ।
ನ ಸ ಕಿಂಚಿದವಾಪ್ನೋತಿ ವ್ಯಸನಂ ಮನುಜೋತ್ತಮಃ ॥ ೩೪ ॥

ಸ್ತ್ರಿಯಂ ಮೇಷಮಜಂ ಚೈವ ಗಾಮಶ್ವಂ ತುರಗಂ ನರಂ ।
ಏಕಮೇಕಂ ತು ದಾತವ್ಯಮೇಕಸ್ಯ ಬಹವೋಽಪಿ ವಾ ॥ ೩೫ ॥

ಏಕಂ ಬಹೂನಾಂ ತದ್ದತ್ತಂ ಧ್ರುವಂ ನರಕಮೃಚ್ಛತಿ ।
ಆದಾತುರ್ನರಕಾಯ ಸ್ಯಾತ್ತದಾ ದಾತುರ್ದ್ವಿಜೋತ್ತಮಾಃ ॥ ೩೬ ॥

ವಿಕ್ರಯಂ ತು ಸಮಾಪನ್ನಾ ಯೋ ದತ್ವಾ ಜೀವದಕ್ಷಿಣಾಂ ।
ಏವಂ ಕಾಲೇ ಚ ಪಾತ್ರೇ ಚ ದೇಶೇ ಶುದ್ಧಾಗಮಂ ಧನಂ ॥ ೩೭ ॥

ದೊರೆಯುವುದು. ತನಗೆ ದೊರೆತ ಹಣದಿಂದ ಮನುಷ್ಯನು ಉತ್ಸವವನ್ನು ಮಾಡಿಸಿದ್ದೇ ಆದರೆ ಅವನು ಪ್ರತಿಜನ್ಮದಲ್ಲಿಯೂ ಉತ್ಸವಸುಖವನ್ನೇ ಹೊಂದುತ್ತಿರುತ್ತಾನೆ. ಯಾವನು ತನ್ನ ದ್ರವ್ಯದಿಂದ ಇನ್ನೊಬ್ಬರ ದುಃಖವನ್ನು ಹೋಗಲಾಡಿಸುವನೋ ಆ ನರಶ್ರೇಷ್ಠನು ಯಾವಾಗಲೂ ದುಃಖವನ್ನೇ ಹೊಂದುವುದಿಲ್ಲ.

೩೫-೩೭. ಸ್ತ್ರೀಯನ್ನೊ, ಕುರಿಯನ್ನೊ, ಆಡನ್ನೊ, ಹಸುವನ್ನೊ, ಕುದುರೆಯನ್ನೊ, ಮನುಷ್ಯನನ್ನೊ ಒಬ್ಬೊಬ್ಬನಿಗೆ ಒಂದೊಂದನ್ನಾಗಲೀ, ಅನೇಕವನ್ನಾಗಲೀ, ದಾನಮಾಡಬಹುದು ಒಂದನ್ನೇ ಪುನಃಪುನಃ ಅನೇಕರಿಗೆ ದಾನಮಾಡಿದರೆ ನರಕವನ್ನು ಪಡೆಯುತ್ತಾರೆ ಅದನ್ನು ತೆಗೆದುಕೊಂಡವನೂ ಸಹ ನರಕವನ್ನು ಹೊಂದುವನು ದಾನವನ್ನು ತೆಗೆದುಕೊಂಡು ಅದನ್ನು ಮಾರಿದರೂ ಪಾಪಿಯಾಗುತ್ತಾನೆ. ಈ ರೀತಿಯಾಗಿ ಕಾಲ, ದೇಶ ಪಾತ್ರವನ್ನು ನೋಡಿ ದೇವಬ್ರಾಹ್ಮಣ ಕ್ಷತ್ರಿಯರಿಗೆ ನ್ಯಾಯದಿಂದ ಸಂಪಾದಿಸಿದ ದ್ರವ್ಯವನ್ನು ದಾನಮಾಡುವುದರಿಂದ ಪುಣ್ಯಶಾಲಿಯಾಗಿ ಧನವಂತನಾಗುತ್ತಾನೆ.

ದತ್ತ್ವಾ ಧನಮವಾಪ್ನೋತಿ ದೇವಬ್ರಾಹ್ಮಣಕ್ಷತ್ರಿಯಾನ್ ।
ಧನಂ ಬಹಿಶ್ಚರಾಃ ಪ್ರಾಣಾ ಧನೇ ಸರ್ವಂ ಪ್ರತಿಷ್ಠಿತಂ ॥ ೩೮ ॥

ಧನಾದನ್ನಂ ತಥಾನ್ನೇನ ಸರ್ವೋ ಜೀವತಿ ವೈ ಜನಃ ।
ಯಾವಂತಿ ಲೋಕೇ ಪುಣ್ಯಾನಿ ತೇಭ್ಯೋ ದಾತಾ ವಿಶಿಷ್ಯತೇ ।
ದಾನೇನ ತದವಾಪ್ನೋತಿ ಯತ್ಕಿಂಚಿನ್ಮನಸೇಪ್ಸಿತಂ ॥ ೩೯ ॥

ದಾನೇನ ಲೋಕೇ ಪ್ರಿಯತಾಮುಪೈತಿ
ದಾನೇನ ನಾಕಂ ಪುರುಷಃ ಪ್ರಯಾತಿ ।
ಮಾನುಷ್ಯಮಾಸಾದ್ಯ ಚ ದಾನಶೀಲೋ
ಭೋಗಾನವಾಪ್ನೋತಿ ಮನೋಭಿರಾಮಾನ್ ॥ ೪೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದಾನಪ್ರಶಂಸಾ
ನಾಮ ತ್ರಿಶತತಮೋಽಧ್ಯಾಯಃ

೩೮-೩೯. ಹಣವೆಂಬುದು ಮನುಷ್ಯನ ಹೊರಗಿನ ಪ್ರಾಣವು. ಆದುದರಿಂದ ಹಣದಲ್ಲಿ ಸರ್ವವೂ ಅಡಕವಾಗಿವೆ. ಧನದಿಂದ ಅನ್ನವು ಲಭಿಸುತ್ತದೆ. ಅನ್ನದಿಂದ ಸಕಲರೂ ಜೀವಿಸುತ್ತಾರೆ. ಲೋಕದಲ್ಲಿ ಎಷ್ಟು ಪುಣ್ಯಗಳು ಹೇಳಲ್ಪಟ್ಟಿದೆಯೋ ಅವೆಲ್ಲಕ್ಕಿಂತಲೂ ದಾನಮಾಡುವವನ ಪುಣ್ಯವೇ ಉತ್ತಮವು. ಅವನು ದಾನದಿಂದ ತನ್ನ ಮನೋರಥಗಳೆಲ್ಲವನ್ನೂ ಪಡೆಯುವನು

೪೦. ದಾನದಿಂದಲೇ ಲೋಕದಲ್ಲಿ ಎಲ್ಲರಿಗೂ ಪ್ರೀತಿಪಾತ್ರನಾಗುತ್ತಾನೆ. ದಾನದಿಂದಲೇ ಮನುಷ್ಯನು ಸ್ವರ್ಗವನ್ನು ಹೊಂದುತ್ತಾನೆ. ದಾನಿಯು ಮನುಷ್ಯ ಲೋಕವನ್ನು ಪಡೆದು ಮನಸ್ಸಿನಲ್ಲಿ ಆಶಿಸಿದ ಸಕಲ ಸುಖವನ್ನೂ ಅನುಭವಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದೇಶಿಸಲ್ಪಟ್ಟ ಹಂಸಗೀತೆಯಲ್ಲಿ
ದಾನಪ್ರಶಂಸೆಯೆಂಬ ಮುನ್ನೂರನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕೋತ್ತರತ್ರಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ಸರ್ವಧರ್ಮಭೃತಾಂ ಶ್ರೇಷ್ಠ ವಿಧಿಂ ಧರ್ಮ್ಯಂ ಪ್ರತಿಗ್ರಹೇ ।
ಬ್ರಾಹ್ಮಣಾನಾಂ ಸಮಾಚಕ್ಷ್ವ ತ್ವಂ ಹಿ ವೇದಮಯೋ ನಿಧಿಃ || ೧ ||

|| ಹಂಸ ಉವಾಚ ||

ಮೃತಕೇ ಸೂತಕೇ ವಿಪ್ರಾ ನ ತು ದೇಯಃ ಪ್ರತಿಗ್ರಹಃ ।
ತತ್ರಾಪಿ ಚ ತಥಾ ದೇಯಾ ಯಾ ಸ್ಯಾದಭಯದಕ್ಷಿಣಾ || ೨ ||

ರಾತ್ರೌ ದಾನಂ ನ ಶಂಸಂತಿ ವಿನಾ ತ್ವಭಯದಕ್ಷಿಣಾಂ ।
ವಿದ್ಯಾಂ ಕಾನ್ಯಾಂ ದ್ವಿಜಶ್ರೇಷ್ಠಾ ದೀಪಮನ್ನಂ ಪ್ರತಿಶ್ರಯಂ । ೩ ||

ಮುನ್ನೂರ ಒಂದನೆಯ ಅಧ್ಯಾಯ.

೧. ಋಷಿಗಳು ಹೇಳುತ್ತಾರೆ :—ಸಕಲ ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನೇ, ನೀನು ವೇದಮೂರ್ತಿಯಾಗಿರುವೆ ಆದುದರಿಂದ ಬ್ರಾಹ್ಮಣರ ಪ್ರತಿಗ್ರಹ (ದಾನ ತೆಗೆದುಕೊಳ್ಳುವುದು) ವಿಷಯದಲ್ಲಿ ಧಾರ್ಮಿಕ ಕ್ರಮವನ್ನು ಹೇಳು.

೨. ಹಂಸವು ಹೇಳುತ್ತದೆ:—ಮರಣಾಶೌಚದಲ್ಲಿಯೂ, ಜಾತಾಶೌಚದಲ್ಲಿಯೂ ದಾನ ಮಾಡಲೂಬಾರದು, ತೆಗೆದುಕೊಳ್ಳಲೂಬಾರದು. ಆದರೆ, ಆ ಸಮಯದಲ್ಲಿ ತೊಂದರೆಗೊಂಡವರಿಗೆ ಅಭಯದಾನಮಾಡಬಹುದು.

೩–೫. ರಾತ್ರಿಯಲ್ಲಿ ದಾನವು ಯೋಗ್ಯವಲ್ಲವೆಂದು ಹೇಳುತ್ತಾರೆ, ಅಭಯ ದಾನಕ್ಕೆ ಮಾತ್ರ ನಿಷೇಧವಿಲ್ಲ. ವಿದ್ಯೆಯನ್ನೂ, ಕನ್ಯೆಯನ್ನೂ, ದೀಪ ಮತ್ತು

ರಾತ್ರಾವಪಿ ಹಿತಂ ದೇಯಂ ಯಚ್ಚಾನ್ಯತ್ಕಥಿತಂಪುರಾ ।
ಪೂಜನೇ ತ್ವತಿಥೀನಾಂ ಚ ಪಾಂಥಾನಾಮಪಿ ಪೂಜನೇ ॥ ೪ ॥

ತಚ್ಚ ರಾತೌ ತಥಾ ಜ್ಞೇಯಂ ಗವಾಮುಕ್ತಂ ಚ ಪೂಜನೇ ।
ಕಾಲಃ ಸರ್ವೋ ವಿನಿರ್ದಿಷ್ಟಃ ಪಾತ್ರಃ ಸರ್ವಶ್ಚ ಮಾನದಾಃ ॥ ೫ ॥

ಅಭಯಸ್ಯ ಪ್ರದಾನೇ ತು ನಾತ್ರ ಕಾರ್ಯಾ ವಿಚಾರಣಾ ।
ಶುಚಿರ್ವಾಪ್ಯಶುಚಿರ್ವಾಪಿ ದದ್ಯಾದಭಯದಕ್ಷಿಣಾಂ ॥ ೬ ॥

ಶುಚಿನಾಽಶುಚಿನಾ ವಾಪಿ ಗ್ರಾಹ್ಯಾ ತ್ವಭಯದಕ್ಷಿಣಾ ।
ಕಾಲಃ ಸ ಏವ ಗ್ರಹಣೇ ಯದಾ ಭಯಮುಪಸ್ಥಿತಂ ॥ ೭ ॥

ಪ್ರತಿಗ್ರಹಾಣ್ಯಥಾನ್ಯಾನಿ ಗ್ರಾಹ್ಯಾಣಿ ಶುಚಿನಾ ಸದಾ ।
ಮೃತಕೇ ಸೂತಕೇ ಚೈವ ನ ಗ್ರಾಹ್ಯಾಣಿ ದ್ವಿಜೋತ್ತಮಾಃ ॥ ೮ ॥

ಅಭ್ಯಕ್ತೇನ ಚ ಧರ್ಮಜ್ಞಾಸ್ತಥಾ ಮುಕ್ತಶಿಖೇನ ಚ ।
ಸ್ನಾತಃ ಸಮ್ಯಗುಪಸ್ಪೃಶ್ಯ ಗೃಹ್ಣೀಯಾತ್ಪ್ರಯತಃ ಶುಚಿಃ ॥ ೯ ॥

ಅನ್ನವನ್ನೂ, ಆಶ್ರಯಸ್ಥಾನವನ್ನೂ ಅತಿಥಿಗಳ ಮತ್ತು ಪ್ರಯಾಣಿಕರ ಪೂಜಾ ಸೇವೆಗಳನ್ನೂ, ಗೋಪೂಜೆಯನ್ನೂ ಸಹ ರಾತ್ರಿಯಲ್ಲಿಯೂ ಮಾಡಬಹುದು. ಹೀಗೆ ಕಾಲ, ಪಾತ್ರಾದಿಗಳು ನಿರ್ದಿಷ್ಟವಾಗಿವೆ.

೬–೯. ಅಭಯದಾನಕೊಡುವವಿಷಯದಲ್ಲಿ ವಿಚಾರವನ್ನೇ ಮಾಡಬಾರದು. ಶುಚಿಯಾಗಿದ್ದರೂ ಅಶುಚಿಯಾಗಿದ್ದರೂ ಯಾವಾಗಲೂ ಅಭಯದಾನ ಮಾಡಬಹುದು. ಮತ್ತು ಅಭಯದಾನವನ್ನು ಶುಚಿಯೂ ಅಶುಚಿಯೂ ಆದವನು ತೆಗೆದು ಕೊಳ್ಳಬಹುದು. ಯಾವಾಗ ಭಯವು ಪ್ರಾಪ್ತವಾಗುತ್ತದೆಯೋ ಆಗಲೇ ಅಭಯ ದಾನಕ್ಕೆ ಸಮಯವಾಗಿರುವುದು. ಬೇರೆ ದಾನಗಳನ್ನು ಯಾವಾಗಲೂ ಶುಚಿಯಾ ಗಿಯೇ ತೆಗೆದುಕೊಳ್ಳಬೇಕು. ಎಲೈ ಬ್ರಾಹ್ಮಣಶ್ರೇಷ್ಠರೇ, ಮೃತಾಶೌಚದಲ್ಲಿಯೂ, ಜಾತಾಶೌಚದಲ್ಲಿಯೂ ದಾನ ತೆಗೆದುಕೊಳ್ಳಬಾರದು. ಎಣ್ಣೆ ಹಚ್ಚಿಕೊಂಡವನೂ, ಬಿಚ್ಚಿಹೋಗಿರುವ ತಲೆಗೂದಲುಳ್ಳವನೂ ದಾನ ತೆಗೆದುಕೊಳ್ಳಬಾರದು. ಚೆನ್ನಾಗಿ ಸ್ನಾನಮಾಡಿ ಆಚಮನಮಾಡಿ ಶುಚಿಯಾಗಿ ಸಂಯಮಿಯಾದವನು ದಾನ ತೆಗೆದು ಕೊಳ್ಳಬೇಕು.

ತೋಯಂ ದದ್ಯಾತ್ತಥಾ ದಾತಾ ದಾನೇ ವಿಧಿರಯಂ ಸ್ಮೃತಃ ।
ಪ್ರತಿಗೃಹೀತಾ ಸಾವಿತ್ರಂ ಸರ್ವತ್ರೈವ ತು ಕೀರ್ತಯೇತ್ ॥ ೧೦ ॥

ತತಸ್ತು ಕೀರ್ತಯೇತ್ಸಾರ್ಧಂ ದ್ರವ್ಯೇಣ ದ್ರವ್ಯದೇವತಾಂ ।
ಸಮಾಪಯೇತ್ತತಃ ಪಶ್ಚಾತ್ಕರ್ಮಸ್ತುತ್ಯಾ ಪ್ರತಿಗ್ರಹಂ ॥ ೧೧ ॥

ಪ್ರತಿಗ್ರಹಂ ಪಠೇದುಚ್ಚೈಃ ಪ್ರತಿಗೃಹ್ಯ ದ್ವಿಜೋತ್ತಮಃ ।
ಮಂದಂ ಪಠೇತ್ತು ರಾಜನ್ಯಾದುಪಾಂಶು ಚ ತಥಾ ವಿಶಃ ॥ ೧೨ ॥

ಮನಸಾ ತು ತಥಾ ಶೂದ್ರಾತ್ಸ್ವಸ್ತಿವಾಚನಕಂ ತಥಾ ।
ಸೋಂಕಾರಂ ಬ್ರಾಹ್ಮಣೇ ಕುರ್ಯಾನ್ನಿರೋಂಕಾರಂ ಮಹೀಪತೌ ॥ ೧೩ ॥

ಉಪಾಂಶು ಚ ತಥಾ ವೈಶ್ಯೇ ಸ್ವಸ್ತಿ ಶೂದ್ರೇ ಪ್ರಕೀರ್ತಿತಂ ।
ಅಭಯಂ ಸರ್ವದೈವತ್ಯಂ ಭೂಮಿರ್ವೈ ವಿಷ್ಣುದೇವತಾ ॥ ೧೪ ॥

ಕನ್ಯಾದಾನಂ ತಥಾ ದಾಸೀ ಪ್ರಾಜಾಪತ್ಯಾಃ ಪ್ರಕೀರ್ತಿತಾಃ ।
ತಥಾ ಚೈಕಶಫಂ ಸರ್ವಂ ಕಥಿತಂ ಯಮದೈವತಂ ॥ ೧೫ ॥

೧೦-೧೩. ದಾನಮಾಡುವವನು ದಾನಸಮಯದಲ್ಲಿ ಮೊದಲು ನೀರನ್ನು ಕೊಡಬೇಕು. ದಾನದಲ್ಲಿ ಇದೂ ಶಾಸ್ತ್ರೋಕ್ತವಾದದ್ದು. ದಾನತೆಗೆದುಕೊಳ್ಳುವವನು ಆಗ ಸೂರ್ಯಮಂತ್ರವನ್ನು ಉಚ್ಚರಿಸಬೇಕು. ಆಮೇಲೆ ದ್ರವ್ಯದೊಡನೆ ಆಯಾಯ ದ್ರವ್ಯದೇವತೆಗಳನ್ನೂ ಹೇಳಬೇಕು. ಆಮೇಲೆ ಕರ್ಮದ ಸ್ತುತಿಯಿಂದ ದಾನವನ್ನು ಪೂರ್ತಿಗೊಳಿಸಬೇಕು. ಬ್ರಾಹ್ಮಣೋತ್ತಮನು ದಾನವನ್ನು ಬ್ರಾಹ್ಮಣನಿಂದ ತೆಗೆದುಕೊಂಡು ಗಟ್ಟಿಯಾಗಿ ಪ್ರತಿಗ್ರಹ ಶಬ್ದವನ್ನುಚ್ಚರಿಸಬೇಕು. ಕ್ಷತ್ರಿಯರಿಂದ ತೆಗೆದುಕೊಳ್ಳುವಾಗ ಮೆಲ್ಲಗೆ ಪಠಿಸಬೇಕು. ವೈಶ್ಯನಿಂದ ತೆಗೆದುಕೊಳ್ಳುವಾಗ ಮನಸ್ಸಿನಲ್ಲಿಯೇ ನಿಧಾನವಾಗಿ ಹೇಳಬೇಕು. ಶೂದ್ರನಿಂದ ಪಡೆಯುವಾಗ ಸ್ವಸ್ತಿ ಎಂಬ ಪದವನ್ನು ಮನಸ್ಸಿನಲ್ಲಿಯೇ ಉಚ್ಚರಿಸಬೇಕು. ಬ್ರಾಹ್ಮಣನಲ್ಲಿ ಓಂಕಾರಸಹಿತವಾಗಿಯೂ, ರಾಜನಲ್ಲಿ ಓಂಕಾರರಹಿತವಾಗಿಯೂ, ವೈಶ್ಯನಲ್ಲಿ ಮಾನಸಿಕವಾಗಿಯೂ, ಶೂದ್ರನಲ್ಲಿ ಸ್ವಸ್ತಿ ಶಬ್ದಪೂರ್ವಕವಾಗಿಯೂ ಹೇಳಬೇಕು.

೧೪-೧೫. ಅಭಯದಾನಕ್ಕೆ ಎಲ್ಲರೂ ದೇವತೆಗಳು, ಭೂಮಿಗೆ ವಿಷ್ಣು ದೇವತೆಯು, ಕನ್ಯಾದಾನಾದಿಗಳಿಗೆ ಬ್ರಹ್ಮನೇ ದೇವತೆಯು. ಒಂದೇ ಗೊರಸುಳ್ಳ

ಮಾಹಿಷಂ ಚ ತಥಾ ಸಾಮ್ಯಂ ಚೋಷ್ಟ್ರಂ ವೈ ನೈರ್‍ಋತಂ ಭವೇತ್ ।
ರೌದ್ರೀ ಧೇನುರ್ವಿನಿರ್ದಿಷ್ಟಾ ಚ್ಛಾಗಮಾಗ್ನೇಯಮುಚ್ಯತೇ ॥ ೧೬ ॥

ಮೇಷಂ ತು ವಾರುಣಂ ವಿದ್ಯಾದ್ವರಾಹೋ ವೈಷ್ಣವಃ ಸ್ಮೃತಃ ।
ಆರಣ್ಯಾಃ ಪಶವಃ ಸರ್ವೇ ಕಥಿತಾ ವಾಯುದೈವತಾಃ ॥ ೧೭ ॥

ಜಲಾಶಯಾನಿ ಸರ್ವಾಣಿ ವಾರಿಧಾನೀ ಕಮಂಡಲುಃ ।
ಕುಂಭಂ ಚ ಕರಕಂ ಚೈವ ವಾರುಣಾನಿ ದ್ವಿಜೋತ್ತಮಾಃ ॥ ೧೮ ॥

ಸಮುದ್ರಜಾನಿ ರತ್ನಾನಿ ವಾರುಣಾನಿ ದ್ವಿಜೋತ್ತಮಾಃ ।
ಆಗ್ನೇಯಂ ಕನಕಂ ಪ್ರೋಕ್ತಂ ಸರ್ವಲೋಹಾನಿ ಚಾಪ್ಯಥ ॥ ೧೯ ॥

ಪ್ರಾಜಾಪತ್ಯಾನಿ ಸಸ್ಯಾನಿ ಪಕ್ವಾನ್ನಮಪಿ ಚ ದ್ವಿಜಾಃ ।
ಜ್ಞೇಯಾನಿ ಸರ್ವಗಂಧಾನಿ ಗಾಂಧರ್ವಾಣಿ ವಿಚಕ್ಷಣೈಃ ॥ ೨೦ ॥

ಬಾರ್ಹಸ್ಪತ್ಯಂ ಸ್ಮೃತಂ ವಾಸಃ ಸೌಮ್ಯಾನ್ಯಥ ರಸಾನಿ ಚ ।
ಪಕ್ಷಿಣಶ್ಚ ತಥಾ ಸರ್ವೇ ವಾಯವ್ಯಾಃ ಪರಿಕೀರ್ತಿತಾಃ ॥ ೨೧ ॥

ವಿದ್ಯಾ ಬ್ರಾಹ್ಮೀ ವಿನಿರ್ದಿಷ್ಟಾ ವಿದ್ಯೋಪಕರಣಾನಿ ಚ ।
ಸಾರಸ್ವತಾನಿ ಜ್ಞೇಯಾನಿ ಪುಸ್ತಕಾದ್ಯಾನಿ ಪಂಡಿತೈಃ ॥ ೨೨ ॥

ಅಶ್ವಾದಿದಾನಗಳಿಗೆ ಯಮನು ದೇವತೆಯು. ಎಮ್ಮೆ, ಒಂಟೆಗಳಿಗೆ ನಿರ್‍ಋತಿಯು ದೇವತೆ. ಹಸುವಿಗೆ ರುದ್ರ, ಆಡಿಗೆ ಅಗ್ನಿಯೇ ದೇವತೆ.

೧೭–೨೦. ಕುರಿಗೆ ವರುಣನೂ, ಹಂದಿಗೆ ವಿಷ್ಣುವೂ, ಅರಣ್ಯವಾಸಿಗಳಾದ ಪಶ್ವಾದಿಗಳಿಗೆ ವಾಯುವೂ ದೇವತೆಯಾಗಿರುವುದು. ಎಲೈ ಬ್ರಾಹ್ಮಣಶ್ರೇಷ್ಠರೇ, ನೀರಿಗೆ ಆಶ್ರಯವಾದ ಹೂಜಿ, ಕಮಂಡಲು, ಕಲಶ, ಕೊಡ ಇವುಗಳಿಗೆಲ್ಲ ವರುಣನು ದೇವತೆಯು. ಚಿನ್ನಕ್ಕೆ ಅಗ್ನಿಯೇ ದೇವತೆಯು. ಉಳಿದ ಎಲ್ಲಾ ಲೋಹಗಳೂ, ಸಸ್ಯಗಳೂ, ಅನ್ನವೂ, ಪ್ರಜಾಪತಿದೇವತಾಕವು. ಸುಗಂಧವಸ್ತುಗಳಿಗೆಲ್ಲಾ ಗಂಧರ್ವರು ದೇವತೆಗಳೆಂದು ಬುದ್ಧಿವಂತರಾದವರಿಂದ ತಿಳಿಯಲ್ಪಡಬೇಕು.

೨೧–೨೪. ವಸ್ತ್ರ (ಬಟ್ಟೆ) ಮತ್ತು ಸೌಮ್ಯರಸಗಳಿಗೆ ಬೃಹಸ್ಪತಿಯು ದೇವತೆ. ಪಕ್ಷಿಗಳೆಲ್ಲವೂ ವಾಯುದೇವತಾಕಗಳು. ವಿದ್ಯೆಗೆ ಸರಸ್ವತಿಯು ದೇವತೆ.

ಸರ್ವೇಷಾಂ ಶಿಲ್ಪಭಾಂಡಾನಾಂ ವಿಶ್ವಕರ್ಮಾ ತು ದೇವತಾ ।
ದ್ರುಮಾಣಾಮಥ ಪುಷ್ಪಾಣಾಂ ಶಾಕಹಾರಿತಕೈಃ ಸಹ　　॥ ೨೩ ॥

ಫಲಾನಾಮಪಿ ಸರ್ವೇಷಾಂ ತಥಾ ಜ್ಞೇಯೋ ವನಸ್ಪತಿಃ ।
ಮತ್ಸ್ಯಮಾಂಸಂ ವಿನಿರ್ದಿಷ್ಟಂ ಪ್ರಾಜಾಪತ್ಯಂ ತಥೈವ ಚ　　॥ ೨೪ ॥

ಛತ್ರಂ ಕೃಷ್ಣಾಜಿನಂ ಶಯ್ಯಾ ರಥಮಾಸನಮೇವ ಚ ।
ಉಪಾನಹೌ ತಥಾ ಯಾನಂ ಯಚ್ಚಾನ್ಯತ್ಪ್ರಾಣಿವರ್ಜಿತಂ　　॥ ೨೫ ॥

ಉತ್ತಾನಾಂಗಿರಸೇ ತ್ವೇತತ್ಪ್ರತಿಗೃಹ್ಣೀತ ಮಾನವಃ ।
ಪರ್ಜನ್ಯಾಯ ತಥಾ ಸೀರಂ ಶಸ್ತ್ರವರ್ಮಧ್ವಜಾದಿಕಂ　　॥ ೨೬ ॥

ರಣೋಪಕರಣಂ ಸರ್ವಂ ಕಥಿತಂ ಚಕ್ರದೈವತಂ ।
ಗೃಹಂತು ಸರ್ವದೈವತ್ಯಂ ಯದ್ಯದುಕ್ತಂ ದ್ವಿಜೋತ್ತಮಾಃ　　॥ ೨೭ ॥

ತಜ್ಜ್ಞೇಯಂ ವಿಷ್ಣುದೈವತ್ಯಂ ಸರ್ವಂ ವಾ ದ್ವಿಜಸತ್ತಮಾಃ ।
ಭೂಮೇಃ ಪ್ರತಿಗ್ರಹಂ ಕುರ್ಯಾದ್ಭೂಮಿಂ ಕೃತ್ವಾ ಪ್ರದಕ್ಷಿಣಂ　　॥ ೨೮ ॥

ವಿದ್ಯೆಗೆ ಉಪಕರಣಗಳಾದ ಪುಸ್ತಕಮುಂತಾದವು ಸರಸ್ವತಿದೇವತಾಕವಾದವು. ಶಿಲ್ಪ ಸಾಧನಗಳಿಗೆ ವಿಶ್ವಕರ್ಮನು ದೇವತೆ ಮರಗಳಿಗೂ, ಹೂಗಳಿಗೂ, ಶಾಕಾದಿಗಳಿಗೂ. ಎಲ್ಲಾ ಹಣ್ಣುಗಳಿಗೂ ವನಸ್ಪತಿಯೇ ದೇವತೆಯು. ಮತ್ಸ್ಯಮಾಂಸಕ್ಕೆ ಪ್ರಜಾಪತಿಯೇ ದೇವತೆಯು.

೨೪–೨೭. ಛತ್ರಿ, ಕೃಷ್ಣಾಜಿನ, ಹಾಸಿಗೆ, ರಥ, ಪೀಠ, ಪಾದರಕ್ಷೆ, ವಾಹನ, ಇನ್ನೂ ಬೇರೆ ಪ್ರಾಣಿಭಿನ್ನವಾದವುಗಳು ಇವುಗಳಿಗೆ ಉತ್ತಾನಾಂಗಿರಸರೂ ದೇವತೆಗಳು. ನೇಗಿಲಿಗೆ ಪರ್ಜನ್ಯವೇ ದೇವತೆ. ಶಸ್ತ್ರ, ಕವಚ, ಧ್ವಜ ಇವುಗಳಿಗೂ, ಯುದ್ಧಕ್ಕೆ ಬೇಕಾದ ಸಾಮಾನುಗಳಿಗೂ ಚಕ್ರವು ದೇವತೆಯು. ಎಲೈ ಬ್ರಾಹ್ಮಣ ಶ್ರೇಷ್ಠರೇ, ಗ್ರಹಗಳಿಗೆ ಯಾವ ಯಾವ ಗ್ರಹಗಳು ಹೇಳಲ್ಪಟ್ಟಿವೆಯೋ ಅದೇ ಅವುಗಳಿಗೆ ದೇವತೆಗಳು. ಅಥವಾ ಎಲ್ಲವನ್ನೂ ವಿಷ್ಣುದೇವತಾಕವೆಂದು ತಿಳಿಯಬೇಕು. ಭೂಮಿಯನ್ನು ಪ್ರದಕ್ಷಿಣೆಮಾಡಿ ಭೂದಾನವನ್ನು ತೆಗೆದುಕೊಳ್ಳಬೇಕು.

೨೮–೩೨. ಕನ್ಯೆಯ ಕೈಹಿಡಿದು ಕನ್ಯಾದಾನವನ್ನೂ, ಎದೆಯಲ್ಲಿ ಕೈಯಿಟ್ಟು ದಾಸೀದಾಸರ ದಾನವನ್ನೂ ತೆಗೆದುಕೊಳ್ಳುವುದು ಧರ್ಮವೆಂದು ಹೇಳಿದೆ. ಆನೆಯನ್ನು

ಕರೇ ಗೃಹ್ಯ ತಥಾ ಕನ್ಯಾಂ ದಾಸೀದಾಸೌ ದ್ವಿಜೋತ್ತಮಾಃ ।
ಕರಂ ತು ಹೃದಿ ವಿನ್ಯಸ್ಯ ಧರ್ಮ್ಯೋ ಜ್ಞೇಯಃ ಪ್ರತಿಗ್ರಹಃ ॥ ೨೯ ॥

ಆರುಹ್ಯ ಚ ಗಜಸ್ಯೋಕ್ತಃ ಕರ್ಣೇ ಚಾಶ್ವಸ್ಯ ಕೀರ್ತಿತಃ ।
ತಥಾ ಚೈಕಶಫಾನಾಂ ಚ ಸರ್ವೇಷಾಮವಿಶೇಷತಃ ॥ ೩೦ ॥

ಪ್ರತಿಗೃಹ್ಣೀತ ಗಾಂ ಪುಚ್ಛೇ ಹ್ಯಂತೇ ಕೃಷ್ಣಾಜಿನಂ ತಥಾ ।
ಕರ್ಣೇಽಜಾಃ ಪಶವಶ್ಚಾನ್ಯೇ ಗ್ರಾಹ್ಯಾಃ ಪುಚ್ಛೇ ವಿಚಕ್ಷಣೈಃ ॥ ೩೧ ॥

ಪ್ರತಿಗ್ರಹಸ್ತ್ವಥೋಷ್ಟ್ರಸ್ಯ ಆರುಹ್ಯೈವ ತಥಾ ಭವೇತ್ ।
ಬೀಜಾನಾಂ ಮುಷ್ಟಿಮಾದಾಯ ರತ್ನಾನ್ಯಾದಾಯ ಸರ್ವಶಃ ॥ ೩೨ ॥

ವಸ್ತ್ರಂ ದಶಾಂತಾದಾದಧ್ಯಾತ್ಪರಿಧಾಯಾಥ ವಾ ಪುನಃ ।
ಆರುಹ್ಯೋಪಾನಹೌ ಮಂತ್ರಮಾರುಹ್ಯೈವ ಚ ಪಾದುಕೇ ॥ ೩೩ ॥

ಈಷಾತಸ್ತು ರಥಂ ಗ್ರಾಹ್ಯಂ ಛತ್ರಂ ದಂಡೇ ತು ವಾಚಯೇತ್ ।
ದ್ರುಮಾಣಾಮಥ ಸರ್ವೇಷಾಂ ಮೂಲೇ ನ್ಯಸ್ತಕರೋ ದ್ವಿಜಾಃ ॥ ೩೪ ॥

ದಾನತೆಗೆದುಕೊಳ್ಳುವಾಗ ಅದರ ಮೇಲೆ ಕುಳಿತುಕೊಳ್ಳಬೇಕು. ಒಂದೇ ಗೊರಸುಳ್ಳ ಕುದುರೆ ಮುಂತಾದವನ್ನು ತೆಗೆದುಕೊಳ್ಳುವಾಗ ಕಿವಿಹಿಡಿದು ದಾನತೆಗೆದುಕೊಳ್ಳಬೇಕು ಗೋವನ್ನು ಬಾಲಹಿಡಿದು ತೆಗೆದುಕೊಳ್ಳಬೇಕು. ಕೃಷ್ಣಾಜಿನದಾನವನ್ನು ತುದಿಯಲ್ಲಿ ಹಿಡಿದು ತೆಗೆದುಕೊಳ್ಳಬೇಕು. ಆಡುಗಳನ್ನು ಕಿವಿಹಿಡಿದೂ, ಇತರ ಪಶ್ವಾದಿಗಳನ್ನು ಬಾಲಹಿಡಿದೂ ತೆಗೆದುಕೊಳ್ಳಬೇಕು. ಉಷ್ಟ್ರದಾನವನ್ನು ಅದರ ಮೇಲೆ ಏರಿ ತೆಗೆದುಕೊಳ್ಳಬೇಕು. ಬೀಜಗಳನ್ನೂ, ರತ್ನಗಳನ್ನೂ ಮುಷ್ಟಿಯಿಂದ ತೆಗೆದುಕೊಳ್ಳಬೇಕು.

೩೩–೩೭. ವಸ್ತ್ರವನ್ನು ಅಂಚಿನ ತುದಿಯಲ್ಲಾಗಲಿ, ಅಥವಾ ಹೊದ್ದು ಕೊಂಡಾಗಲಿ ತೆಗೆದುಕೊಳ್ಳಬೇಕು. ಪಾದರಕ್ಷೆಯನ್ನೂ, ಪಾದುಕೆಗಳನ್ನೂ ಮೆಟ್ಟಿ ಕೊಂಡು ದಾನತೆಗೆದುಕೊಳ್ಳಬೇಕು. ಮೂಕಿಯ ಮರದ ಕೆಳಿಗೆ ಹಿಡಿದುಕೊಂಡು ರಥವನ್ನೂ, ಛತ್ರಿಯ ಕೋಲಿನಿಂದ ಛತ್ರಿಯನ್ನೂ ತೆಗೆದುಕೊಳ್ಳಬೇಕು. ಬ್ರಾಹ್ಮಣರು

ಆಯುಧಾನಿ ಸಮಾದಾಯ ತಥೋನ್ಮುಚ್ಯ ವಿಭೂಷಣಂ ।
ವರ್ಮಧ್ವಜೌ ತಥಾ ಸ್ಪೃಷ್ಟ್ವಾ ಪ್ರವಿಶ್ಯ ಚ ತಥಾ ಗೃಹಂ ॥ ೩೫ ॥

ಅವತೀರ್ಯ ತು ಸರ್ವಾಣಿ ಜಲಸ್ಥಾನಾನಿ ವೈ ದ್ವಿಜಾಃ ।
ದ್ರವ್ಯಾಣ್ಯನ್ಯಾನ್ಯಥಾದಾಯ ಸ್ಪೃಷ್ಟ್ವಾ ತು ಬ್ರಾಹ್ಮಣಃ ಪಠೇತ್ ॥ ೩೬ ॥

ಕನ್ಯಾದಾನೇ ತು ಚ ಪಠೇದ್ದ್ರವ್ಯಾಣಾಂ ತು ಪೃಥಕ್ಪೃಥಕ್ ।
ಪ್ರತಿಗ್ರಹೇ ದ್ವಿಜಶ್ರೇಷ್ಠಾಸ್ತತ್ರೈವಾಂತರ್ಭವಂತಿ ತೇ ॥ ೩೭ ॥

ದ್ರವ್ಯಾಣಾಮಥ ಸರ್ವೇಷಾಂ ದ್ರವ್ಯಸಂಶ್ರವಣಾನ್ನರಾಃ ।
ವಾಚಯೇಜ್ಜಲಮಾದಾಯ ಕರೇಣಾಥ ಪ್ರತಿಗ್ರಹಂ ॥ ೩೮ ॥

ಪ್ರತಿಗ್ರಹಸ್ಯ ಯೋ ಧರ್ಮಂ ನ ಜಾನಾತಿ ದ್ವಿಜೋ ವಿಧಿಂ ।
ದ್ರವ್ಯಸ್ತೈನ್ಯಸಮಾಯುಕ್ತೋ ನರಕಂ ಪ್ರತಿಪದ್ಯತೇ ॥ ೩೯ ॥

ಎಲ್ಲಾ ಮರಗಿಡಗಳನ್ನು ಅದರ ಬುಡದಲ್ಲಿ ಕೈಯಿಟ್ಟು ತೆಗೆದುಕೊಳ್ಳಬೇಕು. ಆಯುಧವನ್ನು ಹಿಡಿದುಕೊಂಡೂ ಮತ್ತು ಆಭರಣಗಳನ್ನು ಬಿಡಿಸಿಯೂ ಕವಚ, ಧ್ವಜಗಳನ್ನು ಮುಟ್ಟಿಯೂ, ಮನೆಯನ್ನು ಮನೆಯೊಳಗೆ ಪ್ರವೇಶಿಯೂ ದಾನತೆಗೆದುಕೊಳ್ಳಬೇಕು. ಬ್ರಾಹ್ಮಣರೇ, ನೀರಿನ ವಸತಿಗಳನ್ನು ಅಲ್ಲಿ ಇಳಿದು ತೆಗೆದುಕೊಳ್ಳಬೇಕು. ದ್ರವ್ಯ ಮತ್ತು ಉಳಿದವುಗಳನ್ನು ಮುಟ್ಟಿ ದಾನಪಡೆಯಬೇಕು. ಕನ್ಯಾದಾನದಲ್ಲಿ ಬೇರೆ ಬೇರೆಯಾಗಿ ದ್ರವ್ಯಗಳ ದಾನಗಳನ್ನು ಉಚ್ಚರಿಸಬೇಕು. ಆದರೆ ಎಲ್ಲಾ ದಾನಗಳೂ ಅದರಲ್ಲಿ ಅಂತರ್ಭೂತಗಳಾಗಿವೆ.

೩೮–೪೦. ಎಲ್ಲಾ ದ್ರವ್ಯಗಳ ಹೆಸರನ್ನು ಉಚ್ಚರಿಸಿ ಹೇಳಿಸಿ ದಾನಮಾಡಬೇಕು. ನೀರಿನೊಡನೆ ಕೈಯಲ್ಲಿ ಪ್ರತಿಗ್ರಹವನ್ನು ಪಡೆಯಬೇಕು. ಪ್ರತಿಗ್ರಹದ ಕ್ರಮವನ್ನು ವಿಧಿವತ್ತಾಗಿ ತಿಳಿಯದೆ ತೆಗೆದುಕೊಳ್ಳುವುದು ಕಳ್ಳತನಕ್ಕೆ ಸಮಾದುದು. ಅವನು ನರಕವನ್ನೂ ಸಹ ಹೊಂದುವನು. ಅಂತಹ ಪ್ರತಿಗ್ರಹದಿಂದ ಬ್ರಾಹ್ಮಣನು

ನಿಷ್ಕ್ರೀಣಾತಿ ತು ತದ್ದ್ರವ್ಯಂ ಬ್ರಾಹ್ಮಣಸ್ತು ಪ್ರತಿಗ್ರಹಾತ್ ।
ವಿಧಿಂ ತು ಧರ್ಮ್ಯಂ ವಿಜ್ಞಾಯ ಬ್ರಾಹ್ಮಣಸ್ತು ಪ್ರತಿಗ್ರಹೇ ॥ ೪೦ ॥

ಆತ್ಮನಃ ಶ್ರೇಯಸಾ ಯೋಗಂ ಕುರ್ಯಾದ್ದಾತಾ ತಥೈವ ಚ ।
ಭುವಂ ಧೇನುಮಥಾಶ್ವಂ ಚ ರತ್ನಾನಿ ಕನಕಂ ತಥಾ ॥ ೪೧ ॥

ತಿಲಾನಿ ಕುಂಜರಂ ದದ್ಯಾನ್ನಾವಿಜ್ಞಾಯ ಗುಣಾಗುಣಾನ್ ।
ಆನೃಶಂಸ್ಯೇನ ಸರ್ವಸ್ಯ ದದ್ಯಾದನ್ನಂ ವಿಚಕ್ಷಣಃ ॥ ೪೨ ॥

ವಾಸಶ್ಚ ದದ್ಯಾತ್ಸರ್ವಸ್ಯ ಸರ್ವಸಾಧಾರಣೇ ಹಿತೇ ।
ವಿಧಿಂ ಧರ್ಮ್ಯಮವಿಜ್ಞಾಯ ಯಸ್ತು ಕುರ್ಯಾತ್ಪ್ರತಿಗ್ರಹಂ ॥ ೪೩ ॥

ದಾತ್ರಾ ಸಹ ತರತ್ಯೇವ ನೈವ ದುರ್ಗಾಣ್ಯಸೌ ದ್ವಿಜಃ ।
ತಸ್ಮಾತ್ಸರ್ವಪ್ರಯತ್ನೇನ ವಿಧಿಜ್ಞೇಯಃ ಪ್ರತಿಗ್ರಹೇ ॥ ೪೪ ॥

ಪದಾರ್ಥಗಳನ್ನು ಕೊಂಡುಕೊಂಡಂತೆಯೇ ಆಗುತ್ತವೆ. ಆದುದರಿಂದ ಶಾಸ್ತ್ರದಲ್ಲಿ ಹೇಳಿದ ಕ್ರಮವನ್ನು ಚೆನ್ನಾಗಿ ತಿಳಿಯಬೇಕು.

೪೧–೪೨. ದಾನವನ್ನು ಕೊಡತಕ್ಕವನು ತನ್ನ ಶ್ರೇಯಸ್ಸನ್ನುದ್ದೇಶಿಸಿ ದಾನಮಾಡಬೇಕು. ಭೂಮಿ, ಹಸು, ಕುದುರೆ, ರತ್ನ, ಚಿನ್ನ, ತಿಲ, ಆನೆ ಇವುಗಳ ದಾನವನ್ನು ಮಾಡುವಾಗ ಅವುಗಳ ಗುಣಾಗುಣಗಳನ್ನೂ ತೆಗೆದುಕೊಳ್ಳುವವರ ಗುಣಾಗುಣಗಳನ್ನೂ, ತಿಳಿದುಕೊಂಡಿರಬೇಕು. ಅನ್ನವನ್ನು ದಯೆಯಿಂದ ಎಲ್ಲರಿಗೂ ದಾನಮಾಡಬಹುದು. ಹಾಗೆಯೇ ವಸ್ತ್ರ (ಬಟ್ಟೆ) ವನ್ನೂ ಸರ್ವಸಾಧಾರಣವಾಗಿ ಎಲ್ಲರಿಗೂ ದಾನಮಾಡಬಹುದು.

೪೩–೪೪. ಶಾಸ್ತ್ರೋಕ್ತವಾದ ಪ್ರತಿಗ್ರಹಕ್ರಮವನ್ನು ತಿಳಿಯದೆ ದಾನ ತೆಗೆದುಕೊಂಡರೆ ದಾನಕೊಡುವವನೂ, ತೆಗೆದುಕೊಂಡವನೂ ಕಷ್ಟಪರಂಪರೆಯನ್ನು ದಾಟಲಾರರು ಅವರಿಗೆ ಪುಣ್ಯ ಸಿಗದೆ ಪಾಪಿಗಳಾಗಿ ದುಃಖವನ್ನು ಅನುಭವಿಸುವರು. ಆದುದರಿಂದ ಎಲ್ಲಾ ವಿಧದಿಂದಲೂ ದಾನಕ್ರಮವನ್ನು ತಿಳಿದುಕೊಳ್ಳಬೇಕು.

ಪ್ರತಿಗ್ರಹೋ ಯೋ ವಿಧಿನಾ ಗೃಹೀತೋ
ದ್ವಯೋಸ್ತು ಯೋಗಂ ಪರಮೇಣ ಕುರ್ಯಾತ್ ।
ಪರತ್ರ ಸಂವೃತ್ಯ ತಥೇಹ ಲೋಕೇ
ಸ ಶ್ರೇಯಸೇ ನಾತ್ರ ವಿಚಾರಮಸ್ತಿ ॥ ೪೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪ್ರತಿಗ್ರಹವಿಧಿ
ವರ್ಣನೋನಾಮ ಏಕೋತ್ತರತ್ರಿಶತತಮೋಧ್ಯಾಯಃ

---

೪೫. ವಿಧಿವತ್ತಾಗಿ ದಾನಮಾಡಲ್ಪಟ್ಟು ವಿಧಿವತ್ತಾಗಿ ಪ್ರತಿಗ್ರಹಮಾಡಿದಲ್ಲಿ ಆಗ ಇಬ್ಬರಿಗೂ ಪರಮ ಶ್ರೇಯಸ್ಸಾಗುತ್ತದೆ. ಈ ಲೋಕದಲ್ಲಿಯೂ ಮರಣಾಂತರದಲ್ಲಿಯೂ ಪರಮ ಶ್ರೇಯಸ್ಸನ್ನು ಹೊಂದುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ
ಪ್ರತಿಗ್ರಹಪ್ರಶಂಸೆಯೆಂಬ ಮುನ್ನೂರ ಒಂದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದ್ವ್ಯಧಿಕತ್ರಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ಪೃಥಕ್ಪೃಥಕ್ ತ್ವಮಾಚಕ್ಷ್ವ ದಾನಾನಾಂ ಫಲಮುತ್ತಮಂ ।
ಸರ್ವಧರ್ಮಭೃತಾಂ ಶ್ರೇಷ್ಠ ಸರ್ವಜ್ಞಸ್ತ್ವಂ ಮತೋ ಹಿ ನಃ || ೧ ||

|| ಹಂಸ ಉವಾಚ ||

ಅಭಯಸ್ಯ ಪ್ರದಾನಾದ್ಧಿ ನಾನ್ಯದ್ದಾನಂ ವಿಶಿಷ್ಯತೇ ।
ಸರ್ವೇಷಾಮೇವ ದಾನಾನಾಂ ಪ್ರಾಣದಾನಂ ವಿಶಿಷ್ಯತೇ || ೨ ||

ಗ್ರಾಹ್ಯಂ ಪ್ರಾಣಪ್ರದಾನಂತು ಚಂಡಾಲಾತ್ಪುಕ್ಕಸಾದಪಿ ।
ಜೀವನ್ ಸರ್ವಮವಾಪ್ನೋತಿ ಜೀವನ್ ಧರ್ಮಂ ಕರೋತಿಚ || ೩ ||

ಮುನ್ನೂರ ಎರಡನೆಯ ಅಧ್ಯಾಯ.

೧. ಋಷಿಗಳು ಹೇಳುತ್ತಾರೆ:—ನೀನು ಸರ್ವಧರ್ಮಿಷ್ಠರಲ್ಲಿಯೂ ಉತ್ತಮನಾಗಿದ್ದೀಯೆ. ಎಲ್ಲವನ್ನೂ ತಿಳಿದಿರುತ್ತೀಯೆ. ನಮಗೆ ದಾನಗಳ ಆಯಾಯ ಉತ್ತಮವಾದ ಫಲಗಳನ್ನು ಬೇರೆ ಬೇರೆಯಾಗಿ ಹೇಳಬೇಕು.

೨-೫. ಹಂಸವು ಹೇಳುತ್ತದೆ:—ಅಭಯಪ್ರದಾನಕ್ಕೆ ಸಮವಾದ ಉತ್ತಮವಾದ ದಾನ ಬೇರೆಯಿಲ್ಲ. ಎಲ್ಲಾ ದಾನಗಳಿಗಿಂತಲೂ ಪ್ರಾಣದಾನವು ಶ್ರೇಷ್ಠವಾದದ್ದು. ಪ್ರಾಣದಾನವನ್ನು ಚಂಡಾಲಕಿರಾತಾದಿಗಳಿಂದಲೂ ಸಹ ಪಡೆಯಬಹುದು ಏಕೆಂದರೆ ಬದುಕಿದ್ದರೆ ಧರ್ಮಾಚರಣೆಮಾಡಿ ಸುಖವನ್ನು ಹೊಂದ

ಜೀವಮಾನಸ್ತು ಪುರುಷಃ ಕಾಮಾನಾಂ ಭಾಜನಂ ಭವೇತ್ ।
ಭಾಜನೇನ ತು ಸರ್ವಂ ವೈ ಭಾಜನತ್ವಂ ವಿನಶ್ಯತಿ　　　　॥ ೪ ॥

ಶರೀರಧರ್ಮ ಸರ್ವಸ್ವಂ ರಕ್ಷಣಾಯ ಪ್ರಯತ್ನತಃ ।
ಶರೀರಾತ್ಸ್ರವತೇ ಧರ್ಮಂ ಪರ್ವತಾತ್ಸಲಿಲಂ ಯಥಾ　　　　॥ ೫ ॥

ಅಭಯಸ್ಯ ಪ್ರದಾನೇನ ನರಃ ಸ್ಯಾತ್ಸರ್ವಕಾಮದಃ ।
ಅಶ್ವಮೇಧಫಲಂ ತಸ್ಯ ಯೋಽರಕ್ಷೇಚ್ಛರಣಾಗತಂ　　　　॥ ೬ ॥

ಶರಣಾಗತಂ ತು ಸಂತ್ಯಜ್ಯಯೋ ನರಃ ಪುರುಷಾಧಮಃ ।
ಬಹೂನ್ಯಬ್ದಸಹಸ್ರಾಣಿ ನರಕಂ ಪ್ರತಿಪದ್ಯತೇ　　　　॥ ೭ ॥

ನರಕಾಚ್ಚ ತಥಾ ಮುಕ್ತಃ ತಿರ್ಯಗ್ಯೋನಿಷು ಜಾಯತೇ ।
ತತ್ರಾಪಿ ಚ ತಥಾಪ್ನೋತಿ ವಧಬಂಧಾನ್ಯನೇಕಶಃ　　　　॥ ೮ ॥

ದೈವಾನ್ಮಾನುಷ್ಯಮಾಸಾದ್ಯ ಚಂಡಾಲತ್ವಮವಾಪ್ನುಯಾತ್ ।
ವ್ಯಾಧಿಬಂಧವಧೈರ್ಘೋರೈಃ ತತ್ರಾಪಿ ಸ ಚ ಯುಜ್ಯತೇ　　　　॥ ೯ ॥

ಬಹುದು　ಜೀವಿಸಿರುವ ಮನುಷ್ಯನೇ ಸಕಲೇಚ್ಛೆಯನ್ನೂ ಪೂರೈಸಿಕೊಳ್ಳುತ್ತಾನೆ. ಜೀವನವೇ ಎಲ್ಲದಕ್ಕೂ ಆಧಾರವಾದ ಮೇಲೆ, ಅದು ಹೋದ ಮೇಲೆ ಯಾವುದುತಾನೇ ಸಾಧ್ಯ. ಧರ್ಮವೆಲ್ಲವೂ ಶರೀರವನ್ನು ಆಶ್ರಯಿಸಿರುತ್ತವೆ. ಪ್ರಯತ್ನದಿಂದ ಶರೀರ ವನ್ನು ರಕ್ಷಿಸಬೇಕು. ಪರ್ವತದಿಂದ ನೀರು ಹರಿಯುವಂತೆ ಶರೀರದಿಂದ ಧರ್ಮವು ತಡೆಯಿಲ್ಲದೆ ಆಚರಿಸಲ್ಪಡುತ್ತದೆ.

೬-೯. ಅಭಯದಾನದಿಂದ ಮನುಷ್ಯನು ಸರ್ವಾಭೀಷ್ಟವನ್ನೂ ನೆರವೇರಿಸಿ ದಂತಾಗುವುದು. ಶರಣಾಗತನನ್ನು ಯಾರು ರಕ್ಷಿಸುತ್ತಾರೋ ಅವರು ಅಶ್ವಮೇಧ ಫಲವನ್ನು ಹೊಂದುತ್ತಾರೆ. ಶರಣಾಗತರನ್ನು ಯಾರು ಉಪೇಕ್ಷೆಮಾಡುತ್ತಾರೋ ಅವರು ಸಾವಿರಾರು ವರ್ಷ ನರಕವನ್ನು ಹೊಂದುತ್ತಾರೆ. ನರಕದಿಂದ ಬಿಡುಗಡೆ ಹೊಂದಿಯೂ ಕ್ರಿಮಿಕೀಟಾದಿ ಜನ್ಮವನ್ನು ಹೊಂದುತ್ತಾನೆ. ಅಲ್ಲಿಯೂ ಕೂಡ ಅನೇಕ ವಿಧವಾಗಿ ವಧಬಂಧನಾದಿಗಳನ್ನು ಹೊಂದುತ್ತಾನೆ. ಅದೃಷ್ಟವಶದಿಂದ ಮನುಷ್ಯಜನ್ಮವನ್ನು ಹೊಂದಿದರೂ ಚಂಡಾಲತ್ವವನ್ನು ಪಡೆಯುವನು. ಅಲ್ಲಿಯೂ ರೋಗ, ಬಂಧನ, ನಾಶ ಮುಂತಾದ ತೊಂದರೆಗಳಿಂದ ದುಃಖವನ್ನನುಭವಿಸುತ್ತಾನೆ

ಪರಿತ್ರಾಣಂ ತು ಯಃ ಕುರ್ಯಾದ್ಭೀತಸ್ಯ ಶರಣೈಷಿಣಃ ।
ಸ ಏಕಃ ಪುರುಷೋ ಲೋಕೇ ಸರ್ವಧರ್ಮಭೃತಾಂ ವರಃ ॥ ೧೦ ॥

ವಧಭೀತಸ್ಯ ಯಃ ಕುರ್ಯಾತ್ಪರಿತ್ರಾಣಂ ನರೋತ್ತಮಃ ।
ಶಕ್ರಲೋಕಃ ಸ್ಮೃತಸ್ತಸ್ಯ ಯಾವದಿಂದ್ರಾಶ್ಚತುರ್ದಶ ॥ ೧೧ ॥

ತಮಃಪ್ರವೇಶಭೀತಸ್ಯ ಪರಿತ್ರಾಣೇನ ಮಾನವಃ ।
ಬ್ರಹ್ಮಲೋಕಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೧೨ ॥

ವಧಾದಪಿ ಪರಂ ಪಾಪಂ ಚಕ್ಷುಷಾ ತು ವಿಯೋಜಯೇತ್ ।
ಪಾರ್ಥಿವೇನ ನ ತತ್ಕಾರ್ಯಂ ಕದಾ ಚಿದಪಿ ಕಸ್ಯ ಚಿತ್ ॥ ೧೩ ॥

ತಮಃಪ್ರವೇಶನಂ ಕೃತ್ವಾ ಪರೇಷಾಂ ಪುರುಷಾಧಮಃ ।
ಅಂಧತ್ವಂ ಧ್ರುವಮಾಪ್ನೋತಿ ಯತ್ರ ಯತ್ರಾಭಿಜಾಯತೇ ॥ ೧೪ ॥

೧೦–೧೩. ಭಯಭೀತನಾಗಿ ಶರಣಾಪೇಕ್ಷೆಯಿಂದ ಬಂದಿರುವವನ ರಕ್ಷಣೆಯನ್ನು ಯಾರು ಮಾಡುವರೋ ಅವರೇ ಧರ್ಮಿಷ್ಠರಲ್ಲಿ ಉತ್ತಮರು. ಮರಣ ಭೀತಿಯಿಂದ ಬಂದಿರುವವನ ರಕ್ಷಣೆಯನ್ನು ಯಾರು ಮಾಡುವರೋ ಅವರು ಹದಿನಾಲ್ಕು ಇಂದ್ರರಿರುವವರೆಗೂ ಇಂದ್ರಲೋಕವನ್ನು ಹೊಂದುತ್ತಾರೆ. ಕತ್ತಲಿನಲ್ಲಿ ಸಿಕ್ಕಿದವನನ್ನು ಯಾರು ರಕ್ಷಿಸುವರೋ ಅವರು ಬ್ರಹ್ಮಲೋಕವನ್ನು ಹೊಂದುವರು. ಇದರಲ್ಲಿ ಯಾವ ಸಂಶಯವೂ ಇಲ್ಲ. ವಧೆಮಾಡುವುದಕ್ಕಿಂತಲೂ ಅಧಿಕವಾದ ಪಾಪವಿಲ್ಲ. ಇದನ್ನು ಕಣ್ಣಿನಿಂದ ನೋಡುವುದೂ ಮಹಾಪಾಪ. ರಾಜನಾದವನು ಇದನ್ನು ಎಂದಿಗೂ ಮಾಡಬಾರದು.

೧೪–೧೬. ಯಾವ ನೀಚಪುರುಷನು ಭಯಗೊಂಡವನನ್ನು ಕತ್ತಲೆಯಲ್ಲಿ ತಳ್ಳುತ್ತಾನೋ ಅವನು ಪ್ರತಿಜನ್ಮದಲ್ಲಿಯೂ ಕುರುಡನಾಗಿ ಹುಟ್ಟುವನು. ಮತ್ತು ಕಲ್ಪಸಹಸ್ರಪರ್ಯಂತ ಕತ್ತಲೆಯಿಂದ ಮುಕ್ತನಾಗುವುದೇ ಇಲ್ಲ. ಶ್ರೇಷ್ಠರಾದವರು

ಅಪಿಕಲ್ಪಸಹಸ್ರಾಣಿ ತಮಸಾ ನ ವಿ ಯುಜ್ಯತೇ ।
ಅಂಗಚ್ಛೇದನಭೀತಸ್ಯ ಕೃತ್ವಾ ತ್ರಾಣಮನಿಂದಿತಾಃ ॥ ೧೫ ॥

ರುದ್ರಲೋಕಮವಾಪ್ನೋತಿ ಕಲ್ಪಶೇಷಮಿತಿಶ್ರುತಿಃ ।
ಕಲ್ಪಾದಿಸರ್ಗೇ ಭವತಿ ಜ್ಞಾನಯುಕ್ತೋ ನರಸ್ತತಃ ॥ ೧೬ ॥

ಕೃತ್ವಾ ಬಂಧನಭೀತಸ್ಯ ಪರಿತ್ರಾಣಂ ನರೋತ್ತಮಃ ।
ಸರ್ವಬಂಧವಿನಿರ್ಮುಕ್ತೋ ವಾಯುಲೋಕೆ ಮಹೀಯತೇ ॥ ೧೭ ॥

ಅಸೇವನಾದ್ಧಿಭೀತಸ್ಯ ತ್ರಾಣಂ ಕೃತ್ವಾ ತಥಾ ನರಃ ।
ಸರ್ವದುಃಖವಿನಿರ್ಮುಕ್ತಃ ಸಾಧ್ಯಾನಾಂ ಲೋಕಮಾಪ್ನುಯಾತ್ ॥ ೧೮ ॥

ತಾಡನಾದ್ಯಸ್ತುಭೀತಸ್ಯ ಪರಿತ್ರಾಣಂ ಸಮಾಚರೇತ್ ।
ಸರ್ವಬಂಧವಿನಿರ್ಮುಕ್ತೋ ಭೃಗೂಣಾಂ ಲೋಕಮಶ್ನುತೇ ॥ ೧೯ ॥

ವಿವಾಸನಾಚ್ಚ ಭೀತಸ್ಯ ತ್ರಾಣಂ ಕೃತ್ವಾ ತಥಾ ನರಃ ।
ಸ್ವರ್ಗಲೋಕಮವಾಪ್ನೋತಿ ಮಾನುಷ್ಯೇ ಸ್ಥಾನಮುತ್ತಮಂ ॥ ೨೦ ॥

ಶಸ್ತ್ರಾದಿಗಳಿಂದ ಗಾಯಗೊಂಡವರನ್ನು ರಕ್ಷಿಸುವುದರಿಂದ ಕಲ್ಪಾಂತದವರೆವಿಗೂ ರುದ್ರಲೋಕವನ್ನು ಹೊಂದುತ್ತಾರೆ. ಮತ್ತೆ ಸೃಷ್ಟಿಕಾಲದಲ್ಲಿ ಜ್ಞಾನಿಗಳಾಗಿ ಜನಿಸುತ್ತಾರೆಂದು ಶ್ರುತಿಯಿದೆ.

೧೭–೧೮. ಬಂಧನಾದಿಗಳಿಂದ ಭೀತನಾದವನನ್ನು, ರಕ್ಷಿಸಿದರೆ ಸರ್ವಬಂಧಗಳಿಂದ ಬಿಡುಗಡೆ ಹೊಂದಿ ವಾಯುಲೋಕದಲ್ಲಿ ಪೂಜಿಸಲ್ಪಡುವನು. ಅಧಿಕಸೇವೆಯಿಂದ ಭೀತನಾದವನನ್ನು ರಕ್ಷಿಸಿದ ಮನುಷ್ಯನು ದುಃಖಗಳಿಂದ ಬಿಡಲ್ಪಟ್ಟವನಾಗಿ ಸಾಧ್ಯರ ಲೋಕವನ್ನು ಪಡೆಯುತ್ತಾನೆ.

೧೯–೨೨. ಏಟಿನಿಂದ ಹೆದರಿದವನ್ನು ರಕ್ಷಿಸುವುದರಿಂದ ಎಲ್ಲಾ ಬಂಧಗಳಿಂದ ಬಿಡುಗಡೆ ಹೊಂದಿ ಭೃಗುಲೋಕವನ್ನು ಪಡೆಯುವನು. ಮನೆಯನ್ನು ಬಿಟ್ಟು ದೇಶಭ್ರಷ್ಟನಾಗಿ ಕಷ್ಟಪಡುತ್ತಿರುವವನನ್ನು ರಕ್ಷಣೆ ಮಾಡುವುದರಿಂದ ಸ್ವರ್ಗಲೋಕ

ಧನಾಪಹಾರಭೀತಸ್ಯ ತ್ರಾಣಂ ಕೃತ್ವಾ ನರೋತ್ತಮಃ ।
ಸ್ವರ್ಗಲೋಕಮವಾಪ್ನೋತಿ ಪೂಜಾಂ ದೇವಗಣಾತ್ತಥಾ ॥ ೨೧ ॥

ನರಃ ಕೃತಪರಿತ್ರಾಣಃ ಪುಣ್ಯಂ ಕಿಂಚಿದ್ಯದಾಚರೇತ್ ।
ಭಾಗೀತಸ್ಯಪರಿತ್ರಾತಾ ನರಃ ಪುಣ್ಯಸ್ಯಕರ್ಮಣಃ ॥ ೨೨ ॥

ಪಶೂನಾಂ ಚ ಮೃಗಾಣಾಂ ಚ ಪಕ್ಷಿಣಾಂ ಚ ತಥಾ ದ್ವಿಜಾಃ ।
ತೃಣದ್ರುಮಲತಾನಾಂ ಚ ತ್ರಾಣಾದ್ಭವತಿ ನಾಕಭಾಕ್ ॥ ೨೩ ॥

ವಧಕಸ್ಯ ಹಸ್ತಗತಂ ಪಶುಂಕ್ರೀತ್ವಾ ನರೋತ್ತಮಃ ।
ನಾಕಲೋಕಮವಾಪ್ನೋತಿ ಸುಖೀ ಸರ್ವತ್ರಜಾಯತೇ ॥ ೨೪ ॥

ಯಾವಂತಿ ಪಶುರೋಮಾಣಿ ತಾವದ್ವರ್ಷಾಣಿ ಮಾನವಃ ।
ಸ್ವರ್ಗಲೋಕಮವಾಪ್ನೋತಿ ಯಶ್ಚತ್ರಾಣಂ ಕರೋತ್ಯಸೌ ॥ ೨೫ ॥

ವನ್ನು ಪಡೆಯುತ್ತಾನೆ. ಮನುಷ್ಯಜನ್ಮದಲ್ಲಿಯೂ ಉತ್ತಮಸ್ಥಾನ ಪಡೆಯುವನು. ಹಣವನ್ನು ಅಪಹರಿಸುವುದರಿಂದ ಭೀತನಾದವನನ್ನು ರಕ್ಷಿಸುವುದರಿಂದ ಸ್ವರ್ಗಲೋಕವನ್ನು ಹೊಂದಿ ದೇವಸಮೂಹದಿಂದ ಪೂಜೆಯನ್ನು ಹೊಂದುತ್ತಾನೆ. ಈ ರೀತಿ ರಕ್ಷಿಸಲ್ಪಟ್ಟವನು ಪುಣ್ಯಕಾರ್ಯಗಳನ್ನೇನಾದರೂ ಮಾಡಿದಲ್ಲಿ ಅಂತಹ ಪುಣ್ಯಕ್ಕೆ ರಕ್ಷಕನೂ ಭಾಗಿಯಾಗುತ್ತಾನೆ.

೨೩-೨೫. ಎಲೈ ಬ್ರಾಹ್ಮಣರಿರಾ, ಪಶು, ಮೃಗಪಕ್ಷಿಗಳು ಮತ್ತು ಹುಲ್ಲು, ಮರ, ಬಳ್ಳಿ ಮುಂತಾದವುಗಳ ರಕ್ಷಣೆಯಿಂದಲೂ ರಕ್ಷಕನು ಸ್ವರ್ಗವನ್ನು ಹೊಂದುತ್ತಾನೆ. ಕಟುಕನ ಕೈಯಿಂದ ಪಶುವನ್ನು ಪಡೆದು ರಕ್ಷಿಸಿದರೆ ಸ್ವರ್ಗವನ್ನು ಪಡೆಯಬಹುದು. ಪ್ರತಿಜನ್ಮದಲ್ಲಿಯೂ ಸುಖಿಯಾಗಿರಬಹುದು. ಯಾರು ಯಾವ ಪಶುವನ್ನು ರಕ್ಷಿಸುವರೋ ಅದರ ಮೈಯಲ್ಲಿ ಎಷ್ಟು ಕೂದಲಿದೆಯೋ ಅಷ್ಟು ವರ್ಷ ಸ್ವರ್ಗಲೋಕ

ಅಪಿ ಕೀಟಪತಂಗಸ್ಯ ತ್ರಾಣಾತ್ಸರ್ವಮುಪಾಶ್ನುತೇ ।
ಬಹೂನ್ಯಬ್ದ ಸಹಸ್ರಾಣಿ ನಾತ್ರಕಾರ್ಯಾವಿಚಾರಣಾ ॥ ೨೬ ॥

ಚೋರಗ್ರಸ್ತಂ ನೃಪಗ್ರಸ್ತಂ ರಿಪುಗ್ರಸ್ತಂ ತು ಮೋಕ್ಷಯೇತ್ ।
ವ್ಯಾಲಗ್ರಸ್ತಂ ತಥಾವಿಪ್ರಾಃ ಸೋಽಶ್ವಮೇಧಫಲಂ ಲಭೇತ್ ॥ ೨೭ ॥

ವಿಷಮೇ ತು ತಥಾ ದುರ್ಗೇ ಸಲಿಲೇ ವಾ ಹುತಾಶನೇ ।
ನಿಮಗ್ನಂ ಯಃ ಪರಿತ್ರಾಯೇತ್ಸೋಽಶ್ವಮೇಧಫಲಂ ಲಭೇತ್ ॥ ೨೮ ॥

ವ್ಯಾಧಿತಸ್ಯೌಷಧಂ ದತ್ವಾ ಪ್ರಾಣದಾನಫಲಂ ಲಭೇತ್ ।
ರೋಗಾರ್ತಂ ಪರಿಚರ್ಯಾಥ ಪ್ರಾಣದಾನಫಲಂ ಲಭೇತ್ ॥ ೨೯ ॥

ಉಪಚಾರಂ ತಥಾ ಕೃತ್ವಾ ಭಿಷಕ್ ಮೂಲ್ಯಂ ವಿನಾ ದ್ವಿಜಾಃ ।
ಪ್ರಾಣದಾನಫಲಂ ತಸ್ಯ ನಾಕಲೋಕೇ ಮಹೀಯತೇ ॥ ೩೦ ॥

ಸುಖವನ್ನು ಪಡೆಯುತ್ತಾರೆ. ಕ್ರಿಮಿಕೀಟಾದಿಗಳ ಸಂರಕ್ಷಣೆಯಿಂದ ಅನೇಕ ವರ್ಷಗಳ ಪರ್ಯಂತವಾಗಿ ಸ್ವರ್ಗಸುಖವನ್ನು ಪಡೆಯುವರು.

೨೭-೩೦. ಕಳ್ಳನಿಂದ ಹಿಡಿಯಲ್ಪಟ್ಟವನನ್ನೂ, ರಾಜ, ಶತ್ರು, ಸರ್ಪಾದಿಗಳಿಂದ ಹಿಡಿಯಲ್ಪಟ್ಟವನನ್ನೂ ಯಾರು ರಕ್ಷಿಸುತ್ತಾರೋ ಅವರು ಅಶ್ವಮೇಧದ ಫಲವನ್ನು ಪಡೆಯುತ್ತಾರೆ. ಹಾಗೆಯೇ ಘೋರ ಸ್ಥಳದಲ್ಲಿಯೂ, ದುರ್ಗ, ನೀರು, ಬೆಂಕಿ ಇವುಗಳಲ್ಲಿಯೂ ಸಿಕ್ಕಿರುವವರನ್ನು ರಕ್ಷಣೆಮಾಡಬೇಕು. ಇವರಿಂದಲೂ ಅಶ್ವಮೇಧ ಯಾಗದ ಫಲವನ್ನು ಹೊಂದುವರು ರೋಗಿಗೆ ಔಷಧಿ ಕೊಡುವುದರಿಂದಲೂ, ರೋಗಿಯ ಸೇವೆಯಿಂದಲೂ ಪ್ರಾಣದಾನ ಫಲವನ್ನು ಪಡೆಯುತ್ತಾನೆ. ಬ್ರಾಹ್ಮಣರೇ, ವೈದ್ಯನಾದವನು ಹಣವನ್ನು ತೆಗೆದುಕೊಳ್ಳದೇ ರೋಗಿಯನ್ನು ಉಪಚರಿಸುವುದರಿಂದ ಪ್ರಾಣದಾನ ಫಲವನ್ನು ಹೊಂದಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಯೇ ರಕ್ಷ್ಯಮಾಣಾ ನಿಹತಾ ಮನುಷ್ಯಾ
ಧೀರಾಂಗತಾಸ್ತೇ ತ್ರಿದಶೇಂದ್ರಲೋಕಂ ।
ಚ್ಯವಂತಿ ನಾದ್ಯಾಪಿ ಚ ತೇ ನೃವೀರಾಃ
ಕಾಲೇಽಪಿತೇಷಾಂ ಚ್ಯವನಂ ನ ಚಾಸ್ತಿ ॥ ೩೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಅಭಯಪ್ರದಾನ
ಪ್ರಶಂಸಾವರ್ಣನೋ ನಾಮ
ದ್ವ್ಯಧಿಕತ್ರಿಶತತಮೋಽಧ್ಯಾಯಃ

---

೩೧. ಈ ರೀತಿಯಾಗಿ ವಿಪತ್ತನ್ನು ಹೊಂದಿ ರಕ್ಷಿಸಲ್ಪಟ್ಟವರೂ ಸಹ ದೇಹ ವಿಯೋಗಹೊಂದಿದನಂತರ ಇಂದ್ರಲೋಕವನ್ನು ಪಡೆಯುತ್ತಾರೆ. ಅಂಥಹ ಪುರುಷ ಶ್ರೇಷ್ಠರು ಎಂದೂ ಅಲ್ಲಿಂದ ನಾಶವನ್ನು ಪಡೆಯುವುದಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಹಂಸಗೀತೆಯ ಅಭಯದಾನಪ್ರಶಂಸೆಯೆಂಬ
ಮುನ್ನೂರ ಎರಡನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರ್ಯಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ವಿದ್ಯಾ ಕಾಮದುಘಾ ಧೇನುಃ ವಿದ್ಯಾ ಚಕ್ಷುರನುತ್ತಮಂ ।
ವಿದ್ಯಾದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ॥ ೧ ॥

ವಿದ್ಯಾವಾನ್ಸರ್ವಕಾಮಾನಾಂ ಭಾಜನಂ ಪುರುಷೋ ಭವೇತ್ ।
ತಸ್ಮಾದ್ವಿದ್ಯಾಂ ಹಿ ದದತಾ ಸರ್ವಂ ದತ್ತಂ ಭವೇದಿಹ ॥ ೨ ॥

ಪರಾಧ್ಯಾಪನತಃ ಕ್ಲೇಶಂ ಪುರುಷಸ್ತು ಯದಶ್ನುತೇ ।
ತಪಸ್ತತ್ಪರಮಂ ತಸ್ಯ ಬ್ರಹ್ಮಲೋಕಂ ಪರಂ ಸ್ಮೃತಂ ॥ ೩ ॥

ಮುನ್ನೂರ ಮೂರನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ :—ವಿದ್ಯಾ ಎಂಬುದು ಸಕಲ ಇಷ್ಟಾರ್ಥವನ್ನು ಕೊಡುವ ಕಾಮಧೇನುವಿಗೆ ಸದೃಶವಾದದ್ದು. ವಿದ್ಯೆಯೇ ಉತ್ತಮವಾದ ಕಣ್ಣು. ವಿದ್ಯಾದಾನಕ್ಕಿಂತ ಶ್ರೇಷ್ಠದಾನವು ಇಲ್ಲವೇ ಇಲ್ಲ. ವಿದ್ಯಾವಂತನಾದ ಪುರುಷನು ಮನಸ್ಸಿನಲ್ಲಿ ಎಣಿಸಿದ ಸಕಲೇಚ್ಛೆಯನ್ನೂ ಹೊಂದುವನು. ಆದುದರಿಂದ ವಿದ್ಯಾದಾನ ಮಾಡಿದರೆ ಸರ್ವವನ್ನೂ ಕೊಟ್ಟಂತಾಗುತ್ತದೆ.

೩-೬. ಇನ್ನೊಬ್ಬರಿಗೆ ಪಾಠಹೇಳುವುದರಿಂದ ಯಾವ ಕ್ಲೇಶವನ್ನು ಮನುಷ್ಯನು ಹೊಂದುತ್ತಾನೋ ಅದು ಅವನ ಮಹತ್ತಾದ ತಪಸ್ಸು. ಮರಣಾನಂತರ ಅವನಿಗೆ

ದಾನಾನಾಮುತ್ತಮಂ ಲೋಕೇ ತಪಸಾಂ ಚ ತಥೋತ್ತಮಂ ।
ವಿದ್ಯಾದಾನಂ ಮಹಾಭಾಗಾಃ ಸರ್ವಕಾಮಫಲಪ್ರದಂ ॥ ೪ ॥

ವೇದದಾನಾದವಾಪ್ನೋತಿ ಸರ್ವಯಜ್ಞಫಲಂ ನರಃ ।
ಉಪವೇದಪ್ರದಾನೇನ ಗಂಧರ್ವೈಸ್ಸಹಮೋದತೇ ॥ ೫ ॥

ವೇದಾಙ್ಗಾನಾಂ ಚ ದಾನೇನ ಶಕ್ರಲೋಕಮವಾಪ್ನುಯಾತ್ ।
ಧರ್ಮಶಾಸ್ತ್ರಪ್ರದಾನೇನ ಧರ್ಮೇಣ ಸಹ ಮೋದತೇ ॥ ೬ ॥

ಸಿದ್ಧಾಂತಾನಾಂ ಪ್ರದಾನೇನ ಮೋಕ್ಷಮಾಪ್ನೋತ್ಯಸಂಶಯಂ ।
ಶಾಸ್ತ್ರಾಣಿ ದತ್ವಾ ಚಾನ್ಯಾನಿ ನರೋ ನಾಕೇ ಮಹೀಯತೇ ॥ ೭ ॥

ವಿದ್ಯಾದಾನಾದವಾಪ್ನೋತಿ ಪ್ರದಾನಾತ್ಪುಸ್ತಕಸ್ಯ ಚ ।
ಶಿಲ್ಪಾನಿ ಶಿಕ್ಷಯೇದ್ಯಸ್ತು ಪೌಂಡರೀಕಫಲಂ ಲಭೇತ್ ॥ ೮ ॥

ಬ್ರಹ್ಮಲೋಕವೂ ಸಿಕ್ಕುವುದು ದಾನಗಳಲ್ಲಿ ಉತ್ತಮವೂ, ತಪಸ್ಸಿಗಿಂತ ಉತ್ತಮವೂ ಆದ. ಇಂತಹ ವಿದ್ಯಾದಾನವು ಸರ್ವೇಚ್ಛೆಯನ್ನೂ ನೆರವೇರಿಸಿ ಕೊಡುವುದು. ವೇದದಾನಮಾಡುವುದರಿಂದ ಮನುಷ್ಯನು ಸಕಲ ಯಜ್ಞಗಳ ಫಲವನ್ನು ಪಡೆಯುತ್ತಾನೆ. ಉಪವೇದಗಳನ್ನುಪದೇಶಿಸುವುದರಿಂದ ಗಂಧರ್ವರೊಡನೆ ಸುಖವನ್ನನುಭವಿಸುತ್ತಾನೆ. ಶಿಕ್ಷಾದಿ ವೇದಾಂಗಗಳನ್ನು ದಾನಮಾಡುವುದರಿಂದ ಇಂದ್ರಲೋಕವನ್ನು ಹೊಂದುತ್ತಾನೆ. ಧರ್ಮಶಾಸ್ತ್ರಪ್ರವಚನದಿಂದ ಧರ್ಮದೇವತೆಯೊಡನೆ ಸುಖಪಡುತ್ತಾನೆ.

೭-೯. ಸಿದ್ಧಾಂತಗಳನ್ನುಪದೇಶಿಸುವುದರಿಂದ ನಿಶ್ಚಯವಾಗಿಯೂ ಮೋಕ್ಷವನ್ನು ಪಡೆಯುತ್ತಾನೆ. ಇತರ ಶಾಸ್ತ್ರಪ್ರವಚನದಿಂದ ಮನುಷ್ಯನು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ. ವಿದ್ಯಾದಾನದ ಫಲವನ್ನೇ ಪುಸ್ತಕ ದಾನದಿಂದಲೂ ಹೊಂದುತ್ತಾನೆ. ಮತ್ತು ಶಿಲ್ಪವನ್ನುಪದೇಶಿಸುವುದರಿಂದಲೂ ಪೌಂಡರೀಕಯಾಗದ ಫಲವನ್ನು ಪಡೆಯುತ್ತಾನೆ. ಧನುರ್ವೇದವನ್ನು ಪಾಠಹೇಳಿದರೆ ಅಶ್ವಮೇಧ ಫಲವನ್ನು

ಶಿಕ್ಷಯಿತ್ವಾ ಧನುರ್ವೇದಮಶ್ವಮೇಧಫಲಂ ಲಭೇತ್ ।
ಶಿಲ್ಪಭಾಂಡಪ್ರದಾನೇನ ಶಿಲ್ಪದಾನಫಲಂ ಲಭೇತ್ ॥ ೯ ॥

ಅಹಿತೇಷು ಪ್ರವೃತ್ತಸ್ಯ ತಥಾ ಕೃತ್ವಾ ನಿವಾರಣಂ ।
ವಿದ್ಯಾದಾನಫಲಂ ಪ್ರೋಕ್ತಂ ನಾತ್ರ ಕಾರ್ಯಾವಿಚಾರಣಾ ॥ ೧೦ ॥

ಪಾಪಪ್ರವೃತ್ತಸ್ಯ ತಥಾ ನರಃ ಕೃತ್ವಾ ನಿವಾರಣಂ ।
ವಿದ್ಯಾದಾನಫಲಂ ಪ್ರಾಪ್ಯ ಸ್ವರ್ಗಲೋಕೆ ಮಹೀಯತೇ ॥ ೧೧ ॥

ಶಿಕ್ಷಯೇತ್ಪುರುಷಃ ಕರ್ಮ ಕರ್ಮಣಾ ಯೇನ ಜೀವತಿ ।
ಶಿಕ್ಷಯಿತ್ವಾ ಮಹಾಭಾಗಾಃ ಸ್ವರ್ಗಲೋಕೆ ಮಹೀಯತೇ ॥ ೧೨ ॥

ಯೇನ ಜೀವತಿ ಭಾಂಡೇನ ತಸ್ಯ ಭಾಂಡಸ್ಯದಾಯಕಃ ।
ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ॥ ೧೩ ॥

ಅಂತವಂತೀಹದಾನಾನಿ ಸರ್ವಾಣ್ಯೇವ ದ್ವಿಜೋತ್ತಮಾಃ ।
ಏಕಂ ಮಹಾಫಲಂ ಜ್ಞೇಯಂ ವಿದ್ಯಾದಾನಮನನ್ತಕಂ ॥ ೧೪ ॥

ಹೊಂದುತ್ತಾನೆ. ಕೆತ್ತನೆ ಕೆಲಸಗಳ ಉಪಕರಣ ದಾನದಿಂದ ಶಿಲ್ಪದಾನದ ಫಲವನ್ನೇ ಪಡೆಯುತ್ತಾನೆ.

೧೦–೧೪. ದುರ್ಮಾರ್ಗದಲ್ಲಿ ಪ್ರವೃತ್ತನಾದವನನ್ನು ಅದರಿಂದ ತಪ್ಪಿಸಿದರೆ ವಿದ್ಯಾದಾನದ ಫಲವೇ ಬರುವುದು. ಈ ವಿಷಯದಲ್ಲಿ ವಿಮರ್ಶೆಮಾಡಬೇಕಾಗಿಲ್ಲ. ಪಾಪಕೆಲಸದಲ್ಲಿ ನಿರತನಾದವನನ್ನು ನಿವಾರಿಸುವುದರಿಂದ ವಿದ್ಯಾದಾನ ಫಲವನ್ನು ಪಡೆದು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ. ಯಾವನು ಯಾವ ಕೆಲಸದಿಂದ ಜೀವಿಸುವನೋ ಆ ಕೆಲಸವನ್ನು ಉಪದೇಶಮಾಡುವುದರಿಂದ ಆ ಉಪದೇಶಕನು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ. ಕೆಲಸದಿಂದ ಜೀವಿಸುವವನಿಗೆ ಆ ಕೆಲಸದ ಉಪಕರಣಗಳನ್ನು ದಾನಮಾಡುವುದರಿಂದ ಎಲ್ಲಾ ಇಷ್ಟಾರ್ಥಗಳನ್ನು ಕೊಡುವ ಯಜ್ಞದ ಫಲವನ್ನು ಹೊಂದುತ್ತಾನೆ. ಬ್ರಾಹ್ಮಣರೇ, ದಾನಗಳೆಲ್ಲವೂ ನಾಶವಾಗುವ ಫಲವುಳ್ಳವುಗಳು. ಆದರೆ ಮಹಾಫಲವುಳ್ಳ ವಿದ್ಯಾದಾನವು ಅನಂತಫಲದಾಯಕವಾದುದು.

ವಿದ್ಯಾಂ ಯಥೇಷ್ಟಾಂ ಪುರುಷಸ್ಯ ದತ್ವಾ
ಮಂತ್ರಂ ಶುಭಂ ವಾಪ್ಯಥವಾಪಿ ಶಿಲ್ಪಂ ।
ಶಿಲ್ಪಸ್ಯಭಾಂಡಂ ಯದಿವಾ ದ್ವಿಜೇಂದ್ರಾಃ
ಪ್ರಾಪ್ನೋತಿ ಲೋಕಂ ಮನಸಾತ್ವಭೀಷ್ಟಂ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವಿದ್ಯಾದಾನಫಲ ನಿರೂಪಣೋ ನಾಮ ತ್ರ್ಯಧಿಕತ್ರಿಶತತಮೋಽಧ್ಯಾಯಃ

---

೧೫. ಈ ರೀತಿಯಾಗಿ ಇಷ್ಟವಾದ ವಿದ್ಯೆಯನ್ನು ಮನುಷ್ಯನಿಗೆ ದಾನ ಮಾಡಿಯಾಗಲಿ, ಶುಭಮಂತ್ರವನ್ನು ಪದೇಶಿಸಿಯಾಗಲಿ, ಶಿಲ್ಪಕಲೆಯನ್ನು ಅಭ್ಯಾಸ ಮಾಡಿಸಿಯಾಗಲಿ, ಶಿಲ್ಪದ ಉಪಕರಣಗಳನ್ನು ದಾನಮಾಡಿಯಾಗಲೀ ಮನಸ್ಸಿನಿಂದ ಬಯಸಿದ ಎಲ್ಲಾ ಲೋಕಗಳನ್ನೂ ಪಡೆಯಬಹುದು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ವಿದ್ಯಾದಾನ
ಫಲನಿರೂಪಣವೆಂಬ ಮುನ್ನೂರ ಮೂರನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುರಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಬ್ರಾಹ್ಮೇಣ ತು ಯಃ ಕನ್ಯಾಂ ಪುರುಷಸ್ಯ ಪ್ರಯಚ್ಛತಿ ।
ಸಪ್ತಾತೀತಾನ್ಭವಿಷ್ಯಾಂಶ್ಚ ಸ್ವಕುಲೇ ಸಪ್ತಮಾನವಾನ್ ॥ ೧ ॥

ತೇನ ಕನ್ಯಾಪ್ರದಾನೇನ ತಾರಯಿಷ್ಯತ್ಯಸಂಶಯಂ ।
ಲೋಕಮಾಪ್ನೋತಿ ಚ ತಥಾ ದಕ್ಷಸ್ಯೇಹ ಪ್ರಜಾಪತೇಃ ॥ ೨ ॥

ದತ್ವಾ ದೈವೇನ ವಿಧಿನಾ ಕುಲಂ ತ್ರಿಪುರುಷಂ ನರಃ ।
ಸಮುದ್ಧರತಿ ದುರ್ಗೇಭ್ಯೋ ದಕ್ಷಲೋಕಂ ಚ ಗಚ್ಛತಿ ॥ ೩ ॥

ಪ್ರಾಜಾಪತ್ಯೇನ ವಿಧಿನಾ ದತ್ವಾತ್ಮಾನಂ ಸಮುದ್ಧರೇತ್ ।
ಮಹತ್ಪುಣ್ಯಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥ ೪ ॥

ಮುನ್ನೂರ ನಾಲ್ಕನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಬ್ರಾಹ್ಮವಿವಾಹ ಪದ್ಧತಿಯಿಂದ ಕನ್ಯೆಯನ್ನು ಪುರುಷನಿಗೆ ಯಾರು ದಾನಮಾಡುತ್ತಾರೋ ಅವರು ತನ್ನ ಹಿಂದಿನ ಏಳು ತಲೆಯುವರೆಗೂ, ಮುಂದಿನ, ಏಳುತಲೆಯವರೆಗೂ ತಮ್ಮ ವಂಶದವರನ್ನು ಉದ್ಧರಿಸುತ್ತಾರೆ. ಆಮೇಲೆ ಕನ್ಯಾದಾನದ ಫಲದಿಂದ ದಕ್ಷಪ್ರಜಾಪತಿಯ ಲೋಕವನ್ನೂ ಪಡೆಯುವರು. ದೈವವಿಧಿಯಿಂದ ಕನ್ಯಾದಾನಮಾಡಿದವರು ಮೂರು ತಲೆಯ ವಂಶವನ್ನು ಉದ್ಧರಿಸುತ್ತಾರೆ. ಆ ಮೇಲೆ ದಕ್ಷಲೋಕವನ್ನೂ ಹೊಂದುವರು. ಪ್ರಾಜಾಪತ್ಯರೀತಿಯಿಂದ ಕನ್ಯಾದಾನಮಾಡಿದರೆ ತಾನು ಉದ್ಧರಿಸಲ್ಪಡುತ್ತಾನೆ. ಮತ್ತು ಅಧಿಕಪುಣ್ಯವಂತನಾಗಿ ಸ್ವರ್ಗಲೋಕವನ್ನೂ ಹೊಂದುವನು.

ಭೂಕರೀಂದ್ರಾಶ್ವದಾನಾನಿ ಗೋದಾನಂ ಚ ತಥೈವ ಚ ॥
ಅಂತರ್ಭವಂತಿವೈ ಯಸ್ಮಿನ್ಸ್ಕಿಂದಾನಮಧಿಕಂ ತತಃ ॥ ೫ ॥

ದತ್ತ್ವಾ ತಾಂ ವರ್ಣಹೀನಾಯ ಘೋರೇ ತಮಸಿ ಮಜ್ಜತಿ ।
ಬಹೂನ್ಯಬ್ದಸಹಸ್ರಾಣಿ ತಥೈವಾಶುಚಿಭುಙ್ಕ್ಷರಃ ॥ ೬ ॥

ಸಮವರ್ಣಾಯಯೋ ದದ್ಯಾತ್ಸತೂಕ್ತಫಲಭಾಗ್ಭವೇತ್ ।
ದತ್ತ್ವಾಚಾಧಿಕವರ್ಣಾಯ ದ್ವಿಗುಣಾಂ ತ್ರಿಗುಣಾಂ ತಥಾ ॥ ೭ ॥

ದ್ವಿಜಪುತ್ರಮನಾಥಂ ಯಃ ಸಂಸ್ಕುರ್ಯಾದ್ಯಶ್ಚ ಕರ್ಮಭಿಃ ।
ಚೂಡೋಪನಯನಾದ್ಯೈಶ್ಚ ಸೋsಶ್ವಮೇಧಫಲಂ ಲಭೇತ್ ॥ ೮ ॥

ಅನಾಥಾಂ ಕನ್ಯಕಾಂ ದತ್ತ್ವಾ ಸದೃಶೇವಾಧಿಕೇ ವರೇ ।
ದ್ವಿಗುಣಂ ಫಲಮಾಪ್ನೋತಿ ಕನ್ಯಾದಾನೇ ಯದೀರಿತಂ ॥ ೯ ॥

೫-೭. ಭೂಮಿ, ಶ್ರೇಷ್ಠವಾದ ಆನೆ, ಕುದುರೆ, ಗೋವು ಈ ದಾನಗಳೆಲ್ಲವೂ ಒಂದು ಕನ್ಯಾದಾನದಲ್ಲಿ ಅಡಕವಾಗಿವೆ. ಇದಕ್ಕಿಂತಲೂ ಅಧಿಕವಾದ ದಾನ ಬೇರೆ ಇನ್ನೇನಿದೆ. ಹೀನವರ್ಣದವರಿಗೆ ಕನ್ಯಾದಾನಮಾಡಿದರೆ ಘೋರವಾದ ಅಂಧಕಾರ ಮಯವಾದ ನರಕದಲ್ಲಿ ಬೀಳುವನು. ಅಲ್ಲಿ ಅನೇಕ ಸಹಸ್ರವರ್ಷಗಳವರೆಗೆ ದುಃಖ ವನ್ನು ಅನುಭವಿಸುವನು. ತನ್ನ ವರ್ಣದವನಿಗೆ ಕನ್ಯಾದಾನಮಾಡಿದರೆ ಉತ್ತಮ ಫಲವನ್ನು ಹೊಂದುವನು. ತನಗಿಂತಲೂ ಅಧಿಕ ವರ್ಣದವನಿಗೆ ದಾನಮಾಡುವುದ ರಿಂದ ಎರಡರಷ್ಟು, ಮೂರರಷ್ಟು ಫಲವನ್ನೂ ಹೊಂದುತ್ತಾನೆ.

೮-೧೧. ಅನಾಥನಾದ ಬ್ರಾಹ್ಮಣಹುಡುಗನಿಗೆ ಚೂಡಾಕರ್ಮ, ಉಪ ನಯನಾದಿಗಳಿಂದ ಯಾರು ಸಂಸ್ಕಾರಮಾಡುತ್ತಾರೋ ಅವರು ಅಶ್ವಮೇಧಯಾಗದ ಫಲವನ್ನು ಹೊಂದುವರು. ಅನಾಥಳಾದ ಕನ್ನೆಯನ್ನು ಸಮಾನನಾದ ಅಥವಾ ಅಧಿಕಜಾತಿಯುಳ್ಳವನಿಗೆ ವಿವಾಹ ಮಾಡಿಸಿದರೆ ಕನ್ಯಾದಾನದಲ್ಲಿ ಹೇಳಿರುವ ಫಲಕ್ಕೆ ಇಮ್ಮಡಿಯಾಗಿ ಫಲವನ್ನು ಹೊಂದುವರು. ವಿವಾಹ ಸಮಯ ಬಂದಾಗ ಯಾವ ಕೆಲಸದಲ್ಲಿಯಾದರೂ ಇತರ ಧಾರ್ಮಿಕಕಾರ್ಯದಲ್ಲಿಯೂ ಉಪಕರಣ ಸಾಮಗ್ರಿಗಳನ್ನು

ವಿವಾಹೇ ಸಮನುಪ್ರಾಪ್ತೇ ಕೃತ್ವೋಪಕರಣಾನಿ ಚ ।
ನಾಕ ಲೋಕಮವಾಪ್ನೋತಿ ಕರ್ಮಸ್ವನ್ಯೇಷ್ವಪಿ ದ್ವಿಜಾಃ ॥ ೧೦ ॥

ವಸ್ತ್ರಂ ಪತ್ರಮಲಂಕಾರಂ ವಿವಾಹಾರ್ಥಂ ಪ್ರಯಚ್ಛತಿ ।
ಮಹತ್ಫಲವಾಪ್ನೋತಿ ನಾಕಲೋಕೇ ಮಹೀಯತೇ ॥ ೧೧ ॥

ಕನ್ಯಯಾ ಸಹ ಯದ್ದತ್ತಂ ದ್ರವಿಣಂ ವಹ್ನಿಮೂಲಕೇ ।
ಸಫಲಾದ್ದ್ವಿಗುಣಂ ತಸ್ಯಫಲಮುಕ್ತಂ ಪುರಾತನೈಃ ॥ ೧೨ ॥

ಕನ್ಯಾದಾನಾದವಾಪ್ನೋತಿ ದಕ್ಷಲೋಕಂ ನರೋತ್ತಮಃ
ವಿಷ್ಣುಪೂಜಾಸಮಂಪುಣ್ಯಂ ತತ್ಪತ್ಯುಃ ಪೂಜಯಾಭವೇತ್ ॥ ೧೩ ॥

ವಿಮಾನಮಾರುಹ್ಯ ಮನೋಭಿರಾಮಂ
ಸುರಾಙ್ಗನಾಗೀತವಿಲಾಸಹೃದ್ಯಂ ।

ಒದಗಿಸಿ ಕೊಟ್ಟವನು ಸ್ವರ್ಗಲೋಕವನ್ನು ಹೊಂದುತ್ತಾನೆ. ವಸ್ತ್ರವನ್ನಾಗಲೀ, ಎಲೆಯನ್ನಾಗಲೀ, ಅಲಂಕಾರಗಳನ್ನಾಗಲೀ ವಿವಾಹಕ್ಕೋಸ್ಕರ ದಾನಮಾಡಿದರೆ ಅಧಿಕ ಪುಣ್ಯವನ್ನು ಹೊಂದಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

೧೨-೧೩. ಕನ್ಯೆಯೊಡನೆ ಅಗ್ನಿಸಾಕ್ಷಿಯಾಗಿ ಯಾವ ಯಾವ ದ್ರವ್ಯವನ್ನು ಕೊಡುತ್ತಾನೋ ಅದಕ್ಕೆ ಇಮ್ಮಡಿಯಾದ ಫಲವನ್ನು ಹೊಂದುತ್ತಾನೆ ಎಂದು ಪ್ರಾಚೀನರು ಹೇಳುತ್ತಾರೆ. ಕನ್ಯಾದಾನದಿಂದ ಮನುಷ್ಯಶ್ರೇಷ್ಠನು ದಕ್ಷಲೋಕವನ್ನು ಹೊಂದುತ್ತಾನೆ. ವರನಪೂಜೆಯನ್ನು ಮಾಡುವುದರಿಂದ ವಿಷ್ಣುವನ್ನು ಪೂಜಿಸಿ ದಂತೆ ಆಗುತ್ತದೆ.

೧೪. ಕನ್ಯಾದಾನಮಾಡಿದವನು ಮರಣಾನಂತರ ದೇವತಾಸ್ತ್ರೀಯರ ವಿಲಾಸ ನೃತ್ಯಾದಿಗಳಿಂದ ಕೂಡಿದ ಸುಂದರವಾದ ವಿಮಾನವನ್ನು ಏರಿ ದೇವತೆಗಳ

ಪ್ರಾಪ್ನೋತಿ ಲೋಕಾಂ ಸ್ತ್ರಿದಶೋತ್ತಮಾನಾಂ
ಕನ್ಯಾಪ್ರದೋನಾತ್ರವಿಚಾರಣಾಸ್ತಿ ॥ ೧೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಕನ್ಯಾದಾನಫಲ ನಿರೂಪಣೋ ನಾಮ ಚತುರಧಿಕತ್ರಿಶತತಮೋಽಧ್ಯಾಯಃ

ಆಯಾಯ ಲೋಕಗಳನ್ನು ಪಡೆದು ಸುಖವನ್ನನುಭವಿಸುತ್ತಾನೆ. ಇದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗಾಗಿ ಉಪದಿಷ್ಟವಾದ ಹಂಸಗೀತೆಯ ಕನ್ಯಾದಾನಫಲನಿರೂಪಣವೆಂಬ ಮುನ್ನೂರ ನಾಲ್ಕನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಾಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಭೂಮಿರ್ಧಾತ್ರೀ ವಿಧಾತ್ರೀ ಚ ಭೂಮೌ ಸರ್ವಂ ಪ್ರತಿಷ್ಠಿತಂ ।
ಭೂಮಿರ್ಮಾತಾ ಸರ್ವಸ್ಯ ಸರ್ವಕಾಮಪ್ರದಾ ವರಾ ॥ ೧ ॥

ತದುದ್ಭೂತೇನ ಹವಿಷಾ ತೃಪ್ತಿಮಾಯಾಂತಿ ದೇವತಾಃ ।
ಭೂಮಿರ್ಧಾರಿಣೀ ವಿಪ್ರಾಸ್ತ್ರೈಲೋಕ್ಯಸ್ಯ ನಿಗದ್ಯತೇ ॥ ೨ ॥

ಭೂಮೌ ಹಿ ಸರ್ವಂ ಭವತಿ ಭೂಮೌ ಸರ್ವಂ ಪ್ರತಿಷ್ಠಿತಂ ।
ಸರ್ವಕಾಮಪ್ರದಂ ಜ್ಞೇಯಂ ಭೂಮಿದಾನಂ ನರೋತ್ತಮಾಃ ॥ ೩ ॥

ಮುನ್ನೂರ ಐದನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ಭೂಮಿಯು ಧಾತ್ರಿಯೂ, ವಿಧಾತ್ರಿಯೂ ಆಗಿದೆ. ಭೂಮಿಯಲ್ಲಿ ಎಲ್ಲಾ ದೇವತೆಗಳೂ ಅಧಿಷ್ಠಿತರಾಗಿದ್ದಾರೆ. ಭೂಮಿಯು ಸಕಲರ ಇಷ್ಟಾರ್ಥಗಳನ್ನೂ ಪೂರೈಸುತ್ತದೆ. ಎಲ್ಲರಿಗೂ ಭೂಮಿಯೇ ತಾಯಿಯು. ಭೂಮಿಯಿಂದ ಉಂಟಾಗಿರುವ ಹವಿಸ್ಸಿನಿಂದ ದೇವತೆಗಳು ತೃಪ್ತಿಯನ್ನು ಹೊಂದುತ್ತಾರೆ. ವಿಪ್ರ ಬ್ರಾಹ್ಮಣರಿರಾ, ಭೂಮಿಯೇ ಮೂರು ಲೋಕಗಳನ್ನೂ ಧಾರಣೆ ಮಾಡುತ್ತದೆ ಎಂದು ಹೇಳಿದೆ. ಭೂಮಿಯಲ್ಲಿಯೇ ಎಲ್ಲವೂ ಅಡಕವಾಗಿದೆ. ಆದುದರಿಂದ ಭೂಮಿದಾನವೇ ಸಕಲ ಮನೋರಥಗಳನ್ನೂ ಕೊಡುವುದು. ಕೇವಲ

ಹಸ್ತಮಾತ್ರಂ ತು ಯೋ ದದ್ಯಾದ್ಭುವಂ ಪುರುಷಸತ್ತಮಾಃ ।
ತೇನೈವ ಧ್ರುವಮಾಪ್ನೋತಿ ಭೂಮಿದಾನಫಲಂ ನರಃ ॥ ೪ ॥

ಯದುತ್ಪನ್ನಮಥಾಶ್ನಾತಿ ನರಃ ಸಂವತ್ಸರಂ ದ್ವಿಜಾಃ
ಏಕಂ ಗೋಚರ್ಮಮಾತ್ರಂ ತು ಭುವಃ ಪ್ರೋಕ್ತಂ ವಿಚಕ್ಷಣೈಃ ॥ ೫ ॥

ಬ್ರಾಹ್ಮಣಾಯ ತತೋ ದತ್ವಾ ವಸೂನಾಂ ಲೋಕಮಾಪ್ನುಯಾತ್ ।
ಶಾಕಭೂಮಿಂ ತತೋ ದತ್ವಾ ಲೋಕಮಾಂಗಿರಸಂ ವ್ರಜೇತ್ ॥ ೬ ॥

ಆರಾಮ ಭೂಮಿಂ ದತ್ವಾ ಚ ಮಾರುತಂ ಲೋಕಮಶ್ನುತೇ ।
ಜಲಾಶಯಾರ್ಥಂ ಯೋ ದದ್ಯಾದ್ವಾರುಣಂ ಲೋಕಮಾಪ್ನುಯಾತ್ ॥ ೭ ॥

ಯಸ್ಯ ದತ್ವಾ ತು ವೇಶ್ಮಾರ್ಥಂ ತಸ್ಯ ದೇವಸ್ಯ ಸೋऽಶ್ನುತೇ ।
ಯಸ್ತತ್ರ ವಿದ್ಯತೇ ನಿತ್ಯಂ ಲೋಕೋ ದ್ವಿಜವರಾ ಧ್ರುವಂ ॥ ೮ ॥

ಹಸ್ತಪರಿಮಾಣವುಳ್ಳ ಭೂಮಿಯನ್ನಾದರೂ ಯಾವಾತನು ದಾನಮಾಡುವನೋ ಆ ದಾನದಿಂದ ಆತನು ಭೂಮಿದಾನದ ಫಲವನ್ನೇ ಹೊಂದುತ್ತಾನೆ.

೫. ಒಂದು ಗೋಚರ್ಮ ಪರಿಮಿತಿಯುಳ್ಳ ಭೂಮಿಯನ್ನು ದಾನ ಮಾಡಿದರೂ ಆ ಜಾಗದಲ್ಲಿ ಎಷ್ಟು ಫಲಿಸುತ್ತದೆಯೋ ಅದರ ಉಪಯೋಗದಿಂದ ದಾನಹೊಂದಿದವನು ವರ್ಷಪರ್ಯಂತ ಸುಖಿಸುವನು ಎಂದು ಪಂಡಿತರುಗಳು ಹೇಳುವರು.

೬–೮. ಇಂತಹ ಭೂಮಿಯನ್ನು ಬ್ರಾಹ್ಮಣನಿಗೆ ದಾನಮಾಡಿದಲ್ಲಿ ವಸುಗಳ ಲೋಕವನ್ನು ಹೊಂದುತ್ತಾನೆ. ತರಕಾರಿಯ ಭೂಮಿಯನ್ನು ದಾನಮಾಡಿದರೆ ಅಂಗಿರಸಲೋಕವನ್ನು ಪಡೆಯುತ್ತಾನೆ. ವಿಹಾರಭೂಮಿಯನ್ನು (ತೋಟ) ದಾನ ಮಾಡುವುದರಿಂದ ವಾಯುಲೋಕವು ಲಭಿಸುವುದು. ನೀರಿನ ವಸತಿಗೋಸ್ಕರ ಭೂಮಿದಾನಮಾಡಿದರೆ ವರುಣಲೋಕವನ್ನು ಹೊಂದುವನು. ಬ್ರಾಹ್ಮಣರೇ, ಯಾವ ದೇವಗೃಹಕ್ಕಾಗಿ ಭೂಮಿಯನ್ನು ಕೊಡುವನೋ ಅವನು ಆಯಾಯ ದೇವತೆಗಳ ಲೋಕಗಳನ್ನು ಹೊಂದಿ ಹೊಂದಿ ಪುನರಾವೃತ್ತಿ ಇಲ್ಲದೆ ಶಾಶ್ವತ

ಉದ್ಯಾನಭೂಮಿಂದತ್ತ್ವಾ ಚ ಗಂಧರ್ವೈಃ ಸಹ ಮೋದತೇ ।
ರತ್ನಾಕರಂ ತು ವೈದತ್ತ್ವಾ ಶಕ್ರಲೋಕೇ ಮಹೀಯತೇ ॥ ೯ ॥

ದತ್ತ್ವಾ ಕನಕ ಭೂಮಿಂ ಚ ವಹ್ನಿಲೋಕೇ ಮಹೀಯತೇ ।
ಅನ್ಯೇಷಾಮಾಕರಭುವಂ ಲೋಹಾನಾಂ ಯಃಪ್ರಯಚ್ಛತಿ ॥ ೧೦ ॥

ತಸ್ಯಾಪಿಗತಿರುದ್ದಿಷ್ಟಾ ಲೋಕೇ ಹೌತಾಶನೇ ದ್ವಿಜಾಃ ।
ಧಾನ್ಯಾಕರಭುವಂ ದತ್ತ್ವಾ ನಾಕಲೋಕೆ ಮಹೀಯತೇ ॥ ೧೧ ॥

ಅಂಜನಾಕರಭೂಮಿಂ ತು ಯಃಪ್ರಯಚ್ಛತಿ ವೈ ದ್ವಿಜಾಃ ।
ಪಿತೃಭಿರ್ಯಮಲೋಕಸ್ಥಃ ಪೂಜ್ಯತೇಽಸೌ ನರೋತ್ತಮಃ ॥ ೧೨ ॥

ಲವಣಾಕರಭೂಮಿಂಚ ಸೋಮಲೋಕೇ ಮಹೀಯತೇ ।
ಶಿಂಬಿಸಸ್ಯಪ್ರರೋಹಾಂ ತು ಭುವಂ ದತ್ತ್ವಾ ನರೋತ್ತಮಃ ॥ ೧೩ ॥

ಸುಖವನ್ನು ಪಡೆಯುತ್ತಾನೆ. ಉದ್ಯಾನಭೂಮಿಯನ್ನು ದಾನಮಾಡುವುದರಿಂದ ಗಂಧರ್ವಲೋಕವನ್ನು ಹೊಂದಿ ಸುಖವನ್ನು ಪಡೆಯುತ್ತಾನೆ. ರತ್ನಭೂಮಿಯನ್ನು ಕೊಡುವುದರಿಂದ ಇಂದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ

೧೦–೧೩. ಚಿನ್ನದ ಭೂಮಿದಾನದಿಂದ ಅಗ್ನಿಯ ಲೋಕದಲ್ಲಿ ಶ್ರೇಷ್ಠತೆ ಪಡೆಯುತ್ತಾನೆ. ಇನ್ನೂ ಬೇರೆ ಲೋಹಗಳ ಉತ್ಪತ್ತಿಸ್ಥಾನವನ್ನು ಯಾರು ದಾನ ಮಾಡುತ್ತಾರೋ ಅವರಿಗೂ ಸಹ ಅಗ್ನಿಲೋಕಪ್ರಾಪ್ತಿಯಾಗುವುದು. ಧಾನ್ಯಭೂಮಿಯನ್ನು ದಾನಮಾಡುವುದರಿಂದ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಅಂಜನಾದಿಗಳ ಭೂಮಿಯನ್ನು ದಾನಮಾಡುವುದರಿಂದ ಮರಣಾನಂತರ ಪಿತೃಗಳೊಡನೆ ಯಮಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಉಪ್ಪಿನ ಭೂಮಿಯನ್ನು ದಾನಮಾಡಿದರೆ ಸೋಮಲೋಕದಲ್ಲಿ ಮಾನ್ಯತೆ ಹೊಂದುವನು. ಸಿಪ್ಪೆಗಳುಳ್ಳ ಧಾನ್ಯವನ್ನು ಬೆಳೆಯುವ ಭೂಮಿಗಳನ್ನು ದಾನಮಾಡಿದ ಮನುಜಶ್ರೇಷ್ಠನು ಸಾಧ್ಯರ ಲೋಕವನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಸಾಧ್ಯಾನಾಂ ಲೋಕಮಾಪ್ನೋತಿ ನಾತ್ರಕಾರ್ಯಾವಿಚಾರಣಾ ।
ಇಂಧನಾಕರಭೂಮಿಂ ತು ನಾಸತ್ಯೈಃ ಸಹಿತಸ್ತಥಾ ॥ ೧೪ ॥

ಶೂಕಧಾನ್ಯಭುವಂ ದತ್ತ್ವಾ ರುದ್ರಲೋಕೆ ಮಹೀಯತೇ ।
ಕೇದಾರಭೂಮಿಂ ಧರ್ಮಜ್ಞಾ ಯಃ ಪ್ರಯಚ್ಛತಿ ಧರ್ಮತಃ ॥ ೧೫ ॥

ಸ ಮಹತ್ಪುಣ್ಯಮಾಪ್ನೋತಿ ಬ್ರಹ್ಮಲೋಕಂ ಚ ಗಚ್ಛತಿ ।
ಇಕ್ಷುಭೂಮಿಂ ನರೋ ದತ್ತ್ವಾ ದ್ರಾಕ್ಷಾಭೂಮಿಮಥಾಪಿ ಚ ॥ ೧೬ ॥

ಸೋಮಲೋಕಮವಾಪ್ನೋತಿ ಸರ್ವಕಾಮಾಂಶ್ಚ ವಿಂದತಿ ।
ಸೋಷರಾ ತಸ್ಕರಾಕೀರ್ಣಾ ತಥಾ ವ್ಯಾಡವತೀ ಚ ಭೂಃ ॥ ೧೭ ॥

ನದಾತವ್ಯಾ ದ್ವಿಜಶ್ರೇಷ್ಠಾ ಯಾ ಚ ಸಂಧಿಷು ವೈ ದ್ವಿಜಾಃ ।
ಗುಲ್ಮಪುಷ್ಪಪ್ರದಾಂ ಯಸ್ತು ಲತಾಂ ವಾ ಸಂಪ್ರಯಚ್ಛತಿ ॥ ೧೮ ॥

೧೪–೧೭. ಸೌದೆಸಿಗುವ ಭೂಮಿಯದಾನದಿಂದ ಅಶ್ವಿನೀದೇವತೆಗಳ ಲೋಕವನ್ನು ಹೊಂದಿ ಸುಖಿಸುತ್ತಾನೆ. ಯವವೇ ಮೊದಲಾದ ಧಾನ್ಯದಭೂಮಿಯನ್ನು ದಾನಮಾಡುವುದರಿಂದ ರುದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಗದ್ದೆಯನ್ನು ವಿಧಿವತ್ತಾಗಿ ಧರ್ಮದಿಂದ ದಾನಮಾಡಿದರೆ ಅಧಿಕಪುಣ್ಯವು -ಲಭಿಸುವುದು ಮತ್ತು ಮರಣಾನಂತರ ಬ್ರಹ್ಮಲೋಕವನ್ನೂ ಪಡೆಯುವನು. ಕಬ್ಬಿನ ಭೂಮಿಯನ್ನು ದಾನಮಾಡಿದರೆ ಸರ್ವಾಭೀಷ್ಟವನ್ನು ಹೊಂದಿ ಸೋಮಲೋಕವನ್ನೂ ಪಡೆಯುತ್ತಾನೆ.

೧೮-೨೦. ಊಷರ (ಕರಳು) ಭೂಮಿಯನ್ನೂ, ಕಳ್ಳರು ವ್ಯಾಪಿಸಿರುವ ಪ್ರದೇಶವನ್ನೂ ಸರ್ಪಗಳಿಂದ ಕೂಡಿದ ಭೂಮಿಯನ್ನೂ ದಾನಮಾಡಬಾರದು. ಪೊದೆಯಾಗಿ ಹೂಬಿಡುವ ಬಳ್ಳಿಯನ್ನು ಯಾವನು ದಾನಮಾಡುವನೋ ಅವನು ಅಪ್ಸರಸ್ತ್ರೀಯರೊಡಗೂಡಿ ನಂದನೋದ್ಯಾನದಲ್ಲಿ ವಿಮಾನದ ಮೇಲೆ ಸಂಚರಿಸುತ್ತಾ ಸುಖಿಸುವನು. ಭಕ್ತಿಯಿಂದ ಬ್ರಾಹ್ಮಣನಿಗೆ ಹೂ ಮತ್ತು ಹಣ್ಣು ಬಿಡುವ ಮರವನ್ನು ದಾನಮಾಡಿ

ವಿಮಾನೇ ನಂದನೇ ಸೋऽಥ ಕ್ರೀಡತ್ಯಪ್ಸರಸಾಂ ಗಣೈಃ ।
ಪುಷ್ಪದಂ ಫಲದಂ ವೃಕ್ಷಂ ದತ್ತ್ವಾ ವಿಪ್ರಾಯ ಭಕ್ತಿತಃ ॥ ೧೯ ॥

ಸ್ವರ್ಗಲೋಕಪರಿಭ್ರಷ್ಟೋ ನಗರಾಧಿಪತಿರ್ಭವೇತ್ ।
ಬ್ರಾಹ್ಮಣಾಯ ಗೃಹಂ ದತ್ತ್ವಾ ವಸೂನಾಂ ಲೋಕಮಶ್ನುತೇ ॥ ೨೦ ॥

ಆರಾಮಮಥಸೋದ್ಯಾನಂ ನಂದನೇ ಕ್ರೀಡತೇ ವನೇ ।
ಧನಧಾನ್ಯಯುತಂ ಸ್ಫೀತಂ ಗೃಹೋಪಕರಣೈರ್ಯುತಂ ॥ ೨೧ ॥

ಶಯ್ಯಾಸನಯುತಂ ರಮ್ಯಂ ಗೋಜಾಶ್ವಾದಿಯುತಂ ತಥಾ ।
ಗೃಹಂ ದತ್ತ್ವಾ ದ್ವಿಜೇಂದ್ರಾಯ ತಾವತ್ಸ್ವರ್ಗಮುಪಾಶ್ನುತೇ ॥ ೨೨ ॥

ಯಾವತ್ಕಲ್ಪಾವಸಾನೇ ತು ಕಲ್ಪಾದೌ ಪಾರ್ಥಿವೋ ಭವೇತ್ ।
ಗ್ರಾಮಪ್ರದಸ್ಸ್ಯಾನ್ನೃಪತಿಸ್ತಥಾಹ್ಯಶನದೋ ನೃಪಃ ॥ ೨೩ ॥

ಸಮಗ್ರವಸುಧೇಶಃ ಸ್ಯಾಚ್ಚಕ್ರವರ್ತೀ ಚ ರಾಜ್ಯದಃ ।
ಸ್ವದತ್ತಾಂ ಪರದತ್ತಾಂ ವಾ ನ ಹರೇತವಸುಂಧರಾಂ ॥ ೨೪ ॥

ದರೆ ಸ್ವರ್ಗವನ್ನು ಹೊಂದಿ ಸ್ವರ್ಗಸುಖವನ್ನನುಭವಿಸಿದ ಮೇಲೆ ನಗರಪಾಲಕನಾಗಿ ಹುಟ್ಟುತ್ತಾನೆ. ಬ್ರಾಹ್ಮಣನಿಗೆ ಗೃಹದಾನಮಾಡಿದರೆ ವಸುಗಳ ಲೋಕಪ್ರಾಪ್ತಿಯಾಗುವುದು.

೨೧–೨೪. ವಿಹಾರಭೂಮಿ, ಉದ್ಯಾನ ಇವುಗಳ ದಾನದಿಂದ ನಂದನವನದಲ್ಲಿ ಕ್ರೀಡಿಸುತ್ತಾನೆ. ಧನಧಾನ್ಯಗಳಿಂದಲೂ ಮನೆಯ ಸಕಲಸಾಮಗ್ರಿಗಳಿಂದಲೂ ಹಾಸಿಗೆ ಆಸನ ಇವುಗಳಿಂದಲೂ ಹಸು, ಆಡು, ಕುದುರೆ ಇವುಗಳಿಂದಲೂ ಕೂಡಿರುವ ಮನೆಯನ್ನು ಬ್ರಾಹ್ಮಣೋತ್ತಮನಿಗೆ ದಾನಮಾಡಿದರೆ ಆತನು ಕಲ್ಪ ಮುಗಿಯುವವರೆಗೂ ಸ್ವರ್ಗವನ್ನನುಭವಿಸಿ ಕೊನೆಗೆ ರಾಜನಾಗಿ ಹುಟ್ಟುತ್ತಾನೆ. ಗ್ರಾಮವನ್ನು ದಾನಮಾಡಿದ ರಾಜನೂ ಅನ್ನವನ್ನು ಕೊಡುವ ರಾಜನೂ ಎಲ್ಲಾ ಭೂಮಂಡಲಕ್ಕೂ ಒಡೆಯನಾದ ಚಕ್ರವರ್ತಿಯಾಗುತ್ತಾನೆ. ತಾನು ಕೊಟ್ಟದ್ದನ್ನಾಗಲೀ ಇನ್ನೊಬ್ಬರು ದಾನಮಾಡಿದುದನ್ನಾಗಲೀ ಭೂಮಿಯನ್ನು ಅಪಹರಿಸಬಾರದು.

ಭೂಮೇರಂಗುಲಮಾತ್ರಂ ತು ಹೃತ್ವಾ ನರಕಮೃಚ್ಛತಿ ।
ಬಹೂನ್ಯಬ್ದಸಹಸ್ರಾಣಿ ಧರ್ಮೇಽಪಿ ಪುರುಷೋರತಃ ॥ ೨೫ ॥

ವಿಷ್ಠಾಕೃಮಿತ್ವಮಾಪ್ನೋತಿ ಪಿತೃಭಿಃ ಸಹಿತಸ್ತಥಾ ।
ತಸ್ಮಾದ್ಭೂಮಿಂ ನ ಹಿಂಸೇತ ದಸ್ಯಾದೇವ ವಿಚಕ್ಷಣಃ ॥ ೨೬ ॥

ಭೂಮಿದಾನಾತ್ಪರಂ ದಾನಂ ನಾನ್ಯಲ್ಲೋಕೇಷು ವಿದ್ಯತೇ ।
ಭೂಮಿಂ ಯುದ್ಧಜಿತಾಂ ದದ್ಯಾದ್ಬ್ರಾಹ್ಮಣೇಷು ಮಹೀಪತಿಃ ॥ ೨೭ ॥

ಪರಂ ರಾಷ್ಟ್ರಂ ಸಮಾಸಾದ್ಯ ಪ್ರಾಗ್ದತ್ತಂ ನೈವ ಹಿಂಸಯೇತ್ ।
ಸ್ವರಾಷ್ಟ್ರೇ ಪರರಾಷ್ಟ್ರೇ ವಾ ದೇವಬ್ರಾಹ್ಮಣಸಾತ್ಕೃತಂ ॥ ೨೮ ॥

ಚಿರಂ ನರಕಮಾಪ್ನೋತಿ ಹೃತ್ವಾ ಭೂಮಿಪತಿರ್ಭುವಂ ।
ದತ್ತಾ ನ ಹಿಂಸನೀಯಾ ಸ್ಯಾದ್ರಿಪುಣಾಪಿ ವಸುಂಧರಾ ॥ ೨೯ ॥

೨೫-೨೬. ಒಂದು ಅಂಗುಲ ಭೂಮಿಯನ್ನಾದರೂ ಯಾರು ಅಪಹರಿಸುವರೋ ಅವರು ನರಕವನ್ನು ಹೊಂದುವರು. ಧರ್ಮನಿರತನಾದರೂ ಬಹುವರ್ಷಗಳ ವರೆಗೆ ದುಃಖವನ್ನು ಅನುಭವಿಸಿ ಮಲದಲ್ಲಿ ಹುಳುವಿನ ಜನ್ಮವನ್ನು ತನ್ನ ಪಿತೃಗಳೊಡನೆ ಹೊಂದುವನು. ಆದುದರಿಂದ ಭೂಮಿಯನ್ನು ಜ್ಞಾನಿಯಾದವನು ಅಪಹರಿಸಬಾರದು. ದಾನಮಾಡಬೇಕು.

೨೭-೨೯. ಭೂಮಿದಾನಕ್ಕಿಂತ ಉತ್ತಮ ದಾನವು ಲೋಕಗಳಲ್ಲಿ ಬೇರೆ ಇಲ್ಲ ರಾಜನಾದವನು ಯುದ್ಧದಿಂದ ಜಯಿಸಿದ ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಬೇಕು. ಬೇರೆ ದೇಶವನ್ನು ಹೊಂದಿ ಹಿಂದೆ ದಾನಮಾಡಿದುದನ್ನು ಪುನಃ ಹಿಂದಕ್ಕೆ ತೆಗೆದುಕೊಳ್ಳಬಾರದು. ತನ್ನ ರಾಜ್ಯದಲ್ಲಾಗಲೀ, ಇನ್ನೊಬ್ಬರ ರಾಜ್ಯದಲ್ಲಾಗಲಿ ದೇವಬ್ರಾಹ್ಮಣರ ಸ್ವತ್ತನ್ನು ತೆಗೆದುಕೊಳ್ಳಬಾರದು. ಹೀಗೆ ರಾಜನು ಭೂಮಿಯನ್ನು ಹಿಂಸೆಯಿಂದ ತೆಗೆದುಕೊಂಡರೆ ಬಹುಕಾಲ ನರಕದುಃಖವನ್ನು ಹೊಂದುತ್ತಾನೆ. ಶತ್ರುವಾದವನೂ ಸಹ ದಾನಮಾಡಿದ ಭೂಮಿಯ ವಿಷಯದಲ್ಲಿ ಬಲಾತ್ಕಾರಮಾಡಬಾರದು.

ಭೂಮಿಹರ್ತಾಪರಂ ದುಃಖಂ ಪ್ರೇತ್ಯ ಚೇಹ ತಥಾಶ್ನುತೇ ।
ಭೂಮಿಂ ಕ್ರೀತ್ವಾ ತು ಯಃ ಕುರ್ಯಾದ್ದೇವಬ್ರಾಹ್ಮಣಸಾನ್ನರಃ ॥ ೩೦ ॥

ಸ್ವರ್ಗಲೋಕಮವಾಪ್ನೋತಿ ಪುರುಷೋಽಪಿ ಸುದಾರುಣಃ ।
ಷಷ್ಟಿಂವರ್ಷ ಸಹಸ್ರಾಣಿ ಸ್ವರ್ಗೇ ವಸತಿ ಭೂಮಿದಃ ॥ ೩೧ ॥

ಆಚ್ಛೇತ್ತಾ ಚಾನುಮಂತಾ ಚ ತಾವಂತಿ ನರಕೇ ವಸೇತ್ ।
ಪಕ್ವಸಸ್ಯಾಂ ವಸುಮತೀಂ ಯೋಽಲಂಕೃತ್ಯ ಪ್ರಯಚ್ಛತಿ ॥ ೩೨ ॥

ಕಾಮಗೇನ ವಿಮಾನೇನ ಬ್ರಹ್ಮಲೋಕಂ ಸಗಚ್ಛತಿ ।
ಯಥಾ ಭವತಿ ವಿಪ್ರೇಂದ್ರಾಃ ಫಲಂ ಭೂಮೌ ಪುನಃ ಪುನಃ ॥ ೩೩ ॥

ತಥಾ ಭೂಮಿಕೃತಂ ದಾನಂ ಸಸ್ಯೈರಿವ ವಿವರ್ಧತೇ ।
ಯಸ್ತು ರಾಜಾ ದ್ವಿಜಾತಿಭ್ಯಃ ಸಮ್ಯಗ್ಭೂಮಿಂ ಪ್ರಯಚ್ಛತಿ ।
ಪುನಸ್ತು ಜನನಂ ಪ್ರಾಪ್ಯ ರಾಜೈವ ಭುವಿ ಜಾಯತೇ ॥ ೩೪ ॥

೩೦-೩೪. ಭೂಮಿಯನ್ನು ಅಪಹರಿಸಿದವನು ಮರಣಾನಂತರ ದುಃಖವನ್ನು ಹೊಂದುವುದಲ್ಲದೆ ಈ ಜನ್ಮದಲ್ಲಿಯೂ ದುಃಖವನ್ನನುಭವಿಸುತ್ತಾನೆ. ಯಾವನು ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ದೇವಬ್ರಾಹ್ಮಣರಿಗೆ ದಾನಮಾಡುತ್ತಾನೋ ಅವನು ಕಠಿಣಹೃದಯನಾದರೂ ಸ್ವರ್ಗಲೋಕವನ್ನು ಹೊಂದುವನು. ಭೂದಾನ ಮಾಡಿದವನು ೬೦ ಸಾವಿರ ವರ್ಷ ಸ್ವರ್ಗದಲ್ಲಿ ವಾಸಿಸುತ್ತಾನೆ. ಭೂಮಿಯನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವವನೂ, ಅದನ್ನು ಅನುಮೋದಿಸುವವನೂ ೬೦ ಸಾವಿರವರ್ಷ ನರಕದಲ್ಲಿ ಬಿದ್ದಿರುವನು. ಫಲಬಿಟ್ಟಿರುವ ಸಸ್ಯಗಳಿಂದ ತುಂಬಿದ ಭೂಮಿಯನ್ನು ಅಲಂಕರಿಸಿ ದಾನಮಾಡಿದವನು ಇಚ್ಛಾನುರೂಪವಾದ ವಿಮಾನ ದಿಂದ ಬ್ರಹ್ಮಲೋಕವನ್ನು ಸೇರುತ್ತಾನೆ. ಎಲೈ ಬ್ರಾಹ್ಮಣೋತ್ತಮರೇ, ಭೂಮಿ ಯಲ್ಲಿ ಹೇಗೆ ಪುನಃಪುನಃ ಬೆಳೆಯಾಗುವುದೋ ಹಾಗೆಯೇ ಭೂಮಿದಾನವು ಸಸ್ಯ ಗಳಂತೆ ಫಲಗಳಿಂದ ಅಭಿವೃದ್ಧಿಹೊಂದುತ್ತದೆ. ಯಾವ ರಾಜನು ಬ್ರಾಹ್ಮಣರಿಗೆ ಚೆನ್ನಾಗಿರುವ ಭೂಮಿಯನ್ನು ದಾನಮಾಡುತ್ತಾನೋ ಆತನು ಪುನಃ ರಾಜನಾಗಿಯೇ ಹುಟ್ಟುತ್ತಾನೆ.

ಶಸ್ತ್ರಂ ಭದ್ರಾಸನಂ ವಸ್ತ್ರಂ ನರಾಶ್ವವರವಾರಣಾಃ ।
ಭೂಮಿದಾನಸ್ಯ ಪುಷ್ಪಾಣಿ ಫಲಂ ಸ್ವರ್ಗಃ ಪ್ರಕೀರ್ತಿತಃ ॥ ೩೫ ॥

ಸಂಗ್ರಾಮೇ ಯೇ ಹತಾಶ್ಶೂರಾಸ್ತಥಾ ಯೇ ಯಜ್ಞಯಾಜಿನಃ ।
ವನೇಷು ಯೇ ಮೃತಾಸ್ತೇ ಚ ನಾತಿಕ್ರಾಮಂತಿ ಭೂಮಿದಂ ॥ ೩೬ ॥

ನಾಸ್ತಿ ವಿಷ್ಣುಸಮಸ್ತ್ರಾತಾ ನಾಸ್ತಿ ಗಂಗಾ ಸಮಾ ನದೀ ॥ ೩೭ ॥

ಹೋಮಮಂತ್ರಸ್ತಥಾ ನಾಸ್ತಿ ಮಹಾವ್ಯಾಹೃತಿಭಿಃ ಸಮಃ ।
ಗಾಯತ್ರೀ ಸದೃಶೋ ಜಪ್ಯೋ ಯಥಾನಾಸ್ತಿ ದ್ವಿಜೋತ್ತಮಾಃ ॥ ೩೮ ॥

ಅನ್ತರ್ಜಲೇ ತಥಾ ನಾಸ್ತಿ ಮಂತ್ರೋಽನ್ಯೋಽಪ್ಯಘಮರ್ಷಣಾತ್ ।
ವಿಧಿರ್ಮಾನಸಮೋ ನಾಸ್ತಿ ತಪೋಽನಾನಶನಾತ್ಪರಂ ॥ ೩೯ ॥

೩೫–೩೬. ಶಸ್ತ್ರವೂ, ಭದ್ರಾಸನವೂ, ವಸ್ತ್ರ, ಮನುಷ್ಯ, ಕುದುರೆ, ಆನೆ ಇವುಗಳೇ ಭೂದಾನದ ಹೂಗಳು, ಸ್ವರ್ಗಪ್ರಾಪ್ತಿಯೇ ಫಲಗಳು ಎಂಬುದಾಗಿ ಹೇಳಿದೆ. ಯುದ್ಧದಲ್ಲಿ ಮಡಿದವರೂ, ಯಜ್ಞಯಾಗಾದಿಗಳನ್ನು ಮಾಡಿದವರೂ ಕಾಡಿನಲ್ಲಿ ತಾಪಸವೃತ್ತಿಯಿಂದ ಸತ್ತವರೂ ಭೂಮಿದಾನಮಾಡಿದವರನ್ನು ಮೀರುವುದಿಲ್ಲ.

೩೭–೪೧. ವಿಷ್ಣುವಿಗಿಂತ ಕಾಪಾಡುವ ದೇವರು ಬೇರೆ ಹೇಗೆ ಇಲ್ಲವೋ ಗಂಗೆಗೆ ಸಮನಾದ ನದಿಯಿಲ್ಲವೋ, ಓಂಕಾರಾದಿ ಮಹಾವ್ಯಾಹೃತಿಗಳಿಗಿಂತ ಬೇರೆ, ಹೋಮಮಂತ್ರವಿಲ್ಲವೋ, ಬ್ರಾಹ್ಮಣೋತ್ತಮರಿಗೆ ಗಾಯತ್ರಿಗಿಂತ ಹೇಗೆ ಬೇರೆ ಮಂತ್ರವಿಲ್ಲವೋ, ಅಘಮರ್ಷಣ ಮಂತ್ರಕ್ಕಿಂತ ಬೇರೆ ಜಲದಲ್ಲಿ ಜಪಿಸುವ ಮಂತ್ರವಿಲ್ಲವೋ, ಶಾಸ್ತ್ರಕ್ಕಿಂತ ಮಿಗಿಲಾದ ವಿಧಿಯಿಲ್ಲವೋ, ಉಪವಾಸಕ್ಕಿಂತ ಬೇರೆ ತಪಸ್ಸಿಲ್ಲವೋ, ತಾಯಿಗೆ ಸಮವಾದ ಗುರುವಿಲ್ಲವೋ

ಗುರುರ್ಮಾತೃಸಮೋ ನಾಸ್ತಿ ನಾಸ್ತಿ ಭಾರ್ಯಾಸಮಃ ಸಖಾ ।
ನೀಚಾಪಮಾನನಾದ್ದುಃಖಾದ್ದುಃಖಂ ನಾಸ್ತಿ ಯಥಾ ಪರಂ || ೪೦ ||

ಯಥಾ ಚ ನಾಸ್ತಿ ಲೋಕೇಷು ದುಃಖಂ ಶತ್ರುಜಯಾಧಿಕಂ ।
ಚಕ್ಷುಃ ಜ್ಞಾನಸಮಂ ನಾಸ್ತಿ ಸುಹೃದ್ಧರ್ಮಸಮಸ್ತಥಾ || ೪೧ ||

ಭೂಮಿದಾನಾತ್ಪರಂ ದಾನಂ ತಥಾ ನಾಸ್ತಿ ದ್ವಿಜೋತ್ತಮಾಃ ।
ಭೂಮಿದಾನಾತ್ಪರಂ ನಾಸ್ತಿ ವಿಮಾನೈಃ ಕಾಮಗೈರಿಹ || ೪೨ ||

ದೇವಸ್ತ್ರೀನೃತ್ಯಬಹುಲೇ ವೀಣಾ ಮುರಜನಾದಿತೇ ।
ಕಿಂಕಿಣೀಜಾಲನಿರ್ಘೋಷೇ ಮನೋರಥಫಲದ್ರುಮೇ || ೪೩ ||

ಮುಖ್ಯಾಭಿರ್ದೇವರಾಮಾಭಿರ್ವೀಜ್ಯಮಾನಾಸ್ತು ಚಾಮರೈಃ ।
ಸಂಗೀಯಮಾನಾಗಂಧರ್ವೈಃ ಸ್ತೂಯಮಾನಾಸ್ತಥೈವ ಚ || ೪೪ ||

ಬಹೂನ್ಯಬ್ದಸಹಸ್ರಾಣಿ ದೇವಭೋಗಾಸ್ತುತೇ ನರಾಃ ।
ಸ್ವರ್ಗೇ ಭುಕ್ತ್ವಾ ಯದಾಯಾಂತಿ ಮಾನುಷ್ಯಂ ಕಾಲಪರ್ಯಯಾತ್ ।
ಭವಂತಿ ಸರ್ವಭೋಗಾಢ್ಯಾಃ ಸರ್ವದುಃಖವಿವರ್ಜಿತಾಃ || ೪೫ ||

ಹೆಂಡತಿಗೆ ಸಮವಾದ ಸ್ನೇಹಿತರಿಲ್ಲವೋ, ನೀಚರಿಂದಾದ ಅಪಮಾನದುಃಖಕ್ಕಿಂತ ಬೇರೆ ದುಃಖವಿಲ್ಲವೋ, ಲೋಕದಲ್ಲಿ ಶತ್ರುಜಯಕ್ಕಿಂತ ಅಧಿಕವಾದ ಸುಖವಿಲ್ಲವೋ, ಜ್ಞಾನಕ್ಕೆ ಸಮಾನವಾದ ಬೇರೆ ಕಣ್ಣು ಇರುವುದಿಲ್ಲವೋ, ಸ್ನೇಹಿತನ ಧರ್ಮನುಡಿಗೆ ಸಮವಾದುದಿಲ್ಲವೋ.

೪೨–೪೬ ಎಲೈ ಬ್ರಾಹ್ಮಣಶ್ರೇಷ್ಠರೇ, ಹಾಗೆಯೇ ಭೂಮಿದಾನಕ್ಕೆ ಸಮವಾದ ದಾನವು ಬೇರೊಂದಿಲ್ಲ. ಭೂಮಿದಾನಮಾಡಿದವನು ಇಚ್ಛಾನುಸಾರಿಯಾದ ವಿಮಾನದಿಂದ ದೇವಸ್ತ್ರೀಯರ ನೃತ್ಯಾದಿಗಳಿಂದ ಕೂಡಿದ, ವೀಣಾ ಮದ್ದಲೆ ಇವುಗಳಿಂದ ಧ್ವನಿಸೈಯ್ಯುತ್ತಿರುವ, ಚಿಕ್ಕಗಂಟೆಗಳ ಧ್ವನಿಯಿಂದ ಕೂಡಿದ, ಕಲ್ಪವೃಕ್ಷಗಳಿಂದ ಶೋಭಿಸುವ, ಮುಖ್ಯರಾದ ಮೇನಕಾದಿಗಳಿಂದ ಬೀಸುತ್ತಿರುವ ಚಾಮರವುಳ್ಳ, ಗಂಧರ್ವರಿಂದ ಗಾನಮಾಡುತ್ತಿರುವ ಮತ್ತು ಹೊಗಳುತ್ತಿರುವ ದೇವಲೋಕದಲ್ಲಿ ಅನೇಕ ವರ್ಷಗಳವರೆಗೆ ದೇವಭೋಗಗಳನ್ನು ಅನುಭವಿಸಿ, ಕಾಲವಿಪರ್ಯದಿಂದ ಮನುಷ್ಯಲೋಕದಲ್ಲಿ ಜನಿಸಿ ಸಕಲದುಃಖದಿಂದಲೂ ಬಿಡುಗಡೆಹೊಂದಿ ಸರ್ವಸುಖಸಂಪತ್ತುಳ್ಳ

ವಿಖ್ಯಾತಶಬ್ದಾಶ್ಚ ಜನಾಭಿರಾಮಾಃ
ಪ್ರತಿಷ್ಟಚಾಮೀಕರ ಭೂಷಿತಾಙ್ಗಾಃ ।
ಸುಗಂಧಿಗಂಧೈಶ್ಚ ತಥಾನುಲಿಪ್ತಾಃ ಭವಂತಿ
ಲೋಕೇ ಚ ಸುಖೈರುಪೇತಾಃ ॥ ೪೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಭೂಮಿದಾನ ವರ್ಣನೋನಾಮ ಪಂಚಾಧಿಕತ್ರಿಶತತಮೋಽಧ್ಯಾಯಃ

ವರಾಗಿಯೂ, ಯಶೋವಂತರಾಗಿಯೂ, ಸಕಲಜನಪ್ರಿಯರಾಗಿಯೂ, ಸಕಲ ಸುವರ್ಣ ಆಭರಣಗಳಿಂದ ಭೂಷಿತರಾಗಿಯೂ, ಸುಗಂಧಾದಿಗಳಿಂದ ಲೇಪಿಸಲ್ಪಡು ನವರಾಗಿಯೂ ಸುಖದಿಂದ ಜೀವಿಸುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ಭೂಮಿದಾನ ವರ್ಣನೆಯೆಂಬ ಮುನ್ನೂರ ಐದನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷಡಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಗಾವಃ ಪವಿತ್ರಾ ಮಂಗಲ್ಯಾ ಗೋಷು ಲೋಕಾಃ ಪ್ರತಿಷ್ಠಿತಾಃ ।
ತಾಸ್ವಾಯತ್ತಾನಿ ಯಜ್ಞಾನಿ ದೇವತಾತಿಥಿಪೂಜನಂ ॥ ೧ ॥

ಬಲಂ ತುಷ್ಟಿಶ್ಚ ಪುಷ್ಟಿಶ್ಚ ತಥಾ ಶ್ರಾದ್ಧಕ್ರಿಯಾ ದ್ವಿಜಾಃ ।
ನಾಸೌ ಸಂಪನ್ನಮಶ್ನಾತಿ ಯಸ್ಯಧೇನುರ್ನವಿದ್ಯತೇ ॥ ೨ ॥

ಮುನ್ನೂರ ಆರನೆಯ ಅಧ್ಯಾಯ.

೧-೨. ಹಂಸವು ಹೇಳುತ್ತದೆ:—ಗೋವುಗಳು ಪವಿತ್ರಗಳಾಗಿಯೂ. ಮಂಗಳಕರಗಳಾಗಿಯೂ ಇರುತ್ತವೆ. ಗೋವಿನಲ್ಲಿ ಸಕಲ ಲೋಕಗಳೂ ಆಶ್ರಯಿಸಿವೆ. ಯಜ್ಞಾದಿಗಳು ಗೋವುಗಳ ಅಧೀನವಾಗಿವೆ. ದೇವತಾ ಅತಿಥಿಗಳ ಪೂಜೆಯೂ, ಗೋವಿಲ್ಲದೆ ಆಗುವುದಿಲ್ಲ. ಯಾವನಿಗೆ ಗೋವು ಇಲ್ಲವೋ ಆತನು ಬಲವನ್ನಾಗಲಿ, ಸಂತೋಷವನ್ನಾಗಲೀ, ಪುಷ್ಟಿಯನ್ನಾಗಲೀ, ಶ್ರಾದ್ಧಕ್ರಿಯೆಯನ್ನಾಗಲೀ, ಚನ್ನಾಗಿ ಹೊಂದಲು ಸಮರ್ಥನಾಗುವುದಿಲ್ಲ. ಆದುದರಿಂದ ಸರ್ವದಾನಗಳಿಗಿಂತಲೂ ಗೋದಾನವು ಉತ್ತಮವಾದುದು.

ತಸ್ಮಾತ್ಸರ್ವಪ್ರದಾನಾನಾಂ ಗವಾಂ ದಾನಮನುತ್ತಮಂ ।
ಹೀನಾಙ್ಗೀಂ ಕ್ಷೀರಪಾಂ ವೃದ್ಧಾಂ ದುಗ್ಧದೋಹಾಂ ನಿರಿಂದ್ರಿಯಾಂ ॥ ೩ ॥

ವ್ಯಾಧಿತಾಂ ವಿಷಮಾಂ ವ್ಯಾಳಾಂ ತಥೈವ ಪ್ರಪಲಾಯಿನೀಂ ।
ಮೂಲ್ಯೈಸ್ತಥಾಪ್ಯಸಂಶುದ್ಧೈಃ ಹೃತಾಂ ಚ ದ್ವಿಜಪುಂಗವಾಃ ॥ ೪ ॥

ನ ದಾತವ್ಯಾಸ್ತ್ವೃತಾಧೇನುಃ ದತ್ವಾ ನರಕಮಾಪ್ನುಯಾತ್ ।
ಬ್ರಾಹ್ಮಣೋ ಯಸ್ತು ಕುರುತೇ ಗೋರಸಾನಾಂ ತು ವಿಕ್ರಯಂ ॥ ೫ ॥

ಗವಾಂ ಚ ವಿಕ್ರಯಂ ವಿಪ್ರಾಃ ವಿಷನೋಯಃ ತಥಾ ಗವಾಂ ।
ಅಪಾತ್ರದೋಷಯುಕ್ತಶ್ಚ ನ ದೇಯಾ ತಸ್ಯ ಚಾಪಥ ॥ ೬ ॥

ನೈಕಾ ಬಹೂನಾಂದಾತವ್ಯಾ ನ ದ್ವಯೋಃ ದ್ವಿಜಪುಂಗವಾಃ ।
ಸಾ ತು ವಿಕ್ರಯಮಾಪನ್ನಾ ದಾತುರ್ನರಕದಾಯಿನೀ ॥ ೭ ॥

೩-೪. ಅವಯವನ್ಯೂನವಾದುದನ್ನೂ, ತನ್ನ ಹಾಲನ್ನು ತಾನೇ ಕುಡಿಯುವ ಹಸುವನ್ನೂ, ವೃದ್ಧವಾದ ಹಸುವನ್ನೂ, ಮುದಿತನದಿಂದ ಹಾಲು ಕರೆಯದಿರುವ ಹಸುವನ್ನೂ, ಇಂದ್ರಿಯಪಾಟವವಿಲ್ಲದಿರುವುದನ್ನೂ, ರೋಗಪೀಡಿತವಾದುದನ್ನೂ, ವ್ಯತ್ಯಸ್ತವಾದ ಅವಯವಉಳ್ಳದ್ದನ್ನೂ, ದುಷ್ಟವಾದದ್ದನ್ನೂ ಓಡತಕ್ಕದ್ದನ್ನೂ, ಅಶುದ್ಧವಾದ ದ್ರವ್ಯದಿಂದ ಕೊಂಡು ತಂದುದನ್ನೂ, ಬ್ರಾಹ್ಮಣನಿಂದ ಅಪಹರಿಸಿರುವುದನ್ನೂ ದಾನಮಾಡಬಾರದು. ಇಂಥಾ ಹಸುವನ್ನು ದಾನಮಾಡಿದರೆ ನರಕವನ್ನು ಹೊಂದುತ್ತಾನೆ.

೫-೭. ಬ್ರಾಹ್ಮಣನಾದವನು ಹಾಲು, ಮಜ್ಜಿಗೆ ಮುಂತಾದ ಗೋರಸವನ್ನು ಮಾರಿದರೂ ಹಾಗೆಯೇ ಹಸುವನ್ನು ಮಾರಿದರೂ ನರಕವನ್ನು ಹೊಂದುತ್ತಾನೆ. ಅಯೋಗ್ಯನಿಗೂ, ದೋಷಭರಿತನಿಗೂ ಗೋವನ್ನು ದಾನಕೊಡಬಾರದು. ಒಂದು ಹಸುವನ್ನೇ ಇಬ್ಬರಿಗಾಗಲೀ, ಬಹುಜನರಿಗಾಗಲಿ ದಾನಮಾಡಬಾರದು. ಬ್ರಾಹ್ಮಣೋತ್ತಮರೇ, ಹಾಗೆ ಮಾರಿದರಾಗಲಿ, ದಾನ ಮಾಡಿದ್ದೇ ಆಗಲಿ ನರಕವನ್ನು

ಏಕಂ ಪಾತ್ರಮಥಾಸಾದ್ಯ ದೇಯಾಸ್ತು ಬಹವಃ ಸ್ಮೃತಾಃ ।
ಗವಾಂ ಪ್ರದಾನೇ ಯತ್ನೇನ ಪರಿ ಕ್ಷ್ಯೋ ಬ್ರಾಹ್ಮಣೋ ಭವೇತ್ ॥ ೮ ॥

ಯಥಾಕಥಂಚಿತ್ ದತ್ವಾಗಾಂ ಧೇನುಂ ವಾಧೇನುಮೇವವಾ ।
ಅರೋಗಾಮಪರಿಕ್ಲಿಷ್ಟಾಂ ದಾತಾಸ್ವರ್ಗೇ ಮಹೀಯತೇ ॥ ೯ ॥

ದತ್ವಾವತ್ಸತರೀಂ ವಿಪ್ರಾಃ ಸ್ವರ್ಗಲೋಕೇ ಮಹೀಯತೇ
ಗುರ್ವಿಣೀಂ ಚ ತಥಾ ದತ್ವಾ ವಸೂನಾಂ ಲೋಕಮಶ್ನುತೇ ॥ ೧೦ ॥

ಪ್ರಸೂಯಮಾನಾಂ ತಾಂದತ್ವಾ ಭೂಮಿದಾನಫಲಂ ಲಭೇತ್ ।
ಸ್ರವಂತ್ಯಾಂಚ ತಥಾ ದತ್ವಾ ನಂದನೇ ಮೋದತೇ ನರಃ ॥ ೧೧ ॥

ಶ್ವೇತಾಂ ದತ್ವಾ ಸೋಮಲೋಕೇ ರಕ್ತಾಂದತ್ವಾ ವಿಭಾವಸೋಃ ।
ಕೃಷ್ಣಾಂ ದತ್ವಾ ತಥಾಯಾಮ್ಯೇ ನೀಲಾಂ ದತ್ವಾ ಚ ವಾರುಣೇ ॥ ೧೨ ॥

ಹೊಂದುವನು. ಒಬ್ಬನಿಗೆ ಅನೇಕ ಹಸುಗಳನ್ನು ದಾನಮಾಡಬಹುದೆಂದು ಹೇಳಲ್ಪಟ್ಟಿದೆ ಗೋದಾನಮಾಡುವಾಗ ಪ್ರಯತ್ನಪೂರ್ವಕವಾಗಿ ಬ್ರಾಹ್ಮಣನನ್ನು ಚೆನ್ನಾಗಿ ಪರೀಕ್ಷೆಮಾಡಬೇಕು.

೯-೧೧. ಹೇಗಾದರೂ ಸರಿ ಕರೆಯುವ ಹಸುವನ್ನಾಗಲೀ, ಕರೆಯದ ಹಸುವನ್ನಾಗಲೀ, ರೋಗರಹಿತವಾದುದನ್ನೂ, ಸುಂದರವಾದುದನ್ನೂ ದಾನಮಾಡಿದರೆ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ ಬೆಳೆದ ಕರುವನ್ನು ದಾನಮಾಡಿ ಸ್ವರ್ಗಲೋಕದಲ್ಲಿ ಮಾನ್ಯತೆಯನ್ನು ಪಡೆಯುತ್ತಾನೆ. ಗರ್ಭವುಳ್ಳ ಹಸುವನ್ನು ದಾನಮಾಡುವುದರಿಂದ ವಸುಗಳ ಲೋಕವನ್ನು ಹೊಂದುತ್ತಾನೆ. ಪ್ರಸವವಾಗುತ್ತಿರುವಾಗ ಹಸುವನ್ನು ದಾನಮಾಡುವುದರಿಂದ ಭೂಮಿದಾನದ ಫಲವನ್ನು ಪಡೆಯುತ್ತಾನೆ ಹಾಲುಕರೆಯುವ ಗೋವನ್ನು ದಾನಮಾಡುವುದರಿಂದ ನಂದನೋದ್ಯಾನದಲ್ಲಿ ಕ್ರೀಡಿಸುತ್ತಾನೆ.

೧೨-೧೫. ಬಿಳುಪು ಬಣ್ಣದ ಗೋದಾನದಿಂದ ಸೋಮಲೋಕವನ್ನೂ, ಕೆಂಪು ಬಣ್ಣದ ಗೋದಾನದಿಂದ ಸೂರ್ಯಲೋಕವನ್ನೂ, ಕಪ್ಪುಬಣ್ಣದ ಗೋದಾನದಿಂದ

ಇಂದ್ರಲೋಕೇ ತು ಶಬಲಾ ಮಿಂದ್ರಲೋಕೆ ತು ರೋಹಿಣೀಂ ।
ವಾತರೇಣುಸವರ್ಣಾಂ ತು ವಾಯುಲೋಕೆ ಮಹೀಯತೇ ॥ ೧೩ ॥

ಧೂಮ್ರವರ್ಣಾಂ ತಥಾದತ್ತ್ವಾ ವಸೂನಾಂ ಲೋಕಮಶ್ನುತೇ ।
ಆಷಾಡೇನ ಸವರ್ಣಾಂ ತು ಲೋಕಂ ವಾರುಣಮಾಪ್ನುಯಾತ್ ॥ ೧೪ ॥

ಸುವರ್ಣವರ್ಣಾಂ ಕೌಬೇರಂ ತಾಮ್ರಾಮಾಂಗಿರಸಂ ತಥಾ ।
ಪಲಾಲ ಧೂಮ್ರವರ್ಣಾಭಾಂ ಪಿತೃಲೋಕಂ ತಥೈವ ಚ ॥ ೧೫ ॥

ಶಿತಿಕಂಠಾಪ್ರದಾನೇನ ವೈಶ್ವದೇವಮವಾಪ್ನುಯಾತ್ ।
ಗೌರೀಂದತ್ತ್ವಾ ಭೃಗೂಣಾಂಚ ವೈರಾಟಾಭಾಂ ಪ್ರಜಾಪ್ರತೇಃ ॥ ೧೬ ॥

ಪಾಂಡುಕಂಬಲವರ್ಣಾಭಾಂ ರುದ್ರಾಣಾಂ ಲೋಕಮಾಪ್ನುಯಾತ್ ।
ಶುಕ್ಲಬಿಂದುಚಿತಾಂ ಕೃಷ್ಣಾಂ ಗಂಧರ್ವೈಸ್ಸಹ ಮೋದತೇ ॥ ೧೭ ॥

ಯಮಲೋಕವನ್ನೂ ನೀಲಿ ಹಸುವಿನದಾನದಿಂದ ವರುಣಲೋಕವನ್ನೂ, ನಾನಾ ವರ್ಣದ ಗೋವಿನ ಮತ್ತು ಹಸುರು ಬಣ್ಣದ ಗೋದಾನದಿಂದ ಇಂದ್ರಲೋಕವನ್ನೂ, ಹಾಗೆಯೇ ಗಾಳಿಯ ಧೂಳಿನಂತಿರುವ ಹಸುವಿನ ದಾನದಿಂದ ವಾಯುಲೋಕವನ್ನೂ ಪಡೆದು ಪೂಜಿಸಲ್ಪಡುತ್ತಾನೆ ಬೂದುಬಣ್ಣದ ಹಸುವಿನ ದಾನದಿಂದ ವಸುಲೋಕ ವನ್ನೂ ಆಷಾಢೀಮೂಲಿಕೆಗೆ ಸಮನಾದ ಬಣ್ಣವುಳ್ಳ ಹಸುವಿನ ದಾನದಿಂದ ವರುಣ ಲೋಕವನ್ನೂ ಪಡೆಯುತ್ತಾನೆ. ಚಿನ್ನದ ಬಣ್ಣದ ಗೋದಾನದಿಂದ ಕುಬೇರಲೋಕವೂ ತಾಮ್ರಬಣ್ಣದ ಗೋದಾನದಿಂದ ಅಂಗಿರಸಲೋಕವೂ, ಹೊಟ್ಟಿನ ಮತ್ತು ಹೊಗೆಯ ಬಣ್ಣದ ಹಸುವಿನ ದಾನದಿಂದ ಪಿತೃಲೋಕವೂ ಲಭಿಸುವುದು.

೧೬–೧೮. ನೀಲಕಂಠವಾದ ಹಸುವಿನ ದಾನದಿಂದ ವೈಶ್ವದೇವಲೋಕವನ್ನೂ ಬಿಳಿವರ್ಣದ ಹಸುವಿನಿಂದ ಭೃಗುಲೋಕವನ್ನೂ, (ವಿರಾಟಪಕ್ಷಿಯಂತೆ) ಕಾಂತಿ ಯುಳ್ಳ ಹಸುವಿನ ದಾನದಿಂದ ಪ್ರಜಾಪತಿಯ ಲೋಕವನ್ನೂ. ಬಿಳಿಕಂಬಳಿ ಬಣ್ಣ ವಂತಿರುವ ಹಸುವಿನ ದಾನದಿಂದ ರುದ್ರಲೋಕವನ್ನೂ ಪಡೆಯುತ್ತಾನೆ. ಬಿಳೀ

ಕಪಿಲಾಂ ಚ ತಥಾ ದತ್ವಾ ಯಥೇಷ್ಟಂ ಲೋಕಮಾಪ್ನುಯಾತ್ ।
ಗಾವಃ ಪ್ರಕೃತಿವರ್ಣಾಸ್ತು ಕಪಿಲಾಃ ಪರಿಕೀರ್ತಿತಾಃ ॥ ೧೮ ॥

ಕೃತಂ ತು ವರ್ಣವೈಚಿತ್ರ್ಯಂ ಪೂರ್ವಂ ತಾಸಾಂ ತು ಶಂಭುನಾ ।
ಯಥಾ ತು ಗಂಗಾ ಸರಿತಾಂ ಧೇನೂನಾಂ ಕಪಿಲಾ ತಥಾ ॥ ೧೯ ॥

ಸಾಯಂ ಪ್ರಾತಶ್ಚ ಸತತಂ ಹೋಮಕಾಲೇ ದ್ವಿಜೋತ್ತಮಾಃ ।
ಗಾವೋ ದದತಿ ವೈ ಹೌಮ್ಯಮೃಷಿಭ್ಯೋ ನಾತ್ರಸಂಶಯಃ ॥ ೨೦ ॥

ದುಷ್ಕೃತಾನಿ ದುರಿಷ್ಟಾನಿ ದುರ್ಗಾಣಿ ವಿಷಮಾಣಿ ಚ ।
ತರಂತಿ ಚೈವ ಪಾಪೇಭ್ಯೋ ಧೇನುದಾನೇನ ಮಾನವಾಃ ॥ ೨೧ ॥

ಏಕಾಂಗಾಂ ದಶಗುರ್ದದ್ಯಾದ್ದಶದದ್ಯಾಚ್ಚ ಗೋಶತೀ ।
ಶತಂ ಸಹಸ್ರಗುರ್ದದ್ಯಾತ್ಸರ್ವೇ ತುಲ್ಯಫಲಾ ಹಿತೇ ॥ ೨೨ ॥

ಚುಕ್ಕೆಯುಳ್ಳ ಕಪ್ಪುಹಸುವನ್ನು ದಾನಮಾಡುವುದರಿಂದ ಗಂಧರ್ವಲೋಕದಲ್ಲಿ ಗಂಧರ್ವರೊಡನೆ ಸುಖಪಡುತ್ತಾನೆ. (ಕಪಿಲ ಗೋವನ್ನು ದಾನಮಾಡಿದಲ್ಲಿ ಇಚ್ಛಿಪಟ್ಟ ಲೋಕವನ್ನು ಪಡೆಯುತ್ತಾನೆ.) ಗೋವುಗಳ ಮೂಲವಾದ (ಸ್ವಾಭಾವಿಕವಾದ) ಬಣ್ಣವು ಕಪಿಲವೆಂದು ಹೇಳಲ್ಪಟ್ಟಿದೆ.

೧೯–೨೦. ಆಮೇಲೆ ಬೇರೆ ಬೇರೆ ವರ್ಣದ ವೈಚಿತ್ರ್ಯವು ಈಶ್ವರನಿಂದ ಮಾಡಲ್ಪಟ್ಟಿತು. ನದಿಗಳಲ್ಲಿ ಗಂಗೆಯು ಹೇಗೋ ಹಸುಗಳಲ್ಲಿ ಕಪಿಲೆಯು ಶ್ರೇಷ್ಠವೆಂದು ಹೇಳಲ್ಪಟ್ಟಿದೆ. ಬ್ರಾಹ್ಮಣಶ್ರೇಷ್ಠರೇ, ಬೆಳಗ್ಗೆ ಮತ್ತು ಸಾಯಂಕಾಲದಲ್ಲಿ, ಹೋಮಕಾಲದಲ್ಲಿ ಹಸುಗಳು ಋಷಿಗಳಿಗೆ ಹೋಮಸಾಮಗ್ರಿಗಳನ್ನು ಒದಗಿಸಿ ಕೊಡುತ್ತವೆ.

೨೧–೨೪. ಮನುಷ್ಯರು ಗೋದಾನದಿಂದ ಪಾಪಗಳನ್ನೂ, ಅನಿಷ್ಟಗಳನ್ನೂ ದುಃಖವನ್ನೂ, ವಿಷಮ ಪರಿಸ್ಥಿತಿಯನ್ನೂ ಕಳೆದುಕೊಳ್ಳುತ್ತಾರೆ. ಹತ್ತು ಹಸುಗಳುಳ್ಳವನು ಒಂದು ಹಸುವನ್ನೂ, ನೂರು ಹಸುಗಳುಳ್ಳವನು ಹತ್ತು ಹಸುಗಳನ್ನೂ, ಸಾವಿರ ಹಸುಗಳುಳ್ಳವನು ನೂರು ಹಸುಗಳನ್ನೂ ದಾನಮಾಡಬೇಕು. ಇವೆಲ್ಲ

ಶತವರ್ಷ ಸಹಸ್ರಾಣಿ ತಪಸ್ತಪ್ತಂ ಸುದುಶ್ಚರಂ |
ಗೋಭಿಃ ಪೂರ್ವವಿಸೃಷ್ಟಾಭಿರ್ಗಚ್ಛೇಮ ಶ್ರೇಷ್ಠತಾಮಿತಿ || ೨೩ ||

ಲೋಕೇಽಸ್ಮಿನ್ ದಕ್ಷಿಣಾನಾಂ ಚ ಸರ್ವಾಗಾವಯಸೋತ್ತರಾಃ |
ಭವೇ ತಾನಿ ಚ ಲಿಂಪ್ಯೇಮ ದೋಷೇಣಾತಿ ಪರನ್ತಪಾಃ || ೨೪ ||

ಶಕೃತ್ತ್ರಾಸಾಂ ಪವಿತ್ರಾರ್ಥಂ ಕುರ್ವೀರನ್ದೇವಮಾನುಷಾಃ |
ತಥಾ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ || ೨೫ ||

ಪ್ರದಾತಾರಶ್ಚ ಗೋಲೋಕಾನ್ಗಚ್ಛೇಯುರಿತಿ ಮಾನದಾಃ |
ಏತದ್ಧನಂ ದದೌ ತಾಸಾಂ ಸರ್ವಮೇವ ಪಿತಾಮಹಃ || ೨೬ ||

ಸುರಭಿರ್ದೇವಧೇನುರ್ಯಾ ತಸ್ಯಾಃ ಪುತ್ರತ್ವಮಾಗತಾಃ |
ಧರ್ಮೋ ವೃಷಭರೂಪೇಣ ಮಹಾದೇವ ಧ್ವಜಃ ಸ್ಮೃತಃ || ೨೭ ||

ಸಮಾನಫಲವೇ ವಿಹಿತವಾಗಿದೆ. ನೂರು ಸಾವಿರ ವರ್ಷಗಳವರೆಗೆ ಕಠಿಣವಾದ ಯಾವ ತಪಸ್ಸು ಆಚರಿಸಲ್ಪಡುತ್ತದೆಯೋ ಅದನ್ನು ಗೋದಾನದಿಂದ ನಾವು ಪಡೆಯಲು ಸಮರ್ಥರಾಗುತ್ತೇವೆ. ಇದೇ ಅದಕ್ಕಿಂತ ಶ್ರೇಷ್ಠವಾದುದು. ಎಲೈ ತಪಸ್ವಿಗಳೇ ಪ್ರಪಂಚದಲ್ಲಿ ದಕ್ಷಿಣಾರೂಪವಾಗಿ ಗೋವುಗಳು ಸೃಷ್ಟಿಸಲ್ಪಟ್ಟವೆ. ಆದುದರಿಂದ ಮುದಿಹಸುಗಳನ್ನು ಕೊಟ್ಟರೆ ದೋಷದಿಂದ ದೂಷಿತರಾಗುತ್ತಾರೆ.

೨೫–೨೭. ಆ ಗೋವುಗಳ ಸಗಣಿಯನ್ನು ಪವಿತ್ರವಾಗುವುದಕ್ಕೋಸ್ಕರ ದೇವತೆಗಳೂ ಮನುಷ್ಯರೂ ಉಪಯೋಗಿಸುತ್ತಾರೆ. ಇದರಿಂದ ಸಕಲ ಚರಾಚರ ಪ್ರಪಂಚವು ಪವಿತ್ರವಾಗುತ್ತದೆ. ಗೋದಾನಮಾಡುವವರು ಗೋಲೋಕವನ್ನು ಹೊಂದುವರು ಎಂದು ಪ್ರಾಜ್ಞರು ಹೇಳುತ್ತಾರೆ. ಬ್ರಹ್ಮನು ಇಂತಹ ಮಹಿಮೆಯನ್ನೇ ಗೋವುಗಳಿಗೆ ಧನವಾಗಿ ಕೊಟ್ಟಿರುವನು. ಸುರಭಿಯೆಂಬ (ಕಾಮಧೇನು) ದೇವ ಗೋವಿನ ಪುತ್ರಭಾವವನ್ನು ಗೋವುಗಳು ಹೊಂದಿರುತ್ತವೆ. ಧರ್ಮವೆಂಬುವ ಎತ್ತಿನ ರೂಪದಿಂದ ಈಶ್ವರನ ಧ್ವಜವೆಂದು ಹೇಳಲಾಗಿದೆ.

ದಶಧೇನುಪ್ರದಾನೇನ ಯಥೇಷ್ಟಾಂಗತಿಮಾಪ್ನುಯಾತ್ ।
ಶತಂ ಚ ದತ್ವಾ ಧರ್ಮಜ್ಞಃ ಶಕ್ರಲೋಕಮುಪಾಗತಃ ॥ ೨೮ ॥

ಕಲ್ಪಾವಶೇಷಂ ಚ ಸುಖೀ ಮೋದತ್ಯಪ್ಸರಸಾಂಗಣೈಃ ।
ದತ್ವಾತು ಸಹಸ್ರಂ ಧೇನೂನಾಂ ಸರ್ವಪಾಪೈರ್ವಿಮುಚ್ಯತೇ ॥ ೨೯ ॥

ಉಕ್ಷ್ಣಾಂ ಚ ಯೋ ಪ್ರಯಚ್ಛಂತಿ ಶತೇನ ಸಹಯೂಥಪಂ ।
ಸರ್ವಪಾಪವಿನಿರ್ಮುಕ್ತಾಸ್ತೇ ಪ್ರಯಾನ್ತ್ಯಮರಾವತೀಂ ॥ ೩೦ ॥

ಕಲ್ಪಾವಶೇಷಂ ತ್ರಿದಿವೇ ಸುಖಮುಷ್ಯ ನರೋತ್ತಮಾಃ ।
ಮಾನುಷ್ಯೇ ಧನಸಂಯುಕ್ತಾ ಭವಂತಿ ಸುಖಿನಸ್ತತಃ ॥ ೩೧ ॥

ಸಹಸ್ರೇಣ ಗವಾಂ ಸಾರ್ಧಂ ಯೋ ಪ್ರಯಚ್ಛಂತಿ ಯೂಥಪಂ ।
ಅಲಂಕೃತಂ ಯಥಾಶಕ್ತ್ಯಾ ಗೋಲೋಕಂ ಯಾಂತಿ ತೇ ನರಾಃ ॥ ೩೨ ॥

೨೮-೩೧ ಹತ್ತು ಗೋದಾನಮಾಡುವುದರಿಂದ ಮನಸ್ಸಿನಲ್ಲಿ ಬಯಸಿದ ಸ್ಥಾನವನ್ನು ಹೊಂದುತ್ತಾನೆ. ನೂರು ಗೋವನ್ನು ಧರ್ಮನಿರತನು ದಾನಮಾಡಿ ಇಂದ್ರಲೋಕವನ್ನು ಪಡೆಯುತ್ತಾನೆ. ಅಲ್ಲಿ ಕಲ್ಪಮುಗಿಯುವವರೆಗೂ ಅಪ್ಸರಸ್ತ್ರೀಯರೊಡನೆ ಕ್ರೀಡಿಸುತ್ತಿರುತ್ತಾನೆ. ಸಾವಿರ ಗೋದಾನದಿಂದ ಸಕಲ ಪಾಪಗಳಿಂದಲೂ ಬಿಡುಗಡೆಯಾಗುತ್ತಾನೆ. ನೂರು ಹಸುಗಳೊಡನೆ ಒಂದು ಗೂಳಿಯನ್ನು ಸೇರಿಸಿ ದಾನಮಾಡುವವರು ಸಕಲಪಾಪದಿಂದ ಮುಕ್ತರಾಗಿ ಅಮರಾವತಿಯನ್ನು ಸೇರುತ್ತಾರೆ ಅಲ್ಲಿ ಕಲ್ಪಪರ್ಯಂತ ಸುಖವಾಗಿದ್ದು ಆಮೇಲೆ ಪುನಃ ಮನುಷ್ಯಜನ್ಮದಲ್ಲಿ ಸುಖಿಯಾಗಿ ಜನಿಸಿ ಸಂಪತ್ತನ್ನೂ ಹೊಂದುತ್ತಾರೆ.

೩೨-೩೪ ಸಾವಿರ ಹಸುಗಳೊಡನೆ ಒಂದು ಗೂಳಿಯನ್ನು ಸೇರಿಸಿ ಯಥಾಶಕ್ತಿ ಅವುಗಳಿಗೆ ಅಲಂಕಾರಮಾಡಿ ಯಾರು ದಾನಮಾಡುತ್ತಾರೋ ಅವರು ಗೋಲೋಕವನ್ನು ಹೊಂದುತ್ತಾರೆ. ಗಟ್ಟಿಮುಟ್ಟಾದ ಎತ್ತನ್ನು ಬ್ರಾಹ್ಮಣನಿಗೆ ದಾನ

ಉಷ್ಣಾಣಮಿಂದ್ರಿಯೋಪೇತಂ ಯಸ್ತುದದ್ಯಾದ್ದ್ವಿಜಾತಯೇ ।
ದಶಧೇನುಫಲಂ ತಸ್ಯ ನಾತ್ರ ಕಾರ್ಯಾ ವಿಚಾರಣಾ ॥ ೩೩ ॥

ಗೋಯುಗಂ ಯೇ ಪ್ರಯಚ್ಛಂತಿ ಸೀರಯೂಪಯುತಂ ದ್ವಿಜಾಃ ।
ಸರ್ವಕಾಮಸಮೃದ್ಧಸ್ಯ ಪ್ರಾಪ್ನುವಂತಿ ಫಲಂ ನರಾಃ ॥ ೩೪ ॥

ಗೋಭಿಶ್ಚತುರ್ಭಿಃ ಸಂಯುಕ್ತಂ ರಥಂ ದತ್ವಾ ದ್ವಿಜಾತಯೇ ।
ಧಾನ್ಯೈರ್ವಸ್ತ್ರೈರ್ಯುತಂ ಶಕ್ತ್ಯಾ ಶಕ್ರಲೋಕಂ ವ್ರಜಂತಿತೇ ॥ ೩೫ ॥

ಮಾನುಷ್ಯಮಾಸಾದ್ಯ ತಥಾ ಭವಂತಿ ವಸುಧಾಧಿಪಾಃ ।
ಶಕಟಸ್ಯಪ್ರದಾನಸ್ತುವಿನಾ ಗೋಭಿರ್ಮಹಾಫಲಂ ॥ ೩೬ ॥

ವಿಶೇಷೇಣ ಮಹಾಭಾಗಾಸ್ತಸ್ಯ ಗೋಭಿರ್ಯುತಸ್ಯ ಚ ।
ಸಸಸ್ಯಂ ಶಕಟಂ ದತ್ವಾ ನಾಕಲೋಕೇ ಮಹೀಯತೇ ॥ ೩೭ ॥

ಮಾಡುವುದರಿಂದ ಹತ್ತು ಗೋದಾನಫಲವನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವೇನೂ ಇಲ್ಲ. ಎರಡು ಎತ್ತುಗಳನ್ನು ನೇಗಿಲು ನೊಗದೊಡನೆ ಯಾರು ದಾನಮಾಡುತ್ತಾರೋ ಅವರು ಎಲ್ಲ ಇಷ್ಟಾರ್ಥವನ್ನೂ ಕೊಡುವ ಪುಣ್ಯವನ್ನು ಪಡೆಯುತ್ತಾರೆ.

೩೫–೩೬. ನಾಲ್ಕು ಗೋವುಗಳಿಂದ ಕೂಡಿದ ರಥವನ್ನು ಧಾನ್ಯವಸ್ತ್ರಗಳಿಂದ ಕೂಡಿ ಶಕ್ತ್ಯನುಸಾರವಾಗಿ ಬ್ರಾಹ್ಮಣರಿಗೆ ದಾನಮಾಡಿದರೆ ಇಂದ್ರಲೋಕವನ್ನು ಹೊಂದುತ್ತಾರೆ. ಅನಂತರ ಮರ್ತ್ಯಲೋಕದಲ್ಲಿ ರಾಜರಾಗಿ ಹುಟ್ಟುತ್ತಾರೆ. ಕೇವಲ ಎತ್ತಿಲ್ಲದೆ ಇರುವ ಗಾಡಿಯನ್ನು ದಾನಮಾಡಿದರೂ ಮಹಾಫಲವು ಹೇಳಿದೆ.

೩೭–೪೦. ಭಾಗ್ಯವಂತರೇ ಆ ಗಾಡಿಗೆ ಗೋವನ್ನು ಸೇರಿಸಿ ದಾನಮಾಡಿದರೆ ವಿಶೇಷಫಲವನ್ನು ಹೊಂದುತ್ತಾನೆ. ಸಸ್ಯದಿಂದ ಕೂಡಿದ ಗಾಡಿಯನ್ನು ದಾನಮಾಡಿದರೆ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಅಗ್ನಿಯನ್ನಿಟ್ಟಿರುವ ಬ್ರಾಹ್ಮಣನಿಗೆ ಹೋಮಕ್ಕೋಸ್ಕರ ಹಸುವನ್ನು ಕೊಟ್ಟರೆ ಗೋದಾನಫಲವನ್ನೇ ಹೊಂದುತ್ತಾನೆ.

ದತ್ತ್ವಾ ತು ಧೇನುಂ ಹೋಮಾರ್ಥಂ ಬ್ರಾಹ್ಮಣಾಯಾಹಿತಾಗ್ನಯೇ ।
ಗೋದಾನಫಲಮಾಪ್ನೋತಿ ಹೋಮದಾನಫಲಂ ತಥಾ ॥ ೩೮ ॥

ಸ್ನಪನಾರ್ಥಂ ತಥಾ ದತ್ತ್ವಾ ಧೇನುಂ ರುದ್ರಸುರಾಲಯೇ ।
ರುದ್ರಲೋಕಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥ ೩೯ ॥

ದತ್ತ್ವಾ ಸಚೈಲಂ ವೃಷಭಂ ಮಹಾದೇವಾಲಯೇ ನರಃ ।
ರುದ್ರಲೋಕಮವಾಪ್ನೋತಿ ಕುಲಮುದ್ಧರತೇ ತಥಾ ॥ ೪೦ ॥

ಧೇನೂನಾಂ ಕಪಿಲಾಶ್ರೇಷ್ಠಾ ವೃಷಭಃ ಶ್ವೇತ ಉಚ್ಯತೇ ।
ಶ್ವೇತಂ ತು ವೃಷಭಂ ದತ್ತ್ವಾ ಫಲಸ್ಯಾನನ್ತ್ಯಮಶ್ನುತೇ ॥ ೪೧ ॥

ದಧಿಕ್ಷೀರಹಿತಾರ್ಥಾಯ ವಾಸುದೇವಸುರಾಲಯೇ ।
ದತ್ತ್ವಾ ಗಾಂ ಮಧುಪರ್ಕಾರ್ಥಂ ಚಾನನ್ತಂ ಫಲಮಾಪ್ನುಯಾತ್ ॥ ೪೨ ॥

ಗೋಪ್ರದಾನರತಾ ಯಾಂತಿ ಗೋಲೋಕಂ ಮಾನವೋತ್ತಮಾಃ ।
ಸಹಾಪ್ಸರೋಭಿರ್ಮುದಿತಾ ವಿಮಾನವರಮಾಸ್ಥಿತಾಃ ॥ ೪೩ ॥

ಹಾಗೆಯೇ ಹೋಮದಾನಫಲವನ್ನೂ ಹೊಂದುತ್ತಾನೆ. ರುದ್ರನ ದೇವಾಲಯದಲ್ಲಿ ರುದ್ರಾಭಿಷೇಕಕ್ಕೋಸ್ಕರ ಪಶುವನ್ನು ಕೊಟ್ಟವನು ರುದ್ರಲೋಕವನ್ನು ಹೊಂದುವು ದಲ್ಲದೆ ತನ್ನ ಕುಲವನ್ನೂ ಉದ್ಧರಿಸುತ್ತಾನೆ ಹಾಗೆಯೇ ವಸ್ತ್ರದೊಡನೆ ಕೂಡಿರುವ ಎತ್ತನ್ನೂ, ರುದ್ರದೇವಾಲಯಕ್ಕೆ ಕೊಟ್ಟರೆ ರುದ್ರಲೋಕವನ್ನು ಹೊಂದಿ ತನ್ನ ಪಿತೃಗಳನ್ನುದ್ಧರಿಸುತ್ತಾನೆ.

೪೧–೪೩. ಹಸುಗಳಲ್ಲಿ ಕಪಿಲಹಸುವು ಶ್ರೇಷ್ಠವಾದುದು ಎತ್ತುಗಳಲ್ಲಿ ಬಿಳಿಯದು ಉತ್ತಮವಾದುದು. ಬಿಳಿಯ ಎತ್ತನ್ನು ದಾನಮಾಡುವುದರಿಂದ ಶಾಶ್ವತ ವಾದ ಫಲವನ್ನು ಹೊಂದುತ್ತಾನೆ. ಹಾಲು, ಮೊಸರು ಮುಂತಾದವುಗಳಿಗೋಸ್ಕರ ವಿಷ್ಣುದೇವಾಲಯದಲ್ಲಿ ಮಧುಪರ್ಕಕ್ಕೋಸ್ಕರವೂ ಹಸುವನ್ನು ಧಾರೆಯೆರೆದರೆ ಅನಂತ ಫಲವನ್ನು ಹೊಂದುತ್ತಾನೆ. ಗೋದಾನದಲ್ಲಿಯೇ ಆಸಕ್ತರಾದ ಮನುಜ ಶ್ರೇಷ್ಠರು ಗೋಲೋಕವನ್ನು ಹೊಂದಿ ಅಪ್ಸರಸ್ತ್ರೀಯರೊಡನೆ ಕ್ರೀಡಿಸುತ್ತಾ ಉತ್ತಮ ವಿಮಾನವನ್ನು ಹೊಂದಿ ಸುಖಪಡುತ್ತಾರೆ.

ಅಪಾಮಧಸ್ತಾಲ್ಲೋಕೋ ಯೋ ತಸ್ಯೋಪರಿ ಮಹೀಧರಾಃ ।
ನಗಾನಾಮುಪರಿಷ್ಟಾದ್ಭೂಃ ಪೃಥಿವ್ಯುಪರಿ ಮಾನವಾಃ ॥ ೪೪ ॥

ಮನುಷ್ಯಲೋಕಾದೂರ್ಧ್ವಂತು ಖಗಾನಾಂ ಗತಿರುಚ್ಯತೇ ।
ಆಕಾಶಸ್ಯೋಪರಿರವಿಃ ದ್ವಾರಂ ಸ್ವರ್ಗಸ್ಯ ತತ್ ಸ್ಮೃತಂ ॥ ೪೫ ॥

ದೇವಲೋಕಃ ಪರಸ್ತಸ್ಮಾದ್ಬ್ರಹ್ಮಲೋಕಸ್ತತಃ ಪರಂ ।
ತತ್ರೋಪರಿ ಗವಾಂ ಲೋಕೋ ವಿಷ್ಣುಲೋಕಸ್ತತಃ ಪರಂ ॥ ೪೬ ॥

ಏಕಸ್ತ್ವಧೋ ದುಷ್ಕೃತಿನಾಂ ಕರ್ಮಿಣಾಂ ಪೃಥಿವೀ ಮತಾ ।
ಬ್ರಾಹ್ಮೇ ತಪಸಿಯುಕ್ತಾನಾಂ ಬ್ರಹ್ಮಲೋಕಸ್ಸನಾತನಃ ॥ ೪೭ ॥

ಗವಾಮೇವ ಹಿ ಗೋಲೋಕೋದುರಾರೋಹಾ ಹಿ ಸಾಗತಿಃ ।
ಏಕಾಂತಿನೋ ವಿಷ್ಣುಭಕ್ತಾ ವಿಷ್ಣುಲೋಕಂ ವ್ರಜಂತಿ ತೇ ॥ ೪೮ ॥

೪೪–೪೫ ನೀರಿನ ಕೆಳಗೆ ಯಾವ ಲೋಕವಿದೆಯೋ ಅದರ ಮೇಲೆ ಪರ್ವತಗಳು ಇವೆ. ಪರ್ವತಗಳ ಮೇಲೆ ಭೂಮಿಯೂ, ಅದರ ಮೇಲೆ ಮನುಷ್ಯರೂ ಇರುತ್ತಾರೆ. ಮನುಷ್ಯಲೋಕದ ಮೇಲೆ ಗಗನಚಾರಿಗಳ ಸಂಚಾರವಿದೆ. ಅದರ ಮೇಲೆ ಆಕಾಶವಲ್ಲಿ ಸೂರ್ಯನು ಇರುತ್ತಾನೆ. ಇವನು ಸ್ವರ್ಗದ ದ್ವಾರವೆಂದು ಹೇಳಲ್ಪಟ್ಟಿದೆ.

೪೬–೪೭ ಅದರ ಮೇಲೆ ದೇವಲೋಕವೂ, ಅದರ ಮೇಲೆ ಬ್ರಹ್ಮಲೋಕವೂ ಇದೆ. ಅದರ ಮೇಲೆ ಗೋಲೋಕವೆಂದೂ, ಅದರ ಮೇಲೆ ವಿಷ್ಣುಲೋಕವೆಂದೂ ಹೇಳಿದೆ. ದುಷ್ಕರ್ಮಿಗಳಿಗೆ ಅಧೋಲೋಕವೂ ಕರ್ಮಮಾಡಿದವರಿಗೆ ಭೂಮಿಯೂ ಆವಾಸಸ್ಥಾನವೆಂದು ಹೇಳಿದೆ. ಬ್ರಾಹ್ಮತಪಸ್ಸಿನಲ್ಲಿ ಆಸಕ್ತರಾದವರಿಗೆ ಪ್ರಾಚೀನವಾದ ಬ್ರಹ್ಮಲೋಕವೆಂದು ಹೇಳಿದೆ.

೪೮–೫೦. ಗೋವುಗಳ ಲೋಕವೇ ಗೋಲೋಕವು. ಇದನ್ನು ಹೊಂದುವುದು ಸುಲಭಸಾಧ್ಯವಲ್ಲ. ಯಾವಾಗಲೂ ಬಿಡದೆ ವಿಷ್ಣುವನ್ನು ಪೂಜಿಸುವವರು ವಿಷ್ಣುಲೋಕವನ್ನು ಪಡೆಯುತ್ತಾರೆ ಗೋದಾನಮಾಡಿದವರು ಸಕಲಾಭೀಷ್ಟವನ್ನು

ಗೋಪ್ರದಾನರತಾ ಯಾಂತಿ ಗೋಲೋಕಂ ಸರ್ವಕಾಮದಂ ।
ತತ್ರ ಕಾಮಫಲಾ ವೃಕ್ಷಾ ನದ್ಯಃ ಪಾಯಸಕರ್ದಮಾಃ ॥ ೪೯ ॥

ಸುವರ್ಣಸಿಕತಾಶ್ಚಾನ್ಯಾ ವಿಮಲಾನ್ಭೋಯುತಾಃ ಶುಭಾಃ ।
ಯಥಾಕಾಮೇಪ್ಸಿತಾಸ್ತತ್ರ ಭವಂತಿ ಶುಭಕರ್ಮಿಣಾಂ ॥ ೫೦ ॥

ದೇಶಾ ಮನೋಹರಾಃ ಶುಭ್ರಾ ದೇವಾರಾಮವಿಭೂಷಣಾಃ ।
ದಿವ್ಯೇನ ನೃತ್ತಗೀತೇನ ವಾದಿತ್ರೇಣ ಮನೋಹರಾಃ ॥ ೫೧ ॥

ತತ್ರೇಪ್ಸಿತಾನಾಂ ಕಾಮಾನಾಮಾಪ್ತಿರ್ಭವತಿ ನಿತ್ಯದಾ ।
ಹೇಮ ಶೃಂಗೀಂ ರೂಪ್ಯಖುರಾಂ ಮುಕ್ತಾಲಾಂಗೂಲಭೂಷಣಾಂ ॥ ೫೨ ॥

ಅಹತಾವಸ್ತ್ರಸಂವೀತಾಂ ತಥಾ ಕಾಂಸ್ಯೋಪದೋಹಿನೀಂ ।
ತ್ರಿರಾತ್ರಂ ಸ್ಥಂಡಿಲೇ ಸುಪ್ತ್ವಾ ತ್ರಿರಾತ್ರಂ ಗೋರಸಾಶನಃ ॥ ೫೩ ॥

ಕೊಡುವ ಗೋಲೋಕವನ್ನು ಹೊಂದುತ್ತಾರೆ. ಅಲ್ಲಿರುವ ಮರಗಳೆಲ್ಲವೂ ಬಯಸಿದ್ದನ್ನು ಕೊಡುತ್ತವೆ. ನದಿಗಳೆಲ್ಲವೂ ಪಾಯಸವೇ ಕೆಸರಾಗಿ ಉಳ್ಳವುಗಳಾಗಿವೆ. ಕೆಲವು ಚಿನ್ನದ ಮರಳುಗಳಿಂದ ಕೂಡಿ ನಿರ್ಮಲವಾದ ನೀರಿನಿಂದ ತುಂಬಿರುತ್ತವೆ. ಮಂಗಳಕಾರ್ಯಮಾಡಿದವರು ಅಲ್ಲಿ ಹೋಗಿ ಬಯಸಿದ್ದನ್ನು ಪಡೆಯುತ್ತಾರೆ.

೫೧. ಅಲ್ಲಿರುವ ಪ್ರದೇಶಗಳೆಲ್ಲವೂ ದೇವೋದ್ಯಾನಗಳಿಂದ ಅಲಂಕೃತವಾಗಿ ಮನೋಹರವಾಗಿವೆ. ಯಾವಾಗಲೂ ದಿವ್ಯವಾದ ನೃತ್ಯಗಾನ ಮುಂತಾದವುಗಳಿಂದ ಸುಂದರವಾಗಿವೆ. ಅಲ್ಲಿ ಬಯಸಿದ ಇಷ್ಟಾರ್ಥಗಳನ್ನು ನಿತ್ಯವೂ ಪಡೆದು ಸುಖವಾಗಿರುತ್ತಾನೆ.

೫೨-೫೫. ಚಿನ್ನದ ಕೊಂಬುಳ್ಳ, ಬೆಳ್ಳಿಯ ಗೊರಸುಳ್ಳ, ಮುತ್ತಿನಿಂದಲಂಕೃತವಾದ ಬಾಲವುಳ್ಳ, ನೂತನ ವಸ್ತ್ರದಿಂದ ಅಲಂಕೃತವಾದ ಹಸುವನ್ನು, ಕಂಚಿನ ಹಾಲು ಕರೆಯುವ ಪಾತ್ರೆಯೊಡನೆ, ನಿಯಮದಿಂದ ಮೂರುರಾತ್ರಿ ಶುಚಿಯಾಗಿದ್ದು ರಂಗವಲ್ಲಿ ಬರೆದ ನೆಲದಲ್ಲಿ ಮಲಗಿ, ಮೂರು ದಿನವೂ ಗೋರಸವನ್ನು ಸೇವಿಸಿದ್ದು ಬಟ್ಟೆಯನ್ನು ಹೊದಿಸಿ ಯಾರು ದಕ್ಷಿಣೆ ಸಹ ದಾನಮಾಡುತ್ತಾರೋ, ಆಮೇಲೆ

ತೃಪ್ತಾಂ ತು ತರ್ಪಿತೇ ದತ್ವಾ ವಾಸಸಾ ಸಂವೃತಾಂ ದ್ವಿಜಾಃ ।
ಸದಕ್ಷಿಣಾಂ ಮಹಾಭಾಗಾಸ್ತ್ರಿರಾತ್ರಂ ಗೋರಸೈಸ್ತತಃ || ೫೪ ||

ಪ್ರಾಣಸಂಧಾರಣಂ ಕೃತ್ವಾ ಗವಾಂ ಲೋಕೇ ಮಹೀಯತೇ ।
ಯಾವಂತಿ ಧೇನು ರೋಮಾಣಿ ತಾವದ್ವರ್ಷಾಣಿ ಮಾನವಃ || ೫೫ ||

ದತ್ತ್ವೈವಂ ಕಪಿಲಾಂ ವಿಪ್ರಾಃ ಪ್ರಾಪ್ನೋತ್ಯಭ್ಯಧಿಕಂ ಫಲಂ ।
ಸಾಯಂ ಪ್ರಾತರ್ಮನುಷ್ಯಾಣಾ ಮಶನಂ ದೇವನಿರ್ಮಿತಂ || ೫೬ ||

ತತ್ರೈಕಕಾಲಮಶ್ನನ್ಯೋ ದ್ವಿತೀಯಾದಶನಾನ್ನರಃ ।
ಯಥೋಕ್ತವಿಧಿನಾ ದದ್ಯಾತ್ ಕ್ರೀತ್ವಾ ತು ಕಪಿಲಾಂ ನರಃ || ೫೭ ||

ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ಗವಾಂ ಲೋಕಮವಾಪ್ನೋತಿ ಕುಲಮುದ್ಧರತೇ ಸ್ವಕಂ || ೫೮ ||

ಅವರು ಮೂರುದಿನ ಗೋರಸದಿಂದಲೇ ಪ್ರಾಣವನ್ನು ಧರಿಸಿದ್ದು ಪುಣ್ಯವನ್ನು ಗಳಿಸಿದವರಾಗಿ ಗೋಲೋಕದಲ್ಲಿ ಪೂಜಿಸಲ್ಪಡುತ್ತಾರೆ. ಅವರು ದಾನಮಾಡಿದ ಗೋವಿನ ಮೈಯಲ್ಲಿ ಎಷ್ಟು ಕೂದಲಿರುವುದೋ ಅಲ್ಲಿಯವರೆಗೂ ಗೋಲೋಕದಲ್ಲಿ ಸುಖವನ್ನನುಭವಿಸುತ್ತಾರೆ.

೫೬-೫೮. ಈ ರೀತಿಯಾಗಿ ಕಪಿಲಗೋವನ್ನು ದಾನಮಾಡುವುದರಿಂದ ಇದಕ್ಕಿಂತಲೂ ಹೆಚ್ಚಾದ ಫಲವನ್ನು ಪಡೆಯುತ್ತಾರೆ. ಮನುಷ್ಯರಿಗೆ ಪ್ರತಿ ಸಾಯಂಕಾಲ ಮತ್ತು ಬೆಳಿಗ್ಗೆ ಎರಡು ಹೊತ್ತುಗಳಲ್ಲಿ ಆಹಾರವು ದೇವರಿಂದ ನಿರ್ಮಿಸಲ್ಪಟ್ಟಿದೆ. ಒಂದು ಹೊತ್ತು ಗೋರಸವನ್ನೇ ಆಹಾರ ತೆಗೆದುಕೊಳ್ಳುವುದರಿಂದ ಎರಡನೆಯ ಊಟವಿಲ್ಲದೇ ಇದ್ದು ಹಿಂದೆ ಹೇಳಿದ ಕ್ರಮದಂತೆ ಒಂದು ಕಪಿಲ ಹಸುವನ್ನು ಕ್ರಯಕ್ಕೆ ತೆಗೆದುಕೊಂಡು ದಾನಮಾಡಿದ ಪುರುಷನು, ಸಕಲೇಷ್ಟಾರ್ಥವನ್ನು ಕೊಡುವ ಯಜ್ಞದ ಫಲವನ್ನು ಹೊಂದುತ್ತಾನೆ. ಆಮೇಲೆ ಗೋಲೋಕವನ್ನು ಪಡೆದು ತನ್ನ ವಂಶವನ್ನು ಉದ್ಧರಿಸುತ್ತಾನೆ.

ಅಲಂಕೃತಾಂ ತತೋ ದತ್ವಾ ಗೋದಾನಫಲಮಾಪ್ನುಯಾತ್ ।
ಅಜಾಮಲಂ ಕೃತಾಂ ದತ್ವಾ ವಹ್ನಿಲೋಕೇ ಮಹೀಯತೇ ॥ ೫೯ ॥

ತದೇವ ಲೋಕಮಾಪ್ನೋತಿ ದತ್ವಾಜಂ ವಿಧಿವನ್ನರಃ ।
ವಾರುಣಂ ಲೋಕಮಾಪ್ನೋತಿ ದತ್ವಾ ಚ ಮಹಿಷೀಂ ನರಃ ॥ ೬೦ ॥

ಮಹಿಷಸ್ಯ ಪ್ರದಾನೇನ ಯಾಮ್ಯೇ ಲೋಕೇ ಮಹೀಯತೇ ।
ವಾರುಣಂ ಲೋಕಮಾಪ್ನೋತಿ ದತ್ವೋರಭ್ರಂ ನರೋತ್ತಮಃ ॥ ೬೧ ॥

ಅವಿಪ್ರದಾತಾ ಶತಧಾ ತದೇವ ಫಲಮಶ್ನುತೇ ।
ಆರಣ್ಯಪಶುದಾನೇನ ವಾಯುಲೋಕೇ ಮಹೀಯತೇ ॥ ೬೨ ॥

ಏತದೇವಫಲಂ ಪ್ರೋಕ್ತಂ ಪ್ರದಾನೇನ ಚ ಪಕ್ಷಿಣಾಂ ।
ಶಸ್ತ್ರಪಿಂಡಕಜಾಲಾದಿರುದಕಾದಾನತಸ್ತಥಾ ॥ ೬೩ ॥

೫೯-೬೨. ಗೋವಿನಂತೆ ಅಲಂಕಾರಮಾಡಿ ದಾನಮಾಡಿದರೂ ಗೋದಾನ ಫಲವನ್ನು ಹೊಂದುತ್ತಾನೆ. ಹೆಣ್ಣು ಆಡನ್ನು ಅಲಂಕಾರಮಾಡಿ ದಾನಮಾಡುವುದರಿಂದ ಅಗ್ನಿಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಹಿಂದೇ ಹೇಳಿದ ಕ್ರಮದಂತೆ ಗಂಡು ಆಡನ್ನು ಅಲಂಕಾರಮಾಡಿ ದಾನಮಾಡಿದರೂ ಅಂತಹ ಅಗ್ನಿಲೋಕವನ್ನು ಹೊಂದುತ್ತಾನೆ. ಎಮ್ಮೆಯ ದಾನದಿಂದ ವರುಣಲೋಕವನ್ನು ಹೊಂದುತ್ತಾನೆ. ಕೋಣವನ್ನು ದಾನಮಾಡಿದವನು ಯಮಲೋಕವನ್ನು ಹೊಂದಿ ಮಾನ್ಯತೆ ಪಡೆಯುತ್ತಾನೆ. ಕುರಿಯನ್ನು ದಾನಮಾಡಿದವನು ವರುಣಲೋಕವನ್ನು ಪಡೆಯುತ್ತಾನೆ. ಅನೇಕ ಕುರಿಗಳನ್ನು ದಾನಮಾಡುವುದರಿಂದ ಹಿಂದೆ ಹೇಳಿದ ಫಲವನ್ನೇ ಹೊಂದುತ್ತಾರೆ. ಕಾಡುಮೃಗಗಳನ್ನು ದಾನಮಾಡಿದವನು ವಾಯುಲೋಕದಲ್ಲಿ ಪೂಜಿಸಲ್ಪಡುತ್ತಾನೆ.

೬೩-೬೫. ಪಕ್ಷಿಗಳ ದಾನದಿಂದ ಇದೇ ಫಲವು ಹೇಳಲ್ಪಟ್ಟಿದೆ. ಶಸ್ತ್ರಪಿಂಡಾದಿ ದಾನಗಳಿಂದಲೂ ಪೂರ್ವೋಕ್ತವಾದ ಫಲಗಳೇ ದೊರೆಯುವುವು. ಹಾಲು, ಮಜ್ಜಿಗೆ ಮುಂತಾದವುಗಳನ್ನು ದಾನಮಾಡುವುದರಿಂದ ನಿರತಿಶಯವಾದ ಸಂತೋಷವನ್ನು ಹೊಂದುತ್ತಾನೆ ಅದರಲ್ಲಿಯೂ ಆಶ್ವಯುಜಮಾಸದಲ್ಲಿ ಯಾವಾತನು ಬ್ರಾಹ್ಮಣರಿಗೆ

ಗೋರಸಾನಾಂ ಪ್ರದಾನೇನ ತೃಪ್ತಿಮಾಪ್ನೋತ್ಯನುತ್ತಮಾಂ ।
ತತ್ರವಾಶ್ವಯುಜೇಮಾಸಿ ಯಸ್ತುದದ್ಯಾದ್ದ್ವಿಜಾತಿಷು ॥ ೬೪ ॥

ಆರೋಗ್ಯಂ ಮಹದಾಪ್ನೋತಿ ಯತ್ರ ಯತ್ರಾಭಿಜಾಯತೇ ।
ತಥಾದಧ್ನಃಪ್ರದಾನೇನ ಮಂಗಲಾನ್ಯಾಪ್ನುತೇ ಸದಾ ॥ ೬೫ ॥

ಕ್ಷೀರದಸ್ತೃಪ್ತಿಮಾಪ್ನೋತಿ ಸರ್ವದುಃಖೈರ್ವಿಮುಚ್ಯತೇ ।
ಕ್ಷೀರೇಣ ಸ್ನಪನಂ ಕೃತ್ವಾ ಹರಸ್ಯ ಪ್ರಯತೋ ನರಃ ॥ ೬೬ ॥

ಮನೋಭಿತಾಪನಿರ್ಮುಕ್ತೋ ರುದ್ರಲೋಕೇ ಮಹೀಯತೇ ।
ಪರಮಾನ್ನಪ್ರದಾನೇನ ಕಾಮಾನಾಪ್ನೋತಿ ಶಾಶ್ವತಾನ್ ॥ ೬೭ ॥

ಮಾಸಿ ಮಾಸಿ ತು ರೇವತ್ಯಾಂ ಬ್ರಾಹ್ಮಣಾನ್ ಘೃತಪಾಯಸಂ ।
ಸದಕ್ಷಿಣಂ ಭೋಜಯಿತ್ವಾ ರೂಪಮಾಪ್ನೋತ್ಯನುತ್ತಮಂ ॥ ೬೮ ॥

ಆಜ್ಯಂ ತೇಜಃ ಸಮುದ್ದಿಷ್ಟಂ ಚಾಜ್ಯಂ ಪಾಪಹರಂ ಪರಂ ।
ಆಜ್ಯಂ ಸುರಾಣಾಮಾಹಾರಶ್ಚಾಜ್ಯೇ ಲೋಕಾಃ ಪ್ರತಿಷ್ಠಿತಾಃ ॥ ೬೯ ॥

ದಾನಮಾಡುತ್ತಾನೋ ಆತನು ಎಲ್ಲಿ ಹುಟ್ಟಿದರೂ ಅಧಿಕ ಆರೋಗ್ಯವನ್ನು ಹೊಂದುತ್ತಾನೆ. ಹಾಗೆಯೇ ಮೊಸರನ್ನು ದಾನಮಾಡುವುದರಿಂದ ಯಾವಾಗಲೂ ಮಂಗಳವನ್ನೇ ಹೊಂದುತ್ತಾನೆ.

೬೬-೬೮. ಹಾಲನ್ನು ದಾನಮಾಡಿದವನು ಎಲ್ಲಾ ದುಃಖಗಳನ್ನೂ ಕಳೆದು ಕೊಂಡು ತೃಪ್ತಿಯನ್ನು ಪಡೆಯುತ್ತಾನೆ ಮನುಷ್ಯನು ಶುಚಿಯಾಗಿ ಹಾಲಿನಿಂದ ಈಶ್ವರನಿಗೆ ಅಭಿಷೇಕಮಾಡಿಸಿದರೆ ಮನಃಕ್ಲೇಶದಿಂದ ಪಾರಾಗಿ ರುದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಪಾಯಸದಾನದಿಂದ ಮನೋಬಯಕೆಗಳನ್ನು ಶಾಶ್ವತವಾಗಿ ಹೊಂದುತ್ತಾನೆ. ಪ್ರತಿತಿಂಗಳಲ್ಲಿಯೂ ರೇವತೀ ನಕ್ಷತ್ರಬಂದ ದಿನದಲ್ಲಿ ಬ್ರಾಹ್ಮಣರಿಗೆ ತುಪ್ಪ ಪಾಯಸ ಮುಂತಾದವುಗಳಿಂದ ಊಟಮಾಡಿಸಿ ದಕ್ಷಿಣೆಯಿಂದ ತೃಪ್ತಿಪಡಿಸಿ ದವನು ಅಸಮಾನವಾದ ರೂಪವನ್ನು ಪಡೆಯುತ್ತಾನೆ.

೬೯-೭೦. ತುಪ್ಪವು ತೇಜಸ್ಸೆಂದು ಹೇಳಲ್ಪಟ್ಟಿದೆ. ತುಪ್ಪವು ಸಕಲಪಾಪ ವನ್ನೂ ಹೋಗಲಾಡಿಸುತ್ತದೆ. ದೇವತೆಗಳಿಗೆ ತುಪ್ಪವೇ ಆಹಾರವು. ತುಪ್ಪದಲ್ಲಿಯೇ

ಆಜ್ಯೇನ ಲಿಂಗಸ್ನಪನಂ ನರಃ ಕೃತ್ವಾ ತು ಶೂಲಿನಃ ।
ಸರ್ವದುಃಖವಿನಿರ್ಮುಕ್ತೋ ರುದ್ರಲೋಕೇ ಮಹೀಯತೇ ॥ ೭೦ ॥

ಅಲಕ್ಷ್ಮೀ ಶಮನಂ ಪ್ರೋಕ್ತಂ ಘೃತಸ್ನಾನಂ ತಥಾ ದ್ವಿಜಾಃ ।
ಕಲ್ಯಮುತ್ಥಾಯ ಯೋ ಗವ್ಯಘೃತೇ ಮುಖಮಥಾತ್ಮನಃ ॥ ೭೧ ॥

ಪಶ್ಯತೇ ಸ ಜಹಾತ್ಯೇವ ಕೃತ್ವಾ ಪಾಪಮಹರ್ನಿಶಂ ।
ಅಲಕ್ಷ್ಮೀರ್ನಶ್ಯತೇ ಚಾಸ್ಯ ಕ್ಷಿಪ್ರಮೇಷಾ ಕರೀಷಿಣೀ ॥ ೭೨ ॥

ಘೃತದಾನಾನ್ನರೋ ಯಾತಿ ಸ್ವರ್ಗಲೋಕಮಸಂಶಯಂ ।
ಮಾಸೇ ಚಾಶ್ವಯುಜೇ ನಿತ್ಯಂ ಘೃತಂ ಯಸ್ತು ಪ್ರಯಚ್ಛತಿ ॥ ೭೩ ॥

ಕಲ್ಯಮುತ್ಥಾಯ ವಿಪ್ರೇಭ್ಯಃ ಪ್ರೀಣಯೇಚ್ಚ ತಥಾಶ್ವಿನೌ ।
ಸ ರೂಪಂ ಮಹದಾಪ್ನೋತಿ ತಥಾ ರೋಗೈಶ್ಚ ಮುಚ್ಯತೇ ।
ಏವಂ ಮಹಾಫಲಂ ದಾನಂ ಗೋರಸಾನಾಂ ತಥಾ ಗವಾಂ ॥ ೭೪ ॥

ಸಕಲಲೋಕವೂ ಆಶ್ರಯಿಸಿರುತ್ತದೆ. ತುಪ್ಪದಿಂದ ಶಿವಲಿಂಗವನ್ನು ಅಭಿಷೇಕಮಾಡಿದವನು ಎಲ್ಲಾ ದುಃಖಗಳಿಂದ ಮುಕ್ತನಾಗಿ ರುದ್ರಲೋಕದಲ್ಲಿ ಮಾನ್ಯತೆ ಪಡೆಯುತ್ತಾನೆ.

೭೧–೭೩. ಎಲೈ ಬ್ರಾಹ್ಮಣರೇ, ತುಪ್ಪದ ಸ್ನಾನವು ದುರದೃಷ್ಟವನ್ನು ಹೋಗಲಾಡಿಸುತ್ತದೆ. ಬೆಳಿಗ್ಗೆ ಎದ್ದು ಯಾವನು ಹಸುವಿನ ತುಪ್ಪದಲ್ಲಿ ತನ್ನ ಮುಖವನ್ನು ನೋಡುತ್ತಾನೋ ಅವನು ಹಗಲೂ ರಾತ್ರಿ ಮಾಡಿರುವ ಪಾಪವನ್ನು ಕಳೆದುಕೊಳ್ಳುತ್ತಾನೆ. ಅವನ ದೌರ್ಭಾಗ್ಯವು ನಾಶವಾಗುತ್ತದೆ. ತುಪ್ಪವು ಬೇಗನೆ ಗುಣವನ್ನು ಕೊಡುವ ಸ್ವಭಾವವುಳ್ಳದ್ದು. ತುಪ್ಪದ ದಾನದಿಂದ ಮನುಷ್ಯನು ನಿಃ[ಸಂಶಯ]ವಾಗಿಯೂ ಸ್ವರ್ಗಲೋಕವನ್ನು ಹೊಂದುತ್ತಾನೆ. ಆಶ್ವಯುಜಮಾಸದಲ್ಲಿ ಯಾವನು ನಿತ್ಯವೂ ತುಪ್ಪದ ದಾನವನ್ನು ಮಾಡುತ್ತಾನೋ ಆತನೂ ಸ್ವರ್ಗಸುಖವನ್ನು ಹೊಂದುತ್ತಾನೆ.

೭೪–೭೫. ಹಾಗೆಯೇ ಪ್ರಾತಃಕಾಲದಲ್ಲಿ ಎದ್ದು ಬ್ರಾಹ್ಮಣನನ್ನು ಯಾವಾತನು ಸಂತೋಷಪಡಿಸುತ್ತಾನೋ ಮತ್ತು ಅಶ್ವಿನೀದೇವತೆಗಳನ್ನೂ ಪ್ರೀತಿಗೊಳಿಸುವನೋ ಆತನು ಅದ್ಭುತರೂಪವನ್ನು ಹೊಂದಿ ಸಕಲರೋಗಗಳಿಂದಲೂ ಬಿಡುಗಡ

ಪ್ರಯಚ್ಛತೇ ಯಃ ಕಪಿಲಾಂ ಸಚೈಲಾಂ
ಕಾಂಸ್ಯೋಪದೋಹಾಂ ಕನಕಾಗ್ರಶೃಂಗೀಂ ।
ತೈಸ್ತೈರ್ಗುಣೈಃ ಕಾಮದುಘಾ ಚ ಭೂತ್ವಾ
ನರಂ ಪ್ರದಾತಾರಮುಪೈತಿ ಸಾ ಗೌಃ ॥ ೭೫ ॥

ಯಾವನ್ತಿ ರೋಮಾಣಿ ಭವನ್ತಿ ಧೇನ್ವಾ
ಸ್ತಾವತ್ಫಲಂ ಪ್ರಾಪ್ನುತೇ ಗೋಪ್ರದಾತಾ ।
ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ
ಸರ್ವಮಾಸಪ್ತಮಂ ತಾರಯತೇ ಪರತ್ರ ॥ ೭೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಗೋದಾನಫಲ
ನಿರೂಪಣೋ ನಾಮ ಷಡಧಿಕತ್ರಿಶತತಮೋಽಧ್ಯಾಯಃ

ಹೊಂದುತ್ತಾನೆ. ಈ ರೀತಿಯಾಗಿ ಗೋವು ಮತ್ತು ಗೋರಸಗಳ ದಾನಗಳಿಗೆ ಮಹಾಫಲಗಳು ಹೇಳಲ್ಪಟ್ಟಿವೆ. ಕಪಿಲಾಗೋವನ್ನು ಅಲಂಕರಿಸಿ ಬಟ್ಟೆಹೊದಿಸಿ ಕೊಂಬುಗಳಿಗೆ ಚಿನ್ನದಿಂದ ಅಲಂಕರಿಸಿ ಹಾಲುಕರೆಯುವ ಪಾತ್ರೆಯೊಡನೆ ದಾನ ಮಾಡಿದವರಿಗೆ ಆ ಹಸುವು ಅವನು ಬಯಸಿದವುಗಳನ್ನು ಕೊಡುವುದಲ್ಲದೆ ಅಧಿಕ ಪುಣ್ಯವನ್ನು ಗಳಿಸಿಕೊಡುತ್ತದೆ.

೭೬. ದಾನಮಾಡಿರುವ ಹಸುವಿಗೆ ಎಷ್ಟು ರೋಮಗಳಿವೆಯೋ ಅಷ್ಟು ಫಲಗಳನ್ನು ಗೋದಾನ ಮಾಡಿದವನು ಪಡೆಯುತ್ತಾನೆ. ಮಗ, ಮೊಮ್ಮಗ, ಮುಂತಾದ ಏಳು ತಲೆಯವರೆಗೂ ಹಿಂದಿನ ತನ್ನ ಕುಲದ ಏಳು ತಲೆಯ ಪಿತೃಗಳನ್ನೂ ಪರಲೋಕದಲ್ಲಿ ಉದ್ಧರಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಗೋದಾನಫಲ
ನಿರೂಪಣವೆಂಬ ಮುನ್ನೂರ ಆರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತಾಧಿಕತ್ರಿಶತತಮೋಧ್ಯಾಯಃ ॥

॥ ಹಂಸ ಉವಾಚ ॥

ಘೃತಧೇನುಪ್ರದಾನಂ ಚ ನಿಬೋಧತ ದ್ವಿಜೋತ್ತಮಾಃ ।
ಗವ್ಯಸ್ಯ ಸರ್ಪಿಷಃ ಕುಂಭಂ ಪೂರ್ಣಂ ತು ಪರಿಕಲ್ಪಯೇತ್ ॥ ೧ ॥

ಕಲಶಂ ಚ ತಥಾ ಪೂರ್ಣಂ ತಸ್ಯ ವತ್ಸಂ ಪ್ರಕಲ್ಪಯೇತ್ ।
ಕಾಂಸ್ಯಾಪಿಧಾನಸಂಛನ್ನಸಿತವಸ್ತ್ರಯುತಂ ತಥಾ ॥ ೨ ॥

ಹಿರಣ್ಯಗರ್ಭೌ ಕರ್ತವ್ಯಾವನುಲಿಪ್ತೌ ಚ ಬಾಹ್ಯತಃ ।
ಇಕ್ಷುಯಷ್ಟಿಮಯಾನ್ಪಾದಾನ್ ಖುರಾನ್ರೌಪ್ಯಮಯಾಂಸ್ತಥಾ ॥ ೩ ॥

ಮುನ್ನೂರ ಏಳನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಎಲೈ ಬ್ರಾಹ್ಮಣಶ್ರೇಷ್ಠರೇ, ಹಸುವಿನ ತುಪ್ಪದಿಂದ ಮಾಡಬಹುದಾದ ಘೃತಧೇನುವಿನ ದಾನಕ್ರಮವನ್ನು ತಿಳಿಯಿರಿ. ಹಸುವಿನ ತುಪ್ಪದಿಂದ ಒಂದು ಕೊಡವನ್ನು ತುಂಬಿ ಹಾಗೆಯೇ ಇನ್ನೊಂದು ಚಿಕ್ಕ ಕಲಶವನ್ನೂ ತುಂಬಿ ಅದರ ಕರುವೆಂದು ಮಾಡಬೇಕು. ಕಂಚಿನ ಮುಚ್ಚಳವನ್ನು ಅದಕ್ಕೆ ಮಾಡಿಸಿ ಬಿಳಿಯ ವಸ್ತ್ರಗಳಿಂದ ಮುಚ್ಚಬೇಕು. ಅವುಗಳ ಹೊರಗೆ ಚಿನ್ನದ ಅನುಲೇಪವನ್ನು ಮಾಡಬೇಕು. ಕಬ್ಬಿನ ಕೋಲುಗಳಿಂದ ಗೋವಿನಕಾಲನ್ನೂ, ಬೆಳ್ಳಿಯಿಂದ ಅದರ ಗೊರಸುಗಳನ್ನೂ ಮಾಡಬೇಕು. ಚಿನ್ನದಿಂದ ಅದರ ಕಣ್ಣು

ಸೌವರ್ಣೇಚಾಕ್ಷಿಣೀ ಕಾರ್ಯೇ ಶೃಙ್ಗೇಚಾಗುರುಕಾಷ್ಠಜೇ ।
ಸಪ್ತಧಾನ್ಯೈಶ್ಚ ಕರ್ತವ್ಯೇ ತಸ್ಯ ಪಾರ್ಶ್ವೇ ಪೃಥಕ್ ಕೃತೇ ॥ ೪ ॥

ತಸ್ಯಪಟ್ಟಂ ಚ ಕರ್ತವ್ಯಂ ಕಂಬಲಂ ಚ ದ್ವಿಜೋತ್ತಮಾಃ ।
ಕುರ್ಯಾತ್ತುರುಷ್ಕರಂ ದೂರೆ ಪ್ರಾಣೇ ಹೇಮಮಯಾಂಸ್ತನಾನ್ ॥ ೫ ॥

ತದ್ವಚ್ಛರ್ಕರಯಾ ಜಿಹ್ವಾಂ ಗುಡಕ್ಷೀರಮಯಂ ಮುಖಂ ।
ಕ್ಷೌಮಸೂತ್ರೇಣ ಲಾಂಗೂಲಂ ರೋಮಾಣಿ ಸಿತಸರ್ಷಪೈಃ ॥ ೬ ॥

ತಾಮ್ರಪತ್ರಮಯಂ ಪೃಷ್ಠಂ ಕುರ್ಯಾಚ್ಛ್ರದ್ಧಾಸಮನ್ವಿತಃ ।
ಏತದ್ವಿರಚನಂ ಕೃತ್ವಾ ಘೃತಕ್ಷೀರಾಭಿಷೇಚನೈಃ ॥ ೭ ॥

ಹರಿರ್ಘೃತಾರ್ಚಿಷೇತ್ಯೇವಂ ನಾಮ್ನಾಸಂಪೂಜಯೇ ದ್ವಿಭುಂ ।
ತತಸ್ತು ಗಂಧಪುಷ್ಪಾನ್ನ ಧೂಪವಸ್ತ್ರಾದಿಭಿರ್ನರಃ ॥ ೮ ॥

ಘೃತೇನ ದೀಪಂ ದದ್ಯಾಚ್ಚ ತಥೈವ ಚ ಘೃತಂ ದಿಶಃ ।
ಹೋಮಂ ವಿಪ್ರಾಯದಾ ಧೇನುಂ ದದ್ಯಾದ್ವಿಪ್ರಾಯ ಶಕ್ತಿತಃ ॥ ೯ ॥

ಗಳನ್ನೂ ಅಗುರುಗಂಧದಿಂದ ಕೊಂಬುಗಳನ್ನೂ ಮಾಡಬೇಕು. ಅದರ ಸಮೀಪದಲ್ಲಿ ಬೇರೆಯಾಗಿ ಏಳು ಧಾನ್ಯರಾಶಿಗಳನ್ನೂ ಮಾಡಬೇಕು.

೫–೯. ಬ್ರಾಹ್ಮಣೋತ್ತಮರೇ, ಆ ಗೋವಿಗೆ ಒಂದು ಪಟ್ಟೆಯನ್ನೂ, ಕಂಬಳಿಯನ್ನೂ ಹೊದೆಯುವುದಕ್ಕೆ ಇಡಬೇಕು ಪ್ರಾಣಸಮವಾದ ಹಾಲುಮಡ್ಡಿಯನ್ನು ದೂರದಲ್ಲಿಟ್ಟು ಚಿನ್ನದ ಮಾಲೆಗಳನ್ನೂ ಮಾಡಬೇಕು. ಹಾಗೆಯೇ ಸಕ್ಕರೆಯಿಂದ ಗೋವಿನ ನಾಲಗೆಯನ್ನೂ ಹಾಲು ಬೆಲ್ಲದಿಂದ ಅದರ ಮುಖವನ್ನೂ ಪಟ್ಟೆಯ ದಾರಗಳಿಂದ ಬಾಲವನ್ನೂ, ಬಿಳೀ ಸಾಸುವೆಗಳಿಂದ ಕೂದಲುಗಳನ್ನೂ, ತಾಮ್ರದ ತಗಡಿನಿಂದ ಅದರ ಬೆನ್ನನ್ನೂ ಶ್ರದ್ಧೆಯಿಂದ ಮಾಡಬೇಕು. ಈ ರೀತಿ ನಿರ್ಮಾಣ ಮಾಡಿ ಅವುಗಳನ್ನು ಹಾಲು ತುಪ್ಪಗಳಿಂದ ಅಭಿಷೇಕಮಾಡಿ ಹರಿರ್ಘೃತಾರ್ಚಿಷಾ ಎಂಬ ಮಂತ್ರದಿಂದಲೂ, ನಾಮಗಳಿಂದಲೂ ವಿಷ್ಣುವನ್ನು ಪೂಜಿಸಬೇಕು ಆಮೇಲೆ ಗಂಧ, ಹೂ, ಅನ್ನ, ಧೂಪವಸ್ತ್ರಾದಿಗಳಿಂದ ಪೂಜಿಸಿ ತುಪ್ಪದ ದೀಪವನ್ನು ಹಚ್ಚಿ ಎಲ್ಲೆಡೆಯಲ್ಲೂ ಇಡಬೇಕು. ಹೋಮಮಾಡಿ ಶಕ್ತ್ಯನುಸಾರ ಆ ಗೋವನ್ನು ಬ್ರಾಹ್ಮಣನಿಗೆ ದಾನಮಾಡಬೇಕು. ಆ ಬ್ರಾಹ್ಮಣನನ್ನೂ ಸಹ ಘೃತಾರ್ಚಿಸ್ಸೆಂಬ ದೇವತೆಯನ್ನಾಗಿ ಭಾವಿಸಬೇಕು.

ಘೃತಾಚೀ ಪ್ರೀಯತೇ ವಿಪ್ರಂ ಕಲ್ಪಯಿತ್ವಾ ಘೃತಾರ್ಚಿಷಂ ।
ಏಕರಾತ್ರಂ ಚ ತಾಂ ದತ್ವಾ ಘೃತಾಹಾರೀ ಭವೇನ್ನರಃ　　॥ ೧೦ ॥

ವಿಮುಕ್ತಃ ಸರ್ವಪಾಪೇಭ್ಯೋ ಲೋಕಮಾಪ್ನೋತಿ ಶಾಶ್ವತಂ ।
ಅನೇನ ವಿಧಿನಾ ಸ್ನಾತ್ವಾ ಸೋಪವಾಸೋ ನರಃ ಶುಚಿಃ　　॥ ೧೧ ॥

ಸರ್ವಕಾಮ ಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ವಿಮಾನೇನಾರ್ಕವರ್ಣೇನ ಗವಾಂ ಲೋಕೆ ಮಹೀಯತೇ　　॥ ೧೨ ॥

ಘೃತಕ್ಷೀರವಹಾನದ್ಯೋ ಯತ್ರ ಪಾಯಸಕರ್ದಮಾಃ ।
ಯತ್ರ ಕಾಮಫಲಾ ವೃಕ್ಷಾ ಯತ್ರ ಸಿದ್ಧಿಸ್ತು ಮಾನಸೀ　　॥ ೧೩ ॥

ಗಂಧರ್ವಾಪ್ಸರಸಾಂ ಯತ್ರ ಸತತಂ ಗೀತನರ್ತನಂ ।
ತತ್ರಾಸ್ತೇ ರುಚಿರಂ ಲೋಕೆ ಯಾವದಿಂದ್ರಾಶ್ಚತುರ್ದಶ　　॥ ೧೪ ॥

೧೦-೧೨. ಇದರಿಂದ ಘೃತಾಚೀ ದೇವತೆಯು ಪ್ರೀತಳಾಗುತ್ತಾಳೆ. ಹೀಗೆ ತುಪ್ಪದ ದಾನವನ್ನು ಮಾಡಿ ತುಪ್ಪದ ಆಹಾರದಲ್ಲಿಯೇ ಒಂದು ರಾತ್ರಿ ಇರಬೇಕು. ಆಗ ಅವನು ಎಲ್ಲಾ ಪಾಪದಿಂದ ಬಿಡುಗಡೆ ಹೊಂದಿ ಶಾಶ್ವತವಾದ ಪುಣ್ಯಲೋಕವನ್ನು ಹೊಂದುತ್ತಾನೆ. ಈ ಕ್ರಮದಿಂದ ದಾನಮಾಡಿ ಶುಚಿಯಾಗಿದ್ದು ಅವಭೃಥಸ್ನಾನಮಾಡಿದ ಉಪವಾಸಿಯಾಗಿದ್ದ ಮಾನವನು ಸಕಲ ಕಾಮನೆಯನ್ನು ಕೊಡುವ ಯಜ್ಞದ ಫಲವನ್ನು ಹೊಂದುತ್ತಾನೆ. ಬಿಳಿಯ ವಿಮಾನದಿಂದ ಗೋಲೋಕವನ್ನು ಪಡೆದು ಅಲ್ಲಿ ಶ್ರೇಷ್ಠತೆಯನ್ನು ಹೊಂದುತ್ತಾನೆ.

೧೩-೧೪. ಆ ಗೋಲೋಕದಲ್ಲಿ ನದಿಗಳು ಹಾಲು ಮತ್ತು ತುಪ್ಪದವುಗಳಾಗಿಯೂ, ಪಾಯಸವೇ ಕೆಸರಾಗಿಯೂ ಆಗಿರುತ್ತವೆ ಮರಗಳು ಸಕಲ ಬಯಕೆಗಳನ್ನು ಕೊಡುತ್ತವೆ. ಅಲ್ಲಿ ತಕ್ಷಣವೇ ಫಲಸಿದ್ಧಿಯಾಗುತ್ತದೆ. ಅಲ್ಲಿ ಯಾವಾಗಲೂ ಗಂಧರ್ವರೂ, ಅಪ್ಸರಸ್ತ್ರೀಯರೂ ಗಾನನರ್ತನಮಾಡುತ್ತಿರುತ್ತಾರೆ. ಆ ಗೋಲೋಕದಲ್ಲಿ ಹದಿನಾಲ್ಕು ಇಂದ್ರರು ಇರುವವರೆಗೂ ಬಹುಕಾಲ ವಾಸಿಸಿ ಆಮೇಲೆ ಮನುಷ್ಯಲೋಕವನ್ನು ಹೊಂದಿ ರೋಗವಿಲ್ಲದವನಾಗಿ ಒಳ್ಳೆಯ ನಡತೆ,

ಮಾನುಷ್ಯ ಮಾಸಾದ್ಯ ಭವತ್ಯರೋಗಃ
ಶೀಲೇನ ರೂಪೇಣ ಧನೇನ ಯುಕ್ತಃ ।
ಮನೋಭಿರಾಮಃ ಪ್ರಮದಾಪ್ರಿಯಶ್ಚ
ಧನಾನ್ವಿತಃ ಸರ್ವಸುಖೋಪಪನ್ನಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಘೃತಧೇನುಕಲ್ಪ
ವರ್ಣನೋ ನಾಮ ಸಪ್ತಾಧಿಕ ತ್ರಿಶತತಮೋಽಧ್ಯಾಯಃ

ಸೌಂದರ್ಯ, ಧನ ಇವುಗಳಿಂದ ಕೂಡಿದವನಾಗಿಯೂ ಎಲ್ಲರಿಗೂ ಬೇಕಾದವನಾಗಿ ಸ್ತ್ರೀಯರಿಂದ ಬಯಸಲ್ಪಡುತ್ತಾ ಐಶ್ವರ್ಯವಂತನಾಗಿ ಸಕಲ ಸುಖವನ್ನೂ ಅನುಭವಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಘೃತಧೇನುಕಲ್ಪವರ್ಣನವೆಂಬ ಮುನ್ನೂರ ಏಳನೆಯ
ಅಧ್ಯಾಯ ಮುಗಿದುದು.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟೋತ್ತರ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ತಿಲಧೇನುಂ ಪ್ರವಕ್ಷ್ಯಾಮಿ ಸರ್ವಪಾಪ ಭಯಾಪಹಾಂ ।
ಧೇನ್ವಾಕಾರಾಂ ತು ತಾಂ ಕುರ್ಯಾದಾವಿಕೇ ಕಂಬಲೇ ಬುಧಃ ॥ ೧ ॥

ತಿಲಷೋಡಶಭಿಃ ಪ್ರಸ್ಥೈ ಶ್ಚತುರ್ಭಿರ್ವತ್ಸಮೇವ ತು ।
ತಿಲಪ್ರಸಾರಣಂ ಕುರ್ಯಾದ್ಧೇನ್ವಾ ಧೇನುಪ್ರಮಾಣತಃ ॥ ೨ ॥

ತತಸ್ತು ರಚಯೇದ್ಧೇನುಂ ರತ್ನೈರ್ವಕ್ಷ್ಯಾಮ್ಯಹಂ ದ್ವಿಜಾಃ ।
ಹೇಮಶೃಙ್ಗೀಂ ರೂಪ್ಯಖುರಾಂ ಗಂಧಘ್ರಾಣವತೀಂ ಶುಭಾಂ ॥ ೩ ॥

ಮುನ್ನೂರ ಎಂಟನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ಸಕಲ ಪಾಪಗಳನ್ನು ಹೋಗಲಾಡಿಸುವ ಎಳ್ಳಿನ ಗೋವಿನ ದಾನಪ್ರಕಾರವನ್ನು ಹೇಳುತ್ತೇನೆ ಜ್ಞಾನಿಯಾದವನು ಕುರಿ ರೋಮದ ಕಂಬಳಿಯ ಮೇಲೆ ಗೋವಿನ ಆಕಾರವನ್ನು ಮಾಡಬೇಕು. ಹದಿನಾರು ಸೇರು ಎಳ್ಳನ್ನು ಗೋವಿಗೂ, ನಾಲ್ಕು ಸೇರನ್ನು ಕರುವಿಗೂ ಇಟ್ಟು ಗೋವಿನ ಆಕಾರದಂತೆ ಹರಡಬೇಕು. ಬ್ರಾಹ್ಮಣರೇ ಆಮೇಲೆ ರತ್ನಗಳಿಂದ ಹಸುವನ್ನು ರಚಿಸುವ ವಿಧಾನವನ್ನು ಹೇಳುತ್ತೇನೆ. ಚಿನ್ನದ ಕೊಂಬನ್ನೂ, ಬೆಳ್ಳಿಯ ಗೊರಸುಗಳನ್ನೂ, ಮಂಗಳಕರವಾದ ಗಂಧದ ಮೂಗನ್ನೂ, ಒಳ್ಳೆಯ ಅನ್ನದಿಂದ ನಾಲಿಗೆಯನ್ನೂ, ಬೆಲ್ಲದಿಂದ ಮುಖವನ್ನೂ, ದಾರದಿಂದ ಕಂಬಳಿಯನ್ನೂ ಮಾಡಬೇಕು.

ಮಿಷ್ಟಾನ್ನಜಿಹ್ವಾಂ ಕುರ್ವೀತ ಗುಡಾಸ್ಯಾಂ ಸೂತ್ರಕಂಬಲಾಂ ।
ಇಕ್ಷುಪಾದಾಂ ತಾಮ್ರಪೃಷ್ಠಾಂ ಕುರ್ಯಾನ್ಮುಕ್ತಾಫಲೇಕ್ಷಣಾಂ ॥ ೪ ॥

ಪ್ರಶಸ್ತಪತ್ರಶ್ರವಣಾಂ ಫಲದನ್ತವತೀಂ ಶುಭಾಂ ।
ಸ್ರಗ್ದಾಮಪುಷ್ಪಾಂ ಕುರ್ವೀತ ನವನೀತಸ್ತನಾನ್ವಿತಾಂ ॥ ೫ ॥

ಫಲೈರ್ಮನೋಹರೈರ್ಭಕ್ಷ್ಯೈರ್ಮಣಿಮುಕ್ತಾಫಲಾನ್ವಿತಾಂ ।
ಶುಭ್ರವಸ್ತ್ರಯುಗಚ್ಛನ್ನಾಂ ಚಾರುಛತ್ರಸಮನ್ವಿತಾಂ ॥ ೬ ॥

ಕಾಂಸ್ಯೋಪದೋಹನಾಂ ಕೃತ್ವಾ ವಾಸುದೇವಂತು ಪೂಜಯೇತ್ ।
ಗಂಧಮಾಲ್ಯನಮಸ್ಕಾರ ಧೂಪದೀಪಾನ್ನಸಂಪದಾ ॥ ೭ ॥

ಜುಹುಯಾಚ್ಚ ತಿಲಾನೇವ ನಾಮ್ನಾತಸ್ಯೈವ ಮಾನವಃ ।
ತಮೇವ ಪ್ರೀಣಯೇದ್ದದ್ಯಾದ್ಧೇನುಂ ತಾ ಮಾಹಿತಾಗ್ನಯೇ ॥ ೮ ॥

ತ್ರಿರಾತ್ರಂ ಯಸ್ತಿಲಾಹಾರಸ್ತಿಲಧೇನುಂ ಪ್ರಯಚ್ಛತಿ ।
ದತ್ವೈಕರಾತ್ರಂ ಚ ಪುನಸ್ತಿಲಾನತ್ತಿ ದ್ವಿಜೋತ್ತಮಾಃ ॥ ೯ ॥

ಮತ್ತು ಕಬ್ಬಿನಿಂದ ಪಾದವನ್ನೂ, ತಾಮ್ರದಿಂದ ಬೆನ್ನನ್ನೂ ಮುತ್ತಿನಿಂದ ಕಣ್ಣುಗಳನ್ನೂ ಮಾಡಬೇಕು.

೫-೮. ಸಂಸ್ಕೃತವಾದ ಎಲೆಯಿಂದ ಕಿವಿಯನ್ನೂ, ಚೆನ್ನಾಗಿರುವ ಹಣ್ಣುಗಳಿಂದ ಹಲ್ಲುಗಳನ್ನೂ ಮಾಡಿ ಹೂಮಾಲೆಯನ್ನು ಹಾಕಬೇಕು. ಬೆಣ್ಣೆಯಿಂದ ಅದರ ಮೊಲೆಗಳನ್ನೂ ಮಾಡಬೇಕು. ಮನೋಹರಗಳಾದ ಹಣ್ಣುಗಳನ್ನೂ, ಭಕ್ಷ್ಯವಸ್ತುಗಳನ್ನೂ, ರತ್ನ, ಮುತ್ತುಗಳನ್ನೂ ಇಡಬೇಕು. ಮಂಗಳಕರವಾದ ಒಂದು ಜೊತೆ ವಸ್ತ್ರವನ್ನು ಹೊದಿಸಬೇಕು. ಅದರೊಡನೆ ಒಂದು ಒಳ್ಳೆಯ ಕೊಡೆಯನ್ನೂ ಇಡಬೇಕು. ಕಂಚಿನ ಪಾತ್ರೆಯನ್ನು ಕರೆಯುವುದಕ್ಕೆ ಇಟ್ಟು ವಾಸುದೇವನನ್ನು ಪೂಜಿಸಬೇಕು. ಗಂಧ, ಹೂಮಾಲೆ, ನಮಸ್ಕಾರ, ಧೂಪ, ದೀಪ, ಅನ್ನ ಮುಂತಾದ ವಸ್ತುಸಮೃದ್ಧಿಯಿಂದ ಪೂಜಿಸಿ ತಿಲಗಳನ್ನೇ ವಾಸುದೇವನಾಮದಿಂದ ಹೋಮಮಾಡಬೇಕು. ಈ ರೀತಿ ವಾಸುದೇವನನ್ನು ತೃಪ್ತಿಪಡಿಸಿ ಅಗ್ನಿಹೋತ್ರಿಯಾದ ಬ್ರಾಹ್ಮಣನಿಗೆ ಆ ಹಸುವನ್ನು ದಾನಮಾಡಬೇಕು.

ಚಾಂದ್ರಾಯಣಾದಭ್ಯಧಿಕಂ ಶಸ್ತಂ ತತ್ತಿಲಭಕ್ಷಣಂ ।
ಸರ್ವಪಾಪವಿನಿರ್ಮುಕ್ತಃ ಪಿತರಂ ಸಪಿತಾಮಹಂ ॥ ೧೦ ॥

ತಸ್ಯಾಪಿ ಪಿತರಂ ಚೈವ ತಾರಯೇದುಷ್ಕೃತಾನ್ನರಃ ।
ಆತ್ಮಾನಂ ಪುತ್ರಪೌತ್ರಾಂಶ್ಚ ಪ್ರಪೌತ್ರಮಪಿ ತಾರಯೇತ್ ॥ ೧೧ ॥

ಸುಹೃದಂ ವಾಪ್ಯಥೋದ್ದಿಶ್ಯ ತಿಲಧೇನುಪ್ರದೋ ನರಃ ।
ತಾರಯೇದ್ದುಷ್ಕೃತಾತ್ತಂ ಚ ಯಮುದ್ದಿಶ್ಯ ಪ್ರಯಚ್ಛತಿ ॥ ೧೨ ॥

ಯಶ್ಚ ಗೃಹ್ಣಾತಿ ವಿಧಿವದ್ದೀಯಮಾನಾಂ ಚ ಪಶ್ಯತಿ ।
ಸೋಽಪಿ ಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ॥ ೧೩ ॥

ಮಹಾಪಾತಕಸಂಯುಕ್ತೋ ಯುಕ್ತೋ ಯಶ್ಚೋಪಪಾತಕೈಃ ।
ತಿಲಧೇನುಪ್ರದಾನೇನ ಸೋಽಪಿ ಪಾವನಮಾಪ್ನುಯಾತ್ ॥ ೧೪ ॥

೯–೧೧. ಮೂರು ರಾತ್ರಿ ತಿಲಾಹಾರದಲ್ಲಿಯೇ ಇದ್ದು ಆ ತಿಲಧೇನುವನ್ನು ದಾನಮಾಡಿ ಆಮೇಲೆ ಒಂದುರಾತ್ರಿ ತಿಲಾಹಾರದಲ್ಲಿಯೇ ಯಾರು ಇರುತ್ತಾರೋ ಅವರು ತಿಲಾಹಾರವು ಚಾಂದ್ರಾಯಣವ್ರತಕ್ಕಿಂತ ಹೆಚ್ಚು ಪ್ರಶಸ್ತವಾದುದರಿಂದ ಸಕಲ ಪಾಪದಿಂದ ಮುಕ್ತರಾಗಿ ತಮ್ಮ ಪಿತೃಪಿತಾಮಹಾದಿ ವಂಶದವರನ್ನೂ ಪಾಪದಿಂದ ಉದ್ಧರಿಸುತ್ತಾರೆ ಮತ್ತು ತನ್ನ ಮಗನೇ ಮೊದಲಾದ ಮೂರು ತಲೆಯವರೆಗೂ ಪಾಪದಿಂದ ಉದ್ಧಾರಮಾಡಿದಂತಾಗುತ್ತದೆ.

೧೨. ಈ ತಿಲಧೇನುವನ್ನು ತನ್ನ ಸ್ನೇಹಿತನನ್ನು ಉದ್ದೇಶಿಸಿ ದಾನಮಾಡಿದರೂ ಸಹ ಆತನ ದುರಿತಗಳನ್ನೂ ಹೋಗಲಾಡಿಸುತ್ತಾನೆ. ಯಾರನ್ನು ಉದ್ದೇಶಿಸಿ ದಾನಮಾಡುವನೋ ಅವನ ಪಾಪವೆಲ್ಲವೂ ಹೋಗುತ್ತವೆ.

೧೩–೧೪ ಯಾವನು ವಿಧವತ್ತಾಗಿ ಆ ಹಸುವನ್ನು ತೆಗೆದುಕೊಳ್ಳುವುದನ್ನು ನೋಡುತ್ತಾನೋ ಆತನೂ ಎಲ್ಲಾ ಪಾಪಗಳಿಂದ ಪಾರಾಗಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಯಾವಾತನು ಭ್ರೂಣಹತ್ಯಾದಿ ಮಹಾಪಾಪಗಳಿಂದ ಕೂಡಿರುವನೋ ಅಥವಾ ಸುಳ್ಳು ಹೇಳುವುದು ಮೊದಲಾದ ಉಪಪಾತಕಗಳಿಂದ ಕೂಡಿರುವನೋ ಅವನು ತಿಲಧೇನುವನ್ನು ದಾನಮಾಡುವುದರಿಂದ ಪವಿತ್ರನಾಗುತ್ತಾನೆ

ಸಲೋಕಮಾಸಾದ್ಯ ನರೋವಸೂನಾಂ
ತತ್ರಾಪಿ ಭುಕ್ತ್ವಾ ತ್ರಿದಶೇಂದ್ರಭೋಗಾನ್ ।
ಮಾನುಷ್ಯಮಾಸಾದ್ಯ ಭವತ್ಯರೋಗೋ
ಧನಾನ್ವಿತೋ ರೂಪಸುಖೋಪಪನ್ನಃ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ತಿಲಧೇನುದಾನ ವಿಧಿವರ್ಣನೋ ನಾಮಾಷ್ಟೋತ್ತರತ್ರಿಶತತಮೋಽಧ್ಯಾಯಃ

---

೧೫. ಈ ರೀತಿ ತಿಲಧೇನು ದಾನಮಾಡಿದವನು ವಸುಗಳ ಲೋಕವನ್ನು ಹೊಂದಿ ಅಲ್ಲಿ ಬಹುಕಾಲ ದೇವಭೋಗವನ್ನು ಅನುಭವಿಸಿ, ಮನುಷ್ಯಲೋಕವನ್ನು ಪಡೆದು ಅಲ್ಲಿ ರೋಗರಹಿತನೂ ಧನಾಢ್ಯನೂ, ರೂಪವಂತನೂ ಆಗಿ ಸುಖಿಯಾಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ತಿಲಧೇನು ದಾನವಿಧಿವರ್ಣನವೆಂಬ ಮುನ್ನೂರ ಎಂಟನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ನವೋತ್ತರ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಜಲಧೇನುಂ ಪ್ರವಕ್ಷ್ಯಾಮಿ ಪ್ರೀತಯೇ ಜಲಶಾಯಿನಃ |
ಜಲಕುಂಭಂ ದ್ವಿಜಶ್ರೇಷ್ಠಾಃ ಸುವರ್ಣರಜತಾನ್ವಿತಂ || ೧ ||

ಕಲ್ಪಯೇದ್ರತ್ನಗರ್ಭಂ ಚ ಸ್ಥಾಪಯೇತ್ತಂ ಯವೋಪರಿ |
ಸರ್ವಧಾನ್ಯೈಸ್ತಥಾಗ್ರಾಮ್ಯೈಃ ಸಮನ್ತಾತ್ಪರಿವಾರಯೇತ್ || ೨ ||

ಸಿತವಸ್ತ್ರಯುಗಚ್ಛನ್ನಂ ದೂರ್ವಾಪಲ್ಲವಶೋಭಿತಂ |
ಕುಷ್ಠಮಾಂಸೀಮುರೋಶೀರ ವಾಲುಕಾಮಲಕೈರ್ಯುತಂ || ೩ ||

ಮುನ್ನೂರ ಒಂಭತ್ತನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ನೀರಿನಲ್ಲಿ ವಿಷ್ಣುವಿನ ಪ್ರೀತಿಗೋಸ್ಕರ ಜಲಧೇನುವಿನ ಕ್ರಮವನ್ನು ಹೇಳುತ್ತೇನೆ. ಬ್ರಾಹ್ಮಣಶ್ರೇಷ್ಠರೇ, ಚಿನ್ನ ಬೆಳ್ಳಿಯಿಂದ ಕೂಡಿದ ಒಂದು ನೀರಿನ ಕೊಡವನ್ನು ತಳದಲ್ಲಿ ರತ್ನಗಳನ್ನು ಹಾಕಿ ಯವಧಾನ್ಯದ ರಾಶಿಯ ಮೇಲೆ ಸ್ಥಾಪಿಸಬೇಕು. ಅದರ ಸುತ್ತಲೂ ಇತರ ಗ್ರಾಮಗಳಲ್ಲಿ ಬೆಳೆಯುವ ಎಲ್ಲಾ ಧಾನ್ಯಗಳನ್ನು ಹರಡಬೇಕು. ಬಿಳಿಯ ಒಂದು ಜೋತೆ ವಸ್ತ್ರವನ್ನು ಅದಕ್ಕೆ ಹೊದಿಸಬೇಕು. ಗರಿಕೆ ಚಿಗುರುಗಳಿಂದ ಅಲಂಕರಿಸಬೇಕು. ಪ್ರಿಯಂಗು

ಪ್ರಿಯಂಗುಪತ್ರಸಹಿತಂ ಸಿತಯಜ್ಞೋಪವೀತಿನಂ ।
ಸಚ್ಛತ್ರೋಪಾನಹಂ ಚೈವ ಸೋಷ್ಣೀಷಂ ಪರಿಕಲ್ಪಯೇತ್ ॥ ೪ ॥

ತಿಲಪಾತ್ರೈರ್ಯುತಂ ಕೃತ್ವಾ ಸಹಿರಣ್ಯೈಶ್ಚತುರ್ದಿಶಂ ।
ದಧ್ಯೋದನಯುತೇನಾಥ ಪಾತ್ರೇಣಸ್ಥಗಿತಂ ಮುಖೇ ॥ ೫ ॥

ಕಲ್ಪಯೇದೇವಮೇವಂತು ವಾರಿಧಾನೀಂ ತು ವತ್ಸಕಂ ।
ಉಪೋಷಿತಃ ಸಮಭ್ಯರ್ಚ್ಯ ದೇವೇಶಂ ಜಲಶಾಯಿನಂ ॥ ೬ ॥

ಪುಷ್ಪಧೂಪೋಪಹಾರೈಸ್ತು ಯಥಾವಿಭವಮಾಶ್ರಿತಃ ।
ಅಹತಾಂಬರವೀತಾಯ ದದ್ಯಾದ್ವಿಪ್ರಾಯ ಭಕ್ತಿಮಾನ್ ॥ ೭ ॥

ಜಲಶಾಯೀ ಜಗದ್ಯೋನಿಃ ಪ್ರೀಯತಾಂ ಮಮ ಕೇಶವಃ ।
ಇತಿಚೋಚ್ಚಾರ್ಯ ತಂ ದದ್ಯಾತ್ ಪ್ರೀಣಯೇಚ್ಚ ದ್ವಿಜೋಪಿ ತಂ ॥ ೮ ॥

ಎಲೆಯನ್ನೂ, ಬಿಳಿಯ ಯಜ್ಞೋಪವೀತವನ್ನೂ, ಕೊಡೆ ಮತ್ತು ಪಾದರಕ್ಷೆ, ರುಮಾಲು ಇವುಗಳನ್ನು ಇಡಬೇಕು.

೫-೮. ನಾಲ್ಕು ದಿಕ್ಕುಗಳಲ್ಲಿಯೂ ತಿಲಪಾತ್ರೆಗಳನ್ನು ಹಿರಣ್ಯವನ್ನು ಹಾಕಿ ಇಡಬೇಕು. ಮೊಸರನ್ನು ಹಾಕಿದ ಒಂದು ಪಾತ್ರೆಗೆ ಬಾಯಿ ಮುಚ್ಚಿ ಸಮೀಪದಲ್ಲಿಡಬೇಕು. ಹೀಗೆಯೇ ಇನ್ನೊಂದು ಕಲವನ್ನು ಕರುವಿನಂತೆ ಅಲಂಕರಿಸಿಡಬೇಕು ಇಷ್ಟನ್ನು ಸಂಪಾದಿಸಿದ ಮೇಲೆ ತಾನು ಉಪವಾಸಮಾಡಿ ಜಲಶಾಯಿಯಾದ ವಿಷ್ಣುವನ್ನು ಪೂಜಿಸಿ ತನ್ನ ಶಕ್ತ್ಯನುಸಾರವಾಗಿ ಹೂವು, ಧೂಪ ಮುಂತಾದ ಸಾಮಗ್ರಿಗಳಿಂದ ಪೂಜಿಸಿ ನೂತನ ವಸ್ತ್ರಧಾರಣೆಮಾಡಿದ ಬ್ರಾಹ್ಮಣನಿಗೆ ಭಕ್ತಿಯುತನಾಗಿ ದಾನಮಾಡಬೇಕು. ನೀರಿನಲ್ಲಿ ಮಲಗುವನೂ, ಜಗತ್ತಿಗೆ ಕಾರಣನೂ ಆದ ಕೇಶವನು ನನ್ನಲ್ಲಿ ಪ್ರೀತನಾಗಲಿ ಎಂದು ಉಚ್ಚರಿಸಿ ದಾನಮಾಡಬೇಕು. ದಾನತೆಗೆದುಕೊಂಡು ಬ್ರಾಹ್ಮಣನೂ ಸಂತೋಷಹೊಂದಬೇಕು.

೯-೧೦. ನಾನು ಹೇಳಿದುದನ್ನು ಹಗಲೂ ರಾತ್ರಿಯೂ ಉಪವಾಸವಿದ್ದು ಕ್ರಮವನ್ನು ಮೀರದೆ ದಾನಮಾಡಬೇಕು. ಆಮೇಲೆ ಒಂದು ಹಗಲೂ, ರಾತ್ರಿಯೂ

ಅಹೋರಾತ್ರೋಷಿತೋ ದದ್ಯಾದ್ಯಥಾವಿಧಿಮುಯೇರಿತಂ ।
ಅಪಕ್ವಾನ್ನಾಶಿನಾ ಸ್ಥೇಯ ಮಹೋರಾತ್ರಮತಃ ಪರಂ ॥ ೯ ॥

ಅನೇನ ವಿಧಿನಾ ದತ್ತ್ವಾ ಜಲಧೇನುಂ ದ್ವಿಜೋತ್ತಮಾನ್ ।
ಸರ್ವಾಹ್ಲಾದಮವಾಪ್ನೋತಿ ಕಾಮಾನಾಪ್ನೋತಿ ಶಾಶ್ವತಾನ್ ॥ ೧೦ ॥

ಮೋಕ್ಷಮಾಪ್ನೋತಿ ಸರ್ವೇಭ್ಯಸ್ತಪೋಭ್ಯಃ ಸ ತಥಾ ನರಃ ।
ಸೌಭಾಗ್ಯಂ ಮಹದಾಪ್ನೋತಿ ರೂಪಂ ಚ ಪರಮಂ ತಥಾ ॥ ೧೧ ॥

ಪುರುಷಃ ಸ ತಥಾ ಯಾತಿ ಯಸ್ಯ ಯಸ್ಯ ಚ ದರ್ಶನಂ ।
ಕರೋತಿ ಪರಮಾಹ್ಲಾದಂ ತಸ್ಯ ತಸ್ಯ ದ್ವಿಜೋತ್ತಮಾಃ ॥ ೧೨ ॥

ನಿತ್ಯಾಭಿತೃಪ್ತೋ ಭವತಿ ತಥೈವ ಚ ನಿರಾಮಯಃ ।
ಸರ್ವಬಾಧಾಪ್ರಶಮನಂ ಪ್ರಾಪ್ನೋತಿ ಗತಕಲ್ಮಷಃ ॥ ೧೩ ॥

ವಾರುಣಂ ಲೋಕಮಾಪ್ನೋತಿ ಸಕೃದ್ದಾತಾ ದ್ವಿಜೋತ್ತಮಃ ।
ದತ್ತ್ವಾ ತಾಮಸಕೃದ್ವಿಪ್ರಾ ಲೋಕಮಾಪ್ನೋತಿ ವೈಷ್ಣವಂ ॥ ೧೪ ॥

ಪಕ್ವಾನ್ನವನ್ನು ಊಟಮಾಡದೆ ಕಳೆಯಬೇಕು. ಈ ಕ್ರಮದಿಂದ ಬ್ರಾಹ್ಮಣೋತ್ತಮರಿಗೆ ಜಲಧೇನುವನ್ನು ದಾನಮಾಡಿದವರು ಸರ್ವಸುಖವನ್ನೂ ಹೊಂದುವುದಲ್ಲದೆ ಮನೋರಥಗಳನ್ನೂ ಶಾಶ್ವತವಾಗಿ ಪಡೆಯುತ್ತಾರೆ.

೧೧–೧೨. ಎಲ್ಲಾ ತಪಸ್ಸುಗಳಿಂದ ದೊರೆಯುವ ಮೋಕ್ಷವನ್ನೇ ಕೊನೆಗೆ ಪಡೆಯುತ್ತಾನೆ. ಹಾಗೆಯೇ ಅಧಿಕ ಸೌಭಾಗ್ಯವನ್ನೂ, ಸೌಂದರ್ಯಾತಿಶಯವನ್ನೂ ಹೊಂದುತ್ತಾನೆ. ಅಂಥಾ ಮನುಷ್ಯನು ಹೋದೆಡೆಗಳಲ್ಲಿ ಯಾರು ಯಾರನ್ನು ನೋಡುತ್ತಾನೋ ಅಂಥವರೆಲ್ಲರಿಗೂ ಸಂತೋಷವನ್ನು ಕೊಡುತ್ತಾನೆ.

೧೩–೧೪. ಅವನು ರೋಗರಹಿತನಾಗಿ ನಿತ್ಯತೃಪ್ತನಾಗಿರುತ್ತಾನೆ. ಕಳೆದು ಹೋದ ಪಾಪವುಳ್ಳವನಾದುದರಿಂದ ಎಲ್ಲಾ ವಿಪತ್ತುಗಳನ್ನೂ ದೂರಮಾಡಿಕೊಂಡಿರುತ್ತಾನೆ. ಒಂದು ಬಾರಿ ದಾನಮಾಡಿದ ಬ್ರಾಹ್ಮಣಶ್ರೇಷ್ಠನು ವರುಣಲೋಕವನ್ನು ಹೊಂದುತ್ತಾನೆ ಎಲೈ ಬ್ರಾಹ್ಮಣರೇ, ಅನೇಕ ಬಾರಿ ದಾನಮಾಡಿದವರು ವಿಷ್ಣುಲೋಕವನ್ನೇ ಹೊಂದುತ್ತಾರೆ.

ಆಹ್ಲಾದಹೇತೋಃ ಪರಮಂ ಪವಿತ್ರಂ
ದಾನಂ ಮಯೇದಂ ಕಥಿತಂ ದ್ವಿಜೇಂದ್ರಾಃ ।
ಧನ್ಯಂ ಯಶಸ್ಯಂ ದುರಿತಾಪಹಾರಿ
ಕಾಮಪ್ರದಂ ಲೋಕಹಿತಂ ಪ್ರಶಸ್ತಂ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಜಲಧೇನುವರ್ಣ
ನೋ ನಾಮ ನವೋತ್ತರ ತ್ರಿಶತತಮೋಽಧ್ಯಾಯಃ

---

೧೫. ಬ್ರಾಹ್ಮಣೋತ್ತಮರೇ ಪರಮಸುಖವನ್ನು ಹೊಂದುವುದಕ್ಕೋಸ್ಕರ, ಪವಿತ್ರವಾಗಿಯೂ, ಸ್ತುತ್ಯವಾಗಿಯೂ, ಯಶಸ್ಸನ್ನುಂಟುಮಾಡುವುದಾಗಿಯೂ ಪಾಪಹಾರಿಯಾಗಿಯೂ, ಸಕಲೇಚ್ಛೆಯನ್ನು ಪೂರೈಸುವ, ಲೋಕಕ್ಕೆ ಕಲ್ಯಾಣಕರವಾದ ಪ್ರಶಸ್ತವಾದ ಈ ದಾನಗಳನ್ನೂ ನಾನು ಹೇಳಿರುತ್ತೇನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಜಲಧೇನುವರ್ಣನವೆಂಬ ಮುನ್ನೂರ ಒಂಭತ್ತನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದಶೋತ್ತರ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಸುವರ್ಣಮುತ್ತಮಂ ರತ್ನಂ ಧನಾನಾಮಪಿ ಚೋತ್ತಮಂ |
ಲೋಹಾನಾಮುತ್ತಮಂ ಚೈವ ಸರ್ವೇಷಾಮಪಿ ಚೋತ್ತಮಂ || ೧ ||

ಅಗ್ನೇರಪತ್ಯಂ ಪ್ರಥಮಂ ಪವಿತ್ರಂ ಮಂಗಲಂ ಪರಂ |
ಧಾರಣಾತ್ಸರ್ವಪಾಪಘ್ನಂ ದಾತುಸ್ತ್ರಿದಶಲೋಕದಂ || ೨ ||

ಮುಕುಟೈಃ ಕುಂಡಲೈರ್ಹಾರೈಃ ಕೇಯೂರೈರಂಗದೈಸ್ತಥಾ |
ಧಾರ್ಯತೇ ಯತ್ಸದಾ ದೇವೈಃ ಪವಿತ್ರತ್ವಾದ್ದ್ವಿಜೋತ್ತಮಾಃ || ೩ ||

ಮುನ್ನೂರ ಹತ್ತನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ಚಿನ್ನವೆಂಬುದು ಉತ್ತಮವಾದ ರತ್ನವು. ಧನಗಳಲ್ಲಿಯೂ, ಲೋಹಗಳಲ್ಲಿಯೂ, ಇತರ ಸರ್ವವಸ್ತುಗಳ ಮಧ್ಯದಲ್ಲಿಯೂ ಇದೇ ಉತ್ತಮವಾದುದು. ಅಗ್ನಿಯ ಮೊದಲನೆಯ ಮಗುವಾದ ಚಿನ್ನವು ಮಂಗಲಕರವೂ, ಪವಿತ್ರವೂ ಆಗಿರುತ್ತವೆ. ಇದನ್ನು ಧರಿಸುವುದರಿಂದ ಸಕಲಪಾಪವೂ ನಿವಾರಣೆಯಾಗುತ್ತದೆ. ದಾನಮಾಡುವವನಿಗೆ ಸ್ವರ್ಗವನ್ನು ಕೊಡುತ್ತದೆ. ಬ್ರಾಹ್ಮಣರೇ, ಇದು ಯಾವಾಗಲೂ ದೇವತೆಗಳಿಂದ ಕಿರೀಟ, ಕುಂಡಲ, ಸರ, ವಂಕಿ, ಬಂದಿಗೆ, ಬಳೆ ಮೊದಲಾದ ರೂಪಗಳಿಂದ ಪವಿತ್ರವೆಂದು ಧರಿಸಲ್ಪಡುತ್ತದೆ.

ಜಾಂಬೂನದಂತದ್ದೇವಾನಾ ಮಿಂದ್ರಗೋಪಕಸನ್ನಿಭಂ ।
ಪಿತ್ರ್ಯಾಣಾಂ ಚಂದ್ರರಶ್ಮ್ಯಾಭಂ ದೈತ್ಯಾನಾಂಶಬಲೋಪಮಂ ॥ ೪ ॥

ನಾಗಾನಾಂ ತಚ್ಛಿಖಾಭಂ ಸ್ಯಾನ್ನಾರೀಣಾಂ ಪೀತಮುಚ್ಯತೇ ।
ದತ್ವಾತ್ವ ಕೃಷ್ಣಲಮಾತ್ರಂ ತು ನರಃ ಪಾಪಾತ್ಪ್ರಮುಚ್ಯತೇ ॥ ೫ ॥

ದತ್ವಾತ್ವ ಚ ಮಾಷಕಂ ತಸ್ಯ ಪುಣ್ಯಂ ಫಲಮುಪಾಶ್ನುತೇ ।
ಸುವರ್ಣಮಾಷಕಂ ದತ್ವಾತ್ವ ಸೂರ್ಯಸ್ಯೋದಯನಂ ಪ್ರತಿ ॥ ೬ ॥

ಹುತ್ವಾಗ್ನಿಂ ಸರ್ವಪಾಪೇಭ್ಯೋ ಮೋಕ್ಷಮಾಪ್ನೋತ್ಯಸಂಶಯಂ ।
ತ್ರೇತಾಗ್ನಿವ್ರತಮೇತತ್ತು ಕೀರ್ತಿತಂ ತಸ್ಯ ನಿತ್ಯದಾ ॥ ೭ ॥

ದಿನಮಧ್ಯಗತೇ ಸೂರ್ಯೇ ಹುತ್ವಾಗ್ನಿಂ ಯಃ ಪ್ರಯಚ್ಛತಿ ।
ತಸ್ಯಾಗ್ನಿ ನಿತ್ಯದಾನೇ ಚ ಮಹತ್ಫಲಮುದಾಹೃತಂ ॥ ೮ ॥

೪–೫. ಚಿನ್ನವು ದೇವತೆಗಳಿಗೆ ಕಾಮನಬಿಲ್ಲಿಗೆ ಸಮನಾಗಿಯೂ, ಪಿತೃಗಳಿಗೆ ಚಂದ್ರರಶ್ಮಿಗೆ ಸಮಾನವಾಗಿಯೂ, ರಾಕ್ಷಸರಿಗೆ, ಚಿತ್ರಬಣ್ಣವಾಗಿಯೂ, ಸರ್ಪಗಳಿಗೆ ಗಿಣಿಗೆ ಸಮಾನವಾಗಿಯೂ, ಸ್ತ್ರೀಯರಿಗೆ ಹಳದಿಯಾಗಿಯೂ ಇರುತ್ತದೆ. ಒಂದು ಚಿಕ್ಕಚೂರನ್ನೂ (ಗುಲಗಂಜಿಯಷ್ಟು) ದಾನಮಾಡುವುದರಿಂದಲೂ ಮನುಷ್ಯನು ಪಾಪದಿಂದ ಮುಕ್ತನಾಗುತ್ತಾನೆ.

೬–೭. [1]ಮಾಷಕಪರಿಮಾಣದಷ್ಟು ಚಿನ್ನವನ್ನು ದಾನಮಾಡುವುದರಿಂದ ಅಧಿಕ ಪುಣ್ಯವನ್ನು ಹೊಂದುತ್ತಾನೆ. ಸೂರ್ಯೋದಯದಲ್ಲಿ ಆಹುತಿಕೊಟ್ಟು ಮಾಷಕ ಪರಿಮಾಣದಷ್ಟು ಚಿನ್ನವನ್ನು ದಾನಮಾಡಿದವನು ಸಕಲ ಪಾಪಗಳಿಂದ ಬಿಡುಗಡೆಹೊಂದಿ ಮೋಕ್ಷವನ್ನೂ ಹೊಂದುವುದಲ್ಲದೆ ತ್ರೇತಾಗ್ನಿವ್ರತವನ್ನೇ ಮಾಡಿದಂತಾಗುವುದು.

೮–೯. ಯಾವನು ಮಧ್ಯಾಹ್ನದಲ್ಲಿ ಅಗ್ನಿಯಲ್ಲಿ ಹೋಮಮಾಡಿ ಪವಿತ್ರನಾದವನಿಗೆ ನಿತ್ಯವೂ ಚಿನ್ನವನ್ನು ದಾನಮಾಡುತ್ತಾನೋ ಅವನಿಗೆ ಅಧಿಕಫಲವು

---

1 ಮಾಷಕವೆಂದರೆ ಐದು ಗುಲಗಂಜಿಯ ತೂಕ.

ಸೂರ್ಯಸ್ಯಾಸ್ತಮಯೇ ವಹ್ನಿಂ ಹುತ್ವಾ ತದ್ಯೈ ಪ್ರಯಚ್ಛತಿ ।
ಪುಣ್ಯಂ ಮಹತ್ಸವಾಪ್ನೋತಿ ನಿತ್ಯದಾನೇನವೈ ದ್ವಿಜಾಃ ॥ ೯ ॥

ತ್ರಿಸಂಧ್ಯಂ ಕನಕಂ ಯಸ್ತು ಹುತ್ವಾ ವಹ್ನಿಂ ಪ್ರಯಚ್ಛತಿ ।
ನ ಸ ಲಿಪ್ಯೇತ ಪಾಪೇನ ಪದ್ಮಪತ್ರಮಿವಾಮ್ಭಸಾ ॥ ೧೦ ॥

ಸಕೃತ್ ಕೃಷ್ಣಲದಾನೇನ ಸ್ವರ್ಗೇ ವರ್ಷಂ ಸುಖೀವಸೇತ್ ।
ತಥಾ ಚ ಪಂಚವರ್ಷಾಣಿ ಸ್ವರ್ಗೇ ದತ್ವೈವ ಮಾಷಕಂ ॥ ೧೧ ॥

ಯಃ ಸುವರ್ಣಂ ಸುವರ್ಣಸ್ಯ ಬ್ರಾಹ್ಮಣಾಯ ಪ್ರಯಚ್ಛತಿ ।
ನಿರ್ದೋಷಃ ಸ್ಯಾತ್ಸನಾಕೇತು ಮೋದತ್ಯಬ್ದಶತಂ ಧ್ರುವಂ ॥ ೧೨ ॥

ಆತ್ಮತುಲ್ಯಂ ಸುವರ್ಣಸ್ಯ ಯಃಪ್ರಯಚ್ಛತಿವೈ ದ್ವಿಜಾಃ ।
ಸರ್ವಪಾಪವಿನಿರ್ಮುಕ್ತೋ ಯಥೇಷ್ಟಾಂಗತಿಮಾಪ್ನುಯಾತ್ ॥ ೧೩ ॥

ಬ್ರಹ್ಮಘ್ನೋ ವಾ ಸುರಾಪೋ ವಾ ಸ್ತೇನೋವಾ ಗುರುತಲ್ಪಗಃ ।
ಸರ್ವ ಪಾತಕಯುಕ್ತೋಪಿ ತೇನ ದಾನೇನ ಮುಚ್ಯತೇ ॥ ೧೪ ॥

ಬರುತ್ತದೆ. ಬ್ರಾಹ್ಮಣರೇ, ಸೂರ್ಯನು ಮುಳುಗಿದ ಮೇಲೆ ಅಗ್ನಿಯಲ್ಲಿ ಹೋಮ ಮಾಡಿ ನಿತ್ಯವೂ ದಾನಮಾಡುವವನಿಗೆ ಅಧಿಕಪುಣ್ಯವು ಲಭಿಸುವುದು.

೧೦-೧೨. ಮೂರು ಕಾಲದಲ್ಲಿಯೂ ಅಗ್ನಿಯಲ್ಲಿ ಹೋಮಮಾಡಿ ಚಿನ್ನದ ದಾನವನ್ನು ಯಾವನು ಮಾಡುವನೋ ಅವನು ನೀರಿನಿಂದ ತಾವರೆ ಎಲೆಯಂತೆ ಯಾವ ಪಾಪದಿಂದಲೂ ಲೇಪಹೊಂದುವುದಿಲ್ಲ. ಒಂದು ಸಲ ಗುಲಗಂಜಿಯು ಪರಿಮಿತಿಯುಳ್ಳ ಚಿನ್ನವನ್ನು ದಾನಮಾಡುವುದರಿಂದ ಒಂದು ವರ್ಷ ಸ್ವರ್ಗದಲ್ಲಿ ಸುಖಿಯಾಗಿರುತ್ತಾನೆ. ಮಾಷಕದ ಪರಿಮಾಣದಷ್ಟು ದಾನಮಾಡಿದವನು ಐದು ವರ್ಷಗಳವರೆಗೆ ಸ್ವರ್ಗದಲ್ಲಿ ಸುಖಿಯಾಗಿರುವನು. ಇದಕ್ಕಿಂತಲೂ ಹೆಚ್ಚಾದ ಸುವರ್ಣ ಪರಿಮಿತಿಯುಳ್ಳ ಚಿನ್ನವನು ದಾನಮಾಡಿದರೆ ದೋಷರಹಿತನಾಗಿ ನೂರು ವರ್ಷಗಳ ವರೆಗೆ ಸ್ವರ್ಗದಲ್ಲಿ ಸುಖಪಡುತ್ತಾನೆ.

೧೩-೧೭. ಎಲೈ ಬ್ರಾಹ್ಮಣಶ್ರೇಷ್ಠರೇ, ತನ್ನ ತೂಕಕ್ಕೆ ಸರಿಸಮಾನ ಉಳ್ಳ ಸುವರ್ಣದಾನ ಮಾಡಿದವನು ಎಲ್ಲಾ ಪಾಪಗಳನ್ನೂ ಹೋಗಲಾಡಿಸಿಕೊಂಡು ಇಷ್ಟವಾದ ಗತಿಯನ್ನು ಪಡೆಯುತ್ತಾನೆ. ಬ್ರಹ್ಮಹತ್ಯೆ ಮಾಡಿದವನಾಗಲೀ,

ಶ್ರದ್ಧಾನಾಮುತ್ತಮಂ ಚೈತದ್ದಾನಾನಾಮುತ್ತಮೋತ್ತಮಂ ।
ರುಕ್ಮಂ ದತ್ವಾ ಬ್ರಾಹ್ಮಣಾಯ ಸುಖೀ ಸರ್ವತ್ರಜಾಯತೇ ॥ ೧೫ ॥

ಚಿರಾನ್ನಾಕಪರಿಭ್ರಷ್ಟೋ ರೂಪಸೌಭಾಗ್ಯ ಸಂಯುತಃ ।
ತಾಸಾಂ ಕುಲೇ ತು ಸುಸ್ಫೀತೇ ಗುಣೈಃ ಸರ್ವೈರ್ಯುತೋ ನರಃ ॥ ೧೬ ॥

ರುಕ್ಮಪಾತ್ರಪ್ರದಾನೇನ ಪುತ್ರೀ ಭವತಿ ಮಾನವಃ ।
ಸರ್ವೇಷಾಮೇವ ಕಾಮಾನಾಂ ಯಶಸಸ್ತ್ರಿದಿವಸ್ಯ ಚ ॥ ೧೭ ॥

ರೂಪ್ಯದೋ ರೂಪಮಾಪ್ನೋತಿ ಭೋಗಮಾಪ್ನೋತಿ ತಾಮ್ರದಃ ।
ಲೋಹಾರಕೂಟಯೋರ್ದಾನಾತ್ಕುಢ್ಯಮಾಪ್ನೋತ್ಯ ಸಂಶಯಂ ॥ ೧೮ ॥

ತ್ರಪುಸೀಸಕಯೋರ್ದಾನಾದ್ವಹ್ನಿವೃದ್ಧಿಮವಾಪ್ನುಯಾತ್ ।
ಯಥೇಷ್ಟ ಲೋಹಪಾತ್ರಂ ಚ ಯಃಪ್ರದದ್ಯಾದ್ದ್ವಿಜಾತಯೇ ॥ ೧೯ ॥

ಸುರಾಪಾನ ಮಾಡಿದವನಾಗಲೀ, ಕಳ್ಳನಾಗಲೀ, ಗುರುಪತ್ನಿಯ ಗಮನವನ್ನು ಮಾಡಿದವನಾಗಲೀ ಸುವರ್ಣದಾನದಿಂದ ಪಾಪಮೋಕ್ಷಹೊಂದುತ್ತಾನೆ. ಶ್ರದ್ಧೆಯಿಂದ ಕೂಡಿದ ಶಾಸ್ತ್ರೀಯ ಕಾರ್ಯದಲ್ಲಿಯೂ, ದಾನಗಳಲ್ಲಿಯೂ ಸಹ ಈ ಸುವರ್ಣದಾನವು ಉತ್ತಮೋತ್ತಮವಾದದ್ದು ಬ್ರಾಹ್ಮಣನಿಗೆ ಚಿನ್ನವನ್ನು ದಾನಮಾಡಿದಲ್ಲಿ ಎಲ್ಲಾ ಲೋಕದಲ್ಲಿಯೂ ಸುಖಿಯಾಗುತ್ತಾನೆ. ಸ್ವರ್ಗವಾಸಿಯಾಗಿದ್ದು ಪುನಃ ಭೂಮಿಯಲ್ಲಿ ಜನಿಸುವಾಗಲೂ ರೂಪ ಸೌಭಾಗ್ಯಗಳಿಂದ ಕೂಡಿ ಗುಣಗಳಿಂದ ಉತ್ತಮವಂಶದಲ್ಲಿ ಜನಿಸುತ್ತಾನೆ. ಚಿನ್ನದ ಪಾತ್ರೆಯನ್ನು ದಾನಮಾಡಿದವನು ಪುತ್ರವಂತನಾಗುತ್ತಾನೆ. ಎಲ್ಲಾ ಮನೋರಥಗಳಿಗೂ, ಯಶಸ್ಸಿಗೂ, ಸ್ವರ್ಗಕ್ಕೂ ಭಾಗಿಯಾಗುತ್ತಾನೆ.

೧೮-೨೧. ಬೆಳ್ಳಿಯನ್ನು ದಾನಕೊಡುವವನು ರೂಪವಂತನಾಗುತ್ತಾನೆ. ತಾಮ್ರದ ದಾನದಿಂದ ಭೋಗಿಯಾಗುತ್ತಾನೆ. ಕಬ್ಬಿಣ ಮತ್ತು ಹಿತ್ತಾಳೆಯ ಪದಾರ್ಥಗಳ ದಾನದಿಂದ ಮಾನವನು ಧನಿಕನಾಗುತ್ತಾನೆ. ತವರ ಮತ್ತು ಸೀಸ ಮುತಾದವುಗಳ ದಾನಿಯು ಅಗ್ನಿಪಾಕವವುಳ್ಳವನಾಗುತ್ತಾನೆ. ಯಥೇಷ್ಟವಾದ ಲೋಹಪಾತ್ರೆಗಳನ್ನು ಬ್ರಾಹ್ಮಣನಿಗೆ ದಾನಮಾಡುವುದರಿಂದ ಸರ್ವ ಇಷ್ಟಾರ್ಥ

ಪಾತ್ರಂ ಭವತಿ ಕಾಮಾನಾಂ ವಿಶೇಷಶ್ಚಾಸ್ಯ ಲೋಹತಃ ।
ಶಿಲ್ಪಭಾಂಡಾನಿ ಯೋ ದದ್ಯಾಲ್ಲೋಹಾನಿ ವಿಧಿವದ್ದ್ವಿಜಾಃ ॥ ೨೦ ॥

ವಿದ್ಯಾದಾನಫಲಂ ತಸ್ಯ ಕಥಿತಂ ನಾತ್ರ ಸಂಶಯಃ ।
ಚರ್ಮದಾತಾ ನರೋ ನಿತ್ಯಂ ರಕ್ಷಾಂ ಸಮಧಿಗಚ್ಛತಿ ॥ ೨೧ ॥

ಆಯುಧಾನಾಂ ಪ್ರದಾನೇನ ರಿಪುನಾಶಮವಾಪ್ನುಯಾತ್ ।
ರಾಜಲಿಂಗಪ್ರದಾನೇನ ರಾಜಾ ಭವತಿ ಭೂತಲೇ ॥ ೨೨ ॥

ರತ್ನಾನಾಂ ಚ ಪ್ರದಾನೇನ ರಾಜ್ಯೈವೇಹ ಪ್ರಜಾಯತೇ ।
ರತ್ನದಾನಸ್ಯ ಯಲ್ಲೋಕಂ ತದ್ಭುಕ್ತ್ವಾ ಸುಚಿರಂ ದ್ವಿಜಾಃ ॥ ೨೩ ॥

ವಜ್ರದಃ ಶಕ್ರಲೋಕಂ ತು ಪದ್ಮರಾಗಪ್ರದೋ ರವೇಃ ।
ಸದ್ಯೋ ಮರಕತಂ ದತ್ವಾ ವಿಷ್ಣುಲೋಕೇ ಮಹೀಯತೇ ॥ ೨೪ ॥

ಗಳನ್ನು ಹೊಂದುವನು. ಲೋಹಗಳಿಗೆ ಬಹಳ ಆಶ್ರಯನೂ ಆಗುವನು. ಶಿಲ್ಪಗಳಿಗೆ ಉಪಯುಕ್ತವಾದ ಲೋಹೋಪಕರಣಗಳನ್ನು ದಾನಮಾಡಿದವನು ಇದರಿಂದ ವಿದ್ಯಾದಾನದಷ್ಟು ಫಲವನ್ನು ಹೊಂದುತ್ತಾನೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಚರ್ಮವನ್ನು ದಾನಮಾಡಿದವನು ಯಾವಾಗಲೂ ಇತರರಿಂದ ರಕ್ಷಿಸಲ್ಪಡುತ್ತಾನೆ.

೨೨–೨೪. ಆಯುಧಾದಿಗಳ ದಾನದಿಂದ ಮನುಷ್ಯನು ಅಜಾತಶತ್ರುವಾಗುತ್ತಾನೆ. ರಾಜಚಿಹ್ನೆಯನ್ನು ಕೊಡುವುದರಿಂದ ಭೂಮಂಡಲದಲ್ಲಿ ರಾಜನಾಗಿ ಜನಿಸುತ್ತಾನೆ. ರತ್ನಗಳನ್ನು ದಾನಮಾಡಿದವನು ಬಹಳ ಕಾಲ ಸ್ವರ್ಗಸುಖವನ್ನು ಅನುಭವಿಸಿ ಮರಳಿ ಭೂಮಂಡಲದಲ್ಲಿ ರಾಜನಾಗಿ ಹುಟ್ಟುತ್ತಾನೆ. ವಜ್ರದಾನಿಯು ಅಮರಾವತಿಯನ್ನೂ, ಪದ್ಮರಾಗವನ್ನು ದಾನಮಾಡಿದವನು ಸೂರ್ಯಲೋಕವನ್ನೂ, ಹೊಂದುತ್ತಾರೆ. ಪಚ್ಚೆಯ ಮಣಿಯನ್ನು ದಾನಮಾಡಿದರೆ ವಿಷ್ಣುಸಾಯುಜ್ಯ

ಮುಕ್ತಾಫಲಪ್ರದಾನೇನ ವಾರುಣಂ ಲೋಕಮಶ್ನುತೇ ।
ವೈದೂರ್ಯಸ್ಯ ಪ್ರದಾನೇನ ದ್ವೀಪಾನಾಂ ಪಸ್ತಮೋದತೇ ॥ ೨೫ ॥

ರತ್ನಾನ್ಯನ್ಯಾನಿ ದತ್ವಾ ಚ ರಾಜರಾಜಸ್ಯ ಚ ದ್ವಿಜಾಃ ।
ಸರ್ವೇಷಾಮೇವ ರತ್ನಾನಾಂ ಕನಕಂ ಶ್ರೇಷ್ಠಮುಚ್ಯತೇ ॥ ೨೬ ॥

ಧಾರಣಂ ಕೀರ್ತನಂ ದಾನಂ ಕನಕಸ್ಯ ಪ್ರಶಸ್ಯತೇ ।
ದುಃಸ್ವಪ್ನಶಮನಂ ದಾನಂ ದುರಿಷ್ಟಸ್ಯ ಚ ನಾಶನಂ ॥ ೨೭ ॥

ಪರಂ ಪಾಪಹರಂ ಜ್ಞೇಯಮಲಕ್ಷ್ಮೀಶಮನಂ ತಥಾ ।
ದತ್ವಾ ಸುವರ್ಣಂ ಲೋಕೇಷು ಯಥೇಷ್ಟೇಷು ಚ ಮೋದತೆ ॥ ೨೮ ॥

ವಿಮಾನೇನಾರ್ಕವರ್ಣೇನ ಹಂಸಯುಕ್ತೇನ ಭಾಸ್ವತಾ ।
ದೇವರಾಮಾಗಣಾಢ್ಯೇನ ಕಾಮಗೇನ ವಿಹಾಯಸಾ ।
ಭುಕ್ತ್ವಾ ದಿವಿ ಚಿರಂ ಭೋಗಾನ್ಮನುಷ್ಯೇ ಸುಖಮಾಪ್ನುಯಾತ್ ॥ ೨೯ ॥

ವನ್ನು ಪಡೆಯುವರು. ಮುತ್ತುಗಳ ದಾನದಿಂದ ವರುಣಲೋಕವೂ ವೈಡೂರ್ಯ ದಾನದಿಂದ ಸಪ್ತದ್ವೀಪಗಳ ಅಧಿಪತಿಯ ಸುಖವೂ ಲಭಿಸುವುದು

೨೬–೨೮. ಎಲೈ ಶ್ರೇಷ್ಠಬ್ರಾಹ್ಮಣರೇ, ಮತ್ತಿತರ ರತ್ನಗಳ ದಾನದಿಂದ ಕುಬೇರನ ಭೋಗವನ್ನು ಅನುಭವಿಸಬಹುದು. ಎಲ್ಲಾ ರತ್ನಗಳಲ್ಲಿಯೂ ಚಿನ್ನವು ಶ್ರೇಷ್ಠವೆಂದು ಉಕ್ತವಾಗಿದೆ. ಈ ರತ್ನದ ತೊಡಿಗೆಯಾಗಲೀ, ಹೊಗಳುವಿಕೆಯಾಗಲಿ ಮತ್ತು ದಾನಮಾಡುವುದಾಗಲೀ, ಪ್ರಶಸ್ತವಾದುದು. ಇದರದಾನದಿಂದ ಕೆಟ್ಟ ಕನಸುಗಳ ಸುಳಿವು ಸಹ ಆಗುವುದಿಲ್ಲ ಮತ್ತು ಅನಿಷ್ಟವೂ ಕೂಡ ಬರುವುದಿಲ್ಲ. ಇದು ಪಾಪರಹಿತವೂ ದೌರ್ಭಾಗ್ಯನಾಶಕವೂ ಆಗುತ್ತದೆಂದು ತಿಳಿಯಬೇಕು. ಸುವರ್ಣದಾನ ಮಾಡಿದರೆ, ಇಷ್ಟವಾದ ಲೋಕಗಳೊಳಗೆ ಸುಖಿಸುತ್ತಾನೆ.
ಈ ದಾನವೂ ಪಾಪವನ್ನು ಪರಿಹರಿಸತಕ್ಕದ್ದು. ದಾರಿದ್ರ್ಯವೂ ಅಳಿಯುವುದು. ಎಂದು ತಿಳಿಯಬೇಕು.

೨೯–೩೦. ಸುವರ್ಣವು ಅಗ್ನಿಯ ಮೊಟ್ಟಮೊದಲನೆಯ ಮಗನು ಅಂದರೆ ಚಿನ್ನವು ತೇಜಸ್ತ್ವಪದಾರ್ಥ ಎಂದು ಹೇಳುವರು. ಆದ್ದರಿಂದ ಅದು ಪವಿತ್ರವಾದ ವಸ್ತು. ಸುವರ್ಣಪೂರ್ವಕವಾಗಿ, ಭೂಮಿ, ಗದ್ದೆ, ದನಕರುಗಳು ಇವೇ ಮುಂತಾದವು ಗಳನ್ನು ಯಾವನು ದಾನಮಾಡುತ್ತಾನೋ ಅವನು ಪ್ರಕಾಶವಾಗಿ ಹೊಳೆಯುತ್ತಿರುವ

ಅಗ್ನೇರಪತ್ಯಂ ಪ್ರಥಮಂ ಸುವರ್ಣಂ
　ಭೂರ್ವೈಷ್ಣವೀ ಬ್ರಹ್ಮಸುತಾಶ್ಚ ಗಾವಃ ।
ಸರ್ವಂ ಹಿ ದತ್ತಂ ಭವತೀಹ ತೇನ ಯಃ
　ಕಾಂಚನಂ ಗಾಂ ಚ ಮಹೀಂ ಚ ದದ್ಯಾತ್　　॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರ ಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸುವರ್ಣದಾನವಿಧಿ ನಿರೂಪಣೋನಾಮ ದಶಾಧಿಕತ್ರಿಶತತಮೋಧ್ಯಾಯಃ

ದೇವತಾಮಹಿಮೆಯಿಂದ ಒಪ್ಪುತ್ತಿರುವ ಹಂಸಪಕ್ಷಿಗಳಿಂದ ಕೂಡಿದ ಸೂರ್ಯವರ್ಣದ ವಿಮಾನದ ಮೂಲಕ ಸ್ವರ್ಗವನ್ನು ಸೇರಿ ಬಹಳ ಸುಖಗಳನ್ನು ಅನುಭವಿಸಿ ಅನಂತರ ವಲ್ಲಿ ಮಾನುಷಲೋಕದಲ್ಲಿ ಮನುಷ್ಯನಾಗಿ ಜನಿಸಿ ಲೋಕದಲ್ಲಿ ಮಾನವತೆಯ ಪರಾಕಾಷ್ಠತೆಯನ್ನು ಹೊಂದುವನೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರಸಂವಾದದಲ್ಲಿ ಮುನಿಗಳನ್ನು ಕುರಿತು ಉಪದಿಷ್ಟವಾದ ಹಂಸಗೀತೆಯಲ್ಲಿ ಸುವರ್ಣದಾನನಿರೂಪಣವೆಂಬ ಮುನ್ನೂರಹತ್ತನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕಾದಶಾಧಿಕತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ನರಸ್ತ್ವಾಸನ ದಾನೇನ ಸ್ಥಾನಂ ಸರ್ವತ್ರವಿಂದತಿ ।
ಶಯ್ಯಾದಾನೇನ ಚಾಪ್ನೋತಿ ಭಾರ್ಯಾಂ ಬ್ರಾಹ್ಮಣ ಸತ್ತಮಾಃ || ೧ ||

ದತ್ತ್ವಾ ದ್ವಿಜಾಯ ಶಯನಂ ಸ್ವಾಸ್ತೀರ್ಣಂ ಸೋತ್ತರಚ್ಛದಂ ।
ಕುಲೇ ಮಹತಿಸಂಭೂತಾಂ ರೂಪದ್ರವಿಣಸಂಯುತಾಂ || ೨ ||

ತಥಾ ಪಕ್ಷವತೀಂ ಭವ್ಯಾಂ ಪ್ರಾಪ್ನೋತಿ ವಶಗಾಂ ತಥಾ ।
ಅನೇನೈವಪ್ರದಾನೇನ ಭಾರ್ಯಾಪತಿಮವಾಪ್ನುಯಾತ್ || ೩ ||

ಮುನ್ನೂರ ಹನ್ನೊಂದನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ :— ಮನುಷ್ಯನು ಆಸನಾದಿಗಳನ್ನು ದಾನ ಮಾಡುವುದರಿಂದ ತನಗೆ ಅರ್ಹವಾದ ಗೌರವಸ್ಥಾನವನ್ನು ಹೊಂದುತ್ತಾನೆ. ಹಾಸಿಗೆಯ ದಾನದಿಂದ ಪತ್ನಿಯನ್ನು ಹೊಂದುತ್ತಾನೆ. ಮೇಲು ಹೊದಿಕೆ ಮೊದಲಾದುವುಗಳಿಂದ ಸುಸಜ್ಜಿತವಾದ ಶಯ್ಯೆಯನ್ನು ಬ್ರಾಹ್ಮಣನಿಗೆ ದಾನಮಾಡಿದವನು ಸತ್ಕುಲಪ್ರಸೂತಳೂ ಸುರೂಪ, ಧನ ಇವುಗಳನ್ನು ಹೊಂದಿ ಸದ್ಬಂಧುಗಳಿಂದ ಕೂಡಿಯೂ, ಸ್ವಾಧೀನಳಾಗಿಯೂ ಇರುವ ಭಾರ್ಯೆಯನ್ನು ಹೊಂದುತ್ತಾನೆ. ಇದೇ ವಿಧವಾದ ಶಯ್ಯಾದಾನದಿಂದ ಸ್ತ್ರೀಯಾದವಳೂ ಅನುರೂಪನಾದ ಪತಿಯನ್ನು ಹೊಂದುತ್ತಾಳೆ.

ವಿತಾನಕಪ್ರದಾನೇನ ಸರ್ವಪಾಪೈಃ ಪ್ರಮುಚ್ಯತೇ ।
ಛತ್ರದಶ್ಚ ತಥಾ ವಿಪ್ರಾ ನಾತ್ರ ಕಾರ್ಯಾ ವಿಚಾರಣಾ ॥ ೪ ॥

ಛತ್ರಂ ಶತಶಲಾಕಂ ತು ದತ್ತ್ವಾತಪವಾರಣಂ ।
ಸರ್ವತಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ॥ ೫ ॥

ಯಾಮ್ಯಂ ಮಾರ್ಗಂ ತಥಾ ಯಾತಿ ಸುಖೇನ ದ್ವಿಜಸತ್ತಮಾಃ ।
ಉಪಾನಹೇ ತಥಾ ದತ್ತ್ವಾ ಶ್ಲಕ್ಷ್ಣೇ ಸ್ನೇಹಸಮನ್ವಿತೇ ॥ ೬ ॥

ರಥಮಶ್ವತರೀಯುಕ್ತಂ ತ್ರಿದಿವಂ ಪ್ರತಿಪದ್ಯತೇ ।
ಸರ್ವಪಾಪವಿನಿರ್ಮುಕ್ತೋ ಯಾಮ್ಯಮಾರ್ಗಂ ಸುಖಂ ವ್ರಜೇತ್ ॥ ೭ ॥

ತಾಲವೃಂತಪ್ರದಾನೇನ ಸರ್ವಪಾಪೈಃ ಪ್ರಮುಚ್ಯತೇ ।
ಪಾದುಕಾನಾಂ ಪ್ರದಾನೇನ ಗತಿಮಾಪ್ನೋತಿ ಶೋಭನಾಂ ॥ ೮ ॥

ಪಾದಪೀಠಪ್ರದಾನೇನ ಸ್ಥಾನಂ ಸರ್ವತ್ರ ವಿಂದತಿ ।
ಸ್ಥಾನಮೇವ ತಥಾಪ್ನೋತಿ ದಂಡಂ ದತ್ತ್ವಾ ದ್ವಿಜಾತಯೇ ॥ ೯ ॥

೪–೭. ಮೇಲುಕಟ್ಟುಗಳನ್ನೂ, ಛತ್ರಿಯನ್ನೂ ದಾನಮಾಡಿದವನು ಸರ್ವ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಈ ವಿಷಯದಲ್ಲಿ ವಿಚಾರ ಮಾಡಬೇಕಾದುದಿಲ್ಲ. ನೂರು ಶಲಾಕೆಗಳುಳ್ಳ ಬಿಸಿಲಿನ ತಾಪಕ್ಕೆ ನಿವಾರಕವಾದ ಛತ್ರಿಯನ್ನು ದಾನಮಾಡಿದವನು ಸಾಂಸಾರಿಕವಾದ ಸರ್ವತಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಸ್ವರ್ಗಲೋಕದಲ್ಲಿ ಮಾನ್ಯನಾಗುತ್ತಾನೆ. ಎಣ್ಣೆಯಿಂದ ಮೃದುವಾಗಿಯೂ, ಹಿತಕರವಾಗಿಯೂ ಇರುವ ಪಾದರಕ್ಷೆಯನ್ನು ದಾನಮಾಡಿದವನು ದೇಹವಿಯೋಗಾನಂತರ ಯಮಲೋಕದ ಮಾರ್ಗವನ್ನು ಸುಖದಿಂದ ದಾಟುತ್ತಾನೆ. ಹೇಸರಗತ್ತೆಗಳಿಂದ ಸುಸಜ್ಜಿತವಾಗಿರುವ ರಥವನ್ನು ದಾನಮಾಡಿದವನೂ ಯಮಲೋಕದ ಮಾರ್ಗವನ್ನು ಸುಖದಿಂದ ದಾಟಿ ಸ್ವರ್ಗವನ್ನೂ ಹೊಂದುತ್ತಾನೆ.

೮–೧೦. ಬೀಸಣಿಗೆಯನ್ನು ದಾನಮಾಡಿದವನೂ ಪಾಪಮೋಕ್ಷಹೊಂದುತ್ತಾನೆ. ಪಾದುಕೆಗಳ ದಾನದಿಂದ ಉತ್ತಮಗತಿಯನ್ನು ಹೊಂದುತ್ತಾನೆ. ಪಾದಪೀಠವನ್ನೂ, ದಂಡವನ್ನೂ ಬ್ರಾಹ್ಮಣನಿಗೆ ದಾನಮಾಡಿದವನು ಎಲ್ಲಾ ಕಡೆಯ

ಯಜ್ಞೋಪವೀತದಾನೇನ ವಸ್ತ್ರದಾನಫಲಂ ಲಭೇತ್ ।
ಉಷ್ಣೀಷದಾನಸ್ಯ ತಥಾ ಫಲಮೇತದುದಾಹೃತಂ ॥ ೧೦ ॥

ದಂತಕಾಷ್ಠಪ್ರದಾನೇನ ಸೌಭಾಗ್ಯಂ ಮಹದಾಪ್ನುಯಾತ್ ।
ಮೃತ್ತಿಕಾಯಾಃ ಪ್ರದಾನೇನ ಶುಚಿಃ ಸರ್ವತ್ರಜಾಯತೇ ॥ ೧೧ ॥

ಶೌಚಸ್ನಾನೋದಕಂ ದತ್ವಾ ವಿರೋಗಸ್ತ್ವಭಿಜಾಯತೇ ।
ರೋಗನಾಶಮವಾಪ್ನೋತಿ ತಥಾಭ್ಯಂಗಪ್ರದಃ ಸದಾ ॥ ೧೨ ॥

ತಥೈವೌಷಧದಾನೇನ ರೋಗನಾಶಮುಪಾಶ್ನುತೇ ।
ಸ್ನಾನೀಯಾನಿ ಸುಗಂಧೀನಿ ದತ್ವಾ ಸೌಭಾಗ್ಯಮಶ್ನುತೇ ॥ ೧೩ ॥

ಅನುಲೇಪನದಾನೇನ ರೂಪವಾನಭಿಜಾಯತೇ ।
ಕಾಯಾಗ್ನಿದೀಪ್ತಂ ಪ್ರಾಕಾಶ್ಯಂ ಗತಿಂ ಚೈವ ತಥೋತ್ತಮಾಂ ॥ ೧೪ ॥

ಯಸ್ತು ಸಂಸಾಧನಾರ್ಥಾಯ ಬ್ರಾಹ್ಮಣಾಯ ಪ್ರಯಚ್ಛತಿ ।
ಸ ಯಾತಿ ವಹ್ನಿಸಾಲೋಕ್ಯಂ ಶತ್ರುನಾಶಂ ಚ ವಿಂದತಿ ॥ ೧೫ ॥

ಲ್ಲಿಯೂ ಸುಖಕರವಾದ ಸ್ಥಾನವನ್ನು ಹೊಂದುತ್ತಾನೆ. ಯಜ್ಞೋಪವೀತ ದಾನದಿಂದಲೂ, ರುಮಾಲಿನ ದಾನದಿಂದಲೂ ವಸ್ತ್ರದಾನದ ಫಲವನ್ನೇ ಹೊಂದುತ್ತಾನೆ.

೧೧-೧೩. ದಂತಕಾಷ್ಠವನ್ನು ಬ್ರಾಹ್ಮಣನಿಗೆ ದಾನಮಾಡಿದವನು ಸೌಭಾಗ ಸಮೃದ್ಧಿಯನ್ನು ಹೊಂದುತ್ತಾನೆ. ಮೃತ್ತಿಕೆಯ ದಾನದಿಂದ ಸರ್ವತ್ರ ಶುಚಿಯಾಗಿ ಬದುಕುತ್ತಾನೆ. ಶುದ್ಧವಾದ ಸ್ನಾನೋದಕವನ್ನು ದಾನಮಾಡಿದವನು ಆರೋಗಿಯಾಗಿಯೇ ಜನಿಸುತ್ತಾನೆ. ಅಭ್ಯಂಗಪ್ರದಾನಮಾಡಿದವನು ಆರೋಗಿಯಾಗಿಯೇ ಜನಿಸುತ್ತಾನೆ. ಅಭ್ಯಂಗಪ್ರದಾನಮಾಡಿದವನೂ, ಔಷಧದಾನಮಾಡಿದವನೂ ಸಹ ರೋಗನಾಶವನ್ನು ಹೊಂದುತ್ತಾರೆ. ಸುಗಂಧವುಳ್ಳ ಸ್ನಾನಚೂರ್ಣವನ್ನು ದಾನ ಮಾಡಿದವನು ಸೌಭಾಗ್ಯಶಾಲಿಯಾಗುತ್ತಾನೆ.

೧೪-೧೫. ಗಂಧಾದಿ ಲೇಪನ ವಸ್ತುಗಳನ್ನು ದಾನಮಾಡಿದವನು ರೂಪವಂತವಾಗಿಯೂ, ಅಗ್ನಿಪಾಟವವುಳ್ಳವನಾಗಿಯೂ, ಪ್ರಸಿದ್ಧನಾಗಿಯೂ, ಉತ್ತಮ

ತೈಜಸಾನಿ ತು ಪಾತ್ರಾಣಿ ದತ್ವಾ ಸಲವಣಾನಿ ಚ ।
ಪಾತ್ರತಾಮೇತಿ ಕಾಮಾನಾಂ ಲಾವಣ್ಯಂ ಚಾಪ್ನುಯಾನ್ಮಹತ್ ॥ ೧೬ ॥

ತೈಜಸಾನಿ ತು ಪಾತ್ರಾಣಿ ಸತೈಲಾನಿ ಪ್ರಯಚ್ಛತಃ ।
ಆರೋಗ್ಯಮುತ್ತಮಂ ಪ್ರೋಕ್ತಂ ಲಾವಣ್ಯಮಪಿ ಚೋತ್ತಮಂ ॥ ೧೭ ॥

ತೈಜಸಾನಿ ತು ಪಾತ್ರಾಣಿ ಸಮಧೂನಿ ಪ್ರಯಚ್ಛತಃ ।
ಲಾವಣ್ಯಮುತ್ತಮಂ ಪ್ರೋಕ್ತಂ ಸೌಭಾಗ್ಯಮಪಿ ಚೋತ್ತಮಂ ॥ ೧೮ ॥

ನರಶ್ಚಂದನದಾನೇನ ಸರ್ವಪಾಪೈಃ ಪ್ರಮುಚ್ಯತೇ ।
ತಥೈವಾಗುರುದಾನೇನ ಯಶಸಾ ಭುವಿ ರಾಜತೇ ॥ ೧೯ ॥

ಸೌಭಾಗ್ಯಕಾರಕಂ ಪ್ರೋಕ್ತಂ ಪ್ರದಾನಂ ಕುಂಕುಮಸ್ಯ ತು ।
ತಥಾ ಕರ್ಪೂರದಾನೇನ ಸರ್ವಾನ್ಕಾಮಾನವಾಪ್ನುಯಾತ್ ॥ ೨೦ ॥

ಗತಿಶಾಲಿಯಾಗಿಯೂ ಆಗುತ್ತಾನೆ. ಯಾವನು ಬ್ರಾಹ್ಮಣನ ವ್ರತಸಾಧನೆಗಾಗಿ ಉಪಕರಣಗಳನ್ನು ದಾನಮಾಡುವನೋ ಅವನು ಶತ್ರುನಾಶಹೊಂದಿ ಅಗ್ನಿಯ ಸಾಲೋಕ್ಯವನ್ನೂ ಪಡೆಯುತ್ತಾನೆ.

೧೬–೧೮. ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ತೈಜಸಪಾತ್ರೆಗಳನ್ನು ಉಪ್ಪಿನೊಡನೆ ದಾನಮಾಡಿದಲ್ಲಿ ಅಂತಹ ದಾತೃವು ಎಲ್ಲಾ ಮನೋರಥಗಳಿಗೂ ಪಾತ್ರನಾಗಿಯೂ, ಲಾವಣ್ಯಶಾಲಿಯಾಗಿಯೂ ಆಗುತ್ತಾನೆ. ಇಂತಹ ಪಾತ್ರೆಗಳನ್ನು ಎಣ್ಣೆಯೊಡನೆ ದಾನಮಾಡಿದವನಿಗೆ ಆರೋಗ್ಯವೂ, ಲಾವಣ್ಯವೂ ಉಂಟಾಗುತ್ತದೆ. ಇಂತಹ ಪಾತ್ರೆಗಳನ್ನೇ ಜೇನಿನೊಡನೆ ದಾನಮಾಡಿದವನಿಗೆ ಉತ್ತಮವಾದ ಲಾವಣ್ಯವೂ, ಸೌಭಾಗ್ಯಸಮೃದ್ಧಿಯೂ ಉಂಟಾಗುತ್ತದೆ.

೧೯–೨೧. ಮನುಷ್ಯನು ಚಂದನವನ್ನು ದಾನಮಾಡಿದಲ್ಲಿ ಸರ್ವಪಾಪಮೋಕ್ಷವನ್ನೂ, ಅಗುರುದಾನದಿಂದ ಉತ್ತಮವಾದ ಯಶಸ್ಸನ್ನೂ ಸಹ ಹೊಂದು

---

1 ಇದು ಬೇರೆ ವಿಧವಾಗಿಯೂ ಅರ್ಥಕೊಡತಕ್ಕುದಾಗಿದೆ.

ಮೃಗಚರ್ಮಪ್ರದಾನೇನ ಯಶಸಾ ಭುವಿ ರಾಜತೇ ।
ದತ್ವಾ ಜಾತೀಫಲಂ ವಿಪ್ರಾಃ ಸಫಲಾಂ ವಿಂದತೇ ಕ್ರಿಯಾಂ ॥ ೨೧ ॥

ಸ್ನಾನಾನಾಂ ಮುಖವಾಸಾನಾಂ ಧೂಪಾನಾಂ ಚ ಪ್ರದಾಯಕಾಃ ।
ಲೋಕೇ ಪ್ರಯಾಂತಿ ಪ್ರಿಯತಾಂ ಭವಂತಿ ಚ ಸುಗಂಧಿನಃ ॥ ೨೨ ॥

ದತ್ವಾ ಪೂಗಫಲಾನ್ವಿಪ್ರಾಃ ಸಫಲಾಂ ವಿಂದತೇ ಕ್ರಿಯಾಂ ।
ತಾಂಬೂಲಸ್ಯ ಪ್ರದಾನೇನ ಸೌಭಾಗ್ಯಮಪಿ ವಿಂದತಿ ॥ ೨೩ ॥

ಸಮುದ್ರಜಾನಾಂ ಭಾಂಡಾನಾಂ ಶಂಖಾದೀನಾಂ ಪ್ರದಾಯಕಃ ।
ಪಾತ್ರೀ ಭವತಿ ಕಾಮಾನಾಂ ಯಶಸ್ವೀ ನ ಸಂಶಯಃ ॥ ೨೪ ॥

ಕಂಕತಸ್ಯ ಪ್ರದಾನೇನ ಪರಾಂ ವಾಚಂ ಪ್ರಮುಂಚತಿ ।
ಶಯ್ಯಾಪ್ರದಾನೋ ಲೋಕೇಷು ತಥಾ ಸ್ಥಾನಕರಂ ಪರಂ ॥ ೨೫ ॥

ತ್ತಾನೆ. ಕುಂಕುಮಕೇಸರಿಯದಾನವು ಸೌಭಾಗ್ಯಪ್ರದವೂ, ಪಚ್ಚಕರ್ಪೂರದಾನವು ಸರ್ವಮನೋರಥ ಪೂರಕವೂ ಆಗುತ್ತವೆ. ಕೃಷ್ಣಾಜಿನದ ದಾನವು ಯಶಸ್ಸನ್ನೂ, ಜಾಜೀಕಾಯಿನ ದಾನವು ಸಫಲಕ್ರಿಯೆಯನ್ನೂ ಉಂಟುಮಾಡುತ್ತವೆ.

೨೨–೨೪. ಸ್ನಾನೀಯ ಚೂರ್ಣಗಳನ್ನೂ ಬ್ರಾಹ್ಮಣರಿಗೆ ದಾನಮಾಡಿದವರು ಜನಪ್ರಿಯರಾಗಿಯೂ, ಸುಗಂಧಿಗಳಾಗಿಯೂ ಆಗುತ್ತಾರೆ. ಅಡಕೆಯ ಕಾಯನ್ನು ದಾನಮಾಡಿದವರು ಎಲ್ಲಾ ಕ್ರಿಯೆಯಲ್ಲಿಯೂ ಸಾಫಲ್ಯಹೊಂದುತ್ತಾರೆ. ತಾಂಬೂಲ ದಾನದಿಂದ ದಾತೃವು ಸೌಭಾಗ್ಯಶಾಲಿಯಾಗುತ್ತಾನೆ. ಸಮುದ್ರದಲ್ಲಿ ಸಿಕ್ಕುವ ಪಾತ್ರೆಗಳನ್ನೂ ಶಂಖವೇ ಮೊದಲಾದುವನ್ನೂ ದಾನಮಾಡುವವನು ಸರ್ವವಿಧವಾದ ಇಷ್ಟಾರ್ಥಗಳಿಗೂ ಪಾತ್ರನಾಗುತ್ತಾನೆ. ಯಶಸ್ವಿಯೂ ಆಗುತ್ತಾನೆ ಇದರಲ್ಲಿ ಸಂಶಯವಿಲ್ಲ.

೨೫–೨೭. ಬಾಚಣಿಗೆಯನ್ನು ದಾನಮಾಡಿದವನು ಬಹಳ ವಾಗ್ಮಿಯಾಗುತ್ತಾನೆ. ಶಯ್ಯಾದಾನಮಾಡಿದವನು ಲೋಕದಲ್ಲಿ ಉತ್ತಮಸ್ಥಾನವನ್ನು ಹೊಂದುತ್ತಾನೆ. ಯಾಚಕನಾದವನಿಗೆ ಯಾವುದು ಇಷ್ಟವೆಂದು ತಿಳಿದು ಬರುವುದೋ

ಅರ್ಥಿನೇ ಯದಭೀಷ್ಟಂ ಸ್ಯಾತ್ ಸ್ವಲ್ಪಂ ವಾ ಯದಿ ವಾ ಬಹು ।
ತದ್ದತ್ತ್ವಾ ಪುಣ್ಯಮಾಪ್ನೋತಿ ರಾಜಸೂಯಾಶ್ವಮೇಧಯೋಃ ॥ ೨೬ ॥

ಕಿಮಿಚ್ಛಕೈಃ ಪೂಜಕೈರ್ಬ್ರಾಹ್ಮಣಾನಾಂ
ಲೋಕಂ ಗತ್ವಾ ಬ್ರಹ್ಮಣೋ ಬ್ರಾಹ್ಮಣೇಭ್ಯಃ ।
ದೇವೈರ್ವಿಪ್ರೈಃ ಪೂಜ್ಯಮಾನಃ ಸುಖೀ
ಸ್ಯಾತ್ತಸ್ಮಾದ್ದೇಯಂ ಪ್ರಾರ್ಥಿತಂ ಬ್ರಾಹ್ಮಣೇಭ್ಯಃ ॥ ೨೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸ್ವನೇಕವಸ್ತುದಾನ ಪ್ರಶಂಸಾವರ್ಣನೋ ನಾಮೈಕಾದಶಾಧಿಕ ತ್ರಿಶತತಮೋಽಧ್ಯಾಯಃ

ಅಂತಹ ವಸ್ತುವನ್ನು ಸ್ವಲ್ಪವಾಗಿಯಾಗಲೀ ಹೆಚ್ಚಾಗಿಯಾಗಲೀ ಸಂತೋಷದಿಂದ ದಾನಮಾಡಿದವನು ರಾಜಸೂಯಾಶ್ವಮೇಧಯಾಗಗಳ ಪುಣ್ಯವನ್ನೂ ಗಳಿಸುತ್ತಾನೆ. ಬ್ರಾಹ್ಮಣರಿಗೆ ಏನುಬೇಕು ಎಂದು ಕೇಳಿ ಅವರನ್ನು ಪೂಜಿಸಿ ಇಷ್ಟವಾದುದನ್ನು ಕೊಟ್ಟು ಸಂತೋಷಪಡಿಸಿದ್ದೇ ಆದರೆ ಅಂತಹ ಮಹಾಪುರುಷನು ದೇವತೆಗಳಿಗೂ, ಬ್ರಾಹ್ಮಣರಿಗೂ ಪೂಜ್ಯನಾಗುತ್ತಾನೆ. ಆದುದರಿಂದ ಬ್ರಾಹ್ಮಣರಿಗೆ ಇಷ್ಟವಾದು ದನ್ನು ದಾನಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗ ಉಪದಿಷ್ಟವಾದ ಹಂಸಗೀತೆಯ ಅನೇಕವಸ್ತುದಾನಪ್ರಶಂಸಾವರ್ಣನವೆಂಬ ಮುನ್ನೂರ ಹನ್ನೊಂದನೆಯ ಅಧ್ಯಾಯ ಮುಗಿದುದು.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಾದಶಾಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ನೈವಾಹಾನ್ಪುರುಷೋ ಯಸ್ತು ದ್ವಿಜೇ ಸಮ್ಯಕ್ಪ್ರಯಚ್ಛತಿ ।
ಅಶ್ವಮೇಧಫಲಂ ತಸ್ಯ ಕಥಿತಂ ದ್ವಿಜಸತ್ತಮಾಃ ॥ ೧ ॥

ಶಿಬಿಕಾಯಾಃ ಪ್ರದಾನೇನ ವಹ್ನಿಷ್ಟೋಮಫಲಂ ತಥಾ ।
ದಾಸಂ ಕರ್ಮಕರಂ ದತ್ತ್ವಾ ಗೋಸವಸ್ಯ ಫಲಂ ಲಭೇತ್ ॥ ೨ ॥

ಸ ಯಾತಿ ಶಕ್ರಸಾಲೋಕ್ಯಂ ಯಸ್ತು ಯೋಧಂ ಪ್ರಯಚ್ಛತಿ ।
ಯಸ್ತು ಕರ್ಮಕರೀಂ ದಾಸೀಂ ಬ್ರಾಹ್ಮಣಾಯ ಪ್ರಯಚ್ಛತಿ ॥ ೩ ॥

ಮುನ್ನೂರ ಹನ್ನೆರಡನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಎಲೈ ಬ್ರಾಹ್ಮಣೋತ್ತಮರೇ, ಬ್ರಾಹ್ಮಣನಾದವನಿಗೆ ಕಷ್ಟಕಾಲದಲ್ಲಿ ಶವವಾಹಕರನ್ನು ಯಾವನು ಒದಗಿಸಿಕೊಡುತ್ತಾನೆಯೋ ಅವನಿಗೆ ಅಶ್ವಮೇಧಯಾಗದ ಫಲವೇ ಲಭಿಸುತ್ತದೆ. ಶವವನ್ನು ಒಯ್ಯಲು ಯೋಗ್ಯವಾದ ಯಾನವನ್ನು ಒದಗಿಸಿಕೊಟ್ಟವನು ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಸೇವಕರನ್ನೂ ಕೆಲಸಗಾರರನ್ನೂ ಉಚಿತವಾಗಿ ಒದಗಿಸಿಕೊಟ್ಟವನು ಗೋಯಾಗದ ಫಲವನ್ನು ಹೊಂದುತ್ತಾನೆ. ಯಾವನು ವಿಜಯಸಾಧನೆಗಾಗಿ ಯೋಧರನ್ನು ಒದಗಿಸಿಕೊಡುತ್ತಾನೆಯೋ ಅವನು ಇಂದ್ರನ ಸಾಲೋಕ್ಯವನ್ನು

ಲೋಕಾಸ್ತು ಸುಭಗಾಸ್ತಸ್ಯ ವಸೂನಾಂ ಸಮುದಾಹೃತಾಃ ।
ತರುಣೀಂ ರೂಪಸಂಪನ್ನಾಂ ದಾಸೀಂ ಯಸ್ತು ಪ್ರಯಚ್ಛತಿ ॥ ೪ ॥

ಸೋಽಪ್ಸರೋಭಿರ್ಮುದಾ ಯುಕ್ತಃ ಕ್ರೀಡತೇ ನಂದನೇ ವನೇ ।
ಉಷ್ಟ್ರಂ ವಾ ಗರ್ದಭಂ ವಿಪ್ರಾ ಯೋ ಯಚ್ಛತಿ ದ್ವಿಜಾತಯೇ ॥ ೫ ॥

ಅಲಕಾಂ ಸ ಸಮಾಸಾದ್ಯ ಯಕ್ಷೇಂದ್ರೈಃ ಸಹ ಮೋದತೇ ।
ದಾನಾನಾಮುತ್ತಮಂ ಪ್ರೋಕ್ತಂ ಪ್ರದಾನಂ ತುರಗಸ್ಯ ತು ॥ ೬ ॥

ವಡವಾಯಾಃ ಪ್ರದಾನೇನ ತಥಾ ಬಹುಫಲಂ ಸ್ಮೃತಂ ।
ತುರಂಗಂ ಯೇ ಪ್ರಯಚ್ಛಂತಿ ಸೂರ್ಯಲೋಕಂ ವ್ರಜಂತಿ ತೇ ॥ ೭ ॥

ಯಾವಂತಿ ತಸ್ಯ ರೋಮಾಣಿ ತಾವದ್ವರ್ಷಶತಾನಿ ಚ ।
ಶುಕ್ಲಂ ತುರಂಗಮಂ ದತ್ವಾ ಫಲಂ ದಶಗುಣಂ ಲಭೇತ್ ॥ ೮ ॥

ಗೌರ್ಯಥಾ ಕಪಿಲಾ ಶ್ರೇಷ್ಠಾ ತಥೈವ ತುರಗಸ್ಯ ತು ।
ತುರಂಗಮಂ ಸಪರ್ಯಾಣಂ ಸಾಲಂಕಾರಂ ಪ್ರಯಚ್ಛತಿ ॥ ೯ ॥

ಹೊಂದುತ್ತಾನೆ ಬ್ರಾಹ್ಮಣನಿಗೆ ಕೆಲಸಮಾಡುವ ಸೇವಕಿಯನ್ನು ಒದಗಿಸಿಕೊಟ್ಟವನು ರಮ್ಯವಾದ ವಸುಗಳ ಲೋಕವನ್ನೇ ಹೊಂದುತ್ತಾನೆ. ಸುರೂಪಿಣಿಯಾದ ತರುಣಿಯನ್ನು ದಾಸಿಯನ್ನಾಗಿ ಒದಗಿಸಿಕೊಟ್ಟವನು ಅಪ್ಸರಸ್ತ್ರೀಗಳೊಡನೆ ನಂದನ ವನದಲ್ಲಿ ಸಂತೋಷದಿಂದ ವಿಹರಿಸುತ್ತಾನೆ

೫-೮. ಒಂಟೆಯನ್ನಾಗಲಿ, ಕತ್ತೆಯನ್ನಾಗಲಿ ಯಾವನು ಬ್ರಾಹ್ಮಣನಿಗೆ ದಾನಮಾಡುತ್ತಾನೆಯೋ ಅವನು ಕುಬೇರನ ಅಲಕಾನಗರಿಗೆ ಹೋಗಿ ಯಕ್ಷರೊಡನೆ ಸಂತೋಷಪಡುತ್ತಾನೆ. ಎಲ್ಲಾ ದಾನಗಳಿಗಿಂತಲೂ ಕುದುರೆಯ ದಾನವು ಉತ್ತಮವಾದದ್ದು. ಅದರಲ್ಲೂ ಹೆಣ್ಣುಕುದುರೆಯ ದಾನವು ಬಹಳಮಟ್ಟಿಗೂ ಫಲಪ್ರದವಾಗುತ್ತದೆ ಕುದುರೆಯನ್ನು ದಾನಮಾಡಿದವರು ಸೂರ್ಯಲೋಕಹೊಂದುತ್ತಾರೆ. ಕುದುರೆಗೆ ಎಷ್ಟು ರೋಮಗಳಿವೆಯೋ ಅಷ್ಟು ಶತವರ್ಷಗಳು ಅಲ್ಲಿರುತ್ತಾರೆ. ಬಿಳುಪಾದ ಕುದುರೆಯ ದಾನವು ಇದಕ್ಕಿಂತಲೂ ಹತ್ತರಷ್ಟು ಫಲಪ್ರದವಾಗುತ್ತದೆ.

೯-೧೨. ಹಸುಗಳಲ್ಲಿ ಕಪಿಲಗೋವು ಹೇಗೆ ಶ್ರೇಷ್ಠವೋ ಹಾಗೆಯೇ ಕುದುರೆಗಳಲ್ಲಿ ಬಿಳಿಯ ಕುದುರೆ ಪ್ರಶಸ್ತ. ಕುದುರೆಯನ್ನು ಅಲಂಕರಿಸಿ ಜೀನಿನೊಡನೆ

ಪುಂಡರೀಕಫಲಂ ಪ್ರೋಕ್ತಂ ನಾತ್ರ ಕಾರ್ಯಾ ವಿಚಾರಣಾ ।
ಚತುರ್ಭಿಸ್ತುರಗೈರ್ಯುಕ್ತಂ ಸರ್ವೋಪಕರಣೈರ್ವೃತಂ ॥ ೧೦ ॥

ರಥಂ ದ್ವಿಜಾಯ ದತ್ವಾ ರಾಜಸೂಯಫಲಂ ಲಭೇತ್ ।
ಪ್ರದಾಯ ಕರಿಣೀಂ ಸಮ್ಯಗೇತದೇವ ಫಲಂ ಲಭೇತ್ ॥ ೧೧ ॥

ಕುಂಜರಸ್ಯ ಪ್ರದಾನೇನ ಸ್ವರ್ಗಲೋಕೇ ಮಹೀಯತೇ ।
ರಾಜಾ ಭವತಿ ಲೋಕೇಽಸ್ಮಿನ್ಯಶೋವಿಕ್ರಮಸಂಯುತಃ ॥ ೧೨ ॥

ಸುವರ್ಣಕಕ್ಷ್ಯಂ ಮಾತಂಗಂ ದತ್ವಾ ವಿಪ್ರಾಯ ವೈ ದ್ವಿಜಾಃ ।
ರಾಜಸೂಯಾಶ್ವಮೇಧಾಭ್ಯಾಂ ಫಲಂ ವಿಂದ್ಯತ್ಯಸಂಶಯಂ ॥ ೧೩ ॥

ಚತುರ್ಭಿಃ ಕುಂಜರೈರ್ಯುಕ್ತಂ ರಥಂ ದತ್ವಾ ದ್ವಿಜಾತಯೇ ।
ಸಮಗ್ರಭೂಮಿದಾನಸ್ಯ ಫಲಂ ಪ್ರಾಪ್ನೋತ್ಯಸಂಶಯಂ ॥ ೧೪ ॥

ದಾನಮಾಡಿದವನು ಪೌಂಡರೀಕಯಾಗದ ಫಲವನ್ನು ನಿಸ್ಸಂಶಯವಾಗಿಯೂ ಹೊಂದುತ್ತಾನೆ. ನಾಲ್ಕು ಕುದುರೆಗಳಿಂದ ಸಜ್ಜುಗೊಳಿಸಿ ಅಲಂಕರಿಸಿದ ರಥವನ್ನು ಎಲ್ಲಾ ಉಪಕರಣಗಳೊಡನೆ ಬ್ರಾಹ್ಮಣನಿಗೆ ದಾನಮಾಡಿದವನು ರಾಜಸೂಯ ಯಾಗದ ಫಲವನ್ನೇ ಹೊಂದುತ್ತಾನೆ ಆನೆಯನ್ನೂ ಇದೇರೀತಿ ದಾನಮಾಡಿದವನೂ ಈ ಫಲವನ್ನು ಹೊಂದುತ್ತಾನೆ. ಆನೆಯನ್ನು ದಾನಮಾಡಿದವನು ಸ್ವರ್ಗದಲ್ಲಿಯೂ ಪೂಜ್ಯನಾಗಿದ್ದು ಅನಂತರ ಯಶಸ್ಸಿನಿಂದಲೂ ಪರಾಕ್ರಮದಿಂದಲೂ ಕೂಡಿದ ರಾಜನಾಗಿ ಭೂಮಿಯಲ್ಲಿ ಜನಿಸುತ್ತಾನೆ.

೧೩–೧೪. ಸುವರ್ಣದ ಆಭರಣದಿಂದ ಕೂಡಿದ ಆನೆಯನ್ನು ಬ್ರಾಹ್ಮಣನಿಗೆ ದಾನಮಾಡಿದವನು ರಾಜಸೂಯಾಶ್ವಮೇಧಗಳ ಫಲವನ್ನು ನಿಯತವಾಗಿ ಹೊಂದುತ್ತಾನೆ. ನಾಲ್ಕು ಆನೆಗಳಿಂದ ಕೂಡಿದ ರಥವನ್ನು ಬ್ರಾಹ್ಮಣನಿಗೆ ದಾನಮಾಡಿದವನು ಸಮಸ್ತಭೂಮಂಡಲದಾನದ ಫಲವನ್ನೇ ಹೊಂದುತ್ತಾನೆ. ಇದು ನಿಶ್ಚಯ ಇಂತಹ ಪಶು ಪರ್ವತಗಳಿಂದಲೂ, ವನಗಳಿಂದಲೂ, ಜಲಾಶಯಗಳಿಂದಲೂ ಕೂಡಿರುವ

ಭೂಮಿಃ ಸಶೈಲಾ ಸವನಾ ಸತೋಯಾ
ದತ್ತಾ ಹಿ ಲೋಕೇ ಭವತೀಹ ತೇನ ।
ಇಷ್ಟಾಂಶ್ಚ ಲೋಕಾನ್ಸ್ಪುರುಷಃ ಪ್ರಯಾತಿ
ಸಂಪೂಜ್ಯಮಾನಸ್ತ್ರಿದಶೈರ್ಮಹಾತ್ಮಾ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವಹನದಾನವಿಧಿ ವರ್ಣನೋ ನಾಮ ದ್ವಾದಶಾಧಿಕ ತ್ರಿಶತತಮೋಽಧ್ಯಾಯಃ

ಸಮಗ್ರಭೂಮಿಯನ್ನೇ ದಾನಮಾಡಿದಂತಾಗುತ್ತದೆ. ಇಂತಹ ಮಹಾಪುರುಷನು ದೇವತೆಗಳಿಂದಲೂ ಪೂಜಿಸಲ್ಪಡುತ್ತಾ ತನಗೆ ಇಷ್ಟವಾದ ಲೋಕಗಳನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ವಾಹನ ದಾನವಿಧಿವರ್ಣನವೆಂಬ ಮುನ್ನೂರ ಹನ್ನೆರಡನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಯೋದಶಾಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ದಾನಾನಾಮುತ್ತಮಂ ಲೋಕೇ ವಸ್ತ್ರದಾನಂ ಪ್ರಕೀರ್ತಿತಂ ।
ವಾಸೋ ಹಿ ಸರ್ವದೈವತ್ಯಂ ಸರ್ವಪ್ರಾಯೋಜ್ಯಮಶ್ನುತೇ ॥ ೧ ॥

ವಸ್ತ್ರದಾತಾ ಸುವೇಷಃ ಸ್ಯಾದ್ರೂಪದ್ರವಿಣಸಂಯುತಃ ।
ಯುಕ್ತೋ ಲಾವಣ್ಯಸೌಭಾಗ್ಯೈರ್ನಿರೋಗಶ್ಚ ತಥಾ ದ್ವಿಜಾಃ ॥ ೨ ॥

ನೀಲಂ ರಕ್ತಂ ತಥಾ ಜೀರ್ಣಂ ನ ದೇಯಂ ಬ್ರಾಹ್ಮಣಸ್ಯ ತು ।
ದೇಯಂ ವರಂ ಚಾಂಗಿರಸಂ ಕ್ಷೌಮಂ ದತ್ತ್ವಾ ಬೃಹಸ್ಪತೇಃ ॥ ೩ ॥

ಮುನ್ನೂರ ಹದಿಮೂರನೆಯ ಅಧ್ಯಾಯ

೧-೪ ಹಂಸವು ಹೇಳುತ್ತದೆ :—ವಸ್ತ್ರದಾನವು ದಾನಗಳಲ್ಲಿ ಉತ್ತಮವಾದದ್ದು. ಸರ್ವದೇವತಾಕವಾದ ಈ ವಸ್ತ್ರದಾನವು ಸರ್ವೋಪಯೋಗಿಯಾದದ್ದು ಎಲೈ ದ್ವಿಜವರ್ಯರೇ, ವಸ್ತ್ರವನ್ನು ದಾನಮಾಡಿದವನು ಸುವೇಷನಾಗಿಯೂ ರೂಪ ಐಶ್ವರ್ಯ ಇವುಗಳಿಂದ ಕೂಡಿ ಅರೋಗನಾಗಿ ಲಾವಣ್ಯ ಸೌಭಾಗ್ಯಗಳನ್ನು ಹೊಂದಿ ಸುಖಿಯಾಗುತ್ತಾನೆ ನೀಲವಸ್ತ್ರವನ್ನೂ ರಕ್ತವಸ್ತ್ರವನ್ನೂ ಹರಿದುಹೋದ ಜೀರ್ಣ ವಸ್ತ್ರವನ್ನೂ ಬ್ರಾಹ್ಮಣನಿಗೆ ದಾನಮಾಡಬಾರದು. ಒಳ್ಳೆಯ ವಸ್ತ್ರವನ್ನೇ ದಾನಮಾಡಬೇಕು. ಅಂಗಿರಸದೇವತಾಕವಾದ ಪಟ್ಟೆವಸ್ತ್ರವನ್ನು ದಾನಮಾಡಿದವನು ಬೃಹಸ್ಪತಿ

ದತ್ವಾ ಕಾರ್ಪಾಸಿಕಂ ವಸ್ತ್ರಂ ಸ್ವರ್ಗಲೋಕೇ ಮಹೀಯತೇ ।
ದತ್ವಾ ಸರೋಮಂ ತದಪಿ ಫಲಂ ದಶಗುಣಂ ಭವೇತ್ ॥ ೪ ॥

ಆವಿಕಂ ವಸನಂ ದತ್ವಾ ಭೃಗೂಣಾಂ ಲೋಕಮಾಪ್ನುಯಾತ್ ।
ಛಾಗಂ ದತ್ವಾ ಚಾಂಗಿರಸಂ ಕ್ಷೌಮಂ ದತ್ವಾ ಬೃಹಸ್ಪತೇಃ ॥ ೫ ॥

ವಸೂನಾಂ ಲೋಕಮಾಪ್ನೋತಿ ಕುಶಕೌಶೇಯವಾಸಸೀ ।
ಕ್ರಿಮಿಜಂ ಚ ತಥೋ ದತ್ವಾ ಸೋಮಲೋಕೇ ಮಹೀಯತೆ ॥ ೬ ॥

ಅಗ್ನಿಷ್ಟೋಮಮವಾಪ್ನೋತಿ ದತ್ತ್ವೈವ ಮೃಗಲೋಮಿಕಾಂ ।
ದತ್ವಾ ವಲ್ಕಲಜಂ ವಾಸೋ ವಸೂನಾಂ ಲೋಕಮಾಪ್ನುಯಾತ್ ॥ ೭ ॥

ಸುಮೇರಕದಲ್ಯಾದೀನಾಂ ದತ್ವಾ ಚೈವ ತಥಾಜಿನಂ ।
ವಾರವಾಣಂ ಶಿರಸ್ತ್ರಾಣಂ ಹಸ್ತತ್ರಾಣಂ ತಥೈವ ಚ ॥ ೮ ॥

ಯಲೋಕವನ್ನೂ, ನೂಲಿನವಸ್ತ್ರವನ್ನು ದಾನಮಾಡಿದವನು ಸ್ವರ್ಗಲೋಕವನ್ನೂ ಹೊಂದುತ್ತಾರೆ. ಅದರಲ್ಲೂ ರೋಮಗಳಿಂದ ಕೂಡಿದ ವಸ್ತ್ರದಾನಕ್ಕೆ ಫಲವು ಹತ್ತರಷ್ಟು ಹೆಚ್ಚಾಗಿದೆ.

೫-೭ ಉಣ್ಣೆಯ ವಸ್ತ್ರದಾನದಿಂದ ಭೃಗುಲೋಕವು ಲಭಿಸುತ್ತದೆ. ಆಡಿನ ರೋಮದಿಂದುಂಟಾದ ವಸ್ತ್ರದ ದಾನದಿಂದ ಆಂಗೀರಸಲೋಕವೂ ಪಟ್ಟೆಯ ವಸ್ತ್ರದ ದಾನದಿಂದ ಬೃಹಸ್ಪತಿಯ ಲೋಕವೂ ಲಭಿಸುತ್ತದೆ. ನಾರುಮಡಿಗಳ ದಾನದಿಂದ ವಸುಗಳ ಲೋಕವನ್ನೂ, ಕ್ರಿಮಿಗಳಿಂದುಂಟಾದ (ರೇಷ್ಮೆ) ವಸ್ತ್ರಗಳನ್ನು ದಾನ ಮಾಡುವುದರಿಂದ ಸೋಮಲೋಕವನ್ನೂ ಹೊಂದುತ್ತಾನೆ. ಕೃಷ್ಣಮೃಗದ ರೋಮಗಳಿಂದುಂಟಾದ ವಸ್ತ್ರವನ್ನು ದಾನಮಾಡಿದವನು ಅಗ್ನಿಷ್ಟೋಮದ ಫಲವನ್ನೂ, ನಾರುಮಡಿಗಳ ದಾನಮಾಡಿದವನು ವಸುಗಳ ಲೋಕವನ್ನೂ ಹೊಂದುತ್ತಾರೆ.

೮-೧೨. ಕದಲೀ ಮೊದಲಾದ (ಜಿಂಕೆಯ ಭೇದಗಳು) ಮೃಗಗಳ ಚರ್ಮಗಳನ್ನೂ ಅವುಗಳಿಂದ ಮಾಡಲ್ಪಟ್ಟ ಕವಚ, ಶಿರೋರಕ್ಷೆ, ಕೈಚೀಲ, ಕಾಲುಚೀಲ,

ಸಾದಶ್ರಾಣಂ ಚ ದದತಃ ಪೃಥಗೇವಫಲಂ ಸ್ಮೃತಂ ।
ವಸ್ತ್ರದಾನಂ ಪವಿತ್ರಂ ತು ಪಿತ್ರೂಣಾಮಪಿ ತಾರಣಂ ॥ ೯ ॥

ಕೌಸುಂಭರಕ್ತಂ ದತ್ವಾತು ಸೌಭಾಗ್ಯಂ ಮಹದಾಪ್ನುಯಾತ್ ।
ದಾನಾತ್ಕುಂಕುಮರಕ್ತಸ್ಯ ಲಾವಣ್ಯಂ ಮಹದಾಪ್ನುಯಾತ್ ॥ ೧೦ ॥

ರಂಗೈರನ್ಯೈರನೀಲೈಶ್ಚ ರಕ್ತಂ ದತ್ವಾ ಸುಖೀ ಭವೇತ್ ।
ಯಥಾಯಥಾ ತು ವಸ್ತ್ರಸ್ಯ ಭವತೀಹ ಮಹಾರ್ಘತಾ ॥ ೧೧ ॥

ಯಥಾಯಥಾ ಶುಭ್ರತಾ ಚ ತಥಾ ಪುಣ್ಯಫಲಂ ಲಭೇತ್ ।
ಅನ್ಯೇಷಾಮಪಿ ದಾನಾನಾಮೇತದೇವ ಪ್ರಕೀರ್ತಿತಂ ॥ ೧೨ ॥

ಸರ್ವದೋ ವಸ್ತ್ರದಃ ಪ್ರೋಕ್ತೋ ಯತಃ ಸರ್ವತ್ರ ವಸ್ತ್ರವಾನ್ ।
ಪೂಜಾಮಾಪ್ನೋತಿ ಧರ್ಮಜ್ಞಾಸ್ತದ್ಧಿ ತಸ್ಮಾದ್ವಿಶಿಷ್ಯತೇ ॥ ೧೩ ॥

ವಸ್ತ್ರದಃ ಸುಚಿರಂ ಕಾಲಂ ಭುಕ್ತ್ವಾ ದೇವಸುಖಾನ್ದಿವಿ ।
ವಿಮಾನೇನಾರ್ಕವರ್ಣೇನ ಹಂಸಯುಕ್ತೇನ ಭಾಸ್ವತಾ ॥ ೧೪ ॥

ಇವುಗಳನ್ನು ದಾನಮಾಡುವವನಿಗೆ ಬೇರೆಬೇರೆ ಮಹಾಫಲಗಳು ಹೇಳಲ್ಪಟ್ಟಿವೆ. ವಸ್ತ್ರದಾನವು ಪಾವನ ಹಾಗೂ ಪಿತೃಗಳಿಗೂ ತಾರಕವಾಗುತ್ತದೆ. ಕುಸುಂಬೆಯಂತೆ ಕೆಂಪಾಗಿರುವ ವಸ್ತ್ರವನ್ನು ದಾನಮಾಡಿದವನು ಸೌಭಾಗ್ಯಶಾಲಿಯಾಗುತ್ತಾನೆ. ಕುಂಕುಮಕೇಸರಿಯಂತಹ ವಸ್ತ್ರದ ದಾನದಿಂದ ಬಹು ಲಾವಣ್ಯಶಾಲಿಯಾಗುತ್ತಾನೆ. ನೀಲಹೊರತು ಇತರ ಬಣ್ಣಗಳಿಂದ ಕೂಡಿರುವ ರಕ್ತವಸ್ತ್ರದ ದಾನದಿಂದ ಸುಖಿಯಾಗಿ ಬದುಕುತ್ತಾನೆ. ದಾನಕೊಡಲಾಗುವ, ಆಯಾಯ ವಸ್ತ್ರಗಳ ಮೇಲ್ಮೆಗೂ, ಶುಭ್ರತೆಗೂ ತಕ್ಕಂತೆ ದಾನದಿಂದುಂಟಾದ ಪುಣ್ಯಫಲವೂ ತಾರತಮ್ಯ ಹೊಂದುತ್ತದೆ. ಇತರ ದಾನಗಳಿಗೂ ಈ ಕ್ರಮವು ಅನ್ವಯಿಸುತ್ತದೆ.

೧೩-೧೫. ಎಲ್ಲರೂ ವಸ್ತ್ರಾಪೇಕ್ಷಿಗಳಾದುದರಿಂದ ವಸ್ತ್ರದಾನ ಮಾಡಿದವನು ಸರ್ವದಾನ ಮಾಡಿದವನಂತೆಯೇ ಆಗುತ್ತಾನೆ. ಆದುದರಿಂದ ಎಲ್ಲಾ ಕಡೆಯಲ್ಲಿಯೂ ಅವನಿಗೆ ಪೂಜ್ಯತೆಯುಂಟು. ಇತರರಿಗಿಂತ ಇವನಲ್ಲಿ ಈ ಸರ್ವಪೂಜ್ಯತೆಯೇ ವಿಶೇಷ. ವಸ್ತ್ರದಾನಮಾಡಿದವನು ಸೂರ್ಯನಂತೆ ಜ್ವಲಿಸುವ ಹಂಸವಿಮಾನದಿಂದ

ಮಾನುಷ್ಯಮಾಸಾದ್ಯ ಭವತ್ಯರೋಗಃ
ಶೌಚಾನ್ವಿತಃ ಸೌಖ್ಯಪರೋ ವಿನೀತಃ ।
ಜನಾಭಿರಾಮಶ್ಚ ತಥಾ ಸುವೇಶಃ
ಪೂಜ್ಯಶ್ಚ ಲೋಕೇ ವಿದುಷಾಂ ಸದೈವ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವಸ್ತ್ರದಾನ
ಪ್ರಶಂಸಾವರ್ಣನೋ ನಾಮ
ತ್ರಯೋದಶಾಧಿಕತ್ರಿಶತತಮೋಽಧ್ಯಾಯಃ

ಸ್ವರ್ಗವನ್ನು ಹೊಂದಿ ಬಹುಕಾಲ ಅಲ್ಲಿ ಸುಖವನ್ನನುಭವಿಸಿ ಮನುಷ್ಯನಾಗಿ ಜನಿಸುವಾಗಲೂ, ಅರೋಗನಾಗಿಯೂ, ಶುಚಿಯಾಗಿಯೂ, ವಿನೀತನಾಗಿಯೂ, ಸುರೂಪನಾಗಿಯೂ ಇದ್ದು ಪಂಡಿತರಿಂದಲೂ ಪೂಜಿಸಲ್ಪಡುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ವಸ್ತ್ರದಾನಪ್ರಶಂಸಾವರ್ಣನವೆಂಬ ಮುನ್ನೂರ
ಹದಿಮೂರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುರ್ದಶೋತ್ತರ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಧಾನ್ಯಾನಾಮುತ್ತಮಂ ದಾನಂ ಕಥಿತಂ ದ್ವಿಜಪುಂಗವಾಃ ।
ಧಾನ್ಯೇಭ್ಯೋಽಪಿ ಪರಂ ಧಾನ್ಯಂ ರಕ್ತಶಾಲಿಃ ಪ್ರಕೀರ್ತಿತಃ ॥ ೧ ॥

ರಕ್ತಶಾಲಿಂ ನರೋ ದತ್ವಾ ಸೂರ್ಯಲೋಕೇ ಮಹೀಯತೇ ।
ದತ್ವಾ ತಥಾ ಸುಗಂಧಾಂಶ್ಚ ಗಂಧರ್ವೈಃ ಸಹ ಮೋದತೇ ॥ ೨ ॥

ಕಲಮಾನಾಂ ಪ್ರದಾನೇನ ಶಕ್ರಲೋಕೇ ಮಹೀಯತೇ ।
ಮಹಾಶಾಲೇಃ ಪ್ರದಾನೇನ ವಸೂನಾಂ ಲೋಕಮಾಪ್ನುಯಾತ್ ॥ ೩ ॥

ಮುನ್ನೂರ ಹದಿನಾಲ್ಕನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ದ್ವಿಜವರ್ಯರೇ ಧಾನ್ಯದಾನವೂ ಉತ್ತಮ ದಾನವೆಂದು ಹೇಳಲ್ಪಟ್ಟಿದೆ. ಅಂತಹ ಧಾನ್ಯಗಳಲ್ಲಿಯೂ ಕೆಂಪಾದ ಭತ್ತವು ಉತ್ಕೃಷ್ಟ. ಅಂತಹ ಕೆಂಪು ಭತ್ತವನ್ನು ದಾನಮಾಡಿದವನು ಸೂರ್ಯಲೋಕದಲ್ಲಿ ಮಾನ್ಯನಾಗುತ್ತಾನೆ. ಅದರಲ್ಲಿಯೂ ಸುಗಂಧವುಳ್ಳ ಅಂತಹ ಭತ್ತದ ದಾನದಿಂದ ಗಂಧರ್ವರೊಡನೆ ಸುಖಿಸುತ್ತಾನೆ. ಸಾಮಾನ್ಯವಾದ ಭತ್ತದದಾನದಿಂದ ಇಂದ್ರಲೋಕದಲ್ಲಿ ಪೂಜ್ಯನಾಗುತ್ತಾನೆ. ಮಹಾಶಾಲಿ ಎಂಬ ಭತ್ತದ ದಾನದಿಂದ ವಸುಗಳ ಲೋಕವೇ ಪ್ರಾಪ್ತ

ಕಾಷ್ಠಶಾಲಿಂ ತಥಾ ದತ್ತ್ವಾ ಅಲಕಾಯಾಂ ಪ್ರಸೀದತಿ ।
ವ್ರೀಹೀಣಾಂ ಚಾನ್ಯಧಾನ್ಯಾನಾಂ ದಾನಾತ್ಸ್ವರ್ಗಮವಾಪ್ನುಯಾತ್ ॥ ೪ ॥

ಯವಪ್ರದಾನೇನ ನರಃ ಶಕ್ರಲೋಕೇ ಮಹೀಯತೇ ।
ತಥಾ ಗೋಧೂಮದಾನೇನ ವಸೂನಾಂ ಲೋಕಮಾಪ್ನುಯಾತ್ ॥ ೫ ॥

ಪ್ರಿಯೋ ಭವತಿ ಲೋಕಸ್ಯ ಪ್ರಿಯಂಗುಂ ಯಃ ಪ್ರಯಚ್ಛತಿ ।
ದದಾತಿ ಯಸ್ತು ಶ್ಯಾಮಾಕಂ ತಸ್ಯ ಪ್ರೀಯಂತಿ ದೇವತಾಃ ॥ ೬ ॥

ಅನ್ಯೇಷಾಂ ಶೂಕಧಾನ್ಯಾನಾಂ ಪ್ರದಾನಾಭಿರತೋ ನರಃ ।
ಸ್ವರ್ಗಲೋಕಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೭ ॥

ಮುದ್ಗದಃ ಶಕ್ರಲೋಕಂ ತು ಯಮಲೋಕಂ ತು ಮಾಷದಃ ।
ಯಥೇಷ್ಟಂ ಲೋಕಮಾಪ್ನೋತಿ ತಥಾ ವಿಪ್ರಾಸ್ತಿಲಪ್ರದಃ ॥ ೮ ॥

ಷಷ್ಟಿಕಾನಾಂ ಪ್ರದಾನೇನ ಲೋಕಂ ನೈರ್ಋತಿಕಂ ಲಭೇತ್ ।
ಸತೀನಚಣಕಂ ದತ್ತ್ವಾ ಲೋಕಂ ವಾರುಣಮಾಪ್ನುಯಾತ್ ॥ ೯ ॥

ವಾಗುತ್ತದೆ. ಕಡ್ಡೀಭತ್ತದ ದಾನದಿಂದ ಕುಬೇರನ ಅಲಕಾನಗರದಲ್ಲಿ ಸುಖಿಯಾಗುತ್ತಾನೆ. ಭತ್ತ ಮತ್ತು ಇತರ ಧಾನ್ಯಗಳ ದಾನದಿಂದ ಸ್ವರ್ಗಪ್ರಾಪ್ತಿಯುಂಟಾಗುತ್ತದೆ.

೫-೮ ಯವಧಾನ್ಯದ ದಾನದಿಂದ ಇಂದ್ರಲೋಕದಲ್ಲಿ ಪೂಜ್ಯನಾಗುತ್ತಾನೆ. ಹಾಗೆಯೇ ಗೋಧಿಯ ದಾನದಿಂದ ವಸುಗಳ ಲೋಕವು ಪ್ರಾಪ್ತವಾಗುತ್ತದೆ. ಪ್ರಿಯಂಗು (ತಡಗಣಿ) ವಿನ ದಾನದಿಂದ ಜನಪ್ರಿಯನಾಗುತ್ತಾನೆ. ಸಾಮೆಯ ದಾನದಿಂದ ದೇವತೆಗಳು ಪ್ರೀತಿಹೊಂದುತ್ತಾರೆ. ಇತರ ಮುಳ್ಳುಧಾನ್ಯಗಳ ದಾನದಿಂದ ಸ್ವರ್ಗಲೋಕವನ್ನೇ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಹೆಸರನ್ನು ದಾನಮಾಡಿದವನು ಯಮನ ಲೋಕವನ್ನೂ ಎಳ್ಳನ್ನು ದಾನಮಾಡಿದವನು ತನಗೆ ಇಷ್ಟವಾದ ಲೋಕವನ್ನೂ ಸಹ ಹೊಂದುತ್ತಾರೆ.

೯-೧೦. ಅರವತ್ತು ದಿನಗಳಲ್ಲಿ ಫಲಿಸುವ ಯವವೇ ಮೊದಲಾದ ಧಾನ್ಯಗಳ ದಾನದಿಂದ ನಿಋತಿಯ ಲೋಕವು ಲಭಿಸುತ್ತದೆ. ನೆಲಗಡಲೆ, ಕಡಲೆ, ಇವುಗಳ ದಾನದಿಂದ ವರುಣಲೋಕವು ಲಭಿಸುತ್ತದೆ. ಕಾಡುಕಡಲೆ ಮತ್ತು ದಪ್ಪ ಉದ್ದು

ವಾಯವ್ಯಂ ಚ ಮಸೂರಾಣಿ ರಾಜಮಾಷಾಣಿ ಧಾನದಂ ।
ಅನ್ಯೇಷಾಂ ಶಿಂಬಿಧಾನ್ಯಾನಾಂ ದಾನಾತ್ಸ್ವರ್ಗಮವಾಪ್ನುಯಾತ್ ॥ ೧೦ ॥

ಇಕ್ಷುಮೃದ್ವೀಕಯೋರ್ದಾನಾತ್ಪರಂ ಸೌಭಾಗ್ಯಮಾಪ್ನುಯಾತ್ ।
ಗುಡಪ್ರದಸ್ತಥಾರೋಗ್ಯಂ ಸಿತಾದಃ ಕಾಮಮೀಪ್ಸಿತಂ ॥ ೧೧ ॥

ಫಾಣಿತಸ್ಯ ಪ್ರದಾನೇನ ಪರಾಂ ತೃಪ್ತಿಮವಾಪ್ನುಯಾತ್ ।
ಖಂಡಪ್ರದಶ್ಚ ಸೌಭಾಗ್ಯಂ ಸರ್ವಾನ್ಕಾಮಾನ್ಮಧುಪ್ರದಃ ॥ ೧೨ ॥

ಘೃತದೋ ಜೀವಿತಂ ದೀರ್ಘಂ ಚಾರೋಗ್ಯಂ ತೈಲದಸ್ತಥಾ ।
ಸರ್ವಾನ್ಕಾಮಾನವಾಪ್ನೋತಿ ಲವಣಂ ಯಃ ಪ್ರಯಚ್ಛತಿ ॥ ೧೩ ॥

ಸಕ್ತುದಸ್ತೃಪ್ತಿಮಾಪ್ನೋತಿ ಸಿಕತಾದಸ್ತಥಾ ಶ್ರಿಯಂ ।
ಅಕೀರ್ತಿತಾನಾಮನ್ಯೇಷಾಂ ದಾನಾತ್ಸ್ವರ್ಗಮವಾಪ್ನುಯಾತ್ ॥ ೧೪ ॥

ಇವುಗಳ ದಾನದಿಂದ ಕ್ರಮವಾಗಿ ವಾಯುವ್ಯಲೋಕವೂ ಕುಬೇರನ ಲೋಕವೂ ಲಭಿಸುತ್ತದೆ. ಇತರ ಸಿಪ್ಪೆಯುಳ್ಳ ಧಾನ್ಯಗಳ ದಾನದಿಂದ ಸ್ವರ್ಗವುಂಟಾಗುತ್ತದೆ.

೧೧-೧೪. ಕಬ್ಬು, ದ್ರಾಕ್ಷಿ ಇವುಗಳ ದಾನದಿಂದ ದಾತೃವು ಸೌಭಾಗ ಹೊಂದುತ್ತಾನೆ. ಹಾಗೆಯೇ ಬೆಲ್ಲವನ್ನು ದಾನಮಾಡಿದವನು ಆರೋಗ್ಯವನ್ನೂ ಸಕ್ಕರೆಯನ್ನು ದಾನಮಾಡಿದವನು ಇಷ್ಟಾರ್ಥವನ್ನೂ ಹೊಂದುತ್ತಾನೆ. ಕಾಕಂಬಿ (ಅಥವಾ ಬೆಲ್ಲದಿಂದ ಮಾಡಿದ ದ್ರವದ್ರವ್ಯ) ಯ ದಾನದಿಂದ ಮನಃಪ್ರೀತಿಯನ್ನೂ ಕಲ್ಲುಸಕ್ಕರೆಯನ್ನು ದಾನಮಾಡಿದವನು ಸೌಭಾಗ್ಯವನ್ನೂ ಜೇನನ್ನು ದಾನಮಾಡಿದವನು ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾರೆ. ತುಪ್ಪವನ್ನು ದಾನಮಾಡಿದವನು ದೀರ್ಘವಾದ ಆಯುಸ್ಸನ್ನೂ ಎಣ್ಣೆಯನ್ನು ದಾನಮಾಡಿದವನು ಆರೋಗ್ಯವನ್ನೂ ಹೊಂದುತ್ತಾರೆ. ಉಪ್ಪನ್ನು ದಾನಮಾಡಿದವನು ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾನೆ. ಹುರಿಟ್ಟನ್ನು ದಾನಮಾಡಿದವನು ತೃಪ್ತಿಯನ್ನೂ ಪುಡಿಸಕ್ಕರೆಯನ್ನು ದಾನಮಾಡಿದವನು ಸಂಪತ್ತನ್ನೂ ಹೊಂದುತ್ತಾರೆ. ಇಲ್ಲಿ ಹೇಳದಿರುವ ಇತರ ಪದಾರ್ಥಗಳ ದಾನಕ್ಕೆ ಸ್ವರ್ಗಪ್ರಾಪ್ತಿಯೇ ಫಲ.

ಪಕ್ವಾನ್ನದಾನಾತ್ಫಲದಂ ನೃಲೋಕೇ
ಶುಷ್ಕಾನ್ನಮುಕ್ತಂ ಹಿ ತದಾಪ್ಯ ಯಸ್ಮಾತ್ ।
ಯಜಂತಿ ಯಜ್ಞೈಃ ಸತತಂ ದ್ವಿಜೇಂದ್ರಾ
ಸ್ತಸ್ಮಾಚ್ಚ ತತ್ಪುಣ್ಯತಮಂ ಪ್ರದಿಷ್ಟಂ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಧಾನ್ಯದಾನಪ್ರ
ಶಂಸಾ ನಾಮ ಚತುರ್ದಶಾಧಿಕ ತ್ರಿಶತತಮೋಽಧ್ಯಾಯಃ

---

೧೫ ಮನುಷ್ಯಲೋಕದಲ್ಲಿ ಪಕ್ವಾನ್ನದಾನಕ್ಕಿಂತಲೂ ಹಸಿಯ (ಬೇಯಿಸದ) ವಸ್ತುಗಳ ದಾನವೇ ಬಹುಮಟ್ಟಿಗೂ ಫಲಪ್ರದವಾಗುತ್ತದೆ. ಏತಕ್ಕೆಂದರೆ, ಬ್ರಾಹ್ಮಣರೆಲ್ಲರೂ ಹಸಿಯ ವಸ್ತುಗಳಿಂದಲೇ ಯಜ್ಞಯಾಗಾದಿಗಳನ್ನು ನೆರವೇರಿಸುತ್ತಾರೆ.

ಆದುದರಿಂದ ಯಜ್ಞೋಪಯೋಗಿಗಳಾದ ಅಪಕ್ವ ವಸ್ತುಗಳ ದಾನವೇ ಹೆಚ್ಚು ಪುಣ್ಯಪ್ರದವೆಂದು ತಾತ್ಪರ್ಯ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಧಾನ್ಯದಾನಪ್ರಶಂಸೆ ಎಂಬ ಮುನ್ನೂರ ಹದಿನಾಲ್ಕನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚದಶಾಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸರ್ವೇಷಾಮೇವ ದಾನಾನಾಮನ್ನದಾನಂ ವಿಶಿಷ್ಯತೇ ।
ಅನ್ನದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ॥ ೧ ॥

ನಾತ್ರ ಪಾತ್ರಪರೀಕ್ಷಾ ಸ್ಯಾನ್ನ ಕಾಲನಿಯಮಸ್ತಥಾ ।
ನ ಚ ದೇಶಃ ಪರೀಕ್ಷ್ಯೋಽತ್ರ ದೇಯಮನ್ನಂ ಸದೈವ ಹಿ ॥ ೨ ॥

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ಪತಿತೇಭ್ಯಸ್ತಥೈವ ಚ ।
ಕ್ರಿಮಿಕೀಟಪತಂಗಾನಾಂ ದೇಯಮನ್ನಂ ಸದೈವ ಹಿ ॥ ೩ ॥

ಮುನ್ನೂರ ಹದಿನೈದನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ಎಲ್ಲಾ ದಾನಗಳಿಗಿಂತಲೂ ಅನ್ನದಾನವು ಬಹುಮಟ್ಟಿಗೂ ಪ್ರಶಸ್ತವಾದುದು. ಇದಕ್ಕಿಂತಲೂ ಉತ್ತಮವಾದ ದಾನವು ಯಾವುದೂ ಇಲ್ಲ ಮುಂದೆ ಹುಟ್ಟುವುದೂ ಇಲ್ಲ. ಈ ಅನ್ನದಾನದ ವಿಷಯದಲ್ಲಿ ಪಾತ್ರಾಪಾತ್ರವಿವೇಚನೆಯೂ, ಕಾಲನಿಯಮವೂ ಇಲ್ಲ ದೇಶದ ವಿಮರ್ಶೆಯೂ ಬೇಕಾಗಿಲ್ಲ ಆದುದರಿಂದ ಸರ್ವತ್ರಸರ್ವಕಾಲದಲ್ಲಿಯೂ ಅನ್ನದಾನವು ಕರ್ತವ್ಯ ಉತ್ತಮ ಮನುಷ್ಯನ ವಿಚಾರವಿರಲಿ, ನಾಯಿಗಳಾಗಲಿ ಶ್ವಪಚ ಜಾತಿಯವರಿಗಾಗಲೀ ಪತಿತರಿಗಾಗಲಿ, ಕ್ರಿಮಿ, ಕೀಟ, ಪಕ್ಷಿಗಳಿಗೇ ಆಗಲಿ ಯಾವಾಗಲೂ ಅನ್ನದಾನವು ಕರ್ತವ್ಯವಾಗಿದೆ

ಅನ್ನಂ ಹಿ ಜೀವಿತಂ ಲೋಕೇ ಪ್ರಾಣಾಶ್ಚಾನ್ನನಿಬಂಧನಾಃ ।
ಅನ್ನದಃ ಪ್ರಾಣದೋ ಲೋಕೇ ಸರ್ವದಶ್ಚ ತಥಾನ್ನದಃ ॥ ೪ ॥

ಭುಕ್ತ್ವಾ ತಥಾ ಚ ಯಸ್ಯಾನ್ನಂ ಸಂತತಿಃ ಸ್ಯಾದ್ದ್ವಿಜೋತ್ತಮಾಃ ।
ಜ್ಞಾತವ್ಯಂ ಬ್ರಾಹ್ಮಣಶ್ರೇಷ್ಠಾ ಯಸ್ಯಾನ್ನಂ ತಸ್ಯ ಸಂತತಿಃ ॥ ೫ ॥

ದಾತವ್ಯಂ ಸರ್ವವರ್ಣೇಭ್ಯೋ ಭೋಕ್ತವ್ಯಂ ಬ್ರಾಹ್ಮಣಸ್ಯ ತು ।
ಯಸ್ಯಾನ್ನೇನೋದರಸ್ಥೇನ ಬ್ರಾಹ್ಮಣೋ ಮ್ರಿಯತೇ ದ್ವಿಜಾಃ ॥ ೬ ॥

ತಾಂತು ಯೋನಿಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ।
ಭಕ್ಷ್ಯದಃ ಸ್ವರ್ಗಮಾಪ್ನೋತಿ ಶಕ್ರಲೋಕಂ ತು ಭೋಜ್ಯದಃ ॥ ೭ ॥

ಲೇಹ್ಯದೋಽಪ್ಸರಸಾಂ ಲೋಕಂ ವಸೂನಾಮಪಿ ಚೋಷ್ಯದಃ ।
ವಾರುಣಂ ಲೋಕಮಾಪ್ನೋತಿ ತಥಾ ಪಾನಪ್ರದೋ ನರಃ ॥ ೮ ॥

೪–೬. ಅನ್ನವೆಂಬುದು ಲೋಕದಲ್ಲಿ ಜೀವನಸಾಧನ, ಪ್ರಾಣಿಗಳ ಪ್ರಾಣಗಳೂ ಅನ್ನದಿಂದಲೇ ನಿಂತಿವೆ. ಆದುದರಿಂದ ಅನ್ನದಾನಮಾಡುವವನು ಪ್ರಾಣಪ್ರದನೂ, ಸರ್ವಾರ್ಥಪ್ರದನೂ ಆಗುತ್ತಾನೆ. ಎಲೈ ಬ್ರಾಹ್ಮಣೋತ್ತಮರೇ ಇದನ್ನು ನೀವು ತಿಳಿದುಕೊಳ್ಳಿ, ಯಾವನೊಬ್ಬ ದಾತೃವಿನ ಅನ್ನವನ್ನು ತಿಂದು ಇತರರು ಸಂತತಿ ಹೊಂದುತ್ತಾರೆಯೋ ಆ ಸಂತತಿಯೆಲ್ಲವೂ ಅನ್ನದಾತೃವಿನ ಸಂತತಿಯೇ ಆಗುತ್ತದೆ. ಅನ್ನವನ್ನು ಎಲ್ಲಾ ವರ್ಣದವರಿಗೂ ದಾನಮಾಡಬೇಕು. ಬ್ರಾಹ್ಮಣನ ಅನ್ನವನ್ನು ಮಾತ್ರ ಭುಂಜಿಸಬೇಕು. (ಇತರರ ಅನ್ನವನ್ನು ಭುಂಜಿಸಬಾರದೆಂದು ತಾತ್ಪರ್ಯ) ಇದಕ್ಕೆ ಕಾರಣವೇನೆಂದರೆ—ಯಾವನ ಅನ್ನವು ಹೊಟ್ಟೆಯಲ್ಲಿರುವಾಗ ಅದನ್ನು ಭುಂಜಿಸಿದ ಬ್ರಾಹ್ಮಣನು ಮೃತನಾಗುತ್ತಾನೆಯೋ ಅಂತಹ ಬ್ರಾಹ್ಮಣನು ಅನ್ನದಾನಮಾಡಿದವನ ವಂಶವನ್ನೇ ಹೊಂದುತ್ತಾನೆ. ಇದರಲ್ಲಿ ಸಂದೇಹವಿಲ್ಲ.

೭–೧೦. [1]ಭಕ್ಷ್ಯವನ್ನು ದಾನಮಾಡಿದವನು ಸ್ವರ್ಗವನ್ನೂ, ಭೋಜ್ಯವನ್ನು ದಾನಮಾಡಿದವನು ಇಂದ್ರಲೋಕವನ್ನೂ ಹೊಂದುವರು. ಲೇಹ್ಯವಸ್ತುಗಳನ್ನು ದಾನಮಾಡಿದವನು ಅಪ್ಸರೆಯರ ಲೋಕವನ್ನೂ, ಚೋಷ್ಯವಸ್ತುಗಳನ್ನು ದಾನ

[1] ಆಹಾರಪದಾರ್ಥಗಳಲ್ಲಿ ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯವೆಂಬ ನಾಲ್ಕು ಬಗೆಗಳಿವೆ. ತಿಂಡಿಯ ಪದಾರ್ಥಗಳಿಗೆ ಭಕ್ಷ್ಯವೆಂದೂ, ಅನ್ನವ್ಯಂಜನವೇ ಮೊದಲಾದುವುಗಳಿಗೆ ಭೋಜ್ಯವೆಂದೂ, ನೆಕ್ಕಿ ತಿನ್ನುವ ಪದಾರ್ಥಗಳಿಗೆ ಲೇಹ್ಯವೆಂದೂ, ಚಪ್ಪರಿಸಿ ತಿನ್ನುವ ಪದಾರ್ಥಗಳಿಗೆ ಚೋಷ್ಯವೆಂದೂ ಆಹಾರಶಾಸ್ತ್ರದ ವ್ಯವಹಾರ.

ಪಾನಕಾನಿ ಸುಗಂಧೀನಿ ಶೀತಲಾನಿ ಪ್ರಯಚ್ಛತಃ ।
ಸರ್ವಕಾಮಸಮೃದ್ಧಿಃ ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೯ ॥

ಪರಮಾನ್ನಪ್ರದಾನೇನ ತೃಪ್ತಿರ್ಭವತಿ ಶಾಶ್ವತೀ ।
ಪಿಪಾಸಮಾನೋ ಮ್ರಿಯತೇ ಗವಾಂ ಲೋಕೇ ಮಹೀಯತೇ ॥ ೧೦ ॥

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಶ್ರಾಂತಾಯಾದೃಷ್ಟಪೂರ್ವಾಯ ತಸ್ಯ ಪುಣ್ಯಫಲಂ ಮಹತ್ ॥ ೧೧ ॥

ಸಹಸ್ರಪರಿವೇಷ್ಯಸ್ತು ನರಕಂ ಸ ನ ಗಚ್ಛತಿ ।
ವಿಮಾನೇನಾರ್ಕವರ್ಣೇನ ಸ್ವರ್ಗಲೋಕೇ ಮಹೀಯತೇ ॥ ೧೨ ॥

ಅಪಹನ್ಯಾತ್ತಥಾ ವಿಪ್ರಾ ಏಕಸ್ಯಾರ್ತಸ್ಯ ಯತ್ ಕ್ಷುಧಾಂ ।
ತೇನಾಸೌ ಕರ್ಮಣಾ ಪ್ರೇತ್ಯ ಮಹತ್ಫಲಮುಪಾಶ್ನುತೇ ॥ ೧೩ ॥

ಮಾಡಿದವನು ವಸುಗಳ ಲೋಕವನ್ನೂ ಹೊಂದುತ್ತಾರೆ ಪಾನಕವೇ ಮೊದಲಾದ ಪಾನೀಯವನ್ನು ದಾನಮಾಡಿದವನು ವರುಣಲೋಕವನ್ನು ಹೊಂದುತ್ತಾನೆ. ಸುಗಂಧಿಯಾಗಿಯೂ, ತಂಪಾಗಿಯೂ ಇರುವ ಪಾನಕವನ್ನು ದಾನಮಾಡುವವನು ಸಕಲ ಮನೋರಥ ಸಿದ್ಧಿಯನ್ನೂ ಹೊಂದುತ್ತಾನೆ. ಇದರಲ್ಲಿ ಚರ್ಚೆಮಾಡಬೇಕಾದು ದಿಲ್ಲ. ಪರಮಾನ್ನ ಪ್ರದಾನಮಾಡಿದವನಿಗೆ ಶಾಶ್ವತವಾದ ತೃಪ್ತಿಯುಂಟಾಗುತ್ತದೆ. ಅವನು ಬಾಯಾರಿಕೆಯಿಂದ ಮೃತನಾದರೂ ಗೋಲೋಕದಲ್ಲಿ ಮಾನ್ಯನೇ ಆಗುತ್ತಾನೆ.

೧೧-೧೩. ಯಾವನು ಶ್ರಮಹೊಂದಿರುವ ಅಪರಿಚಿತನಾದ ಮಾರ್ಗಸ್ಥನಿಗೆ ಮಾರ್ಗದಲ್ಲಿ ಸಂತೋಷದಿಂದ ಅನ್ನವನ್ನು ದಾನಮಾಡುತ್ತಾನೆಯೋ ಅವನ ಪುಣ್ಯ ಫಲವು ಅಪರಿಮಿತವಾದ್ದು. ಸಾವಿರ ಜನರಿಗೆ ಹೀಗೆಯೇ ಅನ್ನದಾನಮಾಡಿದವನು ನರಕಗಾಮಿಯಾಗುವುದೇ ಇಲ್ಲ ಸೂರ್ಯನಂತೆ ಜ್ವಲಿಸುವ ವಿಮಾನದಿಂದ ಸ್ವರ್ಗ ಹೊಂದಿ ಅಲ್ಲಿಯೂ ಮಾನ್ಯನಾಗುತ್ತಾನೆ. ದುಃಖದಿಂದಿರುವ ಒಬ್ಬ ಮನುಷ್ಯನ ಹಸಿವನ್ನಾದರೂ ಯಾವನು ಹೋಗಲಾಡಿಸುತ್ತಾನೆಯೋ ಅಂತಹ ಪುಣ್ಯಕಾರ್ಯ ದಿಂದಲೂ ಅವನು ಲೋಕಾಂತರದಲ್ಲಿ ಮಹಾಫಲವನ್ನೇ ಹೊಂದುತ್ತಾನೆ.

ಯದ್ಯದಿಷ್ಟತಮಂ ಲೋಕೇ ಯಶ್ಚಾಸ್ಯ ದಯಿತಂ ಗೃಹೇ ।
ತತ್ತದ್ಗುಣವತೇ ದೇಯಂ ತದೇವಾಕ್ಷಯ್ಯಮಿಚ್ಛತಾ ॥ ೧೪ ॥

ದಾನಾನ್ಯನೇಕಾನಿ ಫಲಂ ಚ ತೇಷಾಂ
ಬಹುಪ್ರಕಾರಂ ಪುರುಷಃ ಸಮೀಕ್ಷ್ಯ ।
ಶ್ರದ್ಧಾನ್ವಿತೋ ಬ್ರಾಹ್ಮಣಸಾತ್ಕುರ್ಯಾ
ದ್ಧ್ಯೆಯಸ್ತದೇವಾಪ್ತಮನಾ ನೃಲೋಕೇ ॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸ್ವನ್ನದಾನಪ್ರಶಂಸಾ
ನಾಮ ಪಂಚದಶಾಧಿಕ ತ್ರಿಶತತಮೋಽಧ್ಯಾಯಃ

೧೪–೧೫. ಲೋಕದಲ್ಲಿ ಎಲ್ಲರಿಗೂ ಯಾವ ವಸ್ತುವು ಇಷ್ಟವಾಗಬಹುದೋ ತನ್ನ ಮನೆಯಲ್ಲಿರುವ ವಸ್ತುಗಳಲ್ಲಿ ಯಾವುದು ತನಗೆ ಅತ್ಯಂತ ಪ್ರಿಯವೋ, ಅದನ್ನು ಒಳ್ಳೆಯ ಪಾತ್ರದಲ್ಲಿ ದಾನಮಾಡಿದಲ್ಲಿ ಅಂತಹ ವಸ್ತುಗಳು ದಾತೃವಿನ ಮನೆಯಲ್ಲಿ ಯಾವಾಗಲೂ ಅಕ್ಷಯವಾಗುತ್ತವೆ. ಈ ವಿಧವಾದ ಅನೇಕ ದಾನಗಳನ್ನೂ ಅವುಗಳ ವಿವಿಧ ಫಲಗಳನ್ನೂ ವಿಚಾರಮಾಡಿ ಅಂತಹ ಪ್ರಿಯವಾದ ವಸ್ತುಗಳನ್ನು ಹೊಂದಲು ಆಸೆಯುಳ್ಳ ಆಸ್ತಿಕನು ಮನುಷ್ಯಲೋಕದ ಸ್ಥಿತಿಗೆ ತಕ್ಕಂತೆ ಉಚಿತವಾದ ದಾನಗಳನ್ನು ಬ್ರಾಹ್ಮಣರಿಗೆ ದಾನಮಾಡಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಅನ್ನದಾನಪ್ರಶಂಸೆ ಎಂಬ ಮುನ್ನೂರ ಹದಿನೈದನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷೋಡಶಾಧಿಕತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಕಸ್ಯ ದಾನಸ್ಯ ಕಃ ಪಾತ್ರಂ ತದ್ವದಸ್ವ ಮಹಾಮತೇ ।
ಕಸ್ಮಿನ್ದೇಶೇ ತಥಾ ಕಾಲೇ ಕಿಂಚಿದ್ದತ್ತಂ ಮಹಾಫಲಂ ॥ ೧ ॥

॥ ಹಂಸ ಉವಾಚ ॥

ನ ದಾನಂ ಯಶಸೇ ದದ್ಯಾನ್ನದದ್ಯಾನ್ನೋಪಕಾರಿಣೇ ।
ನ ನೃತ್ತಗೀತಶೀಲೇಭ್ಯೋ ನಾಸ್ತಿಕೇಭ್ಯಶ್ಚ ಧಾರ್ಮಿಕಃ ॥ ೨ ॥

ಮುನ್ನೂರ ಹದಿನಾರನೆಯ ಅಧ್ಯಾಯ.

೧-೩. ಋಷಿಗಳು ಹೇಳುತ್ತಾರೆ:—ಯಾವ ದಾನಕ್ಕೆ ಯಾವನು ಪಾತ್ರನೆಂಬುವನ್ನೂ ಮತ್ತು ಯಾವ ದೇಶದಲ್ಲಿ ಯಾವ ಕಾಲದಲ್ಲಿ ಮಾಡಿದ ಸ್ವಲ್ಪ ದಾನವೂ ಹೆಚ್ಚು ಫಲಪ್ರದವಾಗಬಹುದೋ ಅಂತಹ ಉಚಿತ ದೇಶಕಾಲಗಳನ್ನೂ ಸಹ ಪ್ರಾಜ್ಞನಾದ ನೀನೇ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ—ದಾನವನ್ನು ಲೋಕಪ್ರಸಿದ್ಧಿಗಾಗಲಿ (ಉಪಕಾರಕ್ಕೆ ಪ್ರತ್ಯುಪಕಾರಮಾಡುವ ದೃಷ್ಟಿಯಿಂದಾಗಲಿ ಮಾಡಬಾರದು.) ಜನಗಳಿಗೆ ಉಪಕಾರಮಾಡದಿರುವವನಿಗಾಗಲಿ

ಗಾನಶೀಲೇ ನ ದಾತವ್ಯಂ ಕದಾಚಿದಪಿ ಕಿಂಚನ |
ಪಾಪಶೀಲೇತು ಯದ್ದತ್ತಂ ತದ್ದಾತುರ್ದೋಷಮಾವಹೇತ್ || ೩ ||

ಧನದಸ್ತೇನ ಪಾಪೇನ ಶೀಘ್ರಮೇವೇಹ ಯುಜ್ಯತೇ |
ತಸ್ಮಾತ್ಪ್ರಾಪ್ಯ ಧನಂ ಪುಣ್ಯಂ ಪುಣ್ಯಶೀಲಂ ಸಮಾಚರೇತ್ || ೪ ||

ಧನದಸ್ತೇನ ಪುಣ್ಯೇನ ಯೋಗಮಾಪ್ನೋತ್ಯಸಂಶಯಂ |
ಅನ್ನದಾನೇ ನ ಕರ್ತವ್ಯಂ ಪಾತ್ರಾತ್ರವೇಕ್ಷಣಮಣ್ವಪಿ || ೫ ||

ಅನ್ನಂ ಸರ್ವತ್ರ ದಾತವ್ಯಂ ಧರ್ಮಕಾಮೇನ ವೈ ದ್ವಿಜಾಃ |
ಸದೋಷೇಪಿ ತು ನಿರ್ದೋಷಂ ಸಗುಣೇತಿಗುಣಾವಹಂ || ೬ ||

ತಸ್ಮಾತ್ಸರ್ವಪ್ರಯತ್ನೇನ ದೇಯಮನ್ನಂ ಸದೈವ ತು |
ವಿದ್ಯಾಧ್ಯಯನಸಕ್ತಾನಾಮನ್ನದಾನಂ ಮಹಾಫಲಂ || ೭ ||

ಮಾಡಬಾರದು. ನೃತ್ಯಗೀತದಿಂದಲೇ ಜೀವಿಸುವವರಿಗೂ, ನಾಸ್ತಿಕರಿಗೂ ಸಹ ಧರ್ಮಜ್ಞನಾದವನು ದಾನಮಾಡಬಾರದು. ಪಾಪಾಚಾರ ಉಳ್ಳವನಿಗೆ ಯಾವಾಗಲೂ ಏನನ್ನೂ ದಾನಮಾಡಬಾರದು. ಅಂತಹವನಿಗೆ ಮಾಡಿದ ದಾನವು ದಾತೃವಿಗೇ ದೋಷಕರವಾಗುತ್ತದೆ.

೪-೭. ಧನವನ್ನು ದಾನಮಾಡುವವನು ಅಂತಹ ಪಾಪಕ್ಕೆ ಭಾಗಿಯಾಗುತ್ತಾನೆ. ಆದ್ದರಿಂದ ಧನವನ್ನು ಹೊಂದಿರುವವನು ಪುಣ್ಯಶೀಲನಾದ ಅರ್ಥಿಯನ್ನೇ ದಾನಕ್ಕೆ ಉಪಯೋಗಿಸಿಕೊಳ್ಳಬೇಕು. ದಾನಮಾಡಿದ ಧನಿಕನೂ ಇದರಿಂದ ಪುಣ್ಯಶಾಲಿಯಾಗುತ್ತಾನೆ. ಅನ್ನದಾನದ ವಿಷಯದಲ್ಲಿ ಪಾತ್ರಾಪಾತ್ರ ವಿಚಾರವನ್ನು ಸ್ವಲ್ಪವೂ ಮಾಡಬಾರದು. ಧಾರ್ಮಿಕನ ಅನ್ನದಾನಕ್ಕೆ ಎಲ್ಲರೂ ಪಾತ್ರರೇ ಆಗಿರುತ್ತಾರೆ. ಈ ಅನ್ನದಾನವು ದೋಷಿಯಾದವನಲ್ಲಿ ನಿರ್ದೋಷವಾಗಿಯೂ, ಗುಣಶಾಲಿಯಲ್ಲಿ ಅಧಿಕಗುಣಾವಹವಾಗಿಯೂ ಆಗುತ್ತದೆ. ಆದ್ದರಿಂದ ಸರ್ವಪ್ರಯತ್ನದಿಂದಲೂ ಸರ್ವಕಾಲದಲ್ಲಿಯೂ ಅನ್ನದಾನಮಾಡಿಯೇ ಮಾಡಬೇಕು ವಿದ್ಯಾರ್ಥಿಗಳಾದವರಿಗೆ ಮಾಡುವ ಅನ್ನದಾನವು ಬಹುಪಟ್ಟಿಗೂ ಫಲಪ್ರದವಾಗುತ್ತದೆ.

ಶುಭಾನಾಮಪ್ಯಥಾನ್ಯೇಷಾಂ ಕರ್ಮಣಾಂ ದ್ವಿಜಪುಂಗವಾಃ ।
ಯಸ್ಯಾನ್ನಮುಪಯುಂಜಾನೋ ನರಃ ಕರ್ಮಾಣಿ ಸಾಧಯೇತ್ ॥ ೮ ॥

ಕರ್ಮ ಸಾಧಯತಃ ಪುಣ್ಯಮನ್ನದಾತಾ ತಥಾಶ್ನುತೇ ।
ದತ್ತ್ವಾ ನೃಪತಿಭೀತಾನಾಂ ಧನಿನಾಂ ಚ ತಥಾ ಧನಂ ॥ ೯ ॥

ತಸ್ಕರೇಭ್ಯಶ್ಚ ಭೀತಾನಾಂ ಫಲಮಕ್ಷಯಮಶ್ನುತೇ ।
ಯಿಯಕ್ಷತಾ ತಥಾ ದತ್ತಂ ವ್ಯಸನೇ ಹಂತುಮಿಚ್ಛತಾ ॥ ೧೦ ॥

ದುಃಖಾನ್ವಿತಾನಾಂ ದೀನಾನಾಂಚಾಕ್ಷಯಂ ತತ್ಪ್ರಕೀರ್ತಿತಂ ।
ವಿವಾಹಮೇಖಲಾಬಂಧ ಪ್ರತಿಷ್ಠಾದಿಷು ಕರ್ಮಸು ॥ ೧೧ ॥

ಆಪನ್ನೇಷು ಚ ಯದ್ದತ್ತಂ ತದಕ್ಷಯ್ಯಮುದಾಹೃತಂ ।
ಯಜ್ಞೋಪಕರಣಂ ದ್ರವ್ಯಂ ಕ್ಷತ್ರಿಯೇ ದ್ವಿಜಪುಂಗವಾಃ ॥ ೧೨ ॥

ಪುಣ್ಯೋಪಯೋಗಿ ತದ್ವೈಶ್ಯೇ ಶೂದ್ರೇ ಶಿಲ್ಪೋಪಜೀವಿನಂ ।
ಯಸ್ಯೋಪಯೋಗಿ ಯದ್ದ್ರವ್ಯಂ ದೇಯಂ ತಸ್ಯೈವ ತದ್ಭವೇತ್ ॥ ೧೩ ॥

೮-೧೩ ಶುಭಾಶುಭ ಕಾರ್ಯಗಳಲ್ಲಿ ಯಾವ ದಾತೃವಿನ ಅನ್ನದಿಂದ ಜೀವಿಸಿ ಮನುಷ್ಯನು ತನ್ನ ಕಾರ್ಯಗಳನ್ನು ಸಾಧಿಸುವನೋ ಅಂತಹವನ ಪುಣ್ಯವನ್ನು ಅನ್ನದಾನಮಾಡಿದವನು ಹೊಂದುತ್ತಾನೆ. ಧೊರೆಯಿಂದ ಭಯಪಟ್ಟಿರುವ ಧನಿಕರಿಗೂ ಕಳ್ಳರಿಂದ ಭಯಪಟ್ಟಿರುವವರಿಗೂ ಧನವನ್ನು ದಾನಮಾಡಿದವನಿಗೆ ಅಕ್ಷಯವಾದ ಫಲ ಉಂಟು. ಯಾಗಮಾಡಲು ಪ್ರಯತ್ನಿಸಿರುವವನಿಗೂ, ವ್ಯಸನಕಾಲದಲ್ಲಿ ಇತರರನ್ನು ಕೊಂದಾದರೂ ಅರ್ಥಾರ್ಜನೆಯಲ್ಲಿ ಪ್ರಯತ್ನಿಸಿರುವವನಿಗೂ ದುಃಖ ಹೊಂದಿರುವ ದೀನರಿಗೂ ಮಾಡುವ ದ್ರವ್ಯದಾನವು ಅಕ್ಷಯವಾಗುತ್ತದೆ. ವಿವಾಹ ಕಾಲದಲ್ಲಿಯೂ, ಉಪನಯನಕಾಲದಲ್ಲಿಯೂ, ದೇವತಾದಿಗಳ ಪ್ರತಿಷ್ಠಾಕಾಲದಲ್ಲಿಯೂ ಸಹ ಮಾಡಿದ ದ್ರವ್ಯದಾನವು ಅಕ್ಷಯವಾಗುತ್ತದೆ ವಿಪತ್ತಿಗೆ ಸಿಕ್ಕಿರುವವರಿಗೆ ಮಾಡಿದ ದ್ರವ್ಯದಾನವೂ ಅಕ್ಷಯವಾಗುತ್ತದೆ. ಯಜ್ಞದ ಉಪಯೋಗಕ್ಕಾಗಿ ಕ್ಷತ್ರಿಯನಿಗೂ, ಪುಣ್ಯಕಾರ್ಯ ಮಾಡುವುದಕ್ಕಾಗಿ ವೈಶ್ಯರಿಗೂ, ಶಿಲ್ಪಕಾರ್ಯದ ಉಪಯೋಗಕ್ಕಾಗಿ ಶೂದ್ರನಿಗೂ, ದ್ರವ್ಯದಾನಮಾಡಬಹುದು ಆದರೆ ಆಯಾಯ ಕಾರ್ಯಕ್ಕೆ ಉಪಯೋಗವಾಗುವಂತೆಯೇ ದ್ರವ್ಯವನ್ನು ಅವರವರಿಗೆ ಕೊಡಬೇಕು.

ಯೇನ ಯೇನ ಚ ಭಾಂಡೇನ ಯಸ್ಯ ವೃತ್ತಿರುದಾಹೃತಾ ।
ತತ್ತು ತಸ್ಯೈವ ದಾತವ್ಯಂ ಪುಣ್ಯಕಾಮೇನ ಧೀಮತಾ ॥ ೧೪ ॥

ದಂಡಂ ಕೃಷ್ಣಾಜಿನಂ ಚೈವ ತಥಾ ವಿಪ್ರಾಃ ಕಮಂಡಲುಂ ।
ಚೀರಂ ಪುಣ್ಯಮವಾಪ್ನೋತಿ ದತ್ತ್ವೈತಾನ್ ಬ್ರಹ್ಮಚಾರಿಣೇ ॥ ೧೫ ॥

ವಸ್ತ್ರಂ ಶಯ್ಯಾಸನಂ ಧಾನ್ಯಂ ದ್ರವ್ಯಂ ವೇಶ್ಮ ಪರಿಚ್ಛದಂ ।
ಗೃಹಸ್ಥಾಯ ತು ತದ್ದತ್ತಂ ಜ್ಞೇಯಂ ಬಹುಫಲಂ ಸದಾ ॥ ೧೬ ॥

ನೀವಾರವಲ್ಕಲಂ ಶಾಕಂ ಫಲಮೂಲಂ ಚ ಗೋರಸಂ ।
ವಾನಪ್ರಸ್ಥಾಯ ತದ್ದತ್ತಮನಂತಂ ಪರಿಕೀರ್ತಿತಂ ॥ ೧೭ ॥

ಭಿಕ್ಷಾಪ್ರದಾನಂ ಯತಯೇ ಪಾತ್ರದಾನಂ ತಥಾ ಹಿತಂ ।
ಸೌಭಾಗ್ಯದ್ರವ್ಯತಾಂಬೂಲರಕ್ತವಸ್ತ್ರಾದಿಕಂ ಸ್ತ್ರಿಯಃ ॥ ೧೮ ॥

ಸ್ತ್ರೀಣಾಂ ಪ್ರದಾನಂ ದಾತವ್ಯಂ ಭರ್ತೃಹಸ್ತೇ ತು ನಾನ್ಯಥಾ ।
ಪ್ರೋಕ್ತಂ ಸಂಗ್ರಹಣಂ ಹ್ಯೇತದ್ಗ್ರಸ್ತಂ ಭರ್ತುಃ ಪ್ರಯಚ್ಛತಃ ॥ ೧೯ ॥

ಅನ್ನಂ ಪ್ರತಿಶ್ರಯಂ ಚೋಭೌ ಪಾಂಥೇ ದತ್ತಂ ಮಹಾಫಲಂ ।
ವಿವಾಹಾದಿಕ್ರಿಯಾಕಾಲೇ ತತ್ ಕ್ರಿಯಾಸಿದ್ಧಿಕಾರಕಂ ॥ ೨೦ ॥

೧೪–೧೭. ಯಾವ ಯಾವ ಉಪಕರಣಗಳಿಂದ ಯಾವನಿಗೆ ಜೀವನವು ಸಾಗುವುದೋ ಅಂತಹವನಿಗೆ ಆಯಾಯ ಉಪಕರಣಗಳನ್ನು ಪುಣ್ಯಾಪೇಕ್ಷೆಯುಳ್ಳ ಬುದ್ಧಿಶಾಲಿಯು ದಾನಮಾಡಬೇಕು. ದಂಡ, ಕೃಷ್ಣಾಜಿನ, ಕಮಂಡಲು, ನಾರುಮಡಿ ಇವನ್ನು ಬ್ರಹ್ಮಚಾರಿಗೆ ದಾನಮಾಡಿದಲ್ಲಿ ಪುಣ್ಯಉಂಟಾಗುತ್ತದೆ. ವಸ್ತ್ರ, ಹಾಸಿಗೆ, ಆಸನಗಳು, ಧಾನ್ಯ, ದ್ರವ್ಯ, ಮನೆ, ಗೃಹೋಪಕರಣಗಳು ಇವನ್ನು ಗೃಹಸ್ಥನಿಗೆ ದಾನಮಾಡಿದಲ್ಲಿ ಮಹಾಫಲಉಂಟು. ತೃಣಧಾನ್ಯ, ನಾರುಮಡಿ, ಕಾಯಿ ಸೊಪ್ಪುಗಳು, ಫಲಗಳು, ಗೆಡ್ಡೆಗೆಣಸುಗಳು, ಹಾಲುಮೊಸರುಮುಂತಾದುವು ಇವನ್ನು ವಾನಪ್ರಸ್ಥಾಶ್ರಮಿಗೆ ದಾನಮಾಡಿದಲ್ಲಿ ಅಕ್ಷಯಫಲಉಂಟಾಗುತ್ತದೆ.

೧೮–೨೨. ಯತಿಯಾದವನಿಗೆ ಭಿಕ್ಷೆಯನ್ನೂ, ಭಿಕ್ಷಾಪಾತ್ರೆಯನ್ನೂ ದಾನ ಮಾಡುವುದು ಹಿತಕರ. ಸ್ತ್ರೀಯಾದವಳಿಗೆ ಸೌಂದರ್ಯವಸ್ತುಗಳು ತಾಂಬೂಲ, ಕೆಂಪುವಸ್ತ್ರ ಇವನ್ನು ದಾನಕೊಡುವುದು ಉಚಿತ. ಸ್ತ್ರೀಯರಿಗೆ ಕೊಡಬಹುದಾದ ಈ ದಾನಗಳನ್ನು ಅವರ ಪತಿಗಳ ಕೈಯ್ಯಲ್ಲೇ ಕೊಡಬೇಕು. ಬೇರೆರೀತಿ ಕೊಡ ಬಾರದು ದಾನಮಾಡತಕ್ಕ ಈ ವಸ್ತುಗಳನ್ನೆಲ್ಲಾ ಪತಿಯಾದವನೇ ಸಂಗ್ರಹಿಸಿ

ಯಃ ಪ್ರಯಚ್ಛತಿ ಧರ್ಮಜ್ಞಾಃ ಸೋಽಶ್ವಮೇಧಮವಾಪ್ನುಯಾತ್ ।
ಆತುರೇಭ್ಯೋ ಧನಂ ದತ್ವಾ ದಾನಂ ಬಹುಫಲಂ ಲಭೇತ್ ॥ ೨೦ ॥

ಬಾಲೇ ಕ್ರೀಡನಕಂ ದತ್ವಾ ಮಿಷ್ಟಮನ್ನಂ ತಥೈವ ಚ ।
ಫಲಂ ಮನೋಹರಂ ವಾಪಿ ಅಗ್ನಿಷ್ಟೋಮಫಲಂ ಲಭೇತ್ ॥ ೨೧ ॥

ಮಿಷ್ಟಾನ್ನಂ ಮಾನವೋ ದತ್ವಾ ಮಿಷ್ಟಾನ್ನಾನಿ ತು ಕಾಂಕ್ಷತಾಂ ।
ಅಕ್ಷಯಂ ಫಲಮಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥ ೨೨ ॥

ಶ್ರೀವಿಹೀನೇ ತಥಾ ದತ್ವಾ ಭೋಜನಂ ದ್ವಿಜಸತ್ತಮಾಃ ।
ವಸ್ತ್ರಂ ಶುಭಂ ವಾ ಧರ್ಮಜ್ಞಾಃ ಪುಣ್ಯಂ ಮಹದುಪಾಶ್ನುತೇ ॥ ೨೩ ॥

ಕೃಪಾಸ್ಥಾನಂಪರಂ ವಿಪ್ರಾಃ ವಿಚ್ಯುತಃ ಪುರುಷಃ ಶ್ರಿಯಾ ।
ತಸ್ಯಾನುಕಂಪಾ ಕರ್ತವ್ಯಾ ಸತಾಂ ವರ್ತ್ಮನಿ ತಿಷ್ಠತಃ ॥ ೨೪ ॥

ಕಾರ್ಯೇ ಸಮುದ್ಯಮಂ ಕೃತ್ವಾ ಪರೇಷಾಂ ಸಮುಪಸ್ಥಿತೇ ।
ಅಕ್ಷಯಂ ಫಲಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೨೫ ॥

ರಕ್ಷಿಸಿ ಇಡಬೇಕೆಂದು ಹೇಳಲಾಗಿದೆ. ಅನ್ನ ಮತ್ತು ಆಶ್ರಯಸ್ಥಾನ ಇವನ್ನು ಮಾರ್ಗಸ್ಥನಿಗೆ ದಾನಮಾಡಿದಲ್ಲಿ ಮಹಾಫಲವುಂಟಾಗುತ್ತದೆ. ವಿವಾಹಾದಿಕಾಲಗಳಲ್ಲಿ ಆ ಕಾರ್ಯಸಿದ್ಧಿಗಾಗಿ ಮಾಡಿದ ದಾನದಿಂದ ಅಶ್ವಮೇಧದ ಫಲವುಂಟಾಗುತ್ತದೆ. ರೋಗಿಗಳಿಗೆ ಮಾಡಿದ ದ್ರವ್ಯದಾನವು ಮಹಾಫಲ. ಆಡುವ ಹುಡುಗರಿಗೆ ಆಟದ ಸಾಮಾನುಗಳು, ಒಳ್ಳೆಯತಿಂಡಿ, ಒಳ್ಳೆಯಹಣ್ಣು ಇವನ್ನು ಕೊಡುವುದರಿಂದ ಅಗ್ನಿಷ್ಟೋಮದ ಫಲವೇ ಉಂಟಾಗುತ್ತದೆ.

೨೨-೨೫. ಮೃಷ್ಟಾನ್ನವನ್ನು ಅಪೇಕ್ಷಿಸುವವರಿಗೆ ಅದನ್ನು ದಾನಮಾಡಿದವನು ಅಕ್ಷಯಫಲವನ್ನೂ ಸ್ವರ್ಗವನ್ನೂ ಹೊಂದುತ್ತಾನೆ. ದರಿದ್ರರಾದವರಿಗೆ ಊಟ, ಮತ್ತು ವಸ್ತ್ರ ಇವನ್ನು ಕೊಟ್ಟಲ್ಲಿ ಹೆಚ್ಚಾದ ಪುಣ್ಯ ಉಂಟಾಗುತ್ತದೆ. ಎಲೈ ಬ್ರಾಹ್ಮಣೋತ್ತಮರೇ, ಹೊಂದಿದ್ದ ಸಂಪತ್ತನ್ನು ಕಳೆದುಕೊಂಡು ದರಿದ್ರರಾಗಿ ನಿಂತಿರುವವರು ದಯೆಗೆ ಮುಖ್ಯಸ್ಥಾನ ಸನ್ಮಾರ್ಗದಲ್ಲಿರುವ ದಾತೃಗಳು ಅಂತಹವರ ವಿಷಯದಲ್ಲಿ ದಯೆತೋರಬೇಕು. ಇತರರ ಕಾರ್ಯವು ಸನ್ನಿಹಿತವಾದಾಗ ಅವಕ್ಕೆ ಸಹಾಯ ಮಾಡಿದವನೂ ಅಕ್ಷಯ ಫಲಕ್ಕೆ ಭಾಗಿಯಾಗುತ್ತಾನೆ.

ಯವಸಾನಾಂ ಪ್ರದಾನೇನ ಧೇನುಮತ್ಸು ದ್ವಿಜಾತಿಷು ।
ಲವಣಾನಾಂ ಚ ಧರ್ಮಜ್ಞಾಃ ಫಲಮಕ್ಷಯಮಶ್ನುತೇ ॥ ೨೭ ॥

ಪ್ರಸವೇಷು ತದಾ ದತ್ತಂ ವ್ಯಸನಾಭ್ಯುಚ್ಛ್ರಯೇ ತತಃ ।
ತದ್ದಾನಮಕ್ಷಯಂ ಪ್ರೋಕ್ತಂ ಪುರುಷಸ್ಯ ವಿಪಶ್ಚಿತಃ ॥ ೨೮ ॥

ದತ್ವಾ ಬ್ರಾಹ್ಮಣಶಾರ್ದೂಲಾ ಜಲಮಾತ್ರಮಥಾರ್ಥಿನೇ ।
ಫಲಮಕ್ಷಯಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೨೯ ॥

ಕ್ಲೇಶಂ ವಿನಾ ದತ್ತಮಥಾರ್ಥಿನೇ ತು
ದಾನಂ ಹಿ ಲೋಕೇ ಫಲದಂ ನಿರುಕ್ತಂ ।
ಅಭ್ಯರ್ಥಿತೇನಾಥ ತತೋ ನ ಕಾರ್ಯಾ
ವಿಮಾನನಾ ತ್ವರ್ಥಿಜನಸ್ಯ ಶಕ್ತ್ಯಾ ॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಪಾತ್ರವಿಶೇಷೇಣ
ದಾನವಿಶೇಷವರ್ಣನೋ ನಾಮ
ಷೋಡಶಾಧಿಕ ತ್ರಿಶತತಮೋಽಧ್ಯಾಯಃ

೨೭-೩೦. ಹಸುಗಳನ್ನು ಹೊಂದಿರುವ ದ್ವಿಜರಿಗೆ ಹುಲ್ಲು, ಉಪ್ಪು ಇವನ್ನು ದಾನಮಾಡುವುದರಿಂದ ಅಕ್ಷಯವಾದ ಫಲವು ಲಭಿಸುತ್ತದೆ. ಪ್ರಸವಕಾಲದಲ್ಲಿಯೂ, ಹೆಚ್ಚಾದ ವ್ಯಸನಕಾಲದಲ್ಲಿಯೂ ಮಾಡಿದ ದಾನವು ಅಕ್ಷಯವಾದ ಫಲಕೊಡುತ್ತದೆ. ಅರ್ಥಿಯಾದವನಿಗೆ ಸಕಾಲದಲ್ಲಿ ಜಲಮಾತ್ರವನ್ನು ದಾನಮಾಡಿದವನೂ ಅಕ್ಷಯ ಫಲಕ್ಕೆ ಭಾಗಿಯಾಗುತ್ತಾನೆ ಇದರಲ್ಲಿ ವಿಚಾರಿಸಬೇಕಾದ್ದಿಲ್ಲ. ಅರ್ಥಿಯಾದವನಿಗೆ ಕ್ಲೇಶಉಂಟಾಗದೆ ಮಾಡುವ ದಾನವು ಫಲಪ್ರದವಾಗುತ್ತದೆ. ಯಾಚಿಸಲ್ಪಟ್ಟ ಮನುಷ್ಯನು ಯಾವಾಗಲೂ ಯಾಚಕನಿಗೆ ಅವಮಾನ ಉಂಟಾಗದಂತೆ ಶಕ್ತಿಗೆತಕ್ಕಂತೆ ನಡೆದುಕೊಳ್ಳಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯ ಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಪಾತ್ರ
ವಿಶೇಷದಿಂದ ದಾನವಿಶೇಷವರ್ಣನವೆಂಬ ಮುನ್ನೂರ
ಹದಿನಾರನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಸಪ್ತದಶೋತ್ತರತ್ರಿಶತತಮೋಽಧ್ಯಾಯಃ ||

|| ಋಷಯ ಊಚುಃ ||

ದಾನಂ ಬಹುಫಲಂ ಕಾಲೇ ಯಸ್ಮಿನ್ಯತ್ಪರಿಕೀರ್ತಿತಂ ।
ತತ್ತ್ವಮಸ್ಮಾಕಮಾಚಕ್ಷ್ವ ತ್ವಂ ಹಿ ಸರ್ವವಿದುಚ್ಯಸೇ || ೧ ||

|| ಹಂಸ ಉವಾಚ ||

ಸಂವತ್ಸರೇ ತಥಾ ದಾನಂ ತಿಲಸ್ಯ ಚ ಮಹಾಫಲಂ ।
ಪರಿಪೂರ್ವೇ ತಥಾ ದಾನಂ ಯವಾನಾಂ ದ್ವಿಜಸತ್ತಮಾಃ || ೨ ||

ಇಡಾಪೂರ್ವೇಽನ್ನವಸ್ತ್ರಾಣಾಂ ಧಾನ್ಯಾನಾಂ ಚಾನುಪೂರ್ವಕೇ ।
ಉದಾಸಂವತ್ಸರೇ ದಾನಂ ರಜತಸ್ಯ ಮಹಾಫಲಂ || ೩ ||

ಮುನ್ನೂರ ಹದಿನೇಳನೆಯ ಅಧ್ಯಾಯ

೧-೪. ಋಷಿಗಳು ಹೇಳುತ್ತಾರೆ:—ಯಾವಕಾಲದಲ್ಲಿ ಮಾಡಿದ ಎಂತಹ ದಾನವು ಹೆಚ್ಚಾಗಿ ಫಲಪ್ರದವಾದೀತು ಎಂಬ ವಿಷಯವನ್ನು ಸರ್ವಜ್ಞನಾದ ನೀನು ನಮಗೆ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಸಂವತ್ಸರವೆಂಬ ಕಾಲದಲ್ಲಿ ಎಳ್ಳಿನದಾನವು ಹೆಚ್ಚಾಗಿ ಫಲಪ್ರದವಾಗುತ್ತದೆ. ಪರಿಸಂವತ್ಸರದಲ್ಲಿ ಯವಗಳ ದಾನವು ಪ್ರಶಸ್ತ. ಇಡಾವತ್ಸರದಲ್ಲಿ ಅನ್ನ, ವಸ್ತ್ರ, ಮತ್ತು ಅನುವತ್ಸರದಲ್ಲಿ

ಉತ್ತರೇ ತ್ವಯನೇ ಪ್ರೋಕ್ತಂ ವಸ್ತ್ರದಾನಂ ಫಲಪ್ರದಂ ।
ಸ್ನಾನಾನುಲೇಪನಾದೀನಾಂ ವಸಂತೇ ದ್ವಿಜಪುಂಗವಾಃ ॥ ೪ ॥

ಪಾನಕಾನಾಂ ತಥಾ ಗ್ರೀಷ್ಮೇ ಛತ್ರಾಣಾಂ ತದನಂತರೇ ।
ಶರದ್ಯನ್ನಸ್ಯ ಧರ್ಮಜ್ಞಾ ವಸ್ತ್ರಾಣಾಮಪಿ ಹೈಮನೇ ॥ ೫ ॥

ವಹ್ನಿದಾನಂ ನರಃ ಕೃತ್ವಾ ಸೂರ್ಯಸ್ಯೋದಯನಂ ಪ್ರತಿ ।
ಶಿಶಿರೇ ಸತತಂ ವಹ್ನಿಂ ತರ್ಪಯಿತ್ವಾ ತಥಾ ತಿಲೈಃ ॥ ೬ ॥

ಕುಲ್ಮಾಷಂ ಸಘೃತಂ ದತ್ತ್ವಾ ಯಥಾಶಕ್ತ್ಯಾ ದ್ವಿಜಾತಿಷು ।
ಕಾಯಾಗ್ನಿದೀಪ್ತಿಂ ಪ್ರಾಕಾಶ್ಯಂ ಶತ್ರುನಾಶಂ ಚ ವಿಂದತಿ ॥ ೭ ॥

ಸಕ್ತೂನ್ಸಿತಾಖಂಡಯುತಾಂಸ್ತ್ರಪುಸೋರ್ವಾರುಕಾನ್ವಿತಾನ್ ।
ಜಲಕುಂಭೋಪರಿಕೃತಾನಕ್ಷಯಂ ಫಲಮಶ್ನುತೇ ॥ ೮ ॥

ಧಾನ್ಯ ಇವುಗಳ ದಾನವು ಪ್ರಶಸ್ತ. ಉದಾವತ್ಸರದಲ್ಲಿ ಬೆಳ್ಳಿಯ ದಾನವು ಪ್ರಶಸ್ತ ಉತ್ತರಾಯಣದಲ್ಲಿ ವಸ್ತ್ರದಾನವೂ ವಸಂತಋತುವಿನಲ್ಲಿ ಸ್ನಾನ ಚಂದನಾದಿಗಳ ದಾನವೂ ಪ್ರಶಸ್ತ.

೫–೭. ಗ್ರೀಷ್ಮಋತುವಿನಲ್ಲಿ ಪಾನಕದಾನವೂ, ವರ್ಷಋತುವಿನಲ್ಲಿ ಛತ್ರಿಯ ದಾನವೂ, ಶರದೃತುವಿನಲ್ಲಿ ಅನ್ನದಾನವೂ, ಹೇಮಂತದಲ್ಲಿ ವಸ್ತ್ರಗಳದಾನವೂ ಫಲಪ್ರದವಾಗುತ್ತವೆ. ಶಿಶಿರಋತುವಿನಲ್ಲಿ ಸೂರ್ಯೋದಯ ಕಾಲದಲ್ಲಿ ಅಗ್ನಿಯನ್ನು ದಾನಮಾಡುತ್ತಾ ಯಾವಾಗಲೂ ತಿಲಗಳಿಂದ ಅಗ್ನಿಯನ್ನು ತೃಪ್ತಿಪಡಿಸುತ್ತಾ ಯಥಾಶಕ್ತಿ ದ್ವಿಜರಿಗೆ ತುಪ್ಪದೊಡನೆ ಕೂಡಿರುವ ಗಂಜಿಯನ್ನು ದಾನಮಾಡುತ್ತಾ ಇದ್ದಲ್ಲಿ ಅಗ್ನಿಪಾಟವವನ್ನೂ, ಪ್ರಸಿದ್ಧಿಯನ್ನೂ, ಶತ್ರುನಾಶವನ್ನೂ ಹೊಂದುತ್ತಾನೆ.

೮–೧೦. ಕಲ್ಲುಸಕ್ಕರೆಯಿಂದ ಕೂಡಿದ ಅರಳುಹಿಟ್ಟು ಮತ್ತು ಸೌತೇಕಾಯಿಗಳಿಂದ ಕೂಡಿದ ಹುರಿಟ್ಟನ್ನು, ಜಲಕುಂಭಪೂರ್ವಕವಾಗಿ ದಾನಮಾಡಿದವನು ಅಕ್ಷಯಫಲಹೊಂದುತ್ತಾನೆ ವರ್ಷಾಕಾಲದಲ್ಲಿ ಮಧ್ಯಾಹ್ನದಲ್ಲಿ ಸ್ನಾನಮಾಡಿಯೂ

---

1. ಇಲ್ಲಿ ಕುಲ್ಮಾಷವೆಂಬ ಪದಕ್ಕೆ ಈ ಅರ್ಥ ಹೇಳುವುದು ಯುಕ್ತವೆಂದು ತೋರುತ್ತದೆ. ಹಲಸಂದೆಕಾಳು ಎಂಬ ಬೇರೆ ಅರ್ಥವು ಪ್ರಕೃತಕ್ಕೆ ಅನನುಗುಣ.

ಮಧ್ಯಾಹ್ನೇ ಪ್ರಾವೃಷಿ ಸ್ನಾತಃ ಸತತಂ ದ್ವಿಜಪುಂಗವಾಃ ।
ತಿಲಪ್ರದಾನಾನ್ಮಾಘೇ ತು ಸ್ವಾಪ್ಯಲೋಕಂ ಸ ಗಚ್ಛತಿ ॥ ೯ ॥

ಪ್ರಿಯಂಗುಂ ಫಾಲ್ಗುನೇ ದತ್ತ್ವಾ ಪ್ರಿಯೋ ಭವತಿ ಭೂತಲೇ ।
ಚೈತ್ರೇ ಚಿತ್ರಾಣಿ ವಸ್ತ್ರಾಣಿ ಸೌಭಾಗ್ಯಂ ಮಹದಶ್ನುತೇ ॥ ೧೦ ॥

ಅಪೂಪಾನಾಂ ಪ್ರದಾನೇನ ವೈಶಾಖೇ ಸ್ವರ್ಗಮಶ್ನುತೇ ।
ಛತ್ರದಾನಂ ತಥಾ ಜ್ಯೇಷ್ಠೇ ಸರ್ವಾನ್ಕಾಮಾನುಪಾಶ್ನುತೇ ।
ದತ್ತ್ವಾ ಚೋಪಾನಹೌ ಸ್ವರ್ಗಂಚಾಷಾಢೇ ಧ್ರುವಮಶ್ನುತೇ ॥ ೧೧ ॥

ಶ್ರಾವಣೇ ವಸ್ತ್ರದಾನಸ್ಯ ಕೀರ್ತಿತಂ ಸುಮಹತ್ಫಲಂ ।
ಪ್ರೋಷ್ಠಪಾದೇ ತಥಾ ಮಾಸಿ ಪ್ರದಾನಾತ್ಫಾಣಿತಸ್ಯ ಚ ॥ ೧೨ ॥

ಆಶ್ವಿನೇ ಘೃತದಾನೇನ ರೂಪವಾನಭಿಜಾಯತೇ ।
ಕಾರ್ತಿಕೇ ದೀಪದಾನೇನ ಸರ್ವತ್ರಾಜಸ್ಯಮಶ್ನುಯಾತ್ ॥ ೧೩ ॥

ಮಾಘಮಾಸದಲ್ಲಿ ಎಳ್ಳನ್ನು ದಾನಮಾಡಿಯೂ ಉತ್ತಮ ಲೋಕವನ್ನು ಹೊಂದು ತ್ತಾನೆ. ಫಾಲ್ಗುಣಮಾಸದಲ್ಲಿ ತಡಗಣಿಯನ್ನು ದಾನಮಾಡಿದವನು ಜನಪ್ರಿಯನಾಗಿ ಬದುಕುತ್ತಾನೆ. ಚೈತ್ರಮಾಸವಲ್ಲಿ ಚಿತ್ರ (ನಾನಾ ಬಣ್ಣದ) ವಸ್ತ್ರವನ್ನು ದಾನಮಾಡಿ ದವನು ಸೌಭಾಗ್ಯಶಾಲಿಯಾಗುತ್ತಾನೆ.

೧೧-೧೪. ವೈಶಾಖದಲ್ಲಿ ಅಪೂಪ (ಒಬ್ಬಟ್ಟು ಮುಂತಾದ್ದು) ದಾನಮಾಡಿ ದವನು ಸ್ವರ್ಗಸುಖಿಯಾಗುತ್ತಾನೆ ಜ್ಯೇಷ್ಠಮಾಸದಲ್ಲಿ ಛತ್ರಿಯನ್ನು ದಾನಮಾಡಿ ದವನು ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ ಆಷಾಢದಲ್ಲಿ ಪಾದರಕ್ಷೆಗಳನ್ನು ದಾನಮಾಡವನು ಸ್ವರ್ಗಸುಖಿಯಾಗುತ್ತಾನೆ ಶ್ರಾವಣ ಮಾಸದಲ್ಲಿ ವಸ್ತ್ರದಾನವು ಮಹಾಫಲವುಳ್ಳದ್ದಾಗುತ್ತದೆ. ಭಾದ್ರಪದ ಮಾಸದಲ್ಲಿ ಕಾಕಂಬಿಯದಾನದಿಂದಲೂ ಆಶ್ವಯುಜಮಾಸದಲ್ಲಿ ತುಪ್ಪದ ದಾನದಿಂದಲೂ ರೂಪವಂತನಾಗಿ ಬದುಕುತ್ತಾನೆ. ಕಾರ್ತಿಕಮಾಸದಲ್ಲಿ ದೀಪದಾನದಿಂದ ತೇಜಶ್ಶಾಲಿಯಾಗುತ್ತಾನೆ. ಮಾರ್ಗಶಿ

ಲವಣಂ ಮಾರ್ಗಶೀರ್ಷೇತು ದತ್ವಾ ಸೌಭಾಗ್ಯಮಶ್ನುತೇ ।
ಪೌಷೇ ಕನಕದಾನೇನ ಪರಾಂ ಪುಷ್ಟಿಂ ತಥೈವ ಚ ॥ ೧೪ ॥

ಪುಷ್ಪಾಣಾಂ ಚ ಸಿತೇ ಪಕ್ಷೇ ದಾನಂ ಲಕ್ಷ್ಮೀಕರಂ ಸ್ಮೃತಂ ।
ಫಲಾನಾಂ ಚ ತಥಾ ದಾನಂ ಕೃಷ್ಣಪಕ್ಷೇ ಮಹಾಫಲಂ ॥ ೧೫ ॥

ಲವಣಾಜ್ಯಗುಡೋಪೇತಮಪೂಪಂ ಸೂರ್ಯವಾಸರೇ ।
ಸಹಿರಣ್ಯಂ ನರೋ ದತ್ವಾ ನ ರೋಗೈಸ್ತ್ವಭಿಭೂಯತೇ ॥ ೧೬ ॥

ಏವಂ ವಿಧಂ ಚೇಂದುದಿನೇ ದದತ್ಸೌಭಾಗ್ಯಮಾಪ್ನುಯಾತ್ ।
ಕಾಷ್ಠದಾನಂ ಭೌಮದಿನೇ ಶತ್ರುನಾಶಮವಾಪ್ನುಯಾತ್ ॥ ೧೭ ॥

ಭೋಧೇ ಕ್ರೀಡನಕಾನಾಂ ಚ ದಾನಂ ಬಾಲೇಷು ಶಸ್ಯತೇ ।
ಜೀವಾಹ್ನಿ ವಸ್ತ್ರದಾನೇನ ಪರಾಂ ಪುಷ್ಟಿಂ ಸಮಶ್ನುತೇ ॥ ೧೮ ॥

ಸರ್ವತ್ರ ರತಿಮಾಪ್ನೋತಿ ಶುಕ್ರೇ ದತ್ವಾ ರತಿಂಸ್ತ್ರಿಯಂ ।
ಅಭ್ಯಂಗಂ ಸೌರದಿವಸೇ ದತ್ವಾ ಜೀವಿತಮಾಪ್ನುಯಾತ್ ॥ ೧೯ ॥

ಮಾಸದಲ್ಲಿ ಉಪ್ಪಿನದಾನವು ಸೌಭಾಗ್ಯ ಪ್ರದವಾಗುತ್ತದೆ. ಪುಷ್ಯಮಾಸದಲ್ಲಿ ಚಿನ್ನದ ದಾನವು ಪುಷ್ಟಿಕಾರಕವಾಗುತ್ತದೆ.

೧೫-೧೯. ಹೂವುಗಳದಾನವು ಶುಕ್ಲಪಕ್ಷದಲ್ಲಿ ಸಂಪತ್ಪ್ರದವಾಗಿಯೂ ಫಲಗಳ ದಾನವು ಕೃಷ್ಣಪಕ್ಷದಲ್ಲಿ ಹೆಚ್ಚು ಫಲಪ್ರದವೂ ಆಗುತ್ತದೆ. ಉಪ್ಪು, ತುಪ್ಪ, ಬೆಲ್ಲ ಇವು ಗಳಿಂದ ಮಾಡಿದ ಭಕ್ಷ್ಯಗಳನ್ನು ಭಾನುವಾರದಲ್ಲಿ ಹಿರಣ್ಯದೊಡನೆ ದಾನಮಾಡಿದ್ದೇ ಆದರೆ ರೋಗಾದಿಗಳ ಉಪದ್ರವವಿರುವುದಿಲ್ಲ. ಇದೇ ಭಕ್ಷ್ಯಗಳನ್ನು ಇಂದು ವಾರದಲ್ಲಿ ದಾನಮಾಡಿದವನು ಸೌಭಾಗ್ಯಹೊಂದುತ್ತಾನೆ. ಮಂಗಳವಾರದಲ್ಲಿ ಸೌದೆಯ ದಾನಮಾಡುವುದರಿಂದ ಶತ್ರುನಾಶ ಉಂಟಾಗುತ್ತದೆ. ಬುಧವಾರದಲ್ಲಿ ಮಕ್ಕಳುಗಳಿಗೆ ಆಟದ ಸಾಮಾನುಗಳ ದಾನವು ಪ್ರಶಸ್ತ. ಗುರುವಾರದಲ್ಲಿ ವಸ್ತ್ರ ದಾನವು ಪುಷ್ಟಿಯನ್ನುಂಟುಮಾಡುತ್ತದೆ. ಶುಕ್ರವಾರದಲ್ಲಿ ಸ್ತ್ರೀಯಲ್ಲಿ ರತಿದಾನವು ಸರ್ವವಿಧದಲ್ಲೂ ಸಂತೋಷಕ್ಕೆ ಕಾರಣವಾಗುತ್ತದೆ. ಶನಿವಾರದಲ್ಲಿ ಅಭ್ಯಂಗದಾನವು ಉತ್ತಮ ಜೀವನಕ್ಕೆ ಕಾರಣವಾಗುತ್ತದೆ.

ಕೃತ್ತಿಕಾಸು ಸುವರ್ಣಸ್ಯ ದಾನಂ ಬಹುಫಲಂ ಸ್ಮೃತಂ ।
ರಕ್ತವಸ್ತ್ರಸ್ಯ ರೋಹಿಣ್ಯಾಂ ಸೌಮ್ಯಭೇ ಲವಣಸ್ಯ ಚ ॥ ೨೦ ॥

ಕೃಸರಸ್ಯ ತಥಾದ್ರಾರ್ಯಾಂ ಚಾದಿತ್ಯೇ ರಜತಸ್ಯ ಚ ।
ಘೃತಸ್ಯ ಚ ತಥಾ ಪುಷ್ಯೇ ಗಂಧಾನಾಮಥ ಸರ್ಪಭೇ ॥ ೨೧ ॥

ತಿಲಾನಾಂ ಚ ಮಘಾಯೋಗೇ ಪ್ರಿಯಂಗೋರ್ಭಗದೈವತೇ ।
ಆರ್ಯಮ್ಣೇ ಚಾಪ್ಯಪೂಪಾನಾಂ ಸಾವಿತ್ರೇ ಪಾಯಸಸ್ಯ ಚ ॥ ೨೨ ॥

ಚಿತ್ರಾಯಾಂ ಚಿತ್ರವಸ್ತ್ರಾಣಾಂ ಸೂಕ್ತ್ಮಾನಾಂ ವಾಯುದೈವತೇ ।
ಐಂದ್ರಾಗ್ನೇ ಚೈವ ಲೋಹಾನಾಂ ಮೈತ್ರೇ ಮಾಲ್ಯಫಲಸ್ಯ ಚ ॥ ೨೩ ॥

ಛತ್ರಸ್ಯ ಚ ಯಥಾ ಶಾಕ್ರೇ ಮೂಲೇ ಮೂಲಫಲಸ್ಯ ಚ ।
ಹಿಮಸ್ಯ ಮಧುಯುಕ್ತಸ್ಯ ದಾನಮಾಪ್ಯೇ ಮಹಾಫಲಂ ॥ ೨೪ ॥

ವಿಶ್ವೇಶ್ವರೇನ್ನದಾನಸ್ಯ ಶ್ರವಣೇ ವಸನಸ್ಯ ಚ ।
ಧಾನ್ಯಸ್ಯ ವಾಸವೇ ವಿಪ್ರಾ ವಾರುಣೇ ಚೌಷಧಸ್ಯ ಚ ॥ ೨೫ ॥

೨೦–೨೫. ಕೃತ್ತಿಕಾನಕ್ಷತ್ರದಲ್ಲಿ ಸುವರ್ಣದ ದಾನವೂ, ರೋಹಿಣಿ ನಕ್ಷತ್ರದಲ್ಲಿ ಕೆಂಪುವಸ್ತ್ರದ ದಾನವೂ, ಮೃಗಶಿರೆಯಲ್ಲಿ ಉಪ್ಪಿನ ದಾನವೂ, ಆರ್ದ್ರೆಯಲ್ಲಿ ಚಿಗಳಿಯ ದಾನವೂ, ಪುನರ್ವಸುವಿನಲ್ಲಿ ಬೆಳ್ಳಿಯ ದಾನವೂ, ಪುಷ್ಯದಲ್ಲಿ ತುಪ್ಪದ ದಾನವೂ, ಆಶ್ಲೇಷೆಯಲ್ಲಿ ಸುಗಂಧದ್ರವ್ಯಗಳ ದಾನವೂ, ಮಖಾನಕ್ಷತ್ರದಲ್ಲಿ ಎಳ್ಳಿನ ದಾನವೂ, ಪುಬ್ಬಾನಕ್ಷತ್ರದಲ್ಲಿ ತಡಗಣಿಕಾಳಿನ ದಾನವೂ, ಉತ್ತರೆಯಲ್ಲಿ ಭಕ್ಷ್ಯಗಳ ದಾನವೂ, ಹಸ್ತನಕ್ಷತ್ರದಲ್ಲಿ ಪಾಯಸದ ದಾನವೂ, ಚಿತ್ತೆಯಲ್ಲಿ ಚಿತ್ರ ವಸ್ತ್ರಗಳ ದಾನವೂ, ಸ್ವಾತಿಯಲ್ಲಿ ಹುರಿಟ್ಟಿನ ದಾನವೂ, ವಿಶಾಖೆಯಲ್ಲಿ ಲೋಹಗಳ ದಾನವೂ, ಅನುರಾಧೆಯಲ್ಲಿ ಫಲಪುಷ್ಪಗಳ ದಾನವೂ, ಜ್ಯೇಷ್ಠೆಯಲ್ಲಿ ಛತ್ರಿಯ ದಾನವೂ, ಮೂಲದಲ್ಲಿ ಗೆಡ್ಡೆಗೆಣಸುಗಳ ದಾನವೂ, ಪೂರ್ವಾಷಾಢಾನಕ್ಷತ್ರದಲ್ಲಿ ಅನ್ನದಾನವೂ, ಶ್ರವಣದಲ್ಲಿ ವಸ್ತ್ರದಾನವೂ, ಧನಿಷ್ಠೆಯಲ್ಲಿ ಧಾನ್ಯ ದಾನವೂ, ಶತಭಿಷೆಯಲ್ಲಿ ಔಷಧಿಗಳ ದಾನವೂ, ಉತ್ತರಾಭಾದ್ರೆಯಲ್ಲಿ ಸಸ್ಯಗಳ ದಾನವೂ, ರೇವತಿಯಲ್ಲಿ ಹಾಲು

ಅಜಪಾದೇ ಚ ಬೀಜಾನಾಂ ಸಸ್ಯಾನಾಂ ತದನಂತರೇ ।
ಗೋರಸಾನಾಂ ತಥಾ ಪೌಷ್ಣೇ ಸ್ನಾನಾನಾಮಥ ಚಾಶ್ವಿನೇ ॥ ೨೬ ॥

ತಿಲಾನಾಂ ಚ ತಥಾ ದಾನಂ ಭರಣೀಷು ಮಹಾಫಲಂ ।
ಪ್ರತಿಪದ್ಯಥ ಪುಷ್ಪಾಣಾಂ ದ್ವಿತೀಯಾಯಾಂ ಘೃತಸ್ಯ ಚ ॥ ೨೭ ॥

ತೃತೀಯಾಯಾಂ ತು ವಸ್ತ್ರಾಣಾಂ ಚತುರ್ಥ್ಯಾಂ ಕನಕಸ್ಯ ತು ।
ಪಂಚಮ್ಯಾಂ ತು ಫಲಾನಾಂ ವೈ ಷಷ್ಠ್ಯಾಂ ಸ್ನಾನಸ್ಯ ಮಾನದಾಃ ॥ ೨೮ ॥

ಸಪ್ತಮ್ಯಾಂ ಚಾಪ್ಯಪೂಪಾನಾಮಷ್ಟಮ್ಯಾಂ ಚ ಗುಡಸ್ಯ ಚ ।
ಕುಲ್ಮಾಷಸ್ಯ ನವಮ್ಯಾಂತು ದಶಮ್ಯಾಂ ರಜತಸ್ಯ ಚ ॥ ೨೯ ॥

ಏಕಾದಶ್ಯಾಂ ಸುವರ್ಣಸ್ಯ ದ್ವಾದಶ್ಯಾಂ ವಸನಸ್ಯ ಚ ।
ತ್ರಯೋದಶ್ಯಾಂ ಸುಗಂಧಾನಾಂ ಸಿತಾಯಾಸ್ತದನಂತರಂ ॥ ೩೦ ॥

ದಾನಂ ಚ ಪರಮಾನ್ನಸ್ಯ ಪಂಚದಶ್ಯಾಂ ಮಹಾಫಲಂ ।
ವೈಶಾಖಶುಕ್ಲಪಕ್ಷೇ ತು ತೃತೀಯಾಯಾಂ ದ್ವಿಜೋತ್ತಮಾಃ ॥ ೩೧ ॥

ಮೊದಲಾದ ಗೋರಸಗಳ ದಾನವೂ, ಅಶ್ವಿನಿಯಲ್ಲಿ ಸ್ನಾನ ದಾನವೂ, ಭರಣಿಯಲ್ಲಿ ಎಳ್ಳಿನ ದಾನವೂ ಸಹ ಮಹಾ ಫಲವುಳ್ಳದ್ದಾಗುತ್ತವೆ.

೨೭–೩೦. ಪ್ರತಿಪತ್ತಿನಲ್ಲಿ ಹೂವುಗಳ ದಾನವೂ, ದ್ವಿತೀಯೆಯಲ್ಲಿ ತುಪ್ಪದ ದಾನವೂ, ತೃತೀಯಲ್ಲಿ ವಸ್ತ್ರಗಳ ದಾನವೂ, ಚತುರ್ಥಿಯಲ್ಲಿ ಚಿನ್ನದ ದಾನವೂ, ಪಂಚಮಿಯಲ್ಲಿ ಫಲಗಳ ದಾನವೂ, ಷಷ್ಠಿಯಲ್ಲಿ ಸ್ನಾನದಾನವೂ, ಸಪ್ತಮಿಯಲ್ಲಿ ಭಕ್ಷ್ಯಗಳ ದಾನವೂ, ಅಷ್ಟಮಿಯಲ್ಲಿ ಬೆಲ್ಲದ ದಾನವೂ, ನವಮಿಯಲ್ಲಿ ಹಲಸಂದೆಯ ದಾನವೂ, ದಶಮಿಯಲ್ಲಿ ಬೆಳ್ಳಿಯ ದಾನವೂ, ಏಕಾದಶಿಯಲ್ಲಿ ಚಿನ್ನದ ದಾನವೂ, ದ್ವಾದಶಿಯಲ್ಲಿ ವಸ್ತ್ರದಾನವೂ, ತ್ರಯೋದಶಿಯಲ್ಲಿ ಸುಗಂಧಿ ವಸ್ತುಗಳ ದಾನವೂ, ಚತುರ್ದಶಿಯಲ್ಲಿ ಸಕ್ಕರೆಯ ದಾನವೂ, ಅಮಾ ಪೌರ್ಣಮಿಗಳಲ್ಲಿ ಪರಮಾನ್ನದ ದಾನವೂ, ಮಹಾಫಲದಾಯಕಗಳಾಗುತ್ತವೆ

೩೧–೩೪. ವೈಶಾಖ ಶುಕ್ಲ ತೃತೀಯಾ ದಿನದಲ್ಲಿ ಯಾವ ದಾನಮಾಡಿದರೂ ಅದು ಅಕ್ಷಯಫಲಪ್ರದವಾಗುತ್ತದೆ. ಆಗ ಅಕ್ಷತೆಗಳ ದಾನವು ವಿಶೇಷ ಫಲಪ್ರದವಾಗುತ್ತದೆ. ಮಾಘಮಾಸದಲ್ಲಿ ಶ್ರವಣನಕ್ಷತ್ರದಿಂದ ಕೂಡಿದ ಶುಕ್ಲ ದ್ವಾದಶಿಯಲ್ಲಿ

ಯುದ್ಧದಾತಿ ನರಶ್ರೇಷ್ಠಾಸ್ತತ್ರದಕ್ಷಯ್ಯಮಶ್ನುತೇ ।
ವಿಶೇಷೇಣ ತಥಾ ದಾನಮುಕ್ತತಾನಾಂ ಮಹಾಫಲಂ ॥ ೩೨ ॥

ಮಾಘೇ ಶ್ರವಣಸಂಯುಕ್ತಾ ಶುಕ್ಲಾ ಸ್ಯಾದ್ದ್ವಾದಶೀ ಯದಾ ।
ತಿಲದಾನಾಂ ಮಹತ್ಪುಣ್ಯಂ ವಿನಾಪಿ ಶ್ರವಣೇನ ತು ॥ ೩೩ ॥

ಮಾಸಿ ಭಾದ್ರಪದೇ ಶುಕ್ಲೇ ನವಮ್ಯಾಂ ದ್ವಿಜಪುಂಗವಾಃ ।
ಗೋಧೂಮಭಕ್ತಾಂ ಸಗುಡಾಂ ದತ್ವಾ ಪುಣ್ಯಮವಾಪ್ನುಯಾತ್ ॥ ೩೪ ॥

ಏತಾನಿ ದಾನಾನಿ ಚ ಕಾಲಯೋಗೇ
ಪ್ರೋಕ್ತಾನಿ ಪುಣ್ಯಾನಿ ಮಯಾ ದ್ವಿಜೇಂದ್ರಾಃ ।
ದೇಯಾನಿ ಸರ್ವಾಣಿ ವಿನಾಪಿ ಯೋಗಾತ್ ।
ಯೋಗೇನ ಪುಣ್ಯಂ ತ್ವಧಿಕಂ ನಿರುಕ್ತಂ ॥ ೩೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಕಾಲಯೋಗೇ
ದಾನವಿಧಿವರ್ಣನೋನಾಮ ಸಪ್ತದಶಾಧಿಕ
ತ್ರಿಶತತಮೋಽಧ್ಯಾಯಃ

ಎಳ್ಳಿನ ದಾನವು ಮಹಾಪುಣ್ಯಕರವಾಗಿರುತ್ತವೆ. ಇಂತಹ ದ್ವಾದಶಿಯಲ್ಲಿ ಶ್ರವಣ ಯೋಗವಿಲ್ಲದಿದ್ದರೂ ಬಾಧಕವಿಲ್ಲ ಭಾದ್ರಪದಶುಕ್ಲನವಮಿಯಲ್ಲಿ ಗೋಧಿ, ಬೆಲ್ಲ ಇವುಗಳಿಂದ ಕೂಡಿದ ಭಕ್ಷ್ಯದಾನವು ಪುಣ್ಯಕರ.

೩೫. ಎಲೈ ಬ್ರಾಹ್ಮಣೋತ್ತಮರೇ ಈ ದಾನಗಳೆಲ್ಲಾ ಒಂದೊಂದು ಕಾಲ ವಿಶೇಷದಲ್ಲಿ ಪುಣ್ಯಕರಳಾಗುತ್ತವೆಂದು ನಾನು ಹೇಳಿದ್ದೇನೆ. ಅಂತಹ ಕಾಲವಿಶೇಷ ಗಳು ಸಿಕ್ಕದಿದ್ದರೂ ಇವುಗಳನ್ನು ಮಾಡಬೇಕು. ವಿಹಿತಕಾಲದಲ್ಲಿ ಹೆಚ್ಚು ಫಲಪ್ರದ ವಾಗುತ್ತವೆ ಎಂದೂ ಹೇಳಲಾಗಿದೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಕಾಲ
ಯೋಗದಲ್ಲಿ ದಾನವಿಧಿವರ್ಣನವೆಂಬ ಮುನ್ನೂರ
ಹದಿನೇಳನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟಾದಶೋತ್ತರತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ವ್ರತಂ ನಕ್ಷತ್ರಸತ್ರಾಖ್ಯಂ ಸದಾನಂ ಕಥಯಸ್ವ ನಃ ।
ಸರ್ವಧರ್ಮಭೃತಾಂ ಶ್ರೇಷ್ಠ ಪ್ರತ್ಯಕ್ಷಾಮಲದರ್ಶನ ॥ ೧ ॥

॥ ಹಂಸ ಉವಾಚ ॥

ಕೃತ್ತಿಕಾಸು ಮಹಾಭಾಗಾಃ ಪಾಯಸೇನ ಸಸರ್ಪಿಷಾ ।
ಸಂತರ್ಪ್ಯ ಬ್ರಾಹ್ಮಣಾನ್ಸಾಧೂನ್ಲೋಕಾನ್ ಪ್ರಾಪ್ನೋತ್ಯನುತ್ತಮಾನ್ ॥ ೨ ॥

ರೋಹಿಣ್ಯಾಂ ಪ್ರಥಿತೈರ್ಮಾಂಸೈರ್ಮಾಷೈರನ್ನೇನ ಸರ್ಪಿಷಾ ।
ಪಯೋನುಪಾನಂ ದಾತವ್ಯಂ ಚಾನೃಣಾರ್ಥಂ ದ್ವಿಜಾತಯೇ ॥ ೩ ॥

ಮುನ್ನೂರ ಹದಿನೆಂಟನೆಯ ಅಧ್ಯಾಯ.

೧-೪. ಋಷಿಗಳು ಪ್ರಶ್ನೆ ಮಾಡುತ್ತಾರೆ :— ಎಲೈ ಧಾರ್ಮಿಕಾಗ್ರೇಸರನೇ ನಕ್ಷತ್ರಸತ್ರವೆಂಬ ವ್ರತವನ್ನು ವಿಹಿತವಾದ ದಾನಗಳೊಡನೆ ನಮಗೆ ಹೇಳಬೇಕು. ಎಲ್ಲಾ ವಿಷಯದಲ್ಲೂ ಶುದ್ಧವಾದ ಪ್ರತ್ಯಕ್ಷಜ್ಞಾನವನ್ನೇ ನೀನು ಹೊಂದಿರುವೆಯಷ್ಟೆ. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಪೂಜ್ಯರೇ, ಕೃತ್ತಿಕಾನಕ್ಷತ್ರದಲ್ಲಿ ತುಪ್ಪದಿಂದ ಕೂಡಿದ ಪಾಯಸದಿಂದ ಸಾಧುಗಳಾದ ಬ್ರಾಹ್ಮಣರನ್ನು ತೃಪ್ತಿಪಡಿಸಿದವನು ಉತ್ತಮ ಲೋಕಗಳನ್ನು ಹೊಂದುತ್ತಾನೆ. ರೋಹಿಣೀ ನಕ್ಷತ್ರದಲ್ಲಿ ಪ್ರಸಿದ್ಧವಾದ ಮಾಂಸ, ಉದ್ದು, ಅನ್ನ, ತುಪ್ಪ, ಹಾಲು ಇವುಗಳಿಂದ ಕೂಡಿದ ಭೋಜನವನ್ನು ದ್ವಿಜರಿಗೆ ದಾನಮಾಡಬೇಕು. ಇದರಿಂದ ತಾನೂ ಅನೃಣನಾಗುತ್ತಾನೆ.

ದೋಗ್ಧ್ರೀಂ ದತ್ವಾ ಸವತ್ಸಾಂ ತು ನಕ್ಷತ್ರೇ ಸೋಮದೈವತೇ ।
ಗಚ್ಛೇತ ಮಾನುಷಾನ್ಲೋಕಾನ್ ಸ್ವರ್ಗವಾಸಮನುತ್ತಮಂ ॥ ೪ ॥

ಆರ್ದ್ರಾಯಾಂ ಕೃಸರಂ ದತ್ವಾ ತೈಲಮಿಶ್ರಮುಪೋಷಿತಃ ।
ನರಸ್ತರತಿ ದುರ್ಗಾಣಿ ಕ್ಷುರಧಾರಾಂಸ್ತು ಪರ್ವತಾನ್ ॥ ೫ ॥

ಪೂಪಾನ್ಪುನರ್ವಸೌ ದತ್ವಾ ತಥೈವಾನ್ನಂ ಚ ಶೋಭನಂ ।
ಯಶಸ್ವೀ ರೂಪಸಂಪನ್ನೋ ಬಹ್ವನ್ನೇ ಜಾಯತೇ ಕುಲೇ ॥ ೬ ॥

ಪುಷ್ಯೇ ತು ಕನಕಂ ದತ್ವಾ ಕೃತಂ ವಾಕೃತಮೇವ ಚ ।
ಅನಾಲೋಕೇಷು ಲೋಕೇಷು ಸೋಮವತ್ಸ ವಿರಾಜತೇ ॥ ೭ ॥

ಆಶ್ಲೇಷಾಸು ಚ ಯೋ ರೂಪ್ಯಂ ವೃಷಭಂ ವಾ ಪ್ರಯಚ್ಛತಿ ।
ಸ ಸರ್ವಭಯನಿರ್ಮುಕ್ತಃ ಶುಭಂ ಚಾಪ್ಯಧಿಗಚ್ಛತಿ ॥ ೮ ॥

ಮೃಗಶಿರಾ ನಕ್ಷತ್ರದಲ್ಲಿ ಕರುವಿನಿಂದ ಕೂಡಿದ ಕರೆಯುವ ಹಸುವನ್ನು ದಾನಮಾಡಿದವನು ಅಮಾನುಷಸುಖದಿಂದಿದ್ದು ಸ್ವರ್ಗವನ್ನೇ ಹೊಂದುತ್ತಾನೆ.

೫-೧೦. ಆರ್ದ್ರಾನಕ್ಷತ್ರದಲ್ಲಿ ಉಪವಾಸವಿದ್ದು ತೈಲದೊಡನೆ ಚಿಗಳಿಯನ್ನು ದಾನಮಾಡಿದವನು ದುರ್ಗಸ್ಥಾನಗಳನ್ನೂ, ಕತ್ತಿಯ ಅಲಗುಗಳನ್ನೂ ಪರ್ವತಗಳನ್ನೂ ಸಹ ದಾಟುತ್ತಾನೆ. ಪುನರ್ವಸುವಿನಲ್ಲಿ ಭಕ್ಷ್ಯಗಳನ್ನೂ ಒಳ್ಳೆಯ ಅನ್ನವನ್ನೂ ದಾನಮಾಡಿದವನು ಯಶಸ್ವಿಯಾಗಿಯೂ, ಸುರೂಪಿಯಾಗಿಯೂ ಇದ್ದು ಅನ್ನಸಮೃದ್ಧಿಯುಳ್ಳ ವಂಶದಲ್ಲಿ ಜನಿಸುತ್ತಾನೆ. ಪುಷ್ಯನಕ್ಷತ್ರದಲ್ಲಿ ಆಭರಣರೂಪದಿಂದಲಾಗಲಿ ಹಾಗೆಯೇ ಅಗಲಿ ಚಿನ್ನವನ್ನು ದಾನಮಾಡಿದವನು ಬೆಳಕನ್ನೇ ಅಪೇಕ್ಷಿಸದಿರುವ ಪ್ರಕಾಶಮಾನವಾದ ಲೋಕಗಳಲ್ಲಿ ಚಂದ್ರನಂತೆ ವಿರಾಜಿಸುತ್ತಾನೆ. ಆಶ್ಲೇಷಾ ನಕ್ಷತ್ರದಲ್ಲಿ ಬೆಳ್ಳಿಯನ್ನಾಗಲಿ, ವೃಷಭವನ್ನಾಗಲೀ ದಾನಮಾಡಿದವನು ಎಲ್ಲಾ ಭಯಗಳನ್ನೂ ನೀಗಿಕೊಂಡು ಮಂಗಲವನ್ನೂ ಹೊಂದುತ್ತಾನೆ. ಮಖಾ

ಮಘಾಸು ತಿಲಪೂರ್ಣಾನಿ ವರ್ಧಮಾನಾನಿ ಮಾನವಃ ।
ಪ್ರದಾಯ ಪುತ್ರಪಶುಮಾನಿಹ ಪ್ರೇತ್ಯ ಚ ಮೋದತೇ ॥ ೯ ॥

ಫಾಲ್ಗುನೀಪೂರ್ವಸಮಯೇ ಬ್ರಾಹ್ಮಣಾನಾಮುಪೋಷಿತಃ ।
ಭಕ್ಷ್ಯಂ ಫಾಣಿತಸಂಯುಕ್ತಂ ದತ್ವಾ ಸೌಭಾಗ್ಯಮೃಚ್ಛತಿ ॥ ೧೦ ॥

ಘೃತಕ್ಷೀರಸಮಾಯುಕ್ತಂ ವಿಧಿವತ್ ಷಾಷ್ಟಿಕೋದನಂ ।
ಉತ್ತರಾವಿಷಯೇ ದತ್ವಾ ಸ್ವರ್ಗಲೋಕೇ ಮಹೀಯತೇ ॥ ೧೧ ॥

ಯದ್ಯತ್ಪ್ರದೀಯತೇ ದಾನಂ ಚೋತ್ತರಾವಿಷಯೇ ನರೈಃ ।
ಮಹಾಫಲಮತೀತಂ ಚ ಭವತೀತಿ ವಿನಿಶ್ಚಯಃ ॥ ೧೨ ॥

ಹಸ್ತೇ ಹಸ್ತಿರಥಂ ದತ್ವಾ ಚತುರ್ಯುಕ್ತಮುಪೋಷಿತಃ ।
ನರಸ್ತರತಿ ದುರ್ಗಾಣಿ ಕ್ಷುರಧಾರಾಂಶ್ಚ ಪರ್ವತಾನ್ ॥ ೧೩ ॥

ಚಿತ್ರಾಯಾಂ ವೃಷಭಂ ದತ್ವಾ ಪುಣ್ಯಗಂಧಾಂಶ್ಚ ಮಾನವಃ ।
ಚರತ್ಯಪ್ಸರಸಾಂ ಲೋಕೇ ರಮತೇ ನಂದನೇ ವನೇ ॥ ೧೪ ॥

ನಕ್ಷತ್ರದಲ್ಲಿ ಬಣ್ಣದ ಕುಕ್ಕೆಗಳಲ್ಲಿ ತುಂಬಿದ ಎಳ್ಳನ್ನು ದಾನಮಾಡಿದವನು ಈ ಲೋಕದಲ್ಲಿ ಪಶುಪುತ್ರಾದಿ ಸಮೃದ್ಧಿಯಿಂದಿದ್ದು ಸ್ವರ್ಗದಲ್ಲಿ ಸುಖಿಸುತ್ತಾನೆ. ಪುಬ್ಬಾನಕ್ಷತ್ರದಲ್ಲಿ ಉಪವಾಸವಿದ್ದು ಬ್ರಾಹ್ಮಣರಿಗೆ ಬೆಲ್ಲದ ಪಾಕದಿಂದ ಕೂಡಿದ ಭಕ್ಷ್ಯಗಳಿಂದ ಭೋಜನಮಾಡಿಸಿದವನು ಸೌಭಾಗ್ಯಶಾಲಿಯಾಗುತ್ತಾನೆ.

೧೧–೧೪. ಉತ್ತರಾನಕ್ಷತ್ರದಲ್ಲಿ ಹಾಲು ತುಪ್ಪಗಳಿಂದ ಕೂಡಿದ ಶಾಲ್ಯಾನ್ನವನ್ನು ಯಥಾವಿಧಿಯಾಗಿ ದಾನಮಾಡಿದವನು ಸ್ವರ್ಗದಲ್ಲಿ ಪೂಜ್ಯನಾಗುತ್ತಾನೆ. ಈ ಉತ್ತರಾನಕ್ಷತ್ರದಲ್ಲಿ ಯಾವಯಾವ ದಾನವನ್ನು ಮನುಷ್ಯರು ಮಾಡುತ್ತಾರೆಯೋ ಅವೆಲ್ಲವೂ ಮಹಾಫಲವನ್ನೂ ಮೀರಿ ಫಲಕೊಡುತ್ತವೆ ಎಂಬುದು ನಿಶ್ಚಿತವಿಷಯ ಹಸ್ತನಕ್ಷತ್ರದಲ್ಲಿ ನಾಲ್ಕು ಆನೆಗಳಿಂದ ಕೂಡಿದ ರಥವನ್ನು ಉಪವಾಸದಿಂದಿದ್ದು ದಾನಮಾಡಿದ್ದೇ ಆದರೆ ದುರ್ಗಪರ್ವತಾದಿಗಳನ್ನೂ ದಾಟುತ್ತಾನೆ. ಚಿತ್ರಾನಕ್ಷತ್ರದಲ್ಲಿ ಎತ್ತನ್ನೂ ಸುವಾಸನೆಯ ವಸ್ತುಗಳನ್ನೂ ದಾನಮಾಡಿದವನು ಅಪ್ಸರೆಯರ ಲೋಕದಲ್ಲಿ ಸಂಚರಿಸುತ್ತಾ ನಂದನವನದಲ್ಲಿ ವಿಹರಿಸುತ್ತಾನೆ.

ಸ್ವಾತೀಷ್ವಥ ಧನಂ ದತ್ವಾ ಯದಿಷ್ಟತಮಮಾತ್ಮನಃ ।
ಪ್ರಾಪ್ನೋತಿ ಲೋಕಾನ್ಸ ಶುಭಾನಿಹೈವ ಚ ಮಹದ್ಯಶಃ ॥ ೧೫ ॥

ವಿಶಾಖಾಯಾಮನಡ್ವಾಹಂ ಧೇನುಂ ದತ್ವಾ ಚ ದುಗ್ಧದಾಂ ।
ಸಪ್ರಾಸಂಗಂ ಚ ಶಕಟಂ ಸಧಾನ್ಯಂ ವಸ್ತ್ರಸಂಯುತಂ ॥ ೧೬ ॥

ಪಿತೄಂಶ್ಚ ದೇವಾನ್ಪ್ರೀಣಾತಿ ಪ್ರೇತ್ಯ ಚಾನಂತ್ಯಮಶ್ನುತೇ ।
ನ ಚ ದುರ್ಗಾಣ್ಯವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥ ೧೭ ॥

ದತ್ವಾ ಯಥೋಕ್ತಂ ವಿಪ್ರೇಭ್ಯೋ ವೃತ್ತಿಮಿಷ್ಟಾಂ ಸ ವಿಂದತಿ ।
ನರಕಾದೀಂಶ್ಚ ಸ ಕ್ಲೇಶಾನ್ನ ಪ್ರಾಪ್ನೋತೀತಿ ನಿಶ್ಚಯಃ ॥ ೧೮ ॥

ಅನುರಾಧಾಸು ಪ್ರಾವಾರಂ ವಸ್ತ್ರಾಂತರಮುಪೋಷಿತಃ ।
ದತ್ವಾ ಯುಗಶತಂ ಚಾಪಿ ನರಃ ಸ್ವರ್ಗೇ ಮಹೀಯತೇ ॥ ೧೯ ॥

ಕಾಲಶಾಕಂ ತು ವಿಪ್ರೇಭ್ಯೋ ದತ್ವಾ ಮರ್ತ್ಯಃ ಸಮೂಲಕಂ ।
ಜ್ಯೇಷ್ಠಾಯಾಮೃದ್ಧಿಮಿಷ್ಟಾಂ ಚ ಗತಿಮಿಷ್ಟಾಂ ಚ ಗಚ್ಛತಿ ॥ ೨೦ ॥

೧೫-೨೦. ಸ್ವಾತೀನಕ್ಷತ್ರದಲ್ಲಿ ದ್ರವ್ಯದಾನಮಾಡಿದವನು ತನಗೆ ಇಷ್ಟವಾದ ಲೋಕವನ್ನು ಹೊಂದುವುದಲ್ಲದೆ ಇಲ್ಲಿರುವವರಿಗೂ ಯಶಸ್ವಿಯಾಗಿ ಬದುಕುತ್ತಾನೆ. ವಿಶಾಖಾನಕ್ಷತ್ರದಲ್ಲಿ ಎತ್ತನ್ನೂ, ಹಾಲು ಕರೆಯುವ ಹಸುವನ್ನೂ ನೊಗದೊಡನೆ ಗಾಡಿಯನ್ನೂ ಧಾನ್ಯವಸ್ತ್ರ ಇವುಗಳೊಡನೆ ದಾನಮಾಡಿದವನು ಪಿತೃಗಳನ್ನೂ ದೇವತೆಗಳನ್ನೂ ತೃಪ್ತಿಪಡಿಸಿ ಮೃತಿಹೊಂದಿದನಂತರ ಅಕ್ಷಯಫಲವನ್ನೂ ಹೊಂದುತ್ತಾನೆ. ಯಾವ ದುಃಸ್ಥಿತಿಯನ್ನೂ ಅನುಭವಿಸದೆ ಸ್ವರ್ಗವನ್ನು ಹೊಂದುತ್ತಾನೆ. ಬ್ರಾಹ್ಮಣರಿಗೆ ಇಷ್ಟವಾದುದನ್ನು ದಾನಮಾಡಿ ತಾನೂ ಇಷ್ಟವಾದ ಜೀವಿಕೆಯನ್ನು ಹೊಂದುತ್ತಾನೆ ಇವನು ಎಂದಿಗೂ ನರಕಭಾಗಿಯಾಗುವುದಿಲ್ಲ ಅನೂರಾಧಾ ನಕ್ಷತ್ರದಲ್ಲಿ ಉಪವಾಸವಿದ್ದು ಹೊದಿಯುವ ಮತ್ತು ಉಡುವ ವಸ್ತ್ರವನ್ನು ದಾನ ಮಾಡಿದವನು ಅನೇಕಯುಗಪರ್ಯಂತ ಸ್ವರ್ಗದಲ್ಲಿ ಪೂಜ್ಯನಾಗುತ್ತಾನೆ. ಜ್ಯೇಷ್ಠಾ ನಕ್ಷತ್ರದಲ್ಲಿ ಮೂಲಂಗಿಯೊಡನೆ ಕಪ್ಪುತರಕಾರಿಯನ್ನು ಬ್ರಾಹ್ಮಣರಿಗೆ ದಾನಮಾಡಿದವನು ತನಗೆ ಇಷ್ಟವಾದ ಸಮೃದ್ಧಿಯನ್ನೂ ಗತಿಯನ್ನೂ ಹೊಂದುತ್ತಾನೆ.

ಮೂಲೇ ಮೂಲಫಲಂ ದತ್ತ್ವಾ ಬ್ರಾಹ್ಮಣೇಭ್ಯಃ ಸಮಾಹಿತಃ ।
ಸ ಪಿತೄನ್ಪ್ರೀಣಯತ್ಯೇವ ಗತಿಮಿಷ್ಟಾಂ ಚ ಗಚ್ಛತಿ ॥ ೨೧ ॥

ಅಥ ಪೂರ್ವಾಸ್ವಾಷಾಢಾಸು ದಧಿಪಾತ್ರಾಣ್ಯುಪೋಷಿತಃ ।
ಕುಲೇ ವೃತ್ತೋಪಸಂಪನ್ನೇ ಬ್ರಾಹ್ಮಣೇ ವೇದಪಾರಗೇ ॥ ೨೨ ॥

ಪ್ರದಾಯ ಜಾಯತೇ ಪ್ರೇತ್ಯ ಕುಲೇ ಸ ಬಹುಗೋಕುಲೇ ।
ಉದಕುಂಭಂ ಸಸರ್ಪಿಷ್ಕಂ ಪ್ರಭೂತಂ ಮಧುಫಾಣಿತಂ ॥ ೨೩ ॥

ದತ್ತ್ವೋತ್ತರಾಸ್ವಾಷಾಢಾಸು ಸರ್ವಾನ್ಲೋಕಾನ್ಸಮಶ್ನುತೇ ।
ದುಗ್ಧಂ ತ್ವಭಿಜಿತೇ ಯೋಗೇ ದತ್ತ್ವಾ ಮಧುಘೃತಾಪ್ಲುತಂ ॥ ೨೪ ॥

ಧರ್ಮ ನಿತ್ಯಂ ಮನೀಷಿಭ್ಯಃ ಸ್ವರ್ಗಲೋಕೇ ಮಹೀಯತೇ ।
ಶ್ರವಣೇ ಕಂಬಲಂ ದತ್ತ್ವಾ ವಸ್ತ್ರಾಂತರಿತಮೇವ ಚ ॥ ೨೫ ॥

೨೧–೨೭. ಮೂಲನಕ್ಷತ್ರದಲ್ಲಿ ಫಲಮೂಲಗಳನ್ನು ಬ್ರಾಹಣರಿಗೆ ಶಾಂತನಾಗಿ ದಾನಮಾಡಿದವನು ಪಿತೃಗಳನ್ನೂ ಸಂತೋಷಪಡಿಸಿ ಇಷ್ಟವಾದ ಗತಿಯನ್ನೂ ಹೊಂದುತ್ತಾನೆ. ಪೂರ್ವಾಷಾಢಾ ನಕ್ಷತ್ರದಲ್ಲಿ ಉಪವಾಸಮಾಡಿ ಮೊಸರಿನಿಂದ ತುಂಬಿದ ಪಾತ್ರೆಗಳನ್ನು ಸದ್ವೃತ್ತಿಯುಳ್ಳ ವೇದಜ್ಞನಾದ ಬ್ರಾಹ್ಮಣನಿಗೆ ದಾನಮಾಡಿದವನು ದೇಹವಿಯೋಗಾಂತರ ಬಹುಗೋವುಗಳುಳ್ಳ ಮಹಾಕುಲದಲ್ಲಿ ಜನಿಸುತ್ತಾನೆ. ಉತ್ತರಾಷಾಢೆಯಲ್ಲಿ ಉದಕಕುಂಭವನ್ನೂ ತುಪ್ಪದೊಡನೆ ಕೂಡಿರುವ ಬೆಲ್ಲದ ಪಾನಕವನ್ನೂ ದಾನಮಾಡಿದವನು ಎಲ್ಲಾ ಲೋಕಗಳಿಗೂ ಭಾಗಿಯಾಗುತ್ತಾನೆ. ಅಭಿಜಿದ್ಯೋಗದಲ್ಲಿ ಜೇನು ಮತ್ತು ತುಪ್ಪದಿಂದ ಕೂಡಿದ ಹಾಲನ್ನೂ ಕವಚವನ್ನೂ ದಾನಮಾಡಿದವನು ಸ್ವರ್ಗಸುಖಕ್ಕೆ ಭಾಗಿಯಾಗುತ್ತಾನೆ. ಶ್ರವಣದಲ್ಲಿ ವಸ್ತ್ರದೊಡನೆ ಕಂಬಳಿಯನ್ನು ದಾನಮಾಡಿದವನು ಶುಭ್ರವಾದ ಯಾನದಿಂದ ಪ್ರಕಾಶಮಾನವಾದ ಸ್ವರ್ಗವನ್ನು ಹೊಂದುತ್ತಾನೆ. ಧನಿಷ್ಠಾನಕ್ಷತ್ರದಲ್ಲಿ ಗೋವುಗಳಿಂದ ಕೂಡಿದ ವಸ್ತ್ರದಿಂದ ಕೂಡಿ ಹೊಸದಾದ ಯಾನವನ್ನು ದಾನಮಾಡಿದವನು ಮುಂದಿನ

ಶ್ವೇತೇನ ಯಾತಿ ಯಾನೇನ ಸ್ವರ್ಗಲೋಕಾನಸಂವೃತಾನ್ ।
ಗೋಪ್ರಯುಕ್ತಂ ಧನಿಷ್ಠಾಸು ಯಾನಂ ದತ್ವಾ ಸಮಾಹಿತಃ ॥ ೨೬ ॥

ವಸ್ತ್ರರಶ್ಮಿಸಮಂ ಸದ್ಯಃ ಪ್ರೇತ್ಯ ರಾಜ್ಯಂ ಪ್ರಪದ್ಯತೇ ।
ಗಂಧಾಞ್ಛತಭಿಷಗ್ಯೋಗೇ ದತ್ವಾ ಸಾಗುರುಚಂದನಾನ್ ॥ ೨೭ ॥

ಪ್ರಾಪ್ನೋತ್ಯಪ್ಸರಸಾಂ ಲೋಕಾನ್ಪ್ರೇತ್ಯ ಗಂಧಾಂಶ್ಚ ಶಾಶ್ವತಾನ್ ।
ಪೂರ್ವಾಭಾದ್ರಪದಾಯೋಗೇ ರಾಜಮಾಷಾನ್ಪ್ರದಾಯ ಚ ॥ ೨೮ ॥

ಸರ್ವಭಕ್ಷ್ಯಫಲೋಪೇತಂ ಸ ವೈ ಪ್ರೇತ್ಯ ಸುಖೀ ಭವೇತ್ ।
ಔರಭ್ರಂ ತೂತ್ತರಾಯೋಗೇ ಯಸ್ತು ಮಾಂಸಂ ಪ್ರಯಚ್ಛತಿ ॥ ೨೯ ॥

ಸ ಪಿತ್ರ್ಯಾನ್ಪ್ರೀಣಯತ್ಯೇವ ಪ್ರೇತ್ಯ ಚಾನಂತ್ಯಮಶ್ನುತೇ ।
ಕಾಂಸ್ಯೋಪದೋಹನಾಂ ಧೇನುಂ ರೇವತ್ಯಾಂ ಯಃ ಪ್ರಯಚ್ಛತಿ ॥ ೩೦ ॥

ಸ ಪ್ರೇತ್ಯ ಕಾಮಾನಾದಾಯ ದಾತಾರಮುಪತಿಷ್ಠತೇ ।
ರಥಮಶ್ವಸಮಾಯುಕ್ತಂ ದತ್ವಾಶ್ವಿನ್ಯಾಂ ನರೋತ್ತಮಃ ॥ ೩೧ ॥

ಜನ್ಮದಲ್ಲಿ ರಾಜ್ಯವನ್ನೇ ಹೊಂದುತ್ತಾನೆ. ಶತಭಿಷೆಯಲ್ಲಿ ಅಗರು ಚಂದನಾದಿ ಸುಗಂಧಿದ್ರವ್ಯಗಳನ್ನು ದಾನಮಾಡಿದವನು ದೇಹಾನಂತರ ಅಪ್ಸರೆಯರ ಲೋಕ ಹೊಂದುತ್ತಾನೆ. ಶಾಶ್ವತವಾದ ಗಂಧವನ್ನೂ ಹೊಂದುತ್ತಾನೆ.

೨೮-೩೨ ಪೂರ್ವಾಭಾದ್ರೆಯಲ್ಲಿ ಎಲ್ಲಾ ವಿಧವಾದ ಭಕ್ಷ್ಯ ಮತ್ತು ಫಲಗಳೊಡನೆ ರಾಜಮಾಷ (ಬಿಳಿಯ ದಪ್ಪ ತಡಗಣಿ) ವನ್ನು ದಾನಮಾಡಿದವನು ಲೋಕಾಂತರದಲ್ಲಿ ಸುಖಿಯಾಗುತ್ತಾನೆ. ಉತ್ತರಾಭಾದ್ರೆಯಲ್ಲಿ ಕುರಿಯ ಮಾಂಸವನ್ನು ದಾನಮಾಡಿದವನು ಪಿತೃಗಳನ್ನು ಸಂತೋಷಪಡಿಸಿ ದೇಹಾನಂತರ ಅಕ್ಷಯ ಫಲವನ್ನೂ ಹೊಂದುತ್ತಾನೆ. ರೇವತೀ ನಕ್ಷತ್ರದಲ್ಲಿ ಕಂಚಿನ ಕರೆಯುವ ಪಾತ್ರೆಯೊಡನೆ ಗೋದಾನವನ್ನು ಮಾಡಿದವನು ಲೋಕಾಂತರದಲ್ಲಿ ಎಲ್ಲಾ ಇಷ್ಟಗಳನ್ನೂ ಹೊಂದಿ ಕೊನೆಗೆ ದಾತೃಗಳನ್ನೂ ದಾತೃವಾಗಿ ಸೇವಿಸುತ್ತಾನೆ. ಕುದುರೆಗಳೊಡಗೂಡಿದ ರಥವನ್ನು ಅಶ್ವಿನೀನಕ್ಷತ್ರದಲ್ಲಿ ದಾನಮಾಡಿದವನು ತೇಜಸ್ವಿಯಾಗಿ ಆನೆ ಕುದುರೆರಥಗಳಿಂದ ಸಮೃದ್ಧವಾದ ಕುಲದಲ್ಲಿ ಜನಿಸುತ್ತಾನೆ. ಭರಣೀ ನಕ್ಷತ್ರದಲ್ಲಿ

ಹಸ್ತ್ಯಶ್ವರಥಸಂಪನ್ನಂ ವರ್ಚಸ್ವೀ ಜಾಯತೇ ಕುಲೇ ।
ಭರಣೀಷು ದ್ವಿಜಾತಿಭ್ಯಸ್ತಿಲಧೇನುಂ ಪ್ರದಾಯ ವೈ ।
ಗಾಃ ಸುಪ್ರಸೂತಾಃ ಪ್ರಾಪ್ನೋತಿ ನರಃ ಪ್ರೇತ್ಯ ಯಶಸ್ತಥಾ || ೩೨ ||

ನಕ್ಷತ್ರಸತ್ರಂ ಕಥಿತಂ ಮಯೈತದ್ಯಥೇಷ್ಟ
ಲೋಕಾಭಿಗಮಾಯ ಪುಂಸಾಂ ।
ಕೃತ್ವಾ ಸಕೃನ್ನಾಕಗತಸ್ತು ಕಲ್ಪ
ಮಾಸ್ತೇ ಸುಖಂ ದೇವಪತಿರ್ಯಥಾಸೌ || ೩೩ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಹಂಸಗೀತಾಸು ನಕ್ಷತ್ರಸತ್ರವಿಧಾನಂ ನಾಮ
ಅಷ್ಟಾದಶಾಧಿಕ ತ್ರಿಶತತಮೋಽಧ್ಯಾಯಃ

ದ್ವಿಜರಿಗೆ ತಿಲಧೇನುವನ್ನು ದಾನಮಾಡಿದವನು ಒಳ್ಳೆಯ ಕರೆಯುವ ಹಸುಗಳನ್ನು ಹೊಂದುತ್ತಾನೆ. ಲೋಕಾಂತದಲ್ಲಿಯೂ ಯಶಸ್ವಿಯಾಗುತ್ತಾನೆ.

೩೩. ನಕ್ಷತ್ರಸತ್ರವೆಂಬ ಈ ವಿಧಾನವನ್ನು ಆಯಾಯ ದಾತೃಗಳು ಇಷ್ಟಬಂದ ಲೋಕಗಳಿಗೆ ಹೋಗುವ ಸೌಕರ್ಯಕ್ಕಾಗಿ ನಾವು ಇದುವರಿಗೂ ಇಲ್ಲಿ ಹೇಳಿದೆವು. ಇವುಗಳನ್ನು ಅನೇಕಬಾರಿ ಮಾಡಿದವನು ಸ್ವರ್ಗವನ್ನು ಹೊಂದಿ ಇಂದ್ರನಂತೆ ಕಲ್ಪಪರ್ಯಂತವೂ ಸುಖಿಯಾಗಿರುತ್ತಾನೆ

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ನಕ್ಷತ್ರಸತ್ರವಿಧಾನವೆಂಬ ಮುನ್ನೂರ ಹದಿನೆಂಟನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನವಿಂಶಾಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಭೂಯ ಏವ ತ್ವಮಾಚಕ್ಷ್ವ ದಾನಾನಾಂ ಕಾಲಯೋಗತಃ ।
ಫಲಂ ದ್ವಿಜವರಾಸ್ಮಾಕಂ ಪ್ರತ್ಯಕ್ಷಾಮಲದರ್ಶನ ॥ ೧ ॥

॥ ಹಂಸ ಉವಾಚ ॥

ಸಂಪ್ರಾಪ್ಯ ಚೈತ್ರಮಾಸಸ್ಯ ಶುಕ್ಲಾಂ ಪಂಚದಶೀಂ ನರಃ ।
ಚಿತ್ರಂ ವಸ್ತ್ರಯುಗಂ ದತ್ವಾ ಸೋಪವಾಸೋ ದ್ವಿಜಾತಯೇ ॥ ೨ ॥

ಬ್ರಾಹ್ಮಣಾಂಶ್ಚಾಪರಂ ವಿಪ್ರಾಃ ಸೌಭಾಗ್ಯಂ ಮಹದಾಪ್ನುಯಾತ್ ।
ವೈಶಾಖ್ಯಾಂ ಪೌರ್ಣಮಾಸ್ಯಾಂ ತು ಬ್ರಾಹ್ಮಣಾನ್ಸಪ್ತ ಪಂಚ ವಾ ॥ ೩ ॥

ಮುನ್ನೂರ ಹತ್ತೊಂಭತ್ತನೆಯ ಅಧ್ಯಾಯ.

೧-೫. ಋಷಿಗಳು ಕೇಳುತ್ತಾರೆ:—ಎಲೈ ಪಕ್ಷಿಪರ್ಯ್ಯನೇ ದಾನಗಳಿಗೆ ಆಯಾಯ ಕಾಲಸಂಬಂಧದಿಂದ ಉಂಟಾಗುವ ಫಲಗಳನ್ನು ಪುನಃ ವಿಸ್ತಾರವಾಗಿ ಹೇಳಬೇಕು. ಇದರಲ್ಲಿ ನೀನು ಶ್ರೇಷ್ಠವಾದ ಅಪರೋಕ್ಷಜ್ಞಾನಿಯಾಗಿರುವೆಯಷ್ಟೆ. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ:—ಚೈತ್ರಮಾಸದ ಪೌರ್ಣಮಿಯಲ್ಲಿ ಉಪವಾಸದಿಂದಿದ್ದು ದ್ವಿಜರಿಗೆ ಚಿತ್ರವರ್ಣದ ವಸ್ತ್ರಯುಗ್ಮವನ್ನೂ ಇತರ ಬ್ರಾಹ್ಮಣರಿಗೆ ಬೇರೆ ವಸ್ತ್ರವನ್ನೂ ದಾನಮಾಡಿದವನು ಸೌಭಾಗ್ಯಶಾಲಿಯಾಗುತ್ತಾನೆ. ವೈಶಾಖ ಪೂರ್ಣಿಮೆಯಲ್ಲಿ ಏಳು ಅಥವಾ ಐದು ಜನ ಬ್ರಾಹ್ಮಣರಿಗೆ ಜೇನಿನೊಡನೆ ಕಪ್ಪಾದ ಅಥವಾ ಇತರ ಎಳ್ಳಿನೊಡನೆ ಭೋಜನಮಾಡಿಸಿ ಧರ್ಮರಾಜನು ಪ್ರೀತಿಗೊಳ್ಳಲಿ

ಕ್ಷೌದ್ರಯುಕ್ತೈಸ್ತಿಲೈಃ ಕೃಷ್ಣೈರ್ನಾರ್ಚಯೇದ್ಯದಿ ವೇತರೈಃ ।
ಪ್ರೀಯತಾಂ ಧರ್ಮರಾಜೇತಿ ಯದ್ವಾ ಮನಸಿ ವರ್ತತೇ ॥ ೪ ॥

ಯಾವಜ್ಜೀವಕೃತಾತ್ಪಾಪಾತ್ತತ್ಕ್ಷಣಾದೇವ ಮುಚ್ಯತೇ ।
ತಸ್ಮಿನ್ನೇವ ತಥಾ ಕಾಲೇ ಸಖುರಂ ಕೃಷ್ಣಮಾರ್ಗಣಂ ॥ ೫ ॥

ತಿಲೈಃ ಪ್ರಚ್ಛಾದ್ಯ ವಾಸೋಭಿಃ ಸರ್ವರತ್ನೈರಲಂಕೃತಂ ।
ತಪಸ್ಯಂತೇ ಚ ದಾತವ್ಯಾ ಮಹೀ ಸವನಕಾನನಾ ॥ ೬ ॥

ಕೃಷ್ಣಾಜಿನೇ ತಿಲಾನ್ಕೃತ್ವಾ ಹಿರಣ್ಯಮಧುಸರ್ಪಿಷಾ ।
ದದಾತಿ ಯಸ್ತು ವಿಪ್ರಾಯ ಸರ್ವಂ ತರತಿ ದುಷ್ಕೃತಂ ॥ ೭ ॥

ಸೋಪವಾಸಸ್ತಥಾ ಜ್ಯೇಷ್ಠೇ ಪೂರ್ಣೇತು ಶಶಲಕ್ಷ್ಮಣಿ ।
ಉಪಾನಹೌ ತಥಾ ಛತ್ರಂ ದತ್ವಾತ್ಯಂತಸುಖೀ ಭವೇತ್ ॥ ೮ ॥

ಆಷಾಢ್ಯಾಮನ್ನದಾನಸ್ಯ ಪ್ರಾಪ್ನೋತ್ಯನ್ನಂ ನರೋ ಬಹು ।
ಜಲಧೇನುಪ್ರದಾನೇನ ಶ್ರಾವಣ್ಯಾಂ ಸ್ವರ್ಗಮಾಪ್ನುಯಾತ್ ॥ ೯ ॥

ಎಂದು ಆ ಬ್ರಾಹ್ಮಣರಿಂದ ಆಶೀರ್ವಾದವನ್ನು ಪಡೆದವನು ತನ್ನ ಮನಸ್ಸಿನ ಇಷ್ಟಾರ್ಥಗಳನ್ನು ಪಡೆಯುವನು ಹಾಗೂ ಆಜನ್ಮಕೃತವಾದ ಪಾಪಗಳನ್ನೆಲ್ಲಾ ಆ ಕ್ಷಣದಲ್ಲಿಯೇ ಹೋಗಲಾಡಿಸಿಕೊಳ್ಳುತ್ತಾನೆ. ಅದೇ ಕಾಲದಲ್ಲಿ ಗೊರಸಿನೊಡನೆ ಕೂಡಿರುವ ಕೃಷ್ಣಾಜಿನವನ್ನು ಎಳ್ಳಿನಿಂದ ಮುಚ್ಚಿ ವಸ್ತ್ರ ಮತ್ತು ರತ್ನಗಳಿಂದ ಅಲಂಕರಿಸಿ ದಾನಮಾಡಿದವನೂ ಇದೇ ಫಲವನ್ನು ಹೊಂದುತ್ತಾನೆ.

೬-೯. ಗ್ರೀಷ್ಮಋತುವಿನ ಕೊನೆಯಲ್ಲಿ ಕಾಡುಗಳಿಂದ ಕೂಡಿದ ಭೂಮಿ ದಾನವು ಪ್ರಶಸ್ತ. ಕೃಷ್ಣಾಜಿನದಲ್ಲಿ ಎಳ್ಳನ್ನು ತುಂಬಿ ಜೇನುತುಪ್ಪ ಇವುಗಳೊಡನೆ ಸಹಿರಣ್ಯವಾಗಿ ಬ್ರಾಹ್ಮಣನಿಗೆ ದಾನಮಾಡಿದವನು ಎಲ್ಲಾ ಪಾಪಗಳನ್ನೂ ನೀಗಿಕೊಳ್ಳುತ್ತಾನೆ. ಜ್ಯೇಷ್ಠಮಾಸದ ಪೂರ್ಣಿಮೆಯಲ್ಲಿ ಉಪವಾಸದಿಂದಿದ್ದು ಪಾದರಕ್ಷೆ ಮತ್ತು ಛತ್ರಿಗಳನ್ನು ದಾನಮಾಡಿದವನು ಸುಖಿಯಾಗಿ ಬದುಕುತ್ತಾನೆ ಆಷಾಢ ಪೂರ್ಣಿಮೆಯಲ್ಲಿ ಅನ್ನದಾನ ಮಾಡಿದವನಿಗೆ ಹೆಚ್ಚಾದ ಅನ್ನದ ಪ್ರಾಪ್ತಿಯುಂಟಾಗುತ್ತದೆ. ಶ್ರಾವಣಮಾಸದಲ್ಲಿ ಜಲಧೇನು ದಾನದಿಂದ ಸ್ವರ್ಗಪ್ರಾಪ್ತಿಯುಂಟಾಗುತ್ತದೆ.

ಗೋದಾನಂ ಪ್ರೋಷ್ಠಪಾದೇ ತು ಪೌರ್ಣಮಾಸ್ಯಾಂ ಮಹಾಫಲಂ ।
ಅಶ್ವಯುಜ್ಯಾಂ ಕಾಂಸ್ಯಪಾತ್ರಂ ಘೃತಪೂರ್ಣಂ ದ್ವಿಜಾತಯೇ ॥ ೧೦ ॥

ಸುವರ್ಣಂ ಚ ತಥಾ ದತ್ತ್ವಾ ದೀಪ್ತಿಮಾಂಸ್ತ್ವಭಿಜಾಯತೇ ।
ಕಾರ್ತಿಕ್ಯಾಂ ಚಂದ್ರವರ್ಣಾಭಮನ್ಯವರ್ಣಮಥಾಪಿ ವಾ ॥ ೧೧ ॥

ರತ್ನೈರ್ಗಂಧೈಸ್ತಥಾ ಧಾನ್ಯೈರ್ಬೀಜೈರ್ವಸ್ತ್ರೈಸ್ತಥೈವ ಚ ।
ಕೃತ್ವಾ ಯುಕ್ತಮಘೋಕ್ಷಾಣಂ ದತ್ತ್ವಾ ದೀಪಾನ್ಸಮಂತತಃ ॥ ೧೨ ॥

ಚಂದ್ರೋದಯೇ ನರೋ ದತ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಕಾಂತಾರೇ ಯಮಮಾರ್ಗೇ ತು ತೇನಾಸೌ ವ್ರಜತೇ ಸುಖಂ ॥ ೧೩ ॥

ಸರ್ವಾಣಿ ಚಾಸ್ಯ ಭೋಗಾನಿ ತತ್ರ ಚಾಸೌ ಪ್ರಯಚ್ಛತಿ ।
ಮಾರ್ಗಶೀರ್ಷೇ ತಥಾ ಮಾಸೇ ಪೂರ್ಣೇ ಶಿಶಿರದೀಧಿತೌ ॥ ೧೪ ॥

ಮಹಾರಜತಯುಕ್ತೇನ ವಾಸಸಾ ದ್ವಿಜಪುಂಗವಾನ್ ।
ಆಚ್ಛಾದ್ಯ ಕಾಂಸ್ಯಪಾತ್ರಸ್ಥಂ ಪ್ರಸ್ಥಂ ಕೃತ್ವಾ ಸಮಾಹಿತಃ ॥ ೧೫ ॥

ಭಾದ್ರಪದ ಪೂರ್ಣಿಮೆಯಲ್ಲಿ ಗೋದಾನವು ಹೆಚ್ಚು ಫಲಪ್ರದವಾಗುತ್ತದೆ. ಆಶ್ವಯುಜ ಮಾಸದಲ್ಲಿ ತುಪ್ಪದಿಂದ ತುಂಬಿದ ಕಂಚಿನ ಪಾತ್ರೆಯನ್ನೂ ಸುವರ್ಣವನ್ನೂ ಬ್ರಾಹ್ಮಣನಿಗೆ ದಾನಮಾಡಿದವನು ಬಹಳ ತೇಜಸ್ವಿಯಾಗುತ್ತಾನೆ. ಕಾರ್ತಿಕ ಮಾಸದಲ್ಲಿ ರತ್ನ, ಗಂಧ, ಧಾನ್ಯ, ವಸ್ತ್ರ, ಬೀಜಗಳು ಇವುಗಳೊಡನೆ ಬಿಳಿಯ ಅಥವಾ ಬೇರೆ ವರ್ಣದ ಹೋರಿಯನ್ನೂ ಚಂದ್ರೋದಯಕಾಲದಲ್ಲಿ ಮಂತ್ರಪೂರ್ವಕವಾಗಿ ದೀಪಗಳನ್ನೂ ಸಹ ದಾನಮಾಡಿದವನು ಎಲ್ಲಾ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಇಂತಹವನು ಯಮಲೋಕದ ಕಾಡುದಾರಿಯಲ್ಲಿಯೂ ಸುಖದಿಂದ ನಡೆಯುತ್ತಾನೆ. ಅಲ್ಲಿಯೂ ಇವನಿಗೆ ಎಲ್ಲಾ ಭೋಗಗಳೂ ಲಭಿಸುತ್ತವೆ.

೧೪-೨೧. ಮಾರ್ಗಶಿರಮಾಸದ ಪೂರ್ಣಿಮೆಯಲ್ಲಿ ಪುಡಿಮಾಡಿದ ಒಳ್ಳೆಯ ಉಪ್ಪಿನಿಂದ ಕೂಡಿದ ಕೊಳಗವನ್ನು ಕಂಚಿನ ಪಾತ್ರೆಯಲ್ಲಿಟ್ಟು ಅದನ್ನು ಕಲಾಪತ್ತಿನ ವಸ್ತ್ರದಿಂದ ಹೊದ್ದಿಸಿ ಸುವರ್ಣನಾಭಮೂರ್ತಿಯಂತೆ ಭಾವಿಸಿ ಬ್ರಾಹ್ಮಣನಿಗೆ ದಾನಮಾಡಿದವನು ಸೌಭಾಗ್ಯ, ರೂಪ, ಲಾವಣ್ಯಾದಿಗಳಿಂದ ಶೋಭಿಸುತ್ತಾನೆ. ಪುಷ್ಯ ಮಾಸದಲ್ಲಿ ಬಿಳಿಯ ಸಾಸವೆಯ ಹಿಂಡಿಯಿಂದ ಮೈಯನ್ನೆಲ್ಲಾ ಲೇಪಿಸಿ ಅನಂತರ

ಲವಣಸ್ಯ ತು ಮುಖ್ಯಸ್ಯ ಚೂರ್ಣಿತಸ್ಯ ದ್ವಿಜೋತ್ತಮಾಃ ।
ದತ್ವಾ ಸುವರ್ಣನಾಭಂ ತು ತಸ್ಮಿನ್ನೇವ ದ್ವಿಜಾತಯೇ ॥ ೧೬ ॥

ಸೌಭಾಗ್ಯರೂಪಲಾವಣ್ಯಯುಕ್ತೋ ಭವತಿ ಮಾನವಃ ।
ಗೌರಸರ್ಷಪಕಲ್ಕೇನ ಪೌಷ್ಯಾಮುತ್ಸಾಹಿತೋ ನರಃ ॥ ೧೭ ॥

ಗವ್ಯಸ್ಯಾಜ್ಯಸ್ಯ ಕುಂಭೇನ ಸೋಭಿಷಿಕ್ತಸ್ತ್ವನಂತರಂ ।
ನಿರೂಕ್ಷಿತಸ್ತಥಾ ಸ್ನಾತಃ ಸರ್ವಬೀಜೌಷಧೀಜಲೈಃ ॥ ೧೮ ॥

ಗಂಧರತ್ನಫಲೋಪೇತೈರ್ಘೃತೇನ ತದನಂತರಂ ।
ಸ ಸುವರ್ಣಂ ಮುಖಂ ದೃಷ್ಟ್ವಾ ತತ್ಪ್ರದದ್ಯಾದ್ದ್ವಿಜಾತಯೇ ॥ ೧೯ ॥

ಘೃತೇನ ಸ್ನಪಿತಂ ವಿಷ್ಣುಂ ಶಕ್ತ್ಯಾ ಸಂಪೂಜಯೇತ್ತತಃ ।
ಘೃತಂ ಚ ಜುಹುಯಾದ್ವಹ್ನೌ ಘೃತಂ ದದ್ಯಾದ್ದ್ವಿಜಾತಯೇ ॥ ೨೦ ॥

ಕರ್ತ್ರೇ ವಸ್ತ್ರಯುಗಂ ದದ್ಯಾತ್ಸೋಪವಾಸಃ ಸಮಾಹಿತಃ ।
ಕರ್ಮಣಾನೇನ ಧರ್ಮಜ್ಞಾಃ ಪುಷ್ಟಿಮಾಪ್ನೋತ್ಯನುತ್ತಮಾಂ ॥ ೨೧ ॥

ಕುಂಭಪರಿಮಿತವಾದ ಹಸುವಿನ ತುಪ್ಪದಿಂದ ಅಭಿಷೇಕ ಹೊಂದಬೇಕು. ಅನಂತರ ಸರ್ವಬೀಜಗಳು, ಓಷಧಿಗಳು, ಗಂಧ, ರತ್ನ ಇವುಗಳ ಜಲದಿಂದ ಚೆನ್ನಾಗಿ ಸ್ನಾನ ಮಾಡಿ (ವಿಕಾರವಿಲ್ಲದೆ) ಲಕ್ಷಣಹೊಂದಿ ತುಪ್ಪದಲ್ಲಿ ಮುಖವನ್ನು ನೋಡಿ ಅನಂತರ ಆ ತುಪ್ಪವನ್ನು ಸುವರ್ಣದೊಡನೆ ಬ್ರಾಹ್ಮಣನಿಗೆ ದಾನಮಾಡಬೇಕು. ವಿಷ್ಣುವನ್ನು ತುಪ್ಪದಿಂದ ಅಭಿಷೇಕಮಾಡಿ ಯಥಾಶಕ್ತಿ ಪೂಜಿಸಬೇಕು. ತುಪ್ಪದಿಂದಲೇ ಹೋಮ ಮಾಡಿ ತುಪ್ಪವನ್ನೇ ಬ್ರಾಹ್ಮಣನಿಗೆ ದಾನಮಾಡಬೇಕು. ಉಪವಾಸದಿಂದಿದ್ದು ಎಲ್ಲವನ್ನೂ ಮಾಡಿ ಕೆಲಸಮಾಡಿದ ಋತ್ವಿಜನಿಗೆ ವಸ್ತ್ರದ್ವಯವನ್ನೂ ಕೊಡಬೇಕು. ಈ ದಾನದಿಂದಲೇ ಹೆಚ್ಚಾದ ಪುಷ್ಟಿಯನ್ನು ಹೊಂದುತ್ತಾನೆ.

ಮಾಘ್ಯಾಂ ಕೃತ್ವಾ ತಿಲೈಃ ಶ್ರಾದ್ಧಂ ಸರ್ವಪಾಪೈಃ ಪ್ರಮುಚ್ಯತೇ ।
ಸ್ವಾಸ್ತೀರ್ಣಂ ಶಯನಂ ದತ್ವಾ ಫಾಲ್ಗುನ್ಯಾಂ ಬ್ರಾಹ್ಮಣಸ್ಯ ತು ॥ ೨೨ ॥

ರೂಪದ್ರವಿಣಸಂಯುಕ್ತಾಂ ಭಾರ್ಯಾಂ ಪುತ್ರವತೀಂ ತಥಾ ।
ನರಃ ಪ್ರಾಪ್ನೋತಿ ಧರ್ಮಜ್ಞಃ ಪುಷ್ಟಿಮಾಪ್ನೋತ್ಯನುತ್ತಮಾಂ ॥ ೨೩ ॥

ತಥಾ ನಾರ್ಯಪಿ ಭರ್ತಾರಂ ನಾತ್ರ ಕಾರ್ಯಾ ವಿಚಾರಣಾ ।
ಪೌರ್ಣಮಾಸೀಷು ಚೈತಾಸು ಮಾಸರ್ಕ್ಷಸಹಿತಾಸು ಚ ॥ ೨೪ ॥

ವಿಶೇಷಾದೇವ ದಾನಾನಾಂ ಫಲಂ ದಶಗುಣಂ ಭವೇತ್ ।
ಮಹತ್ಪೂರ್ವಾಸು ಚೈತಾಸು ಫಲಮಕ್ಷಯ್ಯಮಶ್ನುತೇ ॥ ೨೫ ॥

ದ್ವಾದಶ್ಯಾಂ ಚೈತ್ರಶುಕ್ಲಸ್ಯ ಚಿತ್ರವಸ್ತ್ರಪ್ರದೋ ನರಃ ।
ಅಕ್ಷಯ್ಯಂ ಫಲಮಾಪ್ನೋತಿ ನಾಕಲೋಕಂ ಚ ಗಚ್ಛತಿ ॥ ೨೬ ॥

ವೈಶಾಖಮಾಸೇ ದ್ವಾದಶ್ಯಾಂ ರುಕ್ಮದಾನಾತ್ತಥೈವ ಚ ।
ಛತ್ರೋಪಾನಹಯೋರ್ದಾನಾಜ್ಜ್ಯೇಷ್ಠೇ ಮಾಸಿ ದ್ವಿಜೋತ್ತಮಾಃ ॥ ೨೭ ॥

೨೨–೨೫ ಮಾಘಮಾಸದಲ್ಲಿ ಎಳ್ಳಿನಿಂದಲೇ ಶ್ರಾದ್ಧಮಾಡಿದವನು ಎಲ್ಲಾ ಪಾಪಗಳಿಂದಲೂ ಬಿಡುಗಡೆಹೊಂದುತ್ತಾನೆ. ಫಾಲ್ಗುನಮಾಸದಲ್ಲಿ ಚೆನ್ನಾಗಿ ಸಜ್ಜುಗೊಳಿಸಿದ ಹಾಸಿಗೆಯನ್ನು ಬ್ರಾಹ್ಮಣನಿಗೆ ದಾನಮಾಡಿದವನು ರೂಪಧನಾದಿಗಳಿಂದ ಕೂಡಿದ ಮತ್ತು ಸರಿಯಾದ ಬಾಂಧವರುಳ್ಳ ಭಾರ್ಯೆಯನ್ನು ಹೊಂದುತ್ತಾನೆ ಅಸದೃಶವಾದ ಪುಷ್ಟಿಯನ್ನೂ ಹೊಂದುತ್ತಾನೆ. ಸ್ತ್ರೀಯೂ ಹೀಗೆ ಮಾಡಿದಲ್ಲಿ ಸರಿಯಾದ ಪತಿಯನ್ನು ಹೊಂದುತ್ತಾಳೆ ಇದರಲ್ಲಿ ವಿಚಾರಮಾಡಬೇಕಾದ್ದಿಲ್ಲ. ಈ ಪೂರ್ಣಿಮೆಗಳು ಆಯಾಯ ಮಾಸದ ನಕ್ಷತ್ರದಿಂದ ಕೂಡಿದ್ದಲ್ಲಿ ಈ ದಾನಗಳ ಫಲಗಳು ಹತ್ತರಷ್ಟು ಹೆಚ್ಚಾಗುತ್ತವೆ. ಮಹಾಪೂರ್ಣಿಮೆಗಳಲ್ಲಿ ಫಲವು ಅಕ್ಷಯವಾಗುತ್ತದೆ

೨೬ ೩೦. ಚೈತ್ರಶುಕ್ಲದ್ವಾದಶಿಯಲ್ಲಿ ಚಿತ್ರವಸ್ತ್ರವನ್ನು ದಾನಮಾಡಿದವನು ಅಕ್ಷಯಫಲಹೊಂದಿ ಸ್ವರ್ಗಭಾಗಿಯೂ ಆಗುತ್ತಾನೆ. ವೈಶಾಖಶುಕ್ಲದ್ವಾದಶಿಯಲ್ಲಿ ಚಿನ್ನವನ್ನು ದಾನಮಾಡಿದವನಿಗೂ ಅದೇ ಫಲ. ಜ್ಯೇಷ್ಠಶುಕ್ಲದ್ವಾದಶಿಯಲ್ಲಿ ಛತ್ರಿ ಪಾದರಕ್ಷೆಗಳ ದಾನದಿಂದಲೂ ಇದೇ ಫಲವು ಲಭಿಸುತ್ತದೆ ಆಷಾಢಶುಕ್ಲದ್ವಾದ

ಸ್ವಾಸ್ತೀರ್ಣಂ ಶಯನಂ ದತ್ವಾ ಪ್ರೀಣಯೇದ್ಭೋಗಿಶಾಯಿನಂ ।
ಆಷಾಢಶುಕ್ಲದ್ವಾದಶ್ಯಾಂ ಶ್ವೇತದ್ವೀಪೇ ಮಹೀಯತೇ ॥ ೨೮ ॥

ಶ್ರಾವಣೇ ವಸ್ತ್ರದಾನೇನ ವಿಷ್ಣುಲೋಕೇ ಮಹೀಯತೇ ।
ಗೋದಃ ಪ್ರಯಾತಿ ಗೋಲೋಕಂ ಮಾಸಿ ಭಾದ್ರಪದೇ ದ್ವಿಜಾಃ ॥ ೨೯ ॥

ಪ್ರೀಣಯೇದಶ್ವಶಿರಸಶ್ಚಾಶ್ವಂ ದತ್ವಾ ತಥಾಶ್ವಿನೇ ।
ವಿಷ್ಣುಲೋಕಮವಾಪ್ನೋತಿ ಕುಲಮುದ್ಧರತಿ ಸ್ವಕಂ ॥ ೩೦ ॥

ಸರೋಮವಸ್ತ್ರದಾನೇನ ಕಾರ್ತಿಕೇ ದಿವಮಾಪ್ನುಯಾತ್ ।
ಪ್ರದಾನಂ ಲವಣಾನಾಂ ತು ಮಾರ್ಗಶೀರ್ಷೇ ಮಹತ್ಫಲಂ ॥ ೩೧ ॥

ಧಾನ್ಯಾನಾಂ ಚ ತಥಾ ಪೌಷೇ ದಾರುಣಂ ಚಾಪ್ಯನಂತರೇ ।
ಫಾಲ್ಗುನೇ ಸರ್ವಗಂಧಾನಾಂ ನಾತ್ರ ಕಾರ್ಯಾ ವಿಚಾರಣಾ ॥ ೩೨ ॥

ಭಾಗ್ಯರ್ಕ್ಷಸಂಯುತಾ ಚೈತ್ರೀ ದ್ವಾದಶೀ ಸ್ಯಾನ್ಮಹಾಫಲಾ ।
ಹಸ್ತಯುಕ್ತಾಥ ವೈಶಾಖೀ ಜ್ಯೇಷ್ಠೇ ತು ಸ್ವಾತಿನಾ ತಥಾ ॥ ೩೩ ॥

ಯಲ್ಲಿ ಸರಿಯಾದ ಹಾಸಿಗೆಯನ್ನು ದಾನಮಾಡಿ ಭೋಗಶಾಯಿಯನ್ನು ಸಂತೋಷಪಡಿಸಿದ್ದೇ ಆದರೆ ಅವನು ಶ್ವೇತದ್ವೀಪದಲ್ಲಿ ಮಾನ್ಯನಾಗುತ್ತಾನೆ ಶ್ರಾವಣಮಾಸದಲ್ಲಿ ವಸ್ತ್ರದಾನಮಾಡಿದವನು ವಿಷ್ಣುಲೋಕದಲ್ಲಿ ಪೂಜ್ಯನಾಗುತ್ತಾನೆ. ಭಾದ್ರಪದಮಾಸದಲ್ಲಿ ಗೋದಾನಮಾಡಿದವನು ಗೋಲೋಕ ಹೊಂದುತ್ತಾನೆ. ಆಶ್ವಯುಜಮಾಸದಲ್ಲಿ ಕುದುರೆಯನ್ನು ದಾನಮಾಡಿದಲ್ಲಿ ಹಯಗ್ರೀವನು ಪ್ರೀತಿಹೊಂದುತ್ತಾನೆ. ಇಂತಹ ದಾತೃವು ವಿಷ್ಣುಲೋಕವನ್ನು ಹೊಂದುತ್ತಾನೆ. ತನ್ನ ಕುಲವನ್ನೂ ಉದ್ಧರಿಸುತ್ತಾನೆ.

೩೧–೩೬. ಕಾರ್ತಿಕಮಾಸದಲ್ಲಿ ರೋಮಗಳಿಂದ ಕೂಡಿದ ವಸ್ತ್ರದ ದಾನದಿಂದ ಸ್ವರ್ಗ ಹೊಂದುತ್ತಾನೆ. ಮಾರ್ಗಶಿರಮಾಸದಲ್ಲಿ ಲವಣದಾನವು ಮಹಾಫಲಪ್ರದವಾಗುತ್ತದೆ. ಪುಷ್ಯಮಾಘಮಾಸಗಳಲ್ಲಿ ಧಾನ್ಯದಾನವು ವಿಶೇಷಫಲಪ್ರದ. ಫಾಲ್ಗುನಮಾಸದಲ್ಲಿ ಸುಗಂಧಿದ್ರವ್ಯಗಳ ದಾನವು ಪ್ರಶಸ್ತ. ಚೈತ್ರ ದ್ವಾದಶಿಯು ಪೂರ್ವಫಲ್ಗುನೀ ನಕ್ಷತ್ರದಿಂದ ಕೂಡಿದ್ದೇ ಆದರೆ ಆ ದಿನದ ದಾನವು ಮಹಾಪ್ರಶಸ್ತ.

ಜ್ಯೇಷ್ಠಾಯಾಂ ಚ ತಥಾಷಾಢೇ ಮೂಲೋಪೇತಾ ಚ ವೈಷ್ಣವೇ ।
ತಥಾ ಭಾದ್ರಪದೇ ಮಾಸಿ ಶ್ರವಣೇನ ತು ಸಂಯುತಾ ॥ ೩೪ ॥

ಆಶ್ವಿನೇ ದ್ವಾದಶೀ ಪುಣ್ಯಾ ಭವತ್ಯಾಜರ್ಕ್ಷಸಂಯುತಾ ।
ಕಾರ್ತಿಕೇ ರೇವತೀಯುಕ್ತಾ ಸೌಮ್ಯೇ ಕೃತ್ತಿಕಯಾ ತಥಾ ॥ ೩೫ ॥

ಪೌಷೇ ಮೃಗಶಿರೋಪೇತಾ ಮಾಘೇ ಚಾದಿತ್ಯಸಂಯುತಾ ।
ಫಾಲ್ಗುನೇ ಪುಷ್ಯಸಹಿತಾ ದ್ವಾದಶೀ ಪಾವನಾ ಪರಾ ॥ ೩೬ ॥

ನಕ್ಷತ್ರಯುಕ್ತಾಸ್ವೇತಾಸು ತಥಾ ದಾನಪೋಷಿತೈಃ ।
ಸರ್ವಕಾಮಫಲಂ ಜ್ಞೇಯಮನಂತಂ ದ್ವಿಜಸತ್ತಮಾಃ ॥ ೩೭ ॥

ಮೇಷಸಂಕ್ರಮಣೇ ಭಾನೋರ್ಮೇಷದಾನಂ ಮಹಾಫಲಂ ।
ವೃಷಸಂಕ್ರಮಣೇ ದಾನಂ ಗವಾಂ ಪ್ರೋಕ್ತಂ ತಥೈವ ಚ ॥ ೩೮ ॥

ಶಯನಾಸನದಾನಂ ಚ ಮಿಥುನೋಪಗತೇ ರವೌ ।
ಕರ್ಕಪ್ರವೇಶೇ ಸಕ್ತೂನಾಂ ಸಿತಯಾ ಚ ತಥೈವ ಹಿ ॥ ೩೯ ॥

ಹಾಗೆಯೇ ವೈಶಾಖ ದ್ವಾದಶಿಯು ಹಸ್ತನಕ್ಷತ್ರದಿಂದಲೂ, ಜ್ಯೇಷ್ಠ ದ್ವಾದಶಿಯು ಸ್ವಾತಿಯಿಂದಲೂ, ಆಷಾಢದ್ವಾದಶಿಯು ಜ್ಯೇಷ್ಠಾನಕ್ಷತ್ರದಿಂದಲೂ, ಶ್ರಾವಣ ದ್ವಾದಶಿಯು ಮೂಲನಕ್ಷತ್ರದಿಂದ ಕೂಡಿಯೂ, ಭಾದ್ರಪದ ದ್ವಾದಶಿಯು ಶ್ರವಣ ನಕ್ಷತ್ರದಿಂದ ಕೂಡಿಯೂ, ಆಶ್ವಯುಜ ದ್ವಾದಶಿಯು ಪೂರ್ವಾಭಾದ್ರಾ ನಕ್ಷತ್ರದಿಂದ ಕೂಡಿಯೂ, ಕಾರ್ತೀಕದ್ವಾದಶಿಯು ಮೃಗಶಿರೆಯಿಂದ ಕೂಡಿಯೂ, ಮಾಘ ದ್ವಾದಶಿಯು ಪುನರ್ವಸು ನಕ್ಷತ್ರದಿಂದ ಕೂಡಿಯೂ, ಫಾಲ್ಗುನದ್ವಾದಶಿಯು ಪುಷ್ಯ ನಕ್ಷತ್ರದಿಂದ ಕೂಡಿಯೂ ಇದ್ದಲ್ಲಿ ಇವು ದಾನಕ್ಕೆ ಪ್ರಶಸ್ತವಾಗುತ್ತದೆ.

೩೭–೪೪. ಈ ನಕ್ಷತ್ರಗಳಿಂದ ಕೂಡಿದ ದ್ವಾದಶಿಗಳಲ್ಲಿ ಉಪವಾಸವಿದ್ದು ಮಾಡಿದ ದಾನಗಳು ಅಕ್ಷಯವಾದ ಇಷ್ಟಾರ್ಥಪ್ರದಗಳಾಗುತ್ತವೆ. ಮೇಷಸಂಕ್ರಮಣದಲ್ಲಿ ಕುರಿಯದಾನವೂ, ವೃಷಭಸಂಕ್ರಮಣದಲ್ಲಿ ಗೋವುಗಳ ದಾನವೂ, ಮಿಥುನ

ಗುಡಫಾಣಿತಖಂಡಾನಾಂ ಸಿತಾಯಾಶ್ಚ ತಥಾ ದ್ವಿಜಾಃ ।
ಲವಣಾಜ್ಯಫಲಾನಾಂ ಚ ತಥಾ ಹರಿತಕಸ್ಯ ಚ || ೪೦ ||

ತಥಾಚೈವೋದಕುಂಭಾನಾಂ ದಾನಂ ಜ್ಞೇಯಂ ಮಹಾಫಲಂ ।
ಸಿಂಹಪ್ರವೇಶೇ ಪಾತ್ರಾಣಾಂ ತೈಜಸಾನಾಂ ತಥೈವ ಚ || ೪೧ ||

ಕನ್ಯಾಪ್ರವೇಶೇ ವಸ್ತ್ರಾಣಾಂ ಸುರಭೀಣಾಂ ತಥೈವ ಚ ।
ತುಲಾಪ್ರವೇಶೇ ಧಾನ್ಯಾನಾ ಬೀಜಾನಾಮಪಿ ಚೋತ್ತಮೇ || ೪೨ ||

ಕೀಟಪ್ರವೇಶೇ ವಸ್ತ್ರಾಣಾಂ ವೇಶ್ಮನಾಂ ದಾನಮೇವ ಚ ।
ಧನ್ವಿಪ್ರವೇಶೇ ವಸ್ತ್ರಾಣಾಂ ಯಾನಾನಾಂ ಚ ಮಹಾಫಲಂ || ೪೩ ||

ಮೃಗಪ್ರವೇಶೇ ದಾರೂಣಾಂ ದಾನಮಗ್ನೇಸ್ತಥೈವ ಚ ।
ಕುಂಭಪ್ರವೇಶೇ ದಾನಂ ತು ಗವಾಮರ್ಥೇ ತೃಣಸ್ಯ ತು ।
ಮೀನಪ್ರವೇಶೇ ಸ್ಥಾನಾನಾಂ ಮಾಲ್ಯಾನಾಮಪಿ ಚೋತ್ತಮಂ || ೪೪ ||

ಸಂಕ್ರಮಣದಲ್ಲಿ ಶಯನ ಮತ್ತು ಆಸನಗಳ ದಾನವೂ, ಕರ್ಕಾಟಕದಲ್ಲಿ ಸಕ್ಕರೆ ಯೊಡನೆ ಹುರಿಟ್ಟಿನ ದಾನವೂ, ಬೆಲ್ಲ, ಕಾಕಂಬಿ ಸಕ್ಕರೆ ಇವುಗಳು ಮತ್ತು ಲವಣ, ತುಪ್ಪ, ಫಲಗಳು, ತರಕಾರಿ ಇವುಗಳ ಹಾಗೂ ಉದಕಕುಂಭದದಾನವೂ ಪ್ರಶಸ್ತ ವಾಗುತ್ತದೆ. ಸಿಹ್ಮಸಂಕ್ರಮಣದಲ್ಲಿ ಚಿನ್ನ ಬೆಳ್ಳಿ ಮೊದಲಾದ ಪಾತ್ರೆಗಳ ದಾನವೂ, ಕನ್ಯಾಸಂಕ್ರಮಣದಲ್ಲಿ ವಸ್ತ್ರಗಳ ಮತ್ತು ಸುಗಂಧಿ ಪದಾರ್ಥಗಳ ದಾನವೂ, ತುಲಾ ಸಂಕ್ರಮಣದಲ್ಲಿ ಧಾನ್ಯಗಳ ಮತ್ತು ಬೀಜಗಳ ದಾನವೂ, ವೃಶ್ಚಿಕ ಸಂಕ್ರಮಣದಲ್ಲಿ ವಸ್ತ್ರಗಳ ಮತ್ತು ಮನೆಗಳ ದಾನವೂ, ಧನುಸ್ಸಂಕ್ರಮಣದಲ್ಲಿ ವಸ್ತ್ರಗಳ ಮತ್ತು ಯಾನಗಳ ದಾನವೂ. ಮಕರದಲ್ಲಿ ಸೌದೆಯ ಮತ್ತು ಅಗ್ನಿಯ ದಾನವೂ. ಕುಂಭ ಸಂಕ್ರಮಣದಲ್ಲಿ ಹಸುಗಳಿಗಾಗಿ ಹುಲ್ಲಿನ ದಾನವೂ. ಮೀನಸಂಕ್ರಮಣದಲ್ಲಿ ಪೀಠಗಳ ಮತ್ತು ಹೂವುಗಳ ದಾನವೂ ಮಹಾಫಲಗಳಾಗುತ್ತವೆ.

ದಾನಾನ್ಯಥೈತಾನಿ ಮಯಾ ದ್ವಿಜೇಂದ್ರಾಃ
ಪ್ರೋಕ್ತಾನಿ ಕಾಲೇ ತು ನರಶ್ಚ ದತ್ವಾ ।
ಪ್ರಾಪ್ನೋತಿ ಕಾಮಾನ್ಮನಸಾ ತ್ವಭೀಷ್ಟಾಂ
ಸ್ತಸ್ಮಾತ್ಪ್ರಶಂಸಂತಿ ಮಹಾಪ್ರದಾನಂ ॥ ೪೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದ್ವಾದಶಪೌರ್ಣಮಾಸೀದಾನಫಲನಿರೂಪಣಂ ನಾಮ ಏಕೋನವಿಂಶಾಧಿಕ ತ್ರಿಶತತಮೋಽಧ್ಯಾಯಃ

---

೪೫. ಎಲೈ ಬ್ರಾಹ್ಮಣೋತ್ತಮರೇ ನಾನು ಹೇಳಿರುವ ಈ ದಾನಗಳನ್ನು ವಿಹಿತವಾದ ಕಾಲದಲ್ಲಿ ದಾನಮಾಡಿದವನು ತಮಗೆ ಇಷ್ಟವಾದ ಫಲಗಳನ್ನು ಹೊಂದುತ್ತಾನೆ. ಆದುದರಿಂದಲೇ ಈ ದಾನಗಳನ್ನು ಮಹಾದಾನಗಳೆಂದು ಪ್ರಶಂಸಿಸುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯಲ್ಲಿ ದ್ವಾದಶ ಪೌರ್ಣಮಾಸೀದಾನಫಲನಿರೂಪಣವೆಂಬ ಮುನ್ನೂರ ಹತ್ತೊಂಭತ್ತನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಪುಣ್ಯಯಜ್ಞಕ್ರಿಯಾಃ ಪ್ರೋಕ್ತಾ ಯೇ ನರಾ ಧನಸಂಯುತಾಃ ।
ತಥಾ ಮಧ್ಯಮವೃತ್ತಾನಾಂ ದಾನಾನಿ ವಿವಿಧಾನಿ ಚ ॥ ೧ ॥

ಕಥಿತಾನ್ಯಲ್ಪವೃತ್ತಾನಾಂ ದಾನಾನಿ ವಿವಿಧಾನಿ ಚ ।
ಯೇ ನರಾ ವಿತ್ತರಹಿತಾಸ್ತೇಷಾಂ ಧರ್ಮಕ್ರಿಯಾಂ ವದ ॥ ೨ ॥

॥ ಹಂಸ ಉವಾಚ ॥

ಉಪವಾಸಕ್ರಿಯಾ ತೇಷಾಂ ಪರಮಂ ಧರ್ಮಕಾರಣಂ ।
ವಿತ್ತಾನ್ವಿತಾನಾಂ ಚ ತಥಾ ಪ್ರಶಸ್ತಾ ಸಾ ಮಹಾಫಲಾ ॥ ೩ ॥

ಮುನ್ನೂರ ಇಪ್ಪತ್ತನೆಯ ಅಧ್ಯಾಯ.

೧-೫ ಋಷಿಗಳು ಪ್ರಶ್ನೆ ಮಾಡುತ್ತಾರೆ :— ಎಲೈ ಪಕ್ಷಿಪ್ರವರನೇ ಇದುವರೆಗೂ ನೀನು ಧನಿಕರಾದ ಮತ್ತು ಮಧ್ಯಮಸ್ಥಿತಿಯವರ ಕರ್ತವ್ಯತೆಗೆ ತಕ್ಕಂತೆ ಪುಣ್ಯಕರವಾದ ಯಜ್ಞಾದಿಕಾರ್ಯಗಳನ್ನೂ ನಾನಾವಿಧವಾದ ದಾನಗಳನ್ನೂ ಹೇಳಿ ಆಯಿತು. ಅಲ್ಪವೃತ್ತಿಯುಳ್ಳವರಿಗೂ ಅನೇಕ ದಾನಗಳನ್ನು ಹೇಳಿದ್ದೀಯೆ. ಆದರೆ ದ್ರವ್ಯವೇ ಇಲ್ಲದೆ ಇರುವ ದರಿದ್ರರಿಗೆ ಅರ್ಹವಾದ ಧರ್ಮ ಕಾರ್ಯಗಳಾವುವು ಎಂಬುದನ್ನೂ ದಯವಿಟ್ಟು ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ :— ದರಿದ್ರರಾದವರಿಗೆ ಉಪವಾಸವ್ರತವೇ ಉತ್ತಮಧರ್ಮಕ್ಕೆ ಸಾಧಕವಾಗುತ್ತದೆ. ಹಣವಂತರಿಗೂ ಇದೇ ಪ್ರಶಸ್ತ ಯಾವನಾದರೂ ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ

ಸಾಯಂ ಪ್ರಾತಸ್ತು ಭುಂಜಾನೋ ನಾಂತರಾತೋಪಕಂಪಿಬನ್ ।
ಷಡ್ಭಿರ್ವರ್ಷೈರ್ನರೋ ಲೋಕಂ ಪ್ರಾಪ್ನೋತಿ ಮನಸೇಪ್ಸಿತಂ ॥ ೪ ॥

ಶುಭಾನಾಮುತ್ತಮಂ ಚೈತದ್ಧನ್ಯಂ ನಿತ್ಯಕೃತಂ ಭವೇತ್ ।
ಯಥೇಷ್ಟಲೋಕದಂ ಪುಣ್ಯಂ ಮಾನುಷ್ಯೇಪಿ ಮಹಾಫಲಂ ॥ ೫ ॥

ಉಪವಾಸಂ ನರಃ ಕುರ್ವನ್ಮಾಸಿ ಮಾಸಿ ದ್ವಿಜೋತ್ತಮಾಃ ।
ಉಷಿತ್ವಾ ಸುಚಿರಂ ಲೋಕೇ ಮಾನುಷ್ಯೇ ಜಾಯತೇ ಯದಾ ॥ ೬ ॥

ತದಾ ಭವತಿ ದೀರ್ಘಾಯುರ್ಧನವಾನ್ರೂಪಸಂಯುತಃ ।
ಪಕ್ಷೇ ಪಕ್ಷೇ ತಥಾ ಕುರ್ವನ್ದ್ವಿಗುಣಂ ಫಲಮಶ್ನುತೇ ॥ ೭ ॥

ಮಾಸೇ ಮಾಸೇ ತ್ರಿರಾತ್ರಂತು ಯಃ ಕುರ್ಯಾನ್ಮಾನವೋತ್ತಮಃ ।
ಗಾಣಪತ್ಯಮವಾಪ್ನೋತಿ ಸ್ವರ್ಗಲೋಕಪರಿಚ್ಯುತಃ ॥ ೮ ॥

ಪಕ್ಷೇ ಪಕ್ಷೇ ತ್ರಿರಾತ್ರಂತು ಕೃತ್ವಾ ಭವತಿ ಪಾರ್ಥಿವಃ ।
ಸ್ವರ್ಗಲೋಕಾತ್ಪರಿಭ್ರಷ್ಟಃ ಸುಚಿರೇಣ ಮಹಾಬಲಃ ॥ ೯ ॥

ಎರಡುಸಲ ಮಾತ್ರ ಭೋಜನಮಾಡುತ್ತಾ ಮಧ್ಯದಲ್ಲಿ ಜಲಪಾನವನ್ನು ಸಹ ಮಾಡದೆ ಆರು ವರ್ಷಕಾಲ ಹೀಗೆಯೇ ಇದ್ದಲ್ಲಿ ಅವನು ತನಗೆ ಇಷ್ಟವಾದ ಲೋಕವನ್ನು ಹೊಂದುತ್ತಾನೆ. ನಿತ್ಯವೂ ಹೀಗೆ ಮಾಡುತ್ತಿದ್ದಲ್ಲಿ ಮನುಷ್ಯಮಾತ್ರಕ್ಕೂ ಶುಭಕರವಾಗಿಯೂ, ಧನ್ಯವಾಗಿಯೂ ಪುಣ್ಯವನ್ನೂ ಇಷ್ಟಲೋಕವನ್ನೂ ಉಂಟುಮಾಡಿ ಮಹಾಫಲವಾಗಿ ಪರಿಣಮಿಸುತ್ತದೆ.

೬-೧೧. ಪ್ರತಿಮಾಸದಲ್ಲಿಯೂ ಉಪವಾಸ ಮಾಡುವವನು ಸ್ವರ್ಗದಲ್ಲಿದ್ದು ಭೂಮಿಗೆ ಬಂದರೂ ದೀರ್ಘವಾದ ಆಯಸ್ಸನ್ನು ಹೊಂದಿ ಧನಿಯಾಗಿಯೂ, ಸುರೂಪಿಯಾಗಿಯೂ ಬದುಕುತ್ತಾನೆ. ಪ್ರತಿಪಕ್ಷದಲ್ಲಿಯೂ ಈ ಉಪವಾಸ ಮಾಡುವವನು ಸ್ವರ್ಗದಿಂದ ಭೂಮಿಯಲ್ಲಿ ಜನಿಸಿದರೂ ಒಂದು ಸಮೂಹಕ್ಕೆ ಯಜಮಾನನಾಗುತ್ತಾನೆ. ಪ್ರತಿಪಕ್ಷದಲ್ಲಿಯೂ ಮೂರು ರಾತ್ರಿ ಉಪವಾಸ ಮಾಡಿದವನು ಮನುಷ್ಯನಾಗಿ ಪುನಃ ಹುಟ್ಟಿದಾಗ ಬಲಶಾಲಿಯಾದ ರಾಜನಾಗಿ ಹುಟ್ಟುತ್ತಾನೆ ಈ ತ್ರಿರಾತ್ರೋಪವಾಸವನ್ನು ದ್ವಿಜನಾದವನೇ ಮಾಡಬೇಕು. ಶೂದ್ರನು ಮಾಡಬಾರದು. ಅವನಿಗೆ

ದ್ವಿಜಸ್ತ್ರಿರಾತ್ರಂ ಕುರ್ವೀತ ನ ತು ಶೂದ್ರಃ ಕಥಂಚನ ।
ಷಷ್ಠಕಾಲಾಶನಂ ತಸ್ಯ ತಪಃ ಪರಮಿಹೋಚ್ಯತೇ ॥ ೧೦ ॥

ಶೂದ್ರಸ್ತ್ರಿರಾತ್ರಂ ಕುರುತೇ ವಿಷಯೇ ಯಸ್ಯ ಭೂಪತೇಃ ।
ತಸ್ಯ ಸೀದತಿ ತದ್ರಾಷ್ಟ್ರಂ ವ್ಯಾಧಿದುರ್ಭಿಕ್ಷತಸ್ಕರೈಃ ॥ ೧೧ ॥

ತಪಃ ಕುರ್ವೀತ ಶೂದ್ರಸ್ತು ಚೈಕದ್ವಿದಿವಸಾಂತರಂ ।
ಯಥಾಶಕ್ತಿ ದ್ವಿಜಶ್ರೇಷ್ಠಾಸ್ತೇನ ಕಾಮಾನುಪಾಶ್ನುತೇ ॥ ೧೨ ॥

ಅತಃ ಪರಂ ತು ವರ್ಣಾನಾಂ ಮಾಸೇಮಾಸೇ ದ್ವಿಜೋತ್ತಮಾಃ ।
ಏಕಕಾಲಾಶನಾನಾಂ ತು ಶೃಣುಧ್ವಂ ಫಲಮುತ್ತಮಂ ॥ ೧೩ ॥

ಚೈತ್ರಂ ತು ನಿಯತೋ ಮಾಸಂ ಚೈಕಭಕ್ತೇನ ಯಃ ಕ್ಷಿಪೇತ್ ।
ಸುವರ್ಣಮಣಿಮುಕ್ತಾಢ್ಯೇ ಕುಲೇ ಮಹತಿ ಜಾಯತೇ ॥ ೧೪ ॥

ನಿರಸ್ಯೇದೇಕಭಕ್ತೇನ ವೈಶಾಖಂ ಯೋ ದ್ವಿಜೋತ್ತಮಃ ।
ನರೋ ವಾ ಯದಿ ವಾ ನಾರೀ ಜ್ಞಾತೀನಾಂ ಶ್ರೇಷ್ಠತಾಂ ವ್ರಜೇತ್ ॥ ೧೫ ॥

ಆರನೇ ಯಾಮದಲ್ಲಿ ಮಾತ್ರ ಮಾಡುವ ಭೋಜನವೇ ಪರಮ ತಪಸ್ಸಾಗುತ್ತದೆ. ಯಾವ ಧೊರೆಯ ದೇಶದಲ್ಲಿ ಶೂದ್ರನಾದವನು ಮೂರು ರಾತ್ರಿ ಉಪವಾಸ ಮಾಡುತ್ತಾನೆಯೋ ಆ ದೇಶವು ವ್ಯಾಧಿ, ದುರ್ಭಿಕ್ಷ, ಕಳ್ಳರು ಇವರುಗಳಿಂದ ಬಹು ಮಟ್ಟಿಗೂ ಪೀಡಿತವಾಗುತ್ತದೆ.

೧೨-೧೫. ಶೂದ್ರನಾದವನು ಮಧ್ಯಮಧ್ಯದಲ್ಲಿ ಒಂದೆರಡು ದಿನ ಈ ತಪಸ್ಸನ್ನು ಯಥಾಶಕ್ತಿ ಮಾಡಿದಲ್ಲಿ ತನ್ನ ಇಷ್ಟಗಳನ್ನು ಹೊಂದುತ್ತಾನೆ. ಇನ್ನು ಮುಂದೆ ಎಲ್ಲಾ ವರ್ಣದವರಿಗೂ ಪ್ರತಿಮಾಸದಲ್ಲಿಯೂ ಒಂದೇ ಹೊತ್ತು ಊಟ ಮಾಡುವುದರಿಂದ ಉಂಟಾಗುವ ಫಲವನ್ನು ಹೇಳುತ್ತೇನೆ ಕೇಳಿರಿ, ಚೈತ್ರಮಾಸ ಪೂರ್ತಿಯಾಗಿ ಯಾವನು ಒಂದೇ ಹೊತ್ತು ಊಟಮಾಡುತಾನೆಯೋ ಅವನು ಪುನಃ ಸುವರ್ಣರತ್ನ, ಮುತ್ತು ಇವುಗಳಿಂದ ಸಮೃದ್ಧವಾದ ಕುಲದಲ್ಲಿ ಹುಟ್ಟುತ್ತಾನೆ ವೈಶಾಖಮಾಸವನ್ನು ಹೀಗೆ ಕಳೆದವನು ಪುರುಷನಾಗಲೀ, ಸ್ತ್ರೀಯಾಗಲೀ ಅವರು ಸ್ವಜನರಲ್ಲಿ ಮಾನ್ಯತೆ ಹೊಂದುತ್ತಾರೆ

ಜ್ಯೇಷ್ಠಾಮೂಲಂ ತು ಯೋ ಮಾಸಮೇಕಭಕ್ತೇನ ವರ್ತಯೇತ್ ।
ಐಶ್ವರ್ಯಮತುಲಂ ಶ್ರೇಷ್ಠಂ ಪುಮಾಂಸ್ತ್ರೀ ವಾಭಿಜಾಯತೇ ॥ ೧೬ ॥

ಆಷಾಢಮೇಕಭಕ್ತೇನ ಸ್ಥಿತ್ವಾ ಮಾಸಮತಂದ್ರಿತಃ ।
ಬಹುಧಾನ್ಯೋ ಬಹುಧನೋ ಬಹುಪುತ್ರಶ್ಚ ಜಾಯತೇ ॥ ೧೭ ॥

ಶ್ರಾವಣಂ ನಿಯತೋ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಯತ್ರ ತತ್ರಾಭಿಷೇಕೇನ ಯುಜ್ಯತೇ ಜ್ಞಾತಿವರ್ಧನಃ ॥ ೧೮ ॥

ಪ್ರೋಷ್ಠಪಾದಂ ತು ಯೋ ಮಾಸಂ ಯಃ ಕುರ್ಯಾದೇಕಭೋಜನಂ ।
ಧನಾಢ್ಯಃ ಸ್ಫೀತಮತುಲಂ ಚೈಶ್ವರ್ಯಂ ಪ್ರತಿಪದ್ಯತೇ ॥ ೧೯ ॥

ತಥೈವಾಶ್ವಯುಜಂ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಮೇಧಾವೀ ವಾಹನಾಢ್ಯಶ್ಚ ಬಹುಪುತ್ರಶ್ಚ ಜಾಯತೇ ॥ ೨೦ ॥

ಕಾರ್ತಿಕಂ ತು ನರೋ ಮಾಸಂ ಯಃ ಕುರ್ಯಾದೇಕಭೋಜನಂ ।
ಶೂರಶ್ಚ ಬಹುಭಾರ್ಯಶ್ಚ ಕೀರ್ತಿಮಾಂಶ್ಚೈವ ಜಾಯತೇ ॥ ೨೧ ॥

ಮಾರ್ಗಶೀರ್ಷಂ ತು ಪೈ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಕೃಷಿಭಾಗೀ ಬಹುಧನೋ ಬಹುಧಾನ್ಯಶ್ಚ ಜಾಯತೇ ॥ ೨೨ ॥

೧೬–೨೨. ಜ್ಯೇಷ್ಠಮಾಸದಲ್ಲಿ ಮೊದಲಿನಿಂದಲೂ ಹೀಗೆ ಒಂದೇ ಹೊತ್ತು ಊಟದಿಂದ ಕಾಲಕಳೆದವರು ಸ್ತ್ರೀಪುರುಷರೆಲ್ಲರೂ ಐಶ್ವರ್ಯವಂತರಾಗಿ ಜನಿಸುತ್ತಾರೆ. ಆಷಾಢದಲ್ಲಿ ಹೀಗೆ ವ್ರತಮಾಡಿದವನು ಧಾನ್ಯ ಧನ, ಪುತ್ರರಿಂದ ಸಮೃದ್ಧನಾಗಿ ಹುಟ್ಟುತ್ತಾನೆ. ಶ್ರಾವಣಮಾಸದಲ್ಲಿ ಹೀಗೆ ಮಾಡಿದವನು ಜ್ಞಾತಿಗಳಿಂದ ಅಲ್ಲಲ್ಲಿ ಅಭಿಷೇಕ ಹೊಂದುತ್ತಾನೆ ಭಾದ್ರಪದ ಮಾಸದಲ್ಲಿ ಈ ರೀತಿ ಏಕಭುಕ್ತದಿಂದಿದ್ದವನು ಧನಾಢ್ಯನಾಗಿದ್ದು ಹೆಚ್ಚಾದ ಐಶ್ವರ್ಯವನ್ನೂ ಹೊಂದುತ್ತಾನೆ. ಆಶ್ವಯುಜ ಮಾಸದಲ್ಲಿ ಈ ವ್ರತ ನಡೆಸಿವವನು ಬುದ್ಧಿಶಾಲಿಯೂ, ವಾಹನಸಮೃದ್ಧನೂ, ಬಹುಪುತ್ರನೂ ಆಗುತ್ತಾನೆ. ಕಾರ್ತಿಕ ಮಾಸದಲ್ಲಿ ಈ ವ್ರತ ಮಾಡಿದವನು ಶೂರನೂ, ಬಹುಭಾರ್ಯೆಯುಳ್ಳವನೂ, ಕೀರ್ತಿವಂತನೂ, ಆಗು

ಪೌಷಮಾಸಂತು ವಿಪ್ರೇಂದ್ರಾ ಭಕ್ತೇನೈಕೇನ ಯಃ ಕ್ಷಿಪೇತ್ ।
ಸುಭಗೋ ದರ್ಶನೀಯಶ್ಚ ಯಶೋಭಾಗೀ ಚ ಜಾಯತೇ　　|| ೧೬ ||

ಮಾಘಂ ತು ನಿಯತಂ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಕೃಷಿಭಾಗೀ ಬಹುಧನೋ ಧಾನ್ಯವಾನಭಿಜಾಯತೇ　　|| ೧೭ ||

ಭಗದೈವಂ ತು ಯೋ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಶ್ರೀಸತ್ಕುಲೇ ಜ್ಞಾತಿಮಧ್ಯೇ ಸ ಮಹತ್ತ್ವಂ ಪ್ರಪದ್ಯತೇ　　|| ೧೮ ||

ಸ್ತ್ರೀಷು ವಲ್ಲಭತಾಂ ಯಾತಿ ವಶ್ಯಾಶ್ಚಾಸ್ಯ ಭವಂತಿ ತಾಃ ।
ಯಥೋಕ್ತಫಲದಾಶ್ಚೈತೇ ವರ್ಷೈರ್ದ್ವಾದಶಭಿಃ ಸ್ಮೃತಾಃ　　|| ೧೯ ||

ಯಸ್ತು ಸಂವತ್ಸರಂ ಪೂರ್ಣಂ ಚೈಕಹಾರೋ ಭವೇತ್ಸದಾ ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ　　|| ೨೦ ||

ತ್ತಾನೆ. ಮಾರ್ಗಶಿರ ಮಾಸದಲ್ಲಿ ಈ ವ್ರತಮಾಡಿದವನು ಕೃಷಿಹೊಂದಿ ಧನ, ಧಾನ್ಯದಿಂದ ಸಮೃದ್ಧನಾಗುತ್ತಾನೆ. ಪುಷ್ಯಮಾಸದಲ್ಲಿ ಈ ರೀತಿ ಏಕಭುಕ್ತ ವ್ರತ ಮಾಡಿದವನು ಸುರೂಪಿಯಾಗಿಯೂ, ಯಶಸ್ವಿಯಾಗಿಯೂ ಆಗುತ್ತಾನೆ.

೧೭-೨೦ ಮಾಘಮಾಸದಲ್ಲಿ ಈ ವ್ರತಮಾಡಿದವನು ಕೃಷಿಹೊಂದಿ, ಧಾನ್ಯ, ಧನಸಮೃದ್ಧಿ ಹೊಂದುತ್ತಾನೆ. ಫಾಲ್ಗುಣಮಾಸದಲ್ಲಿ ಈ ವ್ರತಮಾಡಿದವನು ಐಶ್ವರ್ಯ ಹೊಂದಿರುವ ಸತ್ಕುಲದಲ್ಲಿಯೂ, ಜ್ಞಾತಿಜನಗಳಲ್ಲಿಯಲ್ಲಿಯೂ ಮಾನ್ಯತೆಯನ್ನು ಪಡೆಯುತ್ತಾನೆ ಸ್ತ್ರೀಗಳಿಗೆ ಪ್ರೀತಿಪಾತ್ರನಾಗಿಯೂ, ಅವರ ವಶ್ಯತೆ ಉಳ್ಳವನಾಗಿಯೂ ಆಗುತ್ತಾನೆ. ಈ ವ್ರತಗಳೆಲ್ಲವೂ ಹನ್ನೆರಡು ವರ್ಷಕಾಲ ನಡೆದದ್ದೇ ಆದರೆ ಇಲ್ಲಿ ಹೇಳಿರುವ ಫಲಗಳನ್ನು ಕೊಟ್ಟೇ ಕೊಡುತ್ತವೆ. ಯಾವನು ಒಂದುವರ್ಷ ಪೂರ್ತಿಯಾಗಿ ಏಕಾಹಾರನಾಗಿಯೇ ಇರುತ್ತಾನೆಯೋ ಅವನಿಗೆ ಅತಿರಾತ್ರಿಯಾಗದ ಫಲವೇ ಲಭಿಸುತ್ತದೆ.

ತಥಾ ಸಂವತ್ಸರಂ ಪೂರ್ಣಮೇಕಾಂತರಿತಭೋಜನಃ ।
ಯಜ್ಞಂ ಬಹುಸುವರ್ಣಾಖ್ಯಂ ಧ್ರುವಮಾಪ್ನೋತಿ ವೈ ದ್ವಿಜಾಃ ॥ ೨೮ ॥

ಅಬ್ದಮೇಕಂ ತೃತೀಯೇಹ್ನಿ ಭುಂಜಾನಶ್ಚ ತಥಾ ನರಃ ।
ವಾಜಪೇಯಸ್ಯ ಯಜ್ಞಸ್ಯ ಕಥಿತಂ ದ್ವಿಜಸತ್ತಮಾಃ ॥ ೨೯ ॥

ಏಕಕಾಲಂ ತು ಭುಂಜಾನಸ್ತ್ವಬ್ದಮೇಕಂ ತು ಪಂಚಮೇ ।
ಸ್ವರ್ಗೇ ದ್ವಾದಶಪದ್ಮಾನಿ ವರ್ಷಾಣಾಂ ಸ ಚ ಮೋದತೇ ॥ ೩೦ ॥

ಷಷ್ಠೇ ಷಷ್ಠೇ ತಥೈವಾಬ್ದಂ ತ್ವಶ್ನಾನಃ ಪ್ರಯತೋ ನರಃ ।
ಅಷ್ಟಾದಶೈವ ಪದ್ಮಾನಿ ವರ್ಷಾಣಾಂ ದಿವಿ ಮೋದತೇ ॥ ೩೧ ॥

ದಿವಸೇ ಸಪ್ತಮೇ ಚಾಬ್ದಂ ಭುಂಜಾನಸ್ತ್ವೇಕಭೋಜನಂ ।
ಷಟ್‌ತ್ರಿಂಶತ್‌ಸತು ಪದ್ಮಾನಿ ವರ್ಷಾಣಾಂ ದಿವಿ ಮೋದತೇ ॥ ೩೨ ॥

ಅಷ್ಟಮೇ ದಿವಸೇ ಚಾಬ್ದಂ ಭುಂಜಾನಃ ಪ್ರಯತಃ ಸದಾ ।
ಪದ್ಮಾನಿ ನಾಕೇ ಪಂಚಾಶದ್ವರ್ಷಾಣಾಂ ದಿವಿ ಮೋದತೇ ॥ ೩೩ ॥

೨೮-೩೩. ಹಾಗೆಯೇ ಒಂದುವರ್ಷ ಪೂರ್ತಿಯಾಗಿ ದಿನಬಿಟ್ಟುದಿನ ಏಕಾಹಾರನಾಗಿದ್ದಲ್ಲಿ ಬಹು ಸುವರ್ಣವೆಂಬ ಯಾಗದ ಫಲವನ್ನ ಹೊಂದುತ್ತಾನೆ. ಒಂದು ವರ್ಷ ಪೂರ್ತಿ ಹಗಲಿನ ಮೂರನೇ ಭಾಗದಲ್ಲಿ ಊಟಮಾಡುತ್ತಾ ವರ್ಷವನ್ನು ಕಳೆದವನು ವಾಜಪೇಯಯಾಗದ ಫಲವನ್ನು ಹೊಂದುತ್ತಾನೆ. ದಿನದ ಐದನೆಯ ಭಾಗದಲ್ಲಿ ಒಂದು ಹೊತ್ತು ಮಾತ್ರವೇ ಭೋಜನಮಾಡುತ್ತಾ ವರ್ಷವನ್ನು ಪೂರೈಸಿದವನು ಸ್ವರ್ಗದಲ್ಲಿ ಹನ್ನೆರಡು ಪದ್ಮಸಂಖ್ಯೆಯ ವರ್ಷ ಪರ್ಯಂತ ಸುಖಿಸುತ್ತಾನೆ. ಹಾಗೆಯೇ ದಿನದ ಆರನೆಯ ಭಾಗದಲ್ಲಿ ಒಂದೇಸಲ ಶುಚಿಯಾಗಿ ಒಂದುವರ್ಷ ಭೋಜನಮಾಡಿದವನು ಹದಿನೆಂಟು ಪದ್ಮಸಂಖ್ಯೆಯ ವರ್ಷಪರ್ಯಂತ ಸ್ವರ್ಗ ಸುಖಿಯಾಗುತ್ತಾನೆ. ದಿನದ ಏಳನೆಯ ಭಾಗದಲ್ಲಿ ವರ್ಷಪೂರ್ತಿ ಒಂದೇ ಭೋಜನ ಮಾಡಿದವನು ಮೂವತ್ತಾರು ಪದ್ಮಸಂಖ್ಯೆಯ ವರ್ಷಗಳವರಿಗೂ ಸ್ವರ್ಗಸುಖ ಹೊಂದುತ್ತಾನೆ ದಿನದ ಎಂಟನೆಯ ಭಾಗದಲ್ಲಿ ಒಂದುಸಲ ಊಟಮಾಡುತ್ತಾ ವರ್ಷವನ್ನು ಕಳೆದವನು ಐವತ್ತು ಪದ್ಮಸಂಖ್ಯೆಯ ವರ್ಷಪರ್ಯಂತ ಸ್ವರ್ಗ

ಯಸ್ತು ಸಂವತ್ಸರಂ ಭುಂಕ್ತೇ ದಶಮೇ ದಶಮೇಽಹನಿ ।
ಕಲ್ಪಮೇಕಂ ಸ ವಿಪ್ರೇಂದ್ರ ದೇವವದ್ದಿವಿ ಮೋದತೇ ॥ ೩೪ ॥

ಏಕಾದಶೇ ತು ದಿವಸೇ ಯಃ ಪ್ರಾಪ್ತೇ ಪ್ರಾಶ್ನುತೇ ಹವಿಃ ।
ಬತಕಲ್ಪದ್ವಯಂ ನಾಕೇ ಮೋದತೇ ದೇವವದ್ದಿವಿ ॥ ೩೫ ॥

ದಿವಸೇ ದ್ವಾದಶೇ ಯಸ್ತು ಪ್ರಾಪ್ತೇ ವೈ ಪ್ರಾಶ್ನುತೇ ಹವಿಃ ।
ತ್ರೀಣಿ ಕಲ್ಪಾನ್ಯಸೌ ನಾಕೇ ಭುಂಕ್ತೇ ದೇವಸುಖಾನ್ವಿತಃ ॥ ೩೬ ॥

ತ್ರಯೋದಶೇ ತು ದಿವಸೇ ಯಃ ಪ್ರಾಪ್ತೇ ಪ್ರಾಶ್ನುತೇ ಹವಿಃ ।
ತಸ್ಯ ಕಲ್ಪಾನಿ ಚತ್ವಾರಿ ಗತಿರ್ನಾಕೇ ಪ್ರಕೀರ್ತಿತಾ ॥ ೩೭ ॥

ಚತುರ್ದಶೇ ತು ದಿವಸೇ ಯಃ ಪ್ರಾಪ್ತೇ ಪ್ರಾಶ್ನುತೇ ಹವಿಃ ।
ಸಪ್ತ ತಸ್ಯ ತು ಕಲ್ಪಾನಿ ಗತಿರ್ನಾಕೇ ಪ್ರಕೀರ್ತಿತಾ ॥ ೩೮ ॥

ಸಂವತ್ಸರಂ ತು ಭುಂಜಾನೋ ನರಃ ಪಂಚದಶೇ ಹವಿಃ ।
ನಾಕೇ ವಸತಿ ಧರ್ಮಾತ್ಮಾ ದೇಶೇ ಕಲ್ಪಾನ್ಯಸಂಶಯಂ ॥ ೩೯ ॥

ಸುಖಿಯಾಗುತ್ತಾನೆ. ಯಾವನು ಹತ್ತು ದಿನಕ್ಕೊಂದುಸಲ ದಿನದ ಹತ್ತನೇ ಭಾಗದಲ್ಲಿ ವರ್ಷಪೂರ್ತಿ ಏಕಭೋಜನಮಾಡುತ್ತಾನೆಯೋ ಅವನು ಒಂದು ಕಲ್ಪದವರಿಗೂ ಸ್ವರ್ಗದಲ್ಲಿ ಸುಖಿಯಾಗುತ್ತಾನೆ.

೩೫–೪೦. ಹನ್ನೊಂದು ದಿನಕ್ಕೆ ಒಂದುಸಲ ಹೀಗೆ ಭೋಜನಮಾಡುವವನು ಎರಡು ಕಲ್ಪದವರಿಗೂ ದೇವತೆಗಳಂತೆ ಸ್ವರ್ಗಸುಖಿಯಾಗುತ್ತಾನೆ ಹನ್ನೆರಡು ದಿನಕ್ಕೊಂದುಸಲ ಹೀಗೆ ಭೋಜನಮಾಡಿದವನು ಮೂರು ಕಲ್ಪದವರಿಗೂ ಸ್ವರ್ಗದಲ್ಲಿ ದೇವಸುಖವನ್ನು ಹೊಂದುತ್ತಾನೆ. ಹದಿಮೂರು ದಿನಕ್ಕೊಂದು ಬಾರಿ ಹೀಗೆ ಭೋಜನಮಾಡಿದವನು ನಾಲ್ಕು ಕಲ್ಪಗಳವರಿಗೂ ಸ್ವರ್ಗಸುಖ ಹೊಂದುತ್ತಾನೆ. ಹದಿನಾಲ್ಕು ದಿನಕ್ಕೊಂದುಸಲ ಹೀಗೆ ಭೋಜನಮಾಡಿದವನು ಏಳುಕಲ್ಪ ಪರ್ಯಂತ ಸ್ವರ್ಗಸುಖಿಯಾಗುತ್ತಾನೆ. ಹದಿನೈದು ದಿನಕ್ಕೊಂದುಸಲ ಭೋಜನಮಾಡಿ ವರ್ಷ

ಅಬ್ದಮೇಕಂ ತಥಾಶ್ನಾನಃ ಷಷ್ಠೇ ದಿನಯುತೇನ ಯಃ ।
ಸ ತು ಕಲ್ಪಶತಂ ವಿಪ್ರಾ ದೇವವದ್ದಿವಿ ಮೋದತೇ ॥ ೪೦ ॥

ದಿನೇ ಸಪ್ತದಶೇ ಪ್ರಾಪ್ತೇ ಯಃ ಪ್ರಾಶೇದೇಕಭೋಜನಂ ।
ಸ್ವರ್ಗೇ ಸ ಮೋದತೇ ವಿಪ್ರಾಃ ಪಂಚ ಕಲ್ಪಶತಾನಿ ಚ ॥ ೪೧ ॥

ಅಷ್ಟಾದಶೇ ಚ ದಿವಸೇ ಯಃ ಪ್ರಾಶೇದೇಕಭೋಜನಂ ।
ನಾಕೇ ಕಲ್ಪೇ ಸಹಸ್ರಂ ತು ನರಃ ಕರ್ತಾಭಿಮೋದತೇ ॥ ೪೨ ॥

ಏಕೋನವಿಂಶೇ ದಿವಸೇ ಯೋ ಭುಂಕ್ತೇ ಚೈಕಭೋಜನಂ ।
ಸ ತು ಕಲ್ಪಸಹಸ್ರಂತು ಸಾರ್ಧಂ ನಾಕೇ ಚ ಮೋದತೇ ॥ ೪೩ ॥

ಏಕಕಾಲಂ ಚ ಭುಂಜಾನಃ ಪ್ರಾಪ್ತೇ ವಿಂಶತಮೇ ದಿನೇ ।
ಕಲ್ಪಾನಾಂ ತು ಸಹಸ್ರೇ ದ್ವೇ ನಾಕಸ್ಥಃ ಪೂಜ್ಯತೇ ಸುರೈಃ ॥ ೪೪ ॥

ಏಕವಿಂಶೇ ತು ದಿವಸೇ ಯಃ ಕುರ್ಯಾದೇಕಭೋಜನಂ ।
ತ್ರೀಣಿ ಕಲ್ಪಸಹಸ್ರಾಣಿ ತಸ್ಯ ನಾಕೇ ಗತಿರ್ಭವೇತ್ ॥ ೪೫ ॥

ಕಳೆದವನು ಅನೇಕ ಕಲ್ಪಪರ್ಯಂತ ಸ್ವರ್ಗವಾಸಿಯಾಗುತ್ತಾನೆ. ಹದಿನಾರು ದಿನಕ್ಕೊಂದುಸಲ ಭೋಜನಮಾಡುತ್ತಾ ವರ್ಷವನ್ನು ಕಳೆದವನು ನೂರು ಕಲ್ಪಗಳವರಿಗೂ ಸ್ವರ್ಗಸುಖಿಯಾಗುತ್ತಾನೆ.

೪೧-೪೫ ಹದಿನೇಳು ದಿನಕ್ಕೊಂದುಸಲ ವರ್ಷಪೂರ್ತಿ ಭೋಜನಮಾಡಿದವನು ಐನೂರು ಕಲ್ಪಗಳವರಿಗೂ ಸ್ವರ್ಗಸುಖಿಯಾಗುತ್ತಾನೆ. ಹದಿನೆಂಟು ದಿನಕ್ಕೊಂದುಸಲ ವರ್ಷಪೂರ್ತಿ ಈ ವ್ರತದಲ್ಲಿದ್ದವನು ಕಲ್ಪಸಹಸ್ರಪರ್ಯಂತ ಸ್ವರ್ಗಸುಖಿಯಾಗುತ್ತಾನೆ. ಹತ್ತೊಂಭತ್ತು ದಿನಕ್ಕೊಂದಾವರ್ತಿ ಭೋಜನಮಾಡುತ್ತಾ ವರ್ಷವನ್ನು ಏಕಭೋಜನದಿಂದ ಪೂರ್ತಿಗೊಳಿಸಿದವನು ಒಂದೂವರೆ ಸಹಸ್ರಕಲ್ಪಗಳವರಿಗೂ ಸ್ವರ್ಗಸುಖಿಯಾಗಿರುತ್ತಾನೆ. ಇಪ್ಪತ್ತು ದಿನಕ್ಕೊಂದುಸಲ ಏಕಭೋಜನವ್ರತ ಮಾಡಿದವನು ಎರಡು ಸಹಸ್ರಕಲ್ಪಗಳವರಿಗೂ ದೇವತೆಗಳಿಗೆ ಪೂಜ್ಯನಾಗುತ್ತಾನೆ. ಇಪ್ಪತ್ತೊಂದು ದಿನಕ್ಕೊಂದುಸಲ ಏಕಭೋಜನವ್ರತದಿಂದ ವರ್ಷಕಳೆದವನು ಮೂರು ಸಹಸ್ರಕಲ್ಪಗಳವರಿಗೂ ಸ್ವರ್ಗಸುಖಿಯಾಗುತ್ತಾನೆ.

ದ್ವಾವಿಂಶೇ ದಿವಸೇ ಪ್ರಾಪ್ತೇ ಯೋ ಭುಂಕ್ತೇ ಚೈಕಭೋಜನಂ ।
ಚತ್ವಾರಿ ಸ ಚ ಕಲ್ಪಾನಾಂ ಸಹಸ್ರಂ ಪ್ರಾಪ್ನುಯಾದ್ದಿವಿ ॥ ೪೬ ॥

ತ್ರಯೋವಿಂಶೇ ಚ ದಿವಸೇ ಯಃ ಪ್ರಾಶೇದೇಕಭೋಜನಂ ।
ಪಂಚಕಲ್ಪಸಹಸ್ರಾಣಿ ಸ್ವರ್ಗಸ್ಥಃ ಸತು ಮೋದತೇ ॥ ೪೭ ॥

ಚತುರ್ವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಂ ।
ಸಪ್ತಕಲ್ಪ ಸಹಸ್ರಾಣಿ ನಾಕಸ್ಥಃ ಸ ತು ಮೋದತೇ ॥ ೪೮ ॥

ಪಂಚವಿಂಶತಮೇ ಚಾಹ್ನಿ ಯಃ ಪ್ರಾಶೇದೇಕಭೋಜನಂ ।
ದಶಕಲ್ಪ ಸಹಸ್ರಾಣಿ ಸ್ವರ್ಗಸ್ಥಃ ಸ ತು ಮೋದತೇ ॥ ೪೯ ॥

ಷಡ್ವಿಂಶೇ ದಿವಸೇ ಯಸ್ತು ಪ್ರಾಶ್ನೀಯಾದೇಕಭೋಜನಂ ।
ಸ ತು ಕಲ್ಪಸಹಸ್ರಾಣಿ ಚತುರ್ವಿಂಶಃ ಸುರೋ ಭವೇತ್ ॥ ೫೦ ॥

ಸಪ್ತವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಂ ।
ಸ ತು ಕಲ್ಪಸಹಸ್ರಾಣಿ ನಾಕಸ್ಥೋಽಪಿ ಚ ಮೋದತೇ ॥ ೫೧ ॥

೪೬–೫೦. ಇಪ್ಪತ್ತೆರಡು ದಿನಕ್ಕೊಂದುಸಲ ಏಕಭೋಜನದಿಂದ ವರ್ಷ ಕಳೆದವನು ನಾಲ್ಕುಸಹಸ್ರ ಕಲ್ಪಗಳವರಿಗೂ ಸ್ವರ್ಗಸುಖಿಯಾಗುತ್ತಾನೆ. ಇಪ್ಪತ್ತ ಮೂರು ದಿನಗಳ ಮೇಲೆ ಈ ರೀತಿ ವರ್ಷಪರ್ಯಂತ ಏಕಭೋಜನಮಾಡಿದವನು ಐದುಸಾವಿರ ಕಲ್ಪಪರ್ಯಂತವೂ ಸ್ವರ್ಗಸುಖಿಯಾಗುತ್ತಾನೆ. ಇಪ್ಪತ್ತನಾಲ್ಕು ದಿನದ ಮೇಲೆ ಏಕಭೋಜನ ಮಾಡುತ್ತಾ ವರ್ಷಕಳೆದವನು ಏಳು ಕಲ್ಪಸಹಸ್ರಪರ್ಯಂತ ಸ್ವರ್ಗಸುಖಿಯಾಗುತ್ತಾನೆ. ಇಪ್ಪತ್ತೈದು ದಿನಕ್ಕೊಂದುಸಲ ಹಗಲಿನಲ್ಲಿ ಏಕಭೋಜನ ಮಾಡುತ್ತಾ ವರ್ಷಕಳೆದವನು ಹತ್ತುಸಹಸ್ರ ಕಲ್ಪಗಳವರಿಗೂ ಸ್ವರ್ಗಸುಖಿಯಾಗುತ್ತಾನೆ. ಇಪ್ಪತ್ತಾರು ದಿನಕ್ಕೊಂದುಸಲ ಈ ರೀತಿ ಏಕಭೋಜನದಿಂದ ವರ್ಷ ಕಳೆದವನು ಇಪ್ಪತ್ತನಾಲ್ಕುಸಾವಿರ ಕಲ್ಪಗಳವರಿಗೂ ದೇವತೆಯೇ ಆಗುತ್ತಾನೆ.

೫೧–೫೩. ಇಪ್ಪತ್ತೇಳು ದಿನಕ್ಕೊಂದುಸಲ ಏಕಭೋಜನದಿಂದ ವರ್ಷವನ್ನು ಕಳೆದವನು ಅನೇಕ ಕಲ್ಪಸಹಸ್ರಪರ್ಯಂತ ಸ್ವರ್ಗದಲ್ಲಿದ್ದು ಸುಖಿಸುತ್ತಾನೆ. ಇಪ್ಪತ್ತೆಂಟು ದಿನಕ್ಕೊಂದು ಬಾರಿ ಏಕಭೋಜನದಿಂದ ವರ್ಷಕಳೆದವನು ನಲವತ್ತುಸಾವಿರ

ಅಷ್ಟಾವಿಂಶೇ ತು ದಿವಸೇ ಯಃ ಪ್ರಾಶೇದೇಕಭೋಜನಂ ।
ಸ ತು ಕಲ್ಪಸಹಸ್ರಾಣಿ ಚತ್ವಾರಿಂಶತ್ಸ ಮೋದತೇ ॥ ೫೨ ॥

ಏಕೋನತ್ರಿಂಶೇ ದಿವಸೇ ಯಃ ಪ್ರಾಶೇದೇಕಭೋಜನಂ ।
ಸ ತು ಕಲ್ಪಸಹಸ್ರಾಣಾಂ ಪಂಚಾಶನ್ನಾಕಗೋ ಭವೇತ್ ॥ ೫೩ ॥

ಯಸ್ತು ತ್ರಿಂಶದ್ದಿನೇ ಪ್ರಾಪ್ತೇ ಚಾಶ್ನೀಯಾದೇಕಭೋಜನಂ ।
ಸ ತು ಕಲ್ಪಸಹಸ್ರಾಣಾಂ ನಾಕಸ್ಥಃ ಪೂಜ್ಯತೇ ಶತಂ ॥ ೫೪ ॥

ಮಾಸೇ ಮಾಸೇ ಗತೇಃ ಪ್ರಾಯಃ ಪ್ರಾಶ್ನಿಯಾದೇಕಭೋಜನಂ ।
ಪೌರುಷಂ ಸ ದಿನಂ ನಾಕೇ ದೇವವನ್ಮೋದತೇ ಸದಾ ॥ ೫೫ ॥

ಸರ್ವೇ ವ್ರತಾಸ್ತು ಕೌಮ್ಯಾಯ ವರ್ಷಮೇಕಂ ಸುಖಾವಹಾಃ ।
ವರ್ಷೇ ತು ಫಲದಾಃ ಪ್ರೋಕ್ತಾ ನಾತ್ರ ಕಾರ್ಯಾ ವಿಚಾರಣಾ ॥ ೫೬ ॥

ಸ್ನಾನಂ ಸರ್ವೇಷು ಕರ್ತವ್ಯಂ ಕಾರ್ಯೋ ಹೋಮಸ್ತಥೈವ ಚ ।
ನ ಭೋಕ್ತವ್ಯಂ ತಥಾ ಮಾಸಂ ವ್ರತಸ್ಯ ಫಲಮುಚ್ಯತೇ ॥ ೫೭ ॥

ಕಲ್ಪದವರಿಗೂ ಸ್ವರ್ಗಸುಖ ಹೊಂದುತ್ತಾನೆ. ಇಪ್ಪತ್ತೊಂಭತ್ತು ದಿನಕ್ಕೊಂದು ಸಲ ಏಕಭೋಜನಮಾಡಿದವನು ಐವತ್ತುಸಾವಿರ ಕಲ್ಪದವರಿಗೂ ಸ್ವರ್ಗಸುಖಿಯಾಗುತ್ತಾನೆ.

೫೪-೫೮. ಯಾವನು ಮೂವತ್ತು ದಿನಕ್ಕೊಂದು ಸಲ ಏಕಭುಕ್ತವ್ರತದಿಂದ ವರ್ಷಕಳೆಯುತ್ತಾನೆಯೋ ಅವನು ನೂರು ಕಲ್ಪಸಹಸ್ರವರ್ಷಗಳವರಿಗೂ ಸ್ವರ್ಗ ಹೊಂದಿ ಮಾನ್ಯನಾಗುತ್ತಾನೆ. ಇಂತಹ ಏಕಭೋಜನವ್ರತವನ್ನು ತಿಂಗಳಿಗೊಂದು ಸಲ ಮಾಡುವವನು ಆಯಾಯ ಮಾಸಗಳು ಕಳೆದಮೇಲೆ ಮಾಡಬೇಕು ಇಂತಹ ಮಾನುಷಮಾಸ ಭೋಜನವು ಸ್ವರ್ಗದಲ್ಲಿ ಒಂದುದಿನ ಭೋಜನವಾಗುತ್ತದೆ. ಈ ವ್ರತಗಳೆಲ್ಲವೂ ಕಾರ್ಯಕ್ಕಾಗಿ ಪ್ರಾರಂಭಿಸಲ್ಪಟ್ಟಾಗ ಒಂದು ವರ್ಷಮಾತ್ರ ಸುಖಪ್ರದವಾಗುತ್ತವೆ. ವರ್ಷಮುಗಿದಮೇಲೆ ಫಲಪ್ರದವಾಗಿಯೇ ಆಗುತ್ತವೆ. ಎಲ್ಲಾ ವ್ರತಗಳಲ್ಲಿಯೂ ಸ್ನಾನಹೋಮಗಳನ್ನು ಮಾಡುತ್ತಲೇ ಇದ್ದು ಮಾಸಪೂರ್ತಿ

ಆಶ್ರಿತ್ಯ ತೀರ್ಥಂ ಯದಿ ವಾಪಿ ದೇವಂ
ವ್ರತಾನ್ಯಥೈತಾನಿ ಮಹಾಫಲಾನಿ ।
ಕಾರ್ಯಾಣಿ ನೈತಾನ್ಯಧಿಕಾಸ್ತು ಮಾಸಾಸ್ತತಃ
ಪರಂ ನಾನಶನಂ ಪ್ರದಿಷ್ಟಂ ॥ ೫೮ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರ ಸಂವಾದೇ ಮುನೀನ್ಪ್ರತಿ ಹಂಸಗೀತಾಸು ಉಪವಾಸವಿಧಿವರ್ಣನಂ ನಾಮ ವಿಂಶತ್ಯಧಿಕತ್ರಿಶತತಮೋಽಧ್ಯಾಯಃ

ಭೋಜನವಿಲ್ಲದೆ ಇದ್ದಲ್ಲಿ ಇವುಗಳ ಫಲವನ್ನೆ ಹೊಂದಿಯೇ ಹೊಂದುತ್ತಾನೆ. ಈ ವ್ರತಗಳನ್ನು ತೀರ್ಥಸ್ಥಾನದಲ್ಲಿಯೂ ದೇವತಾಸಾನ್ನಿಧ್ಯದಲ್ಲಿಯೂ ಮಾಡಿದ್ದೇ ಆದರೆಇವು ಹೆಚ್ಚು ಫಲಪ್ರದವಾಗುತ್ತವೆ. ಇವನ್ನು ಇಲ್ಲಿ ಹೇಳಿರುವ ಕಾಲಕ್ಕಿಂತಲೂ ಹೆಚ್ಚಾಗಿ ಅನೇಕ ಮಾಸಪರ್ಯಂತ ಮಾಡಬಾರದು ಅದು ವಿಹಿತವಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಉಪವಾಸವಿಧಿವರ್ಣನವೆಂಬ ಮುನ್ನೂರ ಇಪ್ಪತ್ತನೆಯ ಅಧ್ಯಾಯ ಮುಗಿದುದು

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಕ್ವ ಕಾಲೇ ಕರ್ಮಣಾ ಕೇನ ಪ್ರಾಪ್ನುವಂತಿ ನರೋತ್ತಮಾಃ ।
ತತ್ತ್ವಮಸ್ಮಾಕಮಾಚಕ್ಷ್ವ ತ್ವಂ ಹಿ ಸರ್ವವಿದರ್ಹಸಿ ॥ ೧ ॥

॥ ಹಂಸ ಉವಾಚ ॥

ಜ್ಯೇಷ್ಠಸ್ವಸಾರಂ ಪಿತರಂ ಮಾತರಂ ಗುರುಮೇವ ಚ ।
ನಿತ್ಯಂ ಸಂಪೂಜಯೇದ್ಭಕ್ತ್ಯಾ ಯಾಮ್ಯಲೋಕೇ ಮಹೀಯತೇ ॥ ೨ ॥

ಭೋಜನಾಚ್ಛಾದನಾದ್ಯೇನ ತ್ವತಿಥಿಂ ಚೈವ ಪೂಜಯೇತ್ ।
ರಾಜರಾಜಸ್ಯ ಲೋಕೇಷು ಮೋದತೇ ನಾತ್ರ ಸಂಶಯಃ ॥ ೩ ॥

ಮುನ್ನೂರ ಇಪ್ಪತ್ತೊಂದನೆಯ ಅಧ್ಯಾಯ.

೧-೫. ಋಷಿಗಳು ಪ್ರಶ್ನೆಮಾಡುತ್ತಾರೆ:—ಯಾವ ಕಾಲದಲ್ಲಿ ಯಾವ ಕಾರ್ಯವನ್ನು ಮಾಡಿದಲ್ಲಿ ಮನುಷ್ಯರು ಪುಣ್ಯಶಾಲಿಗಳಾಗಬಹುದು ಇದರ ತತ್ತ್ವವನ್ನೂ ಸರ್ವಜ್ಞನಾದ ನೀನೇ ಹೇಳಲು ಅರ್ಹನಾಗಿದ್ದೀಯೆ. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ— ಹಿರಿಯ ಅಕ್ಕನನ್ನೂ, ತಂದೆಯನ್ನೂ, ತಾಯಿಯನ್ನೂ ಗುರುವನ್ನೂ ಸಹ ಭಕ್ತಿಯಿಂದ ನಿತ್ಯವೂ ಸೇವಿಸಿದವನು ಯಮಲೋಕದಲ್ಲಿ ಮಾನ್ಯನಾಗುತ್ತಾನೆ. ಅತಿಥಿಯನ್ನು ಅನ್ನವಸ್ತ್ರಾದಿಗಳಿಂದ ಸೇವಿಸಿದವನು ಕುಬೇರನ ಲೋಕದಲ್ಲಿ ಸುಖಿಸುತ್ತಾನೆ. ಇದರಲ್ಲಿ ಸಂಶಯವಿಲ್ಲ. ನಿತ್ಯವೂ ಅಧ್ಯಯನ

ಮೇರೋಃ ಸಮೀಪಂ ಗಚ್ಛೇತ್ಸ್ವೈ ನಿತ್ಯಾಧ್ಯಯನ ತತ್ಪರಃ ।
ಸುದರ್ಶನಾ ಯತ್ರ ಚ ಸಾ ಜಂಬೂಃ ಖ್ಯಾತಾಃ ದ್ವಿಜಾತಯಃ ॥ ೪ ॥

ನೃತ್ತೇ ಗೀತೇ ಚ ಕುಶಲಂ ನಂದನಂ ಯಾಂತಿ ತೇ ವನಂ ।
ಹಿಮಾನಿ ವೃತ್ವಾ ಗಚ್ಛಂತಿ ತಥಾ ಚೈವೋತ್ತರಾನ್ಕುರೂನ್ ॥ ೫ ॥

ನಿತ್ಯಂ ದಾನಪರಾಃ ಸಂತೋ ಲೋಕಂ ಗಚ್ಛಂತಿ ಶಾಶ್ವತಂ ।
ಆದಿತ್ಯಲೋಕಂ ಗಚ್ಛಂತಿ ತಥಾ ಯೇ ತಪಸಿ ಸ್ಥಿತಾಃ ॥ ೬ ॥

ತೀರ್ಥಯಾತ್ರಾಪರಾ ಯಾಂತಿ ತಥಾ ಲೋಕಂ ಪ್ರಚೇತಸಃ ।
ಸಂಗ್ರಾಮೇ ನಿಹತಾ ಯಾಂತಿ ಶಕ್ರಲೋಕಮಸಂಶಯಂ ॥ ೭ ॥

ಪ್ರಾಜಾಪತ್ಯಂ ತಥಾ ಯಾಂತಿ ಸಮ್ಯಗ್ಗೃತ್ವಾ ಮಹೀಕ್ಷಿತಃ ।
ಗವಾಂ ಪತ್ಯಾ ತಥಾ ಯಾಂತಿ ಗೋಲೋಕಂ ಮಾನವೋತ್ತಮಾಃ ॥ ೮ ॥

ಯಾಂತಿ ಲೋಕಂ ಚ ಸೂರ್ಯಸ್ಯ ನಿತ್ಯಂ ಯೇ ಸತ್ಯಭಾಷಿಣಃ ।
ಪ್ರತಿಗ್ರಹಾನ್ನಿವೃತ್ತಾಶ್ಚ ವಸೂನಾಮಪಿ ಮಾನವಾಃ ॥ ೯ ॥

ತತ್ಪರನಾದವನು ಸುದರ್ಶನವೆಂಬ ಪ್ರಖ್ಯಾತವಾದ ಜಂಬೂವೃಕ್ಷವಿರುವ ಮೇರು ಪರ್ವತದ ಸಮೀಪಕ್ಕೂ ಹೋಗಿ ನೃತ್ತಗೀತಾದಿಗಳಿಂದ ರಮ್ಯವಾದ ನಂದನವನಕ್ಕೂ ಹೋಗುತ್ತಾನೆ. ಹಿಮದ ತೊಂದರೆ ಇಲ್ಲದಂತೆ ಉತ್ತರಕುರುದೇಶಕ್ಕೂ ಹೋಗುತ್ತಾನೆ.

೬–೯. ಯಾವಾಗಲೂ ದಾನಪರರಾಗಿರುವವರು ಶಾಶ್ವತವಾದ ಲೋಕವನ್ನೇ ಪೊಂದುತ್ತಾರೆ. ತಪಸ್ವಿಗಳಾಗಿರುವವರು ಆದಿತ್ಯಲೋಕಕ್ಕೆ ಹೋಗುತ್ತಾರೆ. ತೀರ್ಥ ಯಾತ್ರಾಪರರಾದವರು ವರುಣಲೋಕವನ್ನು ಹೊಂದುತ್ತಾರೆ. ಚೆನ್ನಾಗಿ ರಾಜ್ಯ ವಾಳಿದ ದೊರೆಗಳು ಪ್ರಜಾಪತಿಯ ಲೋಕವನ್ನು ಹೊಂದುತ್ತಾರೆ. ಹಸುಗಳಿಗೆ ಯಜಮಾನರಾಗಿ ಅವನ್ನು ಸೇವಿಸಿದವರು ಗೋಲೋಕವನ್ನು ಹೊಂದುತ್ತಾರೆ. ನಿತ್ಯವೂ ಸತ್ಯಭಾಷಿಗಳಾಗಿದ್ದವರು ಸೂರ್ಯಲೋಕವನ್ನು ಹೊಂದುತ್ತಾರೆ. ಪ್ರತಿಗ್ರಹದಿಂದ ಪರಾಙ್ಮುಖರಾಗಿದ್ದವರು ವಸುಲೋಕವನ್ನು ಹೊಂದುತ್ತಾರೆ.

ವಾಯುಲೋಕೇ ಮಹೀಯಂತೇ ರೋಗಿಣಾಂ ಪರಿಚಾರಕಾಃ ।
ಲೋಕಂ ಗಚ್ಛಂತ್ಯಥಾಗ್ನೇಯಂ ವಹ್ನಿಶುಶ್ರೂಷಣೇ ರತಾಃ ॥ ೧೦ ॥

ಯಾಂತಿ ತೇ ನೈರ್ಋತಂ ಲೋಕಂ ಪ್ರಪಾರಕ್ಷಣತತ್ಪರಾಃ ।
ಭೃಗೂಣಾಮಪಿ ಲೋಕೇಷು ಮೋದಂತ್ಯಾಕಾಶಶಾಯಿನಃ ॥ ೧೧ ॥

ಯಾಂತಿ ಚಾಂಗಿರಸಂ ಲೋಕಂ ವ್ರತೇನಾನೇನ ಮಾನವಾಃ ।
ಮರುತಾಂ ಚ ತಥಾ ಲೋಕಂ ಯಾಂತಿ ಯಾನಪ್ರದಾ ನರಾಃ ॥ ೧೨ ॥

ನಾಸತ್ಯಲೋಕೇ ಮೋದಂತೇ ತಥೈವೌಷಧದಾಯಿನಃ ।
ರುದ್ರಲೋಕಂ ಪ್ರಪದ್ಯಂತೇ ತಥೈವೌಷಧದಾಯಿನಃ ॥ ೧೩ ॥

ಸ್ವಾಚಾರನಿಯತಾ ಯಾಂತಿ ವೈಶ್ವದೇವಮಸಂಶಯಂ ।
ಆದಿತ್ಯೈಃ ಸಹ ಮೋದಂತೇ ದಯಾವಂತಸ್ತು ಯೇ ನರಾಃ ॥ ೧೪ ॥

ಬ್ರಹ್ಮಲೋಕಂ ವಿಷ್ಣುಲೋಕಂ ರುದ್ರಲೋಕಂ ತಥೈವ ಚ ।
ತದ್ಭಕ್ತೈರೇವ ಲಭ್ಯಂತೇ ನಾನ್ಯಥಾ ದ್ವಿಜಸತ್ತಮಾಃ ॥ ೧೫ ॥

೧೦-೧೩. ರೋಗಿಗಳನ್ನು ಸೇವಿಸಿದವರು ವಾಯುಲೋಕದಲ್ಲಿ ಮಾನ್ಯರಾಗುತ್ತಾರೆ. ಅಗ್ನಿಶುಶ್ರೂಷೆಯಲ್ಲಿ ನಿರತರಾಗಿದ್ದವರು ಅಗ್ನಿಲೋಕವನ್ನು ಹೊಂದುತ್ತಾರೆ. ಅರವಟ್ಟಿಗೆಯ ರಕ್ಷಣದಲ್ಲಿ ನಿರತರಾಗಿದ್ದವರು ನಿಋತಿಯ ಲೋಕವನ್ನು ಹೊಂದುತ್ತಾರೆ. ನಿರಾವರಣ ಪ್ರದೇಶದಲ್ಲಿ ಮಲಗಿ ವ್ರತವನ್ನಾಚರಿಸಿದವರು ಭೃಗುಗಳ ಲೋಕದಲ್ಲಿ ಸುಖಿಸುತ್ತಾರೆ. ಈ ವ್ರತದಿಂದ ಆಂಗೀರಸ ಲೋಕವನ್ನೂ ಹೊಂದುತ್ತಾರೆ. ಯಾನಗಳನ್ನು ದಾನಮಾಡಿದವರು ಮರುತ್ತುಗಳ ಲೋಕವನ್ನೂ ಹೊಂದುತ್ತಾರೆ. ಔಷಧಿಗಳನ್ನು ದಾನಮಾಡಿದವರು ಅಶ್ವಿನೀದೇವತೆಗಳ ಲೋಕದಲ್ಲಿ ಸುಖಿಸುತ್ತಾರೆ. ಗೋವು, ಬ್ರಾಹ್ಮಣರು, ಸಾಮಾನ್ಯ ಮನುಷ್ಯರು ಇವರಲ್ಲಿ ಸ್ವಾಭಾವಿಕವಾದ ಪ್ರೀತಿಯುಳ್ಳವರು ರುದ್ರಲೋಕ ಹೊಂದುತ್ತಾರೆ.

೧೪-೧೬. ತಮ್ಮ ಆಚಾರಗಳಲ್ಲಿ ನಿರತರಾಗಿರುವವರು ವೈಶ್ವದೇವಲೋಕವನ್ನು ನಿಸ್ಸಂಶಯವಾಗಿಯೂ ಹೊಂದುತ್ತಾರೆ. ದಯಾಶಾಲಿಗಳಾದವರು ಆದಿತ್ಯರೊಡನೆ ಸುಖಿಸುತ್ತಾರೆ. ಬ್ರಹ್ಮಲೋಕವೇ ಆಗಲಿ, ರುದ್ರಲೋಕವೇ ಆಗಲಿ ಇವು ಅವರವರ

ಯಸ್ಯ ದೇವಸ್ಯ ಯೋ ಭಕ್ತಿಂ ಸದಾ ವಹತಿ ಮಾನವಃ ।
ಸಂಪದಸ್ತಸ್ಯ ಸಾಲೋಕ್ಯಂ ಯಾಂತಿ ನಾಸ್ತ್ಯತ್ರ ಸಂಶಯಃ ॥ ೧೬ ॥

ಲೋಕೇಷು ದಿವ್ಯೇಷು ಗತಿರ್ಮಯೋಕ್ತಾ
ಕರ್ಮಾನುರೂಪಾ ಪುರುಷಸ್ಯ ವಿಪ್ರಾಃ ।
ಅತಃ ಪರಂ ಕಿಂ ಕಥಯಾಮ್ಯಹಂ ವೈ
ತನ್ಮೇ ಗದಧ್ವಂ ತಪಸಿ ಪ್ರಧಾನಾಃ ॥ ೧೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಲೋಕವಿಭಾಗ
ವರ್ಣನೋ ನಾಮ
ಏಕವಿಂಶತ್ಯಧಿಕತ್ರಿಶತತಮೋಽಧ್ಯಾಯಃ

ಭಕ್ತರಿಂದಲೇ ಹೊಂದಲು ಅರ್ಹವಾಗುತ್ತವೆ. ಇವಕ್ಕೆ ಬೇರೆ ಉಪಾಯವಿಲ್ಲ. ಮನುಷ್ಯನು ಯಾವ ದೇವತೆಯ ಭಕ್ತಿಯನ್ನು ಯಾವಾಗಲೂ ಹೊಂದಿರುವನೋ ಆ ದೇವತೆಯ ಅನುಗ್ರಹದಿಂದ ಹೊಂದಬಹುದಾದ ಸಂಪತ್ತನ್ನೂ ಸಾಲೋಕ್ಯವನ್ನೂ ಸಹ ಅವನೇ ಹೊಂದುತ್ತಾನೆ. ಎಲೈ ದ್ವಿಜವರ್ಯರೇ, ಪುರುಷನಾದವನಿಗೆ ಅವನವನ ಕರ್ಮಾನುರೂಪವಾದ ದಿವ್ಯಲೋಕದ ಗತಿಯನ್ನೆಲ್ಲಾ ನಾನು ಹೇಳಿರುವೆನು. ಇನ್ನು ಮುಂದೆ ನಾನು ಏನು ಹೇಳಬೇಕೆಂಬುದನ್ನು ತಪಸ್ವಿಗಳಾದ ನೀವೇ ಹೇಳಿರಿ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಲೋಕವಿಭಾಗವರ್ಣನವೆಂಬ ಮುನ್ನೂರ ಇಪ್ಪತ್ತೊಂದನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಾವಿಂಶತ್ಯಧಿಕತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಕಥಯಸ್ವಾಮಿತಪ್ರಾಜ್ಞ ಸ್ತ್ರೀಣಾಂ ಧರ್ಮಮತಃ ಪರಂ ।
ತದ್ವಯಂ ಶ್ರೋತುಮಿಚ್ಛಾಮಸ್ತ್ವಂ ಹಿ ಸರ್ವ ವಿದುಚ್ಯಸೇ ॥ ೧ ॥

। ಹಂಸ ಉವಾಚ ॥

ಸ್ತ್ರೀಧರ್ಮಃ ಪೂರ್ವ ವಿವಾಯಂ ವಿವಾಹೇ ಬಂಧುಭಿಃ ಕೃತಃ ।
ಸಧರ್ಮಚಾರಿಣೀ ಭರ್ತುರ್ಭವೇದಗ್ನಿಸಮೀಪತಃ ॥ ೨ ॥

ಮುನ್ನೂರ ಇಪ್ಪತ್ತೆರಡನೆಯ ಅಧ್ಯಾಯ.

೧-೩. ಋಷಿಗಳು ಪ್ರಶ್ನೆಮಾಡುತ್ತಾರೆ:—ಎಲೈ ಪ್ರಾಜ್ಞನೇ ಸ್ತ್ರೀಧರ್ಮವನ್ನು ನಿನ್ನಿಂದ ತಿಳಿಯಲು ಅಪೇಕ್ಷಿಸುತ್ತಿದ್ದೇವೆ. ಸರ್ವಜ್ಞನಾದ ನೀನೇ ದಯವಿಟ್ಟು ಇದನ್ನೂ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ. ಸ್ತ್ರೀಧರ್ಮವು ಹೇಗಿರಬೇಕೆಂಬುದು ವಿವಾಹಕಾಲದಲ್ಲಿ ಅಗ್ನಿಸಾಕ್ಷಿಕವಾಗಿ ನಡೆಸುವ ಆಯಾಯ ವ್ಯಾಪಾರಗಳಿಂದಲೇ ಬಂಧುಗಳಿಂದ ನಿದರ್ಶಿಸಿ ತೋರಿಸಲ್ಪಟ್ಟಿದೆ (ಇಲ್ಲಿ ಸಂರಾಜ್ಞೀಶ್ವಶುರೆ ಭವ ಇತ್ಯಾದಿ ಮಂತ್ರಗಳ ಅರ್ಥವು ಸ್ಮರಿಸಲ್ಪಡತಕ್ಕದ್ದು) ಅಗ್ನಿಸಾಕ್ಷಿಕವಾಗಿ ಸಧರ್ಮಚಾರಿಣಿ (ಪತಿಯೊಡನೆ ಧರ್ಮಾಚರಣೆ ಮಾಡತಕ್ಕವಳು) ಯಾದವಳು ತನ್ನ ಪತಿಯೊಡನೆ ಧರ್ಮಚಾರಿಣಿಯಾಗಬೇಕಾದಲ್ಲಿ ಅವಳು ಒಳ್ಳೆಯ ಸ್ವಭಾವದವಳೂ, ಒಳ್ಳೆಯ ಮನಸ್ಸುಳ್ಳವಳೂ, ವ್ಯವಸ್ಥಿತಸ್ವಭಾವವುಳ್ಳವಳೂ,

ಸುಸ್ವಭಾವಾ ಸುವಿಮನಾ ಸುವಿಭಕ್ತಾ ಸುದರ್ಶನಾ ।
ಅನನ್ಯಚಿತ್ತಾ ಸುಮುಖೀ ಭರ್ತುಸ್ಸಾ ಧರ್ಮಚಾರಿಣೀ ॥ ೩ ॥

ಪುತ್ರವಕ್ತ್ರಮಿವಾಭೀಕ್ಷ್ಣಂ ಭರ್ತುರ್ವದನಮೀಕ್ಷತೀ ।
ಯಾ ಸಾಧ್ವೀ ನಿಯತಾಚಾರಾ ಸಾ ಭವೇದ್ಧರ್ಮಚಾರಿಣೀ ॥ ೪ ॥

ಶ್ರುತ್ವೇದಂ ಪತಿಧರ್ಮಂ ವೈ ಮಹಾಶ್ರಮಕೃತಂ ಶಿವಂ ।
ಯಾ ಭವೇದ್ಧರ್ಮಪರಮಾ ನಾರೀ ಭರ್ತೃಸಮವ್ರತಾ ॥ ೫ ॥

ದೇವವತ್ಸತತಂ ಸಾಧ್ವೀ ಭರ್ತಾರಮನುಪಶ್ಯತಿ ।
ಶುಶ್ರೂಷಾಂ ಪರಿಚರ್ಯಾಂ ಚ ದೇವತುಲ್ಯಂ ಪ್ರಕುರ್ವತೀ ॥ ೬ ॥

ವಶ್ಯಭಾವೇನ ಸುಮನಾಃ ಸುವ್ರತಾ ಸುಸಮಾಹಿತಾ ।
ಅನನ್ಯಚಿತ್ತಾ ಸುಮನಾ ಭರ್ತುಃ ಸಾ ಧರ್ಮಭಾಗಿನೀ ॥ ೭ ॥

ಪಾರುಷ್ಯಮಪಿವ್ರೋಕ್ತಾ ಯಾ ದೃಷ್ಟ್ವಾವಾ ಕ್ರೂರಚಕ್ಷುಷಾ ।
ಸುಪ್ರಸನ್ನಮುಖೀ ಭರ್ತುರ್ಯಾ ನಾರೀ ಸಾ ಪತಿವ್ರತಾ ॥ ೮ ॥

ಒಳ್ಳೆಯ ರೂಪವುಳ್ಳವಳೂ, ಪತಿಯ ಹೊರತು ಯಾರನ್ನೂ ಮನಸ್ಸಿನಲ್ಲಿ ಭಾವಿಸದಿರುವವಳೂ, ಹಸನ್ಮುಖಿಯೂ ಆಗಿರಬೇಕು.

೪-೮. ಮಗನಮುಖವನ್ನು ನೋಡುವಂತೆ ಪ್ರೀತಿಯಿಂದ ಪತಿಯ ಮುಖವನ್ನು ನೋಡತಕ್ಕವಳೂ, ಪತಿವ್ರತೆಯೂ, ವ್ಯವಸ್ಥಿತವಾದ ಆಚಾರವುಳ್ಳವಳೂ ಧರ್ಮಚಾರಿಣಿ ಎನಿಸುತ್ತಾಳೆ. ಪತಿಯೊಡನೆ ಮಾಡಬಹುದಾದ ಈ ಧರ್ಮಗಳನ್ನು ತಿಳಿದು ಮಂಗಳಕರವಾದ ಮಹಾಶ್ರಮಧರ್ಮವೆಂದು ಭಾವಿಸಿ ಧರ್ಮಪರಳಾಗಿ ಯಾವಳು ಇರುತ್ತಾಳೆಯೋ ಅವಳೇ ಪತಿಯೊಡನೆ ಸಮಾನವ್ರತವುಳ್ಳವಳಾಗುತ್ತಾಳೆ. ಪತಿವ್ರತೆಯಾದ ಯಾವ ಭಾರ್ಯೆಯು ಪತಿಯನ್ನು ದೇವತೆಯಂತೆ ನೋಡುತ್ತಾ ಶುಶ್ರೂಷಾ ಪರಿಚರ್ಯಾದಿಗಳನ್ನು ದೇವರಲ್ಲಿ ನಡೆಸುವಂತೆ ನಡೆಸುತ್ತಾ, ಮನಸ್ಸಿನಿಂದಲೇ ಪತಿಗೆ ವಶ್ಯಳಾಗಿ ಒಳ್ಳೆಯ ಮನಸ್ಸಿನಿಂದಲೂ, ವ್ರತದಿಂದಲೂ ಸಮಾಧಾನ ಹೊಂದಿ ಪತಿಯ ಸ್ಮರಣೆಯಲ್ಲಿ ನಿರತಳಾಗಿರುವಳೋ ಅವಳೇ ಧರ್ಮಭಾಗಿನಿಯಾಗತಕ್ಕವಳು. ಯಾವ ಸ್ತ್ರೀಯು ಕಠಿಣೋಕ್ತಿಗಳಿಂದ ಧಿಕ್ಕರಿಸಲ್ಪಟ್ಟರೂ, ಕ್ರೂರದೃಷ್ಟಿಯಿಂದ ನೋಡಲ್ಪಟ್ಟರೂ. ಪತಿಯ ವಿಷಯದಲ್ಲಿ ಪ್ರಸನ್ನಮುಖಿಯಾಗಿಯೇ ಇರುತ್ತಾಳೆಯೋ ಅವಳೇ ಪತಿವ್ರತೆ ಎನಿಸುತ್ತಾಳೆ.

ನ ಚಂದ್ರಸೂರ್ಯೌ ತದ್ರೂಪಂ ನೇನೌ ಯಾ ಚ ನಿರೀಕ್ಷತೇ ।
ಭರ್ತೃವರ್ಜಂ ವರಾರೋಹಾ ಸಾ ಭವೇದ್ಧರ್ಮಭಾಗಿನೀ ॥ ೯ ॥

ದರಿದ್ರಂ ವ್ಯಾಧಿತಂ ದೀನಂ ಚಾಧಿನಾ ಪರಿಕೀರ್ತಿತಂ ।
ಪತಿಂ ಪುತ್ರಮಿವಾರಕ್ಷೇತ್ಸಾನಾರೀ ಧರ್ಮಭಾಗಿನೀ ॥ ೧೦ ॥

ಯಾ ನಾರೀ ಪ್ರಯತಾ ದಕ್ಷಾ ಯಾ ನಾರೀ ಪುತ್ರಿಣೀ ಭವೇತ್ ।
ಪತಿವ್ರತಾ ಪತಿಪ್ರಾಣಾ ಸಾ ನಾರೀ ಧರ್ಮಭಾಗಿನೀ ॥ ೧೧ ॥

ಶುಶ್ರೂಷಾಂ ಪರಿಚರ್ಯಾಂ ಚ ಕರೋತ್ಯವಿಮನಾಃ ಸದಾ ।
ಸುಪ್ರತೀತಾ ಚ ಸುಮನಾಃ ಸಾ ನಾರೀ ಧರ್ಮಭಾಗಿನೀ ॥ ೧೨ ॥

ನ ಕಾಮೇಷು ನ ಭೋಗೇಷು ನೈಶ್ವರ್ಯೇ ನ ಸುಖೇ ತಥಾ ।
ಸ್ಪೃಹಾ ಯಸ್ಯಾ ಯಥಾ ಭರ್ತುಃ ಸಾ ನಾರೀ ಧರ್ಮಭಾಗಿನೀ ॥ ೧೩ ॥

೯–೧೩. ಚಂದ್ರಸೂರ್ಯರೂ ಸಹ ಯಾವಳ ರೂಪವನ್ನು ನೋಡಲಾರರೋ ಪತಿಯನ್ನು ಹೊರತು ಯಾವಳು ಚಂದ್ರಸೂರ್ಯರನ್ನೂ ನೋಡುವುದಿಲ್ಲವೋ ಅಂತಹ ಸ್ತ್ರೀಯೇ ಧರ್ಮಭಾಗಿನಿಯಾಗುತ್ತಾಳೆ. ಯಾವ ಭಾರ್ಯೆಯು ದರಿದ್ರನೂ, ವ್ಯಾಧಿಪೀಡಿತನೂ, ಧೀನನೂ, ಮನೋವ್ಯಥೆಯಿಂದ ಕೂಡಿದವನೂ ಆದ ಪತಿಯನ್ನು ಪ್ರೀತಿಯಿಂದ ಪುತ್ರನಂತೆ ರಕ್ಷಿಸುವಳೋ ಅವಳೇ ಧರ್ಮಭಾಗಿನಿಯಾಗತಕ್ಕವಳ. ಯಾವ ಸ್ತ್ರೀಯು ಪರಿಶುದ್ಧಳಾಗಿಯೂ, ಪತಿಯ ಕಾರ್ಯದಲ್ಲಿ ದಕ್ಷಳಾಗಿಯೂ ಇರುವಳೋ ಯಾವ ಸ್ತ್ರೀಯು ಪರಿಶುದ್ಧಳಾಗಿಯೂ ಇರುವಳೋ ಮತ್ತು ಯಾವಳು ಪುತ್ರವಂತೆಯಾಗಿ, ಪತಿವ್ರತೆಯಾಗಿ ಪತಿಪ್ರಾಣಳೇ ಆಗಿರುವಳೋ ಇವರೇ ಧರ್ಮ ಭಾಗಿನಿಗಳಾಗಿ ಬದುಕತಕ್ಕವರು. ಯಾವ ಭಾರ್ಯೆಯು ಶುಶ್ರೂಷಾದಿಗಳನ್ನು ಯಾವ ವಿಧವಾದ ವೈಮನಸ್ಯವಿಲ್ಲದೆ ಸಂತುಷ್ಟಳಾಗಿ ಮಾಡುತ್ತಾಳೆಯೋ ಅವಳೇ ಪ್ರಸಿದ್ಧ ಧರ್ಮಭಾಗಿನಿಯಾಗತಕ್ಕವಳು ಪತಿಯ ಪ್ರೀತಿ ಮತ್ತು ಶುಶ್ರೂಷೆಯಲ್ಲಿ ನಿರತಳಾದ ಯಾವ ಭಾರ್ಯೆಗೆ ಇತರ ಯಾವ ಇಷ್ಟವಸ್ತುಗಳಲ್ಲಿಯೂ, ಭೋಗಗಳಲ್ಲಿಯೂ ಐಶ್ವರ್ಯದಲ್ಲಿಯೂ ಆಶೆಯೇ ಇರುವುದಿಲ್ಲವೋ ಅವಳೇ ಧರ್ಮಭಾಗಿನಿಯಾಗ ತಕ್ಕವಳು

ಕಾಮಾರ್ಥಾ ನ ವ್ರತಾ ನಿತ್ಯಂ ಗೃಹಶುಶ್ರೂಷಣೇ ರತಾ ।
ಸುಸಂಮೃಷ್ಟಕ್ಷಯಾ ಚೈವ ಗೋಶಕೃತ್ ಕೃತಲೇಪನಾ ॥ ೧೪ ॥

ಅಗ್ನಿಕಾರ್ಯಪರಾ ನಿತ್ಯಂ ಸದಾ ಪುಷ್ಪಬಲಿಪ್ರದಾ ।
ದೇವತಾತಿಥಿಭೃತ್ಯಾನಾಂ ನಿರೂಪ್ಯ ಪತಿನಾ ಸಹ ॥ ೧೫ ॥

ಶೇಷಾನ್ನಮುಪಭುಂಜಾನಾ ಯಥಾನ್ಯಾಯಂ ಯಥಾವಿಧಿ ।
ತುಷ್ಟಭೃತ್ಯಜನಾ ನಿತ್ಯಂ ನಾರೀ ಧರ್ಮೇಣ ಯುಜ್ಯತೇ ॥ ೧೬ ॥

ಶ್ವಶ್ರೂಶ್ವಶುರಯೋಃ ಪಾದಾಂಸ್ತೋಷಯಂತೀ ಗುಣಾನ್ವಿತಾ ।
ಮಾತಾಪಿತ್ರರತಾ ನಿತ್ಯಂ ಯಾ ನಾರೀ ಸಾ ತಪೋಧನಾ ॥ ೧೭ ॥

ಬ್ರಾಹ್ಮಣಾನ್ದುರ್ಬಲಾನಾಥದೀನಾಂಧಕೃಪಣಾಂಸ್ತಥಾ ।
ಬಿಭರ್ತ್ಯನ್ನೇನ ಯಾ ನಾರೀ ಸಾ ಪತಿವ್ರತಭಾಗಿನೀ ॥ ೧೮ ॥

೧೪-೧೬. ಯಾವಳು ಕೇವಲ ಕಾಮಾರ್ಥವನ್ನೇ ಭಾವಿಸದೆ ನಿತ್ಯವೂ ಮನೆಗೆಲಸದಲ್ಲೇ ಆಸಕ್ತಳಾಗಿ ಮನೆಯನ್ನು ಗುಡಿಸುವುದು ಗೋಮಯದಿಂದ ಸಾರಿಸಿ ಶುದ್ಧಿಗೊಳಿಸುವುದು, ಅಗ್ನಿಕಾರ್ಯದಲ್ಲಿ ಸಹಕರಿಸುವುದು, ನಿತ್ಯವೂ ಹೂವುಗಳಿಂದ ಬಲಿಪ್ರದಾನಮಾಡುವುದು, ದೇವತಾತಿಥಿಭೃತ್ಯಾದಿ ಸೇವೆಯಲ್ಲಿ ಪತಿಯೊಡನೆ ಸಹಕರಿಸುವುದು, ಯಥಾವಿಧಿಯಾಗಿ ಪತಿಯ ಶೇಷವನ್ನು ಕೊನೆಯಲ್ಲಿ ಭುಂಜಿಸುವುದು ಭೃತ್ಯಜನರನ್ನು ಸಂತೋಷಪಡಿಸುವುದು ಇತ್ಯಾದಿ ಕಾರ್ಯಗಳಲ್ಲಿ ನಿರತಳಾಗಿರುವಳೋ ಅವಳೇ ಧರ್ಮಕ್ಕೆ ಭಾಗಿನಿಯಾಗತಕ್ಕವಳು.

೧೭-೨೦. ಯಾವ ಸ್ತ್ರೀಯು ಅತ್ತೆಮಾವ ಇವರನ್ನು ಶುಶ್ರೂಷೆಯಿಂದ ಸಂತೋಷಪಡಿಸುತ್ತಾ ಮಾತಾಪಿತೃಗಳ ವಿಷಯದಲ್ಲಿಯೂ ನಿತ್ಯವೂ ಪ್ರೀತಿಯಿಂದಿರುತ್ತಾಳೆಯೋ ಅವಳೇ ತಪೋಧನಳಾಗುತ್ತಾಳೆ ಯಾವ ಸ್ತ್ರೀಯು ಬ್ರಾಹ್ಮಣರನ್ನೂ ದುರ್ಬಲರು, ಅನಾಥರು, ದರಿದ್ರರು, ಕುರುಡರು, ದೀನರು ಇವರನ್ನೂ ಸಹ

ವ್ರತಂ ಚರತಿ ಯಾ ನಿತ್ಯಂ ಮತ್ಸರಂ ಸ್ಪಷ್ಟಮಾನಸಾ ।
ಪತಿಚಿತ್ತಾ ಪತಿರತಾ ಸಾ ಪತಿವ್ರತೆ ಭಾಗಿನೀ ॥ ೧೯ ॥

ಪುಣ್ಯಮೇತತ್ತಪಶ್ಚೈವ ಸ್ವರ್ಗಶ್ಚೈವ ಸನಾತನಃ ॥ ೨೦ ॥

ಪತಿರ್ಹಿ ದೇವೋ ನಾರೀಣಾಂ ಪತಿರ್ಬಂಧುಃ ಪತಿರ್ಗತಿಃ ।
ಪತ್ಯಾ ಗತಿಃ ಸಮಾ ನಾಸ್ತಿ ದೈವತಂ ವಾ ಯಥಾಪತಿಃ ॥ ೨೦ ॥

ಪತಿಃ ಸ್ವರ್ಗಪ್ರದೋ ನಾರ್ಯಾ ಯದಾ ತಲ್ಪಮನಾ ಭವೇತ್ ।
ಯದ್ಯತ್ಸ್ಯಾತ್ಕಾರ್ಯಮಕಾರ್ಯಂ ವಾ ಯದಿ ವಾ ಪ್ರಾಣನಾಶನಂ ॥ ೨೨ ॥

ಪತಿಃ ಪಾತಕಯುಕ್ತೋ ವಾ ವ್ಯಾಧಿತೋ ವಾ ಕಥಂಚನ ।
ಆಪನ್ನೋ ರಿಪುಸಂಸ್ಥೋ ವಾ ಬ್ರಹ್ಮಶಾಪಾರ್ದಿತೋಽಪಿ ವಾ ।
ಆಪದ್ಧರ್ಮಾನನುಪ್ರೇಕ್ಷ್ಯ ತತ್ಕಾರ್ಯಮವಿಶಂಕಯಾ ॥ ೨೩ ॥

ಸಂತೋಷದಿಂದ ರಕ್ಷಿಸುತ್ತಾಳೆಯೋ ಅವಳೇ ಪತಿಯ ವ್ರತಕ್ಕೆ ಸಹ ಭಾಗಿನಿಯಾಗ ತಕ್ಕವಳು. ಯಾವ ಸ್ತ್ರೀಯು ಪತಿಯಲ್ಲಿ ಚಿತ್ತಾನುವರ್ತನದಿಂದ ಪ್ರೀತಿಪಾತ್ರಳಾಗಿದ್ದುಕೊಂಡೇ ಅವನ ಅನುಮತಿಯಿಂದ ಕ್ಲೇಶಕರವಾದ ವ್ರತಗಳನ್ನೂ ಸಂತೋಷದಿಂದ ಆಚರಿಸುತ್ತಾಳೆಯೋ ಅವಳೇ ವ್ರತಕ್ಕೆ ಭಾಗಿನಿಯಾಗುತ್ತಾಳೆ. ಯಾವ ಸ್ತ್ರೀಯು ಪತಿಪರಾಯಣೆಯಾಗಿ ಅವನ ವ್ರತದಲ್ಲಿ ಸಹಕರಿಸುವಳೋ ಅಂತಹ ಮಂಗಳಕರಳಾದ ಅವಳಿಗೆ ಅದೇ ಪುಣ್ಯ. ಅದೇ ತಪಸ್ಸು ಅದೇ ಶಾಶ್ವತವಾದ ಸ್ವರ್ಗ.

೨೧-೨೪. ಪತಿವ್ರತೆಯಾದ ಸ್ತ್ರೀಯರಿಗೆ ಪತಿಯೇ ದೈವ. ಅವನೇ ಬಂಧು. ಅವನೇ ಉತ್ತಮ ಗತಿಗೂ ಸಾಧಕ. ಪತಿಗೆ ಸಮನಾದ ದೇವತೆಯಾಗಲಿ, ಅವನೊಡನೆ ಹೊಂದಬಹುದಾದ ಗತಿಗಿಂತಾಗಲಿ ಬೇರೆ ಯಾವುದೂ ಸ್ತ್ರೀಯಾದವಳಿಗೆ ಇಲ್ಲವೇ ಇಲ್ಲ. ಶಯನವನ್ನು ಅಪೇಕ್ಷಿಸುವ ಪತಿಯು ಪತ್ನಿಗೆ ಸ್ವರ್ಗಪ್ರದನೇ ಆಗುತ್ತಾನೆ. ಕಾರ್ಯವೇ ಆಗಲಿ, ಅಕಾರ್ಯವೇ ಆಗಲಿ, ಪ್ರಾಣನಾಶಕವೇ ಆಗಲಿ, ಅಂತಹ ಕಾರ್ಯಗಳನ್ನು ಅವನ ಪ್ರೀತಿಗಾಗಿ ಪತ್ನಿಯಾದವಳು ಮಾಡಿಯೇ ತೀರಬೇಕು. ಪತಿಯಾದವನು ಪಾತಕಿಯಾಗಿದ್ದರೂ, ವ್ಯಾಧಿಗ್ರಸ್ತನಾಗಿದ್ದರೂ ಆಪತ್ತಿಗೆ ಸಿಕ್ಕಿದ್ದರೂ, ಶತ್ರುವಶನಾಗಿದ್ದರೂ, ಬ್ರಾಹ್ಮಣಶಾಪಕ್ಕೆ ಗುರಿಯಾಗಿದ್ದರೂ ಸಹ ಆಪತ್ಕಾಲದ ಧರ್ಮವನ್ನು ತಿಳಿದು ಅವನಿಗೆ ಇಷ್ಟವಾದ ಕಾರ್ಯವನ್ನು

ಸ್ವಾತಂತ್ರ್ಯಮುಕ್ತಂಪರಮಂ ಹಿ ಪಾಪಂ
ಸ್ತ್ರೀಣಾಂ ಸದಾ ತೇನ ಸದೈವ ನಾರೀ ।
ಸ್ವಾತಂತ್ರ್ಯಹೀನಾ ಸತತಂಭವೇದ್ಧಿ
ಯಾ ಕಾಮಯೇನ್ನಾಕ ಮಿಶಶ್ವಿರಾಯ ॥ ೨೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸ್ತ್ರೀಧರ್ಮ
ನಿರೂಪಣೋ ನಾಮ
ದ್ವಾವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ

ನಿರ್ಭಯವಾಗಿ ಪತ್ನಿಯಾದವಳು ಮಾಡಿಯೇ ಮಾಡಬೇಕು. ಪತಿಪರಾಯಣೆಯಾದ ಸ್ತ್ರೀಗೆ ಪರತಂತ್ರತೆಯೇ ಸ್ವಭಾವ. ಸ್ವಾತಂತ್ರ್ಯವೇ ಅವಳಿಗೆ ದೊಡ್ಡ ಪಾಪ, ಆದುದರಿಂದ ಶಾಶ್ವತವಾದ ಸ್ವರ್ಗಸುಖವನ್ನು ಬಯಸುವ ಸ್ತ್ರೀಯು ಪತಿಪರತಂತ್ರಳಾಗಿಯೇ ಯಾವಾಗಲೂ ಇರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯ ಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಸ್ತ್ರೀಧರ್ಮನಿರೂಪಣವೆಂಬ ಮುನ್ನೂರ ಇಪ್ಪತ್ತೆರಡನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಯೋವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸ್ವೇ ಸ್ವೇ ಧರ್ಮೇ ವ್ಯವಸ್ಥಾನಂ ವರ್ಣಾನಾಂ ಪೃಥಿವೀಪತೇಃ ।
ಪರೋ ಧರ್ಮಃ ಸದಾ ಪ್ರೋಕ್ತಸ್ತತ್ರ ತತ್ರ ಭವೇನ್ನರಃ ॥ ೧ ॥

ದೇವಬ್ರಾಹ್ಮಣಗೋಸಾಧ್ವೀ ಸಾಧೂನಾಮಪಿ ಪೂಜನಂ ।
ನಿಗ್ರಹಶ್ಚೈವ ದುಷ್ಟಾನಾಂ ನೃಪತೇರ್ಧರ್ಮಕಾರಣಂ ॥ ೨ ॥

ಸಮತಾ ವ್ಯವಹಾರೇಷು ಸ್ವಯಂಚೈವಾನ್ವವೇಕ್ಷಣಂ ।
ರಾಜ್ಞಾಂ ಧರ್ಮಂ ಪರಂ ವಿದ್ಯಾತ್ತಥಾ ವೈ ಚಾರದೃಷ್ಟಿತಾ ॥ ೩ ॥

ಮುನ್ನೂರ ಇಪ್ಪತ್ತಮೂರನೆಯ ಅಧ್ಯಾಯ.

೧-೩. ಹಂಸವು ಹೇಳುತ್ತದೆ:—ಜನಗಳನ್ನು ಅವರವರ ವರ್ಣಧರ್ಮದಲ್ಲಿ ಸ್ಥಾಪಿಸುವ ಕಾರ್ಯವು ರಾಜನಾದವನಿಗೆ ಮುಖ್ಯವಾದ ಧರ್ಮ, ಅದಕ್ಕೆ ತಕ್ಕಂತೆ ಜನಗಳೂ ತಮ್ಮ ತಮ್ಮ ವರ್ಣಧರ್ಮದಲ್ಲಿ ಸ್ಥಿತಿಹೊಂದಬೇಕು. ಇಂತಹ ಧರ್ಮವನ್ನು ಹೊಂದುವ ಧೊರೆಗೆ, ದೇವತೆ. ಬ್ರಾಹ್ಮಣ, ಗೋವು, ಸಾಧುಗಳು ಇವರ ಪೂಜೆಯೂ, ಇವರಿಗೆ ವಿರೋಧಿಗಳಾದ ದುಷ್ಟರ ನಿಗ್ರಹವೂ ಸಹ ಸಹಕಾರಿಕಾರಣವಾಗುತ್ತದೆ. ರಾಜನಾದವನಿಗೆ, ಸರ್ವ ವ್ಯವಹಾರಗಳಲ್ಲಿಯೂ ಸಮದೃಷ್ಟಿಯೂ, ತಾನಾಗಿಯೇ ವ್ಯವಹಾರಗಳನ್ನು ನೋಡುವುದೂ, ಚಾರದೃಷ್ಟಿಯೂ ಮುಖ್ಯಧರ್ಮವೆಂದೂ ತಿಳಿಯಬೇಕು.

ಸ್ವದೇಶಪಾಲನಂ ಧರ್ಮಃ ಪರರಾಷ್ಟ್ರಾಭಿಮರ್ದನಂ ।
ಯಜ್ಞದಾನಕ್ರಿಯಾ ಚೈವ ಸಂಗ್ರಾಮೇ ಚಾಪಲಾಯನಂ ॥ ೪ ॥

ಮೃಗಯಾಕ್ಷಾ ತಥಾ ಪಾನಂ ಗರ್ಹಿತಾನಿ ಮಹೀಭುಜಾಂ ।
ವಾಗ್ದಂಡಯೋಸ್ತು ಪಾರುಷ್ಯಂ ತಥೈವಾರ್ಥಸ್ಯ ದೂಷಣಂ ॥ ೫ ॥

ಸಂಧಿವಿಗ್ರಹದಾನಾನಾಮಾಸನಸ್ಯ ತಥೈವ ಚ ।
ದ್ವೈಧೀಭಾವಸ್ಯ ಚಾಪ್ಯುಕ್ತಾ ಸೇವಾ ವೈ ಸಂಶ್ರಯಸ್ಯ ಚ ॥ ೬ ॥

ಜ್ಞಾತ್ವಾ ಕಾಲಂ ಚಲಂ ರಾಜಾ ಷಡ್ಗುಣ್ಯಸ್ಯ ಹಿ ನಿಶ್ಚಯೇ ।
ಇಂದ್ರಿಯಾಣಾಂ ಜಯೇ ಯತ್ನಃ ಸದಾ ಸ್ಯಾದ್ದ್ವಿಜಪುಂಗವಾಃ ॥ ೭ ॥

ತತೋ ಭೃತ್ಯಜಯಃ ಕಾರ್ಯಃ ಸಮಸ್ತವಿಜಯಸ್ತತಃ ।
ಕಾಮಃ ಕ್ರೋಧೋ ಮದೋ ಲೋಭೋ ಮನೋ ಹರ್ಷಸ್ತಥೈವ ಚ ॥

೪–೭. ಸ್ವದೇಶಪಾಲನ, ಪರರಾಷ್ಟ್ರಗಳ ಆಕ್ರಮಣ, ಯಜ್ಞ, ದಾನ ಇವುಗಳ ಆಚರಣೆ, ಯುದ್ಧದಲ್ಲಿ ಹಿಂತಿರುಗದಿರುವಿಕೆ ಇವೂ ಮುಖ್ಯವಾದ ರಾಜಧರ್ಮಗಳು. ಬೇಟೆ, ಜೂಜು, ಪಾನ ಇವುಗಳು ರಾಜರಿಗೆ ನಿಂದಿತವಾಗಿವೆ. ಬಿರುಸಾದ ಮಾತು ಕ್ರೂರವಾದ ಶಿಕ್ಷೆ, ಇತರರ ಅರ್ಥಾಪಹರಣ ಇವೂ ನಿಂದಿತ, ರಾಜನಾದವನು ಅಸ್ಥಿರವಾದ ಕಾಲವನ್ನು ನಿರೀಕ್ಷಿಸಿ ಸಂಧಿವಿಗ್ರಹಾದಿ ಉಪಾಯ ಪ್ರಯೋಗವಿಷಯ ದಲ್ಲಿ ಸರಿಯಾದ ನಿಶ್ಚಯ ಹೊಂದಬೇಕು. ಜಿತೇಂದ್ರಿಯನಾಗಿರಲು ಪ್ರಯತ್ನಿಸಬೇಕು

೮–೧೦. ಮೊದಲು ಜಿತೇಂದ್ರಿಯನಾಗಿ ಅನಂತರ ಭೃತ್ಯರ ಜಯಕ್ಕೂ ಸಮಸ್ತ ವಿಜಯಕ್ಕೂ ಕೈಹಾಕಬೇಕು. ರಾಜನಾದವನು ಬಾಹ್ಯ ಶತ್ರುಗಳ ಜಯ ಕ್ಕಿಂತಲೂ ಮುಂಚಿತವಾಗಿ-ಕಾಮ, ಕ್ರೋಧ, ಮದ, ಲೋಭ, ಮಾನ (ಅಹಂಕಾರ) ಹರ್ಷಗಳೆಂಬ ಒಳಗಿನ ಆರು ಶತ್ರುಗಳನ್ನು ಜಯಿಸಬೇಕು. ಆಮೇಲೆ, ಶತ್ರುಗಳನ್ನೂ ತನ್ನ ಕುಲಕ್ಕೆ ಸೇರಿದ ಇತರ ಕೃತ್ರಿಮಿಗಳನ್ನೂ ಜಯಿಸಲು ಯತ್ನಿಸಬೇಕು ಭೂಮಿ,

ಅಭ್ಯಂತರಾ ವಿಜೇತವ್ಯಾ ರಿಪವಃ ಷಣ್ಮಹೀಭುಜಾ ।
ತತಸ್ತು ಶತ್ರವೋ ಜೇಯಾಃ ಕುಲ್ಯಾಶ್ಚೇತರಕೃತ್ರಿಮಾಃ ॥ ೯ ॥

ಭೂಮಿಮಿತ್ರಹಿರಣ್ಯಾನಾಮಾರ್ಜನೇ ಯತ್ನವಾನ್ಭವೇತ್ ।
ಧರ್ಮಾರ್ಥಕಾಮಸೇವಾ ಚ ಸದಾ ಕಾರ್ಯಾ ಮಹೀಕ್ಷಿತಾ ॥ ೧೦ ॥

ಸ್ವಾಮ್ಯಮಾತ್ಯಂ ಜನಂ ದುರ್ಗಂ ಕೋಶೋ ದಂಡಃ ಸುಹೃತ್ತಥಾ ।
ರಾಜ್ಯೇ ಪ್ರಕೃತಯಃ ಸಪ್ತ ರಕ್ಷ್ಯಾ ಯತ್ನೇನ ಭೂಭುಜಾ ॥ ೧೧ ॥

ದೈವಮಂತ್ರಪ್ರಭೂತ್ಸಾಹ ಶಕ್ತಿಯುಕ್ತಸ್ತಥಾ ಭವೇತ್ ।
ಮಂಗಲಾಚಾರಯುಕ್ತಾನಾಂ ಸಿಧ್ಯಂತೇ ದೇವ ಶಕ್ತಯಃ ॥ ೧೨ ॥

ಚತುರಂಗಬಲಂ ಕುರ್ಯಾತ್ಸ್ವಭೃತಂ ಚ ತಥಾ ನೃಪಃ ।
ಕರ್ಮಣಾ ಮನಸಾ ವಾಚಾ ಸದಾ ಲೋಕಂ ಪ್ರಸಾದಯೇತ್ ॥ ೧೩ ॥

ಮಿತ್ರರು, ದ್ರವ್ಯ ಇವುಗಳ ಸಂಪಾದನೆಯಲ್ಲಿ ಯಾವಾಗಲೂ ಪ್ರಯತ್ನಶಾಲಿಯಾಗಿರಬೇಕು. ಧೊರೆಯಾದವನು ತನ್ನ ಪ್ರಯತ್ನಕ್ಕೆ ತಕ್ಕಂತೆ ಧರ್ಮಾರ್ಥಕಾಮಸೇವನೆಯಲ್ಲಿ ನಿರತನಾಗಿರಬಹುದು.

೧೧-೧೫. ಸ್ವಾಮಿ, ಮಂತ್ರಿಗಳು, ದುರ್ಗ, ಕೋಶಗಳೇ ಮೊದಲಾದ ಏಳು ರಾಜ್ಯಾಂಗಗಳನ್ನೂ ಪ್ರಯತ್ನದಿಂದ ರಕ್ಷಿಸಿಕೊಳ್ಳಬೇಕು. ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿಗಳಿಂದಲೂ ಕೂಡಿರಬೇಕು. ಮಂಗಳಕರವಾದ ಆಚಾರ ಹೊಂದಿರುವವರಿಗೆ ದೈವಶಕ್ತಿಯು ತಾನಾಗಿಯೇ ಸಿದ್ಧಿಸುತ್ತದೆ. ಆನೆ, ಕುದುರೆ, ರಥ, ಪದಾತಿಗಳೆಂಬ ಚತುರಂಗಸೈನ್ಯವನ್ನೂ ಯಾವಾಗಲೂ ಸಜ್ಜುಗೊಳಿಸಿಯೇ ಇರಬೇಕು. ಯಾವಾಗಲೂ ತನ್ನ ಕೆಲಸದಿಂದಲೂ, ಒಳ್ಳೆಯ ಮನಸ್ಸಿನಿಂದಲೂ, ಒಳ್ಳೆಯಮಾತಿನಿಂದಲೂ ಜನಗಳನ್ನು ಪ್ರಸನ್ನರಾಗಿರುವಂತೆ ಮಾಡಬೇಕು. ತನ್ನ ಸಮೃದ್ಧಿಗಾಗಿ ಸರಿಯಾದ ರಕ್ಷಣೆಯನ್ನೂ ಹೊಂದಬೇಕು. ರಾಜನು ಸಹಾಯ ಸಂಪತ್ತಿಯಿಂದ ಕೂಡಿದ್ದಲ್ಲಿ, ಪಶುಗಳಿಗೆ ಹಿತವಾಗಿಯೂ, ಕಾಡುಗಳಿಂದ ಕೂಡಿಯೂ

ಮಹಚ್ಛಾವರಣಂ ಕುರ್ಯಾನ್ನಿತ್ಯಮೇವ ಸಮೃದ್ಧಯೇ ।
ರಾಜಾ ಸಹಾಯಸಂಪನ್ನಃ ಪಶವ್ಯಂಜಾಂಗಲಂ ಶಿವಂ ॥ ೧೩ ॥

ವೈಶ್ಯಶೂದ್ರಜನಪ್ರಾಯಮರೋಗಂ ದೇಶಮಾವಸೇತ್ ।
ತತ್ರ ದುರ್ಗಾಣಿ ಕುರ್ವೀತ ಸ್ವದುರ್ಗಂ ಚ ವಿಶೇಷತಃ ॥ ೧೪ ॥

ಧನ್ವದುರ್ಗಂ ಮಹೀದುರ್ಗಂ ಗಿರಿದುರ್ಗಂ ತಥೈವ ಚ ।
ಅದುರ್ಗಂ ವೃಕ್ಷದುರ್ಗಂ ಚ ನರದುರ್ಗಂ ತಥೈವ ಚ ॥ ೧೬ ॥

ಏಷಾಮನ್ಯತಮೇ ದುರ್ಗೇ ಧನಧಾನ್ಯ ಸಮಾಯುತೇ ।
ಹಸ್ತ್ಯಶ್ವರಥಸಂಪನ್ನೇ ಮಣಿಭಿರೂಪ ಶೋಭಿತೇ ॥ ೧೭ ॥

ಪತ್ತ್ಯಾಢ್ಯೇ ಯೋಧಬಹುಲೇ ಯುದ್ಧೋಪಕರಣೈರ್ಯುತೇ ।
ಸುಸಂಚಿತೇ ಧನಾಢ್ಯೇ ಚ ಬಹುಪೇಯೇ ಬಹೂದಕೇ ॥ ೧೮ ॥

ಹಸ್ತ್ಯಶ್ವನರಗೋ ವೈದ್ಯ ಸಾಂವತ್ಸರಯುತೇ ಶುಭೇ ।
ಘೃತತೈಲೌಷಧಿಯುತೇ ಸರ್ವೋಪಕರಣೈಸ್ತಥಾ ॥ ೧೯ ॥

ಪ್ರಾಕಾರಪರಿಖಾವಪ್ರ ಗೋಪುರಾಟ್ಟಾಲಕೈರ್ಯುತೇ ।
ಪಾಪತಸ್ಕರ ದುರ್ವೃತ್ತ ಕ್ರುದ್ಧಲುಬ್ಧಾದಿ ವರ್ಜಿತೇ ॥ ೨೦ ॥

ಒಳ್ಳೆಯದಾಗಿಯೂ, ವೈಶ್ಯಶೂದ್ರಜನ ಬಹುಲವಾಗಿಯೂ, ರೋಗವಿಲ್ಲದೆಯೂ ಇರುವ ದೇಶದಲ್ಲಿ ವಾಸಕ್ಕೆ ಸೌಕರ್ಯ ಉಂಟುಮಾಡುತ್ತಾನೆ. ಇಂತಹ ವಾಸ ಸ್ಥಳದಲ್ಲಿ ಅನೇಕ ದುರ್ಗಪ್ರದೇಶವನ್ನೂ ವಿಶೇಷರೀತಿಯಿಂದ ನಿರ್ಮಿಸಿಕೊಳ್ಳಬೇಕು.

೧೬–೨೦. ಆಯುಧಗಳಿಂದಾದ ದುರ್ಗ, ಭೂಮಿಯೊಳಗೆ ಇರುವ ದುರ್ಗ, ಗಿರಿದುರ್ಗ, ಸುಗಮವಾದ ದುರ್ಗ ಮರಗಳಿಂದಾದ ದುರ್ಗ, ಜನರಕ್ಷಣೆಯಿಂದಾದ ದುರ್ಗ ಈರೀತಿಯಾದ ಯಾವುದಾದರೊಂದು ದುರ್ಗಸ್ಥಾನವಲ್ಲಿ ಧನಧಾನ್ಯಸಮೃದ್ಧಿಯಿಂದಲೂ, ಜಲಸಮೃದ್ಧಿಯಿಂದಲೂ, ಆನೆ ಕುದುರೆ, ಗೋವು, ವೈದ್ಯ, ಪುರೋಹಿತ, ಇವುಗಳಿಂದ ಕೂಡಿಯೂ, ತುಪ್ಪ, ಎಣ್ಣೆ, ಓಷಧಿಗಳು ಇತ್ಯಾದಿ ಸರ್ವೋಪಕರಣಗಳಿಂದ ಕೂಡಿಯೂ, ಪ್ರಾಕಾರ, ಕಂದಕ, ಗೋಪುರ, ಮಹಡಿ ಇತ್ಯಾದಿಗಳಿಂದಲೂ ಕೂಡಿರುವ, ಪಾಪಿ, ಕಳ್ಳರು ದುರ್ವೃತ್ತರು, ಕೋಪಿಗಳು, ಜಿಪುಣರು,

ದೈವಜ್ಞಸ್ಥಪತಿಭ್ಯಾಂತು ಸಂಮತ್ಯಾ ಶುಭಲಕ್ಷಣಂ ।
ತತ್ರಾವಸೇತ್ಸ್ವಯಂ ರಾಜಾ ಸರ್ವೋಪಕರಣೈರ್ಯುತಂ ॥ ೨೦ ॥

ಕುಲೀನಾಂ ರೂಪಸಂಪನ್ನಾಂ ಸವರ್ಣಾಂ ಚ ನರಾಧಿಪಃ ।
ಕುರ್ಯಾದ್ಭಾರ್ಯಾಂ ಸುಶೀಲಾಂ ಚ ವಿನೀತಾಂ ಧರ್ಮವತ್ಸಲಾಂ ॥ ೨೧ ॥

ತಯಾ ಸಹ ಸದಾ ರಾಜಾ ಗೃಹಸ್ಥಾಶ್ರಮಚೋದಿತಂ ।
ಪಂಚಯಜ್ಞವಿಧಾನಂ ತು ಕಾರಯೇತ ಪುರೋಹಿತಂ ॥ ೨೩ ॥

ಯಜೇಚ್ಚ ವಿವಿಧೈರ್ಯಜ್ಞೈಃ ಪೂಜಯೇದ್ದೇವತಾಸ್ತಥಾ ।
ದೇವತಾಯತನಾನ್ ಕೂಪಾಂಸ್ತಡಾಗಾಂಶ್ಚೈವ ಕಾರಯೇತ್ । ೨೪ ॥

ಉದ್ಯಾನಾನಿ ವಿಚಿತ್ರಾಣಿ ಗೋಬ್ರಾಹ್ಮಣ ಗೃಹಾಣಿ ಚ ।
ದುಷ್ಟದಂಡಃ ಸತಾಂ ಪೂಜಾ ಧರ್ಮೇಣ ಚ ಧನಾರ್ಜನಂ ॥ ೨೫ ॥

ರಾಷ್ಟ್ರರಕ್ಷಾ ಸಮತ್ವಂ ಚ ವ್ಯವಹಾರೇಷು ಪಂಚಕಂ ।
ಭೂಮಿಪಾನಾಂ ಮಹಾಯಜ್ಞಾಃ ಸರ್ವಕಲ್ಮಷನಾಶನಾಃ ॥ ೨೬ ॥

ಇವರಿಂದ ವರ್ಜಿತವಾಗಿಯೂ ಇರುವ, ಶುಭಲಕ್ಷಣವುಳ್ಳ ಆ ಸ್ಥಳದಲ್ಲಿ ಜ್ಯೋತಿಷಿಕ ಶಿಲ್ಪಿ ಇವರಿಂದ ಸಮ್ಮತಿಹೊಂದಿ ರಾಜನು ವಾಸಿಸಬೇಕು.

೨೧-೨೬. ರಾಜನಾದವನು, ಸತ್ಕುಲದಲ್ಲಿ ಜನಿಸಿದವಳೂ, ಸುರೂಪಿಣಿಯೂ ಸವರ್ಣಳೂ, ಸುಶೀಲಳೂ ಧರ್ಮಬುದ್ಧಿಯುಳ್ಳವಳೂ ಆದ ಸ್ತ್ರೀಯನ್ನು ವಿವಾಹ ಹೊಂದಬೇಕು. ಅವಳೊಡನೆ ಗೃಹಸ್ಥಾಶ್ರಮಕ್ಕೆ ವಿಹಿತವಾಗಿರುವ ಪಂಚಯಜ್ಞಾದಿಗಳನ್ನು ಪುರೋಹಿತನ ಮೂಲಕ ಹೊಂದಬೇಕು. ಅನೇಕ ಯಜ್ಞಯಾಗಾದಿಗಳನ್ನು ನಡೆಸುತ್ತಲೂ, ದೇವತೆಗಳನ್ನು ಪೂಜಿಸುತ್ತಲೂ, ದೇವಾಲಯ ಮತ್ತು ಕೆರೆಕಟ್ಟೆಗಳನ್ನೂ ವಿಚಿತ್ರವಾದ ಉದ್ಯಾನಗಳನ್ನೂ ಗೋವುಗಳಿಗೂ, ಬ್ರಾಹ್ಮಣರಿಗೂ ಅರ್ಹವಾದ ಮನೆಗಳನ್ನೂ ನಿರ್ಮಿಸುತ್ತಿರಬೇಕು. ರಾಜರಾದವರಿಗೆ, ದುಷ್ಟಶಿಕ್ಷಣ, ಸತ್ಪುರುಷರಪೂಜಾ, ಧರ್ಮದಿಂದ ಧನಾರ್ಜನೆ, ರಾಷ್ಟ್ರದ ರಕ್ಷಣೆ, ಎಲ್ಲಾ ವ್ಯವಹಾರದಲ್ಲೂ ಸಮದೃಷ್ಟಿ, ಈ ಐದೂ ಸರ್ವಪಾಪನಾಶಕವಾದ ಪಂಚಮಹಾಯಜ್ಞಗಳು.

ಗಜಂ ಲಕ್ಷಣಸಂಯುಕ್ತಂ ತುರಂಗಂಚಾಭಿಷೇಚಯೇತ್ ।
ಸಲಕ್ಷಣಂ ತಥಾರತ್ನಂ ಖಡ್ಗಂಬಿಭೃಯಾನ್ನೃಪಃ ॥ ೨೭ ॥

ದುರ್ಗಸ್ಥಶ್ಚ ನಿಯುಂಜೀತ ಗ್ರಾಮೇ ಗ್ರಾಮೇ ಚ ಪಾಲಕಾನ್ ।
ದಶಗ್ರಾಮಾಧಿಪಾಂಶ್ಚಾನ್ಯಾನ್ ಶತಗ್ರಾಮಾಧಿಪಾಂಸ್ತಥಾ ॥ ೨೮ ॥

ದೇಶೇಶ್ವರಾಂಸ್ತಥಾ ಕುರ್ಯಾನ್ನಗರಸ್ಥಾನ್ ವಿಶೇಷತಃ ।
ಗ್ರಾಮದೋಷಾನ್ ಸಮುತ್ಪನ್ನಾನ್ ಗ್ರಾಮಪಾಲಃ ಶಮಂ ನಯೇತ್ ॥

ಅಶಕ್ತಶ್ಚ ದಶೇಶಾಯ ಸ ತು ಗತ್ವಾ ನಿವೇದಯೇತ್ ।
ಶತೇಶಾಯ ದಶೇಶಸ್ತು ಶತೇಶೋ ದೇಶಪಾಯ ಚ ॥ ೩೦ ॥

ಗ್ರಾಮಾದಿಪಾಲಕಾನಾಂ ತು ಶೌಚಾಶೌಚಂ ನರಾಧಿಪಃ ।
ಚಾರೈಃ ಸುವಿದಿತಂ ಕುರ್ಯಾತ್ ಜ್ಞಾತ್ವಾ ದುಷ್ಟಾಂಶ್ಚ ಘಾತಯೇತ್ ॥

ರಾಜ್ಞೋ ಹಿ ರಕ್ಷಾಧಿಕೃತಾಃ ಪರಸ್ವಾದಾಯಿನಃ ಶಠಾಃ ।
ಭೃತ್ಯಾ ಭವಂತಿ ಪ್ರಾಯೇಣ ತೇಭ್ಯೋ ರಕ್ಷೇದ್ವಸುಂಧರಾಂ ॥ ೩೧ ॥

೨೭–೩೦. ಲಕ್ಷಣಯುಕ್ತವಾದ ಆನೆಯನ್ನೂ, ಕುದುರೆಯನ್ನೂ, ಒಳ್ಳೆಯ ರತ್ನವನ್ನೂ ಅಭಿಷೇಕ ಮಾಡಬೇಕು ಖಡ್ಗವನ್ನೂ ಧರಿಸಿರಬೇಕು. ದುರ್ಗಸ್ಥಾನದಲ್ಲಿ ತಾನಿದ್ದುಕೊಂಡು ಪ್ರತಿಗ್ರಾಮದಲ್ಲಿಯೂ ರಕ್ಷಕರನ್ನು ನಿಯೋಜಿಸಬೇಕು. ಅವರಲ್ಲಿ ಹತ್ತುಗ್ರಾಮಕ್ಕೊಬ್ಬನಂತೆಯೂ ನೂರುಗ್ರಾಮಕ್ಕೊಬ್ಬನಂತೆಯೂ ಅಧಿಪತಿಗಳನ್ನೂ ಚುನಾಯಿಸಬೇಕು. ದೇಶಾಧಿಪತಿಗಳನ್ನಾಗಿ ನಗರದಲ್ಲಿರುವವರನ್ನೇ ವಿಶೇಷವಾಗಿ ಏರ್ಪಡಿಸಬೇಕು. ಗ್ರಾಮದಲ್ಲುಂಟಾದ ದೋಷಗಳನ್ನು ಗ್ರಾಮಾಧಿಪತಿಯೇ ನಿವಾರಿಸಬೇಕು. ಅವನು ಅಸಮರ್ಥನಾಗಿದ್ದಲ್ಲಿ ಹತ್ತು ಗ್ರಾಮದ ಅಧಿಪತಿಗೆ ಅದನ್ನು ಒಪ್ಪಿಸಬೇಕು. ಹೀಗೆಯೇ ಅವಶ್ಯಕವಾದ ವಿಚಾರಗಳನ್ನು ಅವನೂ ನೂರು ಗ್ರಾಮಾಧಿಪತಿಗೂ ಮುಂದೆ ದೇಶಪಾಲಕನಿಗೂ ಒಪ್ಪಿಸಬೇಕಾಗುತ್ತದೆ.

೩೧–೩೫. ಗ್ರಾಮಾದಿರಕ್ಷಕರುಗಳ ಶುದ್ಧಾಶುದ್ಧ ಸ್ವಭಾವಗಳನ್ನು ರಾಜನು ಗೂಢಚಾರರುಗಳಿಂದ ತಿಳಿದು ದುಷ್ಟರನ್ನು ನಾಶಪಡಿಸಬೇಕು. ಪ್ರಾಯಕವಾಗಿ ರಕ್ಷಣೆಗಾಗಿ ರಾಜನಿಂದ ನಿಯೋಜಿಸಲ್ಪಟ್ಟಿರುವ ಭೃತ್ಯರು ಧೂರ್ತರಾಗಿಯೂ, ಪರ ದ್ರವ್ಯಾಪಹಾರಿಗಳಾಗಿಯೂ ಇರುತ್ತಾರೆ. ದೊರೆಯು ಅಂತಹವರನ್ನು ನಿಗ್ರಹಿಸಿ

ತಥಾ ಚ ರಕ್ಷಾಧಿಕೃತಾನನುರೂಪೇಣ ಯೋಜಯೇತ್ ।
ವಿಭವೇನ ದ್ವಿಜಶ್ರೇಷ್ಠಾಃ ಪರೀಕ್ಷ್ಯ ಚ ಪುನಃ ಪುನಃ ॥ ೩೩ ॥

ರಾಜಾ ಕರ್ಮನಿಯುಕ್ತಾನಾಂ ಸ್ತ್ರೀಣಾಂ ಪ್ರೇಷ್ಯಜನಸ್ಯ ಚ ।
ಪ್ರತ್ಯಹಂ ಕಲ್ಪಯೇದ್ವೃತ್ತಿಂ ಸ್ಥಾನಕರ್ಮಾನುರೂಪತಃ ॥ ೩೪ ॥

ಆಯದ್ವಾರಾಂಶ್ಚ ನೋಚ್ಛಿಂದ್ಯಾದ್ವಿಶೇಷದ್ವಾರಕಾನಪಿ ।
ಸಮ್ಯಗ್ಬಲಿಂ ಚ ಗೃಹ್ಣೀಯಾನ್ಮಾಲಾಕಾರೋಪಮಾಂ ನೃಪಃ ॥ ೩೫ ॥

ಕ್ರಯವಿಕ್ರಯಮಧ್ವಾನಂ ಭಕ್ತಂ ಚಾಧ್ವಪರಿವ್ಯಯಂ ।
ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ವಣಿಜೋ ದಾಪಯೇತ್ ಕರಂ ॥ ೩೬ ॥

ಯಥಾ ಫಲೇನ ಯುಜ್ಯೇತ ರಾಜಾ ಕರ್ತಾ ಚ ಕರ್ಮಣಾಂ ।
ತಥಾವೇಕ್ಷ್ಯ ನರೋ ರಾಷ್ಟ್ರೇ ಕಲ್ಪಯೇತ್ಸತತಂ ಕರಂ ॥ ೩೭ ॥

ಭೂಮಿಯನ್ನು ರಕ್ಷಿಸಬೇಕು. ಸರಿಯಾದ ರಕ್ಷಣಾಧಿಕಾರಿಗಳಿಗೆ ಆಗಾಗ ಪರೀಕ್ಷಿಸಿ ಅನುರೂಪವಾದ ವೈಭವ (ಧನಾದಿಗಳು) ವನ್ನೂ ಕೊಡುತ್ತಿರಬೇಕು. ತನ್ನ ಕೆಲಸದಲ್ಲಿ ನಿಯೋಜಿತರಾಗಿರುವ ಸ್ತ್ರೀಯರಿಗೂ ಅವರವರ ಸ್ಥಾನ ಮತ್ತು ಕೆಲಸಕ್ಕೆ ತಕ್ಕಂತೆ ಜೀವನವನ್ನೂ ವಾಸಸ್ಥಾನವನ್ನೂ ಏರ್ಪಡಿಸಿಕೊಡಬೇಕು. ದೊರೆಯಾದವನು, ಯಾವಾಗಲೂ ಸಾಮಾನ್ಯವಾದ ಮತ್ತು ವಿಶೇಷರೂಪವಾದ ಧನಾಗಮ ಮಾರ್ಗವನ್ನು ತಡೆಯಬಾರದು. ಹೂವಾಡಿಗನು ಒಳ್ಳೊಳ್ಳೆಯ ಹೂವುಗಳನ್ನು ಸಂಗ್ರಹಿಸುವಂತೆ ಸರಿಯಾದ ರಾಜದ್ರವ್ಯವನ್ನೂ ಜನಗಳಿಂದ ತೆಗೆದುಕೊಳ್ಳಬೇಕು.

೩೬–೩೭. ವ್ಯಾಪಾರಗಳಿಂದ ರಾಜದ್ರವ್ಯಗಳನ್ನು ಹೊಂದುವಾಗ ಕ್ರಯವಿಕ್ರಯಸ್ವಭಾವವನ್ನೂ, ವಸ್ತುಗಳ ಸಾಗಾಣಿಕೆಗೆ ಯೋಗ್ಯವಾದ ಮಾರ್ಗಪರಿಮಿತಿಯನ್ನೂ, ಇತರ ವ್ಯಯಗಳಿಂದ ಆಗಬಹುದಾದ ಖರ್ಚಿನ ವಿಭಾಗವನ್ನೂ, ಮಾರ್ಪವನ ಯೋಗಕ್ಷೇಮವನ್ನೂ ಚನ್ನಾಗಿ ವಿಮರ್ಶಮಾಡಿ ಅವನಿಂದ ರಾಜದ್ರವ್ಯವನ್ನು ಹೊಂದಬೇಕು ಅಂತಹ ಕಂದಾಯವು ರಾಜನ ಫಲಕ್ಕೂ ವ್ಯಾಪಾರಿಗೂ ಸಹ ತನ್ನ ಕೆಲಸಕ್ಕೆ ತಕ್ಕ ಪ್ರತಿಫಲಪ್ರಾಪ್ತಿಗೂ ತಕ್ಕಂತಿರಬೇಕು. ಹೀಗೆಯೇ ರಾಜ್ಯದಲ್ಲೆಲ್ಲಾ

ಪಂಚಾಶದ್ಭಾಗ ಆದೇಯೋ ರಾಜ್ಞಾ ಪಶುಹಿರಣ್ಯಯೋಃ ।
ಧಾನ್ಯಾನಾಂ ಚ ತಥಾ ಷಷ್ಠಂ ಸಸ್ಯಾನಾಂ ಚ ಮಹೀಕ್ಷಿತಾ ॥ ೩೮ ॥

ಷಷ್ಠಮೇವ ತಥಾಭಾಗಂ ಮಾಷಾಣಾಂ ಮಧುಸರ್ಪಿಷಾಂ ।
ಗಂಧೌಷಧಿರಸಾನಾಂ ಚ ಪುಷ್ಪಮೂಲಫಲಸ್ಯ ಚ ॥ ೩೯ ॥

ಪತ್ರಶಾಕತೃಣಾನಾಂ ಚ ಚರ್ಮಣಾಂ ದ್ವೈದಲಸ್ಯ ಚ ।
ಮೃನ್ಮಯಾನಾಂ ಚ ಭಾಂಡಾನಾಂ ಸರ್ವಸ್ಯಾಶ್ಮಮಯಸ್ಯ ಚ ॥ ೪೦ ॥

ಯತ್ಕಿಂಚಿದಪಿ ವರ್ಷಸ್ಯ ದಾಪಯೇತ್ಕರಸಂಜ್ಞಿತಂ ।
ವ್ಯವಹಾರೇಣ ಜೀವಂತಂ ರಾಷ್ಟ್ರೇ ರಾಜ್ಯಂ ಪೃಥಕ್ ಪೃಥಕ್ ॥ ೪೧ ॥

ರಾಜಾಧ್ಯೂತಕರೇಭ್ಯಶ್ಚ ಗೃಹ್ಣೀಯಾತ್ಪಂಚಕಂ ಶತಂ ।
ಪಂಚಪಂಚಶತಂ ತತ್ರ ಸಭಿಕಃ ಪ್ರಾಪ್ತುಮರ್ಹತಿ ॥ ೪೨ ॥

ಕಾರುಕಾಶ್ಶಿಲ್ಪಿನಶ್ಚೈವ ಶೂದ್ರಧರ್ಮೋಪಜೀವಿನಃ ।
ಏಕೈಕಂ ಕಾರಯೇತ್ಕರ್ಮ ಮಾಸಿ ಮಾಸಿ ಮಹೀಪತಿಃ ॥ ೪೩ ॥

ರಾಜದ್ರವ್ಯವನ್ನು ವ್ಯವಸ್ಥೆಗೊಳಿಸಬೇಕು. ರಾಜರಾದವರಿಗೆ ದೇಶದಲ್ಲಿರುವ ನಗದು ಹಣ ಮತ್ತು ಪಶುಗಳಲ್ಲಿ ನೂರಕ್ಕೆ ಐವತ್ತು ಭಾಗವೂ, ಮತ್ತು ಉತ್ಪನ್ನವಾದ ಧಾನ್ಯಗಳು, ಮತ್ತು ಸಸ್ಯಗಳು, ಉದ್ದು, ಜೇನು ತುಪ್ಪ, ಸುಗಂಧಿವಸ್ತುಗಳು, ಓಷಧಿಗಳು, ರಸಗಳು, ಪುಷ್ಪಗಳು, ಫಲಮೂಲಗಳು, ಇವುಗಳಲ್ಲಿ ಆರನೇಯ ಒಂದು ಭಾಗವೂ ಸಲ್ಲತಕ್ಕದ್ದಾಗಿದ್ದೆ.

೪೦ ೪೩. ತರಕಾರಿ, ಹುಲ್ಲು, ಸೊಪ್ಪು, ಚರ್ಮ, ಬಿದಿರಿನಸಾಮಾನುಗಳು ಮಡಕೆಕುಡಿಕೆಗಳು, ಕಲ್ಲಿನ ಸಾಮಾನುಗಳು ಇವುಗಳಿಂದ ಜೀವಿಸುವವರಿಗೆ ವಾರ್ಷಿಕ ವಾದ ಅಲ್ಪಸ್ವಲ್ಪ ಕಂದಾಯವನ್ನು ಏರ್ಪಡಿಸಬೇಕು. ರಾಷ್ಟ್ರದಲ್ಲಿ ದ್ಯೂತವ್ಯವ ಹಾರದಿಂದ ಜೀವಿಸುವವರಿಗಾಗಿ ಬೇರೆ ಬೇರೆ ಸಣ್ಣ ರಾಜ್ಯಗಳನ್ನು ಕಲ್ಪಿಸಬೇಕು. ಆ ದ್ಯೂತದಲ್ಲಿ ಸಭಿಕನಾದವನಿಗೆ ೨,೫೦೦ ರೂಪಾಯಿಗಳು ಬರುವ ಸಂಭವವಿದ್ದಲ್ಲಿ ಧೊರೆಯಾದವನು ದ್ಯೂತಕಾರನಿಂದ ೫೦೦ ರೂಪಾಯಿಗಳನ್ನು ಹೊಂದಬಹುದು. ಧೊರೆಯಾದವನು ಚಿತ್ರಕರ್ಮ ಮತ್ತು ಶಿಲ್ಪದಿಂದ ಜೀವಿಸುವವರಿಗೂ, ಶೂದ್ರಧರ್ಮ ದಿಂದ ಜೀವಿಸುವವರಿಗೂ ಸಹ ಪ್ರತಿಮಾಸದಲ್ಲಿಯೂ ಯಾವುದಾದರೂ ಒಂದೊಂದು ಕೆಲಸವನ್ನು ಕೊಟ್ಟು ಅವರ ಜೀವನಕ್ಕೆ ಸಹಕರಿಸಬೇಕು.

ಸ್ವದೇಶಪಣ್ಯಾಚ್ಛುಲ್ಕಾಂಶಂ ಗೃಹ್ಣೀಯಾದ್ದಶಮಂ ನೃಪಃ ।
ವಿದೇಶಪಣ್ಯಾಚ್ಚ ತಥಾ ದೇಯಂ ಪಂಚಶತಂ ಸಮಂ ॥ ೪೪ ॥

ಶುಲ್ಕಸ್ಥಾನಂ ಭವೇದೇಕಂ ನ ದ್ವಿತೀಯಂ ಕಥಂ ಚ ನ ।
ಶುಲ್ಕಂ ಭೂಯಸ್ತು ಗೃಹ್ಣೀತ ಶ್ಚೌರಸ್ಯಾಪ್ನೋತಿ ಕಿಲ್ಬಿಷಂ ॥ ೪೫ ॥

ನ ಭಿನ್ನಕಾರ್ಷಾಪಣಮಸ್ತಿ ಶುಲ್ಕಂ
ನ ಶಿಲ್ಪವೃತ್ತೌ ನ ಶಿಶೌ ನ ದೂತೇ ।
ನ ಭೈಕ್ಷಲಬ್ಧೇನ ಹೃತಾವಶೇಷೇ
ನ ಶ್ರೋತ್ರಿಯೇ ಪ್ರವ್ರಜಿತೇ ನ ಯಜ್ಞೇ ॥ ೪೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ರಾಜಧರ್ಮನಿರೂಪಣೋ ನಾಮ ತ್ರಯೋವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ

೪೪-೪೬ ಸ್ವದೇಶದ ಪಣ್ಯವಸ್ತುಗಳಿಂದ ನೂರಕ್ಕೆ ಹತ್ತರಂತೆಯೂ ವಿದೇಶದ ವಿಕ್ರೇಯವಸ್ತುಗಳಿಂದ ನೂರಕ್ಕೆ ಐವತ್ತರಂತೆಯೂ ಶುಲ್ಕವನ್ನು ತೆಗೆದುಕೊಳ್ಳಬೇಕು. ಶುಲ್ಕಸ್ಥಾನವು ದೇಶಕ್ಕೆಲ್ಲಾ ಒಂದೇ ಇರಬೇಕು. ಎರಡನೇಯದಿರಕೂಡದು. ಶುಲ್ಕವನ್ನು ಹೆಚ್ಚಾಗಿ ವಸೂಲ್ಮಾಡಿದ ಧೊರೆಯು ಕಳ್ಳನ ಪಾಪಕ್ಕೆ ಭಾಗಿಯಾಗುತ್ತಾನೆ. ರಾಜನ ಶುಲ್ಕವು ಹಿಡಿಯದಿರುವ ನಾಣ್ಯದ ರೂಪದಲ್ಲಿರಬಾರದು. ಶಿಲ್ಪ ಜೀವಿಗಳಿಗೂ ಶಿಶುಗಳಿಗೂ, ದೂತರಿಗೂ ಸುಂಕವಿಲ್ಲ. ಭಿಕ್ಷೆಯಿಂದ ಹೊಂದಿರುವ ವಸ್ತುಗಳಿಗೂ ಅವುಗಳ ಭಾಗಕ್ಕೂ ಸುಂಕವಿಲ್ಲ. ಹಾಗೆಯೇ ಶ್ರೋತ್ರಿಯನಿಗೂ, ಸನ್ಯಾಸಿಗೂ ಯಜ್ಞದ ವರಮಾನಕ್ಕೂ ಸುಂಕವಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ರಾಜಧರ್ಮ ನಿರೂಪಣವೆಂಬ ಮುನ್ನೂರ ಇಪ್ಪತ್ತಮೂರನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುರ್ವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ರಾಜ್ಞೋ ಧರ್ಮಸ್ತ್ವಯಾ ಪ್ರೋಕ್ತೋ ವ್ಯವಹಾರಾನ್ವವೇಕ್ಷಣಂ ।
ತದಸ್ಮಾಕಂ ತ್ವಮಾಚಕ್ಷ್ವ ತ್ವಂಹಿ ಸರ್ವವಿದುಚ್ಯಸೇ ॥ ೧ ॥

॥ ಹಂಸ ಉವಾಚ ॥

ಆಸೀತ್ಕೃತಯುಗೇ ಪೂರ್ವೇ ಪ್ರಜಾಧರ್ಮನಿಬಂಧನಾಃ ।
ತತಸ್ತ್ರೇತಾಯುಗೇ ತೇಷಾಂ ಧರ್ಮೋ ನಾಶಮುಪಾಗಮತ್ ॥ ೨ ॥

ಧರ್ಮೇ ನಷ್ಟೇ ಮನುಷ್ಯಾಣಾಂ ವ್ಯವಹಾರಃ ಪ್ರವರ್ತಿತಃ ।
ದ್ರಷ್ಟಾ ಚ ವ್ಯವಹಾರಾಣಾಂ ರಾಜಾ ದಂಡಧರಃ ಕೃತಃ ॥ ೩ ॥

ಮುನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ.

೧-೩. ಋಷಿಗಳು ಪ್ರಶ್ನೆ ಮಾಡುತ್ತಾರೆ :—ವ್ಯವಹಾರದರ್ಶನವು ಮುಖ್ಯವಾದ ರಾಜಧರ್ಮವೆಂಬುದನ್ನು ನೀನು ಹೇಳಿರುವೆ ಆ ವ್ಯವಹಾರದ ವಿಷಯವೇನೆಂಬು ದನ್ನು ಸರ್ವಜ್ಞನಾದ ನೀನೇ ಹೇಳಬೇಕು. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ ಪೂರ್ವದಲ್ಲಿ ಕೃತಯುಗವು ನಡೆಯುತ್ತಿದ್ದಾಗ ಪ್ರಜೆಗಳೆಲ್ಲರೂ ಕೇವಲ ಧರ್ಮಾವಲಂಬಿಗಳೇ ಆಗಿದ್ದರು. ಅನಂತರ ತ್ರೇತಾಯುಗದಲ್ಲಿ ಜ್ಞಾನದ ಮಾಂದ್ಯ ದಿಂದ ಪ್ರಜೆಗಳಿಗೆ ಧರ್ಮಬುದ್ಧಿಯು ನಾಶಹೊಂದಿತು. ಧರ್ಮವು ನಷ್ಟವಾದ ಮೇಲೆ ಜನಗಳಿಗೆ(ವಾದವಿವಾದರೂಪವಾದ) ವ್ಯವಹಾರವು ಪ್ರಾರಂಭವಾಯಿತು. ಅಂತಹ ವ್ಯವಹಾರಗಳಿಗೆ ದಂಡಧರನಾದ ರಾಜನೇ ಪ್ರೇಕ್ಷಕನಾಗಿ ನಿಯಮಿಸಲ್ಪಟ್ಟನು.

ಕುಲಾನಿ ಶ್ರೇಣಯಶ್ಚೈವ ಗಣಾಂಶ್ಚಾಧಿಕೃತೋ ನೃಪಃ ।
ಪ್ರಷ್ಟಾರೋ ವ್ಯವಹಾರಾಣಾಂ ಗುರವೋ ಹ್ಯುತ್ತರೋತ್ತರಂ ॥ ೪ ॥

ವ್ಯವಹಾರಾನ್ನೃಪಃ ಪಶ್ಯೇದ್ವಿದ್ವದ್ಭಿ ಬ್ರಾಹ್ಮಣೈಃ ಸಹ ।
ಧರ್ಮಶಾಸ್ತ್ರಾನುಸಾರೇಣ ರಾಗದ್ವೇಷವಿವರ್ಜಿತಃ ॥ ೫ ॥

ಕುಲೋದ್ಗತಾ ಸ್ಥಿತಾ ಧರ್ಮೇ ವೃಜಾಯುಕ್ತಾಃ ಶ್ರುತಾನ್ವಿತಾಃ ।
ರಾಜ್ಞಾ ಸಭಾಸದಃ ಕಾರ್ಯಾ ರಿಪೌ ಮಿತ್ರೇ ಚ ಯೇ ಸಮಾಃ ॥ ೬ ॥

ಅಪಶ್ಯತಾ ಕಾರ್ಯವಶಾದ್ವ್ಯವಹಾರಾನ್ನೃಪೇಣ ತು ।
ಸಭ್ಯೈಃ ಸಹ ನಿಯೋಕ್ತವ್ಯೋ ಬ್ರಾಹ್ಮಣಃ ಸರ್ವಧರ್ಮವಿತ್ ॥ ೭ ॥

ಕ್ಷತ್ರಿಯಸ್ತ್ವಥವಾ ವೈಶ್ಯೋ ನತು ಶೂದ್ರಃ ಕದಾಚನ ।
ಯಸ್ಯ ರಾಜ್ಞಸ್ತು ವಿಷಯೇ ಶೂದ್ರೋ ಧರ್ಮವಿವೇಚಕಃ ॥ ೮ ॥

೪-೬. ಅನೇಕ ಕುಟುಂಬಗಳಿಗೂ, ಜನಸಮುದಾಯಕ್ಕೂ, ಒಂದೊಂದು ಗುಂಪಿಗೂ ಸಹ ರಾಜನೇ ಅಧಿಪತಿಯಾಗಿ ಮಾಡಲ್ಪಟ್ಟನು. ವ್ಯವಹಾರಗಳ ನ್ಯಾಯಾನ್ಯಾಯಗಳಿಗೆ ವಿಮರ್ಶಕರಾಗಿ ಮೇಲೆ ಮೇಲೆ ಅಭಿಜ್ಞರು ಏರ್ಪಡಿಸಲ್ಪಟ್ಟರು. ರಾಜನಾದವನು ರಾಗದ್ವೇಷಾದಿಗಳಿಲ್ಲದೆ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಪಂಡಿತರಾದ ಬ್ರಾಹ್ಮಣರೊಡನೆ ವ್ಯವಹಾರಗಳನ್ನು ತಾನೇ ಖುದ್ದಾಗಿ ನೋಡಬೇಕು. ಸತ್ಕುಲದಲ್ಲಿ ಹುಟ್ಟಿದವರೂ, ಧರ್ಮನಿಷ್ಠರೂ, ಶಾಸ್ತ್ರಜ್ಞರೂ, ಶುದ್ಧಮನಸ್ಕರೂ ಶತ್ರುವಿನಲ್ಲಿಯೂ, ಮಿತ್ರನಲ್ಲಿಯೂ ಸಮದೃಷ್ಟಿಯುಳ್ಳವರೂ ಆದವರನ್ನು ಆ ನ್ಯಾಯಾಲಯದ ಸಭ್ಯರನ್ನಾಗಿ ರಾಜನೇ ಏರ್ಪಡಿಸಬೇಕು.

೭-೯. ಇತರ ಕಾರ್ಯಗಳ ತೊಂದರೆಯಿಂದ ವ್ಯವಹಾರವನ್ನು ಸಾಕ್ಷಾತ್ತಾಗಿ ನೋಡಿಕೊಳ್ಳಲು ರಾಜನಿಗೆ ಅವಕಾಶವಿಲ್ಲದಿದ್ದಲ್ಲಿ ಆ ಸಭ್ಯರೊಡನೆ ಸರ್ವಧರ್ಮಗಳನ್ನೂ ತಿಳಿದ ಒಬ್ಬ ಬ್ರಾಹ್ಮಣನನ್ನು ವ್ಯವಹಾರ ನಿರ್ಣಯಕ್ಕಾಗಿ ರಾಜನೇ ನಿಯೋಜಿಸಬೇಕು. ಕ್ಷತ್ರಿಯನನ್ನಾಗಲಿ ವೈಶ್ಯನನ್ನಾಗಲಿ ಸಂದರ್ಭಕ್ಕೆ ತಕ್ಕಂತೆ ನಿಯೋಜಿಸಬಹುದು. ಶೂದ್ರನನ್ನು ಮಾತ್ರ ಯಾವ ಕಾರಣದಿಂದಲೂ ನಿಯೋಜಿಸಬಾರದು. ಯಾವ ರಾಜನ ರಾಜ್ಯದಲ್ಲಿ ಧರ್ಮ ವಿವೇಚನೆಯ ಕಾರ್ಯದಲ್ಲಿ ಶೂದ್ರನು ನಿಯೋಜಿಸಲ್ಪಡುತ್ತಾನೆಯೋ ಅವನ ಆ ರಾಜ್ಯವು ದುರ್ಭಿಕ್ಷ, ವ್ಯಾಧಿ, ಕಳ್ಳರು

ತಸ್ಯ ಸೀದತಿ ತದ್ರಾಷ್ಟ್ರಂ ದುರ್ಭಿಕ್ಷವ್ಯಾಧಿತಸ್ಕರೈಃ ।
ವಿವಾದಾದ್ದ್ವಿಗುಣಂ ದಂಡಂ ಕೂಟಕೃತ್ಸಾಕ್ಷಿಣಸ್ತಥಾ ॥ ೯ ॥

ದ್ವಿಗುಣಂ ಚ ತಥಾ ಸಭ್ಯಾ ರಾಗದ್ವೇಷವ್ಯವಸ್ಥಿತಾಃ ।
ದುರ್ದೃಷ್ಟವ್ಯವಹಾರೇಣ ರಾಜ್ಞಾ ವಿತ್ತಂ ಯದರ್ಜಿತಂ ॥ ೧೦ ॥

ತ್ರಿಂಶದ್ಗುಣಂ ತು ದಾತವ್ಯಂ ಬ್ರಾಹ್ಮಣೇಷ್ವಥವಾಂಭಸಿ ।
ಸ್ಮೃತ್ಯಾಚಾರವ್ಯಪೇತೇನ ಮಾರ್ಗೇಣಾಧರ್ಷಿತಃ ಪರೈಃ ॥ ೧೧ ॥

ಆವೇದಯತಿ ಚೇದ್ರಾಜ್ಞೇ ವ್ಯವಹಾರಪದಂ ಹಿ ತತ್ ।
ಪ್ರತ್ಯರ್ಥಿನಸ್ತದಾ ಕುರ್ಯಾತ್ ದಾಹ್ವಾನಂ ಪೃಥಿವೀಪತಿಃ ॥ ೧೨ ॥

ಅನಾಗಚ್ಛನ್ಞ್ಞಾತೋ ರಾಜ್ಞಾ ವಿನೇಯಃ ಪುರುಷೋ ಭೃಶಂ ।
ನದೀಸಂತಾರಕಾರಣ್ಯ ದುರ್ದೇಶೋಪಪ್ಲವಾದಿಷು ॥ ೧೩ ॥

ಇವರಿಂದ ಆಕ್ರಾಂತವಾಗಿ ಜಾಗ್ರತೆಯಾಗಿ ಶಿಥಿಲವಾಗುತ್ತದೆ. ವ್ಯವಹಾರದಲ್ಲಿ ಅಪರಾಧಿಗೆ ವಿಹಿತವಾದ ಶಿಕ್ಷೆಗಿಂತಲೂ ಎರಡರಷ್ಟು ಶಿಕ್ಷೆಯನ್ನು ಸುಳ್ಳುಸಾಕ್ಷ್ಯ ನುಡಿದವನಿಗೆ ವಿಧಿಸಬೇಕು.

೧೦-೧೩ ರಾಗದ್ವೇಷಗಳಿಂದ ವ್ಯವಹಾರವನ್ನು ನಡೆಸಿದ ಸಭ್ಯರಿಗೂ ಈ ರೀತಿ ದ್ವಿಗುಣ ಶಿಕ್ಷೆಯು ವಿಹಿತವಾಗಿದೆ. ಸರಿಯಾಗಿ ವಿಚಾರ ಮಾಡದಿರುವ ವ್ಯವಹಾರದಿಂದ ರಾಜನಾದವನು ದಂಡರೂಪದಿಂದ ಎಷ್ಟುಧನವನ್ನು ಹೊಂದು ತ್ತಾನೆಯೋ ಅದಕ್ಕೆ ಮೂವತ್ತರಷ್ಟು ಧನವನ್ನು ಬ್ರಾಹ್ಮಣರಿಗೆ ದಾನಮಾಡಬೇಕು, ಅಥವಾ ನೀರಿನಲ್ಲಿ ಹಾಕಬೇಕು ಧರ್ಮಶಾಸ್ತ್ರ, ಮತ್ತು ಆಚಾರ ಇವುಗಳಿಂದ ಬೇರೆಯಾದ ಯಾವುದೋ ಒಂದು ಮಾರ್ಗದಿಂದ ಒಬ್ಬನು ಮತ್ತೊಬ್ಬನನ್ನು ತೊಂದರೆ ಪಡಿಸಿದ್ದೇ ಆದರೆ ತೊಂದರೆಗೊಳಗಾದವನು ವಾದಿಯಾಗಿ ರಾಜನಲ್ಲಿ ದೂರು ಕೊಡುತ್ತಾನೆ. ಇಂತಹ ಸಂದರ್ಭಗಳೇ ವ್ಯವಹಾರಕ್ಕೆ ಸ್ಥಾನ, ಆಗ ದೊರೆಯು ಪ್ರತಿವಾದಿಗೆ ಆಹ್ವಾನಕೊಡಬೇಕು. ಪ್ರತಿವಾದಿಯು ರಾಜನೆದುರಿಗೆ ಬರದೇ ಇದ್ದಲ್ಲಿ ಅವನು ಸೋತನೆಂದು ಭಾವಿಸಿ ರಾಜನು ಅವನಿಗೆ ಸರಿಯಾದ ಶಿಕ್ಷೆ ಕೊಡಬೇಕು. ಆದರೆ ಅಂತಹ ಪ್ರತಿವಾದಿಯು ಜಲಯಾನದಲ್ಲಿಯೂ, ಅರಣ್ಯ ದಲ್ಲಿಯೂ, ದುರ್ಗಮದೇಶದಲ್ಲಿಯೂ, ಇತರ ತೊಂದರೆಯಲ್ಲಿಯೂ ಸಿಕ್ಕಿ ಬಿದ್ದಿದ್ದಲ್ಲಿ ಅವನು ಅಪರಾಧಿಯಲ್ಲ ದೊರೆಗೆ ದಂಡ್ಯನೂ ಅಲ್ಲ

ನಾಗಸ್ಥೋ ನ ಚ ದಂಡ್ಯಃ ಸ್ಯಾನ್ನಾಸೌ ರಾಜ್ಞೋಪರಾಧ್ಯತಿ ।
ನಿವೇಷ್ಟುಕಾಮೋ ರೋಗಾರ್ತೋ ಯಿಯಕ್ಷುರ್ವ್ಯಸನೇ ಸ್ಥಿತಃ ॥ ೧೪ ॥

ಅಭಿಯುಕ್ತಸ್ತಥಾನ್ಯೇನ ರಾಜಕಾರ್ಯರತಸ್ತಥಾ ।
ಗವಾಂ ಪ್ರಚಾರೇ ಗೋಪಾಲಾಃ ಸಂಪತ್ಕಾಲೇ ಕೃಷೀವಲಾಃ ॥ ೧೫ ॥

ಶಿಲ್ಪಿನಶ್ಚೈವ ತತ್ಕಾಲಂ ಆಯುಧೀಯಾಶ್ಚ ವಿಗ್ರಹೇ ।
ಅಪ್ರಾಪ್ತವ್ಯವಹಾರಾಶ್ಚ ದೂತದಾನೋ ನ್ಮುಖೀ ವ್ರತೇ ॥ ೧೬ ॥

ವಿಷಮಸ್ಥಶ್ಚ ನಾಸಾಧ್ಯಾ ನಚೈನಾಂಶ್ಚಾಹ್ವಯೇನ್ನೃಪಃ ।
ಪ್ರತ್ಯರ್ಥಿನೋಽಗ್ರತೋ ಲೇಖ್ಯಂ ಯಥಾವೇದಿತಮರ್ಥಿನಃ ॥ ೧೭ ॥

ಸಮಾಮಾಸತದರ್ಧಾಹರ್ನ್ನಾಮಜಾತ್ಯಾದಿಚಿಹ್ನಿತಂ ।
ಶ್ರುತಾರ್ಥಸ್ಯೋತ್ತರಂ ಲೇಖ್ಯಂ ಪೂರ್ವಾವೇದಕಸನ್ನಿಧೌ ॥ ೧೮ ॥

೧೪-೧೭. ಮತ್ತು ರೋಗದಿಂದ ಪೀಡಿತನಾಗಿ ಕೂಡಲು ಶಕ್ತಿ ಇಲ್ಲದಿರುವವನೂ, ಇಚ್ಛೆಯಿಂದ ಯಾಗದಲ್ಲಿ ತೊಡಗಿರುವವನೂ, ವ್ಯಸನದಲ್ಲಿ ಸಿಕ್ಕಿ ಬಿದ್ದಿರುವವನೂ, ಮತ್ತೊಬ್ಬನಿಂದ ಬಂಧಿಸಲ್ಪಟ್ಟಿರುವವನೂ, ರಾಜಕಾರ್ಯದಲ್ಲಿ ಆಸಕ್ತನಾಗಿರುವವನೂ, ಹಾಗೆಯೇ ಹಸುಗಳನ್ನು ಕಾಯುತ್ತಿರುವಾಗ ಗೋಪಾಲಕರೂ, ಸುಗ್ಗಿಯಕಾಲದಲ್ಲಿ ರೈತರೂ, ಕಾರ್ಯಾಸಕ್ತರಾಗಿರುವ ಶಿಲ್ಪಿಗಳೂ, ಯುದ್ಧದಲ್ಲಿ ಆಸಕ್ತಿ ಹೊಂದಿರುವ ಯೋಧರೂ, ವ್ಯವಹಾರವನ್ನೇ ಬಿಟ್ಟಿರುವವರೂ, ವ್ರತದಲ್ಲಿ ನಿರತನಾಗಿ ದೂತನನ್ನು ಕಳುಹುವ ಯತ್ನ ಉಳ್ಳವನೂ, ವಿಷಮದಶೆಯಲ್ಲಿರುವವನೂ ಸಹ ಧೊರೆಯ ಆಹ್ವಾನಕ್ಕೆ ಅರ್ಹರಲ್ಲ. ಮತ್ತು ವಾದಿಯಾದವನ ಪ್ರಾರ್ಥನೆಯನ್ನು ವ್ಯತ್ಯಾಸವಿಲ್ಲದೆ ಪ್ರತಿವಾದಿಯು ಎದುರಿಗೆ ಬರೆದುಕೊಳ್ಳಬೇಕು.

೧೮-೨೦. ಹೀಗೆ ವಾದಿಯ ಪತ್ರವನ್ನು ಓದಿ ಹೇಳಿದವರ ಎದುರಿಗೇ ಪ್ರತಿವಾದಿಯಾದವನು ಉತ್ತರವನ್ನೂ ಸಹ, ವರ್ಷ, ಮಾಸ, ಪಕ್ಷ, ದಿನ, ಮತ್ತು ತನ್ನ ಬಂಧುಜನರ ಹೆಸರಿನ ನಿರ್ದೇಶದಿಂದ ಕೂಡಿರುವಂತೆ ಬರೆಸಬೇಕು. ಅನಂತರ ವಾದಿಯು ತನ್ನ ಪ್ರತಿಜ್ಞೆಗೆ ಸಾಧಕವಾದ ಕಾರಣಗಳನ್ನು ಆಗಲೇ ಬರೆಸಬೇಕು.

ತತೋಽರ್ಥೀ ಲೇಖಯೇತ್ಸದ್ಯಃ ಪ್ರತಿಜ್ಞಾತಾರ್ಥಸಾಧನಂ ।
ಚತುರ್ಧಾ ತಚ್ಚ ಕಥಿತಂ ಮುನಿಭಿಸ್ತತ್ವದರ್ಶಿಭಿಃ || ೧೯ ||

ಲಿಖಿತಂ ಸಾಕ್ಷಿಣೋ ಭುಕ್ತಿಶ್ಚತುರ್ಥೀ ವೈದಿಕೀ ಕ್ರಿಯಾ ।
ಸಾರಸ್ತು ವ್ಯವಹಾರಾಣಾಂ ಪ್ರತಿಜ್ಞಾ ಸಮುದಾಹೃತಾ || ೨೦ ||

ತತ್ಸಿದ್ಧೌ ಸಿದ್ಧಿಮಾಪ್ನೋತಿ ವಿಪರೀತಮತೋಽನ್ಯಥಾ ।
ಅಭಿಯೋಗಮನಿಸ್ತೀರ್ಯ ನೈನಂ ಪ್ರತ್ಯಭಿಯೋಜಯೇತ್ || ೨೧ ||

ಕುರ್ಯಾತ್ಪ್ರತ್ಯಭಿಯೋಗಂ ಚ ಕಲಹೇ ಸಾಹಸೇಷು ಚ ।
ಉಭಯೋಃ ಪ್ರತಿಭುವೌ ಗ್ರಾಹ್ಯೌ ಸಮರ್ಥೌ ಕಾರ್ಯನಿರ್ಣಯೇ || ೨೨ ||

ಇಂತಹ ಸಾಧಕವಾದ ಕಾರಣಗಳೂ ಸಹ ತತ್ವಜ್ಞರಾದ ಋಷಿಗಳಿಂದ ನಾಲ್ಕು ವಿಧವಾಗಿ ಹೇಳಲ್ಪಟ್ಟವೆ. ಲಿಖಿತಪತ್ರ, ಸಾಕ್ಷಿಗಳು, ಸ್ವತ್ತಿನ ಅನುಭವ, ವೈದಿಕ ದಾನಾದಿಗಳು. ಎಲ್ಲಾ (ಸಿವಿಲ್) ವ್ಯವಹಾರಗಳಲ್ಲೂ ಪ್ರತಿಜ್ಞಾರ್ಥ ಸಾಧನವೇ ಸಾರವಾದಭಾಗ

೨೧-೨೨. ಅದು ಸಿದ್ಧವಾದಲ್ಲಿ ಜಯವೂ ಸಿದ್ಧವಾಗುತ್ತದೆ ಇಲ್ಲದಿದ್ದರೆ ಇಲ್ಲ. ವಾದಿಯ ಪ್ರಶ್ನೆಗೆ ಉತ್ತರ ಕೊಡದೆ ಪ್ರತಿವಾದಿಯು ಪ್ರತಿಪ್ರಶ್ನೆ ಹಾಕ ಬಾರದು. ಸಾಹಸವಾದ ಕಲಹಗಳಲ್ಲಿ ಮಾತ್ರ (ಕ್ರಿಮಿನಲ್) ಪ್ರತಿಪ್ರಶ್ನೆಯನ್ನು ಹಾಕಬಹುದು. ಇಂತಹ ಸಾಹಸ (ಕ್ರಿಮಿನಲ್) ವ್ಯವಹಾರದಲ್ಲಿ ಪಿರ್ಯಾದಿ ಮತ್ತು ಅಪರಾಧಿ ಇಬ್ಬರಪಕ್ಷದಲ್ಲಿಯೂ ಕಾರ್ಯನಿರ್ವಾಹದಲ್ಲಿ ಸಮರ್ಥರಾದ ಜಾಮೀನು ದಾರರನ್ನು ಪಡೆಯಬೇಕು. ಸಾಹಸಕಾರ್ಯವೆಂದರೆ ಕಳ್ಳತನ, ಮಾನಹಾನಿಯುಂಟಾ ಗುವ ಕಠಿಣೋಕ್ತಿ, ಮತ್ತು ಸ್ತ್ರೀವಿಷಯದಲ್ಲಿ ಉಂಟಾದ ದೂಷಣ, ಮತ್ತು ಕೊಲೆ ಇವುಗಳು, ಇಂತಹ ವ್ಯವಹಾರಗಳನ್ನು ಆಗಲೇ ವಿಚಾರಮಾಡಬೇಕು. ಇತರ (ಸಿವಿಲ್) ವ್ಯವಹಾರಗಳು ಇಚ್ಛೆ ಬಂದಕಾಲದಲ್ಲಿ ನಡೆಯಬಹುದು.

ಸಾಹಸಸ್ತೇಯಪಾರುಷ್ಯೇ ಹ್ಯಭಿಶಾಪಾತ್ಯಯೇ ಸ್ತ್ರಿಯಃ ।
ವಿವಾದಯೇತ್ಸದ್ಯ ಏವ ಕಾಲೋಽನ್ಯತ್ರೇಚ್ಛಯಾ ಸ್ಮೃತಃ ॥ ೨೩ ॥

ದೇಶಾದ್ದೇಶಾಂತರಂ ಯಾತಿ ಸೃಕ್ಕಿಣೀ ಪರಿಲೇಢಿ ಚ ।
ಲಲಾಟಂ ಸ್ವಿದ್ಯತೇ ಚಾಸ್ಯ ಮುಖಂ ವೈವರ್ಣ್ಯಮೇತಿ ಚ ॥ ೨೪ ॥

ಪರಿಶುಷ್ಯತ್ಸ್ಖಲದ್ವಾಕ್ಯೋ ವಿರುದ್ಧಂ ಬಹು ಭಾಷತೇ ।
ಅಭಿಯೋಗೇಽಥವಾ ಸಾಕ್ಷ್ಯೇ ದುಷ್ಟಃ ಸ ಪರಿಕೀರ್ತ್ಯತೇ ॥ ೨೫ ॥

ಆಕಾರೈರಿಂಗಿತೈರ್ಗತ್ಯಾ ಚೇಷ್ಟಿತೈರ್ಭಾಷಿತೇನ ಚ ।
ನೇತ್ರವಕ್ತ್ರವಿಕಾರಾಭ್ಯಾಂ ಗೃಹ್ಯತೇಽಂತರ್ಗತಂ ಮನಃ ॥ ೨೬ ॥

ತ್ರಿಪಕ್ಷಾದ್ವಿಜಿತೋ ಜ್ಞೇಯಸ್ತೂತ್ತರಸ್ಯಾಪ್ರಯಚ್ಛತಃ ।
ಸರ್ವೇಷ್ವೇವ ವಿವಾದೇಷು ಬಲವತ್ಯುತ್ತರಾ ಕ್ರಿಯಾ ॥ ೨೭ ॥

ಆಧೌ ಪ್ರತಿಗ್ರಹೇ ಕ್ರೀತೇ ಪೂರ್ವಾತ್ತು ಬಲವತ್ತರಾ ।
ಸರ್ವೋಪದ್ರವಕರ್ತಾರಮೇಕದೇಶವಿಭಾವಿತಂ ॥ ೨೮ ॥

೨೪–೨೬. ಇಂತಹ ಸಾಹಸವ್ಯವಹಾರಗಳಲ್ಲಿ ಯಾವನು ಕೃತ್ಯನಡೆಸಿದನಂತರ ದೇಶಾಂತರಕ್ಕೆ ಓಡುತ್ತಾನೆಯೋ, ಪ್ರಶ್ನೆ ಮಾಡಿದಾಗ ಯಾವನು ಕಟಬಾಯಿಯನ್ನು ನೆಕ್ಕುತ್ತಾನೆಯೋ, ಮತ್ತು ಯಾವನ ತಲೆಯು ಬೆವತು ಮುಖವೂ ವಿವರ್ಣವಾಗುತ್ತದೆಯೋ ಯಾವನು ಒಣಗಿಹೋದ ತುಟಿಯಿಂದ ಮಾತನ್ನು ತೊದಲುತ್ತಾ ಹೇಳುತ್ತಾನೆಯೋ, ಸಾಕ್ಷ್ಯಹೇಳುವಾಗ, ವಿರುದ್ಧವಾಗಿಯೂ ಹೆಚ್ಚಾಗಿಯೂ ಹರಟುತ್ತಾನೆಯೋ ಅಂತಹ ದುಷ್ಟನೇ ಅಪರಾಧಿ ಎಂದು ತಿಳಿಯಬೇಕು. ಇಂತಹವರ ಮನಸ್ಸನ್ನು ಆಕಾರದಿಂದಲೂ, ಅಂತರವಾದಚೇಷ್ಟೆಗಳಿಂದಲೂ, ಗಮನದಿಂದಲೂ ಅವಯವಚೇಷ್ಟೆ, ಮತ್ತು ಮಾತು ಇವುಗಳಿಂದಲೂ, ಕಣ್ಣು, ಮುಖ ಇವುಗಳ ವಿಕಾರದಿಂದಲೂ ತಿಳಿಯಬೇಕಾಗುತ್ತದೆ.

೨೭–೩೦. ಶಾಸ್ತ್ರ ಮತ್ತು ಆಚಾರಗಳೆಂಬ ಎರಡು ಮಾರ್ಗಗಳನ್ನೂ ಬಿಟ್ಟು ಮೂರನೆಯ ಮಾರ್ಗವನ್ನು ಹಿಡಿದವನು, ಸರಿಯಾದ ಉತ್ತರವಾದಿಯಾಗಲು ಸಾಧ್ಯವಿಲ್ಲದುದರಿಂದ ಅವನು ಸೋತನೆಂದೇ ತಿಳಿಯಬೇಕು. ಎಲ್ಲಾ ವ್ಯವಹಾರಗಳಲ್ಲಿಯೂ ಸರಿಯಾದ ಮನಸ್ಸಿಲ್ಲದೆ ವ್ಯಥೆಯಿಂದಿರುವವನಿಂದ ತೆಗೆದುಕೊಂಡ ದಾನಕ್ಕಿಂತಲೂ ಕ್ರಯವೇ ಪ್ರಬಲವಾಗುತ್ತದೆ. ಒಂದು ಸ್ವತ್ತಿನ ಅಲ್ಪವಾದ

ಸರ್ವಸ್ಮಾದ್ಧೀಯತೇ ಚಾರ್ಥಾದಿತಿ ಧರ್ಮವಿದೋ ವಿದುಃ ।
ಬಲೋಪಧಿ ನಿವೃತ್ತಾಂಸ್ತು ವ್ಯವಹಾರಾನ್ನಿವರ್ತಯೇತ್ ॥ ೨೯ ॥

ಸ್ತ್ರೀನಕ್ತಮಂತರಾಗಾರ ಬಹುಶತ್ರುಕೃತಾಂಸ್ತಥಾ ।
ರೋಗಾರ್ತಭೀತವ್ಯಸನಿ ಬಾಲಶಿಷ್ಯಕೃತಾನಿ ತು ॥ ೩೦ ॥

ಅಕೃತಾನಿ ವಿಜಾನೀಯಾತ್ತಥಾ ದಾಸಕೃತಾನಿ ತು ।
ಗುರೋರ್ವಾಕ್ಯೇನ ಶಿಷ್ಯಸ್ಯ ಪಿತೃವಾಕ್ಯಾತ್ಸುತಸ್ಯ ಚ ॥ ೩೧ ॥

ದಾಸಸ್ಯ ಸ್ವಾಮಿವಾಕ್ಯೇನ ವ್ಯವಹಾರಸ್ತು ಸಿಧ್ಯತಿ ।
ಸ್ತ್ರೀಕೃತಾನ್ಯಪ್ರಮಾಣಾನಿ ಕಾರ್ಯಾಣ್ಯಾಹುರನಾಪದಿ ॥ ೩೨ ॥

ವಿಶೇಷತೋ ಧನಕ್ಷೇತ್ರೇ ದಾಯಾದಧನವಿಕ್ರಮಾಃ ।
ಏತಾನ್ಯೇವ ಪ್ರಮಾಣಾನಿ ಭರ್ತಾ ಯದ್ಯನುಮನ್ಯತೇ ॥ ೩೩ ॥

ಭಾಗಕ್ಕೆ ಯಜಮಾನನಾದವನು ಹೆಚ್ಚುಭಾಗವುಳ್ಳ ಇತರರೆಲ್ಲರನ್ನೂ ತೊಂದರೆ ಪಡಿಸುವುದಾದರೆ ಅವನು ಆ ಸ್ವತ್ತಿನ ಆರ್ಥಿಕಸಿದ್ಧಿಯಿಂದ ದೂರಮಾಡಲ್ಪಡತಕ್ಕವನೆಂಬುದು ಧರ್ಮಜ್ಞರ ನಿರ್ಣಯ. ಕೇವಲ ನಿರ್ಬಂಧದಿಂದಲೂ, ವಂಚನೆಯಿಂದಲೂ ನಡೆದ ವ್ಯವಹಾರಗಳನ್ನು ತ್ಯಜಿಸಬೇಕು. ಸ್ತ್ರೀ ಮಾತ್ರದಿಂದಲೂ, ರಾತ್ರಿಕಾಲದಲ್ಲಿಯೂ, ಮನೆಯ ಒಳಭಾಗದಲ್ಲಿಯೂ, ಅನೇಕ ಶತ್ರುಗಳ ಗುಂಪಿನಿಂದಲೂ, ರೋಗಿಯಿಂದಲೂ, ಭೀತನಿಂದಲೂ, ಮದ್ಯಾದಿವ್ಯಸನಿಯಿಂದಲೂ, ಹುಡುಗರಿಂದಲೂ. ಶಿಷ್ಯರಿಂದಲೂ ಉಂಟಾದ ವ್ಯವಹಾರಗಳೂ, ದಾಸಜನಗಳಿಂದ ಉಂಟಾದ ವ್ಯವಹಾರಗಳೂ ವಿಚಾರಕ್ಕೆ ಅರ್ಹವಾದುವೇ ಅಲ್ಲ, ಇವನ್ನು ಸ್ವೀಕರಿಸಲೇಬಾರದು.

೩೧–೩೪. ಆದರೆ ಗುರುವಿನ ಮಾತಿನಿಂದ ಶಿಷ್ಯನ ವಿಷಯದಲ್ಲಿಯೂ, ತಂದೆಯ ಮಾತಿನಿಂದ ಮಗನ ವಿಷಯದಲ್ಲಿಯೂ, ಯಜಮಾನನ ಮಾತಿನಿಂದ ಆಳಿನ ವಿಷಯದಲ್ಲಿಯೂ ವ್ಯವಹಾರವು ವಿಚಾರಕ್ಕೆ ಅರ್ಹವಾಗಿ ಸ್ವೀಕರಿಸಲ್ಪಡುತ್ತದೆ. ಆಪತ್ಕಾಲ ಹೊರತು ಇತರ ಕಾಲಗಳಲ್ಲಿ ಸ್ತ್ರೀಯಾದವಳಿಂದ ಉಂಟಾದ ವಾಕ್ಯೇ ಮೊದಲಾದ ಕಾರ್ಯಗಳು ಪ್ರಮಾಣವಲ್ಲ. ಹಣದ ವಿಷಯದಲ್ಲಿಯೂ, ಭೂಮಿಯ ವಿಷಯದಲ್ಲಿಯೂ, ದಾಯಾದಿಗಳಿಂದಲೂ, ಧನಾಕ್ರಮಣಮಾಡುವವರಿಂದಲೂ

ಪುರಃ ಪತ್ಯುರಭಾವೇನ ರಾಜಾ ವಾ ಪಿತೃಪುತ್ರಯೋಃ ।
ಬಾಲ ಆಷೋಡಶಾದ್ವರ್ಷಾತ್ಪೌಗಂಡಶ್ಚಾಭಿಶಸ್ಯತೇ ॥ ೩೪ ॥

ಪರತೋ ವ್ಯವಹಾರಜ್ಞಃ ಸ್ವತಂತ್ರಃ ಪಿತರಂ ವಿನಾ ।
ಅಪ್ರಾಪ್ತವ್ಯವಹಾರಸ್ಯ ಸ್ವಾತಂತ್ರ್ಯಂ ಮಾತುರುಚ್ಯತೇ ॥ ೩೫ ॥

ಅಸ್ವತಂತ್ರಕೃತಾನ್ಯಾಹುರಪ್ರಮಾಣಾನಿ ಪಂಡಿತಾಃ ।
ನಾನಿಯುಕ್ತೇನ ವಕ್ತವ್ಯಂ ವ್ಯವಹಾರೇ ಕಥಂಚನ ॥ ೩೬ ॥

ಅನಿಯುಕ್ತವಚಾ ದಂಡ್ಯೋ ರಾಜ್ಞಾ ರುಕ್ಮಸ್ಯ ಕೃಷ್ಣಲಂ ।
ನಿಯುಕ್ತೋ ನ ನಿಯುಕ್ತೋ ವಾ ವಿದ್ಯಾವಾಕ್ಯಮುದಾಹರನ್ ॥ ೩೭ ॥

ನಡೆಸಿದ ವ್ಯವಹಾರಗಳು ಬಹುಮಟ್ಟಿಗೂ ಪ್ರಮಾಣವಲ್ಲ. ಒಂದುವೇಳೆ ಯಜಮಾನನಾದವನು ಇವೂ ಪ್ರಮಾಣಗಳೆಂದು ನಂಬುವುದಾದರೆ, ರಾಜನೇ ಗಂಡನಿಲ್ಲದಿರುವಾಗ ಸ್ತ್ರೀಯ ವ್ಯವಹಾರವನ್ನೂ, ತಂದೆಯು ಪರೋಕ್ಷದಲ್ಲಿರುವಾಗ ಮಗನ ವ್ಯವಹಾರವನ್ನೂ ವಿಚಾರಿಸಬೇಕು. ಹದಿನಾರು ವರ್ಷಕ್ಕಿಂತಲೂ ಕಡಿಮೆಯಾದ ವಯಸ್ಸುಳ್ಳ ಬಾಲಕನ ಮತ್ತು ಅಂಗವೈಕಲ್ಯ ಉಳ್ಳವನ ವ್ಯವಹಾರಗಳು ಸ್ವೀಕಾರ್ಯವಲ್ಲ.

೩೫-೩೭. ಇದರ ಮೇಲೆ ವ್ಯವಹಾರವನ್ನು ಸ್ವೀಕರಿಸುವ ವಿಷಯದಲ್ಲಿ ಸಭೆಯ ಯಜಮಾನನೇ ಸ್ವತಂತ್ರ. ಆದರೆ ಅವನು ವ್ಯವಹಾರಿಯ ತಂದೆಯಾಗಿರಬಾರದು. ವ್ಯವಹಾರಕ್ಕೆ ಪ್ರಾಪ್ತವಯಸ್ಕನಾಗದಿರುವವನ ವಿಷಯದಲ್ಲಿ ತಾಯಿಯೇ ಸ್ವತಂತ್ರ ವಾದಿಯಾಗಬಹುದು. ಸ್ವಾತಂತ್ರ್ಯವಿಲ್ಲದಿರುವವರಿಂದ ಉಂಟಾಗುವ ವ್ಯವಹಾರಗಳು ಅಪ್ರಾಮಾಣಿಕಗಳೆಂದೇ ಪಂಡಿತರ ಅಭಿಪ್ರಾಯ. ವ್ಯವಹಾರಗಳಲ್ಲಿ ಪ್ರಶ್ನೆ ಇಲ್ಲದೆ ಉಂಟಾದ ಉತ್ತರಗಳೂ ಪ್ರಮಾಣಗಳೇ ಅಲ್ಲ. ನಿಯೋಗ ಹೊಂದದಿರುವವನು ಮಾತನಾಡಿದಲ್ಲಿ ಅವನು ರಾಜನಿಂದ ಗುಲಗಂಜಿ ತೂಕದ ಚಿನ್ನದಿಂದ ಶಿಕ್ಷಾರ್ಹನಾಗುತ್ತಾನೆ. ನಿಯೋಗಹೊಂದಿ ಮಾತನಾಡುವವನಿಗೆ ಈ ಶಿಕ್ಷೆ ಇಲ್ಲ. ನಿಯೋಗವಿದ್ದರೂ ಸರಿಯಾದ ಉತ್ತರಹೇಳದೆ ಕೇವಲ ವಿದ್ಯೆಯ ಪೌಢಿಮೆಯಿಂದ ಮಾತನಾಡುವವನೂ ಶಿಕ್ಷಾರ್ಹನೇ.

ಸರ್ವಸ್ವರಹಿತಃ ಕಾರ್ಯೋ ಲೇಖಕೋಽನ್ಯತಲೇಖಕಃ ।
ಲೇಖಕಸ್ಯ ಚ ಸಭ್ಯಾನಾಂ ಸಾಕ್ಷಿಣಾಂ ಯಶ್ಚ ದೂಷಕಃ ॥ ೩೮ ॥

ಅನಾಹೂತಸ್ಯ ಚಾಹ್ವಾನೇ ಆಹೂತಸ್ಯ ಚ ಮೋಕ್ಷಣೇ ।
ಅಜಿತೋಽಸ್ಮೀತಿ ಮನ್ವಾನೋ ಬ್ರೂಯಾತ್ತಂತು ಪರಾಜಿತಂ ॥ ೩೯ ॥

ರಾಜಾ ತಾನ್ವಿನಯೇದ್ವಿಪ್ರಾನ್ದಂಡೇನ ದ್ವಿಗುಣೇನ ಚ ।
ಸಭಾ ವಾ ನ ಪ್ರವೇಷ್ಟವ್ಯಾ ವಕ್ತವ್ಯಂ ವಾ ಸಮಂಜಸಂ ॥ ೪೦ ॥

ಅಬ್ರುವನ್ವಿಬ್ರುವನ್ವಾಪಿ ನರೋ ಭವತಿ ಕಿಲ್ಬಿಷೀ ।
ಪಾದೋ ಧರ್ಮಸ್ಯ ಕರ್ತಾರಂ ಪಾದಃ ಸಾಕ್ಷಿಣಮೇವ ಚ ॥ ೪೧ ॥

ಪಾದಃ ಸಭಾಸದಃ ಸರ್ವಾನ್ಪಾದೋ ರಾಜಾನಮೃಚ್ಛತಿ ।
ರಾಜಾ ಭವತ್ಯನೇನಾಸ್ತು ನಿಂದಾರ್ಹೋ ಯತ್ರ ನಿಂದ್ಯತೇ ॥ ೪೨ ॥

೩೮–೪೨. ವ್ಯವಹಾರಗಳಲ್ಲಿ ಸುಳ್ಳುಬರಹ ಬರೆಯುವ ಲೇಖಕನನ್ನು ಅವನ ಸರ್ವಸ್ವತ್ತನ್ನೂ ಜುಲ್ಮಾನೆಯ ರೂಪದಿಂದ ತೆಗೆದುಕೊಂಡು ನ್ಯಾಯಾಲಯದಿಂದ ಹೊರಗೆ ಹಾಕಬೇಕು. ಲೇಖಕನಲ್ಲಿಯೂ, ಸಭ್ಯರಲ್ಲಿಯೂ, ಸಾಕ್ಷಿಗಳಲ್ಲಿಯೂ ಪಿತೂರಿ ನಡೆಸುವವನಿಗೂ ಇದೇ ಶಿಕ್ಷೆ. ವ್ಯವಹಾರಗಳಲ್ಲಿ ಆಹ್ವಾನವಿಲ್ಲದವನಿಗೆ ಆಹ್ವಾನ ಕೊಡುವುದರಿಂದಲೂ ಆಹ್ವಾನವಿರುವವನನ್ನು ಬಿಟ್ಟುಬಿಡುವುದರಿಂದಲೂ ಅವರು ನಾನೇ ಜಯಶಾಲಿ ಎಂದು ಹೇಳಿಕೊಳ್ಳಲು ಅವಕಾಶವಾಗುತ್ತದೆ. ಇವರೂ ಪರಾಜಿತರೇ ಆಗುತ್ತಾರೆ. ಈ ರೀತಿ ವ್ಯತ್ಯಾಸ ನಡೆಸಿದ ಸಭ್ಯರ ವಿಷಯದಲ್ಲಿ ರಾಜನಾದವನು ಅಂತಹ ಬ್ರಾಹ್ಮಣರನ್ನು ದ್ವಿಗುಣ ದಂಡದಿಂದ ಶಿಕ್ಷಿಸಬೇಕು. ಅಂತಹವರನ್ನು ಸಭೆಗೆ ಸೇರಿಸಲೇ ಕೂಡದು. ಈ ವಿಷಯದಲ್ಲಿ ಅವರು ಸಮಂಜಸವಾದ ಉತ್ತರ ಕೊಡಬೇಕು. ಸರಿಯಾದ ಉತ್ತರ ಕೊಡದಿರುವವನೂ ಸಹ ಪಾಪಭಾಗಿಯಾಗುತ್ತಾನೆ. ವ್ಯವಹಾರಗಳಲ್ಲಿ ಧರ್ಮದ ಕಾಲುಭಾಗವು ವಾದಿಯಲ್ಲಿಯೂ, ಕಾಲುಭಾಗವು ಸಾಕ್ಷಿಯಲ್ಲಿಯೂ, ಕಾಲುಭಾಗವು ವಿಮರ್ಶಕರಾದ ಸಭ್ಯರಲ್ಲಿಯೂ ಉಳಿದ ಕಾಲುಭಾಗವು ರಾಜನಲ್ಲಿಯೂ ಇರುತ್ತದೆ.

೪೩–೪೫. ತಪ್ಪಿತಸ್ಥನನ್ನು ಅಪರಾಧಿ ಎಂದು ಪರಿಗಣಿಸಿ ಅವನಿಗೆ ಶಿಕ್ಷೆ ಕೊಡುವುದರಿಂದ ರಾಜನಾದವನು ಪಾಪದಿಂದ ಬಿಡುಗಡೆ ಹೊಂದುತ್ತಾನೆ. ಆ ಪಾಪವು ತಪ್ಪುಮಾಡಿದವನನ್ನು ಹೋಗಿ ಸೇರುತ್ತದೆ. ಸಭ್ಯರೂ ಪಾಪದಿಂದ ಬಿಡುಗಡೆ

ಏನೋ ಗಚ್ಛತಿ ಕರ್ತಾರಂ ಮುಚ್ಯಂತೇ ಚ ಸಭಾಸದಃ ।
ಛಲಂ ನಿರಸ್ಯ ಭೂತೇನ ವ್ಯವಹಾರಾನ್ನಯೇನ್ನೃಪಃ ॥ ೪೩ ॥

ಭೂತಮಪ್ಯನುಪನ್ಯಸ್ತಂ ವ ವಹಾರೇಣ ಹೀಯತೇ ।
ಸಪಣಶ್ಚೇದ್ವಿವಾದಃ ಸ್ಯಾತ್ತದ್ಧನಂ ದಾಪಯೇನ್ನರಃ ।
ದಂಡಂ ಚ ಸ್ವಪಣಂ ಚೈವ ಧನಿಕೇ ಧನಮೇವ ಚ ॥ ೪೪ ॥

ನ ಸಾ ಸಭಾ ಯತ್ರ ನ ಸಂತಿ ವೃದ್ಧಾ ।
ನ ತೇ ವೃದ್ಧಾ ಯೇ ನ ವದಂತಿ ಧರ್ಮಂ ।
ನ ತದ್ಧರ್ಮಂ ಯತ್ರ ನ ಸತ್ಯಮಸ್ತಿ
ನ ತತ್ಸತ್ಯಂ ಯಚ್ಛಲೇನಾನುವಿದ್ಧಂ ॥ ೪೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವ್ಯವಹಾರ
ನಿರೂಪಣೋ ನಾಮ
ಚತುರ್ವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ

ಹೊಂದುತ್ತಾರೆ. ಧೊರೆಯಾದವನು ವಂಚನೆಮಾಡದೆ ಸತ್ಯದಿಂದ ವ್ಯವಹಾರಗಳನ್ನು ನಡೆಸಬೇಕು. ಸತ್ಯವಾದ ಅಂಶವೂ ಹೇಳಿ ಅದನ್ನು ಸಮರ್ಥಿಸದೇ ಹೋದಲ್ಲಿ ಆ ಸತ್ಯಾಂಶವೂ ವ್ಯವಹಾರದಿಂದ ಬೇರ್ಪಡುತ್ತದೆ. ವಿವಾದವು ಪಣಬಂಧ ಪೂರ್ವಕವಾಗಿ ನಡೆದಿದ್ದರೆ ಆದಲ್ಲಿ ಆ ಪಣದ್ರವ್ಯವನ್ನು ಜಯಶಾಲಿಗೆ ಕೊಡಿಸಬೇಕು. ದಂಡದ ಧನವನ್ನೂ, ಪಣದ್ರವ್ಯವನ್ನೂ ಪಣಮಾಡಿದ ಧನಿಕನೇ ಹೊಂದುತ್ತಾನೆ. ಜ್ಞಾನವೃದ್ಧರು ಇಲ್ಲದಿರುವ ಸಭೆಯು ಸಭೆಯೇ ಅಲ್ಲ. ಧರ್ಮವನ್ನು ತಿಳಿಯದಿರುವವರು ವೃದ್ಧರೂ ಅಲ್ಲ. ಸತ್ಯಾಂಶದಿಂದ ದೂರವಾದದ್ದು ಧರ್ಮವೂ ಅಲ್ಲ. ಯಾವುದು ವಂಚನೆಯಿಂದ ಕೂಡಿರುವುದೋ ಅದು ಸತ್ಯವೂ ಅಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ವ್ಯವಹಾರದ
ನಿರೂಪಣವೆಂಬ ಮುನ್ನೂರ ಇಪ್ಪತ್ತನಾಲ್ಕನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸಂಭೋಗೋ ದೃಶ್ಯತೇ ಯತ್ರ ನ ದೃಶ್ಯೇತಾಗಮಃ ಕ್ವಚಿತ್ ।
ಆಗಮಃ ಕಾರಣಂ ತತ್ರ ನ ಭೋಗಸ್ತತ್ರ ಕಾರಣಂ ॥ ೧ ॥

ಆಗಮೇನ ವಿಶುದ್ಧೇನ ಭೋಗೋ ಯಾತಿ ಪ್ರಮಾಣತಾಂ ।
ಅವಿಶುದ್ಧಾಗಮೋ ಭೋಗಃ ಪ್ರಾಮಾಣ್ಯಂ ನೈವ ಗಚ್ಛತಿ ॥ ೨ ॥

ಆಹಂತ್ರೈವಾಭಿಯುಕ್ತಃ ಸನ್ನರ್ಥಾನಾಮುದ್ಧರೇತ್ಪದಂ ।
ಭುಕ್ತಿರೇವ ವಿಶುದ್ಧಾ ಸ್ಯಾತ್ಪ್ರಾಪ್ತಾನಾಂ ಪಿತೃತಃ ಕ್ರಮಾತ್ ॥ ೩ ॥

ಮುನ್ನೂರ ಇಪ್ಪತ್ತೈದನೆಯ ಅಧ್ಯಾಯ.

೧–೩. ಹಂಸವು ಹೇಳುತ್ತದೆ:—ಸ್ವತ್ತಿಗೆ ಸಂಬಂಧಪಟ್ಟ ಯಾವ ವ್ಯವಹಾರದಲ್ಲಿ ಅನುಭವ ಮಾತ್ರವೇ ಇದ್ದು ಸ್ವತ್ತಿನ ಬಾಧ್ಯತೆ (ಹಕ್ಕುದಾರಿ) ವಿಷಯದಲ್ಲಿ ಸರಿಯಾದ ಪ್ರಮಾಣವು ಕಂಡುಬರುವುದಿಲ್ಲವೋ ಅಂತಹ ವ್ಯವಹಾರದಲ್ಲಿ ಅನುಭವಕ್ಕಿಂತಲೂ ಬಾಧ್ಯತೆಗೆ (ಹಕ್ಕುದಾರಿ) ತಕ್ಕ ಪ್ರಮಾಣವೇ ಪ್ರಬಲವಾಗುತ್ತದೆ ಏತಕ್ಕೆಂದರೆ ಸರಿಯಾದ ಪ್ರಮಾಣದಿಂದ ಬಾಧ್ಯತೆ ಹೊಂದಿರುವವನಿಗೆ ಅನುಭವವು ಪ್ರಮಾಣವಾಗಬಹುದು. ಕೇವಲ ನಿರ್ಮೂಲವಾದ ಅನುಭವವು ಪ್ರಮಾಣವಲ್ಲ ಕೇವಲ ಅನುಭವವೇ ಪ್ರಮಾಣವಾದಲ್ಲಿ ಬಲಾತ್ಕಾರದಿಂದ ಸ್ವತ್ತನ್ನು ಆಕ್ರಮಿಸಿದವನೇ ಅದರ ಅರ್ಥಲಾಭವನ್ನೆಲ್ಲಾ ಸ್ವಾಧೀನಮಾಡಿಕೊಳ್ಳುತ್ತಾನೆ. ಆದ್ದರಿಂದ ಪಿತೃಪೈತಾಮಹವಾಗಿ ಪ್ರಾಪ್ತವಾದ ಸ್ವತ್ತಿನ ವಿಶುದ್ಧಾನುಭವವೇ ಪ್ರಮಾಣವಾಗುತ್ತದೆ.

ಅನ್ವಾಹಿತಃ[1].... .... ಹೇಲೇ ವಿಸ್ಪಷ್ಟಯಾಚಿತಂ ।
ಅಪ್ರತ್ಯಕ್ಷಂ ಚ ಯದ್ಭುಕ್ತಂ ನ ಚೇದ್ಭೋಗೇನ ಜೀರ್ಯತೇ ॥ ೪ ॥

ಪಶ್ಯತೋಽಬ್ರುವತೋ ಭೂಮೇರ್ಹಾನಿರ್ವಿಂಶತಿವಾರ್ಷಿಕೀ ।
ಪರೇಣ ಭುಜ್ಯಮಾನಾಯಾ ಧನಸ್ಯ ದಶವಾರ್ಷಿಕೀ ॥ ೫ ॥

ತ್ರಿಭಿರೇವ ತು ಯದ್ಭುಕ್ತಂ ಪುರುಷೈಸ್ತು ಯಥಾವಿಧಿ ।
ಲೇಖ್ಯಾಭಾವೇಽಪಿ ತಂ ತತ್ರ ಚತುರ್ಥಃ ಸಮವಾಪ್ನುಯಾತ್ ॥ ೬ ॥

ಆಗಮೋಽಭ್ಯಧಿಕೋ ಭುಕ್ತೇರ್ವಿನಾ ಪೂರ್ವಕ್ರಮಾಗತಾತ್ ।
ಆಗಮೋಽಪಿ ಬಲೀ ನೈವ ಭುಕ್ತಿಸ್ತತ್ರಾಪಿ ಯತ್ರ ನ ॥ ೭ ॥

೪–೫. ಯಾವ ಸ್ವತ್ತು ಮಾಲೀಕನ ಅನುಮತಿಯಿಂದ ಅನುಭವಕ್ಕೆ ಬಂದಿದೆಯೋ ಮತ್ತು ಯಾವುದು ಕ್ರೀಡಾರ್ಥವಾದ ಅಸ್ಪಷ್ಟ ಯಾಚನೆಯಿಂದ ಅನುಭವಕ್ಕೆ ಬಂದಿದೆಯೋ ಮತ್ತು ಮಾಲೀಕನ ಪರೋಕ್ಷತೆಯಿಂದ ಅನುಭವಕ್ಕೆ ಬಂದಿದೆಯೋ ಇಂತಹ ಸ್ವತ್ತುಗಳ ಭೋಗವು ಅನುಭವದಾರನ ಹಕ್ಕುದಾರಿಕೆಗೆ ಅರ್ಹವಲ್ಲ. ಪ್ರತ್ಯಕ್ಷದಲ್ಲಿದ್ದರೂ ಯಜಮಾನನಿಗೆ ತಿಳಿಸದೆ ಅನುಭವಿಸುತ್ತಿರುವ ಭೂಮಿಯನ್ನು ಯಜಮಾನನು ಅನುಭವದಾರನಿಂದ ಹಿಂದಕ್ಕೆ ತೆಗೆದುಕೊಳ್ಳಲು ಇಪ್ಪತ್ತು ವರ್ಷ ವಾಯಿದೆ. ಇತರರಿಂದ ಅನುಭವಿಸಲ್ಪಡುತ್ತಿರುವ ಧನವನ್ನು ಯಜಮಾನನು ಹಿಂದಕ್ಕೆ ಪಡೆಯಲು ವಾಯಿದೆ ಹತ್ತು ವರ್ಷ ಮಾತ್ರ.

೬–೭. ಪುತ್ರಪೌತ್ರಾದಿ ಕ್ರಮದಿಂದ ಯಾವ ಸ್ವತ್ತನ್ನು ಹಿಂದಿನ ಮೂರು ತಲೆಯವರು ಅನುಭವಿಸಿದ್ದಾರೆಯೋ ಅಂತಹ ಸ್ವತ್ತಿಗೆ ಯಾವ ಲಿಖಿತಪ್ರಮಾಣವಿಲ್ಲದಿದ್ದರೂ ನಾಲ್ಕನೆಯ ತಲೆಯವನು ಹಕ್ಕುದಾರನಾಗುತ್ತಾನೆ. ಇಂತಹ ಸ್ಥಲದಲ್ಲಿ ಅನುಭವಮಾತ್ರವಲ್ಲದೆ ಪಿತೃಕ್ರಮದಿಂದ ಹೊಂದಿರುವ ಹಕ್ಕುದಾರಿಯೂ ಅಧಿಕವಾದ ಪ್ರಮಾಣ, ಎಲ್ಲಿ ಹಿಂದಿನವರೆಗೆ ಅನುಭವವೇ ಇರುವುದಿಲ್ಲವೋ ಅಲ್ಲಿ ಲಿಖಿತ ಪ್ರಮಾಣವಿದ್ದರೂ ಅದು ದುರ್ಬಲ. ಸ್ವಧರ್ಮವನ್ನು ಬಿಟ್ಟು ಕೇವಲ ಮನೋ

---

1 ಇಲ್ಲಿ ಗ್ರಂಥ ಪಾಠವನ್ನು ಈ ರೀತಿ ಸರಿಪಡಿಸಬಹುದಾಗಿದೆ. ಅನ್ವಾಹಿತಾನು ಭೂತಂ ಚ ೧ ಪಾದ.

ಅಧ್ಯಾಭಿಹಸ್ತಾ ಸುಭೃಶಂ ವಿನೇಯಾ
ದಂಡೇನ ವಿಪ್ರಾ ದ್ವಿಗುಣೇನ ರಾಜ್ಞಾ ।
ಲೋಕೇ ನ ದುಷ್ಟಃ ಸ ತು ಕಂಟಕಃ ಸ್ಯಾತ್
ಪಾಪಾತ್ಮನಾಂ ಮೂರ್ಧನಿ ತಿಷ್ಠತೀತಿ　　॥ ೮ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಭೋಗಲಕ್ಷಣ
ವರ್ಣನೋ ನಾಮ
ಪಂಚವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ

ವ್ಯಾಧಿಯಿಂದ ದುರ್ಮಾರ್ಗಗಾಮಿಗಳಾದ ಬ್ರಾಹ್ಮಣರನ್ನು ರಾಜನಾದವನು ದ್ವಿಗುಣ ಶಿಕ್ಷೆಯಿಂದ ಸ್ವಾಧೀನಪಡಿಸಿಕೊಳ್ಳಬೇಕು. ಅಂತಹವನು ಲೋಕದಲ್ಲಿ ದುಷ್ಟನೇ ಮಾತ್ರವಲ್ಲ, ಕಂಟಕಪ್ರಾಯನಾಗಿ ಪಾಪಾಚಾರಿಗಳ ತಲೆಯ ಮೇಲೂ ಕೂಡುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಭೋಗಲಕ್ಷಣ
ವರ್ಣನವೆಂಬ ಮುನ್ನೂರ ಇಪ್ಪತ್ತೈದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಡ್ವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಪೌರುಷಶ್ಚೈವ ದಿವ್ಯಶ್ಚ ನಿರ್ಣಯೋ ದ್ವಿವಿಧಃ ಸ್ಮೃತಃ |
ದ್ವಿವಿಧಃ ಪೌರುಷಸ್ತತ್ರ ಲಿಖಿತಂ ಸಾಕ್ಷಿಣಸ್ತಥಾ || ೧ ||

ತ್ರಿವಿಧಂ ಲಿಖಿತಂ ತತ್ರ ತಸ್ಯ ವಕ್ಷ್ಯಾಮಿ ಲಕ್ಷಣಂ |
ರಾಜಸಾಕ್ಷಿಕಮೇಕಂ ತು ದ್ವಿತೀಯಂ ತು ಸಸಾಕ್ಷಿಕಂ || ೨ ||

ಸ್ವಹಸ್ತಲಿಖಿತಂ ನಾಮ ತೃತೀಯಂ ಪರಿಕೀರ್ತಿತಂ |
ನಿಯುಕ್ತಕಾರ್ಯಸ್ಯ ಕೃತಂ ರಾಜಾಧಿಕರಣೇರಿತಂ || ೩ ||

ಮುನ್ನೂರ ಇಪ್ಪತ್ತಾರನೆಯ ಅಧ್ಯಾಯ.

೧-೪ ಹಂಸವು ಹೇಳುತ್ತದೆ:—ವ್ಯವಹಾರಕ್ಕೆ ನಿರ್ಣಾಯಕಗಳಾದ ಪ್ರಮಾಣಗಳು ಪೌರುಷ ಮತ್ತು ದಿವ್ಯವೆಂದು ಎರಡು ವಿಧವಾಗಿರುತ್ತವೆ. ಪೌರುಷ ಪ್ರಮಾಣವೂ ಸಹ ಲಿಖಿತ, ಸಾಕ್ಷಿಗಳೆಂದು ಎರಡು ವಿಧ. ಇವುಗಳಲ್ಲಿ ಲಿಖಿತ ಪ್ರಮಾಣವು ರಾಜಸಾಕ್ಷಿಕ, ಇತರ ಸಾಕ್ಷಿಕ, ಸ್ವಹಸ್ತಲಿಖಿತವೆಂದು ಮೂರು ವಿಧವಾಗುತ್ತದೆ ರಾಜನಿಂದ ಕೆಲಸಗಳಲ್ಲಿ ನಿಯೋಗ ಹೊಂದಿದವನಿಗೆ ರಾಜನ

ತದಧ್ಯಕ್ಷ್ಯೇಣ ಮತ್ಯೈರ್ಶ್ಚ ಸ್ವಹಸ್ತಪರಿಚಿಹ್ನಿತಂ ।
ತಲ್ಲೇಖ್ಯಂ ಕಥಿತಂ ಲೋಕೇ ರಾಜಸಾಕ್ಷಿಕಮುಚ್ಯತೆ ॥ ೪ ॥

ಯತ್ರ ಕ್ವಚನ ವಿಪ್ರೇಂದ್ರಾ ಲಿಖಿತಂ ಯೇನ ಕೇನ ಚಿತ್ ।
ಚಿಹ್ನಿತಂ ಯತ್ ಸ್ವಹಸ್ತೇನ ಸಾಕ್ಷಿಭಿಶ್ಚ ಗುಣಾನ್ವಿತೈಃ ॥ ೫ ॥

ದ್ವಾಭ್ಯಾಮೂರ್ಧ್ವಂ ತು ತಜ್ಜ್ಞೇಯಂ ಲಿಖಿತಂ ಚ ಸಸಾಕ್ಷಿಕಂ ।
ಸಾಕ್ಷೀ ಸ್ವಹಸ್ತಲಿಖಿತೇ ಭವೇದ್ವಾಪಿ ನ ವಾ ಭವೇತ್ ॥ ೬ ॥

ವಿನಾಪಿ ಸಾಕ್ಷಿಭಿಸ್ತಸ್ಯ ಪ್ರಾಮಾಣ್ಯಮುಪಪದ್ಯತೇ ।
ಸ್ವಹಸ್ತಲೇಖಿತಂ ಪತ್ರಂ ಬಲಾತ್ಕಾರೇಣ ಕಾರಿತಂ ॥ ೭ ॥

ಅಪ್ರಮಾಣಂ ಸರ್ವೇಷಾಂ ತಥೋಪಧಿಕೃತಂ ದ್ವಿಜಾಃ ।
ಮತ್ತೋನ್ಮತ್ತಕೃತಂ ಲೇಖ್ಯಮಸ್ವತಂತ್ರಕೃತಂ ಚ ಯತ್ ॥ ೮ ॥

ನ್ಯಾಯಾಲಯದಲ್ಲಿ ಹೇಳಿದ ಮಾತೇ ಪ್ರಮಾಣ, ರಾಜನ ಅಧ್ಯಕ್ಷತೆಯಲ್ಲಿ ಮನುಷ್ಯರು ಸ್ವಹಸ್ತದಿಂದ ಸಾಕ್ಷಿಹಾಕಿರುವ ಪತ್ರಗಳು ರಾಜಸಾಕ್ಷಿಕವೆಂದು ಹೇಳಲ್ಪಡುತ್ತವೆ.

೫-೮. ರಾಜನ ಪರೋಕ್ಷದಲ್ಲಿ ಎಲ್ಲಿಯೋ ಬರೆಯಲ್ಪಟ್ಟು ಗುಣವಂತರಾದ ಸಾಕ್ಷಿಗಳಿಂದ ಸ್ವಹಸ್ತಾಕ್ಷರ ಚಿಹ್ನೆ ಹೊಂದಿರಬೇಕು. ಆ ಸಾಕ್ಷಿಗಳೂ ಬರೆದವನಿಗಿಂತಲೂ ಬರೆಸಿಕೊಂಡವನಿಗಿಂತಲೂ ಬೇರೆಯಾಗಿರಬೇಕು. ಇಂತಹ ಲಿಖಿತ ಪ್ರಮಾಣವು ಸಸಾಕ್ಷಿಕವೆನಿಸುತ್ತದೆ. ಸ್ವಹಸ್ತಾಕ್ಷರದಿಂದಲೇ ಬರೆದಿರುವ ಪತ್ರಕ್ಕೆ ಸಾಕ್ಷಿಇರಲಿ, ಇಲ್ಲದಿರಲಿ, ಸಾಕ್ಷಿಗಳಿಲ್ಲದಿದ್ದರೂ ಅಂತಹ ಪತ್ರಕ್ಕೆ ಪ್ರಾಮಾಣ್ಯವುಂಟು ಇದೇ ಸ್ವಹಸ್ತಲಿಖಿತ, ಇದು ಬರೆದವನಿಗೆ ಇಚ್ಛೆಇಲ್ಲದೆ ಬಲಾತ್ಕಾರದಿಂದ ಬರೆಯಲ್ಪಟ್ಟು ಮೋಸದ ಸಾಕ್ಷ್ಯದಿಂದ ಕೂಡಿದ್ದಲ್ಲಿಯೂ, ಪ್ರಜ್ಞೆ ಇಲ್ಲದಿರುವವನಿಂದ ಬರೆಯಲ್ಪಟ್ಟಿದ್ದರೂ, ಸ್ವತ್ತಿನಲ್ಲಿ ಹಕ್ಕಿಲ್ಲದಿರುವವನಿಂದ ಬರೆಯಲ್ಪಟ್ಟಿದ್ದರೂ ಸಹ ಪ್ರಮಾಣವಲ್ಲ.

ಲೇಖ್ಯಂ ವಿನಾ ನಾಽಸ್ತಿ ಸಿದ್ಧಿಃ ಸ್ಥಾವರಸ್ಯ ತು ಕರ್ಹಿಚಿತ್ ।
ಭುಕ್ತಿಸ್ತತ್ರ ಪ್ರಮಾಣಂ ವಾ ಭವೇತ್ತ್ರಿಪುರುಷಾಗತಾ ॥ ೯ ॥

ಹಸ್ತೇನ ದ್ವಿಪದಂ ದೇಯಂ ನಾಮ್ನಾ ದದ್ಯಾಚ್ಚತುಷ್ಪದಂ ।
ಸ್ಥಾವರಾಣಾಂ ಚ ಸರ್ವೇಷಾಂ ಸಿದ್ಧಿರ್ಲೇಖ್ಯೇ ಪ್ರತಿಷ್ಠಿತಾ ॥ ೧೦ ॥

ದೇಶಾಚಾರಾದ್ವಿರುದ್ಧಂ ಯದ್ವ್ಯಕ್ತಾವಧಿಲಕ್ಷಣಂ ।
ತತ್ಪ್ರಮಾಣಂ ಸ್ಮೃತಂ ಲೇಖ್ಯಂ ವಿಲುಪ್ತಧನಮಕ್ಷಯಂ ॥ ೧೧ ॥

ಪ್ರಾಕ್ಪ್ರಸಾದಾಃ ಪ್ರದೀಯಂತೇ ಪಶ್ಚಾದ್ದ್ಯಾಪಿ ನ ಪಾರ್ಥಿವಾಃ ।
ದೇವದ್ವಿಜಾತಿವಿತ್ತೇಷು ನ ಸ್ಯಾತ್ಸ್ವಾಮೀ ನೃಪಃ ಕ್ವಚಿತ್ ॥ ೧೨ ॥

ಸಮೂಹಾರ್ಥೇ ನ ಭೋಗೋಽಸ್ತಿ ಲೇಖ್ಯಂ ತತ್ರಾಪಹಾರಕಂ ।
ಉಭಯೋರಪಿ ತತ್ರ ಸ್ಯಾದ್ಭುಕ್ತಂ ಯೇನ ಸ ವೈ ಪ್ರಭುಃ ॥ ೧೩ ॥

೯-೧೦. ಸ್ಥಿರಸ್ವತ್ತುಗಳ ಹಕ್ಕುದಾರಿ ವಿಷಯದಲ್ಲಿ ಸರಿಯಾದ ಲಿಖಿತ ಪ್ರಮಾಣವೇ ಸಾಧಕವಾಗುತ್ತದೆ. ಅಥವಾ ಮೂರು ತಲೆಗಳಿಂದಲೂ ತನಗೆ ಉಂಟಾಗಿರುವ ನ್ಯಾಯಸಿದ್ಧವಾದ ಅನುಭವವೂ ಪ್ರಮಾಣವಾಗುತ್ತದೆ. ಎರಡು ಕಾಲುಳ್ಳ ಪ್ರಾಣಿಗಳನು ಕೈಯಿಂದಲೇ ಎತ್ತಿಕೊಟ್ಟಲ್ಲಿಯೂ, ನಾಲ್ಕು ಕಾಲುಗಳುಳ್ಳ ಪ್ರಾಣಿಗಳನ್ನು ನಾಮೋಚ್ಚಾರಣೆಯಿಂದ ಕೊಟ್ಟಲ್ಲಿಯೂ ತೆಗೆದು ಕೊಂಡವನಿಗೆ ಅದರಿಂದಲೇ ಹಕ್ಕುದಾರಿಯು ಸಿದ್ಧವಾಗುತ್ತದೆ. ಸ್ಥಿರಸ್ವತ್ತಿನ ಹಕ್ಕುದಾರಿಯು ಮಾತ್ರ ಲಿಖಿತಪ್ರಮಾಣದಿಂದಲೇ ಸಿದ್ಧಿಸಬೇಕು.

೧೧-೧೩. ದೇಶಾಚಾರಕ್ಕೆ ವಿರುದ್ಧವಾಗದೆಯೂ, ವ್ಯಕ್ತಿಯ ಹಕ್ಕುದಾರಿಕೆಯ ಅವಧಿಗೆ ಮಿತಿಯಿಲ್ಲದೆಯೂ ಇರುವ, ಸ್ಥಿರಸ್ವತ್ತಿನ ಶಾಶ್ವತವಾದ ದಾನಾದಿಗಳಿಗೆ ಲಿಖಿತ ಪ್ರಮಾಣವೇ ಮುಖ್ಯ. ಆದರೆ ಇದು ಧನಸಂಬಂಧಿಯಾಗಿರಬಾರದು. ರಾಜರುಗಳು ಅನುಗ್ರಹರೂಪವಾದ ದಾನವನ್ನು ಪತ್ರಲೇಖಕ್ಕಿಂತ ಮೊದಲೇ ಮಾಡುತ್ತಾರೆ. ದೇವತೆಗಳ ಮತ್ತು ಬ್ರಾಹ್ಮಣರ ದ್ರವ್ಯದಲ್ಲಿ ದೊರೆಗೆ ಸ್ವಾಮಿತ್ವವಿಲ್ಲ. ಒಂದು ಸಮೂಹಕ್ಕಾಗಿ ಕೊಟ್ಟಿರುವ ಸ್ವತ್ತಿನಲ್ಲಿ ಒಬ್ಬನದೇ ಆದ ಅನುಭವವು ಪ್ರಮಾಣವಲ್ಲ. ಸಮೂಹಕ್ಕಾಗಿ ಉಂಟಾಗಿರುವ ಪತ್ರವೇ ಅದಕ್ಕೆ ಬಾಧಕವಾಗುತ್ತದೆ. ಇಬ್ಬರಿಗೂ ಅನುಭವವಿರುವ ಸ್ವತ್ತಿನಲ್ಲಿ ಅನುಭವದಾರನೂ ಸ್ವಾಮಿಯಾಗುತ್ತಾನೆ. ಬಹುಕಾಲ

ಚಿರಂತನಮವಿಜ್ಞಾತಂ ಭುಕ್ತಂ ಭೋಗಾನ್ನ ಚಾಲಯೇತ್ ।
ಏಕಾರ್ಹ ಲಿಖಿತೇ ತತ್ಸ್ಯಾತ್ಸಂಭೋಗೋ ಯಸ್ಯ ತಸ್ಯತು　　|| ೧೪ ||

ಅರ್ವಾಕ್ಕಾಲಿಕಲಬ್ಧಂ ತು ಲೇಖ್ಯೇನೈವ ವಿಶೋಧಯೇತ್ ।
ಮುದ್ರಾಶುದ್ಧಂ ಕ್ರಿಯಾಶುದ್ಧಂ ಪಾರಂಪರ್ಯಾನುಮೋದಿತಂ　　|| ೧೫ ||

ಅದೂಷಿತಂ ಚ ಸ್ಪಷ್ಟಂ ಚ ಸಿದ್ಧಿಮಾಪ್ನೋತಿ ನಾನ್ಯಥಾ ।
ಸ್ವವೇಶ್ಮಸ್ಥಿತೋ ರಾಜಾ ಆತ್ಮಾನಂ ತದನಂತರಂ　　|| ೧೬ ||

ಭಾಯಾದೇಯಪ್ರಮಾಣಂ ಚ ಸಹಸೀಮಾಪರಿಚ್ಛದೈಃ ।
ತತಸ್ತು ಲೇಖಯೇತ್ತತ್ರ ದಾನಚ್ಛೇದೋಪವರ್ಣನಂ　　|| ೧೭ ||

ತಲ್ಲೇಖ್ಯಂ ಸಿದ್ಧಿಮಾಪ್ನೋತಿ ಮುದ್ರಿತಂ ರಾಜಮುದ್ರಯಾ ।
ಮತಾಂತರೇ ತು ಲೇಖ್ಯಸ್ಯ ಶ್ರಾವಣಾಚ್ಛ್ರವಣೇ ತಥಾ　　|| ೧೮ ||

ದಿಂದಲೂ ನಡೆದು ಬಂದು ಮೂಲವು ತಿಳಿಯದಿರುವ ಸ್ವತ್ತಿನ ವಿಷಯಲ್ಲಿ ಅನುಭವವನ್ನು ಶಿಥಿಲಗೊಳಿಸಲು ಸಾಧ್ಯವೇ ಇಲ್ಲ. ಒಬ್ಬನಿಗಾಗಿಯೇ ಪತ್ರವು ಲಿಖಿತವಾಗಿದ್ದಲ್ಲಿ ಯಾವನು ಅನುಭವದಾರನೋ ಅವನೇ ಸ್ವಾಮಿಯಾಗುತ್ತಾನೆ.

೧೫-೧೭ ಇತ್ತೀಚಿನಕಾಲದಲ್ಲಿ ಹೊಂದಲಾಗಿರುವ ಸ್ವತ್ತಿನ ವಿಷಯದಲ್ಲಿ ಲಿಖಿತಪ್ರಮಾಣದಿಂದಲೇ ಸ್ವಾಮಿತ್ವವನ್ನು ನಿಶ್ಚಯಿಸಬೇಕು. ಇಂತಹ ಲಿಖಿತ ಪತ್ರವೂ ಸಹ ಮುದ್ರಾಶುದ್ಧ, ಕ್ರಿಯಾಶುದ್ಧ ಪರಂಪರೆಯಿಂದ ಅಂಗೀಕೃತವಾದ್ದು. ರದ್ದಾಗದಿರತಕ್ಕದ್ದು. ಸ್ಪಷ್ಟವಾಗಿರತಕ್ಕದ್ದು ಇವುಗಳೇ ಹಕ್ಕುದಾರಿಕೆಯ ಸಿದ್ಧಿಗೆ ಕಾರಣವಾಗುತ್ತವೆ. ಬೇರೆ ವಿಧವಾದವು ಪ್ರಮಾಣಗಳಲ್ಲ. ರಾಜನು ತನ್ನ ವೇಷದಲ್ಲಿದ್ದುಕೊಂಡು ತನ್ನನ್ನು ಮೊದಲು ಹೇಳಿಕೊಳ್ಳಬೇಕು. ಅನಂತರ ವಿಭಾಗವನ್ನೂ ವಿಭಕ್ತಸ್ಥಳಗಳ ಎಲ್ಲೆ ಕಟ್ಟುಗಳನ್ನೂ ಘೋಷಿಸಬೇಕು. ಅನಂತರ ದಾನಕ್ಕೆ ವಿಷಯವಾದ ಭಿನ್ನಭಿನ್ನ ಪ್ರದೇಶಗಳನ್ನು ಲಿಖಿತಮಾಡಿಸಬೇಕು. ಅಂತಹ ಲಿಖಿತ ಪ್ರಮಾಣವು ರಾಜಮುದ್ರೆಯಿಂದ ಮುದ್ರಿತವಾದಲ್ಲಿ ಪ್ರಮಾಣವಾಗುತ್ತದೆ.

೧೮-೨೨. ಅನೇಕ ವ್ಯಕ್ತಿಗಳಿಗಾಗಿ ಬರೆಯಲಾದ ಪತ್ರವು ಅದರ ಶ್ರವಣಮಾತ್ರದಿಂದ ಒಬ್ಬನಿಗೆ ಪ್ರಮಾಣವಾಗಲಾರದು ಏಕೆಂದರೆ ಮೂಲಪತ್ರವು ಒಬ್ಬನಲ್ಲೇ

ನೈವ ಸಿದ್ಧಿರ್ವಿನಿರ್ದಿಷ್ಟಾ ಭಾವನಾನ್ಯಾ ನ ಚೇದ್ಭವೇತ್ ।
ಸ್ವಹಸ್ತಲಿಖಿತಂ ಪತ್ರಂ ನಿಹ್ನುಕೇ ತು ವಿಭಾವಯೇತ್ ॥ ೧೯ ॥

ವರ್ಣೈಶ್ಚ ತತ್ಕೃತೈಶ್ಚಿಹ್ನೈಃ ಪ್ರಾಪ್ತ್ಯೈರೇವ ಚ ಯುಕ್ತಿಭಿಃ ।
ಯತ್ರರ್ಣಲೇಖಕೋ ವಾಪಿ ಸಾಕ್ಷೀ ವಾಪಿ ಮೃತೋ ಭವೇತ್ ॥ ೨೦ ॥

ಲಿಖಿತಾಂತೇ ಪ್ರವಿಷ್ಟೇ ತು ಧನಿಃ ಲೇಖ್ಯಂತು ಪಾಟಯೇತ್ ।
ಅಸಮಗ್ರೇ ಪ್ರವಿಷ್ಟೇ ತು ಲೇಖ್ಯೇ ದೂರಗತೇ ತಥಾ ॥ ೨೧ ॥

ಧನಿಕಸ್ಯ ಧನೀ ದದ್ಯಾಲ್ಲಿಖಿತಂ ಸ್ವಮಥಾಪರಂ ।
ದೈವದೋಷನಿವಿಷ್ಟಂ ತು ಲೇಖ್ಯಂ ಲೇಖ್ಯಂ ತು ಕಾರಯೇತ್ ॥ ೨೨ ॥

ಅನ್ಯಮೇವಾಧಮರ್ಣಸ್ತು ಲೇಖ್ಯಂ ಯತ್ ಸ್ಮರ್ಯತೇ ಯದಿ ।
ಸಮುದ್ರೇ ತು ಯಥಾ ಲೇಖ್ಯೇ ಮೃತಾಃ ಸರ್ವೇ ತು ತತ್ಸ್ಥಿತಾಃ ॥ ೨೩ ॥

ಲಿಖಿತಂ ತತ್ಪ್ರಮಾಣಂ ತು ಮೃತೇಷ್ವಪಿ ಹಿ ಸಾಕ್ಷಿಷು ।
ಸೋಪಧ್ಯಂ ಯದ್ಭವೇಲ್ಲೇಖ್ಯಂ ದಿವ್ಯಾದ್ಯೈಸ್ತತ್ಪ್ರಸಾಧಯೇತ್ ॥ ೨೪ ॥

ಬಚ್ಚಿಟ್ಟಿರಬಹುದು. ಇದನ್ನು ನಕಲಿನಲ್ಲಿ ವರ್ಣಕ್ರಮದಿಂದಲೂ, ಮುದ್ರಾದಿ ಚಿಹ್ನೆಗಳಿಂದಲೂ, ಸಾಧಕವಾದ ಒಕ್ಕಣೆಯಿಂದಲೂ ಮೇಲಿನ ಊಹೆಗೆ ಅವಕಾಶವಿದೆ ಎಂದೂ ಕೆಲವರು ಹೇಳುತ್ತಾರೆ. ಯಾವ ಅರ್ಥವ್ಯವಹಾರದ ಪತ್ರದಲ್ಲಿ ಸಾಲವನ್ನು ಬರೆದವನೂ, ಸಾಕ್ಷಿಗಳೂ ಮೃತರಾಗುತ್ತಾರೋ, ಪತ್ರದ ವಾಯಿದೆಯೂ ಮುಗಿದಿರುವುದೋ ಅಂತಹ ಪತ್ರವನ್ನು ಹಣವನ್ನು ಕೊಟ್ಟ ಧನಿಕನು ಹರಿದುಹಾಕಬೇಕು. ವಾಯಿದೆಯು ಮುಗಿಯದಿರುವ ಇಂತಹ ಪತ್ರವು ದೂರದೇಶದಲ್ಲಿ ಸೇರಿಹೋಗಿದ್ದಲ್ಲಿ ಧನಿಕನಿಗೆ ಬೇರೆ ಪತ್ರವನ್ನು ಬರೆದುಕೊಡಬೇಕು. ದೈವದೋಷದಿಂದ ಪತ್ರವು ನಾಶವಾಗಿದ್ದಲ್ಲಿ ಹಣವನ್ನು ಸಾಲಪಡೆದುಕೊಂಡಿದ್ದವರಿಗೆ ಅಂತಹ ಪತ್ರದ ಜ್ಞಾಪಕವಿದ್ದಲ್ಲಿ ಬೇರೆ ಪತ್ರವನ್ನು ಬರೆದುಕೊಡಬೇಕು ಪತ್ರದಲ್ಲಿರುವ ಸಾಕ್ಷಿಗಳೆಲ್ಲರೂ ಸಮುದ್ರದಲ್ಲಿ ಮೃತರಾಗಿದ್ದಲ್ಲಿ ಅಂತಹ ಲಿಖಿತವು ಸಾಕ್ಷಿಗಳಿಲ್ಲದಿದ್ದಲ್ಲಿಯೂ ಪ್ರಮಾಣವಾಗುತ್ತದೆ.

೨೩–೨೪. ಲಿಖಿತ ಪ್ರಮಾಣವು ಮೋಸದಿಂದ ಕೂಡಿದೆ ಎಂದು ತಿಳಿದ ಬಂದಲ್ಲಿ ಮುಂದೆ ಹೇಳುವ ದಿವ್ಯಕ್ರಮದಿಂದ ಅದನ್ನು ಶೋಧಿಸಬೇಕು. ವ್ಯವಹಾರ

ಬಲಾತ್ಕಾರಬಲ್ಯೈರ್ಲೇಖ್ಯೈಃ ಸತ್ಯೈಶ್ಚೇಚ್ಛ್ರವಣಾದ್ಭವೇತ್ ।
ಜ್ಞಾಪಿತೇನಾಸ್ಯ ಸಿದ್ಧಿಃ ಸ್ಯಾತ್ಸಿದ್ಧಿಸ್ತಸ್ಮಾದ್ಯಥಾ ಸ್ಮೃತಾ ।
ಸ್ವೈತಾಮಹಾನಾಂ ರಿಕ್ಥಾನಾಂ ಪ್ರಭುಃ ಪೌತ್ರೋಽಪಿಗೀಯತೇ ॥ ೨೫ ॥

ಯೇ ಕೂಟಕಾರಾ ವಸುಧಾಧಿಪೇನ
ಭೃಶಂ ವಿನೇಯಾಸ್ತ್ರಿದಶೇಪ್ಸುನಾ ವೈ ।
ತೇ ಕಂಟಕಾಃ ಸರ್ವಜನಸ್ಯ ವಿಪ್ರಾ
ಸ್ತೇಷಾಂ ನಿಷೇದ್ಧಾ ನೃಪತಿರ್ಭವೇದ್ವೈ ॥ ೨೬ ॥

**ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಲೇಖ್ಯಲಕ್ಷಣ
ವರ್ಣನೋ ನಾಮ
ಷಡ್ವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ**

ವಿಷಯವು ಸತ್ಯವಾದುದೆಂದು ಕೇಳಿಬರುವುದಾದಲ್ಲಿ ಬಲಾತ್ಕಾರದಿಂದ ಉಂಟಾದ ಪತ್ರಗಳ ವಿಷಯದಲ್ಲಿಯೂ ಸತ್ಯಪರೀಕ್ಷೆಗೆ ಈ ದಿವ್ಯಕ್ರಮವೇ ಸಾಧಕ, ಜ್ಞಾಪಕ ಕೊಟ್ಟರೂ ಸತ್ಯಾಂಶವನ್ನು ಅಂಗೀಕರಿಸದಿದ್ದಲ್ಲಿ ಆಗಲೂ ಇದೇ ಪ್ರಮಾಣ. ತಾತನ ದ್ರವ್ಯಕ್ಕೆಲ್ಲಾ ಮಮ್ಮಗನೇ ಸ್ವಾಮಿಯಾಗುತ್ತಾನೆ. ವ್ಯವಹಾರ ವಿಷಯದಲ್ಲಿ ಕೃತ್ರಿಮ ನಡೆಸುವವರನ್ನು ಧೊರೆಯು ದಂಡಿಸಬೇಕು. ಇದರಿಂದ ಧೊರೆಗೆ ಸ್ವರ್ಗಪ್ರಾಪ್ತಿ ಯುಂಡು. ಇಂತಹ ವಂಚಕರು ಎಲ್ಲರಿಗೂ ಕಂಟಕಪ್ರಾಯರು. ಇವರನ್ನು ರಾಜನು ನಿಗ್ರಹಿಸಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಲೇಖ್ಯಲಕ್ಷಣವರ್ಣನವೆಂಬ ಮುನ್ನೂರ ಇಪ್ಪತ್ತಾರನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಸಪ್ತವಿಂಶತ್ಯಧಿಕ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಏಕಾದಶವಿಧಃ ಸಾಕ್ಷೀ ಶಾಸ್ತ್ರದೃಷ್ಟೋ ಮನೀಷಿಭಿಃ ।
ಕೃತಃ ಪಂಚವಿಧಸ್ತತ್ರ ಷಡ್ವಿಧೋಽಕೃತ ಉಚ್ಯತೇ || ೧ ||

ಲಿಖಿತಃ ಸ್ಮಾರಿತಶ್ಚೈವ ಯದೃಚ್ಛಾಭಿಜ್ಞ ಏವ ಚ ।
ಗೂಢಶ್ಚೋತ್ತರಸಾಕ್ಷೀ ಚ ಕೃತಃ ಪಂಚವಿಧಃ ಸ್ಮೃತಃ || ೨ ||

ಗ್ರಾಮಶ್ಚ ಪ್ರಾಡ್ವಿವಾಕಶ್ಚ ರಾಜಾ ಚ ವ್ಯವಹಾರಿಣಾಂ ।
ಕಾರ್ಯೇಷ್ವಭ್ಯಂತರೋ ಯಃ ಸ್ಯಾದರ್ಥಿನಾ ಪ್ರಹಿತಃ ಸದಾ || ೩ ||

ಮುನ್ನೂರ ಇಪ್ಪತ್ತೇಳನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ:—ಸಾಕ್ಷಿಗಳು ಹನ್ನೊಂದು ವಿಧವಾಗಿರುವರೆಂದು ಶಾಸ್ತ್ರದಿಂದ ಪ್ರಾಜ್ಞರು ನಿರ್ಣಯಮಾಡಿರುವರು. ಕೃತವೆಂಬ ಸಾಕ್ಷಿಗಳು ಐದು ವಿಧ. ಅಕೃತ ಸಾಕ್ಷಿಗಳು ಆರು ವಿಧ. ಇವರಲ್ಲಿ ಪತ್ರದಲ್ಲಿ ಸಾಕ್ಷಿಹಾಕಿರುವವನು, ಸ್ಮರಣೆ ಉಂಟುಮಾಡತಕ್ಕವನು, ಉದಾಸೀನತೆಯಿಂದ ವಿಷಯ ತಿಳಿದಿರುವವನು, ಗುಟ್ಟಾಗಿ ತಿಳಿದಿರುವವನು, ಕೊನೆಯಲ್ಲಿ ವ್ಯವಹಾರ ವಿಷಯವನ್ನು ನೋಡಿದವನು, ಈ ಐವರೂ ಕೃತರೆಂಬ ಪ್ರಭೇದಕ್ಕೆ ಸೇರಿದವರು. ಗ್ರಾಮ, ನ್ಯಾಯಾಧಿಪತಿ, ರಾಜ, ಕಾರ್ಯದಲ್ಲಿ ಸಹಾಯಕಾರಿಯಾಗಿ ಒಳಗೆ ಸೇರಿರುವವನು, ಕಾರ್ಯಾರ್ಥಿಯಿಂದ ಕಳುಹಿಸಲ್ಪಟ್ಟವನು, ಕುಲವಿವಾದದಲ್ಲಿ ಆಕುಲಸ್ಥರು ಈ ಆರುವಿಧ ಸಾಕ್ಷಿಗಳೂ

ಕುಲಂ ಕುಲವಿವಾದೇಷು ಷಡ್ವಿಧಸ್ತ್ವಕೃತಃ ಸ್ಮೃತಃ ।
ದ್ವಯೋರ್ವಿವದತೋರರ್ಥೇ ದ್ವಯೋಃ ಸತ್ಸು ಚ ಸಾಕ್ಷಿಷು ॥ ೪ ॥

ಪೂರ್ವಪಕ್ಷೋ ಭವೇದ್ಯಸ್ಯ ಭವೇಯುಸ್ತಸ್ಯ ಸಾಕ್ಷಿಣಃ ।
ಅಧಾರ್ಯಃ ಪೂರ್ವಪಕ್ಷಸ್ಯ ಯಸ್ಮಿನ್ನರ್ಥವಶಾದ್ಭವೇತ್ ॥ ೫ ॥

ವಿವಾದೇ ಸಾಕ್ಷಿಣಸ್ತತ್ರ ಪ್ರಷ್ಟವ್ಯಾಃ ಪ್ರತಿವಾದಿನಃ ।
ನ ಪರೇಣ ಸಮುದ್ದಿಷ್ಟಮುಪೇಯಾತ್ಸಾಕ್ಷಿಣಂ ಪ್ರತಿ ॥ ೬ ॥

ಭೇದಯೇತ್ತು ನವಾನ್ಯೋನ್ಯಂ ಹೀಯಕ್ತೇವಂ ಸಮಾಚರೇತ್ ।
ಸಾಕ್ಷಿದ್ವಿಷ್ಟೋ ಯದಿ ಪ್ರೇಯಾದ್ಗಚ್ಛೇದ್ವಾಪಿ ದಿಗಂತರಂ ॥ ೭ ॥

ತಚ್ಚೋಭಯೋಃ ಪ್ರಮಾಣಂ ತು ಪ್ರಮಾಣೇ ಹ್ಯಂತರಾ ಕ್ರಿಯಾ ।
ಅನಿರ್ದಿಷ್ಟಸ್ತು ಸಾಕ್ಷಿತ್ವೇ ಸ್ವಯಮೇವೈತ್ಯ ಯೋ ವದೇತ್ ॥ ೮ ॥

ಅಕೃತವೆಂಬ ಭೇದಕ್ಕೆ ಸೇರಿದವರು. ಎರಡು ಪಕ್ಷದವರೂ ವಿವಾದಮಾಡುತ್ತಿರುವಾಗ ಸಾಕ್ಷಿಗಳೂ ಸಿದ್ಧವಾಗಿರುವಾಗ ಯಾವನ ಮೇಲೆ ಆಕ್ಷೇಪಣೆ ಬರುತ್ತದೆಯೋ ಅವನಿಗೆ ಸಾಕ್ಷಿಗಳ ಅವಶ್ಯಕತೆ ಯಾವ ವಿವಾದದಲ್ಲಿ ಸಮರ್ಥನೆಯಿಂದ ಆಕ್ಷೇಪಣೆಯೂ ಧರಿಸಲು ವಾದಿಗೆ ಶಕ್ಯವಾಗುತ್ತದೆಯೋ ಅಂತಹ ಸಂದರ್ಭದಲ್ಲಿ ಪ್ರತಿವಾದಿಯ ಸಾಕ್ಷಿಗಳ ಅವಶ್ಯಕತೆಯುಂಟಾಗುತ್ತದೆ. ಒಂದು ಪಕ್ಷದಲ್ಲಿ ಇತರರಿಂದ ಸಾಕ್ಷಿಗಾಗಿ ನಿರ್ದಿಷ್ಟನಾಗಿರುವವನನ್ನು ಮತ್ತೊಂದು ಪಕ್ಷದವನೂ ಸಾಕ್ಷಿಗೆ ಅಪೇಕ್ಷಿಸಬಾರದು.

೬–೧೦. ಸಾಕ್ಷಿಗಾಗಿ ಬಂದಿರುವವರಲ್ಲಿ ಒಬ್ಬೊಬ್ಬರು ಪರಸ್ಪರ ಪಿತೂರಿ ನಡೆಸಿ ಭೇದಬುದ್ಧಿ ತರಬಾರದು. ವ್ಯವಹಾರದಲ್ಲಿರುವ ಯಾವ ಪಕ್ಷದವನೇ ಆಗಲಿ ತನ್ನ ಸಾಕ್ಷಿಗಳೊಡನೆ ದ್ವೇಷಹೊಂದಿದಲ್ಲಿ ಅವನು ವ್ಯವಹಾರವನ್ನು ಬಿಟ್ಟು ದಿಕ್ಕುಗಳ ಕಡೆಗೆ ಹೊರಟುಹೋಗಬೇಕು. ಇದು ಪ್ರಮಾಣದಲ್ಲಿರುವ ಒಳಗುಟ್ಟಾದ್ದರಿಂದ ಇಬ್ಬರಿಗೂ ಸಮ. ಸಾಕ್ಷ್ಯಕಾರ್ಯದಲ್ಲಿ ನಿರ್ದಿಷ್ಟನಾಗದಿರುವ ಮಧ್ಯಸ್ಥನು ತಾನಾಗಿ ಬಂದು ಸಾಕ್ಷ್ಯ ಹೇಳಿದ್ದೇ ಆದರೆ ಅವನು ಸಾಕ್ಷಿಯಲ್ಲ. ಅವನಿಗೆ ಸೂಚೀ

ಶೂಚೀತ್ಯುಕ್ತಃ ಸ ಸಾಕ್ಷೀ ತು ನ ಸ ಸಾಕ್ಷಿತ್ವಮರ್ಹತಿ ।
ನ ಸಾಕ್ಷೀ ನೃಪತಿಃ ಕಾರ್ಯೋ ನ ಕಾರುಕಕುಶೀಲವೌ ॥ ೯ ॥

ನ ಶ್ರೋತ್ರಿಯೋ ನ ಲಿಂಗಸ್ಥೋ ನ ಸರ್ವೇಭ್ಯೋ ವಿನಿರ್ಗತಃ ।
ನ ವ್ಯಾಧಿತೋ ನ ವಕ್ತವ್ಯೋ ನ ದಸ್ಯುರ್ನ ವಿಕರ್ಮಕೃತ್ ॥ ೧೦ ॥

ನ ವೃದ್ಧೋ ನ ಶಿಶುರ್ನೈಕೋ ನಾಂಧೋ ನ ವಿಕಲೇಂದ್ರಿಯಃ ।
ನಾರ್ತೋ ನ ಮತ್ತೋ ನೋನ್ಮತ್ತೋ ನ ಕ್ಷುತ್ತೃಷ್ಣೋಪಪೀಡಿತಃ ॥ ೧೧ ॥

ನ ಶ್ರಮಾರ್ತೋ ನ ಕಾಮಾರ್ತೋ ನ ಕ್ರುದ್ಧೋ ನಾಪಿ ತಸ್ಕರಃ ।
ನಾರ್ಥಸಂಬಂಧಿನೋಽಪ್ತೋ ನ ಹಾಯನವಿಚಾರಿಣಃ ॥ ೧೨ ॥

ನ ದೃಷ್ಟದೋಷಾಃ ಕರ್ತವ್ಯಾ ನ ವ್ಯಾಧ್ಯಾರ್ತಾ ನ ದೂಷಿತಾಃ ।
ಸ್ತ್ರೀಣಾಂ ಸಾಕ್ಷ್ಯಂ ಸ್ತ್ರಿಯಃ ಕುರ್ಯುರ್ದ್ವಿಜಾನಾಂ ಸದೃಶಾದ್ವಿಜಾಃ ॥

(ಅಪ್ರೂವರ್) ಎಂದು ಶಾಸ್ತ್ರನಿರ್ದೇಶವಿದೆ ಧೊರೆಯನ್ನೇ ಆಗಲಿ, ಶಿಲ್ಪಿ, ಗಾಯಕ, ಶ್ರೋತ್ರಿಯ, ಸನ್ಯಾಸಿ ಇವರನ್ನೇ ಆಗಲಿ, ಸಾಕ್ಷಿಗಾಗಿ ಇಡಬಾರದು. ಇವರಲ್ಲಿ ಸನ್ಯಾಸಿಯಾದವನು ಎಲ್ಲಾ ಲೋಕವ್ಯವಹಾರವನ್ನೂ ಬಿಟ್ಟವನಷ್ಟೆ. ವ್ಯಾಧಿಗ್ರಸ್ತನನ್ನೂ, ಕಳ್ಳನನ್ನೂ, ಹೀನಕೆಲಸ ಮಾಡುವವನನ್ನೂ ಸಾಕ್ಷಿಗಾಗಿ ಕರೆಯಬಾರದು.

೧೧-೧೩. ಹೀಗೆಯೇ ವೃದ್ಧ, ಬಾಲ, ಕುರುಡ, ಅಂಗವಿಕಲ, ದುಃಖಿತ, (ಮದ್ಯಾದಿಪಾನದಿಂದ) ಮತ್ತ, ಹುಚ್ಚ, ಹಸಿವು ಬಾಯಾರಿಕೆಗಳಿಂದ ಪೀಡಿತ, ದಣಿದಿರುವವನು, ಕಾಮುಕ, ಕೋಪಿ, ಕಳ್ಳ, ವಾದಿ ಪ್ರತಿವಾದಿಯರ ಆಪ್ತಮಿತ್ರ, ಜ್ಯೋತಿಷಿಕ, (ಹಿಂದೆ ಕೆಟ್ಟಕೆಲಸಮಾಡಿರುವ) ಕೇಡಿ, ಪ್ರಬಲ ರೋಗದಿಂದ ವ್ಯಥಿತ, ಸದ್ವ್ಯವಹಾರದಿಂದ ಬಾಹ್ಯನಾದವನು, ಇವರನ್ನೂ ಸಾಕ್ಷಿಗಾಗಿ ಕರೆಯಬಾರದು. ಸ್ತ್ರೀಯರ ಸಾಕ್ಷ್ಯವನ್ನೂ ಸ್ತ್ರೀಯರೇ ಹೊಂದಬೇಕು. ಬ್ರಾಹ್ಮಣರ ಸಾಕ್ಷ್ಯವನ್ನು ಸದೃಶರಾದ ಬ್ರಾಹ್ಮಣರೇ ಹೊಂದಬೇಕು. ಸಾಧು ಶೂದ್ರರಿಗೆ ಶೂದ್ರರೂ, ಇತರ ಸಾಮಾನ್ಯ ಜನಕ್ಕೆ ಸಾಮಾನ್ಯ ಜನರೂ ಸಾಕ್ಷಿಗಾಗಿ ನಿಲ್ಲಬೇಕು.

ಶೂದ್ರಾಶ್ಚ ಸಾಧುಶೂದ್ರಾಣಾಂ ಮರ್ತ್ಯಾನಾಂ ಮರ್ತ್ಯಯೋನಯಃ ।
ಅನುಭಾವೀ ತು ಯಃ ಕಶ್ಚಿತ್ಕುರ್ಯಾತ್ಸಾಕ್ಷ್ಯಂ ವಿವಾದಿನಾಂ ॥ ೧೪ ॥

ಅಂತರ್ವೇಶ್ಮನ್ಯರಣ್ಯೇ ವಾ ಶರೀರಸ್ಯ ತಥಾತ್ಯಯೇ ।
ಸ್ತ್ರಿಯೋಽಪಿ ಸಂಭವೇ ಕಾರ್ಯ ಬಾಲೇನ ಸ್ಥವಿರೇಣ ವಾ ॥ ೧೫ ॥

ಶಿಷ್ಯೇಣ ಬಂಧುನಾ ವಾಪಿ ದಾಸೇನ ಭೃತಕೇನ ವಾ ।
ಬಾಲವೃದ್ಧಾತುರಾಣಾಂ ತು ಸಾಕ್ಷ್ಯೇ ತು ವದತಾಂ ಮೃಷಾ ॥ ೧೬ ॥

ಜಾನೀಯಾದಧಿಕಾಂ ವಾಚಮುತ್ಸಿಕ್ತಮನಸಾಂ ತಥಾ ।
ಗೃಹಿಣಃ ಪುತ್ರಿಣೋ ಮೌಲಾಃ ಶೂದ್ರಾ ವಿಟ್ ಕ್ಷತ್ರಿಯೋನಯಃ ॥ ೧೭ ॥

ಅತ್ಯುಕ್ತಾಃ ಸಾಕ್ಷ್ಯಮರ್ಹಂತಿ ನಯೇ ಕೂಟಧನಾಪದಿ ।
ಆಪ್ತಾಃ ಸರ್ವೇಷು ವರ್ಣೇಷು ಕಾರ್ಯಾಃ ಕಾರ್ಯೇಷು ಸಾಕ್ಷಿಣಃ ॥ ೧೮ ॥

ಬಹುತ್ವೇ ಪರಿಗೃಹ್ಣೀಯಾತ್ಸಾಕ್ಷಿತ್ವೇ ವೇತನಾಧಿಪಂ ।
ಸಮೇಷು ತು ಗುಣೋತ್ಕೃಷ್ಟಂ ಗುಣಿತ್ವೇ ವೈ ದ್ವಿಜೋತ್ತಮಾನ್ ॥ ೧೯ ॥

೧೪-೧೬. ವಾದಿ ಪ್ರತಿವಾದಿಗಳ ಮಧ್ಯದಲ್ಲಿ ಸತ್ಯಾಂಶದ ಅನುಭವವುಳ್ಳ ಮಧ್ಯಸ್ಥನೊಬ್ಬನು ಸಾಕ್ಷಿ ನುಡಿಯುವ ಸಂಭವವಿದ್ದಲ್ಲಿ ಅಂತಹವನನ್ನೂ, ಸ್ತ್ರೀಯುಂ ಪನ್ನೂ, ಬಾಲಕನನ್ನೂ, ವೃದ್ಧನನ್ನೂ, ಶಿಷ್ಯ, ಬಂಧು, ಭೃತ್ಯ ಇವರನ್ನೂ ಸಹ ಮನೆಯೊಳಗೆ ಅಥವಾ ಅರಣ್ಯದಲ್ಲಿ ನಡೆಸಲಾದ ಕೊಲೆಯ ವ್ಯವಹಾರಗಳಲ್ಲಿ ಸಾಕ್ಷಿಗಳನ್ನಾಗಿ ಸ್ವೀಕರಿಸಬಹುದು. ಇಂತಹ ಸಂದರ್ಭದಲ್ಲಿ ಬಾಲ, ವೃದ್ಧ, ವ್ಯಾಧಿಗ್ರಸ್ತರ ಸಾಕ್ಷ್ಯದಲ್ಲಿ ಸುಳ್ಳಾದ ಅಂಶವನ್ನೂ, ಅಧಿಕೋಕ್ತಿಯನ್ನೂ, ಉದ್ರಿಕ್ತಮನಸ್ಕರ ವಾಗ್ದೋಷವನ್ನೂ ಸೂಕ್ಷ್ಮದೃಷ್ಟಿಯಿಂದ ತಿಳಿಯಬೇಕು.

೧೭-೨೦ ಮೋಸದಿಂದ ಧನವನ್ನು ಅಪಹರಿಸಿದ ವ್ಯವಹಾರದಲ್ಲಿ ಪುತ್ರವಂತರಾದ ಗೃಹಸ್ಥರು, ಹಳಬರಾದ ಶೂದ್ರರು, ಕ್ಷತ್ರಿಯ ವೈಶ್ಯರು, ಇವರು ಹೆಚ್ಚು ಮಾತನಾಡುವವರಾದರೂ ಸಾಕ್ಷಿಹೇಳಲು ಅರ್ಹರಾಗುತ್ತಾರೆ. ಎಲ್ಲಾ ವರ್ಣದವರೂ ತಮಗೆ ಆಪ್ತರಾದವರನ್ನೇ ಸಾಕ್ಷ್ಯಕ್ಕಾಗಿ ಕೋರಬೇಕು. ಸಾಕ್ಷಿಗಳ ಸಂಖ್ಯೆಯು ಹೆಚ್ಚಾಗಿದ್ದಲ್ಲಿ ಅವರಲ್ಲಿ ಹೆಚ್ಚಾಗಿ ವೇತನ ಪಡೆಯುವವನನ್ನೂ, ವೇತನದಲ್ಲಿಯೂ

ಸಮಕ್ಷದರ್ಶನಾತ್ಸಾಕ್ಷ್ಯಂ ಶ್ರವಣಾಚ್ಚೈವ ಸಿಧ್ಯತಿ ।
ತತ್ರ ಸತ್ಯಂ ಬ್ರುವನ್ಸಾಕ್ಷೀ ಧರ್ಮಾರ್ಥಾಭ್ಯಾಂ ನಹೀಯತೇ ॥ ೨೦ ॥

ಸಾಕ್ಷೀ ದೃಷ್ಟಶ್ರುತಾದನ್ಯದ್ವಿಬ್ರುವನ್ನರಕಂ ವ್ರಜೇತ್ ।
ಪೃಷ್ಟಾನಿ ಬದ್ಧೋಽಪಿ ವದೇದ್ಯಥಾ ದೃಷ್ಟಂ ಯಥಾಶ್ರುತಂ ॥ ೨೦ ॥

ಏಕೋ ಲುಬ್ಧಸ್ತ್ವಸಾಕ್ಷೀ ಸ್ಯಾದ್ಬಹವೋಽಪಿ ನ ವಾ ಕ್ವಚಿತ್ ।
ಸ್ವಭಾವೇನೈವ ಯದ್ಬ್ರೂಯುಸ್ತದ್ಗ್ರಾಹ್ಯಂ ವ್ಯಾವಹಾರಿಕಂ ॥ ೨೨ ॥

ನ ಜಾತು ಸಾಕ್ಷಿಣಃ ಪ್ರಾಪ್ತಾನರ್ಥಿ ಪ್ರತ್ಯರ್ಥಿಸಂನಿಧೌ ।
ಪ್ರಾಡ್ವಿವಾಕೋ ನಿಯುಂಜೀತ ವಿಧಿನಾನೇನ ಸಾಂತ್ವಯನ್ ॥ ೨೩ ॥

ಸಮವಾಗಿದ್ದಲ್ಲಿ ಗುಣೋತ್ಕರ್ಷದೃಷ್ಟಿಯಿಂದಲೂ, ಎಲ್ಲರೂ ಗುಣಿಗಳಾಗಿದ್ದಲ್ಲಿ ಬ್ರಾಹ್ಮಣಶ್ರೇಷ್ಠರನ್ನೂ ಸಾಕ್ಷಿಗಾಗಿ ಆರಿಸಿಕೊಳ್ಳಬೇಕು. ಸಾಕ್ಷ್ಯವು ಘಟನೆಗಳನ್ನು ಕಣ್ಣಿನಿಂದ ನೋಡಿದವನಿಗೂ, ಕೇಳಿದವನಿಗೂ ಸಹ ಸಿದ್ಧಿಸುತ್ತದೆ. ಸತ್ಯವಾದ ಅಂಶವನ್ನು ಹೇಳುವ ಸಾಕ್ಷಿಯು ಧರ್ಮಾರ್ಥಗಳಿಂದ ಹೀನನಾಗುವುದಿಲ್ಲ

೨೧-೨೨. ಸಾಕ್ಷಿಯಾದವನು ತಾನು ಕಾಣದ ಮತ್ತು ಕೇಳದ ವಿಚಾರವನ್ನು ನುಡಿದದ್ದಾದರೆ ಅವನು ನರಕ ಹೊಂದುತ್ತಾನೆ. ಬಂಧಿತನಾಗಿರುವವನೂ ಸಹ ಕೇಳಿದ ಪ್ರಶ್ನೆಗೆ ತಾನು ಕಂಡ ಮತ್ತು ಕೇಳಿದ ವಿಷಯದಲ್ಲಿ ಉತ್ತರ ಹೇಳಲೇಬೇಕು ಯಾವನೋ ಒಬ್ಬ ಲೋಭದಿಂದ ಸಾಕ್ಷ್ಯವನ್ನು ನಿರ್ವಹಿಸದೆ ಇರಬಹುದು. ಅನೇಕರು ಹೀಗೆ : ಎಲ್ಲಿಯೂ ಇರಲಾರರು. ಸಾಕ್ಷಿಗಳು ಸ್ವಾಭಾವಿಕ ಸ್ಥಿತಿಯಿಂದ ಏನು ಹೇಳುತ್ತಾರೆಯೋ ಅದರಲ್ಲಿ ವ್ಯವಹಾರಕ್ಕೆ ತಕ್ಕ ಅಂಶವನ್ನು ಗ್ರಹಿಸಬೇಕು.

೨೩-೨೫. ವಾದಿಪ್ರತಿವಾದಿಗಳ ಸಮಕ್ಷದಲ್ಲಿ ಬಂದಿರುವ ಸಾಕ್ಷಿಗಳನ್ನು ನ್ಯಾಯಾಧಿಪತಿಯಾದವನು ಯಾವ ನಿಯೋಗವನ್ನೂ ಹಾಕಿ ನಿರ್ಬಂಧಿಸಕೂಡದು ಸಾಕ್ಷಿನುಡಿಯುವುದಕ್ಕೆ ಮೊದಲು ಈ ರೀತಿ ಸಮಾಧಾನಗೊಳಿಸಿ ಕೇಳಬೇಕು

ಯತ್ತಯೋರನಯೋರ್ವೇತ್ಥ ಕಾರ್ಯೇಽಸ್ಮಿಂಶ್ಚೇಷ್ಟಿತೇಽಪಿ ವಾ ।
ತದ್ ಬ್ರೂತ ಸರ್ವಂ ಸತ್ಯೇನ ಯುಷ್ಮಾಕಂ ಹ್ಯತ್ರ ಸಾಕ್ಷಿತಂ ॥ ೨೪ ॥

ದೇವಬ್ರಾಹ್ಮಣಸಾನ್ನಿಧ್ಯೇ ಸಾಕ್ಷ್ಯಂ ಪೃಚ್ಛೇತ್ತತೋ ದ್ವಿಜಾಃ ।
ಉದಙ್ಮುಖಃ ಪ್ರಾಙ್ಮುಖೋ ವಾ ಪೂರ್ವಾಹ್ಣೇ ವೈ ಶುಚಿಃ ಶುಚೀನ್॥ ೨೫ ॥

ಬ್ರೂಹೀತಿ ಬ್ರಾಹ್ಮಣಂ ಪೃಚ್ಛೇತ್ಸತ್ಯಂ ಬ್ರೂಹೀತಿ ಪಾರ್ಥಿವಂ ।
ಗೋಬೀಜಕಾಂಚನೈರ್ವೈಶ್ಯಂ ಶೂದ್ರಂ ಸರ್ವೈಸ್ತು ಪಾತಕೈಃ ॥ ೨೬ ॥

ಬ್ರಹ್ಮಘ್ನೇ ಚ ಸ್ಮೃತಾ ಲೋಕಾ ಯೇ ಚ ಸ್ತ್ರೀಬಾಲಘಾತಿನಃ ।
ಮಿತ್ರದ್ರುಹಃ ಕೃತಘ್ನಸ್ಯ ತತ್ತೇ ಸ್ಯುರ್ಬ್ರುವತಾಂ ಮೃಷಾ ॥ ೨೭ ॥

ಜನ್ಮ ಪ್ರಭೃತಿ ಯತ್ಕಿಂಚಿತ್ಕಿಂಚಿತ್ಪುಣ್ಯಂ ತ್ವಯಾಕೃತಂ ।
ತತ್ಸರ್ವಂ ತಸ್ಯ ಜಾನೀಹಿ ಯಂ ಪರಾಜಯಸೇ ಮೃಷಾ ॥ ೨೮ ॥

ಈ ವಾದಿಪ್ರತಿವಾದಿಗಳ ಈ ವ್ಯವಹಾರದಲ್ಲಿ ಅಥವಾ ಈ ಕಾರ್ಯಾಚರಣೆಯ ವಿಷಯದಲ್ಲಿ ನೀವು ಏನನ್ನು ತಿಳಿದಿರುವಿರೋ ಅದನ್ನು ಇಲ್ಲಿ ಸತ್ಯವಾಗಿ ಹೇಳಿರಿ. ನಿಮ್ಮ ಸಾಕ್ಷ್ಯವು ಇಲ್ಲಿ ಅಪೇಕ್ಷಿತವಾಗಿದೆ. ಎಂದು, ಅವರು ಸಾಕ್ಷ್ಯನುಡಿಯಲು ಒಪ್ಪಿದಲ್ಲಿ ದೇವಬ್ರಾಹ್ಮಣ ಸಾನ್ನಿಧ್ಯದಲ್ಲಿ ನ್ಯಾಯಾಧಿಪತಿಯು ಪೂರ್ವ ಅಥವಾ ಉತ್ತರದಿಕ್ಕಿಗೆ ಅಭಿಮುಖನಾಗಿ ಶುದ್ಧನಾಗಿ ಕುಳಿತು ಶುಚಿಯಾಗಿರುವ ಸಾಕ್ಷಿಗಳಿಂದ ಸಾಕ್ಷ್ಯಹೇಳಿಸಬೇಕು.

೨೬–೩೦. ಬ್ರಾಹ್ಮಣನನ್ನು ಕುರಿತು ಸಾಕ್ಷ್ಯಹೇಳು ಎಂಬುದಾಗಿಯೂ ಕ್ಷತ್ರಿಯನನ್ನು ಕುರಿತು, ಸತ್ಯವನ್ನು ಹೇಳು ಎಂದೂ ವೈಶ್ಯನನ್ನು ಕೈಯ್ಯಲ್ಲಿ ಗೋವನ್ನೂ ಧಾನ್ಯಬೀಜಗಳನ್ನೂ ಕೊಟ್ಟು ಸತ್ಯಹೇಳು ಎಂದೂ ಶೂದ್ರನನ್ನು ಎಲ್ಲಾ ಪಾಪಗಳೂ ಬರುತ್ತವೆ. ಸತ್ಯವಾಗಿ ಹೇಳು ಎಂದೂ ಹೇಳಬೇಕು. ಬ್ರಹ್ಮಹತ್ಯೆ ಮಾಡಿದವರಿಗೂ, ಸ್ತ್ರೀ ಬಾಲಹತ್ಯಾಕಾರಿಗಳಿಗೂ, ಮಿತ್ರದ್ರೋಹಿಗಳಿಗೂ ಕೃತಘ್ನರಿಗೂ ಯಾವ ಲೋಕಗಳು ಹೇಳಲ್ಪಟ್ಟಿರುವುವೋ ಸುಳ್ಳುಸಾಕ್ಷ್ಯಹೇಳಿದಲ್ಲಿ ನಿನಗೂ ಅಂತಹ ಲೋಕಗಳೇ ಉಂಟಾಗುತ್ತವೆ ಹುಟ್ಟಿದ ಮೊದಲುಗೊಂಡು ಇಲ್ಲಿಯ ವರಿಗೆ ನೀನು ಏನಾದರೂ ಪುಣ್ಯವನ್ನು ಸಂಪಾದಿಸಿದ್ದಲ್ಲಿ ಆ ಪುಣ್ಯವೆಲ್ಲಾ ಈಗ

ನಗ್ನೋ ಮುಂಡಃ ಕಪಾಲೀ ಚ ಭಿಕ್ಷಾರ್ಥೀ ಕ್ಷುತ್ಪಿಪಾಸಿತಃ ।
ಅಂಧಃ ಶತ್ರುಗೃಹಂ ಗಚ್ಛೇದ್ಯಃ ಸಾಕ್ಷ್ಯಮನೃತಂ ವದೇತ್ ॥ ೨೮ ॥

ಏತಾಂಸ್ತು ದೋಷಾನ್ವೀಕ್ಷ್ಯ ತ್ವಂ ಸರ್ವಾನನೃತಭಾಷಣಾತ್ ।
ಯಥಾಶ್ರುತಂ ಯಥಾದೃಷ್ಟಂ ಸರ್ವಮೇವಾಂಜಸಾ ವದ ॥ ೩೦ ॥

ಸತ್ಯಂ ಸಾಕ್ಷ್ಯಂ ಬ್ರುವನ್ಸಾಕ್ಷೀ ಲೋಕಾನ್ಪ್ರಾಪ್ನೋತ್ಯನುತ್ತಮಾನ್ ।
ಇಹ ಚಾನುತ್ತಮಾಂ ಕೀರ್ತಿಂ ವಾಗ್ಘ್ಯೇಷಾಂ ಬ್ರಹ್ಮಪೂಜಿತಾ ॥ ೩೧ ॥

ಮನ್ಯಂತೇ ವೈ ಪಾಪಕೃತೋ ನ ಕಶ್ಚಿತ್ಪಶ್ಯತೀತಿ ನಃ ।
ತಾಂಶ್ಚ ದೇವಾಃ ಪ್ರಪಶ್ಯಂತಿ ಸ್ವಸ್ಯೈವಾಂತರಪೂರುಷಃ ॥ ೩೨ ॥

ಸುಳ್ಳು ಸಾಕ್ಷ್ಯದಿಂದ ನೀನು ಪರಾಭವಗೊಳಿಸುವವನಿಗೆ ಹೋಗಿ ಸೇರುತ್ತದೆ. ಯಾವನು ಸಾಕ್ಷ್ಯದಲ್ಲಿ ಅನೃತವನ್ನು ನುಡಿಯುತ್ತಾನೆಯೋ ಅವನು, ಸರ್ವವ್ರತ ನಿಯಮಗಳಿಂದಲೂ ಭ್ರಷ್ಟರಾದ ನಗ್ನ, ಮುಂಡ, ಕಪಾಲೀ ಮತ್ತು ಭಿಕ್ಷಾರ್ಥಿಗಳಾಗಿಯೂ, ಹಸಿವು ಬಾಯಾರಿಕೆಗಳಿಂದ ಕೂಡಿಯೂ, ಕುರುಡನಾಗಿಯೂ, ಶತ್ರುವಿನ ಗೃಹವನ್ನು ಹೊಂದಿದವನಾಗಿಯೂ ಜನ್ಮಾಂತರದಲ್ಲಿ ಆಗುತ್ತಾನೆ. ಸುಳ್ಳುಸಾಕ್ಷ್ಯ ನುಡಿಯುವವನಿಗೆ ಉಂಟಾಗುವ ಈ ತೊಂದರೆಗಳನ್ನೆಲ್ಲಾ ಆಲೋಚಿಸಿ ನೀನು ಕಂಡ ಅಥವಾ ಕೇಳಿದ ಸತ್ಯಾಂಶವನ್ನು ಮಾತ್ರ ಸರಿಯಾಗಿಹೇಳು.

೩೧–೩೩. ಸತ್ಯವನ್ನೇ ನುಡಿದ ಸಾಕ್ಷಿಯು ಉತ್ತಮವಾದ ಲೋಕವನ್ನು ಹೊಂದುತ್ತಾನೆ. ಅವನ ಮಾತು ಬ್ರಾಹ್ಮಣರಿಗೂ ಮಾನ್ಯವಾಗುತ್ತಾದ್ದರಿಂದ ಈ ಲೋಕದಲ್ಲಿರುವಾಗಲೂ ಒಳ್ಳೆಯ ಯಶಸ್ಸನ್ನು ಹೊಂದುತ್ತಾನೆ. ಕೆಲವು ಪಾಪಿಗಳು ನಾವು ಮಾಡಿದ್ದನ್ನು ಯಾರೂ ನೋಡುವುದಿಲ್ಲವೆಂದು ತಿಳಿದಿರುತ್ತಾರೆ. ಅವರು ಮಾಡಿದ ಎಲ್ಲಾ ಕೆಲಸಗಳನ್ನೂ ಅವರವರ ಹೃದಯದಲ್ಲಿರುವ ಅಂತರ್ಯಾಮಿ ಪುರುಷನು ನೋಡಿಯೇ ನೋಡುತ್ತಾನೆ. ಸೂರ್ಯ, ಚಂದ್ರ, ಅಗ್ನಿ, ವಾಯು, ಅಂತರಿಕ್ಷ, ಭೂಮಿ, ಜಲ, ತನ್ನ ಅಂತರ್ಯಾಮಿ, ಯಮ ಅಹೋರಾತ್ರಿಗಳು

ಆದಿತ್ಯ ಚಂದ್ರಾವನಲಾನಿಲೌ ಚ
ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ!
ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ
ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ || ೩೩ ||

**ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸಾಕ್ಷಿ
ನಿರ್ಣಯೋ ನಾಮ
ಸಪ್ತವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ**

ಉಭಯಸಂಧ್ಯಾಕಾಲಗಳು, ಧರ್ಮ ಇವರೆಲ್ಲರೂ ಆಯಾಯ ಮನುಷ್ಯನ ವ್ಯಾಪಾರವನ್ನೆಲ್ಲಾ ಯಾವಾಗಲೂ ನೋಡುತ್ತಲೇ ಇರುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಸಾಕ್ಷಿನಿರ್ಣಯವೆಂಬ ಮುನ್ನೂರ ಇಪ್ಪತ್ತೇಳನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಪೌರುಷೋ ನಿರ್ಣಯಃ ಪ್ರೋಕ್ತೋ ದಿವ್ಯಂ ವಕ್ಷ್ಯಾಮ್ಯತಃ ಪರಂ ।
ಅಸಾಕ್ಷಿಕೇಷುತ್ವರ್ಥೇಷು ಮಿಥೋ ವಿವದಮಾನಯೋಃ ॥ ೧ ॥

ರಾಜದ್ರೋಹಾಭಿಶಾಪೇಷು ಸಾಹಸೇಷು ತಥೈವ ಚ ।
ವಿವಾದೇ ತತ್ವತಃ ಸತ್ಯಂ ಶಪಥೇನಾಪಿ ಲಂಭಯೇತ್ ॥ ೨ ॥

ಮಹರ್ಷಿಭಿಶ್ಚ ದೇವೈಶ್ಚ ಕಾರ್ಯಾರ್ಥಂ ಶಪಥಾಃ ಕೃತಾಃ ।
ವಸಿಷ್ಠೋಽದತ್ತ ಶಪಥಂ ಸಮಯೇ ಜವನೇ ನೃಪೇ ॥ ೩ ॥

ಮುನ್ನೂರ ಇಪ್ಪತ್ತೆಂಟನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ :—ವ್ಯವಹಾರಗಳಲ್ಲಿ ಸತ್ಯಾರ್ಥನಿರ್ಣಯಕ್ಕಾಗಿ ಹೇಳಲ್ಪಟ್ಟಿರುವ ಪ್ರಮಾಣಗಳಲ್ಲಿ ಪೌರುಷ ಪ್ರಮಾಣವನ್ನು ಇದುವರಿಗೂ ಹೇಳಿ ಲ್ಪಾಯಿತು. ಇನ್ನು ಮುಂದೆ ದಿವ್ಯಪ್ರಮಾಣವನ್ನು ಹೇಳುತ್ತೇನೆ. ರಾಜದ್ರೋಹ, ದೂಷಣ, ಕೊಲೆ ಮೊದಲಾದ ಸಾಹಸಕಾರ್ಯಗಳಲ್ಲಿ ಪರಸ್ಪರ ವಿವಾದ ಬಂದಾಗ ಸಾಕ್ಷಿಗಳಿಲ್ಲದಿರುವಾಗಲೂ ಸತ್ಯಾಂಶವನ್ನು ಪ್ರಮಾಣದಿಂದಾದರೂ ಹೊಂದಿಯೇ ಹೊಂದಬೇಕು. ಈ ವಿಷಯದಲ್ಲಿ ಮಹರ್ಷಿಗಳೂ, ದೇವತೆಗಳೂ ಕಾರ್ಯಾರ್ಥ ವಾಗಿ ಕೆಲವು ಶಪಥಗಳನ್ನು ಮಾಡಿದ್ದಾರೆ. ವಸಿಷ್ಠರೂ ಕೂಡ ಜವನನೆಂಬ ರಾಜನ ವಿಷಯದಲ್ಲಿ ಶಪಥಮಾಡಿರುವರು. ಸಾಮಾನ್ಯ ವಿಷಯದಲ್ಲಿಯೂ ಸಹ ಬುದ್ಧಿವಂತ

ನ ಮೃಷಾ ಶಪಥಂ ಕುರ್ಯಾತ್ಸ್ವಲ್ಪೇಽಪ್ಯರ್ಥೇ ನರೋ ಬುಧಃ ।
ವೃಥಾ ಹಿ ಶಪಥಂ ಕುರ್ವನ್ ಪ್ರೇತ್ಯ ಚೇಹ ಚ ನಶ್ಯತಿ ॥ ೪ ॥

ಸ್ಥಾವರೇಷು ತು ದಿವ್ಯಾನಿ ವರ್ಜನೀಯಾನಿ ಪಾರ್ಥಿವೈಃ ।
ಲಿಖಿತೇನ ತಥಾ ಭುಕ್ತ್ಯಾ ತೇಷಾಂ ಭವತಿ ಸಾಧನಂ ॥ ೫ ॥

ಕೋಶಂ ಘಟಂ ವಿಷಂ ಚಾಗ್ನಿಮುದಕಂ ತಪ್ತಮಾಷಕಂ ।
ಫಾಲಂ ಚ ತಂಡುಲಂ ಚೈವ ದಿವ್ಯಾನ್ಯಷ್ಟೌ ವಿದುರ್ಬುಧಾಃ ॥ ೬ ॥

ಕೋಶವರ್ಜಂ ತು ದಿವ್ಯಾನಿ ಸಶಿರಸ್ಕಾನಿ ದಾಪಯೇತ್ ।
ಅಶಿರಸ್ಕಃ ಸ್ಮೃತಃ ಕೋಶಃ ಕಾಲಾಂತರವಿಭಾವನಾತ್ ॥ ೭ ॥

ಸಶಿರಸ್ಕಾನಿ ದಿವ್ಯಾನಿ ರಾಜ್ಞಾ ಕಂಟಕಶೋಧನೈಃ ।
ರಾಜ್ಞಾ ಸರ್ವಾಣಿ ದೇಯಾನಿ ಸ್ವಯಂ ಚ ಪರಿಮಾರ್ಗಣಾ ॥ ೮ ॥

ನಾದ ಮನುಷ್ಯನು ಸುಳ್ಳಾದ ಶಪಥವನ್ನು ಮಾಡಲೇಬಾರದು. ಹಾಗೆ ಮಾಡಿದವನು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ನಾಶಹೊಂದುತ್ತಾನೆ

೫–೭. ಸ್ಥಿರಸ್ವತ್ತಿನ ವಿವಾದಗಳಲ್ಲಿ ದಿವ್ಯಪ್ರಮಾಣವನ್ನು ರಾಜರು ತ್ಯಜಿಸಬೇಕು. ಇಂತಹ ವ್ಯವಹಾರಗಳು ಲಿಖಿತ ಪತ್ರಗಳಿಂದಲೂ, ಅನುಭವದಿಂದಲೂ ಪರಿಹರಿಸಲು ಸಾಧ್ಯವಾಗುತ್ತವೆ. ದಿವ್ಯಪ್ರಮಾಣಗಳು ಕೋಶ, ಘಟ, ವಿಷ, ಅಗ್ನಿ, ಜಲ, ಮಾಷಕಪರಿಮಾಣದ ಕಾಯಿಸಿದ ಚಿನ್ನ, ಫಾಲ, ತಂಡುಲ, ಎಂಬದಾಗಿ ಎಂಟು ವಿಧವೆಂದು ಪಂಡಿತರು ಹೇಳಿರುತ್ತಾರೆ. ಕೋಶ ಹೊರತು ಇತರ ದಿವ್ಯಗಳ ಪ್ರಯೋಗವನ್ನು ತಲೆಯಲ್ಲಿ ಕಟ್ಟಿದ ಮಂತ್ರದ ಪತ್ರದೊಡನೆಯೇ ನಡೆಸಬೇಕು. ಕೋಶವೆಂಬುದು ಮಾತ್ರ ತಲೆಯ ಪತ್ರವಿಲ್ಲದೆ ನಡೆಯಬೇಕು. ಏತಕ್ಕೆಂದರೆ ಅದರಲ್ಲಿ ದೋಷಾದೋಷನಿರ್ಣಯವು ಕಾಲಾಂತರದಲ್ಲಿ ಉಂಟಾಗುತ್ತದೆ. ತತ್ಕಾಲದಲ್ಲಿಯೇ ತಿಳಿಯುವುದಿಲ್ಲ.

೮–೧೫. ತಲೆಯ ಪತ್ರದೊಡನೆ ಕೂಡಿರುವ ಇತರ ದಿವ್ಯಗಳನ್ನು ಮುಂದೆ ಹೇಳುವ ಕಂಟಕಶೋಧನದಿಂದ ತಾನೂ ವಿಮರ್ಶೆಮಾಡಿ ರಾಜನಾದವನು ಪ್ರಯೋಗಿಸಬೇಕು.

ಲೋಭಾನ್ಮೋಹಾದ್ಭಯಾದ್ವಾಪಿ ಭಿದ್ಯಂತೇ ಸಾಕ್ಷಿಣಃ ಪರೈಃ ।
ಅಜ್ಞಾನಾದ್ಬಾಲಭಾವಾಚ್ಚ ಭೇದೇ ಧರ್ಮೋ ವ್ಯವಸ್ಥಿತಃ ॥ ೯ ॥

ಸರ್ವದ್ರವ್ಯೇಷು ಕನಕಂ ಮೂಲ್ಯಂ ತು ಪರಿಕಲ್ಪಯೇತ್ ।
ಮಾಷಕೇನ ಸುವರ್ಣಸ್ಯ........ ....ಕಾಲ್ಯಮುಸುಖೇ ದ್ವಿಜಂ ॥ ೧೦ ॥

ಸತ್ಯಂ ವದಾಮೀತಿ ಶಪೇ ನ್ನಾನ್ಯತ್ಕಿಂಚನ ಪಾರ್ಥಿವಃ ।
ಶಸ್ತ್ರಮಾದಾಯ ವಕ್ತವ್ಯಂ ಕ್ಷತ್ರಿಯೇಣ ತಥೈವ ಚ ॥ ೧೧ ॥

ಧೇನುಂ ಸಂಸ್ಪೃಶತಾ ಸತ್ಯಂ ವಾಚ್ಯಂ ವೈಶ್ಯೇನ ವೈ ದ್ವಿಜಾಃ ।
ಶೂದ್ರಃ ಕುರ್ವೀತ ಶಪಥಂ ತಥಾ ಸರ್ವೈಸ್ತು ಪಾತಕೈಃ ॥ ೧೨ ॥

ಕೃಷ್ಣಲೇನ ಸುವರ್ಣಸ್ಯ ತಿಲವೃದ್ಧ್ಯಾತು ಶಾಪಯೇತ್ ।
ಶೂದ್ರಾನ್ನ ಶಾಪಯೇದ್ರಾಜಾ ಕದಾಚಿದಪಿವೈ ದ್ವಿಜಾಃ ॥ ೧೩ ॥

ವಿಪ್ರವರ್ಜಂ ತಥಾ ಕೋಶಂ ವರ್ಣಾನಾಂ ದಾಪಯೇನ್ನೃಪಃ ।
ಸುವರ್ಣಮಾಷಕಾದೂರ್ಧ್ವಮರ್ವಾಗಪ್ಯಭ್ಯ ಏವ ಚ ॥ ೧೪ ॥

ಇತರರ ಸಿತೂರಿಯಿಂದ ಸಾಕ್ಷಿಗಳಾಗಿರುವವರು ಆಶೆಹುಟ್ಟಿಸುವುದರಿಂದಲೂ, ಅಜ್ಞಾನದಿಂದಲೂ, ಭಯದಿಂದಲೂ, ಭ್ರಮೆಯಿಂದಲೂ, ಸ್ವಾಭಾವಿಕವಾದ ಅಲ್ಪ ಸ್ವಭಾವದಿಂದಲೂ, ಭೇದಭಾವ ಹೊಂದುತ್ತಾರೆ ಈ ರೀತಿಯ ಭೇದೋಪಾಯವೂ ಸಹ ಧರ್ಮದ ಅರಿವಿಗೆ ಸಾಧಕವಾಗುತ್ತದೆ. ಎಲ್ಲಾ ವಸ್ತುಗಳಿಗಿಂತಲೂ ಉತ್ತಮವಾದ ಚಿನ್ನವನ್ನೇ ಈ ಭೇದೋಪಾಯಕ್ಕೆ ಮೂಲ್ಯವನ್ನಾಗಿ ಇಡಬೇಕು. ಬ್ರಾಹ್ಮಣನ ವಿಷಯದಲ್ಲಿ ಮಾಷಕಪರಿಮಿತವಾದ ಸುವರ್ಣವನ್ನು ಕೊಟ್ಟು ಧೊರೆಯೇ ಸತ್ಯವನ್ನೇ ಹೇಳುತ್ತೇನೆ ಎಂದು ಪ್ರತಿಜ್ಞೆಮಾಡಿಸಬೇಕು. ಕ್ಷತ್ರಿಯನಿಂದ ಕೈಯಲ್ಲಿ ಶಸ್ತ್ರವನ್ನು ಕೊಟ್ಟು ಪ್ರತಿಜ್ಞೆಮಾಡಿಸಬೇಕು. ವೈಶ್ಯನಿಂದ ಹಸುವನ್ನು ಮುಟ್ಟಿಸಿ ಪ್ರತಿಜ್ಞೆ ತೆಗೆದುಕೊಳ್ಳಬೇಕು. ಶೂದ್ರನಿಂದ ಅಸತ್ಯ ನುಡಿದಲ್ಲಿ ಎಲ್ಲಾ ಪಾತಕಗಳಿಗೂ ಭಾಗಿಯಾಗುತ್ತೇನೆಂದು ಹೇಳಿಸಿ ಪ್ರತಿಜ್ಞೆ ತೆಗೆದುಕೊಳ್ಳಬೇಕು. ಕ್ಷತ್ರಿಯ, ವೈಶ್ಯರು ಗುಲಗಂಜಿ ತೂಕದ ಚಿನ್ನವನ್ನು ಇಟ್ಟು ಪ್ರತಿಜ್ಞೆಮಾಡಬೇಕು. ಇದು ಶೂದ್ರನಿಗೆ ಇಲ್ಲ. ಬ್ರಾಹ್ಮಣ ಹೊರತು ಇತರ ವರ್ಣದವರಿಗೆ ಕೋಶವೆಂಬ ದಿವ್ಯಪರೀಕ್ಷೆಯನ್ನು

ವಿಪ್ರವರ್ಜಂ ತು ವಿಪ್ರೋಽಪಿ ವರ್ಣಿನಾಂ ಪೂರಸಂಯುತಂ ।
ಕೋಶಸ್ಥಾನೇ ತು ಶಪಥಂ ಕಾರಯೇದವಿಚಾರಯನ್ ॥ ೧೫ ॥

ಅತಃ ಪರಂ ತು ದಿವ್ಯಾನಾಂ ಕುರ್ಯಾದನ್ಯತಮಂ ನರಃ ।
ಯಥಾ ತಥಾ ಮಹೀಪಾಲಃ ಶೃಣುಧ್ವಂ ಗದತೋ ಮಮ ॥ ೧೬ ॥

ನ ಶೀತೇ ತು ಧಟಂ ದೇಯ ಮುಷ್ಣಕಾಲೇ ಹುತಾಶನಂ ।
ವರ್ಣಿನಾಂ ನ ತಥಾ ಫಾಲಂ ತಂಡುಲಂ ಮುಖರೋಗಿಣಾಂ ॥ ೧೭ ॥

ಶ್ವಾಸಕಾಸಾರ್ದಿತಾನಾಂ ಚ ಬ್ರಾಹ್ಮಣಾನಾಂ ಚ ನೋ ವಿಷಂ ।
ತಪ್ತಮಾಷಕಮರ್ಹಂತಿ ಸರ್ವೇ ವರ್ಣಾ ನಿರತ್ಯಯಂ ॥ ೧೮ ॥

ನ ವ್ಯಾಧಿಮರಣಾಕ್ರಾಂತೇ ದೇಶೇ ಕೋಶಂ ತು ಪಾತಯೇತ್ ।
ಮಂತ್ರೈರಸ್ವರದಿವ್ಯಾನಿ ಸಂಚಯಂತೀಹ ಮಾನವಾಃ ॥ ೧೯ ॥

ಪ್ರತಿ ಮಂತ್ರವಿದಃ..................ಸ್ತಂಭನಾನಾಂ ವಿನಾಶನೇ ।
ನಿಯುಂಜೀತ ನರೇಂದ್ರೋಽಪಿ ನಿಭೃತಾನ್ಸನವತ್ಸಲಾನ್ ॥ ೨೦ ॥

ರಾಜನಾದವನು ಪ್ರಯೋಗಿಸಬೇಕು. ಸುವರ್ಣಮಾಷಕ ಹೊರತು ಈ ಎಂಟರೊಳಗೆ ಎಲ್ಲವೂ ಬ್ರಾಹ್ಮಣೇತರರಿಗೆ ಅರ್ಹ, ಕೋಶದ ಸ್ಥಾನದಲ್ಲಿ ಬ್ರಾಹ್ಮಣನೂ ಸಹ ಶಪಥ ಮಾಡಲೇಬೇಕು.

೧೬–೨೧. ಅನಂತರ ಈ ದಿವ್ಯಪರೀಕ್ಷೆಗಳಲ್ಲಿ ಯಾವುದಾದರೊಂದನ್ನು ರಾಜನಾದವನು ಮಾಡಿಸಬೇಕು. ಇದನ್ನು ಹೇಳುತ್ತೇನೆ ಕೇಳಿರಿ. ಶೀತಕಾಲದಲ್ಲಿ ಘಟದ ಪರೀಕ್ಷೆಯನ್ನೂ, ಉಷ್ಣಕಾಲದಲ್ಲಿ ಅಗ್ನಿಪರೀಕ್ಷೆಯನ್ನೂ ಮಾಡಬಾರದು. ಪ್ರತಶಾಲಿಗಳಿಗೆ ಫಾಲವನ್ನೂ, ಬಾಯಿನ ವ್ಯಾಧಿಯುಳ್ಳವರಿಗೆ ತಂಡುಲವನ್ನೂ ಮಾಡಬಾರದು. ಇದು ಶ್ವಾಸವ್ಯಾಧಿಕಾಸ (ಕೆಮ್ಮಲು) ವ್ಯಾಧಿ ಇರುವವರಿಗೂ ಅನ್ವಯಿಸುತ್ತದೆ. ಬ್ರಾಹ್ಮಣರಿಗೆ ವಿಷವನ್ನು ಪ್ರಯೋಗಿಸಬಾರದು. ತಪ್ತಮಾಷಕವೆಂಬುದು ಎಲ್ಲಾ ವರ್ಣದವರಿಗೂ ಅರ್ಹವಾಗುತ್ತದೆ. ವ್ಯಾಧಿ, ಮರಣ ಇವುಗಳಿಂದ ಆಕ್ರಾಂತವಾಗಿರುವ ದೇಶದಲ್ಲಿ ಕೋಶವನ್ನು ಪ್ರಯೋಗಿಸಬಾರದು. ಪ್ರತಿಮಂತ್ರಗಳನ್ನು ತಿಳಿದ ಕೆಲವರು ಮಂತ್ರಪೂರ್ವಕವಾದ ಈ ದಿವ್ಯಪ್ರಯೋಗಗಳನ್ನು ಸ್ತಂಭನದಿಂದ ತಡೆಯುವುದುಂಟು ಇಂತಹವರನ್ನು ಪತ್ತೆಮಾಡಲು ಧೊರೆಯು

ದಿವ್ಯಾನಾಂ ಸ್ತಂಭಕಂ ಜ್ಞಾತ್ವಾ ಪಾಪಾನ್ನಿತ್ಯಂ ಮಹೀಪತಿಃ ।
ವಿವಾಸಯೇತ್ಸ್ವಕಾದ್ರಾಷ್ಟ್ರಾತ್ತೇ ಹಿ ಲೋಕಸ್ಯ ಕಂಟಕಾಃ ॥ ೧೦ ॥

ತೇಷಾಮನ್ವೇಷಣೇ ಯತ್ನಂ ರಾಜಾ ನಿತ್ಯಃ ಸಮಾಚರೇತ್ ।
ತೇ ಹಿ ಪಾಪಸಮಾಚಾರಾಸ್ತಸ್ಕರೇಭ್ಯೋಽಪಿ ತಸ್ಕರಾಃ ॥ ೧೧ ॥

ದೃಗ್ದೃಷ್ಟಿದೋಷಾರ್ಕಸ್ವಲ್ಪೇಽಪಿ ದಿವ್ಯೇಷು ವಿನಿಯೋಜಯೇತ್ ।
ಮಹತ್ಸ್ವಪಿ ನ ಚಾರ್ಥೇಷು ಧರ್ಮಜ್ಞಾನ್ ಧರ್ಮವತ್ಸಲಾನ್ ॥ ೧೨ ॥

ಜ್ಞಾತ್ವಾ ಧರ್ಮಿಷ್ಠತಾಂ ರಾಜಾ ಪುರುಷಃ ಸ ವಿಚಕ್ಷಣಃ ।
ಸ್ವಲ್ಪೇ ವಾಪ್ಯಥವಾಽಸ್ವಲ್ಪೇ ಶಪಥೇ ತಾನ್ನಿಯೋಜಯೇತ್ ॥ ೧೩ ॥

ನ ಮಿಥ್ಯಾವಚನಂ ಯೇಷಾಂ ಜನ್ಮಪ್ರಭೃತಿ ವಿದ್ಯತೇ ।
ಶ್ರದ್ಧಧ್ಯಾತ್ಪಾರ್ಥಿವಸ್ತೇಷಾಂ ವಚನೇ ಧರ್ಮದರ್ಶಿನಾಂ ॥ ೧೪ ॥

ಧನದಿಂದ ಪ್ರೀತರಾದ ಗೂಢಚಾರರನ್ನು ನೇಮಿಸಬೇಕು. ದಿವ್ಯಶೋಧನೆಗೆ ತಂಟೆಯುಂಟಾದಾಗ ದೊರೆಯು ಸ್ತಂಭನಮಾಡುವ ಇಂತಹ ಪಾಪಿಗಳನ್ನು ತನ್ನ ದೇಶದಿಂದ ಹೊರಗೆ ಹಾಕಬೇಕು. ಇವರು ಲೋಕಕ್ಕೇ ಕಂಟಕರು.

೧೧–೧೪. ಇವರನ್ನು ಹುಡುಕಿ ಸತ್ಕಿಮಾಡುವ ಕಾರ್ಯದಲ್ಲಿ ರಾಜನು ಯಾವಾಗಲೂ ಪ್ರಯತ್ನಪಡುತ್ತಿರಬೇಕು. ಇವರು ಮಹಾಪಾಪಿಗಳು, ಕಳ್ಳರನ್ನೂ ಮೀರಿಸಿದ ಕಳ್ಳರು, ದೃಷ್ಟಿದೋಷ, ಜ್ಞಾನದೋಷವಿರುವವರ ವಿಷಯದಲ್ಲಿ ಅಪರಾಧವು ಸ್ವಲ್ಪವಾಗಿದ್ದರೂ ದಿವ್ಯಗಳನ್ನು ಪ್ರಯೋಗಿಸಲೇಬೇಕು. ಧರ್ಮಜ್ಞರಾಗಿಯೂ, ಧರ್ಮದಲ್ಲಿ ಪ್ರೀತಿಯುಳ್ಳವರಾಗಿಯೂ ಇರುವವರ ವಿಷಯದಲ್ಲಿ ದೊಡ್ಡ ಅಪರಾಧ ವಿಷಯದಲ್ಲಿಯೂ ಸಹ ಇವನ್ನು ಪ್ರಯೋಗಿಸಬಾರದು. ಬುದ್ಧಿವಂತನಾದ ದೊರೆಯು ಇವರ ಧರ್ಮಿಷ್ಠತೆಯನ್ನು ತಿಳಿದು ಅಪರಾಧವು ಸ್ವಲ್ಪವಾಗಿರಲಿ, ಹೆಚ್ಚಾಗಿರಲಿ ಇವರಿಂದ ಪ್ರತಿಜ್ಞೆ ಮಾತ್ರ ಮಾಡಿಸಬೇಕು. ಇಂತಹ ಧರ್ಮಜ್ಞಾನಿಗಳಿಗೆ ಸುಳ್ಳುಮಾತು ಎಂಬುದು ಹುಟ್ಟಿದ ಮೊದಲು ಇಲ್ಲವೇ ಇಲ್ಲ. ರಾಜನೂ ಸಹ ಇಂತಹವರಲ್ಲಿ ನಂಬಿಕೆ ಇಡಬಹುದು.

ಅತ್ಯಂತೋಪಹತಾಃ ಪಾಪಾ ನಾಸ್ತಿಕಾ ಭಿನ್ನಸೇತವಃ ।
ದಿವ್ಯಾನ್ಯರ್ಹಂತಿ ಸರ್ವಾಣಿ ಸ್ವಲ್ಪದೋಷಾ ಅಪಿ ದ್ವಿಜಾಃ ॥ ೨೬ ॥

ಆದೌ ಭೂಮಿಂ ಪರೀಕ್ಷೇತ ಧಟಸ್ಯಾರ್ಥೇ ವಿಚಕ್ಷಣಃ ।
ಇಂದ್ರಸ್ಥಾನೇ ಸಭಾಯಾಂ ವಾ ದಿಗ್ಭಾಗೇ ಪೂರ್ವದಕ್ಷಿಣೇ ॥ ೨೭ ॥

ಧಟಂ ನಿವೇಶಯೇತ್ತತ್ರ ಸುಸಮಾಯಾಂ ತಥಾ ಭುವಿ ।
ಯಜ್ಞಿಯಸ್ಯ ತು ವೃಕ್ಷಸ್ಯ ಕರ್ತವ್ಯಂ ಮಂಡಪದ್ವಯಂ ॥ ೨೮ ॥

ಮಂಡಪಸ್ಯ ಪ್ರಮಾಣಂ ತು ಸಪ್ತಹಸ್ತಂ ಪ್ರಕೀರ್ತಿತಂ ।
ದ್ವೌ ಹಸ್ತೌ ನಿಖನೇತ್ಕಾಷ್ಠಂ ದೃಶ್ಯಂ ಸ್ಯಾದ್ಧಸ್ತಪಂಚಕಂ ॥ ೨೯ ॥

ಅಂತರಂ ಚ ತಯೋಃ ಕಾರ್ಯಂ ತಥಾ ಹಸ್ತಚತುಷ್ಟಯಂ ।
ಮಂಡಪೋಪರಿ ಕಾಷ್ಠಂ ಚ ದೃಢಂ ಕುರ್ಯಾದ್ವಿಚಕ್ಷಣಃ ॥ ೩೦ ॥

ಚತುರ್ಹಸ್ತಂ ತುಲಾಕಾಷ್ಠಂ ತ್ವವ್ರಣಂ ಕಾರಯೇತ್ ಸ್ಥಿರಂ ।
ಖದಿರಾರ್ಜುನವೃಕ್ಷಾಣಾಂ ಶಿಂಶುಪಾಸಾಲಜಂ ತಥಾ ॥ ೩೧ ॥

೨೬-೩೩. ನಾಸ್ತಿಕರಾಗಿಯೂ, ಸ್ವಚ್ಛಂದಚಾರಿಗಳಾಗಿಯೂ ಇರುವ ಅಯೋಗ್ಯರ ವಿಷಯದಲ್ಲಿ ಅಪರಾಧವು ಸ್ವಲ್ಪವಾಗಿದ್ದರೂ ದಿವ್ಯಪ್ರಯೋಗಗಳನ್ನೇ ನಡೆಸಬೇಕು. ಧಟ (ತಕ್ಕಡಿ) ವೆಂಬ ದಿವ್ಯಪರೀಕ್ಷೆಗಾಗಿ ಮೊದಲು ಭೂಮಿಯನ್ನು ಪರೀಕ್ಷಿಸಬೇಕು ರಾಜಸಭೆಯ ಪೂರ್ವ ಅಥವಾ ಆಗ್ನೇಯ ದಿಕ್ಕಿನಲ್ಲಿಯಾಗಲಿ ಸಮವಾದ ಭೂಮಿಯಲ್ಲಿ ತಕ್ಕಡಿಯನ್ನಿಡಬೇಕು. ಯಜ್ಞಾರ್ಹವಾದ ಮರಗಳ ಕೊಂಬೆಗಳಿಂದ ಎರಡು ಮಂಟಪಗಳನ್ನು ಮಾಡಬೇಕು. ಮಂಟಪಗಳಿಗೆ ನೆಡುವ ಮರಗಳು ಏಳುಮೊಳ ಉದ್ದವಿದ್ದು ಅದರಲ್ಲಿ ಎರಡುಮೊಳ ನೆಲಕ್ಕೂ ಉಳಿದ ಐದು ಮೊಳ ಮೇಲೆ ಕಾಣಿಸುವಂತೆಯೂ ಇರಬೇಕು. ಆ ಮರಗಳ ಮಧ್ಯದಲ್ಲಿ ನಾಲ್ಕು ಮೊಳ ಅಂತರವಿರಬೇಕು. ಮಂಟಪದ ಮೇಲುಭಾಗವನ್ನು ದೃಢವಾದ ಮರಗಳಿಂದ ಭದ್ರಪಡಿಸಬೇಕು. ನಾಲ್ಕು ಮೊಳವುಳ್ಳ ತಕ್ಕಡಿಯ ದಂಡಿಯನ್ನು ಕಗ್ಗಲಿ, ಮತ್ತಿ, ಶಿಂಶುಪಾ ಇವುಗಳಲ್ಲೊಂದರಿಂದ ಏರ್ಪಡಿಸಬೇಕು. ಅದಕ್ಕೆ ಎರಡು ಕಡೆಗಳಲ್ಲಿಯೂ

ತುಲಾಕಾಷ್ಠೇ ತು ಕರ್ತವ್ಯಂ ತಥಾನ್ಯೈ ಶಿಕ್ಯಕದ್ವಯಂ ।
ಪ್ರಾಙ್ಮುಖೋ ನಿಶ್ಚಲಃ ಕಾರ್ಯಃ ಶುಚೌ ದೇಶೇ ಧಟಸ್ತಥಾ ॥ ೩೨ ॥

ವಣಿಕ್ಸುವರ್ಣಕಾರೌ ಚ ಕುಲಾಲಃ ಕಾಂಸ್ಯಕಾರಕಃ ।
ತುಲಾಧರೇ ಧಟಃ ಕಾರ್ಯೋ ರಿಪೌ ಮಿತ್ರೇ ತಥಾ ಸಮಃ ॥ ೩೩ ॥

ಶ್ರಾವಯೇತ್ಪ್ರಾಡ್ವಿವಾಕೋಽಪಿ ತುಲಾಧಾರಂ ವಿಚಕ್ಷಣಃ ।
ಬ್ರಹ್ಮಘ್ನೋ ಯೇ ಸ್ಮೃತಾ ಲೋಕಾ।ಯೇ ಚ ಸ್ತ್ರೀಬಾಲಘಾತಿನಾಂ ॥

ತುಲಾಧರಸ್ಯ ತೇ ಲೋಕಾಸ್ತುಲಾಂ ಧಾರಯತೋ ವೃಷಾ ।
ಏಕಸ್ಮಿಂಸ್ತೋಲಯೇಚ್ಛಿಕ್ಯೇ ಸ್ನಾತಂ ಸೂಪೋಷಿತಂ ನರಂ ॥ ೩೫ ॥

ದ್ವಿತೀಯೇ ಮೃತ್ತಿಕಾಂ ಶುಭ್ರಾಂ ಗೌರೀಂ ತು ತುಲಯೇದ್ಬುಧಃ ।
ಇಷ್ಟಕಾಭಸ್ಮಪಾಷಾಣ ಕಪಾಲಾಸ್ಥೀನಿ ವರ್ಜಯೇತ್ ॥ ೩೬ ॥

ತುಲಯಿತ್ವಾ ತತಃ ಪೂರ್ವಂ ತಸ್ಮಾತ್ತಮವತಾರಯೇತ್ ।
ಮೂರ್ಧ್ನಿ ಪತ್ರಂ ತತಸ್ತಸ್ಯ ನ್ಯಸ್ತಮತ್ರಂ ನಿವೇಶಯೇತ್ ॥ ೩೭ ॥

(ಅಡ್ಡಿಗೆ ಇರುವಂತೆ) ಶಿಕ್ಯಗಳನ್ನು (ಕಲ್ಲಿ) ಮಾಡಬೇಕು ಅದು ಚಲಿಸದಂತೆ ಪೂರ್ವಾಭಿ ಮುಖವಾಗಿರಬೇಕು. ವ್ಯಾಪಾರಿ, ಸುವರ್ಣಕಾರ (ಅಕ್ಕಸಾಲಿ) ಕುಂಬಾರ, ಕಂಚುಗಾರ ಇವರೂ ಅಲ್ಲಿರಬೇಕು. ಈ ತಕ್ಕಡಿಯೂ ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ಸಹ ಒಂದೇ ಸಮನಾಗಿರುವಂತೆ ನಿರ್ಮಿಸಿರಬೇಕು

೩೪–೪೨. ಅನಂತರ ನ್ಯಾಯಾಧಿಪತಿಯು ತಕ್ಕಡಿಯನ್ನು ಕುರಿತು ಹೀಗೆ ಹೇಳಬೇಕು. ಬ್ರಹ್ಮಹತ್ಯೆ ಮಾಡಿದವನಿಗೂ, ಸ್ತ್ರೀ ಬಾಲಹತ್ಯಾಕಾರಿಗೂ ಯಾವ ಲೋಕಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುವೋ ಆ ಲೋಕಗಳು ನೀನು ಧರಿಸಿರುವವನಲ್ಲಿ ಸುಳ್ಳಾದ ತೂಕವನ್ನು ನೀನು ತೋರಿದ್ದೇ ಆದರೆ ನಿನಗೇ ಆಗುತ್ತವೆ. ಎಂದು ಹೇಳಿ ಒಂದು ಕಡೆಯಲ್ಲಿ ಉಪವಾಸವಿದ್ದು ಸ್ನಾನಮಾಡಿರುವ ಮನುಷ್ಯನನ್ನು ಕೂರಿಸಬೇಕು. ಮತ್ತೊಂದು ಕಡೆ ಇಟ್ಟಿಗೆ, ಬೂದಿ, ಕಲ್ಲು, ಕಪಾಲ, ಮೂಳೆ, ಇವಾವುದೂ ಇಲ್ಲದಿರುವ ಶುದ್ಧವಾದ ಬಿಳಿಯ ಮಣ್ಣನ್ನು ಇಟ್ಟು ತೂಕಮಾಡಬೇಕು ಅನಂತರ ಪುರುಷನನ್ನು ಕೆಳಗೆ ಇಳಿಸಬೇಕು. ಮಂತ್ರ ಬರೆದಿರುವ ಪತ್ರವನ್ನು ಅವನ ತಲೆಯಲ್ಲಿ ಕಟ್ಟಬೇಕು. (ಇದೇ ಹಿಂದೆ ಹೇಳಿರುವ ಸಶಿರಸ್ಕಸಂಸ್ಕಾರ) ಈ

ಮಂತ್ರಶ್ಚಾಯಂ ಪುರಾ ಪ್ರೋಕ್ತಃ ಸ್ವಯಮೇವ ಸ್ವಯಂಭುವಾ ।
ಬ್ರಹ್ಮಣಸ್ತ್ವಂ ಸುತಾ ದೇವಿ ತುಲಾನಾಮ್ನೇತಿ ಕಥ್ಯಸೇ ॥ ೩೮ ॥

ತುಕಾರೋ ಗೌರವೇ ನಿತ್ಯಂ ಲಕಾರೋ ಲಘುನಿ ಸ್ಮೃತಃ ।
ಗುರುಲಾಘವಸಂಯೋಗಾತ್ತುಲಾ ತೇನ ನಿಗದ್ಯಸೇ ॥ ೩೯ ॥

ಸಂಶಯಾನ್ಮೋಚಯಸ್ವೈನಂ ಚಾಭಿಶಸ್ತಂ ನರಂ ಶುಭೇ ।
ಭೂಯ ಆರೋಪಯೇತ್ತಂ ತು ನರಂ ತಸ್ಯಾಂ ಸಪತ್ರಕಂ ॥ ೪೦ ॥

ತುಲಿತೋ ಯದಿ ವರ್ಧೇತ ಶುಭೋ ಭವತಿ ಧರ್ಮತಃ ।
ಹೀಯಮಾನೇ ನ ಶುದ್ಧಃ ಸ್ಯಾದಿತಿ ಧರ್ಮವಿದೋ ವಿದುಃ ॥ ೪೧ ॥

ಶಿಕ್ಯಚ್ಛೇದೇ ತುಲಾಭಂಗೇ ಪುನರಾರೋಪಯೇನ್ನರಂ ।
ತಥಾ ನಿಃ ಸಂಶಯಂ ಜ್ಞಾನಂ ಭವತೀತಿ ವಿನಿಶ್ಚಯಃ ॥ ೪೨ ॥

ಮಂತ್ರವನ್ನೂ ಸಹ ಸ್ವಯಂಭು ದೇವನೇ ಹಿಂದೆ ಹೀಗೆ ಹೇಳಿದ್ದಾನೆ. ಎಲೈ ತುಲಾ ದೇವಿಯೇ ನೀನು ಬ್ರಹ್ಮನ ಮಗಳು, ತುಲಾ ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿದ್ದೀಯೆ. ತು. ಎಂಬುದು ಗೌರವವಾಚಕ. ಲಾ ಎಂಬುದು ಲಘುವಾಚಕ ಗುರಲಘು ವಸ್ತುಗಳ ಗೌರವ ಲಾಘವ ಸಂಬಂಧವನ್ನು ತೋರಿಸುವವಳಾದುದರಿಂದ ನೀನು ತುಲಾ ಎಂದು ಕರೆಯಲ್ಪಟ್ಟಿದ್ದೀಯೆ. ಎಲೈ ಮಂಗಳಕರೆಯೇ, ದೋಷ ದೂಷಿತನೆಂದು ಉಂಟಾಗಿರುವ ಸಂಶಯದಿಂದ ಈ ಮನುಷ್ಯನನ್ನು ಪಾರುಮಾಡು ಎಂದು ಹೇಳಿ ಪುನಃ ಶಿರಸ್ಸಿನ ಪತ್ರದಿಂದ ಕೂಡಿರುವ ಆ ಮನುಷ್ಯನನ್ನು ತಕ್ಕಡಿಗೆ ಏರಿಸಬೇಕು. ಹಾಗೆ ತೂಕಮಾಡುವಾಗ ಅವನು ಹೆಚ್ಚು ತೂಕವಿದ್ದಲ್ಲಿ ಅವನು ದೋಷಿಯಲ್ಲ. ಕಡಿಮೆಯಾಗಿದ್ದಲ್ಲಿ ಪಾಪಮಾಡಿದ್ದಾನೆ. ಎಂದು ಧರ್ಮಜ್ಞರ ಅಭಿಪ್ರಾಯ, ಶಿಕ್ಯವು ಕಿತ್ತುಹೋದರೂ ತಕ್ಕಡಿಯೇ ಬಿದ್ದುಹೋದರೂ ಪುನಃ ಸರಿಪಡಿಸಿ ತೂಕಮಾಡಬೇಕು ಆಗ ಸಂದೇಹವಿಲ್ಲದೆ ದೋಷಾದೋಷಜ್ಞಾನವು ಉಂಟಾಗುತ್ತದೆ.

ಅಗ್ನೇರ್ವಿಧಿಂ ಪ್ರವಕ್ಷ್ಯಾಮಿ ಶೃಣುಧ್ವಂಗದತೋ ಮಮ |
ಸಪ್ತಮಂಡಲಕಾನ್ ಕುರ್ಯಾದ್ದೇವಬ್ರಾಹ್ಮಣಸಂನ್ನಿಧೌ || ೪೩ ||

ಪ್ರತ್ಯಕ್ಷಂ ಕಾರಯೇದ್ದಿವ್ಯಂ ರಾಜ್ಞೋ ವಾಧಿಕೃತಸ್ಯ ವಾ |
ಬ್ರಾಹ್ಮಣಾನಾಂ ಶ್ರುತವತಾಂ ಪ್ರಕೃತೀನಾಂ ತಥೈವ ಚ || ೪೪ ||

ಪಶ್ಚಿಮೇ ಮಂಡಲೇ ತಿಷ್ಠೇತ್ ಪ್ರಾಙ್ಮುಖಃ ಪ್ರಾಂಜಲಿಃ ಶುಚಿಃ |
ಚತುರಸ್ರೇ ಯಥಾ ಅಸ್ಮಿನ್ ಕೃತ್ವಾ ಚೈವ ಸಮೌಕರೌ || ೪೫ ||

ಲಕ್ಷಯೇಯುಃ ಕ್ಷತಾದೀನಿ ಹಸ್ತಯೋಸ್ತಸ್ಯ ಕಾರಿಣಃ |
ಸಪ್ತಾಶ್ವತ್ಥಸ್ಯ ಪತ್ರಾಣಿ ಬಧ್ನೀಯುಃ ಕರಯೋಸ್ತತಃ || ೪೬ ||

ನವೇನ ಸಿತಸೂತ್ರೇಣ ಕಾರ್ಪಾಸೇನ ದ್ವಿಜೋತ್ತಮಾಃ |
ತತಸ್ತು ಸುಸಮಂ ಕೃತ್ವಾ ಅಂಗುಲಂ ತ್ವೇಕಮಾಯಸಂ || ೪೭ ||

ಪಿಂಡಂ ಹುತಾಶಸಂತಪ್ತಂ ಪಂಚಾಶತ್ಪಲಿಕಂ ದೃಢಂ |
ಆದೌ ಪೂಜಾಂ ಹುತಾಶಸ್ಯ ಕಾರಯೇದ್ವಸುಧಾಧಿಪಃ || ೪೮ ||

೪೩–೫೪. ಅಗ್ನಿಪರೀಕ್ಷೆಯ ವಿಧಿಯನ್ನು ಹೇಳುತ್ತೇನೆ ಕೇಳಿರಿ. ದೇವ ಬ್ರಾಹ್ಮಣ ಸನ್ನಿಧಾನದಲ್ಲಿ ಏಳು ಮಂಡಲಗಳನ್ನು ಮಾಡಬೇಕು. ಈ ದಿವ್ಯ ಪರೀಕ್ಷೆಯನ್ನು ರಾಜನ ಅಥವಾ ಅವನಿಂದ ಆಜ್ಞೆಹೊಂದಿರುವವನ ಪ್ರತ್ಯಕ್ಷದಲ್ಲಿಯೇ ಮಾಡಬೇಕು. ಶಾಸ್ತ್ರಜ್ಞರಾದ ಬ್ರಾಹ್ಮಣರು ಮತ್ತು ಪ್ರಜೆಗಳೂ ಎದುರಿಗಿರಬೇಕು. ಚಚ್ಚೌಕವಾದ ಪಶ್ಚಿಮಮಂಡಲದಲ್ಲಿ ಶುಚಿಯಾದ ಮನುಷ್ಯನು ಕೈಗಳನ್ನು ಸಮವಾಗಿಟ್ಟುಕೊಂಡು ಪೂರ್ವಾಭಿಮುಖನಾಗಿ ಕೂಡಬೇಕು. ಹಾಗೆ ಕುಳಿತವನ ಕೈಗಳಲ್ಲಿ ಗಾಯಗಳಾಗುವುವೂ ಇಲ್ಲವೇ ಎಂಬುದನ್ನು ಭೃತ್ಯರು ನೋಡಬೇಕು ಆಮೇಲೆ ಏಳು ಅಶ್ವತ್ಥದ ಎಲೆಗಳನ್ನು ಅವನ ಕೈಗಳಿಗೆ ಕಟ್ಟಬೇಕು. ಬ್ರಾಹ್ಮಣರು ಹೊಸದಾದ ಬಿಳಿಯ ದಾರವನ್ನೂ ಕಟ್ಟಬೇಕು. ಅನಂತರ ಅಂಗುಲಪರಿಮಾಣ ಉಳ್ಳ ನಾಲ್ಕುಕಡೆಗಳಲ್ಲೂ ಸಮವಾಗಿರುವ ಐವತ್ತು ಪಲತೂಕಉಳ್ಳ ದೃಢವಾದ ಕಬ್ಬಿಣದ ಗಟ್ಟಿಯನ್ನು ಕಾಯಿಸಿ ಸಿದ್ಧಪಡಿಸಬೇಕು. ಮೊದಲು ಧೊರೆಯು ಅಗ್ನಿಗೆ ಕೆಂಪುಚಂದನದ ಧೂಪದಿಂದಲೂ, ಕೆಂಪುಹೂವುಗಳಿಂದಲೂ ಪೂಜೆಮಾಡಿಸಬೇಕು ದೋಷಿಯಾದವನ ತಲೆಗೆ ಮಂತ್ರದ ಪಟ್ಟಿಯನ್ನೂ ಕಟ್ಟಬೇಕು. ಬ್ರಾಹ್ಮಣೋಕ್ತ

ರಕ್ತಚಂದನಧೂಪಾಭ್ಯಾಂ ರಕ್ತಪುಷ್ಪೈಸ್ತಥೈವ ಚ ।
ಅಭಿಶಸ್ತಸ್ಯ ಮಂತ್ರಂ ಚ ಬಧ್ನೀಯಾತ್ತಸ್ಯ ಮೂರ್ಧನಿ ॥ ೪೯ ॥

ಮಂತ್ರೇಣಾನೇನ ಸಂಯುಕ್ತಂ ಬ್ರಾಹ್ಮಣಾಭಿಹಿತೇನ ತು ।
ತ್ವಮಗ್ನೇ ವೇದಾಶ್ಚತ್ವಾರಸ್ತ್ವಂ ಚ ಯಜ್ಞೇಷು ಹೂಯಸೇ ॥ ೫೦ ॥

ತ್ವಂ ಮುಖಂ ಸರ್ವದೇವಾನಾಂ ತ್ವಂ ಮುಖಂ ಬ್ರಹ್ಮವಾದಿನಾಂ ।
ಜಠರಸ್ಥೋಽಸಿ ಭೂತಾನಾಂ ತ್ವಂ ಚ ವೇತ್ಸಿ ಶುಭಾಶುಭಂ ।
ಪಾಪೇಷು ದರ್ಶಯಾತ್ಮಾನಮರ್ಚಿಷ್ಮಾನ್ಭವ ಪಾವಕ ॥ ೫೧ ॥

ಅಥವಾ ಶುದ್ಧಭಾವೇಷು ಶೀತೋ ಭವ ಮಹಾಬಲ ।
ತತೋಽಭಿಶಸ್ತಃ ಶನಕೈರ್ಮಂಡಲಾನಿ ಪರಿಕ್ರಮೇತ್ ॥ ೫೨ ॥

ಪರಿಕ್ರಮ್ಯ ಶನೈರ್ಜಹ್ಯಾಲ್ಲೋಹಪಿಂಡಂ ತಥಾಕ್ಷತೌ ।
ವಿಮುಕ್ತಹಸ್ತಂ ತಂ ಪಶ್ಚಾತ್ಕಾರಯೇದ್ವ್ರೀಹಿಮರ್ದನಂ ॥ ೫೩ ॥

ನಿರ್ವಿಕಾರೌ ಕರೌ ದೃಷ್ಟ್ವಾ ಶುದ್ಧೋ ಭವತಿ ಧರ್ಮತಃ ।
ಭಯಾದ್ವಾಪಾತಯೇದ್ಯಸ್ತು ದಗ್ಧೋ ವಾ ನ ವಿಭಾವ್ಯತೇ ॥ ೫೪ ॥

ವಾದ ಈ ಮಂತ್ರವನ್ನು ಆ ಪಟ್ಟಿಯಲ್ಲಿ ಬರೆದಿರಬೇಕು. ಎಲೈ ಅಗ್ನಿದೇವನೇ, ನೀನು ಚತುರ್ವೇದಸ್ವರೂಪನಾಗಿದ್ದೀಯೆ. ನೀನೇ ಯಜ್ಞದಲ್ಲಿ ಹೋಮ ಮಾಡಿಸಿಕೊಳ್ಳತಕ್ಕವನು. ಎಲ್ಲಾ ದೇವತೆಗಳಿಗೂ, ಬ್ರಹ್ಮವಾದಿಗಳಿಗೂ ನೀನೇ ಮುಖದಂತೆ ಪ್ರಧಾನನಾಗಿದ್ದೀಯೆ. ಎಲ್ಲಾ ಪ್ರಾಣಿಗಳ ಜಠರದಲ್ಲಿದ್ದುಕೊಂಡು ಶುಭಾಶುಭಗಳೆಲ್ಲವನ್ನೂ ತಿಳಿದಿದ್ದೀಯೆ. ಪಾಪಗಳ ವಿಷಯದಲ್ಲಿ ನಿನ್ನ ಸ್ವರೂಪವನ್ನು ತೋರಿಸು. ಜ್ವಾಲೆಯಿಂದ ಬೆಳಗುವವನಾಗು, ಅಥವಾ ಶುದ್ಧಸ್ವಭಾವವುಳ್ಳವರಲ್ಲಿ ಶೀತಲನಾಗಿ ಸುಖಪ್ರದನಾಗು. ಈ ಮಂತ್ರದಿಂದ ಕೂಡಿದ ಪಟ್ಟಿಯನ್ನು ತಲೆಯಲ್ಲಿ ಕಟ್ಟಿದ ಮೇಲೆ ಆ ದೋಷಿಯು ಕಾದ ಕಬ್ಬಿಣದಗಟ್ಟಿಯನ್ನು ಧರಿಸಿ ಮೆಲ್ಲಗೆ ಮಂಡಲಗಳನ್ನು ಪ್ರದಕ್ಷಿಣ ಮಾಡಬೇಕು. ಆ ಮೇಲೆ ಆ ಲೋಹದ ಗಟ್ಟಿಯನ್ನು ಮೆಲ್ಲಗೆ ಕೈಯಿಂದ ಕೆಳಕ್ಕೆ ಹಾಕಬೇಕು. ಅನಂತರ ಅವನ ಕೈಗಳಿಗೆ ಭತ್ತವನ್ನು ಹಾಕಿ ಮರ್ದಿಸಬೇಕು ಆ ಕೈಗಳಲ್ಲಿ ಅಗ್ನಿಯಿಂದ ಯಾವ ವಿಕಾರವೂ ಆಗದಿದ್ದಲ್ಲಿ ಅವನು ಶುದ್ಧನೆಂದು ತಿಳಿಯಬೇಕು. ಭಯದಿಂದ ಗಟ್ಟಿಯನ್ನು ಕೆಳಗೆ ಹಾಕಿದರೂ ಸುಟ್ಟಿದ್ದದ್ದು ಕೈಗಳಲ್ಲಿ ತಿಳಿಯದಿದ್ದರೂ, ಸಹ ಮೇಲೆ ಹೇಳಿರುವಂತೆ ಪುನಃ ಮಾಡಿಸಬೇಕು.

ಪುನಸ್ತು ಚಾಹರೇಲ್ಲೋಹಂ ವಿಧಿರೇಷ ಪ್ರಕೀರ್ತಿತಃ ।
ತೋಯಸ್ಯಾಥ ಪ್ರವಕ್ಷ್ಯಾಮಿ ವಿಧಿಂ ಧರ್ಮ್ಯಂ ಸನಾತನಂ ॥ ೫೫ ॥

ಶೈವಾಲಮತ್ಸ್ಯನಕ್ರಾದ್ಯೈರ್ವರ್ಜಿತೇ ಸ್ಥಾವರೇ ಜಲೇ ।
ಧರ್ಮಸ್ಥೋ ಣಾ ತತ್ರಕಾರ್ಯೋ ಪುರುಷಂ ಧರ್ಮವತ್ಸಲಂ ॥ ೫೬ ॥

ನಾಭಿದಘ್ನೋದಕಸ್ಥಸ್ಯ ಗೃಹೀತ್ವೋತ್ತಂಸಮಾವಿಶೇತ್ ।
ಮಧ್ಯಸ್ಥೇನಾಥ ಧನುಷಾ ಮಧ್ಯಸ್ಥಃ ಪುರುಷೋಽಪರಃ ॥ ೫೭ ॥

ಇಷುಮೋಕ್ಷಂ ತದಾ ಕುರ್ಯಾದ್ದೇಶೇ ತೃಣವಿವರ್ಜಿತೇ ।
ಶರಮೋಕ್ಷೇ ಸಮೇ ಕಾಲೇ ನಿಮಜ್ಜೇತ್ ಪುರುಷೋಽಪ್ಯಸೌ ॥ ೫೮ ॥

ಮೂರ್ಧ್ನಿ ವಿನ್ಯಸ್ತಪತ್ರಸ್ತು ಪತ್ರೇ ಚೈತಾನ್ನಿವೇಶಯೇತ್ ।
ಆದಿದೇವೋಽಸಿ ದೇವಾನಾಂ ಶೌಚಸ್ಯಾಸ್ಯಾಯನಂ ಪರಂ ॥ ೫೯ ॥

ಪಂಚಾನಾಂ ಲೋಕಪಾಲಾನಾಂ ತ್ವಂ ವರಿಷ್ಠಂ ಜಗತ್ಪತೇ ।
ತ್ರಾಯಸ್ವೈನಂ ನರಂ ಪಾಪಾತ್ಪಶ್ಯಸಿ ತ್ವಂ ಶುಭಾಶುಭಂ ॥ ೬೦ ॥

೫೫-೬೨. ಜಲದಿಂದ ಮಾಡುವ ಧರ್ಮಪರೀಕ್ಷೆಯನ್ನು ಮುಂದೆ ಹೇಳುತ್ತೇನೆ. ಪಾಚಿ, ಮೊಸಳೆ, ದೊಡ್ಡ ಮೀನುಗಳು ಇವಾವುವೂ ಇಲ್ಲದೆ ಸ್ಥಿರವಾಗಿ ನಿಂತಿರುವ ಜಲದಲ್ಲಿ ಧರ್ಮಾಭಿಮಾನಿಯಾದ ಒಬ್ಬ ಸತ್ಪುರುಷನನ್ನು ನಿಲ್ಲಿಸಬೇಕು. ಅವನು ಹೊಕ್ಕಳವರಿಗೂ ನೀರಿರುವ ಜಲಕ್ಕೆ ಮನುಷ್ಯನನ್ನು ತಲೆಹಿಡಿದು ಕರೆದು ಕೊಂಡು ಹೋಗಬೇಕು. ಮಧ್ಯಸ್ಥನಾದ ಒಬ್ಬನು ಧನುಸ್ಸನ್ನು ಹಿಡಿದು ಹುಲ್ಲು ಮೊದಲಾದ ವಿಲ್ಲದಿರುವ ಸಮಸ್ಥಳಕ್ಕೆ ಬಾಣಬಿಡಬೇಕು. ಬಾಣ ಬಿಡುವಕಾಲಕ್ಕೆ ಸರಿಯಾಗಿ ನೀರಿನಲ್ಲಿರುವವನು ಮುಳುಗಬೇಕು. ಅವನ ತಲೆಗೆ ಈ ಮಂತ್ರದಿಂದ ಕೂಡಿದ ಪಟ್ಟಿಯನ್ನು ಕಟ್ಟಿರಬೇಕು. ಎಲೈ ಜಲದೇವನೇ, ದೇವತೆಗಳಗೆಲ್ಲಾ ನೀನೇ ಮೊದಲನೆಯವನಾಗಿದ್ದೀಯೆ. ಶುಚಿಗೆ ನೀನೇ ಯಜಮಾನನು. ಐದು ಲೋಕಪಾಲಕರಲ್ಲಿ ನೀನೇ ಉತ್ತಮನಾಗಿದ್ದೀಯೆ. ಎಲೈ ಜಗತ್ಪತಿಯೇ ಶುಭಾ ಶುಭಗಳಿಗೆ ಸಾಕ್ಷಿಯಾಗಿರುವ ನೀನೆ ಈ ಮನುಷ್ಯನನ್ನು ರಕ್ಷಿಸು. ಎಲ್ಲಾ ಪ್ರಾಣಿ ಗಳ ಹೃದಯದಲ್ಲೂ ನೀನು ಸಂಚರಿಸುತ್ತೀಯೆ. ಮೋಕ್ಷದಂತೆ ಹೊಂದಲ್ಪಡತಕ್ಕವ

ಅಂತಶ್ಚರಸಿ ಭೂತಾನಾಂ ಸರ್ವೇಷಾಂ ಮೋಕ್ಷವತ್ ಸ್ಥಿತಃ ।
ಇಷು ಪ್ರಕ್ಷೇಪಣಸ್ಥಾನಾದ್ಯುವಾ ಚ ಬಲವಾನ್ನರಃ ॥ ೬೧ ॥

ಧಾವನ್ಸ ಪರಯಾ ಶಕ್ತ್ಯಾ ಶರಂ ತತ್ಸಮುಪಾತಯೇತ್ ।
ಆಗತೇತು ಶರಗ್ರಾಹೇ ತೋಯಸ್ಥಶ್ಚೇನ್ನ ದೃಶ್ಯತೇ ॥ ೬೨ ॥

ಶುದ್ಧೋ ಭವತಿ ಧರ್ಮೇಣ ಯಶ್ಚಾಪ್ಯಂಗಂ ನ ದರ್ಶಯೇತ್ ।
ವಿಷಸ್ಯಾತಃ ಪ್ರವಕ್ಷ್ಯಾಮಿ ವಿಧಿಂ ಧರ್ಮ್ಯಂ ಸನಾತನಂ ॥ ೬೩ ॥

ಶೃಂಗಿಣೋ ವತ್ಸನಾಭಸ್ಯ ಹಿಮಶೈಲೋದ್ಭವಸ್ಯ ಚ ।
ಯವಾಸ್ಸಪ್ತ ಪ್ರದಾತವ್ಯಾ ಅಥವಾ ಯದ್ಘೃತಾಪ್ಲುತಾಃ ॥ ೬೪ ॥

ಮೂರ್ಧ್ನಿ ವಿನ್ಯಸ್ತಪತ್ರಸ್ಯ ಪತ್ರೇ ಚೈತನ್ನವೇಶಯೇತ್ ।
ತ್ವಂ ವಿಷ ಬ್ರಹ್ಮಣಃ ಪುತ್ರಃ ಸತ್ಯೇ ಧರ್ಮೇ ವ್ಯವಸ್ಥಿತಃ ॥ ೬೫ ॥

ತ್ರಾಯಸ್ವೈನಂ ನರಂ ಪಾಪಾತ್ಸತ್ಯೇನಾಸ್ಯ ಭವಾಮೃತಂ ।
ಯೇನ ವೇಗೈರ್ವಿನಾಜೀರ್ಣಂ ಛರ್ದಿಮೂರ್ಛಾವಿವರ್ಜಿತಂ ॥ ೬೬ ॥

ನಾಗಿಯೂ ಇರುವೆ. (ಇದೇಮಂತ್ರ) ಬಾಣವು ಬಿದ್ದೆಡೆಯಿಂದ ಒಬ್ಬಯುವಕನು ಬಿದ್ದಿದ್ದ ಬಾಣವನ್ನು ತೆಗೆದುಕೊಂಡು ಸರ್ವಶಕ್ತಿಯಿಂದಲೂ ಓಡಿಬರಬೇಕು. ಅವನು ಬರುವವರಿಗೂ ನೀರಿನಲ್ಲಿ ಮುಳುಗಿದ್ದವನು ಮೇಲೆ ಕಾಣಿಸಿಕೊಳ್ಳದೆ ಮುಳುಗಿದ್ದಲ್ಲಿ ಅವಯವಗಳನ್ನೂ ಕಾಣಿಸಿಕೊಳ್ಳದಿದ್ದಲ್ಲಿ ಶುದ್ಧನೆಂದೇ ತಿಳಿಯಬೇಕು.

೬೩–೬೬. ಇನ್ನುಮುಂದೆ ವಿಷದಿಂದ ಮಾಡಬಹುದಾದ ದಿವ್ಯ ಪರೀಕ್ಷೆಯನ್ನು ಹೇಳುತ್ತೇನೆ. ಹಿಮಪರ್ವತದಲ್ಲಿ ಉಂಟಾದ ಶೃಂಗಿ ಎಂಬ ವತ್ಸನಾಭ ವಿಷವನ್ನು ಏಳುಯವೆಯ ಪರಿಮಾಣದಷ್ಟು ಕೊಡಬೇಕು. ಇದು ತುಪ್ಪದಲ್ಲಿ ನೆನೆಸಿದ್ದರೂ ಇರಬಹುದು. ದೋಷಿಯಾದವನ ತಲೆಗೆ ಈ ಮಂತ್ರದಿಂದ ಕೂಡಿದ ಪಟ್ಟಿಯನ್ನು ಕಟ್ಟಬೇಕು, ಎಲೈ ವಿಷವೇ ನೀನು ಬ್ರಹ್ಮನ ಮಗನಾಗಿರುವೆ. ಸತ್ಯದಲ್ಲಿಯೂ, ಧರ್ಮದಲ್ಲಿಯೂ ನಿರತನಾಗಿರುವೆ. ಇವನನ್ನು ಪಾಪದಿಂದ ರಕ್ಷಿಸು, ಇವನಲ್ಲಿ ಸತ್ಯವಿದ್ದಲ್ಲಿ ನೀನೇ ಅಮೃತವಾಗು, (ಇದೇಮಂತ್ರ) ವಿಷವನ್ನು ತಿಂದವನು ಅದರ ವೇಗವನ್ನು ಹೊಂದದೆಯೂ, ವಾಂತಿ, ಮೂರ್ಛೆ ಇವುಗಳಿಲ್ಲದೆಯೂ ಅದನ್ನು ಜೀರ್ಣಿಸಿಕೊಂಡಲ್ಲಿ ಅವನು ಶುದ್ಧನೆಂದು ತಿಳಿಯಬೇಕು. ಇದು ಧರ್ಮಜ್ಞರ ನೀತಿ.

ತಂ ತು ಶುದ್ಧಂ ವಿಜಾನೀಯಾದಿತಿ ಧರ್ಮವಿದೋ ವಿದುಃ ।
ತಂಡುಲಾನಾಂ ಪ್ರವಕ್ಷ್ಯಾಮಿ ವಿಧಿಂ ಧರ್ಮ್ಯಂ ಸನಾತನಂ ॥ ೬೭ ॥

ಚೌರ್ಯೇ ತು ತಂಡುಲಾ ದೇಯಾ ನ ಚಾನ್ಯತ್ರ ಕಥಂಚನ ।
ತಂಡುಲಾನುದಕೇ ಸಿಕ್ತ್ವಾ ರಾತ್ರೌ ತತ್ರೈವ ಸ್ಥಾಪಯೇತ್ ॥ ೬೮ ॥

ತಂಡುಲಾನ್ಕಾರಯೇಚ್ಛುದ್ಧಾಞ್ಛಾಲೀನಾಂ ಪೃಥಿವೀಪತಿಃ ।
ಮೃನ್ಮಯಂ ಭಾಜನಂ ಕೃತ್ವಾ ಸವಿತುಃ ಪುರತಃ ಸ್ಥಿತಃ ॥ ೬೯ ॥

ತಂಡುಲಾನ್ಮಂತ್ರಯೇತ್ ಶುದ್ಧಾನ್ಮಂತ್ರೇಣಾನೇನ ಧರ್ಮತಃ ।
ದೀಯತೇ ಸತ್ವಧರ್ಮಜ್ಞೈರ್ವರ್ಣಾನುಷ್ಠಾನಾಂ ವಿಶೋಧನಂ ॥ ೭೦ ॥

ತತಸ್ತಂಡುಲ ಸತ್ಯೇನ ಧರ್ಮತಸ್ತ್ರಾತುಮರ್ಹಸಿ ।
ಪ್ರಭಾತೇ ಕಾರಯೇದೇವ ಭಕ್ಷಣಾಯ ನ ಸಂಶಯಃ ॥ ೭೧ ॥

ತ್ರಿವಿಧಃ ಪ್ರಾಙ್ಮುಖಸ್ಯೇಹ ಪತ್ರೇ ನಿಷ್ಠೀವಯೇತ್ತತಃ ।
ಪಿಪ್ಪಲಸ್ಯಾಥ ಭೂರ್ಜಸ್ಯ ನ ತ್ವನ್ಯಸ್ಯ ಕಥಂ ಚನ ॥ ೭೨ ॥

೬೭–೭೨. ಇನ್ನುಮುಂದೆ ತಂಡುಲದ ಪರೀಕ್ಷೆಯನ್ನು ಹೇಳುತ್ತೇನೆ. ಕಳ್ಳತನ ಮಾಡಿದವನ ವಿಷಯದಲ್ಲಿಯೇ ಈ ತಂಡುಲದ ಪ್ರಯೋಗ ನಡೆಸಬೇಕು. ಉಳಿದ ವಿಷಯದಲ್ಲಿ ಕೂಡದು. ಅಕ್ಕಿಯನ್ನು ನೀರಿನಿಂದ ಚಿಮುಕಿಸಿ ರಾತ್ರಿಯಲ್ಲಿ ನೀರಿನಲ್ಲಿಯೇ ಇಡಬೇಕು. ಇದಕ್ಕೆ ಶುದವಾದ ಶಾಲಿಯ ಅಕ್ಕಿಯನ್ನೇ ಧೊರೆಯು ಏರ್ಪಡಿಸಬೇಕು. ಮಣ್ಣಿನಪಾತ್ರೆಯಲ್ಲಿರುವ ಆ ಅಕ್ಕಿಯನ್ನು ಸೂರ್ಯನ ಎದುರಿಗೆ ನಿಂತು ಈ ಮಂತ್ರದಿಂದ ಜಪಿಸಬೇಕು. ಎಲೈ ತಂಡುಲವೇ (ಅಕ್ಕಿಯೇ) ಧರ್ಮಜ್ಞರಾದವರು ಸತ್ಯ ಶೋಧನೆಗಾಗಿ ನಿನ್ನಿಂದಲೇ ಮನುಷ್ಯರನ್ನು ಶೋಧಿಸುತ್ತಾರೆ. ಇವನಲ್ಲಿ ಸತ್ಯವಿದ್ದಲ್ಲಿ ಅಧರ್ಮದಿಂದ ಇವನನ್ನು ಕಾಪಾಡು (ಇದೇಮಂತ್ರ) ಬೆಳಿಗ್ಗೆ ಜಪಿಸಿದ ಈ ಅಕ್ಕಿಯನ್ನು ದೋಷಿಗೆ ತಿನ್ನಿಸಬೇಕು. ಅವನು ಪೂರ್ವಾಭಿಮುಖನಾಗಿ ಮೂರುಬಾರಿ ಅರಳಿಯ ಎಲೆಯಮೇಲೆ ಎಲೆಯಮೇಲೆ ಅವನಿಂದ ಉಗುಳಿಸಬೇಕು. ಎಲೆಯೂ ಸಹ ಪಿಪ್ಪಲ (ಹಿಪ್ಪೆ) ಅಥವಾ ಭುಜಪತ್ರೆಯದೇ ಆಗಿರಬೇಕು ಬೇರೆ ಇರಬಾರದು ಆ ಉಗುಳಿನಲ್ಲಿ ರಕ್ತವು ಕಂಡುಬಂದದ್ದೇ ಆದರೆ ಅವನು ದೋಷಿ ಎಂದು ನಿಶ್ಚೈಸಬೇಕು

ಶೋಣಿತಂ ದೃಶ್ಯತೇ ಯಸ್ಯ ತಮಶುದ್ಧಂ ವಿನಿರ್ದಿಶೇತ್ ।
ಅಥಾತಃ ಸಂಪ್ರವಕ್ಷ್ಯಾಮಿ ತಪ್ತಮಾಷಕನಿರ್ಣಯಂ ॥ ೭೩ ॥

ಕಾರಯೇದಾಯಸಂ ಪಾತ್ರಂ ತಾಮ್ರಂ ವಾ ಷೋಡಶಾಂಗುಲಂ ।
ಚತುರಂಗುಲಖಾತಂ ತು ಮನ್ಮಯಂ ವಾಪಿ ಕಾರಯೇತ್ ॥ ೭೪ ॥

ಪೂರಯೇದ್ಘೃತತೈಲಾಭ್ಯಾಂ ಪಲೈರ್ವಿಂಶತಿಭಿಸ್ತತಃ ।
ಸುತಪ್ತೇ ನಿಕ್ಷಿಪೇತ್ತತ್ರ ಸುವರ್ಣಸ್ಯ ತು ಮಾಷಕಂ ॥ ೭೫ ॥

ವಹ್ನ್ಯುಕ್ತಂ ವಿನ್ಯಸೇನ್ಮಂತ್ರಮಭಿಶಸ್ತಸ್ಯ ಮೂರ್ಧನಿ ।
ಅಂಗುಷ್ಠಾಂಗುಲಿಯೋಗೇನ ತಪ್ತಮಾಷಂ ಸಮುದ್ಧರೇತ್ ॥ ೭೬ ॥

ಶುದ್ಧಂ ಜ್ಞೇಯಮದಗ್ಧಂ ತು ವಿಸ್ಫೋಟಾದಿವಿವರ್ಜಿತಂ ।
ಫಾಲಶುದ್ಧಿಂ ಪ್ರವಕ್ಷ್ಯಾಮಿ ಶೃಣುಧ್ವಂ ದ್ವಿಜಪುಂಗವಾಃ ॥ ೭೭ ॥

ಆಯಸಂ ದ್ವಾದಶಪಲಂ ಘಟಿತಂ ಫಾಲಮುಚ್ಯತೇ ।
ಅಷ್ಟಾಂಗುಲಂ ಸಮಂ ದೀರ್ಘಂ ಚತುರಂಗುಲವಿಸ್ತೃತಂ ॥ ೭೮ ॥

೭೩–೭೬. ಇನ್ನುಮುಂದೆ ತಪ್ತಮಾಷಕವೆಂಬ ದಿವ್ಯ ಪರೀಕ್ಷೆಯನ್ನು ಹೇಳುತ್ತೇನೆ. ಕಬ್ಬಿಣ, ಅಥವಾ ತಾಮ್ರದಿಂದ ಹದಿನಾರು ಅಂಗುಲದ ಪಾತ್ರೆಯನ್ನು ಮಾಡಿಸಬೇಕು. ನಾಲ್ಕು ಅಂಗುಲ ಆಳದ ಮಣ್ಣಿನ ಪಾತ್ರೆಯನ್ನಾದರೂ ಮಾಡಿಸಬಹುದು. ಆ ಪಾತ್ರೆಗೆ ಇಪ್ಪತ್ತು ಪಲತೂಕದ ತುಪ್ಪ ಮತ್ತು ಎಣ್ಣೆಯನ್ನು ತುಂಬಬೇಕು. ಚನ್ನಾಗಿ ಕಾದ ಆ ಎಣ್ಣೆಯಲ್ಲಿ ಮಾಷಪರಿಮಾದ ಚಿನ್ನವನ್ನು ಇಡಬೇಕು. ಅಗ್ನಿಪರೀಕ್ಷೆಯಲ್ಲಿ ಹೇಳಿರುವ ಮಂತ್ರದಿಂದ ಕೂಡಿದ ಪಟ್ಟಿಯನ್ನು ದೋಷಿಯಾದವನ ತಲೆಯಲ್ಲಿ ಕಟ್ಟಬೇಕು ಅನಂತರ ಅವನು ಅಂಗುಷ್ಠ ಮತ್ತು ಪಾತ್ರೊಂದು (ತರ್ಜನಿ) ಬೆರಳಿಂದ ಆ ಚಿನ್ನವನ್ನು ಮೇಲಕ್ಕೆ ತೆಗೆಯಬೇಕು. ಅವನಿಗೆ ಬೆರಳುಗಳಲ್ಲಿ ಗುಳ್ಳೆಗಳೂ ಆಗದೆಯೂ ಸುಡದೆಯೂ ಇದ್ದಲ್ಲಿಯೂ ಅವನು ಶುದ್ಧನೆಂದು ತಿಳಿಯಬೇಕು.

೭೭–೮೧. ಇನ್ನುಮುಂದೆ ಫಾಲಶುದ್ಧಿಯನ್ನು ಹೇಳುತ್ತೇನೆ ಕೇಳಿರಿ ಫಾಲ ಎಂದರೆ ಹನ್ನೆರಡು ಪಲ ತೂಕವುಳ್ಳ ಎಂಟು ಅಂಗುಲ ಉದ್ದ ಮತ್ತು ನಾಲ್ಕು ಅಂಗುಲ ಅಗಲದ ಕಬ್ಬಿಣದ ಪಟ್ಟಿ, ದೋಷಿಯಾದವನ ತಲೆಗೆ ಅಗ್ನಿಪರೀಕ್ಷೆಯಲ್ಲಿ ಹೇಳಿರುವ

ವಹ್ನ್ಯೈಕ್ತಂ ವಿನ್ಯಸೇತ್ಪತ್ರಮಭಿಶಸ್ತಸ್ಯ ಮೂರ್ಧನಿ ।
ತ್ರಿಃ ಪರಾವರ್ತಯೇಜ್ಜಿಹ್ವಾಂ ಲಿಹತಃ ಸಾರ್ಧಮಂಗುಲಂ ॥ ೭೯ ॥

ಗವಾಂ ಕ್ಷೀರಂ ಪ್ರದಾತವ್ಯಂ ಜಿಹ್ವಾಶೋಧನಮುತ್ತಮಂ ।
ಜಿಹ್ವಾಪರೀಕ್ಷಣಂ ಕುರ್ಯಾದ್ವಗ್ಧಾಂ ಚೇನ್ನ ವಿಭಾವ್ಯತೇ ॥ ೮೦ ॥

ತಂ ವಿಶುದ್ಧಂ ವಿಜಾನೀಯಾದ್ವಿಶುದ್ಧಂ ಚೈವ ಮೋಕ್ಷಯೇತ್ ।
ಕೋಶಸ್ಯಾಥ ಪ್ರವಕ್ಷ್ಯಾಮಿ ವಿಧಿಂ ಧರ್ಮ್ಯಂ ಸನಾತನಂ ॥ ೮೧ ॥

ಯೋಯೋ ಯಾಂ ದೇವತಾಭಕ್ತಃ ಪಾಯಯೇತ್ತಸ್ಯ ತೋತ್ತರಂ ।
ಸಮಭಕ್ತಂ ತು ದೇವಾನಾಮಾದಿತ್ಯಸ್ಯೈವ ಕಾರಯೇತ್ ॥ ೮೨ ॥

ಉಗ್ರಾಣಾಮಪಿ ದೇವಾನಾಂ ವಧಸ್ಯೈವ ತು ದಾಪಯೇತ್ ।
ಸರ್ವೇಷಾಮೇವ ದೇವಾನಾಂ ಸ್ನಾಪಯೇದಾಯುಧಂ ಸ್ವಕಂ ॥ ೮೩ ॥

ಸ್ನಾನೋದಕಂ ವಾ ಸಕಲ ಮಾಹರೇತ ವಿಚಕ್ಷಣಃ ।
ಉನ್ಮುಖಂ ಕರಣಂ ಕೃತ್ವಾ ಪಾಯಯೇತ್ ಪ್ರಸೃತಿತ್ರಯಂ ॥ ೮೪ ॥

ಮಂತ್ರದಿಂದ ಕೂಡಿದ ಪಟ್ಟೆಯನ್ನು ಕಟ್ಟಬೇಕು. ಕಾಯಿಸಿದ ಆ ಕಬ್ಬಿಣದ ಪಟ್ಟಿಯಮೇಲೆ ದೋಷಿಯಾದವನು ಒಂದೂವರೆ ಅಂಗುಲದವರಿಗೂ ನಾಲಿಗೆಯಿಂದ ಮೂರಾವರ್ತಿ ನೆಕ್ಕಬೇಕು. ಆ ಮೇಲೆ ಅವನಿಗೆ ನಾಲಿಗೆಯ ಶೋಧನಕ್ಕಾಗಿ ಹಸುವಿನ ಹಾಲನ್ನು ಕೊಡಬೇಕು. ಅವನ ನಾಲಿಗೆಯನ್ನು ನಂತರ ಪರೀಕ್ಷಿಸಿದಲ್ಲಿ ಅದುಸುಡದಿದ್ದಲ್ಲಿ ಅವನು ಶುದ್ಧನೆಂದು ತಿಳಿದು ಬಿಟ್ಟುಬಿಡಬೇಕು.

೮೨-೮೬ ಕೋಶವೆಂಬ ದಿವ್ಯ ಶೋಧನ ವಿಧಾನವನ್ನು ಹೇಳುತ್ತೇನೆ ಕೇಳಿರಿ. ಯಾವನು ಯಾವ ದೇವತೆಯ ಭಕ್ತನಾಗಿರುವನೋ ಆಯಾ ದೇವತೆಯ ಸ್ನಾನೋದಕವನ್ನೇ ಅವನಿಗೆ ಪಾನಮಾಡಿಸಬೇಕು. ಎಲ್ಲಾ ದೇವತೆಗಳಲ್ಲಿಯೂ ಸಮಾನಭಕ್ತಿಯುಳ್ಳವನಾಗಿದ್ದಲ್ಲಿ ಸೂರ್ಯನ ಜಲವನ್ನೇ ಪಾನಮಾಡಿಸಬೇಕು. ಉಗ್ರದೇವತೆಗಳ ಜಲವನ್ನು ಕೊಲೆಯ ವ್ಯವಹಾರದಲ್ಲೇ ಕೊಡಬೇಕು. ಎಲ್ಲಾ ದೇವತೆಗಳ ಆಯಾಯ ಆಯುಧವನ್ನು ಸ್ನಾನವಮಾಡಿಸಿ ಸ್ನಾನೋದಕವನ್ನೆಲ್ಲಾ ತರಬೇಕು. ದೋಷಿಯಾದವನ ಬಾಯನ್ನು ತೆರಸಿ ಮೂರು ಬೊಗಸೆ ಆ ಸ್ನಾನೋದಕವನ್ನು ಕುಡಿಸಬೇಕು. ಇದನ್ನು ನಾನು ಮಾಡಿಯೇ ಇಲ್ಲ ಅಥವಾ ಮಲಗಿರು

ಇದಂ ಮಯಾ ನೈವ ಕೃತಂ ಕೃತಂ ವಾಪ್ಯಥ ಶಾಯಿನಾ ॥ ೮೫ ॥

ಪೀತೇ ತು ಕೋಶೇ ಪುರುಷಸ್ಯ ದೃಷ್ಟ್ವಾ
ದೇವೋಪಘಾತಂ ನೃಪಸಂಭವಂ ವಾ ।
ತ್ರಿಃ ಸಪ್ತರಾತ್ರಾಂತರತೋ ನೃಪೇಣ
ಭೃಶಂ ವಿನೇಯಃ ಪುರುಷಃ ಸ ವಿಪ್ರಾಃ ॥ ೮೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರ ಸಂವಾದೇ ಮುನೀನ್ಪ್ರತಿ ಹಂಸಗೀತಾಸು
ದಿವ್ಯಪ್ರಮಾಣನಿರೂಪಣಂ ನಾಮ
ಅಷ್ಟಾವಿಂಶತ್ಯುತ್ತರ ತ್ರಿಶತತಮೋಽಧ್ಯಾಯಃ

ವಾಗ (ಅಜ್ಞಾನದಿಂದ) ಮಾಡಿರಬೇಕು ಎಂದು ಅವನು ಹೇಳಬೇಕು. ಈ ಜಲವನ್ನು ಕುಡಿದಮೇಲೆ ಅವನಿಗೆ ಉಂಟಾಗಬಹುದಾದ ದೈವಿಕವಾದ ಅಥವಾ ರಾಜಸತೊಂದರೆಯನ್ನು ಇಪ್ಪತ್ತೊಂದು ದಿನದೊಳಗೆ ನೋಡಿ ರಾಜನಾದವನು ಅವನನ್ನು ಶಿಕ್ಷಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ದಿವ್ಯಪ್ರಮಾಣನಿರೂಪಣವೆಂಬ ಮುನ್ನೂರ ಇಪ್ಪತ್ತೆಂಟನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನತ್ರಿಂಶದುತ್ತರ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಏಕಾ ದ್ವೇ ಚ ತಥಾ ತಿಸ್ರಶ್ಚತಸ್ರಶ್ಚ ಯಥಾಕ್ರಮಂ ।
ಶೂದ್ರವಿಟ್ ಕ್ಷತ್ರವಿಪ್ರಾಣಾಂ ಭಾರ್ಯಾಃ ಪ್ರೋಕ್ತಾ ಮನೀಷಿಭಿಃ ॥ ೧ ॥

ಶೂದ್ರೈವ ಭಾರ್ಯಾ ಶೂದ್ರಸ್ಯ ಸಾ ಚ ಸ್ವಾ ಚ ವಿಶಃ ಸ್ಮೃತೇ ।
ತೇ ಚ ಸ್ವಾ ಚ ತಥಾ ರಾಜ್ಞಸ್ತಾಶ್ಚ ಸ್ವಾ ಚಾಗ್ರಜನ್ಮನಃ ॥ ೨ ॥

ನ ವಿವರ್ಣಾ ಭವೇದ್ಭಾರ್ಯಾ ಕದಾಚಿದಪಿ ಕಸ್ಯಚಿತ್ ।
ಸವರ್ಣೈವ ಭವೇಜ್ಜ್ಯೇಷ್ಠಾ ಅಸವರ್ಣಾಸು ಸತ್ಸ್ವಪಿ ॥ ೩ ॥

ಮುನ್ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ.

೧-೪. ಹಂಸವು ಹೇಳುತ್ತದೆ:—ಶೂದ್ರ, ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಇವರಿಗೆ ಕ್ರಮವಾಗಿ ಒಬ್ಬಳು, ಇಬ್ಬರು, ಮೂವರು, ನಾಲ್ವರು ಭಾರ್ಯೆಯರಿರ ಬಹುದೆಂದು ಶಾಸ್ತ್ರಜ್ಞರು ಹೇಳಿದ್ದಾರೆ. ಶೂದ್ರನಿಗೆ ಶೂದ್ರಸ್ತ್ರೀಯೊಬ್ಬಳೇ. ವೈಶ್ಯನಿಗೆ, ಶೂದ್ರ, ಮತ್ತು ಸ್ವಜಾತೀಸ್ತ್ರೀ, ಕ್ಷತ್ರಿಯನಿಗೆ ಶೂದ್ರ, ವೈಶ್ಯ, ಮತ್ತು ಸ್ವಜಾತಿಸ್ತ್ರೀಯರು, ಬ್ರಾಹ್ಮಣನಿಗೆ ಶೂದ್ರ, ವೈಶ್ಯ, ಕ್ಷತ್ರಿಯ ಮತ್ತು ಸ್ವಜಾತಿಯ ಸ್ತ್ರೀಯರು, ಯಾವ ವರ್ಣದವನಿಗಾದರೂ ಯಾವಾಗಲೂ ಅಸವರ್ಣರಾದ ಇತರ ಸ್ತ್ರೀಯರು ಇದ್ದರೂ ಜ್ಯೇಷ್ಠಭಾರ್ಯೆಯು ಮಾತ್ರ ಸವರ್ಣದವಳೇ ಆಗಿರಬೇಕು. ವಿವಾಹವು ಎಂಟು ವಿಧವೆಂದು ಹೇಳಲ್ಪಟ್ಟಿದೆ. ಅದರ ಲಕ್ಷಣಗಳನ್ನೂ ಹೇಳುತ್ತೇನೆ.

ಅಷ್ಟೌ ವಿವಾಹಾ ನಿರ್ದಿಷ್ಟಾಸ್ತೇಷಾಂ ವಕ್ಷ್ಯಾಮಿ ಲಕ್ಷಣಂ ।
ಆಹೂಯ ದಾನಾತ್'ಬ್ರಾಹ್ಮಸ್ತು ಋತ್ವಿಜೈರ್ದೈವ ಉಚ್ಯತೇ ॥ ೪ ॥

ಗೋಯುಗಗ್ರಹಣಾದಾರ್ಷಃ ಪ್ರಾಜಾಪತ್ಯೋಽರ್ಥಿತೇ ತಥಾ ।
ಆಸುರೋ ದ್ರವಿಣಾದಾನಾದ್ಗಾಂಧರ್ವಸ್ತು ಮಿಥಾದ್ದ್ವಯೋಃ ॥ ೫ ॥

ರಾಕ್ಷಸೋ ಯುದ್ಧಹರಣಾತ್ಪೈಶಾಚಃ ಕನ್ಯಕಾಚ್ಛಲಾತ್ ।
ಪ್ರಾಜಾಪತ್ಯಸ್ತಥಾ ದೈವೋ ಬ್ರಾಹ್ಮಶ್ಚಾಪಿ ಶುಭಾಸ್ತ್ರಯಃ ॥ ೬ ॥

ಗಾಂಧರ್ವೋ ರಾಕ್ಷಸಶ್ಚೈವ ಮಧ್ಯಮೌ ಪರಿಕೀರ್ತಿತೌ ।
ಆಸುರಶ್ಚೈವ ಪೈಶಾಚ ಆರ್ಷಶ್ಚೈವ ತಥಾಧಮಾಃ ॥ ೭ ॥

ನ ತೇ ಕಾರ್ಯಾಃ ಪ್ರಯತ್ನೇನ ಕದಾಚಿದಪಿ ಕೇನಚಿತ್ ।
ಆಸುರಸ್ಯ ತಥಾರ್ಷಸ್ಯ ವಿಶೇಷೋ ನೈವ ವಿದ್ಯತೇ ॥ ೮ ॥

ವರನನ್ನು ಕರೆದು ಕನ್ಯೆಯನ್ನು ದಾನಮಾಡಿದಲ್ಲಿ ಅದು ಬ್ರಾಹ್ಮವಿವಾಹ, ಋತ್ವಿಕ್ಕುಗಳೇ ದಾನಮಾಡಿದಲ್ಲಿ ದೈವವಿವಾಹ.

೫-೭. ಎರಡು ಗೋವುಗಳನ್ನು ಹೊಂದಿ ಕನ್ಯಾದಾನಮಾಡಿದಲ್ಲಿ ಆರ್ಷ ವಿವಾಹ, ಯಾಚನೆಮಾಡಿದ ವರನಿಗೆ ಮಾಡುವ ಕನ್ಯಾದಾನವು ಪ್ರಾಜಾಪತ್ಯ ವಿವಾಹ, ಹಣವನ್ನು ತೆಗೆದುಕೊಂಡು ಮಾಡಿದ ಕನ್ಯಾದಾನವು ಆಸುರವಿವಾಹ, ವಧೂವರರ ಅನುಮತಿಯಿಂದಲೇ ಆದ ವಿವಾಹವು ಗಾಂಧರ್ವ, ಯುದ್ಧದಲ್ಲಿ ಜಯಿಸಿ ಅಪಹೃತಳಾದ ಕನ್ಯೆಯ ವಿವಾಹವು ರಾಕ್ಷಸ, ಕನ್ಯೆಯನ್ನು ಮೋಸಮಾಡಿ ಹೊಂದಿದ ವಿವಾಹವು ಪೈಶಾಚ, ಇವುಗಳಲ್ಲಿ ಪ್ರಾಜಾಪತ್ಯ, ದೈವ, ಬ್ರಾಹ್ಮ ಈ ಮೂರು ವಿವಾಹಗಳು ಶುಭಕರ. ಗಾಂಧರ್ವ, ರಾಕ್ಷಸಗಳು ಮಧ್ಯಮ, ಅಸುರ, ಪೈಶಾಚ, ಆರ್ಷ ಇವುಗಳು ಅಧಮಗಳು.

೮-೧೦. ಈ ಅಧಮವಿವಾಹಗಳನ್ನು ಯಾವಾಗಲೂ, ಯಾರೂ ಮಾಡ ಬಾರದು. ಆಸುರಕ್ಕೂ ಆರ್ಷಕ್ಕೂ ಏನೂ ವಿಶೇಷವಿಲ್ಲ. ಇವುಗಳಲ್ಲಿ ಹೆಚ್ಚಾಗಲಿ

ಶುಲ್ಕಮೇವ ತತೋ ಜ್ಞೇಯಮಲ್ಪಂ ವಾ ಯದಿ ವಾ ಬಹು ।
ಪ್ರಾಣಿವಿಕ್ರಯಿಣಃ ಸರ್ವೇ ನರಕಂ ಯಾಂತಿ ಮಾನವಾಃ ॥ ೯ ॥

ವಿಶೇಷೇಣ ಚ ಯಃ ಪುತ್ರಂ ವಿಕ್ರೀಣಾತಿ ಸ್ವಕಂ ನರಃ ।
ನರಕೇ ವಸತಿಂ ತಸ್ಯ ಬಹೂನಬ್ದಗಣಾನ್ವಿದುಃ ॥ ೧೦ ॥

ಮೃತೇ ಭರ್ತರಿ ಯಾ ಕನ್ಯಾ ಕೇವಲಂ ಹಸ್ತದೂಷಿತಾ ।
ಸಾ ಚೇದಕ್ಷತಯೋನಿಃ ಸ್ಯಾತ್ಪುನಃ ಸಂಸ್ಕಾರಮರ್ಹತಿ ॥ ೧೧ ॥

ಇತ್ಯೇವಂ ಕೇಚಿದಿಚ್ಛಂತಿ ನ ತನ್ಮಮ ಮತಂ ದ್ವಿಜಾಃ ।
ಸಪ್ತಮೇ ಹಿ ಪದೇ ವೃತ್ತೇ ನಾನ್ಯಮರ್ಹತಿ ಸಾ ಪತಿಂ ॥ ೧೨ ॥

ವಾಚಾ ದತ್ತಾ ತು ಯಾ ಕನ್ಯಾ ಮಂತ್ರೈಶ್ಚೈವ ನ ಸಂಸ್ಕೃತಾ ।
ಅನ್ಯಸ್ಯ ಸಾ ಭವೇದ್ದೇಯಾ ಸತಿ ಭರ್ತರಿ ದೋಷಿಣಿ ॥ ೧೩ ॥

ಕಡಿಮೆಯಾಗಲಿ, ತೆಗೆದುಕೊಂಡುದು ಶುಲ್ಕವೇ ಆಗುತ್ತದೆ. ಇದು ಪ್ರಾಣಿ ವಿಕ್ರಯವೇ ಆದುದರಿಂದ ಇದನ್ನು ಆಚರಿಸಿದ ಮನುಷ್ಯರು ನರಕಭಾಗಿಗಳೇ ಆಗುತ್ತಾರೆ. ಇದರಲ್ಲೂ ಯಾವನು ತನ್ನ ಪುತ್ರನನ್ನೇ ವಿಕ್ರಯಿಸುತ್ತಾನೆಯೋ ಅವನಿಗೆ ಬಹುವರ್ಷ ನರಕವಾಸ ಉಂಟಾಗುವುದೆಂದೇ ಪ್ರಾಜ್ಞರು ಹೇಳುತ್ತಾರೆ.

೧೧-೧೪. ಕನ್ಯೆಯು ಕನ್ಯಾವಸ್ಥೆಯಲ್ಲಿರುವಾಗಲೇ ಪತಿಯು ಮೃತನಾದಲ್ಲಿ ವಿವಾಹಕಾಲದಲ್ಲಿ ವರನ ಹಸ್ತಸ್ಪರ್ಶದಿಂದ ದೂಷಿತಳಾಗಿದ್ದರೂ ಅವಳು ಋತುಮತಿ ಯಾಗದೇ ಇದ್ದಲ್ಲಿ ಪುನಃ ವಿವಾಹ ಸಂಸ್ಕಾರಕ್ಕೆ ಅರ್ಹಳಾಗುತ್ತಾಳೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ ಅದು ನನಗೆ ಸಮಂತವಲ್ಲ. ಸಪ್ತಪದಿಯು ನಡೆದಮೇಲೆ ಅವಳು ಮತ್ತೊಬ್ಬ ಪತಿಯನ್ನು ಹೊಂದಲು ಅರ್ಹಳಾಗುವುದೇ ಇಲ್ಲ. ಯಾವಕನ್ಯೆ ಯನ್ನು ಕೊಡಲು ವಾಗ್ದಾನ ಮಾತ್ರ ಆಗಿದೆಯೋ ಮಂತ್ರಪೂರ್ವಕವಾದ ವಿವಾಹ ಸಂಸ್ಕಾರವು ನಡೆದಿಲ್ಲವೋ ಅಂತಹ ಕನ್ಯೆಯನ್ನು ಮಾತ್ರ ಮೊದಲು ವಾಗ್ದಾನ ಹೊಂದಿದ್ದವನು ದೋಷಿಯಾಗಿದ್ದ ಪಕ್ಷದಲ್ಲಿ ಮತ್ತೊಬ್ಬನಿಗೆ ಕೊಟ್ಟು ವಿವಾಹ ಮಾಡಬಹುದು. [1]ವಾಗ್ದಾನ ಮಾತ್ರದಿಂದ ಪತಿಯಾಗಿದ್ದವನು, ಅದರ್ಶನಹೊಂದಿ

ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇऽಥ ಪತಿತೇ ಪತೌ[1] ।
ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥ ೧೪ ॥

ಪಿತಾ ಪಿತಾಮಹೋ ಭ್ರಾತಾ ಸಕುಲ್ಯೋ ಜನನೀ ತಥಾ ।
ಕನ್ಯಾಪ್ರದಃ ಪೂರ್ವನಾಶೇ ಪ್ರಕೃತಿಸ್ಥಃ ಪರಃ ಪರಃ ॥ ೧೫ ॥

ಯಸ್ತು ದೋಷಮನಾಖ್ಯಾಯ ಕನ್ಯಕಾಂ ಸಂಪ್ರಯಚ್ಛತಿ ।
ಸ ರಾಜ್ಞಾ ದ್ವಿಶತಂ ದಂಡ್ಯಃ ಬಿಭೃಯಾತ್ತಾಂ ಚ ಕನ್ಯಕಾಂ ॥ ೧೬ ॥

ಅದುಷ್ಟಾಮಥ ಯೋ ದುಷ್ಟಾಂ ಬ್ರೂಯಾದ್ದೋಷೇಣ ಮಾನವಃ ।
ಪ್ರಥಮಂ ಸಾಹಸಂ ತಸ್ಯ ರಾಜಾ ದಂಡಂ ಪ್ರಕಲ್ಪಯೇತ್ ॥ ೧೭ ॥

ಯಸ್ತು ದೋಷವತೀಂ ಪತ್ನೀಂ ಸಮ್ಯಕ್ತ್ವೇನಾನುವರ್ತತೇ ।
ದಂಡಯಿತ್ವಾ ಸ್ವಶಕ್ತ್ಯಾ ತಂ ಸಮೇ ಪಥಿ ನಿವೇಶಯೇತ್ ॥ ೧೮ ॥

ದ್ದರೂ, ಮೃತನಾಗಿದ್ದರೂ, ಸನ್ಯಾಸಿಯಾಗಿ ಹೊರಟರೂ, ನಪುಂಸಕನೆಂದು ತಿಳಿದರೂ, ಪತಿತನೆಂದು ತಿಳಿದರೂ ಈ ಐದು ವಿಧವಾದ ಆಪತ್ತುಗಳಲ್ಲಿಯೂ ಕನ್ಯೆಗೆ ಬೇರೆ ಪತಿಯನ್ನು ವರಿಸಲು ಶಾಸ್ತ್ರಸಮ್ಮತಿಇದೆ.

೧೫-೧೮. ತಂದೆ, ತಂದೆಯತಂದೆ, ಅಣ್ಣ, ಸಮಾನಗೋತ್ರದವನು, ತಾಯಿ, ಇವರಲ್ಲಿ ಮೊದಮೊದಲಿನವರಿಲ್ಲದಿದ್ದರೆ ಕೊನೆಕೊನೆಯುವರು ಕನ್ಯಾದಾನ ಮಾಡಲು ಅರ್ಹರಾಗುತ್ತಾರೆ. ಯಾವನು ದೋಷವನ್ನು ಮರೆಮಾಚಿ ಕನ್ಯೆಯನ್ನು ದಾನಮಾಡುತ್ತಾನೆಯೋ ಅಂತಹ ವಂಚಕನಿಗೆ ರಾಜನು ಎರಡನೂರು ದಂಡ ವಿಧಿಸಬೇಕು. ಅಂತಹ ಕನ್ಯೆಯನ್ನೂ ಸಹ ಆ ವಂಚಕನೇ ಭರಿಸಬೇಕು. ಯಾವನು ದೋಷವಿಲ್ಲದಿದ್ದರೂ ದೋಷವನ್ನು ಕನ್ಯೆಯಲ್ಲಿ ಹೇಳುತ್ತಾನೆಯೋ ಅವನಿಗೆ ಮೊದಲು ಹೆಚ್ಚಾದ ಶಿಕ್ಷೆಯನ್ನೇ ರಾಜನು ಕೊಡಬೇಕು. ದೋಷವತಿಯಾಗಿರುವ ಪತ್ನಿಯು ನಿರ್ದೋಷಿಯಾದ ಮೇಲೆಯೂ ಯಾವ ಪತಿಯು ಸರಿಯಾಗಿವರ್ತಿಸದೆ ಇರುವನೋ ಅವನಿಗೂ ಯಥಾಶಕ್ತಿ ಶಿಕ್ಷೆಕೊಟ್ಟು ರಾಜನಾದವನು ಸರಿಯಾದ ಮಾರ್ಗದಲ್ಲಿರುವಂತೆ ಪ್ರೇರಿಸಬೇಕು. ಯಾವ ಸ್ತ್ರೀಯು ಜ್ಞಾತಿಗಳ (ಸ್ವಜನಗಳ) ಬಲದಿಂದ

ಇಲ್ಲಿ ಪತ್ಯೌ ಎಂದು ಹೇಳದೆ ಪತೌ ಎಂದು ಹೇಳಿರುವುದರಿಂದ ಮುಖ್ಯವಾದ ಪತಿತ್ವವಿಲ್ಲದ ಗೌಣಪತಿಯೇ ಇಲ್ಲಿ ಶಬ್ದಸ್ವಭಾವದಿಂದ ತೋರಿಬರುತ್ತದೆಂದು ಗ್ರಂಥಕಾರರ ಭಾವ.

ಭರ್ತಾರಂ ಲಂಘಯೇದ್ಯಾತು ಸ್ತ್ರೀಜ್ಞಾತಿಬಲದರ್ಪಿತಾ ।
ತಾಂ ಶ್ವಭಿಃ ಖಾದಯೇದ್ರಾಜಾ ಸಂಸ್ಥಾನೇ ವಧ್ಯಘಾತಿನಾಂ ॥ ೧೯ ॥

ಭಾರ್ಯಾಯಾ ವ್ಯಭಿಚಾರಿಣ್ಯಾ ಪರಿತ್ಯಾಗೋ ವಿಧೀಯತೇ ॥ ೨೦ ॥

ಹೀನವರ್ಣಗಮೇ ಚಾಸ್ಯಾ ವಧಮುಕ್ತಂ ಮನೀಷಿಭಿಃ ।
ಭರ್ತ್ರನುಜ್ಞಾಂ ವಿನಾ ರಾಜಾ ಸ್ತ್ರೀಣಾಂ ಚ ಪ್ರಭವೇತ್ ಕ್ವಚಿತ್ ॥ ೨೧ ॥

ಅಶಕ್ತಭರ್ತೃಕಾಂ ನಾರೀಂ ಶಾಸಯೇತ್ತದನುಜ್ಞಯಾ ।
ಯೋನ್ಯಸ್ಮೈ ಕನ್ಯಕಾಂ ದತ್ವಾ ಭೂಯೋನ್ಯಸ್ಮೈ ಪ್ರಯಚ್ಛತಿ ॥ ೨೨ ॥

ವಿತ್ತಸ್ಯಾಂಶಂ ತುರೀಯಂ ತು ತಂ ರಾಜಾ ದಂಡಯೇನ್ನರಂ ।
ಭರ್ತೃದೋಷೇ ಸಮುತ್ಪನ್ನೇ ನ ಸಾ ದಂಡಮವಾಪ್ನುಯಾತ್ ॥ ೨೩ ॥

ಅಹಂಕಾರ ಹೊಂದಿ ಪತಿಯನ್ನೂ ಅತಿಕ್ರಮಿಸಿ ನಡೆಯುತ್ತಾಳೆಯೋ ಅವಳನ್ನು ವಧ್ಯಸ್ಥಾನದಲ್ಲಿರುವ ಘಾತಕರ ನಾಯಿಗಳಿಂದ ಕಚ್ಚಿಸಿ ರಾಜನಾದವನೇ ಕೊಲ್ಲಿಸಬೇಕು

೨೦–೨೨. ಭಾರ್ಯೆಯಾದವಳು ವ್ಯಭಿಚಾರಿಣಿಯಾಗಿದ್ದಲ್ಲಿ ಅವಳನ್ನು ಪರಿತ್ಯಾಗ ಮಾಡಬೇಕೆಂದು ಶಾಸ್ತ್ರವು ವಿಧಿಸುತ್ತದೆ ಹೀನವರ್ಣದವನನ್ನು ಅವಳು ಹೊಂದಿದ್ದಲ್ಲಿ ಅವಳನ್ನು ಕೊಲ್ಲಬೇಕೆಂದೂ ಶಾಸ್ತ್ರಜ್ಞರು ಹೇಳಿದ್ದಾರೆ. ರಾಜನಾದವನು ಕೆಲವು ಸಂದರ್ಭಗಳಲ್ಲಿ ಪತಿಯ ಅಪ್ಪಣೆ ಇಲ್ಲದಿದ್ದರೂ ಸ್ತ್ರೀಗಳ ವಿಷಯದಲ್ಲಿ ಪ್ರಭುತ್ವವನ್ನು ನಡೆಸಬಹುದು. ಗಂಡನು ಅಸಮರ್ಥನಾಗಿದ್ದಲ್ಲಿ ಅವನ ಅನುಮತಿಯಿಂದ ಸ್ತ್ರೀಯನ್ನು ಶಿಕ್ಷಿಸಬಹುದು. ಯಾವನು ಕನ್ಯೆಯನ್ನು ಒಬ್ಬನಿಗೆ ದಾನಮಾಡಿದಮೇಲೆಯೂ ಮತ್ತೊಬ್ಬನಿಗೆ ಕೊಡುತ್ತಾನೆಯೋ ಅವನನ್ನು ಅವನ ಹಣದ ನಾಲ್ಕನೆಯ ಭಾಗವನ್ನು ಮುಟ್ಟುಗೋಲಾಗಿ ತೆಗೆದುಕೊಂಡು ರಾಜನಾದವನು ಶಿಕ್ಷಿಸಬೇಕು,

೨೩–೨೭. ಪತಿಯಲ್ಲಿ ಉಂಟಾದ ದೋಷದಿಂದ ಪತ್ನಿಯು ಶಿಕ್ಷಾರ್ಹಳಾಗುವುದಿಲ್ಲ. ಯಾವನು ಋತುಕಾಲದಲ್ಲಿ ಪತ್ನಿಯನ್ನು ಹೊಂದುವುದಿಲ್ಲವೋ ಅಂತಹ

ಯಸ್ತು ನ ವ್ರಜತೇ ಭಾರ್ಯಾಮೃತುಕಾಲೇ ನರಾಧಮಃ ।
ಋತಾವೃತೌ ಭವೇದ್ದಂಡ್ಯಃ ಸ ಸುವರ್ಣಸ್ಯ ಮಾಷಕಂ ॥ ೧೪ ॥

ಆಹೂಯಮಾನಾ ಯಾ ಭಾರ್ಯಾ ಭರ್ತಾರಂ ನ ವ್ರಜೇದೃತೌ ।
ವಿವಾಸ್ಯಾ ಸಾ ಭವೇದ್ಭರ್ತ್ರಾ ದೋಷಂ ಪ್ರಖ್ಯಾಪ್ಯ ಮಾತರಂ ॥ ೧೫ ॥

ಯಸ್ತ್ಯಜೇಚ್ಚ ತಥಾ ಭಾರ್ಯಾಮದುಷ್ಟಾಂ ಪುರುಷಾಧಮಃ ।
ಸ ಸುವರ್ಣಂ ಭವೇದ್ದಂಡ್ಯೋ ಬಿಭೃಯಾತ್ತಾಂ ತಥಾ ಪುನಃ ॥ ೧೬ ॥

ವಿಷಮಂ ಪರಿಣೀತಾಸು ವರ್ತತೇ ಯಸ್ತು ಮಾನವಃ ।
ಸವರ್ಣಾಸು ಭವೇದ್ದಂಡ್ಯಃ ಸುವರ್ಣಂ ಸ ಮಹೀಕ್ಷಿತಾ ॥ ೧೭ ॥

ತ್ರೀಣಿ ವರ್ಷಾಣ್ಯುಪಾಸೀತ ಕುಮಾರ್ಯೃತುಮತೀ ಸತೀ ।
ಊರ್ಧ್ವಂ ಕಾಲಾತ್ಪರಂ ಕನ್ಯಾ ವಿಂದೇತ ಸದೃಶಂ ಪತಿಂ ॥ ೧೮ ॥

ಅಲಂಕಾರಂ ನಾದದೀತ ಪಿತ್ರ್ಯಂ ಕನ್ಯಾ ಸ್ವಯಂ ವರಾತ್ ।
ಮಾತೃಕಂ ಭ್ರಾತೃದತ್ತಂ ವಾ ಸ್ತೇಯಂ ವಾ ಸ್ಯಾದ್ವಿತಂ ಹರೇತ್ ॥ ೧೯ ॥

ನರಾಧಮನಿಗೆ ಪ್ರತಿಯೊಂದು ಋತುಕಾಲದಲ್ಲಿಯೂ ಮಾಷಪರಿಮಿತ ಸುವರ್ಣದಿಂದ ರಾಜನಾದವನು ದಂಡವಿಧಿಸಬೇಕು. ಪತಿಯು ಅಪೇಕ್ಷಿಸಿದರೂ ಯಾವಳು ಋತು ಕಾಲದಲ್ಲಿ ಅವನನ್ನು ಸೇರುವುದಿಲ್ಲವೋ ಅವಳನ್ನು ಅವಳತಾಯಿಗೆ ತಿಳಿಸಿ ತ್ಯಜಿಸ ಬೇಕು. ಯಾವನು ದೋಷವಿಲ್ಲದ ಭಾರ್ಯೆಯನ್ನೂ ತ್ಯಜಿಸುತ್ತಾನೆಯೋ ಅವನು ಒಂದು ಸುವರ್ಣ ಪರಿಮಾಣದ ಚಿನ್ನವನ್ನು ದಂಡವಾಗಿ ಕೊಟ್ಟು ಪುನಃ ಅವಳನ್ನು ಸ್ವೀಕರಿಸಬೇಕು. ಯಾವನು ಮದುವೆ ಯಾಗಿರುವ ಸವರ್ಣ ಸ್ತ್ರೀಯರ ವಿಷಯ ದಲ್ಲಿ ತಾರತಮ್ಯದಿಂದ ವರ್ತಿಸುತ್ತಾನೆಯೋ ಅವನೂ ಸಹ ಸುವರ್ಣದಿಂದ ದಂಡ್ಯ ನಾಗುತ್ತಾನೆ

೧೭-೨೦ ಬಾಲ್ಯದಲ್ಲಿರುವ ಸ್ತ್ರೀಯು ಋತುಮತಿಯಾದಮೇಲೆ ಸರಿಯಾದ ಸ್ವಭಾವದಿಂದ ಮೂರುವರ್ಷಕಾಲ ನಿರೀಕ್ಷಿಸಿದಲ್ಲಿ ಅನಂತರ ಸದೃಶನಾದ ಪತಿಯನ್ನು ಹೊಂದಿಯೇ ಹೊಂದಿಯಾಳು. ಕನ್ಯೆಯಾದವಳು ವರನಿಂದ ಅವನ ತಂದೆಗೆ ಸೇರಿರುವ ಅಲಂಕಾರಗಳನ್ನು ತಾನಾಗಿ ಸ್ವೀಕರಿಸಬಾರದು. ಹೀಗೆಯೇ ತನ್ನ ತಾಯಿ, ಮತ್ತು ಅಣ್ಣ ಇವರ ಅಲಂಕಾರವನ್ನೂ ತೆಗೆದುಕೊಳ್ಳಬಾರದು ಅದು ಕಳ್ಳತನದಿಂದ ಬಂದ

ಕನ್ಯಾಂ ತು ಚೇದೃತುಮತೀಂ ಪುರುಷೋ ನ ದದ್ಯಾತ್
ಶಕ್ತೋಽಪಿ ನ ದ್ವಿಜವರಶ್ಚ ಸ ದಂಡನೀಯಃ ।
ಸ್ವಾಮ್ಯಂ ನ ತಾಂ ಪ್ರತಿ ಚ ತಸ್ಯ ಭವೇತ್ಕದಾಚಿತ್
ಪುತ್ರೀಮೃತೌ ನ ದದತೋ ನ ಪುನರ್ದ್ವಿಜತ್ವಂ ॥ ೩೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವಿವಾಹಧರ್ಮ ನಿರೂಪಣೋ ನಾಮ ಏಕೋನತ್ರಿಂಶದುತ್ತರ ತ್ರಿಶತತಮೋಽಧ್ಯಾಯಃ

ಸ್ವತ್ತೇ ಆಗುತ್ತದೆ. ಋತುಮತಿಯಾಗಿರುವ ಕನ್ಯೆಯನ್ನು ಕೂಡ ಕೇಳುವ ಸರಿಯಾದ ವರನಿಗೂ ಯಾವನು ಕೊಡುವುದಿಲ್ಲವೋ, ಸಮರ್ಥನಾದ ಬ್ರಾಹ್ಮಣನೂ ಕೊಡದಿರುತ್ತಾನೆಯೋ ಅವನನ್ನು ರಾಜನು ದಂಡಿಸಬೇಕು. ಅವನಿಗೆ ಅಂತಹ ಕನ್ಯೆಯ ವಿಷಯದಲ್ಲಿ ಯಾವ ಯಾಜಮಾನ್ಯವೂ ಇಲ್ಲ. ಋತುಮತಿಯಾಗಿದ್ದರೂ ಅವಳನ್ನು ಕೊಡದಿರುವವನಿಗೆ ದ್ವಿಜತ್ವವೂ ಇಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರಸಂವಾದದಲ್ಲಿ ಹಂಸಗೀತೆಯ ವಿವಾಹಧರ್ಮನಿರೂಪಣವೆಂಬ ಮುನ್ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ತ್ರಿಂಶದುತ್ತರ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಔರಸಃ ಪುತ್ರಿಕಾಪುತ್ರಃ ಕ್ಷೇತ್ರಜಶ್ಚ ತಥಾ ಪರಃ ।
ಪೌನರ್ಭವಶ್ಚ ಕಾನೀನಃ ಸಹೋಢಶ್ಚ ತಥಾ ಸುತಃ || ೧ ||

ಗೂಢೋತ್ಪನ್ನೋ ದತ್ತಕಶ್ಚ ಕ್ರೀತಶ್ಚೈವ ತಥಾ ಪರಃ ।
ಅಪವಿದ್ಧಸ್ತೂಪಗತಃ ಶೂದ್ರಾಪುತ್ರಸ್ತಥೈವ ಚ || ೨ ||

ಏತೇ ದ್ವಾದಶ ವೈ ಪುತ್ರಾಸ್ತೇಷಾಂ ವಕ್ಷ್ಯಾಮಿ ಲಕ್ಷಣಂ ।
ಸಂಸ್ಕೃತಾಯಾಂ ಸ್ವಯಂ ಜಾತಃ ಪುತ್ರ ಔರಸ ಉಚ್ಯತೇ || ೩ ||

ಮುನ್ನೂರ ಮೂವತ್ತನೆಯ ಅಧ್ಯಾಯ.

೧-೭ ಹಂಸವು ಹೇಳುತ್ತದೆ:—ಔರಸ, ಪುತ್ರಿಕಾಪುತ್ರ, ಕ್ಷೇತ್ರಜ, ಪೌನರ್ಭವ, ಕಾನೀನ, ಸಹೋಢ, ಗೂಢೋತ್ಪನ್ನ, ದತ್ತಕ, ಕ್ರೀತ, ಅಪವಿದ್ಧ, ಉಪಗತ, ಶೂದ್ರಾಪುತ್ರ, ಎಂದು ಪುತ್ರರಲ್ಲಿ ಹನ್ನೆರಡು ಭೇದಗಳಿವೆ. ಇವರ ಲಕ್ಷಣಗಳನ್ನೂ ಹೇಳುತ್ತೇನೆ. ವಿವಾಹದಿಂದ ಸಂಸ್ಕೃತಗಳಾಗಿರುವ ಪತ್ನಿಯಲ್ಲಿ ತನ್ನಿಂದಲೇ ಹುಟ್ಟಿದ ಪುತ್ರನು ಔರಸನಾಗುತ್ತಾನೆ. ವಿವಾಹಕಾಲದಲ್ಲಿ ಇವಳಲ್ಲಿ ಉಂಟಾಗುವ ಮಗನು ನನ್ನ ಮಗನೇ ಆಗಬೇಕು ಎಂದು ಪ್ರತಿಜ್ಞೆಯಿಂದ

ಅಸ್ಯಾಮುತ್ಪದ್ಯತೇ ಪುತ್ರೋ ಯಃ ಸ ಮೇ ಭವಿತಾ ಸುತಃ ।
ಏಷಾ ದತ್ತಾಪಿ ಯಾ ಪಿತ್ರಾ ಪುತ್ರಿಕಾ ಸಾ ನಿಗದ್ಯತೇ ॥ ೪ ॥

ವಿನಾ ವಚನದತ್ತಾಽಪಿ ಭ್ರಾತೃಹೀನಾತು ಪುತ್ರಿಕಾ ।
ತತ್ಪುತ್ರಃ ಪುತ್ರಿಕಾಪುತ್ರೋ ದ್ವಿತೀಯಃ ಪರಿಕೀರ್ತಿತಃ ॥ ೫ ॥

ದೇವರಾದ್ವಾ ಸಗೋತ್ರಾದ್ವಾ ಬ್ರಾಹ್ಮಣಾದ್ವಾ ವಿಚಕ್ಷಣಾತ್ ।
ನಿಯೋಗೋತ್ಪಾದಿತಃ ಪುತ್ರಃ ಕ್ಷೇತ್ರಜಃ ಪರಿಕೀರ್ತಿತಃ ॥ ೬ ॥

ಸ್ವೈರಿಣೀ ಯಾ ಪತಿಂ ಹಿತ್ವಾ ಕಾಮತೋಽನ್ಯಂ ಸಮಾಶ್ರಯೇತ್ ।
ಪೌನರ್ಭವಸ್ತು ತತ್ಪುತ್ರಃ ಚತುರ್ಥಃ ಪರಿಕೀರ್ತಿತಃ ॥ ೭ ॥

ಅಸಂಸ್ಕೃತಾಯಾಮುತ್ಪನ್ನಃ ಕಾನೀನೋ ಭರ್ತುರೇವ ಸಃ ।
ಗರ್ಭಿಣೀ ಯಾ ಸಂಸ್ಕ್ರಿಯತೇ ಸಹೋಢಸ್ತತ್ಸುತೋ ಮತಃ ॥ ೮ ॥

ಗೃಹೇ ಚ ಗೂಢಮುತ್ಪನ್ನೋ ಗೃಹೋತ್ಪನ್ನಃ ಪ್ರಕೀರ್ತಿತಃ ।
ತಸ್ಯಾಂ ಸಕಾಶಾತ್‌ಕ್ರೀತಶ್ಚ ಕ್ರೀತಪುತ್ರೋ ನಿಗದ್ಯತೇ ।
ತಾಭ್ಯಾಂ ಚೈವಾಪವಿದ್ಧಸ್ತು ತ್ವಪವಿದ್ಧಸ್ತು ಸ ಸ್ಮೃತಃ ॥ ೯ ॥

ಕನ್ಯಾದಾನಮಾಡಿದವನಿಗೆ ದತ್ತಳಾದ ಕನ್ಯೆಯೂ ಪುತ್ರಿಕೆಯಾಗುತ್ತಾಳೆ. ಈ ಮಾತನ್ನು ಹೇಳದೆ ಕನ್ಯಾದಾನಮಾಡಿದ್ದರೂ ಅವಳು ಅಣ್ಣತಮ್ಮಂದಿರಿಂದ ವಿಹೀನಳಾಗಿದ್ದಲ್ಲಿ ಪುತ್ರಿಕೆಯಾಗುತ್ತಾಳೆ. ಇಂತಹವಳ ಮಗನೇ ಪುತ್ರಿಕಾ ಪುತ್ರನೆಂಬ ಎರಡನೆಯವನು. ಮೈದನನಿಂದ ಅಥವಾ ಸಗೋತ್ರನಿಂದ, ಅಥವಾ ಪಂಡಿತನಾದ ಬ್ರಾಹ್ಮಣನಿಂದ, ತನ್ನ ಪತ್ನಿಯಲ್ಲಿ ತನ್ನ ಅನುಮತಿಯಿಂದ ಹುಟ್ಟಿದವನು ಕ್ಷೇತ್ರಜನಾಗುತ್ತಾನೆ. ವ್ಯಭಿಚಾರಿಣಿಯಾದ ಪತ್ನಿಯು ಪತಿಯನ್ನು ಬಿಟ್ಟು ಕಾಮದಿಂದ ಮತ್ತೊಬ್ಬನನ್ನು ಆಶ್ರಯಿಸಿದ್ದೇ ಆದರೆ ಅವಳಲ್ಲಿ ಹುಟ್ಟಿದ ಮಗನು ನಾಲ್ಕನೆಯ ಪೌನರ್ಭವ.

೮-೧೦. ವಿವಾಹ ಸಂಸ್ಕಾರವಿಲ್ಲದಿರುವವಳಲ್ಲಿ ಪತಿಯಿಂದಲೇ ಉಂಟಾದವನು ಕಾನೀನ. ಗರ್ಭಿಣಿಯಾದವಳನ್ನೇ ವಿವಾಹ ಸಂಸ್ಕಾರ ಹೊಂದಿದಲ್ಲಿ ಅವಳಲ್ಲಿ ಹುಟ್ಟಿದವನು ಸಹೋಢ. ಮನೆಯಲ್ಲಿಯೇ ಮತ್ತೊಬ್ಬಳಲ್ಲಿ ಹುಟ್ಟಿದವನು ಗೂಢೋತ್ಪನ್ನ. ಮತ್ತೊಬ್ಬಳಿಂದ ಕ್ರಯಕ್ಕೆ ಕೊಂಡವನು ಕ್ರೀತಪುತ್ರನೆನಿಸುತ್ತಾನೆ. ಗುಟ್ಟಾಗಿ

ವಿಧೃತೋ ಯೇನ ಯಸ್ಯಾಸೌ ಪುತ್ರತ್ವೇನ ನಿಗದ್ಯತೇ ।
ಸ್ವಯಂ ಯಶ್ಚಾಭ್ಯುಪಗತಃ ಪುತ್ರತ್ವೇ ದ್ವಿಜಸತ್ತಮಾಃ ॥ ೧೦ ॥

ಆದೌ ತು ಪುತ್ರಿಕಾಪುತ್ರಃ ಪಶ್ಚಾಜ್ಜಾತಸ್ತಥೌರಸಃ ।
ಔರಸೇನ ಸಮಾಂಶಸ್ತು ತತ್ರ ಸ್ಯಾತ್ಪುತ್ರಿಕಾಸುತಃ ॥ ೧೧ ॥

ಜಾತೇ ತು ಪುತ್ರಿಕಾಪುತ್ರೇ ಕ್ಷೇತ್ರಜೋತ್ಪಾದನಂ ವೃಥಾ ।
ಸಮಾಃ ಸಮಾಂಶಿನೋ ಜ್ಞೇಯಾ ಯಾದೃಶಾಸ್ತಾದೃಶಾಃ ಸುತಾಃ ॥ ೧೨ ॥

ಪ್ರತಿಲೋಮಭವಾಃ ಪುತ್ರಾ ನ ತು ರಿಕ್ಥಸ್ಯ ಭಾಗಿನಃ ।
ಧನಭಾಗ್ಭರಣಂ ತೇಷಾಂ ಕರ್ಮಣಾ ಕರ್ತುಮರ್ಹತಿ ॥ ೧೩ ॥

ತದಪತ್ಯಾಃ ಪಿತೃವಧೇ ಭಾಗಿನಃ ಪರಿಕೀರ್ತಿತಾಃ ।
ಪೈತಾಮಹೇ ನ ತೇ ವಿತ್ತೇ ಸ್ವಾಮ್ಯಮರ್ಹಂತಿ ಕೇನಚಿತ್ ॥ ೧೪ ॥

ಹೆತ್ತವಳಿಂದಾಗಲೀ ಹೊರಗೆ ಹಾಕಲ್ಪಟ್ಟಿದ್ದವನು ಅವನನ್ನು ಸ್ವೀಕರಿಸಿ ಸಾಕಿದವನಿಗೆ ಅಪವಿದ್ಧಪುತ್ರನಾಗುತ್ತಾನೆ. ಮಗನೆಂದು ಹೇಳಿಕೊಂಡು ತಾನಾಗಿ ಬಂದು ಸೇರಿದವನು ಉಪಗತನಾಗುತ್ತಾನೆ.

೧೧–೧೪. ಮೊದಲು ಪುತ್ರಿಕಾಪುತ್ರನೇ ಇದ್ದು, ಅನಂತರ ಔರಸಪುತ್ರನು ಜನಿಸಿದಲ್ಲಿ ಅವರಿಬ್ಬರೂ ತಂದೆಯ ಆಸ್ತಿಗೆ ಸಮಾಂಶಭಾಗಿಗಳಾಗುತ್ತಾರೆ. ಪುತ್ರಿಕಾಪುತ್ರನು ಜನಿಸಿದ ಮೇಲೆ ಕ್ಷೇತ್ರಜನನ್ನು ಹೊಂದುವುದು ವ್ಯರ್ಥ. ಇತರ ಪುತ್ರರು ಹೇಗಿದ್ದರೂ ಎಲ್ಲರೂ ಸಮಾಂಶಕ್ಕೆ ಭಾಗಿಗಳಾಗುತ್ತಾರೆ. ಅಧಮ ಜಾತಿಯ ಪತ್ನಿಯಲ್ಲಿ ಹುಟ್ಟಿದ ಮಕ್ಕಳು ಆಸ್ತಿಗೆ ಭಾಗಿಗಳಾಗುವುದಿಲ್ಲ. ಧನಿಕನಾದ ತಂದೆಯೇ ಅವರ ರಕ್ಷಣಭಾರ ಹೊಂದತಕ್ಕವನು. ಅಂತಹ ಅಧಮಜಾತಿಯ ಪತ್ನಿಯ ಮಕ್ಕಳೂ ಸಹ ತಂದೆಯ ಮರಣಾನಂತರ ಭಾಗ ಹೊಂದಲು ಅರ್ಹರಾಗುತ್ತಾರೆ. ಇವರು ತಾತನ ಆಸ್ತಿಗೆ ಬಾಧ್ಯರಾಗುವುದಿಲ್ಲವೆಂದು ಕೆಲವರ ಅಭಿಪ್ರಾಯ. ಜಡರು, ಕುರುಡರು, ಕಿವುಡರು, ಹುಚ್ಚರು ಇವರಿಗೆ ದಾಯಭಾಗವಿಲ್ಲ. ಇವರ ರಕ್ಷಣೆ ಮಾತ್ರ ಯಜಮಾನನಿಗೆ ಸೇರಿದ್ದು.

ಜಡಾಂಧಮದಿರೋನ್ಮತ್ತಾ ಭರ್ತವ್ಯಾಸ್ತು ನಿರಂಶಕಾಃ ।
ತೇಷಾಮೃಕ್ಥಹರಾಃ ಪುತ್ರಾ ಧನೇ ಪೈತಾಮಹೇ ಸುತಾಃ ॥ ೧೫ ॥

ಪತಿತಾನಾಂ ನ ಭಾಗೋಽಸ್ತಿ ತತ್ಸುತಾನಾಂ ಚ ಧರ್ಮತಃ ।
ಕರ್ಮಣಃ ಪ್ರಾಕ್ಸಮುತ್ಪನ್ನಾಃ ಪತನೀಯಸ್ಯ ಯೇ ಸುತಾಃ ॥ ೧೬ ॥

ತೇಷಾಮೃಕ್ಥಂ ಪ್ರದಾತವ್ಯಂ ನ ತು ತೇ ಪತಿತಾಃ ಸ್ಮೃತಾಃ ।
ಪ್ರಾಯಶ್ಚಿತ್ತೇ ತಥಾ ಚೀರ್ಣೇ ಪತಿತೋ ಭಾಗಮರ್ಹತಿ ॥ ೧೭ ॥

ತತ್ಪುತ್ರೋಽಪಿ ತಥಾ ವಿಪ್ರಾ ನಾತ್ರ ಕಾರ್ಯಾ ವಿಚಾರಣಾ ।
ಪಿತಾ ಚೇದ್ವಿಭಜೇತ್ ಪುತ್ರಾನ್ ಸ್ವೇಚ್ಛಾ ತಸ್ಯ ಸ್ವಕೇ ಧನೇ ॥ ೧೮ ॥

ಪೈತಾಮಹೇ ತ್ವಸ್ವತಂತ್ರಃ ಪಿತಾ ಭವತಿ ಧರ್ಮತಃ ।
ಪಿತಾಮಹಾರ್ಜಿತೇ ವಿತ್ತೇ ಪಿತುಃ ಪುತ್ರಸ್ಯ ಚೋಭಯೋಃ ॥ ೧೯ ॥

ಸ್ವಾಮ್ಯಂ ತು ಸದೃಶಂ ಜ್ಞೇಯಂ ಪುತ್ರಶ್ಚೇದ್ಗುಣವಾನ್ಭವೇತ್ ।
ಪಿತುರೂರ್ಧ್ವಂ ವಿಭಜತಾಂ ಮಾತಾಪ್ಯಂಶಂ ಸುಸಂಹರೇತ್ ॥ ೨೦ ॥

೧೫–೨೦. ಇವರ ಮಕ್ಕಳು ತಾತನ ಆಸ್ತಿಗೆ ಭಾಗಿಗಳಾಗುತ್ತಾರೆ. ಪತಿತರಿಗೂ, ಅವರ ಮಕ್ಕಳಿಗೂ ಧರ್ಮದೃಷ್ಟಿಯಿಂದ ಭಾಗವೇ ಇಲ್ಲ. ಪತಿತರಾಗುವುದಕ್ಕೆ ಮುಂಚೆ ಹುಟ್ಟಿದ ಮಕ್ಕಳಿಗೆ ಭಾಗವುಂಟು, ಅವರು ಪತಿತರಲ್ಲ. ಪತಿತನಾದವನು ವಿಹಿತಪ್ರಾಯಶ್ಚಿತ್ತದಿಂದ ಶುದ್ಧಿ ಹೊಂದಿದ್ದಲ್ಲಿ ಭಾಗಾರ್ಹನಾಗುತ್ತಾನೆ. ಅವನ ಮಕ್ಕಳೂ ಅರ್ಹರಾಗುತ್ತಾರೆ. ಇದರಲ್ಲಿ ವಿಚಾರ ಮಾಡಬೇಕಾದ್ದಿಲ್ಲ. ತಂದೆಯೇ ತಾನಾಗಿ ವಿಭಾಗಮಾಡಿಕೊಡುವಾಗ ತನ್ನ ಧನವಿಷಯದಲ್ಲಿ ವಿಭಾಗವು ಅವನ ಇಚ್ಛೆಯಂತೆ ನಡೆಯಬಹುದು. ತಾತನ ಆಸ್ತಿಯ ವಿಷಯದಲ್ಲಿ ಮಾತ್ರ ಅವನಿಗೆ ಸ್ವಾತಂತ್ರ್ಯವಿಲ್ಲ. ತಾತನು ಸಂಪಾದಿಸಿದ ಧನದಲ್ಲಿ ಮಮ್ಮಗನು ಗುಣಶಾಲಿಯಾಗಿದ್ದಲ್ಲಿ ಮಗನಿಗೂ ಮಮ್ಮಗನಿಗೂ ಸಮಾನವಾದ ಬಾಧ್ಯತೆಯೇ ಇದೆ. ತಂದೆಯ ಕಾಲಾನಂತರ ವಿಭಾಗಹೊಂದುವ ಮಕ್ಕಳಲ್ಲಿ ತಾಯಿಗೂ ತನ್ನ ಭಾಗವಿದ್ದೇಇದೆ.

ಸವರ್ಣಾಸ್ತು ಸುತಾಃ ಸರ್ವೇ ತಥಾ ಜ್ಞೇಯಾಃ ಸಮಾಂಶಿನಃ ।
ಜ್ಯೇಷ್ಠಸ್ಯ ಕಿಂಚಿದಧಿಕಂ ದಾತವ್ಯಂ ನಾತ್ರ ಸಂಶಯಃ ॥ ೨೦ ॥

ಬ್ರಹ್ಮದೇವಾಸುತಸ್ಯಾಪಿ ತೌಹಿ ಮಾನ್ಯತಮೌ ಸಮೌ ।
ಪೈಶಾಚಾಸುರಯೋರ್ಜಾತೌ ಯಥಾ ಪೌನರ್ಭವ ಸ್ತಥಾ ॥ ೨೧ ॥

ಚತಸ್ರಸ್ತು ಯದಾ ಭಾರ್ಯಾ ಭವಂತಿ ಬ್ರಾಹ್ಮಣಸ್ಯ ತು ।
ತಾಸಾಂ ಪುತ್ರೇಷು ದಾಯಂ ಚ ತದ್ವಿತ್ತಂ ವಿಭಜೇನ್ನೃಪಃ ॥ ೨೩ ॥

ಚತುರೋಂಶಾನ್ ಹರೇ ದ್ವಿಪ್ರಸ್ತ್ರೀನಂಶಾನ್ ಕ್ಷತ್ರಿಯಾ ಸುತಃ ।
ವೈಶ್ಯಾಪುತ್ರೋ ಹರೇದ್ದ್ವ್ಯಂಶಮಂಶಂ ಶೂದ್ರಾಸುತೋ ಹರೇತ್ ॥ ೨೪ ॥

ಬ್ರಾಹ್ಮಣೌ ಯದಿ ಪುತ್ರೌದ್ವೌ ಚೈಕಃ ಶೂದ್ರಾ ಸುತೋ ಭವೇತ್ ।
ನವಧಾ ಬ್ರಾಹ್ಮಣಧನಂ ವಿಭಜ್ಯಮಿತಿ ನಿಶ್ಚಯಃ ॥ ೨೫ ॥

೨೦-೨೪. ಸವರ್ಣ ಪುತ್ರರೆಲ್ಲರೂ ಸಮಾಂಶಕ್ಕೆ ಭಾಗಿಗಳಾಗುತ್ತಾರೆ ಜ್ಯೇಷ್ಠನಿಗೆ ಮಾತ್ರ ಸ್ವಲ್ಪಹೆಚ್ಚಾಗಿ ಕೊಡಬೇಕು, ಇದರಲ್ಲಿ ಸಂದೇಹವಿಲ್ಲ. ಬ್ರಾಹ್ಮ ದೈವವೆಂಬ ವಿವಾಹಕ್ರಮದಲ್ಲಿ ಹುಟ್ಟಿದ ಮಕ್ಕಳೂ ಸಮಭಾಗಿಗಳಾಗುತ್ತಾರೆ. ಪೈಶಾಚ, ಆಸುರವಿವಾಹದಿಂದ ಹುಟ್ಟಿದ ಮಕ್ಕಳಿಗೆ ಪೌನರ್ಭವನಂತೆಯೇ ವಿಭಾಗ ವಾಗಬೇಕು. ಬ್ರಾಹ್ಮಣನಿಗೆ ನಾಲ್ಕುವರ್ಣದ ಸ್ತ್ರೀಯರೂ ಭಾರ್ಯೆಗಳಾಗಿದ್ದಲ್ಲಿ ಅವನ ಮಕ್ಕಳಿಗೆ ರಾಜನೇ ದಾಯವನ್ನು ವಿಭಾಗಿಸಿ ಕೊಡಬೇಕು ಅವನ ಒಟ್ಟು ಆಸ್ತಿಯ ಹತ್ತನೇಯ ಒಂದುಭಾಗ ಶೂದ್ರಾಪುತ್ರನಿಗೂ, ಎರಡುಭಾಗ ವೈಶ್ಯಾಪುತ್ರ ನಿಗೂ, ಮೂರುಭಾಗ ಕ್ಷತ್ರಿಯಾ ಪುತ್ರನಿಗೂ, ನಾಲ್ಕು ಭಾಗ ಬ್ರಾಹ್ಮಣೀಪುತ್ರನಿಗೂ ಕೊಡಬೇಕು.

೨೫-೨೭. ಅಂತಹ ಬ್ರಾಹ್ಮಣನಿಗೆ ಶೂದ್ರಿಯಲ್ಲಿ ಹುಟ್ಟಿದ ಒಬ್ಬ ಮಗನೂ ಬ್ರಾಹ್ಮಣಿಯಲ್ಲಿ ಹುಟ್ಟಿದ್ದ ಇಬ್ಬರು ಮಕ್ಕಳೂ ಇದ್ದಲ್ಲಿ ಆಗ ಬ್ರಾಹ್ಮಣನ ಧನವನ್ನು ಒಂಭತ್ತು ಭಾಗವಮಾಡಿ ಎಂಟು ಭಾಗವನ್ನು ಬ್ರಾಹ್ಮಣಿಯ ಪುತ್ರರಿಗೂ ಒಂದು

ಅಷ್ಟೌ ಬ್ರಾಹ್ಮಣಯೋರ್ಭಾಗಾಃ ಶೂದ್ರಸ್ಯ ನವಮೋ ಭವೇತ್ ।
ದ್ವೌ ವಿಜ್ಞೇಯೌ ಸುತೌ ಸ್ಯಾತಾಮೇಕಶ್ಚ ಬ್ರಾಹ್ಮಣೀ ಸುತಃ ॥ ೨೬ ॥

ಬ್ರಾಹ್ಮಣಸ್ವಂ ತಥಾ ಷೋಡಾ ವಿಭಜ್ಯಮಿತಿ ನಿಶ್ಚಯಃ ।
ದ್ವಾವಂಶೌ ಶೂದ್ರಯೋರ್ದೇಯೌ ಚತುರೋಂಶಾ ಹಿ ವೈ ದ್ವಿಜಾಃ ॥ ೨೭ ॥

ಅನೇನೈವಾನುಸಾರೇಣ ಸರ್ವತ್ರೈವಾಂಶಕಲ್ಪನಾ ।
ಅಸವರ್ಣಾಸು ಜಾತಾನಾಂ ಕರ್ತವ್ಯಾ ಪೃಥಿವೀಕ್ಷಿತಾ ॥ ೨೮ ॥

ಷೋಢಾ ತತ್ ಕ್ಷತ್ರಿಯಧನಂ ಕರ್ತವ್ಯಮಿತಿ ನಿಶ್ಚಯಃ ।
ಕ್ಷತ್ರಿಯಾಯಾಂ ತತಃ ಪುತ್ರಾ ವಿತ್ತತೋಂಶತ್ರಯಂ ಹರೇತ್ ॥ ೨೯ ॥

ವೈಶ್ಯಾಪುತ್ರೋ ಹರೇದ್ವ್ಯಂಶಮಂಶಂ ಶೂದ್ರಾಸುತೋ ಹರೇತ್ ।
ವೈಶ್ಯಾಸ್ವಂ ತು ತ್ರಿಧಾ ಕಾರ್ಯಂ ಶೃಣು ತತ್ರಾಪಿ ಕಲ್ಪನಾಂ ॥ ೩೦ ॥

ವೈಶ್ಯಾಪುತ್ರೋ ಹರೇದ್ವ್ಯಂಶಮಂಶಂ ಶೂದ್ರಾಸುತೋ ಹರೇತ್ ।
ಅಪುತ್ರಸ್ಯ ತು ದೌಹಿತ್ರೋ ರಿಕ್ಥಮರ್ಹತಿ ಧರ್ಮತಃ ॥ ೩೧ ॥

ಭಾಗವನ್ನು ಶೂದ್ರಾ ಪುತ್ರನಿಗೂ ಕೊಡಬೇಕು. ಬ್ರಾಹ್ಮಣಿಯ ಮಗನು ಒಬ್ಬನೇ ಇದ್ದು, ಶೂದ್ರಾಪುತ್ರರು ಇಬ್ಬರಿದ್ದಲ್ಲಿ ಆಸ್ತಿಯನ್ನು ಆರುಭಾಗಮಾಡಿ ಎರಡು ಭಾಗವನ್ನು ಶೂದ್ರಾಪುತ್ರರಿಗೂ ನಾಲ್ಕುಭಾಗವನ್ನು ಬ್ರಾಹ್ಮಣಿಯ ಪುತ್ರನಿಗೂ ಕೊಡಬೇಕು. ಇದೇ ಕ್ರಮದಲ್ಲಿ ಎಲ್ಲಾಕಡೆಯಲ್ಲಿಯೂ ಭಾಗಗಳನ್ನು ಕಲ್ಪಿಸಬೇಕು.

೨೮-೩೩. ಕ್ಷತ್ರಿಯನಿಂದ ಅಸವರ್ಣಸ್ತ್ರೀಯರಲ್ಲಿ ಹುಟ್ಟಿರುವ ಮಕ್ಕಳಿಗೆ ಈ ರೀತಿ ದಾಯ ಭಾಗಮಾಡಬೇಕು. ಕ್ಷತ್ರಿಯನಧನವನ್ನು ಆರುಭಾಗಮಾಡಿ ಕ್ಷತ್ರಿಯಸ್ತ್ರೀಯ ಮಕ್ಕಳಿಗೆ ಮೂರು ಭಾಗವೂ ವೈಶ್ಯಸ್ತ್ರೀಯ ಮಕ್ಕಳಿಗೆ ಎರಡು ಭಾಗವೂ, ಶೂದ್ರಾಪುತ್ರನಿಗೆ ಒಂದು ಭಾಗವೂ ಬರಬೇಕಾಗುತ್ತದೆ. ವೈಶ್ಯನಿಗೆ ಅಸವರ್ಣ ಸ್ತ್ರೀಯಲ್ಲಿ ಮಗನಿದ್ದಲ್ಲಿ ಅವನ ಆಸ್ತಿಯನ್ನು ಮೂರು ಭಾಗಮಾಡಿ ವೈಶ್ಯಸ್ತ್ರೀಪುತ್ರನು ಎರಡು ಭಾಗವನ್ನೂ ಶೂದ್ರಾಪುತ್ರನು ಒಂದು ಭಾಗವನ್ನೂ ಹೊಂದಬೇಕು. ಅಪುತ್ರವಂತನಾಗಿರುವವನ ಆಸ್ತಿಯನ್ನು ದೌಹಿತ್ರನೇ ಹೊಂದಬೇಕೆಂಬುದು, ಧರ್ಮಸಿದ್ಧ. ದೌಹಿತ್ರನೂ ಇಲ್ಲದಿದ್ದಲ್ಲಿ ಮಗಳೇ ಆಸ್ತಿಗೆ ಭಾಗಿಯಾಗುತ್ತಾಳೆ ಅವಳೂ ಇಲ್ಲದಿದ್ದಲ್ಲಿ ಭಾರ್ಯೆ ಅವಳೂ ಇಲ್ಲದಿದ್ದಲ್ಲಿ ಸಹೋದರ,

ದೌಹಿತ್ರಸ್ತಸ್ಯಭಾವೇ ತು ದುಹಿತಾಪಿ ಧನಂ ಹರೇತ್ ।
ತದಭಾವೇ ತದಾಭಾರ್ಯಾ ತದಭಾವೇ ಸಹೋದರಃ ॥ ೩೨ ॥

ತಸ್ಯಾಪ್ಯಭಾವೇ ಜನನೀ ತದಭಾವೇ ಪಿತಾ ಹರೇತ್ ।
ಭ್ರಾತರಸ್ತದಭಾವೇ ತು ಭ್ರಾತೃಪುತ್ರಸ್ತತೇ ಹರೇತ್ ॥ ೩೩ ॥

ಸಹೋದರ ಭ್ರಾತೃಸುತೋ ವಿದ್ಯಮಾನೇ ಕಥಂಚನ ।
ನಾನ್ಯಭ್ರಾತೃಭವೋ ಭ್ರಾತಾ ಪ್ರಾಪ್ನುಯಾದಿತಿ ನಿಶ್ಚಯಃ ॥ ೩೪ ॥

ಅನ್ಯಭ್ರಾತೃಭವಭ್ರಾತುಃ ಪುತ್ರೋ ಯತ್ರ ವ್ಯವಸ್ಥಿತಃ ।
ಪಿತೃವ್ಯಭ್ರಾತೃಪುತ್ರಸ್ತು ನೈವ ತತ್ರ ಧನಂ ಹರೇತ್ ॥ ೩೫ ॥

ಅನಂತರಂ ಸಪಿಂಡಾದ್ಯಸ್ತಸ್ಯತಸ್ಯ ಧನಂ ಹರೇತ್ ।
ತದಭಾವೇ ಸಕುಲ್ಯಸ್ಯ ತದಭಾವೇ ಗುರುರ್ಭವೇತ್ ॥ ೩೬ ॥

ಶಿಷ್ಯಸ್ಯ ತದಭಾವೇ ತು ದ್ವಿಜಾನಾಂ ತದಭಾವತಃ ।
ತ್ರೈವಿದ್ಯಾಃ ಕ್ಷಮಯಾ ದಾಂತಾಸ್ತಸ್ಯ ವಿತ್ತಸ್ಯ ಭಾಗಿನಃ ॥ ೩೭ ॥

ಅವನೂ ಇಲ್ಲದಿದ್ದಲ್ಲಿ, ತಾಯಿ, ಅವಳೂ ಇಲ್ಲದಿದ್ದಲ್ಲಿ ತಂದೆ. ಅವನೂ ಇಲ್ಲದಿದ್ದಲ್ಲಿ ಅಣ್ಣ, ಅವನೂಇಲ್ಲದಿದ್ದಲ್ಲಿ ಅಣ್ಣನಮಗ, ಸಹೋದರಭ್ರಾತೃವಿನ ಮಗನಿರುವಾಗ ಭಿನ್ನೋದರ ಭಾತ್ರವೇ ಆಗಲಿ ಅವನ ಮಗನೇ ಆಗಲಿ ಹಕ್ಕುದಾರರಾಗುವುದಿಲ್ಲ, ಇದುನಿಶ್ಚಯ.

೩೪–೩೮. [1]ಭಿನ್ನೋದರ ಭ್ರಾತೃಪುತ್ರನಿರುವಾಗ ದೊಡ್ಡಪ್ಪನ ಭ್ರಾತೃ ಪುತ್ರರಿಗೆ ದಾಯಾಧಿಕಾರವಿಲ್ಲ ಇನ್ನೂ ಮುಂದೆ ಮೊದಲವೊದಲ ಹಕ್ಕುದಾರರಿಲ್ಲ ದಿರುವಾಗ ಜ್ಞಾತಿಗಳೇ ಅವರವರ ಸಮಿಪತೆಗೆ ತಕ್ಕಂತೆ ಆಸ್ತಿಗೆ ಬಾಧ್ಯರಾಗುತ್ತಾರೆ. ಅವರೂ ಇಲ್ಲದಿದ್ದರೆ ಬಾಂಧವ, ಅವನೂ ಇಲ್ಲದಿದ್ದಲ್ಲಿ ಗುರು ಅನಂತರ ಶಿಷ್ಯ, ಅನಂತರ ದ್ವಿಜರು, ತ್ರೈವಿದ್ಯರೆಂಬ ವ್ರತಿಗಳು, ಬ್ರಾಹ್ಮಣನ ಆಸ್ತಿಯು ಹೊಂದುವ ಅಧಿಕಾರಿಗಳು ಇಲ್ಲದಿದ್ದಲ್ಲಿ ರಾಜರಿಗೆ ಸೇರುತ್ತದೆ. ಇತರ ವರ್ಣದವರ ಆಸ್ತಿಯನ್ನೂ

1 ಇಲ್ಲಿ ವಿಭಕ್ತಾವಿಭಕ್ತಕುಟುಂಬಗಳ ದಾಯಭಾಗಕ್ರಮವು ಸ್ಪಷ್ಟವಾಗಿಲ್ಲ.

ಬ್ರಾಹ್ಮಣಸ್ವಮನಾಹಾರ್ಯಂ ಪಾರ್ಥಿವಾನಾಂ ಸದಾ ಭವೇತ್ ।
ಇತರೇಷಾಂ ತು ವರ್ಣಾನಾಂ ಸರ್ವಾಭಾವೇ ಹರೇನ್ನೃಪಃ ॥ ೩೮ ॥

ಪುತ್ರ್ಯೌ ತು ವಿವದೇಯಾತಾಂ ದ್ವಾಭ್ಯಾಂ ಜಾತೌ ಸ್ತ್ರಿಯಾ ಧನೇ ।
ತಯೋರ್ಯಸ್ಯ ಪಿತ್ರ್ಯಂ ಸ್ಯಾತ್ತತ್ಸಂಗೃಹ್ಣೀತ ನೇತರಃ ॥ ೩೯ ॥

ಮಾತೃಕಂ ಯದ್ಭವೇದ್ವಿತ್ತಂ ಕುಮಾರೀಣಾಂ ತು ತದ್ಭವೇತ್ ।
ತದಭಾವೇ ತು ಸೋಢಾನಾಂ ಸುತಾನಾಂ ತದಭಾವತಃ ॥ ೪೦ ॥

ಅಧ್ಯಗ್ನ್ಯಧ್ಯಾವನಿಕಂ ದತ್ತಂ ದತ್ತಂ ಚ ಪ್ರೀತಿಕರ್ಮಣಾ ।
ಭ್ರಾತೃಮಾತೃಪಿತೃಪ್ರಾಪ್ತೇ ಷಡ್ವಿಧಂ ಸ್ತ್ರೀಧನಂ ಸ್ಮೃತಂ ॥ ೪೧ ॥

ಬ್ರಾಹ್ಮದೈವಾರ್ಷಗಾಂಧರ್ವ ಪ್ರಾಜಾಪತ್ಯೇಷು ಯದ್ಧನಂ ।
ಅಪ್ರಜಾಯಾಮತೀತಾಯಾ ಭರ್ತುರೇವ ತದಿಷ್ಯತೇ ॥ ೪೨ ॥

ಯಥಾನ್ಯೇಷು ಪಿತೃಗಾಮಿ..................ಧನಾನಿ ಭವೇತ್ ।
ಪತ್ಯೌ ಜೀವತಿಯಃ ಸ್ತ್ರೀಭಿರಲಂಕಾರೋ ಧೃತೋ ಭವೇತ್ ॥ ೪೩ ॥

ಯಾರೂ ಇಲ್ಲದಿದ್ದಲ್ಲಿ ರಾಜನೇ ಹೊಂದಬೇಕು. ಸ್ತ್ರೀಧನವಿಷಯದಲ್ಲಿ ಅವಳ ಇಬ್ಬರು ಮಕ್ಕಳಿಗೂ ವಿವಾದ ಉಂಟಾದಲ್ಲಿ ಆಸ್ತಿಯು ಯಾವ ಮಗನ ತಂದೆಯದೋ ಆ ಮಗನೇ ಆ ಧನಕ್ಕೆ ಬಾಧ್ಯನಾಗುತ್ತಾನೆ, ಇತರನಲ್ಲ

೩೯-೪೧ ತಾಯಿಯ ಸ್ವಂತಧನವು ಅವಳ ಹೆಣ್ಣುಮಕ್ಕಳಿಗೆ ಸೇರುತ್ತದೆ. ಅವರಿಲ್ಲದಿದ್ದರೆ ಸವತಿಯ ಹೆಣ್ಣುಮಕ್ಕಳಿಗೆ ಸೇರುತ್ತದೆ. ಸ್ತ್ರೀ ಧನವೆಂಬುದು ಆರು ವಿಧ. ವಿವಾಹಕಾಲದಲ್ಲಿ ಅಗ್ನಿಸಾಕ್ಷಿಕವಾಗಿ ತನಗೆ ಬಂದದ್ದು, ತಾನು ಪಾತಹೇಳಿ ಸಂಪಾದಿಸಿದ್ದು, ಪ್ರೀತಿಕರವಾದ ಕೆಲಸದಿಂದ ತಾನು ಸಂಪಾದಿಸಿದ್ದು. ಅಣ್ಣತಮ್ಮಂದಿರಿಂದಲೂ, ತಾಯಿತಂದೆಗಳಿಂದಲೂ ತನಗೆ ಬಂದದ್ದು ಬ್ರಾಹ್ಮ, ದೈವ, ಆರ್ಷ, ಗಾಂಧರ್ವ, ಪ್ರಾಜಾಪತ್ಯ ವಿವಾಹಗಳಲ್ಲಿ ವಿವಾಹಿತಳಾದ ಯಾವ ಸ್ತ್ರೀಯಾದರೂ ಮಕ್ಕಳಿಲ್ಲದೆ ಮೃತಳಾದಲ್ಲಿ ಅವಳ ಧನವು ಪತಿಗೇ ಸೇರುತ್ತದೆ.

೪೨-೪೫. ಪತಿಯು ಬದುಕಿರುವಾಗ ಯಾವ ಅಲಂಕಾರಗಳನ್ನು ಸ್ತ್ರೀಯರು ಧರಿಸಿರುವರೋ ಅದು ದಾಯಾದಿಗಳಿಗೆ ಸೇರುವುದಿಲ್ಲ. ಹೊಂದಿದಲ್ಲಿ ಅವರು ಪತಿತರಾಗುತ್ತಾರೆ. ಒಬ್ಬ ತಂದೆಯ ಮಕ್ಕಳಾದ ಅಣ್ಣತಮ್ಮಂದಿರುಗಳಲ್ಲಿ ಯಾವನೊಬ್ಬನು

ನ ತಂ ಭಜೇರನ್ದಾಯಾದಾ ಭಜಮಾನಾಃ ಪತಂತಿ ತೇ ।
ಭ್ರಾತೄಣಾಮೇಕಜಾತಾನಾಂ ಯದ್ಯೇಕಃ ಪುತ್ರವಾನ್ಭವೇತ್ ॥ ೪೪ ॥

ಸರ್ವೇ ತೇ ತೇನ ಪುತ್ರೇಣ ಪುತ್ರವಂತ ಇತಿ ಶ್ರುತಿಃ ।
ಸರ್ವಾಸಾಮೇಕಪತ್ನೀನಾಮೇಕಾಚೇತ್ಪುತ್ರಿಣೀ ಭವೇತ್ ॥ ೪೫ ॥

ಪುತ್ರವತ್ಯಸ್ತು ತಾಸ್ಸರ್ವಾಸ್ತೇನ ಪುತ್ರೇಣ ಕೀರ್ತಿತಾಃ ।
ಅನುಪಘ್ನಂ ಪಿತೃದ್ರವ್ಯಂ ಶ್ರಮೇಣ ಯದುಪಾರ್ಜಿತಂ ॥ ೪೬ ॥

ಸ್ವಯಮೀಹಿತಲಬ್ಧಂ ತಂ ನಾಕಾಮೋ ದಾತುಮರ್ಹತಿ ।
ಯೇಷಾಂ ಜ್ಯೇಷ್ಠಃ ಕನಿಷ್ಠೋ ವಾ ಹೀಯೇತಾಂಶಪ್ರದಾನತಃ ॥ ೪೭ ॥

ಮ್ರಿಯೇತಾನ್ಯತರೋ ವಾಪಿ ತಸ್ಯ ಭಾಗೋ ನ ಲುಪ್ಯತೇ ।
ಸೋದರ್ಯಾ ವಿಭಜೇರಂಸ್ತಂ ಸಮೇತ್ಯ ಸಹಿತಾಃ ಸಮಂ ॥ ೪೮ ॥

ಪುತ್ರವಂತನಾಗಿದ್ದರೂ, ಆ ಅಣ್ಣತಮ್ಮಂದಿರೆಲ್ಲರೂ ಅವನಿಂದಲೇ ಪುತ್ರವಂತರಾಗುತ್ತಾರೆಂದು ಶ್ರುತಿ ಹೇಳುತ್ತದೆ ಒಬ್ಬನಿಗೆ ಇರುವ ಅನೇಕಪತ್ನಿಗಳಲ್ಲಿ ಯಾವಳೊಬ್ಬಳು ಪುತ್ರವತಿಯಾಗಿದ್ದರೂ ಅವನಿಂದ ಎಲ್ಲರೂ ಪುತ್ರವತಿಗಳೇ ಆಗುತ್ತಾರೆ. ಸಿಬಾರ್ಥವಾಗಿ ಬಂದದ್ದು, ಪಿತೃವಿನದ್ರವ್ಯ, ಕಷ್ಟಪಟ್ಟು ಸಂಪಾದಿಸಿದ್ದು ಇಚ್ಛೆಯಿಂದ ತಾನಾಗಿಯೇ ಬಂದದ್ದು· ಈ ವಸ್ತುಗಳನ್ನು ಇಚ್ಛೆಇಲ್ಲದಿದ್ದರೆ ದಾಯಭಾಗದಲ್ಲಿ ಕೊಡಬೇಕಾದುದಿಲ್ಲ.

೪೭–೫೦. ಯಾವ ಅಣ್ಣತಮ್ಮಂದಿರಲ್ಲಿ ಜ್ಯೇಷ್ಠನಾಗಲಿ ಕನಿಷ್ಠನಾಗಲಿ ವಿಭಾಗ ಹೊಂದುವುದಿಲ್ಲವೋ ಯಾವನಾದರೂ ಮೃತನಾಗುತ್ತಾನೆಯೋ ಅಂತಹವರಿಗೂ ಆಸ್ತಿಯಲ್ಲಿ ಭಾಗ ಹೋಗುವುದಿಲ್ಲ. ಅಂತಹವರ ಮಕ್ಕಳೆಲ್ಲರೂ ಸೇರಿ ಸಮವಾಗಿ ಎಲ್ಲರೂ ವಿಭಾಗಹೊಂದಬೇಕು. ಒಂದೇ ವರ್ಣದವಳಲ್ಲಿ ಜನಿಸಿದ ಅಣ್ಣತಮ್ಮಂದಿರು ಅಕ್ಕತಂಗಿಯರು ಒಟ್ಟು ಕುಟುಂಬದಲ್ಲಿದ್ದು ವಿಭಾಗಹೊಂದಿದಲ್ಲಿ ತಂದೆಯ ಧನವನ್ನು ಮಕ್ಕಳೆಲ್ಲರೂ ಹೊಂದಬಹುದು ಅಥವಾ ವಿಭಕ್ತರಾದ ಭ್ರಾತೃಗಳು

ಭ್ರಾತರೋ ಯೇ ಚ ಸಂಸೃಷ್ಟಾ ಭಗಿನ್ಯಶ್ಚ ಸಜಾತಯಃ ।
ವಿಭಕ್ತೇ ತು ಧನೇ ಜಾತಾಃ ಪಿತ್ರ್ಯಮೇವ ಧನಂ ಹರೇತ್ ॥ ೪೯ ॥

ವಿಭಕ್ತೈರ್ವಾಸ್ಯ ದಾತವ್ಯಮಂಶಮಂಶಾನುರೂಪತಃ ।
ಸ್ವಭಾಗಸ್ಯಾನುರೂಪೇಣ ದತ್ತ್ವಾತು ಭಾಗಂ ಯಥಾಕ್ರಮಂ ॥ ೫೦ ॥

ಅಸಂಸ್ಕೃತಾಸ್ತು ಸಂಸ್ಕಾರ್ಯಾ ವಿಭಕ್ತೈಃ ಕನ್ಯಕಾಸ್ತಥಾ ।
ಪ್ರವಿಭಾಗೇ ಕೃತೇ ಯತ್ರ ಪಶ್ಚಾಚ್ಛಿಷ್ಯೇತ ವೈ ಧನಂ ॥ ೫೧ ॥

ಪೂರ್ವೋಕ್ತೇನಾನುಸಾರೇಣ ವಿಭಾಗಂ ತತ್ರ ಕಾರಯೇತ್ ।
ವಸ್ತ್ರಂ ಪತ್ರಮಲಂಕಾರಂ ಕೃತಾನ್ನಮುದಕಂ ಸ್ತ್ರಿಯಃ ॥ ೫೨ ॥

ಯೋಗಕ್ಷೇಮಪ್ರಚಾರೇ ಚ ನ ವಿಭಜ್ಯಂ ಚ ಪುಸ್ತಕಂ ।
ರಿಕ್ಥಗ್ರಾಹೀ ಋಣಂ ದದ್ಯಾತ್ಪಿಂಡಂ ದದ್ಯಾತ್ಸ ಏವ ತು ॥ ೫೩ ॥

ಭರ್ತವ್ಯಾನ್ ಬಿಭೃಯಾತ್ತಸ್ಯ ಸರ್ವಾನಿತಿ ಮತಿರ್ಮಮ ।
ರಿಕ್ಥಗ್ರಾಹೀ ನ ಯಃ ಕುರ್ಯಾತ್ ಪ್ರೇತಕರ್ಮ ಯಥಾವಿಧಿ ॥ ೫೪ ॥

ತಮ್ಮ ತಮ್ಮ ವಿಭಾಗಕ್ಕೆ ತಕ್ಕಂತೆ ಅಕ್ಕತಂಗಿಯರಿಗೆ ಕೊಡಬಹುದು. ಹೀಗೆ ವಿಭಾಗಹೊಂದಿದವರು ವಿವಾಹವಾಗದಿರುವ ತಂಗಿಯರಿಗೆ ವಿವಾಹ ಮಾಡಬೇಕು. ವಿಭಾಗಹೊಂದಿದನಂತರವೂ ಎಷ್ಟು ಹಣ ಉಳಿಯುವುದೋ ಅದನ್ನೂ ಸಹ ಹಿಂದೆ ಹೇಳಿರುವಂತೆ ವಿಭಾಗಮಾಡಬೇಕು.

೫೧-೫೫. ವಸ್ತ್ರಗಳು, ವಾಹನಗಳು, ಅಲಂಕಾರಗಳು, ಸಿದ್ಧವಾದ ಅನ್ನ, ನೀರು, ಸ್ತ್ರೀಯರು. ಪುಸ್ತಕಾದಿಗಳು ಇವು ವಿಭಾಗಾರ್ಹವಲ್ಲ. ಹಣವನ್ನು ಹೊಂದಿದವನು ಸಾಲಗಳನ್ನೂ ತೀರಿಸಬೇಕು. ಉತ್ತರಕ್ರಿಯೆಗಳನ್ನೂ ಮಾಡಬೇಕು. ಕುಟುಂಬಕ್ಕೆ ಸೇರಿದವರೆಲ್ಲರನ್ನೂ ಭರಿಸಲೂ ಬೇಕು ಎಂದು ನನ್ನ ಮತ. ಹಣವನ್ನು ಹೊಂದಿದವನು ಯಥಾವಿಧಿಯಾವ ಪ್ರೇತಕಾರ್ಯಮಾಡದೇ ಇದ್ದಲ್ಲಿ ಅಂತಹ ಕಳ್ಳನನ್ನು ರಾಜನಾದವನು ತನ್ನ ದೇಶದಿಂದ ಹೊರಡಿಸಬೇಕು. ಯಾವನ ದ್ರವ್ಯವು ಸಮಯ ವಿಶೇಷದಲ್ಲಿ ದಾಯರೂಪದಿಂದ ರಾಜನಲ್ಲಿ ಸೇರುತ್ತದೆಯೋ ಆಗ ರಾಜನೂ

ತಸ್ಕರಂ ತಂ ಸ್ವಕಾದ್ರಾಷ್ಟ್ರಾತ್ ಕ್ಷಿಪ್ರಂ ರಾಜಾ ವಿವಾಸಯೇತ್ ।
ರಾಜಗಾಮಿ ಭವೇದ್ವಿಪ್ರಾ ಯಸ್ಯ ವಿತ್ತಂ ತು ಕರ್ಹಿಚಿತ್ ॥ ೫೫ ॥
ರಾಜಾಪಿ ದಾಪಯೇತ್ಪಿಂಡಂ ತಸ್ಯ ಭೃತ್ಯೈರ್ಯಥಾವಿಧಿ ।

ಯಸ್ಮಾನ್ನ ರಾಜಾಮಿಹ ವಿತ್ತಭಾಗೀ
ಋಣಸ್ಯ ಭಾಗೀ ಸ ತಥಾ ನಿರುಕ್ತಃ ।
ಋಣಾವಶಿಷ್ಟಂ ಪುರುಷಸ್ತು ನಿತ್ಯಂ
ಭುಕ್ತ್ವಾ ದ್ವಿಜೇಂದ್ರಾಃ ಸುಕೃತೀ ಸದಾ ಸ್ಯಾತ್ ॥ ೫೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದಾಯವಿಭಾಗ
ವರ್ಣನೋ ನಾಮ
ತ್ರಿಂಶದುತ್ತರ ತ್ರಿಶತತಮೋಽಧ್ಯಾಯಃ

ಸಹ ಭೃತ್ಯರಿಂದ ಪ್ರೇತಕಾರ್ಯವನ್ನು ಅವನಿಗೆ ಮಾಡಿಸಬೇಕು. ಯಾವಕಾರಣದಿಂದ ಧನವಂತನಾದವನೇ ಋಣಗಳಿಗೂ ಬಾಧ್ಯನಾಗುತ್ತಾನೆಯೋ ಆದುದರಿಂದ ಮನುಷ್ಯನಾದವನು ಋಣವನ್ನು ತೀರಿಸಿ ಉಳಿದಿರುವುದನ್ನು ಭುಂಜಿಸಿ ಯಾವಾಗಲೂ ಸುಕೃತಿಯಾಗಿಯೇ ಇರಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯ ಖಂಡವಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ದಾಯವಿಭಾಗವರ್ಣನವೆಂಬ ಮುನ್ನೂರ ಮೂವತ್ತನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕತ್ರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಉತ್ತಮರ್ಣಾಯ ದಾತವ್ಯಮಧಮರ್ಣೇನ ಯಾಚಿತಂ ।
ಬ್ರಾಹ್ಮಣೇಂದ್ರಾ ಧನಂ ಸರ್ವಂ ನಿಹ್ನವೇ ತಚ್ಚ ಭಾವಿತಂ ॥ ೧ ॥

ಸರ್ವೋಪಾಯೈರ್ಧನೀ ವಿತ್ತಮೃಣಿಕಾದಾಪ್ನುಯಾತ್ ಸ್ವಕಂ ।
ನ ಸ ರಾಜ್ಞಾಭಿಯೋಕ್ತವ್ಯಃ ಸ್ವಕಂ ಸಂಸಾಧಯನ್ಧನಂ ॥ ೨ ॥

ಅರ್ಥಂನಿಹ್ನವಮಾನಂ ತು ಭಾವನಾಭಿರ್ವಿಭಾವಿತಂ ।
ದಾಪಯೇದ್ಧನಿಕಸ್ಯಾರ್ಥಂ ರಾಜಾ ದಂಡಂ ಚ ತತ್ಸಮಂ ॥ ೩ ॥

ಮುನ್ನೂರ ಮೂವತ್ತೊಂದನೆಯ ಅಧ್ಯಾಯ

೧-೪. ಹಂಸವು ಹೇಳುತ್ತದೆ :—ಸಾಲಗಾರನಾದವನು ಧನಿಕನಿಗೆ ಅಪೇಕ್ಷಿಸಿದಾಗ ಹಣವನ್ನು ಕೊಡಬೇಕು. ಧನದ ವಸೂಲಿಯೆಲ್ಲವೂ ನಾನಾವಿಧವಾದ ವಂಚನೆಯಿಂದ ಕೂಡಿದೆ ಎಲ್ಲಾ ಉಪಾಯಗಳಿಂದಲೂ ಧನಿಕನು ಸಾಲಗಾರನಿಂದ ತನ್ನ ಹಣವನ್ನು ಹೊಂದಲು ಬಾಧ್ಯನಾಗಿದ್ದಾನೆ. ರಾಜನಾದವನು ತನ್ನ ಹಣವನ್ನು ವಶಪಡಿಸಿಕೊಳ್ಳುತ್ತಿರುವ ಧನಿಕನನ್ನು ಯಾವ ವಿಧದಲ್ಲಿಯೂ ನಿಗ್ರಹಿಸಬಾರದು. ಹಣವನ್ನೇ ಅಪಲಾಪ ಮಾಡುವ ಸಾಲಗಾರನಿಂದ ಧನಿಕನ ಹಣವನ್ನೂ ಅದಕ್ಕೆ ಸಮವಾದ ರಾಜನಿಗೆ ಕೊಡಬೇಕಾದ ಜುಲ್ಮಾನೆಯನ್ನೂ ಅವನಿಂದ ಕೊಡಿಸಬೇಕು. ಧನಿಕನಿಗೆ ಸುಳ್ಳುಹೇಳಿ ತೊಂದರೆ ಪಡಿಸುವವನಿಂದ ದ್ವಿಗುಣದಂಡವನ್ನು ವಸೂಲು ಮಾಡಬೇಕು. ಹೀಗೆ ತಾನು ಹೊಂದಿದ ಧನದಲ್ಲಿ ಇಪ್ಪತ್ತನೇ ಒಂದು ಭಾಗವನ್ನು

ಮಿಥ್ಯಾಭಿಯೋಗೇ ದ್ವಿಗುಣಮಿತಿ ಯೋಗಾದ್ಧನಂ ಹರೇತ್ ।
ಭಾಗಂ ವಿಂಶತಿಮಂ ದದ್ಯಾತ್ ಪ್ರಾಪ್ತಾರ್ಥೋ ಧನಿಕೋ ನೃಪೇ ॥ ೫ ॥

ಯದಿ ರಾಜಬಲೇನಾಸೌ ತದ್ಧಿ ತಸ್ಮಾದವಾಪ್ನುಯಾತ್ ।
ದ್ವಿಕಂ ತ್ರಿಕಂ ಚತುಷ್ಕಂ ಚ ಪಂಚಕಂ ಚ ತಥಾ ಶತಂ ॥ ೫ ॥

ವರ್ಣಾನುಕ್ರಮತೋ ವೃದ್ಧಿಃ ಪ್ರತಿಮಾಸಂ ಪ್ರಕೀರ್ತಿತಾ ।
ಸ್ವಯಂ ಕೃತಾಂ ತಥಾ ವೃದ್ಧಿಂ ಸರ್ವೇ ಸರ್ವಾಸು ಯೋನಿಷು ॥ ೬ ॥

ದಾತುಮರ್ಹಂತಿ ವಿಪ್ರೇಂದ್ರಾ ಇತಿ ಮೇ ನಿಶ್ಚಿತಾ ಮತಿಃ ।
ನ ಕ್ವಚಿತ್ ಪ್ರೀತಿದತ್ತಾನಾಂ ವೃದ್ಧಿಃ ಸಂವತ್ಸರಂ ಭವೇತ್ ॥ ೭ ॥

ತೇಷಾಮಪಿ ಭವೇದ್ ವೃದ್ಧಿರ್ಗತೇ ಸಂವತ್ಸರೇ ತಥಾ ।
ಸಾ ಚ ವೃದ್ಧಿರ್ಯಥೋಕ್ತಾ ವೈ ವರ್ಣಾನಾಮನುಪೂರ್ವಶಃ ॥ ೮ ॥

ತಥಾವಿಧಾ ಗ್ರಹೀತವ್ಯಾ ನಾನ್ಯಥೇತಿ ಹಿ ನಿಶ್ಚಯಃ ।
ಆಧಿಭುಗ್ದೀಯತೇ ವೃದ್ಧಿಂ ನಷ್ಟಾಮಾಧಿಂ ಚ ದಾಪಯೇತ್ ॥ ೯ ॥

ಧನಿಕನು ರಾಜನಿಗೆ ಕೊಡಬೇಕು. ರಾಜನ ಬಲದಿಂದಲೇ ಧನಿಕನು ಹಣವನ್ನು ಹೊಂದಿದುವುದಾದರೆ ಈ ರೀತಿಯಾದ ರಾಜಶುಲ್ಕ.

೫-೯. ಸಾಲವನ್ನು ಬಡ್ಡಿಗಾಗಿ ಕೊಡುವಾಗ ಬ್ರಾಹ್ಮಣಾದಿ ವರ್ಣಕ್ರಮದಿಂದ ಪ್ರತಿಮಾಸದಲ್ಲಿಯೂ ನೂರಕ್ಕೆ ಎರಡು, ಮೂರು, ನಾಲ್ಕು, ಐದು ಈ ರೀತಿ ಬಡ್ಡಿಯನ್ನು ತೆಗೆದುಕೊಳ್ಳಬಹುದು. ತಾನಾಗಿಯೇ ಹೀಗೆ ಸಂಪಾದಿಸಿದ ಬಡ್ಡಿಯನ್ನೂ ಎಲ್ಲರೂ ಎಲ್ಲರಿಗೂ ಕೊಡಲು ಅರ್ಹರಾಗಿದ್ದಾರೆ ಎಂಬುದೇ ನನ್ನ ಅಭಿಪ್ರಾಯ ಪ್ರೀತಿಯಿಂದ ಒಬ್ಬನಿಗೆ ಹಣವನ್ನು ಕೊಡುವುದಾದರೆ ವರ್ಷದವರಿಗೂ ಅದಕ್ಕೆ ಬಡ್ಡಿಯಿಲ್ಲ. ಅನಂತರ ಅದಕ್ಕೂ ಬಡ್ಡಿಯುಂಟು ಅಂತಹ ಬಡ್ಡಿಯನ್ನೂ ಸಹ ವರ್ಣಕ್ರಮದಂತೆ ಹಿಂದೆ ನಾನು ಹೇಳಿದ್ದೇನೆ. ಹಾಗೆಯೇ ತೆಗೆದುಕೊಳ್ಳಬೇಕು. ಅನ್ಯಥಾ ಕೂಡದೆಂಬುದು ನನ್ನ ನಿಶ್ಚಯ ಪದಾರ್ಥವನ್ನು ಒತ್ತೆ (ಗಿರವಿ) ಇಟ್ಟುಕೊಂಡು ಬಡ್ಡಿಯನ್ನು ಸಂಪಾದಿಸುವವನಿಗೂ ಬಡ್ಡಿಯು ಸಲ್ಲಬೇಕು. ದೈವಿಕವಾಗಿಯೂ ರಾಜನಿಂದಲೂ ಸಂಭವಿಸಬಹುದಾದ ತೊಂದರೆ ಹೊರತು ಸಾಮಾನ್ಯ ಪರಿಸ್ಥಿತಿಯಲ್ಲಿ ಒತ್ತೆ ಇಟ್ಟ ವಸ್ತುವು ನಾಶವಾದಲ್ಲಿ ಅದನ್ನು ಮಾಲೀಕನಿಗೆ ಕೊಡಿಸಬೇಕು.

ದೈವರಾಜಕೃತಂ ದೋಷಂ ವಿನಾ ಬ್ರಾಹ್ಮಣಸತ್ತಮಾಃ ।
ಅಂತ್ಯವೃದ್ಧೌ ಪ್ರವಿಷ್ಟಾಯಾಂ ಚಾರ್ಥ ತ್ಯಾಗೋ ವಿಧೀಯತೇ ॥ ೧೦ ॥

ಭೋಜ್ಯಸ್ಯಾಧೇಃ ಪರಿತ್ಯಾಗಃ ಪ್ರವಿಷ್ಟೇ ತು ಧನೇ ಭವೇತ್ ।
ಭೋಗಸ್ಯ ಗಣನಾ ಕಾರ್ಯಾ ನ ತತ್ರ ವಚನಾದೃತೇ ॥ ೧೧ ॥

ಧನಿನೋಽರ್ಥಂ ನ ಹೀಯೇತ ಆಧೌ ಪ್ರಾಣಯುತೇ ಮೃತೇ ।
ಹೇತುಭೂತಸ್ತು ಮರಣೇ ನ ಚೇತ್ಸ್ಯಾದುತ್ತಮರ್ಣಿಕಃ ॥ ೧೨ ॥

ಆಧೌ ವಿವದಮಾನಾನಾಂ ಭುಕ್ತ್ವಾ ಜೀವಂತಿ ಚಾಪರಾಃ ।
ಅನ್ಯಸ್ಯಾಧೀಕೃತಾಂ ಭೂಮಿಂ ಯಶ್ಚಾನ್ಯಸ್ಯ ಪ್ರಯಚ್ಛತಿ ॥ ೧೩ ॥

ಸ್ವಯಮೇವ ನರೇಂದ್ರಸ್ತಂ ಘಾತಯೇದವಿಚಾರಯನ್ ।
ದ್ರವ್ಯೇಷ್ವೇವಮಥಾನ್ಯೇಷು ದಂಡಃ ಸ್ಯಾದ್ದ್ವಿಗುಣಂ ಭವೇತ್ ॥೧೪ ॥

---

೧೦ ೧೪. ಬಡ್ಡಿಯು ಕೊನೆಗೆ ಧನದಷ್ಟೇ ಆದಲ್ಲಿಯೂ, ಕೊಡತಕ್ಕವನು ದುಃಸ್ಥಿತಿಗೆ ಬಂದಲ್ಲಿಯೂ ಆ ಬಡ್ಡಿಯನ್ನು ಬಿಟ್ಟುಬಿಡಬೇಕು. ತನ್ನ ಹಣವೆಲ್ಲವೂ ಬಂದಮೇಲೆ ಒತ್ತೆಯನ್ನು ಮಾಲೀಕನಿಗೆ ಕೊಡಬೇಕು. ಒತ್ತೆಯಿಡುವಾಗ ಆ ವಸ್ತುವನ್ನು ಧನಿಕನು ಎಷ್ಟುದಿನ ಅನುಭವಿಸಬಹುದೆಂಬುದಕ್ಕೆ ಅವರವರ ಮಾತೇ ಪ್ರಧಾನ, ಬೇರೆ ಗಣನೆ ಇಲ್ಲ. ಒತ್ತೆ ಇದ್ದಲ್ಲಿ ಗಿರವಿ ಇಟ್ಟವನು ಬದುಕಿದ್ದರೂ, ಇಲ್ಲದಿದ್ದರೂ, ಧನಿಕನ ದ್ರವ್ಯಕ್ಕೆ ಹಾನಿ ಇಲ್ಲ. ಅನ್ಯಥಾ ಸಾಲಗಾರನು ಮೃತನಾದಲ್ಲಿ ಧನಿಕನ ಹಣಕ್ಕೆ ಅವಕಾಶವೇ ಇರುವುದಿಲ್ಲ. ಒತ್ತೆಯ ವಿಷಯದಲ್ಲಿ ವಿವಾದ ಬಂದಲ್ಲಿ ವಿವಾದಮಾಡುವವರು ಬದುಕಿರುವವರಿಗೂ ಅದರ ಅನುಭವವು ಧನಿಕನಿಗೇ ಸೇರಿದ್ದು. ಒಬ್ಬನಲ್ಲಿ ಅಡವಿಟ್ಟ ಭೂಮಿಯನ್ನು ಮತ್ತೊಬ್ಬನಿಗೆ ವಹಿಸಿದಲ್ಲಿ ರಾಜನಾದವನು ತಾನಾಗಿ ಅಂತಹವನನ್ನು ನಿಗ್ರಹಿಸಬೇಕು. ಇತರ ಪದಾರ್ಥಗಳ ವಿಷಯದಲ್ಲಿ ಹೀಗೆ ಅನ್ಯಾಯನಡೆದಲ್ಲಿ ಆ ಪದಾರ್ಥದ ಬೆಲೆಗೆ ಇಮ್ಮಡಿಯಾಗಿ ದಂಡವನ್ನು ಹೊರಿಸಬೇಕು.

ಅಥಾ ಸಮುದ್ರೇ ನಷ್ಟೇ ತು ಮುದ್ರಾ ಯತ್ರ ನ ದೃಶ್ಯತೇ ।
ನ ತತ್ರ ಹೀಯತೇ ವಿತ್ತಂ ಧನಿಕಸ್ಯ ಕಥಂಚನ ॥ ೧೫ ॥

ಅನ್ಯಥಾ ತು ತಥಾ ನಷ್ಟೇ ಧನಿಕಸ್ಯೈವ ಹೀಯತೇ ।
ಅಂತ್ಯಾ ವೃದ್ಧಿರ್ಹಿರಣ್ಯಸ್ಯ ದ್ವಿಗುಣಾ ಪರಿಕೀರ್ತಿತಾ ॥ ೧೬ ॥

ವಸ್ತ್ರಸ್ಯ ತ್ರಿಗುಣಾ ಪ್ರೋಕ್ತಾ ಧಾನ್ಯಸ್ಯ ತು ಚತುರ್ಗುಣಾ ।
ರಸಸ್ಯಾಷ್ಟಗುಣಾ ವೃದ್ಧಿಃ ಸ್ತ್ರೀಪಶೂನಾಂ ಚ ಸಂತತಿಃ ॥ ೧೭ ॥

ಸ್ತ್ರೀಪಶೂನಾಮೃತೇ ವೃದ್ಧಿಃ ಪಶೂನಾಂ ಚೈವ ವಿದ್ಯತೇ ।
ಉರಭ್ರಾಣಾಂ ಭವೇದ್ವೃದ್ಧಿಃ ಸತಿ ಪುಂಸ್ತ್ವೇ ಹಿ ವೈ ದ್ವಿಜಾಃ ॥ ೧೮ ॥

ಊರ್ಣಾವೃದ್ಧಿರ್ಭವೇತ್ತೇಷಾಂ ವರ್ಷಾಣಿ ದ್ವಾದಶೈವ ತು ।
ದ್ರವ್ಯಾಣಾಮನ್ಯನುಕ್ತಾನಾಂ ವೃದ್ಧಿರ್ಜ್ಞೇಯಾ ಚತುರ್ಗುಣಾ ॥ ೧೯ ॥

ದೀಯಮಾನಸ್ತ್ವಯುಕ್ತಂ ತು ಪುರುಷಸ್ಯಾ ಪ್ರಗೃಹ್ಣತಃ ।
ತತಃ ಪರಂ ನವೃದ್ಧಿಃ ಸ್ಯಾತ್ಕಥಂಚಿದ್ದ್ವಿಜಸತ್ತಮಾಃ ॥ ೨೦ ॥

೧೫-೧೯. ಒತ್ತೆ ಇಟ್ಟ ಪದಾರ್ಥವನ್ನು ಮುದ್ರಿಸದಿದ್ದಲ್ಲಿ ಅದು ಸಮುದ್ರದಲ್ಲಿ ನಷ್ಟವಾದರೂ ಧನಿಕನು ನಷ್ಟಪಡಬೇಕಾಗಿಲ್ಲ. ಮುದ್ರೆಇದ್ದಲ್ಲಿ ಆಗ ಧನಿಕನೇ ಅದನ್ನು ಕೊಡಬೇಕಾಗುತ್ತದೆ. ಹಣದ ಲೇವಾದೇವಿಯಲ್ಲಿ ಹಣದ ದ್ವಿಗುಣವೇ ಬಡ್ಡಿಯಕೊನೆ ವಸ್ತುಗಳಿಗೆ ಮೂರರಷ್ಟು, ಧಾನ್ಯಗಳಿಗೆ ನಾಲ್ಕರಷ್ಟು ಇದೇ ಕೊನೆ. ರಸಪದಾರ್ಥಗಳಿಗೆ ಎಂಟರಷ್ಟು ಹೆಣ್ಣುಕಾಲ್ನಡೆ ಹೊರತು ಇತರಪಶುಗಳಿಗೆ ಬಡ್ಡಿಯುಂಟು ಮತ್ತೊಂದು ಪಶುವೇ ಅದರ ಬಡ್ಡಿ. ಕುರಿಗಳಿಗೆ ಗಂಡಾಗಿದ್ದರೇ ಬಡ್ಡಿ ಅದೂ ಸಹ ಹನ್ನೆರಡು ವರ್ಷಗಳವರಿಗೂ ಅವುಗಳ ತುಪ್ಪಟವೇ ಬಡ್ಡಿಯಾಗುತ್ತದೆ. ಇಲ್ಲಿ ಹೇಳದಿರುವ ಇತರ ವಸ್ತುಗಳಿಗೂ ಹೀಗೆಯೇ ನಾಲ್ಕರಷ್ಟು ಬಡ್ಡಿಕೊನೆಯೆಂದು ತಿಳಿಯಬೇಕು.

೨೦-೨೫. ಸಾಲಗಾರನು ಕೊಡುವ ಸಾಲದ ಹಣವನ್ನು ಬಡ್ಡಿಯ ಆಸೆಯಿಂದ ತೆಗೆದುಕೊಳ್ಳದಿರುವ ಧನಿಕನಿಗೆ ಮುಂದೆ ಅದರ ಬಡ್ಡಿಪೊಂದಲು ಅರ್ಹತೆ ಇಲ್ಲ.

ಸ್ವಮರ್ಥಂ ಯೋ ನ ಗೃಹ್ಣಾತಿ ದೀಯಮಾನಂ ಪುನಃ ಪುನಃ ।
ತಸ್ಮಾತ್ಸ ಹೀಯತೇ ವಿಪ್ರಾ ದಾತಾ ತತ್ರಾನೃಣೋ ಭವೇತ್ ॥ ೨೦ ॥

ಪಿತಾ ಪ್ರವಸಿತೋ ಯಸ್ಯ ಬ್ರಾಹ್ಮಣಾ ದ್ವಿದಶಾಃ ಸಮಾಃ ।
ಋಣಂ ತಸ್ಯ ಸುತೈರ್ದೇಯಂ ಮೃತಸ್ಯ ಯದಿ ವಾ ಪುನಃ ॥ ೨೧ ॥

ಪೈತೃಕಂ ತು ಋಣಂ ಪುತ್ರಃ ಪೌತ್ರೋ ವಾ ದಾತುಮರ್ಹತಿ ।
ನ ಕಾಮಸ್ತಚ್ಚತುರ್ಥಂ ತು ದಾತುಮರ್ಹತಿ ಕರ್ಹಿಚಿತ್ ॥ ೨೩ ॥

ರಿಕ್ಥಗ್ರಾಹೀ ತಥಾ ಪುತ್ರಃ ಸ್ತ್ರೀಗ್ರಾಹೀ ಧನದಾಸಿಕಃ ।
ಪುತ್ರೇ ಸ್ಥಿತೇಽಪಿ ದಾತವ್ಯಮೃಣಂ ವೈ ಧನಹಾರಿಣಾಂ ॥ ೨೪ ॥

ರಿಕ್ಥಗ್ರಾಹಿಸುತಾಭಾವೇ ಸ್ತ್ರೀಗ್ರಾಹೀ ದಾತುಮರ್ಹತಿ ।
ಸ್ವಯಂ ದಾತುಮಶಕ್ತೋ ಯಃ ಕರ್ತುಮಿಚ್ಛೇತ್ ಪುನಃ ಕ್ರಿಯಾಂ ॥ ೨೫ ॥

ಸಾಲಗಾರನು ಬಾರಿಬಾರಿಗೂ ಕೊಡಲು ಬಂದಾಗ ಹಣವನ್ನು ತೆಗೆದುಕೊಳ್ಳದಿರುವ ಧನಿಕನಿಗೇ ಇದರಿಂದ ಹಾನಿಯೇ ಹೊರತು ಸಾಲಗಾರನು ಋಣವಿಮುಕ್ತನಾಗಲು ಅಡ್ಡಿಯೇ ಇಲ್ಲ. ತಂದೆಯಾದವನು ಇಪ್ಪತ್ತು ವರ್ಷಗಳವರಿಗೂ ಪ್ರವಾಸ ಹೊಂದಿದ್ದಲ್ಲಿ ಅವನು ಬದುಕಿ ಬರುವ ಸಂಭವವಿದ್ದರೂ ಮೃತನೇ ಆಗಿದ್ದರೂ ಸಹ ಅವನ ಸಾಲವನ್ನು ಮಕ್ಕಳೇ ತೀರಿಸಬೇಕು. ತಂದೆ ಮಾಡಿದ್ದ ಸಾಲವನ್ನು ಮಗನೇ ಆಗಲಿ, ಮಮ್ಮಗನೇ ಆಗಲಿ ತೀರಿಸಲು ಬಾಧ್ಯಪಡುತ್ತಾರೆ. ನಾಲ್ಕನೇ ತಲೆಯವನು ಆ ಸಾಲವನ್ನು ಕೊಡುವ ವಿಷಯದಲ್ಲಿ ಅವನ ಇಷ್ಟ ನಿರ್ಬಂಧವೇನೂ ಇಲ್ಲ. ಪುತ್ರನಾದವನು ದಾಸಿಯನ್ನು ಹೊಂದುವ ಮತ್ತೊಬ್ಬನಿಗಾಗಿ ಸಾಲಮಾಡಿದಲ್ಲಿ ಪುತ್ರನು ಸಾಲಕೊಡದಿದ್ದಲ್ಲಿ ಅವನಿರುವಾಗಲೂ ತಂದೆಯೇ ಆ ಸಾಲವನ್ನು ಧನಿಕನಿಗೆ ಕೊಡಬೇಕು. ಪುತ್ರನಿಲ್ಲದಿರುವಾಗ ಸ್ತ್ರೀಯನ್ನು ದಾಸಿಯನ್ನಾಗಿ ಹೊಂದಿದವನೇ ಆ ಸಾಲದ ಹೊಣೆಯನ್ನು ವಹಿಸಬೇಕು. ಅಸಮರ್ಥನಾಗಿದ್ದಲ್ಲಿ ಅವನಲ್ಲಿ ಕೆಲಸಕ್ಕೇ ಸೇರಿ ತೀರಿಸಬೇಕು.

ಸ ದತ್ತ್ವಾ ನಿರ್ಜಿತಾಂ ವೃದ್ಧಿಂ ಕಾರಯೇತ್ಪರಿವರ್ತಯೇತ್ ।
ಅದರ್ಶಯಿತ್ವಾ ತತ್ರೈವ ಹಿರಣ್ಯಂ ಪರಿವರ್ತಯನ್ ॥ ೨೬ ॥

ಯಾವತೀ ಸಂಭವೇದ್ವೃದ್ಧಿ ಸ್ತಾವತೀಂ ದಾತುಮರ್ಹತಿ ।
ಪ್ರಾತಿಭಾವ್ಯೇ ವೃಥಾ ದಾನಂ ದ್ಯೂತಮಧ್ಯಯನಂ ಚ ಯತ್ ॥ ೨೭ ॥

ದಂಡಶುಲ್ಕಾವಶೇಷಂ ತು ನ ಪುತ್ರೋ ದಾತುಮರ್ಹತಿ ।
ದರ್ಶನೇ ಪ್ರತ್ಯಯೇ ದಾನೇ ಪ್ರಾತಿಭಾವ್ಯಂ ತ್ರಿಧಾ ಸ್ಮೃತಂ ॥ ೨೮ ॥

ಆದೌ ತು ವಿತಥೇ ದದ್ಯಾದಿತರಸ್ಯ ಸುತಾವಪಿ ।
ದರ್ಶನೇ ಪ್ರತಿಭೂರ್ಯತ್ರ ಮೃತಃ ಪ್ರಾತ್ಯಯಿಕೋಽಪಿವಾ ॥ ೨೯ ॥

ನ ತತ್ಪುತ್ರಾ ಋಣಂ ದದ್ಯುರ್ದದ್ಯುರ್ದಾನಾಯ ಯೇ ಸ್ಥಿತಾಃ ।
ಪ್ರಕಾಶಂ ಪ್ರತಿಭೂರ್ಯತ್ರ ದಾಪಿತೋ ಧನಿನಾಂ ಧನಂ ॥ ೩೦ ॥

೨೬–೩೦. ಧನಿಕನೂ ಸಹ ಪುನಃ ಇವನಿಗೆ ಹಣವನ್ನು ತೋರಿಸದಂತೆ ಬಡ್ಡಿಗಾಗಿ ಅಸಲು ಹಣವನ್ನೇ ಉಪಯೋಗಿಸುತ್ತಿರಬೇಕು. ಎಷ್ಟು ಬಡ್ಡಿಯಾಗಿದೆಯೋ ಅಷ್ಟನ್ನೂ ತೀರಿಸಬೇಕು. ಜಾಮೀನುದಾರನಲ್ಲಿ ದ್ಯೂತಾಧ್ಯಯನದಂತೆ ಸಾಲದ ಹಣವನ್ನು ಕೊಡುವುದು ವ್ಯರ್ಥ. ತಂದೆಯಾದವನಿಗೆ ಶಿಕ್ಷಿಸಲ್ಪಟ್ಟ ಶುಲ್ಕವನ್ನು ಮಗನುಕೊಡಬೇಕಾಗಿಲ್ಲ. ಹಣದ ಜಾಮೀನುದಾರಿಕೆಯು ಮೂರುವಿಧ., ಹಣವನ್ನು ಕೊಡುವುದನ್ನು ನೋಡಿದವನು, ತೆಗೆದುಕೊಳ್ಳುವವನಲ್ಲಿ ನಂಬಿಕೆ ತೋರಿಸಿದವನು, ಮತ್ತು ದಾನಹೊಂದಿದವನು ಇದರಲ್ಲಿ ಮೊದಲನೆಯ ಜಾಮೀನುದಾರಿಕೆಯು ಕೊಟ್ಟದ್ದೇ ಸುಳ್ಳು ಎಂಬ ವಿವಾದವು ಉಂಟಾದಾಗ ಉಪಯೋಗವಾಗುತ್ತದೆ. ಎರಡನೆಯ ಜಾಮೀನುದಾರಿಕೆಯು ಹಣವನ್ನು ಅವನ ಮಕ್ಕಳೂ ಕೊಡಬೇಕಾಗುತ್ತದೆ ನೋಡಿದವನು ಮೃತನಾದಲ್ಲಿ, ನಂಬಿಕೆ ತೋರಿದವನೂ ಮೃತನಾದಲ್ಲಿ ಅವರ ಮಕ್ಕಳು ಆ ಸಾಲವನ್ನು ಕೊಡಬೇಕಾಗಿಲ್ಲ. ದಾನಹೊಂದಿದವನು ಮಾತ್ರ ಕೊಡಲೇಬೇಕು. ಯಾವ ಸಂದರ್ಭದಲ್ಲಿ ಜಾಮೀನುದಾರನೇ ಎದುರಿಗೆ ಇದ್ದು ಧನಿಕನಿಂದ ಧನವನ್ನು ಕೊಡಿಸುತ್ತಾನೆಯೋ ಆಗ ಸಾಲ ತೆಗೆದುಕೊಂಡವನು ಆ ಹಣವನ್ನು ಜಾಮೀನುದಾರನಿಗೇ ಕೊಡಬಹುದು. ಎಲ್ಲೈ ದ್ವಿಜವರ್ಯರೇ ವರ್ಣತ್ರಯದವರೂ

ಸೋಽಯಂ ತಸ್ಯ ತು ತದ್ದ್ರವ್ಯಮೃಣಿಕೋ ದಾತುಮರ್ಹತಿ ।
ವರ್ಣತ್ರಯಂ ವಿಪ್ರವರಾ ಋಣಾರ್ಥಂ
ಕ್ಷೀಣೇ ವಿಶುದ್ಧಾವಿಹ ಕರ್ಮ ಕಾರ್ಯಂ ।
ಕ್ಷೀಣೋಗ್ರಜಂ ಸಾತು ಯಥೋದಯಂತ
ದ್ವಾಪ್ಯಾ ನ ಕರ್ಮಾಹರಣೇ ತದರ್ಥಂ ॥ ३೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಋಣದಾನ
ವರ್ಣನೋ ನಾಮ
ಏಕತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ಋಣವನ್ನು ಹೋಗಲಾಡಿಸಿಕೊಂಡು ಶುದ್ಧರಾಗಿ ಬದುಕಬೇಕು. ಈ ಶುದ್ಧಿಯು ಪುನಃ ಋಣದಿಂದ ಉಂಟಾಗುವ ಕರ್ಮಬಂಧಕ್ಕೆ ಅವಕಾಶಕೊಡದೆ ಅಭ್ಯುದಯಕ್ಕೆ ಕಾರಣವಾಗುತ್ತದೆ. (ಕೊನೆಯ ಶ್ಲೋಕವು ಬಹು ಅಶುದ್ಧ.)

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಋಣದಾನ
ವರ್ಣನವೆಂಬ ಮುನ್ನೂರ ಮೂವತ್ತೊಂದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ದ್ವಾತ್ರಿಂಶದಧಿಕ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಶೀಲಾಢ್ಯೇ ಕುಲಜೇ ಶಕ್ತೇ ನಿಕ್ಷೇಪಂ ನಿಕ್ಷಿಪೇದ್ಬುಧಃ ।
ಯಾಚ್ಯಮಾನಂ ತಥೈವಾಸೌ ತಸ್ಯ ತದ್ದಾತುಮರ್ಹತಿ || ೧ ||

ಯಾಚತೇ ಯಶ್ಚ ನಿಕ್ಷಿಪ್ಯ ನಿಕ್ಷಿಪ್ತಂ ನ ಪ್ರಯಚ್ಛತಿ ।
ತಾವುಭೌ ಚೌರವಚ್ಛಾಸ್ಯೌ ಧರ್ಮಜ್ಞೇನ ಮಹೀಕ್ಷಿತಾ || ೨ ||

ನಿಕ್ಷೇಪೋಪನಿಧೀ ಚೈವ ನ ದೇಯೌ ಪ್ರತ್ಯನಂತರೇ ।
ನಶ್ಯೇತೇ ವನಿಪಾತೇ ತಾವನಿಪಾತೇ ತ್ವನಾಶಿನಾ || ೩ ||

ಯಸ್ಯ ಹಸ್ತೇ ವಿನಿಕ್ಷಿಪ್ತಂ ತಸ್ಯ ಹಸ್ತೇ ತಥಾ ವಿನಾ ।
ನಷ್ಟಂ ತು ಯದಿ ನಿಕ್ಷಿಪ್ತಂ ನಾಸೌ ದದ್ಯಾತ್ಕಥಂಚನ || ೪ ||

ಮುನ್ನೂರ ಮೂವತ್ತೆರಡನೆಯ ಅಧ್ಯಾಯ.

೧–೨. ಹಂಸವು ಹೇಳುತ್ತದೆ :—ಸತ್ಕುಲದಲ್ಲಿ ಜನಿಸಿದವನೂ, ಶೀಲವಂತನೂ ಆಗಿರುವವನಲ್ಲಿ ಬುದ್ಧಿಶಾಲಿಯಾದವನು ನಿಕ್ಷೇಪ (ನ್ಯಾಸ) ವನ್ನಿಡಬೇಕು. ಅದನ್ನು ಇಟ್ಟವನೇ ಪುನಃ ಬಂದು ಕೇಳಿದಲ್ಲಿ ಆ ನಿಕ್ಷೇಪವನ್ನು ವಾಪಸು ಕೊಟ್ಟುಬಿಡಬೇಕು. ಯಾವನು ತಾನು ತೆಗೆದುಕೊಂಡಿದ್ದರೂ ಪುನಃ ಆ ನಿಕ್ಷೇಪವನ್ನು ಕೇಳುತ್ತಾನೆಯೋ ಯಾವನು ಬಂದು ಕೇಳಿದರೂ ಮಾಲೀಕನಿಗೆ ಅದನ್ನು ಕೊಡುವುದಿಲ್ಲವೋ ಅವರಿಬ್ಬರೂ ಸಹ ಕಳ್ಳರಂತೆ ರಾಜರಿಂದ ಶಿಕ್ಷಿಸಲ್ಪಡತಕ್ಕವರು.

೩–೭. ನಿಕ್ಷೇಪ ಮತ್ತು ಉಪನಿಧಿ (ಮತ್ತೊಬ್ಬನಲ್ಲಿಟ್ಟ ದ್ರವ್ಯ) ಇವುಗಳನ್ನು ಮತ್ತೊಬ್ಬನ ಕೈಯ್ಯಲ್ಲಿ ಕೊಡಬಾರದು. ಹಾಗೆ ಕೊಟ್ಟಲ್ಲಿ ಅವನಿಂದ ಮಾಲೀಕನಿಗೆ ಸೇರದೆ ಅವು ನಾಶವಾಗುತ್ತವೆ. ಯಾವನ ಕೈಯ್ಯಲ್ಲಿ ಇವು ಕೊಡಲ್ಪಟ್ಟಿದ್ದವೋ ಅವನಲ್ಲಿ ಅವು ಇಲ್ಲದೆ ನಷ್ಟವಾದಲ್ಲಿ ಅದನ್ನು ಅವನು ಕೊಡುವ ಸಂಭವವೇ ಇಲ್ಲ

ನಿಕ್ಷೇಪಭೋಗೀ ದಂಡ್ಯಃ ಸ್ಯಾದ್ಭೋಗಮೂಲ್ಯಂತು ಷಡ್ಗುಣಂ |
ಏಷ ಏವ ವಿಧಿರ್ದೃಷ್ಟೋ ಯಾಚಿತಾನ್ವಾಹಿತೇಷು ಚ || ೫ ||

ಶಿಲ್ಪಿಷೂಪನಿಧೌ ನ್ಯಾಸೇ ಪ್ರತಿನ್ಯಾಸೇ ತಥೈವ ಚ |
ಪ್ರತಿಗೃಹ್ಣಾತಿ ಯೋ ಗಂಡಂ ಯಚ್ಛ ಸ ಪ್ರಧನೇನರಃ
ತಸ್ಯಾಪ್ಯೇಷ ಭವೇದ್ಧರ್ಮಃ ಷಡೇತೇ ನಿಧನಾಃ ಸ್ಮೃತಾಃ || ೬ ||

ನಿಕ್ಷೇಪರಕ್ಷಾ ಪುರುಷೇಣ ಕಾರ್ಯಾ
ಯತ್ನೇನ ವಿಪ್ರಪ್ರವರಾಸ್ಸದೈವ |
ನಿಕ್ಷೇಪಹರ್ತಾ ನರಕಂ ಪ್ರಯಾತಿ
ಕಲ್ಪಾವಶೇಷಂ ನಿಹಿತಸ್ತು ಸರ್ವೈಃ || ೭ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ನಿಕ್ಷೇಪರಕ್ಷಾ
ವರ್ಣನೋ ನಾಮ
ದ್ವಾತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ನಿಕ್ಷೇಪವನ್ನು ಮಾಲೀಕನಿಗೆ ಮೋಸಮಾಡಿ ತಾನೇ ಅನುಭವಿಸಿದಲ್ಲಿ ಅವನು ಅದರ ಮೂಲ್ಯದ ಆರರಷ್ಟು ಹಣದಿಂದ ಶಿಕ್ಷಾರ್ಹನಾಗುತ್ತಾನೆ. ಯಾಚಿತದ್ರವ್ಯದ ಅಪಹರಣ. ಸಹಾಯಕ್ಕಾಗಿ ಇತರರಿಂದ ಕೊಡಲ್ಪಟ್ಟಿದ್ದ ದ್ರವ್ಯದ ಅಪಹರಣ, ಶಿಲ್ಪಿಗಳಲ್ಲಿ ಕೊಟ್ಟ ದ್ರವ್ಯ ಮತ್ತು ನ್ಯಾಸಗಳ ಅಪಹರಣ, ನ್ಯಾಸಕ್ಕೆ ಬದಲಾಗಿ ಇಟ್ಟ ಉಪನ್ಯಾಸಾಪಹರಣ, ದ್ಯೂತಕಾಲದಲ್ಲಿ ಇಟ್ಟ ಮಧ್ಯಸ್ಥ ದ್ರವ್ಯದ ಅಪಹರಣ. ಯುದ್ಧದಲ್ಲಿರುವ ಮನುಷ್ಯನ ದ್ರವ್ಯಾಪಹರಣ ಈ ಏಳು ವಿಷಯಗಳಲ್ಲಿಯೂ ಮೇಲೆ ಹೇಳಿರುವ ಶಿಕ್ಷೆಯನ್ನೇ ವಿಧಿಸಬೇಕು. ಇವು ಏಳೂ ಮನುಷ್ಯನಿಗೆ ದುಃಖಸ್ಥಾನಗಳು. ಮನುಷ್ಯನಾದವನು ನಿಕ್ಷೇಪದ ರಕ್ಷಣೆಯನ್ನು ಪ್ರಯತ್ನದಿಂದ ಮಾಡಬೇಕು. ನಿಕ್ಷೇಪವನ್ನು ಅಪಹರಿಸಿದವನು ಕಲ್ಪಪರ್ಯಂತವೂ ನರಕಭಾಗಿಯಾಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ನಿಕ್ಷೇಪರಕ್ಷಾವರ್ಣನವೆಂಬ ಮುನ್ನೂರ ಮೂವತ್ತೆರಡನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ತ್ರಯಸ್ತ್ರಿಂಶದಧಿಕ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ವಣಿಕ್‌ಪ್ರಭೃತಯೋ ಯತ್ರ ಕರ್ಮ ಸಂಭೂಯ ಕುರ್ವತೇ ।
ತತ್ಸಂಭೂಯ ಸಮುತ್ಥಾನಂ ಶೃಣುಧ್ವಂ ಗದತೋ ಮಮ ॥ ೧ ॥

ಫಲಹೇತೋರುಪಾಯೇನ ಕರ್ಮ ಸಂಭೂಯ ಕುರ್ವತಾಂ ।
ಆಧಾರಭೂತಃ ಪ್ರಕ್ಷೇಪಃ ತತಸ್ತಿಷ್ಠೇಯುರಂಶಕಾಃ ॥ ೨ ॥

ಸಮೋಽತಿರಿಕ್ತೋ ಹೀನೋ ವಾ ಯಾತ್ರಾಂಶೋ ಯಸ್ಯ ಯಾದೃಶಃ ।
ಕ್ಷಯವ್ಯಯೌ ತಥಾ ವೃದ್ಧಿಸ್ತತ್ರ ತಸ್ಯ ತಥಾವಿಧಾ ॥ ೩ ॥

ಮುನ್ನೂರ ಮೂವತ್ತಮೂರನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ:—ವೈಶ್ಯರೇ ಮೊದಲಾದವರು ಒಟ್ಟು ಸೇರಿ ಅನೇಕರು ಎಲ್ಲಿ ಕೆಲಸಗಳನ್ನು ಮಾಡುತ್ತಾರೆಯೋ ಅವರ ಸಾಮೂಹಿಕ ಕಾರ್ಯ ಕ್ರಮವನ್ನು ಹೇಳುತ್ತೇನೆ ಕೇಳಿರಿ. ಪ್ರಯೋಜನ ಲಾಭಕ್ಕಾಗಿ ಯಾವುದಾದರೊಂದು ವ್ಯಾಪಾರವನ್ನಾಶ್ರಯಿಸಿ ಸಾಮೂಹಿಕವಾಗಿ ಕೆಲಸಮಾಡತಕ್ಕವರು ಆ ವ್ಯಾಪಾರದ ಮೂಲಧನಕ್ಕಾಗಿ ಅವರವರ ಪಾಲಿನ ಮೂಲಧನದ ಅಂಶಗಳನ್ನು ಸೇರಿಸಿಡಬೇಕು. ಇಂತಹ ಅವರವರ ಪಾಲಿನ ಭಾಗಗಳು ಕಡಿಮೆಯಾಗಿರಲಿ, ಹೆಚ್ಚಾಗಿರಲಿ, ಸಮವಾಗಿರಲಿ, ಹೇಗಿದ್ದರೂ ಇರಬಹುದು. ಅವರವರಿಗೆ ಈ ಮೂಲಧನದಿಂದ ಉಂಟಾಗಬಹುದಾದ ಲಾಭ, ಖರ್ಚು, ನಷ್ಟ, ಇವೂ ಸಹ ಮೂಲಸಿಧಿಯ ಭಾಗದ ತಾರತಮ್ಯಕ್ಕೆ ತಕ್ಕಂತೆ ತಾರತಮ್ಯ ಹೊಂದುತ್ತವೆ. ಉಪಕರಣಗಳು, ಊಟ, ಖರ್ಚು

ಸರ್ವೇಷಾಂ ಚ ಮತಂ ಕಾರ್ಯಂ ಭಾಂಡಪಿಂಡವ್ಯಯಾದಿಕಂ ।
ಸಮಂ ಸರ್ವಸ್ಯ ವಿಭಜೇಲ್ಲೋಕೇ ತಸ್ಮಾನ್ಮಹೀಯತೇ ॥ ೪ ॥

ದೈವಿಕೇ ರಾಜಕೇ ವಾಪಿ ವ್ಯಸನೇ ಸಮುಪಸ್ಥಿತೇ ।
ತತ್ರ ತತ್ರ ಸ್ವಶಕ್ತ್ಯಾತು ತಸ್ಯಾಂಶೋ ದಶಮಃ ಸ್ಮೃತಃ ॥ ೫ ॥

ಏಕಸ್ಯ ಚೇತ್ಸ್ಯಾದ್ವ್ಯಸನಂ ದಾಯಾದಸ್ತದವಾಪ್ನುಯಾತ್ ।
ತಸ್ಯಾಭಾವೇ ಚ ಸರ್ವೇಷಾಂ ತೇಷಾಮೇವ ಹಿ ತದ್ಧನಂ ॥ ೬ ॥

ಋತ್ವಿಜೋ ವ್ಯಸನೇಷ್ವೇವಂ ಮಾನ್ಯಸ್ತ್ವಂ ಕರ್ಮನಿಸ್ತರಃ ।
ಲಭತೇ ದಕ್ಷಿಣಾಭಾಗಂ ಸ ತಸ್ಮಾತ್ಸಂಪ್ರಕಲ್ಪಿತಂ ॥ ೭ ॥

ಋತ್ವಿಗ್ಯಾಜ್ಯಾಂ ಚ ದುಷ್ಟೌ ತೌ ಸಂತ್ಯಜೇತಾಂ ಪರಸ್ಪರಂ ।
ಪ್ರಥಮಂ ಸಾಹಸಂ ದಂಡ್ಯೌ ನ ಚ ತೌ ತ್ಯಾಗಮರ್ಹತಃ ॥ ೮ ॥

ಅನ್ವಾಹಿತಂ ಯಾಚಿತಕಂ ಸಾರ್ಧಿಃ ಸಾಧಾರಣಂ ಚ ಯತ್ ।
ನಿಕ್ಷೇಪಃ ಪುತ್ರದಾರಂ ಚ ಸರ್ವಸ್ವಂ ಚಾನ್ವಯೇ ಸತಿ ॥ ೯ ॥

ಇವೆಲ್ಲವೂ ಎಲ್ಲರಿಗೂ ಇಷ್ಟವಂತೆ ನಡೆಯಬಹುದು. ಇವನ್ನೂ ಎಲ್ಲರಿಗೂ ಸಮವಾಗಿ ವಿಭಾಗಮಾಡಿದಲ್ಲಿ ಇದರಿಂದ ಕಾರ್ಮಿಕರಿಗೆ ಲೋಕದಲ್ಲಿ ಅಭಿವೃದ್ಧಿ ಹೆಚ್ಚು.

೫–೮. ಯಾವುದಾದರೊಂದು ದೈವಿಕವಾದ ಅಥವಾ ರಾಜನಿಂದ ಉಪದ್ರವ ಉಂಟಾದಾಗ ಆ ನಿಧಿಯಲ್ಲಿ ತನ್ನ ಶಕ್ತ್ಯನುಸಾರ ಇಟ್ಟಿರುವ ಪಾಲಿನ ಹತ್ತನೆಯ ಅಂಶವನ್ನು ತೆಗೆದುಕೊಳ್ಳಬಹುದು. ಆ ಸಮೂಹದಲ್ಲಿ ಒಬ್ಬನು ನಷ್ಟವಾದಲ್ಲಿ ಅದರ ಲಾಭನಷ್ಟವನ್ನು ಅವನ ದಾಯಾದನು ಹೊಂದಬಹುದು ಅಂತಹ ದಾಯಾದರೂ ಇಲ್ಲದಿದ್ದಲ್ಲಿ ಸಮೂಹದಲ್ಲಿರುವ ಎಲ್ಲರಿಗೂ ಅದು ಸೇರತಕ್ಕದ್ದು. ಯಾಗದಲ್ಲಿ ಋತ್ವಿಕ್ಕಾದವನಿಗೂ, ಈ ರೀತಿ ವ್ಯಸನಹೊಂದಿದಲ್ಲಿ ಇತರರೆಲ್ಲರೂ ಸೇರಿ ಕೆಲಸ ಮಾಡಿದರೂ ಅವನ ಭಾಗವನ್ನು ದಕ್ಷಿಣೆಯಲ್ಲಿ ಕಲ್ಪಿಸಿಕೊಡುತ್ತಾರೆ. ಯಾಗದಲ್ಲಿ ಋತ್ವಿಜರು ದುಷ್ಟಸ್ವಭಾವದಿಂದ ಪರಸ್ಪರ ಮಾಡಬೇಕಾದ ಯಾಜ್ಯಾದಿಕಾರ್ಯಗಳನ್ನು ತ್ಯಜಿಸಿದಲ್ಲಿ ಮೊದಲು ಅವರನ್ನು ಶಿಕ್ಷಿಸಬೇಕು. ಆಗಲೇ ಅವರನ್ನು ಪರಿತ್ಯಾಗ ಮಾಡಬಾರದು.

೯–೧೩ ಮತ್ತೊಬ್ಬನಿಂದ ಸಹಾಯಕ್ಕಾಗಿ ಬಂದದ್ದು ಯಾಚನೆಮಾಡಿದ್ದು, ಬಡ್ಡಿಯಿಂದ ಕೂಡಿದಮೊತ್ತ. ಇವೆಲ್ಲವೂ ಸೇರಿರುವ ಆ ನಿಧಿಯು ಸರ್ವರಿಗೂ

ಅದೇಯಾನಿ ದ್ವಿಜಶ್ರೇಷ್ಠಾ ಯಶ್ಚಾನ್ಯಸ್ಮೈ ಪ್ರತಿಶ್ರುತಂ ।
ಅದತ್ತಂ ತು ಭವೇತ್ ಕ್ರೋಧ ಭಯಶೋಕಾನ್ವಿತೈರ್ನರೈಃ　　॥ ೧೦ ॥

ಬಾಲವೃದ್ಧಾಸ್ವತಂತ್ರೈಶ್ಚ ಮತ್ತೋನ್ಮತ್ತಸ್ತಥೈವ ಚ ।
ಅಜ್ಞಾನಾಚ್ಚ ತಥಾ ಪಾತ್ರಂ ಸ್ಪರ್ಧಯಾ ದ್ವಿಜಸತ್ತಮಾಃ　　॥ ೧೧ ॥

ಗೃಹ್ಣಾತ್ಯಯಂ ಚ ಯೋ ಮೋಹಾದ್ಯಶ್ಚಾದೇಯಂ ಪ್ರಯಚ್ಛತಿ ।
ತಾವುಭೌ ಚೌರವಚ್ಛಾಸ್ಯೌ ಧರ್ಮಜ್ಞೇನ ಮಹೀಕ್ಷಿತಾ　　॥ ೧೨ ॥

ದತ್ತಂ ಸ್ವಯಂ ವಾಥ ಪರೇಣ ದತ್ತಂ
ದತ್ತಂ ನರೋ ಯಸ್ತು ಹರೇತ್ಪರಸ್ಯ ।
ಧ್ರುವಂ ಸ ವಿಪ್ರಾ ನರಕಂ ಪ್ರಯಾತಿ
ದತ್ತಂ ಸ್ವಯಂ ವಾ ನ ಚ ಯಶ್ಚ ದದ್ಯಾತ್　　॥ ೧೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸಂಭೂಯ ಸಮುತ್ಥಾನದೇಯಾದೇಯವರ್ಣನೋ ನಾಮ ತ್ರಯಸ್ತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ಸಾಧಾರಣ, ಒಟ್ಟು ಸೇರಿ ಹಾಗೆಯೇ ಕೆಲಸ ಮಾಡುತ್ತಿದ್ದಲ್ಲಿ ಅವರವರಿಗೆ ಇದೇ ಹೆಂಡತಿಮಕ್ಕಳು, ಇದೇ ಸರ್ವಸ್ವ. ಮೊದಲು ಕೊಡುವುದಾಗಿ ಪ್ರತಿಜ್ಞೆ ಮಾಡಿದ್ದರೂ ಅನರ್ಹವಾದ ಪದಾರ್ಥವನ್ನು ಕೊಡಬಾರದು. ಹಾಗೆ ಕೊಟ್ಟಲ್ಲಿ ಕೋಪ ಭಯಾದಿಗಳಿಂದ ಕೂಡಿದ ಆ ಜನರು ಅದನ್ನು ಪುನಃ ಹಿಂದೆ ಕೊಡುವುದೇ ಇಲ್ಲ. ಬಾಲರು, ವೃದ್ಧರು, ಅಸ್ವತಂತ್ರರು ಇವರೊಡನೆ ಸ್ಪರ್ಧೆಯಿಂದಾಗಲಿ ಅಜ್ಞಾನದಿಂದಾಗಲಿ ಯಾವ ವ್ಯವಹಾರವನ್ನೂ ಮಾಡಬಾರದು. ಇವರಲ್ಲಿ ಯಾರು ಅಜ್ಞಾನದಿಂದ ದಾನಾದಿಗಳನ್ನು ಹೊಂದುತ್ತಾರೆಯೋ ಯಾವನು ದಾನಾನರ್ಹವಸ್ತುವನ್ನು ಕೊಡುತ್ತಾನೆಯೋ ಅವರಿಬ್ಬರೂ ಸಹ ಕಳ್ಳರಂತೆ ರಾಜನಶಿಕ್ಷೆಗೆ ಅರ್ಹರಾಗುತ್ತಾರೆ ತಾನಾಗಿಯೇ ಕೊಟ್ಟಿದ್ದನ್ನಾಗಲಿ ಮತ್ತೊಬ್ಬನಿಂದ ಕೊಡಿಸಿದ್ದನ್ನಾಗಲಿ ಯಾವನು ಹಿಂದಕ್ಕೆ ಕೊಡದೆ ಅಪಹರಿಸುತ್ತಾನೆಯೋ ಅವನು ಖಂಡಿತವಾಗಿಯೂ ನರಕಭಾಗಿಯಾಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಸಂಭೂಯಸಮುತ್ಥಾನದೇಯಾದೇಯವರ್ಣನವೆಂಬ ಮುನ್ನೂರ ಮೂವತ್ತಮೂರನೆಯ ಅಧ್ಯಾಯ ಮುಗಿದಿದೆ

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತುಸ್ತ್ರಿಂಶದಧಿಕತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಭೃತಕಸ್ತ್ರಿವಿಧಃ ಪ್ರೋಕ್ತಸ್ತಸ್ಯ ವಕ್ಷ್ಯಾಮಿ ಲಕ್ಷಣಂ |
ಏಕಸ್ತ್ರ ಕಾಲಾವಧಿಕೋ ದೇಶಾವಧಿರಥಾಪರಃ || ೧ ||

ಕರ್ಮಾವಧಿಸ್ತೃತೀಯಸ್ತು ಸರ್ವೇ ಕರ್ಮಕರಾಃ ಸ್ಮೃತಾಃ |
ಅದೇಶಕಾಲೇ ಕರ್ಮಾದೌ ಭೃತಕಶ್ಚೇತ್ತ್ಯಜೇದ್ಭೃತಿಂ || ೨ ||

ಭೃತಿಶ್ಚಾದೀಯತೇ ಸರ್ವಾ ಸ್ವಾಮಿದೋಷೋ ನ ಚೇದ್ಭವೇತ್ |
ಹಾರಿತೇ ಸ್ವಾಮಿದೋಷೇಣ ದಾಪ್ಯಶ್ಚ ಭೃತಕೋ ಭವೇತ್ || ೩ ||

ಮುನ್ನೂರ ಮೂವತ್ತನಾಲ್ಕನೆಯ ಅಧ್ಯಾಯ.

೧–೪. ಹಂಸವು ಹೇಳುತ್ತದೆ:—ಕೂಲಿಯಿಂದ ಕೆಲಸಮಾಡುವವರು ಮೂರು ವಿಧವಾಗಿದ್ದಾರೆ. ಅವರ ಲಕ್ಷಣವನ್ನೂ ಹೇಳುತ್ತೇನೆ. ಒಬ್ಬನು ಕಾಲಾವಧಿಯಿಂದ ಕೆಲಸಮಾಡತಕ್ಕವನು, ಒಬ್ಬನು ದೇಶಾವಧಿಯಿಂದ ಕೆಲಸಮಾಡತಕ್ಕವನು ಮೂರನೆಯವನು ಕರ್ಮಾವಧಿಯಿಂದ ಕೆಲಸಮಾಡತಕ್ಕವನು, ಇವರೆಲ್ಲರೂ ಕಾರ್ಮಿಕರೇ ಆಗುತ್ತಾರೆ. ಕಾರ್ಮಿಕನಾದವನು ದೇಶಕಾಲ ವ್ಯವಸ್ಥೆ ಇಲ್ಲದೆ ಕೆಲಸ ಪ್ರಾರಂಭಿಸುವ ಮೊದಲೇ ಕೆಲಸವನ್ನು ಬಿಟ್ಟುನಿಂತಲ್ಲಿ ಸ್ವಾಮಿಯಾಗಿರುವವನ ದೋಷವಿಲ್ಲದಿರುವಾಗ ಆ ಭೃತ್ಯನ ಎಲ್ಲಾ ಕೂಲಿಯನ್ನೂ ಕೊಡದೆ ನಿಲ್ಲಿಸಬೇಕು.

ರಾಜ್ಞಾ ಚ ದಂಡನೀಯಃ ಸ್ಯಾತ್ತಥಾ ಪಣಶತಂ ಭವೇತ್ ।
ಗೃಹೀತಮೂಲ್ಯಂ ಯಃ ಶಿಲ್ಪೀ ಕಾಲೇ ದ್ರವ್ಯಂ ನ ಯಚ್ಛತಿ || ೪ ||

ದ್ವಿಗುಣಂ ದೀಯತೇ ಮೂಲಂ ದ್ರವ್ಯಂ ದಾಪ್ಯಂ ತಥೈವ ಚ ।
ತದ್ದ್ರವ್ಯಂ ಚ ವಿನಾ ಹಾನಿಂ ಸಕಲಂ ದಾತುಮರ್ಹತಿ || ೫ ||

ಭೃತ್ಯದೋಷಂ ವಿನಾ ಸ್ವಾಮೀ ಭೃತ್ಯಮರ್ಧಪಥೇ ತ್ಯಜೇತ್ ।
ತುಲ್ಯಂ ತು ಸಕಲಂ ದದ್ಯಾದ್ರಾಜ್ಞಃ ಕನಕಮಾಷಕಂ || ೬ ||

ಆರ್ತಸ್ಯ ಭಕ್ತಂ ದಾತವ್ಯಂ ಸ್ವಸ್ಥಸ್ತತ್ಕರ್ಮ ಪೂರಯೇತ್ ।
ಸ್ವಸ್ಥೋಽಪಿ ಚೇನ್ನ ತತ್ಕುರ್ಯಾದ್ದ್ವಿಗುಣಂ ಭಕ್ತಮುತ್ಸೃಜೇತ್ || ೭ ||

ಪ್ರಮಾದಾನ್ನಾಶಿತಂ ದಾಪ್ಯಂ ಸಮಂ ಛಿದ್ರಾಹತಾ ಶತಂ ।
ಪ್ರಸಹ್ಯ ಯದ್ಧೃತಂ ಚೋರೈರ್ನ ತದ್ದಾಪ್ಯೋ ಭವೇತ್ ಕ್ವಚಿತ್ || ೮ ||

ಸ್ವಾಮಿಯ ದೋಷದಿಂದ ಕೆಲಸವು ನಿಂತಿದ್ದಲ್ಲಿ ಅವನ ಕೂಲಿಯನ್ನೆಲ್ಲಾ ಕೊಡಿಸಿಬಿಡಬೇಕು. ಸ್ವಾಮಿಯನ್ನೂ ಸಹ ರಾಜನು ನೂರುಪಣಗಳಿಂದ ಶಿಕ್ಷಿಸಬೇಕು.

೫-೭. ಶಿಲ್ಪಿಯಾದವನು ತನ್ನ ಕೂಲಿಯನ್ನೆಲ್ಲಾ ತೆಗೆದುಕೊಂಡೂ ಸಕಾಲದಲ್ಲಿ ಮಾಡಿದ ಪದಾರ್ಥವನ್ನು ಕೊಡದೆ ಇದ್ದಲ್ಲಿ ಮಾಡಿದ ಪದಾರ್ಥದ ಎರಡರಷ್ಟು ದ್ರವ್ಯದಿಂದ ಅವನನ್ನು ಶಿಕ್ಷಿಸಬೇಕು. ಅವನು ಕೆಲಸಮಾಡಲು ಹೊಂದಿದ್ದ ಪದಾರ್ಥವನ್ನೂ ಸಹ ಲೋಪವಿಲ್ಲದೆ ಹಿಂದಕ್ಕೆ ಕೊಡಬೇಕು. ಸ್ವಾಮಿಯಾದವನು ಕಾರ್ಮಿಕನನ್ನು ಅವನ ದೋಷವಿಲ್ಲದಿದ್ದರೂ ಮಧ್ಯದಲ್ಲಿಯೇ ತ್ಯಾಗಮಾಡಿದ್ದೇ ಆದರೆ ಆ ಕಾರ್ಮಿಕನಿಗೆ ಸಲ್ಲಬೇಕಾಗಿದ್ದ ಹಣಕ್ಕೆ ಸಮಾನವಾದ ಚಿನ್ನದ ಮಾಷಕವನ್ನು ಜುಲ್ಮಾನೆಯ ರೂಪದಿಂದ ದೊರೆಗೆ ಕೊಡಬೇಕು. ಕೆಲಸದಲ್ಲಿ ಶ್ರಮಕೊಂಡಿದವನಿಗೆ ವಿರಾಮ ಕೊಡಬೇಕು. ಸ್ವಸ್ಥನಾಗಿರುವ ಮತ್ತೊಬ್ಬನಿಂದ ಆ ಕೆಲಸವನ್ನು ಪೂರ್ತಿಗೊಳಿಸಿಕೊಳ್ಳಬೇಕು. ಸ್ವಸ್ಥನೂ ಆ ಕೆಲವನ್ನು ಪೂರ್ತಿಗೊಳಿಸದಿದ್ದಲ್ಲಿ ಅವನ ವಿರಾಮದ ಎರಡರಷ್ಟು ವಿರಾಮಕಾಲವನ್ನು ಅವನಿಗೆ ಕೊಡದೆ ವಜಾಮಾಡಬೇಕು.

೮-೯. ಕೆಲಸಮಾಡುವಾಗ ಕಾರ್ಮಿಕನ ಅಜಾಗರೂಕತೆಯಿಂದ ಸಾಮಗ್ರಿಗಳು ನಾಶವಾದಲ್ಲಿ ಅದನ್ನು ಕಾರ್ಮಿಕನಿಂದ ಯಜಮಾನನಿಗೆ ಕೊಡಿಸಬೇಕು.

ತೋಯಾಗ್ನಿನಾಶೇ ಶಕ್ತ್ಯಾ ಚೇತ್ಪ್ರವೃತ್ತೇನವ ದಾಪಯೇತ್ ।
ರಾಜ್ಞಾ ಹೃತಂ ತಥಾ ದ್ರವ್ಯಂ ನ ಸ ದಾಪ್ಯಃ ಕಥಂಚನ ॥ ೯ ॥

ಯತ್ರ ಗುಪ್ತ್ಯಾ ಭವೇನ್ನಿತ್ಯಂ ತತ್ರ ಚೇದ್ವ್ಯಾಪಕೋ ಭವೇತ್ ।
ತತ್ಸರ್ವಂ ದಾಪಯೇದ್ದ್ರವ್ಯಂ ಯತ್ಕಿಂಚಿತ್ತತ್ರ ನಶ್ಯತಿ ॥ ೧೦ ॥

ಶಕಟಾದ್ಯಂ ತು ಗೃಹ್ಣೀಯಾದ್ಭಾಟಕೇನ ತು ಯೋ ನರಃ ।
ಅದದದ್ಭಾಟಕಂ ದಾಪ್ಯೋ ವ್ಯಾಧಸ್ಯಾಪಿ ಚ ಭಾಟಕಂ ॥ ೧೧ ॥

ಭೃತಿಂ ಯಃ ಪ್ರತಿಪದ್ಯೇತ ವಿನೈವ ಸಮಯಕ್ರಿಯಾಂ ।
ದೇಶಕಾಲೌ ಚ ಶಕ್ತಿಂ ಚ ಭಕ್ತಿಂ ಚಾವೇಕ್ಷ್ಯ ಶಕ್ತಿತಃ ॥ ೧೨ ॥

ತಾನಾಗಿಯೇ ನಾಶವಾದಲ್ಲಿ ಅಮ ಕೆಟ್ಟುಹೋದ ಪದಾರ್ಥಗಳ ಗುಂಪಿಗೆ ಸೇರಿದ್ದು, ಬಲಾತ್ಕಾರದಿಂದ ಕಳ್ಳರು ಅಪಹರಿಸಿದಲ್ಲಿ ಅದನ್ನು ಕಾರ್ಮಿಕರು ಕೊಡಬೇಕಾಗಿಲ್ಲ. ನೀರು, ಬೆಂಕಿ ಇವುಗಳಿಂದ ಸಾಮಗ್ರಿಗಳು ನಾಶವಾದಲ್ಲಿ ಸ್ವಶಕ್ತಿಗೆ ತಕ್ಕಂತೆ ಯಜಮಾನನು ಹೊಸಪದಾರ್ಥಗಳನ್ನು ಒದಗಿಸಿಕೊಡಬೇಕು. ರಾಜನು ತೆಗೆದುಕೊಂಡು ಹೋದರೂ ಸಹ ಯಜಮಾನನೇ ಅದಕ್ಕೆ ಬಾಧ್ಯ, ಕಾರ್ಮಿಕರು ಬಾಧ್ಯರಲ್ಲ.

೧೦-೧೨. ಯಾವ ರಹಸ್ಯಸ್ಥಳದಲ್ಲಿ ಸಾಮಗ್ರಿಗಳು ರಕ್ಷಿಸಲ್ಪಡುತ್ತವೆಯೋ ಅಂತಹಸ್ಥಳಕ್ಕೆ ಕಾರ್ಮಿಕನು ಮುಖ್ಯನಿರ್ವಾಹಕನಾಗಿದ್ದಲ್ಲಿ ಅಲ್ಲಿ ನಷ್ಟವಾದ ಪದಾರ್ಥಗಳನ್ನು ಆ ಪ್ರಧಾನ ಕಾರ್ಮಿಕನೇ ಕೊಡಬೇಕು. ಗಾಡಿಯೇ ಮೊದಲಾದುವನ್ನು ಬಾಡಿಗೆಗಾಗಿ ತೆಗೆದುಕೊಂಡವನು ಬಾಡಿಗೆಯನ್ನು ಕೊಡದಿದ್ದಲ್ಲಿ ಅವನು ಬಾಡಿಗೆಯನ್ನು ಬೇರೆ ಸಂಪಾದಿಸದಿದ್ದರೂ ತಾನು ಒಪ್ಪಿದ ಬಾಡಿಗೆಯನ್ನು ಯಜಮಾನನಿಗೆ ಕೊಟ್ಟೇಕೊಡಬೇಕು. ಯಾವ ಕಾರ್ಮಿಕನು ಮೊದಲು ಯಾವ ವಿಚಾರವನ್ನೂ ನಿರ್ಣಯ ಮಾಡಿಕೊಳ್ಳದೆ ಕೆಲಸಕ್ಕೆ ಸೇರುತ್ತಾನೆಯೋ, ಅವನಿಗೂ ಸಹ ದೇಶಕಾಲಕ್ಕೆ ತಕ್ಕಂತೆ ಅವನ ಕಾರ್ಯಸಾಮರ್ಥ್ಯವನ್ನೂ ಸ್ವಾಮಿಭಕ್ತಿಯನ್ನೂ ನೋಡಿ ಸರಿಯಾದ ವೇತನವನ್ನು ಕೊಡಬೇಕು. ಕೊಡದಿದ್ದಲ್ಲಿ ಬಲಾತ್ಕಾರದಿಂದ ರಾಜನು ಕೊಡಿಸಬೇಕು.

ಭೃತಿಸ್ತಸ್ಯ ಪ್ರದಾತವ್ಯಾ ದಾಪ್ಯೋ ರಾಜ್ಞಾ ಬಲಾದಥ ।
ಪ್ರವ್ರಜ್ಯಾವಸಿತೋ ರಾಜ್ಞೋ ದಾಸ ಆಮರಣಾಂತಿಕಃ ॥ ೧೩ ॥

ದುರ್ಭಿಕ್ಷವಿಧೃತೋ ಯಸ್ತು ಮೋಕ್ಷಿತಃ ಪ್ರಾಣಸಂಶ್ರಯಾತ್ ।
ಪ್ರತಿಶೀರ್ಷಂ ಪ್ರದಾನೇನ ಮುಚ್ಯತೇ ಚ ಧ್ವಜಾಹೃತಃ ॥ ೧೪ ॥

ಗ್ರಾಸಮಾಚ್ಛಾದನಂ ದೇಯಂ ಸರ್ವೇಷಾಮೇವ ಸರ್ವದಾ ।
ತಥೈವ ರಾಜಾ ಭೃತ್ಯಾನಾಂ ಭೃತಿಂ ವರ್ಷಶತಾದಪಿ ॥ ೧೫ ॥

ಪುತ್ರಪೌತ್ರಾನುಗಶ್ಚೇತ್ಸ್ಯಾದ್ಯದ್ಯಸೌ ತತ್ರ ಕರ್ಮಕೃತ್ ।
ಅಧ್ಯಾಪನೇ ಯೋ ಭೃತಕಸ್ತಸ್ಯಾಪ್ಯೇಷ ವಿನಿಶ್ಚಯಃ ॥ ೧೬ ॥

ಕಾಲೇ ಭೃತ್ಯೈರ್ಜಯೇತ್ ಕಿಂಚಿದ್ಯದಿ ವಿತ್ತಂ ಸ್ವಕರ್ಮಣಾ ।
ಭಕ್ತುದಸ್ಯೈವ ತತ್ಸರ್ವಮಿತಿ ಧರ್ಮವಿದೋ ವಿದುಃ ॥ ೧೭ ॥

೧೩-೧೬. ಯಾವನು ಸನ್ಯಾಸಹೊಂದಿ ಲೋಕ ವ್ಯವಹಾರದಿಂದ ಬೇರೆಯಾಗುತ್ತಾನೆಯೋ ಯಾವನು ಆಮರಣಾಂತ ರಾಜನಲ್ಲೇ ದಾಸಭಾವದಿಂದಿರುವನೋ ಇವರಿಬ್ಬರೂ ರಾಜನಿಂದ ಯಥೋಚಿತಸನ್ಮಾನಪಡೆದು ಅನ್ನವಸ್ತ್ರಗಳನ್ನೂ ಸಹ ಜೊರೆಯಿಂವಲೇ ಸರ್ವಕಾಲದಲ್ಲಿಯೂ ಪಡೆಯತಕ್ಕವರು. ಯಾವ ಕಾರ್ಮಿಕನು ದುರ್ಭಿಕ್ಷದಿಂದ ಕೇವಲ ಪ್ರಾಣಧಾರಣೆ ಹೊಂದಿರುವನೋ ಯಾವನು ಅಪಾಯಕ್ಕೆ ಒಳಗಾಗಿ ದೈವವಶದಿಂದ ಪಾರಾಗಿ ಜೀವಿಸಿರುವನೋ ಇತರ ವಿಷಯದಲ್ಲಿ ಯಜಮಾನನಾದವನು ಯಥೋಚಿತಪರಿಹಾರಕೊಟ್ಟು ಅನ್ನವಸ್ತ್ರಗಳನ್ನೂ ಕೊಡಬೇಕು. ಅವರೆ ಹೀಗೆ ಉಪಕಾರ ಹೊಂದತಕ್ಕವರು ಪುತ್ರಪೌತ್ರಕ್ರಮದಿಂದಲೂ ಇವನಲ್ಲಿಯೇ ಕಾರ್ಮಿಕರಾಗಿ ಜೀವಿಸುತ್ತಿದ್ದಲ್ಲಿ ಮಾತ್ರ. ಸಂಬಳ ತೆಗೆದುಕೊಂಡು ಪಾಠಹೇಳುತ್ತಿರುವ ಅಧ್ಯಾಪಕನ ವಿಷಯದಲ್ಲಿಯೂ ಇದೇ ರೀತಿಯನ್ನು ಅನುಸರಿಸಬೇಕು, ಇದು ನಿಶ್ಚಯ.

೧೭-೨೦ ಭೃತ್ಯರಾದವರು ತಮ್ಮ ಕೆಲಸದಿಂದ ಸಕಾಲದಲ್ಲಿ ಪ್ರಯತ್ನಿಸಿ ಧನವನ್ನು ಸಂಪಾದಿಸಿದ್ದೇ ಆದರೆ ಅದೆಲ್ಲವೂ ಅವರಿಗೆ ಅನ್ನಪ್ರದನಾದ ಯಜಮಾನನಿಗೇ ಸೇರತಕ್ಕದೆಂಬುದು ಧರ್ಮಜ್ಞರಮಾತು. ಹೆಂಡತಿ, ಮಗ, ದಾಸ ಈ

ಭಾರ್ಯಾ ಪುತ್ರಶ್ಚ ದಾಸಶ್ಚ ತ್ರಯ ಏವಾಧನಾ ಮತಾಃ ।
ಯತ್ತೇ ಸಮಧಿಗಚ್ಛಂತಿ ಯಸ್ಯ ತೇ ತಸ್ಯ ತದ್ಧನಂ ॥ ೧೮ ॥

ವರ್ಣಾನಾಮಾನುಲೋಮ್ಯೇನ ನ ದಾಸ್ಯಂ ಪ್ರತಿಲೋಮತಃ ।
ಪ್ರಾತಿಲೋಮ್ಯೇನ ಚೇದ್ದಾಸ್ಯಂ ಕಾರಯೇತ್ತಂ ವಿನಾಶಯೇತ್ ॥ ೧೯ ॥

ಶುಲ್ಕಂ ಗೃಹೀತ್ವಾ ಪಣ್ಯಸ್ತ್ರೀ ನೇಚ್ಛತೀ ದ್ವಿಗುಣಂ ವಹೇತ್ ।
ಅಪ್ರಯಚ್ಛನ್ ಪುಮಾನ್ ಶುಲ್ಕಂ ದಾಪ್ಯಂ ಸ್ವಷ್ಟಗುಣಂ ಭವೇತ್ ॥ ೨೦ ॥

ಪಶೂನ್ನಯೇದರಣ್ಯಂ ತು ಪಾಲಕೋ ರಜನೀಕ್ಷಯೇ ।
ತೃಪ್ತಾನ್ಪೀತಜಲಾನ್ಸರ್ವಾನ್ಸಾಯಾಹ್ನೇ ತು ಸಮರ್ಪಯೇತ್ ॥ ೨೦ ॥

ದಿವಾ ವಕ್ತವ್ಯತಾ ಪಾಲೇ ರಾತ್ರೌ ಸ್ವಾಮಿನಿ ತದ್ಗೃಹೇ ।
ಪಶೂನಾಂ ವ್ಯಸನಂ ಗೋಪೋ ವ್ಯಾಯಚ್ಛೇತ್ತತ್ರ ಶಕ್ತಿತಃ ॥ ೨೨ ॥

ಮೂವರೇ ಸ್ವತಂತ್ರಧನವಿಲ್ಲದವರು, ಏತಕ್ಕೆಂದರೆ, ಇವರು ಯಾರ ಸಂಬಂಧ ಹೊಂದಿರುವರೋ ಅಂದರೆ, ಪತಿ, ತಂದೆ, ಯಜಮಾನ, ಇವರ ಧನದಿಂದ ರಕ್ಷಣೆ ಹೊಂದುತ್ತಾರೆ. ಪ್ರತಿಲೋಮ (ಕೀಳು) ವರ್ಣದವರಿಗೆ ಅನುಲೋಮ (ಮೇಲು) ವರ್ಣದವರು ದಾಸರಾಗಿರಬಾರದು. ಪ್ರತಿಲೋಮ ವರ್ಣದವನಲ್ಲಿಯೂ ದಾಸಭಾವ ಹೊಂದಿರುವ ಅನುಲೋಮವರ್ಣದವನನ್ನು ನಾಶಪಡಿಸಬೇಕು. ಶುಲ್ಕವನ್ನು ತೆಗೆದುಕೊಂಡ ವೇಶ್ಯೆಯು ಶುಲ್ಕಕೊಟ್ಟವನನ್ನು ಇಚ್ಛಿಸದೆ ನಿರಾಕರಿಸಿದಲ್ಲಿ ಅವಳಿಗೆ ಶುಲ್ಕದ ಎರಡರಷ್ಟು ದಂಡವಿಧಿಸಬೇಕು. ಶುಲ್ಕಕೊಡಲು ಒಪ್ಪಿ ಅವಳನ್ನು ಅನುಭವಿಸಿದವನು ಅನಂತರ ಶುಲ್ಕವನ್ನು ಕೊಡದೇಹೋದಲ್ಲಿ ನಿರ್ದಿಷ್ಟ ಶುಲ್ಕದ ಎಂಟರಷ್ಟು ದ್ರವ್ಯವನ್ನು ಅವನಿಗೆ ದಂಡವಿಧಿಸಬೇಕು.

೨೧-೨೨. ಪಶುಪಾಲಕನಾದವನು ಬೆಳಿಗ್ಗೆ ಪಶುಗಳನ್ನು ಅರಣ್ಯಕ್ಕೆ ಹೊಡೆದುಕೊಂಡುಹೋಗಿ ಅವುಗಳನ್ನು ಹುಲ್ಲುನೀರಿನಿಂದ ತೃಪ್ತಿಪಡಿಸಿ ಸಾಯಂಕಾಲಕ್ಕೆ ಮನೆಗೆ ತಂದು ಯಜಮಾನನಿಗೆ ಒಪ್ಪಿಸಬೇಕು. ಹಗಲು ಅವುಗಳ ಹೊಣೆ ಎಲ್ಲಾ ಪಶುಪಾಲಕನಿಗೂ ರಾತ್ರಿಯಲ್ಲಿ ಮನೆಯ ಯಜಮಾನನಿಗೂ ಸೇರಿದ್ದು. ಅರಣ್ಯದಲ್ಲಿ ಪಶುಗಳಿಗೆ ತೊಂದರೆ ಏನಾದರೂ ಬಂದಲ್ಲಿ ಸ್ವಶಕ್ತಿಗೆ ತಕ್ಕಂತೆ

ಅಶಕ್ತೌ ತ್ವಭಿ ಪತ್ತೌ ತು ಸ್ವಾಮಿನೇ ತನ್ನಿವೇದಯೇತ್ ।
ಅಧ್ಯಾಯುಚ್ಛನ್ನವಿಕ್ರೋಶಂ ಸ್ವಾಮಿನೇ ವಿನಿವೇದಯೇತ್ ॥ ೨೩ ॥

ವೋಢುಮರ್ಹತಿ ಗೋಪಸ್ತು ವಿನಯಂ ಚಾಪಿ ರಾಜನಿ ।
ನಷ್ಟಂ ವಿನಷ್ಟಂ ಕೃಮಿಭಿಃ ಶ್ವಹತಂ ವ್ಯಸನೇ ಮೃತಂ ॥ ೨೪ ॥

ಹೀನಂ ಪುರುಷಕಾರೇಣ ಪಾಲಕೋ ವಿನಿವೇದಯೇತ್ ।
ಅಜಾವಿಕೇ ತು ಸಂರುದ್ಧೇ ವೃಕೈಃ ಪಾಲೇ ತ್ವನಾಯತಿ ॥ ೨೫ ॥

ಯಾಂ ಪ್ರಸಹ್ಯ ವೃಕೋ ಹನ್ಯಾತ್ಪಾಲೇ ತತ್ಕಿಲ್ಬಿಷಂ ಭವೇತ್ ।
ತಾಸಾಂ ಚೇದ್ದೈವರುದ್ಧಾನಾಂ ಚರಂತೀನಾಂ ಮಿಥೋವನೇ ॥ ೨೬ ॥

ಯಾಮುತ್ಪತ್ಯ ವೃಕೋ ಹನ್ಯಾನ್ನ ಪಾಲಸ್ತತ್ರ ಕಿಲ್ಬಿಷೀ ।
ವಿದ್ವಿಷ್ಯ ತು ಹೃತಂ ಚೋರೈರ್ನಪಾಲೋ ದಾತುಮರ್ಹತಿ ॥ ೨೭ ॥

ಪ್ರತೀಕಾರಮಾಡಬೇಕು. ತನ್ನ ಅಶಕ್ತಿಯಿಂದ ಅವಕ್ಕೆ ತೊಂದರೆಯಾದಲ್ಲಿ ಯಜಮಾನನಿಗೆ ತಿಳಿಸಬೇಕು. ಕೂಗದೆಯೂ ಗಾಬರಿಪಡಿಸದೆಯೂ ಬಂದು ಹೇಳಬೇಕು. ರಾಜನಲ್ಲಿಯೂ ವಿನಯದಿಂದ ವರ್ತಿಸಬೇಕು.

೨೪–೨೭. ಪಶುಗಳಲ್ಲಿ ತಪ್ಪಿಸಿಕೊಂಡಿದ್ದರೂ, ಹುಳುಹುಪ್ಪಟೆಗಳಿಂದ ನಾಶವಾಗಿದ್ದರೂ, ನಾಯಿನಿಂದ ಕೊಲ್ಲಲ್ಪಟ್ಟಿದ್ದರೂ, ಖಾಯಿಲೆಯಿಂದ ಸತ್ತಿದ್ದರೂ, ಪುರುಷಪ್ರಯತ್ನ ವಿಲ್ಲದುದರಿಂದ ನಾಶಹೊಂದಿದ್ದರೂ ಅಂತಹ ವಿಷಯವನ್ನು ಯಜಮಾನನಿಗೆ ಹೇಳಬೇಕು. ಆಡು ಕುರಿ ಇವುಗಳು ಪಾಲಕನಿಲ್ಲದಿರುವಾಗ ತೋಳದಿಂದ ಆಕ್ರಮಿಸಲ್ಪಟ್ಟಲ್ಲಿ ಯಾವ ಪಶುವನ್ನು ತೋಳವು ಬಲಾತ್ಕಾರದಿಂದ ಕೊಲ್ಲುತ್ತದೆಯೋ ಅದರಹನನದ ಪಾಪವು ಪಾಲಕನಿಗೇ ಸೇರುತ್ತದೆ. ಆದರೆ ಪಾಲಕನಿರುವಾಗಲೇ ದೈವವಶದಿಂದ ಕಾಡಿನಲ್ಲಿಯೇ ಇದ್ದು ಅವು ಸಂಚರಿಸುತ್ತಿರುವಾಗ ಯಾವುದಾದರೊಂದನ್ನು ತೋಳವು ಹಾರಿಕೊಂಡು ತಿಂದದ್ದಾದರೆ ಆಗ ಪಾಲಕನು ಆ ಪಾಪಕ್ಕೆ ಭಾಗಿಯಾಗುವುದಿಲ್ಲ. ಯಜಮಾನನಲ್ಲಿ ದ್ವೇಷದಿಂದ ಕಳ್ಳರು ಪಶುಗಳನ್ನು ಅಪಹರಿಸಿದ್ದೇ ಆದರೆ, ಅದನ್ನು ಕೊಡಲು ಪಾಲಕನು ಬಾಧ್ಯನಲ್ಲ

ಯದಿ ದೇಶೇ ಚ ಕಾಲೇ ಚ ಸ್ವಾಮಿನಸ್ತಸ್ಯ ಶಂಸತಿ ।
ಏತೇನ ಸರ್ವಪಾಲಾನಾಂ ವಿವಾದಃ ಸಮುದಾಹೃತಃ ॥ ೨೮ ॥

ಸಾಂಕಂ ಸಶೃಂಗಂ ಸಖುರಂ ಚ ಚರ್ಮ
ಪ್ರದರ್ಶಯಿತ್ವಾಥ ಪಶೋರ್ಮೃತಸ್ಯ ।
ಪಾಲಸ್ಯ ಶುದ್ಧಿಃ ಕಥಿತಾ ದ್ವಿಜೇಂದ್ರಾ
ಅತೋಽನ್ಯಥಾ ತಸ್ಯ ನ ಶುದ್ಧಿರುಕ್ತಾ ॥ ೨೯ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಹಂಸಗೀತಾಸು ಸ್ವಾಮಿ ಭೃತ್ಯನಿಯಮ ವರ್ಣನೋ ನಾಮ ಚತುಸ್ತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ಆದರೆ ಅಂತಹ ಸನ್ನಿವೇಶವನ್ನು ದೇಶಕಾಲಗಳಿಗೆ ತಕ್ಕಂತೆ ಅವನು ಸ್ವಾಮಿಯಲ್ಲಿ ಸೂಚನೆ ಕೊಟ್ಟಿರಬೇಕು. ಇವರಿಂದ ಎಲ್ಲಾ ರಕ್ಷಕರ ವಿವಾದವನ್ನೂ ಪರಿಹಾರವನ್ನೂ ಹೇಳಿದಂತಾಯಿತು. ಪಶುವು ಮೃತಿಹೊಂದಿದಲ್ಲಿ ಅದರ ಕೊಂಬು ಗೊರಸುಗಳೊಡನೆ ಚರ್ಮವನ್ನು ತಂಮ ಯಜಮಾನನಿಗೆ ತೋರಿಸಿದಲ್ಲಿ ಗೋಪಾಲಕನಾದವನು ಶುದ್ಧಿ ಹೊಂದುತ್ತಾನೆ, ಇಲ್ಲದಿದ್ದಲ್ಲಿ ಅವನಿಗೆ ಶುದ್ಧಿ ಇಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರದ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಸ್ವಾಮಿಭೃತ್ಯ ನಿರ್ಣಯವರ್ಣನವೆಂಬ ಮುನ್ನೂರ ಮೂವತ್ತನಾಲ್ಕನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚತ್ರಿಂಶದಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ದ್ರವ್ಯಮಸ್ವಾಮಿವಿಕ್ರೀತಂ ಪ್ರಾಪ್ಯ ಸ್ವಾಮೀ ತದಾಪ್ನುಯಾತ್ ।
ಪ್ರಕಾಶಕ್ರಯತಃ ಶುದ್ಧಿಃ ಕ್ರೀತೇ ಸ್ತೇಯೋ ರಹಃ ಕ್ರಮಾತ್ ॥ ೧ ॥

ಹೀನಮೂಲ್ಯಂ ಬಲಾತ್ಕ್ರೀತಂ ತತಸ್ತದ್ದೋಷಭಾಗ್ಭವೇತ್ ।
ನ ಗೂಹೇತಾಗಮಂ ಕ್ರೀತಾಚ್ಛುದ್ಧಿಸ್ತಸ್ಯ ತದಾಗಮಾತ್ ॥ ೨ ॥

ಸ್ವಾಮೀ ತು ಪ್ರಾಪ್ನುಯಾದ್ವಿತ್ತಂ ಪ್ರಕಾಶಂ ರಹ ಏವ ವಾ ।
ವಿಕ್ರೀಯಪಣ್ಯಂ ಮೂಲ್ಯೇನ ಯಃ ಕ್ರೀತಂ ನ ನಿಯಚ್ಛತಿ ॥ ೩ ॥

ಮುನ್ನೂರ ಮೂವತ್ತೈದನೆಯ ಅಧ್ಯಾಯ.

೧–೨. ಹಂಸವು ಹೇಳುತ್ತದೆ:—ಮಾಲೀಕನಲ್ಲದವನಿಂದ ವಿಕ್ರಯವಾಗಿರುವ ಪದಾರ್ಥವನ್ನು ಮಾಲೀಕನಾದವನು ಸ್ವಾಧೀನಹೊಂದಲು ಅರ್ಹನಾಗುತ್ತಾನೆ. ವಸ್ತುಗಳಿಗೆ ಹೇಳಲಾಗಿರುವ ಕ್ರಯಶುದ್ಧಿಯೂ ಸಹ ಬಹಿರಂಗವಾಗಿ ಕ್ರಯ ಹೊಂದಿರುವ ಪದಾರ್ಥಗಳಿಗೇ ಅನ್ವಯಿಸುತ್ತದೆ. ಗುಟ್ಟಾಗಿ ಮಾಡಿದ ವಿಕ್ರಯದಿಂದ ವಸ್ತುಗಳಿಗೆ ಕ್ರಯಶುದ್ಧಿ ಇಲ್ಲ. ಅದು ಚೋರತನದಿಂದ ಹೊಂದಿದ್ದೇ ಆಗುತ್ತದೆ. ಕಳ್ಳವ್ಯಾಪಾರದಿಂದ ಬಂದ ವಸ್ತುವನ್ನು ಹೀನ ಬೆಲೆಯಿಂದಾಗಲಿ, ಬಲಾತ್ಕಾರದಿಂದಾಗಲಿ ಕೊಂಡವನು ಚೌರ್ಯದ ಪಾಪಕ್ಕೆ ಭಾಗಿಯಾಗುತ್ತಾನೆ. ಅದು ಬಂದ ಮಾರ್ಗವನ್ನು ಮರೆಮಾಚಿದಲ್ಲಿಯೂ ಕೊಂಡವಸ್ತುವಿನಲ್ಲಿ ಕ್ರಯಶುದ್ಧಿಯುಂಟಾಗುವುದಿಲ್ಲ

೩–೬. ಯಜಮಾನನಾದವನು ಪ್ರಕಾಶದಿಂದಾಗಲಿ ಗುಟ್ಟಾಗಿಯಾಗಲಿ ವಸ್ತುವನ್ನು ಮಾರಿ ಹಣವನ್ನು ಗಳಿಸಿಯೇ ಗಳಿಸುತ್ತಾನೆ. ಏಕೆಂದರೆ ಅವನು ಹಣವನ್ನು

ಸ್ಥಾವರಸ್ಯ ಫಲಂ ದಾಪ್ಯೋ ಜಂಗಮಸ್ಯ ಕ್ರಿಯಾಫಲಂ ।
ಅರ್ಥಂ ಚೇನ್ನ ಪ್ರಹೀಯೇತ ಸೋದಯಂ ಪಣ್ಯಮಾವಹೇತ್ ॥ ೪ ॥

ಸ್ಥಾನಿನಾಮೇಷ ನಿಯಮೋ ದಿಗ್ಲಾಭಶ್ಚ ದಿಶಾಗತೇ ।
ಉಪಹನ್ಯೇತ ವಾ ಪಣ್ಯಂ ದಹ್ಯೇತಾಪಹ್ರಿಯೇತ ವಾ ॥ ೫ ॥

ವಿಕ್ರೇತುರೇವ ಸೋऽನರ್ಥೋ ವಿಕ್ರೇತಾ ಸಂಪ್ರಯಚ್ಛತಿ ।
ದೀಯಮಾನಂ ನ ಗೃಹ್ಣಾತಿ ಕ್ರೀತಂ ಪಣ್ಯಂ ತು ಯಃ ಕ್ರಯೀ ॥ ೬ ॥

ವಿಕ್ರೀಣಾನಃ ತದನ್ಯತ್ರ ವಿಕ್ರೇತಾ ನಾಪರಾಧ್ನುಯಾತ್ ।
ನಿರ್ದೋಷಂ ದರ್ಶಯಿತ್ವಾ ತು ಸದೋಷಂ ಯಃ ಪ್ರಯಚ್ಛತಿ ॥ ೭ ॥

ಕೊಟ್ಟು ತಂದ ವಸ್ತುಗಳನ್ನು ಮಾರುವಾಗ ಗುಟ್ಟಾಗಿಟ್ಟುಕೊಳ್ಳಬೇಕೆಂಬ ಯಾವ ನಿಯಮವನ್ನೂ ಮಾಡುವುದಿಲ್ಲ. ಸ್ಥಿರಸ್ವತ್ತುಗಳಿಗೆ ಕೊಡಬೇಕಾದ ಪ್ರತಿಫಲವು ಫಲವೇ ಆಗಿರುತ್ತದೆ. ಚರವಾದ ಎತ್ತು ಮುಂತಾದುವುಗಳಿಗೆ ಅವುಗಳ ಕೆಲಸವೇ ಪ್ರತಿಫಲ. ಸ್ಥಿರಸ್ವತ್ತುಗಳ ಪ್ರತಿಫಲವು (ಧಾನ್ಯಾದಿಗಳು) ಬೆಳೆದ ವಸ್ತುಗಳಲ್ಲಿ ಅರ್ಥಕ್ಕೆ ಕಡಿಮೆ ಇಲ್ಲದೆ ಯಜಮಾನನಿಗೆ ಸೇರತಕ್ಕದ್ದು ಒಂದೇಸ್ಥಲದಲ್ಲಿ (ತಾವು ವಾಸಿಸುವಸ್ಥಳದಲ್ಲಿ) ಇರುವ ಸ್ಥಿರಸ್ವತ್ತಿನ ಸ್ವಾಮಿಭೃತ್ಯರಿಗೆ ಈ ನಿಯಮ ಬೇರೆಕಡೆಯಿಂದ ತನಗೆ ಬರಬಹುದಾದ ಧನಾದಿಗಳಲ್ಲಿ ಆ ಸ್ಥಳದ ಆದಾಯಕ್ಕೆ ತಕ್ಕಂತೆ ಪ್ರತಿಫಲ ಹೊಂದಬೇಕು ಮಾರತಕ್ಕವಸ್ತುವು ಮಾರ್ಗದಲ್ಲಿ ಕೆಟ್ಟುಹೋಗಿದ್ದರೂ, ಸುಟ್ಟುಹೋದರೂ, ಅಪಹೃತವಾದರೂ, ಆದರಿಂದ ಉಂಟಾಗುವ ನಷ್ಟವು ಕೊಳ್ಳುವವನಿಗೆ ಸೇರಿದ್ದು. ಮಾರುವವನು ಅದನ್ನು ಸರಿಯಾಗಿ ಕೊಟ್ಟಿರುವನಷ್ಟೆ, ಕೊಳ್ಳತಕ್ಕವನು ಕೊಂಡ ವಸ್ತುವನ್ನು ತಾನೇ ತೆಗೆದುಕೊಂಡು ಹೋಗದೇ ಇದ್ದಲ್ಲಿ ಅದನ್ನು ಮಾರುವವನು ಮತ್ತೊಂದುಕಡೆ ವಿಕ್ರಯಮಾಡಿದಲ್ಲಿ ಅದರಿಂದ ಮಾರುವವನಿಗೆ ಅಪರಾಧವಿಲ್ಲ. ಯಾವನು ಒಳ್ಳೆಯ ಪದಾರ್ಥವನ್ನು ಮೊದಲು ತೋರಿಸಿ ಅನಂತರ ಕೆಟ್ಟವಸ್ತುಗಳನ್ನು ವಿಕ್ರಯಿಸುತ್ತಾನೆಯೋ, ಅಂತಹ ವ್ಯಾಪಾರಿಯಿಂದ ದ್ವಿಗುಣ ಮೂಲ್ಯವನ್ನು ಕೊಂಡವನಿಗೆ ಕೊಡಿಸಬೇಕು, ಶಿಕ್ಷೆಯನ್ನೂ ವಿಧಿಸಿಬೇಕು ಇದೆಲ್ಲವೂ ಹಣವನ್ನು ಮೊದಲೇ ಕೊಟ್ಟುಕೊಂಡಿರುವ ವ್ಯವಹಾರಕ್ಕೆ ಸೇರಿದ ನಿಯಮ.

ಮೂಲ್ಯಂ ತದ್ದ್ವಿಗುಣಂ ದಾಪ್ಯ ವಿನೇಯಶ್ಚ ತಥಾ ಭವೇತ್ ।
ದತ್ತಮೂಲ್ಯಸ್ಯ ಪಣ್ಯಸ್ಯ ವಿಧಿರೇಷ ಪ್ರಕೀರ್ತಿತಃ ॥ ೮ ॥

ಅದತ್ತೇಽನ್ಯತ್ರ ಸಮಯಾನ್ನ ವಿಕ್ರೇತುರತಿಕ್ರಮಃ ।
ಕ್ರೀತ್ವಾ ಮೂಲ್ಯೇನ ಯತ್ಪಣ್ಯಂ ದುಷ್ಕ್ರೀತಂ ಮನ್ಯತೇ ಕ್ರಯೀ ॥ ೯ ॥

ವಿಕ್ರೇತಂ ಪ್ರತಿದೇಯಂ ತು ಯಥಾವಿಪ್ರಾಸ್ತಥಾ ಶೃಣು ।
ವ್ಯಹಾದೇವ ಭವೇದ್ದೇಯಂ ಪಂಚಾಹಾದ್ಬಾಹ್ಯಮೇವ ತು ॥ ೧೦ ॥

ಸಪ್ತಾಹೇನ ತಥಾ ರತ್ನಂ ಲೋಹಸ್ತಸ್ಮಿಂಸ್ತಥಾಹನಿ ।
ದ್ವಿಪದಂ ಚಾರ್ಧಮಾಸೇನ ಬೀಜಾನಿ ದಶಭಿರ್ದಿನೈಃ ।
ತೃತೀಯೇಽಹನಿ ವಸ್ತ್ರಂ ಚ ಶರಂ ಚೈವಾಪರೇಽಹನಿ ॥ ೧೧ ॥

ಪರಿಭುಕ್ತಂ ತು ಯದ್ವಾಸಃ ಕ್ಲಿಷ್ಟರೂಪಂ ಮಹೀಪತೇ ।
ಸದೋಷಮಪಿ ತತ್ಕ್ರೀತಂ ವಿಕ್ರೇತುರ್ನ ಭವೇತ್ ಪುನಃ ॥ ೧೨ ॥

೮–೧೨. ಹಣವನ್ನು ಮುಂಗಡವಾಗಿ ಕೊಡದಿರುವ ಸಂದರ್ಭದಲ್ಲಿ ಕೊಳ್ಳು ವವನು ಮತ್ತೊಂದು ಕಡೆಗೆ ಹೋಗಬಹುದಾದ್ದರಿಂದ ಆ ವಿಷಯದಲ್ಲಿ ವ್ಯಾಪಾರಿಯ ಅತಿಕ್ರಮವೇನೂ ಇಲ್ಲ ಹಣವನ್ನು ಕೊಟ್ಟು ಕ್ರಯಕ್ಕೆ ಕೊಂಡಮೇಲೆ ಆ ವ್ಯಾಪಾರವು ಸರಿಯಾದುದಲ್ಲವೆಂದು ಕೊಂಡವನು ಭಾವಿಸುವುದಾದರೆ, ಕೊಂಡ ವಸ್ತುವನ್ನು ವಾಪಸು ಕೊಡಬೇಕು ಅದರ ವಿಧಾನಕ್ರಮವನ್ನೂ ಹೇಳುತ್ತೇನೆ ಕೇಳಿರಿ. ಗೃಹೋಪಯುಕ್ತವಾದ ಧಾನ್ಯಾದಿಗಳನ್ನು ಎರಡು ದಿನದೊಳಗೆ ವಾಪಸುಕೊಡಬೇಕು. ಇತರ ವಸ್ತುಗಳನ್ನು ಐದು ದಿನಕ್ಕೂ ಮೇಲೆ ಕೊಡಬಹುದು. ರತ್ನಗಳನ್ನು ಏಳು ದಿನಗಳೊಳಗೂ, ಲೋಹಗಳನ್ನು ಅದೇ ದಿನದಲ್ಲಿಯೂ, ಎರಡು ಕಾಲುಳ್ಳ ಪ್ರಾಣಿಗಳನ್ನ ಹದಿನೈದು ದಿನಗಳೊಳಗೂ, ಬೀಜದ ಕಾಳುಗಳನ್ನು ಹತ್ತು ದಿನಗಳೊಳಗೂ, ಬಟ್ಟೆಯನ್ನು ಮೂರು ದಿನಗಳೊಳಗೂ, ಬಾಣವನ್ನು ಮಾರನೆಯ ದಿನದಲ್ಲಿಯೂ, ಹಿಂದಕ್ಕೆ ಕೊಡಬೇಕು. ಬಟ್ಟೆಬರೆಗಳನ್ನು ಕೊಂಡವನು ಉಪಯೋಗಿಸಿ ಮಾಸಿದನಂತರ ಅದು ಕೆಟ್ಟುದಾಗಿದ್ದರೂ ಅದನ್ನು ವ್ಯಾಪಾರಿಗೆ ಹಿಂದೆ ಕೊಡಲು ಸಾಧ್ಯವಿಲ್ಲ. ವಿಕ್ರಯಮಾಡುವ ವರ್ತಕನು ವಂಚನೆಮಾಡದಿದ್ದಲ್ಲಿ

ದ್ರವ್ಯಂ ತು ವಿಕ್ರೀತಮಪಿ ಸ್ವಕಂ ಹಿ
ವಿನಾಯಕೋ ವಾ ತದವಾಪ್ನುಯಾತ್ಸ್ವೈ ||
ಕ್ರೇತಾ ಸ ಕುರ್ಯಾದ್ಯದಿ ವಂಚನಂ ವಾ
ವಿಕ್ರೇತುರೇವೇಹ ಪುನಸ್ತದಿಷ್ಟಂ || ೧೩ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಕ್ರಯವಿಕ್ರಯ
ನಿರ್ಣಯೋ ನಾಮ
ಪಂಚತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ಕೊಂಡವನಿಗೆ ಆ ವಸ್ತುವು ಇಷ್ಟವೇ ಆಗುತ್ತದೆ. ಆದ್ದರಿಂದ ಕ್ರಯಕ್ಕೆ ಕೊಟ್ಟ ವಸ್ತುವನ್ನೂ ಸಹ ಕೊಳ್ಳುವವನಿಗೆ ಇಷ್ಟವಿಲ್ಲದಿದ್ದಲ್ಲಿ ಕೊಟ್ಟವನು ವಾಪಸು ತೆಗೆದು ಕೊಳ್ಳಲೇಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಕ್ರಯವಿಕ್ರಯನಿರ್ಣಯವೆಂಬ ಮುನ್ನೂರ ಮೂವತ್ತೈದನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಷಟ್‌ತ್ರಿಂಶದಧಿಕತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಪಾಷಂಡನೈಗಮಶ್ರೇಣೀ ಪೂರ್ವಾವ್ರತಗಣಾದಿಷು ।
ಸಂರಕ್ಷೇತ್ಸಮಯೋ ರಾಜಾ ದುರ್ಗೇ ಜನಪದೇ ತಥಾ || ೧ ||

ಯೋ ಧರ್ಮಃ ಕಾರಯಚ್ಚೈಷಾಂ ಚೋಪಸ್ಥಾನವಿಧಿಶ್ಚಯಃ ।
ಯಶ್ಚೈಷಾಂ ವೃತ್ತ್ಯುಪಾದಾನಂ ಚಾನುಮನ್ಯೇತ ತತ್ತಥಾ || ೨ ||

ಪ್ರತಿಕೂಲಂ ತು ಯದ್ರಾಜ್ಞಃ ಪ್ರಕೃತ್ಯವಸಿತಂ ಚ ಯತ್ ।
ಬಾಧಕಂ ಚ ಯದರ್ಥಾನಾಂ ತತ್ತೇಭ್ಯೋ ವಿನಿವರ್ತಯೇತ್ || ೩ ||

ಮುನ್ನೂರ ಮೂವತ್ತಾರನೆಯ ಅಧ್ಯಾಯ.

೧-೩ ಹಂಸವು ಹೇಳುತ್ತದೆ :— ಪಾಷಂಡರೆಂಬ ಹೀನಧರ್ಮದವರೂ, ಅನಾಗರಿಕ ಜನಗಳ ಗುಂಪಿನವರೂ ನಡೆಸಬಹುದಾದ ವ್ರತ, ಸಮಾರಂಭ ಇತ್ಯಾದಿ ವಿಷಯದಲ್ಲಿ ರಾಜನಾದವನು ದುರ್ಗಸ್ಥಾನದಲ್ಲಿದ್ದರೂ, ದೇಶದಲ್ಲಿಯೇ ಇದ್ದರೂ ಸಹ ಆಯಾಯ ಕಾಲದಲ್ಲಿ ರಕ್ಷಣೆ ಕೊಡಬೇಕು ಇವರ ಯಾವ ಯಾವ ಧರ್ಮಗಳುಂಟೋ, ಗ್ರಾಮದೇವತೆಯ ಪೂಜಾದಿಗಳುಂಟೋ ಅವನ್ನೂ ಇವರ ಜೀವನ ಕ್ರಮವನ್ನೂ ರಾಜನಾದವನು ಒಪ್ಪಿಕೊಳ್ಳಬೇಕು. ಆದರೆ ಇವರಿಂದುಂಟಾಗಬಹುದಾದ ರಾಜಪ್ರಾತಿಕೂಲ್ಯ, ಜನಗಳಿಗೆ ಉಂಟಾಗುವ ತೊಂದರೆ, ಆರ್ಥಿಕವಾದ ಕೆಡಕು, ಇವುಗಳನ್ನು ತಡೆಗಟ್ಟಲೇಬೇಕು.

ಮಿಥಃ ಸಂಘಾತಕರಣಂ ತ್ವಿಹ ತೇ ಶಸ್ತ್ರಧಾರಣಂ ।
ಪರಸ್ಪರೋಪಘಾತಂ ಚ ತೇಷಾಂ ರಾಜಾ ನಮರ್ಷಯೇತ್ ॥ ೪ ॥

ಪೃಥಗ್ಗಣಾಂಶ್ಚ ಯೋ ಭಿಂದ್ಯಾತ್ತೇ ವಿನೇಯಾ ವಿಶೇಷತಃ ।
ಆವಹೇಯುರ್ಭಯಂ ಘೋರಂ ವ್ಯಾಧಿಂ ವಾ ತೇ ಹ್ಯುಪೇಕ್ಷಿತಾಃ ॥ ೫ ॥

ದೋಷವತ್ಕರಣಂ ಯತ್ಸ್ಯಾದನಾಮ್ನಾಯಂ ಪ್ರಕಲ್ಪಿತಂ ।
ಪ್ರವೃತ್ತಮಪಿ ತದ್ರಾಜಾ ಶ್ರೇಯಃಕಾಮೋ ನಿವರ್ತಯೇತ್ ॥ ೬ ॥

ಗಣಮುದ್ದಿಶ್ಯ ಯತ್ಕಿಂಚಿನ್ಮಧ್ಯಶ್ಚೈವ ಸಮುದ್ಧರೇತ್ ।
ಆತ್ಮಾರ್ಥೇ ವಾ ನಿಯುಕ್ತಂ ವಾ ದೇಯಂ ತೈರೇವ ತದ್ಭವೇತ್ ॥ ೭ ॥

೪-೮. ಮತ್ತು ಪರಸ್ಪರ ಗುಂಪು ಕಟ್ಟುವುದು. ಶಸ್ತ್ರಗಳನ್ನು ಧರಿಸುವುದು. ಒಂದು ಗುಂಪಿನವರಿಗೆ ಇನ್ನೊಂದು ಗುಂಪಿನವರಿಂದ ಆಗಬಹುದಾದ ಉಪಘಾತಗಳು ಇವನ್ನು ಮಾತ್ರ ರಾಜನಾದವನು ಸಹಿಸಲೇ ಕೂಡದು ಗುಂಪುಗಳನ್ನು ಯಾರು ಸ್ವಕಾರ್ಯಕ್ಕಾಗಿ ಬೇರೆ ಬೇರೆ ಒಡೆಯುತ್ತಾರೆಯೋ ಅಂತಹವರು ವಿಶೇಷ ಶಿಕ್ಷೆಗೆ ಅರ್ಹರು. ಇವರನ್ನು ಉಪೇಕ್ಷಿಸಿದಲ್ಲಿ ಇವರು ದೇಶಕ್ಕೆ ದೊಡ್ಡ ಭಯವನ್ನೂ, ವ್ಯಾಧಿಯನ್ನೂ ಉಂಟುಮಾಡಿಯಾರು. ಇವರು ಮಾಡುವ ಕೆಲಸಗಳಲ್ಲಿ ದೋಷ ದೂಷಿತವಾಗಿಯೂ, ಶಾಸನಕ್ಕೆ ವಿರುದ್ಧವಾಗಿಯೂ ಇರುವ ಕೆಲಸವು ತಕ್ಕಮಟ್ಟಿಗೆ ನಡೆದಿದ್ದರೂ ಶ್ರೇಯಸ್ಕಾಮನಾದ ರಾಜನು ಅದನ್ನು ತಡೆದು ಅಷ್ಟಕ್ಕೇ ನಿವೃತ್ತಿ ಗೊಳಿಸಬೇಕು. ಒಂದು ಸಮೂಹವನ್ನು ರಚಿಸಲು ಉದ್ದೇಶಿಸಿ ಅವರ ಪ್ರಯತ್ನವು ನಡೆದಿದ್ದಲ್ಲಿ ತಾನೂ ಮಧ್ಯಸ್ಥನಾಗಿದ್ದುಕೊಂಡೇ ಆ ಪ್ರಯತ್ನವನ್ನು ತೊಡೆದು ಹಾಕಬೇಕು ಸ್ವಾರ್ಥಕ್ಕಾಗಿ ಅಂತಹ ಕಾರ್ಯದಲ್ಲಿ ಹೊರಟದ್ದಲ್ಲಿ ಶಾಸನಾತಿ ಕ್ರಮಕ್ಕಾಗಿ ಅವರಿಂದಲೇ ದಂಡವನ್ನು ಪಡೆಯಬೇಕು. ಗುಂಪಿನ ಬಲದಿಂದ ಸಾಮೂಹಿಕವಾಗಿ ಜನಗಳು ಯಾವ ಕೆಲಸಮಾಡುತ್ತಾರೆಯೋ, ಧೊರೆಯ ಕೃತ್ಯ

ಯಸ್ಯಾಪ್ಯಪೃಥಗ್ಭೂತಕೃತಂ ದ್ವಿಜೇಂದ್ರಾಃ
ಕ್ಷಿತೀಶಕೃತ್ಯೇನ ಕೃತಂ ಚ ಯದ್ವಾ ।
ಭೃತ್ಯೇ ಕೃತಂ ಜ್ಞೇಯಮೃಣಂ ಭವೇದ್ಧಿ
ಸಭೋಕ್ತಿಭಿಸ್ತತ್ವವಿದೋ ವದಂತಿ ॥ ೮ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಶ್ರೇಣಿವಿಭಾಗ
ವರ್ಣನೋ ನಾಮ
ಷಟ್‌ತ್ರಿಂಶದಧಿಕ ತ್ರಿಶತತಮೋಽಧ್ಯಾಯಃ

ದಿಂದಲೇ ಅದು ನಡೆದದ್ದಾದರೂ ಅದು ಭೃತ್ಯರ ವಿಷಯದಲ್ಲಿ ಉಂಟುಮಾಡಿದ ದೊಡ್ಡ ಹೊರೆಯೇ ಆಗುತ್ತದೆ. ಎಂದು ತತ್ವಜ್ಞರು ಹೇಳುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ
ಶ್ರೇಣಿವಿಭಾಗವರ್ಣನವೆಂಬ ಮುನ್ನೂರ ಮೂವತ್ತಾರನೆಯ
ಅಧ್ಯಾಯವು ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತತ್ರಿಂಶದಧಿಕತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಸೀಮಾವಿವಾದೇ ಸಂಪ್ರಾಪ್ತೇ ಸಾಮಂತಾಃ ಸ್ಥವಿರಾ ಗಣಾಃ ।
ಗೋಪಾ ಸೀಮಾಕೃಷಾಣಾಯೇ ಯದ್ಬ್ರೂಯುಸ್ತತ್ತಥಾ ಭವೇತ್ ॥ ೧ ॥

ರಕ್ತಸ್ರಗ್ವಸನಾಃ ಸರ್ವೇ ಶಿರಸಾ ಕ್ಷಿತಿಧಾರಿಣಃ ।
ಸೀಮಾಂ ನಯೇಯುಸ್ತೇ ಜ್ಯೇಷ್ಠೇ ಪ್ರಕಾಶೇಷು ಸಮೇಷು ಚ ॥ ೨ ॥

ಸೀಮಾವೃಕ್ಷಾಂಶ್ಚ ಕುರ್ವೀತ ಶಾಲ್ಮಲಾಶ್ವತ್ಥಕಿಂಶುಕಾನ್ ।
ತುಷಾಂಗಾರಕಪಾಲಾಸ್ಥಿ ಶರ್ಕರಾಣಿ ಚ ಯಾನಿ ಚ ॥ ೩ ॥

ಮುನ್ನೂರ ಮೂವತ್ತೇಳನೆಯ ಅಧ್ಯಾಯ.

೧–೫. ಹಂಸವು ಹೇಳುತ್ತವೆ:—ಭೂಮಿಯ ಎಲ್ಲೆಗಟ್ಟಿನ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮಂತ್ರಿಗಳು, ವೃದ್ಧರಾದ ಗ್ರಾಮಸ್ಥರು, ಗೋಪಾಲಕರು, ಎಲ್ಲೆಯಲ್ಲಿ ಉಳುವರು ಇವರು ಏನು ಹೇಳುತ್ತಾರೆಯೋ ಅದೇ ಪ್ರಮಾಣ. ಎಲ್ಲೆಗಟ್ಟಿನ ನಿರ್ಣಯಕ್ಕಾಗಿ ಪ್ರಯುಕ್ತಿಸಿರುವ ಜಮೀನುದಾರರು ಕೆಂಪಾದ ಹೂವು ಮತ್ತು ವಸ್ತ್ರವನ್ನು ತಲೆಯಲ್ಲಿ ಧರಿಸಿ ಜ್ಯೇಷ್ಠಮಾಸದಲ್ಲಿ ಸ್ಪಷ್ಟವಾಗಿಯೂ, ಸಮವಾಗಿಯೂ ಇರುವ ದಾರಿಯಿಂದ ಭೂಮಿಯ ಸಮೀಪಕ್ಕೆ ಮೇಲೆ ಹೇಳಿರುವ ವ್ಯವಸ್ಥಾಪಕರನ್ನು ಕರೆದುಕೊಂಡು ಹೋಗಬೇಕು. ಎಲ್ಲೆಗಳಲ್ಲಿ ಬೂರಗ, ಅರಳಿ, ಮುತ್ತಗ ಇತ್ಯಾದಿ ಮರಗಳಿಂದ ಗುರುತುಮಾಡಬೇಕು. ಹೊಟ್ಟಿನ ಬೂದಿ, ಕಪಾಲ, ಕಲ್ಲು ಇತ್ಯಾದಿಗಳಿಂದಲೂ ಎಲ್ಲೆಗಳನ್ನು ರಚಿಸಬೇಕು. ಎರಡು ಜಮೀನಿನ ಮಧ್ಯದಲ್ಲಿ

ಸೀಮಮಧ್ಯೇ ತು ಜಾತಾನಾಂ ವೃಕ್ಷಾಣಾಂ ಕ್ಷೇತ್ರಯೋರ್ದ್ವಯೋಃ ।
ಫಲಂ ಪುಷ್ಪಂ ಚ ಸಾಮಾನ್ಯಂ ಕ್ಷೇತ್ರಸ್ವಾಮಿಷು ನಿರ್ದಿಶೇತ್ || ೪ ||

ಅನ್ಯಕ್ಷೇತ್ರೇಷು ಜಾತಾನಾಂ ಶಾಖಾ ಯಾನ್ಯತ್ರ ಸಂಸ್ಥಿತಾ ।
ಸ್ವಾಮಿನಂ ತಂ ವಿಜಾನಿ ಯಾದ್ಯಸ್ಯ ಕ್ಷೇತ್ರಮುಪಸ್ಥಿತಾ || ೫ ||

ಗಂಧರೂಪರಸಾಭ್ಯಾಂತು ಪ್ರಸೃತಾ ಪ್ರೌಢಗಾಢತಾ ।
[1]ಪ್ರಾಕಾರಕ್ಷಪ್ರವಾಹಸ್ಥಾ ಚಿರಸ್ಥಾತಿ ವಿಶುದ್ಧಯೇ || ೬ ||

ಸಂಚಾರಾಪಹೃತಾ ಭೂಮಿರ್ನದೀವೇಗೇನ ಚಿಹ್ನಿತಾ ।
ಸಭುಕ್ತಾ ಸ್ವಾಮಿನೇ ದೇಯಾ ಪೂರ್ವಭುಕ್ತಿರ್ವ್ಯವಸ್ಥಿತಾ || ೭ ||

ಗೃಹೀತ್ವಾತು ಕರ್ಷಕೋ ಭೂಮಿಂ ಯದಿ ಕಶ್ಚನ ವಾಪಯೇತ್ ।
ಫಲಂ ಕ್ಷೇತ್ರಸ್ಯ ದಾಪ್ಯೋಸೌ ಕ್ಷೇತ್ರಂ ಚಾನ್ಯೇನ ಕಾರಯೇತ್ || ೮ ||

ಎಲ್ಲೆ ಇರುವುದಾದರೆ ಅಲ್ಲಿ ಬೆಳೆದ ಮರಗಳೂ, ಫಲಪುಷ್ಪಾದಿಗಳೂ ಇಬ್ಬರಿಗೂ ಸೇರುತ್ತದೆಂದು ತಿಳಿಸಬೇಕು. ಮತ್ತೊಬ್ಬನ ಭೂಮಿಯೊಳಗೇ ಮರಗಳು ಬೆಳೆದಿದ್ದು ಆ ಮರಗಳ ಕೊಂಬೆಗಳು ಪಕ್ಕದಲ್ಲಿರುವ ಇನ್ನೊಬ್ಬನ ಭೂಮಿಯೊಳಗೆ ಪ್ರವೇಶ ಹೊಂದಿದ್ದಲ್ಲಿ ಯಾವನ ಭೂಮಿಯೊಳಗೆ ಎಷ್ಟು ಕೊಂಬೆಗಳು ಬಂದಿವೆಯೋ ಆ ಭೂಮಿಯವನೇ ಅದರ ಫಲಪುಷ್ಪಾದಿಗಳಿಗೆ ಬಾಧ್ಯನಾಗುತ್ತಾನೆ.

೬–೧೦. ಯಾವ ಭೂಮಿಯಲ್ಲಿ ದಟ್ಟವಾದ ಮರಗಳು ಬೆಳೆದು ಅವು ರೂಪಗಂಧ ರಸಾದಿಗಳಿಂದ ಪೂರ್ಣವಾಗಿದ್ದು, ಪ್ರಾಕಾರ ಸಮೀಪದಲ್ಲಿಯೋ, ಪ್ರವಾಹ ಸಮೀಪದಲ್ಲಿಯೋ ಇದ್ದು, ದಾರಿಯೂ ಅಳಿಸಿಹೋಗಿ ನದಿಯ ವೇಗದಿಂದಲೂ ಗುರುತು ಮಾಡಲ್ಪಟ್ಟಿರುವುದೋ ಅಂತಹ ದಟ್ಟವಾದ ಮರಗಳುಳ್ಳ ಭೂಭಾಗವು ಪೂರ್ವಾನುಭವಕ್ಕೆ ತಕ್ಕಂತೆ ಅದರ ಯಜಮಾನನಿಗೆ ಸೇರುತ್ತದೆ. ಭೂಮಿಯನ್ನು ತಾನಾಗಿ ವ್ಯವಸಾಯ ಮಾಡಲು ತೆಗೆದುಕೊಂಡು ಅವನು ತಾನು ಮಾಡದೆ ಮತ್ತೊಬ್ಬನಿಗೆ ಕೊಟ್ಟು ಬಿತ್ತನೆಮಾಡಿಸಿದಲ್ಲಿ ಕ್ಷೇತ್ರದ ಫಲವನ್ನು ಮೊದಲಿನವನಿಂದ ವಸೂಲ್ಮಾಡಿಕೊಂಡು ಅನಂತರ ವ್ಯವಸಾಯಮಾಡುತ್ತಿರುವ ಮತ್ತೊಬ್ಬನಿಗೇ ಅದನ್ನು ಕೊಡಬೇಕು. ಮನೆಯನ್ನು ಕಟ್ಟುವಾಗ ಮಲಮೂತ್ರಾದಿಗಳಿಗೂ, ಅಡಿಗೆಮನೆ ಸೀಮಮನೆಗಳಿಗೂ ಆಗುವ ಸ್ಥಳವನ್ನು ತನ್ನ ಎಲ್ಲೆಕಟ್ಟಿನಲ್ಲಿಯೇ

1 ಇದು ಅಶುದ್ಧ ಪಾಠ.

ವಿಣ್ಮೂತ್ರೋದಕವಾಕ್ರಮ್ಯ ವಹ್ನಿಂ ಚಿತ್ರೇ ನಿವೇಶಯೇತ್ ।
ಅ............ಸಮುತ್ಸೃಜ್ಯ ಪರಕುಡ್ಯೇ ನಿವೇಶಯೇತ್ ॥ ೯ ॥

ಧ್ರುಮದ್ವಾರಗವಾಕ್ಷಾಢ್ಯಂ ಪರಪೀಡಾಕರಂ ತು ಯತ್ ।
ನಿವೇಶಸಮಯಾದೂರ್ಧ್ವಂ ನ ತತ್ಕಾರ್ಯಂ ಕದಾಚನ ॥ ೧೦ ॥

ಪರಸ್ಥಾನೇ ತು ನಿರ್ವಾಸಂ ಗೃಹಾದ್ಯಂ ಯದಿಕಾರಯೇತ್ ।
ತದ್ವ್ಯಯಂ ಪ್ರಾಪ್ನುಯಾತ್ಕಾಲೇ ಸ್ವಾಮಿನಾ ಚೇನ್ನಿವಾರಿತಃ ॥ ೧೧ ॥

ಅಜಾತೇಷು ತು ಸಸ್ಯೇಷು ಕಾರ್ಯಾ ಖಲು ಧೃತಿರ್ಭವೇತ್ ।
ಮಾಸಂ ದದ್ಯಾತ್ತು ಮಹಿಷೀ ತದಾವಾಂಗಸ್ತಥಾ ಭವೇತ್ ॥ ೧೨ ॥

ಅಜಾವಿಕಂ ತದರ್ಧಂತು ಖರೋಷ್ಟ್ರಂ ಮಹಿಷೀಸಮಂ ।
ಅಶ್ವಂ ಚ ವಿಪ್ರಪ್ರವರಾಃ ಸಸ್ಯನಾಶಂ ಪ್ರದಾಪಯೇತ್ ॥ ೧೩ ॥

ಇರುವಂತೆ ಚಿತ್ರ (ಪ್ಲಾನು) ದಲ್ಲಿ ತೋರಿಸಬೇಕು ಮತ್ತೊಬ್ಬರ ಗೋಡೆಗೆ ಸೇರಿದಂತೆ ಇವನ್ನು ಇಡಬಾರದು. ಮತ್ತೊಬ್ಬರಿಗೆ ತೊಂದರೆಯಾಗುವಂತೆ ತಿರುಗಾಡುವ ಬಾಗಿಲುಗಳನ್ನಾಗಲಿ, ಕಿಟಕಿಗಳನ್ನಾಗಲಿ ಚಿತ್ರದಲ್ಲಿ (ಪ್ಲಾನಿನಲ್ಲಿ) ತೋರಿಸಿರುವುದಕ್ಕೆ ವ್ಯತಿರಿಕ್ತವಾಗಿ ಅನಂತರವೂ ಇಡಬಾರದು.

೧೧-೧೫. ಮತ್ತೊಬ್ಬನ ನಿವೇಶನದಲ್ಲಿ ವಾಸಕ್ಕಾಗಿ ಮನೆಯನ್ನು ಮಾಡಿ ಕೊಂಡಿರುವುದಾದರೆ, ಆ ನಿವೇಶನದ ಯಜಮಾನನೇ ಇವನನ್ನು ಹೊರಡಿಸಿದಲ್ಲಿ ಆ ಮನೆಗೆ ಆದ ಖರ್ಚನ್ನು ಯಜಮಾನನೇ ಕೊಡಬೇಕು ಭೂಮಿಗಳಲ್ಲಿ ಇನ್ನೂ ಫಲಕ್ಕೆ ಬರದಿರುವ ಸಸ್ಯಗಳಿಗೆ ದನಕರುಗಳಿಂದ ತೊಂದರೆಬರದಂತೆ ರಕ್ಷಣೆಕೊಡ ಬೇಕು. ಎಮ್ಮೆಯು ಸಸ್ಯಗಳನ್ನು ಭಕ್ಷಿಸಿದಲ್ಲಿ ಆಭೂಮಿಯ ಒಂದು ತಿಂಗಳವರಮಾನ ವನ್ನು ದಂಡವಾಗಿ ತೆಗೆದುಕೊಳ್ಳಬೇಕು. ಆಡುಕುರಿಗಳಿಗೆ ಅದರಲ್ಲಿ ಅರ್ಧ, ಕತ್ತೆ ಮತ್ತು ಒಂಟೆಗಳಿಗೆ ಎಮ್ಮೆಯಂತೆಯೇ, ಕುದುರೆಯು ಭಕ್ಷಸಿ ಸಸ್ಯನಾಶ ಉಂಟಾ ದಲ್ಲಿ ನಷ್ಟವಾದ ಸಸ್ಯದ ಬೆಲೆಯನ್ನು ತೆಗೆದುಕೊಳ್ಳಬೇಕು. ಇವು ಬಂದು ಚೆನ್ನಾಗಿ ಮೇದು ಹೊಲಗಳಲ್ಲಿಯೇ ಮಲಗಿದ್ದಾದರೆ ಇದರ ಎರಡರಷ್ಟು ಹಣವನ್ನು ಅವನ್ನು ಕಾಯುವವನು ಕೊಡಬೇಕು. ಇಲ್ಲದಿದ್ದರೆ ಅವುಗಳ ಯಜಮಾನನೇ ಕೊಡಬೇಕು.

ಭಕ್ಷಯಿತ್ವೋಪವಿಷ್ಟೇಷು ದ್ವಿಗುಣಂ ಪ್ರೋಚ್ಯತೇ ದಮಃ ।
ಪಾಲಶ್ಚ ದಂಡಂ ದಾಪ್ಯಃ ಸ್ಯಾತ್ತದಭಾವೇ ಪತಿಸ್ತಥಾ ।
ಸೂತಿಕೋತ್ಸೃಷ್ಟಪಶವಃಸ್ತ್ವದಂಡ್ಯಾ ಗರ್ಭಿಣೀ ಚ ಸಾ　　॥ ೧೪ ॥

ಪಥಸ್ತಥಾ ಗ್ರಾಮವನೀತಟಾಂತೇ
ನ ದೋಷಮಲ್ಪೇ ಪ್ರವದಂತಿಕಾಲೇ ।
ಯಃ ಕಾಮಕಾರೇಣ ಕರೋತಿ ರಾಜ್ಞಾ
ವಿವಾಸನೀಯಃ ಸ ಭವೇದ್ದ್ವಿಜೇಂದ್ರಾಃ　　॥ ೧೫ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಸಸ್ಯಹಾನಿದಂಡ
ವರ್ಣನೋ ನಾಮ ಸಪ್ತತ್ರಿಂಶದಧಿಕ
ತ್ರಿಶತತಮೋಽಧ್ಯಾಯಃ

ಕರುವನ್ನು ಹಾಕಿ ಹತ್ತುದಿನವಾಗದಿರುವ ಹಸುಗಳಿಗೂ ಗರ್ಭಿಣೀ ಹಸುಗಳಿಗೂ ಈ ವಿಧವಾದ ದಂಡವಿಲ್ಲ, ದನಕರುಗಳು ಮಾರ್ಗದಲ್ಲಾಗಲೀ, ಗ್ರಾಮಗಳ ಸಮೀಭಾಗದಲ್ಲಾಗಲಿ ಸ್ವಲ್ಪಕಾಲ ಆಕಸ್ಮಿಕವಾಗಿ ಮೇಯುತ್ತಿದ್ದಲ್ಲಿ ದೋಷವಿಲ್ಲ. ಯಾವನು ಬುದ್ಧಿ ಪೂರ್ವಕವಾಗಿಯೇ ಅಲ್ಲಿ ಮೇಯಿಸುತ್ತಾನೆಯೋ ಅವನನ್ನು ರಾಜನು ದೇಶದಿಂದ ಹೊರಕ್ಕೆ ಕಳುಹಿಸಬೇಕು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಸಸ್ಯಹಾನಿ
ದಂಡರ್ಣನವೆಂಬ ಮುನ್ನೂರ ಮೂವತ್ತೇಳನೆಯ
ಅಧ್ಯಾಯ ಮುಗಿದುದು

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಅಷ್ಟತ್ರಿಂಶದಧಿಕ ತ್ರಿಶತತಮೋಽಧ್ಯಾಯಃ ||

|| ಹಂಸ ಉವಾಚ ||

ಧನಂ ಧರ್ಮಾರ್ಥಕಾಮಾನಾಂ ಮೂಲಮಾಹುರ್ಮನೀಷಿಣಃ |
ನೃಣಾಂ ಬಹಿಶ್ಚರಾ ಪ್ರಾಣಾಃ ದ್ರವಿಣಂ ಚ ಪ್ರಕೀರ್ತಿತಂ || ೧ ||

ತಸ್ಮಾದ್ಧರ್ಮವಿದಾ ರಾಜ್ಞಾ ಘಾತನೀಯಾಸ್ತು ತಸ್ಕರಾಃ |
ತೇ ಹಿ ಘಾತನಮರ್ಹಂತಿ ಸರ್ವಾ ಬಾಧಾ ವಿಶೇಷತಃ || ೨ ||

ರಾಜ್ಞೋ ಧರ್ಮಂ ನ ಪಶ್ಯಾಮಿ ತಸ್ಕರಸ್ಯ ವಧಾದೃತೇ |
ಸ್ನೇಹಾದ್ವಾ ಧನಲೋಭಾದ್ವಾ ರಾಜಾ ಚೇತ್ತಸ್ಕರಂ ತ್ಯಜೇತ್ || ೩ ||

ಮುನ್ನೂರ ಮೂವತ್ತೆಂಟನೆಯ ಅಧ್ಯಾಯ.

೧-೫. ಹಂಸವು ಹೇಳುತ್ತದೆ:—ಲೋಕದಲ್ಲಿ ಧರ್ಮಾರ್ಥಕಾಮಗಳೆಂಬ ತ್ರಿವರ್ಗಪುರುಷಾರ್ಥಗಳಿಗೆ ಹಣವೇ ಮೂಲಕಾರಣವೆಂದು ಪ್ರಾಜ್ಞರು ಹೇಳುತ್ತಾರೆ. ಮನುಷ್ಯರಿಗೆ ಹಣವೆಂಬುದು ಹೊರಗಿನಪ್ರಾಣ. ಆದುದರಿಂದ ಧರ್ಮಜ್ಞನಾದ ರಾಜನು ಅಂತಹ ಹಣವನ್ನು ಕದಿಯುವ ಕಳ್ಳರನ್ನು ಸರ್ವವಿಧದಲ್ಲಿಯೂ ನಾಶ ಪಡಿಸಬೇಕು. ಸರ್ವವಿಧದಲ್ಲೂ ಜನಗಳಿಗೆ ಬಾಧಕರಾದ ಈ ಕಳ್ಳರು ರಾಜನಿಂದ ನಾಶಹೊಂದಲು ಅರ್ಹರೇ ಆಗಿದ್ದಾರೆ. ರಾಜನಿಗೂ ಸಹ ಇವರ ನಿಗ್ರಹ ಹೊರತು ಬೇರೆ ಧರ್ಮವಿಲ್ಲ. ಸ್ನೇಹದಿಂದಲೇ ಆಗಲಿ ಧನಲೋಭದಿಂದಾಗಲಿ ಇವರನ್ನು ರಾಜನು ಬಿಟ್ಟು ಬಿಟ್ಟಲ್ಲಿ ಅವನಿಗೆ ನೂರು ಬ್ರಹ್ಮಹತ್ಯೆಯ ಪಾಪವುಂಟಾಗುತ್ತದೆ

ಬ್ರಹ್ಮವಧ್ಯಾಕೃತಂ ತಸ್ಯ ಪ್ರಾಹುರ್ಧರ್ಮವಿದೋ ಜನಾಃ ।
ನ ಹನ್ಯಾದ್ಬ್ರಾಹ್ಮಣಂ ರಾಜಾ ಸರ್ವಪಾಪೇಷ್ವವಸ್ಥಿತಂ ॥ ೪ ॥

ಸ್ತೇನಂ ವಿವಾಸಯೇದ್ರಾಷ್ಟ್ರಾತ್ಸಮಗ್ರಧನಮಕ್ಷತಂ ।
ಮಹಾಪಾತಕಿನಂ ವಿಪ್ರಂ ಕೃತಚಿಹ್ನಂ ವಿವಾಸಯೇತ್ ॥ ೫ ॥

ಗ್ರಾಮಸೀಮ್ನಿ ಹೃತಂ ದ್ರವ್ಯಂ ಗ್ರಾಮ್ಯೋ ದಾಪ್ಯಸ್ತಥಾ ಭವೇತ್ ।
ಯಸ್ಮಿನ್ಗ್ರಾಮೇ ಪದಂ ಗಚ್ಛೇತ್ಸ ಚ ದಾಪ್ಯಸ್ತಥಾ ಭವೇತ್ ॥ ೬ ॥

ಗ್ರಾಮೌ ದ್ವೌ ದಂಡನೀಯೌ ತು ಸೀಮಾಮಧ್ಯೇ ಹೃತಂ ಯದಿ ।
ಅಟವ್ಯಾಂ ತಂ ನಿಯುಕ್ತಂ ತು ನಗರೇ ನಗರಾಧಿಪಃ ॥ ೭ ॥

ಮಹಾಪಾತಕಿನಃ ಸರ್ವೇ ಘಾತನೀಯಾ ಮಹೀಕ್ಷಿತಾ ।
ಕಬಂಧೇನಾಂಕಯೇದ್ವಿಪ್ರಂ ಲಲಾಟೇ ಬ್ರಹ್ಮಘಾತಕಂ ॥ ೮ ॥

ಎಂದು ಧರ್ಮಜ್ಞರು ಹೇಳಿದ್ದಾರೆ. ಯಾವ ಪಾಪಮಾಡಿದರೂ ಬ್ರಾಹ್ಮಣನನ್ನು ರಾಜನು ಕೊಲ್ಲಬಾರದು. ಕಳ್ಳನಾದ ಬ್ರಾಹ್ಮಣನನ್ನು ಅವನ ಧನದೊಡನೆ ರಾಜ್ಯದಿಂದ ಹೊರಕ್ಕೆ ಹೊರಡಿಸಬೇಕು. ಮಹಾಪಾತಕವುಳ್ಳ ಬ್ರಾಹ್ಮಣನನ್ನೂ ಸಹ ಚಿಹ್ನೆಮಾಡಿ ಹೊರಕ್ಕೆ ಕಳುಹಿಸಬೇಕು.

೬-೯. ಗ್ರಾಮದ ಎಲ್ಲೆಯಲ್ಲಿ ಅಪಹರಿಸಲ್ಪಟ್ಟ ದ್ರವ್ಯವನ್ನು ಗ್ರಾಮದವರಿಂದ ಪರಿಹಾರ ಕೊಡಿಸಬೇಕು. ಅವನು ಆ ಗ್ರಾಮದಲ್ಲಿಯೇ ನೆಲೆಹೊಂದಿದ್ದಲ್ಲಿಯೂ ಅಪಹೃತವಾದ ಅವನ ದ್ರವ್ಯಕ್ಕೆ ಗ್ರಾಮಸ್ಥರಿಂದಲೇ ಪರಿಹಾರ ಕೊಡಿಸಬೇಕು. ಎಲ್ಲೆ ಕಟ್ಟಿನ ಮಧ್ಯದಲ್ಲಿ ಕಳ್ಳತನವಾದಲ್ಲಿ ಅದರ ಪರಿಹಾರವನ್ನು ಎರಡು ಗ್ರಾಮದವರೂ ವಹಿಸಬೇಕು. ನಗರಾಧಿಪತಿಯಿಂದ ಕಾಡಿಗೆ ಕಳುಹಿಸಲ್ಪಟ್ಟವನ ಹಣವು ಕಾಡಿನಲ್ಲಿ ಅಪಹೃತವಾದಲ್ಲಿ ನಗರಾಧಿಪತಿಯೇ ಪರಿಹಾರ ಕೊಡಬೇಕು ಬ್ರಾಹ್ಮಣರಲ್ಲದ ಮಹಾಪಾತಕಿಗಳೆಲ್ಲರನ್ನೂ ಧೊರೆಯು ನಾಶಪಡಿಸಬೇಕು. ಬ್ರಹ್ಮಹತ್ಯೆ ಮಾಡಿದ ಬ್ರಾಹ್ಮಣನನ್ನು ದೇಶದಿಂದ ಹೊರಕ್ಕೆ ಕಳುಹಿಸುವಾಗ ಅವನ ಹಣೆಯಲ್ಲಿ ಕಬಂಧದ (ತಲೆಇಲ್ಲದಮುಂಡ) ಚಿಹ್ನೆ ಮಾಡಬೇಕು. ಸುರಾಪಾನಮಾಡಿದವನಿಗೆ ಸುರಾಪಾಯಿಯ ಚಿಹ್ನೆಯನ್ನೂ, ಮಹಾಪಚಾರಿಗೆ ಕುದುರೆಯ ಕಾಲಿನ ಚಿಹ್ನೆ

ಸುರಾಪಂ ತದ್ವ್ರಜೇನಾಥ ಕೃತಂ ಚಾಶ್ವಪದೇನತು ।
ಅಗಮ್ಯಾಗಾಮಿನಂ ವಿಪ್ರಂ ಭಗಾಂಕೇನಾಂಕಯೇನ್ನೃಪಃ ॥ ೯ ॥

ಘಾತನೀಯಾಸ್ತಥಾ ರಾಜ್ಞಾ ನರಸ್ತ್ರೀಬಾಲಘಾತಿನಃ ।
ಅಗ್ನಿದಾಗರದಾಶ್ಚೈವ ಭೂಮ್ಯರ್ಥೇ ಕೂಟಸಾಕ್ಷಿಣಃ ॥ ೧೦ ॥

ಸೇತು ಭೇದಕರಾ ಯೇ ಚ ರಾಜ್ಞೋ ವ್ಯಂಕಚರಾಶ್ಚಯೇ ।
ತೇ ಚಾಂಗಹೀನಾಃ ಕರ್ತವ್ಯಾ ರಾಜ್ಞಾ ಕೂಟಾಕ್ಷದೇವಕಾಃ ॥ ೧೧ ॥

ಕರಹೀನಸ್ತಥಾ ಕಾರ್ಯೋ ಯಶ್ಚೋಹೋಪಧಿದೇವಿತಾ ।
ಉತ್ಕ್ರೋಶತಾಂ ಜನಾನಾಂ ಚ ಹ್ರಿಯಮಾಣೇ ಧನೇ ವಧೇ ॥ ೧೨ ॥

ಶ್ರೋತಾ ಯಸ್ತು ನ ಸಾವರ್ತೇದ್ರಾಜಾ ತಾನಪಿ ಘಾತಯೇತ್ ।
ಗಜಾಶ್ವಘಾತಿನೋ ವಧ್ಯಾಸ್ತಥಾ ಗೋಘಾತಿನಶ್ಚ ಯೇ ॥ ೧೩ ॥

ಪರಿಶೇಷಪಶೂನಾಂ ತು ಘಾತಿನಾಂ ಛೇದಯೇತ್ಕರಂ ।
ಕಾರ್ಷಾಪಣಶತಂ ದಂಡಂ ಆರಣ್ಯಪಶುಘಾತನೇ ॥ ೧೪ ॥

ಯನ್ನೂ, ಅಗಮ್ಯಾಗಮನ ಮಾಡಿದವನಿಗೆ ಯೋನಿಯ ಚಿಹ್ನೆಯನ್ನೂ ಸಹ ಮಾಡಬೇಕು. ಮನುಷ್ಯ, ಸ್ತ್ರೀ. ಬಾಲ ಇವರನ್ನು ಕೊಲೆಮಾಡಿದವರಿಗೆ ಕೊಲೆಯೇ ಶಿಕ್ಷೆ.

೧೦-೧೪. ಅಗ್ನಿ, ವಿಷ ಇವನ್ನು ಪ್ರಯೋಗಿಸಿದವರಿಗೂ, ಭೂಮಿಗಾಗಿ ಕಪಟ ಸಾಕ್ಷ್ಯ ಹೇಳಿದವರಿಗೂ, ಕೆರೆ ಮೊದಲಾದ ಜಲಾಶಯಗಳ ಕಟ್ಟೆಯೊಡೆದವರಿಗೂ, ರಾಜವಿರೋಧದಿಂದ ವರ್ತಿಸಿದವರಿಗೂ, ಕಪಟದಿಂದ ಜೂಜಾಡುವವರಿಗೂ, ಅಂಗಹೀನತೆಯನ್ನು ಮಾಡುವುದೇ ಶಿಕ್ಷೆ ಮೋಸದಿಂದ ದ್ಯೂತವಾಡುವವನಿಗೆ ಕೈಯನ್ನು ಕತ್ತರಿಸಬೇಕು. ಧನಾಪಹಾರವಾದಾಗ ಜನರು ಕೂಗಿಕೊಂಡಲ್ಲಿ, ಅವರನ್ನೂ ಕಳ್ಳನು ಕೊಂದಲ್ಲಿ, ಜನರ ಶಬ್ದವನ್ನು ಕೇಳಿದವನು ಪ್ರತೀಕಾರಮಾಡದೆ ಇದ್ದಲ್ಲಿ ಅವನನ್ನೂ, ಕಳ್ಳರನ್ನೂ ಸಹ ರಾಜನಾದವನು ಕೊಲ್ಲಿಸಬೇಕು. ಆನೆ, ಕುದುರೆ, ಗೋವು ಇವನ್ನು ಕೊಂದವರಿಗೂ ವಧವೇ ಶಿಕ್ಷೆ. ಇತರ ಪಶುಗಳನ್ನು ಕೊಂದವರಿಗೆ ಕೈಯನ್ನು ಕತ್ತರಿಸಬೇಕು. ಆರಣ್ಯ ಪ್ರಾಣಿಗಳನ್ನು ವಧಿಸಿದವನಿಗೆ ನೂರು ಸುವರ್ಣದ ನಾಣ್ಯಗಳನ್ನು ದಂಡವಿಧಿಸಬೇಕು.

ಪಕ್ಷಿಘಾತೀ ತದರ್ಧಂ ತು ಇತಿ ಧರ್ಮವಿದೋ ವಿದುಃ ।
ಫಲೋಪಗದ್ರುಮಚ್ಛೇದೇ ದಂಡ ಉತ್ತಮಸಾಹಸಂ ॥ ೧೫ ॥

ಪುಷ್ಪಪ್ರದಸ್ಯ ಯಶ್ಛೇದೀ ಮಧ್ಯಮಂ ದಂಡಮರ್ಹತಿ ।
ಕಾರ್ಷಾಪಣಶತಂ ದಂಡ್ಯಾ ಲತಾಗುಲ್ಮಾದಿಭೇದಕಾಃ ॥ ೧೬ ॥

ಸವರ್ಣಗಃ ಪಾರಜಾಯಿಾ ದಂಡ್ಯ ಉತ್ತಮಸಾಹಸಂ ।
ಹೀನವರ್ಣಾಗಮೋ ದಂಡ್ಯಾಸ್ತಥಾ ಪ್ರಥಮಸಾಹಸಂ ॥ ೧೭ ॥

ತಥೈವೋತ್ತಮವರ್ಣಾಯಾ ಗಮನೇ ಘಾತಮರ್ಹತಿ ।
ಹೀನವರ್ಣಗಮೇ ನಾರೀ ವಧಮರ್ಹತ್ಯಸಂಶಯಂ ॥ ೧೮ ॥

ಸಮವರ್ಣಗಮೇ ತ್ಯಾಜ್ಯಾ ಉತ್ಕೃಷ್ಟಮಥ ಗಚ್ಛತೀ ।
ಹೃತಾಧಿಕಾರಾಂ ಮಲಿನಾಂ ತಾಂ ತು ಸಂವಾಸಯೇದ್ಗೃಹೇ ॥ ೧೯ ॥

ಯೇನಯೇನ ತಥಾಂಗೇನ ಹೀನವರ್ಣೋ ನರೋಧಮಃ ।
ಉತ್ಕೃಷ್ಟಸ್ಯಾಪಕುರುತೇ ತತ್ತದೇವಾಸ್ಯ ಘಾತಯೇತ್ ॥ ೨೦ ॥

೧೫-೨೦. ಪಕ್ಷಿಗಳನ್ನು ಕೊಂದವನಿಗೆ ಅದರ ಅರ್ಧ. ಫಲಬಿಡುವ ಮರವನ್ನು ಕಡಿದವನಿಗೆ ಕೊಲೆಮಾಡಿದವನ ಶಿಕ್ಷೆಯೇ ಆಗಬೇಕು. ಹೂಬಿಡುವ ಮರವನ್ನು ಕಡಿದವನಿಗೆ ಮಧ್ಯಮವಾದ ಶಿಕ್ಷೆ. ಲತೆ, ಪೊದರು ಇವನ್ನು ನಾಶಮಾಡಿದವರಿಗೆ ನೂರು ಸುವರ್ಣದ ದಂಡವಿಧಿಸಬೇಕು. ಸವರ್ಣದಲ್ಲಿ ಪರದಾರಗಮನಮಾಡಿದವನಿಗೆ ಕೊಲೆಯುವನ ಶಿಕ್ಷೆಯೇ, ಹೀನವರ್ಣದಲ್ಲಿ ಪರದಾರಗಮನ ಮಾಡಿದವನಿಗೆ ಅದೇ ಶಿಕ್ಷೆ. ಉತ್ತಮವರ್ಣದಲ್ಲಿ ಆ ಕಲಸಮಾಡಿದವನಿಗೂ ಕೊಲೆಯೇ ಶಿಕ್ಷೆ. ಹೀನವರ್ಣದವನಲ್ಲಿ ವರ್ತಿಸಿದ ಸ್ತ್ರೀಯೂ, ಕೊಲೆಗೇ ಅರ್ಹಳು, ಸಮವರ್ಣದಲ್ಲಾದರೆ ತ್ಯಾಜ್ಯಳು. ಉತ್ಕೃಷ್ಟವರ್ಣದವನನ್ನು ಅವಳು ಸೇವಿಸಿದ್ದೇ ಆದರೆ ಅವಳಿಗೆ ತನ್ನ ಮನೆಯಲ್ಲಿರುವ ಅಧಿಕಾರವನ್ನು ತೆಗೆದು ಮನೆಯಲ್ಲಿಯೇ ಮಲಿನಳಾಗಿರುವಂತೆ ಇಡಬೇಕು. ಹೀನವರ್ಣವನು ಉತ್ತಮವರ್ಣದವನಿಗೆ ಯಾವ ಯಾವ ಅವಯವಗಳಿಂದ ಅಪಕಾರವಮಾಡುತ್ತಾನೆಯೋ ಅವನ ಆಯಾಯ ಅವಯವಗಳನ್ನು ನಾಶಪಡಿಸಬೇಕು.

ಶ್ವಪಾಕಪಂಡುಚಂಡಾಲೇಷ್ವನ್ಯೇಷು ವಧವೃತ್ತಿಷು ।
ಹಸ್ತಿಶ್ರವ್ರಾಜ್ಯದಾಸೇಷು ಗುರುದಾರಾಭಿಗೇಷು ಚ ॥ ೨೧ ॥

ಮರ್ಯಾದಾತಿಕ್ರಮೋ ಸದ್ಯೋ ಘಾತ ಏವಾನುಶಾಸನಂ ।
ಮಲಾ ಹ್ಯೇತೇ ಮನುಷ್ಯೇಷು ಧನಮೇಷಾಂ ಸದಾತ್ಮಕಂ ॥ ೨೨ ॥

ತಸ್ಮಾತ್ತಾನ್ ಘಾತಯೇದ್ರಾಜಾ ನಾರ್ಥದಂಡೇನ ದಂಡಯೇತ್ ।
ಶತಂ ಬ್ರಾಹ್ಮಣ ಮಾಕ್ರಮ್ಯ ಕ್ಷತ್ರಿಯೋ ದಂಡಮರ್ಹತಿ ॥ ೨೩ ॥

ವಿಪ್ರಃ ಪಂಚಾಶತಂ ದಂಡ್ಯಃ ಕ್ಷತ್ರಿಯಸ್ಯಾಭಿಶಂಸನೇ ।
ವೈಶ್ಯಸ್ಯಾದರ್ಧಪಂಚಾಶಚ್ಛೂದ್ರೇ ದ್ವಾದಶಕಂ ದಮಃ ॥ ೨೪ ॥

ಕ್ಷತ್ರಿಯಸ್ಯ ತು ಪಂಚಾಶದ್ದಂಡೋ ವೈಶ್ಯಾಭಿಶಂಸನೇ ।
ಶೂದ್ರೆ ಸ್ಯಾದರ್ಧಪಂಚಾಶದ್ವೈಶ್ಯಃ ಶೂದ್ರಾಭಿಶಂಸನೇ ॥ ೨೫ ॥

ಕಾರ್ಷಾಪಣಂ ಭವೇದ್ದಂಡ್ಯಸ್ತಥಾ ವೈ ಪಂಚವಿಂಶತಿಃ ।
ಆಕ್ರೋಶೇ ಸ ಸವರ್ಣಾನಾಂ ದ್ವಾದಶೈವ ವ್ಯತಿಕ್ರಮಃ ॥ ೨೬ ॥

೨೧-೨೬. ಶ್ವಪಾಕರೇ ಮೊದಲಾದ ಹೀನಜಾತಿಯವರ ವಿಷಯದಲ್ಲಿಯೂ, ಕೊಲೆಯಿಂದಲೇ ಜೀವಿಸುವ ಇತರರ ವಿಷಯದಲ್ಲಿಯೂ, ಆನೆ ಮತ್ತು ಸನ್ಯಾಸಿಗಳ ಸೇವಕರ ವಿಷಯದಲ್ಲಿಯೂ ಮತ್ತು ಗುರುಪತ್ನೀಗಮನಮಾಡಿದವನ ವಿಷಯದಲ್ಲಿಯೂ ಅವರವರ ಎಲ್ಲೆಯನ್ನು ಮೀರಿ ನಡೆದವರಿಗೂ ಸಹ ಒಡನೆಯೇ ಮಾಡುವ ಕೊಲೆಯೇ ಶಿಕ್ಷೆ. ಇವರು ಮನುಷ್ಯ ಸಂಘದಲ್ಲಿ ಮಲದಂತೆ ನಿಕೃಷ್ಟರಾದವರು. ಇವರಲ್ಲಿರುವ ಹಣವೆಲ್ಲವೂ ಸತ್ಪುರುಷರಿಂದ ಅಪಹರಿಸಲ್ಪಟ್ಟಿದ್ದು. ಆದುದರಿಂದ ರಾಜನಾದವನು ಇವರಿಗೆ ಅರ್ಥರೂಪದಲ್ಲಿ ಶಿಕ್ಷೆಯನ್ನು ವಿಧಿಸಬಾರದು, ಕೊಂದೇ ಹಾಕಬೇಕು. ಬ್ರಾಹ್ಮಣನನ್ನು ಅಕ್ರಮಿಸಿ ತೊಂದರೆಪಡಿಸಿದ ಕ್ಷತ್ರಿಯನಿಗೆ ನೂರು ರೂಪಾಯಿ ಜುಲ್ಮಾನೆ. ಬ್ರಾಹ್ಮಣನಾದವನು ಕ್ಷತ್ರಿಯನನ್ನು ನಿಂದಿಸಿ ತೊಂದರೆ ಪಡಿಸಿದ್ದೇ ಆದರೆ ಅವನಿಗೆ ಐವತ್ತು ರೂಪಾಯಿ ದಂಡ. ವೈಶ್ಯನನ್ನು ಆಕ್ರಮಿಸಿದಲ್ಲಿ ಇಪ್ಪತ್ತೈದು. ಶೂದ್ರನನ್ನು ಆಕ್ರಮಿಸಿದಲ್ಲಿ ಹನ್ನೆರಡು, ಕ್ಷತ್ರಿಯನಾದವನು ವೈಶ್ಯನನ್ನು ಆಕ್ರಮಿಸಿದಲ್ಲಿ ಐವತ್ತು ರೂಪಾಯಿ ಶೂದ್ರನನ್ನು ಆಕ್ರಮಿಸಿದಲ್ಲಿ ಇಪ್ಪತ್ತೈದು ರೂಪಾಯಿ ವೈಶ್ಯನಾದವನು ಶೂದ್ರನನ್ನು ಆಕ್ರಮಿಸಿದಲ್ಲಿ ನೂರು ಚಿನ್ನದ ನಾಣ್ಯಗಳ ದಂಡ, ಸವರ್ಣದವರು ಪರಸ್ಪರವಾಗಿ ನಿಂದಾವಚನಗಳಿಂದ ಅತಿಕ್ರಮಿಸಿದರೂ ಸಹ ಹನ್ನೆರಡು ನಾಣ್ಯಗಳೇ ದಂಡ.

ವಾದೇಷು ವಚನೀಯೇಷು ತದೇವ ದ್ವಿಗುಣಂ ಭವೇತ್ ।
ಕಾಣಂ ವಾಪ್ಯಥವಾ ಖಂಜಂ ತ್ವನ್ಯದ್ವಾಪಿ ತಥಾವಿಧಂ ॥ ೨೭ ॥

ತಥ್ಯೇನಾಪಿ ಬ್ರುವನ್ದಾಪ್ಯೋ ದಂಡಂ ಕಾರ್ಷಾಪಣಂ ನರಃ ।
ನ ಕಿಲ್ಬಿಷೇಣಾಪವದೇಚ್ಛಾಸ್ತ್ರತಃ ಕೃತಪಾವನಂ ॥ ೨೮ ॥

ನ ರಾಜ್ಞಾ ಧೃತದಂಡೆ ತು ದಂಡ್ಯತಾ ತದ್ವ್ಯತಿಕ್ರಮಾತ್ ।
ರಾಜಾ ಚ ಬ್ರಾಹ್ಮಣಶ್ಚೈವ ಲೋಕೇ ಪೂಜ್ಯತಮೌ ಮತೌ ॥ ೨೯ ॥

ನಾಮಜಾತಿಗ್ರಹಂ ತೇಷಾಂ ತ್ವಭಿದ್ರೋಹಂ ತು ಕುರ್ವತಃ ।
ನಿಧೇಯೋಽಯೋಮಯಃ ಶಂಕುರ್ಜ್ವಲನ್ನಾಸ್ಯೇ ದಶಾಂಗುಲಃ ॥ ೩೦ ॥

ಧರ್ಮೋಪದೇಶಂ ಧರ್ಮೇಣ ದ್ವಿಜಾನಾಮಸ್ಯ ಕುರ್ವತಿ ।
ತಪ್ತಮಾಸೇಚಯೇತ್ತೈಲಂ ವಕ್ತ್ರೇ ಶ್ರೋತ್ರೇ ಚ ಪಾರ್ಥಿವಃ ॥ ೩೧ ॥

೨೭-೩೦. ವಾದಮಾಡುವ ಕಾಲದಲ್ಲಿ ನಿಂದಾವಚನಗಳನ್ನಾಡಿದಪಕ್ಷಗೆ ಇದರ ದ್ವಿಗುಣದಷ್ಟು ದಂಡ. ಕುರುಡರು, ಕುಂಟರು ಇವರ ವಿಷಯದಲ್ಲಿ ಸತ್ಯಾರ್ಥವನ್ನಾದರೂ ನಿಂದಿಸಿ ಹೇಳಿದಲ್ಲಿ ಅವನಿಗೆ ಒಂದು ಚಿನ್ನದನಾಣ್ಯದ ದಂಡಹಾಕಬೇಕು. ಶಾಸ್ತ್ರಾಭ್ಯಾಸದಿಂದ ಧರ್ಮಾಧರ್ಮದೃಷ್ಟಿಯುಳ್ಳವನ ವಿಷಯದಲ್ಲಿ ಪಾಪವನ್ನು ಆರೋಪಿಸಿ ನಿಂದಿಸಬಾರದು. ರಾಜನಿಂದ ದಂಡಿಸಲ್ಪಟ್ಟಿರುವವನನ್ನು ಅತಿಕ್ರಮಕ್ಕಾಗಿ ಪುನಃ ದಂಡಿಸಬಾರದು. ರಾಜನೂ, ಬ್ರಾಹ್ಮಣರೂ ಸಹ ಲೋಕದಲ್ಲಿ ಅತ್ಯಂತ ಪೂಜ್ಯರು. ಇವರ ಹೆಸರನ್ನೂ ಜಾತಿಯನ್ನೂ ನಿರ್ದೇಶಿಸಿ ದ್ರೋಹಬುದ್ಧಿಯಿಂದ ನಿಂದಿಸುವವನಿಗೆ ಹತ್ತು ಅಂಗುಲದ ಕಾದಕಬ್ಬಿಣದ ಸಲಾಕಿಯನ್ನು ಬಾಯಿನಲ್ಲಿ ಇಡಬೇಕು.

೩೧-೩೩. ಬ್ರಾಹ್ಮಣರಿಗಾಗಿ ಧರ್ಮೋಪದೇಶವು ನಡೆಯುತ್ತಿರುವಾಗ ಇತರನು ಅಲ್ಲಿ ಬಂದು ನೋಡಿಯೂ ಕೇಳಿಯೂ ನಿಂತಲ್ಲಿ ಅವನ ಮುಖಕ್ಕೂ ಕಿವಿಗೂ ಸಹ ಕಾದ ಎಣ್ಣೆಯನ್ನು ಚೆಲ್ಲಬೇಕು. ಅಪಕೃಷ್ಟನಾದವನು ಉತ್ಕೃಷ್ಟನೊಡನೆ

ಸಹಾಸನಮಭಿಪ್ರೇಪ್ಸುರುತ್ಕೃಷ್ಟಸ್ಯಾಪಕೃಷ್ಟಜಃ ।
ಕಟ್ಯಾಂ ಕೃತಾಂಕೋ ನಿರ್ವಾಸ್ಯಃ ಸ್ಫಿಚಂ ಚಾಸ್ಯಾವಕರ್ತಯೇತ್ ॥೩೨॥

ಅವನಿಷ್ಠೀವತೋ ದರ್ಪಾದ್ದ್ವಾವೋಷ್ಠೌ ಛೇದಯೇನ್ನೃಪಃ ।
ಅವಮೂತ್ರಯತಃ ಶಿಶ್ನಮವಶರ್ಧಯತೋ ಗುದಂ ॥ ೩೩ ॥

ತಮುಪಾಕ್ರಮ್ಯ ರಾಜಾನಂ ಜಿಹ್ವಾಚ್ಛೇದನಮರ್ಹತಿ ।
ರಾಜಾ ನ ಪ್ರಹರೇದ್ಯಸ್ತು ಕೃತಾಗಸ್ಯಪಿ ದುರ್ಮತಿಃ ॥ ೩೪ ॥

ತಮಗ್ನೌ ವಿಪಚೇಚ್ಛೂಲೇ ಬ್ರಹ್ಮಹತ್ಯಾಶತಾತಿಗಂ ।
ಗುರುಂ ವಾ ಬಾಲವೃದ್ಧಂವಾ ಬ್ರಾಹ್ಮಣಂ ವಾ ಬಹುಶ್ರುತಂ ।
ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ ॥ ೩೫ ॥

ಸಂಕ್ಷೇಪತೋ ಧರ್ಮವಿದಾಂ ವರಿಷ್ಠಾ
ರಾಜ್ಞೋ ಮಯೈತೇ ಕಥಿತಾಸ್ತು ಧರ್ಮಾಃ ।

ಏಕಾಸನವನ್ನು ಅಪೇಕ್ಷಿಸಿದಲ್ಲಿ ಅವನ ದುರ್ಗುಣವನ್ನು ಘೋಷಿಸಿ ಸೊಂಟದ ಮೇಲೆ ಬರೆಹಾಕಿ ಹೊರಗೆ ಕಳುಹಿಸಬೇಕು. ಅಹಂಕಾರದಿಂದ ಸಿಕ್ಕಿದಕಡೆ ಉಗುಳುವವನ ಎರಡು ತುಟಿಗಳನ್ನೂ ರಾಜನು ಕತ್ತರಿಸಬೇಕು. ಅಕ್ರಮವಾಗಿ ಮೂತ್ರಿಸುವವನ ಶಿಶ್ನವನ್ನೂ, ಅಕ್ರಮವಾಗಿ ಶ್ರದ್ಧಿಸುವವನ ಗುದವನ್ನೂ ಛೇದಿಸಬೇಕು. ರಾಜನನ್ನೂ ಆಕ್ರಮಿಸಿಸಿಂತ ಅಪರಾಧಿಗೆ ನಾಲಗೆಯನ್ನು ಛೇದಿಸಬೇಕು

೩೪–೩೬. ಯಾವ ರಾಜನು ಅಪರಾಧಿಯನ್ನೂ ಶಿಕ್ಷಿಸದೆ-ಸುಮ್ಮನಿರುವನೋ ನೂರು ಬ್ರಹ್ಮಹತ್ಯೆಗಿಂತಲೂ ಪಾಪದಲ್ಲಿ ಮೀರಿರುವ ಅವನನ್ನು ಶೂಲದಿಂದ ಚುಚ್ಚಿ ಅಗ್ನಿಯಲ್ಲಿ ಪಾಕಮಾಡಬೇಕು. ಗುರುವೇ ಆಗಲಿ, ಬಾಲವೃದ್ಧರೇ ಆಗಲಿ, ಶಾಸ್ತ್ರಜ್ಞನಾದ ಬ್ರಾಹ್ಮಣನೇ ಆಗಲಿ ತನ್ನನ್ನೇ ಕೊಲ್ಲಲು ಎದುರಿಗೆ ಬಂದದ್ದೇ ಆದರೆ ವಿಚಾರ ಮಾಡದೇ ಅವನನ್ನು ಆಗಲೇ ಕೊಂದುಬಿಡಬೇಕು. ಧರ್ಮಜ್ಞರಿಗೂ ಮಾನ್ಯವಾಗಿರುವ ಈ ರಾಜಧರ್ಮಗಳನ್ನು ಸಂಕ್ಷೇಪವಾಗಿ ನಾನು ಇದುವರೆಗೂ ಹೇಳಿ

ಅತಃ ಪರಂ ಯತ್ರ ತು ಸಂಶಯೋಽಸ್ತಿ
ತಂ ಮೇ ವದಧ್ವಂ ತಪಸಿ ಪ್ರಧಾನಾಃ ॥ ೩೬ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು
ದಂಡಾನುಶಾಸನವರ್ಣನೋ ನಾಮ
ಅಷ್ಟತ್ರಿಂಶದಧಿಕತ್ರಿಶತತಮೋಽಧ್ಯಾಯಃ

ದ್ದೇನೆ. ಇನ್ನು ಮುಂದೆ ನಿಮಗೆ ಯಾವ ವಿಷಯದಲ್ಲಿ ಸಂಶಯವಿದೆಯೋ ಅದನ್ನು ತಪೋನಿಧಿಗಳಾದ ನೀವೆ ಹೇಳಿರಿ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ದಂಡಾನುಶಾಸನ
ವರ್ಣನವೆಂಬ ಮುನ್ನೂರ ಮೂವತ್ತೆಂಟನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕೋನಚತ್ವಾರಿಂಶದಧಿಕತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ಅತಃ ಪರಂ ದ್ವಿಜಶ್ರೇಷ್ಠ ವದಾಸ್ಮಾಕಮತಂದ್ರಿತಃ ।
ವನೇ ನಿವಸತಾಂ ಧರ್ಮಂ ಧರ್ಮಮಾಶ್ರಮಿಣಾಮಪಿ ॥ ೧ ॥

॥ ಹಂಸ ಉವಾಚ ॥

ಗೃಹಸ್ಥಸ್ತು ಯದಾ ಪಶ್ಯೇದ್ವಲೀಪಲಿತಮಾತ್ಮನಃ ।
ಅಪತ್ಯಸ್ಯೈವ ಚಾಪತ್ಯಂ ತದಾರಣ್ಯಂ ಸಮಾಶ್ರಯೇತ್ ॥ ೨ ॥

ಪುತ್ರೇಷು ಭಾರ್ಯಾಂ ನಿಕ್ಷಿಪ್ಯ ತಯಾ ವಾನುಗತೋವನೇ ।
ಅಗ್ನೀನುಪಚರನ್ನಿತ್ಯಂ ವನ್ಯಮಾಹಾರಮಾಹರೇತ್ ॥ ೩ ॥

ಮುನ್ನೂರ ಮೂವತ್ತೊಂಭತ್ತನೆಯ ಅಧ್ಯಾಯ.

೧-೩. ಋಷಿಗಳು ಪ್ರಶ್ನೆಮಾಡುತ್ತಾರೆ:—ಎಲೈ ಪಕ್ಷಿವರ್ಯನೇ ಇನ್ನು ಮುಂದೆ ಕಾಡಿನಲ್ಲೇ ವಾಸಮಾಡುವ ವಾನಪ್ರಸ್ಥರ ಮತ್ತು ಇತರ ಆಶ್ರಮಿಗಳ ಆಯಾಯ ಧರ್ಮವನ್ನೂ ಹೇಳಬೇಕು ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ:—ಗೃಹಸ್ಥಾಶ್ರಮ ಹೊಂದಿದವನು ತನಗೆ ವಾರ್ಧಕ್ಯದಿಂದ ಬಂದಿರುವ ಸುಕ್ಕುಗಳನ್ನೂ, ನೆರೆತ ಕೂದಲನ್ನು ಯಾವಾಗ ನೋಡುತ್ತಾನೆಯೋ, ಮಗನಿಗೂ ಮಗನಾಗಿರುವುದನ್ನೂ ಯಾವಾಗ ನೋಡುತ್ತಾನೆಯೋ ಆಗಲೇ ಅವನು ವಾನಪ್ರಸ್ಥನಾಗಿ ಅರಣ್ಯ ಹೊಂದಬೇಕು. ತನ್ನ ಭಾರ್ಯೆಯನ್ನು ಮಕ್ಕಳ ವಶದಲ್ಲಿಟ್ಟಾಗಲಿ ಅವಳೊಡನೆಯಾಗಲಿ ಅರಣ್ಯವನ್ನು ಸೇರಿ ಅಗ್ನಿಪರಿಚರ್ಯೆಯಿಂದಲೂ ನಿತ್ಯವೂ ಕಾಡಿನ ಗೆಡ್ಡೆಗೆಣಸುಗಳ ಆಹಾರದಿಂದಲೂ ಜೀವಿಸಬೇಕು.

ಯದಾಹಾರೋ ಭವೇತ್ತೇನ ಪೂಜಯೇತ್ಪಿತೃದೇವತಾಃ ।
ತೇನೈವ ಪೂಜಯೇದ್ವಿದ್ವಾನತಿಥಿಂ ಸಮುಪಾಗತಂ ॥ ೪ ॥

ಗ್ರಾಮಾದಾಹೃತ್ಯ ವಾಶ್ನೀಯಾದಷ್ಟೌ ಗ್ರಾಸಾನ್ ಸಮಾಹಿತಃ ।
ಸ್ವಾಧ್ಯಾಯಂ ಚ ತಥಾ ಕುರ್ಯಾತ್ ಜಟಾಶ್ಚ ಬಿಭೃಯಾತ್ತಥಾ ॥ ೫ ॥

ತಪಸಾ ಶೋಷಯೇನ್ನಿತ್ಯಂ ತಥಾ ಚೈವ ಕಲೇವರಂ ।
ಆರ್ದ್ರವಾಸಾಸ್ತು ಹೇಮಂತೇ ಗ್ರೀಷ್ಮೇ ಪಂಚತಪಾಸ್ತಥಾ ॥ ೬ ॥

ಪ್ರಾವೃಷ್ಯಾಕಾಶಶಾಯೀ ಚ ನಕ್ತಾಶೀ ಚ ತಥಾ ಭವೇತ್ ।
ಚತುರ್ಥಕಾಲಿಕೋ ವಾಸ್ಯಾತ್ ಷಷ್ಠಕಾಲಿಕ ಏವ ವಾ ॥ ೭ ॥

ಕೃಚ್ಛ್ರೈರ್ವಾಪಿ ನಯೇತ್ಕಾಲಂ ಬ್ರಹ್ಮಚರ್ಯಂ ಚ ಪಾಲಯೇತ್ ।
ಏವಂ ನೀತ್ವಾ ವನೇ ಕಾಲಂ ದ್ವಿಜೋ ಬ್ರಹ್ಮಾಶ್ರಮೀ ಭವೇತ್ ॥ ೮ ॥

೪–೭. ತಾನು ಯಾವ ಆಹಾರ ಹೊಂದುತ್ತಾನೆಯೋ ಅಂತಹ ಆಹಾರ ದಿಂದಲೇ ಪಿತೃಗಳನ್ನೂ, ದೇವತೆಗಳನ್ನೂ ತೃಪ್ತಿಪಡಿಸುತ್ತಾ ಬಂದ ಅತಿಥಿಯ ಸತ್ಕಾರವನ್ನೂ ಅದರಿಂದಲೇ ನಡೆಸಬೇಕು. ಅಥವಾ ಗ್ರಾಮದಿಂದ ತರಿಸಿದ ಧಾನ್ಯಾಹಾರವನ್ನು ಎಂಟು ಕಬಳದಷ್ಟು ಮಾತ್ರ ನಿತ್ಯವೂ ಭುಂಜಿಸಬಹುದು. ವೇದಾಧ್ಯಯನಮಾಡುತ್ತಲೂ ಜಟಾಧಾರಿಯಾಗಿಯೂ ಇರಬೇಕು ಉಪವಾಸಾದಿ ತಪಸ್ಸಿನಿಂದ ನಿತ್ಯವೂ ಶರೀರಶೋಷಣೆ ಹೊಂದುತ್ತಿರಬೇಕು. ಹೇಮಂತಋತುವಿನಲ್ಲಿ ಒದ್ದೆಯ ವಸ್ತ್ರದಿಂದಕೂಡಿಯೂ, ಗ್ರೀಷ್ಮಕಾಲದಲ್ಲಿ ಪಂಚಾಗ್ನಿ ತಪಸ್ಸಿನಿಂದಲೂ, ವರ್ಷಾಕಾಲದಲ್ಲಿ ನಿರಾವರಣಪ್ರದೇಶದಲ್ಲಿ ಮಲಗುವುದರಿಂದಲೂ ತಪಃಪ್ರಧಾನ ನಾಗಿ ರಾತ್ರಿಯಲ್ಲಿ ಮಾತ್ರ ಭೋಜನಮಾಡುತ್ತಿರಬೇಕು. ಅಥವಾ ದಿನದ ನಾಲ್ಕ ನೆಯ ಭಾಗದಲ್ಲಿಯಾಗಲೀ ಆರನೆಯ ಭಾಗದಲ್ಲಿಯಾಗಲೀ ಭುಂಜಿಸಬಹುದು.

೮–೯. ಕೃಚ್ಛ್ರಗಳ ಆಚರಣೆಯಿಂದ ಕಾಲಕಳೆಯುತ್ತಾ ಬ್ರಹ್ಮಚರ್ಯ ವನ್ನು ರಕ್ಷಿಸಿಕೊಳ್ಳುತ್ತಿರಬೇಕು. ಹೀಗೆ ವನದಲ್ಲಿ ಕಾಲಕಳೆಯುವ ದ್ವಿಜನು ವಾನಪ್ರಸ್ಥವೆಂಬ ಬ್ರಹ್ಮಾಶ್ರಮಿಯಾಗುತ್ತಾನೆ. ಅನಂತರ ವನದಲ್ಲಿಯೇ ಶರೀರ

ವನೇ ವಿಮುಚ್ಯಾಥ ಶರೀರಧಾತೂನ್
ಪ್ರಾಪ್ನೋತಿ ಲೋಕಾನ್ಪ್ರಪಿತಾಮಹಸ್ಯ ।
ಪುನಾತ್ಯತೀತಾನ್ಪುರುಷಾಂಶ್ಚ ಸಪ್ತ
ಭವಿಷ್ಯತೋ ಯೋನಥ ಸಪ್ತ ವಿಪ್ರಾಃ ॥ ೯ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ವಾನಪ್ರಸ್ಥಧರ್ಮ ವರ್ಣನೋ ನಾಮ
ಏಕೋನಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ

ವನ್ನೂ ಪರಿತ್ಯಾಗಮಾಡಿ ಚತುರ್ಮುಖನ ಲೋಕವನ್ನೇ ಹೊಂದುತ್ತಾನೆ. ಇಂತಹ ಆಶ್ರಮದಿಂದ ಕೃತಕೃತ್ಯನಾದವನು ತನ್ನ ಹಿಂದಿನ ಏಳು ತಲೆಗಳವರನ್ನೂ, ಮುಂದಿನ ಏಳು ತಲೆಗಳವರನ್ನೂ ಪವಿತ್ರಗೊಳಿಸುತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರಸಂವಾದದಲ್ಲಿ !ಹಂಸಗೀತೆಯ ವಾನಪ್ರಸ್ಥಧರ್ಮನಿರೂಪಣವೆಂಬ ಮುನ್ನೂರ ಮೂವತೊಂಭತ್ತನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ ॥

॥ ಹಂಸ ಉವಾಚ ॥

ಚತುರ್ಥಮಾಯುಷೋ ಭಾಗಮಂತ್ಯಂ ಯತ್ಯಾಶ್ರಮೇ ವಸೇತ್ ।
ಕೃತ್ವೇಷ್ಟಿಂ ವಿಧಿವತ್ಪಶ್ಚಾತ್ಸರ್ವವೇದೀ ಸದಕ್ಷಿಣಾಂ ॥ ೧ ॥

ಆತ್ಮನ್ಯಗ್ನೀನ್ಸಮಾರೋಪ್ಯ ದ್ವಿಜೋ ಬ್ರಹ್ಮಾಶ್ರಮೀ ಭವೇತ್ ।
ಗ್ರಾಮೈಕರಾತ್ರಿಕಃ ಸ ಸ್ಯಾನ್ನಗರೇ ಪಾಂಚರಾತ್ರಿಕಃ ॥ ೨ ॥

ವಿಧೂಮೇ ನ್ಯಸ್ತಮುಸಲೇ ವ್ಯಂಗಾರೇ ಭುಕ್ತವಜ್ಜನೇ ।
ಅತೀತೇ ಪಾತ್ರಸಂಚಾರೇ ಭಿಕ್ಷಾಂ ವೃತ್ತಿಂ ಯತಿಶ್ಚರೇತ್ ॥ ೩ ॥

ಮುನ್ನೂರ ನಲವತ್ತನೆಯ ಅಧ್ಯಾಯ.

೧–೩. ಹಂಸವು ಹೇಳುತ್ತದೆ:—ಕೊನೆಯದಾದ ಆಯುಸ್ಸಿನ ನಾಲ್ಕನೇ ಭಾಗವನ್ನು ಸನ್ಯಾಸಿಯ ಆಶ್ರಮದಲ್ಲಿ ಕಳೆಯಬೇಕು ದಕ್ಷಿಣೆಯೊಡಗೂಡಿದ ಸರ್ವವೇದಿ ಎಂಬ ಇಷ್ಟಿಯನ್ನು ಮಾಡಿ ಅಗ್ನಿಯನ್ನೆಲ್ಲಾ ಆತ್ಮಸಮಾರೋಪಣೆ ಮಾಡಿ ಸನ್ಯಾಸರೂಪವಾದ ಬ್ರಹ್ಮಾಶ್ರಮ ಹೊಂದಬೇಕು. ಅವನು ಒಂದು ಕಡೆಯಲ್ಲೇ ಇರದೆ ಗ್ರಾಮದಲ್ಲಿ ಒಂದು ರಾತ್ರಿ ಮಾತ್ರವೂ ನಗರದಲ್ಲಿ ಐದು ರಾತ್ರಿ ಮಾತ್ರವೂ ಇರಬೇಕು. ಹೀಗೆ ಯತಿಯಾದವನು ನಿತ್ಯವೂ ಭಿಕ್ಷೆಯಿಂದ ಜೀವಿಸಬೇಕು. ಭಿಕ್ಷೆಯನ್ನೂ ಸಹ ಗೃಹಸ್ಥರ ಮನೆಯಲ್ಲಿ ಅಡಿಗೆಯ ಕೆಲಸವೆಲ್ಲವೂ ಮುಗಿದು ಬೆಂಕಿಯೂ ಆರಿ ಜನರೆಲ್ಲರಿಗೂ ಊಟವಾದನಂತರ ಹೋಗಿ ಕೇಳಿ ಸಂಪಾದಿಸಬೇಕು.

ಸಪ್ತಾಗಾರಂ ಚರೇದ್ಭೈಕ್ಷಂ ಭಿಕ್ಷುಕಾನ್ನಾನು ಭಿಕ್ಷಯೇತ್ ।
ನ ವ್ಯಥೇತ ತಥಾಽಲಾಭೇ ಯಥಾಲಾಭೇನ ವರ್ತಯನ್ ॥ ೪ ॥

ನಾಸ್ವಾದೇತ ರಸಾನ್ ಭಿಕ್ಷುರ್ನಾಶ್ನೀಯಾತ್ಕಸ್ಯಚಿದ್ಗೃಹೇ ।
ಮೃನ್ಮಯಾಲಾಬುಪಾತ್ರಾಣಿ ದಾರುವೈದಲಕಾನಿ ಚ ॥ ೫ ॥

ತೇಷಾಂ ಸಮ್ಮಾರ್ಜನಾಚ್ಛುದ್ಧಿರದ್ಭಿಶ್ಚೈವ ಪ್ರಕೀರ್ತಿತಾ ।
ಕೌಪೀನಾಚ್ಛಾದನಂ ವಾಸೋ ರಥ್ಯಾವಿದ್ಧಮುಪಾಹರೇತ್ ॥ ೬ ॥

ಶೂನ್ಯಾಗಾರನಿಕೇತಃ ಸ್ಯಾದ್ಯತ್ರ ಸಾಯಂ ಗೃಹೀ ಮುನಿಃ ।
ಕರ್ಮದಂಡಂ ಮನೋದಂಡಂ ವಾಗ್ದಂಡಂ ಚ ತಥಾನ್ಯಸೇತ್ ॥ ೭ ॥

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಂ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥ ೮ ॥

೪-೭. ಏಳು ಮನೆಗಳಲ್ಲಿ ಮಾತ್ರ ಭಿಕ್ಷೆಮಾಡಬೇಕು. ಭಿಕ್ಷುಕರಲ್ಲಿ ಭಿಕ್ಷೆ ಕೇಳಬಾರದು. ಭಿಕ್ಷೆಯು ಸಿಕ್ಕದಿದ್ದಲ್ಲಿ ವ್ಯಥೆಪಡಬಾರದು ಸಿಕ್ಕಿದಷ್ಟರಿಂದಲೇ ದೇಹಧಾರಣೆ ಹೊಂದಬೇಕು. ಯತಿಯಾದವನು ರಸಪದಾರ್ಥಗಳನ್ನು ಭುಂಜಿಸಬಾರದು ಗೃಹಸ್ಥರ ಯಾರ ಮನೆಯಲ್ಲಿಯೂ ಊಟಮಾಡಬಾರದು. ಯಾವ ಪಾತ್ರೆಗಳಿಗೆ ನೀರಿನಿಂದ ತೊಳೆಯುವುದರಿಂದಲೇ ಶುದ್ಧಿಯು ಹೇಳಲ್ಪಟ್ಟಿವೆಯೋ ಅಂತಹ ಮಣ್ಣಿನ ಮತ್ತು ಸೋರೆಕಾಯಿನ, ಮರದ ಮತ್ತು ಬಿದಿರಿನ ಪಾತ್ರೆಗಳನ್ನೇ ಯತಿಯು ಉಪಯೋಗಿಸಬೇಕು. ಉಡುವ ವಸ್ತ್ರ ಮತ್ತು ಹೊದಿಯುವ ವಸ್ತ್ರಗಳು ಬೀದಿಯ ಧೂಳಿನಿಂದ ಕೂಡಿದ್ದಲ್ಲಿ ತೆಗೆದುಹಾಕಬೇಕು. ಶೂನ್ಯಗೃಹಗಳಲ್ಲಿ ಆಶ್ರಯ ಪಡೆಯುತ್ತಾ ಎಲ್ಲಿ ಸಾಯಂಕಾಲವಾಗುವುದೋ ಅದೇ ಮನೆಯೆಂದು ಭಾವಿಸುತ್ತಾ ಕರ್ಮದಂಡ, ಮನೋದಂಡ, ವಾಗ್ದಂಡವೆಂಬ ಮೂರು ವಿಧವಾದ ಕ್ರೌರ್ಯವನ್ನೂ ತ್ಯಜಿಸಬೇಕು.

೮-೯. ಕಣ್ಣಿನಿಂದ ನೋಡಿ ಶುದ್ಧವೆಂದು ತಿಳಿದ ಸ್ಥಳದಲ್ಲೇ ಕಾಲಿಡಬೇಕು. ವಸ್ತ್ರದಿಂದ ಶುದ್ಧೀಕರಿಸಿದ ಜಲವನ್ನೇ ಪಾನಮಾಡಬೇಕು ಸತ್ಯದಿಂದ ಶುದ್ಧವಾದ ಮಾತನ್ನೇ ಆಡಬೇಕು (ಅಥವಾ ಸತ್ಯಸ್ವರೂಪನಾದ ಪರಮಾತ್ಮನ ಮಾತನ್ನೇ

ಚಂದನೇನೋಕ್ಷಿತೋ ಬಾಹುಂ ವಾಸ್ಯೈಕಮಪಿ ತಕ್ಷತಃ ।
ಕಲ್ಯಾಣಂ ಚಾಸ್ಯಕಲ್ಯಾಣಂ ತಯೋರಪಿ ನ ಚಿಂತಯೇತ್ ॥ ೯ ॥

ಪ್ರಾಣಾಯಾಮೈರ್ದಹೇದ್ದೋಷಾನ್ಧಾರಣಾಭಿಶ್ಚ ಕಿಲ್ಬಿಷಂ ।
ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾನ್ ಗುಣಾನ್ ॥ ೧೦ ॥

ನಿರಾಶೀರ್ನಿರ್ನಮಸ್ಕಾರಃ ಸಮಲೋಷ್ಟಾಶ್ಮಕಾಂಚನಃ ।
ಸರ್ವಭೂತಸಮೋ ಮೈತ್ರಃ ಪರಮಂ ಪದಮಶ್ನುತೇ ॥ ೧೧ ॥

ಜನ್ಮನಾ ಯಸ್ತು ನಿರ್ವಿಣ್ಣಃ ಮರಣೇನ ತಥೈವ ಚ ।
ಆಧಿಭಿರ್ವ್ಯಾಧಿಭಿಶ್ಚೈವ ತಂ ದೇವಾ ಬ್ರಾಹ್ಮಣಂ ವಿದುಃ ॥ ೧೨ ॥

ಆಡಬೇಕು) ಮನಸ್ಸಿನಿಂದ ಪರಿಶುದ್ಧವೆಂದು ತಿಳಿದ ಕೆಲಸವನ್ನೇ ಮಾಡಬೇಕು. ಯಾವನೊಬ್ಬ ಹಿತೈಷಿಯು ಶೈತ್ಯೋಪಚಾರಕ್ಕಾಗಿ ಚಂದನದಿಂದ ಕೈಗಳನ್ನು ಲೇಪಿಸಿದರೂ, ಅಹಿತತೆಯಿಂದ ಬಾಚಿಯಿಂದ ಮತ್ತೊಬ್ಬನು ಕೊಚ್ಚಿದರೂ ಸಹ ಈ ವ್ಯಾಪಾರಗಳಿಂದ ತನಗೆ ಒಳ್ಳೆಯದೆಂದೂ, ಕೆಟ್ಟದ್ದೆಂದೂ ಯತಿಯಾದವನಿಗೆ ಭಾವನೆಯೇ ಬರಬಾರದು. (ಹಿತಾಹಿತರಲ್ಲಿಯೂ ಅವರಿಂದುಂಟಾದ ಸುಖದುಃಖ ಕಾರ್ಯಗಳಲ್ಲಿಯೂ ಸಮಬುದ್ಧಿ ಇರಬೇಕೆಂದು ತಾತ್ಪರ್ಯ.)

೧೦-೧೨ ಪ್ರಾಣಾಯಾಮದಿಂದ ಅಂತಃಕರಣದ ದೋಷಗಳನ್ನೂ, ಧಾರಣೆಯಿಂದ ವಾಸನಾದೋಷವನ್ನೂ, ಪ್ರತ್ಯಾಹಾರದಿಂದ ವಿಷಯಸಂಸರ್ಗವನ್ನೂ, ಧ್ಯಾನದಿಂದ ಜೀವನಲ್ಲಿರುವ ಕರ್ಮಾಧೀನ ಗುಣಗಳನ್ನೂ ಹೋಗಲಾಡಿಸಿಕೊಳ್ಳಬೇಕು. ಇಂದ್ರಿಯಾಧೀನವಾದ ತನ್ನ ಹಿತದಲ್ಲಿ ಆಶೆ ಇಲ್ಲದವನಾಗಿಯೂ, ಆತ್ಮೋತ್ಕರ್ಷವಿಲ್ಲದವನಾಗಿಯೂ, ಉತ್ತಮಾಧಮ ವಸ್ತುಗಳಲ್ಲಿ ಸಾಮ್ಯಭಾವನೆಯುಳ್ಳವನಾಗಿಯೂ, ಸರ್ವಪ್ರಾಣಿಗಳಲ್ಲಿಯೂ ಪ್ರೀತಿಯಿಂದ ಸಮಬುದ್ಧಿಯುಳ್ಳವನಾಗಿಯೂ ಇರುವ ಯತಿಯು ಪರಮಪದವನ್ನೇ ಹೊಂದುತ್ತಾನೆ. ಯಾವನು ಕರ್ಮಾಧೀನಗಳಾದ ಜನ್ಮಮರಣಗಳಿಂದಲೂ, ಆದಿವ್ಯಾಧಿಗಳಿಂದಲೂ ನಿರ್ವೇದ ಹೊಂದುತ್ತಾನೆಯೋ ಅವನೇ ಬ್ರಹ್ಮಪ್ರಾಪ್ತಿಗೆ ಅರ್ಹನೆಂದು ದೇವತೆಗಳು ಹೇಳುತ್ತಾರೆ.

ಅಶುಚಿತ್ವಂ ಶರೀರಸ್ಯ ಪ್ರಿಯಾಪ್ರಿಯ ವಿಪರ್ಯಯಂ ।
ಗರ್ಭವಾಸೇ ಚ ವಸತಿಂ ಪಶ್ಯನ್ಮುಚ್ಯತಿ ನಾನ್ಯಥಾ ॥ ೧೩ ॥

ಜನ್ಮಮೃತ್ಯೋಶ್ಚ ನಾನಂದಂ ನತ್ವಸಾರಮನರ್ಥಕಂ ।
ಭೋಕ್ತವ್ಯಮಿತಿ ನಿರ್ವಿಣ್ಣಃ ಪ್ರತ್ಯಹಂಮುಚ್ಯತೇ ವಚಃ ॥ ೧೪ ॥

ಏವಂ ವೈರಾಗ್ಯಮಾಸ್ಥಾಯ ನಿತ್ಯಂ ಧ್ಯಾನಪರಾಯಣಃ ।
ಚತುರ್ವಿಂಶತಿಕಂ ಲಂಘ್ಯ ಪ್ರಪಶ್ಯೇತ್ಪಂಚವಿಂಶಕಂ ॥ ೧೫ ॥

ಪೃಥಿವ್ಯಾಪಸ್ತಥಾ ತೇಜೋ ವಾಯುರಾಕಾಶಮೇವ ಚ ।
ಪಂಚೈತಾನಿ ವಿಜಾನೀಯಾ ನ್ಮಹಾಭೂತಾನಿ ಸರ್ವಶಃ ॥ ೧೬ ॥

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಬುದ್ಧೀಂದ್ರಿಯಾಣಿ ಜಾನೀಯಾ ತ್ಪಂಚೈವಾಸ್ಮಿಞ್ಛರೀರಕೇ ॥ ೧೭ ॥

೧೩–೧೫. ಶರೀರವು ಅಶುಚಿ ವಸ್ತುವೆಂಬುದನ್ನೂ, ವಸ್ತುಗಳ ವಿಷಯದಲ್ಲಿರುವ ಪ್ರಿಯತ್ವ ಮತ್ತು ಅಪ್ರಿಯತ್ವಗಳು ಅಸ್ಥಿರವೆಂಬುದನ್ನೂ, ದುಃಖಕರವಾದ ಗರ್ಭವಾಸವನ್ನೂ ವಿಚಾರಮಾಡಿ ಇವುಗಳಲ್ಲಿ ಜಿಹಾಸೆಯುಳ್ಳವನೇ ಮೋಕ್ಷಹೊಂದಲು ಅರ್ಹನಾಗುತ್ತಾನೆ. ಇಲ್ಲದಿದ್ದಲ್ಲಿ ಮೋಕ್ಷಕ್ಕೆ ಉಪಾಯವೇ ಇಲ್ಲ. ಜನ್ಮಮರಣಗಳು ದುಃಖಕರವೆಂದೂ, ನಿಸ್ಸಾರ ಮತ್ತು ನಿಷ್ಪ್ರಯೋಜನವೆಂದೂ, ಇವನ್ನು ಅನುಭವಿಸಬೇಕಾಗಿದೆಯೆಲ್ಲಾ ಎಂದು ವಿರಕ್ತಿಹೊಂದಿ ಇದೇ ಮಾತನ್ನೇ ಯಾವಾಗಲೂ ಆಡುತ್ತಾ ವೈರಾಗ್ಯಹೊಂದಿ ಆತ್ಮಾವಲೋಕನಕ್ಕಾಗಿ ನಿತ್ಯವೂ ಧ್ಯಾನದಲ್ಲಿ ಮಗ್ನನಾಗಿರಬೇಕು.

೧೬–೧೯. ಧ್ಯಾನದಿಂದ ತತ್ತ್ವಗಳಲ್ಲಿ ಇಪ್ಪತ್ತನಾಲ್ಕನೆಯವನಾದ ಜೀವಾತ್ಮನನ್ನು ಸಾಕ್ಷಾತ್ಕರಿಸಿ ಅವನಲ್ಲಿಯೂ ಅಂತರಾತ್ಮನಾಗಿರುವ ಪರಮಾತ್ಮನಲ್ಲಿ ನಿರತನಾಗಬೇಕು. ಭೂಮಿ, ಜಲ, ತೇಜಸ್ಸು, ವಾಯು, ಆಕಾಶವೆಂಬ ಐದು ಮಹಾಭೂತಗಳೆಂದು ತಿಳಿಯಬೇಕು ಕಿವಿ, ಕಣ್ಣು, ತ್ವಗಿಂದ್ರಿಯ, ನಾಲಗೆ, ಮೂಗು ಇವೈದೂ ಜ್ಞಾನೇಂದ್ರಿಯಗಳು. ಶಬ್ದ, ರೂಪ, ಸ್ಪರ್ಶ, ರಸ, ಗಂಧ ಇವು ಈ ಜ್ಞಾನೇಂದ್ರಿಯಗಳಿಗೆ ವಿಷಯಗಳು. ಕರ್ಮೇಂದ್ರಿಯಗಳೂ ಶರೀರದಲ್ಲಿ ಐದು ಇವೆ.

ಶಬ್ದೋ ರೂಪಂ ತಥಾ ಸ್ಪರ್ಶೋ ರಸೋ ಗಂಧಸ್ತಥೈವ ಚ ।
ಕರ್ಮೇಂದ್ರಿಯಾಣಿ ಪಂಚೈವ ನಿತ್ಯಮಸ್ಮಿಞ್ಛರೀರಕೇ ॥ ೧೮ ॥

ಮನೋ ಬುದ್ಧಿ ತಥೈವಾತ್ಮಾ ಹ್ಯವ್ಯಕ್ತಂ ಚ ತಥಾ ದ್ವಿಜಾಃ ।
ಇಂದ್ರಿಯೇಭ್ಯಃ ಪರಾಣೀಹ ಚತ್ವಾರಿ ಕಥಿತಾನಿ ತು ॥ ೧೯ ॥

ಚತುರ್ವಿಂಶತ್ಯಥೈತಾನಿ ಪುರುಷಃ ಪಂಚವಿಂಶಕಃ ।
ಯಂ ಜ್ಞಾತ್ವಾ ಪ್ರತಿಮುಚ್ಯಂತೇ ಯೇ ನರಾಃ ಶಾಂತಬುದ್ಧಯಃ ॥ ೨೦ ॥

ಗಂಧೋ ರಸಸ್ತಥಾ ವಾಯುಃ ಸ್ಪರ್ಶ ಶಬ್ದಸ್ತಥಾ ದ್ವಿಜಾಃ ।
ಏತೇ ಪಂಚಗುಣಾ ಭೂಮೇಃ ಸ್ಥೂಲಾ ಭೌಮೇಷು ದೃಶ್ಯತೇ ॥ ೨೧ ॥

ರಸೋ ರೂಪಂತಥಾ ಸ್ಪರ್ಶಃ ಶ್ಯಬ್ದಾಶ್ಚಾಂಬುಗುಣಾ ಮತಾಃ ।
ರೂಪಂ ಸ್ಪರ್ಶ ಸ್ತಥಾ ಶಬ್ದಃ ತೇಜಸಸ್ತು ಗುಣಾಃ ಸ್ಮೃತಾಃ ॥ ೨೨ ॥

ಸ್ಪರ್ಶಃ ಶಬ್ದಸ್ತಥಾ ವಾಯೋಃ ಶಬ್ದಶ್ಚ ನಭಸಸ್ತಥಾ ।
ಆಕಾಶಾಜ್ಜಾಯತೇ ಶಬ್ದೋ ವಾಯೋಃ ಸ್ಪರ್ಶಗುಣಸ್ತಥಾ ॥ ೨೩ ॥

ಈ ಇಂದ್ರಿಯಗಳಿಗೂ ಬೇರೆಯಾಗಿ ಮನಸ್ಸು, ಬುದ್ಧಿ, ಆತ್ಮ, ಅವ್ಯಕ್ತಗಳೂ ಇವೆ ಇವೆಲ್ಲವೂ ಸೇರಿ ಇಪ್ಪತ್ತನಾಲ್ಕಾಗುತ್ತವೆ. ಪುರುಷನು ಇಪ್ಪತ್ತೈದನೆಯವನಾಗುತ್ತಾನೆ.

೨೦–೨೩. ಇವನ ಸಾಕ್ಷಾತ್ಕಾರದಿಂದಲೇ ಶಾಂತಚಿತ್ತರಾದ ಮಹಾತ್ಮರು ಸಂಸಾರಬಂಧದಿಂದ ಬಿಡುಗಡೆಹೊಂದುತ್ತಾರೆ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಈ ಐದು ಗುಣಗಳು ಮಹಾಭೂತಗಳಲ್ಲೊಂದಾದ ಭೂಮಿಯಲ್ಲಿ ತೋರಿಬರುತ್ತವೆ. ರಸ, ರೂಪ, ಸ್ಪರ್ಶ, ಶಬ್ದ ಈ ನಾಲ್ಕು ಜಲದ ಗುಣಗಳು. ರೂಪ, ಸ್ಪರ್ಶ, ಶಬ್ದ ಈ ಮೂರೂ ತೇಜಸ್ಸಿನ ಗುಣಗಳು. ಸ್ಪರ್ಶ, ಶಬ್ದ ಇವು ವಾಯುವಿನಗುಣಗಳು. ಶಬ್ದ ಮಾತ್ರವೇ ಆಕಾಶದ ಗುಣ. ಶಬ್ದವು ಆಕಾಶದಿಂದಲೂ, ಸ್ಪರ್ಶವು ವಾಯುವಿನಿಂದಲೂ, ರೂಪವು ತೇಜಸ್ಸಿನಿಂದಲೂ, ರಸವು ನೀರಿನಿಂದಲೂ, ಗಂಧವು ಪೃಥಿವಿಗೆ ಸೇರಿದ್ದೆಂದೂ ಇಂದ್ರಿಯಾರ್ಥಗಳು ಪ್ರಸಿದ್ಧಿ ಹೊಂದಿವೆ.

ರೂಪಂ ತು ತೇಜಸಃ ಪ್ರೋಕ್ತೋ ರಸಶ್ಚಾಂಬುಗುಣೋಮತಃ ।
ಪಾರ್ಥಿವಂ ಗಂಧಮಿತ್ಯಾಹುರಿಂದ್ರಿಯಾರ್ಥಾಃ ಪ್ರಕೀರ್ತಿತಾಃ ॥ ೨೪ ॥

ಇಂದ್ರಿಯೇಭ್ಯಃ ಪರಾ ಅರ್ಥಾ ಅರ್ಥೇಭ್ಯಸ್ತು ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ ॥ ೨೫ ॥

ಮಹತಃ ಪರಮವ್ಯಕ್ತಂ ತ್ವವ್ಯಕ್ತಾತ್ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾಗತಿಃ ।
ಏತತ್ಪರತರಂ ಗುಹ್ಯ ಮೇತದಕ್ಷರ ಮುತ್ತಮಂ ॥ ೨೬ ॥

ಓಂಕಾರವಾಚಕಂ ಹ್ಯೇತದ್ಗುಣಾತೀತಂ ಸನಾತನಂ ।
ಅಶಬ್ದಮರಸಸ್ಪರ್ಶಮರೂಪಂ ಗಂಧವರ್ಜಿತಂ ॥ ೨೭ ॥

ನಿರ್ದುಃಖಮಸುಖಂ ದುಃಖಂ ತದ್ವಿಷ್ಣೋಃ ಪರಮಂ ಪದಂ ।
ವಾಲಾಗ್ರಶತಶೋ ಭಾಗಃ ಕಲ್ಪಿತಸ್ತು ಸಹಸ್ರಧಾ ॥ ೨೮ ॥

೨೪–೨೮. ಜಯಿಸತಕ್ಕ ವಸ್ತುಗಳಲ್ಲಿ ಇಂದ್ರಿಯಗಳಿಗಿಂತಲೂ ವಿಷಯಗಳ ಜಯವು ಉತ್ಕೃಷ್ಟ. ವಿಷಯಗಳಿಗಿಂತಲೂ ಮನಸ್ಸನ್ನು ಜಯಿಸುವಿಕೆಯು ಉತ್ಕೃಷ್ಟ ಮನೋಜಯಕ್ಕಿಂತಲೂ, ನಿಶ್ಚಯರೂಪವಾದ ಬುದ್ಧಿಜಯವು ಉತ್ಕೃಷ್ಟ, ಬುದ್ಧಿಗಿಂತಲೂ ಅಹಂಕಾರದ ಜಯವು ಉತ್ತಮ. ಅದಕ್ಕಿಂತಲೂ ಅವ್ಯಕ್ತವೆಂಬ ಪ್ರಕೃತಿಯ ಜಯವೂ ಅದಕ್ಕಿಂತಲೂ ಪುರುಷನ ವಶೀಕಾರವೆಂಬ ಜಯವು ಉತ್ಕೃಷ್ಟ. ಅದಕ್ಕಿಂತಲೂ ಮೇಲಿನ ವಸ್ತುವೊಂದಿಲ್ಲ. ಅದೇ ಉತ್ತಮವಾದ ಗಮ್ಯಸ್ಥಾನ, ಇದೇ ಉತ್ತಮವಾದ ರಹಸ್ಯ, ಅವಿನಾಶಿ, ಇದೇ ಓಂಕಾರದ ಅರ್ಥ. ಶಾಶ್ವತವಾಗಿಯೂ, ಸತ್ತ್ವಾದಿಗುಣತ್ರಯಾತೀತವಾಗಿಯೂ ಇರತಕ್ಕದ್ದು ಪ್ರಾಕೃತವಾದ ಶಬ್ದಸ್ಪರ್ಶಾದಿಗುಣಗಳಿಂದ ದೂರವಾಗಿಯೂ, ಕರ್ಮಾಧೀನ ಸುಖದುಃಖಗಳಿಂದ ದೂರವಾಗಿಯೂ ಇರುವ ವಿಷ್ಣುವೆಂಬ ಗಮ್ಯಸ್ಥಾನವೂ ಇದೇ ಆಗಿದೆ. ಕೂದಲಿನ ಪರಿಮಾಣದ ನೂರನೆಯ ಒಂದು ಭಾಗಕ್ಕೂ ಬಹಳ ಕಡಿಮೆಯಾದ ಅತಿ ಸೂಕ್ಷ್ಮ ಭಾಗವೇ ಜೀವನ ಪರಿಮಾಣವಾಗುತ್ತದೆ.

ತಸ್ಯಾಪಿ ಶತಶೋ ಭಾಗೋ ಜೀವ ಇತ್ಯಭಿಧೀಯತೇ ।
ಹೃದ್ಯರ್ಕಃ ಚಂದ್ರಮಾ ಮಧ್ಯೆ ಸೋಮಮಧ್ಯೇ ಹುತಾಶನಃ ॥ ೨೯ ॥

ತಸ್ಯ ಮಧ್ಯೇ ಸ್ಥಿತಂ ಸತ್ತ್ವಂ ಸತ್ತ್ವಮಧ್ಯೇ ಸ್ಥಿತೋಽಚ್ಯುತಃ ।
ಸ್ವದೇಹಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ॥ ೩೦ ॥

ಧ್ಯಾನನಿರ್ಮಥನಾಭ್ಯಾಸಾದ್ವಿಷ್ಣುಂ ಪಶ್ಯೇದ್ಧೃದಿ ಸ್ಥಿತಂ ।
ಏಷ ದೇವಸ್ತು ಮರ್ತ್ಯಾನಾಂ ವರ್ಣೈರೇವ ವಿಧೀಯತೇ ॥ ೩೧ ॥

ಅಜ್ಞಾನಪಟ ಸಂವೀತೈರಿಂದ್ರಿಯೈರ್ವಿಷಯೋಪ್ಸುಭಿಃ ।
ಏಷ ವೈ ಪುರುಷೋ ವಿಷ್ಣುರ್ವ್ಯಕ್ತಾವ್ಯಕ್ತಃ ಸನಾತನಃ ॥ ೩೨ ॥

ಏಷ ಧಾತಾ ವಿಧಾತಾ ಚ ಪ್ರಮಾಣೋ ನಿಷ್ಕಲಃ ಶಿವಃ ।
ದ್ವೇ ಬ್ರಹ್ಮಣೀ ವೇದಿತವ್ಯೇ ಶಾಬ್ದಂ ಬ್ರಹ್ಮಪರಂ ಚ ಯತ್ ॥ ೩೩ ॥

೨೯–೩೨. ಹೃದಯದಲ್ಲಿ ಸೂರ್ಯನೂ, ಅವನಲ್ಲಿ ಚಂದ್ರನೂ, ಅವನಲ್ಲಿ ಅಗ್ನಿಯೂ, ಅವನ ಮಧ್ಯದಲ್ಲಿ ಶುದ್ಧಸತ್ತ್ವವೂ, ಅದರ ಮಧ್ಯದಲ್ಲಿ ಅಚ್ಯುತನೂ ಇರುವರು (ಇಲ್ಲಿ ಚಂದ್ರಸೂರ್ಯಾದಿ ಲೋಕಗಳಮೇಲೆ ವಿಶಾಲವಾಗಿರುವ ಶುದ್ಧ ಸತ್ತ್ವದಲ್ಲಿ ಅಡಗಿರುವ ಅಪ್ರಾಕೃತ ಬ್ರಹ್ಮಸ್ವರೂಪವನ್ನು ದೇಹದಲ್ಲಿರುವ ಸೂರ್ಯ ಚಂದ್ರಾದಿಗಳಿಗೆ ನಿಯಾಮ್ಯವಾದ ವಸ್ತುಗಳ ರೂಪಣಕ್ರಮದಿಂದ ವಿವರಿಸಲಾಗಿದೆ.) ತನ್ನ ದೇಹವನ್ನು ಅರಣಿಯಂತೆಯೂ ಪ್ರಣವವನ್ನು ಉತ್ತರಾರಣಿಯಂತೆಯೂ ಧ್ಯಾನವೇ ನಿರ್ಮಥನರೂಪದಂತೆಯೂ ರೂಪಿಸಿ ಧ್ಯಾನದಿಂದ ಜೀವನನ್ನೂ ಅವನ ಅಂತರ್ಯಾಮಿಯಾದ ವಿಷ್ಣುವನ್ನೂ ಸಾಕ್ಷಾತ್ಕರಿಸಬೇಕು. ಅವ್ಯಕ್ತವಾಗಿಯೂ ಶಾಶ್ವತ ವಾಗಿಯೂ ಇರುವ ಆ ವಿಷ್ಣುಸ್ವರೂಪವು ಅಜ್ಞಾನವೆಂಬ ವಸ್ತ್ರದಿಂದ ಕೂಡಿರುವ ಇಂದ್ರಿಯಗಳಿಗೆ ವಿಷಯವಾಗುವುದಿಲ್ಲವಾದುದರಿಂದ ಮನುಷ್ಯನ ಆಕಾರವರ್ಣ ಗಳಂತೆಯೇ ಇರುವ ಆ ಪರಮಾತ್ಮನ ಮೂರ್ತಿಯನ್ನು ಉಪಾಸನೆ ಮಾಡಲು ಶಾಸ್ತ್ರದಲ್ಲಿ ಹೇಳಲಾಗಿದೆ.

೩೩–೩೪. ಎರಡು ಬ್ರಹ್ಮಸ್ವರೂಪಗಳು ತಿಳಿಯಲು ಅರ್ಹವಾಗುತ್ತದೆ. ಒಂದು ಪ್ರಣವವೆಂಬ ವಾಚಕವಾದ ಶಬ್ದಬ್ರಹ್ಮ. ಮತ್ತೊಂದು ಅದರಿಂದ ಬೋಧಿತ ವಾಗುವ ಬ್ರಹ್ಮ. ಪ್ರಣವವೆಂಬ ಶಬ್ದ ಬ್ರಹ್ಮದಲ್ಲಿ ಜೀವಪರಮಾತ್ಮರ ಸ್ವರೂಪ

ಶಾಬ್ದೇ ಬ್ರಹ್ಮಣೀ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ।
ಸೂಕ್ಷ್ಮಂ ನಿತ್ಯಮುಪಾಸೀತ ಶುಭಂ ಚ ಸತತಂ ದ್ವಿಜಾಃ ॥ ೩೪ ॥

ಸೂಕ್ಷ್ಮಸ್ಯೋಪಾಸನಾ ಚೈ್ರೇಷ್ಠಾಂ ಯಾತಿ ತೇಜೋಮಯೀಂ ಗತಿಂ ।
ತತ್ವಂ ವಹತಿ ವೈ ಬುದ್ಧಿಂ ಬುದ್ಧಿಸ್ತು ಪರಮಾಂ ಗತಿಂ ॥ ೩೫ ॥

ಗತಿರ್ವಹತಿ ಚಂದ್ರಾರ್ಕೌ ತಪಸಾ ಪರಮೇಷ್ಠಿನಃ ।
ತಯೋರ್ವಹತಿ ವೈ ಸತ್ವಂ ಸತ್ವಂ ಚ ವಹತಿ ಪ್ರಭುಂ ॥ ೩೬ ॥

ಪ್ರಭುರ್ವಹತಿ ಸೌಕ್ಷ್ಮ್ಯಂ ತು ಪರಮಾತ್ಮಾನಮಾತ್ಮನಃ ।
ತಯೋರ್ವೃತ್ತಿರಜಃ ಸತ್ತ್ವಂ ಸತ್ತ್ವಸ್ಯ ಪರಮಾ ಗತಿಃ ॥ ೩೭ ॥

ಸತ್ವಂ ವಹತಿ ಸೂಕ್ಷ್ಮತ್ವಾತ್ಪರಂ ನಾರಾಯಣಂ ಪ್ರಭುಂ ।
ಪರಮಾತ್ಮಾನಮಾಸಾದ್ಯ ಹರಿಂ ವೈಕುಂಠಮೀಶ್ವರಂ ।
ಅಮೃತತ್ವಾಯ ಕಲ್ಪೇತ ತತೋ ನೈವ ನಿವರ್ತತೇ ॥ ೩೮ ॥

ಸಂಬಂಧಾದಿಗಳನ್ನು ಚನ್ನಾಗಿತಿಳಿದಿರುವ ನಿಪುಣನಿಗೆ ಜೀವನಿಗೂ ನಿಯಾಮಕನಾಗಿ ಸರ್ವಾಂತರ್ಯಾಮಿಯಾಗಿರುವ ಪರಬ್ರಹ್ಮನ ಜ್ಞಾನವುಂಟಾಗುತ್ತದೆ. ಸೂಕ್ಷ್ಮ ವಾಗಿಯೂ ಶುಭಕರವಾಗಿಯೂ ಇರುವ ಪರಮಾತ್ಮನ ಉಪಾಸನವು ಗುಣಾಷ್ಟಕಾವಿರ್ಭಾವದಿಂದ ಸ್ವಸ್ವರೂಪಪ್ರಾಪ್ತಿಗೆ ಕಾರಣವಾಗುತ್ತದೆ.

೩೫–೪೦. ಸತ್ತ್ವಗುಣವುಳ್ಳ ಬುದ್ಧಿಯಿಂದ ಅರ್ಚಿರಾದಿಗತಿಯನ್ನು ಹೊಂದುತ್ತಾನೆ. ಆ ಗತಿಯೂ ಪರಮಾತ್ಮ ಸಂಕಲ್ಪಕ್ಕೆ ತಕ್ಕಂತೆ ಚಂದ್ರಸೂರ್ಯರನ್ನು ಅತಿಕ್ರಮಿಸುತ್ತದೆ. ಅದಕ್ಕೂ ಮೇಲೆ ಅವರಿಗೂ ಆಶ್ರಯವಾದ ಶುದ್ಧಸತ್ವಪಿದೆ ಅದೇ ಪರಮಾತ್ಮನನ್ನು ಹೊಂದಿದೆ ಸೂಕ್ಷ್ಮರೂಪವುಳ್ಳ ಆ ಪ್ರಭುವೇ ಎಲ್ಲಾ ಜೀವಾತ್ಮರಿಗೂ ಅಂತರ್ಯಾಮಿಯಾಗಿ ಪರಮಾತ್ಮನೆನಿಸುತ್ತಾನೆ. ರಜೋಮಿಶ್ರವಾದ ಸತ್ವಗುಣವು ಜೀವನಲ್ಲಿಯೂ ಶುದ್ಧಸತ್ವಗುಣವು ಪರಮಾತ್ಮನಲ್ಲಿಯೂ ಇದೆ. ಸೂಕ್ಷ್ಮವಾದ ಸತ್ವಗುಣವೇ ಪ್ರಭುವಾದ ನಾರಾಯಣನ ಪ್ರಾಪ್ತಿಗೆ ಸಾಧಕವಾಗುತ್ತದೆ. ಅಂತಹ ಪರಮಾತ್ಮನನ್ನು ಹೊಂದಿದವನು ಮುಕ್ತನಾಗಿ ಹಿಂತಿರುಗುವುದೇ ಇಲ್ಲ ಪಂಚೇಂದ್ರಿಯಗಳಿಂದ ಕೂಡಿದ ದೇಹವೆಂಬ ರಥದಿಂದ ಮನಸ್ಸಾರಥಿಯೊಡನೆ ಅರ್ಚಿರಾದಿಮಾರ್ಗದಿಂದ ಆ ಶುದ್ಧಸತ್ವವೆಂಬ ಅಪ್ರಾಕೃತಲೋಕವನ್ನು ಹೊಂದ

ದಶಾರ್ಧಯುಕ್ತೇನ ರಥೇನ ಯುಕ್ತೋ
ಮನೋಽನುಗೇನಾರ್ಯಪಥಾನುವರ್ತಿನಾ ।
ತಂಚೇದ್ರಥಂ ನಾಪವಹಂತಿ ವಾಜಿನ
ಸ್ತಥಾಗತಂ ನೈವಜಯತ್ಯಶಕ್ತಃ ॥ ೩೯ ॥

ಅಣೋ ರಣೀಯಾನ್ಮಹತೋ ಮಹೀಯಾನ್
ಆತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತೇಜೋಮಯಂ ಪಶ್ಯತಿ ವೀತಶೋಕೋ
ಧಾತುಃ ಪ್ರಸಾದಾನ್ಮಹಿಮಾನಮಾತ್ಮನಃ ॥ ೪೦ ॥

ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್ ।
ಯಂ ವೈ ವಿದಿತ್ವಾ ನ ಬಿಭೇತಿ ಮೃತ್ಯೋ
ರ್ನಾನ್ಯಃ ಪಂಥಾ ವಿದ್ಯತೇಽಯನಾಯ ॥ ೪೧ ॥

ಬೇಕು. ಇಂದ್ರಿಯಾಶ್ವಗಳೂ ಮನಸ್ಸಾರಥಿಯೂ ಯಾವನಿಗೆ ಅಧೀನವಾಗಿರು ವುದಿಲ್ಲವೋ. ಅವನು ಈ ಕಾರ್ಯದಲ್ಲಿ ಅಶಕ್ತನೇ ಆಗುತ್ತಾನೆ. ಅತ್ಯಂತ ಅಣು ವಾಗಿಯೂ, ಅತ್ಯಂತ ಮಹತ್ತಾಗಿಯೂ ಇರುವ ಪರಮಾತ್ಮನು ಜೀವನ ಹೃದಯ ಗುಹೆಯಲ್ಲಿ ಇಡಲ್ಪಟ್ಟಿರುವನು. ತೇಜೋರೂಪನಾದ ಆ ಆತ್ಮನನ್ನು ಅವನ ಅನು ಗ್ರಹದಿಂದಲೇ ನೋಡಿದವನು ಸರ್ವಶೋಕಗಳಿಂದಲೂ ಮುಕ್ತನಾಗಿ ಸುಖಿ ಯಾಗುತ್ತಾನೆ.

೪೧-೪೪. ಪ್ರಕೃತಿಮಂಡಲವನ್ನೂ ಅತಿಕ್ರಮಿಸಿರುವ ಅಪ್ರಾಕೃತಲೋಕದಲ್ಲಿ ಸೂರ್ಯನಂತೆ ಜ್ವಲಿಸುವ ದಿವ್ಯಮಂಗಳ ವಿಗ್ರಹದಿಂದ ಕೂಡಿರುವ ಈ ಮಹಾ ಪುರುಷರನ್ನು ನಾನು ತಿಳಿದಿದ್ದೇನೆ. ಅವನನ್ನು ತಿಳಿದವನು ಜನ್ಮಮರಣಗಳೆಂಬ ಮೃತ್ಯುಗಳಿಗೆ ಭಯಪಡುವುದೇ ಇಲ್ಲ. ಭಕ್ತಿರೂಪವಾದ ಅವನ ಅಪರೋಕ್ಷಜ್ಞಾನ ಹೊರತು ಅವನ ಪ್ರಾಪ್ತಿಗೆ ಬೇರೆಮಾರ್ಗವಿಲ್ಲ. ಚೇತನಾಚೇತನವಿಶಿಷ್ಟವಾದ ಆತ್ಮ

ಏಕೋ ಹ್ಯಾತ್ಮಾ ಮಹಿಮಾ ಬ್ರಾಹ್ಮಣಸ್ಯ
ಸ್ವಕರ್ಮಣಾ ವೈ ಜಾಯತೇಽಸೌ ಕನೀಯಾನ್ ।
ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್
ಸೌಕ್ಷ್ಮ್ಯಾನ್ಮಹತ್ತ್ವಾಚ್ಚ ತತಶ್ಚ ನಾನ್ಯಃ ॥ ೪೨ ॥

ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕ-
ಸ್ತೇನೇದಂ ಪೂರ್ಣಂ ಪುರುಷೇಣ ಸರ್ವಂ ।
ಸುಸ್ವಾದುಪರ್ಣಃ ಸುಚ್ಛಾಯೋ ದೃಶ್ಯತೇ
ಸ ವೃಕ್ಷಃ ಪರಿಷಸ್ವಜಾತೇ ತಯೋರನ್ಯಃ ಪಿಪ್ಪಲಂ
ನಾಮ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥ ೪೩ ॥

ವಸ್ತುವು ಒಂದೇ. ಇಂತಹ ಬ್ರಹ್ಮವಸ್ತುವೇ ತನ್ನಲ್ಲಿ ಅಡಗಿರುವ ಚೇತನರೆಂಬ ಜೀವ ವರ್ಗವನ್ನು ಅವರವರ ಕರ್ಮಕ್ಕೆ ಅನುಗುಣವಾಗಿ ಜೀವಭಾವಹೊಂದಿ ಸಂಕುಚಿತ ಜ್ಞಾನರನ್ನಾಗಿ ಮಾಡುತ್ತದೆ. ಆದುದರಿಂದ ಈ ಜೀವರುಗಳಿಗಿಂತ ಬೇರೆಯಾಗಿಯೂ ಉತ್ಕೃಷ್ಟವಾಗಿಯೂ ಇದ್ದು ಸೂಕ್ಷ್ಮದಿಂದ ಅಂತರ್ಯಾಮಿಯಾಗಿಯೂ ಬೃಹದ್ರೂಪಿಯಾಗಿಯೂಇದ್ದುಎಲ್ಲವನ್ನೂ ವ್ಯಾಪಿಸತಕ್ಕವನು ಪರಮಾತ್ಮನೇಹೊರತು ಮತ್ತೊಂದು ವಸ್ತುವಿಲ್ಲ. ವೃಕ್ಷವು ಆಕಾಶಭಾಗವನ್ನು ವ್ಯಾಪಿಸುವಂತೆ ಅಪ್ರಾಕೃತ ಲೋಕದಲ್ಲಿರುವ ಈ ಮಹಾಪುರುಷನೇ ಎಲ್ಲವನ್ನೂ ವ್ಯಾಪಿಸಿ ನಿಂತಿದ್ದಾನೆ. ಅವನಿಂದಲೇ ಸರ್ವವೂ ಪೂರ್ಣವಾಗಿದೆ. ಕರ್ಮಫಲವೆಂಬ ಫಲಗಳಿಂದಲೂ ಸುಕೃತಗಳೆಂಬ ಎಲೆ ಮತ್ತು ನೆರಳಿನಿಂದಲೂ ಕೂಡಿರುವ ದೇಹವೆಂಬ ವೃಕ್ಷದಲ್ಲಿ ಜೀವಪರಮಾತ್ಮರಿಬ್ಬರೂ ಆಶ್ರಯ ಹೊಂದಿದ್ದಾರೆ. ಅವರಲ್ಲೊಬ್ಬನಾದ ಜೀವನು ಕರ್ಮಫಲಗಳನ್ನು ಭುಂಜಿಸುತ್ತಾನೆ. ಮತ್ತೊಬ್ಬನಾದ ಪರಮಾತ್ಮನು ಅದನ್ನು ಭುಂಜಿಸದೇ ಪ್ರಕಾಶಿಸುತ್ತಾ ಜೀವನಿಗೆ ನಿಯಾಮಕನಾಗಿ ನಿಂತಿರುವನು. ನಿತ್ಯತೃಪ್ತನಾಗಿಯೂ, ಅಮೃತಸ್ವರೂಪನಾಗಿಯೂ, ಸ್ವಸಂಕಲ್ಪಾನು ಗುಣಾವಿರ್ಭಾವನಾಗಿಯೂ ಇರುವ ಆ ಪರಮಾತ್ಮನಿಗೆ ಸ್ವಸ್ವರೂಪಾನಂದದಿಂದ ತೃಪ್ತನಾಗಿರುವುದರಿಂದ ದೇಹದಲ್ಲಿದ್ದು ಅವನಿಗೆ ಆಗಬೇಕಾದುದೇನೂ

ಅಕಾಮಧೀರಮೃತಃ ಸ್ವಯಂಭೂ ರಸೇನ
ತೃಪ್ತೋ ನ ಚ ಕಶ್ಚಿದ್ಪ್ರಮಾಣಾಂ ।
ಪರೇಣ ನಾಕಂ ನಾಪತಿರ್ನ ಗೃಹಾಯ
ವಿಭ್ರಾಜತೇ ತಂ ನಿಯತಾ ವಿಂಶತಿ ॥ ೪೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಯತಿಧರ್ಮ
ವರ್ಣನೋ ನಾಮ
ಚತ್ವಾರಿಂಶದಧಿಕ ತ್ರಿಶತತಮೋऽಧ್ಯಾಯಃ

ಇಲ್ಲ, ಜೀವಾನುಗ್ರಹ ಮಾತ್ರವೇ ಫಲ. ಸ್ವರ್ಗಾದಿ ಲೋಕಗಳಿಗಿಂತಲೂ ಮೇಲೆ ಅಪ್ರಾಕೃತಲೋಕದಲ್ಲಿ ಪ್ರಕಾಶಿಸುವ ಆ ಮಹಾತ್ಮನನ್ನು ಗೃಹಕ್ಷೇತ್ರಾದಿ ಪ್ರಕೃತಿ ಸಂಸರ್ಗವನ್ನು ತೊರೆದು ಏಕಾಂತಭಾವನೆಯಿಂದ ಆಶ್ರಯಿಸಿದವರು ಮಾತ್ರ ಹೊಂದಲು ಅರ್ಹರಾಗುತ್ತಾರೆ[1].

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಯತಿ
ಧರ್ಮವರ್ಣನವೆಂಬ ಮುನ್ನೂರ ನಲವತ್ತನೆಯ
ಅಧ್ಯಾಯ ಮುಗಿದುದು.

---

1 ಈ ಅಧ್ಯಾಯದ ಕೊನೆಯಲ್ಲಿರುವ ಹತ್ತಾರು ಶ್ಲೋಕಗಳು ಭಗವದ್ಗೀತೆ ಮತ್ತು ಉಪನಿಷ ದ್ವಾಕ್ಯಗಳ ಸಂಕಲನ ರೂಪದಲ್ಲಿವೆ. ಗಂಭೀರ ಮತ್ತು ವಿಶಾಲವಾದ ವೇದಾನ್ತರಹಸ್ಯಾರ್ಥಗಳಲ್ಲಿ ಸೇರಿರುವ ಈ ಶ್ಲೋಕಗಳಿಗೂ ಅನುವಾದವನ್ನು ಇಲ್ಲಿ ಬಹು ಸಂಗ್ರಹದಿಂದ ಬರೆಯಲಾಗಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ವರ್ಣಾನಾಮಾಶ್ರಮಾಣಾಂ ಚ ಪ್ರೋಕ್ತಾ ಧರ್ಮಾಸ್ತ್ವಯಾನಘ ।
ರಹಸ್ಯ ಭೂತಾ ಯೇ ಧರ್ಮಾ ಯೇ ಚ ಸ್ವಲ್ಪಾ ಮಹಾಫಲಾಃ ॥ ೧ ॥

ಯೇಭ್ಯಶ್ಚಾಭ್ಯಧಿಕಂ ನಾಸ್ತಿ ಸರ್ವೇಷಾಂ ತು ಸಮಾಶ್ರಯೇ ।
ತಾನ್ಧರ್ಮಾನ್ಕಥಯಸ್ವಾದ್ಯ ಸರ್ವೇಷಾಂ ವಿನತಿರ್ದ್ವಿಜ ॥ ೨ ॥

॥ ಹಂಸ ಉವಾಚ ॥

ಆಶ್ರಿತ್ಯ ದೇವದೇವೇಶಂ ಜಗದ್ಯೋನಿಂ ಜಗದ್ಗುರುಂ ।
ವಿಷ್ಣುಂ ಜಿಷ್ಣುಂ ಹರಿಂ ಕೃಷ್ಣಂ ಕೃತಾ ಧರ್ಮಾ ಮಹಾಫಲಾಃ ॥ ೩ ॥

ಮುನ್ನೂರ ನಲವತ್ತೊಂದನೆಯ ಅಧ್ಯಾಯ.

೧–೨. ಹಂಸವು ಹೇಳುತ್ತದೆ:—ಎಲೈ ಪುಣ್ಯಮೂರ್ತಿಯೇ, ವರ್ಣಗಳ ಮತ್ತು ಆಶ್ರಮಗಳ ಧರ್ಮಗಳನ್ನೆಲ್ಲಾ ನೀನು ಹೇಳಿದ್ದೀಯೆ. ಯಾವ ಧರ್ಮಗಳು ಬಹು ರಹಸ್ಯವಾಗಿದ್ದು ಮುಖ್ಯವಾಗಿ ತಿಳಿಯಲು ಅರ್ಹಗಳೋ, ಅತ್ಯಲ್ಪವಾಗಿದ್ದರೂ ಫಲದಲ್ಲಿ ಮಹತ್ವವಿರುವುದೋ ಅಂತಹ ಧರ್ಮಗಳನ್ನೂ ಎಲ್ಲರೂ ಆಚರಿಸಲು ಅರ್ಹವಾಗಿದ್ದು ಅವಕ್ಕಿಂತಲೂ ಬೇರೆಯಾದ ಅಧಿಕಧರ್ಮವೇ ಇರುವುದಿಲ್ಲವೋ ಅಂತಹ ಮುಖ್ಯ ಧರ್ಮವನ್ನೂ ಕೊನೆಯಲ್ಲಿ ಹೇಳು. ನಿನಗೆ ಎಲ್ಲರ ನಮಸ್ಕಾರವೂ ಇದೆ.

೩–೫. ಇದಕ್ಕೆ ಉತ್ತರವಾಗಿ ಹಂಸವು ಹೇಳುತ್ತದೆ—ದೇವಾಧಿದೇವನೂ, ಜಗತ್ಕಾರಣನೂ, ಜಗದ್ಗುರುವೂ ಆಗಿರುವ ಸರ್ವವಿಜಯಿಯಾದ ವಿಷ್ಣು, ಹರಿ,

ಏತೇನಾಶ್ರಯತೇ ಯಸ್ಮಾತ್ತಸ್ಮಾತ್ಪಾತ್ರೇತಿ ಕೀರ್ತ್ಯತೇ ।
ಏತೇಷಾಂ ತ್ರಾಣದಸ್ತ್ವೇಕಃ ಸ ದೇವೋ ಮಧುಸೂದನಃ ॥ ೪ ॥

ಸ್ಮರಣಾತ್ಕೀರ್ತನಾದ್ಧ್ಯಾನಾ ನ್ನಮಸ್ಕಾರಾ ತ್ಪ್ರದಕ್ಷಿಣಾತ್ ।
ತಥಾಭಿಸ್ತವನಾದ್ಯಸ್ಯ ಮುಚ್ಯತೇ ಸರ್ವಕಿಲ್ಬಿಷೈಃ ॥ ೫ ॥

ಕೃತ್ವಾ ದೇವಗೃಹಂ ತಸ್ಯ ದೇವಸ್ಯ ಪರಮೇಷ್ಠಿನಃ ।
ರಾಜಸೂಯಾಶ್ವಮೇಧಾನಾಂ ಫಲೇನ ಸ ತು ಯುಜ್ಯತೇ ॥ ೬ ॥

ಸುರವೇಶ್ಮನಿ ಯಾವಂತಿ ದ್ವಿಜೇಂದ್ರಾಃ ಪರಮಾಣವಃ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ ೭ ॥

ಪ್ರಾಸಾದೇ ಮೃನ್ಮಯೇ ಪುಣ್ಯಂ ಮಯೈತತ್ಕಥಿತಂ ದ್ವಿಜಾಃ ।
ತಸ್ಮಾದ್ದಶಗುಣಂ ಪುಣ್ಯಂ ಕೃತಂ ದಂಡಮಯೇ ಭವೇತ್ ॥ ೮ ॥

ತತೋ ದಶಗುಣಂ ಪುಣ್ಯಂ ತಥಾ ಶೈಲಕೃತೇ ಭವೇತ್ ।
ತತೋ ದಶಗುಣಂ ಲೋಹೇ ತಾಮ್ರೇ ಶತಗುಣಂ ತತಃ ॥ ೯ ॥

ಕೃಷ್ಣನಾಮಗಳಿಂದ ನಿರ್ದೇಶ ಹೊಂದಿರುವ ಪರಮಾತ್ಮನನ್ನು ಆಶ್ರಯಿಸಿ ಅವನ ಅನುಗ್ರಹಕ್ಕಾಗಿ ಮಾಡುವ ಸರ್ವವಿಧಧರ್ಮಗಳೂ ಮಹಾ ಫಲಗಳಾಗುತ್ತವೆ. ಸಂಸಾರ ಪಾತದಿಂದ ಭಕ್ತಜನರನ್ನು ರಕ್ಷಿಸುವವನು ಪಾತ್ರನಾಗುತ್ತಾನೆ. ಇಂತಹ ಸಂಸಾರಿಗಳಿಗೆ ರಕ್ಷಕನು ಆ ಮಧುಸೂದನನೊಬ್ಬನೇ ಮತ್ತಾರೂ ಇಲ್ಲ. ಅವನಸ್ಮರಣ, ಕೀರ್ತನ, ಧ್ಯಾನ, ನಮಸ್ಕಾರ, ಪ್ರದಕ್ಷಿಣ, ಸ್ತೋತ್ರ ಇವುಗಳಿಂದ ಭಕ್ತನು ಸರ್ವ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ.

೬-೧೦. ಅವನಿಗೆ ದೇವಗೃಹವನ್ನು ನಿರ್ಮಾಣಮಾಡಿದವನು ರಾಜಸೂಯಾಶ್ವಮೇಧಗಳ ಫಲವನ್ನೇ ಹೊಂದುತ್ತಾನೆ. ಆ ದೇವಗೃಹದ ಪರಮಾಣುಗಳ ಸಮಸಂಖ್ಯೆಯ ವರ್ಷಗಳವರೆಗೂ ಸ್ವರ್ಗದಲ್ಲಿ ಪೂಜ್ಯನಾಗುತ್ತಾನೆ. ಮಣ್ಣಿನಿಂದ ಪ್ರಾಸಾದ ವಿಗ್ರಹಾದಿಗಳನ್ನು ನಿರ್ಮಿಸಿದವನಿಗೆ ಈಗ ನಾನು ಹೇಳಿರುವ ಫಲ. ಕಾಷ್ಠಾದಿಗಳಿಂದ ಮಾಡಿದರೆ ಇದಕ್ಕೆ ಹತ್ತರಷ್ಟು, ಕಲ್ಲಿನಿಂದ ಮಾಡಿದಲ್ಲಿ ಅದಕ್ಕಿಂತಲೂ ಹತ್ತರಷ್ಟು, ಲೋಹ ಮತ್ತು ತಾಮ್ರದಿಂದ ಮಾಡಿದಲ್ಲಿ ಅದಕ್ಕಿಂತಲೂ

ಸಹಸ್ರಗುಣಿತಂ ರೌಪ್ಯೇ ತಸ್ಮಾತ್ಫಲಮುಪಾಶ್ನುತೇ ।
ತತಃ ಶತಸಹಸ್ರಂ ಚ ಸೌವರ್ಣೇ ದ್ವಿಜಸತ್ತಮಾಃ ॥ ೧೦ ॥

ಅನಂತಫಲಮಾಪ್ನೋತಿ ರತ್ನಚಿತ್ರೇ ಮನೋಹರೇ ।
ಪ್ರತಿಮಾಂ ಕಾರಯಿತ್ವಾತು ದೇವದೇವಸ್ಯ ಚಕ್ರಿಣಃ ॥ ೧೧ ॥

ನ ದುರ್ಗತಿಮವಾಪ್ನೋತಿ ವಿಷ್ಣುಲೋಕಂ ಚ ಗಚ್ಛತಿ ।
ದೇವಸ್ಯ ಪ್ರತಿಮಾಯಾಂ ತು ಯಾವಂತಃ ಪರಮಾಣವಃ ॥ ೧೨ ॥

ತಾವದ್ವರ್ಷಸಹಸ್ರಾಣಿ ವಿಷ್ಣುಲೋಕೇ ಮಹೀಯತೇ ।
ಪ್ರಾಸಾದವತ್ತಥಾ ತಸ್ಯ ಫಲಸಂಪದುದಾಹೃತಾ ॥ ೧೩ ॥

ಉತ್ತರೋತ್ತರತೋ ದಿವ್ಯೈ ವಿನಾ ಪಕ್ವೇಷ್ಟಕೈರ್ದ್ವಿಜಾಃ ।
ಯಥೋಕ್ತವಿಧಿನಾ ದೇವಂ ಪ್ರತಿಷ್ಠಾಪ್ಯ ಜನಾರ್ದನಂ ॥ ೧೪ ॥

ಅಕ್ಷಯಂ ಲೋಕಮಾಪ್ನೋತಿ ವಿಷ್ಣೋರಮಿತತೇಜಸಃ ।
ಇಜ್ಯಾವಿಧಿಪುರಸ್ಕಾರಕೃತೇ ತತ್ರ ತಥಾ ಭುವಂ ॥ ೧೫ ॥

ಹತ್ತರಷ್ಟು, ಬೆಳ್ಳಿಯಿಂದ ಮಾಡಿದಲ್ಲಿ ಇದಕ್ಕಿಂತಲೂ ಸಾವಿರ ಪಾಲಿನಷ್ಟು, ಚಿನ್ನದಿಂದ ಮಾಡಿದಲ್ಲಿ ಇದಕ್ಕಿಂತಲೂ ಲಕ್ಷದಷ್ಟು ಫಲವು ಹೆಚ್ಚಾಗುತ್ತದೆ.

೧೧-೧೫. ರತ್ನಗಳಿಂದ ವಿಚಿತ್ರವಾಗಿ ನಿರ್ಮಿಸಿದವನಿಗೆ ಫಲವು ಅನಂತವಾಗುತ್ತದೆ. ದೇವಾಧಿಪತಿಯಾದ ಮಹಾವಿಷ್ಣುವಿನ ಪ್ರತಿಮೆಯನ್ನು ನಿರ್ಮಿಸಿದವನು ಯಾವಾಗಲೂ ದುರ್ಗತಿ ಹೊಂದುವುದೇ ಇಲ್ಲ ವಿಷ್ಣುಲೋಕವನ್ನೂ ಹೊಂದುತ್ತಾನೆ. ಆ ಪ್ರತಿಮೆಯಲ್ಲಿರುವ ಪರಮಾಣು ಸಂಖ್ಯೆಯ ವರ್ಷಗಳವರಿಗೂ ವಿಷ್ಣುಲೋಕದಲ್ಲಿ ಮಾನ್ಯನಾಗುತ್ತಾನೆ. ದಿವ್ಯವೇ ಮೊದಲಾದ ಪ್ರಾಸಾದಗಳನ್ನು ದೃಢವಾದ ಸುಟ್ಟ ಇಟ್ಟಿಗೆಗಳಿಂದ ಕಟ್ಟಿಸಿ ಅಲ್ಲಿ ಜನಾರ್ದನ ಮೂರ್ತಿಯನ್ನೂ ಯಥಾವಿಧಿಯಾಗಿ ಪ್ರತಿಷ್ಠೆಮಾಡಿದವನೂ ಸಹ ತನ್ನ ಕಾರ್ಯದ ಉತ್ಕೃಷ್ಟತೆಗೆ ತಕ್ಕಂತೆ ಉತ್ತರೋತ್ತರ ಫಲಗಳನ್ನು ಹೊಂದುವುದಲ್ಲದೆ ಅಕ್ಷಯವಾದ ವಿಷ್ಣುಲೋಕವನ್ನೂ ಹೊಂದುತ್ತಾನೆ ಪೂಜಾವಿಧಿಗಳಿಗೆ ಸಹಾಯಕವಾದ ಭೂಮಿಯನ್ನು ಏರ್ಪಡಿಸಿದವನೂ ವಿಷ್ಣುವಿನ ಅನುಚರನಾಗಿ ಅಲ್ಲಿಯೇ ಅಕ್ಷಯಸುಖಕ್ಕೆ ಭಾಗಿಯಾಗುತ್ತಾನೆ.

ತಸ್ಯೈವಾನುಚರೇಲ್ಲೋಕ ಸ್ತಸ್ಯೈ ವಾಪ್ನೋತಿ ಚಾಕ್ಷಯಂ ।
ಕರೋತಿ ದೇವಸ್ಪ್ರಸಾದಂ ಯಾವದ್ವಾರಂ ಸುಧಾಸಿತಂ ॥ ೧೬ ॥

ಜನ್ಮಾಂತರಾಣಿ ತಾವಂತಿ ಯಶಸ್ವೀ ಭುವಿ ಜಾಯತೇ ।
ಚಿತ್ರಂ ಲಕ್ಷಣಸಂಯುಕ್ತಂ ಕಾರಯಿತ್ವಾ ಹರೇರ್ಗೃಹಂ ॥ ೧೭ ॥

ಗಂಧರ್ವಲೋಕಮಾಪ್ನೋತಿ ಬಹೂನ್ಯಬ್ದಗಣಾನಿ ತು ।
ದತ್ವಾ ಚ ಗೀತಂ ಧರ್ಮಜ್ಞಾ ಗಂಧರ್ವೈಃ ಸಹ ಮೋದತೇ ॥ ೧೮ ॥

ಸ್ವಯಂ ಗೀತೇನ ಸಂಪೂಜ್ಯ ತಸ್ಯ ಚಾನುಚರೋ ಭವೇತ್ ।
ವಾದ್ಯಂ ದತ್ವಾ ತಥಾ ವಿಪ್ರಾ ಶಕ್ರಲೋಕಮವಾಪ್ನುಯಾತ್ ॥ ೧೯ ॥

ಸ್ವಯಂ ವಾದ್ಯೇನ ಸಂಪೂಜ್ಯ ತಸ್ಯೈವಾನುಚರೋ ಭವೇತ್ ।
ವಾದ್ಯಾನಾಮಪಿ ದೇವಸ್ಯ ತಂತ್ರೀವಾದ್ಯಂ ಸದಾಪ್ರಿಯಂ ॥ ೨೦ ॥

ತೇನ ಸಂಪೂಜ್ಯ ವರದಂ ಗಾಣಪತ್ಯಮವಾಪ್ನುಯಾತ್ ।
ನೃತ್ಯಂ ದತ್ವಾ ತಥಾಪ್ನೋತಿ ರುದ್ರಲೋಕಮಸಂಶಯಂ ॥ ೨೧ ॥

೧೬–೨೨. ದೇವಾಲಯದ ಬಾಗಿಲುಗಳಿಗೆ ಸುಣ್ಣವೇ ಮೊದಲಾದುವುಗಳಿಂದ ಅಲಂಕಾರಮಾಡಿದವನು. ಆ ಆಲಯದಲ್ಲಿ ಎಷ್ಟು ಬಾಗಿಲು ಇವೆಯೋ ಅಷ್ಟು ಜನ್ಮಗಳಲ್ಲಿ ಸುಖಿಯಾಗಿ ಬದುಕುತ್ತಾನೆ. ಆಲಯಗಳಲ್ಲಿ ಸಲಕ್ಷಣವಾದ ಚಿತ್ರಗಳನ್ನು ಬರೆಸಿದವನು ಗಂಧರ್ವರ ಲೋಕದಲ್ಲಿ ಬಹುವರ್ಷ ಸುಖಿಸುತ್ತಾನೆ. ಗೀತವನ್ನು ಮಾಡಿಸಿದವನೂ ಸಹ ಗಂಧರ್ವಲೋಕ ಹೊಂದುತ್ತಾನೆ. ತಾನಾಗಿಯೇ ಅಲ್ಲಿ ಗಾನಮಾಡಿದವನು ವಿಷ್ಣುವಿನ ಅನುಚರನೇ ಆಗುತ್ತಾನೆ. ವಾದ್ಯದಾನಮಾಡಿದವನು ಇಂದ್ರಲೋಕ ಹೊಂದುತ್ತಾನೆ. ತಾನಾಗಿ ವಾದ್ಯದಿಂದ ಪೂಜಿಸಿದಲ್ಲಿ ಅನುಚರನೇ ಆಗುತ್ತಾನೆ ಎಲ್ಲಾ ವಾದ್ಯಗಳಲ್ಲಿಯೂ ತಂತ್ರೀವಾದ್ಯವೇ ದೇವರಿಗೆ ಪ್ರಿಯ, ಅಂತಹ ವಾದ್ಯದಿಂದ ಪೂಜಿಸಿದವನು ಅವನ ಗಣಗಳಿಗೆ ಅಧಿಪತಿಯೇ ಆಗುತ್ತಾನೆ. ನೃತ್ಯದಿಂದ ಪೂಜಿಸಿದವನು ರುದ್ರಲೋಕ ಹೊಂದುತ್ತಾನೆ. ತಾನಾಗಿಯೇ ನೃತ್ಯದಿಂದ ಪೂಜಿಸಿದಲ್ಲಿ ಅವನ ಅನುಚರನಾಗುತ್ತಾನೆ. ಇಷ್ಟವಸ್ತುಗಳನ್ನು ಅರ್ಪಿಸಿದವನು

ಸ್ತ್ರಯಂ ನೃತ್ತೇನ ಸಂಪೂಜ್ಯ ತಸ್ಯೈವಾನುಚರೋ ಭವೇತ್ ।
ಪ್ರೇಕ್ಷಣೀಯ ಪ್ರದಾನೇನ ಶಕ್ರಲೋಕಮವಾಪ್ನುಯಾತ್ ॥ ೨೨ ॥

ಅಭ್ಯರ್ಚನಾಂ ಕಾರಯಿತ್ವಾ ಬ್ರಹ್ಮಲೋಕಂ ಪ್ರಪದ್ಯತೇ ।
ತೋಯೇನಾಭ್ಯುಕ್ಷಣಂ ಕೃತ್ವಾ ದೇವದೇವಾಜಿರೇ ನರಃ ॥ ೨೩ ॥

ಸರ್ವಪಾಪವಿನಿರ್ಮುಕ್ತೋ ವಾರುಣಂ ಲೋಕಮಶ್ನುತೇ ।
ಯಸ್ತು ಸಂಮಾರ್ಜನಂ ಕುರ್ಯಾದ್ದೇವದೇವಾಜಿರೇ ನರಃ ॥ ೨೪ ॥

ಸ ಪಾಪಜಂ ಮಲಂ ದೇಹಾದಪಾಮಾರ್ಜತಿ ತತ್ಪರಃ ।
ಕರೋತಿ ಪರಮಾಣೂನಾಂ ಯಾವತಾಮುಪಮಾರ್ಜನಂ ॥ ೨೫ ॥

ತಾವದ್ವರ್ಷಾಣಿ ನಾಕಸ್ಥಸ್ತ್ರಿದಶೈಃ ಸಹ ಮೋದತೇ ।
ಕೃತ್ವೋಪಲೇಪನಂ ವಿಷ್ಣೋ ಗೋಮಯೇನಾಲಯೇ ನರಃ ॥ ೨೬ ॥

ಗವಾಂ ಲೋಕಮವಾಪ್ನೋತಿ ಯತ್ರಯತ್ರಾಭಿಜಾಯತೇ ।
ಕೃತ್ವಾ ಚ ವಿವಿಧೈರ್ಗಂಧೈರ್ಗಂಧರ್ವೈಃ ಸಹ ಮೋದತೇ ॥ ೨೭ ॥

ಬಹೂನ್ಯಬ್ದಸಹಸ್ರಾಣಿ ಭೂಮಿಶೋಭಾಂ ಹರೇರ್ಗೃಹೇ ।
ಗಂಧೋದಕೇನ ಯಃ ಕುರ್ಯಾದ್ವಿಷ್ಣೋರಭ್ಯುಕ್ಷಣಂ ಗೃಹೇ ॥ ೨೮ ॥

ಇಂದ್ರಲೋಕವನ್ನೂ, ಹೆಚ್ಚಾದ ಪೂಜೆಮಾಡಿಸಿದವನು ಬ್ರಹ್ಮಲೋಕವನ್ನೂ ಹೊಂದುತ್ತಾರೆ.

೨೩-೨೮. ದೇವಾಲಯದಲ್ಲಿ ನೀರನ್ನು ಚಿಮಿಕಿಸಿ ಪರಿಷ್ಕಾರಮಾಡಿದವನು. ಎಲ್ಲಾ ಪಾಪಗಳಿಂದಲೂ ಮುಕ್ತನಾಗಿ ವರುಣಲೋಕವನ್ನೂ ಹೊಂದುತ್ತಾನೆ. ದೇವಗೃಹವನ್ನು ಗುಡಿಸಿದವನು ತನ್ನ ದೇಹದ ಪಾಪಮಲವನ್ನೂ ಹೋಗಲಾಡಿಸಿ ಕೊಳ್ಳುತ್ತಾನೆ. ಎಷ್ಟು ಧೂಳಿಗಳನ್ನು ಗುಡಿಸುವುದರಿಂದ ಹೋಗಲಾಡಿಸುತ್ತಾನೆಯೋ ಅಷ್ಟು ವರ್ಷ ಸ್ವರ್ಗದಲ್ಲಿ ದೇವತೆಗಳಿಗೆ ಮಾನ್ಯನಾಗುತ್ತಾನೆ. ಸಗಣಿಯಿಂದ ಸಾರಿಸಿದವನು ಗೋಲೋಕ ಹೊಂದುತ್ತಾನೆ. ಸುಗಂಧ ವಸ್ತುಗಳಿಂದ ದೇವಗೃಹದಲ್ಲಿ ಒಳ್ಳೆಯ ವಾಸನೆಯುಂಟುಮಾಡಿದವನೂ, ಭೂಮಿಯನ್ನು ಪರಿಷ್ಕರಿಸಿದವನೂ, ಆಲಯದಲ್ಲಿ ಗಂಧೋದಕದಿಂದ ಸೇಚನೆಮಾಡಿದವನೂ ಸಹ ಹತ್ತುಸಾವಿರ ವರ್ಷ ಪರ್ಯಂತ ಗಂಧರ್ವಲೋಕದಲ್ಲಿ ಸುಖಿಸುತ್ತಾರೆ.

ದಶವರ್ಷಸಹಸ್ರಾಣಿ ಗಂಧರ್ವೈಃ ಸಹ ಮೋದತೇ ।
ದತ್ತ್ವೋಪಕಾರಂ ಕುಸುಮೈರ್ಗಂಧರ್ವತ್ವಮವಾಪ್ನುಯಾತ್ ॥ ೨೯ ॥

ಪುಷ್ಪತುಲ್ಯಾನಿ ವರ್ಷಾಣಿ ದಿವ್ಯಾಭರಣರೂಪವಾನ್ ।
ಕೃತ್ವಾ ಶೀರ್ಣಸ್ಯ ಸಂಸ್ಕಾರಂ ತಥಾ ದೇವೇಶವೇಶ್ಮನಿ ॥ ೩೦ ॥

ದ್ವಿಗುಣಂ ಫಲಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ।
ಸಾಯಂ ಪ್ರಾತಸ್ತಥಾ ಕೃತ್ವಾ ವಾಸುದೇವಸ್ಯ ಕೀರ್ತನಂ ॥ ೩೧ ॥

ಸರ್ವಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ।
ಶಯನಾದುತ್ಥಿತೋ ಯಸ್ತು ಕೀರ್ತಯೇನ್ಮಧುಸೂದನಂ ॥ ೩೨ ॥

ಕೀರ್ತನಾತ್ತಸ್ಯ ಪಾಪಾನಿ ನಾಶಮಾಯಾಂತ್ಯಶೇಷತಃ ।
ಅಹೋರಾತ್ರಸ್ಯ ಶಾಂತಿಶ್ಚ ತಥಾ ತೇನ ಕೃತಾ ಭವೇತ್ ॥ ೩೩ ॥

ಪ್ರಭವಶ್ಚಾಪ್ಯನರ್ಥಾನಾಂ ನಾಸ್ಯ ಸ್ಯಾತ್ತದಹರ್ನಿಶಂ ।
ಕೀರ್ತನಾದ್ದೇವದೇವಸ್ಯ ವಿಷ್ಣೋರಮಿತತೇಜಸಃ ॥ ೩೪ ॥

ಯಕ್ಷರಾಕ್ಷಸವೇತಾಲ ಭೂತಪ್ರೇತ ವಿನಾಯಕಾಃ ।
ಡಾಕಿನ್ಯೋ ವಿದ್ರವಂತಿಸ್ಮ ಯೇ ತಥಾ ಯೇ ಚ ಹಿಂಸಕಾಃ ॥ ೩೫ ॥

೨೯-೩೫. ಹರಿಯ ದೇವಾಲಯದಲ್ಲಿ ಹೂವುಗಳಿಂದ ಅಲಂಕಾರಮಾಡಿದವನು ಆ ಹೂಗಳ ಸಮಸಂಖ್ಯೆಯ ವರ್ಷಗಳವರಿಗೂ ದಿವ್ಯಾಭರಣಧಾರಿಯಾಗಿ ಗಂಧರ್ವನೇ ಆಗುತ್ತಾನೆ. ಜೀರ್ಣವಾಗಿರುವ ದೇವಾಲಯವನ್ನು ಪುನಃ ಸರಿಪಡಿಸಿ ಸ್ಥಿರಗೊಳಿಸಿದವನು ನಿರ್ಮಿಸಿದವನಿಗಿಂತಲೂ ದ್ವಿಗುಣವಾದ ಫಲಹೊಂದುತ್ತಾನೆ. ಇದು ನಿಶ್ಚಯ. ಪ್ರಾತಃಕಾಲದಲ್ಲಿಯೂ, ಸಾಯಂಕಾಲದಲ್ಲಿಯೂ ವಾಸುದೇವನ ನಾಮಕೀರ್ತನವು ಸರ್ವಪಾಪನಾಶಕವಾಗಿಯೂ ಸ್ವರ್ಗಪ್ರಾಪ್ತಿಗೆ ಸಾಧಕವಾಗಿಯೂ ಆಗುತ್ತದೆ. ಬೆಳಗ್ಗೆ ಎದ್ದೊಡನೆಯೇ ಮಧುಸೂದನನ ನಾಮಕೀರ್ತನೆ ಮಾಡುವವನ ಸರ್ವಪಾಪಗಳೂ ನಾಶಹೊಂದುತ್ತವೆ. ಹಿಂದಿನ ಅಹೋರಾತ್ರಗಳಲ್ಲಿ ಮಾಡಿದ ಪಾಪಗಳಿಗೆಲ್ಲ ನಾಶಕವಾಗಿಯೂ ಮುಂದಿನ ಅಹೋರಾತ್ರಗಳಲ್ಲಿ ಅಂತಹ ಅನರ್ಥಗಳ ಸಂಭವಕ್ಕೆ ಬಾಧಕವಾಗಿಯೂ ಆಗುತ್ತದೆ. ಈ ವಿಧವಾದ ನಾಮಕೀರ್ತನೆಯಿಂದ ಯಕ್ಷರಾಕ್ಷಸ ಭೇತಾಳಾದಿಗಳೂ ಹಿಂಸಕರೂ ಸಹ ಭಯದಿಂದ ಓಡುತ್ತಾರೆ

ಸರ್ವಾನರ್ಥಹರಂ ತಸ್ಯ ನಾಮಸಂಕೀರ್ತನಂ ಸ್ಮೃತಂ ।
ದೇವದೇವಸ್ಯ ನಾಮಾನಿ ಬಹೂನೀಹ ವಿದುರ್ಬುಧಾಃ ॥ ೩೬ ॥

ತೇಷಾಮನರ್ಥ ಶಮನಂ ಯದೇವೇಷ್ಟಂ ಮಹಾತ್ಮನಃ ।
ಏಕಂ ನಾಮ ಜಪೇದ್ಯಸ್ತು ದೇವದೇವಸ್ಯ ಚಕ್ರಿಣಃ ॥ ೩೭ ॥

ಸ ಚ ಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ।
ಹೃದಿಕೃತ್ವಾ ತಥಾ ಕಾಮಮಭೀಷ್ಟಂ ದ್ವಿಜಪುಂಗವಾಃ ॥ ೩೮ ॥

ಏಕಂ ನಾಮ ಜಪೇದ್ಯಸ್ತು ಸ ತಾನ್ಕಾಮಾನವಾಪ್ನುಯಾತ್ ।
ನಾಮಸಂಕೀರ್ತನಂ ಕೃತ್ವಾ ಕ್ಷುತಪ್ರಸ್ಖಲನಾದಿಷು ॥ ೩೯ ॥

ವಿಯೋಗಂ ಶೀಘ್ರಮಾಪ್ನೋತಿ ಸರ್ವಾನರ್ಥೈರಸಂಶಯಂ ।
ಕೃತ್ವಾ ನಾಮ ಸಹಸ್ರೇಣ ಸ್ತುತಿಂ ತಸ್ಯ ಮಹಾತ್ಮನಃ ॥ ೪೦ ॥

ವಿಯೋಗಮಾಪ್ನೋತಿ ನರಃ ಸರ್ವಾನರ್ಥೈರಸಂಶಯಂ ।
ಸಾಮ್ನಾ ಋಗ್ಭಿರ್ಯಜುರ್ಭಿಶ್ಚ ತಥೈವಾಥರ್ವಣೇನ ತು ॥ ೪೧ ॥

ಕೃತ್ವಾಭಿಷ್ಟವನಂ ತಸ್ಯ ದಿವ್ಯೈರಾರ್ಷೈಸ್ತಥಾ ಸ್ತವೈಃ ।
ಸರ್ವಾನರ್ಥವಿನಿರ್ಮುಕ್ತಃ ಕಾಮಾನಾಪ್ನೋತಿ ಶಾಶ್ವತಾನ್ ॥ ೪೨ ॥

೩೬-೪೨. ಸರ್ವಾನರ್ಥನಾಶಕಗಳಾದ ನಾಮಗಳು ಆ ದೇವಾಧಿದೇವನಿಗೆ ಅನೇಕ ಇವೆ. ಒಂದುನಾಮವನ್ನಾದರೂ ಭಕ್ತಿಯಿಂದ ಕೀರ್ತನೆಮಾಡಿದವನು ಪಾಪನಾಶವನ್ನೂ ಇಷ್ಟಪ್ರಾಪ್ತಿಯನ್ನೂ ಹೊಂದಿ ಸ್ವರ್ಗದಲ್ಲಿ ಸುಖಿಸುತ್ತಾನೆ. ತನ್ನ ಇಷ್ಟವನ್ನು ಮನಸ್ಸಿನಲ್ಲಿ ಭಾವಿಸಿ ಅದರ ಸಿದ್ಧಿಗಾಗಿ ಒಂದೊಂದುನಾಮವನ್ನಾದರೂ ಜಪಿಸಿದಲ್ಲಿ ಅದರ ಸಿದ್ಧಿಯನ್ನು ಅವನು ಹೊಂದಿಯೇ ಹೊಂದುತ್ತಾನೆ. ಸೀನುವಾಗಲೂ, ಎಡರಿದಾಗಲೂ ನಾಮಕೀರ್ತನ ಮಾಡಿದವರು ಅದರಿಂದಾಗ ಬಹುವಾದ ಅನರ್ಥಗಳಿಗೆ ಈಡಾಗುವುದಿಲ್ಲ. ಋಗ್ಯಜುಸ್ಸಾಮವೇದಗಳಿಂದಲೂ ದಿವ್ಯ ಮತ್ತು ಆರ್ಷವಾದ ಸ್ತೋತ್ರರೂಪದ ಪ್ರಬಂಧಗಳಿಂದಲೂ ಆಲಯದಲ್ಲಿ ಹರಿಯನ್ನು ಸ್ತೋತ್ರಮಾಡಿದವರು ಎಲ್ಲಾ ಅನರ್ಥಗಳಿಂದಲೂ ದೂರರಾಗಿ ಶಾಶ್ವತವಾದ ಇಷ್ಟಾರ್ಥಗಳನ್ನೂ ಹೊಂದುತ್ತಾರೆ.

ಅಭ್ರಷ್ಟಲಕ್ಷಣೈಃ ಕೃತ್ವಾ ಸ್ವಯಂ ಸ್ವರಚಿತಾಕ್ಷರೈಃ ।
ಸ್ತವಂ ಬ್ರಾಹ್ಮಣಶಾರ್ದೂಲಾ ಸ್ತಸ್ಮಾತ್ಕಾಮಾನವಾಪ್ನುಯಾತ್ ॥ ೪೩ ॥

ನ ವಿತ್ತದಾನನಿಚಯೈ ಬಹುಭಿರ್ಮಧುಸೂದನಃ ।
ತಥಾ ತೋಷಮುಪಾಯಾತಿ ಯಥಾ ಸ್ತೋತ್ರೈರ್ದ್ವಿಜೋತ್ತಮಾಃ ॥ ೪೪ ॥

ಸ್ತುತಿಃ ಪವಿತ್ರಾ ಮಂಗಲ್ಯಾ ಸರ್ವಪಾಪಪ್ರಣಾಶಿನೀ ।
ಸರ್ವಾನರ್ಥಪ್ರಶಮನೀ ದೇವದೇವಸ್ಯ ಕೀರ್ತಿತಾ । ೪೫ ॥

ತತ್ಕಥಾಶ್ರವಣಂ ಕೃತ್ವಾ ಸರ್ವಾನರ್ಥೈರ್ವಿಮುಚ್ಯತೇ ।
ತತ್‌ಸ್ತೋತ್ರಶ್ರವಣಾತ್ಪಾಪಂ ಜಹಾತಿ ಸಕಲಂ ತಥಾ ॥ ೪೬ ॥

ಯತ್ರ ವಿಷ್ಣುಕಥಾ ದಿವ್ಯಾಃ ಶ್ರುತಯಶ್ಚ ಸುಸಂಹಿತಾಃ ।
ತಚ್ಛ್ರೋತವ್ಯಂ ಮನುಷ್ಯೇಣ ಪರಮಂ ಪದಮಿಚ್ಛತಾ ॥ ೪೭ ॥

ವಿಷ್ಣೋರಾಯತನೇ ದತ್ತ್ವಾ ತತ್ಕಥಾಪುಸ್ತಕಂ ನರಃ ।
ಬ್ರಹ್ಮಲೋಕಮವಾಪ್ನೋತಿ ಸುಬಹೂನ್ ವತ್ಸರಾನ್ದ್ವಿಜಾಃ ॥ ೪೮ ॥

೪೩–೪೮. ಸಲಕ್ಷಣವಾದ ಸ್ತೋತ್ರವನ್ನು ತಾನೇ ರಚಿಸಿ ಅದರಿಂದ ಸ್ತೋತ್ರ ಮಾಡಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ. ಸ್ತೋತ್ರಗಳಿಂದ ಮಧುಸೂದನನು ತೃಪ್ತಿಪಡುವಂತೆ ಅನೇಕ ದ್ರವ್ಯದಾನದಿಂದಲೂ ತೃಪ್ತಿಪಡುವುದಿಲ್ಲ. ಆದುದರಿಂದ ಅವನ ಸ್ತುತಿಯೇ ಪರಮಪವಿತ್ರ, ಮಂಗಲಕರ, ಹಾಗೂ ಸರ್ವ ಪಾಪನಾಶಕ, ಸರ್ವಾನರ್ಥಗಳಿಗೂ ಪ್ರತೀಕಾರ, ಅವನ ಕಥಾಶ್ರವಣವೂ, ಸ್ತೋತ್ರದ ಶ್ರವಣವೂ ಸಹ ಸರ್ವಾನರ್ಥ ನಿವಾರಕವಾಗುತ್ತದೆ. ಎಲ್ಲಿ ವಿಷ್ಣುವಿನ ಕಥೆಯೂ, ಸಂಹಿತಾರೂಪವಾದ ಶ್ರುತಿಗಳೂ ನಡೆಸಲ್ಪಡುತ್ತಿವೆಯೋ ಅಲ್ಲಿ ಹೋಗಿ ಶ್ರೇಯಸ್ಕಾಮನಾದ ಮನುಷ್ಯನು ಅದನ್ನು ಕೇಳಿಯೇ ಕೇಳಬೇಕು. ಅಂತಹ ವಿಷ್ಣುಕಥೆಯ ಪುಸ್ತಕವನ್ನು ದೇವಾಲಯಕ್ಕೆ ಕೊಟ್ಟವನಿಗೂ ಬಹುವರ್ಷಪರ್ಯಂತ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ.

ಪುಸ್ತಕಾಂಶ್ಚ ತಥೈವಾನ್ಯಾನ್ಯಃ ಪ್ರದದ್ಯಾನ್ನರಸ್ತ್ವಿಹ ।
ಸಾರಸ್ವತಮವಾಪ್ನೋತಿ ಲೋಕಂ ಕಾಲಂ ತಥಾ ಬಹು ॥ ೪೯ ॥

ತತ್ಕಥಾಂ ಶ್ರಾವಯೇದ್ಯಸ್ತು ತದ್ಭಕ್ತಾನ್ಮಾನವೋತ್ತಮಃ ।
ಗೋದಾನಫಲಮಾಪ್ನೋತಿ ಸ ನರಸ್ತೇನ ಕರ್ಮಣಾ ॥ ೫೦ ॥

ಶ್ರಾವಕೇ ತು ಕೃತಂ ಪುಣ್ಯಂ ಸ ಫಲಾಂಶೇನ ಯುಜ್ಯತೇ ।
ಸುಕೃತಂ ವಾಚಕಂ ಕೃತ್ವಾ ದೇವಾಗಾರೇ ತಥಾ ನರಃ ॥ ೫೧ ॥

ವಿದ್ಯಾದಾನಫಲಂ ಪ್ರಾಪ್ಯ ಬ್ರಹ್ಮಲೋಕಂ ಪ್ರಪದ್ಯತೇ ।
ವಿಷ್ಣೋಃ ಶಂಖಪ್ರದಾನೇನ ನಿರ್ವಾಣಂ ಲೋಕಮಶ್ನುತೇ ॥ ೫೨ ॥

ಮಾನುಷ್ಯಮಾಸಾದ್ಯ ತಥಾ ಖ್ಯಾತಶಬ್ದಶ್ಚ ಜಾಯತೇ ।
ಘಂಟಾಪ್ರದಾನೇನ ತಥಾ ಮಹದ್ಯಶ ಉಪಾಶ್ನುತೇ ॥ ೫೩ ॥

ಸೌಭಾಗ್ಯಮಥವಾಪ್ನೋತಿ ಕಿಂಕಿಣೀಃ ಪ್ರದದನ್ ಹರೇಃ ।
ಕೂಟಾಗಾರಂ ತಥಾ ದತ್ವಾ ನಗರಾಧಿಪತಿರ್ಭವೇತ್ ॥ ೫೪ ॥

೪೯–೫೬ ಇತರ ಪುಸ್ತಕಗಳನ್ನು ಆಲಯಕ್ಕೆ ದಾನಮಾಡಿದವನೂ ಸಹ ಬಹುಕಾಲ ಸಾರಸ್ವತಲೋಕ ಹೊಂದುತ್ತಾನೆ. ವಿಷ್ಣುವಿನ ಕಥೆಯನ್ನು ಭಕ್ತರಿಗೆ ಶ್ರವಣಮಾಡಿಸುವವನು ಗೋದಾನಫಲವನ್ನು ಹೊಂದುತ್ತಾನೆ. ಮತ್ತು ದೇವಾಲಯದಲ್ಲಿ ತಾನಾಗಿ ಹೇಳಿ ಶ್ರವಣಮಾಡಿಸುವವನಿಗೆ ಶ್ರೋತೃಗಳ ಪುಣ್ಯದಲ್ಲಿಯೂ ಭಾಗವುಂಟು. ಅವನು ವಿದ್ಯಾದಾನದ ಫಲಹೊಂದಿ ಬ್ರಹ್ಮಲೋಕವನ್ನೂ ಸೇರುತ್ತಾನೆ. ಆಲಯದಲ್ಲಿ ವಿಷ್ಣುವಿಗೆ ಶಂಖವನ್ನು ದಾನಮಾಡಿದವನು ಸುಖಮಯವಾದ ಲೋಕಹೊಂದಿ ಮನುಷ್ಯನಾಗಿ ಹುಟ್ಟಿದರೂ ಪ್ರಸಿದ್ಧನಾಗುತ್ತಾನೆ. ಘಂಟೆಯ ದಾನದಿಂದ ಯಶಸ್ವಿಯಾಗುತ್ತಾನೆ ಸಣ್ಣ ಘಂಟೆಗಳನ್ನು ದಾನಮಾಡಿದವನು ಸೌಭಾಗ್ಯಶಾಲಿಯಾಗುತ್ತಾನೆ. ಭಕ್ತರಿಗೆ ಆಶ್ರಯವಾಗುವ ಗೃಹವನ್ನು ಅಥವಾ ಗೋಪುರದ ಮನೆಗಳನ್ನು ನಿರ್ಮಿಸಿದವನು ನಗರಾಧಿಪತಿಯಾಗಿ ಕೀರ್ತಿವಂತನೂ,

ಕೇತ್ವಾರ್ಯ ಯುಕ್ತಸ್ತಥಾ ಲೋಕೇ ಧಾರ್ಮಿಕಶ್ಚಾಪಿ ಜಾಯತೇ ।
ಬಹೂನ್ಯಬ್ದಸಹಸ್ರಾಣಿ ನಾಕಲೋಕೇ ಸ ಮೋದತೇ ॥ ೫೫ ॥

ಪತಾಕಾಂ ಯೋ ಪ್ರಯಚ್ಛಂತಿ ಕೂಟಾಗಾರೇ ಮನೋಹರಾಂ ।
ಸಂತ್ಯಜ್ಯ ಸಕಲಂ ಪಾಪಂ ವಾಯುಲೋಕೇ ವ್ರಜಂತಿ ತೇ ॥ ೫೬ ॥

ಪತಾಕಾಂ ಚ ಶುಭಾಂ ದತ್ತ್ವಾ ತಥಾ ಕೇಶವವೇಶ್ಮನಿ ।
ವಾಯುಲೋಕಮವಾಪ್ನೋತಿ ಬಹೂನ್ಯಬ್ದಗಣಾನಿ ತು ॥ ೫೭ ॥

ದೋಧೂಯತೇ ಯಥಾ ಸಾ ಚ ವಾಯುನಾ ಕೇಶವಾಲಯೇ ।
ತಥಾ ತಥಾ ಹಿ ಸಕಲಂ ದೇಹಾತ್ಪಾಪಂ ವಿಧೂಯತೇ ॥ ೫೮ ॥

ಯಥಾ ಯಥಾ ಚ ಸಾ ಶೋಭಾಂ ಕರೋತಿ ತ್ರಿದಶಾಲಯೇ ।
ತಥಾತಥಾ ಸ ಯಶಸಾ ಮಹತಾ ಭುವಿ ರಾಜತೇ ॥ ೫೯ ॥

ವಿತಾನಕಪ್ರದಾನೇನ ಸರ್ವಪಾಪೈಃ ಪ್ರಮುಚ್ಯತೇ ।
ಪರಾಂ ನಿರ್ವೃತಿಮಾಪ್ನೋತಿ ಯತ್ರಯತ್ರಾಭಿಜಾಯತೇ ॥ ೬೦ ॥

ಧಾರ್ಮಿಕನೂ ಆಗುತ್ತಾನೆ ಬಹುದಿನ ಸ್ವರ್ಗವಾಸಿಯೂ ಆಗುತ್ತಾನೆ. ಗೋಪುರದ ಮೇಲಿನ ಸಣ್ಣ ಸಣ್ಣ ಮನೆಗಳಲ್ಲಿ ಧ್ವಜವನ್ನು ಸ್ಥಾಪಿಸಿದವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗಿ ವಾಯುಲೋಕವನ್ನೂ ಹೊಂದುತ್ತಾನೆ.

೫೭–೬೩. ಕೇಶವಗೃಹದಲ್ಲಿ ಪತಾಕೆಗಳನ್ನು ರಚಿಸಿದವನು ಅನೇಕವರ್ಷ ಪರ್ಯಂತ ವಾಯುಲೋಕದಲ್ಲಿರುತ್ತಾನೆ. ಆ ಧ್ವಜವು ಹೇಗೆ ಹೇಗೆ ಗಾಳಿಯಿಂದ ಕಂಪಿಸುವುದೋ ಹಾಗೆಯೇ ಇವನ ದೇಹದಿಂದ ಪಾಪಗಳೂ ಕಂಪಿಸುತ್ತವೆ ಅದು ಹೇಗೆ ಹೇಗೆ ದೆ ವಾಲಯಕ್ಕೆ ಕಾಂತಿಯನ್ನುಂಟುಮಾಡುವುದೋ ಹಾಗೆಯೇ ಇವನೂ ಯಶಸ್ಸಿನಿಂದ ವಿರಾಜಿಸುತ್ತಾನೆ. ಮೇಲುಕಟ್ಟನ್ನು ಕೊಟ್ಟವನು ಪಾಪನಾಶಹೊಂದಿ ಮುಂದಿನ ಜನ್ಮಗಳಲೆಲ್ಲಾ ಸುಖಿಯಾಗಿರುತ್ತಾನೆ. ದೇವರ ಉತ್ಸವಾದ್ಯುಪಯೋಗ

ದತ್ತ್ವಾ ತು ದೇವಕಮಾರ್ಥಂ ನವಾಂ ವೇದೀಂ ದೃಢಾಂ ಶುಭಾಂ ।
ಪಾರ್ಥಿವತ್ವಮವಾಪ್ನೋತಿ ವೇದಿರ್ಹಿ ಪೃಥಿವೀ ಯತಃ ॥ ೬೧ ॥

ಯಃ ಕುಂಭಂ ದೇವಕಮಾರ್ಥಂ ನರೋ ದದ್ಯಾನ್ನವಂ ಶುಭಂ ।
ಸ ಲೋಕಮಾಪ್ನೋತಿ ನರೋ ವಾರುಣಂ ಗತಕಲ್ಮಷಃ ॥ ೬೨ ॥

ಚತುರಃ ಕಲಶಾನ್ದದ್ಯಾದ್ಯಸ್ತು ದೇವಗೃಹೇ ನರಃ ।
ಚತುಸ್ಸಮುದ್ರವಲಯಾಂ ಸ ಚ ಭುಂಕ್ತೇ ವಸುಂಧರಾಂ ॥ ೬೩ ॥

ದತ್ತ್ವೈಕಮಪಿ ವಿಪ್ರೇಂದ್ರಾಃ ಕಲಶಂ ಸುಸಮಾಹಿತಃ ।
ರಾಜಾ ಭವತಿ ಧರ್ಮಾತ್ಮಾ ಭೂತಲೇ ನಾತ್ರ ಸಂಶಯಃ ॥ ೬೪ ॥

ವಾರಿಧಾನೀಂ ತಥಾ ದತ್ತ್ವಾ ವಾರುಣಂ ಲೋಕಮಶ್ನುತೇ ।
ಕಮಂಡಲುಪ್ರದಾನೇನ ಗೋದಾನಫಲಮಾಪ್ನುಯಾತ್ ॥ ೬೫ ॥

ಉಶೀರ ಕೂರ್ಚಕಂ ದತ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ದತ್ತ್ವಾ ಗೋಪಾಲಕಾನ್ ವಿಪ್ರಾಃ ಸರ್ವಪಾಪಾನಪೋಹತಿ ॥ ೬೬ ॥

ಕ್ಕಾಗಿ ಹೊಸದಾಗಿ ಜಗುಲಿಯನ್ನು ಕಟ್ಟಿಸಿ ಕೊಟ್ಟವನು ರಾಜನಾಗುತ್ತಾನೆ. ದೇವ ಕಾರ್ಯಕ್ಕಾಗಿ ತಂಬಿಗೆಯನ್ನು ಕೊಟ್ಟವನು ನಿಷ್ಪಾಪನಾಗಿ ವರುಣಲೋಕ ಹೊಂದುತ್ತಾನೆ. ನಾಲ್ಕು ಕುಂಭಗಳನ್ನು ದಾನಮಾಡಿದವನು ಚತುಸ್ಸಮುದ್ರ ಪರ್ಯಂತವಾದ ಭೂಮಿಯನ್ನೇ ಭೋಗಿಸುತ್ತಾನೆ.

೬೪-೭೦. ಒಂದು ಕಲಸವನ್ನು ಕೊಟ್ಟವನೂ ಸಹ ಭೂಮಿಯಲ್ಲಿ ಧಾರ್ಮಿಕ ನಾದ ರಾಜನಾಗುತ್ತಾನೆ. ಹೂಜಿಗಳನ್ನು ದಾನಮಾಡಿದವನು ವರುಣಲೋಕ ಹೊಂದುತ್ತಾನೆ. ಕಮಂಡಲುವಿನ ದಾನದಿಂದ ಗೋದಾನಫಲವೇ ಲಭಿಸುತ್ತದೆ. ಲಾಮಂಚದ ಮುಂದಲಿಗೆಯನ್ನು ಕೊಡುವುದರಿಂದಲೂ ಸರ್ವಪಾಪನಾಶವಾಗುತ್ತದೆ ಚಾಮರದ ಮುಂದಲಿಗೆಯನ್ನು ಕೊಟ್ಟವನು ಐಶ್ವರ್ಯಹೊಂದುತ್ತಾನೆ. ಆಸನಗಳ ದಾನದಿಂದ ಎಲ್ಲಾ ಕಡೆಯಲ್ಲಿಯೂ ಮಾನ್ಯನಾಗುತ್ತಾನೆ. ಪಾದಪೀಠದ ದಾನದಿಂದ ಉತ್ತಮಗತಿಯು ಲಭಿಸುತ್ತದೆ. ಪಾದೋದಕ ದಾನದಿಂದ ಗೋದಾನಫಲವುಂಟಾ

ದತ್ತ್ವಾ ಚಾಮರಜಂ ಕೂರ್ಚಂ ಶ್ರಿಯಮಾಪ್ನೋತ್ಯನುತ್ತಮಾಂ ।
ಆಸನಾನಾಂ ಪ್ರದಾನೇನ ಸ್ಥಾನಂ ಸರ್ವತ್ರ ವಿಂದತಿ ॥ ೬೭ ॥

ಪಾದಪೀಠಪ್ರದಾನೇನ ಗತಿಮಾಪ್ನೋತ್ಯನುತ್ತಮಾಂ ।
ಗೋದಾನಫಲಮಾಪ್ನೋತಿ ತಥಾ ಪಾದ್ಯಪ್ರದೋ ನರಃ ॥ ೬೮ ॥

ಲೋಕೇಷು ಧ್ವಜಭೂತಃ ಸ್ಯಾದ್ವಿಷ್ಣೋರ್ದತ್ತ್ವಾ ತಥಾ ಧ್ವಜಂ ।
ಶಕ್ರಲೋಕಾನವಾಪ್ನೋತಿ ಬಹೂನ್ನ್ಯಬ್ಧ ಗಣಾನ್ನರಃ ॥ ೬೯ ॥

ನರಸ್ತ್ವಾಚಮನೀಯಸ್ಯ ದಾನಾದ್ಭವತಿ ನಿರ್ಮಲಃ ।
ಮುಖಲೇಪಪ್ರದಾನೇನ ಪರಂ ರೂಪಮಿಹಾಪ್ನುಯಾತ್ ॥ ೭೦ ॥

ದರ್ಪಣಸ್ಯ ಪ್ರದಾನೇನ ದರ್ಪವಾನ್ರೂಪವಾನ್ಭವೇತ್ ।
ದರ್ಶಯಿತ್ವಾ ತಥಾ ತಂ ಚ ಸುಭಗಸ್ತ್ವಭಿಜಾಯತೇ ॥ ೭೧ ॥

ಮಾತ್ರಾಂ ತು ಪರಿಚರ್ಯಾರ್ಥೇ ನಿವೇದ್ಯ ವಿಧಿವತ್ತಥಾ ।
ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ॥ ೭೨ ॥

ಧಾನ್ಯಾನಾಮಥ ಸಸ್ಯಾನಾಂ ಬೀಜಾನಾಮಥ ಧಾರ್ಮಿಕಃ ।
ಸುವರ್ಣರೌಪ್ಯಲೋಹಾನಾಂ ರೂಪಕಾಣಾಂ ತಥೈವ ಚ ॥ ೭೩ ॥

ಗುತ್ತದೆ. ಧ್ವಜವನ್ನು ದಾನವಮಾಡಿದವನು ತಾನೂ ಲೋಕದಲ್ಲಿ ಪ್ರಸಿದ್ಧಿಹೊಂದುತ್ತಾನೆ ಆಚಮನದಾನದಿಂದ ನಿರ್ಮಲನೂ, ಮುಖಲೇಪದಾನದಿಂದ ರೂಪವಂತನೂ ಆಗುತ್ತಾನೆ.

೭೧–೭೫. ಕನ್ನಡಿಯನ್ನು ದಾನಮಾಡಿದವನು ದರ್ಪವಂತನೂ, ರೂಪವಂತನೂ ಆಗುತ್ತಾನೆ. ವಿಷ್ಣುವಿಗೆ ಕನ್ನಡಿಯನ್ನು ತೋರಿಸಿ ಉಪಚರಿಸಿದವನು ರೂಪವಂತನಾಗಿ ಜನಿಸುತ್ತಾನೆ. ಉಪಚಾರಕ್ಕಾಗಿ ಮಾತ್ರಾದಾನಮಾಡಿದವನು ಸಮಗ್ರಯಜ್ಞದ ಫಲವನ್ನು ಹೊಂದುತ್ತಾನೆ. ದೇವಾಲಯಕ್ಕೆ ಧಾನ್ಯ, ಬೀಜಗಳು ಚಿನ್ನ, ಬೆಳ್ಳಿ, ಲೋಹ ಇವುಗಳ ಬೊಂಬೆಗಳು ಇವನ್ನು ದಾನಮಾಡಿದವನು ತನ್ನ ದಾನವನ್ನು ಹೊರಗೆ ಪ್ರಶಂಸೆಮಾಡಿಕೊಳ್ಳದಿದ್ದಲ್ಲಿ ಸಹಸ್ರಗುಣವಾದ ಫಲವನ್ನು

ಸಹಸ್ರಗುಣಮಾಪ್ನೋತಿ ಫಲಮನ್ಯತ್ರ ಕೀರ್ತನಾತ್ ।
ರೂಪ್ಯದೋ ರೂಪಮಾಪ್ನೋತಿ ವಿಶೇಷಾದ್ಯಪಿ ದುರ್ಲಭಂ ॥ ೭೪ ॥

ನರಃ ಸುವರ್ಣದಾನೇನ ಸರ್ವಾನ್ಕಾಮಾನುಪಾಶ್ನುತೇ ।
ನಡದಾನೇನ ಲೋಕೇಷು ಗ್ರಾಮಣ್ಯಮುಪಗಚ್ಛತಿ ॥ ೭೫ ॥

ಗವಾಂ ಲೋಕಮವಾಪ್ನೋತಿ ಧೇನುಂ ದತ್ವಾ ಪಯಸ್ವಿನೀಂ ।
ಅನಡುಹಃ ಪ್ರದಾನೇನ ದಶಧೇನುಫಲಂ ಲಭೇತ್ ॥ ೭೬ ॥

ಅಜಾವಿಮಹಿಷೋಷ್ಟ್ರಾಣಾಂ ದಾನಮಶ್ವತರಸ್ಯ ಚ ।
ಸಹಸ್ರಗುಣಿತಂ ದಾನಂ ಪೂರ್ವಂ ಪ್ರೋಕ್ತಂ ಪ್ರಕೀರ್ತಿತಂ ॥ ೭೭ ॥

ಆರಣ್ಯಮೃಗಜಾತೀನಾಂ ತಥಾ ದಾನಾಚ್ಚ ಪಕ್ಷಿಣಾಂ ।
ಅಗ್ನಿಷ್ಟೋಮಮವಾಪ್ನೋತಿ ಸುಭಗಶ್ಚ ತಥಾ ಭವೇತ್ ॥ ೭೮ ॥

ಮೃದ್ಭೋಗದಾನಾದ್ದೇವಸ್ಯ ಭೂಮಿಮಾಪ್ನೋತ್ಯನುತ್ತಮಾಂ ।
ದಂತಕಾಷ್ಠಪ್ರದಾನೇನ ತಥಾ ಸೌಭಾಗ್ಯಮರ್ಹತಿ ॥ ೭೯ ॥

ಹೊಂದುತ್ತಾನೆ. ಬೆಳ್ಳಿಯನ್ನು ದಾನಮಾಡಿದವನು ಇತರರಿಂದ ದುರ್ಲಭವಾದ ರೂಪಹೊಂದುತ್ತಾನೆ ಚಿನ್ನದ ದಾನದಿಂದ ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ. ಲಾಮಂಚದ ದಾನದಿಂದ ಜನಗಳಲ್ಲಿ ಮಾನ್ಯತೆ ಹೊಂದುತ್ತಾನೆ.

೭೬–೮೧. ಕರೆಯುವ ಹಸುವನ್ನು ದಾನಮಾಡಿದವನು ಗೋಲೋಕ ಹೊಂದುತ್ತಾನೆ. ಎತ್ತನ್ನು ದಾನಮಾಡಿದವನು ಹತ್ತು ಗೋದಾನದ ಫಲವನ್ನು ಹೊಂದುತ್ತಾನೆ. ಆಡು, ಕುರಿ, ಒಂಟೆ, ಹೇಸರಕತ್ತೆ ಇವನ್ನು ದಾನಮಾಡಿದವನು ಸಹಸ್ರಗುಣಫಲವನ್ನು ಹೊಂದುತ್ತಾನೆಂದು ಹಿಂದೆಯೇ ಹೇಳಲಾಗಿದೆ. ಆರಣ್ಯದ ಮೃಗಜಾತಿಗಳನ್ನೂ ಪಕ್ಷಿಗಳನ್ನೂ ದಾನಮಾಡಿದವರಿಗೆ ಅಗ್ನಿಷ್ಟೋಮದ ಫಲವು ಲಭಿಸುತ್ತದೆ. ಅವರು ಸುಂದರರೂ ಆಗುತ್ತಾರೆ. ಮೃತ್ತಿಸಿಂದ ಭೋಗದಾನ ಮಾಡಿದವರು ಭೂಮಿಯನ್ನು ಹೊಂದುತ್ತಾರೆ. ದಂತಕಾಷ್ಠಪ್ರದಾನದಿಂದ ಸೌಭಾಗ್ಯ ಹೊಂದುತ್ತಾರೆ, ಜೆಹ್ವಾನಿರ್ಲೇಖನ (ನಾಲಿಗೆಯನ್ನು ಉಜ್ಜಿತೊಳೆಯುವ ಚಿನ್ನ, ಬೆಳ್ಳಿಯ ಕಡ್ಡಿಗಳು) ವನ್ನು ದಾನಮಾಡಿದವನು ಆರೋಗನಾಗುತ್ತಾನೆ. ಹೊಂಬ

ಜಿಹ್ವಾ ನಿರ್ಲೇಖನಂ ದತ್ವಾ ವಿರೋಗಸ್ತ್ವಭಿಜಾಯತೇ ।
ಯುಕ್ತಂ ಪೀತಪತಾಕಾಭಿರ್ನಿವೇದ್ಯ ಗರುಡಧ್ವಜಂ ॥ ೮೦ ॥

ಕೇಶವಂ ಯೋ ದ್ವಿಜಶ್ರೇಷ್ಠಾಃ ಶಕ್ರಲೋಕೇ ಮಹೀಯತೇ ।
ಯುಕ್ತಂ ನೀಲಪತಾಕಾಭಿಸ್ತಾಲಂ ದತ್ವಾ ದ್ವಿಜೋತ್ತಮಾಃ ॥ ೮೧ ॥

ಅಸ್ಮಾತ್ ಲೋಕಾತ್ ಪರಿಭ್ರಷ್ಟೋ ವಿರೋಗಸ್ತ್ವಭಿಜಾಯತೇ ।
ಯುಕ್ತಂ ಶ್ವೇತಪತಾಕಾಭಿರಗಾರಂ ಯಃ ಪ್ರಯಚ್ಛತಿ ॥ ೮೨ ॥

ರಾಜಾ ಭವತಿ ಲೋಕೇಽಸ್ಮಿನ್ ಭುಕ್ತ್ವಾ ಲೋಕಾನ್ಪ್ರಚೇತಸಃ ।
ಯುಕ್ತಂ ರಕ್ತಪತಾಕಾಭಿರ್ದತ್ವಾ ಋಷ್ಯಮನುತ್ತಮಂ ॥ ೮೩ ॥

ಅಲಕಾಂ ಸಮವಾಪ್ನೋತಿ ತಥಾ ಪಾಪಕ್ಷಯಂ ನರಃ ।
ತೋರಣಂ ಕಾರಯೇದ್ಯಸ್ತು ದೇವದೇವಾಲಯೇ ನರಃ ॥ ೮೪ ॥

ಲೋಕೇಷು ತಸ್ಯ ದ್ವಾರಾಣಿ ಭವಂತಿ ವಿವೃತಾನಿ ತು ।
ಶಯನಾಸನದಾನೇನ ಸ್ಥಿತಿಂ ವಿಂದತಿ ಶಾಶ್ವತೀಂ ॥ ೮೫ ॥

ಣ್ಣದ ಪತಾಕೆಗಳಿಂದ ಕೂಡಿದ ಗರುಡಚಿಹ್ನೆಯುಳ್ಳ ಧ್ವಜವನ್ನು ಕೇಶವನಿಗೆ ಅರ್ಪಿಸಿದವನು ಇಂದ್ರಲೋಕದಲ್ಲಿ ಮಾನ್ಯನಾಗುತ್ತಾನೆ. ನೀಲವಾದ ಪತಾಕೆಗಳಿಂದ ಕೂಡಿದ ತಾಲಧ್ವಜವನ್ನು ಅರ್ಪಿಸಿದವನು ಜನ್ಮಾಂತರದಲ್ಲಿ ಆರೋಗನಾಗಿ ಹುಟ್ಟುತ್ತಾನೆ.

೮೨-೮೬. ಯಾವನು ಬಿಳಿಯ ಪತಾಕೆಗಳಿಂದ ಕೂಡಿದ ಅಂಗಳವನ್ನು ನಿರ್ಮಿಸಿ ಕೊಡುತ್ತಾನೆಯೋ ಅವನು ವರುಣ ಲೋಕವನ್ನೂ ಅನುಭವಿಸಿ ಪುನ, ಈ ಲೋಕದಲ್ಲಿ ರಾಜನಾಗಿ ಹುಟ್ಟುತ್ತಾನೆ. ಕೆಂಪು ಪತಾಕೆಗಳಿಂದ ಕೂಡಿದ ಜಿಂಕೆಯನ್ನು ದಾನಮಾಡಿದವನು ಪಾಪನಾಶಹೊಂದಿ ಅಲಕಾನಗರವನ್ನು ಸೇರುತ್ತಾನೆ. ದೇವಾಧಿಪತಿಯ ಆಲಯಕ್ಕೆಯಾವನು ಹೊರಗಿನ ದ್ವಾರವನ್ನು ನಿರ್ಮಿಸುತ್ತಾನೆಯೋ ಅವನಿಗೆ ಎಲ್ಲಾ ಲೋಕಗಳ ದ್ವಾರಗಳೂ ತೆರೆದೇ ಇರುತ್ತವೆ. ಶಯನ, ಆಸನಗಳ ದಾನದಿಂದ ಶಾಶ್ವತಸ್ಥಾನ ಹೊಂದುತ್ತಾನೆ. ಕೊಡಿಕೆಯ ದಾನದಿಂದ ಎಲ್ಲಾ

ಉತ್ತರಚ್ಛದದಾನೇನ ಸರ್ವಾನ್ ಕಾಮಾನವಾಪ್ನುಯಾತ್ ।
ದೇವವೇಶ್ಮೋಪಭೋಗ್ಯಾನಿ ಶಿಲ್ಪಭಾಂಡಾನಿ ಯೋ ನರಃ ॥ ೮೬ ॥

ದದ್ಯಾದ್ವಾ ವಾದ್ಯಭಾಂಡಾನಿ ಗಣೇಶತ್ವಮವಾಪ್ನುಯಾತ್ ।
ದೇವಾಶ್ರಿತೇಷು ಯತ್‌ಕಿಂಚಿದ್ದದ್ಯಾದ್ಭಕ್ತಿ ಸಮನ್ವಿತಃ ॥ ೮೭ ॥

ತದೇವಾಕ್ಷಯಮಾಪ್ನೋತಿ ದೇವದೇವಪ್ರಸಾದತಃ ।
ದತ್ವಾ ಧಾನ್ಯಾನಿ ಬೀಜಾನಿ ಸಸ್ಯಾನಿ ವಿವಿಧಾನಿ ಚ ॥ ೮೮ ॥

ರೂಪಕಾಣಿ ಚ ತಾನ್ಯೇವ ಪ್ರಾಪ್ನೋತ್ಯಯುತಶಃ ಪುನಃ ।
ದತ್ವಾ ಶಾಕಾನಿ ರಮ್ಯಾಣಿ ವಿಶೋಕಸ್ತ್ವಭಿಜಾಯತೇ ॥ ೮೯ ॥

ದತ್ವಾ ಚ ವ್ಯಂಜನಾರ್ಥಾಯ ತಥೋಪಕರಣಾನಿ ಚ ।
ಪುಷ್ಪವೃಕ್ಷಂ ತತೋ ದತ್ವಾ ಗ್ರಾಮಸ್ಯಾಧಿಪತಿರ್ಭವೇತ್ ॥ ೯೦ ॥

ಫಲವೃಕ್ಷಂ ತಥಾ ದತ್ವಾ ನಗರಾಧಿಪತಿರ್ಭವೇತ್ ।
ಆರಾಮಂ ಕಾರಯಿತ್ವಾ ತು ರಾಜಾ ವೈ ಪಾರ್ಥಿವೋ ಭವೇತ್ ॥ ೯೧ ॥

ಮನೋರಥಗಳನ್ನೂ ಹೊಂದುತ್ತಾನೆ. ದೇವಾಲಯಕ್ಕೆ ಉಪಯೋಗವಾಗುವ ಶಿಲ್ಪೋಪಕರಣಗಳನ್ನೂ ವಾದ್ಯೋಪಕರಣಗಳನ್ನೂ ದಾನಮಾಡುವವನು ಗುಂಪಿಗೆ ಮುಖ್ಯಸ್ಥನಾಗುತ್ತಾನೆ.

೮೭-೯೧. ದೇವರನ್ನು ಸೇವಿಸುತ್ತಾ ಆಲಯದ ಆಶ್ರಯದಿಂದಲೇ ಜೀವಿಸುವವರಿಗೆ ಸಹಾಯವಾಗುವಂತೆ ಅಲ್ಪಸ್ವಲ್ಪದಾನಮಾಡಿದರೂ ಭಗವಂತನ ಅನುಗ್ರಹದಿಂದ ಅದೇ ದಾತೃವಿಗೆ ಅಕ್ಷಯವಾಗುತ್ತದೆ. ಬೀಜಗಳು ಧಾನ್ಯಗಳು, ನಾನಾವಿಧ ಸಸ್ಯಗಳು, ದೇವರಪಟಗಳು ಇವನ್ನು ಅವರಿಗೆ ದಾನಮಾಡಿದಲ್ಲಿಯೂ ಇವನ್ನು ದಾತೃವು ಅಪರಿಮಿತವಾಗಿ ಪುನಃ ಹೊಂದುತ್ತಾನೆ. ಶಾಕಗಳನ್ನು ದಾನಮಾಡಿದವನು ತಾನೂ ನಿಶ್ಶೋಕನಾಗುತ್ತಾನೆ. ವ್ಯಂಜನಗಳಿಗೆ ಉಪಕರಣಗಳನ್ನು ದಾನಮಾಡಿದವನಿಗೂ ಇದೇ ಫಲ. ಪುಷ್ಪವೃಕ್ಷವನ್ನು ದಾನಮಾಡಿದವನು ಗ್ರಾಮಾಧಿಪತಿಯಾಗಿಯೂ ಫಲವೃಕ್ಷವನ್ನು ದಾನಮಾಡಿದವನು ನಗರಾಧಿಪತಿಯಾಗಿಯೂ ಆಗುತ್ತಾರೆ. ಉದ್ಯಾನವನವನ್ನು ಮಾಡಿಸಿಕೊಟ್ಟವನು ಭೂಮಿಗೆ ದೊರೆಯೇ ಆಗುತ್ತಾನೆ.

ಜಲಾಶಯಂ ತಥಾ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಸಪುಷ್ಪೈಃ ಸಫಲೈರ್ವೃಕ್ಷೈರ್ಯುಕ್ತಂ ಕೃತ್ವಾ ಜಲಾಶಯೈಃ ॥ ೯೨ ॥

ಉದ್ಯಾನೈಃ ಪದ್ಮಿನೀಖಂಡೈಶ್ಚೈವ ರಮ್ಯೈಶ್ಚ ಮನೋಹರೈಃ ।
ಶ್ವೇತದ್ವೀಪಮವಾಪ್ನೋತಿ ಬಹೂನ್ಯಬ್ದಗಣಾನಿ ತು ॥ ೯೩ ॥

ಪ್ರೀಣಯೇದ್ದೇವದೇವೇಶಂ ಗವಾಂ ಗ್ರಾಸೇನ ಯೋ ನರಃ ।
ತಸ್ಯ ಪ್ರೀತಃ ಸ ಭಗವಾನಭೀಷ್ಟಫಲದೋ ಭವೇತ್ ॥ ೯೪ ॥

ಅತೀವ ದಯಿತಾಸ್ತಸ್ಯ ಬ್ರಾಹ್ಮಣಾ ದ್ವಿಜಸತ್ತಮಾಃ ।
ಬ್ರಾಹ್ಮಣೈಃ ಪೂಜಿತೈರ್ವಿಷ್ಣುಃ ಸ್ವಯಂ ಭವತಿ ಪೂಜಿತಃ ॥ ೯೫ ॥

ದೀನಾಂಧಕೃಪಣಾನಾಥ ಬಹೂನಾಮಪಿ ದಾನತಃ ।
ಯಃ ಪ್ರೀಣಾತಿ ಜಗನ್ನಾಥಂ ತಸ್ಯ ದೇವಃ ಪ್ರಸೀದತಿ ॥ ೯೬ ॥

೯೨-೯೬ ಜಲಾಶಯವನ್ನು ಮಾಡಿಸಿಕೊಟ್ಟವನು ಎಲ್ಲಾ ಪಾಪಗಳನ್ನೂ ನೀಗಿಸಿಕೊಳ್ಳುತ್ತಾನೆ, ಫಲಪುಷ್ಪವೃಕ್ಷಗಳಿಂದ ಕೂಡಿದ ಉದ್ಯಾನಗಳಿಂದಲೂ ಕೂಡಿರುವ ರಮ್ಯವಾದ ಜಲಾಶಯವನ್ನು ಮಾಡಿಸಿ ದೇವಾಲಯಕ್ಕೆ ಕೊಟ್ಟವನು ಬಹುವರ್ಷಪರ್ಯಂತ ಶ್ವೇತದ್ವೀಪವಾಸಿಯೇ ಆಗುತ್ತಾನೆ. ಹೆಚ್ಚಾದ ಹಸುಗಳ ಗುಂಪಿನಿಂದ ದೇವನನ್ನು ಪ್ರೀತಿಗೊಳಿಸಿದವನು ಭಗವಂತನಿಂದಲೂ ತನ್ನ ಇಷ್ಟಸಿದ್ಧಿ ಹೊಂದುತ್ತಾನೆ. ಆ ಮಹಾವಿಷ್ಣುವಿಗೆ ಬ್ರಾಹ್ಮಣರಲ್ಲಿ ಬಹಳ ಪ್ರೀತಿ ಅಂತಹ ಬ್ರಾಹ್ಮಣರನ್ನು ಪೂಜಿಸಿ ತೃಪ್ತಿಪಡಿಸಿದಲ್ಲಿ ಅವನೂ ತಾನಾಗಿಯೇ ತೃಪ್ತಿಹೊಂದುತ್ತಾನೆ. ದರಿದ್ರರು, ಕುರುಡರು, ದೀನರು, ಅನಾಥರು ಇಂತಹವರನ್ನು ದಾನದಿಂದ ಸಂತೋಷಪಡಿಸಿದಲ್ಲಿ ಸರ್ವಶರೀರಿಯೂ ಜಗತ್ಪತಿಯೂ ಆದ ಆ ಪ್ರಭುವು ತಾನೂ ಪ್ರಸನ್ನನಾಗುತ್ತಾನೆ.

ಉಪವಾಸವ್ರತೈಃ ಸ್ನಾನೈಸ್ತೀರ್ಥಾನುಸರಣೇನ ಚ ।
ಆಯುತಸ್ಥಾನಸಂಸ್ಥಾನಾಂ ಪಶೂನಾಂ ಚ ವಿವರ್ಜನಾತ್ ॥ ೯೭ ॥

ಗುರುಶುಶ್ರೂಷಯಾ ಕ್ಷಾಂತ್ಯಾ ತಥಾ ವೈ ಶ್ರಾದ್ಧಕರ್ಮಣಾ ।
ಆಹಾರನಿಯಮೈಸ್ತೈಸ್ತೈ ಪರಾಪೀಡೈರ್ವಿಶೇಷತಃ ॥ ೯೮ ॥

ಪೂಜಯಿತ್ವಾ ಜಗನ್ನಾಥಂ ಶ್ವೇತದ್ವೀಪಮವಾಪ್ನುಯಾತ್ ।
ಪರಂ ಪದಮವಾಪ್ನೋತಿ ಪ್ರಸನ್ನೇ ಮಧುಸೂದನೇ ॥ ೯೯ ॥

ಅಭಿವಾದ್ಯ ಜಗನ್ನಾಥಂ ಕೃತಾರ್ಥಶ್ಚ ತಥಾ ಭವೇತ್ ।
ನಮಸ್ಕಾರಕ್ರಿಯಾ ತಸ್ಯ ಸರ್ವಪಾಪಪ್ರಣಾಶಿನೀ ॥ ೧೦೦ ॥

ಪ್ರಣಾಮಂ ಪಾಪಶಮನಂ ತಥೈವ ಪರಿಕೀರ್ತಿತಂ ।
ಜಾನುಭ್ಯಾಂ ಚೈವ ಪಾಣಿಭ್ಯಾಂ ಶಿರಸಾ ಚ ವಿಚಕ್ಷಣಃ ॥ ೧೦೧ ॥

ಕೃತ್ವಾ ಪ್ರಣಾಮಂ ದೇವೇಭ್ಯಃ ಸರ್ವಾನ್ಕಾಮಾನವಾಪ್ನುಯಾತ್ ।
ಪರಮಾಣೂನಿ ವರ್ತಂತೇ ಲಲಾಟೇ ಪುರುಷಸ್ಯ ಚ ॥ ೧೦೨ ॥

ಪಾರ್ಥಿವಾನಿ ಭವಂತೀಹ ನಮತೋ ಮಧುಸೂದನಂ ।
ತಾವಂತ್ಯಬ್ದಾನಿ ವಿಪ್ರೇಂದ್ರಾಃ ಸ್ವರ್ಗಲೋಕೇ ಮಹೀಯತೇ ॥ ೧೦೩ ॥

೯೭-೧೦೩. ಉಪವಾಸವ್ರತ, ತೀರ್ಥಸ್ನಾನ, ತೀರ್ಥಯಾತ್ರಾ ಇವುಗಳಿಂದಲೂ, ಹೆಚ್ಚಾದ ಪಶುಗಳಮಂದೆಯನ್ನೇ ದಾನಮಾಡುವುದರಿಂದಲೂ, ಗುರುಶುಶ್ರೂಷಾ, ಕ್ಷಮೆ, ಶ್ರಾದ್ಧಕರ್ಮ ಇತ್ಯಾದಿ ಸದಾಚಾರದಿಂದಲೂ ಇತರರಿಗೆ ತೊಂದರೆಯುಂಟಾಗದ ಆಯಾಯ ಆಹಾರನಿಯಮದಿಂದಲೂ ಜಗತ್ಪತಿಯಾದ ಮಹಾವಿಷ್ಣುವನ್ನು ಸಂತೋಷಪಡಿಸಿದವನೂ ಶ್ವೇತದ್ವೀಪವಾಸಿಯಾಗುತ್ತಾನೆ. ಅಂತಹ ಮಧುಸೂದನನು ಪ್ರಸನ್ನನಾದಲ್ಲಿ ಮೋಕ್ಷವನ್ನೇ ಹೊಂದುತ್ತಾನೆ. ಆ ಪ್ರಭುವನ್ನು ನಮಸ್ಕರಿಸಿದವನೂ ಕೃತಕೃತ್ಯನಾಗುತ್ತಾನೆ. ಅವನ ನಮಸ್ಕಾರವೂ ಪಾಪನಾಶಕವಾದುದರಿಂದ ಮಂಡಿಗಳಿಂದಲೂ, ಕೈಗಳಿಂದಲೂ, ತಲೆಯಿಂದಲೂ ಮಾಡಿದ ಸಾಷ್ಟಾಂಗಪ್ರಣಾಮವು ಎಲ್ಲಾ ಮನೋರಥಸಿದ್ಧಿಗೂ ಕಾರಣವಾಗುತ್ತದೆ. ಪ್ರಣಾಮ ಮಾಡುವಾಗ ದೇವಗೃಹದ ಎಷ್ಟು ಪರಮಾಣುಗಳು ಹಣೆಯಲ್ಲಿ ಅಂಟಿಕೊಳ್ಳುವುವೋ ಅಷ್ಟು ವರ್ಷ ಪರ್ಯಂತ ಆ ಭಕ್ತನು ಸ್ವರ್ಗವಾಸಿಯಾಗುತ್ತಾನೆ.

ದೇವಾರ್ಚಾದರ್ಶನಾದೇವ ಪ್ರಣಮೇನ್ಮಧುಸೂದನಂ ।
ಸ್ಥಾನಾಪೇಕ್ಷಾ ನ ಕರ್ತವ್ಯಾ ದೃಷ್ಟ್ವಾರ್ಚಾಂ ದ್ವಿಜಸತ್ತಮಾಃ ॥ ೧೦೪ ॥

ದೇವಾರ್ಚಾದೃಷ್ಟಿಪೂತಂ ಹಿ ಶುಚಿಃ ಸರ್ವಂ ಪ್ರಕೀರ್ತಿತಂ ।
ದೇವಾರ್ಚಾದೃಷ್ಟಿಪೂತೇತು ಸ್ನಾನಂ ಕೃತ್ವಾ ಜಲಾಶಯೇ ॥ ೧೦೫ ॥

ಸರ್ವಪಾಪವಿನಿರ್ಮುಕ್ತಃ ಕ್ಷಣಾದ್ಭವತಿ ನಿರ್ಮಲಃ ।
ತೀರ್ಥಾನಾಂ ತತ್ರ ಸರ್ವೇಷಾಂ ಸನ್ನಿಧಾನಂ ಪ್ರಕೀರ್ತಿತಂ ॥ ೧೦೬ ॥

ಪಾದೋದಕೇನ ನಾಭ್ಯುಕ್ಷ್ಯ ತಥಾ ಮೂರ್ಧಾನಮಾತ್ಮನಃ ।
ಸ್ನಾತೋ ಭವತಿ ಧರ್ಮಾತ್ಮಾ ನಾತ್ರ ಕಾರ್ಯಾ ವಿಚಾರಣಾ ॥ ೧೦೭ ॥

ಪಾದೋದಕಂ ಶಾಂತಿಕರಮಮಂಗಲ್ಯವಿನಾಶನಂ ।
ದುಷ್ಟದುಃಸ್ವಪ್ನಶಮನಂ ಸರ್ವಪಾಪವಿನಾಶನಂ ॥ ೧೦೮ ॥

ಧನ್ಯಂ ಪವಿತ್ರಂ ಮಂಗಲ್ಯಂ ಸರ್ವಪಾಪಹರಂ ಶಿವಂ ।
ಶಿರಸಾ ಮಾನವಶ್ರೇಷ್ಠಾಃ ಕಾಲ್ಯಮುತ್ಥಾಯ ಧಾರಯೇತ್ ॥ ೧೦೯ ॥

೧೦೪–೧೦೭. ದೇವರ ವಿಗ್ರಹವನ್ನು ನೋಡಿದೊಡನೆಯೇ ಆ ಮಧುಸೂದನನ ಪ್ರಣಾಮವನ್ನು ಅಲ್ಲಿಯೇ ಮಾಡಬೇಕು. ಅದಕ್ಕೆ ಅನುಕೂಲಸ್ಥಳಾದಿಗಳ ಪರೀಕ್ಷಣೆ ಮಾಡಬಾರದು. ದೇವರ ವಿಗ್ರಹದ ದೃಷ್ಟಿಯು ಎಲ್ಲೆಲ್ಲಿ ಬೀಳುತ್ತದೆಯೋ ಆ ಸ್ಥಳವೆಲ್ಲಾ ಶುಚಿಯಾಗುತ್ತದೆ. ಅಂತಹ ದೃಷ್ಟಿಯು ಬಿದ್ದಿರುವ ಜಲಾಶಯದಲ್ಲಿ ಸ್ನಾನ ಮಾಡಿದ್ದೇ ಆದರೆ ಅವನಿಗೆ ಆಗಲೇ ಸರ್ವಪಾಪಗಳೂ ನಾಶಹೊಂದುತ್ತವೆ. ಎಲ್ಲಾ ತೀರ್ಥಗಳೂ ಅಲ್ಲಿ ಸಾನ್ನಿಧ್ಯಹೊಂದಿವೆ. ಭಗವಂತನ ಪಾದೋದಕದಿಂದ ತಲೆಯನ್ನು ಪ್ರೋಕ್ಷಿಸಿಕೊಂಡವನೂ ಸಹ ಸ್ನಾನಮಾಡುತ್ತಾನೆ, ಇದರಲ್ಲಿ ಸಂದೇಹವಿಲ್ಲ.

೧೦೮–೧೦೯. ವಿಷ್ಣುವಿನ ಪಾದೋದಕವು ಬಹುಮಟ್ಟಿಗೂ ಶಾಂಕರ ಹಾಗೂ ಅಮಂಗಲಕ್ಕೆ ವಿನಾಶಕ, ಕೆಟ್ಟಸ್ವಪ್ನಗಳಿಗೂ ಸರ್ವಪಾಪಗಳಿಗೂ ನಾಶಕ, ಪವಿತ್ರವಾದ ಈ ಪಾದೋದಕವನ್ನು ಬೆಳಿಗ್ಗೆ ಎದ್ದ ಒಡನೆಯೇ ಶಿರಸ್ಸಿನಲ್ಲಿ ಪ್ರೋಕ್ಷಿಸಿ

ಸಷ್ಟಾಂಗಪ್ರಣಿಪಾತೇನ ಸರ್ವಕಾಮಯುತೋ ನರಃ ।
ಸರ್ವಾನರ್ಥವಿನಿರ್ಮುಕ್ತೋ ಗೋದಾನಫಲಮಾಪ್ನುಯಾತ್ ॥ ೧೧೦ ॥

ರುಕ್ಮಮಾಷಕದಾನಸ್ಯ ಫಲಂ ವಿಪ್ರಾಃ ಪದೇಪದೇ ।
ಪುರುಷಸ್ತು ಸಮಾಪ್ನೋತಿ ಯಃ ಕರೋತಿ ಪ್ರದಕ್ಷಿಣಾಂ ॥ ೧೧೧ ॥

ಧ್ಯಾನಂ ತು ದೇವದೇವಸ್ಯ ಸರ್ವಬಾಧಾ ವಿನಾಶನಂ ।
ಯಾವತ್ಕಾಲಂ ಕರೋತೀಹ ಧ್ಯಾನಂ ವೈ ನಿಶ್ಚಲಂ ನರಃ ॥ ೧೧೨ ॥

ತಾವದ್ವರ್ಷ ಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ।
ನಿರಾಶೀರ್ನಿರ್ಮಮೋ ಯಸ್ತು ವಿಷ್ಣೋರ್ಧ್ಯಾನರತೋ ಭವೇತ್ ॥ ೧೧೩ ॥

ತತ್ಪದಂ ಸಮವಾಪ್ನೋತಿ ಯತ್ರ ಗತ್ವಾ ನ ಶೋಚತಿ ।
ಯಜ್ಞಾನಾಂ ತಪಸಾಂ ಚೈವ ಧ್ಯಾನಮೇವ ಪರಂ ಸ್ಮೃತಂ ॥ ೧೧೪ ॥

ದೇವಾಗ್ರೇ ಕಾರಯೇದ್ಯಸ್ತು ರಮ್ಯಾಮಾಪಣವೀಥಿಕಾಂ ।
ರಾಜಾ ಭವತಿ ಲೋಕೇಷು ವಿಜಿತಾರಿರ್ಮಹಾಯಶಾಃ ॥ ೧೧೫ ॥

ಕೊಂಡು, ಅಷ್ಟಾಂಗಪ್ರಣಾಮ ಮಾಡಿದವನು ಸರ್ವಪಾಪಗಳಿಂದಲೂ ಮುಕ್ತನಾಗಿ ಇಷ್ಟಾರ್ಥಗಳನ್ನು ಹೊಂದುತ್ತಾನೆ. ಗೋದಾನಫಲವನ್ನೂ ಹೊಂದುತ್ತಾನೆ. ವಿಷ್ಣುವಿನ ಪ್ರದಕ್ಷಿಣೆ ಮಾಡಿದವನು ಮಾಷಕ ಪರಿಮಿತವಾದ ಚಿನ್ನವನ್ನು ದಾನಮಾಡಿದ ಫಲವನ್ನು ಪ್ರತಿಪ್ರದಕ್ಷಿಣೆಯಲ್ಲಿಯೂ ಹೊಂದುತ್ತಾನೆ. ಪರಮಾತ್ಮನ ಧ್ಯಾನವು ಎಲ್ಲಾ ಅನರ್ಥಗಳಿಗೂ ಪರಿಹಾರಕರ, ಎಷ್ಟುಹೊತ್ತು ನಿಶ್ಚಲವಾದ ಧ್ಯಾನಮಾಡುತ್ತಾನೆಯೋ ಅಷ್ಟು ಸಹಸ್ರವರ್ಷಗಳು ಸ್ವರ್ಗದಲ್ಲಿ ಸುಖಿಸುತ್ತಾನೆ. ಯಾವನು ಫಲಕಾಮನಾಗದೆಯೂ, ಮಮಕಾರವಿಲ್ಲದೆಯೂ ಧ್ಯಾನದಲ್ಲಿ ನಿರತನಾಗುತ್ತಾನೆಯೋ ಅವನು ಪುನರಾವೃತ್ತಿ ಇಲ್ಲದ ಆವನ ಸ್ಥಾನವನ್ನೇ ಹೊಂದುತ್ತಾನೆ. ಪರಮಾತ್ಮನ ಪ್ರೀತಿಗೆ ಸಾಧಕವಾದ ಯಜ್ಞ, ತಪಸ್ಸುಗಳಿಗಿಂತಲೂ ಧ್ಯಾನವೇ ಉತ್ತಮ.

೧೧೫–೧೧೯. ದೇವಾಲಯದ ಎದುರಿಗೆ ಸುಂದರವಾದ ಅಂಗಡಿಯ ಬೀದಿಯನ್ನು ಮಾಡಿಸಿದವನು ವಿಜಯಿಯೂ, ಯಶಸ್ವಿಯೂ ಆದ ರಾಜನಾಗುತ್ತಾನೆ.

ನಗರಂ ಚ ತಥಾ ಕೃತ್ವಾ ಸಾಮ್ರಾಜ್ಯಮಧಿಗಚ್ಛತಿ ।
ಯಾನವಾಹನದಾನೇನ ಸರ್ವಕಾಲಂ ಸುಖೀ ಭವೇತ್ ॥ ೧೧೬ ॥

ಶಿಬಿಕಾಂ ಯೇ ಪ್ರಯಚ್ಛಂತಿ ತೇ ಪ್ರಯಾಂತ್ಯಮರಾವತೀಂ ।
ಅಶ್ವದಾಃ ಸೂರ್ಯಲೋಕಸ್ಥಾ ರಾಜಂತೇ ದಿವಿ ಸೂರ್ಯವತ್ ॥ ೧೧೭ ॥

ಕರೀಂದ್ರದಾನಾಚ್ಛಕ್ರಸ್ಯ ಚಿರಾಲ್ಲೋಕಾಚ್ಚ್ಯುತೋ ನರಃ ।
ರಾಜಾ ಭವತಿ ಧರ್ಮಾತ್ಮಾ ಪೃಥಿವ್ಯಾಂ ಪೃಥಿವೀಪತಿಃ ॥ ೧೧೮ ॥

ದಾಸಂ ದತ್ವಾ ಸುಖೀ ಲೋಕೇ ಸ್ವರ್ಗಭ್ರಷ್ಟೋಽಭಿಜಾಯತೇ ।
ದಾಸೀಂ ದತ್ವಾ ತಥಾ ವಿಪ್ರಾ ನಾತ್ರ ಕಾರ್ಯಾ ವಿಚಾರಣಾ ॥ ೧೧೯ ॥

ಗಣಿಕಾಂ ಯೇ ಪ್ರಯಚ್ಛಂತಿ ನೃತ್ಯಗೀತವಿಶಾರದಾಂ ।
ಸರ್ವದುಃಖವಿನಿರ್ಮುಕ್ತಾಸ್ತೇ ಪ್ರಯಾಂತ್ಯಮರಾವತೀಂ ॥ ೧೨೦ ॥

ದುಂದುಭಿಂ ಯೇ ಪ್ರಯಚ್ಛಂತಿ ಕೀರ್ತಿಮಂತೋ ಭವಂತಿ ತೇ ।
ರಾಜಾ ಭವತಿ ಲೋಕೇಽಸ್ಮಿಞ್ಛತ್ರಂ ದತ್ವಾ ದ್ವಿಜೋತ್ತಮಾಃ ॥ ೧೨೧ ॥

ನಗರವನ್ನೂ ಹಾಗೆ ನಿರ್ಮಾಣಮಾಡಿದವನು ಚಕ್ರವರ್ತಿಯಾಗುತ್ತಾನೆ. ಯಾನ ವಾಹನಾದಿಗಳನ್ನು ದಾನಮಾಡಿದವನು ಸರ್ವಕಾಲದಲ್ಲಿಯೂ ಸುಖಿಯಾಗುತ್ತಾನೆ. ಪಲ್ಲಕ್ಕಿಯನ್ನು ದಾನಮಾಡಿದವನು ಕುಬೇರನ ಅಲಕಾನಗರಿಯನ್ನೇ ಹೊಂದುತ್ತಾನೆ. ಕುದುರೆಯನ್ನು ದಾನಮಾಡಿದವರು ಸೂರ್ಯಲೋಕ ಹೊಂದಿ ಸೂರ್ಯನಂತೆಯೇ ಆಕಾಶದಲ್ಲಿ ಬೆಳಗುತ್ತಾರೆ. ಆನೆಯನ್ನು ದಾನಮಾಡಿದವನು ಇಂದ್ರಲೋಕಹೊಂದಿ ಬಹುಕಾಲ ಅಲ್ಲಿದ್ದು ಧರ್ಮಿಷ್ಠನೂ ರಾಜಾಧಿರಾಜನೂ ಆಗಿ ಭೂಮಿಯಲ್ಲಿ ಹುಟ್ಟು ತ್ತಾನೆ. ಪರಿಚಾರಕರನ್ನುದೇವಾಲಯಕ್ಕೆ ಒದಗಿಸಿ ಕೊಟ್ಟವನು ಸ್ವರ್ಗಹೊಂದಿ ಪುನಃ ಸುಖಿಯಾಗಿಯೇ ಹುಟ್ಟುತ್ತಾನೆ. ದಾಸಿಗಳನ್ನು ದಾನಮಾಡಿದವನಿಗೂ ಇದೇ ಫಲ.

೧೨೦-೧೨೫ ನೃತ್ಯಗೀತ ವಿಶಾರದೆಯಾದ ವೇಶ್ಯೆಯನ್ನು ದೇವಾಲಯಕ್ಕೆ ಕೊಟ್ಟವರೂ ನಿಷ್ಪಾಪರಾಗಿ ಅಮರಾವತಿಯನ್ನು ಹೊಂದುತ್ತಾರೆ ನಗಾರಿಯನ್ನು ದಾನಮಾಡಿದವರು ಕೀರ್ತಿವಂತರಾಗಿಯೂ ಛತ್ರಿಯನ್ನು ದಾನಮಾಡಿದವನು ರಾಜ

ಸಾಪ್ನೋತಿ ರಿಪುಜಂ ದುಃಖಂ ಸಂಗ್ರಾಮೇ ರಿಪುಜಿದ್ಭವೇತ್ ।
ತಾಲವೃಂತಪ್ರದಾನೇನ ನಿರ್ವೃತಿಂ ಪ್ರಾಪ್ನುಯಾತ್ಪರಾಂ ॥ ೧೨೨ ॥

ತಥಾಚಮನದಾನೇನ ಶ್ರೀಮಾನ್ಭವತಿ ಭೂತಲೇ ।
ಮುಚ್ಯತೇ ಚ ತಥಾ ಪಾಪೈಃ ಸ್ವರ್ಗಲೋಕಂ ಚ ಗಚ್ಛತಿ ॥ ೧೨೩ ॥

ಉಪಾನತ್ಸಂಪ್ರದಾನೇವ ವಿಮಾನಮಧಿಗಚ್ಛತಿ ।
ಯಥೇಷ್ಟಂ ತೇನ ಲೋಕೇಷು ವಿಚರತ್ಯಮರಪ್ರಭಃ ॥ ೧೨೪ ॥

ಯಥಾದೇಶಂ ಯಥಾಕಾಲಂ ರಾಜಲಿಂಗಂ ಸುರಾಲಯೇ ।
ದತ್ವಾ ಭವತಿ ರಾಜೈವ ನಾತ್ರ ಕಾರ್ಯಾ ವಿಚಾರಣಾ ॥ ೧೨೫ ॥

ಧಾರಣೀಯೋಪಯೋಗ್ಯಾನಿ ದತ್ವಾತ್ಯಂತಂ ಸುಖೀ ಭವೇತ್ ।
ಮಾಲ್ಯಾಧಾರಂ ತಥಾ ದತ್ವಾ ಧೂಪಾಧಾರಂ ತಥೈವ ಚ ॥ ೧೨೬ ॥

ಗಂಧಾಧಾರಂ ತಥಾ ಪಾತ್ರಂ ಕಾಮಾನಾಂ ಪಾತ್ರತಾಂ ವ್ರಜೇತ್ ।
ಸಮುದ್ರಜಾನಿ ಪಾತ್ರಾಣಿ ದತ್ವಾ ನ್ಯೈ ತೈಜಸಾನಿ ವಾ ॥ ೧೨೭ ॥

ನಾಗಿಯೂ ಆಗುತ್ತಾರೆ. ಇವನು ಯುದ್ಧದಲ್ಲಿ ವಿಜಯಿಯೂ ಆಗುತ್ತಾನೆ. ಬೀಸಣಿಗೆಯನ್ನು ದಾನಮಾಡಿದವನು ಉತ್ತಮವಾದ ಸುಖಹೊಂದುತ್ತಾನೆ. ಆಚಮನ ದಾನದಿಂದ ಐಶ್ವರ್ಯವಂತನಾಗುತ್ತಾನೆ. ಪಾಪನಾಶ ಹೊಂದಿ ಸ್ವರ್ಗಸುಖಿಯೂ ಆಗುತ್ತಾನೆ. ಪಾದುಕೆಗಳನ್ನು ದಾನಮಾಡಿದವನು, ವಿಮಾನ ಹೊಂದಿ ದೇವತೆಗಳಂತೆ ಇಷ್ಟವಾದ ಲೋಕಗಳಲ್ಲಿ ಸಂಚರಿಸುತ್ತಾನೆ. ದೇಶಕಾಲಕ್ಕೆ ತಕ್ಕ ರಾಜಮರ್ಯಾದೆಗಳನ್ನು ದೇವಾಲಯಕ್ಕೆ ದಾನಮಾಡಿದವನು ರಾಜನೇ ಆಗುತ್ತಾನೆ. ಇದರಲ್ಲಿ ವಿಚಾರ ಮಾಡಬೇಕಾದುದಿಲ್ಲ.

೧೨೬–೧೨೯. ದೇವರಿಗೆ ಧರಿಸಲು ಅರ್ಹವಾದ ಆಭರಣಾದಿಗಳನ್ನು ದಾನಮಾಡಿದವನು ಸುಖಿಯಾಗುತ್ತಾನೆ. ಹೂವಿನ ಪಾತ್ರೆ (ತಟ್ಟೆ ಮುಂತಾದ್ದು)ಗಳನ್ನೂ ಧೂಪದ ಪಾತ್ರೆಯನ್ನೂ, ಗಂಧದ ಪಾತ್ರೆಯನ್ನೂ ದಾನಮಾಡಿದವನು ಎಲ್ಲಾ

ಪಾತ್ರಂ ಭವತಿ ಕಾಮಾನಾಂ ವಿದ್ಯಾನಾಂ ಚ ಧನಸ್ಯ ವಾ ।
ಯತ್ಕಿಂಚಿದ್ದೇವದೇವಾಯ ದದ್ಯಾದ್ಭಕ್ತಿಸಮನ್ವಿತಃ ॥ ೧೨೮ ॥

ತದೇವಾಕ್ಷಯ್ಯಮಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ।
ವಿಸ್ಮಾಪನೀಯಂ ಯತ್ಕಿಂಚಿತ್ ಕೃತ್ವಾತ್ಯಂತಂ ಸುಖೀ ಭವೇತ್ ॥ ೧೨೯ ॥

ಸ್ನಾನಶಾಟಕದಾನೇನ ವಹ್ನಿಷ್ಟೋಮಫಲಂ ಲಭೇತ್ ।
ತೈಲೇನ ಸ್ನಪನಂ ಕೃತ್ವಾ ಸೌಭಾಗ್ಯಮಧಿಗಚ್ಛತಿ ॥ ೧೩೦ ॥

ಗಂಧತೈಲಾನಿ ದಿವ್ಯಾನಿ ಸುಗಂಧೀನಿ ಶುಚೀನಿ ಚ ।
ಕೇಶವಾಯ ನರೋ ದತ್ವಾ ಗಂಧರ್ವೈಃ ಸಹ ಮೋದತೇ ॥ ೧೩೧ ॥

ಘೃತೇನ ಸ್ನಪನಂ ಕೃತ್ವಾ ಸರ್ವಪಾಪಾನ್ ವ್ಯಪೋಹತಿ ।
ಘೃತಪ್ರಸ್ಥೇನ ದೇವೇಶಂ ಪೌಷಪುಷ್ಯಮಿತೇ ನರಃ ॥ ೧೩೨ ॥

ಸ್ನಾಪಯಿತ್ವಾಶ್ವಮೇಧಸ್ಯ ಫಲಂ ಪ್ರಾಪ್ನೋತ್ಯಸಂಶಯಂ ।
ಏತದೇವ ಫಲಂ ಪ್ರೋಕ್ತಂ ಮುತ್ತರಾಯಣವಾಸರೇ ॥ ೧೩೩ ॥

ಇಷ್ಟವಸ್ತುಗಳಿಗೂ ಪಾತ್ರನಾಗುತ್ತಾನೆ. ಸಮುದ್ರದ ಪಾತ್ರೆಗಳನ್ನೂ ಚಿನ್ನ, ಬೆಳಿ ತಾಮ್ರ ಮೊದಲಾವುಗಳ ಪಾತ್ರೆಗಳನ್ನೂ ದಾನಮಾಡಿದವನು ವಿದ್ಯೆ ಮತ್ತು ಧನ, ಇತ್ಯಾದಿ ಇಷ್ಟಾರ್ಥಗಳಿಗೂ ಪಾತ್ರನಾಗುತ್ತಾನೆ. ದೇವಾಲಯಕ್ಕೆ ಭಕ್ತಿಯಿಂದ ದಾನ ಮಾಡಿದ ಅಲ್ಪಸ್ವಲ್ಪವೂ ಅಕ್ಷಯಫಲಪ್ರದವಾಗುತ್ತದೆ. ಸ್ವರ್ಗವೂ ಲಭಿಸುತ್ತದೆ. ಆಶ್ಚರ್ಯಕರವಾದ ಯಾವುದಾದರೊಂದು ವಸ್ತುವಿನದಾನವೂ, ಅತ್ಯತ್ಯಂತ ಸುಖಕ್ಕೆ ಸಾಧಕವಾಗುತ್ತದೆ.

೧೩೦–೧೩೩ ಸ್ನಾನವಸ್ತ್ರದಾನವು ಅಗ್ನಿಷ್ಟೋಮದ ಫಲಕ್ಕೂ ಎಣ್ಣೆಯ ಮಜ್ಜನವು ಸೌಭಾಗ್ಯಕ್ಕೂ ಸಾಧಕವಾಗುತ್ತದೆ. ಸುಗಂಧಿಯಾದ ಗಂಧತೈಲವನ್ನು ಕೇಶವನಿಗೆ ಅರ್ಪಿಸಿದವನು ಗಂಧರ್ವರೊಡನೆ ಸುಖಿಯಾಗುತ್ತಾನೆ. ತುಪ್ಪದಿಂದ ಮಜ್ಜನಮಾಡಿಸಿದವನು ಎಲ್ಲಾಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಪುಷ್ಯ ಮಾಸದ ಪುಷ್ಯನಕ್ಷತ್ರದಲ್ಲಿ ಒಂದು ಕೊಳಗ ತುಪ್ಪದಿಂದ ಕೇಶವನಿಗೆ ಅಭಿಷೇಕ ಮಾಡಿಸಿದವನು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ ಉತ್ತರಾಯಣದ ಅಭಿಷೇಕಕ್ಕೂ ಇದೇ ಫಲ

ಘೃತಂ ಪವಿತ್ರಮತುಲಂ ಘೃತಮನ್ನಮನುತ್ತಮಂ ।
ತೇನ ಗವ್ಯೇನ ಸಂಸ್ನಾಪ್ಯ ಪ್ರತಿಮಾಂ ವೈಷ್ಣವೀಂ ನರಃ ॥ ೧೩೪ ॥

ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ಗವಾಂ ಲೋಕಮವಾಪ್ನೋತಿ ಕ್ಷೀರೋದಮಥವಾ ಪುನಃ ॥ ೧೩೫ ॥

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಶ್ಚ ಘೃತೇನ ಸ್ನಪಯೇದ್ಧರಿಂ ॥ ೧೩೬ ॥

ಸರ್ವಾನ್ಕಾಮಾನವಾಪ್ನೋತಿ ಸರ್ವಾನರ್ಥವಿವರ್ಜಿತಃ ।
ಮಧುನಾ ಸ್ನಾಪನಂ ಕೃತ್ವಾ ಸೌಭಾಗ್ಯಮಧಿಗಚ್ಛತಿ ॥ ೧೩೭ ॥

ಲೋಕೇ ಮಿತ್ರಾಣ್ಯವಾಪ್ನೋತಿ ನರಶ್ಚೇಕ್ಷುರಸೇನ ಚ ।
ದುಗ್ಧೇನ ಸ್ನಪನಂ ಜ್ಞೇಯಮಮಂಗಲ್ಯವಿನಾಶನಂ ॥ ೧೩೮ ॥

ಕ್ಷೀರೇಣ ಸ್ನಪನಂ ವಿಪ್ರಃ ಕ್ಷೀರಾಂಬೋಧಿಪ್ರದಂ ತಥಾ ।
ದೇಯಾನಿ ದೇವೇ ವಾದ್ಯಾನಿ ದಧಿಕ್ಷೀರಘೃತಾನ್ಯಥ ॥ ೧೩೯ ॥

ಗೋಧೂಮಯವಚೂರ್ಣೈಸ್ತು ತತೋತ್ಸಾದ್ಯ ಜನಾರ್ದನಂ ।
ರೋಧ್ರವರ್ಣಕ ಸಂಕೀರ್ಣೈರ್ವರಂ ರೂಪಂ ತಥಾಪ್ನುಯಾತ್ ॥ ೧೪೦ ॥

೧೩೪-೧೪೦. ತುಪ್ಪವು ಬಹುಪವಿತ್ರವಾದವಸ್ತು. ಅದೇ ಉತ್ತಮವಾದ ಆಹಾರ, ಅಂತಹ ಹಸುವಿನ ತುಪ್ಪದಿಂದ ವಿಷ್ಣುವಿನ ಪ್ರತಿಮೆಗೆ ಸ್ನಾನಮಾಡಿಸಿದವನು ಸರ್ವಸಮೃದ್ಧವಾದ ಯಜ್ಞದ ಫಲವನ್ನೇ ಹೊಂದುತ್ತಾನೆ. ಗೋಲೋಕವನ್ನೂ ಕ್ಷೀರಸಮುದ್ರವನ್ನೂ ಹೊಂದುತ್ತಾನೆ. ರೋಗಿಯಾದವನು ರೋಗದಿಂದಲೂ ಬಂಧನಹೊಂದಿರುವವನು ಬಂಧನದಿಂದಲೂ ಬಿಡುಗಡೆ ಹೊಂದುತ್ತಾರೆ. ಭೀತನಾಗಿರುವವನು ಭಯದಿಂದಲೂ ಬಿಡುಗಡೆ ಹೊಂದುತ್ತಾನೆ. ಲೋಧ್ರದ ಬಣ್ಣದೊಡಗೂಡಿರುವಗೋಧಿ, ಯವೆ, ಇವುಗಳ ಚೂರ್ಣದಿಂದ ಚನ್ನಾಗಿ ತೊಳೆದು ಅಭಿಷೇಕಮಾಡಿಸಿದವನು ಒಳ್ಳೆಯರೂಪವನ್ನು ಹೊಂದುತ್ತಾನೆ.

ಸ್ನಪನಂ ಮಾಷಚೂರ್ಣೇನ ವಹ್ನಿಷ್ಟೋಮಫಲಪ್ರದಂ ।
ಮಸೂರಚೂರ್ಣದಾನಂ ಚ ತಥಾ ಸೌಭಾಗ್ಯವರ್ಧನಂ ॥ ೧೪೧ ॥

ಮಸೂರಮಾಷಚೂರ್ಣಂ ತು ಕುಂಕುಮಕ್ಷೋದ ಸಂಯುತಂ ।
ನಿವೇದ್ಯ ದೇವದೇವಾಯ ಗಂಧರ್ವೈಃ ಸಹಮೋದತೇ ॥ ೧೪೨ ॥

ತದಾ ಕಲಶದಾನೇನ ಪ್ರಿಯಾಮಾಪ್ನೋತ್ಯನುತ್ತಮಾಂ ।
ರೋಧ್ರಸ್ನಾನಪ್ರದಾನೇನ ವರ್ಣಂ ಶುಭಮವಾಪ್ನುಯಾತ್ ॥ ೧೪೩ ॥

ಕಾಲೀಯಕಪ್ರದಾನೇನ ಪರಾಂ ನಿರ್ವೃತಿಮಾಪ್ನುಯಾತ್ ।
ಕರ್ಪೂರಕ ಪ್ರದಾನೇನ ಸರ್ವಾನ್ರೋಗಾನ್ ವ್ಯಪೋಹತಿ ॥ ೧೪೪ ॥

ತಥಾ ವರ್ಣಕದಾನೇನ ಸರ್ವಮೇವ ಶುಭಂ ವದೇತ್ ।
ತಗರಸ್ನಾನದಾನೇನ ಸೌಭಾಗ್ಯಮಧಿಗಚ್ಛತಿ ॥ ೧೪೫ ॥

ಪ್ರಿಯತ್ವಮಾಪ್ನುಯಾಲ್ಲೋಕೇ ಪ್ರಿಯಂಗು ಸ್ನಾನದೋ ನರಃ ।
ಸದಾ ಭವತಿ ಸಿದ್ಧಾರ್ಥಃ ಸಿದ್ಧಾರ್ಥಸ್ನಾನದಸ್ತಥಾ ॥ ೧೪೬ ॥

೧೪೧-೧೪೮ ಉದ್ದಿನ ಪುಡಿಯಿಂದ ಮಾಡಿಸಿದ ಸ್ನಪನವು ಅಗ್ನಿಷ್ಟೋಮದ ಫಲವನ್ನುಂಟುಮಾಡುತ್ತದೆ. ಮಸೂರ ಚೂರ್ಣದಾನವೂ ಸೌಭಾಗ್ಯಾಭಿವೃದ್ಧಿಗೆ ಕಾರಣವಾಗುತ್ತದೆ. ಕುಂಕುಮ ಕೇಸರಿಯಿಂದ ಕೂಡಿದ ಮಸೂರ ಮತ್ತು ಉದ್ದಿನ ಚೂರ್ಣವನ್ನು ಅರ್ಪಿಸಿದವನು ಗಂಧರ್ವರೊಡನೆ ಸುಖಿಸುತ್ತಾನೆ. ಆಗ ಕಲಶ ದಾನಮಾಡಿದವನೂ ಪ್ರೀತಿಹೊಂದುತ್ತಾನೆ. ಲೋಧ್ರಸ್ನಾನದಾನದಿಂದ ಒಳ್ಳೆಯ ವರ್ಣವುಂಟಾಗುತ್ತದೆ ಹಾಲುಮಡ್ಡಿಯದಾನದಿಂದ ಹೆಚ್ಚಾಗಿ ಸುಖಪಡುತ್ತಾರೆ. ಕರ್ಪೂರದಾನದಿಂದ ರೋಗವಿಮೋಚನೆ ಹೊಂದುತ್ತಾನೆ. ಒಳ್ಳೆಯ ಬಣ್ಣಗಳ ದಾನದಿಂದ ಶುಭಗಳಿಗೆ ಭಾಗಿಯಾಗುತ್ತಾನೆ. ತಗರದ ಸ್ನಾನದಿಂದ ಸೌಭಾಗ್ಯವೂ ಪ್ರಿಯಂಗುಸ್ನಾನದಿಂದ ಪ್ರೀತಿಯೂ ಲಭಿಸುತ್ತವೆ. ಬಿಳಿಯ ಸಾಸಿವೆಯ ಸ್ನಾನದಿಂದ ಇಷ್ಟಾರ್ಥಗಳೂ ಓಷಧಿಗಳ ಸ್ನಾನದಿಂದ ಅಶ್ವಮೇಧದ ಫಲವೂ ಲಭಿಸುತ್ತವೆ.

ಸರ್ವೌಷಧಿಪ್ರದಾನೇನ ವಾಜಿಮೇಧಫಲಂ ಲಭೇತ್ ।
ಸ್ನಾನಾರ್ಥಂ ದೇವದೇವಸ್ಯ ಯಸ್ತು ಗಂಧಾನ್ಪ್ರಯಚ್ಛತಿ ॥ ೧೪೭ ॥

ಭವಂತಿ ವಶಗಾಸ್ತಸ್ಯ ನಾರ್ಯಃ ಸರ್ವತ್ರ ಸರ್ವದಾ ।
ದತ್ವಾ ಜಾತೀಫಲಂ ಮುಖ್ಯಂ ಸಫಲಾಂ ವಿಂದತೇ ಶ್ರಿಯಂ ॥ ೧೪೮ ॥

ಶಮೀಪತ್ರಪ್ರದಾನೇನ ಸೌಭಾಗ್ಯಮಧಿಗಚ್ಛತಿ ।
ತ್ವಕ್ಪ್ರದಾನಾತ್ತಥಾ ಲೋಕೇ ಭವತೀಹ ಬಲಾನ್ವಿತಃ ॥ ೧೪೯ ॥

ದತ್ವಾ ಮೃಗಮದಸ್ನಾನಂ ಸರ್ವಾನ್ಕಾಮಾನವಾಪ್ನುಯಾತ್ ।
ರತ್ನೋದಕಪ್ರದಾನೇನ ಸೌಭಾಗ್ಯಮಧಿಗಚ್ಛತಿ ॥ ೧೫೦ ॥

ಬೀಜೋದಕಪ್ರದಾನೇನ ಕ್ರಿಯಾಸಾಫಲ್ಯಮಾಪ್ನುಯಾತ್ ।
ಪುಷ್ಪತೋಯಪ್ರದಾನೇನ ಶ್ರೀಮಾನ್ಭವತಿ ಮಾನವಃ ॥ ೧೫೦ ॥

ಫಲತೋಯಪ್ರದಾನೇನ ಸಫಲಾಂ ವಿಂದತೇ ಕ್ರಿಯಾಂ ।
ಪುನ್ನಾಗವಾರಿಭಿರ್ಯುಕ್ತಂ ಕಲಶಂ ಪೂಜಿತಂ ನರೈಃ ॥ ೧೫೨ ॥

ಅಭಿಷೇಕಕ್ಕಾಗಿ ಗಂಧವನ್ನು ಸಜ್ಜುಗೊಳಿಸಿಕೊಟ್ಟವನಿಗೆ ಸ್ತ್ರೀಯರು ಯಾವಾಗಲೂ ವಶ್ಯಹೊಂದಿರುತ್ತಾರೆ. ಜಾಜೀಕಾಯನ್ನು ಒದಗಿಸಿದವನ್ನು ಸಫಲ ಸಮೃದ್ಧಿಯುಳ್ಳವನಾಗುತ್ತಾನೆ.

೧೪೯-೧೫೮. ಬನ್ನಿಯ ಎಲೆಯ ದಾನದಿಂದ ಸೌಭಾಗ್ಯಶಾಲಿಯಾಗಿಯೂ ದಾಲ್ಚಿನ್ನಿಯದಾನದಿಂದ ಬಲಿಷ್ಠನಾಗಿಯೂ ಆಗುತ್ತಾರೆ. ಕಸ್ತೂರಿಯಿಂದ ಸ್ನಾನ ಮಾಡಿಸಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ ರತ್ನೋದಕಸ್ನಾನ ಮಾಡಿಸಿದವನು ಐಶ್ವರ್ಯವನ್ನೂ ಬೀಜೋದಕಸ್ನಾನದಿಂದ ಕ್ರಿಯಾಫಲವನ್ನೂ ಹೊಂದುತ್ತಾರೆ. ಪುಷ್ಪೋದಕದಿಂದ ಸ್ನಾನಮಾಡಿಸಿದವನು ಐಶ್ವರ್ಯವಂತನಾಗುತ್ತಾನೆ. ಫಲೋದಕದಿಂದ ಸಫಲ ಪ್ರಯತ್ನಶಾಲಿಯಾಗುತ್ತಾನೆ ಜನರಿಂದ ಪೂಜಿಸಲ್ಪಟ್ಟ ಸುರಗಿಯ ಹೂವಿನಿಂದ ಕೂಡಿದ ಕಲಶವನ್ನು ಉಪವಾಸವ್ರತದಿಂದಿದ್ದು ಹರಿಗೆ ಅರ್ಪಣೆಮಾಡಿದವನು ಪುತ್ರವಂತನಾಗುತ್ತಾನೆ. ಕ್ಷೀರವೃಕ್ಷದ ಚಿಗುರು

ಸೋಪವಾಸೋ ಹರೇರ್ದತ್ತ್ವಾ ಪುತ್ರಮಾಪ್ನೋತ್ಯಸಂಶಯಂ ।
ಕ್ಷೀರಪಲ್ಲವಸಂಯುಕ್ತಾನ್ಕಲಶಾನ್ಸುವಿಭೂಷಿತಾನ್ ॥ ೧೫೩ ॥

ದತ್ತ್ವೈವ ದೇವದೇವಾಯ ವಾಜಪೇಯಮವಾಪ್ನುಯಾತ್ ।
ಜಯಕಾರಂ ನರೋ ಯಸ್ತು ಕರೋತಿ ದ್ವಿಜಪುಂಗವಾಃ ॥ ೧೫೪ ॥

ಬಂದಿನಾಂ ಸ ಭವತ್ಯೇವ ಸದಾ ಸ್ತವ್ಯೋ ನರೋತ್ತಮಾಃ ।
ತೀರ್ಥೋದಕಾನಿ ಪುಣ್ಯಾನಿ ಸ್ವಯಮಾನೀಯ ಮಾನವಃ ॥ ೧೫೫ ॥

ದೇವಸ್ಯ ಸ್ನಪನಂ ದತ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಅರ್ಚಿತಾನ್ಕಲಶಾನ್ ಕೃತ್ವಾ ಪರಿಭ್ರಾಮ್ಯ ತಥೈವ ಚ ॥ ೧೫೬ ॥

ಯಸ್ತ್ಯಜೇತ್ಸಲಿಲಂ ತತ್ರ ತಸ್ಯ ಪುಷ್ಟಿಃ ಸದಾ ಭವೇತ್ ।
ತೀರ್ಥತೋಯಂ ತಥಾ ದತ್ತ್ವಾ ದೇವಸ್ಯಾಚಮನಂ ಪುನಃ ॥ ೧೫೭ ॥

ಸ್ವರ್ಗಲೋಕಮವಾಪ್ನೋತಿ ಸರ್ವಪಾಪವಿವರ್ಜಿತಃ ।
ಉತ್ಸಾದನಮಥಾಭ್ಯಂಗಂ ಸ್ನಾನಂ ಕೃತ್ವಾ ಸ್ವಯಂ ಹರೇಃ ॥ ೧೫೮ ॥

ಗಳಿಂದ ಕೂಡಿದ ಅಲಂಕೃತಗಳಾದ ಕಲಶಗಳನ್ನು ದೇವಾಧಿದೇವನಿಗೆ ಅರ್ಪಿಸಿದವನು ವಾಜಪೇಯಯಾಗದ ಫಲವನ್ನು ಹೊಂದುತ್ತಾನೆ ದೇವಗೃಹದಲ್ಲಿ ಜಯಶಬ್ದವನ್ನು ಮಾಡುವವನು ಹರಿಯ ಬಂದಿವರ್ಗದಲ್ಲಿ ಯಾವಾಗಲೂ ವಾಸಿಸುತ್ತಾನೆ.

೧೫೫-೧೬೦. ಪುಣ್ಯಕರಗಳಾದ ತೀರ್ಥೋದಕಗಳನ್ನು ತಾನಾಗಿಯೇ ತಂದು ಹರಿಗೆ ಸ್ನಪನಮಾಡಿಸಿದಲ್ಲಿ ಸರ್ವಪಾಪಗಳಿಂದಲೂ ಮೋಕ್ಷಹೊಂದುತ್ತಾನೆ. ಕಲಶಗಳಲ್ಲಿ ಜಲವನ್ನು ತುಂಬಿ ಪೂಜಿಸಿ ಅದರೊಡನೆ ದೇವಗೃಹವನ್ನು ಪ್ರದಕ್ಷಿಣೆಮಾಡಿ ಆ ಜಲವನ್ನು ಅಲ್ಲಿಯೇ (ತಂಪಾಗುವಂತೆ) ಚಲ್ಲಿದವನ್ನೂ ಹೆಚ್ಚು ಪುಷ್ಟಿಯನ್ನು ಹೊಂದುತ್ತಾನೆ. ಆಚಮನಕ್ಕಾಗಿ ತೀರ್ಥೋದಕವನ್ನು ತಂದು ಒಪ್ಪಿಸಿದವನು ಪಾಪನಾಶ ಹೊಂದಿ ಸ್ವರ್ಗಸುಖಕ್ಕೆ ಭಾಗಿಯಾಗುತ್ತಾನೆ. ವಿಗ್ರಹವನ್ನು ತೊಳೆದು ಅಭ್ಯಂಗವನ್ನು ತಾನಾಗಿಯೇ ಮಾಡಿದವನು ಜನಗಳಿಗೆ ಯಜಮಾನನಾಗಿ ಸುಖ

ಗಾಣಪತ್ಯಮವಾಪ್ನೋತಿ ತಥಾ ಲೋಕೇ ಸುಖೀ ಭವೇತ್ |
ನಿಷ್ಪುಂಸನಾರ್ಥೇ ದೇವಸ್ಯ ಯಸ್ತು ವಸ್ತ್ರಂ ಪ್ರಯಚ್ಛತಿ || ೧೫೯ ||

ಚಂದ್ರಲೋಕಮವಾಪ್ನೋತಿ ಸುಖಂ ಪ್ರಾಪ್ನೋತಿ ಚೋತ್ತಮಂ |
ಚಂದನೇನಾನುಲಿಪ್ಯೈನಂ ಚಂದ್ರಲೋಕಮವಾಪ್ನುಯಾತ್ || ೧೬೦ ||

ಶಾರೀರಮಾನಸೈರ್ದುಃಖೈಸ್ತಥಾ ಚೈವ ವಿಮುಚ್ಯತೇ |
ಕುಂಕುಮೇನಾನುಲಿಪ್ಯೈನಂ ಸೂರ್ಯಲೋಕೇ ಮಹೀಯತೇ || ೧೬೧ ||

ಸೌಭಾಗ್ಯಮುತ್ತಮಂ ಲೋಕೇ ತಥಾ ಪ್ರಾಪ್ನೋತಿ ಮಾನವಃ |
ಕರ್ಪೂರೇಣಾನುಲಿಪ್ಯೈನಂ ವಾರುಣಂ ಲೋಕಮಾಪ್ನುಯಾತ್ || ೧೬೨ ||

ಶಾರೀರೈರ್ಮಾನಸೈ ದುಃಖೈ ಸ್ತಥೈವ ಚ ವಿಮುಚ್ಯತೇ |
ಭವಂತಿ ವಶಗಾಸ್ತಸ್ಯ ತಥೈವ ಸತತಂ ಸ್ತ್ರಿಯಃ || ೧೬೩ ||

ದತ್ವಾ ಮೃಗಮದಂ ಮುಖ್ಯಂ ಯಶಸಾ ಭುವಿ ರಾಜತೇ |
ದತ್ವಾ ಜಾತೀಫಲಕ್ಷೋದಂ ಕ್ರಿಯಾಸಾಫಲ್ಯಮಶ್ನುತೇ || ೧೬೪ ||

ಯಾಗುತ್ತಾನೆ. ಶೋಧನಕ್ಕಾಗಿ ವಸ್ತ್ರದಾನಮಾಡಿದವನು ಚಂದ್ರಲೋಕ ಹೊಂದಿ ಸುಖಿಸುತ್ತಾನೆ. ಗಂಧದಿಂದ ಲೇಪನಮಾಡಿದವನು ಚಂದ್ರಲೋಕ ಹೊಂದುತ್ತಾನೆ. ಶಾರೀರ ಮತ್ತು ಮಾನಸದುಃಖಗಳಿಂದ ಬಿಡುಗಡೆ ಹೊಂದುತ್ತಾನೆ.

೧೬೧. ಕೇಸರಿಯ ಗಂಧದಿಂದ ಲೇಪಿಸಿದವನು ಈ ಲೋಕದಲ್ಲಿ ಉತ್ತಮವಾದ ಸೌಭಾಗ್ಯವನ್ನನುಭವಿಸಿ ಸೂರ್ಯಲೋಕದಲ್ಲಿಯೂ ಮಾನ್ಯನಾಗುತ್ತಾನೆ. ಪಚ್ಚಕರ್ಪೂರದ ಗಂಧದಿಂದ ಲೇಪನಮಾಡಿದವನು ಶಾರೀರ ಮತ್ತು ಮಾನಸ ದುಃಖಗಳಿಂದ ಬಿಡುಗಡೆ ಹೊಂದಿ ವರುಣಲೋಕವನ್ನು ಹೊಂದುತ್ತಾನೆ. ಸ್ತ್ರೀಯರೂ ಸಹ ಯಾವಾಗಲೂ ಇವನಿಗೆ ವಶ್ಯರಾಗಿರುತ್ತಾರೆ. ಕಸ್ತೂರಿಯ ಗಂಧವನ್ನು ಅರ್ಪಿಸಿದವನು ಯಶಸ್ವಿಯಾಗಿಯೂ ಜಾಜೀಕಾಯಿಯ ಗಂಧವನ್ನು ಅರ್ಪಿಸಿದವನು

ರಮ್ಯೇಣಾಗುರುಸಾರೇಣ ತ್ವನುಲಿಪ್ಯ ಜನಾರ್ದನಂ ।
ಸೌಭಾಗ್ಯಮುತ್ತಮಂ ಲೋಕೇ ಬಲಂ ಪ್ರಾಪ್ನೋತಿ ಚೋತ್ತಮಂ ॥ ೧೬೫ ॥

ತಥಾ ಬಕುಲನಿರ್ಯಾಸೈರ್ವಹ್ನಿಷ್ಟೋಮಫಲಂ ಲಭೇತ್ ।
ಬಕುಲಾಗುರುಮಿಶ್ರೇಣ ಚಂದನೇನ ಸುಗಂಧಿನಾ ॥ ೧೬೬ ॥

ಸಮಾಲಭ್ಯ ಜಗನ್ನಾಥಂ ಪೌಂಡರೀಕಫಲಂ ಲಭೇತ್ ।
ಏಕೀಕೃತ್ಯ ತು ಸರ್ವಾಣಿ ಸಮಾಲಭ್ಯ ಜನಾರ್ದನಂ ॥ ೧೬೭ ॥

ಅಶ್ವಮೇಧಸ್ಯ ಮುಖ್ಯಸ್ಯ ಫಲಂ ಪ್ರಾಪ್ನೋತ್ಯಸಂಶಯಂ ।
ಕಾಮಗಃ ಸರ್ವಲೋಕೇಷು ವಿಚರತ್ಯಮರಪ್ರಭಃ ॥ ೧೬೮ ॥

ಯೋಽನುಲಿಪ್ಯೇತ ದೇವೇಶಂ ಕೀರ್ತಿತೈರನುಲೇಪನೈಃ ।
ಪಾರ್ಥಿವಾನಿ ಚ ಯಾನಿ ಸ್ಯುಃ ಪರಮಾಣೂನಿ ತತ್ರ ವೈ ॥ ೧೬೯ ॥

ತಾವಂತ್ಯಬ್ದಾನಿ ಲೋಕೇಷು ಕಾಮಚಾರೀ ಭವತ್ಯಸೌ ।
ನ ದಾತವ್ಯಂ ದ್ವಿಜಶ್ರೇಷ್ಠಾಃ ಅತೋಽನ್ಯದುಪಲೇಪನಂ ॥ ೧೭೦ ॥

ಸಫಲಪ್ರಯತ್ನರಾಗಿಯೂ ಆಗುತ್ತಾರೆ. ಒಳ್ಳೆಯ ಹಾಲುಮಡ್ಡಿಯ ರಸದಿಂದ ಲೇಪನಮಾಡಿದವನು ಸೌಭಾಗ್ಯವನ್ನೂ ಒಳ್ಳೆಯ ಬಲವನ್ನೂ ಹೊಂದುತ್ತಾನೆ.

೧೬೬-೧೭೧. ವಕುಳ ವೃಕ್ಷದ ಹಾಲಿನಿಂದ ಲೇಪನಮಾಡಿದವನು ಅಗ್ನಿಷ್ಟೋಮದ ಫಲವನ್ನೂ ಅದರ ಮಡ್ಡಿಯಿಂದ ಕೂಡಿದ ಸುಗಂಧಿ ಚಂದನದಿಂದ ಜಗತ್ಪ್ರಭುವನ್ನು ಲೇಪಮಾಡಿದವನು ಪೌಂಡರೀಕಯಾಗದ ಫಲವನ್ನೂ ಹೊಂದುತ್ತಾರೆ. ಎಲ್ಲಾ ಸುಗಂಧಿ ವಸ್ತುಗಳನ್ನೂ ಸೇರಿಸಿ ಲೇಪಮಾಡಿದವನು ಮುಖ್ಯವಾದ ಅಶ್ವಮೇಧದ ಫಲವನ್ನು ಹೊಂದುತ್ತಾನೆ. ಇಲ್ಲಿ ಹೇಳಿರುವ ಎಲ್ಲಾ ಗಂಧಗಳಿಂದಲೂ ಲೇಪಿಸಿ ಸೇವಿಸಿದವನು ದೇವತೆಯಂತೆ ಎಲ್ಲಾ ಲೋಕಗಳಲ್ಲಿಯೂ ಕಾಮಚಾರಿಯಾಗುತ್ತಾನೆ. ಆ ಗಂಧದಲ್ಲಿ ಎಷ್ಟು ಪೃಥಿವಿಯ ಪರಮಾಣುಗಳವೆಯೋ ಅಷ್ಟು ವರ್ಷಗಳವರಿಗೂ ಈ ವೈಭವವನ್ನು ಅನುಭವಿಸುತ್ತಾನೆ. ಇದಲ್ಲದೆ ಇತರ ಯಾವ ಅನುಲೇಪವನ್ನೂ ಮಾಡಬಾರದು. ಇವುಗಳಲ್ಲಿ ಚಂದನವೇ ಮುಖ್ಯ ಈ ಚಂದನ

ಅನುಲೇಪನಮುಖ್ಯಂ ಚ ಚಂದನಂ ಪರಿಕೀರ್ತಿತಂ ।
ಅನುಲಿಪ್ಯ ಜಗನಾಥಂ ತಾಲವೃತೇನ ವೀಜಯೇತ್ ॥ ೧೭೧ ॥

ವಾಯುಲೋಕಮವಾಪ್ನೋತಿ ಪುರುಷಸ್ತೇನ ಕರ್ಮಣಾ ।
ಕೇಶಸೌಗಂಧ್ಯಜನನಂ ದತ್ತ್ವಾ ತು ಮೃಗಮದಂ ನರಃ ॥ ೧೭೨ ॥

ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಫಲಮಶ್ನುತೇ ।
ಯಚ್ಛತೇ ಯಸ್ತು ಗಂಧಾನಿ ಗಂಧಯುಕ್ತಿಕೃತಾನಿ ತು ॥ ೧೭೩ ॥

ಗಂಧರ್ವತ್ವಂ ಸ್ಮೃತಂ ತಸ್ಯ ಸೌಭಾಗ್ಯಂ ಚ ತಥೋತ್ತಮಂ ।
ಚಾಮರೈರ್ವೀಜಯೇದ್ಯಸ್ತು ದೇವದೇವಂ ಜನಾರ್ದನಂ ॥ ೧೭೪ ॥

ತಿಲಪ್ರಸ್ಥಪ್ರದಾನಸ್ಯ ಫಲಂ ಪ್ರಾಪ್ನೋತ್ಯಸಂಶಯಂ ।
ಏಕವಸ್ತ್ರಪ್ರದಾನೇನ ಸರ್ವಾನ್ಕಾಮಾನವಾಪ್ನುಯಾತ್ ॥ ೧೭೫ ॥

ಕಾರ್ಪಾಸಿಕಂ ವಸ್ತ್ರಯುಗ್ಮಂ ಯಃ ಪ್ರದದ್ಯಾಜ್ಜನಾರ್ದನೇ ।
ಯಾವಂತಿ ತಸ್ಯ ತಂತೂನಿ ಹಸ್ತಮಾತ್ರಮಿತಾನಿ ತು ॥ ೧೭೬ ॥

ದಿಂದ ಲೇಪಿಸಿ ಜಗತ್ಪತಿಯನ್ನು ಬೀಸಣಿಗೆಯಿಂದ ಬೀಸಿ ಸೇವಿಸಬೇಕು. ಈ ಸೇವೆ ಮಾಡಿದವನು ವಾಯುಲೋಕವನ್ನು ಹೊಂದುತ್ತಾನೆ.

೧೭೨-೧೭೬. ಕೂದಲಿಗೆ ವಾಸನೆಯನ್ನುಂಟುಮಾಡುವ ಕಸ್ತೂರಿಯನ್ನು ಅರ್ಪಿಸಿದವನು ಸಮೃದ್ಧವಾದ ಯಜ್ಞದ ಫಲವನ್ನೇ ಹೊಂದುತ್ತಾನೆ. ಎಲ್ಲಾ ಸುಗಂಧ ವಸ್ತುಗಳಿಂದ ಕೂಡಿದ ಗಂಧವನ್ನು ಅರ್ಪಿಸಿದವರಿಗೆ ಗಂಧರ್ವತ್ವವೂ, ಸೌಭಾಗ್ಯವೂ ಲಭಿಸುತ್ತದೆ. ಜನಾರ್ದನನಿಗೆ ಚಾಮರದಿಂದ ಬೀಸಿ ಸೇವೆಸಲ್ಲಿಸಿದವನು ಒಂದು ಕೊಳಗ ಎಳ್ಳಿನ ದಾನದ ಫಲವನ್ನು ಹೊಂದುತ್ತಾನೆ. ಒಂದು ವಸ್ತ್ರವನ್ನು ಅರ್ಪಿಸಿದವನು ತನ್ನ ಇಷ್ಟವನ್ನು ಹೊಂದುತ್ತಾನೆ. ನೂಲಿನ ಎರಡು ವಸ್ತ್ರಗಳನ್ನು ಅರ್ಪಿಸಿದವನು ಅದರಲ್ಲಿ ಎಷ್ಟು ನೂಲುಗಳಿರುವುವೋ ಅಷ್ಟುವರ್ಷ ಸ್ವರ್ಗವಲ್ಲಿ

ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ।
ಮಹಾರ್ಘತಾ ತಥಾ ತಸ್ಯ ಸಾಧುದೇಶೋದ್ಭವೋ ಯಥಾ ॥ ೧೭೭ ॥

ಸೂಕ್ಷ್ಮತಾ ಚ ಯಥಾ ವಿಪ್ರಾಸ್ತಥಾ ಪ್ರೋಕ್ತಂ ಫಲಂ ಮಹತ್ ।
ಸ್ವರ್ಗಭ್ರಷ್ಟಸ್ಯ ವಕ್ಷ್ಯಾಮಿ ವಸ್ತ್ರದಸ್ಯ ಫಲಾನ್ಯತಃ ॥ ೧೭೮ ॥

ಶುಕ್ಲವಸ್ತ್ರಪ್ರದಾನೇನ ಶ್ರಿಯಮಾಪ್ನೋತ್ಯನುತ್ತಮಾಂ ।
ಮಹಾರಜತದತ್ತೇನ ಸೌಭಾಗ್ಯಂ ಮಹದಶ್ನುತೇ ॥ ೧೭೯ ॥

[1]ನೀಲರಕ್ತಂ ವಿನಾ ರಕ್ತಂ ತೇಷ್ವೈ ರಕ್ತೈರ್ದ್ವಿಜೋತ್ತಮಾಃ ।
ಜಾತ್ಯಾ ಭವತಿ ಧರ್ಮಾತ್ಮಾ ಸರ್ವವ್ಯಾಧಿವಿವರ್ಜಿತಃ ॥ ೧೮೦ ॥

ನೀಲರಕ್ತಂ ತಥಾ ಜೀರ್ಣಂ ವಸ್ತ್ರಮನ್ಯಧೃತಂ ತಥಾ ।
ದೇವದೇವಾಯ ಯೋ ದದ್ಯಾತ್ಸರ್ವಪಾಪೈಃ ಪ್ರಮುಚ್ಯತೇ ॥ ೧೮೧ ॥

ದುಕೂಲಕಪ್ರದಾನೇನ ವಹ್ನಿಷ್ಟೋಮಫಲಂ ಲಭೇತ್ ।
ಕೌಶೇಯಾನಿ ಚ ವಸ್ತ್ರಾಣಿ ಮೃದೂನಿ ಲಘೂನಿ ಚ ॥ ೧೮೨ ॥

ಸುಖಿಯಾಗಿರುತ್ತಾನೆ. ವಸ್ತ್ರದ ಹಿರಿಮೆಗೂ, ಲಕ್ಷಣಕ್ಕೂ, ಸೂಕ್ಷ್ಮತೆಗೂ ತಕ್ಕಂತೆ ಮಹಾಫಲವೂ ಉಂಟು. ಸ್ವರ್ಗದಿಂದ ಭ್ರಷ್ಟನಾಗಿ ಭೂಮಿಯನ್ನು ಹೊಂದಿರುವವನಿಗೆ ವಸ್ತ್ರದಾನದ ಫಲವನ್ನೂ ಇನ್ನುಮುಂದೆ ಹೇಳುತ್ತೇನೆ.

೧೭೯–೧೮೩. ಬಿಳಿಯ ವಸ್ತ್ರದ ದಾನದಿಂದ ಒಳ್ಳೆಯ ಸಂಪತ್ತನ್ನೂ ಸರಿಗೆಯ ವಸ್ತ್ರದ ದಾನದಿಂದ ಹೆಚ್ಚಾದ ಸೌಭಾಗ್ಯವನ್ನೂ ಹೊಂದುತ್ತಾರೆ. ನೀಲರಕ್ತ ಹೊರತು ಇತರ ರಕ್ತವರ್ಣದ ವಸ್ತ್ರದಾನದಿಂದ ವ್ಯಾಧಿರಹಿತನೂ, ಧಾರ್ಮಿಕನೂ ಆಗುತ್ತಾನೆ. [1]ನೀಲರಕ್ತವಸ್ತ್ರವನ್ನೂ ಹರಿದುಹೋದ ವಸ್ತ್ರವನ್ನೂ, ಮತ್ತೊಬ್ಬರಿಂದ ಉಪಯೋಗಿಸಲ್ಪಟ್ಟ ವಸ್ತ್ರವನ್ನೂ ಸಹ ದೇವಾಧಿದೇವನಾದ ಹರಿಗೆ ಸಮರ್ಪಿಸಿದವನಿಗೆ ಪಾಪನಾಶವಾಗುವುದಿಲ್ಲ. ಮಡಿಯ ವಸ್ತ್ರದಾನದಿಂದ ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಮೃದುವಾಗಿಯೂ, ಲಘುವಾಗಿಯೂ ಇರುವ ರೇಷ್ಮೆಯ ವಸ್ತ್ರವನ್ನು ದಾನಮಾಡಿದವನು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ. ರೋಮಗಳಿಂದ

---

1 ಇಲ್ಲಿ ಮೂಲದ ಪಾಠವು ಪ್ರಕರಣೋಚಿತವಾಗಿಲ್ಲ ಯೋದದ್ಯಾತ್ಸಪಾಪೈರ್ನವಿಮುಚ್ಯತೆ ಎಂಬ ಪಾಠಪರಿವರ್ತನೆಯಿಂದ ಅರ್ಥಬರೆಯಲಾಗಿದೆ.

ಯಃ ಪ್ರಯಚ್ಛತಿ ದೇವಾಯ ಸೋಽಶ್ವಮೇಧಫಲಂ ಲಭೇತ್ ।
ಸಲೋಮಾನಿ ಚ ವಸ್ತ್ರಾಣಿ ಯಃ ಪ್ರಯಚ್ಛತಿ ಧರ್ಮವಿತ್ ॥ ೧೮೩ ॥

ಕೃತಾನಿ ವಾರವಾಣಾನಿ ಸೋಽಶ್ವಮೇಧಫಲಂ ಲಭೇತ್ ।
ರಾಂಕವಾ ಮೃಗಲೋಮಾಶ್ಚ ಕದಲ್ಯಶ್ಚ ತಥಾ ಶುಭಾಃ ॥ ೧೮೪ ॥

ಯೋ ದದ್ಯಾದ್ದೇವದೇವಾಯ ಸೋಽಶ್ವಮೇಧಫಲಂ ಲಭೇತ್ ।
ನಾನಾಭಕ್ತಿವಿಚಿತ್ರಾಣಿ ಚೀನಜಾನಿ ನವಾನಿ ಚ ॥ ೧೮೫ ॥

ದತ್ವಾ ವಾಸಾಂಸಿ ಶುಭ್ರಾಣಿ ರಾಜಸೂಯಫಲಂ ಲಭೇತ್ ।
ದತ್ವಾ ನಿಸ್ತ್ರಿಂಶಕಂ ಮುಖ್ಯಂ ಶತ್ರುಭಿರ್ನಾಭಿಭೂಯತೇ ॥ ೧೮೬ ॥

ದತ್ವಾ ತದ್ವದ್ಧನುರ್ಮುಖ್ಯಮಗ್ನಿಮೇಧಫಲಂ ಲಭೇತ್ ।
ಯಜ್ಞೋಪವೀತದಾನೇನ ಬ್ರಹ್ಮದಾನಫಲಂ ಲಭೇತ್ ॥ ೧೮೭ ॥

ಕರ್ಣಪೂರಪ್ರದಾನೇನ ಶ್ರುತಿಂ ವಿಂದತಿ ಸರ್ವಶಃ ।
ದತ್ವಾ ಪ್ರತಿಸರಂ ಮುಖ್ಯಂ ನ ಭೂತೈರಭಿಭೂಯತೇ ॥ ೧೮೮ ॥

ಕೂಡಿದ ವಸ್ತ್ರವನ್ನು ದಾನಮಾಡಿದವನೂ ಅದರಿಂದ ಮಾಡಲ್ಪಟ್ಟ ಕವಚವನ್ನು ದಾನಮಾಡಿದವನೂ ಅಶ್ವಮೇಧದ ಫಲವನ್ನು ಹೊಂದುತ್ತಾನೆ.

೧೮೪–೧೮೮. ಶಾಲುವೇ ಮೊದಲಾದ ಉಣ್ಣೆಯ ವಸ್ತ್ರಗಳನ್ನೂ, ಒಳ್ಳೊಳ್ಳೆಯ ಮೃಗರೋಮದ ವಸ್ತ್ರಗಳನ್ನೂ ಹರಿಗೆ ಅರ್ಪಿಸಿದವನು ಅಶ್ವಮೇಧದ ಫಲವನ್ನು ಹೊಂದುತ್ತಾನೆ. ನಾನಾವಿಧವಾದ ಚಿತ್ರಕೆಲಸಗಳಿಂದ ಕೂಡಿರುವ ಹೊಸದಾದ ಚೀನಾಂಬರ (ಪೀತಾಂಬರ) ವನ್ನು ಹರಿಗೆ ಅರ್ಪಿಸಿದವನು ರಾಜಸೂಯದ ಫಲವನ್ನು ಹೊಂದುತ್ತಾನೆ. ಒಳ್ಳೆಯ ಕತ್ತಿಯನ್ನು ಅರ್ಪಿಸಿದವನು ಶತ್ರುಗಳಿಂದ ಸೋಲು ಹೊಂದುವುದಿಲ್ಲ. ಒಳ್ಳೆಯ ಧನುಸ್ಸನ್ನು ದಾನಮಾಡಿದವನು ಅಗ್ನಿಮೇಧದ ಫಲವನ್ನು ಹೊಂದುತ್ತಾನೆ. ಯಜ್ಞೋಪವೀತದ ಅರ್ಪಣೆಯಿಂದ ವೇದದಾನದ ಫಲವನ್ನು ಹೊಂದುತ್ತಾನೆ. ಕರ್ಣಾಭರಣ ದಾನದಿಂದ ಒಳ್ಳೆಯ ಶ್ರವಣಶಕ್ತಿ ಹೊಂದುತ್ತಾನೆ ಕಂಕಣವನ್ನು ಅರ್ಪಿಸಿದವನು ಭೂತಾದಿಗಳಿಂದ ಭಯಹೊಂದುವುದಿಲ್ಲ

ಕೂರ್ಚಪ್ರಸಾದನಂ ದತ್ತ್ವಾ ಸುಖಮತ್ಯಂತಮಶ್ನುತೇ ।
ಕಂಕತಸ್ಯ ಪ್ರದಾನೇನ ವಿರೋಗಸ್ತ್ವಭಿಜಾಯತೇ ॥ ೧೮೯ ॥

ರೂಪವಾಂಶ್ಚ ಸುವೇಶಶ್ಚ ಸುಭಗಸ್ಸರ್ವಭಾಗಪಿ ।
ವಸ್ತ್ರಪ್ರದಾನಾದ್ಭವತಿ ಸರ್ವಕಾಮ ಸಮನ್ವಿತಃ ॥ ೧೯೦ ॥

ವಿಭೂಷಣಪ್ರದಾನೇನ ರಾಜಾ ಭವತಿ ಭೂತಲೇ ।
ರಮ್ಯಾಣಿ ರತ್ನಚಿತ್ರಾಣಿ ಸೌವರ್ಣಾನಿ ದ್ವಿಜೋತ್ತಮಾಃ ॥ ೧೯೧ ॥

ದತ್ತ್ವಾಭರಣಜಾತಾನಿ ರಾಜಸೂಯಮವಾಪ್ನುಯಾತ್ ।
ಪ್ರತಿರೂಪಕರತ್ನಾನಿ ನ ದೇಯಾನಿ ಕದಾಚನ ॥ ೧೯೨ ॥

ಪಾದಾಂಗುಲೀಯದಾನೇನ ಗುಹ್ಯಕಾಧಿಪತಿರ್ಭವೇತ್ ।
ಪಾದಾಭರಣದಾನೇನ ಸ್ಥಾನಂ ಸರ್ವತ್ರ ವಿಂದತಿ ॥ ೧೯೩ ॥

ಶ್ರೋಣೀಸೂತ್ರಪ್ರದಾನೇನ ಮಹೀಂ ಸಾಗರಮೇಖಲಾಂ ।
ಪ್ರಶಾಸ್ತಿ ನಿಹತಾಮಿತ್ರೋ ನಾತ್ರ ಕಾರ್ಯಾ ವಿಚಾರಣಾ ॥ ೧೯೪ ॥

೧೮೯-೧೯೨. ಕೇಶಸಂಸ್ಕಾರಸಾಧನ(ಬಾಚಣಿಗೆಯೇ ಮೊದಲಾದ)ಗಳನ್ನು ದಾನಮಾಡಿದವನು ಸುಖಿಯಾಗಿ ಬದುಕುತ್ತಾನೆ. ಶಿಕ್ಕಟ್ಟಿಗೆಯ ದಾನದಿಂದ ಆರೋಗನಾಗುತ್ತಾನೆ. ರೂಪವಂತನೂ, ಸೌಭಾಗ್ಯಶಾಲಿಯೂ ಆಗುತ್ತಾನೆ. ವಸ್ತ್ರದಾನವು ಎಲ್ಲಾ ಇಷ್ಟಾರ್ಥಗಳಿಗೂ ಸಾಧಕವಾಗುತ್ತದೆ. ಅಲಂಕಾರಗಳ ದಾನದಿಂದ ರಾಜನಾಗುತ್ತಾನೆ. ರತ್ನಗಳಿಂದ ಚಿತ್ರವಾದ ಚಿನ್ನದ ಆಭರಣಗಳನ್ನು ದಾನಮಾಡಿದವನು ರಾಜಸೂಯಯಾಗಕ್ಕೆ ಭಾಗಿಯಾಗುತ್ತಾನೆ. ಪ್ರತಿಕೃತಿಯನ್ನು ಹೊಂದಿರುವ ರತ್ನಗಳನ್ನು ಯಾವಾಗಲೂ ಕೊಡಬಾರದು.

೧೯೩-೧೯೪. ಪಾದಗಳ ಉಂಗುರಗಳನ್ನು ದಾನಮಾಡಿದವನು ಗುಹ್ಯಕರಿಗೆ ಅಧಿಪತಿಯಾಗುತ್ತಾನೆ. ಪಾದಾಭರಣಪ್ರದಾನದಿಂದ ಎಲ್ಲ ಕಡೆಯಲ್ಲಿಯೂ ಸ್ಥಾನ ಹೊಂದುತ್ತಾನೆ ಕಟಿಸೂತ್ರದಾನದಿಂದ ಸಮುದ್ರಪರ್ಯಂತವಾದ ಭೂಮಿಯನ್ನು ಶತ್ರುಬಾಧೆ ಇಲ್ಲದೆ ಆಳುತ್ತಾನೆ, ಇದರಲ್ಲಿ ಸಂಶಯವಿಲ್ಲ

ಹಸ್ತಾಂಗುಲೀಯದಾನೇನ ಪರಂ ಸೌಭಾಗ್ಯಮಾಪ್ನುಯಾತ್ ।
ತಥೈವಾಂಗದದಾನೇನ ರಾಜಾ ಭವತಿ ಭೂತಲೇ ॥ ೧೯೫ ॥

ಕೇಯೂರದಾನಾದ್ಭವತಿ ಶತ್ರುಪಕ್ಷಕ್ಷಯಂಕರಃ ।
ಗ್ರೈವೇಯಕಾನಿ ದತ್ವಾ ಚ ಸರ್ವಶಾಸ್ತ್ರಾರ್ಥವಿದ್ಭವೇತ್ ॥ ೧೯೬ ॥

ನಾರ್ಯಃ ಸುವಶಗಾಸ್ತಸ್ಯ ಭವಂತಿ ದ್ವಿಜಪುಂಗವಾಃ ।
ಶ್ರಿಯಮಾಪ್ನೋತಿ ಪರಮಾಂ ರಾಜಸೂಯಂ ಚ ವಿಂದತಿ ॥ ೧೯೭ ॥

ಕರ್ಣಾಭರಣದಾನೇನ ಭವೇಚ್ಛ್ರುತಿಧರೋ ನರಃ ।
ಅಶ್ವಮೇಧಮವಾಪ್ನೋತಿ ಸೌಭಾಗ್ಯಂ ಚೈವ ವಿಂದತಿ ॥ ೧೯೮ ॥

ಮೂರ್ಧಾಭರಣದಾನೇನ ರಾಜಸೂಯಫಲಂ ಲಭೇತ್ ।
ಮುಕುಟಸ್ಯ ಪ್ರದಾನೇನ ಮೂರ್ಧನ್ಯೋ ಭೂತಲೇ ಭವೇತ್ ॥ ೧೯೯ ॥

ಚತುಃಸಮುದ್ರವಲಯಾಂ ಪ್ರಶಾಸ್ತಿ ಚ ವಸುಂಧರಾಂ ।
ಅನುಕ್ತಾನ್ಯಪಿ ವಿಪ್ರೇಂದ್ರಾ ವಾಸಾಂಸ್ಯಾಭರಣಾನಿ ಚ ॥ ೨೦೦ ॥

೧೯೫–೧೯೯. ಕೈಬೆರಳುಗಳ ಉಂಗುರಗಳನ್ನು ದಾನಮಾಡಿದವನು ಹೆಚ್ಚಾದ ಸೌಭಾಗ್ಯ ಹೊಂದುತ್ತಾನೆ. ತೋಳುಬಳೆಯನ್ನು ಅರ್ಪಿಸಿದವನು ಶತ್ರುನಾಶಕನಾಗಿಯೂ ಕಂಠಾಭರಣವನ್ನು ದಾನಮಾಡಿದವನು ಸರ್ವಶಾಸ್ತ್ರಾರ್ಥಜ್ಞನಾಗಿಯೂ ಆಗುವರು. ಸ್ತ್ರೀಯರೂ ವಶ್ಯರಾಗುತ್ತಾರೆ ಹೆಚ್ಚಾದ ಸಂಪತ್ತನ್ನೂ ಹೊಂದಿ ರಾಜಸೂಯವನ್ನೂ ಮಾಡುತ್ತಾನೆ. ಕರ್ಣಾಭರಣದ ಅರ್ಪಣೆಯಿಂದ ವೇದಜ್ಞನಾಗಿದ್ದು, ಅಶ್ವಮೇಧಯಾಗದ ಫಲವನ್ನೂ ಹೊಂದುತ್ತಾನೆ. ತಲೆಯ ಆಭರಣಗಳ ದಾನದಿಂದ ರಾಜಸೂಯವನ್ನು ಹೊಂದುತ್ತಾನೆ. ಕಿರೀಟವನ್ನು ದಾನಮಾಡುವುದರಿಂದ ಭೂಮಿಯಲ್ಲಿಯೇ ಪ್ರಧಾನನಾಗುತ್ತಾನೆ. ಚತುಸ್ಸಮುದ್ರದ ಭೂಭಾಗಕ್ಕೂ ಪ್ರಭುವಾಗುತ್ತಾನೆ.

೨೦೦–೨೦೫. ಇಲ್ಲಿ ಹೇಳದೆ ಇರುವ ಇತರ ಆಭರಣಗಳನ್ನೂ ವಸ್ತ್ರಗಳನ್ನೂ ದಾನಮಾಡಿದವನು ಅಗ್ನಿಷ್ಟೋಮದ ಫಲವನ್ನೇ ಹೊಂದುತ್ತಾನೆ. ದೇವಾಲಯ

ದತ್ತ್ವೈವ ದೇವದೇವಾಯ ವಹ್ನಿಷ್ಟೋಮಫಲಂ ಲಭೇತ್ ।
ದಾನಂ ಸುಮನಸಾಂ ಶ್ರೇಷ್ಠಂ ತಥೈವ ಪರಿಕೀರ್ತಿತಂ ॥ ೨೦೧ ॥

ಅಲಕ್ಷ್ಮ್ಯಾಃ ಶಮನಂ ಮುಖ್ಯಂ ಪರಂ ಲಕ್ಷ್ಮೀವಿವರ್ಧನಂ ।
ಧನ್ಯಂ ಯಶಸ್ಯಮಾಯುಷ್ಯಂ ಮಾಂಗಲ್ಯಂ ಬುದ್ಧಿವರ್ಧನಂ ॥ ೨೦೨ ॥

ಸ್ವರ್ಗದಂ ಚ ತಥಾ ಪ್ರೋಕ್ತಂ ವಹ್ನಿಷ್ಟೋಮಫಲಪ್ರದಂ ।
ಪುಷ್ಪಾಲಾಭೇಽಪಿ ಯೋ ದದ್ಯಾದಪಿ ದೂರ್ವಾಂಕುರಾಣಿ ಚ ॥ ೨೦೩ ॥

ಸೋಽಪಿ ಪುಣ್ಯಮವಾಪ್ನೋತಿ ಹೇಮದಾನಸ್ಯ ವೈ ದ್ವಿಜಾಃ ।
ಪುಷ್ಪಾಲಾಭೇಽಪಿ ದೇಯಾನಿ ಪತ್ರಾಣ್ಯಪಿ ಜನಾರ್ದನೇ ॥ ೨೦೪ ॥

ಪತ್ರಾಲಾಭೇ ಜಲಂ ದದ್ಯಾತ್ತೇನ ಪುಣ್ಯಮುಪಾಶ್ನುತೇ ।
ಪತ್ರಂ ಪುಷ್ಪಂ ಫಲಂ ತೋಯಂ ಭಕ್ತ್ಯಾ ದೇಯಂ ಜನಾರ್ದನೇ ॥೨೦೫॥

ತೇನ ಲೋಕಾನವಾಪ್ನೋತಿ ಭಕ್ತಿರೇವಾತ್ರ ಕಾರಣಂ ।
ಭೃಂಗರಾಜಸ್ಯ ಬಿಲ್ವಸ್ಯ ಚಕ್ರಪುಷ್ಪಸ್ಯ ಚ ದ್ವಿಜಾಃ ॥ ೨೦೬ ॥

ಕ್ಕಾಗಿ ಮಾಡುವ ದಾನಗಳಲ್ಲಿ ಹೂವುಗಳ ದಾನವು ಪ್ರಶಸ್ತ. ಇದು ಅಮಂಗಲಕೆ ನಾಶಕವಾಗಿಯೂ ಮಂಗಲಪ್ರದವೂ ಆಗುತ್ತದೆ. ಬಹುಮಟ್ಟಿಗೂ ಯಶಸ್ಕರವೂ, ಸ್ವರ್ಗಪ್ರದವೂ, ಅಗ್ನಿಷ್ಟೋಮದ ಫಲಪ್ರದವೂ ಆಗುತ್ತದೆ. ಹೂವುಗಳಿಲ್ಲದಿದ್ದರೂ ಸಹ ಗರಿಕೆಯ ಚಿಗುರನ್ನು ದಾನಮಾಡಿದರೂ ಅದು ಚಿನ್ನದ ದಾನಕ್ಕೆ ಸಮವಾದ ಪುಣ್ಯವನ್ನು ಗಳಿಸಿಕೊಡುತ್ತದೆ. ಪುಷ್ಪಗಳಿಲ್ಲದಿರುವಾಗ ಪತ್ರಗಳನ್ನಾದರೂ ಆ ಜನಾರ್ದನನಿಗೆ ಅರ್ಪಿಸಬಹುದು. ಅದೂ ಇಲ್ಲದಿರುವಾಗ ಜಲವನ್ನಾದರೂ ಅರ್ಪಿಸಿ ದಲ್ಲಿ ಪುಣ್ಯಶಾಲಿಯಾಗುತ್ತಾನೆ ಪತ್ರ, ಪುಷ್ಪ, ಫಲ, ಜಲ ಇವುಗಳಲ್ಲಿ ಯಾವುದ ನ್ನಾದರೂ ಭಕ್ತಿಯಿಂದ ಸಮರ್ಪಿಸಬಹುದು.

೨೦೬-೨೦೯. ಇಂತಹ ಅರ್ಪಣೆಗಳಲ್ಲಿ ಭಕ್ತಿಯೇ ಮುಖ್ಯ ವಸ್ತುವಿನ ಉತ್ತಮಾಧಮಭಾವವು ಪ್ರಧಾನವಲ್ಲ. ಇಂತಹ ಅರ್ಪಣೆಯಿಂದಲೂ ಇಷ್ಟವಾದ

ತಥೈವ ಬೀಜಪೂರಾಣಿ ಪತ್ರಾಣಿ ತು ನಿವೇದಯೇತ್ ।
ಏತೇಷಾಮಪಿ ಚೈಕಸ್ಯ ಪತ್ರದಾನಂ ಮಹಾಫಲಂ ॥ ೨೦೭ ॥

ಪತ್ರಾಣಿ ತು ಸುಗಂಧೀನಿ ಪಲ್ಲವಾನಿ ಮೃದೂನಿ ಚ ।
ತೇನ ಪುಣ್ಯಮವಾಪ್ನೋತಿ ಪುಷ್ಪದಾನ ಸಮುದ್ಭವಂ ॥ ೨೦೮ ॥

ಉಗ್ರಗಂಧೀನ್ಯಗಂಧೀನಿ ಕುಸುಮಾನಿ ನ ದಾಪಯೇತ್ ।
ಅನ್ಯಾಯತನ ಜಾತಾನಿ ಕಂಟಕೀನಿ ತಥೈವ ಚ ॥ ೨೦೯ ॥

ಉಕ್ತಾನಿ ಯಾನಿ ಧರ್ಮಜ್ಞಾಶ್ಚೈತ್ಯವೃಕ್ಷೋದ್ಭವಾನಿ ಚ ।
ತಥಾ ಶ್ಮಶಾನಜಾತಾನಿ ಯಾನಿ ಚಾಕಾಲಜಾನಿ ಚ ॥ ೨೧೦ ॥

ದಾನಂ ವಿವರ್ಜಯೇ ದ್ವೈತಾನ್ಯಪ್ಪಿಷ್ಟಾಣಾಮಸುಗಂಧಿನಾಂ ।
ಸುಗಂಧೀನಿ ಮನೋಜ್ಞಾನಿ ಕುಸುಮಾನಿ ದ್ವಿಜೋತ್ತಮಾಃ ॥ ೨೧೧ ॥

ಕೃತ್ರಿಮೇನೋಪಪಾದ್ಯಾನಿ ಗಂಧಿತಾನಿ ಸುಗಂಧಿನಾ ।
ಧೂಪೇನ ಚೈವ ವಾಸೇನ ಚಂದನಾದ್ಯೈಶ್ಚ ಲೇಪನೈಃ ॥ ೨೧೨ ॥

ಲೋಕಗಳನ್ನು ಹೊಂದಬಹುದು ಭೃಂಗರಾಜ, ಬಿಲ್ವ, ಚಕ್ರಪುಷ್ಪ ಇತ್ಯಾದಿಗಳ ಪತ್ರವನ್ನೂ ಅರ್ಪಿಸಬಹುದು. ಇವುಗಳಲ್ಲಿ ಯಾವುದಾದರೊಂದು ಪತ್ರದಾನವೂ ಮುಖ್ಯ. ಈ ಪತ್ರಗಳೂ ಸುಗಂಧಿಗಳಾಗಿಯೂ, ಚಿಗುರುಗಳಾಗಿಯೂ, ಮೃದುವಾಗಿಯೂ ಇದ್ದಲ್ಲಿ ಪುಷ್ಪದಾನದ ಫಲವನ್ನೇ ಹೊಂದಬಹುದು. ಕಟುವಾದ ವಾಸನೆಯುಳ್ಳ ಮತ್ತು ವಾಸನೆಯೇ ಇಲ್ಲದ ಹೂವುಗಳನ್ನು ಅರ್ಪಿಸಬಾರದು. ಇತರ ದೇವಗೃಹದಲ್ಲಿ ಬೆಳೆದ ಮತ್ತು ಮುಳ್ಳಿನಿಂದ ಕೂಡಿರುವ ಹೂವುಗಳನ್ನೂ ಅರ್ಪಿಸಬಾರದು.

೨೧೦–೨೧೬ ವಿಹಿತವಾಗಿರುವ ಪುಷ್ಪಪತ್ರಗಳ ಹೊರತು ಇತರ ಬೌದ್ಧಾಲಯಗಳಲ್ಲಿಯಾಗಲಿ, ಸ್ಮಶಾನದಲ್ಲಿಯಾಗಲಿ ಬೆಳೆದ ಪತ್ರಾದಿಗಳನ್ನೂ, ಅಕಾಲದಲ್ಲಿ ಬೆಳೆದುವುಗಳನ್ನೂ ಸುಗಂಧವಿಲ್ಲದಿರುವುಗಳನ್ನೂ ತ್ಯಜಿಸಬೇಕು. ಒಳ್ಳೆಯ ಸುಗಂಧದಿಂದ ಕೂಡಿ ರಮ್ಯವಾಗಿಯೂ, ಇತರ (ಕೃತಿ) ವಿಧಾನಗಳಿಂದ ಸುಗಂಧಿಗಳಾಗಿ ಮಾಡಲ್ಪಟ್ಟಿರುವವೂ, ಧೂಪಗಳಿಂದಲೂ ಗಂಧಾದಿಗಳಿಂದಲೂ ಸುಗಂಧಹೊಂದಿಯೂ

ಕಂಟಕೀನ್ಯಪಿ ದೇಯಾನಿ ಶುಕ್ಲಾನಿ ಸುರಭೀಣಿ ಚ ।
ತಥಾ ರಕ್ತಾನಿ ದೇಯಾನಿ ಜಲಜಾನಿ ವಿಶೇಷತಃ ॥ ೨೧೩ ॥

ಕುಂಕುಮಸ್ಯ ಚ ಪುಷ್ಪಾಣಿ ಬಂಧುಜೀವಸ್ಯ ಚಾಪ್ಯಥ ।
ಚಂಪಕಸ್ಯ ಚ ದೇಯಾನಿ ತಥಾ ಭೂಚಂಪಂಕಸ್ಯ ಚ ॥ ೨೧೪ ॥

ಪೀತಯೂಥಿಕಜಾನ್ಯೇವ ಮಾಷಬನ್ಮಾಲ್ಯಜಾನ್ಯಪಿ ।
ಮಂಜರ್ಯಃ ಸಹಕಾರಸ್ಯ ತಥಾ ದೇಯಾ ಜನಾರ್ದನೇ ॥ ೨೧೫ ॥

ಮಲ್ಲಿಕಾಕುಂದಕುಸುಮಮತಿಮುಕ್ತಕಮೇವ ಚ ।
ಸರ್ವಾಶ್ಚ ಯೂಥಿಕಾಜಾತ್ಯೋ ಮಲ್ಲಿಕಾಜಾತ್ಯ ಏವ ಚ ॥ ೨೧೬ ॥

ಯಾಶ್ಚ ಕುಪ್ಯಕಜಾತಾಶ್ಚ ಕದಂಬಕುಸುಮಾನಿ ಚ ।
ಕೇತಕೀಪಾಲಟಂ ಪುಷ್ಪಂ ಬಾಣಪುಷ್ಪಂ ತಥೈವ ಚ ॥ ೨೧೭ ॥

ಏವಮಾದೀನಿ ದೇಯಾನಿ ಗಂಧವಂತಿ ಶುಭಾನಿ ಚ ।
ಕರವೀರಸ್ಯ ಪುಷ್ಪಾಣಿ ತಥಾ ಧತ್ತೂರಕಸ್ಯ ಚ ॥ ೨೧೮ ॥

ಇರುವ ಹೂವುಗಳು ಅರ್ಹವಾಗುತ್ತವೆ. ಮುಳ್ಳುಗಿಡದ ಹೂವುಗಳೂ ಸಹ ಬಿಳುಪಾಗಿಯೂ ಸುಗಂಧಿಗಳಾಗಿಯೂ ಇದ್ದಲ್ಲಿ ಅರ್ಹವಾಗುತ್ತವೆ. ನೀರಿನಲ್ಲಿ ಬೆಳೆದ ಹೂವುಗಳಲ್ಲಿ ಕೆಂಪುಹೂವುಗಳ ಅರ್ಪಣವು ವಿಶೇಷವಾಗಿಯೂ ಫಲಪ್ರದ. ಕುಂಕುಮಪುಷ್ಪ, ಬಂದೂಕಪುಷ್ಪ. ಸಂಪಿಗೆ, ಭೂಸಂಪಿಗೆ, ಹಳದಿಯ ಶಾವಂತಿಗೆ, ಸಿಹಿಮಾವಿನ ಹೂಗೊಂಚಲು ಇವನ್ನೂ ಜನಾರ್ದನನಿಗೆ ಅರ್ಪಿಸಬಹುದು ಮಲ್ಲಿಗೆ, ಮಲ್ಲೆ, ಸೂಜಮಲ್ಲಿಗೆ ಇದರ ಭೇದಗಳಾದ ಗೊಂಚಲಿನೊಡನೆ ಇರುವ ಹೂವುಗಳೂ ಅರ್ಹವಾಗುತ್ತವೆ.

೨೧೭-೨೨೦. ಪೊದರಿನಲ್ಲಿ ಬೆಳೆದ ಹೂವುಗಳೂ, ಕದಂಬದ (ಕೊಡಸಿಗೆ) ಹೂವುಗಳೂ, ತಾಳೆ, ಪಾದರಿ, ಬಾಣ ಇವೇ ಮೊದಲಾದ ಸುಗಂಧಿಯಾದ ಒಳ್ಳೆಯ ಹೂವುಗಳು ಸಮರ್ಪಣಕ್ಕೆ ಅರ್ಹವಾಗಿವೆ. ಕಣಿಗಿಲೆ, ದತ್ತೂರ, ಕಪ್ಪುಕುಂಚಟಕ, ಎಕ್ಕ ಈ ಹೂವುಗಳನ್ನು ಜನಾರ್ದನನಿಗೆ ಅರ್ಪಿಸಬಾರದು. ಎಲ್ಲಾ ಜಾತಿಯ ಹೂವು

ಕೃಷ್ಣಕಂಚಟಕಂ ನಾರ್ಕಂ ನೈವ ದೇಯಂ ಜನಾರ್ದನೇ ।
ಸರ್ವಾಸಾಂ ಪುಷ್ಪಜಾತೀನಾಂ ಜಾತಿಃ ಶ್ರೇಷ್ಠಾ ತಥಾ ಸ್ಮೃತಾ ॥ ೨೧೯ ॥

ಜಾತೀನಾಮಪಿ ಸರ್ವಾಸಾಂ ಶುಕ್ಲಾ ಜಾತಿಃ ಪ್ರಶಸ್ಯತೇ ।
ಕೇಚಿದ್ವರ್ಣಗುಣಾ ದೇಯಾಃ ಕೇಚಿದ್ಗಂಧಗುಣಾಸ್ತಥಾ ॥ ೨೨೦ ॥

ಅನುಕ್ತಾನ್ಯಪಿ ನಾಮಾನಿ ತಥಾ ದೇಯಾನಿ ಕಾನಿಚಿತ್ ।
ದೇಶೇ ದೇಶೇ ಯಥಾ ಕಾಲೇ ಯಾನಿ ಪುಷ್ಪಾಣ್ಯನೇಕಶಃ ॥ ೨೨೧ ॥

ಗಂಧವರ್ಣೋಪಪನ್ನಾನಿ ತಥಾ ದೇಯಾನಿ ನಿತ್ಯಶಃ ।
ಸುಗಂಧಿಪುಷ್ಪೈರ್ಯಃ ಕುರ್ಯಾತ್ಪೂಜಾಂ ಮಧುರಿಪೋರ್ನರಃ ॥ ೨೨೨ ॥

ತಸ್ಯ ಪ್ರಸಾದಮಾಯಾತಿ ದೇವಶ್ಚಕ್ರಗದಾಧರಃ ।
ಧನ್ಯಾಃ ಪುರಂಧ್ರಿಮಂಜರ್ಯೋ ದಯಿತಾಸ್ತಸ್ಯ ನಿತ್ಯಶಃ ॥ ೨೨೩ ॥

ಪುರಂಧ್ರಿಪುಷ್ಪಂ ಯೋ ದದ್ಯಾದೇಕಮಪ್ಯಥ ಪಂಡಿತಃ ।
ತಿಲಪ್ರಸ್ಥಪ್ರದಾನಸ್ಯ ಫಲಂ ಪ್ರಾಪ್ನೋತ್ಯಸಂಶಯಂ ॥ ೨೨೪ ॥

ಗಳಿಗಿಂತಲೂ ಜಾತಿ (ಜಾಜಿ) ಯ ಹೂವು ಪ್ರಶಸ್ತವೆಂದು ಹೇಳಲ್ಪಟ್ಟಿದೆ. ಅದರಲ್ಲಿಯೂ ಬಿಳಿಯ ಜಾಜಿಯು ಪ್ರಶಸ್ತ: ಇನ್ನೂ ಕೆಲವು ಹೂವುಗಳನ್ನು ನಾವು ಇಲ್ಲಿ ಹೇಳದಿದ್ದರೂ ವರ್ಣದಲ್ಲಿಯೂ ವಾಸನೆಯಲ್ಲಿಯೂ ಉತ್ತಮವಾದ ಅವುಗಳೂ ಸಹ ಸಮರ್ಪಣೆಗೆ ಅರ್ಹವಾಗುತ್ತವೆ

೨೨೧-೨೨೪. ಎಲ್ಲಾ ದೇಶದಲ್ಲಿಯೂ ಆಯಾಯ ಕಾಲವನ್ನನುಸರಿಸಿ ಉಂಟಾದ ಹೂವುಗಳೂ ವರ್ಣಗಂಧಗಳಿಂದ ಉತ್ತಮವಾಗಿದ್ದಲ್ಲಿ ಅವೂ ಅರ್ಹವಾಗುತ್ತವೆ. ಸುಗಂಧಿಯಾದ ಹೂವುಗಳಿಂದ ಯಾವನು ಮಧುಸೂದನನನ್ನು ಪೂಜಿಸುತ್ತಾನೆಯೋ ಅವನ ವಿಷಯದಲ್ಲಿ ಆ ಚಕ್ರಪಾಣಿಯೂ ಪ್ರಸನ್ನನೇ ಆಗುತ್ತಾನೆ. ಧಾನ್ಯ ಮತ್ತು ಪುರಂಧ್ರಿ ಎಂಬ ಹೂಗಳ ಗೊಂಚಲಿನಲ್ಲಿ ದೇವರಿಗೆ ಬಹುಪ್ರೀತಿ. ಈ ಪುರಂಧ್ರಿ ಪುಷ್ಪವನ್ನು ಒಂದನ್ನಾಗಲಿ ಭಕ್ತಿಯಿಂದ ಸಮರ್ಪಣೆ ಮಾಡಿದ ಪಂಡಿತನು ಒಂದು ಕೊಳಗ ಎಳ್ಳಿನ ದಾನದ ಫಲವನ್ನೇ ಹೊಂದುತ್ತಾನೆ ಈ ಪುರಂಧ್ರಿ ಪುಷ್ಪಗಳ

ಪುರಂಧ್ರಿಮಂಜರೀಪುಷ್ಪ ಸಹಸ್ರೇಣಾರ್ಚಯೇದ್ಧರಿಂ ।
ಅಗ್ನಿಷ್ಟೋಮಮವಾಪ್ನೋತಿ ಕುಲಮುದ್ಧರತೇ ತಥಾ　　॥ ೨೨೫ ॥

ಕರ್ಪೂರರಪಟವಾಸೇನ ಪುರಂಧ್ರಿಮಥ ವಾಸಿತಾಂ ।
ಮಹಾರಜತರಕ್ತೇನ ತಥಾ ಸೂತ್ರೇ ನಿವೇಶಿತಾಂ　　॥ ೨೨೬ ॥

ಮಾಲಾಪುಷ್ಪಸಹಸ್ರೇಣ ಯಃ ಪ್ರಯಚ್ಛತಿ ಭಕ್ತಿತಃ ।
ಅಶ್ವಮೇಧಫಲಂ ತಸ್ಯ ನಾತ್ರ ಕಾರ್ಯಾ ವಿಚಾರಣಾ　　॥ ೨೨೭ ॥

ಶತೇನ ವಾಜಪೇಯಸ್ಯ ಫಲಮಾಪ್ನೋತ್ಯಸಂಶಯಂ ।
ಲಕ್ಷಪೂಜಾಂ ತಥಾ ಕೃತ್ವಾ ಸರ್ವಜ್ಞಾನಾನ್ಯವಾಪ್ನುಯಾತ್　　॥ ೨೨೮ ॥

ನಂದನಾದ್ಯೇಷು ಮುಖ್ಯೇಷು ದೇವೋದ್ಯಾನೇಷು ಚಾಪ್ಯಥ ।
ಕ್ರೀಡತೇ ದೇವರಾಮಾಭಿರ್ದೇವ ದುಂದುಭಿತಸ್ಥಿರಂ　　॥ ೨೨೯ ॥

ದತ್ವಾ ನೀಲೋತ್ಪಲಯುತಂ ಕುಸುಮಂ ಕುಂಕುಮಸ್ಯ ಚ ।
ತುಲ್ಯಂ ಫಲಮವಾಪ್ನೋತಿ ಬಂಧುಜೀವಸ್ಯ ಚ ದ್ವಿಜಾಃ　　॥ ೨೩೦ ॥

ಸಾವಿರ ಗೊಂಚಲಿನಿಂದ ಹರಿಯನ್ನು ಪೂಜಿಸಿದವನು ಅಗ್ನಿಷ್ಟೋಮದ ಫಲವನ್ನೇ ಹೊಂದುತ್ತಾನೆ. ತನ್ನ ಕುಲವನ್ನೂ ಉದ್ಧರಿಸುತ್ತಾನೆ.

೨೨೬-೨೩೧. ಕರ್ಪೂರರದ ಧೂಪದಿಂದ ಈ ಪುರಂಧ್ರಿ ಪುಷ್ಪದ ಗೊಂಚಲನ್ನು ಸುವಾಸನೆಯುಂಟಾಗುವಂತೆ ಮಾಡಿ ಕೆಂಪಾದ ಕಲಾಪತ್ತಿನ ದಾರದಲ್ಲಿ ಕಟ್ಟಿ, ಮಾಲಿಕಾರೂಪದಲ್ಲಿ ಸಾವಿರ ಹೂವುಗಳನ್ನು ಭಕ್ತಿಯಿಂದ ಸಮರ್ಪಿಸಿದವನು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ. ಇದರಲ್ಲಿ ವಿಚಾರಮಾಡಬೇಕಾದುದಿಲ್ಲ. ನೂರು ಹೂವುಗಳನ್ನು ಹೀಗೆ ಅರ್ಪಿಸಿದವನು ವಾಜಪೇಯ ಯಾಗದ ಫಲಕ್ಕೆ ಭಾಗಿಯಾಗುತ್ತಾನೆ. ಲಕ್ಷಪೂಜೆ ಮಾಡಿದವನು ಸರ್ವಯಜ್ಞಗಳ ಫಲಕ್ಕೂ ಭಾಗಿಯಾಗುತ್ತಾನೆ. ನಂದನವೇ ಮೊದಲಾದ ದೇವೋದ್ಯಾನಗಳಲ್ಲಿ ದೇವದುಂದುಭಿಯೊಡಗೂಡಿದ ಅಪ್ಸರೆಯರ ಕ್ರೀಡೆಗಳಲ್ಲಿಯೂ ಭಾಗಿಯಾಗುತ್ತಾನೆ. ನೀಲವಾದ ನೈದಿಲೆಯೊಡಗೂಡಿದ ಕುಂಕುಮ ಪುಷ್ಪವನ್ನು ಅರ್ಪಿಸಿದವನೂ, ಬಂಧುಜೀವ ಪುಷ್ಪ

ಸುವರ್ಣಯವದಾನಸ್ಯ ಫಲಂ ಪ್ರಾಪ್ನೋತಿ ಮಾನವಃ ।
ದತ್ವಾತು ನೀಲೋತ್ಪಲಂ ವಿಷ್ಣೋರ್ನಾತ್ರ ಕಾರ್ಯಾ ವಿಚಾರಣಾ ॥ ೨೩೦ ॥

ನೀಲೋತ್ಪಲಶತಂ ದತ್ವಾ ವಹ್ನಿಷ್ಟೋಮಫಲಂ ಲಭೇತ್ ।
ನೀಲೋತ್ಪಲ ಸಹಸ್ರೇಣ ಪುಂಡರೀಕಮವಾಪ್ನುಯಾತ್ ॥ ೨೩೧ ॥

ಲಕ್ಷಪೂಜಾಂ ತಥಾ ಕೃತ್ವಾ ರಾಜಸೂಯ ಫಲಂ ಲಭೇತ್ ।
ರೂಪ್ಯಮಾಷಪ್ರದಾನಸ್ಯ ಫಲಂ ಕುಂಕುಮದೋ ಲಭೇತ್ ॥ ೨೩೨ ॥

ಕುಮುದಾನಾಂ ಶತಂ ದತ್ವಾ ಚಂದ್ರಲೋಕೇ ಮಹೀಯತೇ ।
ಸಹಸ್ರಂ ಚ ತಥಾ ದತ್ವಾ ಯಥೇಷ್ಟಾಂ ಗತಿಮಾಪ್ನುಯಾತ್ ॥ ೨೩೪ ॥

ಅಶ್ವಮೇಧಮವಾಪ್ನೋತಿ ಲಕ್ಷಪೂಜಾವಿಧಾಯಕಃ ।
ಸ್ವಯಂ ಚೈನಂ ತಥಾ ಲಕ್ಷ್ಮೀರ್ಭಜತೇ ನಾತ್ರ ಸಂಶಯಃ ॥ ೨೩೫ ॥

ಗಳನ್ನು ಈರೀತಿ ಅರ್ಪಿಸಿದವನೂ ಸಹ ಸುವರ್ಣದಾನಕ್ಕೆ ಸಮವಾದ ಫಲವನ್ನು ಹೊಂದುತ್ತಾರೆ. ನೈದಿಲೆ ಹೂವುಗಳನ್ನೇ ಅರ್ಪಿಸಿದವನಿಗೂ ಇದೇ ಫಲವು ಲಭಿಸುತ್ತದೆ.

೨೩೨-೨೩೫. ನೂರು ನೈದಿಲೆ ಹೂವುಗಳನ್ನು ಸಮರ್ಪಿಸಿದವನು ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಸಾವಿರ ಹೂವುಗಳಿಂದ ಪುಜಿಸಿದವನು ಪುಂಡರೀಕಯಾಗದ ಫಲವನ್ನೇ ಹೊಂದುತ್ತಾನೆ. ಲಕ್ಷಪೂಜೆ ಮಾಡಿದವನು ರಾಜಸೂಯದ ಫಲಕ್ಕೆ ಭಾಗಿಯಾಗುತ್ತಾನೆ. ಕುಂಕುಮ ಕುಸುಮಗಳಿಂದ ಪೂಜಿಸಿದವನು ಬೆಳ್ಳಿ ಚಿನ್ನ ಇವುಗಳ ದಾನದ ಫಲ ಹೊಂದುತ್ತಾನೆ. ನೂರು ಕುಮುದ ಪುಷ್ಪಗಳಿಂದ ಪೂಜಿಸಿದವನು ಚಂದ್ರಲೋಕದಲ್ಲಿ ಮಾನ್ಯನಾಗುತ್ತಾನೆ ಸಾವಿರ ಪುಷ್ಪಗಳಿಂದ ಪೂಜಿಸಿದವನು ತನಗೆ ಇಷ್ಟವಾದ ಲೋಕಗಳನ್ನು ಹೊಂದುತ್ತಾನೆ. ಲಕ್ಷ ಕುಸುಮಗಳಿಂದ ಪೂಜಿಸಿದವನು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ. ಲಕ್ಷ್ಮಿಯೂ ತಾನಾಗಿ ಇವನನ್ನು ಹೊಂದುತ್ತಾಳೆ.

ರಕ್ತಪದ್ಮಪ್ರದಾನೇನ ರುಕ್ಮಮಾಷಪ್ರದೋ ಭವೇತ್ ।
ಲತಾಂ ದತ್ವಾ ಚ ಧರ್ಮಾತ್ಮಾ ವಹ್ನಿಷ್ಟೋಮಫಲಂ ಲಭೇತ್ ॥ ೨೩೬ ॥

ಸಹಸ್ರಂ ಚ ತಥಾ ದತ್ವಾ ಸೂರ್ಯಲೋಕೇ ಮಹೀಯತೇ ।
ವಿಷ್ಣುಲೋಕಮವಾಪ್ನೋತಿ ಲಕ್ಷಪೂಜಾವಿಧಾಯಕಃ ॥ ೨೩೭ ॥

ಸ್ವಯಮೇನಂ ತಥಾ ಲಕ್ಷ್ಮೀರ್ಭಜತೇ ನಾತ್ರ ಸಂಶಯಃ ।
ರಕ್ತಪದ್ಮಪ್ರದೋ ವಿಷ್ಣೋಸ್ತಸ್ಯ ಸ್ಯಾದ್ದ್ವಿಗುಣಂ ಫಲಂ ॥ ೨೩೮ ॥

ನೀಲೋತ್ಪಲಸಮಂ ದಾನಂ ಚಂಪಕಸ್ಯ ಪ್ರಕೀರ್ತಿತಂ ।
ಮಲ್ಲಿಕಾಪುಷ್ಪಜಾತೀನಾಂ ಯೂಥಿಕಾಯಾಸ್ತಥೈವ ಚ ॥ ೨೩೯ ॥

ತಥಾ ಕುಬ್ಜಕಜಾತೀನಾಂ ಫಲಸ್ಯಾರ್ಧಂ ಪ್ರಕೀರ್ತಿತಂ ।
ಜಾತೀಪುಷ್ಪಪ್ರದಾನೇನ ಗಂಧರ್ವೈಃ ಸಹ ಮೋದತೇ ॥ ೨೪೦ ॥

೨೩೬–೨೪೦. ಕೆಂಪುಕಮಲಗಳಿಂದ ಪೂಜಿಸಿದವನು ಮಾಷಪರಿಮಿತ ಸುವರ್ಣದಾನ ಫಲಕ್ಕೆ ಭಾಗಿಯಾಗುತ್ತಾನೆ. ಕಮಲಗಳಿಂದ ಕೂಡಿರುವ ಲತೆಯನ್ನೇ ಅರ್ಪಿಸಿ ಪೂಜಿಸಿದವನು ಅಗ್ನಿಷ್ಟೋಮದ ಫಲವನ್ನೇ ಹೊಂದುತ್ತಾನೆ ಅಂತಹ ಸಾವಿರ ಲತೆಗಳಿಂದ ಪೂಜಿಸಿದವನು ಸೂರ್ಯಲೋಕವನ್ನೇ ಹೊಂದುತ್ತಾನೆ. ಲಕ್ಷ ಲತೆಗಳಿಂದ ಪೂಜಿಸಿದವನು ವಿಷ್ಣುಲೋಕವನ್ನೇ ಹೊಂದುತ್ತಾನೆ ಲಕ್ಷ್ಮಿಯೂ ತಾನಾಗಿಯೇ ಇವನನ್ನು ಬಂದು ಸೇರುತ್ತಾಳೆ, ಇದರಲ್ಲಿ ಸಂಶಯವಿಲ್ಲ ಸಂಪಿಗೆಯ ಹೂವಿನ ಅರ್ಪಣೆಗೆ ಸಮಾನವಾಗಿಯೇ ನೀಲೋತ್ಪಲ (ನೈದಿಲೆ) ದ ಅರ್ಪಣೆಯೂ ಆಗುತ್ತದೆ. ಮಲ್ಲಿಗೆ, ಶಾವಂತಿಗೆ ಜಾಜಿ ಇವುಗಳ ಗೊಂಚಲಿನ ಸಮರ್ಪಣೆಗೂ, ಪೊದರಿನಲ್ಲಿರುವ ಪುಷ್ಪಜಾತಿಗಳಿಗೂ, ಸಹ ಮೇಲೆ ಹೇಳಿರುವ ಫಲದಲ್ಲಿ ಅರ್ಧ ಉಂಟು. ಜಾಜೀಹೂವಿನ ಸಮರ್ಪಣೆಯಿಂದ ಗಂಧರ್ವಲೋಕದಲ್ಲಿ ಮಾನ್ಯನಾಗುತ್ತಾನೆ.

ಜಾತೀಪುಷ್ಪಾಷ್ಟಕಂ ದತ್ವಾ ವಹ್ನಿಷ್ಟೋಮಫಲಂ ಲಭೇತ್ ।
ಜಾತೀಪುಷ್ಪಸಹಸ್ರೇಣ ಯಥೇಷ್ಟಾಂಗತಿಮಾಪ್ನುಯಾತ್ ॥ ೨೪೧ ॥

ಶ್ವೇತದ್ವೀಪಮವಾಪ್ನೋತಿ ಲಕ್ಷಪೂಜಾವಿಧಾಯಕಃ ।
ಜಾತೀಪುಷ್ಪೈಯುತಾಂ ಮಾಲಾಂ ಕರ್ಪೂರಪಟವಾಸಿತಾಂ ॥ ೨೪೨ ॥

ನಿವೇದ್ಯ ದೇವದೇವಾಯ ಯತ್ಫಲಂ ಪ್ರಾಪ್ನುಯಾನ್ನರಃ ।
ಶ್ವೇತೈ ಪುಷ್ಪೈಃ ಸಮಭ್ಯರ್ಚ್ಯ ಸರ್ವಾನ್ಕಾಮಾನವಾಪ್ನುಯಾತ್ ॥ ೨೪೩ ॥

ಆಶ್ಚರ್ಯಮಾಪ್ನುಯಾಲ್ಲೋಕೇ ಪೀತೈರ್ದೇವಂ ಸಮರ್ಚಯನ್ ।
ಶತ್ರೂಣಾಮಭಿಚಾರೇಷು ತಥಾ ಕೃಷ್ಣೈಸ್ಸಮರ್ಚಯೇತ್ ॥ ೨೪೪ ॥

ಸುವರ್ಣಪುಷ್ಪೈರಭ್ಯರ್ಚ್ಯ ರಾಜಸೂಯಫಲ ಲಭೇತ್ ।
ರತ್ನೈರ್ದೇವಮಥಾಭ್ಯರ್ಚ್ಯ ರಾಜಾ ಭವತಿ ಭೂತಲೇ ॥ ೨೪೫ ॥

೨೪೧–೨೪೪. ಎಂಟು ಜಾಜಿಯ ಹೂವುಗಳನ್ನು ಭಕ್ತಿಯಿಂದ ಅರ್ಪಿಸಿದವನೂ ಸಹ ಅಗ್ನಿಷ್ಟೋಮ ಫಲವನ್ನು ಹೊಂದುತ್ತಾನೆ. ಸಾವಿರ ಹೂವುಗಳಿಂದ ಪೂಜೆಮಾಡಿದವನು ಇಷ್ಟವಾದ ಲೋಕವನ್ನೇ ಹೊಂದುತ್ತಾನೆ. ಲಕ್ಷಹೂವುಗಳಿಂದ ಪೂಜೆಮಾಡಿದವನು ಶ್ವೇತದ್ವೀಪವನ್ನೇ ಹೊಂದುತ್ತಾನೆ. ಜಾಜೀಹೂವಿನ ಮಾಲೆಯನ್ನು ಕರ್ಪೂರಾದಿ ಸುಗಂಧದ್ರವ್ಯಗಳಿಂದ ಸುವಾಸನೆಮಾಡಿಪೂಜಿಸಿದವನೂ ಈ ಫಲವನ್ನು ಹೊಂದುತ್ತಾನೆ. ಬಿಳಿಯ ಹೂವುಗಳಿಂದ ಮಾಡಿದ ಪೂಜೆಯು ಎಲ್ಲಾ ಇಷ್ಟಾರ್ಥಗಳಿಗೂ ಸಾಧಕವಾಗುತ್ತದೆ. ಹೊಂಬಣ್ಣದ ಹೂವುಗಳಿಂದ ಪೂಜಿಸಿದವನು ಆಶ್ಚರ್ಯಕರವಾದ ಫಲವನ್ನು ಹೊಂದುತ್ತಾನೆ. ಶತ್ರುಗಳಿಂದ ಮಾಟಕೂಟಗಳು ನಡೆದಿದ್ದಲ್ಲಿ ಅದರ ಪರಿಹಾರಕ್ಕಾಗಿ ಕಪ್ಪುಬಣ್ಣದ ಹೂವುಗಳಿಂದ ಪೂಜಿಸಬೇಕು.

೨೪೫–೨೪೬. ಚಿನ್ನದ ಹೂವುಗಳಿಂದ ಪೂಜಿಸಿದವನು ರಾಜಸೂಯದ ಫಲವನ್ನು ಹೊಂದುತ್ತಾನೆ. ರತ್ನಗಳಿಂದ ಪೂಜಿಸಿದವನು ಭೂಮಿಯಲ್ಲಿ ರಾಜನಾಗಿ

ಕೃತ್ವಾ ಪುಷ್ಪಗೃಹಂ ವಿಷ್ಣೋಃ ಪುಷ್ಪೈರ್ವಾಥ ವಿತಾನಕಂ ।
ಫಲೇನ ಯೋಗಮಾಪ್ನೋತಿ ರಾಜಸೂಯಾಶ್ವಮೇಧಯೋಃ ॥ ೨೪೬ ॥

ಕಿಂಕಿಣೀಜಾಲಸಂಯುಕ್ತಂ ದೇವರಾಮಾಗಣೋಜ್ಜ್ವಲಂ ।
ವೀಣಾಮುರಜಗೀತಾಢ್ಯಂ ವಿಮಾನಮಧಿರೋಹತಿ ॥ ೨೪೭ ॥

ಪುಷ್ಪಪ್ರದಾನಂ ಮಂಗಲ್ಯಮಲಕ್ಷ್ಮೀವಿಪ್ರಣಾಶನಂ ।
ಲಕ್ಷ್ಮೀವೃದ್ಧಿಕರಂ ಜ್ಞೇಯಂ ಸೌಮಾನಸ್ಯವಿವರ್ಧನಂ ॥ ೨೪೮ ॥

ಸೌಭಾಗ್ಯಜನನಂ ಚೈವ ತೇಜೋಬಲವಿವೃದ್ಧಿದಂ ।
ನ ರತ್ನೈರ್ನ ಸುವರ್ಣೇನ ನ ಚ ವಿತ್ತೇನ ಭೂರಿಣಾ ॥ ೨೪೯ ॥

ತಥಾ ಪ್ರಸಾದಮಾಯಾತಿ ಯಥಾ ಪುಷ್ಪೈರ್ಜನಾರ್ದನಃ ।
ವಾಸಂತೀ ಮಲ್ಲಿಕಾಪುಷ್ಪಂ ತಥಾ ಚೈವಚವಾರ್ಷಿಕೀ ॥ ೨೫೦ ॥

ಕುಬ್ಜಕಂ ಯೂಥಿಕಾ ಚೈವ ತಥಾ ಚೈವಾತಿಮುಕ್ತಕಂ ।
ಕೇತಕೀಂ ಚಂಪಕಂ ಚೈವ ಮಾಷವೃಕ್ಷಕಮೇವ ಚ ॥ ೨೫೧ ॥

ಜನಿಸುತ್ತಾನೆ. ವಿಷ್ಣುವಿಗೆ ಹೂವುಗಳಿಂದ ಮಂಟಪವನ್ನೂ ಮೇಲುಕಟ್ಟನ್ನೂ ಮಾಡಿ ಪೂಜಿಸಿದವನು ರಾಜಸೂಯಾಶ್ವಮೇಧಗಳ ಫಲಹೊಂದುತ್ತಾನೆ. ಸಣ್ಣ ಸಣ್ಣ ಘಂಟೆಗಳಿಂದ ಕೂಡಿ ದೇವಸ್ತ್ರೀಯರಿಂದ ಕೂಡಿದ ವೀಣಾದಿ ವಾದ್ಯಗಳುಳ್ಳ ದಿವ್ಯ ವಿಮಾನವನ್ನೂ ಹೊಂದುತ್ತಾನೆ. ಹೂವುಗಳ ಪೂಜೆಯು ಮಂಗಲಪ್ರದ ಹಾಗೂ ಅಮಂಗಲಗಳಿಗೆ ನಾಶಕ, ಒಳ್ಳೆಯ ಮನಸ್ಸಿಗೂ ಭಾಗ್ಯಕ್ಕೂ ಕಾರಣವಾಗುತ್ತದೆ. ರತ್ನ, ಸುವರ್ಣ, ಹೆಚ್ಚಾದ ಹಣ ಇವುಗಳ ಪ್ರದಾನಕ್ಕಿಂತಲೂ ಪುಷ್ಪಗಳ ಅರ್ಚಣವು ಆ ಜನಾರ್ದನನ ಹೆಚ್ಚಾದ ಅನುಗ್ರಹಕ್ಕೆ ಕಾರಣವಾಗುತ್ತದೆ.

೨೫೦–೨೫೭. ಸೂಜಿಮಲ್ಲಿಗೆ, ಮಲ್ಲಿಗೆ, ವರ್ಷಾಕಾಲದ ಕುಸ್ಯಕ, ಶಾವಂತಿಗೆ, ಬೇರೆ ಜಾತಿಯ ಮಲ್ಲಿಗೆ, ತಾಳೆ. ಸಂಪಿಗೆ, ಮಾಷವೃಕ್ಷ, ಪುರಂಪ್ರಮುಂಜರೀ, ಮಾವಿನ ಹೂಗೊಂಚಲು, ಬಂಧುಜೀವ, ಕುಂಕುಮಪುಷ್ಪ, ಎಲ್ಲಾ ಜಾತಿಯ ಜಾಜೀ

ಪುರಂಧ್ರಿಮಂಜರೀಪುಷ್ಪಂ ಚೂತಪುಷ್ಪಂ ತಥೈವ ಚ ।
ಬಂಧುಜೀವಕಪುಷ್ಪಂ ಚ ಕುಸುಮಂ ಕುಂಕುಮಸ್ಯ ಚ ॥ ೨೫೨ ॥

ಜಾತೀಪುಷ್ಪಾಣಿ ಸರ್ವಾಣಿ ಕುಂದಪುಷ್ಪಂ ತಥೈವ ಚ ।
ಪಾಟಲೀ ಚ ತಥಾ ವ್ಯಕ್ತನ್ನೀಲಮಿಂದೀವರಂ ತಥಾ ॥ ೨೫೩ ॥

ಕುಮುದಂ ಶ್ವೇತರಕ್ತಂ ಚ ಶ್ವೇತರಕ್ತಾ ತಥಾ ಶುಭಾ ।
ಏವಮಾದೀನಿ ಪುಷ್ಪಾಣಿ ದಾತವ್ಯಾನಿ ಸದಾ ಹರೇಃ ॥ ೨೫೪ ॥

ಸ್ವಯಮಾಹೃತ್ಯ ಯೋ ದದ್ಯಾದಾರಣ್ಯಕುಸುಮಾನಿ ಚ ।
ಸ ರಾಜ್ಯಂ ಸ್ಫೀತಮಾಪ್ನೋತಿ ಲೋಕೇ ನಿಹತಕಂಟಕಂ ॥ ೨೫೫ ॥

ಪತ್ರಂ ರಮ್ಯಂ ಫಲಂ ರಮ್ಯಂ ಪಲ್ಲವಂ ವಾ ದ್ವಿಜೋತ್ತಮಾಃ ।
ಭಕ್ತ್ಯಾ ನಿವೇದ್ಯ ದೇವಾಯ ಫಲಸ್ಯಾನಂತ್ಯಮಶ್ನುತೇ ॥ ೨೫೬ ॥

ಕರ್ಪೂರಬೋಧಿತಾನೀವ ಪಟ್ಟವಾಸಾಂಸಿ ಯೋ ನರಃ ।
ದದಾತಿ ದೇವದೇವಾಯ ಸೋಽಶ್ವಮೇಧಫಲಂ ಲಭೇತ್ ॥ ೨೫೭ ॥

ಹೂಗಳು, ಮಲ್ಲೆಹೂವು, ಪಾದರಿ, ದುಂಡಾದ ಕಪ್ಪುಕಮಲ, ಬಿಳುಪು ಕೆಂಪುಬಣ್ಣದ ಕುಮುದ ಇವೇ ಬಣ್ಣದ ಇತರ ಹೂವುಗಳೂ ಸಹ ಆಯಾಯ ಕಾಲದಲ್ಲಿ ಹರಿಗೆ ಅರ್ಪಣೆಮಾಡಲು ಅರ್ಹವಾಗಿವೆ. ಯಾವನು ತಾನಾಗಿಯೇ ಅರಣ್ಯದ ಹೂವುಗಳನ್ನು ತಂದು ಹರಿಗೆ ಅರ್ಪಣೆಮಾಡುತ್ತಾನೆಯೋ ಅವನು ಶತ್ರುಗಳಿಲ್ಲವ ಉತ್ತಮವಾದ ರಾಜ್ಯವನ್ನೇ ಹೊಂದುತ್ತಾನೆ. ರಮ್ಯವಾದ ಪತ್ರಗಳನ್ನಾಗಲಿ, ಫಲವನ್ನಾಗಲಿ, ಚಿಗುರನ್ನಾಗಲಿ ಭಕ್ತಿಯಿಂದ ಹರಿಗೆ ಅರ್ಪಿಸಿದವನು ಅಕ್ಷಯಫಲ ಹೊಂದುತ್ತಾನೆ. ಕರ್ಪೂರಾದಿಗಳಿಂದ ವಾಸಿತವಾದ ಪಟ್ಟವಸ್ತ್ರವನ್ನು ಹರಿಗೆ ಸಮರ್ಪಣೆಮಾಡಿದವನು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ.[1]

---

1 ಈ ಪ್ರಕರಣದಲ್ಲಿ ಹೇಳಿರುವ ಅನೇಕ ಫಲಗಳು ಪುನರುಕ್ತವಾಗಿ ತೋರಿಬರುತ್ತಿವೆ, ಆದರೂ ಶಬ್ದದೋಷವನ್ನು ಇಲ್ಲಿ ಗ್ರಹಿಸಬಾರದು. ಇದಕ್ಕೆಲ್ಲಾ ವಕ್ತೃಗಳ ಹರಿಭಕ್ತಿ ಪ್ರವಾಹದಲ್ಲಿ ತಾತ್ಪರ್ಯ.

ಪಟ್ಟವಾಸಾಂಸಿ ಮುಖ್ಯಾನಿ ದತ್ವಾ ಸ್ವರ್ಗಮುಪಾಶ್ನುತೇ ।
ಯಶಶ್ಚಾಪ್ನೋತಿ ವಿಪುಲಂ ನಾಕಪೃಷ್ಠೇ ಮಹೀಯತೇ ॥ ೨೫೮ ॥

ತಥಾ ಸೌಭಾಗ್ಯಮಾಪ್ನೋತಿ ಪಟ್ಟವಾಸಪ್ರದೋ ನರಃ ।
ಧೂಪೇನಾಭ್ಯರ್ಚ್ಯ ದೇವೇಶಂ ಸ್ವರ್ಗಲೋಕೇ ಮಹೀಯತೇ ॥ ೨೫೯ ॥

ಧೂಪಾನಾಮುತ್ತಮಂ ಧೂಪಂ ಗುಗ್ಗುಲಂ ಕ್ಷೌದ್ರಸರ್ಪಿಷಾ ।
ದತ್ವಾ ಗುಗ್ಗುಲುಜಂ ಧೂಪಂ ನಾಕಪೃಷ್ಠೇ ಮಹೀಯತೇ ॥ ೨೬೦ ॥

ಮಧುಸರ್ಪಿಃ ಸಮಾಯುಕ್ತಂ ದ್ವಾದಶಾಹಾತ್ಫಲಂ ಲಭೇತ್ ।
ದತ್ವಾ ಚಂದನಸಾರೇಣ ಸೌಭಾಗ್ಯಂ ಪರಮಾಪ್ನುಯಾತ್ ॥ ೨೬೧ ॥

ತಥೈವಾಗುರುಸಾರೇಣ ಪರಾಂ ಸಿದ್ಧಿಮವಾಪ್ನುಯಾತ್ ।
ಧೂಪಾನಾಮುತ್ತಮಂ ತದ್ವತ್ಸರ್ವಕಾಮಫಲಪ್ರದಂ ॥ ೨೬೨ ॥

ಧೂಪಂ ತುರುಷ್ಕಕಂ ದತ್ವಾ ವಹ್ನಿಷ್ಟೋಮಫಲಂ ಲಭೇತ್ ।
ದತ್ವಾ ಚ ಕೃತ್ರಿಮಂ ಮುಖ್ಯಂ ಸರ್ವಾನ್ಕಾಮಾನವಾಪ್ನುಯಾತ್ ॥೨೬೩॥

೨೫೮–೨೬೨. ಒಳ್ಳೊಳ್ಳೆಯ ಪಟ್ಟೆವಸ್ತ್ರಗಳನ್ನು ದಾನಮಾಡಿದವರು ಸ್ವರ್ಗ ಸುಖಿಗಳಾಗುತ್ತಾರೆ. ಯಶಸ್ವಿಗಳಾಗಿಯೂ ಆಗುತ್ತಾರೆ. ಸೌಭಾಗ್ಯಶಾಲಿಗಳೂ ಆಗುತ್ತಾರೆ. ಧೂಪದಿಂದ ಪೂಜಿಸಿದವನು ಸ್ವರ್ಗದಲ್ಲಿ ಮಾನ್ಯನಾಗುತ್ತಾನೆ. ಧೂಪಗಳಲ್ಲಿ ಜೇನುತುಪ್ಪದಿಂದ ಕೂಡಿದ ಗುಗ್ಗುಲವು ಉತ್ತಮವಾದದ್ದು. ಇಂತಹ ಗುಗ್ಗುಲವನ್ನು ಧೂಪಿಸಿದವನು ಸ್ವರ್ಗವಾಸಿಯಾಗುತ್ತಾನೆ. ತುಪ್ಪ, ಜೇನು ಇವುಗಳಿಂದ ಕೂಡಿದ ಧೂಪವನ್ನು ಅರ್ಪಿಸಿದವನಿಗೆ ದ್ವಾದಶಾಹ ಯಜ್ಞದ ಫಲವೇ ಲಭಿಸುತ್ತದೆ. ಶ್ರೀಗಂಧದ ಧೂಪವನ್ನು ಅರ್ಪಿಸಿದವನು ಸೌಭಾಗ್ಯಶಾಲಿಯಾಗುತ್ತಾನೆ. ಹಾಲುಮಡ್ಡಿಯ ಧೂಪಸಮರ್ಪಣೆಯಿಂದ ಹೆಚ್ಚಾದ ಸಿದ್ಧಿ ಹೊಂದುತ್ತಾನೆ. ಉತ್ತಮವಾದ ಧೂಪಗಳೆಲ್ಲವೂ ಇಷ್ಟಾರ್ಥಪ್ರದವಾಗಿಯೇ ಆಗುತ್ತವೆ.

೨೬೩–೨೬೬. ತುರುಷ್ಕವೆಂಬ ಹಾಲುಮಡ್ಡಿಯ ಧೂಪದಾನದಿಂದ ಅಗ್ನಿಷ್ಟೋಮದ ಫಲವೂ, ತಾನಾಗಿ ಮಾಡಿದ ಒಳ್ಳೆಯ ಧೂಪದಿಂದ ಇಷ್ಟಾರ್ಥಲಾಭವೂ

ಗಂಧಯುಕ್ತಿಕೃತಂ ದತ್ವಾ ಯಜ್ಞಂ ಗೋಸವಮಾಪ್ನುಯಾತ್ ।
ದತ್ವಾ ಕರ್ಪೂರನಿರ್ಯಾಸಂ ವಾಜಿಮೇಧಫಲಂ ಲಭೇತ್ ॥ ೨೬೪ ॥

ವಸಂತೇ ಗುಗ್ಗುಲಂ ದತ್ವಾ ವಹ್ನಿಷ್ಟೋಮಮವಾಪ್ನುಯಾತ್ ।
ಗ್ರೀಷ್ಮೇ ಚಂದನಸಾರೇಣ ದ್ವಾದಶಾಹಾತ್ಫಲಂ ಲಭೇತ್ ॥ ೨೬೫ ॥

ತುರುಷ್ಕದಾನೇನ ತಥಾ ಪ್ರಾವೃಷ್ಯಮರತಾಂ ವ್ರಜೇತ್ ।
ಕರ್ಪೂರದಾನಾಚ್ಛರದಿ ರಾಜಸೂಯಮವಾಪ್ನುಯಾತ್ ॥ ೨೬೬ ॥

ಹೇಮಂತೇ ಮೃಗದರ್ಪೇಣ ವಾಜಿಮೇಧಫಲ ಲಭೇತ್ ।
ಶಿಶಿರೇಽಗುರುಸಾರೇಣ ಸರ್ವಮೇಧಮವಾಪ್ನುಯಾತ್ ॥ ೨೬೭ ॥

ವಿನಾ ಮೃಗಮದಾದ್ಧೂಪಂ ಜೀವಜಾತಂ ವಿವರ್ಜಯೇತ್ ।
ಧೂಪದಃ ಸ್ವರ್ಗಮಾಪ್ನೋತಿ ಧೂಪದಃ ಪುಷ್ಟಿಮಶ್ನುತೇ ॥ ೨೬೮ ॥

ಉಂಟಾಗುತ್ತವೆ ಗಂಧಯುಕ್ತಿ ಎಂಬ ಗಂದಿಗಸನಿಗಿನಿಂದ ಮಾಡಿದ ಧೂಪವನ್ನು ಅರ್ಪಿಸಿದವನಿಗೆ ಗೋಯಜ್ಞದ ಫಲವೇ ಉಂಟಾಗುತ್ತದೆ. ಕರ್ಪೂರದ ಹಾಲಿನ ಧೂಪದಾನದಿಂದ ಅಶ್ವಮೇಧದ ಫಲವನ್ನು ಹೊಂದುತ್ತಾನೆ. ವಸಂತಋತುವಿನಲ್ಲಿ ಗುಗ್ಗುಲುಧೂಪವು ಅಗ್ನಿಷ್ಟೋಮದ ಫಲಕ್ಕೆ ಸಾಧಕವಾಗುತ್ತದೆ. ಗ್ರೀಷ್ಮದಲ್ಲಿ ಶ್ರೀಗಂಧಧೂಪದಿಂದ ದ್ವಾದಶಾಹ ಯಾಗದ ಫಲವು ಲಭಿಸುತ್ತದೆ. ವರ್ಷಾಕಾಲದಲ್ಲಿ ತುರುಷ್ಕವೆಂಬ ಹಾಲುಮಡ್ಡಿಯ ಧೂಪದಾನದಿಂದ ಅಮರನೇ ಆಗುತ್ತಾನೆ. ಶರದೃತುವಿನಲ್ಲಿ ಕರ್ಪೂರ ಪ್ರದಾನವು ರಾಜಸೂಯ ಯಾಗದ ಫಲವನ್ನು ಕೊಡುತ್ತದೆ.

೨೬೭–೨೭೧. ಹಿಮಂತಋತುವಿನಲ್ಲಿ ಕಸ್ತೂರಿಯ ಧೂಪದಾನದಿಂದ ಅಶ್ವಮೇಧದಫಲವನ್ನು ಹೊಂದುತ್ತಾನೆ. ಶಿಶಿರಋತುವಿನಲ್ಲಿ ಹಾಲುಮಡ್ಡಿಯ ಧೂಪದಿಂದ ಸೇವಿಸಿದವನು ಸರ್ವಮೇಧಯಜ್ಞದ ಫಲವನ್ನೇ ಹೊಂದುತ್ತಾನೆ. ಕಸ್ತೂರಿಯೊಂದು ಹೊರತು ಇತರ ಪ್ರಾಣಿಗಳಿಂದುಂಟಾದ ವಸ್ತುಗಳನ್ನು ಧೂಪಕ್ಕೆ ಉಪ

ಧೂಪಲೇಖಾಯಥೈವೋರ್ಧ್ವಂ ನಿತ್ಯಮೇವ ಪ್ರಸರ್ಪತಿ ।
ತಥೈವೋರ್ಧ್ವಗತಿ ರ್ನಿತ್ಯಂ ಧೂಪದಾತಾ ಭವೇನ್ನರಃ ॥ ೨೬೯ ॥

ಧೂಪರಾಜಿರ್ಯದೋರ್ಧ್ವಂ ಸ್ಯಾದೇಕಾದೀನಾಂ ದ್ವಿಜೋತ್ತಮಾಃ ।
ಸನ್ನಿಧಾನಂ ತಥಾ ವಿದ್ಯಾದ್ದೇವದೇವಸ್ಯ ಚಕ್ರಿಣಃ ॥ ೨೭೦ ॥

ದೀಪಂ ಚಕ್ಷುಃಪ್ರದಂ ದದ್ಯಾತ್ತಥೈವೋರ್ಧ್ವಗತಿಪ್ರದಂ ।
ಊರ್ಧ್ವಂ ಯಥಾ ದೀಪಶಿಖಾ ದಾತಾ ಚೋರ್ಧ್ವಗತಿಸ್ತಥಾ ॥ ೨೭೧ ॥

ಖ್ಯಾತೋ ಭವತಿ ಲೋಕೇಷು ಸ್ವರ್ಗಲೋಕಂ ಚ ಗಚ್ಛತಿ ।
ಯಾವದಕ್ಷಿನಿಮೇಷಾಣಿ ದೀಪೋ ದೇವಾಲಯೇ ಜ್ವಲೇತ್ ॥ ೨೭೨ ॥

ತಾವದ್ವರ್ಷಸಹಸ್ರಾಣಿ ಧರ್ಮಾತ್ಮಾ ಲೋಕಮಶ್ನುತೇ ।
ಮಹಾವರ್ತಿಪ್ರದಾನೇನ ಕುಲೇ ದೇಶೇ ತಥೈವ ಚ ॥ ೨೭೩ ॥

ಯೋಗಿಸಬಾರದು ಧೂಪದಾನಮಾಡಿದವನು ಸ್ವರ್ಗಹೊಂದುತ್ತಾನೆ. ಪುಷ್ಟಿಯನ್ನು ಹೊಂದತಕ್ಕವನೂ ಅವನೇ, ಧೂಪವನ್ನು ಸಮರ್ಪಿಸುವಾಗ ಅದರ ಹೊಗೆಯ ಪಙ್ಕ್ತಿಯು ಎಷ್ಟೆಷ್ಟು ಮೇಲಕ್ಕೆ ಹರಡುವುದೋ ಹಾಗೆಯೇ ದಾತೃವಾದವನಿಗೂ ಮೇಲುಮೇಲಿನ ಸದ್ಗತಿಗಳೂ ಉಂಟಾಗುತ್ತವೆ. ಧೂಪದ ಕುಡಿಯು ಒಂದೊಂದಾಗಿ ಹೇಗೆ ಮೇಲಕ್ಕೇರುವುದೋ ಹಾಗೆಯೇ ದಾತೃವಿಗೂ ಸಹ ಹರಿಯ ಸಾನ್ನಿಧ್ಯವು ಸಮೀಪಿಸುತ್ತದೆ. ದೀಪದಾನವು ನೇತ್ರಪಾಟವಕ್ಕೂ ಊರ್ಧ್ವಗತಿಗೂ ಸಾಧಕವಾಗುತ್ತದೆ. ದೀಪದ ಕುಡಿಯು ಮೇಲ್ಮುಖವಾಗಿರುವಂತೆ ದಾತೃವಿಗೂ ಊರ್ಧ್ವಗತಿಯುಂಟಾಗುತ್ತದೆ. ಇವನಿಗೆ ಸ್ವರ್ಗಗತಿಯುಂಟಾಗುವುದಲ್ಲದೆ, ಲೋಕದಲ್ಲಿಯೂ ಖ್ಯಾತಿಯನ್ನು ಗಳಿಸುತ್ತಾನೆ.

೨೭೨-೨೭೪ ದೇವಾಲಯದಲ್ಲಿ ಎಷ್ಟು ನಿಮಿಷಗಳು ದೀಪವು ಜ್ವಲಿಸುತ್ತದೆಯೋ ಅಷ್ಟು ಸಹಸ್ರ ವರ್ಷಗಳು ಆ ಧಾರ್ಮಿಕನು ದಿವ್ಯಲೋಕವಾಸಿಯಾಗುತ್ತಾನೆ ಮಹಾವರ್ತಿ ಎಂಬ ದೊಡ್ಡ ದೀಪವನ್ನು ಅರ್ಪಿಸಿದವನು ತನ್ನ ದೇಶದ

ಶ್ರೈಷ್ಠ್ಯಮಾಪ್ನೋತಿ ಸರ್ವತ್ರ ಯಥಾ ಸರ್ವಂ ವಿರಾಜತೇ ।
ಮಧುಪರ್ಕಪ್ರದಾನೇನ ಪರಂಪದಮುಪಾಶ್ನುತೇ ॥ ೨೭೪ ॥

ಘೃತಂ ದಧಿ ತಥಾ ಕ್ಷೌದ್ರಂ ಮಧುಪರ್ಕಂ ವಿಜಾನತಾ ।
ತತಸ್ತ್ವರ್ಹಣದಾನೇನ ಸರ್ವಪಾಪೈಃ ಪ್ರಮುಚ್ಯತೇ ॥ ೨೭೫ ॥

ತಥೈವಾಚಮನೀಯಸ್ಯ ದಾನಾದ್ಬ್ರಹ್ಮಣ ಸತ್ತಮಾಃ ।
ಅನಂತತೃಪ್ತಿಮಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥ ೨೭೬ ॥

ದತ್ವಾ ಚಾಸಂವಿಭಾಗೇನ ತಥೈವಾನ್ನಮತಂದ್ರಿತಃ ।
ತ್ರೈಲೋಕ್ಯತರ್ಪಿತೇ ಪುಣ್ಯಂ ತತ್ ಕ್ಷಣಾತ್ಸಮವಾಪ್ನುಯಾತ್ ॥ ೨೭೭ ॥

ಅಕ್ಷಯ್ಯಮನ್ನದಾನಂ ಚ ಪಿತೄಂಸ್ತಸ್ಯೋಪತಿಷ್ಠತೇ ।
ಓದನಂ ವ್ಯಂಜನೋಪೇತಂ ದತ್ವಾ ಸ್ವರ್ಗಮವಾಪ್ನುಯಾತ್ ॥ ೨೭೮ ॥

ಪರಮಾನ್ನಪ್ರದಾನೇನ ತೃಪ್ತಿಂ ವಿಂದತಿ ಶಾಶ್ವತೀಂ ।
ವಿಷ್ಣುಲೋಕಮವಾಪ್ನೋತಿ ಕುಲಮುದ್ಧರತಿ ಸ್ವಕಂ ॥ ೨೭೯ ॥

ಲ್ಲಿಯೂ ಕುಲದಲ್ಲಿಯೂ ಶ್ರೇಷ್ಠತೆ ಹೊಂದುತ್ತಾನೆ. ಪ್ರಕಾಶಕನೂ ಆಗುತ್ತಾನೆ. ಮಧುಪರ್ಕಪ್ರದಾನದಿಂದ ಉತ್ತಮಸ್ಥಾನ ಹೊಂದುತ್ತಾನೆ. ತುಪ್ಪ, ಮೊಸರು, ಜೇನು ಇವಕ್ಕೆ ಮಧುಪರ್ಕವೆಂದು ಹೆಸರು ಇದನ್ನು ಅರ್ಪಿಸಿ ಅರ್ಹಣೋದಕವನ್ನು ಸಮರ್ಪಿಸಿದವನಿಗೆ ಸರ್ವ ಪಾಪಗಳೂ ನಶಿಸಿಹೋಗುತ್ತವೆ. ಆಚಮನೀಯ ಪ್ರದಾನದಿಂದಲೂ ಅಪರಿಮಿತವಾದ ತೃಪ್ತಿಯನ್ನೂ ಹೊಂದಿ ಸ್ವರ್ಗವಾಸಿಯಾಗುತ್ತಾನೆ. ಹಾಗೆಯೇ ವಿಭಾಗ ಹೊಂದದಿರುವ ಅನ್ನವನ್ನು ಪ್ರದಾನಮಾಡಿದವನು ಮೂರುಲೋಕವನ್ನೂ ತೃಪ್ತಿಪಡಿಸಿದ ಪುಣ್ಯಕ್ಕೆ ಭಾಗಿಯಾಗುತ್ತಾನೆ. ಅಕ್ಷಯವಾದ ಅನ್ನಪ್ರದಾನವು ಅವನ ಪಿತೃಗಳಿಗೂ ಹೋಗಿ ಸೇರುತ್ತದೆ.

೨೭೯–೨೮೧. ವ್ಯಂಜನಸಹಿತವಾದ ಅನ್ನಸಮರ್ಪಣವು ಸ್ವರ್ಗಗತಿಗೆ ಸಾಧಕವಾಗುತ್ತದೆ. ಪರಮಾನ್ನಸಮರ್ಪಣದಿಂದ ಶಾಶ್ವತವಾದ ತೃಪ್ತಿಯನ್ನು ಹೊಂದು

ಘೃತೌದನಪ್ರದಾನೇನ ದೀರ್ಘಮಾಯುರವಾಪ್ನುಯಾತ್ ।
ದಧ್ಯೋದನಪ್ರದಾನೇನ ಶ್ರಿಯಮಾಪ್ನೋತ್ಯನುತ್ತಮಾಂ　　　॥ ೨೮೮ ॥

ಕ್ಷೀರೌದನಪ್ರದಾನೇನ ದೀರ್ಘಂ ಜೀವಿತಮಾಪ್ನುಯಾತ್ ।
ಇಕ್ಷೂಣಾಂ ಚೈವ ದಾನೇನ ಪರಂ ಸೌಭಾಗ್ಯಮಾಪ್ನುಯಾತ್　　　॥ ೨೮೧ ॥

ರಸಾನಾಂ ಚೈವ ಭೋಗೀಸ್ಯಾತ್ಸ್ವರ್ಗಲೋಕಂ ಚ ಗಚ್ಛತಿ ।
ಸರ್ವಾನ್ಕಾಮಾನವಾಪ್ನೋತಿ ಕ್ಷೌದ್ರಂ ಯಸ್ತು ಪ್ರಯಚ್ಛತಿ　　　॥ ೨೮೨ ॥

ತದೇವ ತುಹಿನೋಪೇತಂ ರಾಜಸೂಯಮವಾಪ್ನುಯಾತ್ ।
ಫಾಣಿತಸ್ಯ ಪ್ರದಾನೇನ ವಹ್ನ್ಯಾದೇಯಂ ಫಲಂ ಲಭೇತ್　　　॥ ೨೮೩ ॥

ತಥಾ ಗುಡಪ್ರದಾನೇನ ದಶಗೋದೋ ಭವೇನ್ನರಃ ।
ಮುಖ್ಯಂ ದಂಡಂ ತಥಾ ದತ್ವಾ ಮೈತ್ರೀಂ ಸರ್ವೇಣ ವಿಂದಂತಿ ॥ ೨೮೪ ॥

ತ್ತಾನೆ. ವಿಷ್ಣುಲೋಕವನ್ನೂ ಹೊಂದಿ ತನ್ನ ವಂಶವನ್ನೂ ಉದ್ಧರಿಸುತ್ತಾನೆ ತುಪ್ಪದಿಂದ ಸಂಸ್ಕರಿಸಿದ ಅನ್ನವನ್ನು ಅರ್ಪಿಸಿದವನು ಹೆಚ್ಚಾದ ಆಯುಸ್ಸನ್ನು ಹೊಂದುತ್ತಾನೆ. ಮೊಸರನ್ನದ ಸಮರ್ಪಣದಿಂದ ಸಂಪತ್ತನ್ನು ಹೊಂದುತ್ತಾನೆ. ಕ್ಷೀರಾನ್ನಪ್ರದಾನದಿಂದ ಬಹುಕಾಲ ಬದುಕುತ್ತಾನೆ. ಬೆಲ್ಲದಿಂದ ಸಂಸ್ಕರಿಸಿದ ಅನ್ನವನ್ನು ಸಮರ್ಪಿಸಿದವನು ಸೌಭಾಗ್ಯವಂತನಾಗುತ್ತಾನೆ. ರಸಗಳಿಂದ ಕೂಡಿದ ಅನ್ನದ ಪ್ರದಾನದಿಂದ ಈ ಲೋಕದ ಭೋಗವೂ ಸ್ವರ್ಗಸುಖವೂ ಲಭಿಸುತ್ತದೆ. ಜೇನನ್ನು ಅರ್ಪಿಸಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ.

೨೮೩–೨೮೬. ಅದೇ ಮಂಜಿನ ಗೆಡ್ಡೆಯಿಂದ ಕೂಡಿದ್ದಲ್ಲಿ ರಾಜಸೂಯದ ಫಲವನ್ನು ಕೊಡುತ್ತದೆ. ಬೆಲ್ಲದ ಪಾಕದಿಂದ ಮಾಡಿದ ರಸದ್ರವ್ಯವನ್ನು ಅರ್ಪಿಸುವುದರಿಂದ ಅಗ್ನಿಯ ಅನುಗ್ರಹದಿಂದ ಉಂಟಾಗುವ ಫಲಕ್ಕೆ ಭಾಗಿಯಾಗುತ್ತಾನೆ ಬೆಲ್ಲದ ಪ್ರದಾನದಿಂದ ಹತ್ತು ಗೋವುಗಳ ದಾನದ ಫಲವನ್ನು ಹೊಂದುತ್ತಾನೆ. ಒಳ್ಳೆಯ

ಸ್ತ್ರೀಷು ವಲ್ಲಭತಾಮೇತಿ ದತ್ತ್ವಾ ಚ ಗುಡಿಕಾಂ ತಥಾ ।
ಸಿತಾಯಾಶ್ಚ ಪ್ರದಾನೇನ ಸರ್ವಾನ್ಕಾಮಾನವಾಪ್ನುಯಾತ್ ॥ ೨೮೫ ॥

ನಿವೇದ್ಯೇಕ್ಷುರಸಂ ಭಕ್ತ್ಯಾ ಪರಂ ಸೌಭಾಗ್ಯಮಾಪ್ನುಯಾತ್ ।
ವಹ್ನಿಷ್ಟೋಮಮವಾಪ್ನೋತಿ ಯಾವಕಸ್ಯ ನಿವೇದಕಃ ॥ ೨೮೬ ॥

ಅತಿರಾತ್ರಮವಾಪ್ನೋತಿ ತಥಾ ಧೂಪನಿವೇದಕಃ ।
ವೈದಲಾನಾಂ ಚ ಭಕ್ಷಾಣಾಂ ದಾನಾತ್ಕಾಮಮವಾಪ್ನುಯಾತ್ ॥ ೨೮೭ ॥

ದೀರ್ಘಜೀವಿತಮಾಪ್ನೋತಿ ಘೃತಪೂರನಿವೇದಕಃ ।
ಮೋದಕಾನಾಂ ಪ್ರದಾನೇನ ಕಾಮಾನಾಪ್ನೋತ್ಯಭೀಪ್ಸಿತಾನ್ ॥ ೨೮೮ ॥

ನಾನಾವಿಧಾನಾಂ ಭಕ್ಷ್ಯಾಣಾಂ ದಾನಾತ್ಸ್ವರ್ಗಮವಾಪ್ನುಯಾತ್ ।
ರಾಗಷಾಡವದಾನೇನ ಪೌಂಡರೀಕಮವಾಪ್ನುಯಾತ್ ॥ ೨೮೯ ॥

ಕಬ್ಬಿನ ಜಲ್ಲೆಯನ್ನು ಪ್ರದಾನಮಾಡಿದವನು ಸರ್ವಜನರ ಮೈತ್ರಿಗೂ ಪಾತ್ರನಾಗುತ್ತಾನೆ. ಸಣ್ಣ ತುಂಡನ್ನು ದಾನಮಾಡಿದವನು ಸ್ತ್ರೀಯರ ಪ್ರೀತಿಗೆ ಪಾತ್ರನಾಗುತ್ತಾನೆ. ಸಕ್ಕರೆಯನ್ನು ಸಮರ್ಪಿಸಿದವನು ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ. ಕಬ್ಬಿನ ಹಾಲನ್ನು ಭಕ್ತಿಯಿಂದ ಅರ್ಪಿಸಿದವನು ಸೌಭಾಗ್ಯ ಹೊಂದುತ್ತಾನೆ. ಯಾವಕವೆಂಬ ದ್ರವವಸ್ತುವನ್ನು ಅರ್ಪಿಸಿದವನಿಗೆ ಅಗ್ನಿಷ್ಟೋಮದ ಫಲವು ಲಭಿಸುತ್ತದೆ.

೨೮೭-೨೮೯ ಧೂಪವನ್ನು ನಿವೇದಿಸಿದವನು ಅತಿರಾತ್ರಯಾಗದ ಫಲವನ್ನೇ ಹೊಂದುತ್ತಾನೆ. ತಿನ್ನಲು ಅರ್ಹವಾದ ಬಿದಿರಿನ ಮೊಳಕೆ, ಅಥವಾ ಬೇರುಗಳಿಂದ ಮಾಡಿದ ಭಕ್ಷ್ಯ ಇವನ್ನು ಅರ್ಪಿಸಿದವನು ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ ತುಪ್ಪದ ಭಕ್ಷ್ಯಗಳನ್ನು ಸಮರ್ಪಿಸಿದವನು ಬಹುಕಾಲ ಬದುಕುತ್ತಾನೆ. ಕಡಬುಗಳನ್ನು ದಾನಮಾಡಿದವನು ತನ್ನ ಇಷ್ಟವನ್ನು ಹೊಂದುತ್ತಾನೆ. ನಾನಾವಿಧವಾದ ಇತರ ಭಕ್ಷ್ಯಗಳನ್ನು ಅರ್ಪಿಸಿದವನು ಸ್ವರ್ಗಸುಖಿಯಾಗುತ್ತಾನೆ ರಾಗಷಾಡವವೆಂಬ ಭಕ್ಷ್ಯವನ್ನು ಅರ್ಪಿಸಿದವನು ಪೌಂಡರೀಕಯಾಗದ ಫಲವನ್ನು ಹೊಂದುತ್ತಾನೆ ಭೋಜನಾರ್ಹವಾದ ವಸ್ತುಗಳ ದಾನದಿಂದ ತೃಪ್ತಿಹೊಂದುತ್ತಾನೆ. ಲೇಹ್ಯಪ್ರದಾನ

ಭೋಜನೀಯಪ್ರದಾನೇನ ತೃಪ್ತಿಮಾಪ್ನೋತ್ಯನುತ್ತಮಾಂ ।
ತಥಾ ಲೇಹ್ಯಪ್ರದಾನೇನ ಸೌಭಾಗ್ಯಮಧಿಗಚ್ಛತಿ ॥ ೨೯೦ ॥

ಬಲವರ್ಣಮವಾಪ್ನೋತಿ ಚೋಷ್ಯಾಣಾಂ ವಿನಿವೇದಕಃ ।
ಪೇಯಾನಾಂ ಚ ಪ್ರದಾನೇನ ತೃಪ್ತಿಮಾಪ್ನೋತ್ಯನುತ್ತಮಾಂ ॥ ೨೯೧ ॥

ಪಾನಕಾನಿ ಸುಗಂಧೀನಿ ಶೀತಲಾನಿ ವಿಶೇಷತಃ ।
ನಿವೇದ್ಯ ದೇವದೇವಾಯ ವಾಜಿಮೇಧಮವಾಪ್ನುಯಾತ್ ॥ ೨೯೨ ॥

ತ್ವಗೇಲಾನಾಗಕುಸುಮ ಕರ್ಪೂರಸಿತಸಂಯುತೈಃ ।
ಸಿತಾಕ್ಷೌದ್ರ ಗುಡೋಪೇತೈ ರ್ಗಂಧವರ್ಣೈ ಸ್ಸಮನ್ವಿತೈಃ ॥ ೨೯೩ ॥

ರಾಜಸೂಯಮವಾಪ್ನೋತಿ ಪಾನಕೈರ್ವಿನಿವೇದಿತೈಃ ।
ನಿವೇದ್ಯ ನಾಲಿಕೇರಾಂಬು ವಹ್ನಿಷ್ಟೋಮಫಲಂ ಲಭೇತ್ ॥ ೨೯೪ ॥

ಧಾನ್ಯಾನಾಂ ಕ್ಷೌದ್ರಯುಕ್ತಾನಾಂ ಲಾಜಾನಾಂ ಚ ನಿವೇದಕಃ ।
ಮುಖ್ಯಾನಾಂ ಚೈವ ಸಕ್ತೂನಾಂ ವಹ್ನಿಷ್ಟೋಮಮವಾಪ್ನುಯಾತ್ ॥

ದಿಂದ ಸೌಭಾಗ್ಯವನ್ನೂ ಚೋಷ್ಯವಸ್ತುಗಳ ದಾನದಿಂದ ಬಲ, ವರ್ಣ ಇವನ್ನೂ ಸಹ ಹೊಂದುತ್ತಾನೆ. ಕುಡಿಯುವ (ಪಾನೀಯ) ವಸ್ತುಗಳ ದಾನದಿಂದ ತೃಪ್ತಿಯನ್ನು ಹೊಂದುತ್ತಾನೆ.

೨೯೨-೨೯೫. ತಣ್ಣಗೂ, ಸುಗಂಧಿಯಾಗಿಯೂ ಇರುವ ಪಾನಕಗಳನ್ನು ಹರಿಗೆ ನಿವೇದಿಸಿದಲ್ಲಿ ಅವನು ಅಶ್ವಮೇಧದ ಫಲವನ್ನು ಹೊಂದುತ್ತಾನೆ ದಾಲ್ಚಿನ್ನಿ, ಏಲಕ್ಕಿ, ಸುರಗಿಹೂವು, ಪಚ್ಚಕರ್ಪೂರ, ಸಕ್ಕರೆ, ಜೇನು, ಬೆಲ್ಲ ಇವುಗಳಿಂದ ಕೂಡಿ ಸುಗಂಧಿಯಾಗಿಯೂ, ಸುವರ್ಣಪುಳ್ಳದ್ದಾಗಿಯೂ ಇರುವ ಪಾನಕಗಳನ್ನು ಹರಿಗೆ ಭಕ್ತಿಯಿಂದ ನಿವೇದಿಸಿದವನು ರಾಜಸೂಯಯಾಗದ ಫಲವನ್ನೇ ಹೊಂದುತ್ತಾನೆ. ಎಳನೀರನ್ನು ನಿವೇದಿಸಿದವನೂ ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಒಳ್ಳೆಯ ಹುರಿಟ್ಟನ್ನು ನಿವೇದಿಸಿದವನಿಗೂ ಇದೇ ಫಲ. ತರಕಾರಿಗಳನ್ನು ನಿವೇದಿಸಿದವನು ವಾನಪ್ರಸ್ಥಾಶ್ರಮದ ಪುಣ್ಯವನ್ನೇ ಹೊಂದುತ್ತಾನೆ ಹರಿತಕವನ್ನು

ಮಾನಪ್ರಸ್ಥಾಶ್ರಿತಂ ಪುಣ್ಯಂ ಲಭೇಚ್ಛಾಕನಿವೇದಕಃ ।
ದತ್ತ್ವಾ ಹರಿತಕಂ ಚೈವ ತದೇವ ಫಲಮಾಪ್ನುಯಾತ್ ॥ ೨೯೬ ॥

ಸುಕುಲೇ ಪ್ರಾಪ್ನುಯಾಜ್ಜನ್ಮ ಕಂದಮೂಲನಿವೇದಕಃ ।
ನೀಲೋತ್ಪಲವಿದಾರೀಣಾಂ ಕರೂಟಸ್ಯ ತಥಾ ದ್ವಿಜಾಃ ॥ ೨೯೭ ॥

ಕಂದದಾನಾದವಾಪ್ನೋತಿ ಮಾನಪ್ರಸ್ಥಫಲಂ ಲಭೇತ್ ।
ಶ್ರೇಷ್ಠಂ ಚ ಚಾರುಕಂ ದತ್ತ್ವಾ ಪುಂಡರೀಕಫಲಂ ಲಭೇತ್ ॥ ೨೯೮ ॥

ಕರ್ಕಂಧುಬದರೌ ದತ್ತ್ವಾ ತಥಾ ಪಾಲೇವತಂ ಧವಂ ।
ಪಾರೂಷಕಂ ತಥಾ ಪ್ರೋಕ್ತಂ ಪನಸಂ ನಾರಿಕೇಲಕಂ ॥ ೨೯೯ ॥

ಭವ್ಯಂ ಮೋಚಂ ತಥಾ ಚೌಚಂ ಖರ್ಜೂರಮಥ ದಾಡಿಮಂ ।
ಆಮ್ರಕಾದಿಷು ಚಾಕ್ಷೋಡಮಾರನಾಲಪ್ರಿಯಾಲುಜಂ ॥ ೩೦೦ ॥

(ನುಗ್ಗೆಕಾಯಿಸೊಪ್ಪು) ನಿವೇದಿಸಿದವನಿಗೂ ಇದೇ ಫಲ. ಕಂದಮೂಲಗಳನ್ನು ಅರ್ಪಿಸಿದವನು ಒಳ್ಳೆಯ ಕುಲದಲ್ಲಿ ಹುಟ್ಟುತ್ತಾನೆ.

೨೯೭–೩೦೭. ನೀಲೋತ್ಪಲದಂತೆ ಬಿರಿಯುವ ಗೆಡ್ಡೆಗಳನ್ನು ದಾನಮಾಡಿದವನೂ ಮಾನಪ್ರಸ್ಥನ ಫಲವನ್ನೇ ಹೊಂದುತ್ತಾನೆ ಒಳ್ಳೆಯ ಸೌತೆಕಾಯನ್ನು ದಾನಮಾಡಿದವನು ಪುಂಡರೀಕ ಯಾಗದ ಫಲವನ್ನು ಹೊಂದುತ್ತಾನೆ. ಎಲಚಿ, ಕರ್ಕಂದುವೆಂಬ ಮತ್ತೊಂದು ಎಲಚಿ, [1]ಪಾಲೇವತ, ಧವ, ಪಾರೂಷಕ, ಹಲಸು, ತೆಂಗಿನಕಾಯಿ, ಒಳ್ಳೆಯ ರಸಬಾಳೆ, ಖರ್ಜೂರ, ದಾಳಿಂಬ, ಅಕ್ಷೋಟವೆಂಬ ಮಾವಿನಬೇಧ, ಆರನಾಲ, ಒಂದು ಜಾತಿಯ ಹಲಸು. ನೇರಳೆ, ಬಿಲ್ವ, ನೆಲ್ಲಿಕಾಯಿ, ಒಳ್ಳೆಯ ಶ್ರೀನಾರುಕ, ಕಿತ್ತಲೆ, ಶೀಬಿ, ರಾಜಫಲ್ಗು, ಇವನ್ನೂ ಇತರ

---

1 ಈ ಸಂದರ್ಭದಲ್ಲಿ ಸಂಸ್ಕೃತ ಪದಗಳಿಂದಲೇ ನಿರ್ದೇಶಿಸಲಾಗಿರುವ ಕೆಲವು ಹಣ್ಣು ಕಾಯಿಗಳು ನಮ್ಮ ದೇಶದಲ್ಲಿ ಪ್ರಸಿದ್ಧವಾಗಿಲ್ಲ.

ಜಾಂಬೂ ಬಿಲ್ವಾಮಲೇ ಚೈವ ಜಾತ್ಯಶ್ರೀನಾರುಕಸ್ತಥಾ ।
ನಾರಂಗಬೀಜಪೂರೌ ಚ ರಾಜಫಲ್ಗುಫಲಾನ್ಯಪಿ ॥ ೩೦೧ ॥

ತಥಾ ಫಲ್ಗೂನಿ ಮುಖ್ಯಾನಿ ದೇವದೇವಾಯ ಭಕ್ತಿತಃ ।
ಏವಮಾದೀನಿ ಚಾನ್ಯಾನಿ ಯಃ ಫಲಾನಿ ಪ್ರಯಚ್ಛತಿ ॥ ೩೦೨ ॥

ಕ್ರಿಯಾಸಾಫಲ್ಯಮಾಪ್ನೋತಿ ಸ್ವರ್ಗಲೋಕಂ ತಥೈವ ಚ ।
ಉದುಂಬರಂ ಕಪಿತ್ಥಂ ಚ ತಥಾ ದಂತಶಠಂ ಚ ಯತ್ ॥ ೩೦೩ ॥

ಏವಮಾದೀನಿ ದೇವಾಯ ನ ದೇಯಾನಿ ಕದಾಚನ ।
ಪ್ರಾಪ್ನೋತಿ ಬಲಮಾರೋಗ್ಯಂ ಮೃದ್ವೀಕಾವಿನಿವೇದಕಃ ॥ ೩೦೪ ॥

ರಸಾನ್ಮುಖ್ಯಾನವಾಪ್ನೋತಿ ಸೌಭಾಗ್ಯಮಪಿ ಚೋತ್ತಮಂ ।
ಆಮ್ರೈರಭ್ಯರ್ಚ್ಯ ದೇವೇಶಮಶ್ವಮೇಧಫಲಂ ಲಭೇತ್ ॥ ೩೦೫ ॥

ಪೂಗಜಾತೀಫಲೇ ದತ್ವಾ ಜಾತೀಪತ್ರಂ ತಥೈವ ಚ ।
ಲವಂಗಮಥ ಕಂಕೋಲಮೇಲಾಂ ಕಟುಫಲಂ ತಥಾ ॥ ೩೦೬ ॥

ಸಣ್ಣ ಸಣ್ಣ ಫಲಗಳನ್ನೂ ಸಹ ದೇವಾಧಿಪನಾದ ಹರಿಗೆ ಭಕ್ತಿಯಿಂದ ಯಾರು ಅರ್ಪಿಸುತ್ತಾರೆಯೋ ಅವರು ತಮ್ಮ ಪ್ರಯತ್ನದಲ್ಲಿ ಸಾಫಲ್ಯ ಹೊಂದುವುದಲ್ಲದೆ ಸ್ವರ್ಗಸುಖವನ್ನೂ ಅನುಭವಿಸುತ್ತಾರೆ.

೩೦೩–೩೦೭. ಅತ್ತಿ, ಬೇಲ, ಹುಳಿಬೇಲ ಇವೇ ಮೊದಲಾದುವನ್ನು ಹರಿಗೆ ನಿವೇದಿಸಬಾರದು. ದ್ರಾಕ್ಷಿಯನ್ನು ನಿವೇದಿಸಿದವನು ಬಲವನ್ನೂ, ಆರೋಗ್ಯವನ್ನೂ ಹೊಂದುತ್ತಾನೆ. ಒಳ್ಳೆಯ ರಸಪದಾರ್ಥಗಳನ್ನೂ, ಸೌಭಾಗ್ಯವನ್ನೂ ಹೊಂದುತ್ತಾನೆ. ಮಾವಿನಹಣ್ಣುಗಳ ನೈವೇದ್ಯದಿಂದ ಹರಿಯನ್ನು ಪೂಜಿಸಿದವನು ಅಶ್ವಮೇಧದ ಫಲವನ್ನು ಹೊಂದುತ್ತಾನೆ. ಅಡಕೆಕಾಯಿ, ಜಾಜೀಕಾಯಿ, ಜಾಜೀಪತ್ರೆ, ಲವಂಗ, ಕಕ್ಕೋಲ, ಏಲಕ್ಕಿ, ಕಟುಫಲ, ಚಿಗುರಾದ ವೀಳೆಯದೆಲೆ ಇವನ್ನು ಅರ್ಪಿಸಿದವನು

ತಾಂಬೂಲೀನಾಂ ಕಿಸಲಯಂ ಸ್ವರ್ಗಲೋಕಮವಾಪ್ನುಯಾತ್ ।
ಸೌಭಾಗ್ಯಮುತ್ತಮಂ ಲೋಕೇ ತಥಾರೂಪಮನುತ್ತಮಂ ॥ ೩೦೭ ॥

ಮುಖವಾಸಪ್ರದಾನೇನ ಸ್ತ್ರೀಣಾಂ ವಲ್ಲಭತಾಂ ವ್ರಜೇತ್ ।
ಮಾತ್ರಾಣಾಂ ಚ ಪ್ರದಾನೇನ ನರಕಂ ನೈವ ಗಚ್ಛತಿ ॥ ೩೦೮ ॥

ಮಾತ್ರಾಭಿಃ ಪೂರಯೇದ್ಭೋಜ್ಯಾಂಸ್ತಥಾ ಭಕ್ಷ್ಯಾಸಂಭವೇ ।
ಯತ್ಕಿಂಚಿದ್ಭಕ್ತಿಸಂಯುಕ್ತೋ ದೇವದೇವೇ ಪ್ರಯಚ್ಛತಿ ॥ ೩೦೯ ॥

ತದೇವಾಕ್ಷಯ್ಯಮಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ।
ನ ದೇವಸ್ತೋಷಮಾಯಾತಿ ಪ್ರಭೂತೈರ್ಧನಸಂಚಯೈಃ ॥ ೩೧೦ ॥

ಯಥಾ ತೋಷಮವಾಪ್ನೋತಿ ಭಕ್ತ್ಯಾ ಭಕ್ತಜನಪ್ರಿಯಃ ।
ಭಕ್ತ್ಯಾ ಕಾಮಾನವಾಪ್ನೋತಿ ಭಕ್ತ್ಯಾ ಸ್ವರ್ಗಂ ಚ ಗಚ್ಛತಿ ॥ ೩೧೧ ॥

ಭಕ್ತ್ಯಾ ತತ್ಪದಮಾಪ್ನೋತಿ ಯತ್ರ ಗತ್ವಾ ನ ಶೋಚತಿ ।
ಸಾಮಾನ್ಯಭಕ್ತ್ಯಾ ಯದ್ದತ್ತಂ ತದ್ಧಿ ಪಾದಾಭ್ಯಾಂ ಪ್ರಯಚ್ಛತಿ ॥ ೩೧೨ ॥

ಸ್ವರ್ಗಸುಖಕ್ಕೆ ಭಾಗಿಯಾಗುತ್ತಾನೆ. ಉತ್ತಮವಾದ ಸೌಭಾಗ್ಯವನ್ನೂ, ರೂಪವನ್ನೂ ಹೊಂದುತ್ತಾನೆ.

೩೦೮–೩೧೨. ಮುಖವಾಸ ಚೂರ್ಣದ ಪ್ರದಾನದಿಂದ ಸ್ತ್ರೀಯರ ಪ್ರೀತಿಗೆ ಪಾತ್ರನಾಗುತ್ತಾನೆ. ಮಾತ್ರಾ ದಾನದಿಂದ ನರಕದಿಂದ ಬಿಡುಗಡೆ ಹೊಂದುತ್ತಾನೆ. ಭಕ್ಷ್ಯಾದಿಗಳು ಯಾವುದೂ ಇಲ್ಲದಿದ್ದಲ್ಲಿ ಮಾತ್ರಾ ದಾನದಿಂದಲೇ ಭೋಜ್ಯೋಪಚಾರ ನಡೆಸಬೇಕು. ಯಾವುದಾದರೊಂದು ವಸ್ತುವನ್ನು ಹರಿಗೆ ಭಕ್ತಿಯಿಂದ ಅರ್ಪಣೆ ಮಾಡಿದಲ್ಲಿ ಅದೇ ಅಕ್ಷಯಫಲವಾಗುತ್ತದೆ. ಸ್ವರ್ಗವನ್ನೂ ಕೊಡುತ್ತದೆ. ಭಕ್ತಿಪ್ರಿಯನಾದ ಹರಿಯು ಭಕ್ತಿಯಿಂದ ಪ್ರಸನ್ನನಾಗುವಂತೆ ಇತರ ಯಾವ ಧನಕನಕಾದಿಗಳಿಂದಲೂ ಪ್ರಸನ್ನನಾಗುವುದಿಲ್ಲ ಭಕ್ತಿಯು ಇಷ್ಟಾರ್ಥಪ್ರದ ಹಾಗೂ ಸ್ವರ್ಗಪ್ರದ, ಭಕ್ತಿಯಿಂದಲೇ ಶೋಕಾದಿಗಳಿಲ್ಲದ ಪರಮಪದವನ್ನೂ ಹೊಂದುತ್ತಾನೆ. ಸಾಮಾನ್ಯ ಭಕ್ತಿಯಿಂದ ಸೇವಿಸಿದವನಿಗೆ ಅದರ ಫಲವನ್ನು ಪಾದಗಳಿಂದ ಕೊಡುತ್ತಾನೆ. ಏಕಾಂತ ಭಾವನೆಯಿಂದ ಸೇವಿಸಿದವರಿಗೆ ಅದರ ಫಲವನ್ನು ತಲೆಯಿಂದ ಕೊಡುತ್ತಾನೆ.

ಏಕಾಂತಭಾವೋಪಗತೈರ್ವರ್ಮೂರ್ಧ್ನಾ ದ್ವಿಜವರೋತ್ತಮಾಃ ।
ಶ್ವೇತೇನ ವಸ್ತ್ರಯುಗ್ಮೇನ ತಥಾ ಮುಕ್ತಾಫಲೈಃ ಶುಭೈಃ ॥ ೩೧೩ ॥

ಮುಖ್ಯಕರ್ಪೂರಧೂಪೇನ ಪಯಸಾ ಪಾಯಸೇನ ಚ ।
ಪದ್ಮಸೂತ್ರಸ್ಯ ವರ್ತ್ಯಾ ಚ ಘೃತಧೂಪೇನ ಚಾಪ್ಯಥ ॥ ೩೧೪ ॥

ಪೂಜಯೇನ್ಸರ್ವಶುಕ್ಲಾ ಸ್ಯಾತ್ಸರ್ವಕಾಮಪ್ರದಾ ಶಿವಾ ।
ಕೃತ್ವೇಮಾಂ ಮುಚ್ಯತೇ ರೋಗೀ ರೋಗಾಚ್ಛೀಘ್ರಮಸಂಶಯಂ ॥ ೩೧೫ ॥

ದುಃಖಾರ್ತೋ ಮುಚ್ಯತೇ ದುಃಖಾದ್ಬದ್ಧೋ ಮುಚ್ಯೇತ ಬಂಧನಾತ್ ।
ರಾಜಗ್ರಸ್ತಶ್ಚ ಮುಚ್ಯೇತ ತಥಾ ರಾಜಭಯಾನ್ನರಃ ॥ ೩೧೬ ॥

ಕ್ಷೇಮೇಣ ಗಚ್ಛೇದಧ್ವಾನಂ ತಥಾನರ್ಥವಿವರ್ಜಿತಃ ।
ತೈಲೇನ ಸ್ನಾಪಿತಂ ದೇವಂ ಕುಂಕುಮೇನಾನುಲೇಪಯೇತ್ ॥ ೩೧೭ ॥

೩೧೩-೩೧೬. ಬಿಳಿಯ ವಸ್ತ್ರಯುಗ್ಮದಿಂದಲೂ, ಮುತ್ತುಗಳಿಂದಲೂ, ಒಳ್ಳೆಯ ಕರ್ಪೂರ ಧೂಪದಿಂದಲೂ, ಹಾಲಿನ ಪಾಯಸದಿಂದಲೂ, ತಾವರೆಯ ದಂಟಿನ ನಾರಿನಿಂದ ಮಾಡಿದ ಬತ್ತಿಯಿಂದ ಹತ್ತಿಸಲಾದ ತುಪ್ಪದ ದೀಪದಿಂದಲೂ ಮಾಡಿದ ಪೂಜೆಯು ಬಹಳ ಪರಿಶುದ್ಧವೂ, ಮಂಗಳಪ್ರದವೂ, ಇಷ್ಟಾರ್ಥಪ್ರದವೂ ಆಗುತ್ತದೆ. ಇಂತಹ ಪೂಜೆಯಿಂದ ಹರಿಯನ್ನು ಸೇವಿಸಿದವನು ರೋಗಿಯಾಗಿದ್ದಲ್ಲಿ ರೋಗದಿಂದ ಜಾಗ್ರತೆಯಾಗಿ ಬಿಡುಗಡೆ ಹೊಂದುತ್ತಾನೆ. ದುಃಖಿಯು ದುಃಖದಿಂದಲೂ ಬದ್ಧನು ಬಂಧನದಿಂದಲೂ, ರಾಜಗ್ರಸ್ತನು ರಾಜಭಯದಿಂದಲೂ ಬಿಡುಗಡೆ ಹೊಂದುತ್ತಾರೆ. ಮಾರ್ಗಸ್ಥನಾಗಿರುವವನು ಅನರ್ಥಗಳಿಲ್ಲದೆ ಕ್ಷೇಮದಿಂದ ದಾರಿಯನ್ನು ಸಾಗಿಸುತ್ತಾನೆ.

೩೧೭-೩೨೧. ಹರಿಗೆ ಎಣ್ಣೆಯಿಂದ ಲೇಪನಮಾಡಿ ಕುಂಕುಮದಿಂದಲೂ ಲೇಪಿಸಿ ಕೆಂಪಾದ ವಸ್ತ್ರಗಳನ್ನೂ ಹವಳಗಳನ್ನೂ ಧರಿಸಿ ಬಂಧುಜೀವ ಪುಷ್ಪ

ರಕ್ತೈರ್ವಸ್ತ್ರೈಃ ಸಮಭ್ಯರ್ಚ್ಯ ವಿದ್ರುಮೈಶ್ಚ ತಥಾ ನರಃ ।
ಬಂಧುಜೀವಕಪುಷ್ಪೈಶ್ಚ ಧೂಪೇನಾಗುರುಜೇನ ಚ ॥ ೩೧೮ ॥

ತೈಲದೀಪೇನ ವರ್ತ್ಯಾ ಚ ಮಹಾರಜತರಕ್ತಯಾ ।
ದ್ರಾಕ್ಷಾಪಾನಕಯುಕ್ತೇನ ವಟಕೈಃ ಕೃಸರೇಣ ಚ ॥ ೩೧೯ ॥

ಪೂಜಯೇತ್ಸರ್ವರಕ್ತಾ ಸ್ಯಾಚ್ಛತ್ರುಪಕ್ಷಕ್ಷಯಂಕರೀ ।
ಸೌಭಾಗ್ಯಜನನೀ ಲೋಕೇ ಧನಧಾನ್ಯವಿವರ್ಧಿನೀ ॥ ೩೨೦ ॥

ಸ್ವರ್ಗದಾ ಫಲದಾ ಚೈವ ನರನಾರೀವಶಂಕರೀ ।
ಏವಂ ದಾನಫಲಂ ಪ್ರೋಕ್ತಂ ರಾಜಸಾನಾಂ ಮಯಾ ದ್ವಿಜಾಃ ॥ ೩೨೧ ॥

ಅಕಾಮಃ ಸಾತ್ವಿಕೇ ಲೋಕೇ ಯತ್ಕಿಂಚಿದ್ವಿನಿವೇದಯೇತ್ ।
ತೇನೈವ ಸ್ಥಾನಮಾಪ್ನೋತಿ ಯತ್ರ ಗತ್ವಾ ನ ಶೋಚತಿ ॥ ೩೨೨ ॥

ಗಳಿಂದಲೂ ಕೆಂಪು ಹಾಲುಮಡ್ಡಿಯ ಧೂಪದಿಂದಲೂ, ಕೆಂಪಾದ ಕಲಾಪತ್ತಿನಿಂದ ಮಾಡಿದ ಬತ್ತಿಯಿಂದ ಕೂಡಿದ ಎಣ್ಣೆಯದೀಪದಿಂದಲೂ ದ್ರಾಕ್ಷಾಪಾನಕ, ಚಿಗಳಿ, ವಟಕಗಳ ನೈವೇದ್ಯದಿಂದಲೂ ಸರ್ವರಕ್ತವಸ್ತುಗಳಿಂದ ಪೂಜಿಸಿದವನಿಗೆ ಶತ್ರುನಾಶವು ಲಭಿಸುತ್ತದೆ ಇದು ಸೌಭಾಗ್ಯಕಾರಿ, ಹಾಗೂ ಧನಧಾನ್ಯವೃದ್ಧಿಪ್ರದ, ಮತ್ತು ಸ್ತ್ರೀ ಪುರುಷರ ವಶ್ಯಕ್ಕೆ ಸಾಧಕ. ಹರಿಗೆ ಅರ್ಪಿಸಬಹುದಾದ ಪದಾರ್ಥಗಳನ್ನು ಇದುವರಿಗೂ ನಾನು ಹೇಳಿರುವುದು ಇಹಲೋಕದ ಫಲಾಪೇಕ್ಷಿಗಳಾದ ರಾಜಸಮನೋವೃತ್ತಿಯವರಿಗೆ ಸೇರಿದ್ದು

೩೨೨-೩೨೪. ಯಾವನು ಫಲಾಪೇಕ್ಷೆ ಇಲ್ಲದೆ ಸಾತ್ವಿಕ ವೃತ್ತಿಯಲ್ಲಿರುವನೋ ಅವನು ತನಗೆ ತೋರಿದಯಾವ ವಸ್ತುವನ್ನಾದರೂ ಪರಮಾತ್ಮನ ಪ್ರೀತಿಗಾಗಿ ಅರ್ಪಿಸಿದರೂ, ಅದರಿಂದಲೇ ಅವನು ಶೋಕಾದಿಗಳಿಲ್ಲದಿರುವ ದಿವ್ಯಸ್ಥಾನವನ್ನು ಹೊಂದುತ್ತಾನೆ ಮೂಢರಾದ ನರಾಧಮರು ಧರ್ಮಾರ್ಥಗಳೆಂಬ ತ್ರಿವರ್ಗದ ಪ್ರಾಪ್ತಿಗಾಗಿ

ಧರ್ಮಾರ್ಚನಿಕಾ ಮೂಢಾಃ ಫಲಕಾಮಾ ನರಾಧಮಾಃ ।
ಯೇಽರ್ಚಯಂತಿ ಜಗನ್ನಾಥಂ ತೇ ಕಾಮಾನ್ ಪ್ರಾಪ್ನುವಂತ್ಯಥ ॥ ೩೨೩ ॥

ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ ।
ಅಕಾಮಾನಾಂ ಮನುಷ್ಯಾಣಾಂ ಸಾತ್ತ್ವಿಕಾನಾಂ ದ್ವಿಜೋತ್ತಮಾಃ ॥ ೩೨೪ ॥

ಸರ್ವದುಃಖವಿಮೋಕ್ಷಾಯ ಭವಂತೀಯಮಪಿ ಧ್ರುವಂ ।
ಅನಂತೋ ಭಗವಾನ್ವಿಷ್ಣುಸ್ತಸ್ಯ ಕಾಮವಿವರ್ಜಿತೈಃ ॥ ೩೨೫ ॥

ಯದೇವ ದೀಯತೇ ಕಿಂಚಿತ್ತದೇವಾಕ್ಷಯ್ಯಮುಚ್ಯತೇ ।
ಪಾದ್ಭ್ಯಾಂ ಪ್ರತೀಚ್ಛತೇ ದೇವಃ ಸಕಾಮೇನ ನಿವೇದಿತಂ ॥ ೩೨೬ ॥

ಮೂರ್ಧ್ನಾ ಪ್ರಪದ್ಯತೇ ದತ್ತಮಕಾಮೇನ ದ್ವಿಜೋತ್ತಮಾಃ ।
ನೈವೇದ್ಯೇನಾಥ ಪುಷ್ಪೈರ್ವಾ ವಿವಿಧೈರ್ಧನಸಂಚಯೈಃ ॥ ೩೨೭ ॥

ನಾಸ್ತಿ ಪ್ರಯೋಜನಂ ತಸ್ಯ ಸರ್ವಗಸ್ಯಾಮಿತಾತ್ಮನಃ ।
ಭಕ್ತ್ಯಾ ಪ್ರತೀಚ್ಛತೇ ದತ್ತಂ ಭಕ್ತಾನುಗ್ರಹಕಾರಣಾತ್ ॥ ೩೨೮ ॥

ಜಗತ್ಪತಿಯನ್ನು ಪೂಜಿಸಿ ಇಷ್ಟಾರ್ಥಗಳನ್ನು ಹೊಂದುತ್ತಾರೆ. ಅಲ್ಪಬುದ್ಧಿಗಳಾದ ಅವರಿಗೆ ಲಭಿಸಬಹುದಾದ ಆ ಫಲಗಳೂ ಕೇವಲ ನಶ್ವರ. ಫಲಾಪೇಕ್ಷೆ ಇಲ್ಲದ ಸಾತ್ವಿಕರಿಗೆ ಈ ಪೂಜೆಯೇ ಜಗತ್ಪತಿಯ ಅನುಗ್ರಹಕ್ಕೆ ಸಾಧಕವಾಗಿ ಸರ್ವದುಃಖ ನಿವೃತ್ತಿಪೂರ್ವಕವಾದ ಮೋಕ್ಷಕ್ಕೆ ಸಾಧಕವಾಗುತ್ತದೆ, ಇದು ನಿಶ್ಚಯ.

೩೨೫-೩೨೮. ಪೂಜ್ಯನಾದ ವಿಷ್ಣುವು ಅಪರಿಚ್ಛಿನ್ನನಾದವನು ಫಲಾಪೇಕ್ಷೆ ಇಲ್ಲದವರಿಂದ ಅವನಿಗೆ ಅಲ್ಪಸ್ವಲ್ಪ ಸಮರ್ಪಿಸಲ್ಪಟ್ಟರೂ ಅದೇ ಅಕ್ಷಯವಾಗಿ ಪರಿಣಮಿಸುತ್ತದೆ. ಫಲಾಪೇಕ್ಷೆಯುಳ್ಳವನ ಪ್ರಾರ್ಥನೆಯನ್ನು ಹರಿಯು ಪಾದಗಳಿಂದ ಸ್ವೀಕರಿಸುತ್ತಾನೆ. ಫಲಾಪೇಕ್ಷೆ ಇಲ್ಲದ ಸಾತ್ವಿಕನ ಪ್ರಾರ್ಥನೆಯನ್ನು ತಲೆಯಿಂದ ಸ್ವೀಕರಿಸುತ್ತಾನೆ. ಸರ್ವವ್ಯಾಪಕನೂ ಅಪರಿಚ್ಛಿನ್ನಸ್ವರೂಪನೂ ಆದ ಆ ಸರ್ವೇಶ್ವರನಿಗೆ ನೈವೇದ್ಯ, ಪುಷ್ಪ ಧನರಾಶಿ ಇವುಗಳಿಂದ ಯಾವ ಪ್ರಯೋಜನವೂ ಇಲ್ಲ. ಭಕ್ತರ ಅನುಗ್ರಹಕ್ಕಾಗಿ ಭಕ್ತಿಯಿಂದ ಕೊಡಲ್ಪಡುವವಸ್ತುವನ್ನು ಮಾತ್ರ ಅವನು ಅಪೇಕ್ಷಿಸುತ್ತಾನೆ. ಆದುದರಿಂದ ಎಲ್ಲಾ ಅವಸ್ಥೆಗಳಲ್ಲಿಯೂ ಭಕ್ತಿಯೊಂದೇ ಅವನ ಅನುಗ್ರಹಕ್ಕೆ ಮುಖ್ಯಸಾಧನ.

ತಸ್ಮಾತ್ಸರ್ವಾಸ್ವವಸ್ಥಾಸು ಭಕ್ತಿರೇವಾತ್ರ ಕಾರಣಂ ।
ಏಕಾಂತಭಾವೋಪಗತಾಃ ಸರ್ವಕಾಮವಿವರ್ಜಿತಾಃ ॥ ೩೨೯ ॥

ವೈಷ್ಣವಂ ಪದಮಾಸಾದ್ಯ ನ ನಿವರ್ತೇತೇ ಕರ್ಹಿಚಿತ್ ।
ನ ಭಯಂ ನಾರಕಂ ತೇಷಾಂ ನ ಚ ವ್ಯಾಧಿಕೃತಂ ಭಯಂ ॥ ೩೩೦ ॥

ನ ವೃತ್ತಿಶತ್ರುಜಂ ವಾಪಿ ಯೇ ಪ್ರಪನ್ನಾ ಜನಾರ್ದನಂ ॥ ೩೩೧ ॥

ನಿವೇದ್ಯ ಭಕ್ತ್ಯಾ ಮಧುಸೂದನಾಯ
ದ್ರುಮಚ್ಛದಂ ವಾಪ್ಯಥ ತತ್ಪ್ರಸೂನಂ ।
ದೂರ್ವಾಂಕುರಂ ವಾ ಸಲಿಲಂ ದ್ವಿಜೇಂದ್ರಾಃ
ಪ್ರಾಪ್ನೋತಿ ಲೋಕಾನ್ಮನಸಾ ಯಥೇಷ್ಟಾನ್ ॥ ೩೩೨ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ದಾನಧರ್ಮ
ನಿರೂಪಣೋ ನಾಮ ಏಕಚತ್ವಾರಿಂಶದುತ್ತರ
ತ್ರಿಶತತಮೋಽಧ್ಯಾಯಃ

೩೨೯–೩೩೨. ಏಕಾಂತಭಕ್ತಿಯುಳ್ಳ ಮಹಾತ್ಮರು ಎಲ್ಲಾ ಫಲಾಪೇಕ್ಷೆಯನ್ನೂ ಬಿಟ್ಟು ಅವನನ್ನು ಸೇವಿಸಿದಲ್ಲಿ ವೈಷ್ಣವಸ್ಥಾನವನ್ನು ಹೊಂದಿ ಹಿಂದೆ ತಿರುಗುವ ಸಂಭವೇ ಇರುವುದಿಲ್ಲ. ಅವರಿಗೆ ನರಕಭಯವಾಗಲಿ ವ್ಯಾಧಿಭಯವಾಗಲಿ ಇಲ್ಲ ಜನಾರ್ದನನಲ್ಲಿಯೇ ಶರಣಾಗತರಾದವರಿಗೆ ಯಾವ ಶತ್ರುಭಯವೂ ಇರುವುದಿಲ್ಲ. ಮಧುಸೂದನನಿಗೆ ಭಕ್ತಿಯಿಂದ ಪತ್ರವನ್ನಾಗಲಿ ಪುಷ್ಪವನ್ನಾಗಲಿ ಗರಿಕೆಯ ಚಿಗುರನ್ನಾಗಲಿ ಸರ್ವಸುಲಭವಾದ ಜಲವನ್ನಾಗಲಿ ನೈವೇದ್ಯಕ್ಕೆ ಸಮರ್ಪಿಸಿ ಸಂತೋಷ ಪಡಿಸಿದವರು ತಮಗೆ ಇಷ್ಟವಾದ ಯಾವ ಲೋಕವನ್ನಾದರೂ ಹೊಂದುತ್ತಾರೆ

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ದಾನಧರ್ಮ
ನಿರೂಪಣವೆಂಬ ಮುನ್ನೂರ ನಲವತ್ತೊಂದನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಏಕಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ಋಷಯ ಊಚುಃ ॥

ನಮಸ್ತೇ ದೇವದೇವೇಶ ವಾಸುದೇವ ಜನಾರ್ದನ ।
ಭಕ್ತಾನುಕಂಪವರದ ಪುಂಡರೀಕಾಕ್ಷ ಸುವ್ರತ ॥ ೧ ॥

ಬ್ರಹ್ಮಣ್ಯ ಪುರುಷಾಚಿಂತ್ಯ ಸೃಷ್ಟಿಸಂಹಾರಕಾರಕ ।
ತ್ರೈಲೋಕನಾಥ ಗೋವಿಂದ ಶರಣಾಗತವತ್ಸಲ ॥ ೨ ॥

ಸರ್ವೇಶ ಸರ್ವಗೇಶಾನ ಸರ್ವವ್ಯಾಪಿನ್ನಮೋಽಸ್ತು ತೇ ।
ನಮೋಽಸ್ತು ತೇ ಜಗನ್ನಾಥ ಜಗತಾಮೀಶ್ವರೇಶ್ವರ ॥ ೩ ॥

ಮುನ್ನೂರ ನಲವತ್ತೆರಡನೆಯ ಅಧ್ಯಾಯ.

೧-೪. ಋಷಿಗಳು ಹೀಗೆ ಸ್ತೋತ್ರಮಾಡುತ್ತಾರೆ ;—ಎಲೈ ದೇವಾಧಿದೇವನೇ ವಾಸುದೇವನೇ, ಜನಾರ್ದನಮೂರ್ತಿಯೇ, ಭಕ್ತವತ್ಸಲನೇ, ವರಪ್ರದನೇ, ಕಮಲಾಕ್ಷನೇ, ಮಹಾವ್ರತನೇ ಬ್ರಾಹ್ಮಣಪ್ರಿಯನೇ, ಸೃಷ್ಟಿಸಂಹಾರಕಾರಿಯಾದ ಅಚಿಂತ್ಯಪುರುಷನೇ, ತ್ರಿಲೋಕಪ್ರಭುವೇ, ಗೋವಿಂದನೇ ಶರಣಾಗತರಲ್ಲಿ ಪ್ರೀತಿಯುಳ್ಳವನೇ ನಿನಗೆ ನಮಸ್ಕಾರಗಳು. ಎಲೈ ಸರ್ವೇಶ್ವರನೇ, ಸರ್ವವ್ಯಾಪಕನೇ, ಪ್ರಭುವೇ ನಿನಗೆ ಅನಂತ ನಮಸ್ಕಾರಗಳು. ಎಲೈ ಜಗನ್ನಾಥನೇ ಜಗತ್ಪತಿಗಳಿಗೂ ಪ್ರಭುವಾಗಿರುವವನೇ, ದೇವತೆಗಳ ದುಃಖವನ್ನೂ ನಾಶಮಾಡಿದವನೇ, ಬ್ರಹ್ಮರುದ್ರಾದಿಗಳಿಂದ ಸ್ತೋತ್ರಮಾಡಲ್ಪಟ್ಟವನೇ, ವಿಷ್ಣುರೂಪಿಯೇ, ವಿಜಯರೂಪಿಯೇ

ಸುರಾರ್ತಿಹರ ದೇವೇಶ ಪಿತಾಮಹಹರಸ್ತುತ ।
ವಿಷ್ಣೋ ಜಿಷ್ಣೋ ಹರೇ ಕೃಷ್ಣ ವಿಭೋ ಸೂರ್ಯೇಂದುಲೋಚನ ॥ ೪ ॥

ಸಹಸ್ರಸೂರ್ಯಪ್ರತಿಮ ಜಗತ್ಪಾಲನತತ್ಪರ ।
ವರಾಹನರಸಿಂಹಾದ್ಯ ವಾಮನಾನಂತ ವಿಕ್ರಮ ॥ ೫ ॥

ತ್ರಿವಿಕ್ರಮಕ್ರಮಾಕ್ರಾಂತ ಬ್ರಹ್ಮಾಂಡಕಟಮಂಡಲ ।
ಚಕ್ರಧಾರಾಹತಾಶೇಷ ದೇವಶತ್ರುಗಣೇಶ್ವರ ॥ ೬ ॥

ಸ್ಮೃತಿಮಾತ್ರಸಮುತ್ಸಾದ್ಯವಿಪ್ರನಾಶನಕಾರಕ ।
ಶಾಸ್ತ್ರೋಪದೇಶಾದಸ್ಮಾಕಂ ಹೃದಿ ಸ್ಥಿತತಮೋಂತಕ ॥ ೭ ॥

ವೈಕುಂಠ ಕುಂಠಿತಾಶೇಷ ದಾನವಾಸ್ತ್ರಬಲಾನಘ ।
ಜಠರಾಂತರಸಂಲೀನ ಸಮಸ್ತಭುವನತ್ರಯ ॥ ೮ ॥

ಶಶಾಂಕಲೇಖಾಸಂಕಾಶದಂಷ್ಟ್ರೋದ್ಧೃತವಸುಂಧರ ।
ಮಹಾವರಾಹ ವಿಧ್ವಸ್ತಹಿರಣ್ಯಾಕ್ಷಮಹಾಸುರ ॥ ೯ ॥

ಸರ್ವಪಾಪನಾಶಕನೇ, ಕೃಷ್ಣರೂಪಿಯೇ, ಪ್ರಭುವೇ, ಸೂರ್ಯಚಂದ್ರನೇತ್ರನೇ, ನಿನಗೆ ಅನಂತ ನಮಸ್ಕಾರಗಳು.

೫-೧೦. ಸಹಸ್ರ ಸೂರ್ಯಸದೃಶನೇ, ಜಗತ್ಪಾಲನತತ್ಪರನೇ, ವರಹ, ನಾರಸಿಂಹ, ಆದಿವಾಮನಾದಿರೂಪನೇ, ಅಮಿತಪರಾಕ್ರಮಿಯೇ, ತ್ರಿವಿಕ್ರಮ ಪಾದ ದಿಂದ ಆಕ್ರಮಿಸಿದ ಅಖಂಡ ಬ್ರಹ್ಮಾಂಡಮಂಡಲ ಉಳ್ಳವನೇ, ಚಕ್ರಧಾರೆಯಿಂದ ನಾಶಪಡಿಸಲ್ಪಟ್ಟ ದೇವಶತ್ರುಸಮೂಹ ಉಳ್ಳವನೇ, ಸ್ಮರಣಮಾತ್ರದಿಂದ ನಾಶಪಡಿಸಲ್ಪಟ್ಟ ಬ್ರಾಹ್ಮಣ ವಿರೋಧಿಗಳುಳ್ಳವನೇ, ಶಾಸ್ತ್ರೋಪದೇಶದಿಂದ ನಮ್ಮ ಹೃದಯದ ಅಜ್ಞಾನವೆಲ್ಲವನ್ನೂ ನಾಶಪಡಿಸಿದವನೇ, ವೈಕುಂಠಮೂರ್ತಿಯೇ, ಎಲ್ಲಾ ದಾನವಾಸ್ತ್ರಗಳ ಬಲವನ್ನೂ ನಾಶಪಡಿಸಿದವನೇ, ಜಠರದೊಳಗೆ ಅಡಗಿರುವ ಸಮಸ್ತ ಲೋಕತ್ರಯ ಉಳ್ಳವನೇ, ಚಂದ್ರಲೇಖೆಯಂತಿರುವ ಕೋರೆದಾಡೆಗಳಿಂದ ಭೂಮಂಡಲವನ್ನು ಎತ್ತಿದವನೇ, ಮಹಾವರಾಹಮೂರ್ತಿಯೇ, ಹಿರಣ್ಯಾಕ್ಷನೆಂಬ ಮಹಾಸುರನನ್ನು ನಾಶಮಾಡಿದವನೇ, ದೈತ್ಯಾಧಿಪನ ಹೃದಯರಕ್ತದಿಂದ ಕೆಂಪಾಗಿ

ದೈತ್ಯೇಂದ್ರವಕ್ಷೋರುಧಿರ ರಕ್ತೀಕೃತನಖಾಂಕುರ ।
ಜ್ವಾಲಾಮಾಲಾಪರಿಕ್ಷಿಪ್ತ ನರಸಿಂಹವಪುರ್ಧರ ॥ ೧೦ ॥

ಲಕ್ಷ್ಮೀಕಟಾಕ್ಷವಿಕ್ಷೇಪ ಶಬಲೀಕೃತವಿಗ್ರಹ ।
ಕೌಸ್ತುಭೋದ್ಭಾಸಿತೋರಸ್ಕ ತಥಾ ಚಾಮೀಕರಾಂಬರ ॥ ೧೧ ॥

ಭೋಗಿಭೋಗಾಸನಾಸೀನ ತಾರ್ಕ್ಷ್ಯಪ್ರವರಕೇತನ ।
ಶಶಾಂಕಶತಸಂಕಾಶ ಸಪ್ತಿಕಂಧರ ವೇದಪ ॥ ೧೨ ॥

ಮಧುಕೈಟಭವಿಧ್ವಂಸ ಮೇದೋವರ್ಧಿತಭೂತಲ ।
ನಾಭೀ ಸರೋಜಸಂಭೂತಚತುರ್ಮುಖ ನಮೋಸ್ತು ತೇ ॥ ೧೩ ॥

ಸರ್ವತಃ ಪಾಣಿಪಾದಾಂತ ಸರ್ವತೋಕ್ಷಿಶಿರೋಮುಖ ।
ಸರ್ವೇಂದ್ರಿಯಗುಣೋಪೇತ ಸರ್ವತ್ರ ಪುರುಷೋತ್ತಮ ॥ ೧೪ ॥

ಮಾಡಲ್ಪಟ್ಟ ಕೋಮಲವಾದ ಉಗುರುಳ್ಳವನೇ, ಜ್ವಾಲಾಮಾಲೆಗಳಿಂದ ಸುತ್ತುವರಿದಿರುವ ನರಸಿಂಹರೂಪಧಾರಿಯೇ, ನಿನಗೆ ಅನಂತ ನಮಸ್ಕಾರಗಳು.

೧೧-೧೩. ಲಕ್ಷ್ಮೀದೇವಿಯ ಕಟಾಕ್ಷಸಂಚಾರದಿಂದ ಶಬಲವರ್ಣ ಹೊಂದಿರುವ ದೇಹಧಾರಿಯೇ, ಕೌಸ್ತುಭ ರತ್ನದಿಂದ ಪ್ರಕಾಶವಾದ ಹೃದಯವುಳ್ಳವನೇ, ಪೀತಾಂಬರನೇ, ಆದಿಶೇಷಶಾಯಿಯೇ, ಗರುಡಧ್ವಜನೇ, ನೂರಾರು ಚಂದ್ರರಂತೆ ಸಮ್ಯವಾದ ಕಾಂತಿಯುಳ್ಳವನೇ, ಸಪ್ತಲೋಕಗಳೆಂಬ ಶಾಖೆಗಳುಳ್ಳವನೇ, ವೇದ ರಕ್ಷಕನೇ, ಮಧುಕೈಟಭರ ನಾಶದಿಂದುಂಟಾದ ಮೇದಸ್ಸಿನಿಂದ ಭೂಮಿಯನ್ನು ವೃದ್ಧಿಗೊಳಿಸಿದವನೇ, ನಾಭಿಕಮಲದಿಂದ ಚತುರ್ಮುಖನನ್ನು ಪ್ರಕಾಶಗೊಳಿಸಿದವನೇ, ನಿನಗೆ ಅನಂತ ನಮಸ್ಕಾರಗಳು.

೧೪-೧೬. ಎಲ್ಲಾ ಕಡೆಯಲ್ಲಿಯೂ ಪಾಣಿಪಾದಗಳುಳ್ಳವನೇ, ಎಲ್ಲಾ ಕಡೆಯಲ್ಲೂ ಕಣ್ಣು, ತಲೆ, ಮುಖಗಳುಳ್ಳವನೇ, ಸರ್ವೇಂದ್ರಿಯ ಸಾಮರ್ಥ್ಯವನ್ನೂ

ಯೋಗಿನಾಂ ತ್ವಂ ಪರಂ ಚಕ್ಷುರ್ಯೋಗಿನಾಂ ತ್ವಂ ಗತಿಃ ಪರಾ ॥
ಯೋಗಿನಸ್ತ್ವಾಂ ಚ ಸಂಪ್ರಾಪ್ಯ ನಿವರ್ತಂತೇ ನಕರ್ಹಿಚಿತ್ ॥ ೧೫ ॥

ನಮಸ್ತೇ ಪುರತೋ ದೇವ ಪೃಷ್ಠತಶ್ಚ ನಮೋಽಸ್ತು ತೇ ।
ತಿರ್ಯಗ್ನಮೋಽಸ್ತು ತೇ ದೇವ ಸರ್ವತ್ರ ಚ ನಮೋಽಸ್ತು ತೇ ॥ ೧೬ ॥

॥ ಮಾರ್ಕಂಡೇಯ ಉವಾಚ ॥

ಏವಂ ಸ್ತುತಃ ಸ ಭಗವಾನ್ನೃಷಿಭಿಸ್ತೈಸ್ತದಾನಘಃ ।
ದಿವ್ಯಂ ಚಕ್ಷುರ್ದದೌ ತೇಷಾಮೃಷೀಣಾಂ ಭಾವಿತಾತ್ಮನಾಂ ॥ ೧೭ ॥

ತೇಽಪಶ್ಯನ್ಸಕಲಂ ದೇಹೇ ತಸ್ಯ ತ್ರಿಭುವನಂ ತತಃ ।
ಹಂಸರೂಪಧರಸ್ಯಾಥ ವಿಷ್ಣೋರಮಿತತೇಜಸಃ ॥ ೧೮ ॥

ವಿಶ್ವರೂಪಧರಂ ಹಂಸಂ ದೃಷ್ಟ್ವಾ ರೂಪಂ ತಪೋಧನಾಃ ।
ಮೂರ್ಧಭಿಃ ಪ್ರಣತಾ ಜಗ್ಮುಸ್ತತಃ ಸರ್ವೇ ವಸುಂಧರಾಂ ॥ ೧೯ ॥

ಹೊಂದಿರುವವನೇ, ಸರ್ವವ್ಯಾಪಿಯಾದ ಪುರುಷೋತ್ತಮನೇ, ಯೋಗಿಗಳಿಗೆ ನೀನೇ ಉತ್ತಮವಾದ ಕಣ್ಣು, ನೀನೇ ಪರಮ ಗತಿಸಾಧನ ಅಥವಾ ನೀನೇ ಗಮ್ಯಸ್ಥಾನ, ನಿನ್ನನ್ನು ಹೊಂದಿದ ಯೋಗಿಗಳು ಯಾವಾಗಲೂ ಹಿಂತಿರುವುದೇ ಇಲ್ಲ. ಎಲೈ ಪ್ರಭುವೇ, ನಿನ್ನ ಮುಂಭಾಗಕ್ಕೂ, ಹಿಂಭಾಗಕ್ಕೂ ಸಹ ಅನಂತ ನಮಸ್ಕಾರಗಳು, ಉಳಿದ ಭಾಗಗಳಿಗೂ ಎಲ್ಲಾ ಭಾಗಗಳಿಗೂ ನಮಸ್ಕಾರಗಳು.

೧೭-೨೦. ಮಾರ್ಕಂಡೇಯರು ಹೇಳುತ್ತಾರೆ :— ಹಂಸರೂಪಿಯಾದ ಆ ಪರಮಾತ್ಮನು ಋಷಿಗಳಿಂದ ಹೀಗೆ ಸ್ತೋತ್ರಮಾಡಲ್ಪಟ್ಟು, ಅಂತಹ ಏಕಾಂತಬುದ್ಧಿಯುಳ್ಳ ಋಷಿಗಳಿಗೆ ದಿವ್ಯಚಕ್ಷುಸ್ಸನ್ನು ಅನುಗ್ರಹಿಸಿದನು. ಅನಂತರ ಆ ಋಷಿಗಳು ಸಕಲ ಪ್ರಪಂಚವನ್ನೂ ಆ ಹಂಸದ ರೂಪದಿಂದಿದ್ದ ಮಹಾವಿಷ್ಣುವಿನ ಆ ದೇಹದಲ್ಲಿ ಸಾಕ್ಷಾತ್ಕರಿಸಿದರು. ವಿಶ್ವರೂಪಧಾರಿಯಾದ ಆ ದಿವ್ಯಹಂಸವನ್ನು ಸಾಷ್ಟಾಂಗ ಪ್ರಣಾಮದಿಂದ ಸತ್ಕರಿಸಿ ಋಷಿಗಳೆಲ್ಲರೂ ಭೂಮಿಯ ಮೇಲೆ ತಲೆಬಾಗಿ ನಮಸ್ಕರಿಸ ತೊಡಗಿದರು. ಹಾಗೆ ನಮಸ್ಕರಿಸುತ್ತಿರುವ ಋಷಿಗಳನ್ನು ಕುರಿತು ಹಂಸರೂಪಿ

ತತಸ್ತಾನಬ್ರವೀತ್ಸರ್ವಾನ್ದೇವೋ ಮಧುರಯಾ ಗಿರಾ ।
ಮೇಘದುಂದುಭಿನಿರ್ಘೋಷಃ ಪ್ರಣತಾರ್ತಿವಿನಾಶನಃ ॥ ೨೦ ॥

ಉತ್ತಿಷ್ಠತ ದ್ವಿಜಶ್ರೇಷ್ಠಾ ವರಂ ವರಯತಾನಘಾಃ ।
ಅಮೋಘದರ್ಶನಂ ದೃಷ್ಟ್ವಾ ಸಮೇತಾ ಮನಸೇಪ್ಸಿತಂ ॥ ೨೧ ॥

॥ ಹಂಸ ಉವಾಚ ॥

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ಜ್ಞಾನಂ ಪ್ರಾಪ್ತಂ ಜನಾರ್ದನ ।
ವಿಶ್ವರೂಪೋ ಭವಾನ್ ದೃಷ್ಟಃ ಕಿಮನ್ಯೇನ ವರೇಣ ನಃ ॥ ೨೨ ॥

ತಥಾಪಿ ಯದಿ ದೇವೇಶ ದೇಯೋಽಸ್ಮಾಕಂ ವರಸ್ತ್ವಯಾ ।
ಭಕ್ತಿರ್ಭವತು ನಿರ್ವಿಘ್ನಾ ತ್ವಯಿ ನಿತ್ಯಂ ಜನಾರ್ದನ ॥ ೨೩ ॥

ತ್ವಯಾ ಸಹ ಚ ಯೋಽಸ್ಮಾಕಂ ಸಂವಾದಮಿಮಮುತ್ತಮಂ ।
ಪಠೇತ್ಸಮಸ್ತಪಾಪೇಭ್ಯೋ ಮೋಕ್ಷಸ್ತಸ್ಯ ತಥಾ ಭವೇತ್ ॥ ೨೪ ॥

ಯಾದ ಪರಮಾತ್ಮನು ಆಶ್ರಿತರ ದುಃಖನಾಶಕನಾದುದರಿಂದ ಮೇಘಧ್ವನಿಯಂತಹ ಗಂಭೀರ ಧ್ವನಿಯಿಂದ ಹೀಗೆ ಹೇಳಿದನು.

೨೧-೨೪ ಎಲೈ ಋಷಿಗಳಿರಾ, ಅಮೋಘವಾದ ಈ ದರ್ಶನದಿಂದ ನೀವೆಲ್ಲರೂ ಇಷ್ಟಸಿದ್ಧಿ ಹೊಂದಿ ಕೃತಕೃತ್ಯರಾಗಿದ್ದೀರಿ, ಮೇಲಕ್ಕೆ ಏಳಿರಿ. ನಿಮಗೆ ಬೇಕಾದ ವರವನ್ನೂ ಕೇಳಿರಿ ಋಷಿಗಳು ಹೇಳುತ್ತಾರೆ—ಎಲೈ ಜನಾರ್ದನನೇ ನಮ್ಮ ಅಜ್ಞಾನವೆಲ್ಲವೂ ನಾಶವಾಯಿತು. ಸದ್ಧರ್ಮಗಳ ಸ್ಮರಣೆಯೂ ಉಂಟಾಯಿತು. ಜ್ಞಾನಲಾಭವೂ ಆಯಿತು. ವಿಶ್ವರೂಪಿಯಾದ ನಿನ್ನನ್ನು ಸಾಕ್ಷಾತ್ಕರಿಸಿದ ಮೇಲೆ ನಮಗೆ ಇನ್ನೇನು ವರ ಬೇಕಾಗಿದೆ. ಆದರೂ ಪ್ರಭುವಾದ ನೀನು ಈ ವರವನ್ನು ಕೊಡಬೇಕು. ಎಲೈ ಜನಾರ್ದನಮೂರ್ತಿಯೇ ನಿನ್ನ ವಿಷಯದಲ್ಲಿ ಯಾವಾಗಲೂ ನಮಗೆ ನಿರ್ವಿಘ್ನವಾದ ಭಕ್ತಿಯುಂಟಾಗಲಿ. ನಮ್ಮ ಈ ಸಂವಾದವನ್ನು ಯಾರು ಪಠನಮಾಡುತ್ತಾರೆಯೋ ಅವರಿಗೆ ಸರ್ವಪಾಪಗಳಿಂದಲೂ ಬಿಡುಗಡೆಯುಂಟಾಗಲಿ.

ರೋಗಾದ್ರೋಗೀ ಭಯಾದ್ಭೀತೋ ಬದ್ಧೋ ಮುಕ್ತಸ್ತು ಬಂಧನಾತ್ ।
ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್ ॥

ಕಾಮಾನವಾಪ್ನುಯಾತ್ಕಾಮೀ ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್ ।
ಯಶ್ಚೇದಂ ಧಾರಯೇದ್ವಿದ್ವಾನ್ಸ ಯಾತಿ ಪರಮಾಂ ಗತಿಂ ॥ ೨೬ ॥

ಶ್ರವಣಾದಸ್ಯ ಶಾಸ್ತ್ರಸ್ಯ ಸ್ವರ್ಗಲೋಕಂ ಚ ಗಚ್ಛತಿ ।
ಧನ್ಯಂ ಯಶಸ್ಯಮಾಯುಷ್ಯಂ ಪುತ್ರೀಯಂ ಸರ್ವಕಾಮದಂ ॥ ೨೭ ॥

ಪುಣ್ಯಮಸ್ತು ತಥೈವೈತಚ್ಛಾಸ್ತ್ರಂ ಮಧುನಿಷೂದನ ।
ವಿಷ್ಣೋಃ ಪ್ರಸಾದಾತ್ಸಂವೃತ್ತಾ ಚಸ್ಫೂರ್ತ್ಯೈತಚ್ಛಾಸ್ತ್ರಮುತ್ತಮಂ ॥ ೨೮ ॥

ಶಾಸ್ತ್ರಾತ್ಸಮಗ್ರಾದಪಿ ಸಾರಭೂತಂ
ಸಂವಾದಮೇತತ್ಪುರುಷೋತ್ತಮಸ್ಯ ।

೨೫–೨೯. ರೋಗಿಯಾದವನು ಇದರ ಪಠನದಿಂದ ರೋಗನಿವೃತ್ತಿಯನ್ನೂ, ಭೀತನಾದವನು ಭಯನಿವೃತ್ತಿಯನ್ನೂ, ಬದ್ಧನಾದವನು ಬಂಧನಮೋಕ್ಷವನ್ನೂ, ಧರ್ಮಾರ್ಥಿಯಾದವನು ಧರ್ಮವನ್ನೂ, ಅರ್ಥಾರ್ಥಿಯಾದವನು ಅರ್ಥವನ್ನೂ, ಕಾಮಾರ್ಥಿಯಾದವನು ಕಾಮವನ್ನೂ, ಮೋಕ್ಷಾರ್ಥಿಯಾದವನು ಮೋಕ್ಷವನ್ನೂ ಹೊಂದಲಿ. ನಮ್ಮ ಸಂವಾದದ ಅರ್ಥವನ್ನು ಚೆನ್ನಾಗಿ ತಿಳಿದವನೂ ಸಹ ಉತ್ತಮಗತಿಯನ್ನು ಹೊಂದಲಿ. ಈ ಶಾಸ್ತ್ರದ ಶ್ರವಣವೂ ಸ್ವರ್ಗಪ್ರಾಪ್ತಿಗೆ ಸಾಧಕವಾಗಲಿ. ಈ ಶಾಸ್ತ್ರವೂ ಸಹ ಧನಪ್ರಾಪ್ತಿಗೆ ಸಾಧಕವಾಗಿಯೂ, ಯಶಸ್ಕರವಾಗಿಯೂ, ಆಯುಃಪ್ರದವಾಗಿಯೂ, ಪುತ್ರಪ್ರಾಪ್ತಿಗೂ, ಸರ್ವಮನೋರಥಪ್ರಾಪ್ತಿಗೂ, ಸಾಧಕವಾಗಲಿ. ಈ ಶಾಸ್ತ್ರವೂ ಸಹ ವಿಷ್ಣುವಿನ ಅನುಗ್ರಹದಿಂದ ಉಂಟಾದುದರಿಂದ ಮಧುಸೂದನನಾದ ನಿನ್ನ ಅನುಗ್ರಹದಿಂದ ಪುಣ್ಯಕರವಾಗಲಿ. ಸಮಸ್ತ ಶಾಸ್ತ್ರಗಳಿಗೂ ಸಾರಭೂತವಾದ ಪುರುಷೋತ್ತಮ ಮತ್ತು ಈ ಋಷಿಗಳ

ದ್ವಿಜೋತ್ತಮಾನಾಂ ಪುರುಷಸ್ತ್ವಧೀತ್ಯ
ಕಾಮಾನಭೀಷ್ಟಾನ್ಮನಸಾ ಲಭೇತ || ೨೯ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ-
ವಜ್ರಸಂವಾದೇ ಮುನೀನ್ಪ್ರತಿ ಹಂಸಗೀತಾಸು ಮುನಿದೃಷ್ಟ
ಹಂಸವಿಶ್ವರೂಪದರ್ಶನೋ ನಾಮ
ದ್ವಿಚತ್ವಾರಿಂಶದುತ್ತರ ತ್ರಿಶತತಮೋಽಧ್ಯಾಯಃ
ಹಂಸಗೀತಾ ಸಮಾಪ್ತಾ.

ಈ ಸಂವಾದವನ್ನು ಯಾವ ಮನುಷ್ಯನು ಅಧ್ಯಯನದಿಂದ ಧರಿಸುತ್ತಾನೆಯೋ ಅವನು ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಮುನಿಗಳಿಗೆ ಉಪದಿಷ್ಟವಾದ ಹಂಸಗೀತೆಯ ಮುನಿದೃಷ್ಟ
ಹಂಸವಿಶ್ವರೂಪದರ್ಶನವೆಂಬ ಮುನ್ನೂರ ನಲವತ್ತೆರಡನೆಯ
ಅಧ್ಯಾಯ ಮುಗಿದಿದೆ.

ಹಂಸಗೀತೆಯು ಇಲ್ಲಿಗೆ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ತ್ರಿಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ವಜ್ರ ಉವಾಚ ॥

ಅತೀವ ಸುಮುಖಾರಾಧ್ಯೋ ದೇವೋ ವಿಷ್ಣುರುರುಕ್ರಮಃ ।
ಸ್ತುತೇನ ದರ್ಶಯಾಮಾಸ ವಿಶ್ವರೂಪಂ ದ್ವಿಜನ್ಮನಾಂ ॥ ೧ ॥

ಪ್ರಸಾದಂ ಪರಮಂ ತಸ್ಯ ಬ್ರೂಹಿ ಭಕ್ತಜನೇ ಮಮ ।
ತೃಪ್ತಿಂ ಬ್ರಹ್ಮನ್ನಗಚ್ಛಾಮಿ ಶೃಣ್ವನ್ನೇತತ್ಕಥಾಮೃತಂ ॥ ೨ ॥

॥ ಮಾರ್ಕಂಡೇಯ ಉವಾಚ ॥

ಸ ವಿಧಿಜ್ಞೋ ಮಹಾರಾಜ ಮಾತಲಿಃ ಶಕ್ರಸಾರಥಿಃ ।
ತಸ್ಯಾಸ್ತಿ ಸದೃಶೀ ಕನ್ಯಾ ಗುಣಕಾಶೀತಿ ವಿಶ್ರುತಾ ॥ ೩ ॥

ಮುನ್ನೂರ ನಲವತ್ತಮೂರನೆಯ ಅಧ್ಯಾಯ.

೧–೨. ವಜ್ರನು ಪ್ರಶ್ನೆಮಾಡುತ್ತಾನೆ:—ಎಲೈ ಮುನಿಯೇ, ದೇವೋತ್ತಮನಾದ, ಸರ್ವಶ್ರೇಷ್ಠನಾದ ಮಹಾವಿಷ್ಣುವು ಬಹಳ ಸುಲಭವಾಗಿ ಪೂಜಿಸಲ್ಪಡತಕ್ಕವನು. ಏಕೆಂದರೆ ಬ್ರಾಹ್ಮಣರುಗಳ ಕೇವಲ ಸ್ತುತಿಮಾತ್ರದಿಂದಲೇ ಆ ಮಹಾವಿಷ್ಣುವು ಅವರುಗಳಿಗೆ ವಿಶ್ವರೂಪವನ್ನು ತೋರಿದನು ಅವನ ಮಹಿಮೆಯು ಅಪಾರವಾದುದು. ಅಂಥವನ ಪರಮಾನುಗ್ರಹವನ್ನು ಭಕ್ತನಾದ ನನಗೆ ಹೇಳು. ಪರಮಾತ್ಮನ ಕಥೆಯನ್ನು ಎಷ್ಟು ಕೇಳಿದರೂ ತೃಪ್ತಿಯುಂಟಾಗುವುದಿಲ್ಲ.

೩–೭. ಮಾರ್ಕಂಡೇಯರು ಹೇಳುತ್ತಾರೆ:—ಎಲೈ ಮಹಾರಾಜನೇ, ಇಂದ್ರನ ಸಾರಥಿಯಾದ ಮಾತಲಿಯು ಎಲ್ಲವನ್ನೂ ಬಲ್ಲವನಾಗಿರುವನು. ಅವನಿಗೆ

ಮಾತಲಿರ್ನಾರದಶ್ಚೈವ ಅನ್ವೇಷ್ಯಂ ತದ್ವನಂ ಪುರಾ ।
ಚಂಕ್ರಮ್ಯಮಾಣೌ ಸಕಲಮಾರ್ಯಕಸ್ಯಾತ್ಮಜಾತ್ಮಜಂ ॥ ೪ ॥

ಸುಮುಖಾಖ್ಯಂ ದದೃಶತುಸ್ತೌ ಗೃಹೀತ್ವಾ ಗತಾವುಭೌ ।
ನಾಗಂ ಶಕ್ರಂ ತತಃ ತಸ್ಮಾದಯಾಚೇತಾಂ ತು ತಾವುಭೌ ॥ ೫ ॥

ಸುಮುಖಸ್ಯಾಭಯಂ ತಾರ್ಕ್ಷ್ಯಾತ್ತಯೋಃ ಶಕ್ರೋ ದದೌ ವರಂ ।
ವೀರ್ಯಜ್ಞಸ್ತಾರ್ಕ್ಷ್ಯವೀರ್ಯಸ್ಯ ಸ ಯಯೌ ಕೇಶವಾಂತಿಕಂ ॥ ೬ ॥

ಸುಮುಖಸ್ಯಾಭಯಂ ಪ್ರಾದಾತ್ತಾರ್ಕ್ಷ್ಯಾನ್ಮಧುನಿಷೂದನಃ ।
ಆಜಗಾಮ ತತಸ್ತಾರ್ಕ್ಷ್ಯಃ ಸರೋಷಃ ಕೇಶವಾಂತಿಕಂ ॥ ೭ ॥

॥ ಗರುಡ ಉವಾಚ ॥

ಕಿಮವಜ್ಞಾಯ ಮಾಂ ಕೃಷ್ಣ ಸುಮುಖೇ ದೀಯತೇ ವರಃ ।
ಮಮ ಪೃಷ್ಠಗತಃ ಶತ್ರೂಂಸ್ತ್ವಂ ನಿಹಂಸಿ ಚ ಬುಧ್ಯಸೇ ॥ ೮ ॥

ಸರಿಯಾದ ಗುಣಕಾಶೀ ಎಂಬ ಹೆಸರುಳ್ಳ ಕನ್ಯೆಯು ಇರುತ್ತಾಳೆ. ಒಂದುಸಲ ಮಾತಲಿ ನಾರದರು ಆ ವನವನ್ನು ಹುಡುಕಲು ಪೂರ್ವದಲ್ಲಿ ಅಲ್ಲಿ ಇಲ್ಲಿ ಸುತ್ತುತ್ತಾ ಅರ್ಯಕನ ಮೊಮ್ಮಗನಾದ ಸುಮುಖನೆಂಬುವನನ್ನು ಅವರಿಬ್ಬರೂ ನೋಡಿದರು. ಮತ್ತು ಅವನನ್ನು ಕರೆದುಕೊಂಡು ಹೊರಟು ಸ್ವರ್ಗದಲ್ಲಿ ಅವನನ್ನು ಇಂದ್ರನಿಂದ ಇವರಿಬ್ಬರೂ ಯಾಚನೆಮಾಡಿದರು. ಗರುಡನಿಂದ ತಪ್ಪಿಸಿ ಸುಮುಖನಿಗೆ ಅಭಯ ದಾನಮಾಡಿ ಇಂದ್ರನು ಅವರಿಬ್ಬರಿಗೆ ವರವನ್ನು ಕೊಟ್ಟನು. ಗರುಡನ ಬಲವನ್ನು ಬಲ್ಲ ಅವನು ವಿಷ್ಣುವಿದ್ದೆಡೆಗೆ ಹೋದನು. ವಿಷ್ಣುವೂ ಕೂಡ ಆ ಸುಮುಖನಿಗೆ ಅಭಯದಾನಮಾಡಿದನು. ಆ ಸಮಯಕ್ಕೆ ಸರಿಯಾಗಿ ಗರುಡನು ಕೋಪದಿಂದ ವಿಷ್ಣುವಿನ ಸಮೀಪಕ್ಕೆ ಬಂದನು.

೮. ಗರುಡನು ಹೇಳುತ್ತಾನೆ:—ಎಲೈ ಕೃಷ್ಣನೇ. ನನ್ನನ್ನು ತಿರಸ್ಕರಿಸಿ ಸುಮುಖನಿಗೆ ವರವನ್ನು ಕೊಡವಿಯಾ, ನನ್ನ ಮೇಲೆ ಕುಳಿತು ನೀನು ಶತ್ರುಗಳನ್ನು ಕೊಲ್ಲುತ್ತೀಯೆ. ತಿಳಿದಿದ್ದೀಯಾ ನನಗೆ ಆಹಾರಭೂತವಾದ ಸರ್ಪವನ್ನು ನೀನು ಕಾಪಾಡುತ್ತಿರುವೆ

ಕುಟುಂಬಾಭರಣಂ ಶಕ್ತ್ರಂ ಪನ್ನಗಂ ಮಮ ರಕ್ಷಸಿ ।

॥ ಮಾರ್ಕಂಡೇಯ ಉವಾಚ ॥

ಏವಮುಕ್ತಸ್ತದಾ ತೇನ ವಿಷ್ಣುರ್ಗರುಡಮಬ್ರವೀತ್ ॥ ೯ ॥

ನ ಮೇ ಶಕ್ತೋ ಜಗದ್ವೋಢುಂ ಸಕಲಂ ವಿಹಗೇಶ್ವರ ।
ಅಹಮೇವಾತ್ಮನಾತ್ಮಾನಂ ಧಾರಯಾಮಿ ರಣೇ ರಣೇ ॥ ೧೦ ॥

ಶಕ್ತಿಶ್ಚೇದಸ್ತಿ ವೋಢುಂ ತೇ ಭುಜಮೇಕಂ ವಹಸ್ವ ಮೇ ।
ಏವಮುಕ್ತ್ವಾ ದದೌ ಪೃಷ್ಠೇ ತಸ್ಯ ಸವ್ಯಂ ಭುಜಂ ಹರಿಃ ॥ ೧೧ ॥

ತತೋ ವಿಷಣ್ಣವದನಃ ಪಕ್ಷತ್ಯಾಗಾತ್ ಖಗೋತ್ತಮಃ ।
ಕ್ಲಾಂತೋ ದೀನಶ್ಚ ತುಷ್ಟಾವ ದೇವೇಶಂ ಮಧುಸೂದನಂ ॥ ೧೨ ॥

॥ ಗರುಡ ಉವಾಚ ॥

ನಮಸ್ತೇ ದೇವದೇವೇಶ ಸುರಾಸುರನಮಸ್ಕೃತ ।
ಅಜೇಯ ಪುಂಡರೀಕಾಕ್ಷ ಶರಣಾಗತವತ್ಸಲ ॥ ೧೩ ॥

೯-೧೨. ಮಾರ್ಕಂಡೇಯರು ಹೇಳುತ್ತಾರೆ:—ಈ ರೀತಿಯಾಗಿ ಹೇಳಿದ ಗರುಡನ ಮಾತನ್ನು ವಿಷ್ಣುವು ಕೇಳಿ ಈ ರೀತಿ ಉತ್ತರಕೊಟ್ಟನು. ಎಲೈ ಪಕ್ಷಿರಾಜನೇ, ಸಕಲ ಪ್ರಪಂಚವನ್ನೂ ಹೊರಲು ಸಮರ್ಥನಾದ ನನಗೆ ನೀನು ಸಮರ್ಥನೇ ಅಲ್ಲ. ನಾನೇನೆ ಪ್ರತಿ ಯುದ್ಧದಲ್ಲಿಯೂ ನನ್ನ ಶರೀರದಿಂದಲೇ ನನ್ನ ಶರೀರವನ್ನು ಧರಿಸುತ್ತೇನೆ ಬೇರೆಯಿಲ್ಲ ನಿನಗೆ ಶಕ್ತಿಯಿದ್ದ ಪಕ್ಷದಲ್ಲಿ ನನ್ನ ಒಂದು ತೋಳನ್ನು ಮಾತ್ರ ಹೊರು, ನೋಡೋಣ ಎಂದು ಹೇಳಿ ಅವನ ಹೆಗಲ ಮೇಲೆ ತನ್ನ ಬಲಭುಜವನ್ನು ಇಟ್ಟನು. ಆಗ ಆ ಭುಜದ ಇಡುವಿಕೆ ಮಾತ್ರದಿಂದಲೇ ಅವನು ರೆಕ್ಕೆಯು ಬಿದ್ದುಹೋಗಿ ಬಹಳ ದುಃಖಿತನಾಗಿ ಬಳಲಿ, ದೈನ್ಯದಿಂದ ದೇವದೇವನಾದ ಪರಮ ಪುರುಷನನ್ನು ಈ ರೀತಿ ಸ್ತೋತ್ರಮಾಡಿದನು.

೧೩-೧೪. ಗರುಡನು ಸ್ತೋತ್ರಮಾಡುತ್ತಾನೆ:—ದೇವದೇವನೇ, ನಿನಗೆ ನಮಸ್ಕಾರವು ದೇವದಾನವ ನಮಸ್ಕೃತನೇ, ಅಜೇಯನೇ, ಪುಂಡರೀಕಾಕ್ಷನೇ,

ನ ಮಯಾ ತ್ವದ್ಬಲಂ ಜ್ಞಾತಮಾತ್ಮಸಂಭಾವಿತಾತ್ಮನಾ ।
ತ್ವಮೇವ ದೇವ ತ್ರೈಲೋಕ್ಯಂ ಸದಾ ಧಾರಯಸೇಽನಘ ॥ ೧೪ ॥

ಆತ್ಮಾನಮಾತ್ಮನಾ ದೇವ ತ್ವಮೇವ ವಹಸೇ ಸದಾ ।
ಯಸ್ಯ ತೇ ದೇವ ಸಕಲಂ ದೇಹೇ ತ್ರಿಭುವನಂ ಸ್ಥಿತಂ ॥ ೧೫ ॥

ತಸ್ಯ ವೋಢುಂ ಕಥಂ ಶಕ್ತಾ ಮದ್ವಿಧಾ ಹಿ ಸಹಸ್ರಶಃ ।
ತಸ್ಮಾತ್ಪ್ರಸೀದ ಭಗವನ್ಮಮ ಧ್ವಜನಿವಾಸಿನಃ ॥ ೧೬ ॥

ನಾಸ್ತ್ಯಂತಸ್ತವ ದೇವೇಶ ಕರ್ಮಣಾ ಭುವನತ್ರಯೇ ।
ಕಸ್ತೇ ಕೀರ್ತಯಿತುಂ ಶಕ್ತಃ ಕರ್ಮಾಣ್ಯನವಶೇಷತಃ ॥ ೧೭ ॥

ಕರ್ಮಣಾಂ ಕೀರ್ತನಂ ವಾ ತೇ ಕಾ ಸ್ತುತಿಃ ಪರಮೇಶ್ವರ ।
ಸರ್ವತ್ರ ಸರ್ವಶಕ್ತಿಸ್ತ್ವಂ ಪ್ರಸೀದ ಮಮ ಶತ್ರುಹನ್ ॥ ೧೮ ॥

ಶರಣಾಗತರ ರಕ್ಷಕನೇ, ಅಹಂಕಾರಿಯಾದ ನನಗೆ ನಿನ್ನ ಬಲದ ಮಹಿಮೆಯು ಗೊತ್ತಾಗಲಿಲ್ಲ. ಎಲೈ ಶ್ರೇಷ್ಠನೇ, ನೀನೇ ಈ ಮೂರು ಲೋಕವನ್ನೂ ಧರಿಸಿರುತ್ತೀಯೇ.

೧೫–೧೭. ಎಲೈ ದೇವನೇ, ನಿನ್ನಿಂದಲೇ ನಿನ್ನನ್ನು ಹೊರುತ್ತೀಯೆ. ನಿನ್ನ ಶರೀರದಲ್ಲಿ ಈ ಮೂರು ಲೋಕವೂ ಅಡಗಿದೆ. ಇಂಥಹ ನಿನ್ನನ್ನು ನನಗೆ ಸದೃಶರಾದ ಸಾವಿರ ಜನವಾದರೂ ಹೊರಲಾರರು. ಆದುದರಿಂದ ಭಗವಂತನೇ ನಿನ್ನ ಆಶ್ರಯದಲ್ಲಿರುವ ನನ್ನನ್ನು ಕಾಪಾಡು. ಈ ಮೂರು ಲೋಕದಲ್ಲಿಯೂ ನಿನ್ನ ಕೆಲಸಗಳಿಗೆ ಅಳಿವಿಲ್ಲವು ನಿನ್ನ ವ್ಯಾಪಾರಗಳನ್ನು ವರ್ಣಿಸಲು ಯಾರು ತಾನೇ ಶಕ್ತರಾದಾರು ?

೧೮–೨೦. ನಿನ್ನ ಕೆಲಸಗಳ ಕೀರ್ತನವಾಗಲಿ, ಸ್ತುತಿಯಾಗಲೀ ಯಾರಿಂದ ಸಾಧ್ಯ ನೀನೇ ಸರ್ವತ್ರ ವ್ಯಾಪಿಸಿದ್ದೀಯೆ. ಶತ್ರುಸಂಹಾರಕನಾದದೇವನೇ ನನ್ನಮೇಲೆ

ಸರ್ವಭೂತಕೃತಾವಾಸ ವಾಸುದೇವ ಜಗತ್ಪತೇ ।
ಕಲ್ಪಾಂತಾಂಭೋಧಿಶಯನ ನಾರಾಯಣ ಮಹಾದ್ಯುತೇ ॥ ೧೯ ॥

ನಾಭೀಕಮಲಕಿಂಜಲ್ಕಪಿಂಜರೀಕೃತವಿಗ್ರಹ ।
ಪ್ರಸೀದ ಮೇ ನಮಸ್ತೇಽಸ್ತು ಪಕ್ಷಿಣೋ ಧ್ವಜವಾಸಿನಃ ॥ ೨೦ ॥

॥ ಶ್ರೀ ಭಗವಾನುವಾಚ ॥

ಆತ್ಮಸಂಭಾವನಾ ತಾರ್ಕ್ಷ್ಯ ನ ಕಾರ್ಯಾ ತೇ ಕದಾಚನ ।
ಅಹಮೇವಾತ್ಮನಾತ್ಮಾನಂ ವಹಾಮಿ ತ್ವಾಂ ಚ ಧಾರಯೇ ॥ ೨೧ ॥

ಪ್ರೀತಾ ನ ಚ ತ್ವಯಾ ಭಾರ್ಯಾ ಯದಪಕ್ಷಃ ಕೃತೋಽಹ್ಯಸಿ ।
ಮಯಾ ತ್ರಿಭುವನಂ ನ್ಯಸ್ತಂ ತ್ವದರ್ಥಮಖಿಲಂ ಭುಜೇ ॥ ೨೨ ॥

ತ್ವಯಾ ತುಲ್ಯೋಽಹಿ ಬಲವಾಲ್ಲೋಕೇಽನ್ಯೋ ನಾಸ್ತಿ ಕಶ್ಚನ ।
ಯಸ್ಯ ದೋರ್ದಂಡಸಂಸ್ಪರ್ಶಾಜ್ಜೀವಿತಂ ನ ಚ ನಿರ್ಗತಂ ॥ ೨೩ ॥

ಪ್ರಸನ್ನನಾಗು. ಸರ್ವಭೂತಗಳಲ್ಲಿಯೂ ನೆಲಸಿರುವವನೇ, ವಾಸುದೇವನೇ, ಜಗತ್ಪಾಲಕನೇ, ಕಲ್ಪಾಂತರದಲ್ಲಿ ಸಮುದ್ರದಲ್ಲಿ ಮಲಗುವವನೇ, ಮಹಾಕಾಂತಿ ಯುಕ್ತನಾದ ನಾರಾಯಣನೇ, ನಾಭಿಕಮಲದ ಕಿಂಜಲ್ಕಗಳಿಂದ ಹೊಂಬಣ್ಣವಾಗಿರುವ ಶರೀರಧಾರಿಯೇ, ಧ್ವಜದಲ್ಲಿ ಪಕ್ಷಿಯಾಗಿರುವ ನನ್ನ ಮೇಲೆ ಕರುಣೆಯಿಟ್ಟು ಕಾಪಾಡು ನಿನಗೆ ನಮಸ್ಕಾರವು.

೨೧–೨೩ ಶ್ರೀ ಭಗವಂತನು ಹೇಳುತ್ತಾನೆ :—ಎಲೈ ಗರುಡನೇ, ಯಾವಾಗಲೂ ತನ್ನನ್ನು ತಾನು ಹೊಗಳಿಕೊಳ್ಳಬಾರದು. ನಾನೇ ನನ್ನನ್ನು ಧರಿಸುತ್ತೇನೆ. ಮತ್ತು ನಿನ್ನನ್ನೂ ಹೊರುತ್ತೇನೆ. ಪಕ್ಷ (ರೆಕ್ಕೆ) ಬಿದ್ದಿರುವುವನ್ನು ನೋಡಿ ಭಾರ್ಯೆಯು ಪ್ರೀತಿಸುವುದಿಲ್ಲ. ನನ್ನಿಂದ ಮೂರು ಲೋಕವೂ ನಿನಗೋಸ್ಕರ ವಾಗಿಯೇ ನಿನ್ನ ಭುಜದ ಮೇಲೆ ಇಡಲ್ಪಟ್ಟಿತು. ನಿನಗೆ ಸಮವಾದ ಬಲವುಳ್ಳವನು ಲೋಕದಲ್ಲಿ ಯಾರೂ ಇಲ್ಲವು. ಯಾವ ಭುಜದ ಸ್ಪರ್ಶದಿಂದ ಜೀವಿತವು ಹೋಗ

ಯದ್ವಶ್ಶರೀರಜೋ ಭೂತ್ವಾ ಬಲವಾನ್ ಖಸತ್ತಮ ।
ವಿಶೇಷವಂತಃ ಪಕ್ಷಾಸ್ತೇ ಭವಿಷ್ಯಂತಿ ನ ಸಂಶಯಃ ॥ ೨೪ ॥

॥ ಮಾರ್ಕಂಡೇಯ ಉವಾಚ ॥

ಏವಮುಕ್ತಃ ಸುಪರ್ಣಸ್ತು ಸುಪರ್ಣಾನ್ಪ್ರಾಪ್ತವಾನ್ಸ್ವನಃ ।
ತೇಜೋಬಲಾಧಿಕತ್ವಂ ವಾ ಲೇಭೇ ದೇವಪ್ರಸಾದತಃ ॥ ೨೫ ॥

ಏವಂ ಪುರುಷವತ್ತಾರ್ಕ್ಷ್ಯಃ ಸ್ತೂಯಮಾನಶ್ಚ ಶಾರ್ಙ್ಗಿಣಾ ।
ಭೂಯ ಏವ ಸುಪರ್ಣತ್ವಂ ಗಮಿತೋಽತಿಬಲಃ ಕೃತಃ ॥ ೨೬ ॥

ಶಕ್ರಯಾಚಿತಮಾತ್ರೇಣ ಸುಮುಖೋಽಪ್ಯಮರಃ ಕೃತಃ ।
ತಸ್ಮಾದ್ರಾಜನ್ವಿಜಾನೀಹಿ ತಸ್ಯ ದಾನವವಿದ್ವಿಷಃ ॥ ೨೭ ॥

ನಾಸ್ತ್ಯದೇಯಂ ಹಿ ಭಕ್ತೇಷು ದೇವರಾಜ್ಯಮಪಿ ಧ್ರುವಂ ।
ಮೃತ್ಯುಪಾಶಗೃಹೀತಾನಾಂ ಪತನಾನ್ನರಕೇ ತಥಾ ।
ಸ್ಮೃತಮಾತ್ರಃ ಸ ದೇವೇಶಸ್ತದ್ಭಯಾದ್ವಿನಿವರ್ತಕಃ ॥ ೨೮ ॥

ಲಿಲ್ಲವೋ ಅದರಿಂದ ನೀನೇ ಶರೀರದಲ್ಲಿ ಬಲಶಾಲಿಯಾಗಿರುವೆ. ನಿನಗೆ ಪಕ್ಷವು ಸಹ ಬಹಳ ಬಲವುಳ್ಳದ್ದಾಗುವುದು. ಇದರಲ್ಲಿ ಸಂಶಯವಿಲ್ಲ.

೨೫-೨೬. ಮಾರ್ಕಂಡೇಯರು ಹೇಳುತ್ತಾರೆ :— ಈ ರೀತಿಯಾಗಿ ಹೇಳಲ್ಪಟ್ಟ ಗರುಡನು ಪುನಃ ಒಳ್ಳೆಯ ರೆಕ್ಕೆಗಳನ್ನೂ ಹೊಂದಿದನು. ಪರಮಾತ್ಮನ ಅನುಗ್ರಹದಿಂದ ಕಾಂತಿ ಮತ್ತು ಬಲಗಳಲ್ಲಿ ಆಧಿಕ್ಯವನ್ನೂ ಪಡೆದುಕೊಂಡನು. ಈ ರೀತಿ ಪುರುಷನಂತೆ ಗರುಡನು ವಿಷ್ಣುವಿನಿಂದ ಹೊಗಳಿ ಪುನಃ ಪಕ್ಷಿಗಳಿಗೆಲ್ಲ ಅಧಿಕ ಬಲನಾಗಿ ಮಾಡಲ್ಪಟ್ಟನು.

೨೭-೨೮. ಸುಮುಖನು ಇಂದ್ರನ ಯಾಚನೆಮಾತ್ರದಿಂದ ಅಮರನಾದನು. ಎಲೈ ರಾಜನೇ, ಪರಮಾತ್ಮನು ಭಕ್ತರಿಗೆ ಏನನ್ನು ತಾನೇ ಕೊಡಲಾರನು ? ಮೃತ್ಯು ಪಾಶದಿಂದ ಕಟ್ಟಿ ನರಕಕ್ಕೆ ಒಯ್ಯಲ್ಪಟ್ಟ ಪುರುಷನು ಸಹ ಆ ಪರಮಾತ್ಮನನ್ನು ಕೇವಲ ಸ್ಮರಿಸಿದ್ದೇ ಆದರೆ ಆ ಭಯವನ್ನು ಹೋಗಲಾಡಿಸುವನು.

ನಿಹತಸಕಲದುಃಖೋ ಭಕ್ತಿಭಾಜಾಂ ನರಾಣಾಂ
ದ್ವಿಜವಿಬುಧವರಾಣಾಂ ಪೂಜನೀಯೋऽರಿಹಂತಾ ।
ಖಗಪನೃಪತಿಯಾಯೀ ನೀರಸಂಜಾತವರ್ಣೋ ।
ಭವತು ಮಧುರಿಪುಸ್ತೇ ಭಕ್ತಿನಮ್ರಸ್ಯ ತುಷ್ಟಃ ॥ ೨೯ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರ
ಸಂವಾದೇ ಸುಮುಖೋಪಾಖ್ಯಾನವರ್ಣನೋ ನಾಮ
ತ್ರಿಚತ್ವಾರಿಂಶದುತ್ತರ ತ್ರಿಶತತಮೋಧ್ಯಾಯಃ

---

೨೯. ಭಕ್ತಿಯುಳ್ಳವರಿಗೆ ಸಕಲದುಃಖಗಳನ್ನೂ ನೀಗುವ ದ್ವಿಜ ಮತ್ತು ದೇವತೆಗಳಿಂದ ಪೂಜಿಸಲ್ಪಡುವ ಮಹಾವಿಷ್ಣುವೇ ಪೂಜ್ಯನು. ಗರುಡವಾಹನನಾದ ಮತ್ತು ನೀಲಮೇಘಶ್ಯಾಮನಾದ ಪರಮಾತ್ಮನು ಭಕ್ತನಾದ ನನ್ನಲ್ಲಿ ಪ್ರೀತಿಯುಳ್ಳವನಾಗಿ ನಿನ್ನನ್ನೂ ಕಾಪಾಡಲಿ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ
ವಜ್ರಸಂವಾದದಲ್ಲಿ ಸುಮುಖೋಪಾಖ್ಯಾನವೆಂಬ ಮುನ್ನೂರ
ನಲವತ್ತಮೂರನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಚತುಶ್ಚತ್ವಾರಿಂಶದಧಿಕತ್ರಿಶತತಮೋಽಧ್ಯಾಯಃ ||

|| ವಜ್ರ ಉವಾಚ ||

ಶ್ರೋತುಮಿಚ್ಛಾಮ್ಯಹಂ ತ್ವತ್ತಃ ಪ್ರಸಾದಂ ಪರಮಂ ಹಿಯತ್ ।
ಕೃತಂ ಭಕ್ತಜನೇ ತೇನ ವಿಷ್ಣುನಾ ಪ್ರಭವಿಷ್ಣುನಾ ॥ ೧ ॥

|| ಮಾರ್ಕಂಡೇಯ ಉವಾಚ ||

ಹತೇ ತ್ರಿಭುವನೇ ರಾಜ ಞ್ಯಾಕ್ರಸ್ಯ ಬಲಿನಾ ಪುರಾ ।
ಜಗಾಮ ಶಕ್ರಃ ಶರಣಂ ಕಶ್ಯಪಂ ಪಿತರಂ ತತಃ ॥ ೨ ॥

ಕಶ್ಯಪಃ ಶಕ್ರಮಾದಾಯ ಜಗಾಮಾಥ ಪಿತಾಮಹಂ ।
ತಮಾಹ ವರದೋ ಬ್ರಹ್ಮಾ ಗಚ್ಛ ಕಶ್ಯಪ ಕೇಶವಂ ॥ ೩ ॥

ಮುನ್ನೂರ ನಲವತ್ತನಾಲ್ಕನೆಯ ಅಧ್ಯಾಯ.

೧. ವಜ್ರನು ಹೇಳುತ್ತಾನೆ:—ಎಲೈ ಮಹರ್ಷಿಯೇ, ಮಹಾವಿಷ್ಣುವು ಭಕ್ತಜನರಲ್ಲಿ ಮಾಡಿರುವ ಅನುಗ್ರಹಕಾರ್ಯಗಳನ್ನು ಇನ್ನೂ ನಿನ್ನ ಮುಖದಿಂದ ಕೇಳಲು ಬಯಸುತ್ತೇನೆ.

೨-೪. ಮಾರ್ಕಂಡೇಯರು ಹೇಳುತ್ತಾರೆ:—ಪೂರ್ವದಲ್ಲಿ ಬಲಿಷ್ಠನಾದ ಬಲಿಚಕ್ರವರ್ತಿಯಿಂದ ಮೂರುಲೋಕವೂ ವಶವಾಗಲಾಗಿ ಇಂದ್ರನು ತನ್ನ ತಂದೆಯಾದ ಕಶ್ಯಪರ ಸಮೀಪಕ್ಕೆ ಬಂದು ಶರಣಾಗತನಾದನು ಆಗ ಕಶ್ಯಪನು ಇಂದ್ರನೊಂದಿಗೆ ಬ್ರಹ್ಮನ ಸಮೀಪಕ್ಕೆ ಹೋದನು. ಆಗ ಬ್ರಹ್ಮನು ಕಶ್ಯಪನನ್ನು ಕುರಿತು

ಕ್ಷೀರೋದಶಾಯಿನಂ ದೇವಂ ಶರಣಂ ಮಧುಸೂದನಂ ।
ತಂ ಚ ಪ್ರಾರ್ಥಯ ಪುತ್ರತ್ವೇ ಸ ತೇ ಪುತ್ರೋ ಭವಿಷ್ಯತಿ ॥ ೪ ॥

ತತಃ ಸ ಸರ್ವಂ ತ್ರೈಲೋಕ್ಯಂ ದೇವರಾಜಸ್ಯ ದಾಸ್ಯತಿ ।
ಏವಂ ಚೋಕ್ತಃ ಕಶ್ಯಪಸ್ತು ಸಾರ್ಧಂ ತ್ರಿದಶಪುಂಗವೈಃ ॥ ೫ ॥

ಕ್ಷೀರಾಬ್ಧಿಂ ಸ ತತೋ ಗತ್ವಾ ದದರ್ಶ ತಪಸಾ ಹರಿಂ ।
ದೃಷ್ಟ್ವಾ ಸ್ತವೇನ ತುಷ್ಟಾವ ತತಸ್ತಸ್ಯ ತದಾ ಹರಿಃ ॥ ೬ ॥

ಪ್ರಸನ್ನಃ ಪುತ್ರತಾಮೇತ್ಯ ದೇವೋ ವಾಮನರೂಪಧೃಕ್ ।
ತ್ರಿಭಿರ್ಗತೈಸ್ತ್ರಿಭುವನಂ ಸರ್ವಮಾಕ್ರಮ್ಯ ವಿಶ್ವಧೃಕ್ ॥ ೭ ॥

ಪ್ರಾದಾಚ್ಛಕ್ರಾಯ ರಾಜೇಂದ್ರ ಬದ್ಧ್ವಾ ದೈತ್ಯೇಶ್ವರಂ ಬಲಿಂ ।
ಕಶ್ಯಪೇನ ಸ್ತುತಸ್ತ್ವೇವಂ ತಸ್ಯ ಪುತ್ರತ್ವಮಾಗತಃ ॥ ೮ ॥

ವಿಷ್ಣುವಿನ ಹತ್ತಿರಕ್ಕೆ ಹೋಗು. ಕ್ಷೀರಸಮುದ್ರದಲ್ಲಿ ಮಲಗಿರುವ ಮಧುಸೂದನನನ್ನು ಶರಣುಹೊಂದು. ಅವನನ್ನು ಪುತ್ರನಾಗುವಂತೆ ಪ್ರಾರ್ಥನೆಮಾಡು. ಆಗ ಅವನು ನಿನಗೆ ಪುತ್ರನಾಗಿ ಅವತರಿಸುವನು ಎಂದು ಹೇಳಿದನು.

೫-೮. ಆಗ ಆ ಪರಮಾತ್ಮನು ಈ ಸರ್ವರಾಜ್ಯವನ್ನೂ ಇಂದ್ರನಿಗೆ ಕೊಡಿಸುವನು. ಈ ರೀತಿ ಹೇಳಿದ ಬ್ರಹ್ಮನ ಮಾತನ್ನು ಕೇಳಿ ಕಶ್ಯಪನು ದೇವತೆಗಳೊಂದಿಗೆ ಕ್ಷೀರಸಮುದ್ರವನ್ನು ಸೇರಿ ಅಲ್ಲಿ ಶ್ರೀಹರಿಯನ್ನು ಕಂಡನು ಮತ್ತು ಅವನನ್ನು ನೋಡಿ ಸ್ತುತಿಸಿದನು ಆಗ ಪರಮಾತ್ಮನು ಪ್ರಸನ್ನನಾಗಿ ವಾಮನರೂಪವನ್ನು ಧರಿಸಿ ಕಶ್ಯಪನಿಗೆ ಪುತ್ರನಾದನು. ಆ ಸಮಯದಲ್ಲಿ ಪರಮಾತ್ಮನು ಮೂರಡಿ ನೆಲದ ದಾನರೂಪದಿಂದ ತ್ರಿಭುವನವನ್ನೂ ಪಡೆದು ಬಲಿಯನ್ನು ನಿಗ್ರಹಿಸಿ ಇಂದ್ರನಿಗೆ ಪುನಃ ರಾಜ್ಯವನ್ನು ಕೊಟ್ಟನು. ಕಶ್ಯಪನ ಸ್ತುತಿಮಹಿಮೆಯಿಂದ ಪರಮಾತ್ಮನು ಅವನಿಗೆ ಪುತ್ರನಾಗಿ ಹುಟ್ಟಿದನು.

॥ ವಜ್ರ ಉವಾಚ ॥

ಸ್ತವೇನ ಯೇನ ತುಷ್ಟಾವ ಕಶ್ಯಪೋ ಮಧುಸೂದನಂ ।
ತಂ ಸ್ತವಂ ತ್ವಂ ಸಮಾಚಕ್ಷ್ವ ಸರ್ವಪಾಪಹರಂ ಶಿವಂ ॥ ೯ ॥

॥ ಮಾರ್ಕಂಡೇಯ ಉವಾಚ ॥

ಶೃಣು ರಾಜನ್ ಸ್ತವಂ ಪುಣ್ಯಂ ಕಶ್ಯಪೇನ ಪ್ರಕೀರ್ತಿತಂ ।
ಕ್ಷೀರೋದಶಯನಾದ್ದೃಷ್ಟ್ವಾ ದೇವದೇವಂ ಸಮುತ್ಥಿತಂ ॥ ೧೦ ॥

॥ ಕಶ್ಯಪ ಉವಾಚ ॥

ಓಂ ನಮೋಽಸ್ತು ತೇ ದೇವದೇವ ಏಕಶೃಂಗ ವೃಷಾರ್ಚಿತ ಸಿಂಧುವೃಕ್ಷ ವೃಷಾಕಪೇ ಸುರಪ ಅನಿಂದಿತ ಭದ್ರ ಕಪಿಲ ವಿಷ್ವಕ್ಸೇನ ಧ್ರುವ ಧರ್ಮ ಧರ್ಮಧ್ವಜ ವೈಕುಂಠ ವೃಷಾವರ್ತ ಅನಾದಿಮಧ್ಯನಿಧನ ಜನಪ್ರಿಯ ವೃಷ್ಣಿಜ ಅವ್ಯಶೇಶಯ ಸನಾತನ ತ್ರಿಧಾಮನ್ ತ್ರಿಧಾಮ

---

೯. ವಜ್ರನು ಹೇಳುತ್ತಾನೆ:—ಎಲೈ ಮಹರ್ಷಿಯೇ, ಕಶ್ಯಪನು ಯಾವ ಸ್ತವದಿಂದ ಆ ಪರಮಾತ್ಮನನ್ನು ಸ್ತುತಿಸಿದನೋ ಅಂತಹ ಸಕಲಪಾಪಪರಿಹಾರಕ ವಾದ ಆ ಸ್ತೋತ್ರವನ್ನು ನನಗೆ ತಿಳಿಸು.

೧೦. ಮಾರ್ಕಂಡೇಯರು ಹೇಳುತ್ತಾರೆ:—ಎಲೈ ರಾಜನೇ, ಶ್ರೀಹರಿಯು ಕ್ಷೀರಸಮುದ್ರದಲ್ಲಿ ಮಲಗಿದ್ದು ಎದ್ದದ್ದನ್ನು ನೋಡಿ ಕಶ್ಯಪನು ಪುಣ್ಯಕರವಾದ ಈ ಸ್ತುತಿಯಿಂದ ಹೊಗಳಿದನು.

ಗದ್ಯ—ಕಶ್ಯಪನು ಹೇಳುತ್ತಾನೆ :— ದೇವದೇವನಿಗೆ ನಮಸ್ಕಾರವು. ಏಕ ಶೃಂಗನೇ, ಧರ್ಮನಿಂದ ಪೂಜಿಸಲ್ಪಟ್ಟವನೇ, ಸಿಂಧುವೃಕ್ಷನೇ, ವೃಷಾಕಪಿಯೇ, ದೇವತೆಗಳ ರಕ್ಷಕನೇ, ಅನಿಂದಿತನೇ, ಮಂಗಳಕರನೇ, ಕಪಿಲಸ್ವರೂಪನೇ, ವಿಷ್ವಕ್ಸೇನ ಮೂರ್ತಿಯೇ, ನಿತ್ಯನೇ, ಧರ್ಮನೇ, ಧರ್ಮಧ್ವಜನೇ, ವೈಕುಂಠವಾಸಿಯೇ, ವೃಷಾವರ್ತನೇ, ಆದಿಮಧ್ಯಾಂತಶೂನ್ಯನೇ ಜನಗಳಿಗೆ ಪ್ರೀತಿಪಾತ್ರನೇ, ವೃಷ್ಣಿಯ

ತುಷಿತ ದುಂದುಭೇ ಮಹತಾಂಲೋಕ ಲೋಕನಾಭೇ ಪದ್ಮನಾಭ ವಿರಿಂಚ ಬಹುರೂಪ ಅಕ್ಷಣಾದಕ್ಷಯ ಹವ್ಯಭುಕ್ ಖಂಡಪರಶೋ ಚಕ್ರ ಮುಂಜಿಕೇಶ ಹಂಸ ಮಹಾದಕ್ಷಿಣ ಹೃಷೀಕೇಶ ಸೂಕ್ಷ್ಮ ಮಹಾಮುನಿಸ್ತೋಮ ವಿರಜಸ್ತಮ ಸರ್ವಲೋಕಪ್ರತಿಷ್ಠ ಶಿಪಿವಿಷ್ಟ ಅತಸಾ ಅಗ್ರಜ ಧರ್ಮಜ ಧರ್ಮನಾಭ ಗಭಸ್ತಿನಾಭ ಚಂದ್ರರಥ ಅಪಾಷ್ಮನ್ ತ್ವಮೇವ ಸಮುದ್ರವಾಸ ಅಜ ಏಕಪಾತ್ ಸಹಸ್ರರಂಭಿತ ಮಹಾಶೀರ್ಷ ಸಹಸ್ರದೃಕ್ ಸಹಸ್ರಪಾದ ಅಯೋಮುಖ ಮಹಾ ಪುರುಷ ಸಹಸ್ರಬಾಹೋ ಸಹಸ್ರಮೂರ್ತೇ ಸಹಸ್ರಾಕ್ಷ ಸಹಸ್ರಪ್ರಭವ ಸಹಸ್ರಶಸ್ತ್ವಮಾಹುರ್ವೇದವಿದೋ ವೇದವಿದಃ|| ಸರ್ವೇಷಾಮೇವ ವಿಶ್ವತ್ವಮಾಹುಃ ಪುಷ್ಪಹಾಸ ಪರಮಚರ ತ್ವಮೇವ ವೌಷಟ್ ವಷ-ಟ್ಕಾರ ಸ್ವಾಹಾ ಮಖೇಷು ಭಾಗಪ್ರಾಶಿನಂ ಶತಧಾರಂ ಸಹಸ್ರಧಾರಂ

ಕುಲದಲ್ಲಿ ಜನಿಸಿದವನೇ, ಕ್ಷೀರಸಮುದ್ರದಲ್ಲಿ ಮಲಗಿರುವವನೇ, ಸನಾತನನೇ ಅಗ್ನಿಸ್ವರೂಪನೇ, ದುಂದುಭಿಯೇ, ಸತ್ಪುರುಷರಿಗೆ ರಕ್ಷಕನೇ, ಲೋಕಸ್ವರೂಪನೇ, ಪದ್ಮನಾಭನೇ, ಬ್ರಹ್ಮಸ್ವರೂಪನೇ, ನಾನಾರೂಪಧರನೇ, ಅಕ್ಷಯ ಸ್ವರೂಪನೇ, ಹವ್ಯವಾಹನನೇ, ಖಂಡಪರಶುವೇ, ಚಕ್ರರೂಪನೇ, ಮುಂಜಿಕೇಶ, ಹಂಸ, ಮಹಾದಕ್ಷಿಣ, ಹೃಷೀಕೇಶ, ಸೂಕ್ಷ್ಮ ಮುಂತಾದ ರೂಪಧಾರಿಯೇ, ಮಹಾ ಮುನಿಗಳ ಸಮೂಹದಿಂದ ಕೂಡಿದವನೇ, ರಜಸ್ಸು ಮತ್ತು ತಮೋಗುಣದಿಂದ ದೂರನೇ, ಸರ್ವಪ್ರಪಂಚದಲ್ಲಿಯೂ, ಶ್ರೇಷ್ಠನೇ, ಶಿಪಿವಿಷ್ಟನೇ, ಶಾಂತನೇ, ಜ್ಯೇಷ್ಠನೇ, ಧರ್ಮಜನೇ, ಧರ್ಮನಾಭಿಯೇ, ಸೂರ್ಯನಾಭನೇ, ಚಂದ್ರರಥನೇ, ಪಾಪವಿದೂರನೇ, ಸಮುದ್ರಶಾಯಿಯೇ, ಅಜನೇ, ಏಕಪಾದನೇ, ಸಹಸ್ರಸಂಖ್ಯೆಯುಳ್ಳ ಉತ್ತಮಶಿರಸ್ಕನೇ, ಸಹಸ್ರದೃಷ್ಟಿಯೇ, (ಸಹಸ್ರನೇತ್ರನೇ) ಸಹಸ್ರಪಾದಗಳುಳ್ಳವನೇ, ಅಯೋಮುಖನೇ, ಮಹಾಪುರುಷನೇ, ಸಾವಿರ ತೋಳುಗಳುಳ್ಳವನೇ, ಸಾವಿರ ಮೂರ್ತಿಗಳುಳ್ಳವನೇ, ಸಹಸ್ರಾಕ್ಷನೇ, ಸಾವಿರರೀತಿ ಉಂಟಾಗುವವನೇ, ವೇದವೇದ್ಯನಾದ ನಿನ್ನನ್ನು ವೇದವಿದರು ಸಾವಿರಾರು ರೀತಿ ಹೊಗಳುವರು.

ಚ ಭೂರ್ವಾ ಭುವರ್ವಾ ತ್ವಮೇವ ಬ್ರಹ್ಮಮಯ ಬ್ರಾಹ್ಮಣೋಯ
ಬ್ರಹ್ಮಾ ದಿಶಸ್ತ್ವಮೇವ ದ್ಯೌರಸಿ ಪೃಥಿವ್ಯಸಿ ಮಾತರಿಶ್ವಾಸಿ ಹೋತಾ
ಪೋತಾ ಮಂತಾ ನೇತಾ ಹೋಮ್ಯಹೇತುಸ್ತ್ವಮೇವಾಗ್ರ್ಯ ವಿಶ್ವ-
ಧಾಮ್ನಾ ತ್ವಮೇವ ದಿಗ್ಭಿಃ ಸ್ರುಗ್ಭಾಂಡ ಈಜ್ಯೋಽಸಿ ಸಮಾಧಾಸಿ
ಸೇಮಿಂಧಿಸ್ತ್ವಮೇವ ಗತಿರ್ಗತಿಮತಾಮಸಿ ಯೋಗೋಽಸಿ ಮೋ
ಕ್ಷೋಽಸಿ ಪರಮಸಿ ಸ್ರುಗಸಿ ಧಾತಾಸಿ ಯಜ್ಞೋಽಸಿ ಸೋಮೋಽಸಿ
ಧೂಮೋಽಸಿ ದೀಕ್ಷಾಸಿ ದಕ್ಷಿಣಾಸಿ ವಿಶ್ವಮಸಿ ಸ್ಥವಿರ ತುರಾಷಾಟ್
ಹಿರಣ್ಯಗರ್ಭ ನಾರಾಯಣ ಅನಂತ ವೃಣಸಮೋ ಆದಿತ್ಯವರ್ಣ
ಆದಿತ್ಯತೇಜಾಃ ಮಹಾಪುರುಷ ಪುರುಷೋತ್ತಮ ಆದಿದೇವ
ಪದ್ಮನಾಭ ಪದ್ಮಹಾಸ ಪದ್ಮಶಯ ಪದ್ಮಾಕ್ಷ ಹಿರಣ್ಯಾಗ್ರಕೇಶ ಶುಕ್ಲ
ವಿಶ್ವಾತ್ಮನ್ವಿಶ್ವದೇವ ವಿಶ್ವತೋಮುಖ ವಿಶ್ವಾಖ ವಿಶ್ವಸಂಭವ ವಿಶ್ವ-
ಭುಕ್ತ್ವಮೇವ ಭುವಿಕ್ರಮ ಅತಿಭೂಃ ಪ್ರಭಾಕರ ಶಂಭುಃ ಭವಃ
ಸ್ವಯಂಭೂ ಭೂತಾದಿಃ ಮಹಾಭೂತ ವಿಶ್ವಗ ವಿಶ್ವಂ ತ್ವಮೇವ
ವಿಶ್ವಗೋಪ್ತಾಸಿ ಪವಿತ್ರಮಸಿ ಹವಿಃ ವಿಶ್ವಧಾತ ಊರ್ಧ್ವಕರ್ಮ

ಎಲ್ಲಕ್ಕೂ ನಿನ್ನನ್ನೇ ಕಾರಣನನ್ನಾಗಿ ಹೇಳುವರು. ಪ್ರಸ್ಪದಂತೆ ಪಂಪ್ರವಾದ ಮಂದಹಾಸವುಳ್ಳವನೇ, ನೀನೇ ಸರ್ವವ್ಯಾಪಿಯು ಯಜ್ಞಗಳಲ್ಲಿ ಹವಿರ್ಭಾಗವನ್ನು ತಿನ್ನುವ ವೌಷಟ್, ವಷಟ್ಕಾರ, ಸ್ವಾಹಾ ಮುಂತಾದ ರೂಪಗಳಿಂದ ಇರುವವನು. ಶತಧಾರನೂ, ಸಹಸ್ರಧಾರನೂ, ಭೂಲೋಕವಾಗಲೀ, ಭುವರ್ಲೋಕವಾಗಲೀ ನೀನೇ. ಬ್ರಹ್ಮರೂಪನೂ, ಬ್ರಾಹ್ಮಣನೂ, ಬ್ರಹ್ಮನೂ, ದಿಕ್ಕುಗಳ ರೂಪನೂ ಆಗಿರುವೆ. ಪೃಥಿವೀರೂಪನೂ, ಅಂತರಿಕ್ಷರೂಪನೂ, ವಾಯುವೂ, ಹೋತೃವೂ, ಪೋತೃವೂ, ಮಂತೃ, ನೇತೃ, ಯಜ್ಞಸಂಪಾದಕನೂ ನೀನೇ ಆಗಿರುವೆ. ವಿಶ್ವತೇಜಸ್ಸುಗಳಲ್ಲಿ ನೀನೇ ಅಗ್ರಗಣ್ಯನು ಮತ್ತು ಸರ್ವತ್ರ ಪ್ರಕಾಶಮಾನನೂ ನೀನೇ ಆಗಿರುತ್ತೀಯೆ ಧರಿಸುವವನೂ, ಧರಿಸಲ್ಪಡತಕ್ಕವನೂ ನೀನೇ ಬುದ್ಧಿವಂತರಿಗೆ ಮಾರ್ಗದರ್ಶಕನೂ ನೀನೇ. ಯೋಗರೂಪನೂ, ಮೋಕ್ಷರೂಪನೂ ನೀನೇ. ಪರಮನೂ, ಸ್ರುಗ್ರೂಪನೂ ನೀನೇ. ಧಾತೃವೂ, ಯಜ್ಞರೂಪನೂ, ಸೋಮನೂ, ಧೂಪರೂಪನೂ, ದೀಕ್ಷಿತನೂ, ದಕ್ಷಿಣಾರೂಪನೂ, ವಿಶ್ವರೂಪನೂ ನೀನೇ ಸ್ಥವಿರ, ತುರಾಷಾಟ್ (ಇಂದ್ರ), ಹಿರಣ್ಯಗರ್ಭ, ನಾರಾಯಣ, ಅನಂತ, ವೃಣಸಮ, ಆದಿತ್ಯವರ್ಣ, ಆದಿತ್ಯಸ್ವರೂಪ, ಮಹಾಪುರುಷ, ಪುರುಷೋತ್ತಮ, ಆದಿದೇವ, ಪದ್ಮನಾಭ, ಪದ್ಮಹಾಸ ಇವುಗಳ ರೂಪನೂ ನೀನೇ. ಕಮಲದಲ್ಲಿ ಮಲಗುವವನೂ,

ಅಮೃತೇಶಾತ್ಮಗ್ರ ಭುವಃ ಪಾತ ಘೃತಾಕ್ತ ಅಗ್ರೇ ದ್ರುಹಿಣ ಅನಂತ-ಕರ್ಮನ್ವಶಂ ಪ್ರಾಗ್ಯಂ ವಿಶ್ವಪಾರ್ಶ್ವ ಪಾರ್ಶ್ವ ತ್ವಮೇವ ವಿಶ್ವ ವರಾರ್ಥಿನಸ್ತ್ರಾಹೀತಿ ॥

ಸ್ತೋತ್ರೇಣ ಯಃ ಕಶ್ಯಪನಿರ್ಮಿತೇನ
ಸ್ತೋತ್ರಂ ಸದಾ ದೇವವರಸ್ಯ ಕರ್ತಾ ।
ಕಾಲ್ಯಂ ಶುಚಿಸ್ತದ್ಗತಮಾನಸೇನ
ಗಂತಾ ಸ ಲೋಕಾನ್ಪುರುಷೋತ್ತಮಸ್ಯ ॥ ೧೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಕಶ್ಯಪಸ್ತೋತ್ರವರ್ಣನೋ ನಾಮ ಚತುಶ್ಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ

ಕಮಲದಂತೆ ಕಣ್ಣುಳ್ಳವನೂ, ಹೊಂಬಣ್ಣವಾದ ಮುಂಭಾಗದ ಕೂದಲುಳ್ಳವನೂ, ಶುಕ್ಲರೂಪನೂ, ವಿಶ್ವಾತ್ಮನೂ, ವಿಶ್ವಕ್ಕೆ ಒಡೆಯನೂ, ವಿಶ್ವತೋಮುಖನೂ, ವಿಶ್ವ ಎಂಬ ಹೆಸರುಳ್ಳವನೂ, ವಿಶ್ವಸಂಭವನೂ, ವಿಶ್ವಭುಗನೂ ನೀನೇ ಆಗಿರುವೆ. ಭುವಿಕ್ರಮನೂ. ಅತಿ ಭೂಮಿಯೂ, ಪ್ರಭಾಕರನೂ, ಶಂಭುವೂ, ಭವನೂ, ಸ್ವಯಂಭುವೂ, ಭೂತಾದಿಯೂ, ಮಹಾಭೂತನೂ, ವಿಶ್ವವ್ಯಾಪಿಯೂ, ವಿಶ್ವವೂ ನೀನೇ. ಪ್ರಪಂಚರಕ್ಷಕನೂ, ಪವಿತ್ರನೂ, ಹವಿಸ್ವರೂಪನೂ, ವಿಶ್ವಾಧಾರಕನೂ, ಊರ್ಧ್ವಕರ್ಮನೂ, ಅಮೃತೇಶನೂ, ಭೂಪಾಲಕನೂ, ಘೃತಾಕ್ತನೂ, ಅಗ್ನಿಯೂ, ಬ್ರಹ್ಮನೂ, ಅನಂತಕರ್ಮನೂ, ಸರ್ವವಶನೂ, ವಿಶ್ವಪಾರ್ಶ್ವನೂ, ಪಾರ್ಶ್ವನೂ ನೀನೇ ಆಗಿರುವೆ. ವರವನ್ನು ಬೇಡುತ್ತಿರುವ ನನ್ನನ್ನು ಕಾಪಾಡು ಎಂಬುದಾಗಿ ಬೇಡಿದನು.

೧೧. ಈ ರೀತಿಯಾದ ದೇವಪೂಜ್ಯನಾದ ಕಶ್ಯಪನಿಂದ ಮಾಡಲ್ಪಟ್ಟ ಈ ಸ್ತವವನ್ನು ಯಾರು ಯಾವಾಗಲೂ ಶುಚಿಯಿಂದ ಕೂಡಿ ಶುದ್ಧಮನಸ್ಕರಾಗಿ ಪಠನ ಮಾಡುತ್ತಾರೋ ಅವರು ಪರಮಾತ್ಮನ ಲೋಕವನ್ನು ಸೇರಿ ಸುಖಿಸುವರು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಕಶ್ಯಪಕೃತಸ್ತೋತ್ರವರ್ಣನೆಯೆಂಬ ಮುನ್ನೂರ ನಲವತ್ತನಾಲ್ಕನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ವಜ್ರ ಉವಾಚ ॥

ಪ್ರಸಾದಂ ಪರಮಂ ತಸ್ಯ ಕೇಶವಸ್ಯ ಮಹಾತ್ಮನಃ ।
ಬ್ರೂಹಿ ಭಕ್ತಜನೇ ಮಹ್ಯಂ ದೇವದೇವಸ್ಯ ಚಕ್ರಿಣಃ ॥ ೧ ॥

ನಹಿ ತೃಪ್ಯಾಮ್ಯಹಂ ತಸ್ಯ ಶೃಣ್ವಾನಃ ಶ್ರವಣಾಮೃತಂ ।
ಹಸ್ತತ್ರಾಣಪ್ರದೋ ಲೋಕೇ ಯ ಏಕಃ ಪತತಾಂ ನೃಣಾಂ ॥ ೨ ॥

॥ ಮಾರ್ಕಂಡೇಯ ಉವಾಚ ॥

ದೇವಾಶ್ಚ ಋಷಯಶ್ಚೈವ ವಿವದಂತಃ ಪುರಾನಘ ।
ಬೀಜೈರ್ಯಷ್ಟವ್ಯಮಿತ್ಯೇತತ್ತ್ರಿವರ್ಷಪರಮೋಷಿತೈಃ ॥ ೩ ॥

ಮುನ್ನೂರ ನಲವತ್ತೈದನೆಯ ಅಧ್ಯಾಯ.

೧–೨. ವಜ್ರನು ಹೇಳುತ್ತಾನೆ:—ಎಲೈ ಮಹರ್ಷಿಯೇ, ಪೂಜ್ಯನಾದ ಪರಮಾತ್ಮನ ಪ್ರಸಾದವು ಶ್ರೇಷ್ಠವಾದದ್ದು. ದೇವದೇವನಾದ ಚಕ್ರಧಾರಿಯ ಮಹಿಮೆಗಳನ್ನು ಭಕ್ತಿವಂತನಾದ ನನಗೆ ವಿಸ್ತರಿಸಿ ಹೇಳು. ಎಷ್ಟು ಕೇಳಿದರೂ ನನಗೆ ತೃಪ್ತಿಯಾಗುವುದೇ ಇಲ್ಲ. ಕೆಳಕ್ಕೆ ಬೀಳುವ ಜನಗಳಿಗೆ ಕೈಕೊಟ್ಟು ರಕ್ಷಿಸು ವವನು ಆ ಪರಮಾತ್ಮನೊಬ್ಬನೇ, ಮತ್ತಾರೂ ಇಲ್ಲ.

೩–೬. ಮಾರ್ಕಂಡೇಯರು ಹೇಳುತ್ತಾರೆ:—ಎಲೈ ರಾಜನೇ, ಪೂರ್ವದಲ್ಲಿ ದೇವತೆಗಳೂ, ಋಷಿಗಳೂ ಕೂಡಿ ಈ ರೀತಿ ಚರ್ಚಿಸಿದರು. ಮೂರು ವರ್ಷಗಳಿಂದ

ಅಜಸಂಜ್ಞಾನಿ ಬೀಜಾನಿ ಛಾಗಂ ಘ್ನಂತುಮಥಾರ್ಹಸಿ ।
ಪಕ್ಷೋಽಯಮಾಸೀತ್ಪೂರ್ವಜ್ಞ ಋಷೀಣಾಂ ಭಾವಿತಾತ್ಮನಾಂ ॥ ೪ ॥

ದೇವಾನಾಂ ತು ಪಶುಃ ಪಕ್ಷಸ್ತತೋ ಮಾರ್ಗಾಗತೋಽಭವತ್ ।
ರಾಜೋಪರಿಚರೋ ನಾಮ ವಸುರ್ವಸುಮತಾಂ ವರಃ ॥ ೫ ॥

ದೇವಾಶ್ಚ ಋಷಯಶ್ಚೈವ ಪಪ್ರಚ್ಛಂತಸ್ತದಾ ವಸುಂ ।
ಯಥೋಪನೀತೈರ್ಯಷ್ಟವ್ಯಮಿತ್ಯುಕ್ತಂ ವಸುನಾ ಪುರಾ ॥ ೬ ॥

ಗತೇನಾನ್ಯವಾಕ್ಯೇನ ರಾಜಾ ಹಿಂಸಾ ಪ್ರವರ್ತಿನಾ ।
ನಿತ್ಯಮಾಕಾಶಗೋ ಭೂತ್ವಾ ಭೂಮೇರ್ವಿವರಗೋಽಭವತ್ ॥ ೭ ॥

ಭೂಮೇರ್ವಿವರಗಸ್ಯಾಥ ದೇವಪಕ್ಷಾರ್ಥವಾದಿನಃ ।
ನಿಧನಾರ್ಥಂ ಮತಿಂ ಚಕ್ರುರ್ದೇವಭಕ್ತಸ್ಯ ದಾನವಾಃ ॥ ೮ ॥

ಕೂಡಿದ ಬೀಜಗಳಿಂದ ಯಾಗಮಾಡಬೇಕು. ಅಜಸಂಜ್ಞಕವಾದ ಬೀಜಗಳನ್ನು ಸಂಪಾದಿಸುವುದಕ್ಕಾಗಿ ಮರಿ ಆಡನ್ನು ಕೊಲ್ಲಬೇಕೆಂದು ಋಷಿಗಳ ಮತ (ಪಕ್ಷ) ವಾಯಿತು. ದೇವತೆಗಳ ಪಕ್ಷವಾದರೋ ಪಶುವನ್ನು ಉಪಯೋಗಿಸಬೇಕೆಂದು ಹೇಳಿದರು. ಹೀಗಿರಲಾಗಿ ಆ ಸಮಯಕ್ಕೆ ಐಶ್ವರ್ಯವಂತರಲ್ಲಿ ಶ್ರೇಷ್ಠನಾದ ಉಪರಿಚರ ವಸುವೆಂಬ ರಾಜನು ದಾರಿಯಲ್ಲಿ ಬರುತ್ತಿದ್ದನು. ಆಗ ದೇವತೆಗಳೂ, ಋಷಿಗಳೂ ಅವನನ್ನು ಈ ವಿಷಯದಲ್ಲಿ ಪ್ರಶ್ನಿಸಿದರು. ಯಾವ ವಸ್ತುವನ್ನು ತಂದಾದರೂ ಅದರಿಂದ ಯಾಗಮಾಡಬಹುದೆಂದನು.

೭–೮. ಹಿಂಸಾಭಿಲಾಷಿಗಳಿಗೆ ಸುಳ್ಳಾಗಿ ತೋರಿದ ಈ ಸುಳ್ಳು ವಾಕ್ಯದಿಂದ ನಿತ್ಯವೂ ಆಕಾಶದಲ್ಲಿ ಸಂಚಾರಮಾಡುತ್ತಾ ಭೂಮಿಯಲ್ಲಿ ಒಂದು ರಂಧ್ರದೊಳಗೆ ಸೇರಿದನು. ಭೂಮಿಯ ವಿವರದಲ್ಲಿರುವಾಗ ದೇವವಿರೋಧಿಗಳಾದ ದಾನವರು ದೇವಭಕ್ತನನ್ನು ಕೊಲ್ಲುವುದಕ್ಕೆ ಮನಸ್ಸುಮಾಡಿದರು.

ತೇಷಾಂ ಚಿಕೀರ್ಷಿತಂ ಜ್ಞಾತ್ವಾ ದೇವಾಃ ಶೀಘ್ರಪರಾಕ್ರಮಾಃ ।
ನ್ಯವೇದಯಂಸ್ತಥಾ ಶಕ್ರೇ ದೇವಾಚಾರ್ಯೇ ಬೃಹಸ್ಪತೌ ॥ ೯ ॥

ಬೃಹಸ್ಪತಿಸ್ತತೋ ಗತ್ವಾ ಭೂಮೇರ್ವಿವರಗಂ ನೃಪಂ ।
ರಕ್ಷಾಮಧ್ಯಾಪಯಾಮಾಸ ವೈಷ್ಣವೀ ಮಪರಾಜಿತಾಂ ॥ ೧೦ ॥

ಭೂತಭವ್ಯಭವಿಷ್ಯಾಣಾಂ ಕರ್ಮಣಾಮನುಕೀರ್ತನೈಃ ।
ನಿರ್ಮಿತಾ ಬ್ರಹ್ಮಣಾ ವಿದ್ಯಾ ಸರ್ವಬಾಧಾಕ್ಷಯಂಕರೀ ।
ಅಧ್ಯಾಪ್ಯ ತಂ ಚ ರಾಜಾನಮಿದಮಾಹ ಬೃಹಸ್ಪತಿಃ ॥ ೧೧ ॥

॥ ಬೃಹಸ್ಪತಿರುವಾಚ ॥

ಇಹಸ್ಥೋ ಭೋಕ್ಷ್ಯಸೇ ರಾಜನ್ಹೋಮಾರ್ಥಂ ಹುತಾಂ ದ್ವಿಜೈಃ ।
ದೇವತಾನಾಂ ಪ್ರಸಾದೇನ ತಯಾ ಚಾಪ್ಯಾಯಿತಃ ಸದಾ ॥ ೧೨ ॥

ವಿದ್ಯಯಾ ಚಾನಯಾ ರಾಜನ್ನವಧ್ಯಸ್ತ್ವಂ ಭವಿಷ್ಯಸಿ ।
ಭೂಮೇರ್ವಿವರಸಂಸ್ಥೋಽಪಿ ದೈತ್ಯದಾನವ ರಾಕ್ಷಸಾನ್ ।
ಏವಮುಕ್ತ್ವಾ ಸ ರಾಜಾನಂ ತತ್ರೈವಾಂತರಧೀಯತ ॥ ೧೩ ॥

೯-೧೧ ಆ ದಾನವರ ಅಭಿಪ್ರಾಯವನ್ನು ತಿಳಿದು ದೇವತೆಗಳು ಶೀಘ್ರವಾಗಿ ಇಂದ್ರನಿಗೂ, ದೇವಾಚಾರ್ಯನಾದ ಬೃಹಸ್ಪತಿಗೂ ತಿಳಿಸಿದರು. ಆಗ ಭೂವಿವರದಲ್ಲಿರುವ ರಾಜನ ಹತ್ತಿರಕ್ಕೆ ಬೃಹಸ್ಪತಿಯು ಹೋಗಿ, ಸರ್ವೋತ್ಕೃಷ್ಟವಾದ ವೈಷ್ಣವೀ ರಕ್ಷಾಕ್ರಮವನ್ನುಪದೇಶಿಸಿದನು. ಭೂತಭವಿಷ್ಯದ್ವರ್ತಮಾನಕಾಲಗಳ ಕರ್ಮಗಳಿಗನುಸಾರವಾಗಿ ಸರ್ವಬಾಧಾನಿವಾರಣಾರ್ಥವಾದ ಈ ವಿದ್ಯೆಯು ಬ್ರಹ್ಮನಿಂದ ನಿರ್ಮಿಸಲ್ಪಟ್ಟಿತು. ಆ ವಿದ್ಯೆಯನ್ನು ರಾಜನಿಗೆ ಉಪದೇಶಮಾಡಿ ಬೃಹಸ್ಪತಿಯು ಈ ರೀತಿ ಅವನನ್ನು ಕುರಿತು ಹೇಳಿದನು.

೧೨-೧೩ ಬೃಹಸ್ಪತಿಯು ಹೇಳುತ್ತಾನೆ:—ಎಲೈ ರಾಜನೇ, ಇಲ್ಲಿಯೇ ನೀನು ಇದ್ದು ಬ್ರಾಹ್ಮಣರಿಂದ ಹೋಮಮಾಡಲ್ಪಟ್ಟ ಹವಿಸ್ಸನ್ನು ಸ್ವೀಕರಿಸುತ್ತೀಯೆ. ದೇವತೆಗಳ ಪ್ರಸಾದದಿಂದ ಯಾವಾಗಲೂ ಸುಖವಾಗಿರುತ್ತೀಯೆ. ಈ ವಿದ್ಯೆಯಿಂದ ಅವಧ್ಯನಾಗುತ್ತೀಯೆ ಭೂವಿವರದಲ್ಲಿದ್ದರೂ ದೈತ್ಯದಾನವ ರಾಕ್ಷಸರನ್ನು ದೂರವಾಗಿ ತಡೆಯುತ್ತೀಯೆ ಎಂಬುದಾಗಿ ಹೇಳಿ ಬೃಹಸ್ಪತಿಯು ತಿರೋಧಾನ (ಮರೆ) ವಾದನು.

॥ ವಜ್ರ ಉವಾಚ ॥

ರಕ್ಷಾಂ ತು ತಾಂ ಮೇ ಕಥಯ ದ್ವಿಜೇಂದ್ರ
ಕೃತಾ ತು ಯಾ ದೇವಪುರೋಹಿತೇನ ।
ರಾಜ್ಞೋ ವಸೋರ್ಭೂಮಿಬಿಲಸ್ಥಿತಸ್ಯ
ರಕ್ಷ್ಯಾ ಹಿ ಸಾಗ್ರ್ಯಾ ಪರಮಾ ಮತಾ ಮೇ ॥ ೧೪ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಭೂವಿವರಸ್ಥಿತರಾಜ್ಞೋ ರಕ್ಷಾವರ್ಣನೋ
ನಾಮ ಪಂಚಚತ್ವಾರಿಂಶದಧಿಕ
ತ್ರಿಶತತಮೋಽಧ್ಯಾಯಃ

---

೧೪. ವಜ್ರನು ಹೇಳುತ್ತಾನೆ :—ಎಲೈ ಮಹರ್ಷಿಯೇ, ಬೃಹಸ್ಪತಿಯಿಂದ ರಾಜನಾದ ಮತ್ತು ಭೂಮಿಯ ಬಿಲದಲ್ಲಿ ಸಿಕ್ಕಿಬಿದ್ದಿದ್ದ ವಸುವಿನ ರಕ್ಷಣೆಗಾಗಿ ಯಾವ ರಕ್ಷೆಯು ಹೇಳಲ್ಪಟ್ಟಿತೋ ಅಂತಹ ಪರಮೋತ್ಕೃಷ್ಟವಾದ ರಕ್ಷಾವಿಧಾನವನ್ನು ನನಗೆ ತಿಳಿಸು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಭೂವಿವರದಲ್ಲಿ ಸೇರಿದ ರಾಜನ ರಕ್ಷಾವರ್ಣನೆಯೆಂಬ
ಮುನ್ನೂರ ನಲವತ್ತೈದನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಷಟ್ಚತ್ವಾರಿಂಶದಧಿಕತ್ರಿಶತತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಓಂ ನಮೋ ಭಗವತೇ ವಾಸುದೇವಾಯ ನಮೋಽನಂತಾಯ ಸಹಸ್ರಶೀ-ರ್ಷಾಯ ಕ್ಷೀರೋದಾರ್ಣವಶಾಯಿನೇ ಶೇಷಭೋಗಪರ್ಯಂಕಾಯ ಗರುಡವಾಹನಾಯ ಅಜಾಯ ಅಜಿತಾಯ ಪೀತವಾಸಸೇ ವಾಸು-ದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಹಯಶಿರೋ ವರಾಹ ನಾರಸಿಂಹ ವಾಮನ ತ್ರಿವಿಕ್ರಮ ರಾಮ ರಾಮ ರಾಮ ನಮೋಽಸ್ತು ತೇ ನಮೋಽಸ್ತು ತೇ ನಮೋಽಸ್ತು ತೇ ॥ ಅಸುರವರದೈತ್ಯದಾನವ-ಯಕ್ಷರಾಕ್ಷಸಭೂತ ಪ್ರೇತಪಿಶಾಚಕುಂಭಾಂಡ ಸಿದ್ಧಯೋಗಿನೀ

ಮುನ್ನೂರ ನಲವತ್ತಾರನೆಯ ಅಧ್ಯಾಯ.

ಮಾರ್ಕಂಡೇಯರು ಹೇಳುತ್ತಾರೆ—ಓಂಕಾರಸ್ವರೂಪಿಯೂ, ಪೂಜ್ಯನೂ ಆದ ವಾಸುದೇವನಿಗೆ ನಮಸ್ಕಾರಗಳು. ಸಾವಿರಹೆಡೆಗಳುಳ್ಳ ಅನಂತನಿಗೆ ನಮಸ್ಕಾರಗಳು. ಕ್ಷೀರಸಮುದ್ರಶಾಯಿಯಾಗಿಯೂ ಆದಿಶೇಷನನ್ನೇ ಹಾಸಿಗೆಯಾಗಿ ಹೊಂದಿಯೂ, ಗರುಡವಾಹನನಾಗಿಯೂ, ಅಜನಾಗಿಯೂ, ಅಜಿತಮೂರ್ತಿಯಾಗಿಯೂ, ಪೀತಾಂಬರಧಾರಿಯಾಗಿಯೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಹಯಗ್ರೀವ, ವರಾಹ, ನರಸಿಂಹ, ವಾಮನ, ತ್ರಿವಿಕ್ರಮ, ಬಲರಾಮ, ದಶರಥರಾಮ, ಪರಶುರಾಮ ರೂಪಗಳನ್ನು ಹೊಂದಿರುವ ನಿನಗೆ ನಮಸ್ಕಾರಗಳು.

ಡಾಕಿನೀಸ್ಕಂದಪುರೋಗಾನ್ ಗ್ರಹಾನ್ನಕ್ಷತ್ರಗ್ರಹಾಂಶ್ಚಾನ್ಯಾನ್ ಹನ ಹನ ಪಚ ಪಚ ಮಥ ಮಥ ವಿಧ್ವಂಸಯ ವಿಧ್ವಂಸಯ ವಿದ್ರಾವಯ ವಿದ್ರಾವಯ ಶಂಖೇನ ಚಕ್ರೇಣ ವಜ್ರೇಣ ಗದಯಾ ಮುಸಲೇನ ಹಲೇನ ಭಸ್ಮೀಕುರು ಸಹಸ್ರಬಾಹೋ ಸಹಸ್ರಪ್ರಹರಣಾಯುಧ ಜಯ ಜಯ ವಿಜಯ ವಿಜಯ ಅಪರಾಜಿತ ಅಪ್ರತಿಹತನೇತ್ರ ಜ್ವಲ ಜ್ವಲ ಪ್ರಜ್ವಲ ಪ್ರಜ್ವಲ ವಿಶ್ವರೂಪ ಬಹುರೂಪ ಮಧುಸೂದನ ಮಹಾವರಾಹ ಮಹಾಪುರುಷ ವೈಕುಂಠ ನಾರಾಯಣ ಪದ್ಮನಾಭ ಗೋವಿಂದ ದಾಮೋದರ ಹೃಷೀಕೇಶ ಕೇಶವ ಸರ್ವಾಸುರೋತ್ಸಾದನ ಸರ್ವಭೂವಶಂಕರ ಸರ್ವದುಃಸ್ವಪ್ನಪ್ರಭೇದನ ಸರ್ವಯಂತ್ರಪ್ರಭಂಜನ ಸರ್ವನಾಗವಿಮರ್ದನ ಸರ್ವದೇವಮಹೇಶ್ವರ ಸರ್ವಬಂಧವಿಮೋಕ್ಷಣ ಸರ್ವಾಹಿತಮರ್ದನ ಸರ್ವಜ್ವರಪ್ರಣಾಶನ ಸರ್ವಗ್ರಹನಿವಾರಣ ಸರ್ವಪಾಪಪ್ರಣಾಶನ ಜನಾರ್ದನ ನಮೋಽಸ್ತು ತೇ ಸ್ವಾಹಾ॥

ಅಸುರಶ್ರೇಷ್ಠರು, ದೈತ್ಯರು, ದಾನವರು, ಯಕ್ಷರು, ರಾಕ್ಷಸರು, ಭೂತಗಳು, ಪಿಶಾಚಗಳು, ಕುಂಭಾಂಡರು, ಸಿದ್ಧರು, ಯೋಗಿನೀ, ಡಾಕಿನೀ, ಸ್ಕಂದ ಮೊದಲಾದ ಗ್ರಹಗಳನ್ನೂ, ನಕ್ಷತ್ರಗಳನ್ನೂ, ಇನ್ನೂ ಇತರರನ್ನೂ ಕೊಲ್ಲು, ಕೊಲ್ಲು, ನಿಗ್ರಹಿಸು, ನಿಗ್ರಹಿಸು, ಹಾಳುಮಾಡು, ಹಾಳುಮಾಡು, ಓಡಿಸು, ಓಡಿಸು. ಶಂಖದಿಂದ, ಚಕ್ರದಿಂದ, ಗದಾ, ಮುಸಲಹಲ ಇವುಗಳಿಂದ ಭಸ್ಮಮಾಡು. ಸಹಸ್ರಬಾಹುವೇ, ಸಹಸ್ರಪ್ರಹರಣಾಯುಧ ಜಯಶೀಲನಾಗು, ಜಯಶೀಲನಾಗು. ವಿಜಯಹೊಂದು ಅಪರಾಜಿತ, ಅಪ್ರತಿಹತನೇತ್ರವುಳ್ಳವನೇ ಎಲ್ಲವನ್ನೂ ದಹಿಸು, ದಹಿಸು. ವಿಶ್ವರೂಪನೇ, ಬಹುರೂಪನೇ, ಮಧುಸೂದನನೇ, ಮಹಾವರಾಹ ರೂಪನೇ, ಮಹಾಪುರುಷನೇ, ವೈಕುಂಠರೂಪನೇ, ನಾರಾಯಣನೇ, ಪದ್ಮನಾಭನೇ, ಗೋವಿಂದನೇ, ದಾಮೋದರನೇ, ಹೃಷೀಕೇಶನೇ, ಕೇಶವನೇ, ಸರ್ವರಾಕ್ಷಸಸಮರ್ದನನೇ, ಎಲ್ಲ ಭೂಮಿಗಳ ವಶಂಕರನೇ, ಎಲ್ಲ ದುಃಸ್ವಪ್ನಗಳನ್ನೂ ನಾಶಮಾಡುವವನೇ, ಎಲ್ಲ ಯಂತ್ರಗಳ ಮರ್ದನನೇ, ಸರ್ವನಾಗಗಳ ಮರ್ದನನೇ ಸರ್ವದೇವಮಹೇಶ್ವರನೇ, ಎಲ್ಲ ಬಂಧಗಳನ್ನೂ ಬಿಡುಗಡೆಮಾಡುವವನೇ, ದುಷ್ಟರ ನಾಶಕನೇ, ಸರ್ವಜ್ವರ ಪ್ರಣಾಶನನೇ, ಸರ್ವಗ್ರಹಗಳ ನಿವಾರಕನೇ, ಎಲ್ಲ ಪಾಪಗಳ ನಾಶಕನೇ, ಜನಾರ್ದನನೇ ನಿನಗೆ ಅನಂತ ನಮಸ್ಕಾರಗಳು.

ಯ ಇಮಾಮಪರಾಜಿತಾಂ ಪರಮವೈಷ್ಣವೀಂ ಸಿದ್ಧಾಂ ಮಹಾವಿದ್ಯಾಂ ಜಪತಿ ಪಠತಿ ಶೃಣೋತಿ ಸ್ಮರತಿ ಧಾರಯತಿ ಕೀರ್ತಯತಿ ವಾ ನ ತಸ್ಯಾಗ್ನಿ ವಾಯುವಜ್ರೋಪಲಾಶನಿವರ್ಷಭಯಂ ನ ಸಮುದ್ರ ಭಯಂ ನ ಗ್ರಹಭಯಂ । ನ ಚೌರಭಯಂ । ಶ್ವಾಪದಭಯಂ ವಾ ನ ಭವೇತ್ । ಕ್ವಚಿದ್ರಾತ್ರ್ಯಂಧಕಾರಸ್ತ್ರೀರಾಜಕುಲವಿದ್ವೇಷವಿಷೋಪವಿಷ ಗರಗದವಶೀಕರಣಂ ವಿದ್ವೇಷಣಂ ವಿದ್ವೇಷಣೋಚ್ಚಾಟನವಧಬಂಧನಭಯಂ ವಾ ನ ಭವೇತ್ । ಏತೈರ್ಮಂತ್ರೈರುದಾಹೃತೈಃ ಸಿದ್ಧೈಃ ಸಂಸಿದ್ಧಪೂಜಿತೈಃ ॥ ತದ್ಯಥಾ—ಓಂ ನಮೋಽಸ್ತು ತೇ ಅನಘೇ ಅಮಿತೇ ಅಮೃತೇ ಅಪರಾಜಿತೇ ಪಠಿತಸಿದ್ಧೇ ಸ್ಮರಾತಿಸಿದ್ಧೇ ಏಕಾನಂಶೇ ಉಮೇ ಧ್ರುವೇ ಅರುಂಧತಿ ಸಾವಿತ್ರಿ ಜಾತವೇದಸಿ ಮಾನಸ್ತೋಕೇ ಸರಸ್ವತಿ ಧರಣಿ ಧಾರಣಿ ಸೌದಾಮನಿ ಅದಿತಿ ದಿತಿ ವಿನತೇ ಗೌರಿ ಗಾಂಧಾರಿ ಮಾತಂಗಿ ಕೃಷ್ಣಯಶೋದೇ ಸತ್ಯವಾದಿನಿ

ಯಾರು ಈ ಅಪರಾಜಿತಾರೂಪವಾದ ಪರಮವೈಷ್ಣವೀ ವಿದ್ಯೆಯನ್ನು ಜಪಿಸುತ್ತಾರೋ, ಪಠನಮಾಡುತ್ತಾರೋ, ಕೇಳುತ್ತಾರೋ, ಸ್ಮರಿಸುತ್ತಾರೋ, ಧರಿಸುತ್ತಾರೋ, ಕೀರ್ತನಮಾಡುತ್ತಾರೋ ಅಂಥವರಿಗೆ ಅಗ್ನಿ, ವಾಯು, ವಜ್ರ ಸಿಡಿಲು ಇವುಗಳಿಂದ ಭಯವುಂಟಾಗುವುದಿಲ್ಲ. ಸಮುದ್ರದಿಂದ ಭಯವಿಲ್ಲ. ಗ್ರಹಭಯವಿಲ್ಲ. ಕಳ್ಳರ ಭಯವಿರುವುದಿಲ್ಲ. ಪ್ರಾಣಿಗಳಿಂದಲೂ ಭಯವಾಗುವುದಿಲ್ಲ.

ಯಾವಾಗಲೂ ಅಂಧಕಾರರಾತ್ರಿಯಲ್ಲಿಯೂ, ಸ್ತ್ರೀ, ರಾಜಕುಲ, ವಿಷ, ಉಪವಿಷಗಳ ಸಂಬಂಧ, ವಶೀಕರಣ, ದ್ವೇಷ, ಉಚ್ಚಾಟನೆ, ವಧೆ, ಬಂಧನ ಇವುಗಳಿಂದಲೂ ಭಯವುಂಟಾಗುವುದಿಲ್ಲ. ಉದಾಹೃತವಾದ ಈ ಮಂತ್ರಗಳಿಂದ ಸಿದ್ಧಿಗೋಸ್ಕರ ಪೂಜಿಸಬೇಕು. ಅದು ಹೇಗೆಂದರೆ:—ಓಂ ನಮಃ, ಅನಘೇ, ಅಜಿತೇ, ಅಮಿತೇ, ಅಮೃತೇ, ಅಪರಾಜಿತೇ, ಪಠಿತಸಿದ್ಧೇ, ಸ್ಮರಾತಿಸಿದ್ಧೇ, ಏಕಾನಂಶೇ, ಉಮೇ, ಧ್ರುವೇ, ಅರುಂಧತಿ, ಸಾವಿತ್ರಿ, ಗಾಯತ್ರಿ, ಜಾತವೇದಸಿ, ಮಾನಸ್ತೋಕೇ, ಸರಸ್ವತಿ, ಧರಣಿ, ಧಾರಣಿ, ಸೌದಾಮನಿ, ಅದಿತಿ, ದಿತಿ, ವಿನತೇ, ಗೌರಿ, ಗಾಂಧಾರಿ, ಮಾತಂಗಿ, ಕೃಷ್ಣಯಶೋದೆ, ಸತ್ಯವಾದಿನಿ, ಬ್ರಹ್ಮವಾದಿನಿ,

ಬ್ರಹ್ಮವಾದಿನಿ ಕಾಲಿ ಕಪಾಲಿ ನಿದ್ರೇ ಸತ್ಯೋಽಪಯೋನಕರಿ ಸ್ಥಲಗತಂ ಜಲಗತಮಂತರಿಕ್ಷಗತಂ ವಾ ರಕ್ಷ ರಕ್ಷ ಸರ್ವಭೂತೇಭ್ಯಃ । ಸರ್ವೋಪದ್ರವೇಭ್ಯಃ ಸ್ವಾಹಾ ॥

ಯಸ್ಯಾಃ ಪ್ರಣಶ್ಯತೇ ಪುಷ್ಪಂ ಗರ್ಭೋ ವಾ ಪತತೇ ಯದಿ ।
ಮ್ರಿಯಂತೇ ಬಾಲಕಾ ಯಸ್ಯಾಃ ಕಾಕವಂಧ್ಯಾ ಚ ಯಾ ಭವೇತ್ ॥ ೧ ॥

ಶಸ್ತ್ರಂ ಧಾರಯತೇ ಹ್ಯೇಷಾಂ ಸಮರೇಕಾಂಡ ದಾರುಣೆ ।
ಗುಲ್ಮಶೂಲಾಕ್ಷಿರೋಗಾಣಾಂ ಕ್ಷಿಪ್ರಂ ನಾಶಯತಿ ವ್ಯಥಾಂ ।
ಶಿರೋರೋಗಜ್ವರಾಣಾಂ ಚ ನಾಶನೀ ಸರ್ವದೇಹಿನಾಂ ॥ ೨ ॥

ತದ್ಯಥಾ—ಹನ ಹನ ಕಾಲಂ ಸರ ಸರ ಗೌರಿ ಗೌರಿ ಧಮ ಧಮ ವಿದ್ಯೇ ಅಲಿತಾಲೇ ಮಾಲೇ ಗಂಧೇ ಬಂಧೇ ಪಚ ಪಚ ವಿದ್ಯೇ ನಾಶಯ ವಾ ಸಂಹರ ದುಃಸ್ವಪ್ನಂ ವಿನಾಶಯ ನಾಶನಿ ರಜನಿ ಸಂಧ್ಯೆ ದುಂದುಭಿನಾದೇ ಮಾನಸವೇಗೇ ಶಂಖಿನಿ ವಜ್ರಿಣಿ ಚಕ್ರಿಣಿ ಶೂಲಿನಿ

ಕಾಲಿ, ಕಪಾಲಿ, ನಿದ್ರೇ, ಸತ್ಯೋಪಾಯನಕರಿ, ನೀವೆಲ್ಲರೂ ಭೂಮಿಯಲ್ಲಿರುವುದಾಗಲೀ, ಅಂತರಿಕ್ಷದಲ್ಲಿಯಾಗಲೀ ಇರುವ ಎಲ್ಲಾ ಭೂತಗಳಿಂದಲೂ ಕಾಪಾಡುವವರಾಗಿ ಎಲ್ಲಾ ಭೂತಗಳಿಂದಲೂ ಎಲ್ಲಾ ತೊಂದರೆಗಳಿಂದಲೂ ಕಾಪಾಡಿರಿ ನಮಸ್ಕಾರಗಳು.

೧-೨. ಯಾವಳಿಗೆ ಪುಷ್ಪವಾಗಲಿ, ಗರ್ಭವಾಗಲೀ, ಬಿದ್ದದ್ದೇ ಆದರೂ, ಮತ್ತು ಯಾವಳಿಗೆ ಹುಟ್ಟಿದ ಮಕ್ಕಳೆಲ್ಲಾ ಸಾಯುತ್ತವೆಯೋ, ಯಾವಳು ಕಾಕವಂಧ್ಯಳಾಗಿದ್ದಾಳೋ, ಮತ್ತು ಯುದ್ಧದಲ್ಲಿ ಉಗ್ರವಾದ ಶಸ್ತ್ರಾಸ್ತ್ರಗಳನ್ನು ಹಿಡಿಯುವರೊ, ಗುಲ್ಮರೋಗ, ಶೂಲರೋಗ, ಅಕ್ಷಿರೋಗ ಇವುಗಳಿಂದ ತೊಂದರೆಪಡುವರೋ, ಶಿರೋರೋಗ ಜ್ವರಗಳಿಂದಲೂ ಯಾರು ತೊಂದರೆಪಡುತ್ತಾರೋ ಇವರೆಲ್ಲ ಈ ಕೆಳಗಿನ ಮಂತ್ರಪ್ರಭಾವದಿಂದ ಸುಖಿಗಳಾಗುವರು. ಹೇಗೆಂದರೆ—

ಹನ ಹನ ಕಾಲಂ, ಸರ ಸರ ಸೌರಿ, ಧಮ ಧಮ ವಿಧ್ಯೆ, ಅಲಿತಾಲೇ, ಮಾಲೇ, ಗಂಧೇ, ಬಂಧೇ ಪಚ ಪಚ ವಿಧ್ಯೇ ನಾಶಯ ವಾ ಸಂಹರ, ದುಃಸ್ವಪ್ನಂ ನಾಶಯ ನಾಶಿನಿ ರಜನಿಸಂಧ್ಯೇ ದುಂದುಭಿನಾದೇ, ಮಾನಸವೇಗೇ, ಶಂಖಿನಿ,

ಅಪಮೃತ್ಯುವಿನಾಶಿನಿ ವಿಶ್ವೇಶ್ವರಿ ದ್ರಾವಿಡಿ ದ್ರಾವಿಡಿ ಕೇಶವದಯಿತೇ ಪಶುಪತಿಸಹಿತೇ ದುಂದುಭಿದಮನಿ ಶಬರಿ ಕಿರಾತಿ। ಮಾತಂಗಿ ಓಂ ದ್ರಾಂ ದ್ರಾಂ ಜ್ರೋಂ ಜ್ರೋಂ ಕ್ರೋಂ ಕ್ರೋಂ ತುರು ತುರು ಯೇಷಾಂ ದ್ವಿಷಂತಿ ಪ್ರತ್ಯಕ್ಷಂ ಪರೋಕ್ಷಂ ವಾ ಸರ್ವಾನ್ದಮದಮ ಮರ್ದ ಮರ್ದ ತಾಪಯ ತಾಪಯ ಗೋಪಯ ಗೋಪಯ ಉತ್ಸಾದಯ ಉತ್ಸಾದಯ ಬ್ರಹ್ಮಾಣಿ ಮಹೇಶ್ವರಿ ವರಾಹಿ ವೈನಾಯಿಕಿ ಉಪೇಂದ್ರಿ ಆಗ್ನೇಯಿ ಚಾಮುಂಡೇ ವಾರುಣಿ ವಾಯವ್ಯೇ ರಕ್ಷ ರಕ್ಷ ಪ್ರಚಂಡವಿದ್ಯೇ ಓಂ ಇಂದ್ರೋಪೇಂದ್ರಭಗಿನಿ ವಿಜಯೇ ಶಾಂತಿ ಸ್ವಸ್ತಿಪುಷ್ಟಿವಿವರ್ಧನಿ ಕಾಮಾಂಕುಶೇ ಕಾಮದುಘೇ ಸರ್ವಕಾಮವರಪ್ರದೇ ಸರ್ವಭೂತೇಷು ಮಾಂ ಪ್ರಿಯಂ ಕುರು ಕುರು। ಆಕರ್ಷಣಿ ಆವೇಶನಿ ಜ್ವಾಲಾಮಾಲಿನಿ ಶೋಷಣಿ ಸಂಮೋಹನಿ ನೀಲಪತಾಕೇ। ಮಹಾನೀಲೇ ಮಹಾಗೌರಿ ಮಹಾಶ್ರೀ ಮಹಾಚಾಂದ್ರಿ ಮಹಾಸೌರಿ ಮಹಾಮಾಯೂರಿ ಆದಿತ್ಯರಶ್ಮಿ ಜಾಹ್ನವಿ

ವಜ್ರಿಣಿ, ಚಕ್ರಿಣಿ, ಶೂಲಿನಿ, ಅಪಮೃತ್ಯುವಿನಾಶಿನಿ, ವಿಶ್ವೇಶ್ವರಿ, ದ್ರಾವಿಡಿ, ದ್ರಾವಿಡಿ ಕೇಶವದಯಿತೇ ಪಶುಪತಿಸಹಿತೇ ದುಂದುಭಿದಮನಿ ಶಬರಿ, ಕಿರಾತಿಯೇ, ರಕ್ಷಿಸು, ರಕ್ಷಿಸು.

ಮಾತಂಗಿ, ಓಂ, ದ್ರಾಂ, ದ್ರಾಂ, ಜ್ರೋಂ, ಜ್ರೋಂ, ಕ್ರೋಂ, ಕ್ರೋಂ, ತುರು, ತುರು, ಯೇಷಾಂ, ದ್ವಿಷಂತಿ, ಪ್ರತ್ಯಕ್ಷಂ, ಪರೋಕ್ಷಂ, ವಾ, ಸರ್ವಾನ್ದಮ, ದಮ, ಮರ್ದ, ಮರ್ದ, ತಾಪಯ, ತಾಪಯ, ಗೋಪಯ, ಗೋಪಯ, ಉತ್ಸಾದಯ, ಉತ್ಸಾದಯ, ಬ್ರಹ್ಮಾಣಿ, ಮಹೇಶ್ವರಿ, ವರಾಹಿ, ವೈನಾಯಕಿ, ಉಪೇಂದ್ರಿ, ಆಗ್ನೇಯಿ, ಚಾಮುಂಡೇ, ವಾರುಣಿ ವಾಯವ್ಯದಲ್ಲಿ ಕಾಪಾಡು ಕಾಪಾಡು ಪ್ರಚಂಡವಿದ್ಯೇ ಓಂ ಇಂದ್ರೋಪೇಂದ್ರಭಾಗಿನಿ, ವಿಜಯೇ, ಶಾಂತಿ, ಸ್ವಸ್ತಿ, ಪುಷ್ಟಿಗಳನ್ನು ಹೆಚ್ಚಿಸುವವಳೇ, ಕಾಮಾಂಕುಶೇ, ಕಾಮದುಘೇ, ಸರ್ವಕಾಮ ವರಪ್ರದೇ, ಎಲ್ಲಾ ಭೂತಗಳಲ್ಲಿಯೂ ಪ್ರೀತಿಯುಂಟಾಗುವಂತೆ ಮಾಡು.

ಆಕರ್ಷಣಿ, ಆವೇಶನಿ, ಜ್ವಾಲಾಮಾಲಿನಿ, ಶೋಷಣಿ, ಸಂಮೋಹನಿ, ನೀಲ ಪತಾಕೇ, ಮಹಾನೀಲೇ, ಮಹಾಗೌರಿ, ಮಹಾಶ್ರೀ, ಮಹಾಚಾಂದ್ರಿ, ಮಹಾಸೌರಿ, ಮಹಾಮಾಯೂರೀ, ಆದಿತ್ಯರಶ್ಮಿ, ಜಾಹ್ನವೀ, ಯಮಘಂಟೇ, ಕಿಣಿಕಿಣಿ,

ಯಮಘಂಟೇ ಕಿಣಿಕಿಣಿ ಚಿಂತಾಮಣಿ ಸುರಭಿ ಸರ್ವಾಸುರೋತ್ಪನ್ನೇ ಸರ್ವಕಾಮದುಘೇ ಯಥಾಮನೀಷಿತಂ ಕಾರ್ಯಂ ತನ್ಮಮ ಸಿಧ್ಯತು ಸ್ವಾಹಾ ಓಂ ಸ್ವಾಹಾ ಓಂ ಭೂಃ ಸ್ವಾಹಾ ಓಂ ಭುವಃ ಸ್ವಾಹಾ ಓಂ ಸ್ವಃ ಸ್ವಾಹಾ ಓಂ ಭೂರ್ಭುವಸ್ಸ್ವಃ ಸ್ವಾಹಾ । ಯತ್ರೈವಾಗತಂ ಪಾಪಂ ತತ್ರೈವ ಪ್ರತಿಗಚ್ಛತು ಸ್ವಾಹಾ । ಓಂ ಬಲೇ ಮಹಾಬಲೇ ಅಸಿದ್ಧ ಸಾಧನಿ ಸ್ವಾಹೇತ್ಯೋಮ್ । ಅಮೋಘಾಂ ಪಠಿತಸಿದ್ಧಾಂ ವೈಷ್ಣವೀ-ಮಪರಾಜಿತಾಂ ಧ್ಯಾಯೇತ್ ।

॥ ಮಾರ್ಕಂಡೇಯ ಉವಾಚ ॥

ಏವಂ ಹಿ ಕೃತರಕ್ಷಸ್ಯ ವಸುಧಾರಾಮುಪಾಶ್ರಿತಃ ।
ವಸೋರ್ವಸುಮತೀಗರ್ತೇ ತಿಷ್ಠತೋ ದನುನಂದನಾಃ ॥ ೧ ॥

ಅಜಗ್ಮುರ್ವಿವಿಧಾಕಾರಾ ಶ್ಚತುರಂಗಬಲಾನ್ವಿತಾಃ ।
ನಾನಾಪ್ರಹರಣಾ ದಗ್ಧಾ ಭೀಮವಾಚಃ ಸದಾರುಣಾಃ ॥ ೨ ॥

ಆಗಮ್ಯ ವಾಗ್ಭಿರುಗ್ರಾಭಿಸ್ತರ್ಜಯಂತಸ್ತು ತೇ ವಸುಂ ।
ನಿರ್ಜಘ್ನುರಾಯುಧೈ ರ್ಭೀಮೈರ್ದೇವಪಕ್ಷಪರಂ ಸದಾ ॥ ೩ ॥

ಚಿಂತಾಮಣಿ, ಸುರಭಿ, ಸರ್ವಾಸುರೋತ್ಪನ್ನೇ, ಸರ್ವಕಾಮದುಘೇ, ನನ್ನ ಮನಸ್ಸಿನಲ್ಲಿ ಅಭಿಲಷಿತವಾದದ್ದನ್ನು ನೀವೆಲ್ಲರೂ ಸಿದ್ಧಿಸುವಂತೆ ಮಾಡಿರಿ. ಓಂ ಸ್ವಾಹಾ, ಓಂ ಭೂಃ ಸ್ವಾಹಾ, ಓಂ ಭುವಃ ಸ್ವಾಹಾ । ಓಂ ಸ್ವಃ ಸ್ವಾಹಾ, ಓಂ ಭೂರ್ಭುವಃ ಸ್ವಾಹಾ । ಎಲ್ಲಿಂದ ಪಾಪಗಳು ಬಂತೋ ಅವೆಲ್ಲ ಅಲ್ಲಿಗೇ ಹೋಗಿ ಸೇರಲಿ । ಓಂ ಬಲೇ ಮಹಾಬಲೇ, ಅಸಿದ್ಧಸಾಧನಿ, ಸ್ವಾಹೇತ್ಯೋಮ್ । ಈ ರೀತಿಯಾದ ಅಮೋಘವಾದ ಅಪರಾಜಿತಾನಾಮಕ ವೈಷ್ಣವೀವಿದ್ಯೆಯನ್ನು ಧ್ಯಾನಿಸಬೇಕು.

೧-೩. ಮಾರ್ಕಂಡೇಯರು ಹೇಳುತ್ತಾರೆ :—ಈ ರೀತಿಯಾದ ರಕ್ಷಾಬಂಧನ ದಿಂದ ಭೂಮಿಯ ವಿವರದಲ್ಲಿ ಅಡಗಿರುವ, ವಸುವಿನ ಹತ್ತಿರಕ್ಕೆ ದಾನವರೆಲ್ಲರೂ ಬಂದರು. ನಾನಾಸೈನ್ಯಗಳಿಂದ ಕೂಡಿ, ನಿಷ್ಠುರವಾಕ್ಯಗಳನ್ನು ಆಡುತ್ತಾ, ಉಗ್ರವಾದ ಮತ್ತು ಭಯಂಕರವಾದ ಆಯುಧಗಳಿಂದ ಹೊಡೆದರು.

ನಚತೇಽಸ್ಯ ರುಜಂ ಚಕ್ರುರ್ನ ಚ ತಾನಪ್ಯುದೀಕ್ಷಿತಾ ।
ಚಿಂತಯಾಮಾಸ ದೇವೇಶಂ ಮನಸಾ ಮಧುಸೂದನಂ ॥ ೪ ॥

ತತೋ ನಿಷ್ಫಲಯತ್ನಾಸ್ತೇ ದೃಷ್ಟ್ವಾ ತನ್ಮಹದದ್ಭುತಂ ।
ಜಗ್ಮುಃ ಸರ್ವೇ ಗೃಹಾನೇವ ವಿಲಕ್ಷಾ ದೈತ್ಯದಾನವಾಃ ॥ ೫ ॥

ತೇಷು ನಿಷ್ಫಲಯತ್ನೇಷು ದೇವೋ ಗರುಡಮಬ್ರವೀತ್ ।
ಗತ್ವಾ ಗರುಡರಾಜಾನಂ ವಸುಂ ಶೀಘ್ರಮಿಹಾನಯ ॥ ೬ ॥

ಏವಮುಕ್ತಃ ಸ ಗರುಡೋ ದೇವದೇವೇನ ಚಕ್ರಿಣಾ ।
ಪಕ್ಷವಾತಾರ್ಣವಕ್ಷೋಭಕ್ಷುಬ್ಧಯಾದೋಗಣೋ ಯಯೌ ॥ ೭ ॥

ದದರ್ಶ ಚ ಭುವೋ ಗರ್ತೇ ಧ್ಯಾನಸಂಮೀಲಿತೇಕ್ಷಣಂ ।
ವಸುರಾಜೋಽಪಿ ಗರುಡಂ ದದರ್ಶ ಹರಿವಾಹನಂ ॥ ೮ ॥

ಸ ದೃಷ್ಟ್ವಾ ಗರುಡಂ ಪ್ರಾಪ್ತಂ ಕೃಷ್ಣಭಕ್ತಿ ಸಮನ್ವಿತಂ ।
ತುಷ್ಟಾವ ಗರುಡಂ ವಾಗ್ಭಿರರ್ಥ್ಯಾಭಿರಮಿತಕ್ರಿಯಃ ॥ ೯ ॥

೪-೫. ಆಗ ವಸುವು ಈ ರೀತಿಯಾದದ್ದನ್ನು ನೋಡಿ ಮನಸ್ಸಿನಲ್ಲಿಯೇ ಮಧುಸೂದನನ ಧ್ಯಾನವನ್ನು ಮಾಡಿದನು. ಅನಂತರ ಎಲ್ಲ ದಾನವರೂ ತಮ್ಮ ವ್ಯಾಪಾರಗಳೆಲ್ಲವೂ ಅವನಲ್ಲಿ ನಿಷ್ಫಲವಾದದ್ದನ್ನು ನೋಡಿ ಭಯದಿಂದ ತಮ್ಮ ಮನೆಗಳಿಗೆ ಓಡಿದರು.

೬-೯. ಆ ದಾನವರೆಲ್ಲರೂ ನಿರಾಶರಾಗಿ ಇರಲು ಪರಮಾತ್ಮನು ಗರುಡನನ್ನು ಕುರಿತು ಈ ರೀತಿ ಹೇಳಿದನು. ವಸುವಿನ ಹತ್ತಿರಕ್ಕೆ ಹೋಗಿ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ ಎಂದನು. ಹೀಗೆ ವಿಷ್ಣುವಿನಿಂದ ಹೇಳಲ್ಪಟ್ಟ ಗರುಡನು, ತನ್ನ ರೆಕ್ಕೆಯ ಬಡಿತದಿಂದ ಸಮುದ್ರದಲ್ಲಿರುವ ಪ್ರಾಣಿಗಳೆಲ್ಲವೂ ಕ್ಷೋಭಗೊಳ್ಳುವಂತೆ ವೇಗದಿಂದ ಹೋಗಿ ಭೂಮಿಯ ಬಿಲದಲ್ಲಿ ಧ್ಯಾನಾವಸ್ಥೆಯಲ್ಲಿರುವ ವಸುವನ್ನು ಕಂಡನು. ವಸುವೂ ಕೂಡ ಹರಿವಾಹನನಾದ ಗರುಡನನ್ನು ನೋಡಿದನು ಮತ್ತು ಕೃಷ್ಣಭಕ್ತನಾದ ಅವನನ್ನು ಸಾರ್ಥಕಗಳಾದ ವಾಕ್ಯಗಳಿಂದ ಸ್ತೋತ್ರಮಾಡ ಲಾರಂಭಿಸಿದನು.

॥ ವಸುರುವಾಚ ॥

ನಮಸ್ಯಾಮಿ ಮಹಾಬಾಹುಂ ಖಗೇಂದ್ರಂ ಹರಿವಾಹನಂ ।
ವಿಷ್ಣೋರ್ಧ್ವಜಾಗ್ರಸಂಸ್ಥಾನ ವಿತ್ರಾಸಿತಮಹಾಸುರಂ ॥ ೧೦ ॥

ನಮಸ್ತೇ ನಾಗದರ್ಪಘ್ನ ವಿನತಾನಂದವರ್ಧನ ।
ಸ್ವಪಕ್ಷವಾತನಿರ್ಧೂತ ದೀನದೈತ್ಯನಿರೀಕ್ಷಿತ ॥ ೧೧ ॥

ಪರಸ್ಪರಸ್ಯ ಶಾಪೇನ ಸುಪ್ರತೀಕ ವಿಭಾವಸೂ ।
ಗಜಕಚ್ಛಪತಾಂ ಪ್ರಾಪ್ತೌ ತಾವುಭೌ ವೈರಸಂಯುತೌ ॥ ೧೨ ॥

ಷಡುಚ್ಛ್ರಿತೋ ಯೋಜನಾನಿ ಗಜಸ್ತದ್ದ್ವಿಗುಣಾಯತಃ ।
ಕೂರ್ಮಸ್ತ್ರಿಯೋಜನೋತ್ಸೇಧೋ ದಶಯೋಜನಮಂಡಲಃ ॥ ೧೩ ॥

ನಖಸ್ಥೌ ತೌ ತ್ವಯಾ ನೀತೌ ಹತೌ ಭುಕ್ತೌ ಚ ಪಕ್ಷಿಪ ।
ಪರಸ್ಪರಕೃತೋಚ್ಛ್ರಾಯೌ ದ್ವಾರೌ ಚ ಪರಿಮೋಕ್ಷಿತೌ ॥ ೧೪ ॥

೧೦–೧೪. ವಸುವು ಸ್ತೋತ್ರಮಾಡುತ್ತಾನೆ— ಹರಿವಾಹನನೂ, ಮಹಾಬಾಹುವೂ, ಪಕ್ಷಿರಾಜನೂ ಆದ ನಿನ್ನನ್ನು ನಮಸ್ಕರಿಸುವೆನು. ವಿಷ್ಣುವಿನ ಧ್ವಜದಲ್ಲಿ ವಾಸಮಾಡುವವನೇ ಅಸುರರನ್ನು ಓಡಿಸಿದವನೇ, ಸರ್ಪಗಳ ಅಹಂಕಾರವನ್ನು ಖಂಡಿಸಿದವನೇ, ವಿನತೆಗೆ ಆನಂದವನ್ನುಂಟು ಮಾಡುವವನೇ ನಿನಗೆ ನಮಸ್ಕಾರವು. ಕೇವಲ ರೆಕ್ಕೆಗಳ ಗಾಳಿಯಿಂದ ಹೋಗಲಾಡಿಸಲ್ಪಟ್ಟ ದಾನವರುಳ್ಳವನೇ, ನಮಸ್ಕಾರವು. ಸುಪ್ರತೀಕ ಮತ್ತು ವಿಭಾವಸು ಎಂಬುವರು ಪರಸ್ಪರ ಶಾಪದಿಂದ ವೈರಿಗಳಾಗಿ ಆನೆ ಮತ್ತು ಆಮೆಯ ರೂಪವನ್ನು ಧರಿಸಿದರು. ಆನೆಯು ಆರು ಯೋಜನ ಎತ್ತರವಾಗಿಯೂ ಅದರ ಎರಡರಷ್ಟು ವಿಸ್ತಾರವಾಗಿಯೂ ಬೆಳೆಯಿತು. ಆಮೆಯು ಮೂರುಯೋಜನ ಎತ್ತರವಾಗಿಯೂ, ಹತ್ತು ಯೋಜನದಷ್ಟು ದುಂಡಗೂ ಆಯಿತು. ಅವನ್ನು ನೀನು ನಿನ್ನ ಉಗುರಿನಿಂದ ಎತ್ತಿಕೊಂಡು ಹೋಗಿ ಕೊಂದು ತಿಂದೆ. ಪರಸ್ಪರವಾಗಿ ಬೆಳೆದಿದ್ದ ಅವರನ್ನು ತಡೆದು ಬಾಗಿಲುಗಳಿಗೆ ಅವಕಾಶವು ದೊರೆಯುವಂತೆ ಮಾಡಿದೆ.

ನಿಷಾದವಿಷಯಂ ಭುಕ್ತಂ ತತ್ರ ಕ್ರೂರಮನಿಂದಿತಂ ।
ನಿಷಾದೀಶಸ್ತತೋ ಮುಕ್ತಸ್ತತ್ರಾಪಿ ಬ್ರಾಹ್ಮಣಸ್ತ್ವಯಾ　|| ೧೫ ||

ತ್ವಯಾ ರೋಹಿಣಿವೃಕ್ಷಸ್ಯ ಯೋಜನಾನಾಂ ಶತಾಯತಾಃ ।
ಶಾಖಾ ಭಿನ್ನಾಃ ಸ್ಥಿತಾ ಯತ್ರ ವಾಲಖಿಲ್ಯಾಃ ಸಹಸ್ರಶಃ　|| ೧೬ ||

ತಾಂಸ್ತು ವಕ್ತ್ರಗತಾನ್ ಕೃತ್ವಾ ನಖಸ್ಥೈರ್ಗಜಕಚ್ಛಪೈಃ ।
ನಭಸ್ಯೇವ ನಿರಾಲಂಭೇ ಸರ್ವತಃ ಪರಿವಾರಿತಃ　|| ೧೭ ||

ತ್ವಯಾ ಜಿತ್ವಾ ರಣೇ ಸರ್ವಾನ್ ದೇವಾಞ್ಛಕ್ರಪುರೋಗಮಾನ್ ।
ಆಹೃತಂ ತು ಪರಂ ಸೋಮಂ ಪಶ್ಯೇರ್ವಾಸ್ಯಥ ಕಾಶ್ಯಪ　|| ೧೮ ||

ನಾಗೌ ದೃಷ್ಟಿವಿಷೌ ಕೃತ್ವಾ ರಜಸಾ ಭುವಿ ಚಕ್ಷುಷೋಃ ।
ಜಿಹ್ವಾಗ್ರನಿತ್ಯಗಂ ಭುಂಜಞ್ಚಕ್ರೇ ತೌ ದೇವನಿರ್ಮಿತೌ　|| ೧೯ ||

ಆಹೃತ್ಯಾಪಿ ತ್ವಯಾ ಸೋಮಂ ನೀತಮೇವ ನ ಭಕ್ಷಿತಂ ।
ತೇನ ವಿಷ್ಣೋರ್ಧ್ವಜಸ್ಥಾನೇ ವಾಹನತ್ವಂ ಗತೋಽಸ್ಯಸಿ　|| ೨೦ ||

೧೫–೨೦. ಕ್ರೂರಕರ್ಮಿಗಳಾದ ಬೇಡರಿಂದ ಕೂಡಿದ್ದ ಊರು ನಿನ್ನಿಂದ ಹಾಳುಮಾಡಲ್ಪಟ್ಟಿತು. ನಿಷಾದಪತಿಯು ರಕ್ಷಿಸಲ್ಪಟ್ಟನು. ಅಲ್ಲಿಯೂ ಬ್ರಾಹ್ಮಣನು ರಕ್ಷಿಸಲ್ಪಟ್ಟನು. ನೂರುಯೋಜನ ವಿಸ್ತಾರವಾಗಿದ್ದ ರೋಹಿಣಿಮರದ ಕೊಂಬೆಯು ಕತ್ತರಿಸಲ್ಪಟ್ಟಿತು. ಅಲ್ಲಿ ಸಾವಿರಾರು ವಾಲಖಿಲ್ಯರು ಇದ್ದರು ಅವರ ರಕ್ಷಣೆಗಾಗಿ ಆ ಕೊಂಬೆಯನ್ನು ಬಾಯಿನಲ್ಲಿ ಕಚ್ಚಿಕೊಂಡೂ, ಆನೆ ಆಮೆಗಳನ್ನು ಕಾಲಿನ ಉಗುರುಗಳಲ್ಲಿ ಹಿಡಿದುಕೊಂಡೂ, ನಿರಾಲಂಬವಾದ ಆಕಾಶದಲ್ಲಿಯೇ ಸಂಚರಿಸಿದೆ ನಿಂತು ದೇವತೆಗಳಾದ ಇಂದ್ರಾದಿಗಳನ್ನೂ ಜಯಿಸಿದೆ. ಸೋಮವನ್ನು ಮಾತ್ರ ತೆಗೆದುಕೊಂಡು ಹೊರಟೆ. ನಿನ್ನ ಕಣ್ಣಿನ ವಿಷದಿಂದಲೇ ಮೂರ್ಛೆ ಹೊಂದಿದ ಸರ್ಪಗಳು ಭೂಮಿಯ ಧೂಳಿನಲ್ಲಿ ಬಿದ್ದವು. ಸೋಮವನ್ನು ತೆಗೆದುಕೊಂಡು ಹೋದರೂ ಅದನ್ನು ಮಾತ್ರ ತಿನ್ನಲಿಲ್ಲ. ಈ ಪರಾಕ್ರಮದಿಂದ ವಿಷ್ಣುವಿಗೆ ವಾಹನನಾದೆ

ತ್ವಯಾ ನಿಕ್ಷಿಪ್ಯ ದರ್ಭೇಷು ಸೋಮಂ ನಾಗಾಶ್ಚ ವಂಚಿತಾಃ ।
ಜಹಾರ ಸಹಸಾ ಯತ್ರ ತತ್ಪೀಯೂಷಂ ಬಲಸೂದನಃ ॥ ೨೧ ॥

ಯತ್ರ ಜಿಹ್ವಾ ದ್ವಿಧಾ ಭೂತಾ ಪನ್ನಗಾನಾಂ ದ್ವಿಜೋತ್ತಮ ।
ವಿನತಾ ಮೋಚಿತಾ ದಾಸ್ಯಾತ್ ಕದ್ರ್ವಾ ಪೂರ್ವಂ ಜಿತಾ ರಣೇ ॥ ೨೨ ॥

ಉಚ್ಚೈಃ ಶ್ರವಾಸ್ತು ಕಿಂ ವರ್ಣಃ ಶುಕ್ಲ ಇತ್ಯೇವ ಭಾಷತೀ ।
ಕೃಷ್ಣವಾಲಮಹಂ ಮನ್ಯೇ ಪುಚ್ಛಂ ದೃಷ್ಟ್ವೈವ ವಾಕ್‌ಛಲಾತ್ ॥ ೨೩ ॥

ತ್ವಯಾ ವಜ್ರಪ್ರಹಾರೇಣ ಪಕ್ಷಯುಕ್ತಂ ಪುರಾ ಸ್ವಯಂ ।
ದಧೀಚಿ ವಜ್ರಶಕ್ರಾಣಾಂ ಮಾನನಾರ್ಥಾಯ ನಾನ್ಯಥಾ ॥ ೨೪ ॥

ತಸ್ಯ ಪಕ್ಷಸ್ಯ ದೇವೇಂದ್ರೋ ಯದಾ ನಾಂತಂ ಹಿ ದೃಷ್ಟವಾನ್ ।
ತದಾ ತವ ಸುಪರ್ಣೇತಿ ನಾಮ ಖ್ಯಾತಂ ಜಗತ್ರಯೇ ॥ ೨೫ ॥

೨೧-೨೫. ನಿನ್ನಿಂದ ನಾಗಗಳ ವಂಚನೆಗಾಗಿ ಅಮೃತವು ದರ್ಭೆಗಳ ಮೇಲೆ ಇಡಲ್ಪಟ್ಟಿತು. ಅಲ್ಲಿಂದ ಇಂದ್ರನು ಬೇಗನೆ ತೆಗೆದುಕೊಂಡು ಹೋದನು. ಆಗ ಆ ಜಾಗದಲ್ಲಿಯೇ ಸರ್ಪಗಳಿಗೆ ನಾಲಿಗೆಯು ಸೀಳಿ ಎರಡು ನಾಲಿಗೆಗಳಾದುವು. ಕದ್ರೂವಿನಿಂದ ಪೂರ್ವದಲ್ಲಿ ಸೋತು ದಾಸಿಯಾಗಿದ್ದ ತಾಯಿಯಾದ ವಿನತೆಯನ್ನು ಬಿಡುಗಡೆ ಮಾಡಿದೆ. ಉಚ್ಚೈಃಶ್ರವಾ ಎಂಬ ಕುದುರೆಯ ಬಾಲವು ಬಿಳುಪೇ, ಕಪ್ಪೇ, ಎಂದು ವಿಮರ್ಶೆಬಂದಾಗ ಕದ್ರುವು ಕುದುರೆಯ ಬಾಲಕಪ್ಪು ಎಂದು ಹೇಳಲು ಬಾಲವು ಹಾಗೆಯೇ ಕಂಡದ್ದರಿಂದ ವಿನತೆಯು ದಾಸ್ಯಕ್ಕೊಳಗಾದಳು. ಆ ದಾಸ್ಯವನ್ನು ಬಿಡಿಸಿ ಕಾಪಾಡಿದೆ. ದಧೀಚಿ ಮತ್ತು ಇಂದ್ರರ ಗೌರವಾರ್ಥವಾಗಿ ವಜ್ರಾಯುಧವನ್ನು ನಾಶಮಾಡದೆ ಬಿಟ್ಟೆ. ಆಗ ಇಂದ್ರನು ವಜ್ರಾಯುಧದಿಂದ ನಿನ್ನ ರೆಕ್ಕೆಗೆ ಏನೂ ಆಗದಿದ್ದುದನ್ನು ನೋಡಿದನು. ಅಂದಿನಿಂದ ನಿನಗೆ ಮೂರು ಲೋಕದಲ್ಲೂ ಸುಪರ್ಣನೆಂಬ ಪ್ರಸಿದ್ಧಿಯುಂಟಾಯಿತು.

ತೇಜಸಾ ಭಾಸ್ಕರಂ ದೇವಂ ಜವೇನ ಚ ಸಮೀರಣಂ ।
ನ ತೇ ತುಲ್ಯೋ ಮಹಾಭಾಗ ನಾಗಪಕ್ಷಕ್ಷಯಂಕರ ॥ ೨೬ ॥

ಧ್ಯಾನಮಾತ್ರೇ ತ್ವಯಿ ವಿಭೋ ವಿಶ್ವಂ ಸ್ಥಾವರಜಂಗಮಂ ।
ಕ್ಷಿಪ್ರಂ ಪ್ರಣಾಶಮಾಯಾತಿ ತಥಾ ಸರ್ವಭಯಾನಿ ಚ ॥ ೨೭ ॥

ಸ್ವಕಯಾ ಪಕ್ಷನಾಡ್ಯಾ ತ್ವಂ ಬ್ರಹ್ಮಾಂಡಂ ಸಕಲಂ ವಹನ್ ।
ನೋಪಯಾಸಿ ಪ್ರಭೋ ಖೇದಂ ಯಥಾ ದೇವೋ ಜನಾರ್ದನಃ ॥ ೨೮ ॥

ತ್ವಮೃಷಿಸ್ತ್ವಂ ಮಹಾಭಾಗಸ್ತ್ವಂ ದೇವಃ ಪತಗೇಶ್ವರಃ ।
ತ್ವಂ ಪ್ರಭುಸ್ತಪನಪ್ರಖ್ಯಸ್ತ್ವಂ ನಸ್ತ್ರಾಣಮನುತ್ತಮಂ ॥ ೨೯ ॥

ಬಲೋರ್ಮಿಮಾನ್ಸಾಧ್ವಸದೀನಸತ್ತ್ವಃ
ಸಮೃದ್ಧಿಮಾನ್ ದುಷ್ಪ್ರಸಹಸ್ತ್ವಮೇವ ।
ತಪಃ ಶ್ರುತಂ ಸರ್ವಮಹೀನ ಕೀರ್ತಿ
ರನಾಗತಾದೀನ್ವಿಷಯಾಂಶ್ಚ ವೇತ್ಸಿ ॥ ೩೦ ॥

ತ್ವಮುತ್ತಮಃ ಸರ್ವಮಿದಂ ಚರಾಚರಂ
ಗಭಸ್ತಿಭಿರ್ಭಾನುರಿವಾವಭಾಸಸೇ ।

೨೬–೨೯. ನೀನು ಕಾಂತಿಯಲ್ಲಿ ಸೂರ್ಯನಿಗೆ ಸಮನೂ, ವೇಗದಲ್ಲಿ ವಾಯುವಿಗೆ ಸಮನೂ ಆಗಿರುವೆ. ನಾಗಗಳಿಗೆ ಭಯವನ್ನುಂಟುಮಾಡುವವನೇ, ನಿನಗೆ ಸಮಾನರು ಯಾರೂ ಇಲ್ಲ. ನಿನ್ನ ಧ್ಯಾನಮಾತ್ರದಿಂದ ಎಲ್ಲವೂ ಪ್ರಣಾಶವಾಗುವುದು ಮತ್ತು ಎಲ್ಲ ಭಯಗಳೂ ನೀಗುವುವು. ನಿನ್ನ ರೆಕ್ಕೆಗಳ ಮೇಲೆ ಸಕಲ ಬ್ರಹ್ಮಾಂಡವನ್ನೂ ಹೊತ್ತು ದೇವದೇವನಂತೆ ನೀನೂ ಸಹ ಕ್ಲೇಶವನ್ನು ಪಡೆಯುವುದಿಲ್ಲ. ನೀನೇ ಋಷಿಯು. ನೀನೇ ಭಾಗ್ಯಶಾಲಿಯು. ನೀನೇ ಪಕ್ಷಿಗಳಿಗೆಲ್ಲ ರಾಜನು. ನೀನೇ ಪ್ರಭುವು. ನೀನು ಸೂರ್ಯಸಮಾನಕಾಂತಿಯುಳ್ಳವನು ನಮ್ಮ ರಕ್ಷಕನು.

೩೦. ಬಲದಿಂದ ಕೂಡಿದವನೂ, ಸತ್ತ್ವಗುಣನೂ, ಸಮೃದ್ಧಿವಂತನೂ, ಶ್ರೇಷ್ಠನೂ ನೀನೇ ಆಗಿರುವೆ. ತಪಸ್ಸು, ವೇದ, ಮತ್ತು ಸಕಲವಾದ ಭೂಮಿಗತವಾದ ವಿಷಯವನ್ನೂ ತಿಳಿಯುವೆ

೩೧. ನೀನು ಸರ್ವೋತ್ಕೃಷ್ಟನಾಗಿ ಚರಾಚರವಾದ ಜಗತ್ತನ್ನು ಸೂರ್ಯನು ತನ್ನ ಕಿರಣಗಳಿಂದ ಧರಿಸುವಂತೆ ವಹಿಸಿ ಪ್ರಕಾಶಿಸುತ್ತೀಯೆ ಭಾನುಸುತನ

ಸಮಾಕ್ಷಿಪನ್ ಭಾನುಸುತಪ್ರಭಾಂ ಮುಹು
ಸ್ತ್ವಮಂತಕಃ ಸರ್ವಮಿದಂ ಧ್ರುವಾಧ್ರುವ ॥ ೩೦ ॥

ದಿವಾಕರಃ ಪರಿಕ್ರಮತಿ ಯಥಾ ದಹನ್
ಪ್ರಜಾಸ್ತಥಾ ದಹಸಿ ಹುತಾಶನಪ್ರಭ ।
ಭಯಂಕರಃ ಪ್ರಲಯ ಇವಾಗ್ನಿರುತ್ಥಿತೋ
ವಿನಾಶಯತ್ಯುರಗ ಪರಿವರ್ತಪಾಂತಕೃತ್ ॥ ೩೨ ॥

ಖಗೇಶ್ವರಂ ಶರಣಮುಪಾಗತೋಽಸ್ಮ್ಯಹಂ
ಮಹೌಜಸಂ ವಿತಿಮಿರಮಭ್ರಗೋಚರಂ ।
ಮಹಾಬಲಂ ಗರುಡಮುಪೇತ್ಯ ಖೇಚರಂ
ಮಹೌಜಸಂ ವರದಮಜೇಯ ಮಕ್ಲಮಂ ॥ ೩೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಗರುಡಸ್ತೋತ್ರಂ ನಾಮ
ಷಟ್ ಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ

(ಶನಿಯ) ಪ್ರಭಾವವನ್ನು ದೂರದಲ್ಲಿಯೇ ತಡೆದು ಕಾಪಾಡುತ್ತೀಯೇ. ಸರ್ವಕ್ಕೂ ಅಂತಕರೂಪನಾಗಿರುವೆ.

೩೨. ಸೂರ್ಯನು ಪ್ರಜೆಗಳನ್ನು ದಹಿಸುತ್ತ ಸುತ್ತುವಂತೆ ಅಗ್ನಿಸದೃಶನಾದ ನೀನು ಎಲ್ಲವನ್ನೂ ದಹಿಸುತ್ತೀಯೆ. ಪ್ರಳಯಾಗ್ನಿಸಮಾನನಾದ ನೀನು ಸರ್ಪಗಳೆಂಬ ಪ್ರಳಯವನ್ನು ನಾಶಮಾಡುತ್ತೀಯೇ.

೩೩. ಪಕ್ಷಿರಾಜನೂ, ಮಹಾತೇಜಸ್ವಿಯೂ, ಅಂಧಕಾರನಿವರ್ತಕನೂ, ಮಹಾಬಲಿಷ್ಠನೂ, ಅಜೇಯನೂ, ವರದನೂ, ಅಂತರಿಕ್ಷಗಾಮಿಯೂ. ಆದ ಗರುಡನನ್ನು ನಾನು ಶರಣುಹೊಂದಿ ಸಮಸ್ಕರಿಸುತ್ತೇನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಗರುಡಸ್ತೋತ್ರವೆಂಬ ಮುನ್ನೂರ ನಲವತ್ತಾರನೆಯ
ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಸಪ್ತಚತ್ವಾರಿಂಶದಧಿಕ ತ್ರಿಶತತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಸ್ತುತಸ್ತು ಗರುಡೋ ರಾಜ್ಞಾ ಪೃಷ್ಠಮಾರೋಪ್ಯ ಪಾರ್ಥಿವಂ ।
ದರ್ಶಯಾಮಾಸ ದೇವಸ್ಯ ವಿಷ್ಣೋರಮಿತತೇಜಸಃ ॥ ೧ ॥

ಸದೃಷ್ಟ್ವಾತ್ತ ದೇವದೇವೇಶಂ ಪ್ರಣತಾರ್ತಿವಿನಾಶನಂ ।
ತುಷ್ಟಾವ ಭಕ್ತ್ಯಾ ರಾಜೇಂದ್ರ ದೇವೇಶಮಪರಾಜಿತಂ ॥ ೨ ॥

॥ ವಸುರುವಾಚ ॥

ನಮಸ್ತೇ ಪುಂಡರೀಕಾಕ್ಷ ಶರಣಾಗತವತ್ಸಲ ।
ದೈತ್ಯದಾನವದರ್ಪಘ್ನ ಪ್ರಣತಾರ್ತಿವಿನಾಶನ ॥ ೩ ॥

ಮುನ್ನೂರ ನಲವತ್ತೇಳನೆಯ ಅಧ್ಯಾಯ.

೧–೨. ಮಾರ್ಕಂಡೇಯರು ಹೇಳುತ್ತಾರೆ:—ಈ ರೀತಿಯಾಗಿ ರಾಜನಿಂದ ಸ್ತುತಿಸಲ್ಪಟ್ಟ ಗರುಡನು ಅವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು, ಅಮಿತ ತೇಜಶ್ಶಾಲಿಯಾದ ವಿಷ್ಣುವಿನ ಹತ್ತಿರ ಕರೆದುಕೊಂಡು ಹೋಗಿ ದೇವದೇವನನ್ನು ಅವನಿಗೆ ತೋರಿಸಿದನು. ರಾಜನೂ ಕೂಡ ಭಕ್ತರ ಪಾಪಗಳನ್ನು ನೀಗಿಸುವ ಪರಮಾತ್ಮನನ್ನು ನೋಡಿ ಭಕ್ತಿಯಿಂದ ಸ್ತುತಿಸಲಾರಂಭಿಸಿದನು.

೩–೭. ವಸುವು ಸ್ತೋತ್ರಮಾಡುತ್ತಾನೆ:—ಶರಣಾಗತವತ್ಸಲನೂ, ಪುಂಡರೀಕಾಕ್ಷನೂ, ದೈತ್ಯದಾನವರ ದರ್ಪವನ್ನಡಗಿಸುವವನೂ, ನಮಸ್ಕರಿಸಿದವರ ತೊಂದರೆ

ಕಾಮ ಕಾಮದ ಕಾಮಘ್ನ ವಿಶ್ವಯೋನೇ ಜಗತ್ಪತೇ ।
ಮಹಾಮೂರ್ತೇ ನಿಶೋತ್ಥಸ್ಯ ತಮಸಃ ಪ್ರವಿನಾಶನ ॥ ೪ ॥

ನ ತೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಆದಿಸ್ತ್ವಂ ಸರ್ವಧರ್ಮಾಣಾಮೃಷೀಣಾಂ ಚ ಜಗದ್ಗುರೋ ॥ ೫ ॥

ಸೂಕ್ಷ್ಮಸ್ತ್ವಂ ಸರ್ವಭೂತೇಭ್ಯೋ ಮಹದ್ಭ್ಯಶ್ಚ ಮಹತ್ತರಃ ।
ದೂರಗಸ್ತ್ವಂ ಮಹಾಭಾಗ ಸರ್ವೇಷಾಮಪಿ ಚಾಗತಃ ॥ ೬ ॥

ಸರ್ವಭೂತಾಂತರಸ್ಥೋಽಪಿ ಕರ್ಮಭಿರ್ನ ಚ ಲಿಪ್ಯಸೇ ।
ಅಶರೀರಃ ಶರೀರಸ್ಥಃ ಸರ್ವಭೂತೇಷ್ವವಸ್ಥಿತಃ ॥ ೭ ॥

ಪುರುಷಸ್ತ್ವಂ ತ್ವಮವ್ಯಕ್ತಸ್ತ್ವಮಾತ್ಮಾ ಬುದ್ಧಿರೇವ ಚ ।
ಮಹಾಭೂತಾನಿ ಭಗವಂಸ್ತ್ವಂ ತಥೈವೇಂದ್ರಿಯಾಣಿ ಚ ॥ ೮ ॥

ಯೋಗಿಭಿರ್ಮೃಗ್ಯಸೇ ಯೋಗಜ್ಞಾನಜ್ಞೇಯ ಪುರಾತನ ।
ಯೇ ತ್ವಾಂ ಭಜಂತಿ ತೇ ಯಾಂತಿ ಭಗವನ್ಪರಮಾಂ ಗತಿಂ ॥ ೯ ॥

ಗಳನ್ನು ಹೋಗಲಾಡಿಸುವವನೂ ಆದ ಪರಮಾತ್ಮನಿಗೆ ನಮಸ್ಕಾರವು. ಇಷ್ಟಾರ್ಥಗಳನ್ನು ಕೊಡುವವನೇ, ಕಾಮಘ್ನನೇ, ವಿಶ್ವಯೋನಿಯೇ, ಜಗತ್ಪತಿಯೇ, ಮಹಾಮೂರ್ತಿಯೇ, ಅಂಧಕಾರ ನಿವಾರಕನೇ, ನಿನಗೆ ನಮಸ್ಕಾರವು. ನಿನ್ನ ಪ್ರಭಾವವನ್ನು ದೇವತೆಗಳೂ, ಮಹರ್ಷಿಗಳೂ ಅರಿಯರು. ನೀನು ಸರ್ವಧರ್ಮಗಳಿಗೂ, ಋಷಿಗಳಿಗೂ, ಜಗದ್ಗುರುವಾಗಿ ಆದಿಯಾಗಿರುವೆ. ನೀನು ಸೂಕ್ಷ್ಮವಸ್ತುಗಳಿಗಿಂತಲೂ ಸೂಕ್ಷ್ಮನೂ, ಮಹದ್ವಸ್ತುಗಳಿಗಿಂತ ಮಹತ್ತರನೂ ಆಗಿರುವೆ. ಎಲ್ಲ ವಸ್ತುಗಳಿಗಿಂತಲೂ ದೂರನಾಗಿದ್ದೀಯೇ. ಎಲ್ಲ ಭೂತಗಳಲ್ಲಿದ್ದರೂ ಕರ್ಮಕ್ಕೆ ಒಳಗಾಗುವುದಿಲ್ಲ ಅಶರೀರನಾದರೂ ಸರ್ವಪ್ರಾಣಿಗಳಿಗೂ ಶರೀರಿಯಾಗಿರುವೆ.

೮-೯. ಪುರುಷನೂ, ಅವ್ಯಕ್ತನೂ, ಆತ್ಮಸ್ವರೂಪನೂ, ಬುದ್ಧಿಯೂ, ಮಹಾಭೂತಗಳೂ, ಇಂದ್ರಿಯಗಳೂ ನೀನೇ ಆಗಿರುವೆ. ಯೋಗಾಭ್ಯಾಸನಿರತರಾದ ಯೋಗಿಗಳಿಂದ ಹುಡುಕಲ್ಪಡುತ್ತೀಯೇ. ಯಾರು ನಿನ್ನನ್ನು ಭಕ್ತಿಯಿಂದ ಭಜಿಸುವರೋ ಅವರು ನಿನ್ನಿಂದ ಉತ್ತಮಗತಿಯನ್ನು ಪಡೆಯುವರು.

ಜಯಮನಘಮಜೇಯಂ ವಿಶ್ವಗಂ ದೇವದೇವಂ
ತ್ರಿದಶರಿಪುವಿನಾಶೇ ನಿತ್ಯಮುದ್ಯುಕ್ತಶಕ್ತಿಂ ।
ದ್ವಿಜಸುರವರವಂದ್ಯಂ ನಾಶನಂ ಕಲ್ಮಷಾಣಾಂ
ಶರಣಮುಪಗತೋऽಹಂ ವಾಸುದೇವಂ ಶರಣ್ಯಂ ॥ ೧೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ವಾಸುದೇವಸ್ತೋತ್ರಂ ನಾಮ
ಸಪ್ತಚತ್ವಾರಿಂಶದಧಿಕ ತ್ರಿಶತತಮೋऽಧ್ಯಾಯಃ

---

೧೦. ಜಯಶಾಲಿಯೂ ಉತ್ಕೃಷ್ಟನೂ, ಅಜೇಯನೂ, ಸರ್ವವ್ಯಾಪಿಯೂ, ದೇವದೇವನೂ, ದೇವತೆಗಳ ಶತ್ರುಗಳನ್ನು ನಿಗ್ರಹಿಸುವುದರಲ್ಲಿ ನಿತ್ಯವೂ ಶಕ್ತಿಯಿಂದ ಕೂಡಿದವನೂ, ಬ್ರಾಹ್ಮಣರಿಂದಲೂ, ದೇವತೆಗಳಿಂದಲೂ, ನಮಸ್ಕರಿಸಲ್ಪಡುವವನೂ, ದೋಷಗಳ ನಿವಾರಕನೂ ಆದ ಸರ್ವರಕ್ಷಕನಾದ ವಾಸುದೇವನನ್ನು ಅನವರತವೂ ಶರಣು ಹೊಂದುತ್ತೇನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದ ಪ್ರಕರಣದಲ್ಲಿ ವಾಸುದೇವಸ್ತೋತ್ರನಿರೂಪಣೆಯೆಂಬ
ಮುನ್ನೂರ ನಲವತ್ತೇಳನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಅಷ್ಟಚತ್ವಾರಿಂಶದಧಿಕತ್ರಿಶತತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ವಸುನಾ ವಸುವೇಶೇನ ವಾಗ್ಮಿನಾ ವಿಷ್ಣುರೀಡಿತಃ ।
ಉವಾಚ ಪ್ರಾಂಜಲಿಂ ಪ್ರಹ್ವಂ ಪಾರ್ಥಿವಂ ಪುರತಃಸ್ಥಿತಂ ॥ ೧ ॥

॥ ವಾಸುದೇವ ಉವಾಚ ॥

ನಾನೃತಂ ನೃಪವಕ್ತವ್ಯಂ ಪ್ರಾಣೈಃ ಕಂಠಗತೈರಪಿ ।
ಧರ್ಮಪ್ರಶ್ನೋನವಕ್ತವ್ಯಃ ತಥೈಕೇನ ವಿಶೇಷತಃ ॥ ೨ ॥

ಬಹುಜ್ಞೇನಾಪಿ ಧರ್ಮಜ್ಞ ಧರ್ಮಕಾಮೇನ ಕರ್ಹಿಚಿತ್ ।
ದುರ್ವಿಜ್ಞೇಯಾಸ್ತಥಾ ಧರ್ಮಾಃ ಸೂಕ್ಷ್ಮಾ ರಾಜನ್ ದುರನ್ವಯಾಃ ॥ ೩ ॥

ಮುನ್ನೂರ ನಲವತ್ತೆಂಟನೆಯ ಅಧ್ಯಾಯ.

೧-೩. ಮಾರ್ಕಂಡೇಯರು ಹೇಳುತ್ತಾರೆ:—ವಸುವೇಷ ಉಳ್ಳ ವಸುವು ಬಹು ವಾಗ್ಮಿಯಾಗಿ ನಿಂತು ವಿಷ್ಣುವನ್ನು ಸ್ತೋತ್ರಮಾಡಿದನು. ಆಗ ಅಂಜಲಿಬಂಧ ಪುರಸ್ಸರವಾಗಿ ನಮ್ರನಾಗಿ ಮುಂದೆ ನಿಂತ ವಸುವನ್ನು ಕುರಿತು ವಿಷ್ಣುವು ಅಪ್ಪಣೆ ಮಾಡಿದನು—ವಾಸುದೇವನು ಹೇಳುತ್ತಾನೆ. ಎಲೈ ಧೊರೆಯೇ, ಪ್ರಾಣಗಳು ಕಂಠಗತವಾಗಿರುವ ಕಷ್ಟಕಾಲದಲ್ಲಿಯೂ ಸಹ ಅನೃತವನ್ನು ಹೇಳಬಾರದು. ತಾನೊಬ್ಬನೇ ಆಲೋಚಿಸಿ, ಧರ್ಮವಿಷಯವಾದ ಪ್ರಶ್ನೆಗಳನ್ನು ಉತ್ತರಿಸಬಾರದು. ಧರ್ಮಾಪೇಕ್ಷೆಯುಳ್ಳವನು ಎಷ್ಟೇ ಅಭಿಜ್ಞನಾಗಿದ್ದರೂ ಸಹ ಯಾವಾಗಲೂ ಧರ್ಮ ವಿಷಯವಾದ ವಿವಾದಗಳಿಗೆ ಕೈಹಾಕಬಾರದು. ಧರ್ಮಗಳು ಅಭಿಜ್ಞನಿಂದಲೂ ತಿಳಿಯಲು ಸಾಧ್ಯವಿಲ್ಲ. ಅವು ಅತಿಸೂಕ್ಷ್ಮ. ಅವುಗಳನ್ನು ಅಧಿಕಾರಿಗೆ ತಕ್ಕಂತೆ

ತಸ್ಮಾನ್ನೈಕೇನ ವಕ್ತವ್ಯಃ ಕದಾಚಿದಪಿ ಜಾನತಾ ।
ಉಕ್ತ್ವಾನೃತಂ ಮಹತ್ಪಾಪಂ ತ್ವಯಾ ಕೃಚ್ಛ್ರಂ ನರಾಧಿಪ ॥ ೪ ॥

ಗತಿಭ್ರಂಶಸ್ತಥೈವಾಪ್ತೋ ದೇವಯಜ್ಞಾರ್ಥವಾದಿನಾ ।
ಮಮಭಕ್ತೋಸಿಸತತಂ ತೇನ ತೇ ನಿಷ್ಕೃತಿಃ ಕೃತಾ ॥ ೫ ॥

ಕಾಲೇನಾಲ್ಪೇನಕಲ್ಪೇನ ಯಾ ನ ಶಕ್ಯಾಸುರಾಸುರೈಃ ।
ಗಚ್ಛಪಾಲಯರಾಜ್ಯಂ ತ್ವಂ ತಥೈವಾವಿಚಲೋಭವ ॥ ೬ ॥

ನಾವಮಾನಂ ತ್ವಯಾಕಾರ್ಯಂ ಬ್ರಾಹ್ಮಣಾನಾಂ ಕಥಂಚನ ।
ಬ್ರಾಹ್ಮಣೋಹಿ ಮಹದ್ಭೂತಂ ವಿಜ್ಞೇಯಂ ದೈವತಂ ಪರಂ ॥ ೭ ॥

॥ ಮಾರ್ಕಂಡೇಯ ಉವಾಚ ॥

ಏವಮುಕ್ತ್ವಾವಸುಂ ವಿಷ್ಣುಸ್ತತ್ರೈವಾದರ್ಶನಂ ಗತಃ ।
ತಾರ್ಕ್ಷ್ಯೇಣ ಸಹಿತೋ ರಾಜನ್ನಿಸ್ಥಿತಶ್ಚಾಭವದ್ವಸುಃ ॥ ೮ ॥

ಅನ್ವಯಿಸುವುದೂ ಕಷ್ಟ. ಆದುದರಿಂದ ಅಭಿಜ್ಞನಾದವನು ತಾನೊಬ್ಬನೇ ಆಲೋಚಿಸಿ ಧರ್ಮನಿರ್ಣಯವನ್ನು ಯಾವಾಗಲೂ ಹೇಳಬಾರದು. ಎಲೈ ಧೊರೆಯೇ, ನೀನೂ ಸಹ ದೇವಯಜ್ಞಾದಿ ಅರ್ಥವಿಷಯದಲ್ಲಿ ಬಹು ಅನೃತವನ್ನು ಹೇಳಿ ಕ್ಲೇಶಕರವಾದ ಮಹಾಪಾಪವನ್ನೂ, ಆಮುಷ್ಮಿಕಗತಿಭ್ರಂಶವನ್ನೂ ಹೊಂದಿದ್ದೀಯೆ. ಆದರೂ ಯಾವಾಗಲೂ ನನ್ನ ಭಕ್ತನಾಗಿಯೇ ನೀನು ಇರುವುದರಿಂದ ಆ ಪಾಪಗಳಿಗೆಲ್ಲಾ ಪ್ರಾಯಶ್ಚಿತ್ತವನ್ನು ಮಾಡಿದಂತಾಯಿತು.

೬-೯. ಈ ಅಲ್ಪಕಾಲದಲ್ಲಿ ಇಂತಹ ನಿಷ್ಕೃತಿಯನ್ನು ಹೊಂದಲು ಸುರಾಸುರರಿಂದಲೂ ಸಾಧ್ಯವಿಲ್ಲ. ನಡೆ ನಿನ್ನ ರಾಜ್ಯವನ್ನು ಪಾಲಿಸುತ್ತಾ ನಿಶ್ಚಿಂತನಾಗಿರು. ಬ್ರಾಹ್ಮಣರಿಗೆ ಅವಮಾನವನ್ನು ಸರ್ವಪ್ರಕಾರದಿಂದಲೂ ಮಾಡಬೇಡ. ಬ್ರಾಹ್ಮಣರೆಂದರೆ ದೊಡ್ಡ ದೇವತಾಸ್ವರೂಪರೆಂದು ತಿಳಿಯಬೇಕು. ಮಾರ್ಕಂಡೇಯರು ಹೇಳುತ್ತಾರೆ. ವಸುವನ್ನು ಕುರಿತು ಆ ವಿಷ್ಣುವು ಈ ರೀತಿ ಉಪದೇಶಿಸಿ ಅಲ್ಲಿಯೇ ಅಂತರ್ಧಾನ ಹೊಂದಿದನು. ಗರುಡನೊಡನೆ ಹೀಗೆ ಅಂತರ್ಧಾನ ಹೊಂದಿದ

ರಾಜ್ಯಂ ಚಾವಾಪ ಭೂಯೋಽಪಿ ಖೇಚರತ್ವಂ ತಥೈವ ಚ ।
ತತಃ ಸಭಾಜಿತಶ್ಚಾಪಿ ದೇವೈಃ ಸರ್ವೈಃ ಸಮಾಗತೈಃ ॥ ೯ ॥

ಏವಂ ಸ ದೇವೇನ ಹಿ ಭಕ್ತಿಯುಕ್ತೋ
ರಸಾತಲಸ್ಥೋ ವಸುಧಾಧಿಪೇಶಃ ।
ಭಯಾತ್ಸುಘೋರಾತ್ಪ್ರಮಿಮುಚ್ಯ
ಯುಕ್ತೋ ರಾಜ್ಯೇನ ಗತ್ವಾನಭಸಸ್ತಥೈವ ॥ ೧೦ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ವಸೂಪಾಖ್ಯಾನಂ ನಾಮಾಷ್ಟಚತ್ವಾರಿಂಶದಧಿಕ
ತ್ರಿಶತತಮೋಽಧ್ಯಾಯಃ

ವಿಷ್ಣುವನ್ನು ನೋಡಿ ವಸುವು ಆಶ್ಚರ್ಯಭರಿತನಾದನು. ರಾಜ್ಯವನ್ನೂ ಹೊಂದಿದನು. ಗಗನಚಾರಿಯಾಗಿ ಎಲ್ಲಾ ದೇವತೆಗಳಿಂದಲೂ ಸತ್ಕರಿಸಲ್ಪಟ್ಟನು. ಈ ರೀತಿ ಚಕ್ರವರ್ತಿಯಾದ ವಸುವು ವಿಷ್ಣುವಿನಲ್ಲಿ ಅಚಲವಾದ ಭಕ್ತಿಯಿಂದ ಪಾತಾಲವಲ್ಲಿ ವಾಸಿಸುತ್ತಾ ಘೋರವಾದ ಭಯದಿಂದಲೂ ಮುಕ್ತಿಹೊಂದಿದನು. ರಾಜ್ಯದಲ್ಲಿದ್ದುಕೊಂಡು ಆಕಾಶಚಾರಿಯಾಗಿಯೂ ಬದುಕಿದನು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ವಸೂಪಾಖ್ಯಾನವೆಂಬ ಮುನ್ನೂರ ನಲವತ್ತೆಂಟನೆಯ
ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕೋನಪಂಚಾಶದುತ್ತರ ತ್ರಿಶತತಮೋಽಧ್ಯಾಯಃ ||

|| ವಜ್ರ ಉವಾಚ ||

ವಿಶ್ವರೂಪಂ ಸಮಾಚಕ್ಷ್ವ ದೇವದೇವಸ್ಯ ಚಕ್ರಿಣಃ ।
ಕಸ್ಯ ತದ್ದರ್ಶಿತಂ ತೇನ ಭೃಗುವಂಶವಿವರ್ಧನ || ೧ ||

|| ಮಾರ್ಕಂಡೇಯ ಉವಾಚ ||

ಏಕಾಂತಭಾವನಾ ಭಕ್ತೈರ್ದೃಷ್ಟಾನಿ ಬಹುಶಃ ಪುರಾ ।
ವಿಶ್ವರೂಪಾಣಿ ದೇವಸ್ಯ ಯಾನ್ಯಶಕ್ಯಾನಿ ಭಾಷಿತುಂ || ೨ ||

ವಾಸುದೇವಪ್ರಸಾದೇನ ನ ಭವೇದ್ದಿವ್ಯದರ್ಶನಃ ।
ವಿಶ್ವರೂಪಧರಂ ದ್ರಷ್ಟುಂ ತಾವಚ್ಛಕ್ತಿರ್ನವಿದ್ಯತೇ || ೩ ||

ಮುನ್ನೂರ ನಲವತ್ತೊಂಭತ್ತನೆಯ ಅಧ್ಯಾಯ.

೧-೪. ವಜ್ರನು ಪ್ರಶ್ನೆಮಾಡುತ್ತಾನೆ :—ದೇವಾಧಿಪನಾದ ವಿಷ್ಣುವಿನ ವಿಶ್ವರೂಪವನ್ನು ಹೇಳಬೇಕು ಯಾರಿಗೆ ಅವನು ತೋರಿದನೆಂಬುದನ್ನೂ ಹೇಳಬೇಕು. ಮಾರ್ಕಂಡೇಯರು ಹೇಳುತ್ತಾರೆ—ಏಕಾಂತಿಗಳಾಗಿ ಭಗವಂತನನ್ನೇ .್ಯಾನಮಾಡಿದ ಭಕ್ತಾಗ್ರೇಸರರಿಂದ ಆ ವಿಶ್ವರೂಪಗಳು ಅನೇಕ ಬಾರಿ ನೋಡ ್ಪಟ್ಟವೆ. ಪ್ರಭುವಿನ ಅಂತಹ ವಿಶ್ವರೂಪಗಳನ್ನು ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ. ಆ ವಿಶ್ವರೂಪಧಾರಿಯಾದ ವಾಸುದೇವನನ್ನು ನೋಡಲು ಅವನ ಅನುಗ್ರಹ ಒಂದು ಹೊರತು ಬೇರೆ ಉಪಾಯವಿಲ್ಲ ಅದಿಲ್ಲದಿದ್ದಲ್ಲಿ ಅವನು ದಿವ್ಯದರ್ಶ ಹೊಂದುವುದಿಲ್ಲ. ಅಷ್ಟು ಶಕ್ತಿಯೂ ಉಂಟಾಗುವುದಿಲ್ಲ. ಈ ಸಂದರ್ಭದ

ತತ್ರ ಯದ್ದರ್ಶಿತಂ ಚೈವ ನಾರದಸ್ಯ ಪುರಾನಘ ।
ತತ್ತೇಹಂ ಸಂಪ್ರವಕ್ಷ್ಯಾಮಿ ವಿಶ್ವದೇವೇನ ವಿಷ್ಣುನಾ ॥ ೪ ॥

ನಾರದಃ ಸುಮಹದ್ಭೂತಂ ನರನಾರಾಯಣಾಶ್ರಯಂ ।
ಬದರ್ಯಾಶ್ರಮಮಿತ್ಯುಕ್ತಂ ಜಗಾಮಾತಿಮನೋಹರಂ ॥ ೫ ॥

ಚತುರಾತ್ಮಾ ಹರಿರ್ಯತ್ರ ಧರ್ಮಪುತ್ರತ್ವಮಾಗತಃ ।
ಹರಿಃ ಕೃಷ್ಣೋ ನರಶ್ಚೈವ ತಥಾ ನಾರಾಯಣಃ ಪ್ರಭುಃ ॥ ೬ ॥

ಹರಿಃ ಕೃಷ್ಣಃ ಸ್ಥಿತೋ ವೃತ್ತೇ ತದಾ ಲೋಕಾಂತರೇಕಿಲ ।
ನರನಾರಾಯಣೌ ದೇವೌ ತಪಸ್ಯುಗ್ರೇ ತಥಾ ರತೌ ॥ ೭ ॥

ಅಷ್ಟಚಕ್ರೇ ಸ್ಥಿತೌ ಯಾನೇ ಭೂತಿಯುಕ್ತೇ ಮನೋಹರೇ ।
ಏಕಪಾದೌ ನಿರಾಲಂಬೌ ತಥೈವೋರ್ಧ್ವಭುಜಾವುಭೌ ॥ ೮ ॥

ಪೂರ್ವಕಾಲದಲ್ಲಿ ನಾರದನಿಗೆ ವಿಶ್ವಮೂರ್ತಿಯಾದ ವಿಷ್ಣುವು ತನ್ನ ರೂಪವನ್ನು ತೋರಿಸಿದುದನ್ನು ನಿನಗೆ ಹೇಳುತ್ತೇನೆ. ಕೇಳು—

೫–೮. ನಾರದನು ಆಶ್ಚರ್ಯಕರವಾಗಿಯೂ, ನರನಾರಾಯಣರಿಗೆ ಆಶ್ರಯವಾಗಿಯೂ ಇರುವ ಬದರಿಕಾಶ್ರಮವೆಂದು ಪ್ರಸಿದ್ಧಿ ಹೊಂದಿದ ರಮ್ಯವಾದ ಆಶ್ರಮವನ್ನು ಹೊಂದಿದರು. ಯಾವ ಆ ಆಶ್ರಮದಲ್ಲಿಯೇ ಪ್ರಭುವಾದ ಹರಿಯು ಹರಿ, ಕೃಷ್ಣ, ನರ, ನಾರಾಯಣವೆಂಬ ನಾಲ್ಕು ಮೂರ್ತಿಹೊಂದಿ ಧರ್ಮಪುತ್ರನಾಗಿ ಅವತರಿಸಿದನೋ, ಯಾವ ಆ ಪ್ರಭುವು ಹರಿ, ಕೃಷ್ಣ ಎಂಬ ರೂಪಗಳಿಂದ ಲೋಕಾಂತರದಲ್ಲಿ ಪ್ರಸಿದ್ಧಿ ಹೊಂದಿದ್ದನೋ ಆ ಹರಿಯೇ ನರ, ನಾರಾಯಣ ರೂಪದಿಂದ ಉಗ್ರವಾದ ತಪಸ್ಸಿನಲ್ಲಿ ನಿರತನಾಗಿದ್ದನು. ಬಹು ವೈಭವದಿಂದ ಕೂಡಿದ ಎಂಟು ಚಕ್ರಗಳುಳ್ಳ ಯಾನದಲ್ಲಿ ಕುಳಿತೂ, ಒಂದೇ ಪಾದದಲ್ಲಿ ನಿಂತೂ ನಿರಾಶ್ರಯರಾಗಿ ಊರ್ಧ್ವಬಾಹುಗಳಾಗಿಯೂ ತಪಸ್ಸಿನಲ್ಲಿ ನಿರತರಾದ ತೇಜಸ್ವಿಗಳಾಗಿದ್ದ ಆ ಇಬ್ಬರನ್ನೂ ನೋಡಿದರು.

ದದರ್ಶನಾರದಸ್ತತ್ರ ತಾವುಭೌ ದೀಪ್ತತೇಜಸೌ ।
ಅಭಿವಾದ್ಯಗತೌ ದೇವೌ ತಯೋಸ್ತು ಪುರತಃ ಸ್ಥಿತಃ ॥ ೯ ॥

ಪಾದ್ಯಾರ್ಘ್ಯಾಚಮನೀಯಾದ್ಯೈಃ ಪೂಜಿತ ಸಂಸ್ತದಾ ದ್ವಿಜಃ ।
ನರನಾರಾಯಣಾಭ್ಯಾಂ ತು ತತ್ರೋವಾಸ ತದಾಶ್ರಮೇ ॥ ೧೦ ॥

ಆಶ್ರಮಸ್ಥಃ ಸ ವಿಪ್ರೇಂದ್ರಃ ಕದಾಚಿದ್ದೇವಸತ್ತಮೌ ।
ದದರ್ಶವಿಘ್ನಂ ಕುರ್ವಾಣೌ ದೇವಕರ್ಮ ತಥಾನಘೌ ॥ ೧೧ ॥

ತತಃ ಕೃತಾಹ್ನಿಕೋ ಪ್ರಾಹ ನಾರದಸ್ತೌ ಜಗದ್ಗುರೂ ।
ಭವಂತೌ ಜಗತಾಂ ನಾಥೌ ಭವಂತೌ ಪರಮೇಶ್ವರೌ ॥ ೧೨ ॥

ಆರಾಧನಾರ್ಥಂ ಕಸ್ಯೇಹ ತಪಸ್ಯ ಭಿರತಾವುಭೌ ।
ಭವದ್ಭ್ಯಾಮರ್ಚ್ಯತೇ ಕಶ್ಚ ದೈವೇ ಪಿತ್ರ್ಯೇ ಚ ಕಲ್ಪ್ಯತೇ ॥ ೧೩ ॥

೯-೧೩. ನಾರದರು ಬಂದೊಡನೆಯೇ ಆ ದೇವತೆಗಳಿಬ್ಬರೂ ಅವರಿಗೆ ವಂದಿಸಿದರು. ಆಗ ಮುಂದೆ ನಿಂತಿದ್ದ ನಾರದರನ್ನು ಆ ನರನಾರಾಯಣರು ಪಾದ್ಯಾರ್ಘ್ಯಾಚಮನೀಯಾದಿಗಳಿಂದ ಪೂಜಿಸಿದರು. ಹಾಗೆ ಸತ್ಕರಿಸಲ್ಪಟ್ಟ ನಾರದ ಮಹರ್ಷಿಯೂ ಅವರ ಆಶ್ರಮದಲ್ಲಿಯೇ ವಾಸಿಸುತ್ತಿದ್ದನು. ಆ ಆಶ್ರಮದಲ್ಲಿರುವಾಗಲೇ ಒಂದಾನೊಂದು ಕಾಲದಲ್ಲಿ ದೇವತೆಗಳಿಂದ ಅವರಿಗೆ ಉಂಟಾಗುವ ವಿಘ್ನವನ್ನೂ ನೋಡಿದನು. ಅನಂತರ ಆಹ್ನಿಕಾದಿಗಳನ್ನು ನೆರವೇರಿಸಿ ನಾರದಮಹರ್ಷಿಯು ಜಗದ್ಗುರುಗಳಾದ ಆ ದೇವತೆಗಳನ್ನು ಕುರಿತು ಹೀಗೆ ಪ್ರಶ್ನೆಮಾಡಿದನು. ನೀವೇ ಜಗತ್ಪತಿಗಳು, ನೀವೇ ಪರಮೇಶ್ವರರೂ ಆಗಿದ್ದೀರಿ. ಯಾರನ್ನು ಪೂಜಿಸಲು ಹೀಗೆ ತಪಸ್ಸನ್ನು ಮಾಡುತ್ತಿರುವಿರಿ. ದೈವಕರ್ಮದಲ್ಲಿಯಾಗಲಿ, ಪಿತೃಕರ್ಮದಲ್ಲಿಯಾಗಲಿ ನಿಮ್ಮಿಂದ ಪೂಜಿಸಲ್ಪಡತಕ್ಕವರಾರು.

ಪ್ರಕೃತಿರ್ಯಾ ಪರಾಸ್ಮಾಕಂ ಯತಃ ಸರ್ವಸ್ಯ ಸಂಭವಃ ।
ಮರ್ಯಾದಾವರ್ತನಾರ್ಥಾಯ ನವಂ ತಮಪರಾಜಿತಂ ॥ ೧೪ ॥

ಪೂಜಯಾಮಃ ಸದಾ ಬ್ರಹ್ಮನ್ ದೈವೇ ಪಿತ್ರ್ಯೇ ಚ ಕಲ್ಪಿತೇ ।
ವಿಪ್ರಾಂನೇವಗುರೂನ್ ಗಾಶ್ಚ ಪಿತೄಂಶ್ಚೈವ ಜಗತ್ರಯೇ ॥ ೧೫ ॥

ಯೋಽರ್ಚಯಂತ್ಯರ್ಚಯಂತ್ಯೇಷ ತಂದೇವಂ ಪರಮೇಶ್ವರಂ ।
ಯೋಽಯಮಭ್ಯರ್ಚಯೇದ್ದೇವಂ ತೇನಸ್ಯಾತ್ಪೂಜಿತೋಹರಿಃ ॥ ೧೬ ॥

ವಿಧಿಹೀನಂ ಮಹಾಭಾಗ ಸ ಹಿ ಸರ್ವಗತೋ ಯತಃ ।
ದೇವತಾ ನ್ಯಸ್ಯ ಯಶ್ಚಾರ್ಚಾಂ ಕರ್ತುಕಾಮೋಽರ್ಚಯೇದ್ಧರಿಂ ॥ ೧೭ ॥

ತೇನ ತಸ್ಯ ಕೃತಾ ಚಾರ್ಚಾ ಸ್ಯಾದ್ದ್ವಿಜಶ್ರೇಷ್ಠ ವಿಧಾನತಃ ।
ದೇವೇ ಯಸ್ಮಾತ್ಸುರಾಃ ಸರ್ವಂ ತ್ರೈಲೋಕ್ಯಮಪಿ ಯದ್ಗತಂ ॥ ೧೮ ॥

೧೪-೧೭. ನಮಗಿಂತಲೂ ಮೇಲಾದ ಜಗತ್ತಿಗೇ ಪ್ರಕೃತಿರೂಪವಾದ ಯಾವ ಪರಮಾತ್ಮನೆಂಬ ವಸ್ತುವಿರುವುದೋ, ಯಾವುದರಿಂದಲೇ ಸರ್ವವೂ ಉತ್ಪನ್ನವಾಗಿರುವುದೋ, ಅಂತಹ ಜಗತ್ಕಾರಣದಲ್ಲಿ ಮೊದಲನೆಯ ಎಲ್ಲೆಯಂತಿರುವ ಪರಾತ್ಪರ ವಸ್ತುವನ್ನೇ ಪಿತೃಕರ್ಮದಲ್ಲಿಯೂ, ದೇವಕರ್ಮದಲ್ಲಿಯೂ ಕಲ್ಪಿಸಿ ಪೂಜಿಸುತ್ತೇವೆ. ಬ್ರಾಹ್ಮಣರನ್ನೂ, ದೇವತೆಗಳನ್ನೂ, ಗುರುಗಳನ್ನೂ, ಗೋವುಗಳನ್ನೂ, ಪಿತೃಗಳನ್ನೂ ಈ ಮೂರುಲೋಕದಲ್ಲಿ ಯಾರು ಪೂಜಿಸುತ್ತಾರೆಯೋ, ಅವರು ಆ ಪರಮೇಶ್ವರನನ್ನೇ ಪೂಜಿಸುತ್ತಾರೆ. ಯಾವನೊಬ್ಬನು ಹಾಗೆ ದೇವತೆಯನ್ನು ಪೂಜಿಸುತ್ತಾನೆಯೋ ಅವನು ಹರಿಯನ್ನೇ ಪೂಜಿಸುತ್ತಾನೆ. ಹರಿಯು ಸರ್ವವ್ಯಾಪಕನಾಗಿರುವುದರಿಂ ಯಾವನೊಬ್ಬನು ವಿಧಿನಿಯಮಗಳನ್ನು ಬಿಟ್ಟು ಅನ್ಯದೇವತೆಯನ್ನು ಪೂಜಿಸಲು ಅಪೇಕ್ಷಿಸಿಯೂ ಹರಿಯನ್ನು ಪೂಜಿಸಿದ್ದೇ ಆದರೆ ಅದೂ ವಿಧಿಪೂರ್ವಕವಾಗಿ ಹರಿಯನ್ನೇ ಪೂಜಿಸಿದಂತಾಗುತ್ತದೆ.

೧೮-೨೧. ಯಾವ ಕಾರಣದಿಂದ ವಿಷ್ಣುವಿನಲ್ಲಿ ಎಲ್ಲಾ ದೇವತೆಗಳೂ ನೆಲೆಸಿರುವರೋ, ಮೂರುಲೋಕಗಳೂ ಅಡಗಿರುವವೋ ಆದರಿಂದಲೇ ವಿಷ್ಣುವಿನ ಪೂಜೆಯನ್ನು ಮಾಡಿದವನು ಮೂರು ಲೋಕವನ್ನೂ ಪೂಜಿಸಿದಂತಾಗುತ್ತದೆ. ಲೋಕದಲ್ಲಿ

ಕೃತಾ ತ್ರೈಲೋಕ್ಯಪೂಜಾಸ್ಯಾದ್ವಿಷ್ಣುಪೂಜಾವಿಧಾಯಿನಾ ।
ನಾಸ್ತಿಲೋಕೇಷುತದ್ಬ್ರಹ್ಮ ಯತ್ರನಾಸ್ತಿ ಜನಾರ್ದನಃ ॥ ೧೯ ॥

ನ ತದಸ್ತ್ಯಸ್ತಿಲೋಕೇಷು ಯನ್ನವಿಷ್ಣೌ ಪ್ರತಿಷ್ಠಿತಂ ।
ಯಸ್ಮಿನ್ಸರ್ವಂ ಯತಃಸರ್ವಂ ಯಃಸರ್ವಂ ಸರ್ವತಶ್ಚಯಃ ॥ ೨೦ ॥

ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ।
ಕ್ಷೀರೋದಮಧ್ಯೆದ್ವೀಪೋಽಸ್ತಿ ಬಹುಯೋಜನವಿಸ್ತೃತಃ ॥ ೨೧ ॥

ತತ್ರತೇ ಪುರುಷಾಃ ಶ್ವೇತಾಃ ಶಶಾಙ್ಕಸಮತೇಜಸಃ ।
ಉಪೇತಾಶ್ಚ ತಥಾಸರ್ವೇ ಚಕ್ರವರ್ತ್ಯಙ್ಗಲಕ್ಷಣೈಃ ॥ ೨೨ ॥

ಪಂಚರಾತ್ರವಿಧಾನಜ್ಞಾಃ ಪೂಜಯಂತಿ ಸದಾ ಹರಿಂ ।
ಮಾಯಾದೇಹಮಥಾಸ್ಥಾಯ ದೇವೋಽಪಿ ಮಧುಸೂದನಃ ॥ ೨೩ ॥

ತತ್ಪೂಜಾಂ ಪ್ರತಿಗೃಹ್ಣಾತಿ ಶಿರಸಾ ಸತತಂ ಹರಿಃ ।
ತೈಃ ಸಾರ್ಧಂ ರಮತೇ ನಿತ್ಯಂ ತೈಶ್ಚ ಸಂಪೂಜ್ಯತೇ ಸದಾ ॥ ೨೪ ॥

ಜನಾರ್ಧನನು ನೆಲಸದಿರುವ ಉನ್ನತವಸ್ತುವಾವುದೂ ಇಲ್ಲ ವಿಷ್ಣುವಿನಲ್ಲಿ ಅಂತರ್ಗತವಾಗದಿರುವ ಯಾವ ವಸ್ತುವೂ ಸಹ ಲೋಕದಲ್ಲಿಲ್ಲ. ಯಾವ ವಿಷ್ಣುವಿನಲ್ಲಿ ಸರ್ವವೂ ನಿಂತಿರುವುದೋ, ಉಪಾದಾನಕಾರಣನಾದ ಯಾವ ವಿಷ್ಣುವಿನಿಂದ ಸರ್ವವೂ ಉಂಟಾಗಿರುವುದೋ ಸರ್ವೋಪಾದಾನನಾಗಿ ಸರ್ವವಸ್ತುಸ್ವರೂಪನೂ ಸರ್ವವ್ಯಾಪಕನೂ ಸಹ ಯಾವ ವಿಷ್ಣುವೇ ಆಗಿರುವನೋ, ಸರ್ವಸ್ವರೂಪನೂ ಸರ್ವಾತ್ಮಕನೂ ಆದ ಆ ವಿಷ್ಣುವಿಗೆ ನಮಸ್ಕಾರಗಳು. ಕ್ಷೀರಸಮುದ್ರದ ಮಧ್ಯದಲ್ಲಿ ಅನೇಕಯೋಜನ ವಿಸ್ತಾರಉಳ್ಳ ಒಂದು ದ್ವೀಪವಿದೆ.

೨೨-೨೭. ಆ ದ್ವೀಪದಲ್ಲಿ ಚಂದ್ರನಂತೆ ಶುಭ್ರವರ್ಣಉಳ್ಳ ಅನೇಕ ಪುರುಷರು ಚಕ್ರವರ್ತಿಲಕ್ಷಣಗಳಿಂದ ಅಲಂಕೃತರಾಗಿಯೂ, ಪಾಂಚರಾತ್ರವಿಧಾನವನ್ನು ತಿಳಿದವರಾಗಿಯೂ ಇದ್ದು ಯಾವಾಗಲೂ ಹರಿಯನ್ನು ಪೂಜಿಸುತ್ತಿರುತ್ತಾರೆ. ಮಧುಸೂದನರೂಪಿಯಾದ ಹರಿಯೂ ಸಹ ತನ್ನ ಇಚ್ಛೆಯಿಂದ ಕಲ್ಪಿತವಾದ ವಿಚಿತ್ರ ದೇಹವನ್ನು ಹೊಂದಿ ಅವರ ಪೂಜಾದಿಗಳನ್ನೂ ಯಾವಾಗಲೂ ಶಿರಸಾವಹಿಸುತ್ತಾನೆ.

ಏಕಾಂತ ಭಾವೋಪಗತಾ ಯೇ ಭವಂತೀಹ ಮಾನವಾಃ ।
ಅತಾಮಾಕ್ಷ ಜಗನ್ನಾಥಮರ್ಚಯಂತಿ ಸದಾ ಚ ಯೇ ॥ ೨೫ ॥

ತೇ ಯಾಂತಿ ದೇಹಮುತ್ಸೃಜ್ಯ ತದ್ದ್ವೀಪಂ ಶ್ವೇತಸಂಜ್ಞಿತಂ ।
ಅನಿಷ್ಯನ್ದಾ ನಿರಾಹಾರಾಃ ಸರ್ವಜ್ಞಾಃ ಸರ್ವದರ್ಶಿನಃ ॥ ೨೬ ॥

ಸರ್ವೇಶ್ವರಾ ನಿತ್ಯತೃಪ್ತಾಃ ಪರಂ ಸುಖಮುಪಾಗತಾಃ ।
ಪೂಜಯಂತಿ ಹರಿಂ ತತ್ರ ದಿವ್ಯಂ ವರ್ಷಶತಂ ಪುನಃ ॥ ೨೭ ॥

ತತೋಽರ್ಕಮಂಡಲಂ ಭಿತ್ವಾ ಅನಿರುದ್ಧಂ ವಿಶಂತಿ ತೇ ।
ಬ್ರಹ್ಮಂ ಸ್ತಪೋಭಿಃ ಪ್ರದ್ಯುಮ್ನಂ ತತ ಸಂಕರ್ಷಣಂ ಪ್ರಭುಂ ॥ ೨೮ ॥

ವಾಸುದೇವಂ ತತಃ ಪ್ರಾಪ್ಯ ತೇ ನೈವ ಸದೃಶಾಸ್ತತಃ ।
ಭವಂತಿ ಸರ್ವೇ ಸರ್ವತ್ರ ಸರ್ವದಾ ಸರ್ವ ಶಕ್ತಯಃ ॥ ೨೯ ॥

ಅವರೊಡನೆ ವಿಹರಿಸುತ್ತಾನೆ. ಪೂಜಿತನಾಗಿಯೂ ಇರುತ್ತಾನೆ. ಅಂತಹವಿಷ್ಣುವಿನಲ್ಲಿಯೂ ಯಾವ ಪುರುಷರು ಅನನ್ಯ ದೇವತಾಕರಾಗಿ (ತದೇಕಪಾರಾಯಣರಾಗಿ) ನಿಷ್ಕಾಮ ಬುದ್ಧಿಯಿಂದ ಪೂಜಿಸುತ್ತಾರೆಯೋ ಅವರು ಜಗತ್ಪತಿಯಾದ ಅವನ ಅನುಗ್ರಹದಿಂದ ಪ್ರಾಕೃತದೇಹವನ್ನು ತ್ಯಜಿಸಿ ಶ್ವೇತದ್ವೀಪವನ್ನು ಹೊಂದುತ್ತಾರೆ. ಅಲ್ಲಿ ಯಾವುದೊಂದು ವಿಧವಾದ ದೇಹಮಲ ವಿಲ್ಲದವರಾಗಿಯೂ, ನಿರಾಹಾರರಾಗಿಯೂ, ಸರ್ವಜ್ಞರಾಗಿಯೂ, ಸರ್ವಸಾಕ್ಷಾತ್ಕಾರಿಗಳಾಗಿಯೂ, ಸರ್ವೇಶ್ವರನಂತೆ ನಿತ್ಯತೃಪ್ತರಾಗಿಯೂ ಸುಖಿಗಳಾಗಿಯೂ ಇದ್ದು ಅನೇಕವರ್ಷ ಪರ್ಯಂತವೂ ಹರಿಯನ್ನು ಪೂಜಿಸುತ್ತಾರೆ.

೨೮-೩೨. ಅಲ್ಲಿಂದ ಅವರು ಸೂರ್ಯಮಂಡಲವನ್ನು ಭೇಧಿಸಿಕೊಂಡು ಅನಿರುದ್ಧನನ್ನು ಹೊಂದುತ್ತಾರೆ. ಅಲ್ಲಿಂದ ತಮ್ಮ ತಪೋಬಲದಿಂದಲೇ ಪ್ರದ್ಯುಮ್ನನನ್ನೂ ಪ್ರಭುವಾದ ಸಂಕರ್ಷಣನನ್ನೂ ಹೊಂದಿ ಕ್ರಮವಾಗಿ ವಾಸುದೇವನನ್ನು ಹೊಂದಿ ಅವನೊಡನೆ ಸಮಾನಾಕಾರನಾಗಿ ಸರ್ವಕಾಲದಲ್ಲಿಯೂ, ಸರ್ವವ್ಯಾಪಕರಾಗಿಯೂ, ಸರ್ವಶಕ್ತರಾಗಿಯೂ ಇರುತ್ತಾ ಸರ್ವದುಃಖರಹಿತರಾಗಿ ಅಪ್ರಾಕೃತ

ಮುಕ್ತಾಶ್ಚ ಸರ್ವ ದುಃಖೇಭ್ಯಃ ಪರಂ ಸುಖಮುಪಾಗತಾಃ ।
ಸತ್ವಂ ಶೀಘ್ರ ಮಿತೋ ಗತ್ವಾ ಶ್ವೇತದ್ವೀಪನಿವಾಸಿನಃ ॥ ೩೦ ॥

ಪಶ್ಯ ತ್ವಂ ಪುರುಷಾನ್ ಬ್ರಹ್ಮನ್ ಪ್ರಸನ್ನಃ ಸ ವಿಭುಸ್ತವ ।
ದರ್ಶಯಿಷ್ಯತಿ ರೂಪಂತು ತ್ರೈಲೋಕ್ಯಾದ್ಭುತಮದ್ಭುತಂ ॥ ೩೦ ॥

ವಿಶ್ವಂ ಬ್ರಾಹ್ಮಣಶಾರ್ದೂಲ ಪ್ರೀತಂ ಮಧುನಿಷೂದನಂ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹಾ ತಪಾಃ ॥ ೩೨ ॥

ತಂ ತು ದೇಶಂ ಗತಾ ಬ್ರಹ್ಮನ್ ನ ತೈಃ ದೃಷ್ಟೋ ಜನಾರ್ದನಃ ।
ಏಕಾಂತಭಾವೋಪಗಾತಾಸ್ತೇನ ಯಸ್ಮಾಜ್ಜಗದ್ಗುರೋಃ ॥ ೩೩ ॥

ಕೇವಲಂ ತೈಃ ಶ್ರಿತಃ ಶ್ಲೋಕಃ ಶ್ವೇತದ್ವೀಪನಿವಾಸಿಭಿಃ ।
ಉದೀರಿತೋ ಮಹಾಭಾಗೈಃ ಸರ್ವಕಲ್ಮಷವರ್ಜಿತೈಃ ॥ ೩೪ ॥

ವಾದ ಉತ್ತಮ ಸುಖವನ್ನು ಹೊಂದುತ್ತಾರೆ. ಆದುದರಿಂದ ಇಂತಹ ಪುರುಷಾರ್ಥಾಪೇಕ್ಷಿಯಾದ ನೀನು ಈಗಲೇ ಇಲ್ಲಿಂದ ಶ್ವೇತದ್ವೀಪವನ್ನು ಸೇರಿ ಅಲ್ಲಿರುವ ಭಗವದ್ಭಕ್ತರನ್ನು ನೋಡು. ಮಹಾಪ್ರಭುವಾದ ವಾಸುದೇವನು ನಿನ್ನ ವಿಷಯದಲ್ಲಿ ಪ್ರಸನ್ನನಾಗಿ ಮೂರು ಲೋಕದಲ್ಲಿಯೂ ಅತ್ಯಾಶ್ಚರ್ಯಕರವಾದ ತನ್ನ ರೂಪವನ್ನು ತೋರಿಸುತ್ತಾನೆ. ವಿಶ್ವರೂಪಿಯಾಗಿಯೂ, ಮಧುನಾಶಕನಾಗಿಯೂ, ಭಕ್ತರಲ್ಲಿ ಪ್ರಸನ್ನಮುಖನಾಗಿಯೂ ಇರುವ ಆ ಪ್ರಭುವನ್ನು ನೋಡಲು ಎರಡು ಮೂರು ಬಾರಿ ಅನೇಕರು ಹೋಗಿದ್ದರು ಅವರಿಗೆ ಆ ಪ್ರಭುವು ಗೋಚರನಾಗಲಿಲ್ಲ.

೩೩–೩೭. ಅವರು ಜಗದ್ಗುರುವಾದ ಪರಮಾತ್ಮನ ವಿಷಯದಲ್ಲಿ ಏಕಾಂತಭಾವನೆಯುಳ್ಳವರಾಗಿರಲಿಲ್ಲ. ಆಗ ಶ್ವೇತದ್ವೀಪವಾಸಿಗಳಾದ ಏಕಾಂತಭಾವನೆಯುಳ್ಳವರು ಈ ಶ್ಲೋಕವನ್ನು ಹೇಳಿದರು. ಅವರು ಮಹಾತ್ಮರೂ ಸರ್ವಪಾಪರಹಿತರೂ ಆಗಿದ್ದರು. ಆ ಶ್ಲೋಕವೂ ಸಹ ಈ ರೀತಿಯ ಅರ್ಥಕೊಡುವಂತಿತ್ತು. ಎಲೈ ಪುಂಡರೀಕಾಕ್ಷನೇ, ವಿಶ್ವಸೃಷ್ಟಿಗೆ ಕಾರಣನೇ, ನೀನು ಸರ್ವೋತ್ತಮನಾಗಿದ್ದೀಯೆ, ನಿನಗೆ ನಮಸ್ಕಾರಗಳು. ಎಲೈ ಹೃಷೀಕೇಶನೇ, (ಇಂದ್ರಿಯಗಳಿಗೆ

ಜಿತಂ ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥ ೩೫ ॥

ಶ್ಲೋಕಮೇತಂ ತು ತೇ ಶ್ರುತ್ವಾ ಶ್ರುತವನ್ತಸ್ತಥಾ ಗಿರಂ ।
ಅಶರೀರಾಂ ಮಹಾಭಾಗ ಸರ್ವಭೂತಾವಹಾಂ ಹರೇಃ ॥ ೩೬ ॥

ಶ್ವೇತದ್ವೀಪಮಥಾಸಾದ್ಯ ಮೃತ್ಯುಮಾಪ್ನೋತಿ ಕರ್ಹಿಚಿತ್ ।
ಶ್ವೇತದೀಪೇ ಗತಿರ್ನಾಸ್ತಿ ವಿನಾ ಚೈಕಾಂತಿಭಿರ್ದ್ವಿಜಾಃ ॥ ೩೭ ॥

ಸಾಮಾನ್ಯ ಭಾವನಾ ಭಕ್ತ್ಯಾ ಭವಂತಶ್ಚ ತಪೋಧನಾಃ ।
ತಪಸೋಗ್ರೇಣ ಸಂಯುಕ್ತಾಸ್ತೇನ ಮೇ ದೇಶಮಾಗತಾಃ ॥ ೩೮ ॥

ಸಾಮಾನ್ಯ ಭಕ್ತಿಸತ್ತ್ವಾಶ್ಚ ಪುನರ್ವ್ರಜತ ಮಾ ಚಿರಂ ।
ಭವದ್ಭಿಃ ಪುರುಷಾ ದೃಷ್ಟಾಃ ಶ್ವೇತದ್ವೀಪನಿವಾಸಿನಃ ॥ ೩೯ ॥

ಏಭಿಃ ಶ್ಲೋಕೈಸ್ತಥಾ ದೃಷ್ಟೋ ಭವತೀತಿ ಜನಾರ್ದನಃ ।
ಏಕಾಂತ ಭಾವನಾಸಕ್ತೈಃ ಶ್ಲೋಕೈಸ್ತು ಪುರುಷೈರಿಮಂ ॥ ೪೦ ॥

ನಿಯಾಮಕನೇ) ಪುರಾತನನಾದ ಮಹಾಪುರುಷನೇ ನಿನಗೆ ನಮಸ್ಕಾರಗಳು—ಈ ಶ್ಲೋಕವನ್ನು ಅವರೂ ಕೇಳಿದರು. ಕೇಳಿದೊಡನೆಯೇ ಸರ್ವಪ್ರಾಣಿಗಳಿಗೂ ಜೀವನ ಪ್ರದನಾದ ಹರಿಯ ಅಶರೀರವಾಣಿಯನ್ನು ಕೇಳಿದರು. ಆದುದರಿಂದ ಶ್ವೇತದ್ವೀಪಕ್ಕೆ ಹೋಗಿ ಅಲ್ಲಿರುವ ಭಗವದ್ಭಕ್ತರೊಡನೆ ಕೂಡಿರುವ ಯಾವನೂ ಮೃತ್ಯುವಿಗೆ ವಶ ವಾಗುವುದಿಲ್ಲ. ಏಕಾನ್ತಭಾವನೆ ಇಲ್ಲದಿರುವವರಿಗೆ ಶ್ವೇತದ್ವೀಪಕ್ಕೆ ಹೋಗಲು ಅವಕಾಶವೇ ಇಲ್ಲ.

೩೮–೪೧. ಎಲೈ ತಪಸ್ವಿಗಳೇ, ನೀವು ತಪಸ್ವಿಗಳಾಗಿದ್ದಾಗ್ಯೂ ಸಾಮಾನ್ಯ ಭಾವನೆಯಿಂದ ಕೂಡಿದವರಾಗಿರುತ್ತೀರಿ. (ವಾಸುದೇವನೇ ಅಸಾಧಾರಣ ದೇವತೆ ಯೆಂಬ ಭಾವನೆಯು ನಿಮಗೆ ಉಂಟಾಗಿಲ್ಲವೆಂದು ತಾತ್ಪರ್ಯ) ಉಗ್ರವಾದ ತಪಸ್ಸನ್ನು ಹೊಂದಿದ್ದುದರಿಂದ ಈ ಸ್ಥಳಕ್ಕೆ ಬಂದಿದ್ದೀರಿ ಈ ಸಾಮಾನ್ಯ ಭಕ್ತಿಯಿಂದಲೇ ಕೂಡಿ ಜಾಗ್ರತೆಯಾಗಿ ಹಿಂದಿರುಗಿರಿ. ನೀವು ಶ್ವೇತದ್ವೀಪವಾಸಿಗಳಾದ ಮಹಾಪುರುಷ ರನ್ನು ನೋಡಿದ್ದೇ ಆದರೆ. ಈ ಶ್ಲೋಕಗಳಿಂದ ಜನಾರ್ದನನ ದರ್ಶನವು ನಿಮಗೆ

ಜಪ್ತವ್ಯಂ ಸತತಂ ವಿಪ್ರಾಃ ತತಃ ಪುನರಿಹೇಷ್ಯಥ ।
ಶ್ಲೋಕೋsಯಂ ಪಾವನಃ ಪುಣ್ಯಃ ಸರ್ವಾಘವಿನಿಷೂದನಃ ॥ ೪೦ ॥

ಶ್ಲೋಕೈರ್ಭಾವೇನ ಕರ್ತವ್ಯೌ ಜಪಹೋಮೌ ವಿಜಾನತಾ ।
ಧೂಪದೀಪಾನ್ನಪುಷ್ಪಾಣಾಂ ತಥೈವ ಚ ನಿವೇದನಂ ॥ ೪೨ ॥

ಶ್ಲೋಕಮೇತಂ ಪಠೇದ್ವಿಪ್ರಾ ನಮಸ್ಕಾರೇ ಪ್ರದಕ್ಷಿಣೇ ।
ಸ್ನಾನಮೇತೇನ ಕರ್ತವ್ಯಂ ತಥಾಚಾಂತೇ ಜಲಂ ದ್ವಿಜಾಃ ॥ ೪೩ ॥

ಸರ್ವಪಾಪಹರಂ ಪುಣ್ಯಂ ಮೋಕ್ಷದಂ ಸರ್ವಕಾಮದಂ ।
ಶ್ಲೋಕ ಏಷವಿನಿರ್ದಿಷ್ಟಃ ಸರ್ವಕಾಮಪ್ರದಃ ಶಿವಃ ॥ ೪೪ ॥

ಆಪತ್ಪ್ರಾಪ್ತೇನ ಜಪ್ತವ್ಯಂ ತನ್ಮೋಕ್ಷಾರ್ಥಂ ತಥೈವ ಚ ।
ಏತಸ್ಯ ಜಾಪಃ ಕರ್ತವ್ಯೋ ನಿತ್ಯಮೇವ ವಿಜಾನತಾ ॥ ೪೫ ॥

ಉಂಟಾಗುತ್ತದೆ. ಏಕಾಂತವಾದ ಭಕ್ತಿಭಾವದಿಂದ ಕೂಡಿರುವ ಪುರುಷರು ಈ ಶ್ಲೋಕಗಳನ್ನು ಯಾವಾಗಲೂ ಜಪಿಸುತ್ತಿರಬೇಕು. ಅನಂತರ ಇಲ್ಲಿಗೆ ಪುನಃ ಬನ್ನಿರಿ. ಈ ಶ್ಲೋಕವು ಪವಿತ್ರವೂ, ಪುಣ್ಯಕರವೂ, ಸರ್ವಪಾಪನಾಶಕವೂ ಆಗಿರುತ್ತದೆ.

೪೨-೪೫. ಭಕ್ತಿಯಿಂದ ಕೂಡಿದ್ದು ಈ ಶ್ಲೋಕಗಳಿಂದಲೇ ಜಪ, ಹೋಮಗಳನ್ನೂ ಮಾಡಬೇಕು. ಧೂಪ, ದೀಪ, ಅನ್ನ, ಪುಷ್ಪಗಳು ಇವನ್ನೂ ಈ ಶ್ಲೋಕಗಳಿಂದಲೇ ಅರ್ಪಿಸಬೇಕು. ನಮಸ್ಕಾರ ಮತ್ತು ಪ್ರದಕ್ಷಿಣೆ ಇವನ್ನು ಮಾಡುವಾಗಲೂ ಸಹ ಈ ಶ್ಲೋಕಗಳನ್ನೇ ಪಠಿಸಬೇಕು. ಸ್ನಾನವನ್ನೂ ಆಚಮನದಲ್ಲಿ ಜಲಪಾನವನ್ನೂ ಸಹ ಇವುಗಳಿಂದಲೇ ಮಾಡಬೇಕು. ಈ ಶ್ಲೋಕವು ಸರ್ವಪಾಪ ನಿವರ್ತಕವೂ, ಮೋಕ್ಷಪ್ರದವೂ, ಇಷ್ಟಾರ್ಥಪ್ರದವೂ ಆಗಿದೆ. ಕಷ್ಟಕ್ಕೆ ಸಿಕ್ಕಿದವನು ಆ ಕಷ್ಟದ ನಿವಾರಣೆಗಾಗಿ ಈ ಶ್ಲೋಕವನ್ನು ಜಪಿಸಬೇಕು. ವಿವೇಕಿಯಾದವನು ನಿತ್ಯವೂ ಇದನ್ನು ಜಪಿಸಿದಲ್ಲಿ ಎಲ್ಲಾ ಮನೋರಥಗಳೂ ಸಿದ್ಧಿಸುತ್ತವೆ.

ಏತಸ್ಯ ಜಾಪಾತ್ಪುರುಷಃ ಸರ್ವಾನ್ಕಾಮಾನುಪಾಶ್ನುತೇ ।
ಏತಾಂ ಶ್ರುತ್ವಾ ತು ತೇ ವಾಣೀಂ ಚಾಗತಾ ಮಗಧಾಃ ಪುನಃ ॥ ೪೬ ॥

ದೃಷ್ಟವಂತೋ ವಸುಂ ತತ್ರ ಯಜಮಾನಂ ಮಹೀಪತಿಂ ।
ಯಾಜಕೋ ಯಸ್ಯ ಧರ್ಮಾತ್ಮಾ ದೇವಾಚಾರ್ಯೋ ಬೃಹಸ್ಪತಿಃ ॥ ೪೭ ॥

ಅದೃಶ್ಯೇನ ಹೃತೋ ಭಾಗಸ್ತತ್ರ ದೇವೇನ ವಿಷ್ಣುನಾ ।
ಜಗೃಹುರ್ದೇವತಾಃ ಸರ್ವಾ ದೃಶ್ಯಭಾಗಾ ತ್ಪುರೋಧಸಃ ॥ ೪೮ ॥

ವಿಷ್ಣುಂಪ್ರತಿ ಗತಕ್ರೋಧಂ ದೇವಾಚಾರ್ಯಂ ಬೃಹಸ್ಪತಿಂ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವಮುವೋಚತ ॥ ೪೯ ॥

ಅದೃಶ್ಯಃ ಸರ್ವದೇವಾನಾಂ ತಂ ಕಥಂ ದ್ರಷ್ಟುಮಿಚ್ಛಸಿ ।
ಇತ್ಯೇವ ಮನುನೀತಸ್ತು ದೇವಾಚಾರ್ಯೋ ಬೃಹಸ್ಪತಿಃ ॥ ೫೦ ॥

೪೬-೫೦. ಇಂತಹ ವಾಣಿಯನ್ನು ಕೇಳಿ ಆ ಮಗಧರು ಪುನಃ ಅಲ್ಲಿಂದ ಹಿಂದಕ್ಕೆ ಬಂದು ಯಜ್ಞದಲ್ಲಿ ಯಜಮಾನನಾಗಿದ್ದ ವಸುಭೂಪತಿಯನ್ನು ನೋಡಿದರು. ಆ ಯಜ್ಞದಲ್ಲಿ ದೇವಾಚಾರ್ಯನಾದ ಬೃಹಸ್ಪತಿಯೇ ಅವನಿಗೆ ಯಾಜಕನಾಗಿದ್ದನು ಆ ಯಜ್ಞದಲ್ಲಿ ಪ್ರಭುವಾದ ವಿಷ್ಣುವು ಅದೃಶ್ಯನಾಗಿದ್ದೇ ತನ್ನ ಯಜ್ಞಭಾಗವನ್ನು ಅಪಹರಿಸಿದನು. ದೇವತೆಗಳೂ, ಪುರೋಹಿತರೂ ದೃಶ್ಯರಾಗಿದ್ದೇ ತಮ್ಮತಮ್ಮ ಭಾಗಗಳನ್ನು ಸ್ವೀಕರಿಸಿದರು ವಿಷ್ಣುವಿನ ವಿಷಯದಲ್ಲಿ ಕೋಪ ಹೊಂದಿದ್ದ ಆ ಬೃಹಸ್ಪತ್ಯಾಚಾರ್ಯನನ್ನು ಅಲ್ಲಿದ್ದ ಇತರ ಋತ್ವಿಜರೇ ಮೊದಲಾದವರು ಒಬ್ಬೊಬ್ಬರಾಗಿಯೂ, ಇಬ್ಬಿಬ್ಬರಾಗಿಯೂ, ಹೆಚ್ಚುಮಂದಿ ಕೂಡಿಯೂ ಹೀಗೆ ಹೇಳಿದರು. ಸರ್ವದೇವತೆಗಳಿಗೂ ಅದೃಶ್ಯನಾದ ಆ ವಿಷ್ಣುವನ್ನು ನೀನು ಹೇಗೆ ನೋಡಲು ಆಶಿಸುತ್ತಿದ್ದೀಯೆ! ಹೀಗೆ ಅನುನಯದಿಂದ ಸಮಾಧಾನಹೊಂದಿದ ಬೃಹಸ್ಪತ್ಯಾಚಾರ್ಯನು ಘೊರಿಯ ಆ ಯಜ್ಞವನ್ನು ಅಲ್ಲಿಗೇ ಮುಗಿಸಿದನು.

ಸಮಾಪಯೋಮಾಸ ತದಾ ತಂ ಯಜ್ಞಂ ಪಾರ್ಥಿವಸ್ಯ ಚ ।
ಏಕಾಂತ ಭಾವೋಪಗತಾ ಋಷಯೋಽಪಿ ಜನಾರ್ದನಂ ॥ ೫೧ ॥

ಆಗತಾ ದೇವಕಾರ್ಯಾರ್ಥಂ ಶ್ವೇತದ್ವೀಪಾತ್ಪುರಾ ದ್ವಿಜ ।
ಶ್ವೇತದ್ವೀಪಂ ಪುನಃ ಪ್ರಾಪ್ತಂ ಪುನರಾವೃತ್ತಿ ದುರ್ಲಭಂ ॥ ೫೨ ॥

ತಸ್ಮಾತ್ತ್ವಂ ದೇವದೇವೇಶಂ ತತ್ರಸ್ಥಂ ಪಶ್ಯನಾರದ ।
ತ್ವಯಾಪಿ ದೇವಕಾರ್ಯಾಣಿ ಕರ್ತವ್ಯಾನಿ ಬಹೂನ್ಯಥ ॥ ೫೩ ॥

ಶ್ವೇತದ್ವೀಪಗತಸ್ಯಾಪಿ ತೇನ ತೇ ದ್ವಿಜಸಾಂಪ್ರತಂ ।
ನ ಭವಿಷ್ಯತಿ ಲೋಕೇಷು ಗತಿರ್ನಿರ್ವಾಹಕಾರಿಣೀ ।
ಕಲ್ಪಾವಸಾನೇ ತು ಗತಿಂ ತಾಂ ತ್ವಂ ವಿಪ್ರ ಗಮಿಷ್ಯಸಿ ॥ ೫೪ ॥

॥ ಮಾರ್ಕಂಡೇಯ ಉವಾಚ ॥

ಏವಮುಕ್ತಃ ತತಃ ಶೀಘ್ರಂ ಮನೋಮಾರುತರಂಹಸಾ ।
ಅಭಿವಾದ್ಯಾಥ ತೌ ದೇವೌ ತಂ ದ್ವೀಪಂ ನಾರದೋ ಗತಃ ॥ ೫೫ ॥

೫೧–೫೪. ಏಕಾಂತ ಭಾವನೆಯಿಂದ ಕೂಡಿದ ಋಷಿಗಳೂ ಸಹ ದೇವ ಕಾರ್ಯಕ್ಕಾಗಿ ಬಂದು ಶ್ವೇತದ್ವೀಪದಿಂದಲೂ ಹಿಂತಿರುಗಿ ಪುನಃ ಜನಾರ್ಧನನನ್ನು ನೋಡಲು ಪ್ರಯತ್ನಿಸಿದ್ದಾರೆ. ಪುನಃ ಶ್ವೇತದ್ವೀಪಕ್ಕೆ ಬಂದುಸೇರಿ ಪುನರಾವೃತ್ತಿ ರಹಿತ ಮೋಕ್ಷಸ್ವರೂಪನಾದ ದೇವಾಧಿಪತಿಯಾದ ಅಲ್ಲಿಯೇ ಇರುವ ವಿಷ್ಣುವನ್ನು ನೋಡು. ಶ್ವೇತದ್ವೀಪಕ್ಕೆ ಹೋದರೂ ಅಲ್ಲಿಯೂ ಸಹ ಅನೇಕ ದೇವಕಾರ್ಯಗಳನ್ನು ನೀನು ಮಾಡಬೇಕಾಗುತ್ತದೆ ಯಾವ ಲೋಕದಲ್ಲಿಯೂ ಆತ್ಮೋಜ್ಜೀವನಕ್ಕೆ ನಿರ್ವಾಹಕವಾದ ಬೇರೆ ಮಾರ್ಗವಾವುದೂ ಇಲ್ಲ. ಅಲ್ಲಿ ಸೇರಿದ ನೀನು ಪ್ರಳಯಾವ ಸ್ಥಾನದಲ್ಲಿ ಅಂತಹ ಉತ್ತಮವಾದ ಗತಿಯನ್ನು ಹೊಂದುತ್ತೀಯೆ.

೫೫–೫೯. ಮಾರ್ಕಂಡೇಯರು ಹೇಳುತ್ತಾರೆ :—ಹೀಗೆ ಹೇಳಲ್ಪಟ್ಟ ನಾರದನೂ ಸಹ ಆ ದೇವತೆಗಳನ್ನು ನಮಸ್ಕರಿಸಿ ಮನಸ್ಸಿನ ಮತ್ತು ವಾಯುವಿನ

ಸ ತತ್ರಗತ್ವಾ ದದೃಶೇ ಶ್ವೇತದ್ವೀಪನಿವಾಸಿನಃ ।
ಪೂಜಯಾಮಾಸ ಶಿರಸಾ ತಾಂಶ್ಚ ಭಕ್ತ್ಯಾ ಸ ನಾರದಃ ॥ ೫೬ ॥

ಪ್ರಾಪ್ಯಶ್ವೇತಂ ಮಹಾದ್ವೀಪಂ ನಾರದೋ ಹೃಷ್ಟಮಾನಸಃ ।
ದದರ್ಶ ತಾನೇವ ನರಾನ್ ಶ್ವೇತಾಂಶ್ಚಂದ್ರಪ್ರಭಾನ್ ಶುಭಾನ್ ॥ ೫೭ ॥

ಪೂಜಯಾಮಾಸ ಶಿರಸಾ ಮನಸಾ ತೈಸ್ತು ಪೂಜಿತಃ ।
ದಿದೃಕ್ಷುರ್ಜಾಪ್ಯಪರಮಃ ಸರ್ವಕೃಚ್ಛ್ರಧರಃ ಸ್ಥಿತಃ ॥ ೫೮ ॥

ಭೂತ್ವೈಕಾಗ್ರಮನಾ ವಿಪ್ರಶ್ಚೋರ್ಧ್ವಬಾಹುರ್ಮಹಾಭುಜಃ ।
ಸ್ತೋತ್ರಂ ಜಗೌ ಸ ವಿಶ್ವಾಯ ನಿರ್ಗುಣಾಯ ಗುಣಾತ್ಮನೇ ॥ ೫೯ ॥

ವಾಸುದೇವಾಯ ಶಾಂತಾಯ ತಥಾ ವಿಶ್ವಸೃಜೇ ದ್ವಿಜ ।
ಅನಂತಾಯಾಪ್ರಮೇಯಾಯ ಸರ್ವಗಾಯಾತಿರಂಹಸೆ ॥ ೬೦ ॥

ವೇಗಕ್ಕೆ ಸಮಾನವಾದ ವೇಗದಿಂದ ಕೂಡಿ ಆ ಶ್ವೇತದ್ವೀಪಕ್ಕೆ ಹೊರಟನು. ಅಲ್ಲಿಗೆ ಹೋಗಿ ಅಲ್ಲಿರುವ ಏಕಾಂತಿಗಳಾದ ಭಗವದ್ಭಕ್ತರನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸಿ ಪೂಜಿಸಿದನು. ತಾನೂ ಅಲ್ಲಿ ಸಂತೋಷದಿಂದಿದ್ದು ಚಂದ್ರನಂತೆ ಶುಭ್ರರಾಗಿಯೂ ಶುಭಕರರಾಗಿಯೂ ಇರುವ ಭಕ್ತರನ್ನು ನೋಡಿದನು ಅವರಿಂದಲೂ ಮನಸ್ಸಿನಿಂದಲೇ ಪೂಜಿಸಲ್ಪಟ್ಟು ತಾನೂ ಅವರನ್ನು ಪ್ರಣಾಮ ಪೂರ್ವಕವಾಗಿ ಪೂಜಿಸಿದನು. ಎಲ್ಲಾ ಕೃಚ್ಛ್ರಗಳನ್ನೂ ಆಚರಿಸಿ ಭಗವಂತನನ್ನು ನೋಡಲು ಜಪಪರನಾಗಿಯೂ, ಊರ್ಧ್ವಬಾಹುವಾಗಿಯೂ, ಏಕಾಗ್ರಮನಸ್ಕನಾಗಿಯೂ ಸಂತು ವಿಶ್ವರೂಪಿಯಾಗಿಯೂ, ಕಲ್ಯಾಣಗುಣಕರನಾಗಿಯೂ, ಹೇಯಗುಣರಹಿತನಾಗಿಯೂ ಇರುವ ಪರಮಾತ್ಮನ ಅನುಗ್ರಹಕ್ಕಾಗಿ ಈ ಸ್ತೋತ್ರವನ್ನು ಪಠಿಸಿದನು.

೬೦-೬೧. ಯಾವ ಪರಮಾತ್ಮನು ಲೀಲಾಮಾನುಷನಾಗಿ ವಾಸುದೇವನೆಂದು ಹೇಳಲ್ಪಡುವನೋ, ಶಾಂತರೂಪನಾಗಿರುವನೋ ವಿಶ್ವಸೃಷ್ಟಿಕರ್ತೃವಾಗಿರುವನೋ ಅನಂತರೂಪಿಯಾಗಿಯೂ, ಅಪರಿಮಿತನಾಗಿಯೂ, ಸರ್ವವ್ಯಾಪಿಯಾಗಿಯೂ, ವೇಗಶಾಲಿಯಾಗಿಯೂ, ಅಮಾನುಷವಾದ ಬಲಪರಾಕ್ರಮಗಳಿಂದ ಕೂಡಿ ದೇವತೆ

ಅಮಿತಬಲ ಪರಾಕ್ರಮಾಯ ತಸ್ಮೈ
ತ್ರಿದಶಮುನಿ ಪ್ರತಿಪೂಜಿತಾಯ ನಿತ್ಯಂ ।
ಭವಭವಭರನಾಶನಾಯ ವಿಷ್ಣೋಃ
ಪ್ರಣತಜನಪ್ರತಿ ಪಾಪನಾಶನಾಯ ॥ ೬೧ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ಶ್ರೀ ನಾರದಸ್ಯ ಶ್ವೇತದ್ವೀಪಗಮನ ವರ್ಣನೋ ನಾಮೈಕೋನ ಪಂಚಾಶದಧಿಕ ತ್ರಿಶತತಮೋಽಧ್ಯಾಯಃ

ಗಳಿಂದಲೂ ಮುನಿಗಳಿಂದಲೂ ನಿತ್ಯವೂ ಪೂಜಿಸಲ್ಪಡುತ್ತಿರುವನೋ ಸಂಸಾರಭಯ ನಾಶಕನಾಗಿಯೂ ಭಕ್ತರ ಸರ್ವಪಾಪನಾಶಕನಾಗಿಯೂ ಇರುವನೋ ಅಂತಹ ಮಹಾವಿಷ್ಣುವಿಗೆ ನಮಸ್ಕಾರಗಳು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ ಸಂವಾದದಲ್ಲಿ ನಾರದರ ಶ್ವೇತದ್ವೀಪಗಮನವರ್ಣನವೆಂಬ ಮುನ್ನೂರ ನಲವತ್ತೊಂಭತ್ತನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಪಂಚಾಶದಧಿಕತ್ರಿಶತತಮೋಽಧ್ಯಾಯಃ ॥

॥ ನಾರದ ಉವಾಚ ॥

ಗದ್ಯ—ನಮೋಽಸ್ತುತೇ, ದೇವದೇವ, ನಿಷ್ಕ್ರಿಯ, ನಿರ್ಗುಣ ಲೋಕಸಾಕ್ಷಿನ್ । ಕ್ಷೇತ್ರಜ್ಞ, ಅನಂತಪುರುಷ, ತ್ರಿಗುಣಪ್ರಧಾನ, ಅಮೃತ, ವ್ಯೋಮ, ಸನಾತನ, ಸದಸದ್ವ್ಯಕ್ತಾವ್ಯಕ್ತ, ಋತಧಾಮ, ಪೂರ್ವ, ಆದಿದೇವ, ಸುಪ್ರಜಾಪತೇ, ಮಹಾಪ್ರಜಾಪತೇ, ಊರ್ಜಸ್ಪತೇ, ವಾಚಸ್ಪತೇ, ವಾನಸ್ಪತೇ, ಮನಃಪತೇ, ಮರುತ್ಪತೇ, ಪೃಥಿವಿಪತೇ, ದಿಕ್ಪತೇ, ಸಲಿಲಪತೇ, ಪೂರ್ವನಿವಾಸ, ಬ್ರಹ್ಮಪುರೋಹಿತ, ಬ್ರಹ್ಮಕಾಯಿಕ,

---

ಮುನ್ನೂರ ಐವತ್ತನೆಯ ಅಧ್ಯಾಯ-

ನಾರದರು ಸ್ತೋತ್ರಮಾಡುತ್ತಾರೆ—ಎಲೈ ದೇವಾಧಿಪನೇ, ಕ್ರಿಯಾರಹಿತನೇ, ಹೇಯಗುಣರಹಿತನೇ, ಲೋಕಸಾಕ್ಷಿಯೇ, ಅಂತ್ಯರ್ಯಾಮಿರೂಪದಿಂದ ಸರ್ವಕ್ಷೇತ್ರಜ್ಞ ರೂಪನೇ, ವ್ಯಾಪಕಪುರುಷನೇ, ಗುಣತ್ರಯಾಶ್ರಯವಾದ ಪ್ರಧಾನಕ್ಕೂ ನಿಯಾಮಕನೇ, ಅಮೃತಸ್ವರೂಪಿಯೇ, ಆಕಾಶಸ್ವರೂಪಿಯೇ, ಪುರಾತನಮೂರ್ತಿಯೇ, ಸದಸದ್ವ್ಯಕ್ತಾವ್ಯಕ್ತಮೂರ್ತಿಯೇ, ಸತ್ಯಸ್ವರೂಪನೇ, ಆದಿಪುರುಷನೇ, ಆದಿದೇವತೆಯೇ, ಶೋಭನಸೃಷ್ಟಿಕರ್ತನೇ, ಮಹಾಸೃಷ್ಟಿಕರ್ತನೇ, ಬಲಾಧಿಪತೆಯೇ, ವಾಕ್ಪತಿಯೇ, ವನಸ್ಪತ್ಯಭಿಮಾನಮೂರ್ತಿಯೇ, ಮನೋಧಿಪತಿಯೇ, ಮರುತ್ಪತಿಯೇ, ಜಗತ್ಪತಿಯೇ, ಪೃಥ್ವೀಪತಿಯೇ, ದಿಕ್ಪತಿಯೇ, ಜಲಪತಿಯೇ, ಆದಿನಿವಾಸಿಯೇ, ಬ್ರಹ್ಮನಿಗೂ (ಆಚಾರಪ್ರದರ್ಶನದಿಂದ) ಪುರೋಹಿತನಾಗಿರುವವನೇ, ಬ್ರಹ್ಮಶರೀರಕ್ಕೂ ಅಭಿಮಾನಿಯೇ, ರಾಜಿಕಮೂರ್ತಿಯೇ, ಮಹಾರಾಜಿಕ

ರಾಜಿಕ, ಮಹಾರಾಜಿಕ, ಚಾತುರ್ಮಹಾರಾಜಿಕ, ಅಭಾಸ್ವರ, ಮಹಾಭಾಸ್ವರ, ಸಪ್ತಮಹಾಭಾಸ್ವರ, ಯಾಮ್ಯ, ಮಹಾಯಾಮ್ಯ, ಸಂಜ್ಞಾಸಂಜ್ಞ, ತುಷಿತ, ಮಹಾತುಷಿತ, ಪ್ರತರ್ದನ, ಪರಿನಿರ್ಮಿತವಶವರ್ತಿನ್, ಯಜ್ಞ, ಮಹಾಯಜ್ಞ, ಯಜ್ಞಸಂಭವ, ಯಜ್ಞಯೋನಿ, ಯಜ್ಞವಾಹ, ಯಜ್ಞಮುಖ, ಯಜ್ಞಹೃದಯ, ಯಜ್ಞಭಾಗಹರ, ಯಜ್ಞಸ್ತುತ, ಪಂಚಯಜ್ಞ, ಚರ, ಪಂಚಕಾಲ, ತ್ರಿಗತಿ, ಪಾಂಚರಾತ್ರಿಕ—

ವೈಕುಂಠ, ಅಪರಾಜಿತ, ನಾವಮಿಳ, ಪರಮಸ್ವಾಮಿನ್, ಸುಸ್ನಾತ, ಹಂಸ, ಮಹಾಹಂಸ, ಪರಮಯಾಜ್ಞಿಕ, ಸಾಂಖ್ಯಯೌಗಿಕ, ಅಮೃತೇಶಯ, ಹಿರಣ್ಯೇಶಯ, ವೇದಶಯ, ಕುಶೇಶಯ, ಬ್ರಹ್ಮಶಯ, ಪದ್ಮೇಶಯ,

---

ಮೂರ್ತಿಯೇ, ಚತುರ್ಮಹಾರಾಜಿಮೂರ್ತಿಯೇ, ಪ್ರಕಾಶಮಾನರೂಪನೇ, ಅಧಿಕ ಪ್ರಕಾಶಶಾಲಿಯೇ, ಸಪ್ತಸಂಖ್ಯಾಕವಾದ ಮಹಾಭಾಸ್ವರರೂಪಿಯೇ, ಸಂಯಮಶಾಲಿಯೇ, ಮಹಾಸಂಯಮನಶಾಲಿಯೇ, ಸಂಜ್ಞಾಮಾತ್ರ ನಾಮಧೇಯನೇ, ಸಂತೋಷಮೂರ್ತಿಯೇ, ಮಹಾಸಂತೋಷಮೂರ್ತಿಯೇ, ಪ್ರವರ್ತನಸ್ವರೂಪಿಯೇ, ತನ್ನಿಂದ ನಿರ್ಮಿಸಲ್ಪಟ್ಟಿರುವ ಭಕ್ತರಿಗೆ ಅಧೀನನಾಗಿರುವವನೇ, ಅಧೀನನಾಗದೆಯೂ ಇರುವವನೇ, ಯಜ್ಞಸ್ವರೂಪಿಯೇ, ಮಹಾಯಜ್ಞಸ್ವರೂಪಿಯೇ, ಯಜ್ಞದಿಂದಲೇ ಪ್ರಕಾಶಹೊಂದುವವನೇ, ಯಜ್ಞಕ್ಕೂ ಕಾರಣನೇ, ಯಜ್ಞನಿರ್ವಾಹಕನೇ, ಯಜ್ಞಮುಖನೇ, ಯಜ್ಞಹೃದಯನೇ, ಯಜ್ಞಭಾಗಹರನೇ, ಯಜ್ಞದಿಂದ ಸ್ತುತಿಸಲ್ಪಡುವವನೇ ಪಂಚಯಜ್ಞದೇವತೆಯೇ, ಚರಸ್ವರೂಪನೇ, ಪಂಚಕಾಲನಿಯಾಮಕನೇ, ಗತಿತ್ರಯಶಾಲಿಯೇ, ಪಾಂಚರಾತ್ರಪ್ರಣೇತೃವೇ.

ವೈಕುಂಠಮೂರ್ತಿಯೇ, ಅಜೇಯನೇ, ಅಷ್ಟದಿಕ್ಪಾಲರಿಗಿಂತಲೂ ಬೇರೆಯಾಗಿರುವ ಒಂಭತ್ತನೇ ಸ್ವಾಮಿಯೇ, ನಿರತಿಶಯಸ್ವಾಮಿಯೇ, ಶೋಭನವಾದ ವ್ರತಸ್ನಾನವುಳ್ಳವನೇ (ಪವಿತ್ರನೇ), ಹಂಸರೂಪಿಯೇ, ಮಹಾಹಂಸರೂಪಿಯೇ, ಉತ್ತಮ ಯಜ್ಞಶೀಲನೇ, ಸಾಂಖ್ಯಯೋಗಶಾಸ್ತ್ರಜ್ಞನೇ, ಕ್ಷೀರಶಾಯಿಯೇ ಅಥವಾ ನಿತ್ಯವಿಭೂತಿರೂಪವಾದ ವೈಕುಂಠಶಾಯಿಯೇ, ಹಿತವಾಗಿಯೂ, ರಮಣೀಯವಾಗಿಯೂ ಇರುವ ದಿವ್ಯಲೋಕಶಾಯಿಯೇ, ವೇದಗಳಲ್ಲಿ ಮುಖ್ಯ ತಾತ್ಪರ್ಯವಿಷಯನಾಗಿ ಅಡಗಿರುವವನೇ, ದರ್ಭಾಸ್ತರಣಶಾಯಿಯೇ, ಬೃಹದ್ರೂಪವಾದ ಬ್ರಹ್ಮಾಂಡ

ವಿಶ್ವೇಶ್ವರ, ತ್ವಂಜಗನ್ಮಯಃ, ತ್ವಂಜಗತ್ಪ್ರಕೃತಿಃ, ತ್ವಂಚಾಗ್ನೇರಾಸ್ಯಂ, ತ್ವಂಬಡಬಾಮುಖೋಽಗ್ನಿಃ, ತ್ವಮಾಹುತಿಃ, ತ್ವಂಸಾರಥಿಃ, ತ್ವಂ ವಷಟ್ಕಾರಃ, ತ್ವಮೋಂಕಾರಃ, ತ್ವಮನ್ನಂ, ತ್ವಮನ್ನಾದಃ, ತ್ವಂ ಚಂದ್ರಮಾಃ, ತ್ವಂಸೂರ್ಯಶ್ಚಕ್ಷುರಾದ್ಯಃ, ತ್ವಂದಿಗ್ಗಜಃ, ದಿಗ್ಭಾನೋ, ವಿದಿಗ್ಭಾನೋ. ಹಯಶಿರಾಃ ಪ್ರಥಮನ್, ತ್ರಿಸೌವರ್ಣಧರ, ಪಂಚಾಗ್ನೇ, ತ್ರಿಣಾಚಿಕೇತ, ಷಡಂಗವಿಧಾನ, ಪ್ರಾಗ್ಜ್ಯೋತಿಷ್ಕ, ಜ್ಯೇಷ್ಠಸಾಮಗ, ವ್ರತಧರ, ಅಥರ್ವಶಿರಾಃ, ಪಂಚಮಹಾಕಲ್ಪ, ಅರ್ಹನ್ ಆಚಾರ್ಯ, ವಾಲಖಿಲ್ಯ, ವೈಖಾನಸ, ಅಗ್ನಿಯೋಗ, ಅಭಗ್ನಪರಿಸಂಖ್ಯಾನ, ಯುಗಾದಿ ಯುಗಮಧ್ಯ, ಯುಗನಿಧನ, ಆಖಂಡಲ, ಪ್ರಾಚೀನಗರ್ಭ, ಕೌಶಿಕ, ಪುರುಷ್ಟುತ, ಪುರುಹೂತ, ವಿಶ್ವಹೂತ, ವಿಶ್ವಹುತ, ವಿಶ್ವ ರೂಪ, ಅನನ್ತಗತೆ, ಅನನ್ತಭೋಗ, ಅನನ್ತ, ಅನಾದಿಮಧ್ಯ.

ದಲ್ಲಿ ನಿಯಾಮಕನಾಗಿ ಅಡಗಿರುವವನೇ, ಪದ್ಮಶಾಯಿಯೇ, ಜಗದೀಶ್ವರನೇ, ನೀನೇ ಜಗನ್ಮಯನಾಗಿದ್ದೀಯೆ. ಜಗತ್ತಿಗೆ ಪ್ರಧಾನಕಾರಣನೂ ಆಗಿದ್ದೀಯೆ, ನೀನೇ ಅಗ್ನಿಗೂ ದಾಹಸಾಧನವಾದ ಮುಖವಾಗಿದ್ದೀಯೆ, ಬಡಬಾಮುಖವಾದ ಅಗ್ನಿ ವಿಶೇಷವೂ ನೀನೇ, ನೀನೇ ಆಹುತಿಸ್ವರೂಪನು, ನೀನೇ ಸಾರಥಿಯು, ನೀನೇ ವಷಟ್ಕಾರಸ್ವರೂಪನು, ನೀನೇ ಓಂಕಾರಸ್ವರೂಪನು, ನೀನೇ ಅನ್ನಸ್ವರೂಪನು, ಅನ್ನಭಕ್ಷಕನೂ ನೀನೇ, ನೀನೇ ಚಂದ್ರನು, ಮೊದಲನೇ ಕಣ್ಣಾದ ಸೂರ್ಯನೂ ನೀನೇ, ನೀನೇ ದಿಗ್ಗಜಸ್ವರೂಪನು, ದಿಕ್ಪ್ರಕಾಶಕನೂ, ವಿದಿಕ್ಪ್ರಕಾಶಕನೂ ನೀನೇ ಆಗಿದ್ದೀಯೆ, ಹಯಶಿರೋಧಾರಿಯೂ. ಪ್ರಥಮಪುರುಷನೂ, ತ್ರಿಸೌವರ್ಣಧರನೂ ನೀನೇ ಆಗಿದ್ದೀಯೇ. ಎಲೈ ಪಂಚಾಗ್ನಿಸ್ವರೂಪನೇ, ತ್ರಿಣಾಚಿಕೇತಾನುಷ್ಠಾತೃವೇ, ಷಡಂಗವಿಧಾನಕರ್ತೃವೇ, ಪ್ರಾಗ್ಜ್ಯೋತಿಷ್ಕನೇ, ಜ್ಯೇಷ್ಠ ಸಾಮಗನೇ, ವ್ರತಧಾರಿಯೇ, ಅಥರ್ವಶಿರಃಸ್ವರೂಪನೇ, ಪಂಚಮಹಾಕಲ್ಪರೂಪನೇ, ಉತ್ತಮಾಚಾರ್ಯನೇ, ವಾಲಖಿಲ್ಯರೂಪಿಯೇ, ವೈಖಾನಸರೂಪಿಯೇ, ಅಗ್ನಿಯೋಗ ರೂಪಿಯೇ, ಭಂಗವಿಲ್ಲದ ಕಾರ್ಯಕ್ರಮವುಳ್ಳವನೇ, ಯುಗಗಳ ಆದಿಮಧ್ಯ ಅಂತ್ಯ ಸ್ವರೂಪನೇ, ಅಖಂಡಲ (ಇಂದ್ರ) ಸ್ವರೂಪಿಯೇ, ಆದಿಕಾರಣನೇ, ಕೌಶಿಕ ರೂಪಿಯೇ, ಪುರುಷ್ಟುತನೇ, ಪುರುಹೂತರೂಪಿಯೇ, ಎಲ್ಲರಿಂದಲೂ ಆಹ್ವಾನಿಸ ಲ್ಪಡತಕ್ಕವನೇ, ವಿಶ್ವಭಕ್ಷಕನೇ, ವಿಶ್ವರೂಪಿಯೇ, ಅಪಾರಗತಿಯುಳ್ಳವನೇ, ಅನಂತ ಭೋಗಶಾಲಿಯೇ, ಅನಂತಸ್ವರೂಪನೇ, ಆದಿಮಧ್ಯರಹಿತನೇ.

ಅವ್ಯಕ್ತನಿಧನ, ವ್ರತವಾಸ, ಸಮುದ್ರಾಧಿವಾಸ, ಸಮವಾಸ, ಯಶೋವಾಸ, ಲಕ್ಷ್ಮ್ಯಾವಾಸ, ಕೀರ್ತ್ಯಾವಾಸ, ವಿದ್ಯಾವಾಸ, ಶ್ರೀವಾಸ, ಶ್ರೀನಿವಾಸ, ಸರ್ವವಾಸ, ವಾಸುದೇವ, ಸರ್ವಚ್ಛನ್ದೋಗ, ಹರಿಹಯ, ಹಯಮೇಧ, ಯಜ್ಞಭಾಗಹರ, ವರಪ್ರದ, ಯಮ, ನಿಯಮ, ಮಹಾನಿಯಮ, ಕೃಚ್ಛ್ರಾತಿಕೃಚ್ಛ್ರ, ಮಹಾಕೃಚ್ಛ್ರ, ಸರ್ವಕೃಚ್ಛ್ರ, ನಿಯಮಧರ, ನಿವೃತ್ತಿಧರ್ಮ, ಪ್ರವಚನಗತಿ, ಪ್ರವೃತ್ತವೇದಕ್ರಿಯ, ಅಜ, ಸರ್ವಗತ, ಸರ್ವದರ್ಶಿನ್, ಅಗ್ರಾಹ್ಯ, ಅಚಲ, ಮಹಾವಿಭೂತಿ, ಮಾಹಾತ್ಮ್ಯಶರೀರ, ಪವಿತ್ರ, ಮಹಾಪವಿತ್ರ, ಹಿರಣ್ಮಯ, ಬೃಹತ್.

ಅನಭಿವ್ಯಕ್ತವಾದ ನಾಶವುಳ್ಳವನೇ, ಅಥವಾ ಅವ್ಯಕ್ತಾವಸ್ಥೆ ಎಂಬ ಜಗನ್ನಾಶ ಉಳ್ಳವನೇ ವ್ರತದಿಂದಲೇ ವಾಸಿಸುತ್ತಿರುವವನೇ ಸಮುದ್ರವಾಸಿಯೇ, ಸರ್ವಸಮವಾದ ಆ ವಾಸಶಾಲಿಯೇ, ಯಶಸ್ಸಿಗೆ ಆ ವಾಸಸ್ಥಾನನೇ. ಲಕ್ಷ್ಮೀದೇವಿಗೆ ವಾಸಸ್ಥಾನನಾಗಿರುವವನೇ, ಕೀರ್ತಿಗೆ ಸ್ಥಾನನೇ, ವಿದ್ಯೆಗೆ ಆ ವಾಸಸ್ಥಾನನೇ, ಕಾಂತಿಗೆ ಆ ವಾಸಸ್ಥಾನನೇ, ಶ್ರೀನಿವಾಸಮೂರ್ತಿಯೇ, ಸರ್ವವಸ್ತುವಿನಲ್ಲೂ ವಾಸಿಸುವವನೇ, ವಾಸುದೇವಸ್ವರೂಪನೇ, ಎಲ್ಲರ ಮನಸ್ಸಿನಲ್ಲೂ ನೆಲಸಿರುವವನೇ, ಹರಿಹಯಸ್ವರೂಪನೇ, ಅಶ್ವಮೇಧ ಸ್ವರೂಪಿಯೇ, ಯಜ್ಞಭಾಗಹಾರಿಯೇ, ವರಪ್ರದನೇ ಯಮನಿಯಮ ರೂಪನೇ, ಮಹಾನಿಯಮಸ್ವರೂಪನೇ, ಕೃಚ್ಛ್ರಾತಿಕೃಚ್ಛ್ರರೂಪನೇ, ಮಹಾಕೃಚ್ಛ್ರಸರ್ವಕೃಚ್ಛ್ರರೂಪನೇ, ನಿಯಮಧಾರಿಯೇ, ಸಂತೋಷವೆಂಬ ಮುಖ್ಯಧರ್ಮವುಳ್ಳವನೇ, ಪ್ರವಚನ ಸಮರ್ಥಬುದ್ಧಿಯುಳ್ಳವನೇ, ವೈದಿಕಕ್ರಿಯೆಯಲ್ಲಿ ಪ್ರವೇಶಿಸಿರುವವನೇ, ಉತ್ಪತ್ತಿರಹಿತನೇ, ಸರ್ವವ್ಯಾಪಕನೇ, ಸರ್ವದರ್ಶಿಯೇ, ಅಜ್ಞೇಯಸ್ವರೂಪನೇ, ಸ್ಥಿರಸ್ವರೂಪನೇ, ಮಹಾವಿಭೂತಿಯೇ, ಮಹಾತ್ಮ್ಯಮೂರ್ತಿಯೇ, ಪವಿತ್ರನೇ ಮಹಾಪವಿತ್ರಮೂರ್ತಿಯೇ, ಅಪ್ರಾಕೃತಸ್ವರೂಪನೇ, ಬೃಹದ್ರೂಪಿಯೇ, ಊಹಿಸಲಶಕ್ಯನೇ, ತಿಳಿಯಲಶಕ್ಯನೇ, ಪರಬ್ರಹ್ಮರೂಪವಾದ ಅಗ್ನಿಸ್ವರೂಪನೇ, ಪ್ರಜೆಗಳ ಸೃಷ್ಟಿಕಾರಕನೇ, ಪ್ರಕೃತಿಸಂಬಂಧನಾಶ

ಬ್ರಹ್ಮಾಗ್ನೆ, ಪ್ರಜಾಸರ್ಗಕರ, ಅಜಾನಿಧನಕರ, ಮಹಾಮಾಯಾಧರ, ಚಿತ್ರ ಶಿಖಂಡ, ವರಪ್ರದ, ಪುರೋಡಾಶ, ಭಾಗಹರ, ಗತಾಧ್ವಗ, ಛಿನ್ನತೃಣ, ಸರ್ವತೋನಿವೃತ, ಬ್ರಹ್ಮರೂಪ, ಬ್ರಹ್ಮಧರ, ಬ್ರಾಹ್ಮಣಪ್ರಿಯ, ವಿಶ್ವಮೂರ್ತೆ, ಮಹಾಮೂರ್ತೆ, ಬಾಂಧವ, ಭಕ್ತವತ್ಸಲ, ಬ್ರಹ್ಮಣ್ಯ ದೇವ, ಭಕ್ತೋಹಂ ತ್ವಾಂದಿದೃಕ್ಷುರೇಕಾಂತದರ್ಶನಾಯೇತ್ಯೋಂ ನಮಃ ||

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರ ಸಂವಾದೇ ಶ್ವೇತದ್ವೀಪೇ ಶ್ರೀ ನಾರದಸ್ತೋತ್ರವರ್ಣನೋ ನಾಮ ಪಂಚಾಶದಧಿಕ ತ್ರಿಶತತಮೋಽಧ್ಯಾಯಃ

ಕನೇ, ಕರ್ಮಸ್ವರೂಪವಾದ ಮಹಾಮಾಯೆಗೆ ಪ್ರವರ್ತಕನೇ, ವಿಚಿತ್ರವಾದ ಕೇಶ ಅಥವಾ ಕೇಶಾಭರಣ ಉಳ್ಳವನೇ, ವರಪ್ರದನೇ, ಪುರೋಡಾಶವೆಂಬ ಯಜ್ಞ ಹವಿಸ್ಸಿನ ಭಾಗಭಾಗಿಯೇ, ತಾನು ನಡೆದ (ಸೃಷ್ಟ್ಯಾದಿ) ಮಾರ್ಗದಲ್ಲೇ ನಡೆಯು ವವನೇ, ಕಂಟಕಸಂಹಾರಿಯೇ, ಪರಿಪೂರ್ಣಾನಂದನೇ, ಪರಬ್ರಹ್ಮಸ್ವರೂಪನೇ ಅಧಿಷ್ಠಾನರೂಪದಿಂದ ಪ್ರಕೃತಿಯನ್ನೂ ಧರಿಸುವವನೇ, ಬ್ರಾಹ್ಮಣರಲ್ಲಿ ಪ್ರೀತಿ ಯುಳ್ಳವನೇ, ಜಗಚ್ಛರೀರನೇ, ಮಹಾಮೂರ್ತಿಯೇ, (ಪ್ರಪಂಚಕ್ಕೆಲ್ಲಾ) ಬಂಧು ರೂಪನೇ, ಭಕ್ತರಲ್ಲಿ ಪ್ರೀತಿಯುಳ್ಳವನೇ, ಬ್ರಹ್ಮನಿಷ್ಠರದೇವತಾರೂಪನೇ, ನಿನ್ನ ಏಕಾಂತವಾದ ದಿವ್ಯಸ್ವರೂಪವನ್ನು ನೋಡಲು ಆಶೆ ಹೊಂದಿರುವ ಭಕ್ತನಾದ ನಾನು ನಿನ್ನಲ್ಲಿ ಆತ್ಮಸ್ವರೂಪನ್ನು ಅರ್ಪಣಮಾಡಿದ್ದೇವೆ. (ಇದು ಪ್ರಣವದ ಅರ್ಥ.)

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ಶ್ವೇತದ್ವೀಪದಲ್ಲಿ ಮಾಡಿದ ಶ್ರೀ ನಾರದರ ಸ್ತೋತ್ರ ವರ್ಣನ ವೆಂಬ ಮುನ್ನೂರ ಐವತ್ತನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಏಕಪಂಚಾಶದುತ್ತರತ್ರಿಶತತಮೋಽಧ್ಯಾಯಃ ||

|| ಮಾರ್ಕಂಡೇಯ ಉವಾಚ ||

ಸ ದದರ್ಶ ತದಾ ವಿಷ್ಣುಂ ವಿಶ್ವರೂಪಧರಂ ಹರಿಂ ।
ಯುಕ್ತಂ ವರ್ಣೈಃ ಶುಕಪ್ರಖ್ಯೈಃ ಪೀತರಕ್ತಸಿತಾಸಿತೈಃ || ೧ ||

ಕ್ವಚಿನ್ಮೇಚಕಸಂಯುಕ್ತೈಃ ಕ್ವಚಿನ್ಮೇಚಕರಂಜಿತೈಃ ।
ಕ್ವಚಿಚ್ಛಶಾಂಕಸಂಕಾಶಂ ಕ್ವಚಿದ್ಧಿಂಗುಲಸನ್ನಿಭಂ || ೨ ||

ಕ್ವಚಿನ್ಮರಕತಪ್ರಖ್ಯಂ ಪದ್ಮರಾಗನಿಭಂ ಕ್ವಚಿತ್ ।
ಕ್ವಚಿತ್ಕನಕಸಂಕಾಶಂ ಕ್ವಚಿನ್ನೀಲೋತ್ಪಲಪ್ರಭಂ || ೩ ||

ಮುನ್ನೂರ ಐವತ್ತೊಂದನೆಯ ಅಧ್ಯಾಯ.

೧-೪. ಮಾರ್ಕಂಡೇಯರು ಹೇಳುತ್ತಾರೆ:—ಹೀಗೆ ಸ್ತೋತ್ರಮಾಡಿದನಂತರ ಭಕ್ತರಾದ ಆ ನಾರದ ಮಹರ್ಷಿಗಳು ಆ ಶ್ವೇತದ್ವೀಪದಲ್ಲಿ ಜಗದ್ರೂಪಧಾರಿಯಾಗಿಯೂ, ಗಿಣಿಯ ಬಣ್ಣದಂತೆ ಹಳದಿಯ ಮಿಶ್ರವಾದ ಕೆಂಪು ಬಣ್ಣದಿಂದಲೂ ಬಿಳುಪು ಕಪ್ಪುಮಿಶ್ರಿತವಾದ ಬಣ್ಣದಿಂದಲೂಕೂಡಿ, ಕೆಲವು ಕಡೆ ಕಪ್ಪಾಗಿಯೂ, ಕೆಲವುಕಡೆ ಕಪ್ಪುಬಣ್ಣದಿಂದ ಪ್ರಕಾಶಿಸುವ ಇತರ ಬಣ್ಣದಿಂದಲೂ, ಕೆಲವುಕಡೆ ಚಂದ್ರನಂತೆ ಶುಭ್ರವಾಗಿಯೂ, ಮತ್ತೆ ಕೆಲವುಕಡೆ ಇಂಗಳದ ಹಣ್ಣಿನಂತಹ ಬೂದು ಬಣ್ಣದಿಂದಲೂ, ಕೆಲವು ಕಡೆ ಪಚ್ಚೆಯ ಕಲ್ಲಿನಂತಹ ಬಣ್ಣದಿಂದಲೂ, ಕೆಲವುಕಡೆ ಪದ್ಮರಾಗಮಣಿಯ ಬಣ್ಣದಿಂದಲೂ, ಹೀಗೆಯೇ, ಚಿನ್ನದ, ಮತ್ತು ಕಪ್ಪುಕಮಲದ ಪಾದರಿ ಹೂವಿನ, ಬಣ್ಣಗಳಿಂದ, ಅಲ್ಲಲ್ಲಿ ಕೂಡಿಯೂ, ಆಕಾಶದಂತೆ ನೀಲವಾದ

ಕ್ವಚಿತ್ಪಾಟಲಪುಷ್ಪಾಭಂ ಕ್ವಚಿದ್ಗಗನಸನ್ನಿಭಂ ।
ಕುಂಕುಮಕ್ಷೋದಸಂಕಾಶಂ ಹರಿದ್ರಾಕ್ಷೋದಸನ್ನಿಭಂ ॥ ೪ ॥

ಕ್ವಚಿದ್ರಜೋಪಲಪ್ರಖ್ಯಮಿಂದ್ರನೀಲನಿಭಂ ಕ್ವಚಿತ್ ।
ಅನಿರ್ದೇಶ್ಯಾನಿ ವರ್ಣಾನಿ ತಥಾ ಬಿಭ್ರತ್ಕ್ವಚಿತ್ಕ್ವಚಿತ್ ॥ ೫ ॥

ನಾನಾವಿಧಾನಾಂ ಸತ್ತ್ವಾನಾಂ ವದನಾನಿ ಬಹೂನಿ ಚ ।
ಬ್ರಹ್ಮಶಂಕರಶಕ್ರಾಣಾಂ ಯಮಸ್ಯ ವರುಣಸ್ಯ ಚ ॥ ೬ ॥

ಧನದಸ್ಯ ಹುತಾಶಸ್ಯ ವಾಯೋರ್ನಿರ್ಋತಿನಸ್ತಥಾ ।
ಗ್ರಹಾಣಾಮಥ ಋಕ್ಷಾಣಾಂ ರುದ್ರಾಣಾಂ ವಸುಭಿಃ ಸಹ ॥ ೭ ॥

ಆದಿತ್ಯಾನಾಂ ಸಮರುತಾಂ ಭೃಗೂಣಾಂ ಚ ತಥಾ ದ್ವಿಜ ।
ತಥೈವಾಂಗಿರಸೋ ರಾಜನ್ಸಾಧ್ಯಾನಾಮಶ್ವಿಭಿಃ ಸಹ ॥ ೮ ॥

ದೈತ್ಯಾನಾಮಥನಾಗಾನಾಂ ಗಂಧರ್ವೋರಗರಕ್ಷಸಾಂ ।
ಪಿತೃಪನ್ನಗಯಕ್ಷಾಣಾಂ ತಥಾ ಚ ಪಿಶಿತಾಶಿನಾಂ ॥ ೯ ॥

ಮತ್ತು ಕುಂಕುಮದಂತೆ ರಕ್ತವಾದ, ಹಾಗೂ ಅರಿಶಿನದಂತೆ ಪೀತವಾದ ಆಯಾಯ ಬಣ್ಣಗಳಿಂದ ಕೆಲಕೆಲವು ಭಾಗಗಳಲ್ಲಿ ರಂಜಿತನಾಗಿಯೂ ಮತ್ತು

೫–೧೦. ಕೆಲವು ಕಡೆಗಳಲ್ಲಿ ಬೆಳ್ಳಿಯಂತೆ ಶುಭ್ರವಾಗಿಯೂ ಕೆಲವು ಭಾಗಗಳಲ್ಲಿ ಇಂದ್ರನೀಲಮಣಿಯಂತೆ ನೀಲವಾಗಿಯೂ, ಇಂತಹ ವರ್ಣವೆಂದು ಹೇಳಲಾಗದ ಅನೇಕ ವರ್ಣಗಳನ್ನು ಧರಿಸಿಯೂ ಇರುವ ಆ ಮಹಾವಿಷ್ಣುವನ್ನು ಸಾಕ್ಷಾತ್ಕರಿಸಿದರು, ಅಂತಹ ಆ ವಿಶ್ವರೂಪದಲ್ಲಿ ಅನೇಕವಾದ ಬಹುಸಂಖ್ಯೆಯಿಂದ ಕೂಡಿದ ನಾನಾಪ್ರಾಣಿಗಳ ಮುಖಗಳೂ, ಬ್ರಹ್ಮ, ರುದ್ರ, ಇಂದ್ರ, ಯಮ, ವರುಣ, ಕುಬೇರ, ಅಗ್ನಿ, ವಾಯು, ನಿರ್ಋತಿ, ಗ್ರಹಗಳು, ನಕ್ಷತ್ರಗಳು, ಏಕಾದಶರುದ್ರರು, ವಸುಗಳು, ಆದಿತ್ಯರು, ಮರುತ್ತುಗಳು. ಭೃಗು, ಅಂಗಿರಸ, ಸಾಧ್ಯರು ಸರ್ಪಗಳು, ಗಂಧರ್ವರು, ರಾಕ್ಷಸರು, ಪಿತೃದೇವತೆಗಳು, ಯಕ್ಷರು, ಇತರ ಮಾಂಸಾಹಾರಿಗಳು, ಮನುಷ್ಯ, ಕುದುರೆ, ಆನೆ, ಮೃಗಗಳು, ಪಕ್ಷಿಗಳು, ಹುಲಿ,

ಮನುಷ್ಯಹಯನಾಗಾನಾಂ ಗಜಾಶ್ವಮೃಗಪಕ್ಷಿಣಾಂ ।
ದ್ವೀಪಿಶಾರ್ದೂಲಸಿಂಹಾನಾಂ ಸರ್ವೇಷಾಂ ಪ್ರಾಣಿನಾಮಥ　॥ ೧೦ ॥

ಕಾನಿಚಿತ್ತಸ್ಯ ಸೌಮ್ಯಾನಿ ಕಾನಿಚಿದ್ಭೀಷಣಾನಿ ಚ ।
ದದರ್ಶ ತಸ್ಯ ವಕ್ತ್ರಾಣಿ ಶತಶೋಽಥ ಸಹಸ್ರಶಃ　॥ ೧೧ ॥

ವಕ್ತ್ರೇಷು ತಸ್ಯ ರೌದ್ರಸ್ಯ ಪ್ರಾಣಿಸಂಘಾನ್ಯನೇಕಶಃ ।
ದದರ್ಶ ಸರ್ವತಶ್ಚಾಗ್ನೀನ್ ಗ್ರಸ್ಯಮಾನಾಂಶ್ಚ ವಿಷ್ಣುನಾ　॥ ೧೨ ॥

ಸೌಮ್ಯೇಭ್ಯಸ್ತಸ್ಯ ವಕ್ತ್ರೇಭ್ಯೋ ನಿರ್ಗಚ್ಛಂತ್ಯಸ್ತಥಾ ಪ್ರಜಾಃ ।
ಬಾಹಾಂಶ್ಚ ವಿವಿಧಾಂಸ್ತಸ್ಯ ಸದದರ್ಶಾಥ ನಾರದಃ　॥ ೧೩ ॥

ಹಸ್ತಾಂಶ್ಚ ವಿವಿಧಾಕಾರಾನ್ನಾನಾಮುದ್ರಾ ಸಮನ್ವಿತಾನ್ ।
ಯುಕ್ತಾನ್ನಾನಾವಿಧೈರ್ಭಾಂಡೈರಾಯುಧೈಶ್ಚ ಸಹಸ್ರಶಃ　॥ ೧೪ ॥

ಸ್ರುಕ್ ಸ್ರುವಾವೇದಿ ಚಮಸಕುಶಕೃಷ್ಣಾಜಿನಾಗ್ನಿಭಿಃ ।
ಕೇಚಿಚ್ಚ ಕಲಶಂ ಘಂಟಾಂ ಶಂಖಪದ್ಮೋತ್ಪಲಾದಿಭಿಃ　॥ ೧೫ ॥

ಶಾರ್ದೂಲ, ಸಿಂಹ, ಮತ್ತು ಇತರ ಪ್ರಾಣಿಗಳು ಇವರ ಮುಖಗಳೆಲ್ಲವೂ ಅಲ್ಲಿ ಕಾಣುತ್ತಿದ್ದವು.

೧೧-೧೮. ಅಂತಹ ಮುಖಗಳಲ್ಲಿ ಕೆಲವು ಸೌಮ್ಯವಾಗಿಯೂ, ಕೆಲವು ಭಯಂಕರಗಳಾಗಿಯೂ, ನೂರಾರು, ಸಾವಿರಾರು ಕಾಣುತ್ತಿದ್ದವು. ಆ ವಿಷ್ಣುವಿನ ಬಾಯಿಗಳಲ್ಲಿ ಅನೇಕ ಪ್ರಾಣಿಸಂಘಗಳೂ, ಎಲ್ಲಾ ಕಡೆಗಳಲ್ಲಿಯೂ ನುಂಗಲ್ಪಡುವಂತೆ ತೋರುತ್ತಿದ್ದವು. ಸೌಮ್ಯಗಳಾದ ಮುಖಗಳಿಂದ ಪ್ರಜೆಗಳು ಹೊರಗೆ ಬರುತ್ತಿದ್ದುದೂ ತೋರಿಬರುತ್ತಿತ್ತು. ಆ ಮೂರ್ತಿಯಿಂದ ಅನೇಕ ಬಾಹುಗಳೂ ನಾನಾವಿಧವಾದ ಮುದ್ರೆಗಳಿಂದ ಕೂಡಿದ ಹಸ್ತಗಳೊಡನೆ ಹೊರಗೆ ತೋರುತ್ತಿದ್ದುವು. ಆ ಹಸ್ತಗಳಲ್ಲಿ ಅನೇಕ ಭಾಂಡಗಳೂ ಸಾವಿರಾರು ಆಯುಧಗಳೂ ಇದ್ದುವು, ಸ್ರುಕ್ ಸ್ರುವ (ಹೋಮಸಾಧನ) ವೇದಿ, ಚಮಸ, ದರ್ಭೆ, ಕೃಷ್ಣಾಜಿನ, ಅಗ್ನಿ ಇವು

ಕೇಚಿತ್ಖಡ್ಗಗದಾಚಕ್ರ ಚರ್ಮಶೂಲಪರಶ್ವಧೈಃ ।
ಕೇಚಿತ್ಪಾಶಮಹಾದಂಡ ಕೃಪಾಣ ಶರಕಾರ್ಮುಕೈಃ ॥ ೧೬ ॥

ಕೇಚಿದ್ಭುಶುಂಡೀಲಗುಡ ಶಕ್ತಿವಜ್ರಾಶ್ಮಪಟ್ಟಿಶೈಃ ।
ಬೀಜಪೂರಾಕ್ಷಮಾಲಾಶ್ಚ ಪೂರ್ಣಪಾತ್ರೈ ಸ್ತಥಾಪರೈಃ ॥ ೧೭ ॥

ಏವಂ ನಾನಾವಿಧೈರ್ಭಾಂಡೈಃ ಕರಾಂಸ್ತಸ್ಯ ಸಮನ್ವಿತಾನ್ ।
ಅಸಂಖ್ಯೇಯಾನ್ಮಹಾತೇಜಾ ದದರ್ಶ ಮುನಿಸತ್ತಮಃ ॥ ೧೮ ॥

ನೃತ್ತಶಾಸ್ತ್ರವಿನಿರ್ದಿಷ್ಟಾನ್ನೃತ್ತಕರ್ಮಣಿ ಚಾಪ್ಯಥ ।
ಶಿರಾಂಸಿ ದೃಷ್ಟಯೋಹಸ್ತಾಂಸ್ತಸ್ಯ ದೇವಸ್ಯ ದೃಷ್ಟವಾನ್ ॥ ೧೯ ॥

ತ್ರೈಲೋಕ್ಯಂ ಚ ತಥಾ ಕಾಯೇ ಸಕಲಂ ಮುನಿಸತ್ತಮಃ ।
ದೇವದಾನವಗಂಧರ್ವಯಕ್ಷೋರಗರಕ್ಷಸಾಂ ॥ ೨೦ ॥

ದ್ವೀಪಾಂಭೋನಿಧಿಲೋಕೈಶ್ಚ ಪಾತಾಲೈಶ್ಚೈವ ಸಂಯುತಂ ।
ಜಗತ್ಸಮಗ್ರಂ ದೇವಸ್ಯ ದೇಹಸ್ಥಂ ದೃಷ್ಟವಾನ್ಮುನಿಃ ॥ ೨೧ ॥

ಗಳಿಂದಲೂ ಕಲಶ, ಘಂಟೆ, ಶಂಖ, ಪದ್ಮ, ನೈದಿಲೆ, ಇವುಗಳಿಂದಲೂ, ಖಡ್ಗ, ಗದಾ, ಚಕ್ರ, ಗುರಾಣಿ, ಶೂಲ, ಕೊಡಲಿ, ಪಾಶ, ಮಹಾದಂಡ, ಕತ್ತಿ, ಬಾಣ, ಧನುಸ್ಸು, ಇವುಗಳಿಂದಲೂ, ಭುಶುಂಡೀ (ಆಯುಧ) ದೊಣ್ಣೆ, ಶಕ್ತಿ, ವಜ್ರ, ಶಿಲಾ, ಪಟ್ಟಿಶ, ಇವುಗಳಿಂದಲೂ, ಬೀಜಪೂರ್ಣಪಾತ್ರೆ, ಜಪಮಾಲೆ, ಪೂರ್ಣಕುಂಭ, ಇವುಗಳಿಂದಲೂ ಇತರ ನಾನಾವಿಧವಾದ ಭಾಂಡಗಳಿಂದಲೂ ಕೂಡಿರುವ ಅನೇಕಾನೇಕ ಹಸ್ತಗಳನ್ನೂ ನೋಡಿದನು.

೧೯-೨೧. ನೃತ್ಯಶಾಸ್ತ್ರದಲ್ಲಿಯೂ, ನೃತ್ಯವ್ಯಾಪಾರದಲ್ಲಿಯೂ ಹೇಳಲ್ಪಟ್ಟಿರುವ ಎಲ್ಲಾ ಶಿರೋವಿನ್ಯಾಸಗಳನ್ನೂ, ಹಸ್ತ ಮತ್ತು ದೃಷ್ಟಿಗಳ ಎಲ್ಲಾ ವಿನ್ಯಾಸವನ್ನೂ ಆ ಪ್ರಭುವಿನ ದೇಹದಲ್ಲಿ ನೋಡಿದನು ಮೂರು ಲೋಕಗಳನ್ನೂ, ದೇವ, ದಾನವ, ಗಂಧರ್ವ, ಯಕ್ಷ, ಸರ್ಪ, ರಾಕ್ಷಸ, ಇವರ ಲೋಕಗಳನ್ನೂ, ದ್ವೀಪಗಳು, ಸಮುದ್ರಗಳು, ಅವುಗಳಲ್ಲಿರುವ ಪ್ರಾಣಿಗಳು, ಪಾತಾಲಗಳು ಮೊದಲಾದ ಸಮಸ್ತ ಜಗತ್ತನ್ನೂ ಅವನ ಆ ದೇಹದಲ್ಲಿ ಅಡಗಿರುವಂತೆಯೇ ನೋಡಿದನು.

ಸದೃಷ್ಟ್ವಾ ಪರಮಂ ರೂಪಂ ಭೀತೋ ಹೃಷ್ಟಶ್ಚವಿಸ್ಮಿತಃ ।
ಪಪಾತಪಾದಯೋಸ್ತಸ್ಯ ಶಿರಸಾ ಸಾಶ್ರುಲೋಚನಃ ॥ ೨೨ ॥

ಸ್ತೋತ್ರೇಣ ಚೈವತುಷ್ಟಾವ ಪೂರ್ವೋಕ್ತೇನ ಜನಾರ್ದನಂ ।
ತಮುವಾಚ ತತೋದೇವಃ ಪ್ರಹಸ್ಯ ಋಷಿಸತ್ತಮಂ ॥ ೨೩ ॥

॥ ಶ್ರೀ ಭಗವಾನುವಾಚ ॥

ಉತ್ತಿಷ್ಠಮಾಭೈರ್ಧರ್ಮಜ್ಞ ವರಂ ವೃಣುಯಥೇಪ್ಸಿತಂ ।

॥ ಶ್ರೀ ನಾರದ ಉವಾಚ ॥

ನಿತ್ಯಮೇಕಾಂತಿಕೇದೇವ ಭಕ್ತಿರ್ಭವತು ಸಾತ್ವಯಿ ।
ನಾನ್ಯಂ ವರಂ ಕಾಮಯಾಮಿ ನರಾಣಾಮಿದಮುತ್ತಮಂ ॥ ೨೪ ॥

॥ ಮಾರ್ಕಂಡೇಯ ಉವಾಚ ॥

ತಮುವಾಚ ತತೋದೇವಃ ಪ್ರಣತಾರ್ತಿಹರೋ ಹರಿಃ ।
ಏತನ್ನಿಸರ್ಗಸಿದ್ಧಂತೆ ಯೇನ ತ್ವಂ ದೃಷ್ಟವಾನ್ಮಮ ॥ ೨೫ ॥

೨೨-೨೪. ಆಗ ಆ ನಾರದಮಹರ್ಷಿಯು ಅದ್ಭುತವಾದ ಆ ವಿಶ್ವರೂಪವನ್ನು ನೋಡಿ ಭಯದಿಂದಲೂ, ಸಂತೋಷದಿಂದಲೂ, ಆಶ್ಚರ್ಯದಿಂದಲೂ ಪರವಶನಾಗಿ ಕಣ್ಣೀರನ್ನು ಸುರಿಸುತ್ತಾ ಆ ಪರಮಾತ್ಮನ ಪಾದಗಳಲ್ಲಿ ತಲೆಯಿಟ್ಟು ಭೂಮಿಯಲ್ಲಿ ಬಿದ್ದು ನಮಸ್ಕರಿಸಿದನು, ಹಿಂದೆ ಹೇಳಿರುವ ಸ್ತೋತ್ರದಿಂದಲೂ ಸ್ತುತಿಸಿದನು. ಆಗ ಪರಮಾತ್ಮನು ನಗುತ್ತಾ ಆ ಋಷಿಯನ್ನು ಕುರಿತು ಧರ್ಮಜ್ಞನೇ, ಮೇಲಕ್ಕೆ ಏಳು, ನಿನಗೆ ಇಷ್ಟವಾದ ವರವನ್ನು ಕೇಳಿಕೋ ಎಂದು ಸಂತೈಸಿದನು. ಆಗ ನಾರದ ಮುನಿಯು ಪೂಜ್ಯನೇ, ಇತರ ದೇವತೆಗಳ ಸಂಬಂಧವಿಲ್ಲದೆ ನಿನ್ನನ್ನೇ ಕುರಿತು ಉಂಟಾಗಬಹುದಾದ ಸಾತ್ತ್ವಿಕಭಕ್ತಿಯು, ಯಾವಾಗಲೂ ನನಗೆ ಉಂಟಾಗುತ್ತಿರಲಿ ಮನುಷ್ಯರಿಗೆ ಇದು ಅತ್ಯುತ್ತಮವಾದ ಧನ, ಇದನ್ನು ಬಿಟ್ಟು ಮತ್ತಾವುದನ್ನೂ ನಾನು ಅಪೇಕ್ಷಿಸುವುದಿಲ್ಲ.

೨೫-೨೬. ಮಾರ್ಕಂಡೇಯರು ಹೇಳುತ್ತಾರೆ :—ಭಕ್ತರ ಕಷ್ಟಗಳನ್ನೆಲ್ಲಾ ಹೋಗಲಾಡಿಸುವ (ಇದು ಹರಿ ಶಬ್ದದ ಅವಯವಾರ್ಥ) ಆ ಹರಿಯು ನಾರದಮುನಿ

ವಿಶ್ವರೂಪಮಿದಂ ಬ್ರಹ್ಮನ್ನಾವಜ್ಞೇಯಂ ತಥಾತ್ವಯಾ |
ತಪಸ್ತಪ್ತಂ ಯತೋವಿಪ್ರಮಯಾಪಿ ಚ ತತಸ್ತ್ವ || ೨೬ ||

ರೂಪಮೇತತ್ಸಮಾಸ್ಥಾಯ ರೂಪಂ ಸ್ವಂ ದ್ವಿಜದರ್ಶಿತಂ |
ಇಚ್ಛಾರೂಪಾಣ್ಯಹಂ ಕುರ್ಯಾಂ ಶತಶೋಽಥಸಹಸ್ರಶಃ || ೨೭ ||

ತ್ರೈಲೋಕ್ಯೇ ಯಾನಿರೂಪಾಣಿ ದೇವಾದೀನಾಂ ದ್ವಿಜೋತ್ತಮ |
ಮಮೈವ ತಾನಿ ಜಾನೀಹಿ ಮತ್ತೋಽನ್ಯ[1]ನ್ನಾಸ್ತಿಕಿಂಚನ || ೨೮ ||

ಅಹಂ ಭೂತಂ ಚ ಭವ್ಯಂ ಚ ವರ್ತಮಾನಮಹಂ ತಥಾ |
ಸ್ಥಾವರಂ ಜಂಗಮಂ ಚೈವ ಸರ್ವಮೇವಾಸ್ಮಿನಾರದ || ೨೯ ||

ಸಚ್ಚಾಽಸಚ್ಚಾಹಮೇವಾತ್ರ ತತ್ತ್ವಮೇತದ್ಬ್ರವೀಮಿತೇ |
ಅಶಬ್ದಮರಸಂಸ್ಪರ್ಶಗಂಧರೂಪವಿವರ್ಜಿತಂ || ೩೦ ||

ಯನ್ನು ಕುರಿತು ಇಂತಹ ಏಕಾಂತಭಕ್ತಿಯು ನಿನಗೆ ಸ್ವಭಾವಸಿದ್ಧವಾಗಿಯೇ ಉಂಟಾಗಿದೆ. ಆದ್ದರಿಂದಲೇ ನೀನು ಇಂತಹ ನನ್ನನ್ನು ಸಾಕ್ಷಾತ್ಕರಿಸಿದ್ದೀಯೆ. ಎಲೈ ಬ್ರಹ್ಮರ್ಷಿಯೇ, ಈ ನನ್ನವಿಶ್ವರೂಪವನ್ನು ನೀನು ಯಾವಾಗಲೂ ಅನಾದರಿಸ ಬೇಡ. ನಾನೂ ಸಹ ಬಹು ತಪಸ್ಸನ್ನೂ ಮಾಡಿ ಇಂತಹ ರೂಪವನ್ನು ಹೊಂದಿ ಈ ಸ್ವರೂಪವನ್ನು ನಿನಗೆ ತೋರಿಸಿದ್ದೇನೆ. ನಾನು ನನ್ನ ಇಚ್ಛೆಯಿಂದಲೇ ಇಂತಹ ನೂರಾರು ಸಾವಿರಾರು ರೂಪಗಳನ್ನೂ ಹೊಂದಬಲ್ಲೆ. ಮೂರು ಲೋಕದಲ್ಲಿಯೂ ಇರುವ ದೇವತೆಗಳೇ ಮೊದಲಾದವರ ಯಾವಯಾವ ರೂಪಗಳುಂಟೋ ಅವೆಲ್ಲವೂ ನನ್ನದೇ ಎಂದು ತಿಳಿ. ನನಗಿಂತಲೂ ಬೇರೆ ಯಾವ ವಸ್ತುವೂ ಲೋಕದಲ್ಲಿಲ್ಲ.

೨೯-೩೨ ಭೂತವಸ್ತುಗಳೂ, ವರ್ತಮಾನವಸ್ತುಗಳೂ, ಭವಿಷ್ಯದ್ವಸ್ತುಗಳೂ ಸಹ ನಾನೇ ಆಗಿದ್ದೇನೆ (ಶರೀರರೂಪದಿಂದ ನನ್ನ ಸ್ವರೂಪಕ್ಕೆ ಸೇರಿಯೇ ಇವೆ ಎಂದರ್ಥ). ಸ್ಥಾವರಜಂಗಮಗಳೆಲ್ಲವೂ ನಾನೇ ಆಗಿದ್ದೇನೆ ಸದಸದ್ವಸ್ತುಗಳೂ ಸಹ ನಾನೇ ಆಗಿದ್ದೇನೆ. ಇದು ಪರಮಾರ್ಥವಾದ ವಿಷಯ. ಪ್ರಾಕೃತವಾದ, ಶಬ್ದ, ಸ್ಪರ್ಶ, ಗಂಧ, ರೂಪ ಇವುಗಳಿಂದ ರಹಿತನಾಗಿ ಅಪ್ರಾಕೃತಸ್ವರೂಪ

---

1 ಇದರಿಂದ ಪ್ರಪಂಚವೆಲ್ಲವೂ ಶರೀರಶರೀರಿಭಾವದಿಂದ ಬ್ರಹ್ಮಾತ್ಮಕವೆಂದೂ, ನೇಹನಾನಾಸ್ತಿ ಇತ್ಯಾದಿ ಶ್ರುತಿಗಳು ಅಬ್ರಹ್ಮಾತ್ಮಕವಸ್ತುನಿಷೇಧಪರಗಳೆಂದೂ ಕಂಠೋಕ್ತವಾಗಿ ಹೇಳಿದಂತಾಯಿತು.

ಸರ್ವಗಂ ಮಾಂ ವಿಜಾನೀಹಿ ಪರಮಾರ್ಥೇನ ನಾರದ ।
ಯಃ ಕರಿಷ್ಯತಿ ಮೇ ಸ್ತೋತ್ರಂ ಸ್ತೋತ್ರೇಣ ತ್ವತ್ಕೃತೇನ ತು　　॥ ೩೧ ॥

ತಸ್ಯ ಕಾಮಾನ್ವಿಧಾಸ್ಯಾಮಿ ಯೇ ದಿವ್ಯಾ ಯೇ ಚ ಮಾನುಷಾಃ ।
ಶ್ವೇತದ್ವೀಪೇ ಗತಿಸ್ತಸ್ಯ ಮೃತಸ್ಯ ಚ ಭವಿಷ್ಯತಿ　　॥ ೩೨ ॥

ಶ್ವೇತದ್ವೀಪಮವಾಪ್ಯಾಪಿ ನರಃ ಸ್ವಸ್ಥೋ ಭವಿಷ್ಯತಿ ।
ವರಾಹಸ್ಯಾಸ್ಯ ಕಲ್ಪಸ್ಯ ಯಾವತ್ಕಾಲೋಽವಶಿಷ್ಯತೇ　　॥ ೩೩ ॥

ವಾರಾಹೇ ತು ಗತೇ ಕಲ್ಪೇ ತತೋ ಮಾತ್ಸ್ಯೋ ಭವಿಷ್ಯತಿ ।
ದೇವಕಾರ್ಯಾಣಿ ಕಾರ್ಯಾಣಿ ಸುಬಹೂನಿ ಯತಸ್ತ್ವಯಾ　　॥ ೩೪ ॥

ಪ್ರಾದುರ್ಭಾವಗತಶ್ಚಾಹ ಮನುಶಾಸ್ಯಸ್ತಥಾ ತ್ವಯಾ ।
ಪ್ರಾದುರ್ಭಾವಾಣಿ ಮೇ ಬ್ರಹ್ಮನ್ ವ್ಯತೀತಾನಿ ಸಹಸ್ರಶಃ　　॥ ೩೫ ॥

ದಿಂದ ಸರ್ವವ್ಯಾಪಕನಾಗಿದ್ದೇನೆ ಎಂಬ ನನ್ನ ಪರಮಾರ್ಥತತ್ತ್ವವನ್ನು ನೀನು ತಿಳಿದುಕೋ. ಎಲೈ ನಾರದನೇ, ನೀನು ಮಾಡಿರುವ ಈ ಸ್ತೋತ್ರದಿಂದ ಯಾವನು ನನ್ನನ್ನು ಸ್ತುತಿಸುತ್ತಾನೆಯೋ ಅವನಿಗೆ ಇಷ್ಟವಾದ ದಿವ್ಯ ಮತ್ತು ಮಾನುಷಭೋಗಗಳನ್ನು ನಾನೇ ಉಂಟುಮಾಡುತ್ತೇನೆ. ಅವನು ಮೃತನಾದಮೇಲೂ ಶ್ವೇತದ್ವೀಪವನ್ನು ಸೇರುತ್ತಾನೆ. ಅಲ್ಲಿಯೂ ಅವನ ಸ್ಥಿತಿಯು ಈಗ ಉಳಿದಿರುವ ವರಾಹಕಲ್ಪವು ಇರುವವರೆಗೂ ಸುಖಕರವಾಗಿಯೇ ಆಗುತ್ತದೆ

೩೪–೩೬. ಈ ವರಾಹಕಲ್ಪವು ಕಳೆದಮೇಲೆ ಮಾತ್ಸ್ಯಕಲ್ಪವೂ ಬರುತ್ತದೆ. ಆಗ ನೀನೂ ಸಹ ಅನೇಕ ದೇವಕಾರ್ಯಗಳನ್ನೂ ನಡೆಸಬೇಕು. ನಾನೂ ಸಹ ಅನೇಕ ರೂಪದಿಂದ ಅಭಿವ್ಯಕ್ತಿಹೊಂದಿ ಅವತರಿಸುತ್ತೇನೆ. ಆಗ ನೀನು ಆಯಾಯ ಆವಿರ್ಭಾವಕ್ಕೆ ತಕ್ಕ ಧರ್ಮಮಾರ್ಗವನ್ನು ಉಪದೇಶಿಸುತ್ತಾ ನನಗೆ ಶಿಕ್ಷಕನೂ ಆಗಿರಬೇಕಾಗುತ್ತದೆ. ನನ್ನ ಎಷ್ಟೋ ಅವತಾರಗಳು ಅತೀತವಾದವು ಮುಂದೆಯೂ ಅನೇಕ ಅವತಾರಗಳು ಉಂಟಾಗುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಹೇಳುತ್ತೇನೆ ಕೇಳು. ಚತುರ್ಮುಖನು ಸೃಷ್ಟಿವ್ಯಾಪಾರದಿಂದ ವಿರತನಾಗಿ ನಿದ್ರೆಹೊಂದಿದಾಗ

ಭವಿಷ್ಯನ್ತಿ ತಥಾನ್ಯಾನಿ ತತ್ರ ಮೇ ಶೃಣುಕಾನಿಚಿತ್ ।
ಅಹಮೇಕಾರ್ಣವೇ ಲೋಕೇ ಶೇಷಪರ್ಯಂಕಶಾಯಿಕಃ ॥ ೩೬ ॥

ಲಕ್ಷ್ಮೀಸಹಾಯಸ್ತಿಷ್ಠಾಮಿ ಯದಾಸುಪ್ತಃ ಪಿತಾಮಹಃ ।
ಅಹಂ ಮತ್ಸ್ಯಸ್ತಥಾಕೂರ್ಮೋ ಹಂಸೋಽಹಮಪಿನಾರದ ॥ ೩೭ ॥

ಸ್ತ್ರೀರೂಪೇಣಮಯಾಪಿತ್ರ ವಂಚಿತಾ ದೈತ್ಯದಾನವಾಃ ।
ಮಯಾಶ್ವಶಿರಸಾ ವೇದಾ ದಾನವೇಭ್ಯಸ್ತಥಾಹೃತಾಃ ॥ ೩೮ ॥

ವಾರಾಹೇಣ ಮಯಾ ಭೂತ್ವಾ ವಸುಧೇಯಂ ಸಮುದ್ಧೃತಾ ।
ವಾರಾಹೇಣ ಮಯಾ ದೈತ್ಯಾಃ ಪಾತಾಲತಲಗಾಃ ಹತಾಃ ॥ ೩೯ ॥

ನೃವರಾಹೇಣನಿಹತೋ ಹಿರಣ್ಯಾಕ್ಷೋ ಬಲೋತ್ಕಟಃ ।
ದಾನವಾಶ್ಚ ಹತಾ ಯುದ್ಧೇ ನರನಾರಾಯಣಾತ್ಮನಾ ॥ ೪೦ ॥

ನಾನು ಸಮುದ್ರದಂತೆ ಜಲಮಯವಾದ ಲೋಕದಲ್ಲಿ ಶೇಷಶಯನದಲ್ಲಿ ಲಕ್ಷ್ಮೀ ಸಹಾಯನಾಗಿ ಮಲಗಿ ಕ್ರೀಡಿಸುತ್ತೇನೆ.

೩೭–೪೩. ಮತ್ಸ್ಯರೂಪದಿಂದಲೂ, ಕೂರ್ಮರೂಪದಿಂದಲೂ, ಹಂಸರೂಪದಿಂದಲೂ, ಪ್ರಾದುರ್ಭಾವಹೊಂದಿದವನು ನಾನೇ, ಸ್ತ್ರೀರೂಪವನ್ನು ಹೊಂದಿ ದೈತ್ಯರನ್ನೂ, ದಾನವರನ್ನೂ, ಮೋಸಗೊಳಿಸಿದವನೂ ನಾನೇ, ಹಯಗ್ರೀವರೂಪಿಯಾಗಿ ದಾನವರಿಂದ ವೇದಗಳನ್ನು ಹಿಂದಕ್ಕೆ ತಂದವನೂ ನಾನೇ, ವರಾಹರೂಪಿಯಾಗಿ ಭೂಮಿಯನ್ನು ಉದ್ಧರಿಸಿದವನೂ, ಪಾತಾಲದಲ್ಲಿದ್ದ ದೈತ್ಯರನ್ನು ನಾಶಮಾಡಿದವನೂ ನಾನೇ. ಮದದಿಂದ ಕೊಬ್ಬಿದ್ದ ಹಿರಣ್ಯಾಕ್ಷನನ್ನು ಕೊಂದ ನರವರಾಹನೂ ನಾನೇ, ನರನಾರಾಯಣರೂಪದಿಂದ ದಾನವರನ್ನು ಯುದ್ಧದಲ್ಲಿ ಕೊಂದವನೂ ನಾನೇ. ಲೋಕಾತೀತವಾದ ಲೀಲೆಗಳಿಂದ ಕೃಷ್ಣನಾಗಿ ಅವತರಿಸಿದ್ದವನೂ ನಾನೇ, ನಾರಸಿಂಹರೂಪಿಯಾದ ನನ್ನಿಂದಲೇ ಹಿರಣ್ಯಕಶಿಪುವೂ ಹತನಾದನು. ದೇವತೆಗಳ ಹಿತಕ್ಕಾಗಿ

ಲೋಕೋತ್ತರೇ ತಥಾ ಮಾರ್ಗೇ ಹರಿಃ ಕೃಷ್ಣಸ್ತಥಾಪ್ಯಹಂ ।
ನಾರಸಿಹ್ಮೇನರೂಪೇಣ ಹಿರಣ್ಯಕಶಿಪುರ್ಹತಃ ॥ ೪೧ ॥

ವಾಮನೇನಮಯಾಭೂತ್ವಾ ಬಲೇಃ ತ್ರಿಭುವನಂ ಹೃತಂ ।
ತ್ರಿಭಿಃ ಕ್ರಮೈಃ ಪುರಾ ಬ್ರಹ್ಮನ್ ದೇವಾನಾಂ ಹಿತಕಾಮ್ಯಯಾ ॥ ೪೨ ॥

ವಾಡವೋಽಹಂ ಸಮುದ್ರಸ್ಥಃ ಪಿಬಾಮಿ ಸಲಿಲಂ ಸದಾ ।
ಪೃಥ್ವೀ ವಸುಮತೀ ಬ್ರಹ್ಮನ್ ಪೃಥುನಾ ಚ ಮಯಾಕೃತಾ ॥ ೪೩ ॥

ಕಪಿಲೇನ ಮಯಾ ದುಷ್ಟಾ ದಗ್ಧಾಸ್ತೇ ಸಗರಾತ್ಮಜಾಃ ।
ದತ್ತಾತ್ರೇಯೇಣ ವಸುಧಾ ದೇವಾ ದ್ವಿಜಗಣಾಃ ಪುನಃ ॥ ೪೪ ॥

ಜಾಮದಗ್ನ್ಯೇನ ರಾಮೇಣ ಲಘ್ವೀವಸುಮತೀ ಕೃತಾ ।
ತ್ರಿಃಸಪ್ತಕೃತ್ವಃ ಕರ್ತವ್ಯಾ ಕ್ಷತ್ರಭಾರಪ್ರಪೀಡಿತಾ ॥ ೪೫ ॥

ದತ್ವಾ ಚತುರ್ಧಾಪುತ್ರಾಂಶ್ಚಮಯಾ ದಶರಥಸ್ಯ ಚ ।
ರಾಮೇಣ ರಾವಣವಧಃಕರ್ತವ್ಯೋ ಜನತಾಸುಖಂ ॥ ೪೬ ॥

ತ್ರಿವಿಕ್ರಮರೂಪದಿಂದ ಅವತರಿಸಿದವನೂ ಮೊದಲು ವಾಮನರೂಪದಿಂದ ಬಲಿ ಚಕ್ರವರ್ತಿಯನ್ನು ವಂಚಿಸಿ ಅವನಿಂದ ಮೂರು ಲೋಕಗಳನ್ನೂ ಅಪಹರಿಸಿದವನೂ ಸಹ ನಾನೇ.

೪೩–೫೦. ನಾನೇ ಪರಶುರಾಮರೂಪಿಯಾಗಿ ಆವಿರ್ಭವಿಸಿ ಕ್ಷತ್ರಿಯರಿಂದ ಉಂಟಾದ ಭೂಭಾರವನ್ನು ಇಪ್ಪತ್ತೊಂದುಸಲ ಮಾಡಿದ ವಿಜಯಯಾತ್ರೆಯಿಂದ ಕಡಿಮೆಮಾಡಿ ಭೂದೇವಿಯನ್ನು ಲಘುವಾಗಿರುವಂತೆ ಮಾಡಿದೆನು. ನನ್ನ ರೂಪವನ್ನು ನಾಲ್ಕುವಿಧವಾಗಿ ಮಾಡಿಕೊಂಡು ದಶರಥನಿಗೆ ಪುತ್ರನಾಗಿ ಹುಟ್ಟಿ ರಾಮರೂಪದಿಂದ ಜಗತ್ತಿಗೆ ಕ್ಷೇಮಕರವಾದ ರಾವಣವಧವನ್ನೂ, ಭರತರೂಪದಿಂದ ಗಂಧರ್ವವಧವನ್ನೂ, ಲಕ್ಷ್ಮಣನ ರೂಪದಿಂದ ಮೇಘನಾದನ ವಧವನ್ನೂ, ಶತ್ರುಘ್ನ ರೂಪದಿಂದ ಲವಣಾಸುರನ ವಧವನ್ನೂ ಮಾಡಿದೆನು. ವಾಲ್ಮೀಕಿಮುನಿಯ ರೂಪ

ಕಾರ್ಯಂ ಗಂಧರ್ವನಿಧನಂ ತಥೈವ ಭರತಾತ್ಮನಾ ।
ಮೇಘನಾದ ವಧಃಕಾರ್ಯೋ ಲಕ್ಷ್ಮಣೇನ ತಥಾ ಮಯಾ ॥ ೪೭ ॥

ಶತ್ರುಘ್ನೇನ ಚ ಕರ್ತವ್ಯೋ ಲವಣಸ್ಯವಧಸ್ತಥಾ ।
ಮಯಾ ವಾಲ್ಮೀಕಿನಾ ಕಾರ್ಯಂ ಕಾವ್ಯಂ ರಾಮಾಯಣಂ ತಥಾ ॥ ೪೮ ॥

ವ್ಯಾಸೇನ ವೇದಾವಕ್ತವ್ಯಾಃ ಆಖ್ಯಾನಂ ಭಾರತಂ ಮಹತ್ ।
ಮಯಾ ಬ್ರಾಹ್ಮಣಶಾರ್ದೂಲ ತಥಾದ್ವೈಪಾಯನಾತ್ಮನಾ ॥ ೪೯ ॥

ಪಾಂಡೋಃ ಪುತ್ರತ್ವಮಾಸಾದ್ಯಪಂಚಧಾ ಚ ತಥಾಮಯಾ ।
ದ್ವಿಧಾ ಚ ವಸುದೇವಸ್ಯ ಲಘ್ವೀಕಾರ್ಯಾ ವಸುಂಧರಾ ॥ ೫೦ ॥

ನರಲೋಕೇ ನಿಹಂತವ್ಯಾ ದೈತ್ಯಾಮಾನವರೂಪಿಣಃ ।
ಬಲಭದ್ರೇಣಚಮಯಾ ಹನ್ತವ್ಯಾ ಮೌಷ್ಟಿಕಾದಯಃ ॥ ೫೧ ॥

ಮಯಾ ಕೃಷ್ಣೇನ ಹಂತವ್ಯಾಃ ಕಂಸಪೂರ್ವಾಮಹಾಬಲಾಃ ।
ಪ್ರದ್ಯುಮ್ನೇನ ನಿಹಂತವ್ಯಃ ಶಂಬರಶ್ಚ ಮಹಾಬಲಃ ॥ ೫೨ ॥

ದಿಂದ ರಾಮಾಯಣವೆಂಬ ಮಹಾಕಾವ್ಯವನ್ನೂ ನಾನೇ ಮಾಡಿದವನು. ವ್ಯಾಸ ರೂಪದಿಂದ ವೇದಗಳ ವಿಭಜನವನ್ನೂ, ಮಹಾಭಾರತವನ್ನೂ ಸಹ ಮಾಡಿದವನು ನಾನೇ. ಧರ್ಮರಾಜನೇ ಮೊದಲಾದ ಐದುಜನ ಪಾಂಡವರ ರೂಪಹೊಂದಿಯೂ, ಬಲಭದ್ರ ಮತ್ತು ಕೃಷ್ಣರೆಂಬ ವಸುದೇವನ ಪುತ್ರರ ರೂಪಹೊಂದಿಯೂ ಸಹ ಭೂಭಾರವನ್ನು ಲಘುವಾಗಿ ಮಾಡಿದವನೂ ನಾನೇ.

೫೧–೫೩. ಮನುಷ್ಯಲೋಕದಲ್ಲಿ ಮನುಷ್ಯರೂಪದಿಂದಿದ್ದ ಅನೇಕ ದೈತ್ಯರನ್ನೂ ನಾನೇ ಕೊಂದಿರುವೆನು. ಬಲಭದ್ರನ ರೂಪದಿಂದ ಮೌಷ್ಟಿಕಾದಿಗಳನ್ನೂ. ಕೃಷ್ಣನ ರೂಪದಿಂದ ಕಂಸನೇ ಮೊದಲಾದ ಬಲಿಷ್ಠರನ್ನೂ ಸಹ ನಾನೇ ಕೊಂದವನು, ಪ್ರದ್ಯುಮ್ನರೂಪದಿಂದ ಬಲಶಾಲಿಯಾದ ಶಂಬರನನ್ನೂ, ಅನಿರುದ್ಧರೂಪದಿಂದ ಸಾವಿರಾರು ದೈತ್ಯರನ್ನೂ ನಾನೇ ಕೊಂದವನು, ಸಾಂಬ, ಯುಯುಧಾನರೂಪದಿಂದ ಆವಿರ್ಭವಿಸಿದವನೂ ನಾನೇ, ನಾನೇ ಕಲಿಯುಗದಲ್ಲಿ ಬುದ್ಧನಾಗಿ ಧರ್ಮೋಪದೇಶವನ್ನೂ ಮಾಡಿದೆನು, ವಿಷ್ಣುಭಕ್ತರಾದ ಆಯಾಯ ರಾಜರಿಂದ ಮ್ಲೇಚ್ಛರಾಜರನ್ನು

ಹಂತವ್ಯಾಶ್ಚಾನಿರುದ್ಧೇನ ದೈತ್ಯಾಃ ಶತಸಹಸ್ರಶಃ ।
ಸಾಂಬೇನ ಯುಯುಧಾನೇನ ಮಯಾಭೂತ್ವಾತಥೈವಚ ॥ ೫೩ ॥

ಮಯಾ ಬುದ್ಧೇನ ವಕ್ತವ್ಯಾ ಧರ್ಮಾಃ ಕಲಿಯುಗೇ ಪುನಃ ।
ಹನ್ತವ್ಯಾಮ್ಲೇಚ್ಛರಾಜಾಸ್ತೆತಥಾವಿಷ್ಣುಯಶಾತ್ಮನಾ ॥ ೫೪ ॥

ಮಮಾಂಶೇನ ವಿಜಾನೀಹಿಪೃಥಿವ್ಯಾಂ ಚಕ್ರವರ್ತಿನಃ ।
ಋಷಯಶ್ಚ ತಥಾ ಜ್ಞೇಯಾ ಮನ್ಮಾಂಶಸಮುದ್ಭವಾಃ ॥ ೫೫ ॥

ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ಚ ।
ತತ್ತದೇವಾವಗಚ್ಛತ್ವಂ ಮಮತೇಜೋಂಶಸಂಭವಂ ॥ ೫೬ ॥

ಅಥವಾ ಬಹುನೈತೇನ ಕಿಂಜ್ಞಾನೇನ ತವಾನಘ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನಾಸ್ಥಿತೋ ಜಗತ್ ॥ ೫೭ ॥

ತದ್ಗಚ್ಛಮಾನಸೀ ಸಿದ್ಧಿಃ ಸದಾ ತೇಸ್ತು ದ್ವಿಜೋತ್ತಮ ।
ಕಲ್ಪಾವಸಾನಮಾಸಾದ್ಯ ಮಚ್ಛರೀರಂ ಪ್ರವೇಕ್ಷ್ಯಸಿ ॥ ೫೮ ॥

ಕೊಂದವನೂ ನಾನೇ, ಭೂಮಿಯಲ್ಲಿ ಚಕ್ರವರ್ತಿಗಳಾಗಿದ್ದವರೆಲ್ಲರೂ ನನ್ನ ಅಂಶ ದಿಂದಲೇ ಜನಿಸಿದವರು, ಋಷಿಗಳೂ ಸಹ ನನ್ನ ಅಂಶದಿಂದಲೇ ಜನಿಸಿದವರು.

೫೬-೫೮. ಪ್ರಪಂಚದಲ್ಲಿ ಯಾವ ಯಾವ ಚೇತನಾಚೇತನಗಳು ಬಲವತ್ತಾಗಿಯೂ, ಸಮೃದ್ಧಿಯುಳ್ಳದ್ದಾಗಿಯೂ ಇರುವುವೋ ಅವೆಲ್ಲವೂ ನನ್ನ ತೇಜಸ್ಸಿನ ಒಂದೊಂದಂಶದಿಂದ ಉಂಟಾಗಿವೆ ಎಂದು ತಿಳಿ. ಅಥವಾ ಬಹುಮುಖವಾದ ಈ ಜ್ಞಾನದಿಂದ ನಿನಗೇನಾಗಬೇಕು ಮುಖ್ಯವಾಗಿ ನಾನೊಬ್ಬನೇ ನನ್ನ ಜ್ಞಾನ ಶಕ್ತ್ಯಾದಿಗುಣಗಳ ಏಕಾಂಶದಿಂದ ಜಗತ್ತೆಲ್ಲವನ್ನೂ ಆಕ್ರಮಿಸಿ ಧರಿಸಿ ನಿಂತಿದ್ದೇನೆ. (ಜಗತ್ತಿನ ಸ್ವರೂಪಸ್ಥಿತಿಪ್ರವೃತ್ತಿಗಳೆಲ್ಲವೂ ನನ್ನ ಸಂಕಲ್ಪಲೇಶದಿಂದ ನಡೆಯುತ್ತಿವೆ ಎಂಬುದನ್ನು ಮಾತ್ರ ತಿಳಿದುಕೊಂಡರೆ ಸಾಕು ಎಂದು ತಾತ್ಪರ್ಯ). ಆದ್ದರಿಂದ ಇನ್ನು ನೀನು ಹೊರಡು. ನಿನಗೆ ಸರ್ವಕಾಲದಲ್ಲಿಯೂ ನನ್ನ ವಿಷಯವಾದ ಮಾನಸಸಿದ್ಧಿಯುಂಟಾಗಲಿ. ಈ ಕಲ್ಪವು ಮುಗಿದ ಮೇಲೆ ನೀನು ಮುಕ್ತನಾಗಿ ನನ್ನನ್ನು ಹೊಂದುತ್ತೀಯೆ.

ಏತಾವದುಕ್ತ್ವಾ ವಚನಂ ತತ್ರೈವಾಂತರಧೀಯತ ।
ಭಗವಾನ್ನಾರದಶ್ಚಕ್ರೇ ಪೂಜಾಂ ತದ್ದೇಶವಾಸಿನಾಂ ॥ ೫೯ ॥

ತೈಶ್ಚ ಸಂಪೂಜಿತೋ ವಿಪ್ರಸ್ತಾನ್ಪ್ರಣಮ್ಯ ಯತವ್ರತಃ ।
ಆಜಗಾಮ ತತಃ ಶೀಘ್ರಂ ನರನಾರಾಯಣಾಶ್ರಮಂ ॥ ೬೦ ॥

ಪಾದಯೋಃ ನ್ಯಪತತ್ತತ್ರ ಸ ತಯೋರ್ಮುನಿಪೂಜ್ಯಯೋಃ ।
ತಾಭ್ಯಾಂ ಸಂಪೂಜಿತೋ ವಿಪ್ರಸ್ತತ್ರೋವಾಸ ತದಾಶ್ರಮೇ ॥ ೬೧ ॥

ತತಃ ಕದಾಚಿತ್ತಂ ವಿಪ್ರಮೂಚತುಸ್ತೌ ತಪೋಧನೌ ।
ಆವಾಭ್ಯಾಂ ತ್ವಂ ತಥಾದೃಷ್ಟಃ ಶ್ವೇತದ್ವೀಪಗತೇಽಚ್ಯುತಃ ॥ ೬೨ ॥

ಸಮೀಪಂ ದೇವದೇವಸ್ಯ ತದ್ದೇಶಸ್ಥೈರ್ಯಥಾಸುಖಂ ।
ಲೋಕೇಽಸ್ಮಿನ್ ಮುನಿಶಾರ್ದೂಲ ನಾಸ್ತಿಧನ್ಯತರಸ್ತ್ವಯಾ ॥ ೬೩ ॥

ದೃಷ್ಟವಾನಸಿ ಯದ್ಬ್ರಹನ್ ವಿಶ್ವರೂಪಧರಂ ಹರಿಂ ।
ತ್ರೈಲೋಕ್ಯಸಾರಂ ವಿಶ್ವೇಶಂ ಪ್ರಣತಾರ್ತಿವಿನಾಶನಂ ॥ ೬೪ ॥

೫೯–೬೪. ಇಷ್ಟು ಹೇಳಿ ಆ ಭಗವಂತನು ಅಲ್ಲಿಯೇ ಅಂತರ್ಧಾನಹೊಂದಿದನು. ನಾರದಮಹರ್ಷಿಯೂ ಸಹ ನಂತರ ಆ ದೇಶವಾಸಿಗಳನ್ನು ಪೂಜಾದಿಗಳಿಂದ ಸತ್ಕರಿಸಿ ತಾನೂ ಅವರಿಂದ ಸತ್ಕೃತನಾಗಿ ಅವರೆಲ್ಲರನ್ನೂ ನಮಸ್ಕರಿಸಿ ತನ್ನ ವ್ರೈಷ್ಣವವ್ರತಕ್ಕೆ ತಕ್ಕಂತೆ ನರನಾರಾಯಣರ ಆಶ್ರಮಕ್ಕೆ ಜಾಗ್ರತೆಯಾಗಿಯೇ ಹೊರಟುಬಂದನು ಅಲ್ಲಿ ಪೂಜ್ಯರಾದ ನರನಾರಾಯಣರಿಗೆ ನಮಸ್ಕರಿಸಿ ಅವರಿಂದಲೂ ಅಭಿನಂದಿತನಾಗಿ ಅವರ ಆಶ್ರಮದಲ್ಲಿಯೇ ಕೆಲವುಕಾಲ ವಾಸವಾಗಿದ್ದನು. ಒಂದಾನೊಂದುಕಾಲದಲ್ಲಿ ತಪಸ್ವಿಗಳಾದ ಆ ನರನಾರಾಯಣರು ನಾರದಮಹಷಿಯನ್ನು ಕುರಿತು, ಅಚ್ಯುತಸ್ವರೂಪನಾದ ನಾರಾಯಣನು ಶ್ವೇತದ್ವೀಪದಲ್ಲಿರುವಾಗ ಆ ಪರಮಾತ್ಮನ ಸಮೀಪದಲ್ಲೇ ಇದ್ದ ನಿನ್ನನ್ನು ಆ ದೇಶದ ಜನಗಳೊಡನೆ ನಾವೂ ನೋಡಿ ಸಂತೋಷಪಟ್ಟೆವು. ಎಲೈ ಮುನಿವರನೇ ಮೂರು ಲೋಕಕ್ಕೂ ಸಾರಭೂತನಾಗಿಯೂ ಲೋಕಾಧಿಪತಿಯೂ, ಭಕ್ತರದುಃಖಗಳನ್ನು ಹೋಗಲಾಡಿಸುವವನೂ ಆದ ವಿಶ್ವರೂಪಧಾರಿಯಾದ ಹರಿಯನ್ನು ನೀನು ನೋಡಿದೆ, ಆದ್ದರಿಂದ ನೀನೇ ಲೋಕದಲ್ಲಿ ಧನ್ಯ. ನಿನಗಿಂತಲೂ ಧನ್ಯರಾದವರು ಲೋಕದಲ್ಲಿ ಮತ್ತೊಬ್ಬರಿಲ್ಲ

ಯತಸ್ತೇಽನುಗ್ರಹಸ್ತೇನ ಕೃತೋ ದೇವೇನ ವಿಷ್ಣುನಾ ।
ತತೋ ಗುಹ್ಯಂ ನಿಬೋಧೇಮಂ ತತ್ಪೂಜಾವಿಧಿಮುತ್ತಮಂ ॥ ೬೫ ॥

ಸರ್ವಕರ್ಮಕರಂ ದಿವ್ಯಂ ಸಕಲಾರ್ಥಪ್ರದಂ ಶಿವಂ ।
ನಾಭಕ್ತಾಯ ಚ ತದ್ದೇಯಂ ತ್ವಯಾ ಬ್ರಾಹ್ಮಣಸತ್ತಮ ॥ ೬೬ ॥

ಏಕಾನ್ತಭಾವೋಪಗತಂ ಜನಾರ್ದನಂ
ನರಸ್ತು ಸಂಪೂಜ್ಯ ತಥಾ ವಿಧಾನತಃ ।
ಪ್ರಯಾತಿ ತದ್ದ್ವೀಪಮನುತ್ತಮಂ ಶಿವಂ
ನ ಯತ್ರ ಗತ್ವಾ ವಿನಿವರ್ತತೇ ಪುನಃ ॥ ೬೭ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ವಿಶ್ವರೂಪಾಖ್ಯಾನಂ ನಾಮೈಕ
ಪಂಚಾಶದುತ್ತರ ತ್ರಿಶತತಮೋಽಧ್ಯಾಯಃ

೬೫-೬೭ ಪ್ರಭುವಾದ ಆ ಮಹಾವಿಷ್ಣುವಿನ ಅನುಗ್ರಹಕ್ಕೆ ನೀನು ಪಾತ್ರನಾಗಿರುವುದರಿಂದ ಅವನ ಪ್ರೀಣನಕ್ಕಾಗಿ ಮಾಡಬೇಕಾದ ರಹಸ್ಯವಾದ ಈ ಪೂಜಾ ವಿಧಾನವನ್ನು ನೀನು ತಿಳಿದುಕೊ, ಇದು ಬಹಳ ಉತ್ತಮೋತ್ತಮ ಮತ್ತು ಸರ್ವ ಕರ್ಮಗಳಿಗೂ ಸಿದ್ಧಿಪ್ರದ, ಸಕಲ ಪುರುಷಾರ್ಥಗಳಿಗೂ ಸಾಧಕ, ಹಾಗೂ ಮಂಗಳಕರ, ಅಲೌಕಿಕವಾದ ಶ್ರೇಯಸ್ಸಾಧನ, ಈ ವಿಧಾನವನ್ನು ಭಗವದ್ಭಕ್ತನಲ್ಲದವನಿಗೆ ಯಾವಾಗಲೂ ನೀನು ಉಪದೇಶಿಸಕೂಡದು. ಈ ವಿಧಾನವನ್ನು ಏಕಾಂತಭಕ್ತಿ ಭಾವದಿಂದ ಆ ಜನಾರ್ದನನನ್ನು ಪೂಜಿಸಿದವನು, ಉತ್ತಮಸ್ಥಾನವಾದ ಆ ದ್ವೀಪವನ್ನೇ ಹೊಂದುತ್ತಾನೆ. ಅಲ್ಲಿಂದ ಇವನಿಗೆ ಪುನರಾವೃತ್ತಿಯೇ ಆಗುವುದಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ವಿಶ್ವರೂಪಾಖ್ಯಾನವೆಂಬ ಮುನ್ನೂರ
ಐವತ್ತೊಂದನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ದ್ವಿಪಂಚಾಶದುತ್ತರ ತ್ರಿಶತತಮೋಽಧ್ಯಾಯಃ ॥

ಗದ್ಯ— ನರನಾರಾಯಣಾವೂಚತುಃ— ಆದಾವೇವ ಸರಃ ಸರಿತ್ಸ್ರವಣ ಸಮೀಪ ಗೃಹೋಪವನಪರ್ವತಮಸ್ತಕಾನಾಮನ್ಯತಮೇ ಹೃದ್ಯೇ ದೇಶೆ ಸುಸಮಂ, ಮನೋಹರಂ, ಹಸ್ತಮಾತ್ರಂ ಮಂಡಲಿಕಮುಪ-ಕಲ್ಪಯೇತ್ ॥ ತತ್ರ ಮಧ್ಯೇಽಷ್ಟಪತ್ರಂ ಪದ್ಮಮಾಲಿಖೇತ್ । ತತಸ್ತೂದಾಹೃತ ಚತುರಸ್ರ ಯಾ ಚತುರ್ದ್ವಾರಲೇಖಯಾ ವಿಭ-ಜೇತ್ । ತತಃ ಪದ್ಮಕರ್ಣಿಕಾಮಧ್ಯೇ ಶ್ವೇತಂ ಶತಪತ್ರಂ ಪದ್ಮಂ ಧ್ಯಾಯೇತ್ ॥

ಮುನ್ನೂರ ಐವತ್ತೆರಡನೆಯ ಅಧ್ಯಾಯ.

ನರನಾರಾಯಣರು ಹೀಗೆ ಹೇಳಿದರು :—ಮೊಟ್ಟಮೊದಲು ಸರೋವರ, ನದಿ, ಝರಿ ಇವುಗಳಲ್ಲಿ ಯಾವುದಾದರೊಂದರ ಸಮೀಪದಲ್ಲಾಗಲಿ, ಮನೆಯ ಉದ್ಯಾನ, ಪರ್ವತದ ಮೇಲ್ಭಾಗವು ಇವುಗಳಲ್ಲಾಗಲಿ ಮನೋಹರವಾದ ಪ್ರದೇಶದಲ್ಲಿ ಒಂದು ಮೊಳ ಉದ್ದ ಮತ್ತು ಅಗಲದ ರಮ್ಯವಾದ ಮತ್ತು ಸಮವಾದ ಮಂಡಲವನ್ನು ಮಾಡಬೇಕು. ಆ ಮಂಡಲದ ಮಧ್ಯದಲ್ಲಿ ಎಂಟು ದಳಗಳುಳ್ಳ ಪದ್ಮವನ್ನು ಬರೆಯಬೇಕು ಅದನ್ನು ಮುಂದೆ ಹೇಳುವ ಕ್ರಮದಿಂದ ಕೂಡಿದ ಚಚ್ಚೌಕವಾದ ನಾಲ್ಕು ದ್ವಾರರೇಖೆಯಿಂದ ವಿಭಾಗಮಾಡಬೇಕು. ಆ ಪದ್ಮದ ಕರ್ಣಿಕೆಯ ಮಧ್ಯ ಭಾಗದಲ್ಲಿ ಬಿಳುಪಾದ ನೂರು ದಳಗಳುಳ್ಳ ಪದ್ಮವನ್ನು ಧ್ಯಾನಮಾಡಬೇಕು.

ತತ್ಕರ್ಣಿಕೋಪರ್ಯರ್ಕಮಂಡಲಂ ತದುಪರಿ ಚಂದ್ರಮಂಡಲಂ ತದುಪರಿ ಅಗ್ನಿಮಂಡಲಂ ತನ್ಮಧ್ಯೇ ಪರಮಂ ಪುರುಷಂ ಅಶರೀರಂ, ಅಗಂಧಂ, ಅರಸಂ, ಅರೂಪಂ, ಅಸ್ಪರ್ಶಂ, ಅಶಬ್ದಂ, ಸರ್ವಗಂ ಪ್ಲುತಾಂತಂ ಓಂಕಾರಂ ವಿನ್ಯಸೇತ್ । ಕಮಲಪೂರ್ವದಲೇ ಅಕಾರಂ ವಾಸುದೇವಂ ನ್ಯಸೇತ್ । ಶ್ವೇತವರ್ಣಂ ಧ್ಯಾಯೇತ್ । ದಕ್ಷಿಣೆ ಆಕಾರಂ ಸಂಕರ್ಷಣಂ ವಿನ್ಯಸೇತ್ ಪದ್ಮಪತ್ರಾಭಂ ತಂ ಚಧ್ಯಾಯೇತ್ ॥ ಪಶ್ಚಿಮದಲೆ ಓಂಕಾರೇ ಪ್ರದ್ಯುಮ್ನಂ ವಿನ್ಯಸೇತ್ ಪೀತವರ್ಣಂ ಚಧ್ಯಾಯೇತ್ । ಉತ್ತರೆದಲೆ ಅಃಕಾರಮನಿರುದ್ಧಂ ವಿನ್ಯಸೇತ್ ಕೃಷ್ಣವರ್ಣಂ ಚಧ್ಯಾಯೇತ್ ॥

ಐಶಾನೇ ದಲೆತದಿತಿ ಬ್ರಹ್ಮಾಣಂ ವಿನ್ಯಸೇತ್, ಪೀತವರ್ಣಂ ಚಧ್ಯಾಯೆತ್॥ ಸೂರ್ಯಕೋಟಿ ಸಮಂಧ್ಯಾಯೆತ್ ॥ ವಾಯುವ್ಯದಲೆವರಾಹಂ-

---

ಆ ಪದ್ಮದ ಕರ್ಣಿಕೆಯ ಮೇಲೆ ಸೂರ್ಯಮಂಡಲವನ್ನೂ ಅದರ ಮೇಲೆ ಚಂದ್ರಮಂಡಲವನ್ನೂ ಅದರ ಮೇಲೆ ಮಧ್ಯದಲ್ಲಿ ಅಶರೀರನೂ, ಅಗಂಧನೂ, ಅರಸನೂ, ಅರೂಪನೂ, ಅಸ್ಪರ್ಶನೂ, ಆದ ಸರ್ವವ್ಯಾಪ್ತನಾದ ಪರಮಪುರುಷನನ್ನೂ ಅವನಿಗೆ ವಾಚಕವಾದ ಓಂಕಾರರೂಪದಿಂದ ನ್ಯಾಸಮಾಡಬೇಕು. ಆ ಕಮಲದ ಪೂರ್ವಭಾಗದ ದಲದಲ್ಲಿ ವಾಸುದೇವನಿಗೆ ವಾಚಕವಾದ ಅಕಾರವನ್ನು ನ್ಯಾಸ ಮಾಡಬೇಕು. ಬಿಳಿಯ ವರ್ಣದಿಂದ ಕೂಡಿದವನನ್ನಾಗಿ ಧ್ಯಾನಿಸಬೇಕು. ದಕ್ಷಿಣ ಭಾಗದಲ್ಲಿ ಆಕಾರರೂಪದಿಂದ ಸಂಕರ್ಷಣನನ್ನು ನ್ಯಾಸಮಾಡಬೇಕು. ಪದ್ಮದ ದಲದಂತಿರುವ ವರ್ಣವುಳ್ಳವನನ್ನಾಗಿ ಧ್ಯಾನಿಸಬೇಕು. ಪಶ್ಚಿಮಭಾಗದ ದಲದಲ್ಲಿ ಓಂಕಾರರೂಪದಿಂದ ಪ್ರದ್ಯುಮ್ನನನ್ನು ವಿನ್ಯಾಸಮಾಡಬೇಕು. ಹೊಂಬಣ್ಣ ಉಳ್ಳವನನ್ನಾಗಿ ಧ್ಯಾನಿಸಬೇಕು. ಉತ್ತರ ದಲದಲ್ಲಿ ಅಃ ಎಂಬ ವರ್ಣದಿಂದ ಅನಿರುದ್ಧನನ್ನು ವಿನ್ಯಾಸಮಾಡಿ ಕೃಷ್ಣವರ್ಣಉಳ್ಳವನನ್ನಾಗಿ ಧ್ಯಾನಿಸಬೇಕು.

ಈಶಾನ್ಯದಿಕ್ಕಿನ ದಲದಲ್ಲಿ ತತ್ ಎಂಬ ಅಕ್ಷರಗಳಿಂದ ಬ್ರಹ್ಮನನ್ನು ನ್ಯಾಸ ಮಾಡಬೇಕು. ಪದ್ಮದಲದ ವರ್ಣದಿಂದ ಧ್ಯಾನಮಾಡಬೇಕು ಕೋಟಿಸೂರ್ಯರಂತಹ ತೇಜಸ್ಸಿನೊಡನೆಯೂ ಧ್ಯಾನಮಾಡಬೇಕು. ವಾಯುವ್ಯದಲದಲ್ಲಿ ವರಾಹಮೂರ್ತಿಯನ್ನು ನ್ಯಾಸಮಾಡಬೇಕು. ಕಾಡಿಗೆಯಂತೆ ಕಪ್ಪಾದ ವರ್ಣಉಳ್ಳವ

ವಿನ್ಯಸೇತ್ ॥ ಭಿನ್ನಾಂಜನಸಮಂಧ್ಯಾಯೇತ್ ॥ ಪ್ರಪೂರ್ವದ್ವಾರೇ ಓಂ. ಕೈಂ, ಟೈಂ, ಯೈಂ ॥ ಏತಾನ್ಯಕ್ಷರಾಣಿ ವೈನತೇಯಂ ವಿನ್ಯಸೇತ್ ॥ ಹೇಮವರ್ಣಂ ಚಧ್ಯಾಯೇತ್ ॥ ದಕ್ಷಿಣೆದ್ವಾರೇ ತೇಜೋರಥರ[1]ತೃಚಕ್ರಂ ಸುದರ್ಶನಂ ವಿನ್ಯಸೇತ್ ।

ವಜ್ರನಾಭಂ ಸಹಸ್ರಾರಂ ಸೂರ್ಯಕೋಟಿಸಮಪ್ರಭಂ ಧ್ಯಾಯೇತ್-ಪಶ್ಚಿಮದ್ವಾರೇ ಶಾರ್ಙ್ಗಂವಿನ್ಯಸೇತ್, ಇಂದ್ರಚಾಪನಿಭಂಧ್ಯಾಯೇತ್॥ ಸ್ವೇಮ್, ಶೇಮ್, ಹೇಮ್, ಥೇಮ್ ॥ ಉತ್ತರೆದ್ವಾರೆ ಅನಿರುದ್ಧಂ ನ್ಯಸೇತ್ । ಸರ್ವವರ್ಣಂ ಧ್ಯಾಯೇತ್ ವೇಂ, ಣೇಂ, ಕ್ಷೇಂ, ಕ್ಷೇಂ ॥ ವಿದಿಕ್ಷು ಪಾಂಚಜನ್ಯಂ ಶಂಖಂ ನ್ಯಸೇತ್ । ಶಶಾಂಕವರ್ಣಂ-ಧ್ಯಾಯೇತ್ ಫೇಂ । ಹೇಂ, ಭೇಂ, ಹೇಂ, । ಶ್ರಿಯಂಪದ್ಮಂ ದಕ್ಷಿಣತೋನ್ಯಸೇತ್ । ಶುಕ್ಲಾಂ ಧ್ಯಾಯೇತ್ ಗೇಂ, ಡೇಂ, ವೇಂ, ಶೇಂ, ಪದ್ಮಾಂತರತಃ ಪುಷ್ಟಿಂನ್ಯಸೇತ್ । ಶ್ವೇತಾಂಧ್ಯಾಯೇತ್ ।

ಸನ್ನಾಗಿ ಧ್ಯಾನಿಸಬೇಕು. ಪೂರ್ವದ್ವಾರದ ಪ್ರಾಂತದಲ್ಲಿ ಓಮ್, ಕೈಮ್, ಟೈಮ್, ಯೇಮ್, ಈ ಅಕ್ಷರಗಳಿಂದ ವೈನತೇಯನನ್ನು ನ್ಯಾಸಮಾಡಬೇಕು. ಚಿನ್ನದ ಬಣ್ಣ ಉಳ್ಳವನನ್ನಾಗಿ ಧ್ಯಾನಿಸಬೇಕು. ದಕ್ಷಿಣದ್ವಾರದಲ್ಲಿ ತೇಜೋರೂಪಿಯಾಗಿರುವ ಸುದರ್ಶನನನ್ನು ರಥಚಕ್ರಾಕಾರದಿಂದ ನ್ಯಾಸಮಾಡಬೇಕು. ವಜ್ರನಾಭಿಯುಳ್ಳವನನ್ನಾಗಿಯೂ, ಸಹಸ್ರ ಅರಗಳಿಂದಕೂಡಿ ಕೋಟಿಸೂರ್ಯ ಸಮಪ್ರಭೆಯುಳ್ಳವನನ್ನಾಗಿಯೂ ಧ್ಯಾನಿಸಬೇಕು. ಪಶ್ಚಿಮದ್ವಾರದಲ್ಲಿ ಸ್ವೇಮ್, ಶೇಮ್, ಹೇಮ್, ಥೇಮ್, ಅಕ್ಷರಗಳಿಂದ ಶಾರ್ಙ್ಗಯುಧವನ್ನು ವಿನ್ಯಾಸಮಾಡಬೇಕು. ಇಂದ್ರಚಾಪದಂತಹ ಕಾಂತಿಯಿಂದ ಕೂಡಿರುವಂತೆ ಧ್ಯಾನಿಸಬೇಕು. ಉತ್ತರದ್ವಾರದಲ್ಲಿ ವೇಮ್ ಣೇಮ್, ಕ್ಷೇಮ್, ಕ್ಷೇಮ್, ಎಂಬ ಅಕ್ಷರಗಳಿಂದ ಅನಿರುದ್ಧನನ್ನು ನ್ಯಾಸಮಾಡಿ ಸರ್ವವರ್ಣದಿಂದ ಕೂಡಿರುವಂತೆ ಧ್ಯಾನಿಸಬೇಕು. ವಿದಿಕ್ಕುಗಳಲ್ಲಿ ಫೇಮ್, ಹೇಮ್, ಭೇಮ್, ಹೇಮ್, ಎಂಬ ಅಕ್ಷರಗಳಿಂದ ಪಾಂಚಜನ್ಯವೆಂಬ ಶಂಖವನ್ನು ನ್ಯಾಸಮಾಡಿ ಚಂದ್ರನ ವರ್ಣದಿಂದ ಕೂಡಿರುವಂತೆ ಧ್ಯಾನಿಸಬೇಕು ಗೇಮ್, ಡೇಮ್, ವೇಮ್, ಶೇಮ್ ಎಂಬ ಅಕ್ಷರಗಳಿಂದ ದಕ್ಷಿಣದಲ್ಲಿ ಲಕ್ಷ್ಮಿಯ ಸ್ವರೂಪವಾದ ಪದ್ಮವನ್ನು ನ್ಯಾಸಮಾಡಿ ಬಿಳಿಯ ಬಣ್ಣದಿಂದ ಕೂಡಿರುವಂತೆ ಧ್ಯಾನಿಸಬೇಕು. ಪದ್ಮದ ಒಳಭಾಗದಲ್ಲಿ ಹ್ರೈಮ್, ಸೇಮ್, ಎಂಬ ಅಕ್ಷರಗಳಿಂದ ಪುಷ್ಟಿಯನ್ನು ನ್ಯಾಸಮಾಡಿ

---

1 ಇದು ಅಶುದ್ಧಪಾಠ.

ಹ್ಯೆಂ. ಸೇಂ, ಪುರತೋ ವನಮಾಲಾಂ ನ್ಯಸೇತ್ ಹ್ಯೆಂ, ಸೇಂ, ಬಹುವರ್ಣಾಂಧ್ಯಾಯೇತ್ ||

ಓಮಿತ್ಯೈಶಾನ್ಯಾಂ ನಂದಕಂ ನ್ಯಸೇತ್ । ಆಕಾಶವರ್ಣಂ ಧ್ಯಾಯೇತ್ । ಓಮಿತ್ಯಾಗ್ನೇಯ್ಯಾಂ ವರ್ಮನ್ಯಸೇತ್। ಬಹುವರ್ಣಂ ಧ್ಯಾಯೇತ್ । ಓಮ್, ಝೀಮ್, ಲೇಮ್, ಶ್ರೀವತ್ಸಂ ನ್ಯಸೇತ್ । ಶುಕ್ಲಾಂ ಧ್ಯಾಯೇತ್ । ಓಮ್, ಭೇಮ್, ಠೇಮ್, ವಾಯವ್ಯೇ ಕೌಸ್ತುಭಂ ನ್ಯಸೇತ್ । ಆದಿತ್ಯಂ ದೀಪ್ತಂ ಧ್ಯಾಯೇತ್ ತತೋ ಮಂಡಲೇ ಬಾಹ್ಯಸ್ಥಂ ಯಥಾ ಸ್ವದಿಶಮೋಕಾರೌಕಾರೌ ದಿಕ್ಪತೀ ಶಕ್ರಾಗ್ನೀ ಯಮನೈಋತವಾರುಣಪವನಕುಬೇರಾ ನೈಶಾನ್ಯಾಂ ನ್ಯಸೇತ್ । ಯಥೋಕ್ತರೂಪಂ ಧ್ಯಾಯೇತ್ ।

ಶ್ವೇತವರ್ಣದಿಂದ ಕೂಡಿರುವಂತೆ ಧ್ಯಾನಿಸಬೇಕು. ಮುಂಭಾಗದಲ್ಲಿ ಹ್ಯೆಮ್, ಸೇಮ್ ಎಂಬ ಅಕ್ಷರಗಳಿಂದ ವನಮಾಲೆಯನ್ನು ನ್ಯಾಸಮಾಡಿ ಬಹುವರ್ಣಗಳಿಂದ ಕೂಡಿರುವಂತೆ ಧ್ಯಾನಿಸಬೇಕು.

ಓಂ ಎಂಬ ಅಕ್ಷರದಿಂದ ಈಶಾನ್ಯದಿಕ್ಕಿನಲ್ಲಿ ನಂದಕವೆಂಬ ಖಡ್ಗವನ್ನು ನ್ಯಾಸಮಾಡಿ ಆಕಾಶವರ್ಣವುಳ್ಳದ್ದನ್ನಾಗಿ ಧ್ಯಾನಿಸಬೇಕು. ಅದೇ ಅಕ್ಷರದಿಂದ ಆಗ್ನೇಯ ದಿಕ್ಕಿನಲ್ಲಿ ವರ್ಮ (ಕವಚ) ವನ್ನು ನ್ಯಾಸಮಾಡಿ ಅನೇಕ ವರ್ಣಗಳಿಂದ ಕೂಡಿದುದನ್ನಾಗಿ ಧ್ಯಾನಿಸಬೇಕು. ಓಂ, ಝೀಂ, ಲೇಂ ಎಂಬ ಅಕ್ಷರಗಳಿಂದ ಶ್ರೀವತ್ಸವನ್ನು ನ್ಯಾಸಮಾಡಿ ಬಿಳಿಯ ಬಣ್ಣವುಳ್ಳದ್ದನ್ನಾಗಿ ಧ್ಯಾನಿಸಬೇಕು. ಓಂ, ಭೇಂ, ಠೇಂ ಎಂಬ ಅಕ್ಷರಗಳಿಂದ ವಾಯುವ್ಯದಿಕ್ಕಿನಲ್ಲಿ ಕೌಸ್ತುಭವನ್ನು ನ್ಯಾಸಮಾಡಿ ಸೂರ್ಯನಂತೆ ಜ್ವಲಿಸುತ್ತಿರುವಂತೆ ಧ್ಯಾನಿಸಬೇಕು. ಅನಂತರ ಮಂಡಲದ ಹೊರಭಾಗದಲ್ಲಿ ಆಯಾಯ ದಿಕ್ಕಿಗೆ ತಕ್ಕಂತೆ ಓಕಾರ ಔಕಾರಗಳನ್ನೂ ದಿಕ್ಪತಿಗಳಾದ ಇಂದ್ರಾಗ್ನಿ, ಯಮ, ನಿಋುಋುತಿ, ವರುಣ ವಾಯು, ಕುಭೇರ ಇವರನ್ನು ಈಶಾನ್ಯದಿಂದ ನ್ಯಾಸಮಾಡಿ ಹಿಂದೆ ಹೇಳಿರುವ ಅವರವರ ರೂಪಗಳಿಂದ ಧ್ಯಾನಮಾಡಬೇಕು.

ಓಂ ನಮೋ ಭಗವತೇ ವಾಸುದೇವಾಯೇತ್ಯನ್ಯೇನ ದ್ವಾದಶಾಕ್ಷರೇಣ ಕರ್ಣಿಕಾಮಧ್ಯೇ ಪುರುಷಾಯಾರ್ಘ್ಯಪಾದ್ಯಾಚಮನೀಯಾನುಲೇ-ಪನ ಪುಷ್ಪದೀಪಧೂಪ ಮಧುಪರ್ಕ ನೈವೇದ್ಯಫಲಭಕ್ಷ್ಯಾಣಿ ನಿವೇದ ಯೇತ್ । ಓಂನಮೋ ನಾರಾಯಣಾಯೇತ್ಯಥವಾಷ್ಟಾಕ್ಷರೇಣ ಮಂತ್ರೇಣ ॥

ಓಂ ಜಿತಂತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥

ಇತ್ಯನೇನಮಂತ್ರೇಣ ಪುರುಷಸೂಕ್ತೇನವಾ । ಅಥಾನ್ಯಾನ್ ದಲನಿವಿಷ್ಟಾ ನ್ದೇವಾನ್ಯಥಾಭಿಹಿತೈಃ ಮಂತ್ರೈಃ ಪೃಥಕ್ಪೃಥಗರ್ಚಯೇತ್ ।

ಅನೇನ ವಿಧಿನಾಯಸ್ತು ವಿಷ್ಣುಮಭ್ಯರ್ಚಯೇನ್ನರಃ ।
ಸರ್ವಾನ್ಸಸಾಧಯೇದರ್ಥಾನ್ ಕೃತಕೃತ್ಯೋಹಿಜಾಯತೇ ॥

ಕೃತ್ವಾ[1] ವ್ಯಾಧಿಂ ವ್ಯಾಧಿತಂ ಭಕ್ಷಯತಿ ನ ಕರೋತಿ ನ ತೆದಾಪ್ನೋತಿ ಇದಂ ತ್ವನ್ಯತ್ ॥ ಧನ್ಯಂ ಯಶಸ್ಯಂ ಪುಣ್ಯಂ ಚ ಪವಿತ್ರಂ ಪಾಪನಾಶನಂ ॥ ಆರೋಗ್ಯಂ ಧನಧಾನ್ಯವರ್ಧನಂ ಶತ್ರುಘ್ನಂ ವಶೀಕರಣಂ ಯಃ ಪುರುಷೋಽನೇನವಿಧಿನಾ ಸತತಂ ದೇವಮರ್ಚಯತಿ ಸಂಪತ್ತಿಂ

ಓಂ ನಮೋ ಭಗವತೇ ಇತ್ಯಾದಿ ವಾಸುದೇವದ್ವಾದಶಾಕ್ಷ ಮಂತ್ರದಿಂದಾಗಲಿ ಅಥವಾ ಓಂ ನಮೋ ಎಂಬ ಅಷ್ಟಾಕ್ಷರಮಂತ್ರದಿಂದಾಗಲಿ ಕರ್ಣಿಕೆಯ ಮಧ್ಯಭಾಗ ದಲ್ಲಿ ಪ್ರತಿಷ್ಠಿತನಾಗಿರುವ ಪರಮಪುರುಷನಿಗ ಅರ್ಘ್ಯಪಾದ್ಯಾಚಮನೀಯ ಗಂಧ ಪುಷ್ಪಧೂಪಮಧುಪರ್ಕಗಳನ್ನೂ, ಫಲ, ಭಕ್ಷ್ಯ ಮೊದಲಾದ ನೈವೇದ್ಯಗಳನ್ನೂ ಅರ್ಪಿಸಬೇಕು. ಇದನ್ನು ಜಿತಂತೆಪುಂಡರೀಕಾಕ್ಷ ಎಂಬ ಮಂತ್ರದಿಂದಾಗಲಿ ಪುರುಷ ಸೂಕ್ತದಿಂದಾಗಲಿ ಮಾಡಬಹುದು. ಅನಂತರ ಇತರ ದಲಗಳಲ್ಲಿ ಪ್ರತಿಷ್ಠಿತರಾಗಿ ರುವ ದೇವತೆಗಳನ್ನೂ ಮಂತ್ರಗಳಿಂದ ಬೇರೆ ಬೇರೆಯಾಗಿ ಪೂಜಿಸಬೇಕು. ಈ ವಿಧಾನ ದಿಂದ ಮಹಾವಿಷ್ಣುವನ್ನು ಪೂಜಿಸಿದವನು ಎಲ್ಲಾ ಮನೋರಥಗಳನ್ನೂ ಹೊಂದಿ ಕೃತ ಕೃತ್ಯನಾಗುತ್ತಾನೆ. ವ್ಯಾಧಿ ಹೊಂದಿದ್ದವನು ವ್ಯಾಧಿನಾಶಕ್ಕಾಗಿಯೂ ಈ ವಿಧಾನವನ್ನು ಮಾಡಬಹುದು (ಕಾಮ್ಯಫಲಕ್ಕೂ ಸಾಧನವಾಗುತ್ತದೆಂದು ತಾತ್ಪರ್ಯ) ಈ ವಿಧಾನವು ಬಹುಮಟ್ಟಿಗೂ ಧನ್ಯವೂ, ಯಶಃಪ್ರದವೂ, ಪುಣ್ಯಕರವೂ, ಪರಿಶುದ್ಧವೂ, ಪಾಪ

---

1 ಇದು ಅಶುದ್ಧವಾದ ಪಾಠವೆಂದು ತೋರುತ್ತದೆ.

ಜನಯತಿ ಅಥವಾ ತಸ್ಯ ನ ರೋಚತೇ ತದಾ, ಶ್ವೇತದ್ವೀಪಮವಾಪ್ಯ ಅರ್ಕಮಂಡಲಂ ಭಿತ್ವಾನಿರುಣದ್ಧಿ ಪ್ರದ್ಯುಮ್ನಸಂಕರ್ಷಣಾನ್ ಪ್ರಾಪ್ನೋತಿ ವಾಸುದೇವತ್ವಮವಾಪ್ಯ ನಿಷ್ಕಲತ್ವ ಮಾಪ್ನೋತಿ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ ನಾರಾಯಣಪೂಜನಪ್ರಕಾರವರ್ಣನೋ ನಾಮ ದ್ವಿಪಂಚಾಶದುತ್ತರ ತ್ರಿಶತತಮೋಽಧ್ಯಾಯಃ

ನಾಶಕವೂ, ಆರೋಗ್ಯಪ್ರದವೂ, ಧನಧಾನ್ಯಸಮೃದ್ಧಿಕರವೂ. ಶತ್ರುನಾಶಕವೂ, ವಶೀಕರಣಸಾಧನವೂ ಆಗಿದೆ. ಯಾವನು ಈ ವಿಧಾನದಿಂದ ಮಹಾವಿಷ್ಣುವನ್ನು ಯಾವಾಗಲೂ ಪೂಜಿಸುತ್ತಿರುತ್ತಾನೆಯೋ ಅಂತಹ ಪೂಜಕನು ಹೆಚ್ಚಾದ ಸಂಪತ್ತನ್ನು ಹೊಂದುತ್ತಾನೆ. ಇಂತಹ ಐಹಿಕಫಲದಲ್ಲಿ ಇಚ್ಛೆ ಇಲ್ಲದಿದ್ದಲ್ಲಿ ಶ್ವೇತದ್ವೀಪವನ್ನು ಹೊಂದಿ ಸೂರ್ಯಮಂಡಲವನ್ನು ಭೇದಿಸಿ ಪ್ರದ್ಯುಮ್ನಸಂಕರ್ಷಣರನ್ನು ಹೊಂದುತ್ತಾನೆ. ಕ್ರಮವಾಗಿ ವಾಸುದೇವನ ಸಾಯುಜ್ಯವನ್ನೂ ಹೊಂದಿ ನಿಷ್ಪಾಪನಾಗುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ ಸಂವಾದದಲ್ಲಿ ನಾರಾಯಣಪೂಜಾಪ್ರಕಾರವರ್ಣನೆಯೆಂಬ ಮುನ್ನೂರ ಐವತ್ತೆರಡನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ತ್ರಿಪಂಚಾಶದುತ್ತರತ್ರಿಶತತಮೋಽಧ್ಯಾಯಃ ||

|| ಮಾರ್ಕಂಡೇಯ ಉವಾಚ ||

ಏತದ್ಧಿ ನಾರದಃ ಶ್ರುತ್ವಾ ನರನಾರಾಯಣೇರಿತಂ |
ಅನೇನೈವ ವಿಧಾನೇನ ಸತತಂ ಮಧುಸೂದನಂ || ೧ ||

ಪೂಜಯಾಮಾಸ ಧರ್ಮಾತ್ಮಾ ತದ್ಗತೇನಾಂತರಾತ್ಮನಾ |
ತತಃ ಪುಂಸವನೋ ಭಗವಾನ್ ನಾರದಸ್ಯ ಮಹಾತ್ಮನಃ || ೨ ||

ಪ್ರತ್ಯಕ್ಷತಃ ಪುನರ್ಭೂತಂ ನಾರದಂ ವಾಕ್ಯಮಬ್ರವೀತ್ |
ಗಚ್ಛ ನಾರದ ಭದ್ರಸ್ತ್ವಂ ಲೋಕಾಂಶ್ಚರ ಯಥೇಪ್ಸಿತಾನ್ || ೩ ||

ಮುನ್ನೂರ ಐವತ್ತಮೂರನೆಯ ಅಧ್ಯಾಯ.

೧-೪. ಮಾರ್ಕಂಡೇಯರು ಹೇಳುತ್ತಾರೆ :—ನರನಾರಾಯಣರ ಈ ಮಾತನ್ನೆಲ್ಲಾ ಕೇಳಿ ನಾರದಮಹರ್ಷಿಯು ಆ ಮಧುಸೂದನನಲ್ಲಿಯೇ ಲೀನವಾದ ಮನಸ್ಸುಳ್ಳವನಾಗಿ ಈ ವಿಧಾನದಿಂದ ಸರ್ವಕಾಲದಲ್ಲಿಯೂ ಮಧುಸೂದನನ್ನು ಪೂಜಿಸಿದನು, ಅನಂತರ ಪ್ರಸನ್ನನಾದ ಆ ಭಗವಂತನು ನಾರದಮಹರ್ಷಿಗೆ ಪುನಃ ಪ್ರತ್ಯಕ್ಷನಾಗಿ ಎಲೈ ಭಕ್ತಾಗ್ರೇಸರನಾದ ನಾರದನೇ ನೀನು ನಿನಗೆ ಇಷ್ಟವಾದ ಆಯಾಯ ಲೋಕಗಳಲ್ಲಿ ಈ ಧರ್ಮವನ್ನು ಪ್ರಕಾಶ ಪಡಿಸುತ್ತಾ ಸಂಚಾರಮಾಡು. ನಿನ್ನ ಅಪೇಕ್ಷೆಯಂತೆ ಆಯಾಯ ಕಾಲದಲ್ಲಿ ನಿನಗೆ ದರ್ಶನವನ್ನು ಕೊಡುತ್ತೇನೆ. ಎಂದು ಅಪ್ಪಣೆಮಾಡಿದನು, ಪುರುಷೋತ್ತಮನಾದ ಆ ಮಧುಸೂದನನಿಂದ ಇಂತಹ

ದರ್ಶನಂ ತವ ದಾಸ್ಯಾಮಿ ಕಾಲೇಕಾಲೇ ಯಥೇಪ್ಸಿತೇ ।
ಅನುಗ್ರಹಮಿಮಂಪ್ರಾಪ್ಯ ದೇವೇಶಾತ್ಪುರುಷೋತ್ತಮಾತ್ ॥ ೪ ॥

ಚಚಾರನಾರದೋ ಲೋಕಾನ್ನಿತ್ಯಂ ಸಂಪೂಜಯರ್ಹರಿಂ ।
ವಿಶ್ವರೂಪಮಿದಂ ದೃಷ್ಟಂ ನಾರದೇನ ಮಹಾತ್ಮನಾ ॥ ೫ ॥

ಪ್ರಹ್ಲಾದೇನ ಪುನಸ್ತೇನ ನರಕೇಸರಿ ರೂಪಿಣಃ ।
ತಥಾಚಾಮೃತಕಾದೇಹೇ ತೇನೈವಚ ಮಹಾತ್ಮನಾ ॥ ೬ ॥

ಬ್ರಹ್ಮಣಾ ಚ ಪುರಾದೃಷ್ಟಂ ತ್ರೈಲೋಕ್ಯಾಕ್ರಮಣೆಪುನಃ ।
ಪಶ್ಚಿಮೇ ಸಾಗರೇ ದೃಷ್ಟಂ ದಶಗ್ರೀವೇಣ ರಕ್ಷಸಾ ॥ ೭ ॥

ಕೃಷ್ಣಾವತಾರೇ ದೂತ್ಯೇನ ಗತಸ್ಯ ಮಧುವಿದ್ವಿಷಃ ।
ಧಾರ್ತರಾಷ್ಟ್ರಸಭಾಮಧ್ಯೇ ಋಷಿಭಿಶ್ಚ ಪರೀಕ್ಷಿತಃ ॥ ೮ ॥

ಮಹಾಭಾರತಸಂಗ್ರಾಮೇ ದೃಷ್ಟವಾನರ್ಜುನಸ್ತಥಾ ।
ಬಂಧುನಾಶಭಯೋದ್ವಿಗ್ನೋ ಯತ್ರತೇನಪ್ರಬೋಧಿತಃ ॥ ೯ ॥

ಅನುಗ್ರಹವನ್ನು ಹೊಂದಿದ ಆ ನಾರದಮಹರ್ಷಿಯೂ ಸಹ ಹರಿಪೂಜೆಯಲ್ಲಿ ತತ್ಪರನಾಗಿ ಲೋಕದಲ್ಲೆಲ್ಲಾ ಸಂಚರಿಸಿದನು.

೫-೧೦. ಮಹಾತ್ಮನಾದ ನಾರದಮಹರ್ಷಿಯಿಂದ ವಿಶ್ವರೂಪವು ಇಲ್ಲಿ ನೋಡಲ್ಪಟ್ಟಿತು. ಪ್ರಹ್ಲಾದನೂ ಹಿಂದೆ ನರಸಿಹ್ಮಾವತಾರ ಹೊಂದಿದ್ದ ಪರಮಾತ್ಮನ ವಿಶ್ವರೂಪವನ್ನು ನೋಡಿದ್ದನು. ಹಾಗೆಯೇ ಅಮೃತಕಾದೇವಿಯ ದೇಹವಲ್ಲಿಯೂ ಆ ರೂಪವು ಪ್ರಹ್ಲಾದನಿಗೆ ಗೋಚರವಾಯಿತು. ಮೂರು ಲೋಕವನ್ನೂ ಆಕ್ರಮಿಸಿದ ತ್ರಿವಿಕ್ರಮಾವತಾರಕಾಲದಲ್ಲಿ ಚತುರ್ಮುಖಬ್ರಹ್ಮನೂ ಈ ರೂಪವನ್ನು ನೋಡಿದ್ದನು. ರಾಕ್ಷಸನಾದ ರಾವಣನೂ ಸಹ ಪಶ್ಚಿಮ ಸಮುದ್ರದಲ್ಲಿ ಈ ರೂಪವನ್ನು ನೋಡಿದ್ದನು. ಕೃಷ್ಣಾವತಾರದಲ್ಲಿ ದೂತಕಾರ್ಯಕ್ಕಾಗಿ ಹೋಗಿದ್ದಾಗ ಧೃತರಾಷ್ಟ್ರನ ಸಭಾಮಧ್ಯದಲ್ಲಿಯೂ ಕೃಷ್ಣನ ಈ ರೂಪವನ್ನು ಋಷಿಗಳೂ ಪರೀಕ್ಷಿಸಿದರು. ಮಹಾಭಾರತಯುದ್ಧದಲ್ಲಿಯೂ ಅರ್ಜುನನಿಗೆ ಈ ವಿಶ್ವರೂಪವನ್ನು ತೋರ್ಪಡಿಸಿ ಬಂಧುನಾಶದುಃಖದಿಂದ ಬಾಡಿಹೋಗಿದ್ದ ಅರ್ಜನನನ್ನು ಕೃಷ್ಣಪರಮಾತ್ಮನೇ ಪ್ರಭೋಧಗೊಳಿಸಿದನು. ಭಾರತಯುದ್ಧವೆಲ್ಲವೂ ಮುಗಿದಮೇಲೆ ದ್ವಾರಕೆಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಸಂಧಿಸಿದ ಉತ್ತಂಕನೂ ಸಹ ಈ ರೂಪವನ್ನು ದರ್ಶನಮಾಡಿ ಕೃತಕೃತ್ಯನಾದನು.

ನಿವೃತ್ತೇ ಭಾರತೇ ಯುದ್ಧೇ ಗಚ್ಛತಾ ದ್ವಾರಕಾಂಪುನಃ ।
ಮಾರ್ಗಗತೇನ ತದ್ದೃಷ್ಟಮುತ್ತಂಕೇನ ಮಹಾತ್ಮನಾ ॥ ೧೦ ॥

ತ್ರೈಲೋಕ್ಯನಾಥೋ ಗೋವಿಂದಃ ಸತತಂ ಭಕ್ತವತ್ಸಲಃ ।
ತಸ್ಯ ಕರ್ಮಾಣಿಯೋ ನಿತ್ಯಂ ಪುರುಷಃ ಪರಿಕೀರ್ತಯೇತ್ ॥ ೧೧ ॥

ಶೃಣುಯಾದ್ವಾ ಮಹೀಪಾಲ ಶುಚಿಸ್ತದ್ಗತಮಾನಸಃ ।
ಸರ್ವಪಾಪವಿನಿರ್ಮುಕ್ತಃ ಸಯಾತಿ ಪರಮಾಂ ಗತಿಂ ॥ ೧೨ ॥

ಏವಂ ಸ ರಾಜನ್ ದ್ವಿಜವರ್ಯಮುಖ್ಯಃ
ಸಂಪ್ರಾಪ್ತವಾನ್ ದೇವವರಪ್ರಸಾದಂ ।
ಭಕ್ತಿಕ್ರಮಕ್ರೇಯನೃಪಪ್ರಸಾದಾತ್ತ-
ಸ್ಮಾದ್ದ್ವಿಕಾಮಾನ್ ಪುರುಷಾ ಲಭಂತೇ ॥ ೧೩ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ನಾರದಪ್ರಸಾದೋ ನಾಮ ತ್ರಿಪಂಚಾಶದುತ್ತರ
ತ್ರಿಶತತಮೋಽಧ್ಯಾಯಃ

೧೧-೧೩. ತ್ರಿಲೋಕಪ್ರಭುವಾದ ಗೋವಿಂದನು ಯಾವಾಗಲೂ ಭಕ್ತರಲ್ಲಿ ಪ್ರೀತಿಯುಳ್ಳವನಾಗಿಯೇ ಇರುತ್ತಾನೆ. ಅವನು ಜಗತ್ತಿನ ಹಿತಕ್ಕಾಗಿ ಮಾಡಿದ ಮಹಾಕಾರ್ಯಗಳನ್ನು ಯಾವ ಭಕ್ತನು ನಿತ್ಯವೂ ಪ್ರಶಂಸೆ ಮಾಡುತ್ತಲಿರುವನೋ ಮತ್ತು ಸ್ಥಿರವಾದ ಭಕ್ತಿಯಿಂದ ಕೂಡಿ ಶ್ರವಣಮಾಡುತ್ತಲಿರುವನೋ ಅಂತಹವನು ಸರ್ವಪಾಪಗಳಿಂದಲೂ ಮುಕ್ತನಾಗಿ ಉತ್ತಮವಾದ ಗತಿಯನ್ನೇ ಹೊಂದುತ್ತಾನೆ. ಎಲೈ ದೊರೆಯೇ ಈ ರೀತಿ ಮಹಾವಿಪ್ರಾಗ್ರೇಸರನಾದ ಆ ನಾರದಮಹರ್ಷಿಯು ಪರಮಾತ್ಮನ ಅನುಗ್ರಹವನ್ನು ಹೊಂದಿದನು. ಯಾವ ಪರಮಾತ್ಮನ ಭಕ್ತಿಕ್ರಮದಿಂದ ರಾಜಪ್ರಸಾದವೂ ಲಭಿಸುವುದೋ, ಅಂತಹ ಪರಮಾತ್ಮನ ಅನುಗ್ರಹದಿಂದ ಇತರ ಪುರುಷರೂ ಸಹ ಅಚಂಚಲವಾದ ಭಕ್ತಿಯಿಂದಿದ್ದು ತಮ್ಮ ಮನೋರಥಗಳನ್ನೂ ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ
ವಜ್ರಸಂವಾದದಲ್ಲಿ ನಾರದಪ್ರಸಾದವೆಂಬ ಮುನ್ನೂರ
ಐವತ್ತಮೂನೆಯ ಅಧ್ಯಾಯ ಮುಗಿದಿದೆ.

॥ ಓಂ ॥

॥ ಶ್ರೀ ಹಯಗ್ರೀವಾಯ ನಮಃ ॥

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

॥ ಚತುಃಪಂಚಾಶದುತ್ತರ ತ್ರಿಶತತಮೋಽಧ್ಯಾಯಃ ॥

॥ ವಜ್ರ ಉವಾಚ ॥

ಮಾಹಾತ್ಮ್ಯಂ ದೇವದೇವಸ್ಯ ವಿಷ್ಣೋರಮಿತತೇಜಸಃ ।
ತೃಪ್ತಿರ್ನವಿದ್ಯತೇ ತಸ್ಮಾನ್ಮಾಹಾತ್ಮ್ಯಮಪರಂ ವದ ॥ ೧ ॥

ತಸ್ಯೈವ ದೇವದೇವಸ್ಯ ವಿಷ್ಣೋರಮಿತ ತೇಜಸಃ ।
ರಕ್ಷಾಯುಕ್ತಂ ಪವಿತ್ರಂ ಚ ಲೋಕೇಷ್ವಾಶ್ಚರ್ಯಮುತ್ತಮಂ ॥ ೨ ॥

॥ ಮಾರ್ಕಂಡೇಯ ಉವಾಚ ॥

ಏಕಾಂತ ಭಾವೋಪಗತಃ ಕಶ್ಚಿದಾಸೀದ್ದ್ವಿಜೋತ್ತಮಃ ॥ ೩ ॥

ಮುನ್ನೂರ ಐವತ್ತನಾಲ್ಕನೆಯ ಅಧ್ಯಾಯ.

೧–೫. ವಜ್ರನು ಪ್ರಶ್ನೆ ಮಾಡುತ್ತಾನೆ :—ದೇವಾಧಿದೇವನಾಗಿಯೂ, ಅಪರಿಮಿತತೇಜಸ್ವಿಯಾಗಿಯೂ ಇರುವ ವಿಷ್ಣುವಿನ ಮಾಹಾತ್ಮ್ಯವನ್ನು ಕೇಳುತ್ತ ಹೋದಲ್ಲಿ ತೃಪ್ತಿಯೇ ಉಂಟಾಗುವುದಿಲ್ಲ. ಆದ್ದರಿಂದ ಜಗತ್ತಿನ ರಕ್ಷಣೆಗೆ ಸಾಧಕವಾಗಿಯೂ, ಪವಿತ್ರವೂ ಆಶ್ಚರ್ಯಕರವೂ ಆದ ಆ ಮಹಾವಿಷ್ಣುವಿನ ಬೇರೊಂದು ಮಾಹಾತ್ಮ್ಯವನ್ನೂ ದಯವಿಟ್ಟು ಹೇಳಬೇಕು. ಇದಕ್ಕೆ ಉತ್ತರವಾಗಿ ಮಾರ್ಕಂಡೇಯರು ಹೇಳುತ್ತಾರೆ. ದೇವತಾಂತರ ಸಂಬಂಧವಿಲ್ಲದೆ ಕೇವಲ ವಿಷ್ಣುಭಕ್ತಿಯನ್ನೇ ಹೊಂದಿ ಪಂಚಕಾಲಗಳಲ್ಲಿ ಆಚರಿಸಬಹುದಾದ ಎಲ್ಲಾ ವಿಧಾನಗಳನ್ನೂ ಪಾಂಚರಾತ್ರ ಶಾಸ್ತ್ರದ ಆಚರಣೆಯನ್ನೂ ತಿಳಿದಿದ್ದ ಗೌತಮವಂಶದ ಒಬ್ಬ ಸಾತ್ವತ (ಪೂಜಕ)

ಸಾತ್ತ್ವತೋ ಗೌತಮಶ್ರೇಷ್ಠೋ ವಿಷ್ವಕ್ಸೇನ ಇತಿ ಶ್ರುತಃ ।
ಪಂಚಕಾಲವಿಧಾನಜ್ಞಃ ಪಾಂಚರಾತ್ರವಿಧಾನವಿತ್ ॥ ೪ ॥

ಸತತಂ ಪೂಜಯಾಮಾಸ ದೇವದೇವಂ ಜನಾರ್ದನಂ ।
ಕೃಷ್ಣಾಯತನಪೂಜಾರ್ಥಂ ಸ ಬಭ್ರಾಮ ವಸುಂಧರಾಂ ॥ ೫ ॥

ಆಸಸಾದ ಕದಾಚಿತ್ತು ಪರ್ವತೇ ಗಹ್ವರಂ ಮಹತ್ ।
ಯತ್ರ ಮಾಹೇಶ್ವರಃ ಸರ್ವೋ ಜನಃ ಯದ್ವಲಜೋ ಬಹು ॥ ೬ ॥

ಸ ತತ್ರ ನಿರ್ಝರೇ ಸ್ನಾತ್ವಾ ಪೂಜಯಾಮಾಸ ಕೇಶವಂ ।
ವೇದ್ಯಾಂ ಪ್ರಕಲ್ಪಿತಾಯಾಂತು ಭೋಗ್ಯೈಃ ಸನ್ನಿಹಿತೈಃ ಪ್ರಭುಂ ॥ ೭ ॥

ತಸ್ಮಾತ್ತು ಗಹ್ವರಾತ್ಕಶ್ಚಿದ್ವಿನಿಷ್ಕ್ರಮ್ಯ ಯದೃಚ್ಛಯಾ ।
ನಿಬದ್ಧಖಡ್ಗೈಃ ಬಹುಭಿಃ ಪುರುಷೈಶ್ಚಾಪಪಾಣಿಭಿಃ ॥ ೮ ॥

ಸಹಿತಸ್ತಂ ದದರ್ಶಾಥ ಪೂಜಯಂತಂ ಜನಾರ್ದನಂ ।
ತಸ್ಯಗತ್ವಾ ಸಮೀಪಂತು ಗ್ರಾಮಸ್ವಾಮಿಕುಮಾರಕಃ ॥ ೯ ॥

ನಿದ್ದನು. ಅವನ ಹೆಸರು ವಿಷ್ವಕ್ಸೇನ, ಅವನು ತನ್ನ ಭಕ್ತಿಗೆ ತಕ್ಕಂತೆ ಯಾವಾಗಲೂ ದೇವಾಧಿಪತಿಯಾದ ಜನಾರ್ದನನನ್ನು ಪೂಜಿಸುತ್ತಾ ಕೃಷ್ಣನ ಆಲಯಗಳಲ್ಲಿ ಪೂಜಿಸುವ ಉದ್ದೇಶದಿಂದ ಭೂಮಿಯಲ್ಲೆಲ್ಲಾ ಸಂಚರಿಸಲು ಹೊರಟನು.

೬-೧೦ ಸಂಚಾರಶೀಲನಾಗಿದ್ದ ಅವನು ಒಂದಾನೊಂದುಕಾಲದಲ್ಲಿ ಒಂದು ಪರ್ವತದ ಗುಹೆಯನ್ನು ಹೊಂದಿದನು ಅಲ್ಲೆಲ್ಲರೂ ಶೈವರೇ ಆಗಿ ಅವರ ಸಮೂಹವೇ ಹೆಚ್ಚಾಗಿದ್ದಿತು. ಅವನು ರಮ್ಯವಾಗಿದ್ದ ಆ ಸ್ಥಳದಲ್ಲಿ ಝುರಿಯಲ್ಲಿ ಸ್ನಾನಮಾಡಿ ಕೇಶವನನ್ನು ಪೂಜಿಸಲು ವೇದಿಯನ್ನು ಕಲ್ಪಿಸಿ ಭೋಗೋಪಕರಣಗಳೆಲ್ಲವನ್ನೂ ಸಿದ್ಧಪಡಿಸುತ್ತಿದ್ದನು. ಆಗ ಗುಹೆಯಿಂದ ಒಬ್ಬನು ಹಠಾತ್ತಾಗಿ ಹೊರಗೆಬಂದನು. ಖಡ್ಗಧಾರಿಗಳೂ, ಧನುರ್ಧಾರಿಗಳೂ ಆದ ಭಟರಿಂದ ಕೂಡಿ ಅವನು ಅಲ್ಲಿ ಬಂದು ಜನಾರ್ದನನ ಪೂಜೆಯಲ್ಲಿ ನಿರತನಾಗಿದ್ದ ಸಾತ್ವತನನ್ನು ನೋಡಿದನು. ಗ್ರಾಮಾಧಿಪತಿಯ ಪುತ್ರನಾದ ಅವನು ಅಲ್ಲಿ ಅವನ ಸಮೀಪಕ್ಕೆ ಬಂದು ನನಗೆ ತಲೆಯು

ತಮುವಾಚ ತ್ವಮಭ್ಯೇಹಿ ದೇವಕರ್ಮಕುರುಷ್ವಮೇ ।
ಶಿರೋರುಗರ್ದಿತಸ್ತಾತ ಸ್ನಾತುಂ ಶಕ್ನೋಮಿ ನಾದ್ಯವೈ ॥ ೧೦ ॥

ದೇವಕರ್ಮಣ್ಯಶಕ್ತಿರ್ಮೇತಾತಪೂಜಯ ಶಂಕರಂ ।
ದೇವತಾಯತನಂ ಗತ್ವಾ ಯತ್ರತಾತ ಪ್ರತಿಷ್ಠಿತಂ ॥ ೧೧ ॥

ಲಿಂಗಮಸ್ತಿ ಸುರೇಶಸ್ಯ ಮಹಾದೇವಸ್ಯ ನಿರ್ಮಿತಂ ।
ಏತದುಕ್ತಂ ಪ್ರತ್ಯುವಾಚ ವಯಮೇಕಾರ್ಚಿನಃ ಶ್ರುತಾಃ ॥ ೧೨ ॥

ಚತುರಾತ್ಮಾಹರಿಃ ಪೂಜ್ಯಃ ಪ್ರಾದುರ್ಭಾವಗತೋಽಥವಾ ।
ಪೂಜಯಾಮ್ಯದ್ಯನೈವಾನ್ಯಂ ತಸ್ಮಾತ್ತ್ವಂಗಚ್ಛಮಾಚಿರಂ ॥ ೧೩ ॥

ಏವಮುಕ್ತಃ ಕುಮಾರಸ್ತು ಖಡ್ಗಮಾಕೃಷ್ಯಸತ್ವರಂ ।
ತಮುವಾಚ ತದಾ ವಿಪ್ರಂ ತ್ವಾಂ ವಧಿಷ್ಯೇ ನ ಸಂಶಯಃ ॥ ೧೪ ॥

ಯದಿ ಲಿಂಗಾರ್ಚನಂಗತ್ವಾ ನ ಕರೋಷಿ ಹಿ ದುರ್ಮತೇ ।
ಶಂಕರಾದಧಿಕೋದೇವೋ ನ ಹ್ಯೇಕೋಽಸ್ತಿ ನರಾಧಮ ॥ ೧೫ ॥

ನೋಯುತ್ತಿದೆ. ಈಗ ಸ್ನಾನಮಾಡಲು ನನಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನೀನು ಬಂದು ನನ್ನ ದೇವರ ಪೂಜೆಯನ್ನು ನೆರವೇರಿಸು ಎಂದನು.

೧೧–೧೫. ಅಯ್ಯಾ, ದೇವತಾರ್ಚನೆಯನ್ನು ಮಾಡಲು ನನಗೆ ಶಕ್ತಿ ಇಲ್ಲ. ಈ ದೇವಾಲಯದಲ್ಲಿ ಪ್ರತಿಷ್ಠಿತನಾಗಿರುವ ಶಂಕರನನ್ನು ಪೂಜಿಸು, ದೇವದೇವನಾದ ಶಂಕರನ ಆ ಲಿಂಗವೂ ಸಹ ಇಲ್ಲಿಯೇ ಇದೆ ಎಂದನು. ಇದನ್ನು ಕೇಳಿ ಆ ಸಾತ್ವತನು ನಾವು ಏಕಾಂತಿಗಳಾದುದರಿಂದ ಒಂದೇ ದೇವತೆಯನ್ನು ಪೂಜಿಸ ತಕ್ಕವರು. ವಾಸುದೇವಾದಿ ಚತುರಾತ್ಮನಾದ ಹರಿಯೂ ಅಥವಾ ಅವನ ಅವತಾರ ಗಳೂ ನಮಗೆ ಪೂಜ್ಯವಾಗುತ್ತವೆ ಮತ್ತೊಬ್ಬನನ್ನು ನಾವು ಪೂಜಿಸುವುದಿಲ್ಲ. ನೀನು ಜಾಗ್ರತೆ ಹೊರಟುಹೋಗು ಎಂದನು. ಆಗ ಆ ಕುಮಾರನು ಈ ಮಾತನ್ನು ಕೇಳಿದೊಡನೆಯೇ ತ್ವರೆಯಿಂದ ಕತ್ತಿಯನ್ನು ಸೆಳೆದು ಆ ಬ್ರಾಹ್ಮಣನನ್ನು ಕುರಿತು ಶಂಕರನಿಗಿಂತ ಅಧಿಕವಾದ ದೇವತೆಯು ಲೋಕದಲ್ಲಿ ಮತ್ತೊಂದಿಲ್ಲ. ಎಲೈ ದುರ್ಬುದ್ಧಿಯೇ ನೀನು ಲಿಂಗವನ್ನು ಪೂಜಿಸದಿದ್ದಲ್ಲಿ ಈ ಕತ್ತಿಯಿಂದಲೇ ನಿನ್ನ ತಲೆಯನ್ನು ತೆಗೆದು ವಧಿಸಿ ಕೆಳಗೆ ಕೆಡಹುತ್ತೇನೆ ಎಂದನು.

ಖಡ್ಗೇನ ಪಾತಯಿಷ್ಯಾಮಿ ಭವಚ್ಛೀರ್ಷಮಸಂಶಯಂ ।
ಏವಮುಕ್ತಃ ಸತೇನಾಥ ಪ್ರಾಣರಕ್ಷಾಪರಾಯಣಃ ॥ ೧೭ ॥

ಬಹಿರ್ಗಚ್ಛಾಮಿ ತತ್ರೇತಿ ತೇನಸಾರ್ಧಂ ತದಾಯಯೌ ।
ದೃಷ್ಟ್ವಾ ಚ ಲಿಂಗಂದೇವಸ್ಯ ಚಿಂತಯಾಮಾಸ ಧರ್ಮವಿತ್ ॥ ೧೭ ॥

ವಿಷ್ಣುಃ ಸರ್ವಗತೋದೇವಃ ಸರ್ವಾತ್ಮಾ ಮಧುಸೂಧನಃ ।
ತಸ್ಯರೌದ್ರೇಣ ಭಾವೇನ ಮಹಾದೇವಃ ಪ್ರತಿಷ್ಠಿತಃ ॥ ೧೮ ॥

ತಸ್ಯೈವ ರೌದ್ರಭಾವೇನ ನರಸಿಹ್ಮಸ್ತಥಾಪ್ರಭುಃ ।
ಲಿಂಗೇಽಸ್ಮಿನ್ ಪೂಜಯಿಷ್ಯಾಮಿ ನರಸಿಹ್ಮವಪುರ್ಧರಂ ।
ದೇವದೇವಂ ಮಹಾತ್ಮಾನಂ ತೇನ ನಿತ್ಯಂಸುರಾರ್ಚನಾತ್ ॥ ೧೯ ॥

ಪ್ರತ್ಯಪಾಯೋ ನ ಭವಿತಾ ಪ್ರಾಣತ್ರಾಣಮಭೀಪ್ಸಿತಃ ।
ತತಸ್ಸ ದೇವದೇವೇಶಂ ನರಸಿಂಹವಪುರ್ಧರಂ ॥ ೨೦ ॥

೧೭-೨೦. ಆ ಗ್ರಾಮಾಧಿಪತಿ ಕುಮಾರನಿಂದ ಹೀಗೆ ಹೇಳಲ್ಪಟ್ಟ ಆ ಸಾತ್ವತನು ಭಯಪಟ್ಟು ಪ್ರಾಣರಕ್ಷಣೆ ಹೊಂದುವ ಆಶೆಯಿಂದ ಅಲ್ಲಿಗೇ ಪೂಜಿಸಲು ಹೋಗುತ್ತೇನೆ ಎಂದು ಹೇಳುತ್ತಾ ಅವನೊಡನೆ ಹೊರಕ್ಕೆ ಬಂದು ಅವನಿಂದ ತೋರಿಸಲ್ಪಟ್ಟ ಲಿಂಗವನ್ನು ನೋಡಿ ಹೀಗೆ ಆಲೋಚಿಸಿದನು. ಮಧುಸೂದನ ಸ್ವರೂಪನಾದ ವಿಷ್ಣುವು ಸರ್ವಾತ್ಮನಾಗಿರುವುದರಿಂದ ಅವನಿಗೆ ಎಲ್ಲಾ ಕಡೆಯಲ್ಲೂ ವ್ಯಾಪಕತ್ವವು ಇದ್ದೇ ಇದೆ. ಅಂತಹ ವಿಷ್ಣುವಿನ ವ್ಯಾಪ್ತಿಯಿಂದ ರೌದ್ರವಾದ ಅವನ ಸ್ವರೂಪವೇ ಮಹಾದೇವನೆಂದು ಪ್ರಸಿದ್ಧಿಹೊಂದಿದೆ. ಅವನ ರೌದ್ರಭಾವವೇ ನರಸಿಹ್ಮರೂಪದಿಂದ ಪ್ರಸಿದ್ಧಿಹೊಂದಿದೆ. ಆದುದರಿಂದ ಈ ಲಿಂಗದಲ್ಲಿ ನರಸಿಹ್ಮ ರೂಪಧಾರಿಯಾದ ಆ ಮಹಾವಿಷ್ಣುವನ್ನೇ ಭಾವಿಸಿ ಪೂಜೆ ಮಾಡುತ್ತೇನೆ ಇದರಿಂದ ದೇವತಾರ್ಚನೆಯೂ ಆದಂತಾಯಿತು. ಪ್ರಾಣರಕ್ಷಣೆಯನ್ನು ಅಪೇಕ್ಷಿಸುತ್ತಿರುವ ನನಗೆ ಅಪಾಯವೂ ತಪ್ಪಿದಂತಾಯಿತು ಎಂದು ಯೋಚಿಸಿ ನರಸಿಹ್ಮರೂಪಧಾರಿಯಾದ ಮಹಾವಿಷ್ಣುವನ್ನೇ ಲಿಂಗದಲ್ಲಿ ಧ್ಯಾನಿಸುತ್ತಾ ಪೂಜೆಮಾಡಿದನು.

ಮನಸಾ ತು ತದಾಧ್ಯಾತ್ವಾಪೂಜಯಾಮಾಸ ಲಿಂಗಗಂ ।
ನಮೋಽಸ್ತುತೇ ನೃಸಿಹ್ಮಾಯ ವದನ್ನೇವ ಕೃತಾಂಜಲಿಃ ॥ ೨೧ ॥

ನಮೋಽಸ್ತು ನರಸಿಹ್ಮಾಯ ಶ್ರುತ್ವಾ ತಸ್ಮಾತ್ಸುಭಾಷಿತಂ ।
ಗ್ರಾಮೇಶನಂದನಃ ಕ್ರುದ್ಧಃ ಖಡ್ಗಮಾಕೃಷ್ಯಸತ್ವರಂ ॥ ೨೨ ॥

ಪ್ರಹಾರಮುದ್ಯತೋ ದಾತುಂ ತಸ್ಯ ವಿಪ್ರಸ್ಯ ಧೀಮತಃ ।
ಲಿಂಗಂ ಭಿತ್ವಾ ತತೋ ದೇವೋ ನರಸಿಹ್ಮವಪುರ್ಧರಃ ॥ ೨೩ ॥

ಸಮುತ್ಥಾಯ ತತಃ ಕ್ರೋಧಾತ್ ಗ್ರಾಮಸ್ವಾಮಿಕುಮಾರಕಂ ।
ದದಾಹ ಭಗವಾನ್ ಶೀಘ್ರಂ ಸಾನುಗಂ ನೇತ್ರವಹ್ನಿನಾ ॥ ೨೪ ॥

ತಸ್ಯಸಾತ್ವತಮುಖ್ಯಸ್ಯ ದಿವ್ಯಂ ಚಕ್ಷುರ್ದದೌ ತತಃ ।
ದದರ್ಶಯೇನ ವೇಶೇನ ನರಸಿಹ್ಮವಪುರ್ಧರಂ ॥ ೨೫ ॥

ದೃಷ್ಟ್ವಾಸ್ತೋತ್ರೇಣ ತುಷ್ಟಾವ ತದಾ ತಸ್ಯಜನಾರ್ದನಃ ।
ಸ್ತೋತ್ರಸ್ಯ ತು ವರಂ ಪ್ರಾದಾತ್ತನ್ಮೆನಿಗದತಃ ಶೃಣು ॥ ೨೬ ॥

೨೧–೨೪. ಎಲೈ ನರಸಿಹ್ಮನೇ ನಿನಗೆ ನಮಸ್ಕಾರ ಎಂದು ಹೇಳುತ್ತಾ ಕೈಮುಗಿದುಕೊಂಡು ನಿಂತನು. ನಮೋಸ್ತು ಎಂಬ ಮಾತನ್ನು ಕೇಳಿದೊಡನೆಯೇ ಆ ಗ್ರಾಮಾಧಿಪತಿಕುಮಾರನು ಕೋಪದಿಂದ ಕತ್ತಿಯನ್ನು ಸೆಳೆದು ಆ ಬ್ರಾಹ್ಮಣನನ್ನು ಹೊಡೆದು ಕೊಲ್ಲಲು ಸಿದ್ಧನಾದನು. ಅಷ್ಟರಲ್ಲಿಯೇ ಲಿಂಗವನ್ನು ಭೇದಿಸಿಕೊಂಡು ಮೇಲಕ್ಕೆ ಎದ್ದು ಬಂದ ನರಸಿಹ್ಮನು ಕೋಪದಿಂದ ಆ ಕುಮಾರನನ್ನೂ ಅವನ ಅನುಯಾಯಿಗಳನ್ನೂ ಸಹ ನೇತ್ರಾಗ್ನಿಯಿಂದ ಒಡನೇ ಸುಟ್ಟು ಹಾಕಿದನು.

೨೫–೨೬. ಆ ಸಾತ್ವತನಿಗೆ ದಿವ್ಯದೃಷ್ಟಿಯನ್ನೂ ಅನುಗ್ರಹಿಸಿದನು. ಆ ದೃಷ್ಟಿಯಿಂದಲೇ ಅವನು ನರಸಿಂಹರೂಪಧಾರಿಯಾಗಿದ್ದ ಪರಮಾತ್ಮನನ್ನೂ ನೋಡಿದನು. ಸ್ತೋತ್ರಗಳಿಂದಲೂ ಸ್ತುತಿಸಿದನು. ಆಗ ಜನಾರ್ದನನು ಸಂತುಷ್ಟನಾಗಿ ಈ ರೀತಿ ವರವನ್ನೂ ಕೊಟ್ಟನು ರಕ್ಷೋನಾಶಕವಾಗಿಯೂ, ಪಾಪಶಮನವಾಗಿಯೂ ಭೂತಭೇತಾಲಾದಿನಾಶಕವಾಗಿಯೂ, ಮಂಗಲಪ್ರದವಾಗಿಯೂ, ಲಕ್ಷ್ಮೀವೃದ್ಧಿಕರ

ರಕ್ಷೋಘ್ನಂ ಪಾಪಶಮನಂ ಭೂತವೇತಾಲನಾಶನಂ ।
ಯೋಜಪೇತ್ತತ್ಸದೈವಾಸ್ತು ಮಂಗಲ್ಯಂ ಶ್ರೀವಿವರ್ಧನಂ ॥ ೨೭ ॥

ನಾರಸಿಹ್ಮೇಷು ಲೋಕೇಷು ಮೋದತೇ ಸಹಿತೋಮಯಾ ।
ಯಾವತ್ಕಲ್ಪಾವಶೇಷಂ ತು ತತೋಮಾಂ ತ್ವಮುಪೇಷ್ಯಸಿ ॥ ೨೮ ॥

ಏತಾವದುಕ್ತ್ವಾ ಸಹಸಾ ತು ತೇನ
ತತ್ರೈವ ದೇವಪ್ರವರೋ ಮಹಾತ್ಮಾ ।
ಅದೃಶ್ಯತಾಂ ಯಾದವವಂಶಮುಖ್ಯ
ಜಗಾಮ ಶೀಘ್ರಂ ನರಸಿಹ್ಮಮೂರ್ತಿಃ ॥ ೨೯ ॥

ಇತಿ ಶ್ರೀ ವಿಷ್ಣುಧರ್ಮೋತ್ತರೇ ತೃತೀಯಖಂಡೇ ಮಾರ್ಕಂಡೇಯ
ವಜ್ರಸಂವಾದೇ ಲಿಂಗಸ್ಫೋಟನ ನರಸಿಹ್ಮದರ್ಶನ ವರ್ಣನೋ
ನಾಮ ಚತುಷ್ಪಂಚಾಶದಧಿಕ ತ್ರಿಶತತಮೋಽಧ್ಯಾಯಃ

ವಾಗಿಯೂ ಇರುವ ಈ ನನ್ನ ಸ್ತೋತ್ರವನ್ನು ಯಾವನು ಜಪಿಸುತ್ತಾನೆಯೋ ಅವನು ನಾರಸಿಂಹ ಲೋಕಗಳಲ್ಲಿ ನನ್ನೊಡನೆ ಸಂತೋಷದಿಂದಿರುತ್ತಾನೆ. ನೀನು ಸಹ ಈ ಕಲ್ಪವು ಕಳೆದನಂತರ ನನ್ನನ್ನೇ ಹೊಂದುತ್ತೀಯೆ. ಆ ಸಾತ್ವತನಿಗಾಗಿ ಇಷ್ಟು ಮಟ್ಟಿಗೆ ಹೇಳಿ ಒಡನೆಯೇ ಮಹಾಮಹಿಮನಾದ ಆ ನರಸಿಂಹಮೂರ್ತಿಯು ಅಂತರ್ಧಾನಹೊಂದಿದನು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದಲ್ಲಿ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಲಿಂಗಸ್ಫೋಟನ ನರಸಿಂಹದರ್ಶನವೆಂಬ ಮುನ್ನೂರ
ಐವತ್ತನಾಲ್ಕನೆಯ ಅಧ್ಯಾಯ ಮುಗಿದಿದೆ.

|| ಓಂ ||

|| ಶ್ರೀ ಹಯಗ್ರೀವಾಯ ನಮಃ ||

ಶ್ರೀ ವಿಷ್ಣುಧರ್ಮೋತ್ತರೇ ಮಹಾಪುರಾಣೇ

ತೃತೀಯಖಂಡೇ

|| ಪಂಚಪಂಚಾಶದಧಿಕತ್ರಿಶತತಮೋಽಧ್ಯಾಯ ||

|| ವಜ್ರ ಉವಾಚ ||

ಸಾತ್ವತೇನಸ್ತುತೋಯೇನ ಸ್ತೋತ್ರೇಣ ಮಧುಸೂದನಃ ।
ತನ್ಮೇಸ್ತೋತ್ರಂ ಸಮಾಚಕ್ಷ್ವ ಸರ್ವಕಲ್ಮಷನಾಶನಂ || ೧ ||

|| ಮಾರ್ಕಂಡೇಯ ಉವಾಚ ||

ಶೃಣುಸ್ತೋತ್ರಮಿದಂ ವಜ್ರ ಲಿಂಗಸ್ಫೋಟಮಿತಿ ಶ್ರುತಂ ।
ಸರ್ವಪಾಪಪ್ರಶಮನಂ ಮಂಗಲ್ಯಂ ಶ್ರೀವಿವರ್ಧನಂ || ೨ ||

ಗದ್ಯ—ಓಂನಮೋ ಭಗವತೇ ವಾಸುದೇವಾಯ ನಮೋನರಸಿಂಹಾಯಾದಿ-ದೇವಾಯಸರ್ವಲೋಕಪರಮಾಯ ನಾರಾಯಣಾಯ, ನಿತ್ಯ

ಮುನ್ನೂರ ಐವತ್ತೈದನೆಯ ಅಧ್ಯಾಯ.

೧-೨. ವಜ್ರನು ಪ್ರಶ್ನೆ ಮಾಡುತ್ತಾನೆ:—ಆ ಸಾತ್ವತನು ಯಾವ ಸ್ತೋತ್ರದಿಂದ ಮಧುಸೂದನನ್ನು ಸ್ತೋತ್ರಮಾಡಿದನೋ ಸರ್ವಪಾಪನಾಶಕವಾದ ಆ ಸ್ತೋತ್ರವನ್ನು ನನಗೆ ಹೇಳಬೇಕು. ಮಾರ್ಕಂಡೇಯರು ಹೇಳುತ್ತಾರೆ—ಎಲೈ ವಜ್ರನೇ, ಲಿಂಗಸ್ಫೋಟವೆಂದು ಪ್ರಸಿದ್ಧಿಹೊಂದಿರುವ ಈ ಸ್ತೋತ್ರವನ್ನು ಕೇಳು. ಇದು ಸರ್ವಪಾಪನಾಶಕವೂ, ಮಂಗಲಪ್ರದವೂ, ಲಕ್ಷ್ಮೀಪ್ರದವೂ ಆಗಿದೆ ಸರ್ವವ್ಯೂಹಗಳಿಗೂ ಮೂಲಮೂರ್ತಿಯಾದ ಮಹಾಮಹಿಮನಾದ ವಾಸುದೇವನಿಗೆ ನಮಸ್ಕಾರ. ಸಂಕರ್ಷಣರೂಪಿಯಾಗಿಯೂ, ಆದಿದೇವನೂ, ಸರ್ವಲೋಕಪೂಜ್ಯನೂ, ನಾರಾಯಣಸ್ವರೂಪನೂ ಆಗಿರುವ ನರಸಿಂಹನಿಗೆ ನಮಸ್ಕಾರಗಳು ನಾರಾಯಣಸ್ವರೂಪಿಯಾದ

ಸನ್ನಿಹಿತಸಂಪ್ರಾಪ್ಯಶಕ್ತಿ ಬಲವೀರ್ಯತೇಜೋವಿಭವಾಯ, ಮಹಾರಜತಪರ್ವತಪ್ರಕಾಶವಪುಷೆ, ಬೃಹತ್ಕೇಸರಸಟಾಯ, ಶಿರಃಪ್ರದೇಶಾಭ್ಯುನ್ನತತಾಮ್ರರುಚಿರವಿಸ್ಫೂರ್ಜಿತಪ್ರಭಾಹೇಮವರ್ಣಾಯ, ಪ್ರಸನ್ನಜನಬಾಧಾಪನಯನನಿಮಿತ್ತೋತ್ಪನ್ನಭ್ರುಕುಟಿಕುಟಿಲಲಲಾಟಾಯ.

ಶತಹ್ರದಾವರ್ತದೀಪ್ತವಿಕ್ಷಿಪ್ಯಮಾಣೇಷುಗಲಾಯ, ಜ್ವಲದನಲಲೋಲ-ಪಿಙ್ಗವೃತ್ತದೀಪ್ತಾಕ್ಷಾಯ, ಸ್ಫುಟಿಚಿಪಿಟಥಮನೀ ಸಹಸ್ರವಿಭೀಷಣ ಘ್ರಾಣವಂಶಾಯ, ಸ್ಫುರತ್ಸ್ಫೋಣೋರ್ಭಯಕಪೋಲದೇಶಪಾರ್ಶ್ವ-ಯ, ಬಾಲಚಂದ್ರಾಕಾರೋಷ್ಠಪುಟವಿನಿರ್ಗತಭ್ರಾಜಮಾನಾತಿತೀಕ್ಷ್ಣ-ಸಿತಮಹೋಗ್ರದಂಷ್ಟ್ರ ಸರ್ವಾಸ್ಯವಸಮಾಗಮ ಕ್ಷೋಭಾತನಿ ಸಹ-ಸ್ರಾವಪಾತಾಂಬುದವ್ರಾತಗರ್ಜಿತಾತಿ ಭೀಮನಿನಾದಾಯ, ಮುಹು-

---

ಯಾವ ನರಸಿಂಹನು ಸರ್ವಕಾಲದಲ್ಲಿಯೂ ಸಾನ್ನಿಧ್ಯಹೊಂದಿರುವ ಶಕ್ತಿ, ಬಲ, ವೀರ್ಯ ತೇಜಸ್ಸು ಇವುಗಳ ವೈಭವವುಳ್ಳವನಾಗಿರುವನೋ ಸುವರ್ಣಪರ್ವತದಂತೆ ಪ್ರಭಾಶಾಲಿಯಾದ ದೇಹ ಹೊಂದಿರುವನೋ, ಹೆಚ್ಚಾದ ಕೇಸರ ಜಟಾಮಾಲೆಯುಳ್ಳವನಾಗಿರುವನೋ ಉನ್ನತವಾದ ತಲೆಯಭಾಗದಲ್ಲಿ ಕೆಂಪಾದ ಕಾಂತಿಯು ಪ್ರಸರಣದಿಂದ ಸುವರ್ಣದಂತೆ ತೋರುತ್ತಿರುವನೋ ಶರಣಾಗತರಾಗಿರುವವರ ಕಷ್ಟಗಳನ್ನು ಹೋಗಲಾಡಿಸುವುದಕ್ಕಾಗಿ ಉಂಟಾಗಿರುವ ಹುಬ್ಬುಗಂಟಿನಿಂದ ವಕ್ರವಾದ ಹಣೆಯಿಂದಲೂ.

ಮಿಂಚಿನ ಸುತ್ತಿನಂತೆ ಹೊಳೆಯುವ ತೇಜಸ್ಸನ್ನು ಎರಚುತ್ತಿರುವ ಕಂಠಭಾಗ ಉಳ್ಳವನಾಗಿಯೂ ಬೆಂಕಿಯಂತೆ ಜ್ವಲಿಸುತ್ತಲೂ ಚಂಚಲವಾಗಿಯೂ ದುಂಡಾಗಿಯೂ ಹೊಳೆಯುತ್ತಲೂ ಇರುವ ಕಣ್ಣುಗಳುಳ್ಳವನಾಗಿಯೂ, ಸ್ಫುಟವಾದ ರಂಧ್ರವುಳ್ಳ ಸಾವಿರಾರು ತಿದಿಯಂತೆ ಭಯಂಕರವಾಗಿರುವ ಮೂಗಿನ ಕೊಳವೆಯುಳ್ಳವನಾಗಿಯೂ ಕೊಳಪಾಗಿಯೂ ತುಂಬಿಕೊಂಡೂ ಇರುವ ಕಪೋಲಗಳ ಪಾರ್ಶ್ವಗಳುಳ್ಳವನಾಗಿಯೂ ಬಾಲಚಂದ್ರನಂತಿರುವ ತುಟಿಗಳಿಂದ ಹೊರಹೊರಟಿರುವ ಹೊಳಪಾಗಿಯೂ ಹರಿತವಾಗಿಯೂ ಶುಭ್ರವಾಗಿಯೂ ಇರುವ ಭಯಂಕರವಾದ ಕೋರೆದಾಡೆಗಳುಳ್ಳ ತೆರದ

---

1 ಇಲ್ಲಿ ಶಿವಪ್ರದೇಶ ಎಂಬ ಮೂಲಪಾಠವನ್ನು ಮೇಲೆ ಕಂಡಂತೆ ಅರ್ಥಸ್ಪಷ್ಟಿಯಿಂದ ಬದಲಾಯಿಸಲಾಗಿದೆ.

ಮುರ್ಹುರ್ವ್ಯಾತ್ತಭೀಮಾರ್ಧವದನದೇಶದೃಶ್ಯಮಾನಶುದ್ಧ ಶಿಖರಿದ-
ಶನಪಙ್ಕ್ತಿತಾರಾವಿಭಾಸ್ವರ ಸಂಧ್ಯಾನುರಂಜಿತ ನಭಸ್ಥಲಪ್ರಕಾಶವಪುಷೆ,
ತಾಲುಲೋಲಜಿಹ್ವಾಲತಾಗ್ರಸ್ಥಿರ ಸಮಾಯುಕ್ತ ಚಿತ್ರಭವಾಂಸಕೂ-
ಟಸ್ಕಂದಮಧ್ಯದೇಶ ಸುಪ್ರತಿಷ್ಠಿತ ಪೀನವೃತ್ತ ಚಾರುಕಂಬುಗ್ರೀ-
ವಾಯ,

ಶ್ರೀವತ್ಸಾಂಕಿತಾಲಙ್ಕೃತ ಮಹಾವಕ್ಷಸ್ಥಲಾಯ. ವಿವಿಧರುಚಿರ ಪರಮಸು-
ಗಂಧಿಮುಕ್ತಿಕಪುಷ್ಪಗ್ರಥಿತ ಪ್ರಲಂಬಮಾಲಾಧರಾಯ, ಮಾರುತಾ-
ದಿತ್ಯ ಪ್ರಚಾರಬಲಾನು ವಿಜಯೋನ್ನತಾಭ್ಯುನ್ನತಬಾಹುಪ್ರಕೋಷ್ಠ
ಕರತಲಕರಜೋಗ್ರ ಘೋರಪ್ರಹರಣಾಯ, ಹಿರಣ್ಯಕಶಿಪು ರುಧಿರ-

ಬಾಯಿಗೆ ತುಂಬುವ ರಭಸದಿಂದ ಉಂಟಾದ ಸಾವಿರಾರು ಸಿಡಿಲುಗಳನ್ನು ಸುರಿಸುವ ಮಹಾಮೇಘಗಳ ಗರ್ಜನೆಯಂತಹ ಭಯಂಕರ ಧ್ವನಿಯಿಂದ ಕೂಡಿದವನಾಗಿಯೂ ಬಾರಿಬಾರಿಗೂ ತೆರೆಯುತ್ತಿರುವ ಭಯಂಕರವಾದ ಬಾಯಿನ ಕೆಳಭಾಗದ ಅರ್ಧದಲ್ಲಿ ತೋರಿಬರುತ್ತಿರುವ ಶುಭ್ರವಾಗಿಯೂ ಮೊನಚಾಗಿಯೂ ಇರುವ ದಂತಪಂಕ್ತಿಯಿಂದ ಕೂಡಿ ನಕ್ಷತ್ರಗಳಿಂದ ಪ್ರಕಾಶಹೊಂದಿರುವ ಸಂಧ್ಯಾಕಾಲದಿಂದ ಶೋಭಿತವಾದ ಗಗನತಲದಂತೆ ಹೊಳೆಯುತ್ತಿರುವ ದೇಹವುಳ್ಳವನಾಗಿಯೂ, ತುಟಿಯ ಮುಂಭಾಗ ದಲ್ಲಿ ಜೋಲಾಡುತ್ತಿರುವ ನಾಲಿಗೆಯ ತುದಿಯಿಂದ ಕೂಡಿ ರಮ್ಯವಾದ ಭುಜಮಧ್ಯ ಭಾಗದಲ್ಲಿ ಪ್ರತಿಷ್ಠಿತವಾಗಿರುವ ದಪ್ಪವಾಗಿಯೂ ದುಂಡಾಗಿಯೂ ರಮ್ಯವಾಗಿಯೂ ಇರುವ ಕಂಠಪ್ರದೇಶಉಳ್ಳವನಾಗಿಯೂ.

ಶ್ರೀವತ್ಸದಿಂದ ಶೋಭಿಸುತ್ತಿರುವ ಅಲಂಕೃತವಾದ ಮಹಾವಕ್ಷಸ್ಥಲ ಉಳ್ಳವ ನಾಗಿಯೂ, ನಾನಾವಿಧವಾದ ರಮ್ಯವಾದ ಸುಗಂಧಿಗಳಾದ ಮಲ್ಲಿಗೆಯ ಹೂವು ಗಳಿಂದ ಕಟ್ಟಿದ ದೀರ್ಘವಾದ ಮಾಲಿಕೆಗಳನ್ನು ಧರಿಸಿರುವವನಾಗಿಯೂ, ವಾಯು ಮತ್ತು ಸೂರ್ಯರ ಪ್ರಚಾರ ಬಲವನ್ನೂ ಜಯಿಸಿರುವ ಉನ್ನತವಾದ ಭುಜಗಳಿಂದ ಕೂಡಿರುವ ಕೈಗಳ ನೀಡಿದ ಬೆರಳುಗಳ ಅತ್ಯುಗ್ರವಾದ ಉಗುರುಗಳೆಂಬ ಆಯುಧ ಗಳನ್ನು ಹೊಂದಿರುವವನಾಗಿಯೂ, ಹಿರಣ್ಯಕಶಿಪುವಿನ ರಕ್ತಪಾನಕ್ಕೆ ತಕ್ಕ ತೀಕ್ಷ್ಣ ವಾದ ವಜ್ರಾಯುಧರೂಪನಾಗಿಯೂ, ಬಹಳ ಹೊಂಬಣ್ಣ ಉಳ್ಳ ಪಟ್ಟವಸ್ತ್ರದಿಂದ

ಪಾನಸುತೀಕ್ಷ್ಣ ವಜ್ರಾಯುಧಾಯ, ಪರಮಪೀತ ಕೌಶೇಯ ವಸ್ತ್ರ-ಬದ್ಧಕಕ್ಷ್ಯಾಪರಿಕರಾಯ. ವಜ್ರಸಂಹತೋನ್ನತಸುರುಚಿರಸುಶ್ಲಿಷ್ಟ ಸಂಧಿಕಟ್ಯೂರುಜಾನು ಮಹಾಪುರುಷ ನರಸಿಂಹಾದಿದೇವಾಯ,

ಸ್ಥಿರಸ್ನಾಯುಯುಕ್ತ ಭಕ್ತೋಚಿತ ಪ್ರಸೃತ ತನ್ವಾಕಾರಗೂಢ ಗುಲ್ಫಸಂಧಿ ಮಹಾಬಾಹುವೇಗ ಮಹಾಜವಾಯ, ಚರಣವಿಕ್ರಮಪ್ರಭಾವ ಪ್ರಕಂಪ್ಯಮಾನ ಪೃಥಿವೀತಲಾಯ, ಶ್ರೀ ವೃಕ್ಷ ಶಂಖಚಕ್ರಗದಾಸನಂದ್ಯಾವರ್ತಧ್ವಜಾಂಕುಶಧರಾತಪತ್ರಾದರ್ಶಕಮತ್ಸ್ಯಕೂರ್ಮವೀಚೀ-ಯೂಪ ಚಂದ್ರಾರ್ಕ ವೃಷಭಾಶ್ವ ಗಜರಥ ಪರಮಪುರುಷ ಪರಮ ಮಂಗಲ್ಯ ರೋಮಕೂಟಚ್ಛಾಯಾಯ, ಮನುಮಹೇಂದ್ರ ವಸು-ರುದ್ರಾದಿತ್ಯ ಸಾಧ್ಯಾಶ್ವಿ ಮರುದ್ಗಣಸಂಸ್ತುತಾಚಿನ್ತ್ಯಾರ್ಚಿತಾಭಿಮುಖಪ್ರಸನ್ನಚರಣಾಯ, ಭಗವನ್ನಮಸ್ತೇ.

ದೃಢಬದ್ಧವಾದ ಪರಿಕರವುಳ್ಳವನಾಗಿಯೂ, ವಜ್ರಾಯುಧದಂತೆ ದೃಢವಾಗಿಯೂ ಉನ್ನತವಾಗಿಯೂ, ರಮ್ಯವಾಗಿಯೂ ಪರಸ್ಪರ ಹೊಂದಿಕೆಯುಳ್ಳದ್ದಾಗಿಯೂ ಇರುವ ಸಂಧಿಪ್ರದೇಶ, ಸೊಂಟ, ತೊಡೆ, ಮಂಡಿ ಮೊದಲಾದ ಅವಯವಗಳಿಂದ ಕೂಡಿ ಮಹಾಪುರುಷನಾದ ನರಸಿಂಹನೆಂಬ ಆದಿದೇವನಾಗಿಯೂ,

ಸ್ಥಿರವಾದ ಕಾಲಖಂಡಗಳಿಂದ ಕೂಡಿದ್ದು ಭಕ್ತರಲ್ಲಿ ಅನುಗ್ರಹದಿಂದ ಸಣ್ಣ ಆಕಾರಹೊಂದಿ ಗೂಢವಾಗಿರುವ ಪಾದಗ್ರಂಥಿ ಸಂಧಿ ಇವುಗಳಿಂದ ಕೂಡಿದ ಪಾದಗಳಿಂದಲೂ, ಮಹಾಬಾಹುಗಳ ವೇಗದಿಂದಲೂ ಸಹ ಅಸದೃಶವಾದ ವೇಗ ಹೊಂದಿರುವವನಾಗಿಯೂ, ಪಾದಾನ್ಯಾಸಪ್ರಭಾವದಿಂದ ನಡುಗುತ್ತಿರುವ ಭೂಮಿ ತಲವುಳ್ಳವನಾಗಿಯೂ, ಶ್ರೀವತ್ಸ, ಶಂಖ, ಚಕ್ರ, ಗದಾ, ನದ್ಯಾವರ್ತಶೋಭಿತಧ್ವಜ ಅಂಕುಶ ಇವುಗಳನ್ನು ಧರಿಸಿರುವ ಶ್ವೇತಚ್ಛತ್ರದಿಂದ ಶೋಭಿಸುವ ದಿವ್ಯಮಂಗಲ ವಿಗ್ರಹದಿಂದಲೂ, ಮತ್ಸ್ಯಕೂರ್ಮಗಳ ಅಲೆಗಳು ಯೂಪ, ಚಂದ್ರ, ಸೂರ್ಯ, ವೃಷಭ, ಅಶ್ವ, ರಥ ಇವುಗಳುಳ್ಳ ಪರಮಪುರುಷಾಸಾಧಾರಣವಾದ ಪರಮಮಂಗಲ ರೋಮಕೂಟಚ್ಛಾಯೆಗಳಿಂದ ಕೂಡಿದವನಾಗಿಯೂ, ಮನು, ಮಹೇಂದ್ರ. ವಸುಗಳು ಏಕಾದಶರುದ್ರರು, ದ್ವಾದಶಾದಿತ್ಯರು, ಸಾಧ್ಯರು, ಅಶ್ವಿನೀದೇವತೆಗಳು, ಮರುದ್ಗಣಗಳ ಇವರುಗಳಿಂದ ಸ್ತೋತ್ರಮಾಡಲ್ಪಡುತ್ತಿರುವ ಅಚಿಂತ್ಯಮಹಿಮನೂ, ಅರ್ಚಕಾಭಿಮುಖನೂ, ಪ್ರಸನ್ನನೂ ಪೂಜ್ಯನೂ ಆಗಿರುವ ಭಗವಂತನೇ ನಿನಗೆ ನಮಸ್ಕಾರಗಳು.

---

1 ಇಲ್ಲಿ ಶ್ರೀವತ್ಸವೆಂಬ ಪಾಠವಿರಬೇಕೆಂದು ತೋರುತ್ತದೆ.

ತ್ವಮಾಗಚ್ಛಾಗಚ್ಛ ಭಗವನ್ನಾತ್ಮಬಲವೀರ್ಯ ತೇಜೋಗುಣಾತ್ಮವಿಕ್ರಮ, ಸಾಂಖ್ಯಯೋಗಾಧ್ಯಾತ್ಮಪವಿತ್ರ, ಶೌಚಧರ್ಮಮಾಹಾತ್ಮ್ಯಾನ್ವಿತ, ಆವಿರ್ಭಾವಿತ, ಉತ್ತಿಷ್ಠ, ಪರಮದೇವ, ಸರ್ವಗಾತ್ರಾಣ್ಯಭಿಧುನ್ವನ್ಸರ, ಪಾಪಾನ್ಯಪಮೃಜ್ಯ, ವಿಪ್ರನಾಶಾವಿಷ್ಟಾನಾಂ, ವಿಪ್ರನಾಶಾಯ ವಿದ್ಯಾನಾಂ, ಪರಮಪುರುಷ, ಪರಮಮಂಗಲ್ಯ, ಭಕ್ತವತ್ಸಲ, ಭಕ್ತಾನುಗ್ರಹಾಯಾ ಭಯಂ ಪ್ರದಾಯ ತದ್ಬ್ರಹ್ಯಸತ್ಯಮನಾದ್ಯಮ ನುತ್ತಮಂ, ನಿಶ್ರೇಯಸಂ, ತದ್ಭಗವಾನಾಚಷ್ಟಾಂ, ತದ್ಭಗವಾನ್ ವಿಂದತಾಂ, ನಿರಸ್ಯಕಲ್ಮಷಂ, ಶಶ್ವಚ್ಛಾಂತಿಮುಪನಯ, ಶ್ರೇಯ, ಉಪನಯ, ಸ್ವಸ್ತಿಮುಪನಯ, ಬ್ರಹ್ಮಪ್ರಶದ್ಯೈತ್ವಾಂ, ವಿಷ್ಣೋ,

---

ಪೂಜ್ಯನೇ, ಆತ್ಮಬಲ, ವೀರ್ಯ, ತೇಜೋಗುಣಗಳಿಂದ ಕೂಡಿರುವ ಸ್ವಾಭಾವಿಕ ವಾದ ಪರಾಕ್ರಮವುಳ್ಳವನೇ, ಸಾಂಖ್ಯಯೋಗ ಅಧ್ಯಾತ್ಮಜ್ಞಾನದಿಂದ ಪವಿತ್ರ ಮೂರ್ತಿಯೇ, ಶುಚಿಯಾದ ಧರ್ಮಮಾಹಾತ್ಮ್ಯದಿಂದ ಶೋಭಿಸುತ್ತಿರುವವನೇ, ಅನೇಕಾವತಾರಶಾಲಿಯೇ ಪರದೇವತೆಯೇ ದೇಹಗಳನ್ನು ಕೊಡಹುತ್ತಾ ಮೇಲಕ್ಕೆ ಏಳು. ಎಲ್ಲಾ ಪಾಪಗಳನ್ನೂ (ಎಲ್ಲಾ ಪಾಪಿಗಳನ್ನೂ) ತೊಳೆದು ಬ್ರಾಹ್ಮಣರನ್ನು ನಾಶಪಡಿಸುವ ಅಭಿನಿವೇಶವುಳ್ಳ ದುರ್ಜ್ಞಾನಿಗಳನ್ನು ನಾಶಮಾಡು. ಪರಮ ಪುರುಷನೇ, ಪರಮಮಂಗಲಸ್ವರೂಪನೇ, ಭಕ್ತರಲ್ಲಿ ವಾತ್ಸಲ್ಯವುಳ್ಳವನೇ, ಭಕ್ತಾನು ಗ್ರಹಕ್ಕಾಗಿ ಅಭಯವನ್ನು ದಯಪಾಲಿಸು. ಸತ್ಯಸ್ವರೂಪವಾಗಿಯೂ, ಅನಾದಿ ಯಾಗಿಯೂ. ಉತ್ತಮೋತ್ತಮನಾಗಿಯೂ ಇರುವ ಬ್ರಹ್ಮಸ್ವರೂಪವೇ ನೀನಾ ಗಿದ್ದೀಯೆ, ನನಗೆ ಮೋಕ್ಷವನ್ನೂ ಅನುಗ್ರಹಿಸು. ನೀನೇ ನನ್ನನ್ನು ಹೊಂದು, (ನಿನ್ನ ಅನುಗ್ರಹವೇ ನಿನ್ನ ಪ್ರಾಪ್ತಿಗೆ ಸಾಧಕವೆಂದರ್ಥ.) ಮಹಾಪಾತಕಗಳನ್ನೂ, ಉಪಪಾತಕಗಳನ್ನೂ ಹೋಗಲಾಡಿಸಿ ಸ್ಥಿರವಾದ ಶಾಂತಿಸುಖವನ್ನು ಅನುಗ್ರಹಿಸು, ಶ್ರೇಯಸ್ಸನ್ನು ಅನುಗ್ರಹಿಸು, ಮಂಗಲವನ್ನು ಅನುಗ್ರಹಿಸು, ಹಿತವನ್ನೂ ಅನು ಗ್ರಹಿಸು. ಓ ಬ್ರಹ್ಮಸ್ವರೂಪನೇ, ಪೂಜ್ಯನಾದ ಮಹಾವಿಷ್ಣುವೇ, ಅರಳಿದ ತಾವರೆ ಯಂತೆ ಪ್ರಸನ್ನನಾದ ನೇತ್ರಗಳುಳ್ಳವನೇ, ಜ್ಞಾನ, ಐಶ್ವರ್ಯ, ಶಕ್ತಿ, ಬಲ, ತೇಜೋಗುಣಪ್ರಧಾನನೇ, ಪರದೇವತಾಸ್ವರೂಪಿಯೇ, ಹೇಯಗುಣರಹಿತವಾದ ಮಂಗಲಮೂರ್ತಿಯೇ, ಪದ್ಮನಾಭರೂಪಿಯೇ, ಹಯಗ್ರೀವರೂಪಿಯೇ, ಆದಿವರಾಹ

ಭಗವನ್, ಪುಂಡರೀಕಾಕ್ಷ, ಜ್ಞಾನೈಶ್ವರ್ಯಶಕ್ತಿಬಲತೇಜೋಗುಣಾತ್ಮಕ, ಪರಮಪುರುಷ, ಪರಮಮಂಗಲ್ಯ, ಪದ್ಮನಾಭ, ಹಯಶಿರಃ, ಆದಿವರಾಹ, ನಾರಸಿಂಹ, ವಾಮನ, ತ್ರಿವಿಕ್ರಮ, ರಾಮರಾಮ, ವಾಸುದೇವಸಂಕರ್ಷಣ, ಪ್ರದ್ಯುಮ್ನಾನಿರುದ್ಧ, ಪುರುಷ, ಸತ್ಯಾಚ್ಯುತ, ವಾಸುದೇವ, ಆದಿಮಧ್ಯನಿಧನಕಚೇಷ್ಟಿತ, ಚೇಷ್ಟಾತ್ಮಮಾಯಾಹೋರಾತ್ರಾಯತಿಮಾಂಜಿಷ್ಠ ಶುಕ್ಲವಾಸಃ, ಸುಪರ್ಣ, ತಾಲಮಕರಧ್ವಜ, ಪರಮವಿದ್ಯಾಕರ್ಮಕಾಲನಾಥ, ಸ್ವಸ್ತ್ಯಸ್ಮಭ್ಯಂ ಸ್ವಸ್ತಿಪ್ರಜಾಭ್ಯಃ ॥

ತ್ವಮೇವ ಮಂತ್ರಂ ತ್ವಂ ರಕ್ಷಾ ತ್ವಮೌಷಧಮನುತ್ತಮಂ ।
ತ್ರಿವಿಧಾದಪಿ ದುಃಖಾನ್ಮಾಂ ಪ್ರಚೋದಯ ಜಗತ್ಪತೇ ॥ ೧ ॥

ಬ್ರಹ್ಮನ್ ಪ್ರಪದ್ಯೇ ತ್ವಾಂ ವಿಷ್ಣೋ ಶರಣಾಗತವತ್ಸಲ ।
ತದಾ ಶುದ್ಧೋ ಮಹಾಮತಿಃ ಭವದುಃಖವಿನಿರ್ಗತಃ ॥ ೨ ॥

ರೂಪನೇ, ನಾರಸಿಂಹ, ವಾಮನ, ತ್ರಿವಿಕ್ರಮ, ದಶರಥರಾಮ, ಬಲರಾಮಾದಿವಿಭವಾವತಾರಶಾಲಿಯೇ, ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ವ್ಯೂಹಾವತಾರಶಾಲಿಯೇ, (ಸರ್ವಾಂತರ್ಯಾಮಿಯಾಗಿರುವುದರಿಂದ) ಪುರುಷಶಬ್ದವಾಚ್ಯನೇ, ಸತ್ಯಪ್ರತಿಜ್ಞನೇ, ವಾಸುದೇವರೂಪನೇ, ಸರ್ವಪ್ರಾಣಿಗಳ ಆದಿಮಧ್ಯಾಂತ ದೆಶೆಗೆ ತಕ್ಕ ಲೀಲೆಯುಳ್ಳವನೇ, ಸಂಕಲ್ಪರೂಪವಾದ ತನ್ನ ವಿಚಿತ್ರ ವ್ಯವಹಾರಗಳಿಂದ ಅಹೋರಾತ್ರಗಳೆಂಬ ಮಂಜಿಷ್ಠವರ್ಣದಿಂದಲೂ, ಶುಕ್ಲವರ್ಣದಿಂದಲೂ ಕೂಡಿರುವ ವಸ್ತ್ರವುಳ್ಳವನೇ, ಗರುಡ, ತಾಲ, ಮಕರಗಳ ಧ್ವಜಹೊಂದಿರುವವನೇ, ಪುರುಷಾರ್ಥ ಸಾಧಕಗಳಾದ ಜ್ಞಾನ, ಕರ್ಮ, ಕಾಲ ಇವುಗಳಿಗೆ ಪ್ರವರ್ತಕನಾಗಿ ನಾಭಿರೂಪದಂತಿರುವವನೇ, ಮಹಾನುಭಾವನಾದ ನಿನ್ನಲ್ಲಿ ನಾನು ಶರಣಾಗತನಾಗಿದ್ದೇನೆ, ನಿನ್ನನ್ನು ಆಶ್ರಯಿಸಿರುವ ನನಗೂ ಪ್ರಜೆಗಳಿಗೂ ಸಹ ಮಂಗಲ ಉಂಟಾಗಲಿ.

೧–೫. ನೀನೇ ಎಲ್ಲಾ ಮಂತ್ರಸ್ವರೂಪನೂ ಆಗಿದ್ದೀಯೆ. ರಕ್ಷೆಯೂ ಆಗಿದ್ದೀಯೆ. ಉತ್ತಮವಾದ ಔಷಧವೂ ನೀನೇ ಆಗಿದ್ದೀಯೆ ಎಲೈ ಜಗತ್ಪತಿಯೇ, ಆಧ್ಯಾತ್ಮಿಕಾದಿ ಮೂರು ದುಃಖಗಳಿಂದಲೂ ನನಗೆ ಬಿಡುಗಡೆಯಾಗುವಂತೆ ನೀನೇ ಅನುಗ್ರಹಿಸು ಶರಣಾಗತರಲ್ಲಿ ಪ್ರೀತಿಯುಳ್ಳ ಮತ್ತು ಬೃಹದ್ರೂಪವುಳ್ಳ ವಿಷ್ಣುವೇ ನಿನ್ನಲ್ಲಿ ನಾನು ಶರಣಾಗತನಾಗಿದ್ದೇನೆ. ನಿನ್ನ ಈ ಶರಣಾಗತಿಯಿಂದಲೇ ನಾನು ಸಂಸಾರದುಃಖದಿಂದ ಪಾರಾಗಿ ಸ್ವಾಭಾವಿಕವಾದ ನನ್ನ ಸ್ವರೂಪವನ್ನು ಹೊಂದು

ಇತ್ಯುಕ್ತಃ ಸ ಚ ರಾಜೇಂದ್ರಃ ಋಷಿಣಾ ದಿವ್ಯಚಕ್ಷುಷಾ ।
ನಮಸ್ಕೃತ್ಯ ಋಷೇಃ ಪಾದೌ ಸಗಣಃ ಸಹರಾಜಭಿಃ ।
ಪ್ರದಕ್ಷಿಣಮುಪಾಕೃತ್ಯ ಪ್ರವಿವೇಶಪುರಂ ಸ್ವಕಂ ॥ ೩ ॥

ಋಷಯಸ್ತೇಽಪ್ಯನುಜ್ಞಾತಾ ಮಾರ್ಕಂಡೇಯೇನ ಧೀಮತಾ ।
ನಮಸ್ಕೃತ್ಯ ಹರಿಂ ದೇವಂ ಸ್ವಾಶ್ರಮಂ ಜಗ್ಮಿರೇ ತದಾ ॥ ೪ ॥

ರಾಜಾಪಿವಜ್ರೋ ಧರ್ಮಾತ್ಮಾ ಮಾರ್ಕಂಡೇಯೇನ ಭಾಷಿತಂ ।
ಪುರಾಣಂ ಚಿಂತಯನ್ನಿತ್ಯಂ ನಾರಾಯಣಪರಾಯಣಃ ।
ರಾಜ್ಯಂ ಚ ಪ್ರಾಶಿಷನ್ನಿತ್ಯಂ ಪ್ರಜಾಧರ್ಮೇಣ ಪಾಲಯನ್ ॥ ೫ ॥

ಇತಿ ಶ್ರೀ ವಿಷ್ಣುಮಹಾಪುರಾಣೇ ದ್ವಿತೀಯಭಾಗೇ ಶ್ರೀ ವಿಷ್ಣುಧರ್ಮೋತ್ತರೇ
ತೃತೀಯಖಂಡೇ ಮಾರ್ಕಂಡೇಯ ವಜ್ರಸಂವಾದೇ
ಶ್ರೀ ನಾರಸಿಹ್ಮಸ್ತೋತ್ರವರ್ಣನಂ ನಾಮ
ಪಂಚಪಂಚಾಶದುತ್ತರ ತ್ರಿಶತತಮೋಽಧ್ಯಾಯಃ

ತ್ರೇನೆ. (ಇಲ್ಲಿ ಕರ್ಮವಶದಿಂದ ಸಂಸಾರಾವಸ್ಥೆಯಲ್ಲಿ ಜೀವನು ಸಂಕುಚಿತ ಜ್ಞಾನನಾಗಿರುವನೆಂದೂ ಕರ್ಮಬಂಧದಿಂದ ಮುಕ್ತನಾಗಿ ಮೋಕ್ಷಾವಸ್ಥೆ ಹೊಂದಿದಾಗ ಗುಣಾಷ್ಟಕಾವಿರ್ಭಾವದಿಂದ ವಿಶಾಲ ಪ್ರಜ್ಞನಾಗುತ್ತಾನೆಂಬ ವೇದಾಂತಸಿದ್ಧಾಂತವು ಸಂಗ್ರಹಿಸಲ್ಪಟ್ಟಿದೆ.) ಮಾರ್ಕಂಡೇಯ ಮಹರ್ಷಿಯಿಂದ ಹೀಗೆ ಹೇಳಲ್ಪಟ್ಟ ಆ ವಜ್ರ ಮಹಾರಾಜನು ಸಪರಿವಾರನಾಗಿ ಆ ಮಹರ್ಷಿಯ ಪಾದಗಳಿಗೆ ವಂದಿಸಿ ಪ್ರದಕ್ಷಿಣ ನಮಸ್ಕಾರದಿಂದ ಸತ್ಕರಿಸಿ ತನ್ನ ನಗರಕ್ಕೆ ಹೊರಟನು. ಅಲ್ಲಿ ಬಂದಿದ್ದ ಋಷಿಗಳೆಲ್ಲರೂ ಮಾರ್ಕಂಡೇಯರಿಂದ ಅಪ್ಪಣೆ ಪಡೆದು ಹರಿಯನ್ನೂ ವಂದಿಸಿ ತಮ್ಮ ತಮ್ಮ ಆಶ್ರಮಗಳಿಗೆ ಹೊರಟರು. ನಗರವನ್ನು ಸೇರಿದ ವಜ್ರಮಹಾರಾಜನು ಸಹ ಮಾರ್ಕಂಡೇಯರಿಂದ ಉಪದಿಷ್ಟವಾದ ಪುರಾಣದ ಅರ್ಥವನ್ನು ನಿತ್ಯವೂ ಸ್ಮರಿಸುತ್ತಾ ನಾರಾಯಣಪರನಾಗಿ ಪ್ರಜೆಗಳನ್ನೂ ಧರ್ಮದಿಂದ ರಕ್ಷಿಸುತ್ತಾ ರಾಜ್ಯವನ್ನಾಳಿದನು.

ಇಲ್ಲಿಗೆ ಶ್ರೀ ವಿಷ್ಣುಧರ್ಮೋತ್ತರ ತೃತೀಯಖಂಡದ ಮಾರ್ಕಂಡೇಯ ವಜ್ರ
ಸಂವಾದದಲ್ಲಿ ಶ್ರೀನೃಸಿಂಹಸ್ತೋತ್ರವರ್ಣನವೆಂಬ ಮುನ್ನೂರ
ಐವತ್ತೈದನೆಯ ಅಧ್ಯಾಯ ಮುಗಿದಿದೆ.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂನ್ಯಾ
ಯ್ಯೇನಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತುನಿತ್ಯಂ
ಲೋಕಾಃ ಸಮಸ್ತಾಸ್ಸುಖಿನೋಭವಂತು ॥

ಶ್ರೀಮಾನ್ ಶ್ರೀ ಜಯಚಾಮರಾಜನೃಪತಿಃ ಕರ್ಣಾಟಸಿಹ್ಮಾಸನೇ
ಯಾವಚ್ಚಂದ್ರದಿವಾಕರಂ ವಿಜಯತಾಂ ಸದ್ಧರ್ಮಕಲ್ಪದ್ರುಮಃ ।

ಯಸ್ಯಾಯಂ ದಯಯಾ ಸಮೇಧಿತ ಮಹಾಶಾಖೋಪಶಾಖಃ ಸತಾಂ
ಪೀತ್ಯೈಭಾತಿ ಪುರಾಣನಿರ್ಜರತರುಃ ಸದ್ಧರ್ಮಪುಷ್ಪೋಜ್ವಲಃ ॥
ವಿದ್ಯಾವಿದ್ಯಾವತಾಂಲೋಕೇ ಕುಲಂಕುಲವತಾಂಸತಾಂ ।
ಧರ್ಮೋಧರ್ಮಭೃತಾಂ ಜೀಯಾಜ್ಜಯಚಾಮನೃಪಶ್ಚಿರಂ ॥
॥ ಶ್ರೀ ॥

ಶ್ರೀಮನ್ಮಹೀಶೂರ ರಾಜಧಾನೀ ವಿರಾಜಮಾನ ದಿವ್ಯರತ್ನಸಿಂಹಾಸನಾ
ಧೀಶ್ವರ ಶ್ರೀ ಜಯಚಾಮರಾಜ ಪ್ರವರ್ತಿತ ಗ್ರಂಥರತ್ನ ಮಾಲೆಯಲ್ಲಿ
ತದೀಯಾಸ್ಥಾನ ಮಹಾವಿದ್ವಾಂಸನಾದ ಸಂಕೀಘಟ್ಟದ
ವೆಂಕಟಾಚಾರ್ಯನಿಂದ ರಚಿತವಾದ ವಿಷ್ಣುಧರ್ಮೋತ್ತರ
ಕರ್ಣಾಟ ಭಾಷಾನುವಾದವು ಸಮಾಪ್ತಿಹೊಂದಿದೆ
ಶ್ರೀಕೃಷ್ಣಾರ್ಪಣಮಸ್ತು.